ಮಂಗಳೂರು ವಿಶ್ವವಿದ್ಯಾನಿಲಯ
ದೂರ ಶಿಕ್ಷಣ ಕೇಂದ್ರ , ಮಂಗಳಗಂಗೋತ್ರಿ 574 199

## ಕೋರ್ಸ್–1

# ಬಾಲ್ಯ ಮತ್ತು ಬೆಳೆಯುವಿಕೆ

## ಬಿ.ಎಡ್. ಪದವಿ ಕಾರ್ಯಕ್ರಮ
## (ಮುಕ್ತ ಮತ್ತು ದೂರ ಕಲಿಕೆ)

ಪ್ರಕಾಶಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ 574 199

**Childhood and Growing Up:** Self learning Material for B.Ed.Degree Programme (Open and Distance Learning) of First Year prepared by Prof. Nagarathna K.R., Dr. Vamadavappa H.V. and Dr. Suneetha C.N. Published by The Registrar, Mangalore University, Mangalagangothri 574199,Karnataka.

Year 2018-19

**Developed by:**
**The Director,**
**Centre for Distance Education, Mangalore University,**
**Mangalagangothri 574199, Karnataka.**

**Course Co-ordinator:**
**Dr. Chidananda A.L., B.Ed. (ODL) Programme,**
**Centre for Distance Education,**
**Mangalore University, Mangalagangothri 574 199, Karnataka.**

Printed at Datacon Technologies, #31/10, Left of Magadi Main Road, Behind Saraswathi Convention Centre, Bangalore 560 079 Bangalore.

© The Registrar, Mangalore University

DTP at: Sagar Offset Printers, Alake, Mangalore

| | | |
|---|---|---|
| **ಬಾಲ್ಯ ಮತ್ತು ಬೆಳೆಯುವಿಕೆ** | : | ಪ್ರಥಮ ವರ್ಷದ ಬಿ. ಎಡ್. (ಮುಕ್ತ ಮತ್ತು ದೂರಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಸಾಮಗ್ರಿ. |
| **ರಚನಕಾರರು** | : | ಪ್ರೊ. ನಾಗರತ್ನ ಕೆ. ಆರ್., ಡಾ. ವಾಮದೇವಪ್ಪ ಎಚ್.ವಿ. ಮತ್ತು ಡಾ. ಸುನೀತಾ ಸಿ.ಎನ್. |
| **ಪ್ರಕಾಶಕರು** | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |
| ವರ್ಷ | : | 2018–19 |
| © ಹಕ್ಕುಗಳು | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ |
| **ಸಿದ್ಧಪಡಿಸಿದವರು** | : | **ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ** |
| **ಕೋರ್ಸ್ ಸಂಯೋಜಕರು** | : | ಡಾ. ಚಿದಾನಂದ ಎ.ಎಲ್., ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |
| ಡಿ.ಟಿ.ಪಿ. | : | ಸಾಗರ್ ಆಫ್‌ಸೆಟ್ ಪ್ರಿಂಟರ್ಸ್, ಅಳಕೆ, ಮಂಗಳೂರು ಮೊಬೈಲ್ : 9480228399 |
| ಮುದ್ರಕರು | : | ಡಾಟಾಕಾನ್ ಟೆಕ್ನಾಲಜೀಸ್, # 31/10, ಮಾಗಡಿ ಮುಖ್ಯರಸ್ತೆ ಎಡಭಾಗ ಸರಸ್ವತಿ ಕನ್ವೆನ್ಷನ್ ಸೆಂಟರ್ ಹಿಂಭಾಗ, ಬೆಂಗಳೂರು 560 079 |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

# ಕೋರ್ಸ್–1

# ಬಾಲ್ಯ ಮತ್ತು ಬೆಳೆಯುವಿಕೆ

**ಕುಲಸಚಿವರು** **ಪ್ರಕಾಶಕರು**
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199

**ಡಾ. ಸುನೀತಾ ಸಿ.ಎನ್. : ಬ್ಲಾಕ್ – 1 ಮತ್ತು 2** **ಕೋರ್ಸ್ ಲೇಖಕರು**
**ಡಾ. ವಾಮದೇವಪ್ಪ ಎಚ್.ಎನ್. : ಬ್ಲಾಕ್ – 3**
**ಪ್ರೊ. ನಾಗರತ್ನ ಕೆ.ಆರ್. : ಬ್ಲಾಕ್ – 4**

**ಪ್ರೊ. ಬಿ. ಎನ್. ಮಂಜುನಾಥಯ್ಯ** **ಪರಿಶೀಲಕರು**
ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ)
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು – 570 006

**ಡಾ. ಶಶಿಕಲ ಎ.** **ಪರಿಶೀಲಕರು**
ಸಲಹೆಗಾರರು
ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ
(ಮುಕ್ತ ಮತ್ತು ದೂರ ಕಲಿಕೆ)
ದೂರ ಶಿಕ್ಷಣ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574 199

**ಡಾ. ಚಿದಾನಂದ ಎ. ಎಲ್.** **ಸಂಪಾದನ ಸಹಾಯಕರು**
**ಶ್ರೀ. ನಾಗರಾಜ ಸಿ. ಎಸ್.**

## ವಿಷಯ ಸೂಚಿ


**ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ**

| | | |
|---|---|---|
| ಘಟಕ 1 | : ಬೆಳವಣಿಗೆ ಮತ್ತು ವಿಕಾಸ – ಅರ್ಥ, ಪರಿಕಲ್ಪನೆಗಳು ಮತ್ತು ಗುಣಲಕ್ಷಣಗಳು | 1 |
| ಘಟಕ 2 | : ವಿಕಾಸಾತ್ಮಕ ಪ್ರಭಾವಗಳು | 15 |
| ಘಟಕ 3 | : ವಿಕಾಸದ ಅರ್ಥ ಹಾಗೂ ವಿಕಾಸದ ಸಾರ್ವತ್ರಿಕ ತತ್ವಗಳು ಮತ್ತು ಕಲಿಕೆ ಮತ್ತು ವಿಕಾಸದ ನಡುವಿನ ಸಂಬಂಧ | 31 |
| ಘಟಕ 4 | : ವ್ಯಕ್ತಿವಿಕಾಸದ ಆಯಾಮಗಳು : ದೈಹಿಕ, ಸಂಜ್ಞಾನಾತ್ಮಕ, ಭಾಷಾತ್ಮಕ, ಭಾವನಾತ್ಮಕ, ಸಾಮಾಜಿಕ ಹಾಗೂ ನೈತಿಕ ಮತ್ತು ಅವುಗಳ ನಡುವಿನ ಪರಸ್ಪರ ಸಂಬಂಧ | 45 |
| ಘಟಕ 5 | : ವಿಕಾಸ ಹಂತಗಳು : ಬೆಳವಣಿಗೆ ಪ್ರಕ್ರಿಯೆಯೊಂದಿಗಿನ ವಿಕಾಸಾತ್ಮಕ ಕಾರ್ಯಗಳು : ಶಿಶು ಹಂತದಿಂದ ಅಂತಿಮ ಹದಿಹರೆಯದ ಹಂತ | 77 |
| ಘಟಕ 6 | : ಜ್ಞಾನಗ್ರಹಣ ಮತ್ತು ಕಲಿಕೆ : ಜ್ಞಾನಗ್ರಹಣದ ಅರ್ಥ, ವ್ಯಾಪ್ತಿ ಮತ್ತು ಕಲಿಕೆಯಲ್ಲಿ ಅದರ ಪಾತ್ರ | 93 |

**ಬ್ಲಾಕ್ 2 : ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ**

| | | |
|---|---|---|
| ಘಟಕ 1 | : ಬಾಲ್ಯ–ಪರಿಕಲ್ಪನೆ | 105 |
| ಘಟಕ 2 | : ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿ ಬಾಲ್ಯಹಂತ | 118 |
| ಘಟಕ 3 | : ಬಾಲ್ಯಹಂತದ ಮೇಲೆ ವೈವಿಧ್ಯತೆ, ವ್ಯತ್ಯಾಸಗಳು ಮತ್ತು ಕಡೆಗಣಿಸುವುದರ ಪರಣಾಮ | 132 |
| ಘಟಕ 4 | : ಕಷ್ಟಕರ ಪರಿಸ್ಥಿತಿಯಲ್ಲಿ ಮಕ್ಕಳ ಬಾಲ್ಯಹಂತ | 149 |
| ಘಟಕ 5 | : ಭಾರತದ ಸಮಾಜೋ–ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಮಕ್ಕಳು | 168 |
| ಘಟಕ 6 | : ವೈವಿಧ್ಯತೆ ಮತ್ತು ಬೋಧನಾಶಾಸ್ತ್ರದ ನಿಹಿತಾರ್ಥಗಳು | 185 |

**ಬ್ಲಾಕ್ 3 : ಹದಿಹರೆಯ ವಿಚಾರಗಳು ಮತ್ತು ಕಾಳಜಿಗಳು**

ಘಟಕ 1 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಸಾಂಸ್ಕೃತಿಕ ಭಿನ್ನತೆಗಳು ಮತ್ತು ಹದಿಹರೆಯ 199

ಘಟಕ 2 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಆರ್ಥಿಕ ಬದಲಾವಣೆಗಳು ಮತ್ತು ಹದಿಹರೆಯ 210

ಘಟಕ 3 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಮಾಧ್ಯಮದ ಪರಿಣಾಮ 221

ಘಟಕ 4 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಕ್ಲಿಷ್ಟ ಸನ್ನಿವೇಶಗಳಲ್ಲಿ ಹದಿಹರೆಯದವರು 230

ಘಟಕ 5 : ಹದಿಹರೆಯದ ಹೊಂದಾಣಿಕೆಯ ಸಮಸ್ಯೆಗಳು, ಭಾವನಾತ್ಮಕ ತೊಂದರೆಗಳು ಮತ್ತು ಅಪಾಯಕಾರಿ ವರ್ತನೆಗಳನ್ನು ಅರ್ಥಮಾಡಿಕೊಳ್ಳುವಿಕೆ, ಅನನ್ಯತೆಯ ಗೊಂದಲ, ಪೋಷಕ–ಮಗುವಿನ ಸಂಘರ್ಷ, ಮಾದಕ ವ್ಯಸನ 241

ಘಟಕ 6 : ಹದಿಹರೆಯದಲ್ಲಿ ಆರೋಗ್ಯದ ಅರಿವು – ವೈಯಕ್ತಿಕ ನೈರ್ಮಲ್ಯ, ಪೋಷಣೆ, ಕಾಯಿಲೆಗಳ ತಡೆಗಟ್ಟುವಿಕೆ ಮತ್ತು ರೋಗ ನಿಯಂತ್ರಣ 260

**ಬ್ಲಾಕ್ 4 : ಲಿಂಗತ್ವ ಮತ್ತು ಹದಿಹರೆಯ**

ಘಟಕ 1 : ಹದಿಹರೆಯದವರ ಲಿಂಗತ್ವ ಪರಿಕಲ್ಪನೆಯ ಮೇಲೆ ಜೈವಿಕ ಪ್ರಭಾವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು 274

ಘಟಕ 2 : ಹದಿಹರೆಯದವರ ಲಿಂಗತ್ವ ಪರಿಕಲ್ಪನೆಯ ಮೇಲೆ ಸಾಮಾಜಿಕ ಪ್ರಭಾವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು 285

ಘಟಕ 3 : ಲಿಂಗತ್ವ ಮತ್ತು ತಾರುಣ್ಯದ ಸಂಜ್ಞಾನಾತ್ಮಕ ಪ್ರಭಾವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು 298

ಘಟಕ 4 : ಲಿಂಗ ಪಡಿಯಚ್ಚುಗಳು 305

ಘಟಕ 5 : ಭಿನ್ನ ಲಿಂಗದವರ ಲಿಂಗ ಪಡಿಯಚ್ಚುಗಳಲ್ಲಿರುವ ಸಾಮ್ಯತೆಗಳು ಮತ್ತು ಭಿನ್ನತೆಗಳು 316

ಘಟಕ 6 : ಲಿಂಗ ಸಮಾನತೆಯನ್ನು ಉಂಟುಮಾಡುವಲ್ಲಿ ಸಮಾಜ ಮತ್ತು ಶಿಕ್ಷಣ ಸಂಸ್ಥೆಗಳ ಪಾತ್ರ 325

# ಕೋರ್ಸಿನ ಪಕ್ಷಿನೋಟ

ಸಮಾಜ ಬದಲಾದಂತೆ, ಅದರ ಅಗತ್ಯಗಳಿಗನುಗುಣವಾಗಿ ಶಿಕ್ಷಣವೂ ಬದಲಾಗಬೇಕು. ವ್ಯಕ್ತಿ ಹಾಗೂ ಸಮಾಜದ ಬೇಡಿಕೆಗಳಲ್ಲಿ ಕಣ್ಣಿಗೆ ಕಾಣುವಂತಹ ಅನೇಕ ಬದಲಾವಣೆಗಳಾಗುತ್ತಿವೆ. ತಂತ್ರಜ್ಞಾನಾತ್ಮಕವಾದ ಬೋಧನಾ ವಿಧಾನಗಳು ಇಂದು ಅಗತ್ಯ ಮಾತ್ರವಲ್ಲ; ಅನಿವಾರ್ಯವೂ ಹೌದು. ಶಿಕ್ಷಣಕ್ಷೇತ್ರದಲ್ಲಿ ಈ ಹಿಂದಿನ ಕಾಣ್ಕೆಗಳು ಭವಿಷ್ಯದ ಕಾಣ್ಕೆಗಳೊಂದಿಗೆ ಹೊಂದಿಕೆಯಾಗುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಮಕ್ಕಳು ಮತ್ತು ಅವರ ಬಾಲ್ಯದ ಕುರಿತ ವಿಚಾರಗಳನ್ನು ಹಾಗೂ ನೈಜ ಸನ್ನಿವೇಶಗಳಲ್ಲಿ ಅವರು ಬೆಳೆಯುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಮತ್ತು ಅವುಗಳನ್ನು ವ್ಯಾಖ್ಯಾನಿಸುವ ಸಾಮರ್ಥ್ಯ ಅತ್ಯಂತ ಅಗತ್ಯ ಎಂಬುದು ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯರಾಗಿರುವವರಿಗೆಲ್ಲ ಮನವರಿಕೆಯಾಗಿದೆ. ಇದನ್ನು ಅರ್ಥಮಾಡಿಕೊಂಡಾಗ ಮಾತ್ರ ಇಂದಿನ ಸಮಾಜದ ಉತ್ತಮ ಮಕ್ಕಳನ್ನೂ ಮುಂದಿನ ಸಮಾಜದ ಸಕ್ರಿಯ ಪ್ರಜೆಗಳನ್ನೂ ರೂಪಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಅಧ್ಯಾಪಕರಾದ ನಾವು ಮಕ್ಕಳಿಗೆ 'ಅರಿವು ನೀಡುವ' ನಮ್ಮ ಗಮನವನ್ನು ಮಕ್ಕಳು 'ಅರಿವು ಕಟ್ಟಿಕೊಳ್ಳುವ' ಕಡೆಗೆ ಹರಿಸಬೇಕಾಗಿದೆ. ಮಕ್ಕಳ ಕಲಿಕೆ ಹಾಗೂ ಕಲಿಕಾ ಪ್ರಕ್ರಿಯೆಯ ಕಡೆಗೆ ಹೆಚ್ಚು ಗಮನವಹಿಸಬೇಕಾಗಿದೆ. ಮಕ್ಕಳ ಕಲಿಕೆ ಸಾರ್ಥಕವಾಗಬೇಕಾದರೆ ನಮ್ಮ ಬೋಧನೆ ವೈಯಕ್ತಿಕ ಕಲಿಕೆಯಿಂದ ಸಮೂಹ ಕಲಿಕೆಯ ಕಡೆಗೆ, ಹಾಗೆಯೇ ನಿಷ್ಕ್ರಿಯ ಕಲಿಕೆಯಿಂದ ಸಕ್ರಿಯ ಕಲಿಕೆಯ ಕಡೆಗೆ ಪಲ್ಲಟಗೊಳ್ಳಬೇಕಾಗಿದೆ, ಇದರ ಜೊತೆಗೆ ಕಲಿಕೆಯ ಅನುಭವಗಳನ್ನು ಯೋಜಿಸುವಲ್ಲಿ ಮನೋವೈಜ್ಞಾನಿಕ ತತ್ವಗಳನ್ನವಲಂಬಿಸಿ ಕಾರ್ಯಪ್ರವೃತ್ತವಾಗಬೇಕಾಗಿದೆ.

ಮಾನವನ ಬೆಳವಣಿಗೆಯನ್ನು ಸಾಧ್ಯವಾಗಿಸುವಲ್ಲಿ ಶಿಕ್ಷಣದ, ಆ ಮೂಲಕ ಅಧ್ಯಾಪಕರ ಪಾತ್ರ ಅತ್ಯಂತ ಗಮನಾರ್ಹವಾದುದು. ಇದಕ್ಕೆ ರಾಷ್ಟ್ರದ ಸಾಮಾಜಿಕ–ಸಾಂಸ್ಕೃತಿಕ ಅಂಶಗಳೇ ತಳಹದಿ. ಇದರ ಚೌಕಟ್ಟಿನಲ್ಲಿಯೇ ಎಲ್ಲರೂ ಬೆಳೆಯುವಂತಹುದು. ಪ್ರಸ್ತುತ 'ಬಾಲ್ಯ ಮತ್ತು ಬೆಳೆಯುವಿಕೆ' ಎಂಬ ಈ ಕೋರ್ಸು ಬಾಲ್ಯವನ್ನನುಭವಿಸುವ ಮಕ್ಕಳು ಅವರವರ ನೈಜ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ವಿವಿಧ ಸನ್ನಿವೇಶಗಳಲ್ಲಿ–ಕುಟುಂಬ, ಶಾಲೆ, ನೆರೆಕೆರೆ, ಸಮುದಾಯ ಇತ್ಯಾದಿ–ಬೆಳೆಯುವ ಬಗೆಯನ್ನು ವಿವರಿಸುತ್ತದೆ. ಅದಕ್ಕೆ ಅನಿವಾರ್ಯವಾದ ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನೂ ಆ ಸನ್ನಿವೇಶಗಳಲ್ಲಿ–ಸಮಾಜದ ಅಂಚಿನಲ್ಲಿರುವವರು, ಕೊಳಚೆ ಪ್ರದೇಶದಲ್ಲಿ ವಾಸಿಸುವವರು, ಹೆಣ್ಣುಮಕ್ಕಳ ಸನ್ನಿವೇಶಗಳು, ದಲಿತ ಸಮುದಾಯದಲ್ಲಿ ಬೆಳೆಯುವ ಮಕ್ಕಳು ಇತ್ಯಾದಿ–ಮಕ್ಕಳು ಎದುರಿಸುವ ಸಮಸ್ಯೆಗಳನ್ನೂ ಅನುಭವಗಳನ್ನೂ ವಿಚಾರಮಾಡುತ್ತದೆ. ಜೊತೆಜೊತೆಗೇ ಅಂತರ್‌ಶಿಸ್ತೀಯ ಚೌಕಟ್ಟಿನಲ್ಲಿ, ಬಾಲ್ಯ ಮತ್ತು ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದಂತೆ ಮನೋವಿಜ್ಞಾನ, ಸಮಾಜಶಾಸ್ತ್ರ ಹಾಗೂ ಮಾನವಶಾಸ್ತ್ರಗಳ ಕೊಡುಗೆಯನ್ನು ತೆರೆದಿಡುತ್ತದೆ.

ಈ ಪತ್ರಿಕೆಯಲ್ಲಿ ಒಟ್ಟು ನಾಲ್ಕು ಬ್ಲಾಕ್‌ಗಳಿವೆ ಮತ್ತು ಪ್ರತಿಯೊಂದು ಬ್ಲಾಕ್‌ನಲ್ಲಿ ಒಟ್ಟು ಆರು ಘಟಕಗಳಿದ್ದು ಪ್ರತಿಯೊಂದು ಘಟಕವೂ ಅದರದ್ದೇ ಆದ ಉದ್ದೇಶಗಳಿಂದ ರಚಿತವಾಗಿದೆ. ಬ್ಲಾಕ್ 1ರಲ್ಲಿ ಕಲಿಕೆ ಮತ್ತು ಕಲಿಕಾರ್ಥಿಯನ್ನು ಮುಖ್ಯವಾಗಿ ಪರಿಗಣಿಸಲಾಗಿದೆ. ಪ್ರಖ್ಯಾತರಾದ ಜೀನ್ ಪಿಯಾಷಿಯ ಸಂಜ್ಞಾನಾತ್ಮಕ ವಿಕಾಸ, ಎರಿಕ್‌ಸನ್‌ನ ಮನೋ–ಸಾಮಾಜಿಕ ವಿಕಾಸ ಮತ್ತು ಕೋಹ್ಲ್‌ಬರ್ಗ್‌ನ ನೈತಿಕ ವಿಕಾಸದ ಸಿದ್ಧಾಂತಗಳನ್ನು ಕುರಿತು ವಿದ್ಯಾರ್ಥಿಗಳು ಅರ್ಥಮಾಡಿಕೊಂಡು ಮುಂದಿನ ಆಲೋಚನೆಗಳನ್ನು ಮಾಡಲು ಉದಾಹರಣೆಗಳು ಮತ್ತು ನಿದರ್ಶನಗಳ ಮೂಲಕ ವಿವರಣೆಯನ್ನು ನೀಡಲಾಗಿದೆ. ಬ್ಲಾಕ್ 2ರಲ್ಲಿ ಬಾಲ್ಯವನ್ನು ಕುರಿತಾದ

ಕೆಲವು ತಪ್ಪು ಗ್ರಹಿಕೆಗಳು ಹೇಗೆ ಸತ್ಯದಿಂದ ದೂರವಾದವು ಎಂಬುದನ್ನು ಸ್ಪಷ್ಟೀಕರಿಸಲು ಪ್ರಯತ್ನಿಸಲಾಗಿದೆ. ಕಷ್ಟಕರ ಸನ್ನಿವೇಶಗಳನ್ನು ಎದುರಿಸುತ್ತಿರುವ ಮಕ್ಕಳ ಬಾಲ್ಯ, ಜೈಲುವಾಸಿಗಳ, ಯುದ್ಧದಿಂದ ಸಂಕಷ್ಟ ಮತ್ತು ಸಂಘರ್ಷಗಳಿಗೆ ತುತ್ತಾದ ಕುಟುಂಬಗಳ ಮಕ್ಕಳ ಬಾಲ್ಯ, ಬಡತನದಲ್ಲಿರುವ ಮಕ್ಕಳ ಸಮಸ್ಯೆಗಳು, ನಗರದಲ್ಲಿನ ಕೊಳಚೆನಿವಾಸಿಗಳ ಮಕ್ಕಳ ಬಾಲ್ಯವನ್ನು ಅವರ ಸಾಮಾಜಿಕ–ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡಲಾಗಿದೆ. 'ತೆರೆದ ಹಾಗೂ ಮುಚ್ಚಿದ–ಸಮಾಜಗಳ' ವ್ಯವಸ್ಥೆ, ಅವುಗಳ ಸ್ವರೂಪ, ಹಾಗೂ ಇತಿಮಿತಿಗಳನ್ನೂ ಇಲ್ಲಿ ಚರ್ಚಿಸಲಾಗಿದೆ. ಮಕ್ಕಳ ವಿಕಾಸ ಪ್ರಕ್ರಿಯೆಗೆ ಸಂಬಂಧಿಸಿದಂತೆ ಬೋಧನಾಶಾಸ್ತ್ರದ ನಿಹಿತಾರ್ಥಗಳನ್ನು ಗಮನಿಸಲಾಗಿದೆ. 3 ಮತ್ತು 4ನೇ ಬ್ಲಾಕ್‌ಗಳನ್ನು ಪ್ರಮುಖವಾಗಿ ಹದಿಹರೆಯದ ಮಕ್ಕಳ ವಿಚಾರಗಳಿಗೆ ಸಂಬಂಧಿಸಿದ ಚರ್ಚೆಗೆ ಮೀಸಲಿಡಲಾಗಿದೆ. ಅವರ ಸಾಮಾಜಿಕ–ಸಾಂಸ್ಕೃತಿಕ ವಿಭಿನ್ನತೆಗಳು, ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳಿಂದಾಗಿ ಅವರ ಮೇಲಾಗುವ ಪರಿಣಾಮಗಳು, ನಗರೀಕರಣ, ಮಾಧ್ಯಮಗಳ ಪ್ರಭಾವ–ಇವುಗಳನ್ನು ನೀವು ಇಲ್ಲಿ ಗಮನಿಸುವಿರಿ. ಅಷ್ಟೇ ಅಲ್ಲದೆ, ಅವರ ಅಪಾಯಕಾರಿ ವರ್ತನೆಗಳ ಪ್ರವೃತ್ತಿ, ತಲೆಮಾರಿನ ಅಂತರದಿಂದ ಉಂಟಾಗುವ ಸಮಸ್ಯೆಗಳು, ಮಾದಕ ವಸ್ತುಗಳ ವ್ಯಸನ, ಮತ್ತು ಅವರ ಮೇಲಾಗುತ್ತಿರುವ ದಬ್ಬಾಳಿಕೆ, ದೌರ್ಜನ್ಯ, ಶೋಷಣೆಗಳನ್ನು ಕುರಿತು ಚರ್ಚಿಸಲು ಇಲ್ಲಿ ಅನುವು ಮಾಡಿಕೊಡಲಾಗಿದೆ. ಹದಿಹರೆಯದವರ ವೈಯುಕ್ತಿಕ ಸ್ವಚ್ಛತೆ, ಸ್ವಾಸ್ಥ್ಯ, ಪೋಷಣೆ, ರೋಗಗಳ ನಿಯಂತ್ರಣ– ಈ ಅಂಶಗಳನ್ನೂ ಕೊನೆಯ ಘಟಕದಲ್ಲಿ ಪ್ರಸ್ತಾಪಿಸಲಾಗಿದೆ. ಬ್ಲಾಕ್‌4 ರಲ್ಲಿ ಲಿಂಗತ್ವ, ಲಿಂಗತ್ವದ ಆಧಾರದ ಮೇಲೆ ಸಾಮಾಜಿಕ, ಸಾಂಸ್ಕೃತಿಕ, ಸಂಜ್ಞಾನಾತ್ಮಕ ಮತ್ತು ಜೈವಿಕ ಪ್ರಭಾವಗಳನ್ನು ತಿಳಿಯಲಿದ್ದೀರಿ. ಲಿಂಗಾಧಾರಿತ ಸಮಸ್ಯೆಗಳು, ಸವಾಲುಗಳು, ರೂಢಿಗತ ಲಿಂಗಾಧಾರಿತ ಕಾರ್ಯಗಳು, ಮತ್ತು ಪಾತ್ರಗಳನ್ನು ಕುರಿತ ವಾಸ್ತವದ ಚಿತ್ರಣ ಮತ್ತು ವಿಮರ್ಶೆ, ಬದಲಾದ ಕೌಟುಂಬಿಕ ರಚನೆ, ಲಿಂಗಾಧಾರಿತ ಕೆಲಸ–ಕಾರ್ಯಗಳು ಹಾಗೂ ಪರಸ್ಪರ ಸಂಬಂಧಗಳ ಬಗ್ಗೆ ಈ ಅಧ್ಯಾಯವು ಬೆಳಕು ಚೆಲ್ಲಿದೆ. ಪ್ರತಿ ಪರಿಕಲ್ಪನೆಯನ್ನು ವಿವರಿಸುವಾಗ, ಆಯಾ ಸಂದರ್ಭಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ವಿಶೇಷವಾಗಿ ಗಮನಿಸಲಾಗಿದೆ.

ವಿವಿಧ ಸಾಮಾಜಿಕ–ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಬೆಳೆಯುವ ಮಕ್ಕಳ ಹಾಗೂ ಹದಿಹರೆಯದವರ, ಬೆಳವಣಿಗೆಯ ಲಕ್ಷಣಗಳು, ಅವರವರ ಸನ್ನಿವೇಶದಲ್ಲಿ ಎದುರಾಗುವ ಸವಾಲುಗಳ ಹಿನ್ನೆಲೆಯಲ್ಲಿ ಅವರ ಕಲಿಕೆಗೆ ಸಹಾಯಮಾಡಬಹುದಾದ ಅವಕಾಶಗಳನ್ನು ವಿದ್ಯಾರ್ಥಿಗಳು ಈ ಕೋರ್ಸಿನ ಸಂದರ್ಭದಲ್ಲಿ ಆಲೋಚನೆ ಮಾಡಲು ಅಗತ್ಯವಾದ ವೇದಿಕೆಯನ್ನು ಸೃಷ್ಟಿಸುವುದು ಈ ಸಾಮಗ್ರಿಯ ಉದ್ದೇಶ. ವಿದ್ಯಾರ್ಥಿಗಳು ಹಾಗೆ ಮಾಡಿ ಕಾರ್ಯಪ್ರವೃತ್ತರಾದರೆ ಈ ಸಾಮಗ್ರಿಯ ಉದ್ದೇಶ ಸಾರ್ಥಕವಾದಂತೆ.

# ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ

# ಘಟಕ 1 : ಬೆಳವಣಿಗೆ ಮತ್ತು ವಿಕಾಸ–ಅರ್ಥ, ಪರಿಕಲ್ಪನೆಗಳು ಮತ್ತು ಗುಣಲಕ್ಷಣಗಳು

**ಘಟಕದ ರಚನೆ**


1.1.1. ಕಲಿಕಾ ಉದ್ದೇಶಗಳು

1.1.2. ಪೀಠಿಕೆ

1.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.1.3.1. ಬೆಳವಣಿಗೆ ಮತ್ತು ವಿಕಾಸ–ಅರ್ಥ ಮತ್ತು ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.1.3.2. ವಿಕಾಸ ಮತ್ತು ಕಲಿಕೆ–ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.1.3.3. ವಿಕಾಸ ಮತ್ತು ಪಕ್ವತೆ–ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1.1.3.4. ವಿಕಾಸ ಮತ್ತು ಸಂಶ್ಲೇಷಣೆ–ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4

1.1.4. ಸಾರಾಂಶಿಸೋಣ

1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲುಉತ್ತರಗಳು – 1, 2, 3 ಮತ್ತು 4

1.1.6. ಘಟಕಾಂತ್ಯ ಅಭ್ಯಾಸಗಳು

1.1.7. ಪರಾಮರ್ಶನ ಸೂಚಿ


## 1.1.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಬೆಳವಣಿಗೆಯ ಅರ್ಥವನ್ನು ವಿವರಿಸುವರು;
- ವಿಕಾಸದ ಪರಿಕಲ್ಪನೆಯನ್ನು ವರ್ಣಿಸುವರು;
- ಬೆಳವಣಿಗೆ ಮತ್ತು ವಿಕಾಸದ ಜೊತೆ ಸಹ–ಸಂಬಂಧ ಹೊಂದಿರುವ ಇತರ ಪರಿಕಲ್ಪನೆಗಳನ್ನು ಗುರುತಿಸುವರು;
- ಬೆಳವಣಿಗೆ ಮತ್ತು ವಿಕಾಸಗಳ ನಡುವಿನ ವ್ಯತ್ಯಾಸವನ್ನು ವಿವರಿಸುವರು;
- ಬೆಳವಣಿಗೆ ಮತ್ತು ವಿಕಾಸದ ಗುಣಲಕ್ಷಣಗಳನ್ನು ವಿವರಿಸುವರು;
- ವಿಕಾಸ, ಪಕ್ವತೆ ಮತ್ತು ಕಲಿಕೆ–ಇವುಗಳ ನಡುವಿನ ಸಂಬಂಧವನ್ನು ವಿಶದೀಕರಿಸುವರು; ಮತ್ತು
- ವಿಕಾಸವು ಹಲವಾರು ಚಟುವಟಿಕೆಗಳ ಮತ್ತು ಕಾರ್ಯಗಳ ಸಂಶ್ಲೇಷಣೆಯೆಂದು ಸಮರ್ಥಿಸುವರು.

## 1.1.2. ಪೀಠಿಕೆ

ಬೆಳವಣಿಗೆ ಮತ್ತು ವಿಕಾಸವೆಂಬುದು ಪ್ರತಿಯೊಬ್ಬರ ಜೀವನದಲ್ಲೂ ಹಾಸು–ಹೊಕ್ಕಾಗಿರುವ ನಿರಂತರವಾದ ಒಂದು ಪ್ರಕ್ರಿಯೆ. ಇದರಿಂದಾಗಿ ವ್ಯಕ್ತಿಯೊಬ್ಬನ ವಿವಿಧ ವಯೋಮಾನದಲ್ಲಿ ಬೇರೆ ಬೇರೆ ರೀತಿಯ ವರ್ತನೆಗಳನ್ನು ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನತೆಯನ್ನು ನಾವು ನೋಡುತ್ತೇವೆ. ಉದಾಹರಣೆಗೆ, ಶಿಶುವೊಂದರ ವರ್ತನೆ, ಪ್ರೌಢಶಾಲಾ ವಿದ್ಯಾರ್ಥಿಯ ವರ್ತನೆಗಿಂತ ಹಾಗೂ ಯುವಕನೊಬ್ಬನ ವರ್ತನೆಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ.

ಕಲಿಕೆ ಮತ್ತು ವಿಕಾಸಾತ್ಮಕ ಬದಲಾವಣೆಗಳ ನಡುವೆ ಅವಿನಾಭಾವ ಸಂಬಂಧವಿದೆ. ಮನೋವಿಜ್ಞಾನಿಗಳ ಪ್ರಕಾರ ಕಲಿಕೆಯೆಂದರೆ, ವರ್ತನೆಯಲ್ಲಾಗುವ ಬದಲಾವಣೆಗಳು."ವ್ಯಕ್ತಿಯೊಬ್ಬನಲ್ಲಿ ಆಗುವ ಅಪೇಕ್ಷಿತವಾದ ಹಾಗೂ ಹೆಚ್ಚು ಶಾಶ್ವತವಾದ ವರ್ತನಾ ಬದಲಾವಣೆಯೇ ಕಲಿಕೆ". ಪ್ರಶಿಕ್ಷಣಾರ್ಥಿಗಳಾದ ನಿಮ್ಮ ಗಮನ ಕಲಿಸುವಿಕೆಯ ಮೇಲಿರುವುದರಿಂದ ಬಾಲ್ಯ ಮತ್ತು ವಿಕಾಸಾತ್ಮಕ ಪ್ರಕ್ರಿಯೆಗಳನ್ನು ನೀವು ಅರಿತಿರುವುದು ಬಹಳ ಮುಖ್ಯವಾಗುತ್ತದೆ. ಸಾಮಾನ್ಯವಾಗಿ ಬೆಳವಣಿಗೆ, ವಿಕಾಸ ಎಂಬ ಪದಗಳನ್ನು ಅದಲುಬದಲಾಗಿ ಬಳಸುವುದನ್ನು ನಾವು ಗಮನಿಸಿದ್ದೇವೆ. ಆದರೆ, ಇವೆರಡಕ್ಕೂ ಅಜಗಜಾಂತರದಷ್ಟು ವ್ಯತ್ಯಾಸವಿದೆ. ಇನ್ನು ಮುಂದಿನ ಅಧ್ಯಯನದಲ್ಲಿ ಈ ವಿಚಾರವನ್ನು ನೀವು ಸ್ಪಷ್ಟವಾಗಿ ತಿಳಿಯಲಿದ್ದೀರಿ.

**ಬೆಳವಣಿಗೆ ಎಂದರೇನು?**

ಸಾಮಾನ್ಯ ಜನರು ಬೆಳವಣಿಗೆ ಮತ್ತು ವಿಕಾಸ ಎಂಬ ಪದಗಳನ್ನು ನಿತ್ಯ ಜೀವನದಲ್ಲಿ ಪದೇ ಪದೇ ಬಳಸುತ್ತಲೇ ಇರುತ್ತಾರೆ. ಹಾಗಾದರೆ, ಅವರ ದೃಷ್ಟಿಕೋನದಿಂದ ಈ ಪದಗಳ ಅರ್ಥ ಮತ್ತು ವ್ಯಾಪ್ತಿಯನ್ನು ಕೆಳಗೆ ಕಾಣಿಸಿರುವ ಚಟುವಟಿಕೆಗಳ ಮೂಲಕ ಅರಿಯಲು ಪ್ರಯತ್ನಿಸೋಣ.

**ಅಭ್ಯಾಸ–I**

ನಾಲ್ಕು ವರ್ಷದ ಚಿಕ್ಕ ಮಗುವೊಂದು ತನ್ನ ತಂದೆಗೆ ಅವರ ಕಾರಿನ ಕೀಯನ್ನು ತನಗೆ ಕೊಡಬೇಕೆಂದು ತುಂಬಾ ಹಠಮಾಡುತ್ತದೆ, ಏಕೆಂದರೆ, ಅದಕ್ಕೆ ತಾನೂ ಕಾರನ್ನು ಚಲಾಯಿಸಬಲ್ಲೆ ಎಂಬ ನಂಬಿಕೆ. ಬರೀ ಸ್ಟೀರಿಂಗ್‌ನ್ನು ಅತ್ತ ಇತ್ತ ತಿರುಗಿಸಿದರೆ, ಕಾರು ಓಡುವುದು, ಅಷ್ಟೇ ತಾನೆ? ಇದು ಮಗುವಿನ ಭಾವನೆ. ಇದನ್ನು ಕೇಳಿ ತಂದೆ ನಕ್ಕು ನುಡಿಯುತ್ತಾರೆ, "ಇಲ್ಲ ಮಗು, ಈಗ ನೀನು ಕಾರು ಬಿಡಲು ಸಾಧ್ಯವಿಲ್ಲ, ನೀನಿನ್ನೂ ಚಿಕ್ಕವನು, ಕಾರು ಬಿಡಲು ಮೊದಲು ನೀನು ದೊಡ್ಡವನಾಗಿ ಬೆಳೆಯಬೇಕು. ನೀನು ದೊಡ್ಡವನಾದ ಮೇಲೆ ಕಾರಿನ ಕ್ಲಚ್ಚು, ಗೇರ್,ಮತ್ತು ಬ್ರೇಕ್ – ಇವೆಲ್ಲಾ ನಿನ್ನ ಕಾಲಿಗೆ ಸಿಗುವಷ್ಟು ದೂರದಲ್ಲೇ ಇರುತ್ತವೆ, ಆಗ ನಿನಗೆ ಕಾರು ಬಿಡಲು ಸುಲಭ ಹಾಗೂ ಸಾಧ್ಯ"

ಈಗ ಈ ಕೆಳಗಿನ ಪ್ರಶ್ನೆಗಳನ್ನು ಗಮನಿಸಿ, ಉತ್ತರಿಸಿ:

ತಂದೆಯು ಮಗುವಿಗೆ ಕಾರಿನ ಕೀಯನ್ನು ಏಕೆ ಕೊಡಲಿಲ್ಲ?

ಅ. ಚಿಕ್ಕ ಹುಡುಗರು ಕಾರನ್ನು ಚಲಾಯಿಸಲು ಸಾಧ್ಯವಿಲ್ಲ

ಬ. ಕೇವಲ ವಯಸ್ಕರು ಮಾತ್ರ ಕಾರನ್ನು ಚಲಾಯಿಸಬೇಕು

ಕ. "ಕಾರನ್ನು ಚಲಾಯಿಸುವುದು ಒಂದು ಕೌಶಲ, ಅದಕ್ಕೆ ಒಂದು ಮಟ್ಟದ ಶಾರೀರಿಕ ವಿಕಾಸದ ಅಗತ್ಯವಿದೆ"

ಡ. ಸಾಮಾನ್ಯವಾಗಿ ಚಿಕ್ಕ ಮಕ್ಕಳು ಹಠಮಾರಿಗಳಾಗಿರುತ್ತಾರೆ

ಮೇಲಿನ ಪ್ರಶ್ನೆಯ ಅರ್ಥವೇನು?

ಉತ್ತರ:______________

## ಅಭ್ಯಾಸ – II

ಕಮಲಳು ಒಮ್ಮೆ ಸಿಟಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ, ತನ್ನ ಪಕ್ಕದಲ್ಲಿ ಕುಳಿತಿದ್ದ, ಇನ್ನಿಬ್ಬರು ಸಹ–ಪ್ರಯಾಣಿಕರ ಮಾತುಗಳು ಆಕೆಯ ಕಿವಿಯ ಮೇಲೆ ಬಿದ್ದವು. ಅವರಲ್ಲಿ ಒಬ್ಬ ಮಹಿಳೆಯ ಸಂಬಂಧಿಕರ ಮಗಳೊಬ್ಬಳಿಗೆ ಇತ್ತೀಚಿಗೆ ಹೆರಿಗೆಯಾಯಿತಂತೆ, ಹುಟ್ಟಿದ್ದು ಒಂದು ಹೆಣ್ಣು ಮಗು. ಇದರಲ್ಲಿ ಕೌತುಕಮಯವಾದ ವಿಷಯವೇನೆಂದರೆ, ಆ ಮಗುವಿಗೆ ಹುಟ್ಟುವಾಗಲೇ ಬಾಯಲ್ಲಿ ಎರಡು ಹಲ್ಲುಗಳಿದ್ದುವಂತೆ. ಇದನ್ನು ಕೇಳಿದ ಆ ಇನ್ನೊಬ್ಬ ಮಹಿಳೆ ಆಶ್ಚರ್ಯದಿಂದ "ಓ ಹೌದಾ, ಇದೇನು ವಿಚಿತ್ರ" ಎಂದಳು. ಪಾಪ ಮೊದಲನೆಯ ಮಹಿಳೆಗೆ ಇದಕ್ಕಿಂತ ಇನ್ನೇನೂ ಹೆಚ್ಚಿಗೆ ಗೊತ್ತಿರಲಿಲ್ಲ.

ಮೇಲೆ ಹೇಳಿದ ಘಟನೆಯಲ್ಲಿ ವಿಚಿತ್ರವಾದುದು ಏನಿದೆ? ಮತ್ತು ಏಕೆ ಅದು ವಿಚಿತ್ರವೆನಿಸುತ್ತದೆ?

ಅ. ಹುಟ್ಟಿದ ಕ್ಷಣದಲ್ಲೇ ಒಂದು ನವಜಾತ ಶಿಶುವಿನಲ್ಲಿ ಹಲ್ಲುಗಳು ಕಾಣಿಸುವುದು

ಬ. ವಿಕಾಸ ಮನೋವಿಜ್ಞಾನದ ಪ್ರಕಾರ ಹಾಲುಹಲ್ಲುಗಳು ಶಿಶುವಿನ 6ನೇ/7ನೇ ತಿಂಗಳಿನಲ್ಲಿ ಕಾಣಿಸಿಕೊಳ್ಳುವುವು. ಆದರೆ ಮೇಲೆ ಹೇಳಿದ ಘಟನೆಯಲ್ಲಿ ಅದು ತಂಬಾ ಬೇಗನೇ ಆಗಿದೆ

ಕ. ಅದು ಹೇಗೆ ಎರಡೇ ಹಲ್ಲುಗಳು, ಅದೂ ಕೆಳದವಡೆಯಲ್ಲಿಯೇ ಕಂಡುಬಂದುವು?

ಡ. ವಿಕಾಸ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಲಕ್ಷಣವೂ ಒಂದು ಗೊತ್ತಾದ ಹಂತದಲ್ಲಿಯೇ ಅಭಿವ್ಯಕ್ತವಾಗುವುದು ಆದರೆ, ಮೇಲಿನ ಘಟನೆಯು ಇದಕ್ಕೆ ವಿರುದ್ಧವಗಿದೆ.

ಉತ್ತರ:____________

ನಿಮ್ಮ ತೀರ್ಮಾನವೇನು?

## ಅಭ್ಯಾಸ–III

ಒಮ್ಮೆ ದಂಪತಿಗಳಿಬ್ಬರು ಒಂದು ಸಿದ್ಧ ಉಡುಪುಗಳನ್ನು ಮಾರಾಟಮಾಡುವ ಅಂಗಡಿಯೊಂದಕ್ಕೆ ಭೇಟಿ ನೀಡಿದರು. ಅವರಿಗೆ ತಮ್ಮ 6 ವರ್ಷದ ಮಗಳಿಗೆ ಒಂದು ಡ್ರೆಸ್ ತೆಗೆದುಕೊಳ್ಳುವುದಿತ್ತು. ಅಂಗಡಿಯ ಸೇಲ್ಸ್‌ಮನ್ ಹಲವಾರು ಡ್ರೆಸ್‌ಗಳನ್ನು ತೋರಿಸಿದಾಗ ಹೆಂಡತಿಯು ಅವುಗಳಲ್ಲಿ ಒಂದನ್ನು ಆರಿಸಿ ತನ್ನ ಗಂಡನಿಗೆ ಕೇಳಿದಳು "ಇದು ಸರಿಹೋಗಬಹುದಾ?" ಎಂದು. ಆತ ಅದಕ್ಕೆ "ಚೆನ್ನಾಗಿಯೇನೋ ಇದೆ, ಆದರೆ, ಇನ್ನೂ ಸ್ವಲ್ಪ ದೊಡ್ಡ ಅಳತೆಯದನ್ನು ತೆಗೆದುಕೊಂಡರೆ, ಮುಂದೆಯೂ ಅಂದರೆ, 6ರಿಂದ 8 ತಿಂಗಳಕಾಲ ಹೆಚ್ಚು ಉಪಯೋಗಿಸಬಹುದು. ಇಲ್ಲದೇ ಹೋದರೆ, ಬಹಳ ಬೇಗ ಅವಳಿಗೆ ಅದು ಚಿಕ್ಕದಾಗುವುದು" ಎಂದು ಹೇಳಿದನು.

ದಂಪತಿಗಳು ತುಸು ದೊಡ್ಡದೇ ಆದ ಡ್ರೆಸ್‌ನ್ನು ಏಕೆ ತೆಗೆದುಕೊಳ್ಳಬೇಕು ಎಂದುಕೊಂಡರು?

ಅ. ಅವರ ಮಗಳು ತ್ವರಿತವಾಗಿ ಬೆಳೆಯುತ್ತಿದ್ದಳು.

ಬ. ಸ್ವಲ್ಪ ದೊಗಳೆಯಾಗಿಯೇ ಇರಲಿ ಎಂದು.

ಕ. ದೊಡ್ಡ ಅಳತೆಯ ಡ್ರೆಸ್‌ಗಳು ಬಹಳಷ್ಟು ದಿನ ಬಾಳಿಕೆ ಬರುವುವು.

ಡ. ದೊಡ್ಡ ಅಳತೆಯ ಡ್ರೆಸ್‌ಗಳು ಕಡಿಮೆ ಬೆಲೆಗೆ ಸಿಗುತ್ತಿದ್ದವು.

ಉತ್ತರ: ____________

ಇದರಿಂದ ನಿಮಗೇನು ಅರ್ಥವಾಯಿತು?

- ಮೊದಲನೇ ಚಟುವಟಿಕೆಯಲ್ಲಿ ಮಗುವಿನ ಕೈ ಮತ್ತು ಕಾಲುಗಳು ಸಮಯ ಸಂದಂತೆ ವಿಕಾಸ ಹೊಂದುವುವು ಮತ್ತು ಗಾತ್ರದಲ್ಲಿ ಉದ್ದ, ದಪ್ಪವಾಗುವುವು ಎಂಬುದನ್ನು ನೋಡಬಹುದು.
- ಎರಡನೇ ಚಟುವಟಿಕೆಯಲ್ಲಿ ಬೆಳವಣಿಗೆಯು ಒಂದು ಗೊತ್ತಾದ ಮತ್ತು ನಿಯಮಿತವಾದ ಕ್ರಮಬದ್ಧತೆಯನ್ನು ಅನುಸರಿಸುತ್ತದೆ ಎಂದು ತಿಳಿಯಬಹುದು.
- ಮೂರನೇ ಚಟುವಟಿಕೆಯಲ್ಲಿ ಮಾನವನು ವಯಸ್ಸು ಹೆಚ್ಚಾದಂತೆ, ಆತನ ದೇಹದ ಗಾತ್ರದಲ್ಲಿಯೂ ಹೆಚ್ಚಳವಾಗುವುದೆಂದು ಅರ್ಥಮಾಡಿಕೊಳ್ಳಬಹುದು.

ಮೇಲೆ ಗಮನಿಸಿದ ಉದಾಹರಣೆಗಳ ಅರ್ಥಪೂರ್ಣ ವಿಶ್ಲೇಷಣೆಯನ್ನು ಈಗ ಮಾಡೋಣ. ಭೂಮಿಯ ಮೇಲಿನ ಎಲ್ಲಾ ಜೀವಿಗಳೂ ಒಂದು ನಿಗದಿತವಾದ ಗುಣಲಕ್ಷಣಗಳನ್ನು ತೋರುತ್ತವೆ. ಅವುಗಳಲ್ಲಿ ಬೆಳವಣಿಗೆ ಮತ್ತು ವಿಕಾಸ ಸೇರಿಕೊಂಡಿವೆ. ವಿಶೇಷವಾಗಿ ಮಾನವನನ್ನು ತೆಗೆದುಕೊಂಡರೆ, ಅವನು ಪ್ರಾರಂಭದಲ್ಲಿ ಪ್ರತಿಯೊಂದಕ್ಕೂ ಅವಲಂಬನೆ ಬೇಡುತ್ತಾ ಕೊನೆಯಲ್ಲಿ ಸ್ವಾವಲಂಬನೆಯಿಂದ ರೂಪುಗೊಳ್ಳುತ್ತಾನೆ. ಪ್ರತಿಯೊಬ್ಬ ಮಾನವನ ಜೀವನವು ಒಂದು ಫಲಿತ ಅಂಡಾಣುವಿನಿಂದ (ಒಂದು ವೀರ್ಯಾಣು ಮತ್ತು ಒಂದು ಅಂಡಾಣುವಿನ ಸಮ್ಮಿಲನದಿಂದ ಉಂಟಾಗುವ ಜೈಗೋಟ್/ಯುಗ್ಮಾಣು) ಪ್ರಾರಂಭವಾಗುತ್ತದೆ. ಯುಗ್ಮಾಣು ಹಲವಾರು ಬಾರಿ ವಿಭಜನೆಗೊಂಡು ಒಂದು ಕೋಶಗಳ ಗೋಲವಾಗಿ ರೂಪುಗೊಂಡು ನಂತರದಲ್ಲಿ ಮತ್ತಷ್ಟು ವಿಭಜನೆಹೊಂದುತ್ತಾ ಭ್ರೂಣವನ್ನು ರೂಪಿಸುವುದು. ಇದೆಲ್ಲವೂ ತಾಯಿಯ ಗರ್ಭಕೋಶದಲ್ಲಿ ನಡೆಯುವ ಪ್ರಕ್ರಿಯೆಯಾಗಿರುತ್ತದೆ. ಹೀಗೆ ಗರ್ಭಾಂಕುರವಾದ ನಂತರದ ಸರಿಸುಮಾರು ನವ ಮಾಸಗಳಲ್ಲಿ ಭ್ರೂಣವು ಸಂಪೂರ್ಣವಾಗಿ ಬೆಳೆದು ತಾಯ ಗರ್ಭದಿಂದ ಹೊರಬಂದು ಈ ಪ್ರಪಂಚಕ್ಕೆ ಸೇರುವುದು.

ಮಾನವನ ಬೆಳವಣಿಗೆ ಮತ್ತು ವಿಕಾಸಶಾಸ್ತ್ರದ ಅಧ್ಯಯನದಲ್ಲಿ ಭ್ರೂಣಾವಸ್ಥೆಯನ್ನೂ ಸೇರಿಸಿಕೊಳ್ಳಲಾಗಿದೆ ಮತ್ತು ಈ ಹಂತವನ್ನು ಪ್ರಸವ–ಪೂರ್ವದ ಹಂತವೆಂದು ಕರೆಯಲಾಗಿದೆ. ವಿಶೇಷವೆಂದರೆ, ಮಾನವನಲ್ಲಿ ಪ್ರಸವಾನಂತರದ ವಿಕಾಸವು ಬೇರೆಲ್ಲಾ ಜೀವಿಗಳಿಗಿಂತ ಸಾಕಷ್ಟು ದೀರ್ಘಕಾಲಿಕವೆಂದೇ ಹೇಳಬಹುದು. ವಯಸ್ಕ ಹಂತ ಮತ್ತು ಅದಕ್ಕೆ ಹೊಂದಿಕೊಂಡ ಪಕ್ವತೆಯನ್ನು ಗಳಿಸಿಕೊಳ್ಳಲು ಸುಮಾರು ಎರಡು ದಶಕಗಳಿಗೂ ಹೆಚ್ಚು ಸಮಯ ಹಿಡಿಯುತ್ತದೆ.

ಬಾಲ್ಯಾವಸ್ಥೆಯು ಕ್ರಮವಾಗಿ ಎರಡು ಹಂತಗಳನ್ನು ಒಳಗೊಂಡಿದೆ. ಅವೆಂದರೆ, ಪೂರ್ವ ಬಾಲ್ಯ ಹಂತ ಮತ್ತು ಉತ್ತರ ಬಾಲ್ಯ ಹಂತ. ಈ ಎರಡು ಹಂತಗಳ ನಂತರ, ಮಗುವು ಹದಿಹರೆಯದ ಹಂತವನ್ನು ತಲುಪುವುದು. ಹದಿಹರೆಯದ ಹಂತದ ನಂತರ, ವಯಸ್ಕ ಹಂತ ಮತ್ತು ವೃದ್ಧಾಪ್ಯವು ಕ್ರಮಾನುಗತವಾಗಿ ಬರುವುವು. ಈ ಎಲ್ಲಾ ಹಂತಗಳಲ್ಲಿಯೂ ಒಂದು ರೇಖೀಯ ನಿರಂತರತೆಯನ್ನು ನಾವು ಗಮನಿಸಿದಾಗ ಅದೇ ಬೆಳೆಯುವಿಕೆ/ವಿಕಾಸ ಹೊಂದುವಿಕೆ ಎಂದು ಅನಿಸುವುದು. ಇದು ನೋಡುವುದಕ್ಕೆ ನಿಧಾನವೆನಿಸಿದರೂ ಚಾಚೂ ತಪ್ಪದಂತೆ ನಡೆಯುವ ಒಂದು ವ್ಯವಸ್ಥಿತವಾದ ಪ್ರಕ್ರಿಯೆ.

## 1.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.1.3.1. ಬೆಳವಣಿಗೆ ಮತ್ತು ವಿಕಾಸ–ಅರ್ಥ ಮತ್ತು ಪರಿಕಲ್ಪನೆ

ಬೆಳವಣಿಗೆ, ವಿಕಾಸ, ಬಾಲ್ಯ ಹಾಗೂ ವಿಕಾಸ ಹೊಂದುವಿಕೆ – ಈ ಪದಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಈ ಕೆಳಕಂಡ ಸಂದರ್ಭವನ್ನು ವಿಶ್ಲೇಷಿಸೋಣ:

**ಅಭ್ಯಾಸ–IV**

ವಿಕಾಸ ಹೊಂದುತ್ತಿರುವ ರಾಷ್ಟ್ರ (ಭಾರತ) ವಿಕಾಸಗೊಂಡಿರುವ ರಾಷ್ಟ್ರ(ಅಮೇರಿಕಾ) ಮತ್ತು ವಿಕಾಸ ಹೊಂದಿರದ ರಾಷ್ಟ್ರವೆಂಬ (ಇಥಿಯೋಪಿಯಾ) ಎಂಬ ಪರಿಕಲ್ಪನೆಗಳನ್ನು ನಾವು ತಿಳಿದಿದ್ದೇವೆ. ಇಲ್ಲಿ

"ವಿಕಾಸ"ಎಂಬ ಪದವನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ? ಉದಾಹರಣೆಗೆ, ವಿಕಾಸಹೊಂದಿರುವ ರಾಷ್ಟ್ರದಲ್ಲಿ ಜನರು ತುಂಬಾ ಮುಂದುವರಿದು, ಶ್ರೀಮಂತ, ಸುಸಜ್ಜಿತ ಜೀವನವನ್ನು ನಡೆಸುತ್ತಾ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿದವರಾಗಿರುತ್ತಾರೆ. ಅವರ ಜೀವನ ಕ್ರಮವು ಇತರ ರಾಷ್ಟ್ರದವರಿಗಿಂತ ಅತ್ಯುತ್ತಮವಾಗಿರುತ್ತದೆ.

ಇಲ್ಲಿ ವಿಕಾಸ ಎಂಬ ಪರಿಕಲ್ಪನೆಯನ್ನು ಕೇವಲ ವಸ್ತು ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಬಳಸಲಾಗಿದೆ. ಹಾಗೆಯೇ ಇಷ್ಟೆಲ್ಲ ಸಾಧಿಸಿದವನು ಮಾನವನೇ ಎಂದ ಮೇಲೆ, ಮಾನವನ ಬುದ್ಧಿಯ ವಿಕಾಸ, ಸಾಮಾಜಿಕ ವಿಕಾಸ, ಭಾವನಾತ್ಮಕ ವಿಕಾಸ ಹೀಗೆ ವಿವಿಧ ಆಯಾಮಗಳಲ್ಲಿ ಆತನ ವಿಕಾಸವನ್ನು ಗಮನಿಸಿದಾಗ ಅದು ಪದಗಳಿಗೆ ಮೀರಿದ್ದು ಎಂಬ ಭಾವ ನಿಮ್ಮಲ್ಲಿ ಬರಬಹುದು. ಮಾನವನೂ ಸೇರಿದಂತೆ ವಿವಿಧ ಪ್ರಾಣಿಗಳ ಮೆದುಳಿನ ತೂಕವನ್ನು ಗಮನಿಸಿ:

| | |
|---|---|
| ಮಾನವನ ಮೆದುಳು | 1,400 ಗ್ರಾಂ(ಸುಮಾರು) |
| ಆನೆಯ ಮೆದುಳು | 4,783 ಗ್ರಾಂ(ಸುಮಾರು) |
| ತಿಮಿಂಗಿಲದ ಮೆದುಳು | 7,800 ಗ್ರಾಂ(ಸುಮಾರು) |

ಮಾನವನ ಮೆದುಳಿನ ತೂಕವನ್ನು ಗಮನಿಸಿ. ಹಾಗೆಯೇ ಆನೆಯ ಮತ್ತು ತಿಮಿಂಗಿಲದ ಮೆದುಳಿನ ತೂಕವನ್ನೂ ಗಮನಿಸಿ. ಮಾನವನು ಬೇರೆಲ್ಲಾ ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿವಂತ ಎಂಬುದು ಎಲ್ಲರಿಗೂ ತಿಳಿದಿದೆ. ಮೆದುಳಿನ ಗಾತ್ರವು ಆತನ ವಿಕಾಸದ ಮೇಲೆ ಹೆಚ್ಚೇನೂ ಪ್ರಭಾವ ಬೀರಿಲ್ಲ ಎಂಬ ಸತ್ಯಾಂಶವಿಲ್ಲಿ ಗೋಚರವಾಗುತ್ತಿದೆ. ಆದಾಗ್ಯೂ ಒಂದು ಎಳೆಯ ಹಸುಗೂಸಿನ ಮೆದುಳಿಗೂ ಒಬ್ಬ ಬೆಳೆದ ವಯಸ್ಕನ ಮೆದುಳಿಗೂ ಅಜಗಜಾಂತರ ವ್ಯತ್ಯಾಸವೇನೋ ಇದ್ದೇ ಇದೆ. ಮಗು ಬೆಳೆದಂತೆಲ್ಲಾ ಮೆದುಳಿನ ಗಾತ್ರವೂ ಬೆಳೆಯುತ್ತದಾದರೂ ಯಾವುದೋ ಒಂದು ವಯೋಮಾನದಲ್ಲಿ ಮೆದುಳಿನ ಬೆಳವಣಿಗೆಯು ಸ್ಥಗಿತಗೊಳ್ಳುತ್ತದೆ. ಆದರೆ, ಬುದ್ಧಿಶಕ್ತಿ, ಸೃಜನಶೀಲತೆ, ಕಾರ್ಯಚಾತುರ್ಯ ಮುಂತಾದುವುಗಳೆಲ್ಲಾ ನಿರಂತರವಾಗಿ ವಿಕಾಸ ಹೊಂದುತ್ತಲೇ ಸಾಗುತ್ತವೆ. ಹೀಗೆಯೇ, ಸಾಮಾಜಿಕ ವಿಕಾಸ, ನೈತಿಕ ವಿಕಾಸ, ಸಂಜ್ಞಾನಾತ್ಮಕ ವಿಕಾಸ, ಭಾವವಿಕಾಸ ಮತ್ತು ಕೌಶಲಗಳ ವಿಕಾಸ ಎಂದು ಹತ್ತು ಹಲವಾರು ಆಯಾಮಗಳಲ್ಲಿ ವಿಕಾಸವನ್ನು ಗುರುತಿಸಬಹುದಾಗಿದೆ. ವಿಕಾಸವು ಬೆಳವಣಿಗೆಯನ್ನು ಮೀರಿದ ವ್ಯಾಪ್ತಿಯನ್ನು ತೋರುತ್ತದೆ. ಬೆಳವಣಿಗೆಯು ಕೇವಲ ದೈಹಿಕ ಹೆಚ್ಚುವರಿ, ಶಾರೀರಿಕ ಅಂಶಗಳಲ್ಲಿ ಹೆಚ್ಚಳವನ್ನು ಮಾತ್ರ ಪರಿಗಣಿಸುತ್ತದೆ.

"ವಿಕಾಸ ಹೊಂದುವಿಕೆ" ಎಂಬುದು ಬೆಳವಣಿಗೆ ಮತ್ತು ವಿಕಾಸ ಪ್ರಕ್ರಿಯೆಗಳ ಒಟ್ಟು ಮೊತ್ತವಾಗಿದೆ. ಅವುಗಳು ಸಮಾನಾರ್ಥಕ ಪದಗಳಲ್ಲ ಎಂಬುದನ್ನು ನಾವಿಲ್ಲಿ ಗಮನಿಸೋಣ. ಅವುಗಳ ಸರಿಯಾದ ಅರ್ಥವನ್ನು ಮತ್ತು ಅವುಗಳ ನಡುವಿನ ಭಿನ್ನತೆಯನ್ನು ಈಗ ನೋಡೋಣ:

**ಬೆಳವಣಿಗೆ ಮತ್ತು ವಿಕಾಸ-ಅರ್ಥ ಮತ್ತು ವ್ಯತ್ಯಾಸಗಳು:**

ಬೆಳವಣಿಗೆ ಒಂದು ಶಾರೀರಿಕ ಪ್ರಕ್ರಿಯೆಯಾಗಿದ್ದು, ಪರಿಮಾಣಾತ್ಮಕವಾದ ಸೂಚಕಗಳಿಂದ ಅದನ್ನು ಗುರುತಿಸಬಹುದಾಗಿದೆ, ಉದಾಹರಣೆಗೆ, ವ್ಯಕ್ತಿಯೊಬ್ಬನಲ್ಲಿ ಕಂಡುಬರುವ ಗಾತ್ರ, ಉದ್ದ, ತೂಕ, ಮತ್ತು ಶಾರೀರಿಕ ಸುತ್ತಳತೆಯಲ್ಲಿನ ಹೆಚ್ಚಳ ಇತ್ಯಾದಿ. ಆದರೆ, ವಿಕಾಸವು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಅದರಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಅಂಶಗಳೆರಡನ್ನೂ ನಾವು ಕಾಣುತ್ತೇವೆ. ಮಗುವೊಂದು 6 ರಿಂದ 12 ವರ್ಷಕ್ಕೆ ಕಾಲಿಟ್ಟಾಗ, ಅದು ತನ್ನ ಪೂರ್ವಬಾಲ್ಯದಿಂದ ಉತ್ತರಬಾಲ್ಯಕ್ಕೆ ವಿಕಾಸ ಹೊಂದುವಾಗ, ಈ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತವೆ. ಬೆಳವಣಿಗೆಯ ಲಕ್ಷಣಗಳನ್ನು ಅಳೆದು ನೋಡಬಹುದು. (ಉದ್ದ, ತೂಕ ಮತ್ತು ಗಾತ್ರ ಇತ್ಯಾದಿ). ಅದೇ ರೀತಿ ಭಾಷಾ ಬೆಳವಣಿಗೆ, ಸಾಂಖ್ಯಿಕ ಸಾಮರ್ಥ್ಯ, ಒಳ್ಳೆಯದು ಮತ್ತು ಕೆಟ್ಟದ್ದರ ಗುರುತಿಸುವಿಕೆ

ಹಾಗೂ ನಿರ್ಧಾರ ತೆಗೆದುಕೊಳ್ಳುವಿಕೆ ಇವು ವಿಕಾಸವೆಂದಾಗುತ್ತವೆ.  ಇವುಗಳನ್ನು ಸ್ಪಷ್ಟವಾಗಿ ವೀಕ್ಷಿಸುವುದಾಗಲೀ, ವಸ್ತುನಿಷ್ಟವಾಗಿ ಅಳೆಯುವುದಾಗಲೀ ಆಗುವುದಿಲ್ಲ. ಇಷ್ಟೆಲ್ಲಾ ವ್ಯತ್ಯಾಸಗಳಿದ್ದರೂ ಬೆಳವಣಿಗೆ ಮತ್ತು ವಿಕಾಸವು ಪರಸ್ಪರ ಅವಲಂಬಿತವಾಗಿರುವ ಪ್ರಕ್ರಿಯೆಗಳಾಗಿವೆ.

- ಕೆಲವೊಂದು ಸಂದರ್ಭಗಳಲ್ಲಿ ಬೆಳವಣಿಗೆಯು ವಿಕಾಸದ ಅಂಶವಿಲ್ಲದೆ ಆಗಬಹುದು(ಅಸಾಧಾರಣ ಸನ್ನಿವೇಶಗಳಲ್ಲಿ);
- ಬೆಳವಣಿಗೆ ಎಂಬುದು ವಿಕಾಸಕ್ಕಿಂತ ಹೆಚ್ಚು ಸಮಗ್ರವೂ ಸಂಕೀರ್ಣವೂ ಆದುದು;
- ಬೆಳವಣಿಗೆಯು ಕೆಲವು ನಿಶ್ಚಿತವಾದ ಭೌತಿಕ ಚರಾಂಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ, ಅಂದರೆ, ಎತ್ತರ, ತೂಕ ಇತ್ಯಾದಿ. ವಿಕಾಸವು ಗುಣಾತ್ಮಕ ಚರಾಂಶಗಳಾದ ಬೌದ್ಧಿಕ, ಸಾಮಾಜಿಕ, ಮಾನಸಿಕ, ನೈತಿಕ, ಭಾವನಾತ್ಮಕ ಮತ್ತು ಸೌಂದರ್ಯಪ್ರಜ್ಞೆಯನ್ನು ಕುರಿತಂತೆ ವ್ಯಕ್ತವಾಗುತ್ತದೆ.
- ಬೆಳವಣಿಗೆಯು ಪರಿಮಾಣಾತ್ಮಕವಾದರೆ, ವಿಕಾಸವು ಗುಣಾತ್ಮಕವಾದುದಾಗಿದೆ.
- ಬೆಳವಣಿಗೆಯನ್ನು ಒಂದು ಸಂಕುಚಿತಾರ್ಥದಲ್ಲಿ ಪರಿಗಣಿಸಲಾಗುವುದು. ಇದು ಒಂದು ಹಂತದ ಅಥವಾ ವಯೋಮಾನದ ನಂತರ ತನ್ನಂತೆ ತಾನೇ ಸ್ಥಗಿತವಾಗುವುದು. ಇದಕ್ಕೆ ವಿರುದ್ಧವಾಗಿ ವಿಕಾಸವು ಸಂಕೀರ್ಣವಾದ ಪ್ರಕ್ರಿಯೆಯಾಗಿದ್ದು ನಿರಂತರವಾಗಿ ಘಟಿಸುತ್ತಿರುತ್ತದೆ.
- ಬೆಳವಣಿಗೆಯು ವಿಕಾಸದ ಒಂದು ಅಂಶ. ವಿಕಾಸದಿಂದ ಕಂಡುಬರುವ ಬದಲಾವಣೆಗಳ ಮೇಲೆ ಬೆಳವಣಿಗೆಯ ಪ್ರಭಾವವಿರುತ್ತದೆ.
- ಬೆಳವಣಿಗೆಯನ್ನು ತರಬೇತಿಯಿಂದ ಪಡೆಯಲಾಗುವುದಿಲ್ಲ. ಆದರೆ, ವಿಕಾಸವನ್ನು ತರಬೇತಿಯಿಂದಲೂ ಪಡೆದುಕೊಳ್ಳುವ ಸಾಧ್ಯತೆ ಇದೆ (ಉದಾಹರಣೆಗೆ, ವೈವಿಧ್ಯಮಯವಾದ ತರಬೇತಿಗಳಿಂದ ವ್ಯಕ್ತಿಗಳು ತಮ್ಮ ಜೀವನವನ್ನು ರೂಪಿಸಿಕೊಂಡಿರುವುದನ್ನು ನಾವು ನೋಡಬಹುದಾಗಿದೆ).
- ಬೆಳವಣಿಗೆಯನ್ನು ನೋಡಬಹುದು, ಅಳೆಯಬಹುದು, ವಿಕಾಸವು ಅಷ್ಟು ಸ್ಪಷ್ಟವಾಗಿ ಗೋಚರಿಸದಿದ್ದರೂ ಅದರ ಪರಿಣಾಮದಿಂದ ಅರಿಯಬಹುದು ಮತ್ತು ವಿಕಾಸವನ್ನು ಅಳೆಯುವುದು ಕಷ್ಟವಾದರೂ ಸಾಧ್ಯವಿದೆ (ಕೆಲವು ಪರೋಕ್ಷ ವಿಧಾನಗಳಿಂದ).

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ವಿಕಾಸವನ್ನು ಹೀಗೆ ವ್ಯಾಖ್ಯಾನಿಸಬಹುದು:

"ವ್ಯಕ್ತಿಗಳು ಕಾರ್ಯಶೀಲರಾದಾಗ, ಅವರ ಜ್ಞಾನ, ವಿಶಿಷ್ಟ ಸಾಮರ್ಥ್ಯಗಳು ಹಾಗೂ ಕೌಶಲಗಳು ಉತ್ಕೃಷ್ಟವಾದ ಫಲಶ್ರುತಿಗಳಾಗುವತ್ತ   ಬಳಕೆಯಾಗುವ ಪ್ರಕ್ರಿಯೆಯೇ ವಿಕಾಸ."

"ವ್ಯಕ್ತಿ ಮತ್ತು ಆತನ ಪರಿಸರದೊಡನೆ ನಡೆಯುವ ಅಂತರ್‌ಕ್ರಿಯೆಯ ಫಲಿತವೇ ವಿಕಾಸ."

ವಿಕಾಸವು ಇತರ ಹಲವಾರು ವಿಶಿಷ್ಟ ಪ್ರಕ್ರಿಯೆಗಳೊಡನೆ, ಜೀವನ ಕ್ರಿಯೆಗಳೊಡನೆ ಸಹ–ಸಂಬಂಧವನ್ನು ಹೊಂದಿದೆ.  ಉದಾಹರಣೆಗೆ, ಕಲಿಕೆ, ಪಕ್ವತೆ, ಸಂಶ್ಲೇಷಣೆ ಮತ್ತು ಸಮತೋಲನ.  ಮುಂದಿನ ಚರ್ಚೆಗಳಲ್ಲಿ ಇವುಗಳ ಸಹ–ಸಂಬಂಧವನ್ನು ನೀವು ಇನ್ನಷ್ಟು ಅರ್ಥ ಮಾಡಿಕೊಳ್ಳಲಿದ್ದೀರಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಕೆಳಗೆ ಬಹು ಆಯ್ಕೆಯ ಪ್ರಶ್ನೆಗಳನ್ನು ನೀಡಲಾಗಿದೆ. ನಿಮ್ಮ ಸರಿ ಉತ್ತರದ ಆಯ್ಕೆಯನ್ನು '✓' ಚಿಹ್ನೆಯ ಮೂಲಕ ಸೂಚಿಸಿ:

1. ಬೆಳವಣಿಗೆಯನ್ನು ಸೂಚಿಸುವ ಉದಾಹರಣೆ ಯಾವುದು?

ಅ. 10 ವರ್ಷದ ಹುಡುಗನು 2 ವರ್ಷದ ಮಗುವಿಗಿಂತ ಸ್ಪಷ್ಟವಾಗಿ ಮಾತನಾಡಬಲ್ಲ.

ಬ. 5ನೇ ತರಗತಿಯಲ್ಲಿರುವ ಸ್ಮಿತಾ ಬಹಳ ಸುಂದರವಾಗಿ ಬರೆಯಬಲ್ಲಳು.

ಕ. ರಾಮು ಇಡೀ ತರಗತಿಯಲ್ಲಿ ಅತಿ ಎತ್ತರದ ಹುಡುಗ.

ಡ. ಸರೋಜಿನಿಯು ಅದ್ಭುತವಾಗಿ ಹಾಡಬಲ್ಲಳು.

2. ಯಾವ ಪದಪುಂಜ ಬೆಳವಣಿಗೆಯನ್ನು ಸೂಚಿಸುತ್ತದೆ?

ಅ. ಒಂದು ಅಮೂರ್ತ ಪರಿಕಲ್ಪನೆ

ಬ. ವೀಕ್ಷಿಸಲು, ಅಳೆಯಲು ಸಿಗುವಂತಹುದು

ಕ. ಚಿಂತನಾ ಸಾಮರ್ಥ್ಯದಲ್ಲಿನ ಹೆಚ್ಚಳ

ಡ. ಕಲಿಕೆಯ ಫಲಶ್ರುತಿ

3. ವಿಕಾಸವು ಯಾವ ಅಂಶವನ್ನು ಒಳಗೊಂಡಿರುತ್ತದೆ?

ಅ. ಬೆಳವಣಿಗೆ, ಕಲಿಕೆ, ಪಕ್ವತೆ, ಸಮತೋಲನ ಮತ್ತು ಸಂಶ್ಲೇಷಣೆ

ಬ. ಎತ್ತರ ಮತ್ತು ತೂಕದಲ್ಲಿನ ಹೆಚ್ಚಳ

ಕ. ಕೆಲವು ನಿರ್ದಿಷ್ಟ ಸಾಮರ್ಥ್ಯಗಳಲ್ಲಿನ ಹೆಚ್ಚಳ

ಡ. ವಯೋಮಾನದಿಂದ ಹಿರಿಯ ವ್ಯಕ್ತಿಯಾಗುವುದು

4. ವಿಕಾಸದ ಪರಿಕಲ್ಪನೆಗೆ ಹೊಂದುವುದು ಯಾವುದು?

ಅ. ಬೆಳವಣಿಗೆಗೆ ಸಂಬಂಧಿಸಿದುದಲ್ಲ

ಬ. ಒಂದು ಮೂರ್ತ ಪ್ರಕ್ರಿಯೆ

ಕ. ಒಂದು ಅಮೂರ್ತ ಪ್ರಕ್ರಿಯೆ, ಹಾಗಾಗಿ ಅಳೆಯಲು ಸಾಧ್ಯವಿಲ್ಲ

ಡ. ಪರಿಮಾಣಾತ್ಮಕತೆ ಮತ್ತು ಗುಣಾತ್ಮಕತೆಯಲ್ಲಾಗುವ ಹೆಚ್ಚಳದ ಮೊತ್ತ

5. ಬೆಳವಣಿಗೆಯ ಲಕ್ಷಣ ಯಾವುದು?

ಅ. ತರಬೇತಿಯಿಂದ ನೀಡಲಾಗುವುದಲ್ಲ

ಬ. ವಿಕಾಸದ ಮೂಲ ಕಾರಣ

ಕ. ವ್ಯಕ್ತಿಯೊಬ್ಬನ ನಿಯಂತ್ರಣದಲ್ಲಿರುವುದು

ಡ. ಯೋಜಿಸಿ ಫಲಿತಗೊಳಿಸಬಹುದಾದ ಪ್ರಕ್ರಿಯೆ

6. ವಿಕಾಸವು ಒಳಗೊಂಡಿರುವುದೇನು?

ಅ. ಕೇವಲ ಭೌತಿಕ ವಿಕಾಸ ಮಾತ್ರ.

ಬ. ಶಿಶುಹಂತ, ಬಾಲ್ಯಹಂತ, ವಯಸ್ಕ ಹಂತ ಮತ್ತು ವೃದ್ಧಾಪ್ಯ.

ಕ. ಒಂದು ನಿಗದಿತ ವಯೋಮಾನದಲ್ಲಾಗುವ ಬದಲಾವಣೆಗಳು.

ಡ. ವಯೋಮಾನದಲ್ಲಾಗುವ ಹೆಚ್ಚಳ.

7. ವಿಕಾಸದಲ್ಲಿ ಕಂಡುಬರುವ ವಿವಿಧ ಕ್ಷೇತ್ರಗಳು ಯಾವುವು?

ಅ. ಕೌಶಲಗಳು

ಬ. ವಾಚಾಳಿತನ

ಕ. ಸಂಖ್ಯಾ ಸಾಮರ್ಥ್ಯ

ಡ. ದೈಹಿಕ ವಿಕಾಸ, ಜ್ಞಾನದ ವಿಕಾಸ, ಭಾಷಾ ಬೆಳವಣಿಗೆ, ಸಾಮಾಜಿ, ನೈತಿಕ ಮತ್ತು ಭಾವನಾತ್ಮಕ ವಿಕಾಸ

8. ಆರೋಗ್ಯಕರವಾಗಿ ವಿಕಾಸ ಹೊಂದಿರುವ ವ್ಯಕ್ತಿಯನ್ನು ಯಾವ ಅಂಶದಿಂದ ಗುರುತಿಸಬಹುದು?

ಅ. ಪಕ್ವಗೊಂಡ ವರ್ತನೆಗಳು

ಬ. ಅತಿಕಾಯ

ಕ. ವಾಚಾಳಿತನ

ಡ. ಬಾಲಿಶ ವರ್ತನೆಗಳು

## 1.1.3.2. ವಿಕಾಸ ಮತ್ತು ಕಲಿಕೆ–ಪರಿಕಲ್ಪನೆ

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್‌ಗಳ ಬಳಕೆ, ಅವುಗಳ ತರಹೇವಾರಿ ವಿಧಗಳು, ವಿವಿಧ ಆಪ್‌ಗಳು ಸರ್ವೇಸಾಮಾನ್ಯವಾಗಿಬಿಟ್ಟಿವೆ. ಅಲ್ಲದೆ ದಿನಗಳು ಹೇಗೆ ಕಳೆದುಹೋಗುತ್ತಿವೆ ಎಂಬುದು ಕೂಡ ಗೊತ್ತಾಗದಷ್ಟರ ಮಟ್ಟಿಗೆ ಆಧುನಿಕ ಜೀವನ ತಂತ್ರಜ್ಞಾನದಿಂದ ತುಂಬಿಬಿಟ್ಟಿದೆ. ಅದರಲ್ಲೂ ಕಂಪ್ಯೂಟರ್ ಜ್ಞಾನವಿಲ್ಲದವನು ಒಂದು ರೀತಿಯ ಅನಕ್ಷರಸ್ಥನೇ ಸರಿ. ಇದು ಶಿಕ್ಷಕರನ್ನೇನೂ ಬಿಟ್ಟಿಲ್ಲ. ಶಿಕ್ಷಕರದು ಸತತ/ನಿರಂತರವಾದ ವಿದ್ಯಾರ್ಥಿದೆಸೆಯೇ ಆಗಿರುತ್ತದೆ. ಏಕೆಂದರೆ, ಕಲಿಕೆಗೆ ಕೊನೆಯಿಲ್ಲ, ಹಾಗೆಯೇ ಹೊಸ ಹೊಸ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿದಾಗ ಮೊದಲು ಶಿಕ್ಷಕರು ಅದನ್ನು ತಿಳಿದುಕೊಳ್ಳಬೇಕಾಗುತ್ತದೆ. ಹಾಗಾಗಿ ಒಮ್ಮೆ ಶಿಕ್ಷಕರಾದರೆಂದರೆ, ಅವರು ಯಾವಾಗಲೂ ವಿದ್ಯಾರ್ಥಿಯೇ. ಕಲಿಕೆಯು ವ್ಯಕ್ತಿಯನ್ನು ಮಾರ್ಪಡಿಸುತ್ತದೆ.

**ಅಭ್ಯಾಸ–V**

ಸುಮಾರು 4ರಿಂದ 5 ವರ್ಷದೊಳಗಿನ ಮಕ್ಕಳನ್ನು ಗಮನಿಸಿ, ಅವರಲ್ಲಿ ಕಂಡುಬರುವ ಲಕ್ಷಣಗಳನ್ನು ಈ ಕೆಳಗಿನ ಪಟ್ಟಿಯಂತೆ ವರ್ಗೀಕರಿಸಿ:

| ಶಾಲೆಗೆ ಹೋಗದ ಮಕ್ಕಳು | ಶಾಲೆಗೆ ಸೇರಿರುವ ಮಕ್ಕಳು |
| --- | --- |
| | |

ಶಾಲೆಗೆ ಹೋಗುವ ಮಗು ಬೇಗನೆ ಇತರರನ್ನು ಮಾತನಾಡಿಸುತ್ತದೆ. ತನಗೆ ಬೇಕಾದ ಮಾಹಿತಿ ಸಂಗ್ರಹಿಸುತ್ತದೆ. ಹಲವಾರು ಜನರ ಸ್ನೇಹವನ್ನು ಬೇಗನೆ ಗಳಿಸುತ್ತದೆ. ಶಾಲೆಗೆ ಬಾರದ ಮಕ್ಕಳಿಗಿಂತ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತದೆ. ಇದಕ್ಕೆ ಕಾರಣ, ಶಾಲಾ ಪರಿಸರ, ಅವರ ಅಚ್ಚು–ಮೆಚ್ಚಿನ ಶಿಕ್ಷಕಿ/ಶಿಕ್ಷಕ, ಪ್ರೀತಿಯ ಸಹಪಾಠಿಗಳು–ಇವರೆಲ್ಲರೂ ಮಗುವಿನ ಗುಣ–ನಡತೆಗಳ ಕಲಿಯುವಿಕೆಯನ್ನು ಪ್ರಭಾವಿಸಿರುತ್ತಾರೆ. ಶಾಲೆಗೆ ಹೋಗುವುದರಿಂದ ಮಗುವು ಸಾಮಾಜಿಕವಾಗಿ ವಿಕಾಸ ಹೊಂದುತ್ತದೆ.

ವಿಕಾಸ ಒಂದು ಪ್ರಕ್ರಿಯೆ ಎಂಬುದು ನಮಗೆ ತಿಳಿದಿದೆ. ಕಲಿಕೆಯೂ ಒಂದು ಪ್ರಕ್ರಿಯೆಯೇ. ಕಲಿಕೆಯ ಸಮಷ್ಟಿಯಿಂದಲೇ ವ್ಯಕ್ತಿ ಬೆಳೆಯುತ್ತಿರುತ್ತಾನೆ. ಈ ಕ್ಷಣದಲ್ಲಿ ನಾವೇನಾಗಿರುವೆವೋ ಅದಕ್ಕೆಲ್ಲಾ ನಮ್ಮ ಕಲಿಕೆಯೇ ಕಾರಣ. ಕಲಿಕೆಯು ವ್ಯಕ್ತಿಯ ವರ್ತನೆಗಳನ್ನು ಮಾರ್ಪಡಿಸುತ್ತದೆ. ಮಾನವನಿಗೆ ಕಲಿಕೆ ಮೂಲಭೂತ ಅಗತ್ಯ.

ಮನೋವಿಜ್ಞಾನದ ಪ್ರಕಾರ "ಕಲಿಕೆ" ಎಂಬುದು ಒಂದು ಸಂರಚನೆ. ಯಾವುದೇ ಒಂದು ಕಲ್ಪನೆ, ಚಿಂತನೆ ಅಥವಾ ಪರಿಕಲ್ಪನೆಯನ್ನು ನೇರವಾಗಿ ವೀಕ್ಷಿಸಲಾಗದೆ ಕೇವಲ ಅದರ ಪರಿಣಾಮಗಳಿಂದ ಅರಿಯಬಹುದಾದುದನ್ನು ಸಂರಚನೆ ಎನ್ನುವರು. ಉದಾಹರಣೆಗೆ, ಎಲೆಕ್ಟ್ರಾನುಗಳು, ಶಕ್ತಿ, ಜೀನುಗಳು, ಮತ್ತು ಆಯಾನುಗಳು ಇತ್ಯಾದಿ. ಕಲಿಕೆ ಜನನ ಪೂರ್ವದಲ್ಲಿಯೇ ಪ್ರಾರಂಭವಾಗುತ್ತದೆ ಎಂದು ಹೇಳಲಾಗುತ್ತದೆ. (ಮಹಾಭಾರತದಲ್ಲಿ ಅಭಿಮನ್ಯುವಿನ ಪ್ರಸಂಗವನ್ನು ನೆನಪಿಸಿಕೊಳ್ಳಿ). ಕಲಿಕೆಯನ್ನು ಕುರಿತಂತೆ ಕೆಳಗಿನ ಅಂಶಗಳನ್ನು ಗಮನಿಸಿ.

- ವ್ಯಕ್ತಿಯೊಬ್ಬನು ತನ್ನ ಅನುಭವಗಳಿಂದಲೇ ಸಾಕಷ್ಟು ಕಲಿಯುತ್ತಾನೆ. ಆದ್ದರಿಂದ ಅನುಭವಗಳೇ ಕಲಿಕೆಯ ಸಂಪನ್ಮೂಲ ಮತ್ತು ಪಂಚೇಂದ್ರಿಯಗಳು ಜ್ಞಾನ ಗಳಿಕೆಯ ಮಹಾದ್ವಾರಗಳು.
- ಅನುಭವಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿರಬಹುದು. ಆದರೂ ಅವು ವ್ಯಕ್ತಿಯಲ್ಲಿ ಬದಲಾವಣೆಗಳನ್ನು ತಂದೇ ತರುತ್ತವೆ.
- ಮೆಲ್ವಿನ್. ಹೆಚ್. ಮಾರ್ಕ್ಸ್ ಎಂಬಾತ ಹೇಳುವಂತೆ, "ಈಗಾಗಲೇ ಸ್ಥಾಯಿಯಾಗಿರುವ ವರ್ತನೆಯಲ್ಲಿ (ಸಾಮಾನ್ಯವಾಗಿ ಅಭ್ಯಾಸಬಲ ಎನ್ನುವರು) ಸಾಪೇಕ್ಷವಾಗಿ ತರಬಲ್ಲ ವರ್ತನಾ ಬದಲಾವಣೆಯೇ ಕಲಿಕೆ ಎಂದಾಗುತ್ತದೆ".
- ವ್ಯಕ್ತಿಯ ಜೀವನದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ವಿವಿಧ ರೀತಿಯ ಸ್ವಭಾವ, ಅಭ್ಯಾಸ, ಹವ್ಯಾಸ, ಜ್ಞಾನ ಮತ್ತು ಧೋರಣೆಗಳನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆಯೇ ಕಲಿಕೆ.

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ನೀವು ಗಮನಿಸಿದ್ದೇ ಆದರೆ, ಜೀವನದಲ್ಲಿ ಅನುಭವಗಳು ನಮ್ಮಲ್ಲಿನ ಏನೆಲ್ಲಾ ಕಲಿಕೆಗೆ ಕಾರಣವಾಗುತ್ತವೆ ಎಂಬುದನ್ನು ಅರ್ಥವಾಗುತ್ತದೆ. ಸರಳವಾಗಿ ಹೇಳಬೇಕೆಂದರೆ, ಬೆಂಕಿ–ಸುಡುತ್ತದೆ; ನೀರು–ಹರಿಯುತ್ತದೆ; ದ್ರವ ಪದಾರ್ಥ–ಒದ್ದೆ ಮಾಡುತ್ತದೆ ಎಂದು ನಾವು ತಿಳಿದುಕೊಂಡದ್ದೆಲ್ಲವೂ ಕಲಿಕೆಯೇ. ಮನೆಯಲ್ಲಿ ಅಡುಗೆಯ ಅನಿಲದ ವಾಸನೆ ಬಂದ ಕೂಡಲೆ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಲು ನೀವು ಧಾವಿಸುವಿರಿ. ಅಲ್ಲವೇ? ಹಾಗೆಯೇ ಅಡುಗೆ ಅನಿಲದ ಬಳಕೆಯ ಇತಿಹಾಸವನ್ನು ಗಮನಿಸಿ. ಇದರಲ್ಲಿ ವ್ಯಕ್ತಿಯ ಕಲಿಕೆ–ಪ್ರಗತಿ ಮತ್ತು ವಿಕಾಸ ಇವುಗಳನ್ನು ಗಮನಿಸಿ.

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವೈವಿಧ್ಯಮಯವಾದ ಕಲಿಕಾ ಸನ್ನಿವೇಶಗಳನ್ನು ನೀಡಲಾಗುತ್ತದೆ. ವೈವಿಧ್ಯಮಯವಾದ ಸಾಮಾಜಿಕ ಕೌಶಲಗಳ ಕಲಿಕೆಗೆ ಅವಕಾಶ ಕೊಡಲಾಗುತ್ತದೆ. ಈ ಎಲ್ಲಾ ರೀತಿಯ ಕಲಿಕೆಗಳು ವಿದ್ಯಾರ್ಥಿಯ ವ್ಯಕ್ತಿತ್ವದಲ್ಲಿ ಮಾರ್ಪಾಡನ್ನು ತರುತ್ತವೆ. ಆದ್ದರಿಂದ ಇದನ್ನು ಸರ್ವಾಂಗೀಣ ಬೆಳವಣಿಗೆ ಅಥವಾ ವಿಕಾಸ ಎಂದು ಕರೆಯಲಾಗಿದೆ. ಹಾಗಾಗಿ ಕಲಿಕೆ ಮತ್ತು ವಿಕಾಸಗಳಲ್ಲಿ ಪರಸ್ಪರ ಕೊಡು–ಕೊಳ್ಳುವಿಕೆಯ ಸಂಬಂಧವನ್ನು ಕಾಣುತ್ತೇವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೆಳಗೆ ಅಸಂಪೂರ್ಣಹೇಳಿಕೆಗಳನ್ನು ನೀಡಲಾಗಿದೆ. ಅವುಗಳನ್ನು ಪೂರ್ಣಗೊಳಿಸುವ ಪದಗಳನ್ನು '✓' ಚಿಹ್ನೆಯ ಮೂಲಕ ಸೂಚಿಸಿ:

1. ಈ ದಿನ ನಾವು ಏನೆಲ್ಲಾ ಆಗಿದ್ದೇವೆಯೋ ಅದಕ್ಕೆ ಕಾರಣ ____________

   ಅ. ನಮ್ಮ ತಂದೆತಾಯಿಯರು

   ಬ. ನಮ್ಮ ಶಿಕ್ಷಕರು

   ಕ. ಪರಿಸರ

   ಡ. ನಮ್ಮ ಕಲಿಕೆ

2. ಕಲಿಕೆ ಎಂದರೆ__________

ಅ. ಜ್ಞಾನ ಸಂಪಾದನೆ

ಬ. ವರ್ತನಾ ಬದಲಾವಣೆ

ಕ. ಅಪೇಕ್ಷಿತವಾದ ಸಾಕಷ್ಟು ಶಾಶ್ವತವಾದ ವರ್ತನಾ ಬದಲಾವಣೆ

ಡ. ಓದುವುದು ಮತ್ತು ಬರೆಯುವುದು

3. ನಮ್ಮ ಕಲಿಕೆಗೆ ಬಹಳಷ್ಟು ಕಾರಣವಾಗಿರುವ ಅಂಶ__________

ಅ. ಪುಸ್ತಕಗಳನ್ನು ಓದುವುದು

ಬ. ದೊಡ್ಡವರಿಗೆ ವಿಧೇಯರಾಗಿರುವುದು

ಕ. ಪೋಷಕರು ಮತ್ತು ಶಿಕ್ಷಕರ ಪ್ರಭಾವ

ಡ. ನಮ್ಮ ಅನುಭವಗಳು

4. ಕಲಿಕೆ ಎಂಬುದು __________

ಅ. ತರಗತಿಯಲ್ಲಿ ಜರುಗುವ ಪ್ರಕ್ರಿಯೆ

ಬ. ಹುಟ್ಟಿನಿಂದ ಸಾಯುವವರೆಗೆ ವ್ಯಕ್ತಿಯೊಬ್ಬನಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆ

ಕ. ವ್ಯಕ್ತಿಯೊಬ್ಬನ ಒಂದು ವಯೋಮಾನದಲ್ಲಿ ತಾನೇ ತಾನಾಗಿ ಸ್ಥಗಿತಗೊಳ್ಳುವಂತಹುದು

ಡ. ವೀಕ್ಷಣೆಗೆ ಸಿಗದ ಪರೋಕ್ಷ ಪ್ರಕ್ರಿಯೆ.

5. ಶಾಲೆಗೆ ಹೋಗುವ ಮಗುವು ಶಾಲೆಗೆ ಹೋಗದ ಮಗುವಿಗಿಂತ ಹೆಚ್ಚಾಗಿ ಕಲಿಯುವ ಅಂಶ__________

ಅ. ಸಾಮಾಜಿಕ ಶಿಸ್ತು

ಬ. ಬುದ್ಧಿವಂತಿಕೆ

ಕ. ವಾಚಾಳಿತನ

ಡ. ವಿಧೇಯತೆ.

## 1.1.3.3. ವಿಕಾಸ ಮತ್ತು ಪಕ್ವತೆ–ಪರಿಕಲ್ಪನೆ

ಪಕ್ವತೆ ಅಥವಾ ಪ್ರೌಢತೆ ಎಂಬ ಪದವನ್ನು ಕೆಲವೊಮ್ಮೆ ದೈಹಿಕ ಅಥವಾ ಶರೀರಕ್ಕೆ ಸಂಬಂಧಿಸಿದಂತೆ, ಮಾತುಗಳಲ್ಲಿ ಬಳಸಲಾಗುತ್ತದೆ. ಆದರೆ, ಪಕ್ವತೆ ಎಂಬ ಪರಿಕಲ್ಪನೆ ಅದಕ್ಕಿಂತಲೂ ಹೆಚ್ಚಿನದು. ಪಕ್ವಗೊಂಡ ವ್ಯಕ್ತಿಯ ವ್ಯಕ್ತಿತ್ವವು ಸಮತೋಲನದಿಂದ ಕೂಡಿದ್ದು, ವಿವೇಕ, ವಿವೇಚನೆ, ಸಮಸ್ಯಾಪರಿಹಾರಸಾಮರ್ಥ್ಯ ಮತ್ತು ನಿಖರವಾದ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಬಿಂಬಿಸುತ್ತದೆ. ಜೀವನ ಕೌಶಲಗಳು ಮತ್ತು ಉತ್ತಮವಾದ ಭಾವನಾತ್ಮಕ ಬುದ್ಧಿಶಕ್ತಿ ಇವೂ ಕೂಡ ಪಕ್ವತೆಯುಳ್ಳ ವ್ಯಕ್ತಿತ್ವದ ಭಾಗವೇ ಆಗಿರುತ್ತವೆ. ಎಷ್ಟೋ ಸಾರಿ ಮೇಲೆ ಹೇಳಿದ ಎಲ್ಲಾ ಲಕ್ಷಣಗಳು ವಯಸ್ಸಿಗೆ ಮೀರಿ ಕಾಣಿಸಿಕೊಳ್ಳುತ್ತವೆ.

ಪಕ್ವತೆ ಎಂಬುದು ಸಂಕೀರ್ಣವಾದ ಪ್ರಕ್ರಿಯೆ. ಆರ್ನಾಲ್ಡ್ ಗೆಸೆಲ್ ಎಂಬಾತ ಪಕ್ವತೆಯನ್ನು ವಿಕಾಸವೆಂದೇ ಕರೆದಿದ್ದಾನೆ. ನಾವು ಹೊರನೋಟಕ್ಕೆ ಭೌತಿಕವಾಗಿ ಕಾಣುವ ಲಕ್ಷಣಗಳು ಜೈವಿಕವಾಗಿ ಮೊದಲೇ ನಿರ್ಧಾರಿತವಾದ ಅಂಶಗಳಾಗಿರುತ್ತವೆ. ಅಂತಹ ಕಾರಕಗಳನ್ನು ಜೀವಕೋಶಗಳಲ್ಲಿನ 'ಜೀನ್ಸ್'ಗಳೆಂದು ಕರೆಯುತ್ತಾರೆ. ಈ ಜೀನ್ಸ್‌ಗಳಿಂದ ವ್ಯಕ್ತಿಯ ಬೆಳವಣಿಗೆಯು ನಿರ್ಧಾರವಾಗುತ್ತದೆ. ಜೀನ್ಸ್‌ಗಳು ಅನುವಂಶೀಯತೆಯ ಮೂಲ ಘಟಕಗಳು. ಗೆಸೆಲ್ ಎಂಬುವನ ಪ್ರಕಾರ, ವ್ಯಕ್ತಿಯ ಮಾನಸಿಕ/ಸಂಜ್ಞಾನಾತ್ಮಕ ಮತ್ತು ದೈಹಿಕ ವಿಕಾಸಗಳಲ್ಲಿ

ಆಂತರಿಕ ಕ್ರಮವಿದ್ದು, ಅವು ಕಾಲಾನುಕ್ರಮವಾಗಿ ವರ್ತನಾ ಬದಲಾವಣೆಗಳಲ್ಲಿ ಗೋಚರಿಸುತ್ತವೆ. ಇದು ಕಂಪ್ಯೂಟರ್‌ನ ಪ್ರೋಗ್ರಾಂನಂತೆ ಎಂದು ಹೇಳಬಹುದು. ಉದಾಹರಣೆಗೆ, ನಮ್ಮ ದೇಹದ ನರವ್ಯೂಹ, ಅಸ್ಥಿಪಂಜರ ರಚನೆ, ಸ್ನಾಯಿಕ ರಚನೆ ಮತ್ತು ಅವುಗಳ ಕಾರ್ಯಗಳು ಹಾಗೂ ವಿವಿಧ ಜೈವಿಕ ಪ್ರಕ್ರಿಯೆಗಳು ತಮ್ಮಂತೆ ತಾವೇ ಆದರೆ, ಕ್ರಮಬದ್ಧವಾಗಿ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಬೌದ್ಧಿಕ ಮತ್ತು ದೈಹಿಕ ವಿಕಾಸವು ವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಆರ್ನಾಲ್ಡ್ ಗೆಸೆಲ್ ಹೇಳುವ ಪ್ರಕಾರ ಇಂತಹ ಬದಲಾವಣೆಗಳನ್ನು ನಾವು ಊಹಿಸಬಹುದು. ಉದಾಹರಣೆಗೆ, 2 ವರ್ಷದ ಮಗುವಿಗೆ ಕಾರನ್ನು ಬಿಡಲು ಬರುವುದಿಲ್ಲ, ಆದರೆ, 20 ವರ್ಷದ ಯುವಕ ಸಲೀಸಾಗಿ ಕಾರನ್ನು ಚಾಲನೆ ಮಾಡಬಹುದು. ಹಾಗಾಗಿ ಪಕ್ವತೆಯ ಪರಿಕಲ್ಪನೆಗೆ ಶಾರೀರಿಕ ಅಂಶವನ್ನು ಮೀರಿದ ಆಯಾಮವಿದೆ ಎಂಬುದನ್ನು ಗಮನಿಸಬೇಕು. ಕ್ರಾಗ್‌ಮನ್ ಎಂಬಾತ ಬಹಳ ಸರಳವಾಗಿ ಪಕ್ವತೆಯೆಂದರೆ, ವಯಸ್ಸಾಗುವುದು ಎಂದು ಹೇಳಿಬಿಟ್ಟಿದ್ದಾನೆ! ಆದರೆ, ಬಾಲ್ಡ್‌ವಿನ್ನನು ಸಾಮರ್ಥ್ಯದಲ್ಲಿ ಮತ್ತು ಹೊಂದಾಣಿಕೆ ಮಾಡಿಕೊಳ್ಳುವಲ್ಲಿನ ಸಾಮರ್ಥ್ಯವೇ ಪಕ್ವತೆ ಎಂದು ವಿವರಿಸಿದ್ದಾನೆ. ಪಕ್ವತೆಯು ಬಹುಪಾಲು ಅನುವಂಶೀಯ ಗುಣಗಳನ್ನು ಅವಲಂಬಿಸಿದರೂ ಪರಿಸರವೂ ಕೂಡ ಗಂಭೀರವಾಗಿಯೇ ಅದನ್ನು ಪ್ರಭಾವಿಸುತ್ತದೆ. ಅನುವಂಶೀಯ ಗುಣಗಳು ವಯೋಮಾನಕ್ಕೆ ತಕ್ಕಂತೆಯೂ ಅಭಿವ್ಯಕ್ತಿಗೊಳ್ಳುತ್ತವೆ. ಪಕ್ವತೆ ಎಂಬುದು ಸ್ವಾಭಾವಿಕವಾದ ಪ್ರಕ್ರಿಯೆ ಎಂಬುದು ನಮಗೆ ತಿಳಿದಿರಬೇಕು.

ಬಿಗ್ಗೀ ಮತ್ತು ಹಂಟ್ (1968) ರವರ ಪ್ರಕಾರ, ಪಕ್ವತೆಯೊಂದು ವಿಕಾಸಾತ್ಮಕ ಪ್ರಕ್ರಿಯೆಯಾಗಿದ್ದು, ವ್ಯಕ್ತಿಯೊಬ್ಬನಲ್ಲಿ ಕಾಲ ಕಾಲಕ್ಕೆ ತಕ್ಕಂತೆ ಅದು ಅಭಿವ್ಯಕ್ತಿಗೊಳ್ಳುವುದಾದರೂ ಅದರ 'ನೀಲ ನಕ್ಷೆಯು' ವ್ಯಕ್ತಿಯ ಗರ್ಭಾಂಕುರ ಸಮಯದಲ್ಲೇ ಕೋಶ ಕೋಶಗಳಲ್ಲಿ ಸೇರಿಕೊಂಡಿರುತ್ತದೆ. ಬೋಜ಼್ ಎಂಬ ಮನೋವಿಜ್ಞಾನಿ ಪಕ್ವತೆಯನ್ನು ಈ ರೀತಿ ಹೇಳುತ್ತಾನೆ: "ಪಕ್ವತೆ ಎಂಬುದು ಒಂದು ಪ್ರಕ್ರಿಯೆಯಾಗಿದ್ದು, ಕಲಿಕೆಯಲ್ಲಿ ಅದರಲ್ಲೂ ಸಂಕೀರ್ಣ ಮತ್ತು ಕಠಿಣವಾದ ಕಲಿಕೆಯಲ್ಲಿ ಮೂಲಭೂತ ಅವಶ್ಯಕತೆಯಾಗಿರುತ್ತದೆ". ಕಲಿಕಾ ಸಾಮರ್ಥ್ಯಕ್ಕೂ ಮತ್ತು ಮೆದುಳಿನ ಸೆರೆಬ್ರಲ್ ಕಾರ್ಟೆಕ್ಸ್‌ನ(ಮಿದುಳಿನ ಮುಂಭಾಗದ ಹೊರಪದರ) ಗಾತ್ರಕ್ಕೂ ನೇರವಾದ ಸಂಬಂಧವಿದೆಯೆಂದು ಪ್ರಯೋಗಗಳಿಂದ ರುಜುವಾತುಗೊಂಡಿದೆ. ಈ ಎಲ್ಲಾ ವಿಚಾರಗಳಿಂದ ಪಕ್ವತೆಗೂ ಮತ್ತು ವಿಕಾಸಕ್ಕೂ ನೇರ ಮತ್ತು ಧನಾತ್ಮಕ ಸಂಬಂಧವಿದೆಯೆಂದು ನಾವು ತಿಳಿದುಕೊಳ್ಳಬಹುದಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಪದಗಳನ್ನು ಗುರುತಿಸಿ.

1. ಪಕ್ವತೆಯೆಂದರೆ____________

   ಅ. ದೈಹಿಕ ವಿಕಾಸ

   ಬ. ಶಾರೀರಿಕ ವಿಕಾಸ

   ಕ. ದೈಹಿಕ ಮತ್ತು ಶಾರೀರಿಕ ವಿಕಾಸವೆರಡೂ

   ಡ. ದೈಹಿಕ ಮತ್ತು ಶಾರೀರಿಕ ವಿಕಾಸಗಳೆರಡನ್ನೂ ಮೀರಿದ್ದು

2. ಪಕ್ವಗೊಂಡ ವ್ಯಕ್ತಿ ____________

   ಅ. ವಯಸ್ಸಿನಲ್ಲಿ ಹಿರಿಯನಾಗಿರುತ್ತಾನೆ

   ಬ. ಅನುಭವಿಯಾಗಿರುತ್ತಾನೆ

   ಕ. ಅಗಾಧವಾದ ಜ್ಞಾನವನ್ನು ಹೊಂದಿರುತ್ತಾನೆ

   ಡ. ಸಮತೋಲನವಾದ ಮನಸ್ಸು ಮತ್ತು ಸಮಸ್ಯಾ ಪರಿಹಾರ ಸಾಮರ್ಥ್ಯ ಹೊಂದಿರುತ್ತಾನೆ

3. ಪಕ್ವ ವ್ಯಕ್ತಿತ್ವವೊಂದರ ಭಾಗ ____________

ಅ. ಭಾಷಾಡಂಬರ

ಬ. ಅನುಭೂತಿ

ಕ. ಜೀವನ ಕೌಶಲಗಳು

ಡ. ಸುಂದರ ರೂಪ

4. ಕ್ರಾಗ್‌ಮನ್‌ನ ಪ್ರಕಾರ ಪಕ್ವತೆಯೆಂದರೆ____________

ಅ. ವಯಸ್ಸಾಗುವುದು

ಬ. ಕಲಿಕೆ

ಕ. ವಿಕಾಸ

ಡ. ಬೆಳವಣಿಗೆ

5. ಬಾಲ್ಡ್‌ವಿನ್ನನ ಪ್ರಕಾರ ಪಕ್ವತೆಯೆಂದರೆ ____________

ಅ. ದೈಹಿಕ ಬೆಳವಣಿಗೆ

ಬ. ಮೌಲ್ಯಗಳ ವಿಕಾಸ

ಕ. ಸಾಮರ್ಥ್ಯ ಮತ್ತು ಹೊಂದಾಣಿಕೆಯಲ್ಲಿನ ಹೆಚ್ಚಳ

ಡ. ಕಿಶೋರಹಂತದಿಂದ ವಯಸ್ಕ ಹಂತಕ್ಕೆ ಪರಿವರ್ತನೆಯಾಗುವುದು

6. ವಿಕಾಸವು ಒಂದು ಪ್ರಕ್ರಿಯೆಯಾಗಿದ್ದು, ಅದು ____________

ಅ. ಹೆಚ್ಚಾಗಿ ಅನುವಂಶೀಯತೆಯನ್ನು ಮತ್ತು ಭಾಗಶಃ ಪರಿಸರವನ್ನು ಅವಲಂಬಿಸಿರುತ್ತದೆ

ಬ. ಹೆಚ್ಚಾಗಿ ಪರಿಸರವನ್ನು ಮತ್ತು ಭಾಗಶಃ ಅನುವಂಶೀಯತೆಯನ್ನು ಅವಲಂಬಿಸಿರುತ್ತದೆ

ಕ. ಅನುವಂಶೀಯತೆ ಮತ್ತು ಪರಿಸರವನ್ನು ಸಮ ಸಮವಾಗಿ ಅವಲಂಬಿಸಿರುತ್ತದೆ

ಡ. ಪರಿಸರವನ್ನು ಮಾತ್ರ ಅವಲಂಬಿಸಿರುತ್ತದೆ.

## 1.1.3.4. ವಿಕಾಸ ಮತ್ತು ಸಂಶ್ಲೇಷಣೆ–ಪರಿಕಲ್ಪನೆ

ಜೀವವಿಜ್ಞಾನದ ಪ್ರಕಾರ, ಮಾನವನು ನರಮಂಡಲ, ಜೀರ್ಣಾಂಗವ್ಯೂಹ, ಶ್ವಾಸಕಾಂಗವ್ಯೂಹ, ವಿಸರ್ಜನಾಂಗ ಇತ್ಯಾದಿ ಹಲವಾರು ವ್ಯವಸ್ಥಿತ ಕಾರ್ಯವ್ಯೂಹಗಳಿಂದ ರೂಪುಗೊಂಡಿದ್ದಾನೆ. ಇವುಗಳಲ್ಲಿ ಪ್ರತಿಯೊಂದು ವ್ಯವಸ್ಥೆಯೂ ವಿಶಿಷ್ಟವಾಗಿದ್ದು ಒಂದರ ಕೆಲಸವನ್ನು ಮತ್ತೊಂದು ಮಾಡಲಾರದು. ಏಕೆಂದರೆ, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ರಚನೆ ಮತ್ತು ಕಾರ್ಯವನ್ನು ಹೊಂದಿರುತ್ತದೆ. ಆದರೆ, ಎಲ್ಲಾ ವ್ಯವಸ್ಥೆಗಳು ಕ್ರೋಢೀಕರಣಗೊಂಡಾಗ ಮಾತ್ರ ಮಾನವ ಸಂಪೂರ್ಣವಾಗಿ ಒಬ್ಬ ಜೀವಿಯಾಗುತ್ತಾನೆ.

ವಿಕಾಸವು ಹಲವಾರು ಅಂತರ್ ಸಂಬಂಧವುಳ್ಳ ಅಸಂಖ್ಯಾತ ಪ್ರಕ್ರಿಯೆಗಳ ಬಂಧಗಳಿಂದ ಉಂಟಾಗುವ ಒಂದು ಕ್ರಿಯೆ. ಇದು ಪರಸ್ಪರ ವಲಯಗಳ ನಡುವೆ ಅಂದರೆ, ಜ್ಞಾನ ವಲಯ, ಭಾವ ವಲಯ ಮತ್ತು ಮನೋಜನ್ಯಕಾಯ ವಲಯಗಳ ನಡುವೆ ನಡೆಯುವ ಅಂತರ್‌ಕ್ರಿಯೆ. ಪ್ರತಿಯೊಂದು ವಲಯದ ಆಂತರ್ಯದಲ್ಲಿ ನಡೆಯುವ ಅಂತರ್‌ಕ್ರಿಯೆಗಳಿಂದಲೂ ವಿಕಾಸ ಸಾಧ್ಯ. ಹುಟ್ಟಿನಿಂದ ಸಾವಿನವರೆಗೆ ಮನುಷ್ಯನು ಹಲವಾರು ವಿಚಾರಗಳನ್ನು ಕಲಿಯುತ್ತಾನೆ. ಈ ಕಲಿಕೆ ನೋಡುವುದರಿಂದ, ಕೇಳುವುದರಿಂದ ಅಥವಾ ತಾನೇ ಸ್ವತಃ ಕೆಲವು ಕಾರ್ಯಗಳನ್ನು ಮಾಡುವುದರಿಂದಲೂ ಆಗಿರಬಹುದು. "ಮಾಡಿ ಕಲಿ" ಎಂಬುದು ಜಾನ್‌ಡ್ಯೂಯಿಯ

ಸೂಕ್ತಿ. ಕಲಿಕೆಯು ಜೀವನ ಜ್ಞಾನ ಸಂಪಾದಿಸಲು, ತನ್ನಲ್ಲೇ ಕೆಲವು ಮೌಲ್ಯ–ಸಂಕೀರ್ಣಗಳನ್ನು ಬೆಳೆಸಿಕೊಳ್ಳಲು, ಆದ್ಯತೆಯಿಂದ ಕೆಲವು ಮೌಲ್ಯಗಳಿಗೆ ಅನುಗುಣವಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಹಾಗೂ ತನ್ನ ಜೀವನವನ್ನು ನಿರ್ವಹಿಸಿಕೊಂಡು ಸ್ವಾಭಿಮಾನಿಯಾಗಿ ಬದುಕಲು ಕಲಿಸುತ್ತದೆ. ವ್ಯಕ್ತಿಯು ಈ ಎಲ್ಲದರ ಫಲವಾಗಿ ರೂಪುಗೊಳ್ಳುತ್ತಾನೆ. ಪ್ರತಿ ವಲಯದ ಸಾಮರ್ಥ್ಯಗಳು ಬೇರೆ ಬೇರೆಯಾಗಿದ್ದರೂ ಅವೆಲ್ಲವುಗಳು ಮೇಳೈಸಿಕೊಂಡು ಕಾರ್ಯಗತವಾಗುತ್ತವೆ. ಆದ್ದರಿಂದ ವಿಕಾಸವು ಒಂದು ಸಂಶ್ಲೇಷಣೆಯೆಂದು ಹೇಳಬಹುದು.

ಅನುಭವ, ಪಕ್ವತೆ, ಸಮತೋಲನ ಮತ್ತು ಸಾಮಾಜಿಕ ಪರಿವರ್ತನೆ ಇವುಗಳ ಸಂಚಿತ ಪ್ರಕ್ರಿಯೆಯೇ ಸಂಶ್ಲೇಷಣೆ. ಸಾಮಾಜೀಕರಣದಿಂದಲೇ ವ್ಯಕ್ತಿತ್ವ ರೂಪುಗೊಳ್ಳುವುದು. ಪೋಷಕರು, ಹಿರಿಯರು, ನೆರೆಹೊರೆ, ಶಾಲೆ ಮತ್ತು ಸಹಪಾಠಿಗಳು ಸಮಾಜೀಕರಣದ ಸಾಧನಗಳಾಗಿರುತ್ತಾರೆ, ಎನ್ನುತ್ತಾನೆ ಪಿಯಾಜೆ.

ಭಾಷಾ ಬೆಳವಣಿಗೆ, ಬೌದ್ಧಿಕ ವಿಕಾಸ, ಸಾಮಾಜಿಕ ವಿಕಾಸ, ನೈತಿಕ ವಿಕಾಸ, ಭಾವನಾತ್ಮಕ ವಿಕಾಸ, ಭೌತಿಕ ವಿಕಾಸ ಹೀಗೆ ಇವೆಲ್ಲದರ ಸಮಷ್ಟಿಯನ್ನು, ವ್ಯಕ್ತಿತ್ವ ವಿಕಸನವೆಂದು ಕರೆಯಲಾಗಿದೆ. ವ್ಯಕ್ತಿಯು ವಯಸ್ಸಿನಲ್ಲಿ ದೊಡ್ಡವನಾದಂತೆಲ್ಲಾ ಮೇಲೆ ಹೇಳಿದ ಕ್ಷೇತ್ರಗಳಲ್ಲಿಯೂ ವಿಕಾಸವಾಗುತ್ತದೆ. ಇದರ ಪರಿಣಾಮವಾಗಿ ವ್ಯಕ್ತಿತ್ವದಲ್ಲಿ ಬದಲಾವಣೆಗಳು ಕಂಡುಬರುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4**

ಈ ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

1. ವಿಕಾಸವು ಹಲವಾರು ಅಂತರ್ ಸಂಬಂಧವುಳ್ಳ ಕೆಲವೇ ಪ್ರಕ್ರಿಯೆಗಳ ಬಂಧಗಳಿಂದ ಉಂಟಾಗುವ ಒಂದು ಕ್ರಿಯೆ.
2. ಪ್ರತಿಯೊಂದು ವಲಯದ ಆಂತರ್ಯದಲ್ಲಿ ನಡೆಯುವ ಅಂತರ್‌ಕ್ರಿಯೆಗಳಿಂದ ವಿಕಾಸ ಸಾಧ್ಯ.
3. ವಿಕಾಸವು ಅನುವಂಶೀಯತೆ ಮತ್ತು ಪರಿಸರಗಳ ಮೊತ್ತವಾಗಿದೆ.
4. ವ್ಯಕ್ತಿತ್ವವಿಕಾಸ ಹಲವಾರು ಅಂಶಗಳನ್ನು ಆಧರಿಸಿದೆ.

## 1.1.4. ಸಾರಾಂಶಿಸೋಣ

- 'ಬೆಳೆಯುವಿಕೆ' ಒಂದು ಪ್ರಕ್ರಿಯೆ, ಅದು ವಿಕಾಸವನ್ನೂ ಸೂಚಿಸುತ್ತದೆ. ಆದರೆ, ಬೆಳವಣಿಗೆ ಮತ್ತು ವಿಕಾಸ –ಈ ಪದಗಳು ಸಮಾನಾರ್ಥಕವಲ್ಲ.
- ಬೆಳವಣಿಗೆಯನ್ನು ಪರಿಮಾಣೀಕರಿಸಬಹುದು, ಅದು ಒಂದು ಕಾಲಮಾನದ ನಂತರ ಸ್ಥಗಿತಗೊಳ್ಳುವ ಕ್ರಿಯೆಯಾಗಿದೆ. ಆದರೆ, ವಿಕಾಸವು ಸ್ವಭಾವದಲ್ಲಿ ಗುಣಾತ್ಮಕವಾಗಿದ್ದು, ನಿರಂತರವಾಗಿ ಜೀವನಪರ್ಯಂತ ಘಟಿಸುವ ಪ್ರಕ್ರಿಯೆಯಾಗಿರುತ್ತದೆ.
- ಭೌತಿಕ ಹೆಚ್ಚಳವನ್ನು ಬೆಳವಣಿಗೆ ಎಂದರೆ, ವಿಕಾಸ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದುದು. ಉದಾಹರಣೆಗೆ, ಬೌದ್ಧಿಕ, ಸಾಮಾಜಿಕ, ನೈತಿಕ, ಭಾವನಾತ್ಮಕ ಮತ್ತು ಮೌಲ್ಯಗಳ ವಿಕಾಸ.
- ಬೆಳವಣಿಗೆಯನ್ನು ತರಬೇತಿಯ ಮೂಲಕ ಪಡೆಯಲಾಗುವುದಿಲ್ಲ, ಆದರೆ, ತರಬೇತಿಯ ಮೂಲಕ ವ್ಯಕ್ತಿಯೊಬ್ಬನು ವಿವಿಧ ಕ್ಷೇತ್ರಗಳಲ್ಲಿ ವಿಕಾಸ ಹೊಂದಬಹುದು.
- ಬೆಳವಣಿಗೆಯು ವಿಕಾಸವಿಲ್ಲದೆಯೂ ಆಗಬಹುದು. ಆದರೆ, ವಿಕಾಸ ಹೊಂದಲು ಬೆಳವಣಿಗೆಯು ಅವಶ್ಯಕ.
- ವಿಕಾಸ ಮತ್ತು ಕಲಿಕೆಯು ಪರಸ್ಪರ ಅಂತರ್‌ಸಂಬಂಧವನ್ನು ಹೊಂದಿವೆ ಮತ್ತು ಇವೆರಡರ ನಡುವೆ ಕೊಡು–ಕೊಳ್ಳುವಿಕೆಯ ಬಂಧವಿದೆ.

- ಪಕ್ವತೆಯು ವಿಕಾಸ ಪ್ರಕ್ರಿಯೆಯಲ್ಲಿ ಹೆಚ್ಚಳವನ್ನು ತರುವುದು.
- ವಿಕಾಸದಲ್ಲಿ ಹಲವಾರು ವಿಕಾಸಾತ್ಮಕ ಕಾರ್ಯಗಳು ಸಂಶ್ಲೇಷಣೆಗೊಳ್ಳುತ್ತವೆ.
- ಕಲಿಕಾ ಅನುಭವಗಳು, ಪಕ್ವತೆ, ಸಂಶ್ಲೇಷಣೆ, ಸಮತೋಲನ ಮತ್ತು ಸಾಮಾಜಿಕ ಪರಿವರ್ತನೆ – ಇವೆಲ್ಲವೂ ಪ್ರತ್ಯೇಕವಾಗಿಯೂ ಮತ್ತು ಸಂಚಿತವಾಗಿಯೂ ವಿಕಾಸ ಪ್ರಕ್ರಿಯೆಗೆ ಕೊಡುಗೆಯನ್ನು ನೀಡುತ್ತವೆ.

## 1.1.3. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, 3 ಮತು್ತ4

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಕ, 2. ಬ, 3. ಅ, 4. ಡ, 5. ಅ, 6. ಬ, 7. ಡ, 8. ಅ, 9. ಡ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಡ, 2. ಕ, 3. ಡ, 4. ಬ, 5. ಅ, 6. ಕ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1. ಡ 2. ಡ 3. ಕ 4. ಅ 5. ಕ 6. ಅ 7. ಅ 8. ಬ 9. ಅ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4**

1– 'x', 2, 3, 4,– '√'

## 1.1.6. ಘಟಕಾಂತ್ಯ ಅಭ್ಯಾಸಗಳು

1. ಬೆಳವಣಿಗೆ ಮತ್ತು ವಿಕಾಸದ ಪರಿಕಲ್ಪನೆಗಳನ್ನು, ಅವುಗಳ ನಡುವಿನ ಸಂಬಂಧವನ್ನು ವಿವರಿಸಿ.
2. ಪಕ್ವತೆ ಮತ್ತು ವಿಕಾಸ ಇವುಗಳ ಪರಸ್ಪರ ಸಂಬಂಧವನ್ನು ವಿವರಿಸಿ.
3. ವಿಕಾಸವನ್ನು ಕಲಿಕೆ, ಪಕ್ವತೆ, ಸಂಶ್ಲೇಷಣೆ, ಸಮತೋಲನ ಮತ್ತು ಸಾಮಾಜಿಕ ಪರಿವರ್ತನೆಯಾಗಿ ವಿವರಿಸಿ.

## 1.1.7. ಪರಾಮರ್ಶನ ಗ್ರಂಥಗಳು


1. Elizabeth Hurlock (32nd reorubt 2016) Child Development 6th edition Mc Graw Hill Education Indian Edition
2. Laura.E.Berk Childhood Development Ninth edition Pearson Education Inc.(2013,1017)
3. Chauhan S.S. Advanced Educational Psychology Vikas Publishing House Pvt.Ltd.(2010)
4. Dandapani.S. Advanced Educational Psychology (2005) Anmol Publicaton Delhi Nataraj V. Vikasa manovignana (2010) Srinivas Prakashana Mysore
5. Dr. Suneetha.C.N Understanding the Learner and the Learning Process Shruthiloke Prakashana 2011
6. Dr.Suneetha.C.N kalike mattu klikarthi- Shruthiloke Prakashana 2014
7. John W.Santrock University of Texas at Dallas –Adolescence TATA McGRAW-HILL EDITION (2011).


*********************

# ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ

## ಘಟಕ 2 : ವಿಕಾಸಾತ್ಮಕ ಪ್ರಭಾವಗಳು

**ಘಟಕದ ರಚನೆ**


1.2.1. ಕಲಿಕಾ ಉದ್ದೇಶಗಳು

1.2.2. ಪೀಠಿಕೆ

1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.2.3.1. ವಿಕಾಸದ ಮೇಲೆ ಅನುವಂಶೀಯತೆಯ ಪ್ರಭಾವ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

1.2.3.2. ವಿಕಾಸದ ಮೇಲೆ ಪರಿಸರದ ಪ್ರಭಾವ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

1.2.3.3. ವಿಕಾಸದ ಮೇಲೆ ಆರೋಗ್ಯ ಮತ್ತು ಶಾರೀರಿಕ ಅಂಶಗಳ ಪ್ರಭಾವ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

1.2.3.4. ವಿಕಾಸದ ಮೇಲೆ ಆಹಾರ ಮತ್ತು ಆಹಾರಾಭ್ಯಾಸದ ಪ್ರಭಾವ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–4

1.2.4. ಸಾರಾಂಶಿಸೋಣ

1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, 3 ಮತ್ತು 4

1.2.6. ಘಟಕಾಂತ್ಯ ಅಭ್ಯಾಸಗಳು

1.2.7. ಪರಾಮರ್ಶನ ಸೂಚಿ


### 1.2.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ವಿಕಾಸದ ವಿವಿಧ ಕ್ಷೇತ್ರಗಳನ್ನು ಗುರುತಿಸುವರು;
- ವಿಕಾಸದ ಮೇಲೆ ಪ್ರಕೃತಿಯ (ದೇಹ ಪ್ರಕೃತಿ/ಅನುವಂಶೀಯತೆ) ಪ್ರಭಾವವನ್ನು ವಿವರಿಸುವರು;
- ವಿಕಾಸದ ಮೇಲೆ ಪೋಷಣೆಯ ಪ್ರಭಾವವನ್ನು ವರ್ಣಿಸುವರು;
- ಪ್ರಕೃತಿ ಮತ್ತು ಪೋಷಣೆಗಳ ಪ್ರಭಾವವು ವಿಕಾಸಕ್ಕೆ ಹೇಗೆ ಪರಸ್ಪರ ಪೂರಕವೆಂದು ಸ್ಪಷ್ಟಪಡಿಸುವರು;
- ಪ್ರಕೃತಿ ಮತ್ತು ಪೋಷಣೆಗಳನ್ನು ಹೊರತುಪಡಿಸಿ, ವಿಕಾಸದ ಮೇಲೆ ಪ್ರಭಾವ ಬೀರುವ ಇತರ ಕ್ಷೇತ್ರಗಳನ್ನು ಗುರುತಿಸುವರು;
- ನ್ಯೂನ ಪೋಷಣೆಯ ಪರಿಣಾಮಗಳನ್ನು ನಿದರ್ಶಿಸುವರು; ಮತ್ತು
- ವಿಕಾಸವು ಪ್ರಕೃತಿ ಅಥವಾ ಪೋಷಣೆಯಲ್ಲ; ಪ್ರಕೃತಿ ಮತ್ತು ಪೋಷಣೆಯನ್ನು ಅವಲಂಬಿಸಿದೆ ಎಂದು ಸ್ಪಷ್ಟಪಡಿಸುವರು.

## 1.2.2. ಪೀಠಿಕೆ

ಮಾನವ ಸಂಘಜೀವಿ. ಆತನ ಉಳಿವಿಗೆ ಸಾಮಾಜೀಕರಣವೇ ಮುಖ್ಯ ಸಾಧನ. ಮನುಷ್ಯನ ಜೀವನಪರ್ಯಂತ ಅನೇಕ ವಿಚಾರಗಳು ಆತನನ್ನು ಪ್ರಭಾವಿಸುತ್ತವೆ. ಮಾನವನು ಅನುವಂಶೀಯತೆ ಮತ್ತು ಪರಿಸರದ ಮೊತ್ತವೆಂದು ಹೇಳಲಾಗುತ್ತದೆ. ಪರಿಸರ ಮತ್ತು ಮಾನವನ ನಡುವೆ ನಿರಂತರವಾದ ಘರ್ಷಣೆ ನಡೆಯುತ್ತಲೇ ಇರುತ್ತದೆ. ಆದರೂ ಇನ್ನೂ ಇತರ ಕಾರಕಗಳು ಮಾನವನ ವಿಕಾಸವನ್ನು ಗುರುತರವಾಗಿಯೇ ಪ್ರಭಾವಿಸುತ್ತವೆ. ಈ ಘಟಕದಲ್ಲಿ ಅಂತಹ ಹಲವಾರು ಕಾರಕಗಳ ಅಂಶಗಳ ಬಗ್ಗೆ ತಿಳಿಯೋಣ.

## 1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.2.3.1. ವಿಕಾಸದ ಮೇಲೆ ಅನುವಂಶೀಯತೆಯ ಪ್ರಭಾವ

ಮಾನವನ ವಿಕಾಸವನ್ನು ಪ್ರಭಾವಿಸುವ ಅಂಶಗಳು ಬಹಳ ವಿಶಾಲ ವ್ಯಾಪ್ತಿಯುಳ್ಳದ್ದಾಗಿವೆ. ಅವುಗಳನ್ನು ವಿಕಾಸವನ್ನು ಪ್ರಭಾವಿಸುವ ಕ್ಷೇತ್ರಗಳೆಂದೇ ಗುರುತಿಸಲಾಗಿದೆ. ಇದರಲ್ಲಿ ಅನುವಂಶೀಯತೆ ಮತ್ತು ಪರಿಸರದ ಪ್ರಭಾವ ಸಿಂಹಪಾಲು. ಆರೋಗ್ಯ, ಶಾರೀರಿಕ ಅಂಶಗಳು, ಮಗು ಹುಟ್ಟಿದ ರೀತಿ, ಪೋಷಣೆ, ಮತ್ತು ಕೌಟುಂಬಿಕ ಪರಿಸರ, ಸಮುದಾಯದ ಪ್ರಭಾವ ಇತ್ಯಾದಿಗಳೂ ವಿಕಾಸವನ್ನು ಪ್ರಭಾವಿಸುತ್ತವೆ. ಜೊತೆಗೆ ಧರ್ಮ, ಸಾಮಾಜಿಕ–ಆರ್ಥಿಕ ಸ್ಥಿತಿ, ಸಂಸ್ಕೃತಿ, ತಂದೆತಾಯಿಯರ ಉದ್ಯೋಗ, ಸಾಕ್ಷರತೆ, ಮತ್ತು ಮಗು ಬೆಳೆಯುವ ಭೌಗೋಳಿಕ ಪ್ರದೇಶ ಈ ಅಂಶಗಳ ಪ್ರಭಾವವೂ ಸೇರಿಕೊಳ್ಳುತ್ತದೆ. ಅನುವಂಶೀಯತೆ ಮತ್ತು ಪರಿಸರವೆಂಬ ಅಂಶಗಳನ್ನೇ 'ಪ್ರಕೃತಿ' ಮತ್ತು 'ಪೋಷಣೆ' ಎಂಬ ಪದಗಳಿಂದ ಗುರುತಿಸಲಾಗಿದೆ. ಪ್ರಕೃತಿಯೆಂದರೆ, ಹುಟ್ಟಿನಿಂದಲೇ ವ್ಯಕ್ತಿಯೊಬ್ಬನು ಪಡೆಯುವ ವಂಶೀಯ ಲಕ್ಷಣಗಳು. ಪೋಷಣೆಯೆಂದರೆ, ಮಗುವಿನ ಹುಟ್ಟಿನ ನಂತರ ಅದರ ವಿಕಾಸವನ್ನು ಪ್ರಭಾವಿಸುವ ಎಲ್ಲ ಕಾರಕಗಳು. ಇದನ್ನೇ 'ಪರಿಸರ'ವೆಂದೂ ಹೇಳುವುದುಂಟು. ಇತ್ತೀಚಿನ ಸಂಶೋಧನೆಗಳು, ಇನ್ನೂ ಕೆಲವು ಅಪಾಯಕಾರಿ ಕಾರಕಗಳನ್ನು ಪತ್ತೆ ಹಚ್ಚಿವೆ. ಇವುಗಳು ವಿಕಾಸವನ್ನು ಋಣಾತ್ಮಕವಾಗಿ ಪ್ರಭಾವಿಸುತ್ತವೆ, ಉದಾಹರಣೆಗೆ, ಪರಿಸರೀಯ ಅಪಾಯಕಾರಿ ಅಂಶಗಳು, ಕೌಟುಂಬಿಕ ಅಪಾಯಕಾರೀ ಅಂಶಗಳು ಮತ್ತು ಮಗುವಿನ ಆಂತರ್ಯದಲ್ಲೇ ಇರಬಹುದಾದ ಅಪಾಯಕಾರಿ ಅಂಶಗಳು.

**ಅಭ್ಯಾಸ–I**

ಹಳ್ಳಿಯೊಂದರಲ್ಲಿ ಕಿರಿಯ ದಂಪತಿಗಳಿದ್ದರು. ತಮಗೊಂದು ಗಂಡುಮಗುವೇ ಆಗಬೇಕೆಂದು ಅವರಿಗೆ ಆಸೆ. ಆದರೇನು ಮಾಡುವುದು, ವರ್ಷಕ್ಕೊಂದರಂತೆ, ಆ ದಂಪತಿಗಳಿಗೆ ಮೂರು ಬಾರಿಯೂ ಹೆಣ್ಣುಮಕ್ಕಳೇ ಹುಟ್ಟಿದರು. ಇದೇ ಅವರಿಗೆ ಕೊರಗು. ಹಳ್ಳಿಯವರು, ಇವರಿಗೆ ಗಂಡು ಮಕ್ಕಳಾಗದಿರಲು ಹೆಂಡತಿಯೇ ಕಾರಣ, ಎಂದು ಆಡಿಕೊಳ್ಳುತ್ತಿದ್ದರು. ಅವಳ ಅತ್ತೆ ಮಾವಂದಿರಂತೂ ತಮ್ಮ ಮಗನಿಗೆ ಇನ್ನೊಂದು ಮದುವೆ ಮಾಡಲು ತಯಾರಾಗಿಬಿಟ್ಟಿದ್ದರು, ಆ ಇನ್ನೊಂದು ಹೆಂಡತಿಯಿಂದಲಾದರೂ ತಮಗೆ ಒಬ್ಬ ಮೊಮ್ಮಗ ದೊರೆಯಲಿ ಎಂಬುದು ಅವರ ಹಂಬಲವಾಗಿತ್ತು.

ಈಗ ಈ ಪ್ರಶ್ನೆಗಳನ್ನು ಗಮನಿಸಿ, ಉತ್ತರಿಸಿ:

- ದಂಪತಿಗಳಿಗೆ ಗಂಡು ಮಗು ಏಕೆ ಆಗಲಿಲ್ಲ?
- ಗಂಡ–ಹೆಂಡಿರಲ್ಲಿ ಗಂಡುಮಗುವು ಹುಟ್ಟಲು ಯಾರ ಪಾತ್ರವು ಮಹತ್ವದ್ದಾಗಿದೆ?
- ಮೇಲಿನ ಸಮಸ್ಯೆಗೆ ವೈಜ್ಞಾನಿಕ ಉತ್ತರವೇನು?

ಉತ್ತರ:––––––––––

ಕ್ರೋಮೋಸೋಮುಗಳು ಅನುವಂಶೀಯತೆಯನ್ನು ಸಾಗಿಸುವ ಸಾಧನಗಳು. ಮಾನವರ ದೇಹದ ಪ್ರತಿಯೊಂದು ಕೋಶದಲ್ಲೂ 23 ಜೊತೆ ಕ್ರೋಮೋಸೋಮುಗಳಿರುತ್ತವೆ. ಈ ಸಂಖ್ಯೆ ಸ್ಥಿರವಾದುದು. ಇಂತಹ ಸ್ಥಿರತೆ ಹೇಗೆ ಉಂಟಾಗುತ್ತದೆ? ಈ ಕೆಳಗಿನ ವಿವರಣೆಯನ್ನು ಗಮನಿಸೋಣ: ಆ 23 ಜೊತೆ ಕ್ರೋಮೋಸೋಮುಗಳಲ್ಲಿ ಒಂದು ಜೊತೆಯು ಜೀವಿಯ ಲಿಂಗವನ್ನು ನಿರ್ಧರಿಸುತ್ತವೆ. ವ್ಯಕ್ತಿಯೊಬ್ಬನಿಗೆ 23 ಕ್ರೋಮೋಸೋಮುಗಳ ಗುಂಪು ತಂದೆಯಿಂದಲೂ (ವೀರ್ಯಾಣು) ಮತ್ತು ಇನ್ನೊಂದು 23 ಕ್ರೋಮೋಸೋಮುಗಳ ಗುಂಪು ತಾಯಿಯಿಂದ (ಅಂಡಾಣು) ದೊರೆತಿರುತ್ತದೆ. ಹೀಗೆ ಒಟ್ಟು 23 ಜೊತೆ ಕ್ರೋಮೋಸೋಮುಗಳಲ್ಲಿ 22 ಜೊತೆ ಆಟೋಸೋಮುಗಳು. ಇವು ದೇಹದ ಬೇರೆ ಬೇರೆ ಲಕ್ಷಣಗಳನ್ನು ನಿಗದಿಪಡಿಸುವುವು. ಉಳಿದ ಒಂದು ಜೊತೆಯನ್ನು ಲಿಂಗತ್ವವನ್ನು ನಿರ್ಧರಿಸುವ ಕ್ರೋಮೋಸೋಮೆಂದೇ ಗುರುತಿಸಲಾಗಿದೆ. ಲಿಂಗಾಣುಗಳಾದಾಗ ಈ ಕ್ರೋಮೋಸೋಮಿನಲ್ಲಿ ಒಂದು 'X' ಮತ್ತು ಇನ್ನೊಂದು 'Y (ವೈ)' ಆಗಿರಬಹುದು. ಇವು ವೀರ್ಯಾಣುವಿನಲ್ಲಿ ಕಂಡುಬರುವುವು. ಆದರೆ, ಅಂಡಾಣುವಿನಲ್ಲಿ ಎರಡೂ 'X' ಆಗಿರುತ್ತದೆ. ಹಾಗಾಗಿ ಅಂಡಾಣುವೊಂದು ಫಲಿತಗೊಂಡಾಗ ಲಿಂಗತ್ವವನ್ನು ನಿರ್ಧರಿಸುವ ಕ್ರೋಮೋಸೋಮಿನಲ್ಲಿ ಎರಡೂ 'X' ಆದರೆ, ಹೆಣ್ಣುಮಗುವೂ ಅಥವಾ 'X Y' ರೀತಿಯಲ್ಲಿ ಜೋಡಣೆಯಾದರೆ ಗಂಡು ಮಗುವೂ ಆಗುತ್ತದೆ. ಅಂದರೆ, ಹೆಣ್ಣು ಯಾವಾಗಲೂ 'X' ಮಾತ್ರ ತನ್ನ ಮುಂದಿನ ಪೀಳಿಗೆಗೆ ವರ್ಗಾಯಿಸಿದರೆ, ಗಂಡು X ಅಥವಾ 'Y' ಯಾವುದನ್ನಾದರೂ ವರ್ಗಾಯಿಸುವ ಸಂಭಾವ್ಯತೆಯಿರುತ್ತದೆ. ಆದ್ದರಿಂದ ಗಂಡು ಮಗುವಾಗುವುದು ಅಥವಾ ಹೆಣ್ಣು ಮಗುವಾಗುವುದಕ್ಕೆ ಕಾರಣ ಗಂಡನೇ ಹೊರತು ಹೆಂಡತಿಯಲ್ಲ.

**ಅಭ್ಯಾಸ–II**

ನಿಮ್ಮ ಕುಟುಂಬದ ಸದಸ್ಯರನ್ನು ವಿಶೇಷವಾಗಿ ನೆನಪಿಸಿಕೊಳ್ಳಿ. ಅವರಲ್ಲಿ ಕಂಡ ಕೆಲವು ಲಕ್ಷಣಗಳು ಮನೆಯ ಹಿರಿಯರಂತೆಯೇ ಎಂದು ನಿಮಗೆ ಗೋಚರಿಸಬಹುದು. ಉದಾಹರಣೆಗೆ, ಮಚ್ಚೆಗಳು, ಗುಳಿಬೀಳುವ ಕೆನ್ನೆಗಳು, ಕಣ್ಣಿನ ಬಣ್ಣ, ಕಿವಿಯ ಆಕಾರ ಮತ್ತು ತಲೆ ಕೂದಲು–ಗುಂಗುರು/ಕಂದು/ನೇರ, ಅವರ ಬಣ್ಣ(ಎಣ್ಣೆಗೆಂಪು, ಕಪ್ಪು, ಗೌರವ ವರ್ಣ) ಇತ್ಯಾದಿ. ಅಷ್ಟೇ ಅಲ್ಲದೆ, ಕೆಲವು ನಿರ್ದಿಷ್ಟ ಅಲರ್ಜಿಗಳು, ಪ್ರತಿಭೆಗಳು ಮತ್ತು ಹೀಗೆ ಹೇಳಬಹುದಾದ ಹಲವಾರು ಗುಣಲಕ್ಷಣಗಳು–ಇವುಗಳ ಬಗ್ಗೆ ತಿಳಿದುಕೊಳ್ಳುವುದು ಕುತೂಹಲಕಾರಿಯೂ ಆಗಿರುತ್ತದೆ. ಈ ಒಂದು ಚಟುವಟಿಕೆಯಿಂದ ನಮ್ಮಲ್ಲಿ ಕಂಡುಬರುವ ಅನುವಂಶೀಯ ಗುಣಗಳ ಬಗ್ಗೆ ವರದಿಯನ್ನೇ ತಯಾರಿಸಿಬಿಡಬಹುದು ಅಲ್ಲವೇ?

| ಗುಣಲಕ್ಷಣಗಳು | ತಂದೆ | ತಾಯಿ | ತಂದೆಯ ತಂದೆ | ತಂದೆಯ ತಾಯಿ | ತಾಯಿಯ ತಂದೆ | ತಾಯಿಯ ತಾಯಿ |
|---|---|---|---|---|---|---|
| ಗುಳಿಕೆನ್ನೆಗಳು | | | | | | |
| ಮಚ್ಚೆಗಳು | | | | | | |
| ಕಿವಿಯ ಆಕಾರ | | | | | | |
| ಎತ್ತರ | | | | | | |
| ಮೂಗಿನ ಆಕಾರ | | | | | | |
| ಕಣ್ಣಿನ ಬಣ್ಣ | | | | | | |
| ತಲೆ ಕೂದಲು | | | | | | |
| ತ್ವಚೆಯ ವರ್ಣ | | | | | | |

**ಜನಸಂಖ್ಯಾ ವಂಶಾವಳಿ ಮತ್ತು ಸಾಮಾಜಿಕ ಅನುವಂಶೀಯತೆ**

## ಅಭ್ಯಾಸ–III

ಕರ್ನಾಟಕದಲ್ಲಿ ಕನ್ನಡವೇ ಮಾತೃಭಾಷೆಯೆಂದು ನಿಮಗೆಲ್ಲಾ ತಿಳಿದಿದೆ. ಕರ್ನಾಟಕದ ಉದ್ದಗಲಕ್ಕೂ ಜನರು ಕನ್ನಡವನ್ನು ಮಾತನ್ನಾಡುತ್ತಾರೆ. ಆದರೆ, ಕರ್ನಾಟಕದ ಭೌಗೋಳಿಕ ಲಕ್ಷಣವು ಜಿಲ್ಲಾವಾರು ವೈವಿಧ್ಯತೆಯನ್ನು ತೋರುವುದು. ಹಾಗೆಯೇ ಇಲ್ಲಿನ ಜನರ ಆಡು ಭಾಷೆಯಾದ ಕನ್ನಡ ವೈವಿಧ್ಯತೆಯಿಂದ ಕೂಡಿದೆ. ಕೆಲವು ಸ್ಥಳಗಳಲ್ಲಿ ಪದಗಳ ಉಚ್ಚಾರಣೆ ಬೇರೆಯಾಗಿರುವುದು ಕಂಡರೆ, ಮಗದೊಮ್ಮೆ ಒಂದೇ ಪದವು ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ಅರ್ಥವನ್ನು ಕೊಡುವುದು. ಉತ್ತರ ಕರ್ನಾಟಕದವರ ಕನ್ನಡ ಭಾಷೆಗೂ ದಕ್ಷಿಣಕನ್ನಡದವರ ಕನ್ನಡ ಭಾಷೆಗೂ ಅಜಗಜಾಂತರ ವ್ಯತ್ಯಾಸವುಂಟು. ಹಾಗೆಯೇ ಮಲೆನಾಡ ಕನ್ನಡ, ಕೊಡಗಿನವರ ಕನ್ನಡ ಮತ್ತು ಕುಂದಾಪುರದ ಹವ್ಯಕ ಕನ್ನಡ ಇತ್ಯಾದಿ. ಆದರೆ, ಒಂದೇ ಭೌಗೋಳಿಕ ವಲಯದಲ್ಲಿನ ಜನರು ಒಂದೇ ರೀತಿಯ ಭಾಷೆಯನ್ನು ಬಳಸುತ್ತಾ, ಯಾವುದೇ ತೊಂದರೆ ಇಲ್ಲದೆ ಸಾಮಾಜಿಕವಾಗಿ ಸಾಮರಸ್ಯವನ್ನು ಹೊಂದಿರುತ್ತಾರೆ. ಇಂತಹ ಒಂದು ನೆಲೆಗಟ್ಟಿನಲ್ಲಿ ಬೆಳೆಯುವ ಒಂದು ಮಗುವು ಅನಾಯಾಸವಾಗಿ ಅಲ್ಲಿನ ಸಾಮಾಜಿಕ ಅನುವಂಶೀಯತೆಯನ್ನು ಪಡೆದುಕೊಳ್ಳುವುದು. ಈಗ ಈ ಕೆಳಗಿನ ಪಟ್ಟಿಯಲ್ಲಿ ನೀಡಿರುವ ಲಕ್ಷಣಗಳನ್ನು ವಿವಿಧ ಕ್ಷೇತ್ರಗಳಿಗೆ ಹೋಲಿಸಿ ನೋಡುತ್ತಾ ಪಟ್ಟಿಯಲ್ಲಿನ ಬಿಟ್ಟ ಸ್ಥಳಗಳನ್ನು ತುಂಬಿಸಿ ಪೂರ್ತಿಗೊಳಿಸಿ.

| ಲಕ್ಷಣಗಳು | ಬುಡಕಟ್ಟು ಜನಾಂಗ | ಕರಾವಳಿ ತೀರದ ಜನರು | ಷೆರ್ಪಾಗಳು | ಗ್ರಾಮದ ಜನರು | ನಗರದ ಜನರು |
|---|---|---|---|---|---|
| ಮುಖ್ಯ ಆಹಾರ | | | | | |
| ಭಾಷೆ | | | | | |
| ಔದ್ಯೋಗಿಕ ಕೌಶಲಗಳು | | | | | |
| ಆರೋಗ್ಯ ಮತ್ತು ದೇಹಧಾರ್ಢ್ಯತೆ | | | | | |

## ಅಭ್ಯಾಸ–IV

ಎಪಿಜಿಎಆರ್ (APGAR) ಎಂಬುದು ಮಗುವಿನ ಜನನವಾದ ಕೂಡಲೇ ನಡೆಸುವ ಮೊದಲ ತಪಾಸಣೆಯಾಗಿದೆ. ಈ ಪರೀಕ್ಷೆಯನ್ನು ಹುಟ್ಟಿದ ನಂತರ ಎರಡು ಬಾರಿ ನಡೆಸಲಾಗುವುದು. ಒಂದು, ಹುಟ್ಟಿದ ಮೊದಲ ಒಂದು ನಿಮಿಷದಲ್ಲಿ ಮತ್ತು ಇನ್ನೊಂದು ಹುಟ್ಟಿದ ಐದನೇ ನಿಮಿಷದಲ್ಲಿ. ಮೊದಲ ಒಂದನೇ ನಿಮಿಷದಲ್ಲಿನ ಮಾಹಿತಿಯು ಮಗುವು ಪ್ರಸವದ ವೇಳೆಯ ಅನುಭವವನ್ನು ಹೇಗೆ ಮತ್ತು ಎಷ್ಟು ಸಹಿಸಿಕೊಂಡಿತು ಎಂಬುದನ್ನು ತಿಳಿಸುವುದು. ಹಾಗೆಯೇ ಐದನೇ ನಿಮಿಷದ ಮಾಹಿತಿಯು ಮಗುವು ತಾಯಿಯ ಗರ್ಭದಿಂದ ಹೊರಬಂದ ನಂತರ ಹೊರ ಪ್ರಪಂಚಕ್ಕೆ ಹೇಗೆ ಹೊಂದಿಕೊಂಡಿದೆ ಎಂಬುದನ್ನು ತಿಳಿಸುವುದು.

ವೈಜ್ಞಾನಿಕವಾಗಿ ಸಾಬೀತಾಗಿರುವ ಒಂದು ವಿಚಾರವೆಂದರೆ, ಮಗುವು ಹುಟ್ಟಿದ ಮೊದಲ 5 ನಿಮಿಷಗಳು ಬಹಳ ಮುಖ್ಯವಾದುದು. ಇತ್ತೀಚಿನ ದಿನಗಳಲ್ಲಿ ನವಜಾತ ಶಿಶುವಿನ ಮೊದಲ 5 ನಿಮಿಷಗಳನ್ನು ಕಡ್ಡಾಯವಾಗಿ ಎಪಿಜಿಎಆರ್ ಪರೀಕ್ಷೆಗೆ ಒಳಪಡಿಸುತ್ತಾರೆ. ಇದನ್ನು "ಬೇಬೀ ಚೆಕ್" ಎಂದು ಕರೆಯುತ್ತಾರೆ. ಎಪಿಜಿಎಆರ್ ಪರೀಕ್ಷೆಯ ಒಟ್ಟಾರೆ ಅಂಕಗಳು 1ರಿಂದ 10 ಇದ್ದು, ಇದರಲ್ಲಿ ಪ್ರಾಪ್ತಾಂಕಗಳು ಹೆಚ್ಚಾಗಿದ್ದರೆ, ಹುಟ್ಟಿನ ನಂತರ ಮಗುವಿನ ಆರೋಗ್ಯ ಅತ್ಯುತ್ತಮವಾಗಿದೆ ಎಂದರ್ಥ (7,8 ಮತ್ತು 9). ಒಟ್ಟು 10 ಪ್ರಾಪ್ತಾಂಕವು ಅಪರೂಪವೇ

ಸರಿ, ಕಾರಣ ಹುಟ್ಟಿದಾಕ್ಷಣ ಮಗುವು 1 ಪ್ರಾಪ್ತಾಂಕದಷ್ಟಾದರೂ ಕಡಿಮೆ ಇದ್ದೇ ಇರುತ್ತದೆ, ಆಗ ತಾನೇ ಹುಟ್ಟಿದ ಮಗುವಿನ ಕೈ ಮತ್ತು ಕಾಲಿನ ತುದಿಗಳು ನೀಲಿಯ ಬಣ್ಣದ್ದಾಗಿರುತ್ತವೆ. ಇದು ಸಹಜವೇ.

ಪ್ರಾಪ್ತಾಂಕವೇನಾದರೂ 7ಕ್ಕಿಂತ ಕಡಿಮೆ ಇದ್ದರೆ, ಮಗುವಿಗೆ ವೈದ್ಯಕೀಯ ನೆರವಿನ ಅಗತ್ಯವಿದೆ ಎಂದೇ ಅರ್ಥ. 4 ರಿಂದ 6 ರಷ್ಟು ಇದ್ದರೆ, ಕಡಿಮೆ ಪ್ರಾಪ್ತಾಂಕವೆಂದೂ 3 ಅಥವಾ 3 ಕ್ಕಿಂತ ಕಡಿಮೆಯಾದರೆ, ಗಂಭೀರವಾಗಿಯೇ ಕಡಿಮೆಯೆಂದು ಅರ್ಥ. ಹೆರಿಗೆಯಲ್ಲಿ ಕಷ್ಟವಾದಾಗ, ಸಿಸೇರಿಯನ್ ಆದಾಗ, ಮಗುವಿಗೆ ಆಮ್ಲಜನಕದ ಕೊರತೆಯುಂಟಾಗುವುದು. ಆಗ ಈ ರೀತಿ ಕಡಿಮೆ ಪ್ರಾಪ್ತಾಂಕಗಳು ಕಂಡುಬರುತ್ತವೆ. ಆದರೆ, 1ನೇ ನಿಮಿಷದ ಪ್ರಾಪ್ತಾಂಕವು ಎಷ್ಟೇ ಕಡಿಮೆ ಇದ್ದರೂ 5ನೇ ನಿಮಿಷದಷ್ಟು ಹೊತ್ತಿಗೆ ಮಗುವು ಸಾಮಾನ್ಯವಾಗಿ ಸಹಜಸ್ಥಿತಿಗೆ ಬಂದಿರುತ್ತದೆ. ಹೀಗಿದ್ದಾಗ್ಯೂ ಈ ತಪಾಸಣೆಯು ಮಗುವಿನ ಆರೋಗ್ಯದ ಬಗ್ಗೆ, ಮುಂದಿನ ಆಗು–ಹೋಗುಗಳ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಿಲ್ಲ. ಆದರೆ, ಪ್ರಾಪ್ತಾಂಕ 3 ಅಥವಾ 3ಕ್ಕಿಂತ ಕಡಿಮೆ ಇದ್ದು, ಹುಟ್ಟಿದ ನಂತರ 10, 15 ಅಥವಾ 30 ನಿಮಿಷವಾದರೂ ಸಹಜ ಸ್ಥಿತಿಗೆ ಬರಲಿಲ್ಲವೆಂದರೆ, ಮಗುವಿನಲ್ಲಿ ನರ–ಮೆದುಳು ಸಂಬಂಧಿತ ರೋಗದ ಬಗ್ಗೆ ಮುನ್ಸೂಚನೆ ನೀಡುತ್ತದೆ. ಒಟ್ಟಾರೆ, ಆಪ್‌ಗರ್ ಟೆಸ್ಟ್‌ನ ಮುಖ್ಯ ಉದ್ದೇಶವೆಂದರೆ, ಹುಟ್ಟಿದ ತತ್ಕ್ಷಣದಲ್ಲಿ ವೈದ್ಯಕೀಯ ನೆರವಿನ ಅಗತ್ಯವಿದ್ದರೆ, ಅದನ್ನು ಖಚಿತಪಡಿಸುವುದೇ ಆಗಿದೆ.

ಮೇಲಿನ ಎಲ್ಲ ಉದಾಹರಣೆಗಳೂ ವಿಕಾಸದ ಮೇಲೆ ಅನುವಂಶೀಯತೆಯ ಪ್ರಭಾವವನ್ನು ತಿಳಿಸುತ್ತವೆ.

ರುಚ್ ಎಂಬಾತ ಹೇಳುವ ಪ್ರಕಾರ, "ಯಾವ ಅಂಶಗಳು ಜೈವಿಕವಾಗಿ ಪೋಷಕರಿಂದ ವರ್ಗಾವಣೆಗೊಂಡು ವ್ಯಕ್ತಿಯೊಬ್ಬನ ದೈಹಿಕ ರಚನೆ, ಕಾರ್ಯ ಹಾಗೂ ಲಿಂಗತ್ವವನ್ನು ನಿರ್ಧರಿಸುವುವೋ ಅವುಗಳನ್ನೇ ಅನುವಂಶೀಯತೆಯೆಂದು ಕರೆಯಲಾಗುವುದು." ಇದರಿಂದಾಗಿ ಮಗುವಿಗೆ ಕೆಲವು ನಿರ್ದಿಷ್ಟವಾದ ಲಕ್ಷಣಗಳು ಆತನ ಹಿರಿಯ ತಲೆಮಾರಿನಿಂದ ಲಭಿಸುವುವು. ಆದ್ದರಿಂದ ಮಗುವಿನಲ್ಲಿ ತನ್ನ ತಂದೆತಾಯಿರಷ್ಟೇ ಅಲ್ಲದೆ, ಅವರ ಹಿರಿಯರ ಕೆಲವು ಗುಣಲಕ್ಷಣಗಳನ್ನು ಕೂಡ ಆಧಾರ ಸಹಿತ ಕಂಡುಕೊಳ್ಳಬಹುದಾಗಿದೆ". ಈ ಒಂದು ಜೈವಿಕ ಪ್ರಕ್ರಿಯೆಯಿಂದ ವ್ಯಕ್ತಿಯೊಬ್ಬನಲ್ಲಿ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಹೀಗೆ ಹಲವಾರು ಗುಣಗಳು ಆತನ ಹಿರಿಯ ತಲೆಮಾರಿನಿಂದ ಬಂದಿರುವುದನ್ನು ನೋಡಬಹುದಾಗಿದೆ. ವ್ಯಕ್ತಿಯು, ತಾನು ಬದುಕುವ ಸಮಾಜದ ಜನರ ಜೀವನ ಲಕ್ಷಣಗಳನ್ನು ಕೂಡ ಪಡೆದುಕೊಳ್ಳುತ್ತಾನೆ. ಇದನ್ನು ಸಾಮಾಜಿಕ ಅನುವಂಶೀಯತೆಯೆಂದು ಗುರುತಿಸಲಾಗಿದೆ. ಒಟ್ಟಾರೆ ಹೇಳುವುದಾದರೆ, ವ್ಯಕ್ತಿಯೊಬ್ಬನು ಜೈವಿಕ ಅನುವಂಶೀಯತೆ ಮತ್ತು ಸಾಮಾಜಿಕ ಅನುವಂಶೀಯತೆಯ ಗುಣಲಕ್ಷಣಗಳನ್ನು ಪಡೆಯುತ್ತಾನೆ. ಮುಂದೆ ವಿಕಾಸದ ಮೇಲೆ ಪ್ರಭಾವ ಬೀರುವ ಜೈವಿಕ ಅಂಶಗಳನ್ನು ಗಮನಿಸೋಣ.

**ಅನುವಂಶೀಯ ವ್ಯವಸ್ಥೆ:**

ಪ್ರತೀ ಜೀವಿಯಲ್ಲೂ ಜರ್ಮ್ ಕೋಶಗಳು ಸಂತಾನೋತ್ಪತ್ತಿ ಮಾಡುವ ಲಿಂಗಾಣುಗಳನ್ನು ಉತ್ಪತ್ತಿ ಮಾಡುತ್ತವೆ, ಹಾಗೆಯೇ, ಗಂಡು ಜೀವಿಯಲ್ಲಿ ವೀರ್ಯಾಣುಗಳೂ ಮತ್ತು ಹೆಣ್ಣು ಜೀವಿಯಲ್ಲಿ ಅಂಡಾಣುಗಳೂ ಉತ್ಪತ್ತಿಯಾಗುತ್ತವೆ. ಗಂಡಸರಲ್ಲಿ ಟೆಸ್ಟಿಕಲ್ಸ್‌ಗಳಲ್ಲಿ ವೀರ್ಯಾಣುಗಳು (ಒಂದು ದಿನಕ್ಕೆ ಹತ್ತು ಮಿಲಿಯನ್‌ಗಳಷ್ಟು) ಉತ್ಪಾದನೆಯಾದರೆ, ಹೆಂಗಸರಲ್ಲಿ ಅಂಡಾಣುಗಳು ಅಂಡಾಶಯದಲ್ಲಿ ಸುಮಾರು 28 ದಿನಗಳಿಗೆ ಒಂದರಂತೆ ಬಿಡುಗಡೆಯಾಗುತ್ತವೆ. ಅಂಡಾಣು ಫಲಿತವಾಗುವಾಗ ಕೇವಲ ಒಂದೇ ಒಂದು ವೀರ್ಯಾಣು ಒಂದು ಅಂಡಾಣುವಿನೊಂದಿಗೆ ಮಿಲನಹೊಂದುತ್ತದೆ. ಇದನ್ನೇ ಮುಂದೆ ಯುಗ್ಮಾಣು ಅಥವಾ ಫಲಿತ ಅಂಡಾಣುವೆಂದು ಕರೆಯುಲಾಗುವುದು. ಹೀಗೆ ಫಲಿತಗೊಂಡ ಅಂಡಾಣುವಿನಲ್ಲಿ ಎರಡೂ ಜರ್ಮ್‌ಕೋಶಗಳ ಕ್ರೋಮೋಸೋಮುಗಳೂ ಜೋಡಣೆ ಹೊಂದುತ್ತವೆ. ಈ ಕ್ರೋಮೋಸೋಮುಗಳಲ್ಲಿರುವ ಜೀನ್ಸ್‌ಗಳೇ ವಂಶವಾಹಕಗಳಾಗಿ ಕಾರ್ಯನಿರ್ವಹಿಸುತ್ತವೆ.

**ಕ್ರೋಮೋಸೋಮುಗಳು :**

ಜೀವಕೋಶವೊಂದರಲ್ಲಿ ಅತ್ಯಂತ ಸೂಕ್ಷ್ಮವಾದ ರಚನೆಯನ್ನು ಹೊಂದಿರುವ ಕ್ರೋಮೋಸೋಮುಗಳು ಕೋಶಕೇಂದ್ರದಲ್ಲಿ ಕಂಡುಬರುತ್ತವೆ. ಇವುಗಳು ಡಿ.ಎನ್.ಎ (ಡಿಆಕ್ಸಿರೈಬೋನ್ಯೂಕ್ಲಿಯಿಕ್ ಆಮ್ಲ)ಯಿಂದ ಮಾಡಲ್ಪಟ್ಟಿವೆ. ಡಿಎನ್‌ಎ ಎಂಬುದು ಒಂದು ನೀಳವಾದ ದ್ವಿ–ಏಣಿಯಾಕೃತಿಯ ರಚನೆಹೊಂದಿರುವ ರಾಸಾಯನಿಕ ಅಣುವಾಗಿದೆ. ಅದರ ಮೇಲೆ ಕಾಣುವ ಸಣ್ಣ ಸಣ್ಣ ಗ್ರಾನ್ಯೂಲ್‌ಗಳೇ ಜೀನ್ಸ್‌ಗಳು. ಜೀನ್ಸ್‌ಗಳೇ ಅನುವಂಶೀಯ ಲಕ್ಷಣಗಳನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುವ ವಾಹಕಗಳು. ಮಾನವರ ಪ್ರತಿ ಕೋಶದಲ್ಲಿ 23 ಜೋಡಿ (2N) ಕ್ರೋಮೋಸೋಮುಗಳಿದ್ದು, ಲಿಂಗಾಣುಗಳನ್ನು ಬಿಡುಗಡೆ ಮಾಡುವ ಜರ್ಮ್ ಕೋಶಗಳಲ್ಲಿ ಮಿಯಾಸಿಸ್ ಕೋಶವಿಭಜನೆಯಿಂದಾಗಿ 23 ಜೋಡಿಯಲ್ಲಿ ತಲಾ ಒಂದು ಗಣ (1N) ಮಾತ್ರ ವೀರ್ಯಾಣು ಮತ್ತು ಅಂಡಾಣುವಿನಲ್ಲಿ ಕಂಡುಬರುವುದು. ಅಂದರೆ, ವೀರ್ಯಾಣು ಅಥವಾ ಅಂಡಾಣುವಿನಲ್ಲಿ ಹ್ಯಾಪ್ಲಾಯ್ಡ್ ಸಂಖ್ಯೆಯ ಕ್ರೋಮೋಸೋಮುಗಳು ಕಂಡುಬರುತ್ತವೆ. ಮಿಯಾಸಿಸ್ ಕೋಶವಿಭಜನೆ ನಡೆಯುವಾಗ, ಒಟ್ಟು 46 ಕ್ರೋಮೋಸೋಮುಗಳಲ್ಲಿ ಯಾವುದಾದರೂ 23 ಒಂದು ಅಂಡಾಣುವಿನಲ್ಲಿ ಅಥವಾ ಒಟ್ಟು 46 ಕ್ರೋಮೊಸೋಮುಗಳಲ್ಲಿ ಯಾವುದಾದರೂ 23 ಒಂದು ವೀರ್ಯಾಣುವಿನಲ್ಲೂ ಉಳಿದುಕೊಂಡುಬಿಟ್ಟಿರುತ್ತವೆ. ಹಾಗಾಗಿ ಗಂಡು ಅಥವಾ ಹೆಣ್ಣು ಯಾವುದೇ ಲಿಂಗಾಣುವಿನಲ್ಲಿ ಕೇವಲ 23 ಕ್ರೋಮೋಸೋಮುಗಳು ಮಾತ್ರ ಇರುತ್ತವೆ. ಈ 23ರಲ್ಲಿ ಒಂದು ಜೊತೆ ಕ್ರೋಮೋಸೋಮುಗಳು ಲಿಂಗತ್ವವನ್ನು ನಿರ್ಧರಿಸುವ ಪಾತ್ರವನ್ನು ನಿರ್ವಹಿಸುತ್ತವೆ. 2X ಇರುವ ಕ್ರೋಮೋಸೋಮು ಹೆಣ್ಣೆಂದು X ಮತ್ತು Y ಇರುವ ಕ್ರೋಮೋಸೋಮು ಗಂಡೆಂದು ಲಿಂಗತ್ವವನ್ನು ಪಡೆಯಲು ಕಾರಣವಾಗುತ್ತವೆ. ಆದ್ದರಿಂದ ಗಂಡಸಿನಲ್ಲಿ 23 ಕ್ರೋಮೋಸೋಮುಗಳ ವೀರ್ಯಾಣುವಿನಲ್ಲಿ ಒಂದು X ಅಥವಾ Y ಆಗಿರಬಹುದು. ಆದರೆ, ಹೆಂಗಸಿನಲ್ಲಿ 23 ಕ್ರೋಮೋಸೋಮುಗಳಿರುವ ಅಂಡಾಣುವಿನಲ್ಲಿ ಎರಡೂ X ಆಗಿರುತ್ತವೆ. ಆದರೆ, ಒಂದು ಫಲಿತ ಅಂಡಾಣುವಿನಲ್ಲಿ 23 ಜೊತೆ ಕ್ರೋಮೋಸೋಮುಗಳು ಜೋಡಣೆಯಾಗುತ್ತವೆ. ಮತ್ತು 1 N ರಚನೆಯನ್ನು ಪಡೆಯುತ್ತವೆ. ಅಂದರೆ, ಇದರಲ್ಲಿ 23ರ ಒಂದು ಗಣವು ಗಂಡಸಿನಿಂದ ಮತ್ತು 23ರ ಇನ್ನೊಂದು ಗಣವು ಹೆಂಗಸಿನಿಂದ ದೊರೆತುದಾಗಿರುತ್ತದೆ. ಒಟ್ಟಾರೆ, ಫಲಿತ ಅಂಡಾಣುವಿನಲ್ಲಿ 23 ಜೊತೆ ಕ್ರೋಮೋಸೊಮುಗಳು ಕಂಡುಬರುತ್ತವೆ. ಇದರಿಂದ, ಗಂಡು ಮಗುವು ಜನನವಾಗಬೇಕೆಂದರೆ, ಅದು XY ಜೋಡಣೆಯಾದಾಗ ಮಾತ್ರ ಮತ್ತು ಇದು ವೀರ್ಯಾಣುವಿನಿಂದ ಘಟಿಸುತ್ತದೆ ಎಂಬ ವಿಚಾರ ನಮಗೆ ತಿಳಿದುಬರುತ್ತದೆ.

ಅನುವಂಶೀಯ ಲಕ್ಷಣಗಳನ್ನು ಪ್ರಕೃತಿ ಲಕ್ಷಣಗಳೆಂದೂ ಹೇಳುತ್ತಾರೆ. ಪ್ರಕೃತಿ ಲಕ್ಷಣಗಳೆಂದರೆ, ಮಗುವು ಹುಟ್ಟಿನಿಂದಲೇ ಪಡೆದುಕೊಂಡ ಗುಣಲಕ್ಷಣಗಳು. ಅನುವಂಶೀಯವಾಗಿ ಮಗುವಿಗೆ ದೊರಕಬಹುದಾದ ಕೆಲವು ಗುಣಲಕ್ಷಣಗಳನ್ನು ಗಮನಿಸೋಣ:

- ಕೆಲವು ಪ್ರತಿಭೆಗಳು, ರಕ್ತದ ಗುಂಪು, ವಂಶಪಾರಂಪರ್ಯವಾದ ಕೆಲವು ರೋಗಗಳು ಮತ್ತು ಕೆಲವು ಶಾರೀರಿಕ ಲಕ್ಷಣಗಳು.
- ಬುದ್ಧಿಮಾಂದ್ಯತೆ, ಮತ್ತು ಇದರಿಂದಾಗಿ ವ್ಯಕ್ತಿಯ ಸಂಜ್ಞಾನಾತ್ಮಕ, ಭಾವನಾತ್ಮಕ ಮತ್ತು ಕೌಶಲಗಳ ವಿಕಾಸದಲ್ಲಿನ ಕೊರತೆ.
- ಡೌನ್‌ಸಿಂಡ್ರೋಮ್–ವ್ಯಕ್ತಿಯೊಬ್ಬನಲ್ಲಿ ಸಂಪೂರ್ಣ/ ಭಾಗಶಃ ಹೆಚ್ಚುವರಿಯಾದ 21ನೇ ಕ್ರೋಮೋಸೋಮಿನಿಂದ ಡೌನ್‌ಸಿಂಡ್ರೋಮ್ ಎಂಬ ಲಕ್ಷಣವು ಕಂಡುಬರುವುದು. ಇದು ವ್ಯಕ್ತಿಯ ವಿಕಾಸದ ಮೇಲೆ ಗಂಭೀರವಾದ ಋಣಾತ್ಮಕ ಪ್ರಭಾವವನ್ನು ಬೀರುವುದು.
- ತಾಯಿಯ ಆಹಾರ/ಪೋಷಕಾಂಶಗಳು: ಸಾಮಾನ್ಯವಾಗಿ ಗರ್ಭಿಣಿ ಸ್ತ್ರೀಯರು ಪೌಷ್ಟಿಕ ಆಹಾರ ತೆಗೆದುಕೊಳ್ಳಬೇಕೆಂದು ಎಲ್ಲರೂ ಹೇಳುತ್ತಾರೆ. ಅಷ್ಟೇ ಅಲ್ಲ, ಅದು ಸಮತೋಲನ ಆಹಾರವೂ

ಆಗಿರಬೇಕು. ಇದರ ಜೊತೆಯಲ್ಲಿ ಫೋಲಿಕ್ ಆಸಿಡ್, ಕಬ್ಬಿಣ, ಕ್ಯಾಲ್ಸಿಯಂ, ಝಿಂಕ್, ಮತ್ತು ಐಯೋಡಿನನ್ನು ನಿಗದಿತ ಪ್ರಮಾಣದಷ್ಟನ್ನು ತೆಗೆದುಕೊಳ್ಳಲೇಬೇಕು. ಬೆಳೆಯುತ್ತಿರುವ ಭ್ರೂಣದ ನರ ಅಂಗಾಂಶದ ಆರೋಗ್ಯಕರ ವಿಕಾಸಕ್ಕೆ ಫೋಲಿಕ್ ಆಮ್ಲ ತುಂಬಾ ಪ್ರಮುಖವಾದುದು. ಕಬ್ಬಿಣವು ತಾಯಿಯಿಂದ ಮಗುವಿಗೆ ರಕ್ತಪರಿಚಲನೆ ಪ್ಲಾಸೆಂಟಾದ ಮೂಲಕ ಸರಿಯಾಗಿ ಆಗಲು ಬಹು ಮುಖ್ಯವಾಗುತ್ತದೆ. ಹಾಗೆಯೇ ಐಯೋಡಿನ್ ಕೊರತೆಯಾದರೆ, ಮಗುವಿನಲ್ಲಿ ಬುದ್ಧಿಮಾಂದ್ಯತೆಯಾಗುವ ಸಂಭವವಿರುತ್ತದೆ.

- ಟೆರಾಟೋಜೆನ್ಸ್: ಇವುಗಳು ಸ್ವಾಭಾವಿಕವಾಗಿ ಬೆಳೆಯುತ್ತಿರುವ ಭ್ರೂಣದ ಮೇಲೆ ಗಂಭೀರ ಪರಿಣಾಮವನ್ನು ಬೀರುವುವು. ಅದು ಮದ್ಯಪಾನ/ಡ್ರಗ್ಸ್/ರುಬೆಲ್ಲಾ ವೈರಸ್/ಎಕ್ಸರೇ ಇತ್ಯಾದಿಗಳಿಂದ ಉಂಟಾಗಬಹುದು. ಇವುಗಳ ದುಷ್ಪರಿಣಾಮವು ಬುದ್ಧಿಮಾಂದ್ಯತೆ, ದುರ್ಬಲ ಬೆಳವಣಿಗೆ, ಚಿಕ್ಕದಾದ ತಲೆ ಅಥವಾ ಹೀಗೆ ಯಾವುದಾದರೂ ಅಸಹಜ ಲಕ್ಷಣಗಳಿಗೆ ಕಾರಣವಾಗಬಹುದು.

- ಧೂಮಪಾನಿಗಳಲ್ಲಿ ಮಗುವಿಗೆ ಆಮ್ಲಜನಕದ ಕೊರತೆ ಉಂಟಾದಾಗ, ಅದರ ಹೃದಯದ ಬಡಿತವೂ ಹೆಚ್ಚಾಗುವುದಷ್ಟೇ ಅಲ್ಲದೆ ಅವಧಿಗೂ ಮುನ್ನವೇ ಹೆರಿಗೆಯಾಗಬಹುದು. ಇದರಿಂದಾಗಿ ಹುಟ್ಟಿದ ಮಗುವಿನ ತೂಕ ಕಡಿಮೆ ಇರುತ್ತದೆ ಮತ್ತು ಇಂತಹ ಮಗುವಿನಲ್ಲಿ ರೋಗನಿರೋಧಕ ಶಕ್ತಿಯೂ ಕಡಿಮೆ.

- ಭ್ರೂಣಾವಸ್ಥೆಯಲ್ಲಿರುವ ಮಗುವಿಕೆ ಅತಿ ಹೆಚ್ಚು ರೇಡಿಯೋ ಆಕ್ಟೀವ್ ತರಂಗಗಳು ಹಾದು ಹೋದರೆ ಭ್ರೂಣಹತ್ಯೆಯೇ ಆಗಿಬಿಡಬಹುದು.

- ತಾಯಿಯು ಹೆಚ್.ಐ.ವಿ. ಪೀಡಿತಳಾಗದ್ದಾಗ ಗರ್ಭಸ್ಥ ಮಗುವಿಗೂ ಅದು ಹರಡುತ್ತದೆ.

- ಆರ್.ಹೆಚ್. ಅಂಶ: ಇದೊಂದು ಪ್ರೋಟೀನ್ ಆಗಿದ್ದು, ಇದು ರಕ್ತದಲ್ಲಿದ್ದರೆ, ಆರ್.ಹೆಚ್'+' (Rh+) ಎಂದೂ ಇಲ್ಲದಿದ್ದರೆ, ಆರ್.ಹೆಚ್ '–' (Rh-) ಎಂದು ಗುರುತಿಸಲಾಗುತ್ತದೆ. ತಾಯಿ, ತಂದೆ ಇಬ್ಬರಲ್ಲಿಯೂ ಒಂದೇ ರೀತಿಯ ಆರ್.ಹೆಚ್ ಅಂಶವಿದ್ದರೆ, ಸಮಸ್ಯೆಯೇ ಇಲ್ಲ. ಆದರೆ, ತಾಯಿಯ ಆರ್. ಹೆಚ್'–' ಆಗಿದ್ದಾಗ, ಮಗುವಿನದ್ದು ಆರ್.ಹೆಚ್'+' ಆದರೆ, ಆಗ ತೊಂದರೆಯಾಗುವ ಸಂಭವವೇ ಹೆಚ್ಚು. ತಾಯಿಯ ರಕ್ತದ 'ಆಂಟಿಬಾಡಿ'(ದೇಹವಿರೋಧಿ) ಅಂಶಗಳು ಮಗುವಿನದಕ್ಕಿಂತ ವಿರುದ್ಧವಾಗಿದ್ದು, ವೈರುದ್ಧ್ಯ ಪರಿಣಾಮಗಳನ್ನು ಉಂಟುಮಾಡುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

ಈ ಕೆಳಗೆ ಬಹುಆಯ್ಕೆಯ ಪ್ರಶ್ನೆಗಳನ್ನು ನೀಡಲಾಗಿದೆ. ನಿಮ್ಮ ಸರಿ ಉತ್ತರದ ಆಯ್ಕೆಯನ್ನು '✓' ಚಿಹ್ನೆಯ ಮೂಲಕ ಸೂಚಿಸಿ:

1. ಅನುವಂಶೀಯ ಲಕ್ಷಣಗಳು ತಲೆಮಾರಿನಿಂದ ತಲೆಮಾರಿಗೆ ಯಾವುದರ ಮೂಲಕ ತಲುಪುತ್ತವೆ?

   ಅ. ಸಂಸ್ಕೃತಿ

   ಬ. ಶಿಕ್ಷಣ

   ಕ. ಜೀನ್ಸ್‌ಗಳು

   ಡ. ಕೋಶಗಳು

2. ಜೆ.ಗ್ರೆಗೋರ್ ಮೆಂಡಲ್‌ಜೀನ್ಸ್‌ಗಳನ್ನು ಹೇಗೆ ವಿವರಿಸಿದ್ದಾನೆ?

   ಅ. ನಿರ್ಧಾರಕಾಂಶಗಳು

ಬ. ಪ್ರೋಟೀನ್‌ಗಳು

ಕ. ಸಾವಯವ ರಾಸಾಯನಿಕಗಳು

ಡ. ಗುಣಲಕ್ಷಣಗಳು

3. ಐಯೋಡಿನ್ ಕೊರತೆಯ ಪರಿಣಾಮವೇನು?

ಅ. ಕುಬ್ಜ ಬೆಳವಣಿಗೆ

ಬ. ದುರ್ಬಲ ದೃಷ್ಟಿ

ಕ. ಮುಂಗೋಪ

ಡ. ಬುದ್ಧಿಮಾಂದ್ಯತೆ

4. "ಬೇಬೀ ಚೆಕ್" ಎಂಬುದು ಏನನ್ನು ಸೂಚಿಸುತ್ತದೆ?

ಅ. ಮಗುವಿನ ತಪಾಸಣೆ

ಬ. ಮಗುವಿನ ವೈದ್ಯಕೀಯ ಪರೀಕ್ಷೆ

ಕ. ಎಪಿಜಿಎಆರ್ ಪರೀಕ್ಷೆ

ಡ. ಶಿಶು ಪರೀಕ್ಷೆ

5. ಡೌನ್‌ಸಿಂಡ್ರೋಮ್‌ಗೆ ಕಾರಣವೇನು?

ಅ. 21ನೇ ಕ್ರೋಮೋಸೋಮು ತ್ರಿವಳಿಯಾಗಿ ಇರುವುದು

ಬ. ಅಪೌಷ್ಟಿಕತೆ

ಕ. ಅನಾರೋಗ್ಯ

ಡ. ಕೆಟ್ಟ ಪರಿಸರ

6. ಟೆರಾಟೋಜೆನ್ಸ್ ಎಂದರೇನು?

ಅ. ಮದ್ಯ ಮತ್ತು ಡ್ರಗ್ಸ್

ಬ. ಭ್ರೂಣವನ್ನು ತೊಂದರೆಗೀಡು ಮಾಡುವ ಯಾವುದೇ ಅಂಶ

ಕ. ಆಮ್ಲಜನಕದ ಕೊರತೆ

ಡ. ಧೂಳಿನ ಕಣಗಳು

7. ಎಪಿಜಿಎಆರ್‌ನ ಪ್ರಾಪ್ತಾಂಕವು 3 ಎಂಬುದರ ಅರ್ಥವೇನು?

ಅ. ಮಗುವು ಆರೋಗ್ಯವಾಗಿದೆ

ಬ. ಮಗುವಿಗೆ ತೀವ್ರ ವೈದ್ಯಕೀಯ ನಿಗಾ ಬೇಕಿದೆ

ಕ. ಅವಧಿ ಪೂರ್ವ ಪ್ರಸವದ ಮಗು

ಡ. ಬೆಳವಣಿಗೆಯ ಕೊರತೆಯಿರುವ ಮಗು

8. ನವಜಾತ ಶಿಶುವು ಆರೋಗ್ಯದಿಂದ ಇದೆ ಎನ್ನಬೇಕಾದರೆ, ಅದರ ಎಪಿಜಿಎಆರ್‌ನ ಪ್ರಾಪ್ತಾಂಕವು ಯಾವ ರೀತಿಯಲ್ಲಿರಬೇಕು?

ಅ. 2, 3 ಮತ್ತು 4

ಬ. 1,2 ಮತ್ತು 3

ಕ. 4,3 ಮತ್ತು 5

ಡ. 7,8 ಮತ್ತು 9

9. ಫೋಲಿಕ್ ಆಮ್ಲವು ಯಾವುದರ ವಿಕಾಸದ ಮೇಲೆ ಪ್ರಭಾವ ಬೀರುತ್ತದೆ?

ಅ. ಪರಿಚಲನಾ ವ್ಯವಸ್ಥೆ

ಬ. ಅಸ್ಥಿಪಂಜರ ವ್ಯವಸ್ಥೆ

ಕ. ನರ ಮಂಡಲ ವ್ಯವಸ್ಥೆ

ಡ. ನಿರ್ನಾಳ ಗ್ರಂಥಿಗಳು

10. ತಾಯಿಯ ದೇಹವು ಮಗುವಿನ ರಕ್ತವನ್ನು ತಿರಸ್ಕರಿಸುವ ಸಂದರ್ಭ ಯಾವುದು?

ಅ. ಇಬ್ಬರೂ ಪೋಷಕರದು ಒಂದೇ ರಕ್ತದ ಗುಂಪಾಗಿದ್ದಾಗ

ಬ. ತಾಯಿಯ ರಕ್ತವು ಆರ್.ಹೆಚ್. '+' ಆಗಿದ್ದು ಮಗುವಿನದು ಆರ್.ಹೆಚ್ಚ್ '–' ಆಗಿದ್ದಾಗ

ಕ. ತಾಯಿ ಮತ್ತು ಭ್ರೂಣದ ರಕ್ತವು ಒಂದೇ ಗುಂಪಿಗೆ ಸೇರಿದ್ದಾಗ

ಡ. ತಾಯಿ ಮತ್ತು ಭ್ರೂಣದ ರಕ್ತವು ಬೇರೆ ಬೇರೆ ಗುಂಪಿಗೆ ಸೇರಿದ್ದಾಗ

## 1.2.3.2. ವಿಕಾಸದ ಮೇಲೆ ಪರಿಸರದ ಪ್ರಭಾವ

ವ್ಯಕ್ತಿ ಕೇವಲ ಅನುವಂಶೀಯ ಲಕ್ಷಣಗಳನ್ನು ತನ್ನ ಕೋಶೀಯ ಜೀನ್ಸ್‌ಗಳ ಮಟ್ಟದಲ್ಲಿ ಹೊಂದಿದ್ದು ಜೀವತಳೆದರಷ್ಟೇ ಸಾಲದು, ಅದಕ್ಕೆ ಅನುಗುಣವಾದ ವಾತಾವರಣ, ಸನ್ನಿವೇಶ, ಸಂದರ್ಭ ಮತ್ತು ಪರಿಸರವೂ ಕೂಡ ಅಷ್ಟೇ ಮುಖ್ಯ. ವ್ಯಕ್ತಿಯ ವಿಕಾಸಕ್ಕೆ ಅನುವಂಶೀಯತೆ ಕಾರಣವೋ ಅಥವಾ ಪರಿಸರವೋ ಎಂಬ ವಾದ ಸುದೀರ್ಘವಾಗಿ ನಡೆದಿದ್ದು, ವ್ಯಕ್ತಿಯ ವಿಕಾಸಕ್ಕೆ ಇವೆರಡರ ಅಗತ್ಯವೂ ಸರಸಮಾನವಾಗಿ ಇದೆ ಎಂಬ ನಿರ್ಧಾರಕ್ಕೆ ಬರಲಾಗಿದೆ. ಈಗ ಈ ಕೆಳಗಿನ ಚಟುವಟಿಕೆಗಳನ್ನು ಗಮನಿಸೋಣ:

**ಅಭ್ಯಾಸ–V**

ನಿಮ್ಮ ನೆರೆಹೊರೆಯವರಲ್ಲಿ ಒಬ್ಬ ಗರ್ಭಿಣೀ ಸ್ತ್ರೀ ಇದ್ದಾಳೆಂದು ಇಟ್ಟುಕೊಳ್ಳಿ. ಆಗ ಆಕೆಗಾಗಿ ಹಲವಾರು ವಿಶೇಷ ಸಲಹೆ ಸೂಚನೆಗಳನ್ನು ತಿಳಿದಂತಹವರು, ಹಿರಿಯರು ಅಷ್ಟೇ ಏಕೆ ನಮ್ಮ ಸಮೂಹ ಮಾಧ್ಯಮಗಳೂ ಕೂಡ ಈ ವಿಚಾರವಾಗಿ ಅರಿವನ್ನು ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ನಿಮಗೂ ಗೊತ್ತು. ಸಾಮಾನ್ಯವಾಗಿ ಅಲ್ಲಿ ಹೇಳುವ ತಿಳಿವಳಿಕೆಯ ಮಾತುಗಳನ್ನು ಈ ಕೆಳಗಿನಂತೆ ಒಂದೊಂದಾಗಿ ಪಟ್ಟಿ ಮಾಡಿ

| | |
|---|---|
| ಪರಿಸರ | ____________ ಗಳಿಂದ ಮುಕ್ತವಾಗಿರಬೇಕು |
| ಕೇಳುವಿಕೆ | ____________ ಗಳನ್ನು ಹೊಂದಿರಬೇಕು |
| ನೋಡುವಿಕೆ | ____________ ಗಳನ್ನು ಹೊಂದಿರಬೇಕು |
| ಕೆಲಸ–ಕಾರ್ಯಗಳು | ____________ ನೀಡುವಂತಿರಬೇಕು |
| ಸಹವಾಸ ಮತ್ತು ಸಾಹಚರ್ಯೆ | ____________ ನಿಂದ ಧನಾತ್ಮಕವಾಗಿರಬೇಕು |

## ಅಭ್ಯಾಸ– VI

ಇತ್ತೀಚಿನ ಟಿ.ವಿ. ಕಾರ್ಯಕ್ರಮಗಳಲ್ಲಿನ ರಿಯಾಲಿಟಿ ಶೋ ಗಳಲ್ಲಿ ಪುಟ್ಟ ಮಕ್ಕಳ 'ಸ ರಿ ಗ ಮ ಪಾ' ಕಾರ್ಯಕ್ರಮವನ್ನು ನೋಡಿರುತ್ತೀರಿ. ಅಲ್ಲಿ ಅತೀ ಕಿರಿಯ ವಯಸ್ಸಿನ ಅಂದರೆ ಮೂರು ವರ್ಷ ಅಥವಾ ನಾಲ್ಕು ವರ್ಷದ ಮಕ್ಕಳೂ ಅದ್ಭುತವಾಗಿ ಹಾಡುವುದನ್ನು ನೀವು ನೋಡಿರುತ್ತೀರಿ. ಮಗುವಿನ ಆ ಅತ್ಯದ್ಭುತವಾದ ಪ್ರತಿಭೆಗೆ ಕಾರಣವೇನಿರಬಹುದು? ಕೆಳಗಿನಂತೆ ಪಟ್ಟಿ ಮಾಡಿ, ಪರೀಕ್ಷಿಸಿ.

1. ತಂದೆ/ತಾಯಿ ಇವರಲ್ಲಿನ ಸಂಗೀತದ ಪ್ರತಿಭೆ
2. ಮನೆಯಲ್ಲಿನ ಸಂಗೀತದ ವಾತಾವರಣ
3. ಶಾಲೆಯಲ್ಲಿ / ನರ್ಸರಿಯಲ್ಲಿ ದೊರೆತ ಪ್ರೋತ್ಸಾಹಕರ ವಾತಾವರಣ
4. ನೆರೆಹೊರೆಯರಿಂದ ದೊರೆತ ಮೆಚ್ಚುಗೆ/ಮತ್ತು ಪ್ರೋತ್ಸಾಹ
5. ಸಿಕ್ಕಅವಕಾಶಗಳು
6. ಸಮಾಜದಿಂದ ದಕ್ಕಿದ ಹೆಮ್ಮೆಯ ಗುರುತಿಸಿಕೊಳ್ಳುವಿಕೆ

## ಅಭ್ಯಾಸ– VII

ಸಾಮಾನ್ಯವಾಗಿ ಒಂದು ಕುಟುಂಬದ ಮಕ್ಕಳೆಲ್ಲರೂ ಒಂದೇ ರೀತಿಯ ವರ್ತನೆಗಳನ್ನು ನಡೆವಳಿಕೆಯನ್ನು ತೋರುತ್ತಾರೆಂದು ಭಾವಿಸುತ್ತೇವೆ. ಆದರೆ, ಪರೀಕ್ಷಿಸಿ ನೋಡಿ, ಮೊದಲನೆಯ ಮಗುವಿನದು ಒಂದು ರೀತಿಯ ನಡುವಳಿಕೆಯಾದರೆ, ಮನೆಯ ಕಿರಿಯ ಮಗುವಿನದು ಇನ್ನೊಂದು ರೀತಿ. ಹೀಗೆ ನಿಮ್ಮ ನೆರೆಹೊರೆಯವರಲ್ಲಿಯೇ ಇಂತಹ ಉದಾಹರಣೆಗಳನ್ನು ವೀಕ್ಷಿಸಿ, ಮಗುವಿನ ಕ್ರಮಬದ್ಧ ಸ್ಥಾನ, ಕೋಪ, ಅಸಹನೆ ಇತ್ಯಾದಿ ಭಾವನಾತ್ಮಕ ಸ್ಥಿತಿ, ಸ್ವಚ್ಛತೆ ಮತ್ತು ಆರೋಗ್ಯದ ಅಭ್ಯಾಸಗಳು, ನಾಚಿಕೆ, ಧೈರ್ಯ ಇತ್ಯಾದಿ ಸ್ವಭಾವಗಳು – ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೆಳಗೆ ತೋರಿಸಿರುವಂತೆ ಸಂಗ್ರಹಿಸಿ.

| ಕ್ರಮ ಸಂಖ್ಯೆ | ಹೆಸರು | ಮಾಹಿತಿ |
|---|---|---|
| 1. | | |
| 2. | | |
| 3. | | |
| 4. | | |

## ವಿಕಾಸ ಪ್ರಕ್ರಿಯೆ ಮತ್ತು ಪರಿಸರ

ವುಡ್‌ವರ್ಥ್ ಹೇಳುವಂತೆ, "ಪರಿಸರವೆಂದರೆ, ವ್ಯಕ್ತಿಯೊಬ್ಬನ ಜೀವನದ ಪ್ರಾರಂಭಿಕ ಹಂತದಿಂದ ಆತನನ್ನು ಪ್ರಭಾವಿಸಿದ ಹೊರಗಿನ ಪ್ರಪಂಚದ ಎಲ್ಲಾ ಅಂಶಗಳು ಆಗಿರುತ್ತವೆ". "ಪರಿಸರವೆಂದರೆ, ಜೀವಿಗಳ ವಿಕಾಸ ಪ್ರಕ್ರಿಯೆಯನ್ನು ಪ್ರಭಾವಿಸುವ ಎಲ್ಲಾ ಸಂದರ್ಭಗಳು ಮತ್ತು ಅಂಶಗಳ ಒಟ್ಟು ಮೊತ್ತ" ಎಂದು ಡಾ.ಟಿ.ಎನ್.ಕೋಶೋರವರು ವ್ಯಾಖ್ಯಾನಿಸಿದ್ದಾರೆ. ಮನೋವೈಜ್ಞಾನಿಕವಾಗಿ ಹೇಳಬೇಕೆಂದರೆ, ಗರ್ಭಾಂಕುರದಿಂದ ಪ್ರಾರಂಭಿಸಿ ಸಾವಿನವರೆಗೆ ವ್ಯಕ್ತಿಯೊಬ್ಬನನ್ನು ಪ್ರಭಾವಿಸುವ ಎಲ್ಲಾ ಸಮಯ, ಸಂದರ್ಭ ಮತ್ತು ಸನ್ನಿವೇಶಗಳ ಒಟ್ಟು ಸಂಚಿತ ರೂಪವೇ ಪರಿಸರವೆನಿಸಿಕೊಳ್ಳುತ್ತದೆ. ಹಾಗಾಗಿಯೇ, ತಾಯಿಯ ಗರ್ಭದಲ್ಲಿರುವ ಭ್ರೂಣಕ್ಕೆ

ಅದನ್ನು ಸುತ್ತುವರಿದಿರುವ ಆಮ್ನಿಯಾಟಿಕ್ ದ್ರವವೂ ಕೂಡ ಪರಿಸರವಾಗುತ್ತದೆ. ಅದರಂತೆಯೇ, ಕೌಟುಂಬಿಕ ಪರಿಸರ, ಪೋಷಕರ ಧೋರಣೆಗಳು, ಮಗುವಿನ ಹುಟ್ಟಿನ ಕ್ರಮಬದ್ಧ ಸ್ಥಾನ, ಮಗುವಿನ ಲಿಂಗತ್ವ–ಇವೆಲ್ಲವೂ ವಿಕಾಸವನ್ನು ಪ್ರಭಾವಿಸುವುವು. ಇದರ ಜೊತೆಯಲ್ಲಿ, ಸಾಮಾಜಿಕ, ಸಾಂಸ್ಕೃತಿಕ, ಜಾತಿ, ಮತ, ಶಾಲೆ, ನೆರೆಹೊರೆ ಮತ್ತು ಸಮುದಾಯ – ಇವುಗಳೂ ಕೂಡ ಒಟ್ಟಾರೆಯಾಗಿ ಸಮನ್ವಯಗೊಂಡು ವಿಕಾಸವನ್ನು ಪ್ರಭಾವಿಸುತ್ತವೆ. ಈ ವಿಚಾರಗಳನ್ನು ಒಂದೊಂದಾಗಿ ಚರ್ಚಿಸೋಣ:

**ಮಗುವಿನ ಸ್ವಾಸ್ಥ್ಯ ಮತ್ತು ಪೌಷ್ಟಿಕ ಆಹಾರ:** ಬೆಳೆಯುತ್ತಿರುವ ಎಳೆಯ ಶಿಶುವಿಗೆ ತಾಯಿಯ ಹಾಲು ಅಮೃತಕ್ಕೆ ಸಮಾನ. ಇದರಿಂದ ಮಗುವಿಗೆ ಎಲ್ಲ ರೀತಿಯ ಪೌಷ್ಟಿಕ ಆಹಾರ, ಸತ್ವ, ರೋಗನಿರೋಧಕ ಶಕ್ತಿ ಸಿಗುತ್ತವೆ. ಅಪೌಷ್ಟಿಕ ಆಹಾರವಾದಾಗ ಬೆಳವಣಿಗೆಯ ಗತಿಯು ನಿಧಾನವಾಗಿ, ಇತರ ನ್ಯೂನತಾ ರೋಗಗಳು ಉಂಟಾಗುವುವು. ಒಂದು ನಿಗದಿತ ವಯೋಮಾನವನ್ನು ತಲುಪಿದಾಗ ಅಂದರೆ, ಸುಮಾರು 6ರಿಂದ8 ವರ್ಷಗಳಲ್ಲಿ ಈಜುವಿಕೆ, ಸೈಕಲ್ಲು ತುಳಿಯುವಿಕೆ, ಭರತನಾಟ್ಯ ಅಥವಾ ಇತರ ಚಟುವಟಿಕೆಗಳು, ಉದಾಹರಣೆಗೆ, ನೃತ್ಯ, ಯೋಗ ಮತ್ತು ಕ್ರೀಡೆಗಳು ಮಗುವಿನ ಸ್ವಾಸ್ಥ್ಯವನ್ನು ಉಳಿಸಿಕೊಡುತ್ತವೆ.

**ಕುಟುಂಬ:** ಮಗುವು ತನ್ನ ಕುಟುಂಬದ ಸಾಮಾಜಿಕ–ಭಾವನಾತ್ಮಕ ಪರಿಸರದಿಂದ ವಿಕಾಸಗೊಳ್ಳುತ್ತದೆ. ಉದಾಹರಣೆಗೆ ತುಂಬಾ ಶಿಸ್ತು, ಬಿಗುವಿನಿಂದ ಇರುವ ವಾತಾವರಣದಲ್ಲಿ ಬೆಳೆದ ಮಗುವಿಗೂ ಮತ್ತು ಸೌಹಾರ್ದಯುತವಾಗಿ ಪ್ರಜಾಪ್ರಭುತ್ವ ಮೌಲ್ಯಗಳಿಂದ ಕೂಡಿದ ವಾತಾವರಣದಲ್ಲಿ ಬೆಳೆದ ಮಗುವಿಗೂ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಆದರೆ ಇವೆರಡೂ ವ್ಯವಸ್ಥೆಗಳ ನಡುವಿನ ಅಂದರೆ, ಹೊಣೆಯರಿತ ಸ್ವಾತಂತ್ರ್ಯದ ವಾತಾವರಣವು ಉತ್ತಮ ವಿಕಾಸವನ್ನು ಉಂಟುಮಾಡುತ್ತದೆ ಎಂದು ಹೇಳಬಹುದು.

**ಮನೆ ಮತ್ತು ನೆರೆಹೊರೆ:** ಈ ಎರಡು ಅಂಶಗಳು ಮಗುವಿನ ಸಾಮಾಜೀಕರಣವನ್ನು ಪ್ರಾರಂಭದಲ್ಲಿ ತುಸು ಹೆಚ್ಚಾಗಿಯೇ ಪ್ರಭಾವಿಸುತ್ತವೆ. ಹಲವಾರು ಜನಸಂಖ್ಯಾ ಅಧ್ಯಯನದಲ್ಲಿ ನೋಡಿರುವಂತೆ, ಸಹಕಾರ, ಸಂಸ್ಕೃತಿ ಮತ್ತು ಉತ್ತಮ ನಡೆವಳಿಕೆಯನ್ನು ಗ್ರಾಮೀಣ ಪರಿಸರದ ಮಕ್ಕಳು ನಗರದ ಮಕ್ಕಳಿಗಿಂತ ಹೆಚ್ಚಾಗಿಯೇ ಕಲಿತಿರುತ್ತಾರೆ. ಹಾಗಾಗಿ ಹಳ್ಳಿಯ ಮನೆಗಳಲ್ಲಿ ವ್ಯಕ್ತಿ–ವ್ಯಕ್ತಿಗಳ ನಡುವಿನ ಪರಸ್ಪರ ಸಂಬಂಧವು ಅನ್ಯೋನ್ಯವಾಗಿರುತ್ತದೆ. ಕುಟುಂಬವು ಸಮಾಜದ ಮೂಲಘಟಕವಾಗಿದ್ದು, ಇದರ ನಂತರ ನೆರೆಹೊರೆಯ ಪಾತ್ರವು ಕಂಡುಬರುವುದು. ಹಾಗಾಗಿ, ಮನೆ, ನೆರೆಹೊರೆಯವರ ಪಾತ್ರವನ್ನು ಗೌಣವಾಗಿಸದೇ ಗುರತರವಾಗಿಯೇ ಪರಿಗಣಿಸಬೇಕು.

**ಶಾಲೆ:** ಮಗುವು ಶಾಲೆಗೆ ಪ್ರವೇಶಿಸಿದ ನಂತರ ಹಲವಾರು ವಿಚಾರಗಳನ್ನು ತನ್ನದಾಗಿಸಿಕೊಳ್ಳುತ್ತದೆ. ಆದ್ದರಿಂದ ಶಾಲೆಯೊಂದು ಸಾಮಾಜೀಕರಣದ ಪ್ರಬಲ ಅಸ್ತ್ರವೆಂದೇ ಹೇಳಬಹುದು. ಶಾಲೆಯು ಮಗುವಿಗೆ ಜೀವನವನ್ನು ಎದುರಿಸುವ ಶಕ್ತಿಯನ್ನು ನೀಡುತ್ತದೆ. ಪ್ರತಿಯೊಂದಕ್ಕೂ 'ನಾನು, ನನಗೆ', ಎನ್ನುತ್ತಿದ್ದ ಮಗು, ಶಾಲೆಗೆ ಸೇರುತ್ತಿದ್ದಂತೆ 'ನಾವು, ನಮಗೆ' ಎನ್ನುವುದನ್ನು ಕಲಿಯುತ್ತದೆ. ಅದರಿಂದ ಸಂತೋಷವನ್ನು ಪಡುತ್ತದೆ. ಶಾಲಾ ನಿಯಮಗಳು ಮಗುವಿಗೆ ಸ್ವಾತಂತ್ರ್ಯದ ಇತಿಮಿತಿಯನ್ನು ಪರಿಚಯಿಸುತ್ತದೆ. ಭಾಷಾ ಬೆಳವಣಿಗೆ, ಕೌಶಲಗಳ ಬೆಳವಣಿಗೆ ಮತ್ತು ಮೌಲ್ಯಗಳನ್ನೊಳಗೊಂಡ ವಿಕಾಸಪ್ರಕ್ರಿಯೆಯು ಶಾಲೆಯಿಂದ ಪೂರ್ಣತೆಗೆ ಸಾಗುತ್ತದೆ. ಪೌರನೀತಿ, ಇತಿಹಾಸ, ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದುವು ಮಗುವನ್ನು ಒಬ್ಬ ಉತ್ತಮ ಪ್ರಜೆಯನ್ನಾಗಿಸುವಲ್ಲಿ ಸಹಾಯ ಮಾಡುತ್ತವೆ.

**ಗೆಳೆಯರ ಕೂಟ:** ಒಂದೇ ವಯೋಮಾನದ ಗೆಳೆಯರ ಗುಂಪನ್ನು 'ಗೆಳೆಯರ ಕೂಟ' ಎಂದು ಗುರುತಿಸಬಹುದು. ಗೆಳೆಯರ ಕೂಟದಲ್ಲಿ ಮಕ್ಕಳು ಹೆಚ್ಚು ಸಂತೋಷವಾಗಿ ಇರುತ್ತಾರೆ. ಅದು ಕಲಿಕೆಯಾಗಿರಬಹುದು ಅಥವಾ ಕ್ರೀಡೆಯೇ ಆಗಿರಬಹುದು. ತಂಡದ ನಿಯಮಗಳ ಪಾಲನೆ, ಸಹಕಾರ, ಸಹಬಾಳ್ವೆ, ಸಹಿಷ್ಣುತೆ ಇತ್ಯಾದಿ ಗುಣಗಳನ್ನು ಲೀಲಾಜಾಲವಾಗಿ ಕಲಿಯುತ್ತಾರೆ. ತಂಡದೊಡನೆ ಗುರುತಿಸಿಕೊಳ್ಳುವಿಕೆ ಮಗುವಿಗೆ ಆತ್ಮಸಂತೃಪ್ತಿಯನ್ನು ನೀಡುತ್ತದೆ.

**ಸಮೂಹ ಮಾಧ್ಯಮ:** ಇತ್ತೀಚಿನ ದಿನಗಳಲ್ಲಿ ಸಮೂಹ ಮಾಧ್ಯಮದ ಪ್ರಭಾವವಂತೂ ಹೇಳತೀರದಂತಾಗಿದೆ. ಇಂದು ಆಧುನಿಕತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಜಾಗತೀಕರಣ, ಖಾಸಗೀಕರಣ, ಮತ್ತು ಮುಕ್ತವಾತಾವರಣ ಇವೆಲ್ಲವೂ ಮಕ್ಕಳ ವಿಕಾಸ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತಿವೆ. ಜೊತೆಜೊತೆಗೇ ಮಾಧ್ಯಮಗಳಲ್ಲಿನ ಕ್ರೌರ್ಯವು ಮಕ್ಕಳಲ್ಲಿ ಆಕ್ರಮಣಕಾರಿ ವರ್ತನೆಗಳನ್ನು ಪ್ರಚೋದಿಸುತ್ತಿವೆ. ಮಕ್ಕಳಲ್ಲಿ ಹಿಂಸೆಗೆ ತೋರಬೇಕಾದ ಸೂಕ್ಷ್ಮಗ್ರಾಹಿತ್ವವೇ ಹೊರಟುಹೋಗಿದೆ. ಇದೊಂದು ಬಹಳ ಅಪಾಯಕಾರಿ ಬೆಳವಣಿಗೆಯೇ ಸರಿ. ಈ ಕುರಿತು ನೀವು ಇದೇ ಕೋರ್ಸಿನಲ್ಲಿ ಮುಂದೆ ವಿಚಾರಮಾಡಲಿದ್ದೀರಿ.

**ಕ್ರೀಡೆಯ ಪಾತ್ರ:** ಫ್ರೀಡ್‌ರಿಚ್ ಫ್ರೋಬಲ್ ಹೇಳುವಂತೆ, ಆಟಗಳು ಬಾಲ್ಯಹಂತದಲ್ಲಿನ ವಿಕಾಸ ಪ್ರಕ್ರಿಯೆಯ ಗರಿಷ್ಠ ಅಭಿವ್ಯಕ್ತಿಯಾಗಿವೆ. ಆತನು ಹೇಳುವಂತೆ, ಆಟಗಳು ಉತ್ತಮ ಆರೋಗ್ಯವನ್ನು, ಸಾಮಾಜಿಕ ಮತ್ತು ಭಾವನಾತ್ಮಕ ಸ್ವಾಸ್ಥ್ಯವನ್ನು ಪ್ರಚೋದಿಸುತ್ತವೆ. ಬ್ರೌನ್ ಮತ್ತು ಲೋಮ್ಯಾಕ್ಸ್‌ರವರ ಅಧ್ಯಯನದಲ್ಲಿ ಎರಡು ಗುಂಪುಗಳನ್ನು ವಿಶೇಷವಾಗಿ ಪರಿಗಣಿಸಲಾಗಿತ್ತು, ಅವುಗಳಲ್ಲಿ ಒಂದು ಗುಂಪು ಕೊಲೆಪಾತಕಿಗಳದ್ದು, ಮತ್ತೊಂದು ನೊಬೆಲ್ ಪಾರಿತೋಷಕ ವಿಜೇತರದು. ಎರಡೂ ಗುಂಪಿನವರ ವರ್ತನೆಗಳಿಗೆ ಅವರು ಕಳೆದ ಬಾಲ್ಯದ ದಿನಗಳು ಮತ್ತು ಆಟ ಪಾಠಗಳಿಗೆ ದೊರೆತ ಅಥವಾ ದೊರೆಯದ ಅವಕಾಶಗಳು ಕಾರಣವಾಗಿತ್ತು. ಅದೇ ರೀತಿ ಬ್ರೌನ್‌ರವರ ಸಂಶೋಧನೆಯು ಆಟಗಳು ಮಕ್ಕಳ ಸಮಾಜವಿರೋಧಿ ವರ್ತನೆಗಳನ್ನು ಮಾರ್ಪಡಿಸುತ್ತವೆ ಎಂದು ತೋರಿಸಿಕೊಟ್ಟಿದೆ. ಇದನ್ನು ನಾವು ಪೂರ್ವ ಬಾಲ್ಯ ಹಂತದಲ್ಲಿ ನೇರವಾಗಿ ನೋಡಬಹುದು. ಸಾಮಾಜಿಕ, ಸಂಜ್ಞಾನಾತ್ಮಕ, ಭಾವನಾತ್ಮಕ ಮತ್ತು ನೈತಿಕತೆಯ ಸ್ವಾಸ್ಥ್ಯವು ಸಾಮಾಜಿಕ ಸಾಮರ್ಥ್ಯಗಳಿಂದ ಉತ್ತಮವಾಗುವುವು. ಹಾಗೆಯೇ ಸಾಮಾಜಿಕ ಸಾಮರ್ಥ್ಯಗಳು ಕ್ರೀಡೆ ಮತ್ತು ಆಟಗಳಿಂದ ಹೆಚ್ಚುವುವು. ತಂಡ ಆಟಗಳಲ್ಲಿ ಮಕ್ಕಳು ತಮ್ಮ ಕಾರ್ಯಗಳನ್ನು ಯೋಜಿಸಲು, ಕಾರ್ಯಗತಗೊಳಿಸಲು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಮಾತುಕತೆಯಾಡಿ ಸಹಯೋಗದಿಂದ ಕಾರ್ಯವೆಸಗಲು ಕಲಿಯುತ್ತಾರೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಟಿ.ವಿ. ಮುಂದೆಯೋ, ಇಲ್ಲಾ ವೀಡಿಯೋ ಗೇಮ್ಸ್‌ಗಳಲ್ಲೋ ಅಥವಾ ಮೊಬೈಲ್‌ನಲ್ಲಿನ ಕಾರ್ಟೂನ್ ಕಥೆಗಳಲ್ಲೋ ಮುಳುಗಿಹೋಗಿರುತ್ತಾರೆ. ಇದು ಅಷ್ಟು ಒಳ್ಳೆಯ ಸೂಚನೆಯಲ್ಲ. ಮಕ್ಕಳನ್ನು ಬಹು ಬೇಗ ಶಾಲೆಗೆ ನರ್ಸರಿ ಎಂಬ ವ್ಯವಸ್ಥೆಯಿಂದ ಸೇರಿಸುವುದೂ ಕೂಡ ದೋಷವನ್ನೇ ತೋರುತ್ತದೆ. ಆ ಮಕ್ಕಳಿಗೆ ಸಹಜವಾಗಿ ಆಟವಾಡುವ, ಬೇರೆಯವರೊಂದಿಗೆ ಬೆರೆಯುವ ವಾತಾವರಣವೇ ಸೃಷ್ಟಿಯಾಗುವುದಿಲ್ಲ. ಇದರ ಕುರಿತು ಎಲ್ಲಾ ಪೋಷಕರೂ ಗಮನಿಸಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.

1. ಗರ್ಭಾವಸ್ಥೆಯಲ್ಲಿರುವ ಭ್ರೂಣವೊಂದಕ್ಕೆ ಶಾರೀರಿಕ ಪರಿಸರ____________
2. ಮಗುವಿಗೆ ಸಾಮಾಜೀಕರಣ ಪ್ರಾರಂಭವಾಗುವ ಮೊದಲ ಸ್ಥಳ____________
3. ಆಟವು ಮಾನವನ ವಿಕಾಸದ ಉತ್ಕೃಷ್ಟ ಅಭಿವ್ಯಕ್ತಿ ಎಂದು ಹೇಳಿದವನು____________
4. ಮಗುವಿನ ವಿಕಾಸವನ್ನು ಪ್ರಭಾವಿಸುವ ಅಂಶಗಳಲ್ಲಿ ನಿಯಂತ್ರಣಕ್ಕೆ ಸಿಕ್ಕಲಾರದ ಒಂದು ಅಂಶ____________

## 1.2.3.3. ವಿಕಾಸದ ಮೇಲೆ ಆರೋಗ್ಯ ಮತ್ತು ಶಾರೀರಿಕ ಅಂಶಗಳ ಪ್ರಭಾವ

**ಅಭ್ಯಾಸ–VIII**

ಮಾನವ ದೇಹದಲ್ಲಿ ನಿರ್ನಾಳ ಗ್ರಂಥಿಗಳದ್ದು ಅತಿ ದೊಡ್ಡ ಕಾರುಬಾರು ಎಂದೇ ಹೇಳಬಹುದು. ಉದಾಹರಣೆಗೆ, ಬೆಳವಣಿಗೆ, ಲಿಂಗತ್ವ ವಿಕಾಸವಾಗುವಿಕೆ, ಅಪಾಯದ ಸ್ಥಿತಿ ಬಂದಾಗ ಹೊಡಿ–ಅಥವಾ–ಓಡು ಎಂದು ಪ್ರಚೋದನೆ ನೀಡುವ ಅಡ್ರಿನಾಲಿನ್ ಮತ್ತು ನಾರ್‌ಅಡ್ರಿನಾಲಿನ್ ಎಂಬ ನಿರ್ನಾಳ ಗ್ರಂಥಿ, ದೇಹದಲ್ಲಿ ಇನ್ಸುಲಿನ್ ಉತ್ಪಾದನೆ, ಥೈರಾಯ್ಡ್ ಗ್ರಂಥಿಯ ನ್ಯೂನತೆಯಿಂದಾಗುವ ಪ್ರಮಾದ/ತಾಪತ್ರಯಗಳು ಇತ್ಯಾದಿ. ಈ ಕೆಳಗೆ ನೀಡಿರುವ ಒಂದು ಸನ್ನಿವೇಶವನ್ನು ವಿವೇಚಿಸಿ ನೋಡಿ:

ಒಂದು ಸಾಂಸ್ಕೃತಿಕ ಕಾರ್ಯಕ್ರಮದ ಸ್ಪರ್ಧೆ ನಡೆಯುತ್ತಿದೆ. ನಿಮ್ಮ ಪಕ್ಕದಲ್ಲೇ ಕುಳಿತಿರುವ ಒಬ್ಬ ಸ್ಪರ್ಧಾಳುವನ್ನು ನೋಡುತ್ತೀರಿ, ಆತನ ಚಡಪಡಿಕೆಯನ್ನು, ಧಾರಾಳವಾಗಿ ಬೆವರುತ್ತಿರುವುದನ್ನೂ ಗಮನಿಸುತ್ತೀರಿ. ಆಗ ಆತನನ್ನು ಹೀಗೆ ಕೇಳುವಿರಿ.

ನೀವು: ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೀರಾ?

ಆತ: ಹೌದು.

ನೀವು: ನೋಡಿ, ಸ್ಪರ್ಧೆಗಳನ್ನೆಲ್ಲಾ ತುಂಬಾ ಕ್ರೀಡಾಮನೋಭಾವದಿಂದ ತೆಗೆದುಕೊಳ್ಳಬೇಕು, ಸ್ಪರ್ಧೆಯಲ್ಲಿ ಗೆಲ್ಲುವುದು ಸೋಲುವುದು ಅಂತಹ ದೊಡ್ಡ ವಿಚಾರವಾಗಬಾರದು.

ಆತ: ಖಂಡಿತಾ. ನಾನು ಸ್ವಲ್ಪ ಕೂಡ ನರ್ವಸ್ ಆಗಿಲ್ಲ, ಬದಲಿಗೆ ತುಂಬಾ ಆತ್ಮವಿಶ್ವಾಸದಿಂದಲೇ ಇದ್ದೇನೆ.

ಆಗ ನಿಜವಾಗಿಯೂ ನಿಮಗೆ ಆಶ್ಚರ್ಯವಾಗುವುದು ಮತ್ತು ಈ ಕೆಳಗಿನ ಪ್ರಶ್ನೆ ನಿಮ್ಮ ಮನಸ್ಸನ್ನು ಕಾಡುವುದು.

ಆ ವ್ಯಕ್ತಿಯು ಅಷ್ಟೊಂದು ಧಾರಾಳವಾಗಿ ಏಕೆ ಬೆವರುತ್ತಿದ್ದ? ಆತನ ನಡುಗುತ್ತಿದ್ದ ಕೈಗಳು, ನೋಡುವುದಕ್ಕೆ ಏನೇನೂ ಆತ್ಮವಿಶ್ವಾಸವಿಲ್ಲದಂತೆ ಏಕೆ ಕಾಣುತ್ತಿದ್ದ? ಏನು ಇದಕ್ಕೆ ಕಾರಣ?

ಥೈರಾಯ್ಡ್ ಗ್ರಂಥಿಯ ದೋಷ ಇದಕ್ಕೆ ಕಾರಣವಿರಬಹುದು.

ವ್ಯಕ್ತಿಯೊಬ್ಬನ ವಿಕಾಸದಲ್ಲಿ ಆರೋಗ್ಯವು ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ಮಕ್ಕಳು ಅನಾರೋಗ್ಯದಿಂದ ಪದೇ ಪದೇ ನರಳುತ್ತಿದ್ದರೆ, ಅವರ ಬೆಳವಣಿಗೆ ಮತ್ತು ವಿಕಾಸ ಕುಂಠಿತವಾಗುವುದು. ಕೆಲವು ರೋಗಗಳು, ಉದಾಹರಣೆಗೆ, ಹುಟ್ಟಿನಿಂದಲೇ ಬರುವ ಹೃದಯದ ದೋಷಗಳು ಮಗುವಿನ ಚಟುವಟಿಕೆಗಳನ್ನು ನಿಧಾನಗೊಳಿಸುತ್ತವೆ. ಇದರಿಂದಾಗಿ ಮಗುವಿನ ಸಾಮಾಜೀಕರಣವೂ ಧಕ್ಕೆಗೊಳಗಾಗುವುದು. ಇವು ಮಗುವಿನಲ್ಲಿ ಕೀಳರಿಮೆಯನ್ನೋ ಆತ್ಮವಿಶ್ವಾಸದ ಕೊರತೆಯನ್ನೋ ಅಭದ್ರತೆಯ ಭಾವವನ್ನೋ ಬೆಳೆಸಬಹುದು. ರೋಗಗಳು ಮಗುವಿನ ಸುಪ್ತ ಸಾಮರ್ಥ್ಯಗಳನ್ನು ನಿಯಂತ್ರಿಸುತ್ತವೆ. ಕೆಲವು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಅಲರ್ಜಿಯು ತುಂಬಾ ಕಾಡುತ್ತದೆ. ಇದರಿಂದಾಗಿ ಮಕ್ಕಳು ತುಂಬಾ ಸೂಕ್ಷ್ಮವಾಗಿದ್ದು ಬಹಳ ಬೇಗ ಹಲವಾರು ಕಾಯಿಲೆಗಳಿಗೆ ತುತ್ತಾಗುವರು.

ಮಾನವನ ಮನಶ್ಶಾಸ್ತ್ರವು ನಿರ್ನಾಳ ಗ್ರಂಥಿಗಳ ಅಧ್ಯಯನವನ್ನು ಗಂಭೀರವಾಗಿಯೇ ಪರಿಗಣಿಸುತ್ತದೆ. ನಿರ್ನಾಳ ಗ್ರಂಥಿಗಳ ಸ್ರಾವವು ಜೀವಿಯ ಚಯಾಪಚಯ ಕ್ರಿಯೆಗಳನ್ನು ಪ್ರಭಾವಿಸುತ್ತವೆ. ಅಲ್ಲದೆ, ಕೆಲವು ನಿರ್ನಾಳ ಗ್ರಂಥಿಗಳು ಭಾವನೆಗಳು, ಬುದ್ಧಿಶಕ್ತಿ, ನಿರ್ಧಾರ ತೆಗೆದುಕೊಳ್ಳುವ ಕೌಶಲ, ಹಾಗೂ ಕೌಶಲ್ಯಾಧಾರಿತ ಕಾರ್ಯಗಳನ್ನು ಪ್ರಚೋದಿಸುತ್ತವೆ. ನಿರ್ನಾಳಗ್ರಂಥಗಳು ತಮ್ಮ ಸ್ರಾವವನ್ನು ನೇರವಾಗಿ ರಕ್ತಕ್ಕೇ ಸೇರಿಸುತ್ತವೆ. ಇದಕ್ಕಾಗಿ ಯಾವ ನಾಳರಚನೆಯ ಬೆಂಬಲವಿರುವುದಿಲ್ಲ. ಪೀನಿಯಲ್ ಗ್ರಂಥಿ, ಪಿಟ್ಯೂಟರಿ ಗ್ರಂಥಿ, ಪ್ಯಾಂಕ್ರಿಯಸ್, ಅಂಡಾಶಯಗಳು, ಟೆಸ್ಟಿಸ್‌ಗಳು, ಥೈರಾಯ್ಡ್ ಗ್ರಂಥಿ, ಪ್ಯಾರಾಥೈರಾಯ್ಡ್ ಗ್ರಂಥಿ, ಹೈಪೋಥಲಾಮಸ್ ಮತ್ತು ರೀನಲ್ ಗ್ರಂಥಿಗಳು ಮುಖ್ಯವಾದ ನಿರ್ನಾಳ ಗ್ರಂಥಿಗಳಾಗಿವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3**

'ಎ' ಮತ್ತು 'ಬಿ' ಪಟ್ಟಿಯ ಅಂಶಗಳನ್ನು ಸಮರ್ಪಕವಾಗಿ ಜೋಡಿಸಿರಿ

| | | | |
|---|---|---|---|
| 1 | ಬೆಳವಣಿಗೆಯ ಮೇಲೆ ಪ್ರಭಾವಬೀರುವ ಅಂಶ | ಸಾಮಾಜೀಕರಣ | ಅ |
| 2 | ಅನಾರೋಗ್ಯದಿಂದಾಗಿ ಕುಂಠಿತವಾಗುವುದು | ಅಪಹೊಂದಾಣಿಕೆ | ಬ |
| 3 | ಅಲರ್ಜಿಯ ಸಮಸ್ಯೆ | ಆತ್ಮವಿಶ್ವಾಸದ ಕೊರತೆ | ಕ |
| 4 | ಥೈರಾಯ್ಡ್ ಗ್ರಂಥಿಯ ಹೆಚ್ಚುವರಿ ಸ್ರವಿಸುವಿಕೆ | ಭಯವನ್ನು ಹುಟ್ಟುಹಾಕುತ್ತವೆ. | ಡ |
| 5 | ಆಡ್ರಿನಾಲ್ ಗ್ರಂಥಿ | ನಿರ್ನಾಳ ಗ್ರಂಥಿ | ಯ |
| 6 | ಪಿಟ್ಯೂಟರಿ ಗ್ರಂಥಿ | ಸಾಮಾಜಿಕ–ಆರ್ಥಿಕ ಸ್ಥಿತಿ | ಫ |

## 1.2.3.2. ವಿಕಾಸದ ಮೇಲೆ ಆಹಾರ ಮತ್ತು ಆಹಾರಾಭ್ಯಾಸದ ಪ್ರಭಾವ

**ಅಭ್ಯಾಸ–IX**

ಈ ಕೆಳಗಿನ ಮಗುವಿನ ಚಿತ್ರವನ್ನು ಗಮನಿಸಿ ಮತ್ತು ಅದರ ಲಕ್ಷಣಗಳನ್ನು ಪಟ್ಟಿಮಾಡಿ:



ಕ್ವಾಷಿಯೋರ್ಕರ್ ಕಾಯಿಲೆಯಿಂದ ನರಳುತ್ತಿರುವ ಮಗುವಿನ ಚಿತ್ರವಿದು. ಕ್ವಾಷಿಯೋರ್ಕರ್ ಎಂಬ ಕಾಯಿಲೆಯು ತೀವ್ರ ಅಪೌಷ್ಟಿಕತೆಯಿಂದ ಉಂಟಾಗುತ್ತದೆ. ಅದರಲ್ಲೂ ಪ್ರೊಟೀನ್ ಕೊರತೆಯಿಂದ ಆಗುವುದು. ತೀವ್ರವಾದ ಪ್ರೋಟೀನ್ ಕೊರತೆಯು ಮಗುವಿನಲ್ಲಿ ಆಸ್ಮಾಟಿಕ್ ಅಸಮತೋಲನವನ್ನು ಉಂಟುಮಾಡುವುದು ಮತ್ತು ಇದರಿಂದ ಉದರ ಮತ್ತು ಕರುಳುಗಳು ತೊಂದರೆಗೆ ಒಳಗಾಗಿ ಹೊಟ್ಟೆಯು ಉಬ್ಬಿದಂತಿರುತ್ತದೆ. ಇದನ್ನು ಒಡಿಮಾ ಅಥವಾ ನೀರುತುಂಬಿದ ಉದರವೆಂದು ಗುರುತಿಸುತ್ತಾರೆ.

**ಅಭ್ಯಾಸ–X**

ಮೆರಾಸ್ಮಸ್ ಕಾಯಿಲೆಯಿಂದ ನರಳುತ್ತಿರುವ ಮಗುವಿನ ಈ ಚಿತ್ರವನ್ನು ಗಮನಿಸಿ ಮತ್ತು ಅದರ ಲಕ್ಷಣಗಳನ್ನು ಪಟ್ಟಿಮಾಡಿ:



ಮೆರಾಸ್ಮಸ್ ಎಂಬುದು ತೀವ್ರವಾದ ಅಪೌಷ್ಟಿಕತೆಯಿಂದ ಬರುವ ರೋಗ. ಇದು ಮಗುವಿನಲ್ಲಿ ತೀವ್ರವಾದ ಶಕ್ತಿಹೀನತೆಯನ್ನು ಉಂಟುಮಾಡುತ್ತದೆ. ಮಗುವು ನೋಡಲು ಮೂಳೆಚಕ್ಕಳದಂತೆ ಅಂದರೆ ಬರೀ ಅಸ್ತಿಪಂಜರವೇನೋ ಎಂಬಂತೆ ಕಾಣುತ್ತದೆ. ಕ್ವಾಷಿಯೋರ್ಕರ್‌ಗೂ ಮೆರಾಸ್ಮಸ್‌ಗೂ ಬಹಳಷ್ಟು ವ್ಯತ್ಯಾಸಗಳಿವೆ. ಕ್ವಾಷಿಯೋರ್ಕರ್‌ನಲ್ಲಿ ಶಕ್ತಿಯುತವಾದ ಪೋಷಣೆಯಲ್ಲಿಯೂ ಪ್ರೋಟೀನ್ ನ್ಯೂನತೆ ಕಂಡುಬಂದರೆ, ಮೆರಾಸ್ಮಸ್‌ನಲ್ಲಿ ಪ್ರೊಟೀನ್ ಕೊರತೆಯ ಜೊತೆಯಲ್ಲಿ ಏನನ್ನೂ ಮಾಡಲಾಗದಷ್ಟು ನಿಶ್ಯಕ್ತಿಯು ಕಂಡುಬರುವುದು.

ಜೀವಿಗಳು ಶಕ್ತಿಸಂಪಾದನೆಗಾಗಿ ಆಹಾರವನ್ನು ಸೇವಿಸುತ್ತವೆ. ಆಹಾರವು ಜೀವಿಗಳಿಗೆ ಅತ್ಯವಶ್ಯಕವಾದ ಪೋಷಣೆ ಬೆಂಬಲವನ್ನು ನೀಡುತ್ತದೆ. ಆಹಾರದಲ್ಲಿ ಪ್ರೊಟೀನ್, ಕೊಬ್ಬು, ಮೇದಸ್ಸು, ಕಾರ್ಬೋಹೈಡ್ರೇಟ್‌ಗಳು, ಖನಿಜಾಂಶ, ವಿಟಮಿನ್‌ಗಳು ಮತ್ತು ಕೊನೆಯದಾಗಿ ಆದರೆ, ಬಹು ಮುಖ್ಯವಾಗಿ ನೀರು–ಇವುಗಳು ಸೇರಿರುತ್ತವೆ. ದೈಹಿಕ ಬೆಳವಣಿಗೆಗೆ ಮತ್ತು ಇತರೆಲ್ಲಾ ವಿಕಾಸಕ್ಕೂ ಆಹಾರವು ಅತ್ಯಗತ್ಯವಾಗಿ ಬೇಕಾದದ್ದು. ಆದರೆ, ನಮ್ಮ ಆಹಾರಾಭ್ಯಾಸವು ಸಮತೋಲನದಿಂದ ಕೂಡಿರಬೇಕು. ಇದನ್ನೇ ಸಮತೋಲಿತ ಆಹಾರವೆನ್ನುವರು, ಇದರಲ್ಲಿ ಸೂಕ್ಷ್ಮಪೋಷಕಾಂಶಗಳು ಮತ್ತು ಸ್ಥೂಲಪೋಷಕಾಂಶಗಳು ಸೇರಿರುತ್ತವೆ. ಏನೇ ಆಗಲಿ, ಅಪೌಷ್ಟಿಕ ಆಹಾರವು ಒಂದು ಆರೋಗ್ಯಕರವಾದ ಮಗುವನ್ನು ನೀಡಲಾರದು. ಬದಲಿಗೆ ದುರ್ಬಲವಾದ, ಅಶಕ್ತರಾದ ಮಕ್ಕಳು ಅಥವಾ ಮಿತಿಮೀರಿ ತಿನ್ನುವುದರಿಂದಾಗುವ ಸ್ಥೂಲಕಾಯ, ಕ್ವಾಷಿಯೋರ್ಕರ್ ಮತ್ತು ಮೆರಾಸ್ಮಸ್ ಇನ್ನು ಮುಂತಾದ ರೋಗಗಳಿಂದ ಬಳಲುವಂತಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4**

ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.

1. ನಮ್ಮ ಆಹಾರವು ಕಡ್ಡಾಯವಾಗಿ____________
2. ಸಮತೋಲನ ಆಹಾರದಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಅಂಶ____________
3. ಆಹಾರವು ಒಳಗೊಳ್ಳುವ ಪೋಷಕಾಂಶಗಳೆಂದರೆ____________
4. ಪ್ರೋಟೀನ್ ಕೊರತೆಯಿಂದಾಗಿ ಉಂಟಾಗುವ ಖಾಯಿಲೆ____________

## 1.2.4. ಸಾರಾಂಶಿಸೋಣ

- ಮಾನವನ ವಿಕಾಸವೊಂದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದ್ದು, ಹಲವಾರು ಅಂಶಗಳಿಂದ ಪ್ರಭಾವಿಸಲ್ಪಟ್ಟಿರುತ್ತದೆ. ಈ ಹಲವಾರು ಅಂಶಗಳನ್ನು ವಿವಿಧ ಕ್ಷೇತ್ರದಲ್ಲಿ ಅಧ್ಯಯನ ನಡೆಸಲಾಗುವುದು. ಇವುಗಳನ್ನು ವಿಕಾಸ ಪ್ರಕ್ರಿಯೆಯನ್ನು ಪ್ರಭಾವಿಸುವ ಕ್ಷೇತ್ರಗಳೆಂದು ಗುರುತಿಸಲಾಗಿದೆ.
- ಅನುವಂಶೀಯತೆ, ಪರಿಸರಗಳು ಈ ಕ್ಷೇತ್ರಗಳಲ್ಲಿ ಸಿಂಹಪಾಲನ್ನು ಪಡೆದುಕೊಳ್ಳುತ್ತವೆ. ಇವೆರಡನ್ನು ಹೊರತುಪಡಿಸಿದರೆ, ಆರೋಗ್ಯ, ಶಾರೀರಿಕ ಅಂಶಗಳು, ಮಗುವು ಹುಟ್ಟಿದ ರೀತಿ ಮತ್ತು ಕುಟುಂಬದಲ್ಲಿ ಅದು ಎಷ್ಟನೆಯ ಮಗುವೆಂಬ ಕ್ರಮಬದ್ಧ ಸ್ಥಾನ, ಹಾಗೂ ಪೋಷಕಾಂಶಗಳನ್ನು ವಿಕಾಸ ಪ್ರಕ್ರಿಯೆಯನ್ನು ಪ್ರಭಾವಿಸುವ ಕ್ಷೇತ್ರಗಳೆಂದು ಗುರುತಿಸಬಹುದು.
- ಧರ್ಮ, ಸಂಸ್ಕೃತಿ, ಸಾಮಾಜಿಕ–ಆರ್ಥಿಕ ಸ್ಥಿತಿ, ಉದ್ಯೋಗ, ಮಗುವು ವಾಸಿಸುತ್ತಿರುವ ಭೌಗೋಳಿಕ ಪ್ರದೇಶ ಇತ್ಯಾದಿ ಕ್ಷೇತ್ರಗಳೂ ವಿಕಾಸ ಪ್ರಕ್ರಿಯೆಯನ್ನು ಪ್ರಭಾವಿಸುವ ಕ್ಷೇತ್ರಗಳೆಂದು ಗುರುತಿಸಬಹುದು.
- ಪ್ರಕೃತಿ ಅಂಶಗಳನ್ನು ಅನುವಂಶೀಯತೆಯೊಂದಿಗೆ ಪರಿಗಣಿಸಲಾಗಿದ್ದು ಈ ಅಂಶಗಳು ಪೂರ್ವನಿಯೋಜಿತವಾದುವು ಎಂದು ಕಂಡುಕೊಳ್ಳಲಾಗಿದೆ.
- ಎಪಿಜಿಅಆರ್ ತಪಾಸಣೆಯನ್ನು ಸಾಮಾನ್ಯವಾಗಿ "ಬೇಬೀ ಚೆಕ್" ಎಂದು ಹೇಳುವರು. ಮಗುವಿನ

ಪೋಷಣೆ/ಆಹಾರಭ್ಯಾಸ, ಕುಟುಂಬ, ಮನೆ ಮತ್ತು ನೆರೆಹೊರೆ, ಶಾಲೆ, ಸಹಪಾಠಿಗಳು, ಸಮೂಹ ಮಾಧ್ಯಮ ಮತ್ತು ಕ್ರೀಡೆ, ಆಟಗಳು – ಇವು ಮಗುವಿನ ವಿಕಾಸದಲ್ಲಿ ಪ್ರಮುಖವಾದವುಗಳು ಎಂದು ಗುರುತಿಸಲಾಗಿದೆ.

## 1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕ 2. ಅ 3. ಡ 4. ಕ 5. ಅ 6. ಬ 7. ಬ 8. ಡ 9. ಕ 10. ಬ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಆಮ್ನಿಯಾಟಿಕ್ ದ್ರವ ಮತ್ತು ಗರ್ಭಕೋಶ, 2.ಕುಟುಂಬ, 3.ಫ್ರೀಡ್‌ರಿಚ್ ಫ್ರೋಬಲ್, 4, ಸಮೂಹ ಮಾಧ್ಯಮ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1–ಫ, 2–ಅ, 3–ಬ, 4–ಕ, 5–ಡ, 6–ಯ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4**

1. ಸಮತೋಲನದಿಂದ ಕೂಡಿರಬೇಕು. 2. ಪ್ರೋಟೀನ್, ಕೊಬ್ಬು, ಮೇದಸ್ಸು, ಕಾರ್ಬೋಹೈಡ್ರೇಟ್‌ಗಳು, ಖನಿಜಾಂಶಗಳು, ವಿಟಮಿನ್ ಮತ್ತು ನೀರು 3. ಸೂಕ್ಷ್ಮ ಪೋಷಕಾಂಶಗಳು ಮತ್ತು ಸ್ಥೂಲಪೋಷಕಾಂಶಗಳು. 4. ಕ್ವಾಷಿಯೋರ್ಕರ್.

## 1.2.7. ಪರಾಮರ್ಶನ ಸೂಚಿ


1. https://www.classroom.kidshealth.org/9to12/body/system/endocrine
2. https://www.old.nios.ac.in/secpsy.cour/unit/ii
3. Elizabeth Hurlock (32nd reprint 2016) Child Development Sixth Edition Mc Graw Hill Education Indian edition
4. Laura.E.Berk Childhood Development Ninth edition pearson education Inc.(2013, 1017)
5. Chauhan S.S Advanced Educational Psychology Vikas Publishing House Pvt.Ltd. (2010)
6. Dandapani S. Advanced Educational Psychology (2005) Anmol Publicationc Delhi
7. Nataraj V. Vikasa manovignana (2010) Srinivas Prakashana Mysore
8. Dr.Suneetha.C.N Understanding the Learner and the learning Process Shruthiloka Prakashans 2011
9. Dr.Suneetha.C.N kalike mattu kalikarthi Educational Psychology Shruthiloka Prakashans 2014
10. John W.Santrock University of Texas at Dallas – Adolescence TATA McGraw-Hill Edition (2011)


*********************

# ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ

## ಘಟಕ 3 : ವಿಕಾಸದ ಅರ್ಥ ಹಾಗೂ ವಿಕಾಸದ ಸಾರ್ವತ್ರಿಕ ತತ್ವಗಳು ಮತ್ತು ಕಲಿಕೆ ಮತ್ತು ವಿಕಾಸದ ನಡುವಿನ ಸಂಬಂಧ

**ಘಟಕದ ರಚನೆ**


1.3.1. ಕಲಿಕಾ ಉದ್ದೇಶಗಳು

1.3.2. ಪೀಠಿಕೆ

1.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.3.3.1. ವಿಕಾಸದ ಕ್ರಮಬದ್ಧ ಶ್ರೇಣಿಯ ಅರ್ಥ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

1.3.3.2. ವಿಕಾಸದ ಸಾರ್ವತ್ರಿಕ ತತ್ವಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

1.3.3.3. ವಿಕಾಸ ಮತ್ತು ಕಲಿಕೆಯ ನಡುವಿನ ಸಂಬಂಧ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

1.3.4. ಸಾರಾಂಶಿಸೋಣ

1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1, 2 ಮತ್ತು 3

1.3.6. ಘಟಕಾಂತ್ಯ ಅಭ್ಯಾಸಗಳು

1.3.7. ಪರಾಮರ್ಶನ ಸೂಚಿ


## 1.3.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

- ವಿಕಾಸದಲ್ಲಿ ಕ್ರಮಬದ್ಧ ಶ್ರೇಣಿ ಎಂಬುದರ ಅರ್ಥವನ್ನು ವಿವರಿಸುವರು;
- ವಿಕಾಸದ ಸಾರ್ವತ್ರಿಕ ತತ್ವಗಳನ್ನು ನಮೂದಿಸುವರು;
- ವಿಕಾಸದ ಸಾರ್ವತ್ರಿಕ ತತ್ವಗಳಿಗೆ ಉದಾಹರಣೆ ಮತ್ತು ನಿದರ್ಶನಗಳನ್ನು ನೀಡುವರು;
- ವಿಕಾಸ ಮತ್ತು ಕಲಿಕೆಯ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸುವರು;
- ಕಲಿಕಾ ಸಿದ್ಧತೆಯನ್ನು ನಿರ್ಧರಿಸುವ ಅಂಶಗಳನ್ನು ಗುರುತಿಸುವರು; ಮತ್ತು
- ವಿಕಾಸದ ತತ್ವಗಳಿಗೆ ತಾರ್ಕಿಕ ನಿಲುವಿನ ಸಮರ್ಥನೆಯನ್ನು ನೀಡುವರು.

## 1.3.2. ಪೀಠಿಕೆ

ಪ್ರಕೃತಿ ಬಹು ಸುಂದರವಾದ ಆದರೆ ರಹಸ್ಯಮಯವಾದ ಕ್ಷೇತ್ರ. ವಿಜ್ಞಾನವು ಇಂತಹ ರಹಸ್ಯಗಳನ್ನು ಬಿಡಿಸಲು ಪ್ರಯತ್ನಿಸುತ್ತಿದೆ. ಇನ್ನೂ ಬಿಡಿಸಬೇಕಿರುವ ರಹಸ್ಯಗಳು ಬಹಳಷ್ಟಿವೆ. ಉದಾಹರಣೆಗೆ, ಮಾನವನ ವಿಕಾಸವನ್ನೇ ತೆಗೆದುಕೊಳ್ಳಿ, ಅದು ಎಷ್ಟು ಕ್ರಮಬದ್ಧವಾದ, ವ್ಯವಸ್ಥಿತವಾದ ಮತ್ತು ಸುಂದರವಾದ ವಿನ್ಯಾಸವನ್ನು ಹೊಂದಿದೆ ಎಂದರೆ, ಒಂದು ಕ್ಷಣ ನಮ್ಮ ಮಾತನ್ನೇ ಮರೆಯುವಷ್ಟು! ಮಾನವನಾದ ಮೇಲೆ ಪ್ರತಿಯೊಬ್ಬರೂ ವಿಕಾಸದ ಕೆಲವು ನಿಗದಿತ ಹಂತಗಳನ್ನು ದಾಟಲೇ ಬೇಕು, ಇದು ಒಂದು ಸಾರ್ವತ್ರಿಕವಾದ ತತ್ವ. ದೇಶ, ಭಾಷೆ, ಜಾತಿ, ಮತ ಮತ್ತು ವರ್ಣ ಇವು ಯಾವುದನ್ನೂ ಲೆಕ್ಕಿಸದೆ, ಎಲ್ಲರಿಗೂ ಸಾರ್ವತ್ರಿಕವಾಗಿ ಅನ್ವಯವಾಗುವ ವಿಕಾಸದ ನಿಯಮಗಳನ್ನು ಈ ಘಟಕದಲ್ಲಿ ನೀವು ಅಭ್ಯಾಸ ಮಾಡಲಿದ್ದೀರಿ.

## 1.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು


### 1.3.3.1. ವಿಕಾಸದ ಕ್ರಮಬದ್ಧ ಶ್ರೇಣಿಯ ಅರ್ಥ

**ಅಭ್ಯಾಸ – I**

ತುಂಬಾ ಕಾಲದ ನಂತರ ನನ್ನ ಹುಟ್ಟೂರಿಗೆ ಹೋಗುವ ಅವಕಾಶ ಒದಗಿ ಬಂತು. ಅಲ್ಲೇ ನನ್ನ ಬಾಲ್ಯದ ದಿನಗಳನ್ನು ನಾನು ಕಳೆದದ್ದು. ಅಲ್ಲಿ ಒಂದು ರೀತಿಯ ಕುತೂಹಲವೇ ಎದುರಾಯಿತು ಎಂದುಕೊಳ್ಳಿ. ನಾನು ನಮ್ಮ ನೆರೆಹೊರೆಯವರನ್ನು ವಿಶೇಷತೆಯಿಂದ ಗಮನಿಸಲಾರಂಭಿಸಿದೆ. ಮತ್ತೆ ನಾನು ಓದಿದ ಪ್ರಾಥಮಿಕ ಶಾಲೆಯನ್ನು ನೋಡಿದೆ. ಅಬ್ಬಾ.. ಏನೆಲ್ಲಾ ಬದಲಾವಣೆಗಳು ಅಂತೀರಿ.. ಆ ಶಾಲೆಯ ತರಗತಿಯ ಕೋಣೆಗಳು ಸಂಪೂರ್ಣವಾಗಿ ಬದಲಾಗಿ, ಸುಸಜ್ಜಿತವಾಗಿದ್ದುವು. ಮಕ್ಕಳೆಲ್ಲಾ ಸಾಲಾಗಿ ಕೂರದೇ, ಒಂದೊಂದು ಚಿಕ್ಕ ಚಿಕ್ಕ ಗುಂಪಾಗಿ ಕಲೆತು ಸಂತೋಷದಿಂದ ಆಟ ಪಾಠಗಳಲ್ಲಿ ನಲಿಯುತ್ತಿದ್ದರು. ಮತ್ತೆ, ಆ ಕೊಠಡಿಗಳಲ್ಲಿ ಕಂಪ್ಯೂಟರುಗಳು ಸ್ಮಾರ್ಟ್‌ಬೋರ್ಡ್‌ಗಳು ಎಲ್ಲಾ ಇದ್ದವು. ನಾನು ಅವುಗಳೆಲ್ಲವನ್ನೂ ಆಶ್ಚರ್ಯದಿಂದ ನೋಡತೊಡಗಿದೆ! ನಿಮಗೆ ಈ ರೀತಿಯ ಅನುಭವಗಳಾಗಿವೆಯೇ? ಗುರುತಿಸಲು ಪ್ರಯತ್ನಿಸಿ. ಬದಲಾವಣೆ ಬದುಕಿನ ನಿಯಮ.

**ಅಭ್ಯಾಸ–II**

ಕೆಳಗಿನ ಚಿತ್ರವನ್ನು ಗಮನಿಸಿ:



ಚಿತ್ರವನ್ನು ನೋಡಿದ ಕೂಡಲೇ ಯಾವ ಅಂಶವು ಎದ್ದು ಕಾಣಿಸುತ್ತಿದೆ?

ಅ. ಒಂದು ಚಿಕ್ಕ ನಿದ್ದೆ ಮಾಡುತ್ತಿರುವ ದೇಹ

ಬ. ಒಂದು ಪ್ರಶ್ನಾರ್ಥಕ ಚಿಹ್ನೆಯಂತೆ ಕಾಣಿಸುತ್ತಿರುವ ಸಣ್ಣ ಮಗು

ಕ. ಕ್ರಮೇಣ ಏರಿಕೆಯ ಕ್ರಮದಲ್ಲಿ ದೇಹದ ಗಾತ್ರದಲ್ಲಾದ ಹೆಚ್ಚಳ


ಡ. ದೇಹದ ಇತರೆಲ್ಲಾ ಭಾಗಕ್ಕಿಂತ ದೊಡ್ಡದಾಗಿ ಕಾಣುವ ತಲೆಯ ಭಾಗ

ಉತ್ತರ: ____________

ಪ್ರಸವ–ಪೂರ್ವದಲ್ಲಿ ಬದಲಾಗುತ್ತಿರುವ ಭ್ರೂಣದ ಆಕಾರವಿದು.

**ಅಭ್ಯಾಸ – III**

ಕೆಳಗಿನ ಚಿತ್ರವನ್ನು ಗಮನಿಸಿ



ಮೇಲಿನ ಚಿತ್ರವನ್ನು ಗಮನಿಸಿ, ಅಲ್ಲಿ ಕಂಡುಬರುತ್ತಿರುವ ಬದಲಾವಣೆಗಳನ್ನು ಹೋಲಿಸಿ ನೋಡಿ ಉತ್ತರಿಸಿ

1. ಗಾತ್ರದಲ್ಲಿ ಬದಲಾವಣೆ
2. ದೇಹದ ಅನುಪಾತದಲ್ಲಿ ಬದಲಾವಣೆ
3. ಹಳೆಯ ಲಕ್ಷಣಗಳು ಮಾಯವಾಗುವಿಕೆ
4. ಹೊಸ ಲಕ್ಷಣಗಳ ಸೇರ್ಪಡೆ

ಉತ್ತರ: ------

ಹುಟ್ಟಿದ ಮೇಲೆ ಪ್ರತಿಯೊಬ್ಬ ಜೀವಿಯೂ ಬೆಳವಣಿಗೆ ಮತ್ತು ವಿಕಾಸ ಪ್ರಕ್ರಿಯೆಯ ದಾರಿಯನ್ನು ಸವೆಸಲೇಬೇಕು. ಆದರೆ, ಕೆಲವರು ಶೀಘ್ರವಾಗಿ ಮತ್ತು ಕೆಲವರು ನಿಧಾನವಾಗಿ ಈ ವಿಕಾಸದ ಹಂತಗಳನ್ನು ದಾಟುವರು. ವಿಕಾಸವೆಂಬುದು ಹಂತ ಹಂತಗಳಲ್ಲಿ ಘಟಿಸುವ ಪ್ರಕ್ರಿಯೆ. ಇವುಗಳನ್ನು ವಿಕಾಸದ ಹಂತಗಳೆಂದು ಗುರುತಿಸಿದ್ದಾರೆ. ವಿಕಾಸದ ಪ್ರಕ್ರಿಯೆಯು ಕೆಲವು ಸಾರ್ವತ್ರಿಕ ತತ್ವಗಳಿಗನುಸಾರವಾಗಿ ನಡೆಯುತ್ತದೆ. ಆ ತತ್ವಗಳನ್ನು ಕೆಳಗೆ ಚರ್ಚಿಸಲಾಗಿದೆ:

**1. ಕ್ರಮಬದ್ಧ ಶ್ರೇಣಿ ತತ್ವ :** ವಿಕಾಸಾತ್ಮಕ ಪ್ರಕ್ರಿಯೆಯು ತನ್ನದೇ ಆದ ವಿನ್ಯಾಸವನ್ನು ಹೊಂದಿದೆ. ವಿಕಾಸದ ಪ್ರತಿಯೊಂದು ಹಂತಕ್ಕೂ ಅದಕ್ಕೆ ಹೊಂದಿಕೊಂಡ ವರ್ತನೆಗಳಿರುತ್ತವೆ. ವಿಕಾಸದ ಹಂತಗಳು ಏರಿಕೆಯ ಕ್ರಮದಲ್ಲಿ ನಡೆಯುತ್ತವಲ್ಲದೆ, ಅದಕ್ಕೆ ಹೊಂದಿಕೊಂಡ ವರ್ತನಾ ಪರಿವರ್ತನೆಗಳೂ ಗೋಚರಕ್ಕೆ ಬರುತ್ತವೆ. ಯಾವುದೇ ಹಂತವೂ ಪುನರಾವರ್ತನೆಯಾಗುವುದಿಲ್ಲ. ಬಾಲ್ಯವು ಕಳೆದ ಮೇಲೆ ಹದಿಹರೆಯ ಬರುವುದೇ ವಿನಃ ಮತ್ತೆ ಬಾಲ್ಯ ಬರುವುದಿಲ್ಲ.


ವರ ಕವಿ ಬೇಂದ್ರೆಯವರ ಮಾತು ನೆನಪಿಸಿಕೊಳ್ಳಿ:

"ವರುಷಕೊಂದು ಹೊಸತು ಚೆಲುವು

ಹರಷಕೊಂದು ಹೊಸತು ಒಲವು ಅಖಿಲ ಜೀವ ಜಾತಕೆ

ಒಂದೇ ... ನೆ ಹರೆಯ ನಮಗದಷ್ಟೇ ಏತಕೆ?"!

ಕ್ರಮ ... ುಗಳಲ್ಲಿ ವಿವರಿಸಬಹುದು. ಕೆಳಗಿನ ಚಿತ್ರವನ್ನು ಗಮನಿಸಿ:





X – ಶಿರದಿಂದ ಪಾದಾಭಿಮುಖ

Y – ಕೇಂದ್ರದಿಂದ ಪರಿಧಿಯವರೆಗೆ

Z – ಚಲನೆಯ ತತ್ವ

**ಎ) ಶಿರದಿಂದ ಪಾದಾಭಿಮುಖ ತತ್ವ ಅಥವಾ ಶಿರೋಪಾದಾಭಿಮುಖ ತತ್ವ:**





ವಿಕಾಸದ ಗತಿ ಮತ್ತು ವಿನ್ಯಾಸವು ಮೊದಲು ತಲೆಯ ಭಾಗದಿಂದ ಪ್ರಾರಂಭವಾಗಿ ನಂತರದಲ್ಲಿ ಕ್ರಮೇಣ ಕಾಲು, ಪಾದಗಳ ವಿಕಾಸವು ಕಂಡುಬರುವುದು. ಅಂದರೆ ಲಂಬವಾಗಿ ಈ ಪ್ರಕ್ರಿಯೆಯು ನಡೆಯುವುದು. ಆದ್ದರಿಂದಲೇ ಮಗುವು ಮೊದಲು ಕತ್ತನ್ನು ನಿಯಂತ್ರಿಸಲು ಕಲಿಯುತ್ತದೆ. ಮಗುವಿಗೆ 3 ತಿಂಗಳಾಗುತ್ತಿದ್ದಂತೆ, ಕತ್ತು ನಿಂತು ಸ್ವಲ್ಪ ಆಚೆ ಈಚೆ ನೋಡಲು ಪ್ರಯತ್ನಿಸುತ್ತದೆ ಮತ್ತು ಮನೆಯಲ್ಲಿ ದೊಡ್ಡವರು ಅದು ಸಹಜವೆಂದು ಸಂತೋಷಪಡುತ್ತಾರೆ. ಅದೇ ರೀತಿ ಕೈಗಳ ವಿಕಾಸವಾದ ಮೇಲೆ ಕಾಲಿನ ವಿಕಾಸವು ಕಂಡುಬರುವುದು. ಹಾಗಾಗಿ ಮೊದಲು ಕೈಗಳನ್ನು ಮೇಲೆ ಕೆಳಗೆ ಆಡಿಸುವುದು, ಬಡಿಯುವುದನ್ನು ಮಗುವು ಮಾಡುತ್ತದೆ, ನಂತರ ಕ್ರಮೇಣ ಕಾಲುಗಳು ಬಲಗೊಂಡು, ಅಂಬೆಗಾಲು, ತಪ್ಪುಹೆಜ್ಜೆಗಳು ನಂತರ ನಡಿಗೆ ಹೀಗೆ ಅದರ ವರ್ತನೆಯಲ್ಲಿ ಬದಲಾವಣೆಯನ್ನು ತೋರುತ್ತದೆ. ಹುಟ್ಟಿದ ನಂತರವೂ ಭ್ರೂಣಾವಸ್ಥೆಯಲ್ಲಿ ನಾವು ಕಂಡಂತೆ, ತಲೆಯ ಭಾಗವೇ ಮೊದಲು ವಿಕಾಸವಾಗುವುದು. ನಂತರ ದೇಹದ ಕೆಳಭಾಗವು ವಿಕಾಸಗೊಳ್ಳುವುದು. ಶಿರೋಪಾದಾಭಿಮುಖ ಬೆಳವಣಿಗೆಯ ತತ್ವದ ಹೆಸರೇ ಹೇಳುವಂತೆ, ದೇಹದ ರಚನೆ ಮತ್ತು ಕಾರ್ಯದಲ್ಲಿನ ಹೆಚ್ಚಳವು ಮೊದಲು ತಲೆ ಭಾಗದಲ್ಲಿ, ನಂತರ ಎದೆಯ ಭಾಗದಲ್ಲಿ ಮತ್ತು ತದನಂತರ ಕಾಲುಗಳ ಭಾಗದಲ್ಲಿ ಕಂಡುಬರುವುದು.

**ಬಿ) ಕೇಂದ್ರದಿಂದ ಪರಿಧಿಯವರೆಗಿನ ತತ್ವ:** ವಿಕಾಸದಲ್ಲಿ ಇದು ಇನ್ನೊಂದು ರೀತಿಯ ಪ್ರವೃತ್ತಿಯಾಗಿದೆ. ದೇಹದ ಕೇಂದ್ರವೆಂದರೆ, ಎದೆಯ ಗೂಡಿನ ಮಧ್ಯಭಾಗವೆಂದು ತೆಗೆದುಕೊಳ್ಳಬಹುದು. ಹಾಗೆಯೇ ಪರಿಧಿ ಎಂದರೆ, ದೇಹದ ಹೊರ ಭಾಗದೆಡೆಗೆ, ಕೈಕಾಲುಗಳ ಬೆರಳುಗಳು, ಬೆರಳ ತುದಿಗಳು ಎಂದು ಪರಿಗಣಿಸಬಹುದು. ಬೆಳೆಯುತ್ತಿರುವ ಶಿಶುವೊಂದನ್ನು ಗಮನಿಸಿದರೆ, ನಿಮಗಿದು ಚೆನ್ನಾಗಿಯೇ ಗೋಚರವಾಗುವುದು. 6 ತಿಂಗಳೊಳಗಿನ ಶಿಶುವು ಏನನ್ನಾದರೂ ಹಿಡಿಯಲು ಪ್ರಯತ್ನಿಸುವಾಗ ತನ್ನ, ಭುಜ, ತೋಳು ಮತ್ತು ಇಡೀ ಕೈ ಭಾಗವನ್ನೆಲ್ಲಾ ಬಳಸಲು ಯತ್ನಿಸುವುದು. ಅಂದರೆ, ಅಂಗೈ ಮತ್ತು ಬೆರಳುಗಳನ್ನು ಬೆಳೆಸಿ ಹಿಡಿಯುವಷ್ಟು ಸೂಕ್ಷ್ಮತೆ ಶಿಶುವಿನಲ್ಲಿ ಇನ್ನೂ ವಿಕಾಸವಾಗಿರುವುದಿಲ್ಲ. ಇದು ಕ್ರಮೇಣ ನಂತರದಲ್ಲಿ ಸಹಜವಾಗಿ ಆಗುವುದು. ಕೈಕಾಲುಗಳಲ್ಲಿನ ಕಾರ್ಯಕ್ಷಮತೆಯು ವಿಕಾಸವಾಗುವಾಗ ಮೊದಲು ಇಡೀ ಭಾಗಗಳೇ ತೊಡಗಿಕೊಳ್ಳುವುದನ್ನೂ ನಂತರದಲ್ಲಿ


ಅತೀ ಸೂಕ್ಷ್ಮವಾಗಿ ಭಾಗಗಳ ತುದಿಗಳು ಸೂಕ್ಷ್ಮಾತಿಸೂಕ್ಷ್ಮವಾದ ಹಿಡಿತ ಮತ್ತು ಕಾರ್ಯಕೌಶಲಗಳಲ್ಲಿ ತೊಡಗಿಕೊಳ್ಳುವುದನ್ನು ಕಾಣುತ್ತೇವೆ.

**ಶಿರೋಪಾದಾಭಿಮುಖ – ಕೇಂದ್ರದಿಂದ ಪರಿಧಿವರೆಗಿನ ವಿಕಾಸ ತತ್ವ:**



ಮೇಲೆ ಹೇಳಿದ ಎರಡು ನಿಯಮಗಳ ಪ್ರಕಾರ, ಬೆಳವಣಿಗೆಯು ದೇಹದ ಕೇಂದ್ರಭಾಗದಿಂದ ಪರಿಧಿಯವರೆಗೆ ಹಾಗೂ ಶಿರದಿಂದ ಪಾದದವರೆಗಿನ ಬೆಳವಣಿಗೆ – ಹೀಗೆ ಒಟ್ಟಿಗೇ ಪ್ರಾರಂಭವಾದರೂ ವಿವಿಧ ದಿಕ್ಕಿನೆಡೆಗೆ ಆದರೆ ಕ್ರಮಬದ್ಧವಾಗಿ ವಿಕಾಸ ಪ್ರಕ್ರಿಯೆಯು ನಡೆಯುವುದನ್ನು ನಾವು ಕಾಣಬಹುದಾಗಿದೆ. ಕೇಂದ್ರದಿಂದ ಪರಿಧಿಯವರೆಗಿನ ಬೆಳವಣಿಗೆಯಲ್ಲಿ ಮಾನವನ ದೇಹದ ದ್ವಿಮುಖ–ಸಮ್ಮಿತಿಯನ್ನು ಸ್ಪಷ್ಟವಾಗಿ ನೋಡಬಹುದಾಗಿದೆ. ಅಂದರೆ ದೇಹದ ಎಡ ಮತ್ತು ಬಲಭಾಗಗಳು ಸರ್ವಸಮವಾದ ಮಿತಿಯನ್ನು ತೋರುವುದು, ಇದಕ್ಕೆ ದ್ವಿಮುಖ ಸಮ್ಮಿತಿಯೆಂದು ಹೇಳುವರು.

**ಸಿ) ದೈಹಿಕ ಚಲನೆ:** ಶಿಶು ಹಂತದಲ್ಲಿಯೇ ಚಲನಾ ಪ್ರಕ್ರಿಯೆಯು ಪ್ರಾರಂಭವಾಗುವುದು. ಆದರೂ ಇಲ್ಲಿಯೂ ಒಂದು ಕ್ರಮಬದ್ಧಶ್ರೇಣಿಯನ್ನು ನೋಡಬಹುದಾಗಿದೆ. ಉದಾಹರಣೆಗೆ, ಶಿಶುವು ಮೊದಲು ತೆವಳುವುದನ್ನು, ಅಂಬೆಗಾಲಿಡುವುದನ್ನು ನಂತರ ತಪ್ಪುತಪ್ಪು ಹೆಜ್ಜೆಗಳನ್ನಿಡುತ್ತಾ ಸರಿಯಾಗಿ ನಿಂತು ನಡೆಯುವುದನ್ನು ಕಲಿಯತ್ತದೆ. ದೈಹಿಕ ಚಲನಾ ತತ್ವವನ್ನು ಕೆಳಗಿನ ಚಿತ್ರದಲ್ಲಿ ಗಮನಿಸಿ.



**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.

1. ಶಿರೋಪಾದಾಭಿಮುಖ ತತ್ವವೆಂದರೆ____________
2. ಕೇಂದ್ರದಿಂದ ಪರಿಧಿಯವರೆಗಿನ ತತ್ವ ಎಂದರೆ____________
3. ವಿಕಾಸ ಪ್ರಕ್ರಿಯೆಯನ್ನು ಪ್ರಭಾವಿಸುವುದು____________
4. ವಿಕಾಸ ಪ್ರಕ್ರಿಯೆಯಲ್ಲಿ ಮಗುವು ಮೊದಲು ತನ್ನ ಕೈಗಳ ಮೇಲಿನ ಹಿಡಿತವನ್ನು ಸಾಧಿಸಿ ನಂತರ ಕಾಲುಗಳ ನಿಯಂತ್ರಣವನ್ನು ಕಲಿಯುವುದು. ಈ ತತ್ವದ ಹೆಸರು____________
5. ಶಿಶುವೊಂದು ಏನನ್ನಾದರೂ ಹಿಡಿಯಲೆತ್ನಿಸುವಾಗ ತನ್ನ ಇಡೀ ಕೈ–ತೋಳು–ಭುಜವನ್ನೆಲ್ಲಾ ಬಳಸುವುದು ಆದರೆ ಕ್ರಮೇಣ ನಂತರದಲ್ಲಿ ಮುಷ್ಟಿಹಿಡಿತವನ್ನೂ ಹಾಗು ಬೆರಳುಗಳ ಮೂಲಕ ಸೂಕ್ಷ್ಮ ಹಿಡಿತವನ್ನು

ಕಲಿಯುವುದು.ಇದನ್ನು ಹೆಸರಿಸಿರುವ ರೀತಿ____________

6. ಶಿಶುವು ತನ್ನ ಮಣಿಗಂಟು,ಹಸ್ತ, ಬೆರಳುಗಳನ್ನು ಬಳಸಿ ವಸ್ತುವನ್ನು ಹಿಡಿಯಲು ಕಲಿಯುವ ಮೊದಲು ತನ್ನ ಭುಜ ಮತ್ತು ಮೊಳಕೈಯನ್ನು ಬಳಸುತ್ತದೆ, ಇದಕ್ಕೆ ಕಾರಣ____________
7. ಶಿಶು ಹಂತದಲ್ಲಿ ಚಲನೆಯ ಕ್ರಮ____________
8. ವಿಕಾಸವು ಒಂದು ಕ್ರಮಬದ್ಧವಾದ ಶ್ರೇಣೀಕೃತ ತತ್ವವನ್ನು ಅನಿಸರಿಸುತ್ತದೆ ಎಂದರೆ,____________

## 1.3.3.2. ವಿಕಾಸದ ಸಾರ್ವತ್ರಿಕ ತತ್ವಗಳು

**ಅಭ್ಯಾಸ-IV**

ಸಾಮಾನ್ಯವಾಗಿ ವಿಕಾಸದ ಕಾರಣಗಳನ್ನು ಕುರಿತಂತೆ ಎರಡು ಅಂಶಗಳಿಗೆ ಸಂಬಂಧಿಸಿದ ಚರ್ಚೆ ನಡೆಯುತ್ತಲೇ ಬಂದಿದೆ. ಅವೆಂದರೆ, ಪರಿಸರ ಮತ್ತು ಅನುವಂಶೀಯತೆ. ಇಲ್ಲಿ ಪ್ರಕೃತಿಯೆಂದರೆ, ಮಗುವಿನಲ್ಲಿ ಹುಟ್ಟಿನಿಂದಲೇ ಕಂಡುಬರುವ ಜೈವಿಕ ಗುಣಲಕ್ಷಳು. ಇವು ಮತ್ತು ಅನುವಂಶೀಯತೆಯ ಲಕ್ಷಣಗಳು ಮಗುವಿಗೆ ತನ್ನ ಪೋಷಕರಿಂದ ದೊರೆಯುತ್ತವೆ. ಅದೇ ರೀತಿ ಪೋಷಣೆಯೆಂದರೆ, ಸಂಕೀರ್ಣವಾದ ಭೌತಿಕ ಮತ್ತು ಸಾಮಾಜಿಕ ಅಂಶಗಳು. ಇವು ಮಗುವಿನ ಜೈವಿಕ ಮತ್ತು ಶಾರೀರಿಕ ಪ್ರಕ್ರಿಯೆಗಳ ಆಧಾರವಾಗಿದ್ದು, ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತವೆ. ಇದು ಮಗುವು ಗರ್ಭಾವಸ್ಥೆಯಲ್ಲಿದ್ದಾಗಲೇ ಪ್ರಾರಂಭವಾಗುತ್ತದೆ.

ವಿಕಾಸವು ಅನುವಂಶೀಯತೆ ಮತ್ತು ಪರಿಸರದ ಮೊತ್ತವಾಗಿದೆ: ಮಗುವು ಎಷ್ಟೋ ಗುಣಲಕ್ಷಣಗಳನ್ನು ತನ್ನ ತಂದೆತಾಯಿಯರಿಂದ, ತನ್ನ ಹಿರಿಯರಿಂದ ಬಳುವಳಿಯಾಗಿ ಪಡೆದಿರುತ್ತದೆ. ಹೀಗೆ ತನ್ನಲ್ಲಿ ಅಡಕವಾಗಿರುವ ಶಕ್ತಿ ಸಾಮರ್ಥ್ಯಗಳಿಂದ ಮಗುವು ತನ್ನ ಪರಿಸರದಲ್ಲಿನ ಅಂತರ್‌ಕ್ರಿಯೆಗೆ ತೆರೆದುಕೊಳ್ಳುತ್ತದೆ. ಈ ಕ್ರಿಯೆಯು ಕೆಲವೊಮ್ಮೆ ಗೊತ್ತಿದ್ದೂ ಕೆಲವೊಮ್ಮೆ ಗೊತ್ತಿಲ್ಲದೆಯೂ ಆಗಬಹುದು. ಏನೇ ಆಗಲಿ, ಈ ಎರಡರ ಮೊತ್ತವು ಕ್ರಮೇಣ ಮಗುವಿನಲ್ಲಿ ಉಂಟಾಗುವ ವ್ಯಕ್ತಿತ್ವದ ಪರಿವರ್ತನೆಯಲ್ಲಿ ಕಾಣಬಹುದಾಗಿದೆ. ಹಾಗಾಗಿ ವಿಕಾಸವು ವ್ಯಕ್ತಿಯನ್ನು ಅನುವಂಶೀಯತೆ ಮತ್ತು ಪರಿಸರಗಳ ನಡುವಿನ ಅನ್ಯೋನ್ಯತೆಯ, ಅಂತರ್‌ಕ್ರಿಯೆಯ ಮೊತ್ತವಾಗಿ ರೂಪಿಸುತ್ತದೆ.

**ವಿಕಾಸವು ಒಂದು ನಿರಂತರವಾದ ಪ್ರಕ್ರಿಯೆ:** ಜೀವಿಯೊಂದರ ಜೀವನವು ಗರ್ಭಾವಸ್ಥೆಯಲ್ಲಿಂದಲೇ ಪ್ರಾರಂಭವಾಗಿ ಅದರ ವಿಕಾಸವು ಸಾವಿನವರೆವಿಗೂ ಒಂದಲ್ಲಾ ಒಂದು ವಿಧದಲ್ಲಿ ನಿರಂತರವಾಗಿ ನಡೆಯುತ್ತಲೇ ಇರುವುದು. ಆದರೆ ಇದು ಒಬ್ಬೊಬ್ಬ ವ್ಯಕ್ತಿಯಲ್ಲಿ ಒಂದೊಂದು ರೀತಿಯಲ್ಲಿ ಮತ್ತು ಒಂದೊಂದು ಗತಿಯಲ್ಲಿ ಸಾಗಬಹುದು. ಹೀಗೆ ಉಂಟಾಗುವ ಬದಲಾವಣೆಗಳು ಎಷ್ಟೇ ಸಣ್ಣದಿರಲಿ, ಅಥವಾ ಎಷ್ಟೇ ನಿಧಾನವಾಗಿರಲಿ, ಅಂತೂ ನಿರಂತರವಾಗಿ ಘಟಿಸುತ್ತಲೇ ಇರುತ್ತವೆ. ಹಸುಳೆಯ ಹಂತದಲ್ಲಿ ಭೌತಿಕ ವಿಕಾಸವು ತೀವ್ರ ಗತಿಯಲ್ಲಿದ್ದರೆ, ಶಾಲಾಪೂರ್ವ ಹಂತದಲ್ಲಿ ಭಾಷಾ ಬೆಳವಣಿಗೆಯು ಶೀಘ್ರವಾಗಿ ನಡೆಯುವುದು.

**ವಿಕಾಸವು ಸಾರ್ವತ್ರಿಕದಿಂದ ನಿರ್ದಿಷ್ಟತೆಯೆಡೆಗೆ ನಡೆಯುವುದು:** ಒಂದು ಚಿಕ್ಕ ಮಗುವಿಗೆ ಇಡೀ ಪ್ರಪಂಚವೇ ಒಂದು ಗೊಂದಲಮಯವಾದ ಗೂಡಿನಂತೆ ಕಾಣುತ್ತದೆ, ನಾವೂ ಹೇಳುತ್ತೇವೆ ನೋಡಿ, ಅಯ್ಯೋ ಚಿಕ್ಕ ಮಗು ಪಾಪ, ಅದಕ್ಕೆ ಏನು ಅರ್ಥವಾದೀತು ಎಂದು ಅಲ್ಲವೆ? ಆದರೆ, ಕ್ರಮೇಣ ಮಗುವು ಹಲವಾರು ನಿರ್ದಿಷ್ಟವಾದ ಮತ್ತು ವಿಶೇಷವಾದ ವರ್ತನೆಗಳನ್ನು ಕಲಿಯುತ್ತದೆ. ಮೊದಲಾದರೆ, ಜೋರಾಗಿ ದನಿ ತೆಗೆದು ಅತ್ತರೆ ಸಾಕು, ತನಗೆ ಏನು ಬೇಕೋ ಎಲ್ಲಾ ಸಿಕ್ಕುಬಿಡುತ್ತಿತ್ತು. ಆದರೆ, ಬೆಳೆಯುತ್ತಾ ಬಂದಂತೆ ಜೋರಾಗಿ ಅಳುವುದೇ ಅವಮಾನ ಎಂದಾಯಿತು! ಹಾಗಾಗಿ ತನ್ನ ಭಾವನೆಗಳನ್ನು, ಅನಿಸಿಕೆಗಳನ್ನು ಅಭಿವ್ಯಕ್ತಿಗೊಳಿಸಲು ಮಗುವು ಚೆನ್ನಾಗಿ ಕಲಿಯುತ್ತದೆ. ತನ್ನ ದುಃಖವನ್ನು ತಡೆದುಕೊಳ್ಳುವ ಸಂಯಮವನ್ನೂ ಮಗುವು ಕಲಿಯುವುದು. ದೊಡ್ಡವರಲ್ಲಿ ಸಾಮಾನ್ಯವಾಗಿ ಗಂಡಸರು ಕಣ್ಣೀರು ಹಾಕುವುದಿಲ್ಲ, ಅದೇ ಹೆಣ್ಣು ಮಕ್ಕಳಾದರೆ, ಕಣ್ಣೀರೇ ಮೊದಲು. ಹೇಗೂ ಇರಲಿ, ಸಂವಹನವು ಎಷ್ಟು ಸೂಕ್ಷ್ಮ ಮತ್ತು ವಿಶೇಷವಾಗುತ್ತಾ

ಸಾಗಿತು ಎಂಬುದನ್ನು ನಾವಿಲ್ಲಿ ತಿಳಿಯಬೇಕು. ಕೆಲವೊಮ್ಮೆ ಮುಖದ ಅಭಿವ್ಯಕ್ತಿಯಿಂದಲೇ ಎಲ್ಲವೂ ತಿಳಿದುಬಿಡಬಹುದು.

**ವಿಕಾಸವು ದ್ವಿಮುಖ ಸಮ್ಮಿತಿಯಿಂದ ಏಕಮುಖ ಸಮ್ಮಿತಿಯನ್ನು ತೋರುವುದು:** ಮಾನವನ ದೇಹವು ದ್ವಿಮುಖ ಸಮ್ಮಿತಿಯನ್ನು ಹೊಂದಿರುವುದರ ಕುರಿತು ನಾವು ತಿಳಿದಿದ್ದೇವೆ. ದೇಹದ ದ್ವಿಮುಖ ಸಮ್ಮಿತಿಯೆಂಬುದು ಜೀವಶಾಸ್ತ್ರದ ಪಾರಿಭಾಷಿಕ ಪದ. ಮಾನವನ ದೇಹವನ್ನು ಲಂಬವಾಗಿ, ಸಮ–ಸಮವಾಗಿ ಉದ್ದಕ್ಕೆ ಸೀಳಿದರೆ, ನಿಖರವಾದ ಎರಡು ಅರ್ಧಗಳು ದೊರೆಯುತ್ತವೆ. ಅಂಗರಚನಾಶಾಸ್ತ್ರದ ಪ್ರಕಾರ, ಸರಿಯಾಗಿ ಎರಡು ಭಾಗವಾಗಿ ದೊರೆಯುತ್ತವೆ. ದೇಹದ ಯಾವುದೇ ಅಂಗವಾಗಲೀ ಅಥವಾ ಅಂಗವ್ಯೂಹವಾಗಲೀ, ಇಂತಹ ದ್ವಿಮುಖ ಸಮ್ಮಿತಿಯನ್ನೇ ತೋರುತ್ತವೆ. ಸ್ಥೂಲವಾಗಿ ರುಂಡ, ಮುಂಡ, ಕೈಕಾಲುಗಳು, ದ್ವಿಮುಖ ಸಮ್ಮಿತಿಯನ್ನೇ ತೋರುವುದು. ತನ್ನ ಎಡಗೈ ಆಗಲೀ ಅಥವಾ ಬಲಗೈಯಾಗಲೀ, ಪ್ರಾರಂಭದಲ್ಲಿ ಮಗುವು ಎರಡನ್ನೂ ಬಳಸುವುದು, ನಂತರ ಬಲಗೈಯನ್ನೇ ಹೆಚ್ಚಾಗಿ ಬಳಸುವುದರಿಂದ ಕಾರ್ಯಕೌಶಲದಲ್ಲಿ ಬಲಗೈ ಮೇಲುಗೈ ಸಾಧಿಸುತ್ತದೆ. ಆದರೆ, ಒಂದು ವೇಳೆ ಎಡಗೈ ಹೆಚ್ಚಾಗಿ ಬಳಸಿದರೆ, ಆಗ ಕಾರ್ಯಕೌಶಲದಲ್ಲಿ ಎಡಗೈ ಮೇಲುಗೈ ಆಗುತ್ತದೆ. ಮಗುವು ಸುಮಾರು 2ರಿಂದ ಎರಡೂವರೆ ವರ್ಷಕ್ಕೆ ದ್ವಿಮುಖ ಸಮ್ಮಿತಿಯಿಂದ ಏಕಮುಖ ಸಮ್ಮಿತಿಯನ್ನು ತೋರುತ್ತದೆ. ಅಂದರೆ, ಬಲಗೈ ಅಥವಾ ಎಡಗೈ ಬಳಸುವಿಕೆಯಲ್ಲಿ ಪರಿಣಿತಿಯನ್ನು ಸಾಧಿಸುತ್ತದೆ.

**ವಿವಿಧ ಕ್ಷೇತ್ರಗಳಲ್ಲಿ ಆಗುವ ವಿಕಾಸ ಪ್ರಕ್ರಿಯೆಯು ಪರಸ್ಪರ ಅಂತರ್ ಸಂಬಂಧವನ್ನು ಹೊಂದಿರುತ್ತವೆ:** ವಿಕಾಸದಲ್ಲಿ ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ, ಸೃಜನಾತ್ಮಕ, ನೈತಿಕ ಮತ್ತು ಧೋರಣೆಗಳು ಮತ್ತು ಮೌಲ್ಯಗಳು–ಹೀಗೆ ಹಲವಾರು ಕ್ಷೇತ್ರಗಳಿವೆ. ಆದರೆ, ಇವೆಲ್ಲವೂ ಒಂದರೊಳಗೊಂದು ಹೆಣೆದುಕೊಂಡಂತೆ, ಪರಸ್ಪರ ಸಂಬಂಧವನ್ನು ತೋರುತ್ತವೆ. ಉದಾಹರಣೆಗೆ ಭಾಷಾ ಬೆಳವಣಿಗೆ ಮತ್ತು ಸಾಮಾಜಿಕ ವಿಕಾಸ. ಅದೇ ರೀತಿ, ಮೆದುಳು, ಮೆದುಳ ಬಳ್ಳಿಯ ವಿಕಾಸವು ವ್ಯಕ್ತಿಯ ಬುದ್ಧಿಶಕ್ತಿಯನ್ನು ಹೆಚ್ಚಿಸುವುದು. ಅದೇ ರೀತಿ ನಿರ್ನಾಳಗ್ರಂಥಿಗಳ ಸಮರ್ಪಕವಾದ ಕಾರ್ಯವು ವ್ಯಕ್ತಿಯ ದೈಹಿಕ ಸಮತೋಲನೆಗೆ ಸಹಾಯಮಾಡುತ್ತದೆ. ಹೀಗಾಗಿ ವ್ಯಕ್ತಿಯು ವಿಕಾಸದ ಸಂಚಿತ ಪರಿಣಾಮ ಎಂದು ಹೇಳಬಹುದು.

**ವಿಕಾಸ ಪ್ರಕ್ರಿಯೆಯು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ:** ವಿಕಾಸವು ಒಂದು ನಿಗದಿತವಾದ ವಿನ್ಯಾಸವನ್ನು ಸಾರ್ವತ್ರಿಕವಾಗಿ ತೋರುವುದೆಂದು ಹೇಳಿದಂತೆಯೇ, ಅದರ ಗತಿಯು ಮತ್ತು ತೀವ್ರತೆಯು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಪ್ರತಿಯೊಂದು ಮಗುವೂ ತನ್ನದೇ ಆದ ಗತಿಯಲ್ಲಿ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಭಾಷಾ ಬೆಳವಣಿಗೆಯನ್ನು ತೋರುತ್ತದೆ. ಇದಕ್ಕೆ ಕಾರಣ, ಪ್ರತಿಯೊಂದು ಮಗುವಿಗೂ ಅದರ ಅನುವಂಶೀಯತೆಯಿಂದ ದೊರೆತ ಗುಣಲಕ್ಷಣಗಳು ಮತ್ತು ಅದು ಬೆಳೆಯುತ್ತಿರುವ ಪರಿಸರ ಭಿನ್ನವಾಗಿರುತ್ತದೆ. ಹಾಗಾಗಿ ವಿಕಾಸವು ವ್ಯಕ್ತಿನಿಷ್ಠವಾಗಿರುತ್ತದೆ. ಅಧ್ಯಯನಗಳ ಪ್ರಕಾರ ಯಾವ ಮಕ್ಕಳು ಸ್ವಲ್ಪ ಎತ್ತರವಾಗಿರುತ್ತಾರೋ ಅವರು ಮುಂದೂ ಕೂಡ ಎತ್ತರದ ವ್ಯಕ್ತಿಯೇ ಆಗುತ್ತಾರೆ, ಹಾಗೆಯೇ ಯಾವು ಮಕ್ಕಳು ಸ್ವಲ್ಪ ಕುಳ್ಳಾಗಿರುತ್ತಾರೋ ಅವರು ಮುಂದೆಯೂ ಕೂಡ ಕುಳ್ಳಾಗಿಯೇ ಇರುತ್ತಾರೆ. ಅದೇ ರೀತಿ ಹೆಚ್ಚು ಬುದ್ಧಿವಂತಿಕೆಯನ್ನು ತೋರಿದ ಮಕ್ಕಳು ಮುಂದೂ ಕೂಡ ಹೆಚ್ಚು ಬುದ್ಧಿವಂತರಾಗಿಯೇ ಇರುತ್ತಾರೆ. ಆದರೆ, ಯಾವ ಮಕ್ಕಳ ಬುದ್ಧಿವಂತಿಕೆಯ ಪ್ರಮಾಣಕಡಿಮೆ ಇರುತ್ತದೋ ಅಂತಹವರು ಅಪರೂಪಕ್ಕೆ ಹೆಚ್ಚು ಬುದ್ಧಿವಂತಕೆಯನ್ನು ತೋರುತ್ತಾರೆ. ವಯಸ್ಸಿನಿಂದ ಬೆಳದಂತೆಲ್ಲಾ ಬುದ್ಧಿ ಕಡಿಮೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಶಿಕ್ಷಕರು ಮತ್ತು ಪೋಷಕರು ಒಂದೇ ವಯೋಮಾನದ ಮಕ್ಕಳೆಲ್ಲಾ ಒಂದೇ ರೀತಿ ಇದ್ದು, ಒಂದೇ ರೀತಿಯ ಸಾಮರ್ಥ್ಯವನ್ನು ತೋರುತ್ತಾರೆಂದು ಅಪೇಕ್ಷಿಸುವುದು ತಪ್ಪಾಗುತ್ತದೆ.

**ವಿಕಾಸವು ಸಮನ್ವಯ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ:** ವಿಕಾಸದಲ್ಲಿ ಕೆಲವು ಸ್ಥೂಲರೂಪದ ಬದಲಾವಣೆಗಳನ್ನು ತಂದರೆ, ಇನ್ನೂ ಕೆಲವು ಸೂಕ್ಷ್ಮರೂಪದ ಬದಲಾವಣೆಗಳನ್ನು ತರುವುವು. ಆದರೆ

ಇವೆಲ್ಲವೂ ಸಂಚಿತಗೊಳ್ಳುತ್ತಾ ಹೋಗುವುವು. ಕೆಲವು ಇನ್ನೂ ಉನ್ನತ ಹಂತದ ಲಕ್ಷಣಗಳಲ್ಲಿ ಲೀನವಾಗುವುವು. ಆದ್ದರಿಂದ ವಿಕಾಸವು ಒಂದು ಸಂಶ್ಲೇಷಣಾ ಕ್ರಿಯೆಯಾಗಿದ್ದು, ವಿವಿಧ ಕ್ಷೇತ್ರದ ವಿಕಾಸಾತ್ಮಕ ವ್ಯಷ್ಟಿ ಪ್ರಕ್ರಿಯೆಯ ಫಲಿತವು ಒಂದುಗೂಡಿ ಒಂದು ಸಮಷ್ಟಿಯನ್ನು ಉಂಟುಮಾಡುವುವು.

**ವಿಕಾಸದ ಪ್ರಕ್ರಿಯೆಗಳನ್ನು ಊಹಿಸಲು ಸಾಧ್ಯವಿದೆ:** ಮೊದಲೇ ಹೇಳಿದಂತೆ, ವಿಕಾಸವು ಒಂದು ಗೊತ್ತಾದ ವಿನ್ಯಾಸವನ್ನು ಅನುಸರಿಸುತ್ತದೆ. ಆದ್ದರಿಂದ ಮುಂದೆ ಯಾವ ರೀತಿಯ ವಿಕಾಸ ಉಂಟಾಗಬಹುದು ಎಂಬುದನ್ನು ಊಹಿಸಬಹುದಾಗಿದೆ. ಎಲ್ಲಾ ಮಕ್ಕಳೂ ಒಂದೇ ರೀತಿಯ ವಿಕಾಸದ ವಿನ್ಯಾಸವನ್ನೇ ಹೊಂದಿರುತ್ತಾರೆ, ಇದು ಹಂತ ಹಂತವಾಗಿ ಆಗುವುದು, ಮತ್ತು ಒಂದು ಹಂತದ ನಂತರವೇ ಅದರ ಮುಂದಿನ ಹಂತವು ನಡೆಯುವುದು. ಉದಾಹರಣೆಗೆ, ಹಸುಗೂಸು ತೆವಳುವುದು, ಮಗುಚಿಕೊಳ್ಳುವುದು. ಇವನ್ನೆಲ್ಲಾ ಮಾಡಿದ ಮೇಲೆ, ಒಂದೊಂದೇ ಹೆಜ್ಜೆ ಇಡುವುದನ್ನು ಪ್ರಾರಂಭಿಸಿ, ನಡೆಯುವುದನ್ನು ಕಲಿಯುತ್ತದೆ. ಸಾಮಾನ್ಯವಾಗಿ ಎಲ್ಲಾ ಮಕ್ಕಳು ಬರೆಯಲು ಪ್ರಾರಂಭಿಸಿದಾಗ ಸೊನ್ನೆಯನ್ನೇ ಮೊದಲು ಬರೆಯುವರು. ನಂತರ ಅಭ್ಯಾಸದ ಫಲವಾಗಿ ಎಲ್ಲಾ ಅಕ್ಷರಗಳನ್ನು ಬರೆಯಲು ಕಲಿಯುವರು. ಹೀಗೆ ವಿಕಾಸವು ಹಂತ ಹಂತವಾಗಿ ನಡೆಯುವುದು. ಇಂತಹ ವಿಕಾಸದ ಹಂತಗಳು ಯಾವುದೇ ಕಾರಣಕ್ಕೂ ಪುನರಾವರ್ತಿಸುವುದಿಲ್ಲ. ಅಂದರೆ ವಿಕಾಸ ಪ್ರಕ್ರಿಯೆಯು ಯಾವಾಗಲೂ ಮುಮ್ಮುಖವಾಗಿಯೇ ನಡೆಯುವುದು, ಹಿಮ್ಮುಖವಾಗದು. ಒಮ್ಮೆ ಬಾಲ್ಯದ ದಿನಗಳನ್ನು ಕಳೆದ ಮೇಲೆ ನಮಗಾರಿಗೂ ನಮ್ಮ ಬಾಲ್ಯದ ದಿನಗಳನ್ನು ಮತ್ತೆ ಪಡೆಯಲಾಗುವುದಿಲ್ಲ. ಇದೊಂದು ಸಾರ್ವತ್ರಿಕ ಸತ್ಯ. ಅವಧಿಗೂ ಮುನ್ನ ಜನಿಸಿದ ಮಕ್ಕಳಲ್ಲಿ ವಿಕಾಸದ ಗತಿಯು ಪ್ರಾರಂಭದಲ್ಲಿ ನಿಧಾನವಾಗಿರುತ್ತದೆ. ಆದರೆ, ಕ್ರಮೇಣ ಅವರು ಎಲ್ಲಾ ಮಕ್ಕಳಂತೆ, ಸಹಜವಾಗಿ ವಿಕಾಸದ ಗತಿಯನ್ನು ಹೊಂದುತ್ತಾರೆ. ಮಕ್ಕಳು ಪ್ರತಿಭಾವಂತರಾಗಿರಲಿ, ಸಾಮಾನ್ಯ ಸಾಮರ್ಥ್ಯದವರಿರಲಿ, ಅಥವಾ ನಿಧಾನಗತಿಯಿಂದ ಕಲಿಯುವವರಾಗಿರಲಿ, ಎಲ್ಲರೂ ಒಂದೇ ರೀತಿಯ ವಿಕಾಸ ವಿನ್ಯಾಸವನ್ನು ತೋರುವರು. ಹೀಗಿದ್ದಾಗ್ಯೂ ಅತಿ ಹೆಚ್ಚು ಬುದ್ಧಿಲಬ್ಧ ಹೊಂದಿರುವ ಮಕ್ಕಳು ಸ್ವಲ್ಪ ತ್ವರಿತ ಗತಿಯನ್ನೂ ಹಾಗೆಯೇ ಕಡಿಮೆ ಬುದ್ಧಿಲಬ್ಧ ಹೊಂದಿರುವ ಮಕ್ಕಳು ನಿಧಾನಗತಿಯ ವಿಕಾಸವನ್ನು ತೋರುವರು.

**ವಿಕಾಸವು ಬದಲಾವಣೆಗಳನ್ನು ಒಳಗೊಂಡಿರುತ್ತದೆ**: ಮಗುವು ಹುಟ್ಟಿನಿಂದ ಜೀವನಪರ್ಯಂತ ಹಲವಾರು ಬದಲಾವಣೆಗಳನ್ನು ಹೊಂದುತ್ತಲೇ ಇರುತ್ತದೆ. ಪಿಯಾಷೆಯು ಹೇಳುವಂತೆ "ಅನುಭವಗಳನ್ನು ಪಡೆಯುತ್ತಾ ಹೋದಂತೆ, ಜೀವಿಯು ಪಕ್ವಗೊಳ್ಳುತ್ತಾನೆ ಮತ್ತು ಗುಣಾತ್ಮಕವಾದ ಇಂತಹ ಬದಲಾವಣೆಗಳು ಮುಂದೆ ಸಂಕೀರ್ಣವಾದ ಅಂತರ್‌ಕ್ರಿಯೆಯನ್ನು ನಡೆಸಲು ಕಾರಣವಾಗುತ್ತವೆ". ಪ್ರತಿ ವಯೋಮಾನದಲ್ಲೂ ವಿಕಾಸ ಪ್ರಕ್ರಿಯೆಯಿಂದಾಗಿ ಬದಲಾವಣೆಗಳು ಆಗುತ್ತಲೇ ಇರುತ್ತವೆ, ಆದರೆ ಅದು ಪ್ರಾರಂಭಿಕ ಹಂತಗಳಲ್ಲಿ ಮಾತ್ರ. ನಂತರದಲ್ಲಿ ಏರಿಕೆಯ ಶ್ರೇಣಿಯ ವಿನ್ಯಾಸದಂತೆ ನಡೆಯುವುದು. ಆದರೆ, ಇಂತಹ ಬದಲಾವಣೆಗಳಲ್ಲಿ ಕೆಲವು ವೃದ್ಧಿತತ್ವವನ್ನೂ ಮತ್ತೆ ಕೆಲವು ಕ್ಷೀಣತತ್ವವನ್ನೂ ತೋರುತ್ತವೆ. ಈ ಬದಲಾವಣೆಗಳನ್ನು ನಾಲ್ಕು ರೀತಿಯಾಗಿ ವಿಭಾಗಿಸಬಹುದು.

**ಎ. ಗಾತ್ರದಲ್ಲಿ ಬದಲಾವಣೆ:** ಗಾತ್ರ, ಎತ್ತರ, ತೂಕ ಮತ್ತು ಆಂತರಿಕ ಅಂಗಗಳ ಗಾತ್ರದಲ್ಲಿ ಹೆಚ್ಚಳವಾಗುವ ದೈಹಿಕ ಬದಲಾವಣೆಗಳು ಇವು. ಮೆದುಳಿನ ಗಾತ್ರದ ಹೆಚ್ಚಳದಿಂದ ಹೆಚ್ಚಿರುವ ಜ್ಞಾಪಕ ಶಕ್ತಿ, ತಾರ್ಕಿಕ ಬುದ್ಧಿ, ಗ್ರಹಣಶಕ್ತಿ ಮತ್ತು ಸೃಜನಶೀಲತೆಯನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬಹುದು.

**ಬಿ. ಅನುಪಾತದಲ್ಲಿ ಬದಲಾವಣೆ:** ಸಾಮಾನ್ಯವಾಗಿ ಮಕ್ಕಳು ದೊಡ್ಡವರ ಪ್ರತಿರೂಪವೆಂದೇ ಹೇಳುತಾರೆ. ಆದರೆ ಅದು ಸರಿಯಲ್ಲ. ಉದಾಹರಣೆಗೆ, ಮಕ್ಕಳಲ್ಲಿ ಕಲ್ಪನಾಶಕ್ತಿಯು ತಾರ್ಕಿಕ ಶಕ್ತಿಗಿಂತ ಜಾಸ್ತಿ ಇದ್ದರೆ, ದೊಡ್ಡವರಲ್ಲಿ ಇದು ವಿರುದ್ಧವಾಗಿರುತ್ತದೆ.

**ಸಿ. ಕೆಲವು ಹಳೆಯ ಲಕ್ಷಣಗಳು ಅದೃಶ್ಯವಾಗುವಿಕೆ:** ಮಕ್ಕಳಲ್ಲಿನ ಹಾಲುಹಲ್ಲು ಅವರ 6ರಿಂದ 7 ವರ್ಷದಲ್ಲಿ ಬೀಳಲು ಪ್ರಾರಂಭಿಸುವುವು, ಇವನ್ನು ಕ್ರಮೇಣ ಶಾಶ್ವತ ಹಲ್ಲುಗಳು ಆವರಿಸಿಕೊಳ್ಳುವುವು. ಅದೇ

ರೀತಿ ಬಾಲಿಶ ವರ್ತನೆಗಳಾದ ತಪ್ಪು ಹೆಜ್ಜೆಗಳು, ತೊದಲು ನುಡಿಗಳು ಕ್ರಮೇಣ ಬದಲಾಗಿ ಸಂಪೂರ್ಣವಾಗಿ ಕಾಣದಂತಾಗುತ್ತವೆ.

**ಡಿ. ಹೊಸ ಲಕ್ಷಣಗಳ ಗಳಿಸುವಿಕೆ :** ಕೆಲವು ಆನುಷಂಗಿಕ ಲಕ್ಷಣಗಳು, ವರ್ತನೆಗಳು ಕಾಲಕ್ರಮೇಣ ಮೂಡುವುವು. ಇದಕ್ಕೆ ಕಲಿಕೆ, ಪಕ್ವತೆ ಮತ್ತು ಸಂಶ್ಲೇಷಣೆ, ಸಮತೋಲನ ಹಾಗೂ ಹೊಂದಾಣಿಕೆಗಳು ಕಾರಣವಾಗಿರುತ್ತವೆ. ಉದಾಹರಣೆಗೆ, ಶಾಶ್ವತ ಹಲ್ಲುಗಳು, ಪ್ರಾಥಮಿಕ ಮತ್ತು ಆನುಷಂಗಿಕ ವರ್ತನೆಗಳು, ಲೈಂಗಿಕ ಲಕ್ಷಣಗಳು, ನೈತಿಕತೆ ಮತ್ತು ಧಾರ್ಮಿಕ ನಂಬಿಕೆಗಳು ಹಾಗೂ ಆಚಾರ ವಿಚಾರಗಳು ಇತ್ಯಾದಿ.

**ಪ್ರಾರಂಭಿಕ ವಿಕಾಸವು ನಂತರದ ವಿಕಾಸಕ್ಕಿಂತ ಹೆಚ್ಚು ತ್ರಾಸದಾಯಿಕವಾಗಿರುತ್ತದೆ :** ಏಕೆಂದರೆ, ಪ್ರಾಥಮಿಕ ವಿಕಾಸ ಪ್ರಕ್ರಿಯೆಯಲ್ಲಿ ಕಲಿಕೆ ಮತ್ತು ಅನುಭವಗಳದ್ದೇ ಸಿಂಹಪಾಲು. ಒಂದುವೇಳೆ ಇದು ಮಗುವಿಗೆ ಹಾನಿಕಾರಕವಾಗಿದ್ದರೆ. ಆಗ ಮಗುವಿನ ಸಾಮಾಜಿಕ ಮತ್ತು ವೈಯಕ್ತಿಕ ಹೊಂದಾಣಿಕೆ ಕಷ್ಟ. ಇಂತಹ ಸಂದರ್ಭದಲ್ಲಿ, ಅವುಗಳು ಅಭ್ಯಾಸವಾಗಿ ಸ್ವಭಾವವಾಗುವುದರೊಳಗೆ ಅವುಗಳನ್ನು ಸರಿಪಡಿಸಲೇಬೇಕು.

**ವಿಕಾಸವು ಕಲಿಕೆ ಮತ್ತು ಪಕ್ವತೆಯ ಮೊತ್ತವಾಗಿರುತ್ತದೆ:** ಅನುಭವಾಧಾರಿತ ಕಲಿಕೆ ಮತ್ತು ಪಕ್ವತೆಗಳು ವ್ಯಕ್ತಿಯನ್ನು ವಿಕಾಸಗೊಳ್ಳುವಂತೆ ಮಾಡುತ್ತವೆ. ಆದ್ದರಿಂದಲೇ ವಿಕಾಸವು ಪರಿಮಾಣಾತ್ಮಕವಾಗುವುದಕ್ಕಿಂತ ಗುಣಾತ್ಮಕವಾಗಿ ಹಾಗೂ ಬಹುದಿಸೆಯೆಡೆಗೆ ಪಸರಿಸುವ ಪುರೋಗಾಮಿ ಪ್ರಕ್ರಿಯೆಯಾಗಿರುತ್ತದೆ.

**ವಿಕಾಸದ ಪ್ರತಿಯೊಂದು ಕ್ಷೇತ್ರವೂ ಸುಪ್ತ ಅಪಾಯಗಳ ಸಂಭಾವ್ಯತೆಯನ್ನು ಹೊಂದಿರುತ್ತದೆ:** ವಿಕಾಸವು ತನ್ನದೇ ಆದ ಗತಿ ಮತ್ತು ದಿಕ್ಕನ್ನು ಹೊಂದಿರುತ್ತದಾದರೂ ಅದರ ವಿವಿಧ ಕ್ಷೇತ್ರಗಳಲ್ಲಿ ಸುಪ್ತ ಅಪಾಯಗಳ ಸಂಭಾವ್ಯತೆಯನ್ನು ಅಲ್ಲಗೆಳೆಯಲಾಗುವುದಿಲ್ಲ. ಎರಿಕ್‌ಸನ್ನನು ಹೇಳುವಂತೆ, "ವಿಕಾಸ ಮತ್ತು ಬೆಳವಣಿಗೆಯಲ್ಲಿ ನಂಬಿಕೆಗೆ ಅರ್ಹವಾದ ಬದಲಾವಣೆಯು ಖಚಿತವಾಗಿಯೇ ಇದ್ದರೂ ಕೆಲವೊಮ್ಮೆ ಸಮಸ್ಯಾತ್ಮಕವಾಗುವ ಸಂಭವವೂ ಇಲ್ಲದಿಲ್ಲ." ಇವುಗಳನ್ನು ವಿಕಾಸದ ಪ್ರಕ್ರಿಯೆಯಲ್ಲಿ ಸುಪ್ತವಾಗಿ ಅಡಗಿರುವ ಅಪಾಯಕಾರೀ ಅಂಶಗಳೆಂದು ಕರೆಯಬಹುದು. ಉದಾಹರಣೆಗೆ, ಕೆಲವು ಸಮಸ್ಯಾತ್ಮಕ ಅಂಶಗಳು ಪರಿಸರೀಯವಾಗಿದ್ದರೆ, ಇನ್ನು ಕೆಲವು ವೈಯಕ್ತಿಕವಾಗಿರುತ್ತವೆ. ಇಂತಹ ಅಪಾಯಕಾರಿ ಅಂಶಗಳು ಭೌತಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಹೊಂದಾಣಿಕೆ ಮಾಡಿಕೊಳ್ಳಲು ಮಗು ನಡೆಸುವ ಪ್ರಯತ್ನಗಳಿಗೆ ತಡೆಯುಂಟುಮಾಡುತ್ತವೆ. ಆಗ ಮಗುವಿನ ವಿಕಾಸ ಪ್ರಕ್ರಿಯೆಯ ಗತಿ ನಿಧಾನವಾಗಬಹುದು ಅಥವಾ ಏನೂ ಪ್ರಗತಿಯೇ ಇಲ್ಲದಂತೆಯೂ ಆಗಬಹುದು. ಇಂತಹ ಮಕ್ಕಳ ಹೊಂದಾಣಿಕೆಯ ಸಾಮರ್ಥ್ಯ ತುಂಬಾ ದುರ್ಬಲವಾಗಿದ್ದು ವ್ಯಕ್ತಿತ್ವ ದೋಷಕ್ಕೆ ಕಾರಣವಾಗುತ್ತದೆ. ಈ ಮಕ್ಕಳಲ್ಲಿ ಪಕ್ವತೆಯೂ ಕಡಿಮೆ. ಹೀಗೆ ವಿಕಾಸ ಪ್ರಕ್ರಿಯೆಯು ಸಾರ್ವತ್ರಿಕವಾಗಿದ್ದರೂ ಮಗುವಿನ ವೈಯಕ್ತಿಕ ಕಾರಣಗಳು, ಅನುವಂಶೀಯ ಲಕ್ಷಣಗಳು ಮತ್ತು ಪರಿಸರೀಯ ಅಂತರ್‌ಕ್ರಿಯೆಗಳಿಂದ ಕೆಲವು ಅಪಾಯಗಳಿಗೆ ಒಳಗಾಗುವ ಸಂಭಾವ್ಯತೆ ಕಂಡುಬರುವುದು.

**ವಿಕಾಸ ವಿವಿಧ ಹಂತಗಳಲ್ಲಿ ಸಂತೋಷದ ಸ್ಥಿತಿ ಭಿನ್ನವಾಗಿರುವುದು:** 'ಬಾಲ್ಯವೆಂದರೆ ಚೆನ್ನು' ಎಂಬ ಭಾವನೆ ಇದೆ. ಆದರೆ, ಸಂಶೋಧನೆಗಳು ಬೇರೆಯದನ್ನೇ ಹೇಳುತ್ತವೆ. ಅವುಗಳ ಪ್ರಕಾರ ಎಲ್ಲರ ಬಾಲ್ಯವೂ ಸಂತೋಷದಾಯಕವಾಗೇನೂ ಇರುವುದಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದು. ಅನೇಕ ವಯಸ್ಕರು ನೆನಪಿಸಿಕೊಳ್ಳುವಂತೆ, ಬಾಲ್ಯದ ದಿನಗಳು ಕಹಿಯಾಗಿಯೂ ಕಷ್ಟಸಹಿತವಾಗಿಯೂ ಇರುವುದು ಕಂಡುಬಂದಿದೆ. ತಮಗೆ ಮರುಬಾಲ್ಯವೇ ಬೇಡ ಎಂದು ಹೇಳುವವರಿದ್ದಾರೆ. ಸಂತೋಷದ ಸ್ವರೂಪವೂ ಬದಲಾಗುತ್ತದೆ. ಮೂರನೇ ವಯಸಿನಲ್ಲಿ ಅತ್ಯಂತ ಸಂತೋಷ ಕೊಟ್ಟ ಮೂರು ಗಾಲಿಯ ಸೈಕಲ್ಲು ಹದಿನೈದನೇ ವರ್ಷದಲ್ಲಿ ಅದೇ ಸಂತೋಷ ಕೊಡಲಾರದು.

**ವಿಕಾಸವು ಸಮತೋಲನ ಮತ್ತು ಅಸಮತೋಲನ – ಇವೆರಡನ್ನೂ ಹೊಂದಿರುತ್ತದೆ:** ವ್ಯಕ್ತಿಯೊಬ್ಬನು ತನ್ನ ಸುತ್ತಮುತ್ತಲಿನ ಪರಿಸರದೊಂದಿಗೆ, ನೆರೆಹೊರೆಯವರೊಡನೆ ಮತ್ತು ಇತರ ವ್ಯಕ್ತಿಗಳೊಡನೆ ಸದಾ ಅಂತರ್‌ಕ್ರಿಯೆಯಲ್ಲಿ ತೊಡಗಿರುತ್ತಾನೆ. ಇದರಿಂದಾಗಿ ಅವನು ಅನೇಕ ರೀತಿಯ ಅನುಭವಗಳನ್ನು ಪಡೆದುಕೊಳ್ಳುತ್ತಾನೆ. ಅನುಭವವು ಕಲಿಕೆಗೆ ಕಾರಣವಾದರೆ, ಕಲಿಕೆಯು ವ್ಯಕ್ತಿಯಲ್ಲಿ ಹೊಂದಾಣಿಕೆಯನ್ನು ತಂದುಕೊಡುತ್ತದೆ. ಇಂತಹ ನಿರಂತರವಾದ ಪ್ರಕ್ರಿಯೆಯಲ್ಲಿ ಎಷ್ಟೋ ಸಲ ಹಳೆಯ ಕಲಿಕೆಯು ಪರಿವರ್ತನೆಯಾಗಬೇಕಾಗುತ್ತದೆ. ಹೊಸ ಹೊಸ ವಿಚಾರಧಾರೆಗಳನ್ನು, ಜ್ಞಾನವನ್ನು ಪಡೆಯುವಾಗ ಸಮತೋಲನವು ಸ್ವಲ್ಪ ಚಂಚಲವಾಗುತ್ತದೆ. ಆ ಹೊಸ ಜ್ಞಾನ ಅಥವಾ ವಿಚಾರ ವ್ಯಕ್ತಿಯನ್ನು ಪಳಗಿಸಿದ ನಂತರ ಅಸಮತೋಲನವು ಸಮತೋಲನವಾಗಿ ಮಾರ್ಪಾಟಾಗುತ್ತದೆ. ಹೀಗೆ ವ್ಯಕ್ತಿಯ "ಸ್ಕೀಮಾ" ಬದಲಾಗುತ್ತಾ ವಿಶಾಲವಾಗುತ್ತಾ ಮತ್ತು ಹೆಚ್ಚು ವ್ಯಾಪ್ತಿಯನ್ನು ಪಡೆಯುತ್ತಾ ಸಾಗುವುದು. ಯಾವುದೇ ಒಂದು ಹೊಸ ಕಲಿಕೆಯು ವ್ಯಕ್ತಿಯಲ್ಲಿ ಮೊದಲಿಗೆ ಅಸಮತೋಲನವನ್ನು ಉಂಟುಮಾಡಿ ನಂತರ ಆ ಕಲಿಕೆಯಲ್ಲಿ ಪರಿಣತಿ ಹೊಂದಿದ ನಂತರ ಸಮತೋಲನವೂ ತಾನೇ ತಾನಾಗಿ ಉಂಟಾಗುವ ಪ್ರವೃತ್ತಿಯನ್ನು ತೋರುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

ಈ ಕೆಳಗೆ ಬಹುಆಯ್ಕೆಯ ಪ್ರಶ್ನೆಗಳನ್ನು ನೀಡಲಾಗಿದೆ. ನಿಮ್ಮ ಸರಿ ಉತ್ತರದ ಆಯ್ಕೆಯನ್ನು '✓' ಚಿಹ್ನೆಯ ಮೂಲಕ ಸೂಚಿಸಿ:

1. ಪ್ರಾರಂಭದಲ್ಲಿ ಎಲ್ಲವನ್ನೂ ತನ್ನ ಅಳುವಿನಿಂದಲೇ ದೊರಕಿಸಿಕೊಳ್ಳುವ ಮಗುವು ನಂತರದಲ್ಲಿ ಉತ್ತಮ ಸಂವಹನದಿಂದ ಪಡೆದುಕೊಳ್ಳುವುದು– ಇದು ವಿಕಾಸದ ಯಾವ ತತ್ವ?

ಎ. ದ್ವಿಮುಖ ಸಮ್ಮಿತಿಯಿಂದ ಏಕಮುಖ ಸಮ್ಮಿತಿಯೆಡೆಗೆ

ಬಿ. ಪೂರ್ವವಿಕಾಸವು ಉತ್ತರವಿಕಾಸಕ್ಕಿಂದ ತ್ರಾಸದಾಯಕವಾಗಿರುತ್ತದೆ

ಸಿ. ಸಾರ್ವತ್ರಿಕದಿಂದ ನಿರ್ದಿಷ್ಟತೆಗೆ

ಡಿ. ಕೇಂದ್ರದಿಂದ ಪರಿಧಿಯವರೆಗೆ

2. ಶೇಕಡಾ 90ರಷ್ಟು ಮಂದಿ ಬಲಗೈ ಬಳಸುವಿಕೆಯನ್ನು ತೋರುತ್ತಾರೆ, ಉಳಿದವರು ಎಡಗೈ ಬಳಕೆಯನ್ನು ತೋರುವರು– ಇದು ವಿಕಾಸದ ಯಾವ ತತ್ವ?

ಎ. ದ್ವಿಮುಖ ಸಮ್ಮಿತಿಯಿಂದ ಏಕಮುಖ ಸಮ್ಮಿತಿಯೆಡೆಗೆ

ಬಿ. ಅನುವಂಶೀಯತೆ

ಸಿ. ಪರಿಸರ

ಡಿ. ಪಕ್ವತೆ

3. ಪ್ರಬಲವಾದ ಧನಾತ್ಮಕ ಸಹ–ಸಂಬಂಧವಿರುವ ಅಂಶಗಳು ಯಾವುವು?

ಎ. ಭಾಷಾ ವಿಕಾಸ ಮತ್ತು ಸಂವಹನ

ಬಿ. ಸಂಜ್ಞಾನಾತ್ಮಕ ವಿಕಾಸ ಮತ್ತು ಸಮಸ್ಯಾ ಪರಿಹಾರ ಸಾಮರ್ಥ್ಯ

ಸಿ. ದೈಹಿಕ ವಿಕಾಸ ಮತ್ತು ಕ್ರೀಡಾ ಸಾಮರ್ಥ್ಯ

ಡಿ. ಮೇಲೆ ಹೇಳಿದ ಎಲ್ಲವೂ

4. ವಿಕಾಸವು ಒಂದು ಗೊತ್ತಾದ ವಿನ್ಯಾಸವನ್ನು ಅನುಸರಿಸುವುದರಿಂದ, ಯಾರಾದರೂ ಒಬ್ಬ ವ್ಯಕ್ತಿಯ ಮುಂದಿನ ವಿಕಾಸದ ಹಂತವನ್ನು ಮೊದಲೇ ಗುರುತಿಸಬಹುದು ಎಂಬುದನ್ನು ಹೇಳುವ ತತ್ವ ಯಾವುದು?

ಎ. ವೈದ್ಯಕೀಯ ಪರೀಕ್ಷೆ

ಬಿ. ಹಿರಿಯರ ಅನುಭವ

ಸಿ. ಊಹಿಸಬಹುದಾದ ತತ್ವ

ಡಿ. ಮೇಲಿನ ಯಾವುದೂ ಅಲ್ಲ

5. ಜ್ಞಾನೇಂದ್ರಿಯಗಳಲ್ಲಿನ ಯಾವುದೇ ರೀತಿಯ ಊನತೆಯು ಮಗುವಿನ ಸಂಪೂರ್ಣ ವಿಕಾಸವನ್ನು ತಡೆಗಟ್ಟುತ್ತದೆ. ಏಕೆಂದರೆ

ಎ. ವಿಕಾಸದ ವಿವಿಧ ಕ್ಷೇತ್ರಗಳಿಗೆ ಅಂತರ್ ಸಂಬಂಧವಿದೆ

ಬಿ. ಜ್ಞಾನೇಂದ್ರಿಯಗಳು ಜ್ಞಾನದ ದ್ವಾರಗಳು

ಸಿ. ಮಗುವಿನಲ್ಲಿ ಆತ್ಮವಿಶ್ವಾಸದ ಕೊರತೆಯುಂಟಾಗುತ್ತದೆ

ಡಿ. ಕಲಿಕಾ ಅಸಾಮರ್ಥ್ಯದಿಂದ ಮಗುವು ನರಳುವುದು

## 1.3.3.3. ವಿಕಾಸ ಮತ್ತು ಕಲಿಕೆಯ ನಡುವಿನ ಸಂಬಂಧ

ವಿಕಾಸದ ಮೇಲೆ ಅನುಭವ, ಪಕ್ವತೆ ಮತ್ತು ಕಲಿಕೆ ಇವು ಬಹಳಷ್ಟು ಪ್ರಭಾವ ಬೀರುತ್ತವೆ. ಕಲಿಕೆ ಎಂಬುದು ವಿಶಾಲ ವ್ಯಾಪ್ತಿಯುಳ್ಳ ಪದ. ಅದು ನಿರಂತರವೂ  ಹೌದು. ಇದು ಜ್ಞಾನವನ್ನು ಕಟ್ಟಿಕೊಳ್ಳಲು, ಅದನ್ನು ಅನ್ವಯಿಸಲು ಸಹಾಯಕ.  ಒಂದು ಜೀವಮಾನದಲ್ಲಿ ವ್ಯಕ್ತಿಗೆ ಅಸಂಖ್ಯಾತ ಅನುಭವಗಳು ಸಿಗುತ್ತವೆ. ಇದಕ್ಕೆ ನಮ್ಮ ಪಂಚೇಂದ್ರಿಯಗಳು ಜ್ಞಾನೇಂದ್ರಿಯಗಳಾಗಿ ರಹದಾರಿಯನ್ನು ಒದಗಿಸುತ್ತವೆ.  ಪ್ರತ್ಯಕ್ಷ ಮತ್ತು ಪರೋಕ್ಷ ಅನುಭವಗಳೆರಡೂ ವ್ಯಕ್ತಿಯ ಪರಿವರ್ತನೆಗೆ ಕಾರಣವಾಗುತ್ತವೆ.  ಇದರಿಂದಾಗಿಯೇ ಕಲಿಕೆಯನ್ನು ವರ್ತನಾ ಬದಲಾವಣೆಯೆಂದು ಗುರುತಿಸಲಾಗುತ್ತದೆ.  ಕಲಿಕೆಯು ವ್ಯಕ್ತಿಯ ಜೀವನಕ್ಕೆ ಅತ್ಯಗತ್ಯವಾಗಿ ಬೇಕಾದ ಹೊಂದಾಣಿಕೆ ಮತ್ತು ಮಾರ್ಪಾಡುಗಳಿಗೆ ಅನುವು ಮಾಡಿಕೊಡುತ್ತದೆ. ಸಂಜ್ಞಾನ ವಲಯ, ಭಾವ ವಲಯ, ಕಾಯಜನ್ಯ ವಲಯ – ಈ ಮೂರೂ ವಲಯಗಳಲ್ಲೂ ಕಲಿಕೆಯು ಉಂಟಾಗುತ್ತದೆ. ಆಸಕ್ತಿ, ಅಭಿಕ್ಷಮತೆ, ಪ್ರೋತ್ಸಾಹ, ಅಭ್ಯಾಸ, ತರಬೇತಿ ಇವು ಕಲಿಕೆಯನ್ನು ಪೋಷಿಸುತ್ತವೆ.

ಕಲಿಕೆಗೆ ತೀರ ಸಮೀಪವಾಗುವ ಇನ್ನೊಂದು ಪರಿಕಲ್ಪನೆಯೆಂದರೆ, ತರಬೇತಿ.  ತರಬೇತಿಯು ಯಾವಾಗಲೂ ನಿಖರವಾದ ಉದ್ದೇಶಪೂರಿತವಾದ ಕಾರ್ಯಕ್ರಮ. ತಿಳಿದಿರುವವ ತಿಳಿಯದವನಿಗೆ ಕಲಿಕೆಯ ಅನುಭವಗಳನ್ನು ಕೊಟ್ಟು ಉದ್ದೇಶಿತ ಗುರಿ ತಲುಪುವುದು ಇದರ ಉದ್ದೇಶ. ತರಬೇತಿಗಳಿಂದ, ವ್ಯಕ್ತಿಗಳು ಸ್ವಾಭಿಮಾನಿ, ಸ್ವಾವಲಂಬಿ ಮತ್ತು ಸ್ವತಂತ್ರ್ಯ ಜೀವಿಗಳಾಗುವರು. ಇದರಿಂದಾಗಿ ಸಮಾಜವು ತನ್ನ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವುದು.

ಕಲಿಕೆ ಮತ್ತು ಪಕ್ವತೆಗೆ ಪರಸ್ಪರ ಸಂಬಂಧವಿದೆ. ಒಂದು ಮತ್ತೊಂದನ್ನು ಪೋಷಿಸುತ್ತದೆ. ದೈಹಿಕ ವಿಕಾಸಕ್ಕೂ ಮತ್ತು ದೇಹದ ಭಾಗಗಳನ್ನು ಕೌಶಲಪೂರ್ಣವಾಗಿ ಬಳಸುವ ಸಾಮರ್ಥ್ಯಕ್ಕೂ ಪ್ರಬಲವಾದ ಸಂಬಂಧವಿದೆ ಎಂಬುದು   ಸಂಶೋಧನೆಗಳಿಂದ ತಿಳಿದುಬಂದಿರುವ ವಿಚಾರ. ಅದೇ ರೀತಿ ಮಾನವನ ಇಚ್ಛಾಶಕ್ತಿಯೂ ಕಲಿಕೆಗೆ ಹೆಚ್ಚಿನ ಮಟ್ಟದಲ್ಲಿ ಕಾರಣವಾಗುತ್ತದೆ. ಇಚ್ಛಾಶಕ್ತಿಯಿಂದಲೇ ಮಾನವನು ಏನನ್ನು ಬೇಕಾದರೂ ಸಾಧಿಸಬಹುದು ಎಂದು ಬಲ್ಲವರು ಹೇಳುತ್ತಾರೆ.

ಬಡತನ, ಅತಿಹೆಚ್ಚು ಜನಸಂಖ್ಯೆ, ಮತ್ತು ಅನಾರೋಗ್ಯ–ಇವುಗಳು ಪೋಷಕರನ್ನು ಮತ್ತು ಅವರ ಮಕ್ಕಳನ್ನು ಕಾಡುತ್ತವೆ.  ಇಂತಹ ಹಲವಾರು ಕಾರಣಗಳಿಂದ ಮಕ್ಕಳು ಕಲಿಯುವ ಅವಕಾಶದಿಂದ ವಂಚಿತರಾಗುತ್ತಾರೆ.

ಅನುವಂಶೀಯವಾಗಿ ಏನೆಲ್ಲಾ ಪ್ರತಿಭಾವಂತ ಗುಣಗಳುಳ್ಳ ಜೀನುಗಳನ್ನು ಪಡೆದುಕೊಂಡು ಒಂದು ಮಗುವು ಹುಟ್ಟಿದರೂ ಅದಕ್ಕೆ ಸರಿಯಾದ ಪರಿಸರ ಸಿಗಲಿಲ್ಲ ಎಂದಾಗ ಯಾವ ಕಲಿಕೆಯೂ ತರಬೇತಿಯೂ ಸಾರ್ಥಕವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಮಕ್ಕಳಲ್ಲಿ ಅತಿ ಕಡಿಮೆ ಸಾಮರ್ಥ್ಯ ಬೆಳೆಯಬಹುದು. ಶಾಬ್ದಿಕ ಸಾಮರ್ಥ್ಯ, ಕೌಶಲಗಳ ಬೆಳವಣಿಗೆ ಹೀಗೆ ಎಲ್ಲದರಲ್ಲೂ ಅವರು ಸರಾಸರಿಗಿಂತಲೂ ಕಡಿಮೆ ಸಾಧಕರಾಗಿ ಕಂಡುಬರುವರು. ಹಾಗಾಗಿ ಪ್ರೋತ್ಸಾಹಕರ ಪರಿಸರ ಬಹಳ ಮುಖ್ಯವಾಗುವುದು. ಅತ್ಯಗತ್ಯವಾದ ಭೌತಿಕ ಮತ್ತು ಬೌದ್ಧಿಕ ಪಕ್ವತೆಯಿದ್ದಾಗ ಹೊಸ ಹೊಸ ಕಲಿಕೆಯು ಸಾಧ್ಯವಾಗುವುದು.

ಕಲಿಕೆಯು ನಡೆಯಲು "ಸ್ವೀಕೃತಿ" ಬಹಳ ಪ್ರಮುಖವಾದ ಅಂಶ. ಒಂದು ವೇಳೆ ಮಕ್ಕಳು ಕಲಿಯಲು ಮಾನಸಿಕವಾಗಿ ತಯಾರಿಲ್ಲದಿದ್ದರೆ, ಅವರು ಯಾವ ವಿಚಾರವನ್ನೂ ಸ್ವೀಕರಿಸುವುದೇ ಇಲ್ಲ. ಇದೊಂದು ರೀತಿಯಲ್ಲಿ ಸಿದ್ಧತಾ ಹಂತವೆಂದೇ ಹೇಳಬಹುದು. ಕಲಿಕೆಗಾಗಿ ಸ್ವೀಕಾರ ಮನೋಭಾವವಿಲ್ಲದ ಮಕ್ಕಳಿಗೆ ಕಲಿಸಲು ಮುಂದುವರಿದರೆ, ಅದು ಮಕ್ಕಳಲ್ಲಿ ಹಠಮಾರಿತನವನ್ನು, ಕೆಟ್ಟ ಅಭ್ಯಾಸಗಳನ್ನು ಮತ್ತು ಕಲಿಕೆಯ ಕುರಿತ ಜುಗುಪ್ಸೆಯನ್ನೂ ಉಂಟುಮಾಡಬಹುದು. ಮಾನಸಿಕ ಸಿದ್ಧತೆ, ಪಕ್ವತೆ, ಅಭಿಪ್ರೇರಣೆಗಳೊಂದಿಗೆ, ಪ್ರೋತ್ಸಾಹವೂ ದೊರಕಿದಾಗ ಕಲಿಕೆಯನ್ನು ನಿರೀಕ್ಷಿಸಬಹುದು. ಈ ಸಿದ್ಧತೆಯನ್ನು ರಾಬರ್ಟ್ ಹ್ಯಾವಿಗರ್ಸ್ಟ್ "ಬೋಧಿಸಬಹುದಾದ ಕ್ಷಣ" ಎನ್ನುತ್ತಾನೆ. ಅವನ ಪ್ರಕಾರ, ದೈಹಿಕ ಪಕ್ವತೆ, ಸಾಮಾಜಿಕ ಬೇಡಿಕೆಯ ಒತ್ತಡ, ಸ್ವಯಂ ಸಿದ್ಧತೆ, ಬೋಧಿಸಬಹುದಾದ ಸ್ಥಿತಿಯನ್ನು ಸೂಚಿಸುತ್ತದೆ. ಈ ಯೋಗಾಯೋಗ ಫಲಿಸದಿದ್ದಲ್ಲಿ ಬೋಧನೆಯೊಂದು ವ್ಯರ್ಥಾಲಾಪವಾಗುವುದು.

**ಕಲಿಕಾ ಸಿದ್ಧತೆಯ ಲಕ್ಷಣಗಳು:**

**ಕಲಿಕೆಯಲ್ಲಿನ ಆಸಕ್ತಿ:** ಮಕ್ಕಳು ತಾವು ಕಲಿಯಬೇಕಾಗಿರುವ ವಿಷಯದಲ್ಲಿ ಆಸಕ್ತಿಯನ್ನು ತೋರುವರು ಅಥವಾ ಸ್ವಯಂ ಕಲಿಕೆಗೆ ಪ್ರಯತ್ನಿಸುವರು.

**ಪ್ರಾರಂಭದ ನಂತರವೂ ಉಳಿದುಕೊಳ್ಳುವ ಆಸಕ್ತಿ:** ಮಕ್ಕಳು ತಾವಾಗೇ ಯಾವಾಗ ಕಲಿಯಲು ಸಿದ್ಧರಾಗುವರೋ ಆಗ ಅವರ ಆಸಕ್ತಿಯು ಪ್ರಾರಂಭದಲ್ಲಷ್ಟೇ ಅಲ್ಲದೇ ನಂತರವೂ ಮುಂದುವರೆದು ಕಲಿಕೆಯ ಕೊನೆಯವರೆಗೂ ಉಳಿದುಕೊಳ್ಳುವುದು. ಮಧ್ಯದಲ್ಲಿ ಏನೇ ಅಡೆತಡೆಗಳು ಬಂದರೂ ಆಸಕ್ತಿಯು ಅವರ ಕಲಿಕೆಯನ್ನು ಅನೂಚಾನವಾಗಿ ನಡೆಯಲು ಅನುವು ಮಾಡಿಕೊಡುವುದು.

**ಸುಧಾರಣೆ:** ಸತತವಾದ ಅಭ್ಯಾಸದಿಂದ ಮಕ್ಕಳ ಕಲಿಕೆಯಲ್ಲಿ ಅಪಾರವಾದ ಸುಧಾರಣೆಯು ಕಂಡುಬರುವುದು. ಕೆಲವೊಮ್ಮೆ ಸುಧಾರಣೆಯು ಸ್ಥೂಲವಾಗಿ ಕಾಣುವಂತಿಲ್ಲದಿದ್ದರೂ ಸೂಕ್ಷ್ಮವಾಗಿ ವಿವಿಧ ಹಂತಗಳಲ್ಲಿ ಧನಾತ್ಮಕ ಬದಲಾವಣೆಗಳನ್ನು ಮಕ್ಕಳು ತೋರುವರು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ-3**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಪದಗಳನ್ನು ಗುರುತಿಸಿ.

1. ಕಲಿಕೆಯು ____________

   ಎ. ಉದ್ದೇಶಪೂರಿತವಾದ ಮತ್ತು ಗುರಿಯನ್ನು ಹೊಂದಿರುವ ಚಟುವಟಿಕೆ

   ಬಿ. ಬಹಳ ತ್ರಾಸದಾಯಕವಾದ ಚಟುವಟಿಕೆ

   ಸಿ. ಶಿಸ್ತುಬದ್ಧ ಚಟುವಟಿಕೆ

   ಡಿ. ಉಪಯುಕ್ತವಾದ ಚಟುವಟಿಕೆ

2. ಕಲಿಕಾ ಸಿದ್ಧತೆಯು ಮಕ್ಕಳಲ್ಲಿ ಕಂಡುಬರುವ ರೀತಿ ____________

   ಎ. ಪೂರ್ವಜ್ಞಾನ ಮತ್ತು ಪಕ್ವತೆ

ಬಿ. ಭೌತಿಕ ಮತ್ತು ಸಂಜ್ಞಾನಾತ್ಮಕ ವಿಕಾಸ

ಸಿ. ಅಭಿರುಚಿ, ಕೊನೆಯವರೆಗೂ ಉಳಿದುಕೊಳ್ಳುವ ಆಸಕ್ತಿ, ಮತ್ತು ಸುಧಾರಣೆ

ಡಿ. ಆಸಕ್ತಿ ಮತ್ತು ಒಲವು

3. ಕಲಿಕೆಗೆ ವಿರೋಧ ಅಥವಾ ಪ್ರತಿಭಟನೆ ತೋರುವ ವರ್ತನೆಯು ಮುಂದೆ ____________

ಎ. ಕೆಟ್ಟ ಅಭ್ಯಾಸಗಳ ಕಲಿಕೆ ಅಥವಾ ಕಲಿಕೆಯನ್ನೇ ದ್ವೇಷಿಸುವಿಕೆಯಾಗಬಹುದು.

ಬಿ. ಅನಕ್ಷರತೆಯನ್ನುಂಟುಮಾಡಬಹುದು

ಸಿ. ಸಮಾಜವಿರೋಧೀ ವ್ಯಕ್ತಿತ್ವವನ್ನು ಉಂಟುಮಾಡಬಹುದು

ಡಿ. ನಿರುದ್ಯೋಗವನ್ನು ಸೃಷ್ಟಿಸಬಹುದು

4. "ಯಾವುದೇ ಒಂದು ಮಗುವನ್ನು ತರಬೇತಿ ನೀಡುವುದರ ಮೂಲಕ ಎಂತಹ ವ್ಯಕ್ತಿಯನ್ನಾಗಿಬೇಕಾದರೂ ಮಾಡಬಹುದು ಎಂದು ಹೇಳಿದವ____________

ಎ. ಸಿಗ್ಮಂಡ್‌ಫ್ರಾಯ್ಡ್

ಬಿ. ಥಾರ್ನ್‌ಡೈಕ್

ಸಿ. ಜೆ.ಬಿ.ವ್ಯಾಟ್ಸನ್

ಡಿ. ಬಿ.ಎಫ್.ಸ್ಕಿನ್ನರ್

5. ತರಬೇತಿಯೆಂದರೆ____________

ಎ. ಯಾವುದೇ ಒಂದು ಕಾರ್ಯದ ಪುನರಾವರ್ತನೆ

ಬಿ. ಒಂದು ಆಯ್ದ, ಉದ್ದೇಶಪೂರಿತವಾದ ಮುಖಾಮುಖೀ ಕಾರ್ಯಕ್ರಮ

ಸಿ. ಒಂದು ಯಾಂತ್ರಿಕವಾದ ನಿರಾಸಾದಾಯಕವಾದ ನಿಷ್ಕ್ರಿಯವಾದ ಚಟುವಟಿಕೆ

ಡಿ. ಪ್ರಾಣಿಗಳ ಕಲಿಕೆಗೆ ಸೂಕ್ತವಾದುದು

## 1.3.4. ಸಾರಾಂಶಿಸೋಣ

- ವಿಕಾಸಾತ್ಮಕ ಪ್ರಕ್ರಿಯೆಯು ತನ್ನದೇ ಆದ ವಿನ್ಯಾಸವನ್ನು ಹೊಂದಿದೆ.
- ವಿಕಾಸದ ಪ್ರಕ್ರಿಯೆಯಲ್ಲಿ ಹಲವಾರು ತತ್ವಗಳನ್ನು ಗುರುತಿಸಬಹುದು.
- ವಿಕಾಸದ ತತ್ವಗಳು ಸಾರ್ವತ್ರಿಕವಾದವು.
- ವಿಕಾಸ ಮತ್ತು ಕಲಿಕೆಯ ನಡುವೆ ಸಂಬಂಧವಿದೆ.

## 1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

1. ವಿಕಾಸ ಪ್ರಕ್ರಿಯೆಯು ಶಿರದಿಂದ ಪಾದದಕಡೆಗೆ ನಡೆಯುವುದು
2. ವಿಕಾಸವು ಕೇಂದ್ರದಿಂದ ಪರಿಧಿಯವರೆಗೆ ದೇಹದಲ್ಲಿ ಕಂಡುಬರುವುದು
3. ಪ್ರಕೃತಿ ಮತ್ತು ಪೋಷಣೆ

4. ಸಾರ್ವತ್ರಿಕದಿಂದ ನಿರ್ದಿಷ್ಟತೆಯ ತತ್ವ

5. ಕೇಂದ್ರದಿಂದ ಪರಿಧಿಯ ತತ್ವ

6. ವಿಕಾಸವು ದೇಹದ ಕೇಂದ್ರದಿಂದ ಪರಿಧಿಯೆಡೆಗೆ ಆಗುವುದು

7. ಮಂಡಿಗಾಲು, ತೆವಳು, ನಿಲ್ಲುವುದು ಮತ್ತು ನಡೆಯುವುದು

8. ಮುಂದುವರಿದ ವಿಕಾಸದ ಹಂತಗಳು ಕನಿಷ್ಟವಿಕಾಸ ಹಂತದ ಮೊದಲೇ ಬರುವುವು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

1. ಸಿ 2. ಎ 3. ಎ 4. ಸಿ 5. ಎ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3**

1. ಎ 2. ಸಿ 3. ಎ 4. ಸಿ 5. ಬಿ

## 1.3.6. ಘಟಕಾಂತ್ಯ ಅಭ್ಯಾಸಗಳು

1. ವಿಕಾಸದ ತತ್ವಗಳನ್ನು ವಿವರಿಸಿ
2. ಕಲಿಕೆ ಮತ್ತು ವಿಕಾಸದ ನಡುವಿನ ಸಂಬಂಧವನ್ನು ವಿವರಿಸಿ.

## 1.3.7. ಪರಾಮರ್ಶನ ಗ್ರಂಥಗಳು


1. https://www.classroom.kidshealth.org/9to12/body/system/endocrine
2. https://www.quinticsports.com images
3. https://www.pinterest.comimages
4. Elizabeth Hurlock (32nd reprint 2016) Child Development Sixth Edition Mc Graw Hill Educaiton Indian Edition
5. Laura. E.Berk Childhood Development Ninth edition Pearson Education Inc.(2013, 1017)
6. Chauhan S.S. Advanced Educational Psychology Vikas Publishing House Pvt.Ltd. (2010)
7. Dandapani.S. Advanced Educational Psychology (2005) Anmol Publications Delhi
8. Nataraj V. Vikasa manovignana (2010) Srinivas Prakashana Mysore
9. Dr.Suneetha.CN Understanding the learner and the learning process Shruthiloka Prakashana 2011.
10. ಡಾ.ಸುನೀತಾ.ಸಿ.ಎನ್ ಕಲಿಕೆ ಮತ್ತು ಕಲಿಕಾರ್ಥಿ–ಶೈಕ್ಷಣಿಕ ಮನೋವಿಜ್ಞಾನ–ಶೃತಿಲೋಕ ಪ್ರಕಾಶನ 2014
11. John W.Santrock University of Texas at Dallas - Adolescence TATA McGRAW – HILL EDITION (2011)


*********************

# ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ

## ಘಟಕ 4 : ವ್ಯಕ್ತಿವಿಕಾಸದ ಆಯಾಮಗಳು

## ದೈಹಿಕ, ಸಂಜ್ಞಾನಾತ್ಮಕ, ಭಾಷಾತ್ಮಕ, ಭಾವನಾತ್ಮಕ, ಸಾಮಾಜಿಕ ಹಾಗೂ ನೈತಿಕ ಮತ್ತು ಅವುಗಳ ನಡುವಿನ ಪರಸ್ಪರ ಸಂಬಂಧ

## (ಪಿಯಾಷೆ, ಎರಿಕ್ಸನ್ ಮತು ಕೋಹ್ಲ್‌ಬರ್ಗ್‌ರವರ ಪ್ರತಿಪಾದನೆಗಳ ಆಧಾರ)

### ಘಟಕದ ರಚನೆ


1.4.1. ಕಲಿಕಾ ಉದ್ದೇಶಗಳು

1.4.2. ಪೀಠಿಕೆ

1.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.4.3.1. ದೈಹಿಕ ವಿಕಾಸ, ಸಂಜ್ಞಾನಾತ್ಮಕ ವಿಕಾಸ, ಭಾವನಾತ್ಮಕ ವಿಕಾಸ, ಸಾಮಾಜಿಕ ಮತ್ತು ನೈತಿಕ ವಿಕಾಸ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.4.3.2. ಸಂಜ್ಞಾನಾತ್ಮಕ ಮತ್ತು ಭಾಷಾ ವಿಕಾಸ – ಪಿಯಾಷೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.4.3.3. ಭಾವನಾತ್ಮಕ ಮತ್ತು ನೈತಿಕ ವಿಕಾಸ – ಕೋಹ್ಲ್‌ಬರ್ಗ್

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1.4.3.4. ಮನೋ–ಸಾಮಾಜಿಕ ವಿಕಾಸ – ಎರಿಕ್ಸನ್

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4

1.4.4. ಸಾರಾಂಶಿಸೋಣ

1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, 3 ಮತ್ತು 4

1.4.6. ಘಟಕಾಂತ್ಯ ಅಭ್ಯಾಸಗಳು

1.4.7. ಪರಾಮರ್ಶನ ಗ್ರಂಥಗಳು


### 1.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ವ್ಯಕ್ತಿವಿಕಾಸದ ವಿವಿಧ ಆಯಾಮಗಳನ್ನು ಗುರುತಿಸುವರು;
- ಸಂಜ್ಞಾನಾತ್ಮಕ ವಿಕಾಸ ಮತ್ತು ಆಕೃತಿಕಲ್ಪಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ವಿವರಿಸುವರು;
- ಜೀನ್‌ಪಿಯಾಷೆಯು ಪ್ರತಿಪಾದಿಸಿದ ಸಂಜ್ಞಾನಾತ್ಮಕ ವಿಕಾಸದ ವಿವಿಧ ಹಂತಗಳನ್ನು ವರ್ಣಿಸುವರು;
- ಎರಿಕ್ಸನ್ ಪ್ರತಿಪಾದಿಸಿದ ಮನೋ–ಸಾಮಾಜಿಕ ವಿಕಾಸದ ಹಂತಗಳನ್ನು ವಿವರಿಸುವರು; ಮತ್ತು
- ಕೋಹ್ಲ್‌ಬರ್ಗ್ ಪ್ರತಿಪಾದಿಸಿದ ನೈತಿಕ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವರು.

## 1.4.2. ಪೀಠಿಕೆ

ನಿಮಗೆ ಈಗಾಗಲೇ ತಿಳಿದಿರುವಂತೆ, ಮಾನವನಲ್ಲಿ ವಿಕಾಸವು ಹಲವಾರು ಆಯಾಮಗಳನ್ನು ಹೊಂದಿದ್ದು, ಅದು ವಿವಿಧ ಕ್ಷೇತ್ರಗಳಿಗೆ ಹರಡಿಕೊಂಡಿರುತ್ತದೆ. ಈ ಕಾರಣದಿಂದಾಗಿ ಅದು ಅತ್ಯಂತ ಸಂಕೀರ್ಣ ಪ್ರಕ್ರಿಯೆಯಾಗಿ ಕಂಡುಬರುವುದು. ಹಲವಾರು ಮನೋವಿಜ್ಞಾನಿಗಳು ವಿವಿಧ ದೃಷ್ಟಿಕೋನಗಳಿಂದ ಮಾನವ ವಿಕಾಸ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಉದಾಹರಣೆಗೆ, ಸಿಗ್ಮಂಡ್‌ಫ್ರಾಯ್ಡ್‌ನ ಮನೋವಿಶ್ಲೇಷಣಾತ್ಮಕ ಸಿದ್ಧಾಂತ, ಪಿಯಾಷೆಯ ಸಂಜ್ಞಾನಾತ್ಮಕ ಸಿದ್ಧಾಂತ, ಎರಿಕ್ಸನ್‌ನ ಮನೋ–ಸಾಮಾಜಿಕ ಸಿದ್ಧಾಂತ ಮತ್ತು ಕೋಹ್ಲ್‌ಬರ್ಗ್‌ನ ನೈತಿಕ ವಿಕಾಸ ಸಿದ್ಧಾಂತ ಇತ್ಯಾದಿ. ಈ ಘಟಕದಲ್ಲಿ ಮೊದಲಿಗೆ ನೀವು ಮಾನವನ ವಿಕಾಸದ ಸಾಮಾನ್ಯ ಅಂಶಗಳನ್ನು ನಂತರದಲ್ಲಿ ಸಂಜ್ಞಾನಾತ್ಮಕ ವಿಕಾಸ, ಮನೋ–ಸಾಮಾಜಿಕ ವಿಕಾಸ, ಮತ್ತು ನೈತಿಕ ವಿಕಾಸವನ್ನು ಕುರಿತು ನಿರ್ದಿಷ್ಟವಾಗಿ ಅಭ್ಯಾಸ ಮಾಡಲಿದ್ದೀರಿ.

## 1.4.3.1 ದೈಹಿಕ ವಿಕಾಸ, ಸಂಜ್ಞಾನಾತ್ಮಕ ವಿಕಾಸ, ಭಾವನಾತ್ಮಕ ವಿಕಾಸ, ಸಾಮಾಜಿಕ ಮತ್ತು ನೈತಿಕ ವಿಕಾಸ

ನೀವೇನಾದರೂ ಒಂದು ವೇಳೆ ಶಾಲಾಪೂರ್ವದ ಮಕ್ಕಳನ್ನು ಮತ್ತು ಅವರ ವರ್ತನೆಗಳನ್ನು ಗಮನಿಸಿದ್ದೇ ಆದರೆ, ಅವರ ಶಿಕ್ಷಕಿಯರು ಅವರಿಗೆ ಪದ್ಯಗಳನ್ನೋ ಅಥವಾ ಒಂದು ಕಥೆಯನ್ನೋ ಹೇಳುವಾಗ ಬಹಳಷ್ಟು ನಾಟಕೀಯವಾಗಿ, ಮುಖದಲ್ಲಿ ಎದ್ದು ಕಾಣುವಂತಹ ಅಭಿವ್ಯಕ್ತಿಗಳಿಂದ ಹೇಳುತ್ತಿರುವುದನ್ನು ನೋಡುವಿರಿ. ಉದಾಹರಣೆಗೆ, ಕಾಗೆ, ಆನೆ ಮಳೆರಾಯ, ಜಿಂಕೆಯ ಓಟ ಇತ್ಯಾದಿ. ಹಾಗೆಯೇ ಈ ಕೆಳಗೆ ಕೊಟ್ಟಿರುವ ಕೆಲವು ಸಂದರ್ಭಗಳನ್ನು ವಿಶ್ಲೇಷಿಸಿ:

- ಚಿಕ್ಕ ಮಕ್ಕಳು (ಸುಮಾರು 2 ರಿಂದ 4 ವರ್ಷಗಳು) ರಸ್ತೆಯಲ್ಲಿ ತಾವು ಓಡುವ ದಾರಿಯುದ್ದಕ್ಕೂ ಚಂದ್ರನೂ ಆಕಾಶದಲ್ಲಿ ಹಾಗೇ ಓಡುವನು ಎಂದು ಬಲವಾಗಿ ನಂಬಿರುತ್ತಾರೆ
- ಒಂದು ಚಿಕ್ಕ ಹೆಣ್ಣುಮಗುವೊಂದು ಗಿಡದಬಳಿ ನಿಂತು ತನ್ನ ತುಟಿಗಳ ಮೇಲೆ ಬೆರಳಿಟ್ಟುಕೊಂಡು ಬೇರೆ ಎಲೆಗಳಿಗೆ "ಶ್‌ಶ್‌ಶ್ ನಿಶ್ಯಬ್ದ, ಸುಮ್ಮನಿರಿ, ಇಲ್ಲಾಂದರೆ ಆ ಚಿಟ್ಟೆ ಹಾರಿಹೋಗುತ್ತದೆ" ಎಂದು ಹೇಳುತ್ತಿದ್ದಾಳೆ.
- ಮಗುವೊಂದು ಕೋಲಿನೊಂದಿಗೆ ಆಟವಾಡುತ್ತಿದೆ, ಆದರೆ ಆ ಕೋಲನ್ನು ತನ್ನ ಮೋಟಾರ್ ಸೈಕಲ್ಲೆಂದು ಹೇಳುತ್ತಿದೆ.
- ತನ್ನ ಗೊಂಬೆ ಪಾಪುಗೆ ಹುಷಾರಿಲ್ಲವೆಂದು ಚಿಕ್ಕ ಮಗುವೊಂದು ತಾನು ಡಾಕ್ಟರ್‌ನಂತೆ ಅದಕ್ಕೆ ಇಂಜೆಕ್ಷನ್ ನೀಡುತ್ತಿದೆ.

ಪ್ರಶ್ನೆ: ಮಕ್ಕಳ ಇಂತಹ ವರ್ತನೆಗಳಿಗೆ ಏನು ಕಾರಣ?

ಇದನ್ನು ನೀವು ಪಿಯಾಷೆಯು ಪ್ರತಿಪಾದಿಸಿದ ಸಿದ್ಧಾಂತದಲ್ಲಿ ಕಾಣುವಿರಿ. ಮಕ್ಕಳು ಆ ವಯಸ್ಸಿನಲ್ಲಿ ಪೂರ್ವ–ಸಂಕ್ರಿಯಾತ್ಮಕ ಹಂತದ ವಿಕಾಸದಲ್ಲಿರುತ್ತಾರೆ. ಈ ಹಂತವು ಸಾಂಕೇತಿಕ ಚಿಂತನೆ, ಕ್ರಿಯಾ–ಆಕೃತಿಕಲ್ಪಗಳಿಂದ ಕೂಡಿರುತ್ತದೆ ಮತ್ತು ಇಲ್ಲಿ ನಾಟಕೀಯತೆ, ನಂಬಿಸುವಂತೆ ನಟಿಸುವಿಕೆ ಮಕ್ಕಳ ವರ್ತನೆಯಲ್ಲಿ ಸಾಮಾನ್ಯವಾಗಿರುತ್ತದೆ.

ಒಂದು ಭಾನುವಾರ ರಮೇಶನು ತನ್ನ ಗೆಳೆಯ ಸುರೇಶನ ಮನೆಗೆ ಹೋಗುತ್ತಾನೆ. ಅಲ್ಲಿ ಸುರೇಶನ 3 ವರ್ಷದ ಮಗ ಆಟ ಆಡುತ್ತಿರುತ್ತಾನೆ. ರಮೇಶನು "ಪುಟ್ಟಾ ನಿನ್ನ ಅಪ್ಪ ಎಲ್ಲೋ?" ಎಂದು ಕೇಳುತ್ತಾನೆ. ಸುರೇಶನ ಮಗ ಪುಟ್ಟನಿಗೆ ಈ ರಮೇಶ್ ಅಂಕಲ್ ಚೆನ್ನಾಗಿಯೇ ಗೊತ್ತು. ಹಾಗಾಗಿ "ಅಪ್ಪ ಸ್ನಾನಕ್ಕೆ ಹೋಗಿದ್ದಾರೆ ಅಂಕಲ್, ಮತ್ತೆ ನೀವು ಒಬ್ಬರೇ ಬಂದಿದ್ದೀರಾ ನಿಮ್ಮ ಮಮ್ಮಿ ಬರಲಿಲ್ಲವಾ?" ಎನ್ನುತ್ತಾನೆ.

ಇದನ್ನು ಕೇಳಿದ ರಮೇಶನಿಗೆ ಹಿಡಿಸಲಾರದಷ್ಟು ನಗು ಉಕ್ಕಿ ಬರುತ್ತದೆ. ಆದರೆ, ನೀವು ಹೇಳಿ ನಿಜವಾಗಿಯೂ ಮಗುವು ಏನನ್ನು ಕೇಳಿತು?ಮಗುವು ರಮೇಶನ ಹೆಂಡತಿಯನ್ನು ಏಕೆ ಕರೆತರಲಿಲ್ಲಾ ಎಂದು ಕೇಳಿತು ಎಂಬುದು ನಿಮಗೆ ತಿಳಿದಿದೆ. ಈ ಎಲ್ಲ ವಿಷಯಗಳಿಗೆ ಕಾರಣವನ್ನು ನೀವು ಈ ಘಟಕದಲ್ಲಿ ಕಲಿಯುವಿರಿ.

## 1.4.3.1. ವಿಕಾಸದ ಕ್ಷೇತ್ರಗಳು ಮತ್ತು ಆಯಾಮಗಳು

ವಿಕಾಸವು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಇದು ಹಲವಾರು ಅಂತರ್–ಸಂಬಂಧ ಹೊಂದಿರುವ ಕ್ಷೇತ್ರಗಳನ್ನು ಮತ್ತು ಆಯಾಮಗಳನ್ನು ಹೊಂದಿದೆ. ವಿಕಾಸವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ಈ ಎಲ್ಲಾ ಕ್ಷೇತ್ರಗಳನ್ನು ಮತ್ತು ಆಯಾಮಗಳನ್ನು ಸಮಗ್ರವಾಗಿ ಅರ್ಥೈಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಬಹಳಷ್ಟು ಜನಪ್ರಿಯ ಮನೋವಿಜ್ಞಾನಿಗಳು ಪರಿಪೂರ್ಣ ವಿಕಾಸ ಪ್ರಕ್ರಿಯೆಯನ್ನು ಅನುಕೂಲಸಿಂಧುವಾಗಿ ವಿಂಗಡಿಸಿ, ವಿಶ್ಲೇಷಿಸಿ ವಿವಿಧ ಸಿದ್ಧಾಂತಗಳನ್ನು ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ ಜೀನ್‌ಪಿಯಾಷೆ, ಬ್ರೂನರ್ ಮತ್ತು ವೈಗೋಟ್ಸ್‌ಕೀ–ಇವರುಗಳು ಸಂಜ್ಞಾನ ಮತ್ತು ಕೌಶಲಗಳ ವಿಕಾಸವನ್ನು ವಿವರಿಸಿದ್ದಾರೆ. ವೈಗೋಟ್ಸ್‌ಕೀಯವರ ಸಾಮಾಜಿಕ–ಸಾಂಸ್ಕೃತಿಕ ಸಿದ್ಧಾಂತವು ಜ್ಞಾನವಲಯದ ಸಾಮರ್ಥ್ಯಗಳಲ್ಲಿನ ವಿಕಾಸದಲ್ಲಿ ಕಂಡುಬರುವ ವೈವಿಧ್ಯತೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅದೇ ರೀತಿ ಸಿಗ್ಮಂಡ್‌ಫ್ರಾಯ್ಡ್‌ನು ಮನೋವಿಶ್ಲೇಷಣೆಯ ದೃಷ್ಟಿಕೋನದಲ್ಲಿ ವಿಕಾಸದ ಪ್ರಕ್ರಿಯೆಯನ್ನು ವಿಶ್ಲೇಷಿಸಿದ್ದಾನೆ. ಎರಿಕ್‌ಸನ್‌ನು ವಿಕಾಸವನ್ನು ಮನೋ–ಸಾಮಾಜಿಕ ದೃಷ್ಟಿಕೋನದಿಂದ ಅರ್ಥೈಸಿದ್ದಾನೆ. ವಿಕಾಸದ ಪ್ರಕ್ರಿಯೆಯಲ್ಲಿ ಜ್ಞಾನವಲಯ, ಭಾವವಲಯ, ಸಾಮಾಜಿಕ ವಲಯ, ಭಾಷಾವಲಯ ಮತ್ತು ನೈತಿಕವಲಯಗಳೆಂಬ ವಿಂಗಡಣೆಯನ್ನು ಮಾಡಲಾಗಿದೆ. ಅದಲ್ಲದೇ ಪ್ರತಿಯೊಂದು ವಲಯವೂ ತನ್ನದೇ ಆದ ಆಳ, ನಿರ್ದಿಷ್ಟವಾದ ಗುಣಲಕ್ಷಣಗಳು ಮತ್ತು ವ್ಯಾಪ್ತಿಯನ್ನು ಹೊಂದಿರುತ್ತದೆ.

ವಿಕಾಸವು ನಿರಂತರವಾದ ಪ್ರಯಾಣವಾಗಿದ್ದು, ಮಗುವು ತಾಯಿಯ ಗರ್ಭದಲ್ಲಿದ್ದಾಗಲೇ ಪ್ರಾರಂಭವಾಗುತ್ತದೆ. ಗರ್ಭಾವಸ್ಥೆಯಲ್ಲಿನ ಸುಮಾರು 9 ತಿಂಗಳನ್ನು 'ಪ್ರಸವ–ಪೂರ್ವ ಅವಧಿ ಎಂದು ಗುರುತಿಸಲಾಗಿದೆ. ಹಾಗೆಯೇ ಮಗುವು ಜನಿಸಿದ ಕ್ಷಣದ ಮುಂದಿನ ಕಾಲಮಾನವನ್ನು 'ಪ್ರಸವೋತ್ತರ ಅವಧಿ' ಎಂದು ಗುರುತಿಸಲಾಗಿದೆ. ಇಲ್ಲಿಂದ ಮಗುವಿನ ದೈಹಿಕ ವಯಸ್ಸನ್ನು ಎಣಿಸಲಾಗುವುದು. ಇ.ಬಿ.ಹರ್ಲಾಕ್‌ನು (1968) ಜೀವಮಾನ ಪರ್ಯಂತ ನಡೆಯುವ ಈ ವಿಕಾಸ ಪ್ರಕ್ರಿಯೆಯನ್ನು ವಯೋಮಾನಕ್ಕೆ ಅನುಗುಣವಾಗಿ ಈ ಕೆಳಕಂಡಂತೆ ವಿಭಜಿಸಿದ್ದಾನೆ.

| | |
|---|---|
| ಪ್ರಸವಪೂರ್ವಹಂತ | ತಾಯ ಗರ್ಭದಲ್ಲಿನ ಸುಮಾರು ನವಮಾಸಗಳು |
| ಪ್ರಸವೋತ್ತರಹಂತ | ಮಗುವು ಜನಿಸಿದ ಕ್ಷಣದಿಂದ ನಂತರದ ಕಾಲಮಾನ<br>(ಸುಮಾರು 2 ವಾರ–ಹಸುಳೆಯ ಹಂತ) |
| ಶಿಶುಹಂತ | ಜನಿಸಿದ 3ನೇ ವಾರದಿಂದ 2ವರ್ಷಗಳವರೆಗೆ |
| ಪೂರ್ವಬಾಲ್ಯ | 2ನೇ ವರ್ಷದಿಂದ 6ವರ್ಷಗಳವರೆಗೆ |
| ಉತ್ತರಬಾಲ್ಯ | 6ನೇ ವರ್ಷದಿಂದ 10 / 12 ವರ್ಷಗಳವರೆಗೆ |
| ಪೂರ್ವಹದಿಹರೆಯ ಹಂತ | 10 / 12ರಿಂದ 13ರಿಂದ 14 ವರ್ಷಗಳವರೆಗೆ |
| ಹದಿಹರೆಯ ಹಂತ | 13 /14 ರಿಂದ 17 ವರ್ಷಗಳವರೆಗೆ |
| ಅಂತಿಮ ಹದಿಹರೆಯ ಹಂತ | 17ರಿಂದ 22 ವರ್ಷಗಳವರೆಗೆ |
| ವಯಸ್ಕ ಹಂತ | 22 ರಿಂದ 40 ವರ್ಷಗಳವರೆಗೆ |
| ಮಧ್ಯವಯಸ್ಕ ಹಂತ | 40ರಿಂದ 60 ವರ್ಷಗಳವರೆಗೆ |
| ವೃದ್ಧಾಪ್ಯ | 60 ವರ್ಷಗಳಿಗೂ ಮೇಲ್ಪಟ್ಟು ಮರಣದವರೆಗೆ |

ಪ್ರತೀ ಹಂತದಲ್ಲೂ ವಿಕಾಸದ ವಿವಿಧ ಆಯಾಮಗಳು ಅದಕ್ಕೆ ತಕ್ಕಂತೆ ವರ್ತನೆಗಳು ಬದಲಾಗುತ್ತಾ ಸಾಗುವುವು. ಅಂದರೆ, ಜ್ಞಾನ, ಭಾವ, ನೈತಿಕತೆ ಮತ್ತು ಸಾಮಾಜಿಕ ವಲಯಗಳಲ್ಲಿ ವಿಕಾಸವು ಎಲ್ಲಾ ಹಂತಗಳಲ್ಲೂ ಹೆಚ್ಚಳವನ್ನು ತೋರುವುದು. ಹಾಗಾಗಿ ಹಂತವೊಂದನ್ನು ಆಯ್ದುಕೊಂಡರೆ, ಈ ಎಲ್ಲಾ ವಲಯಗಳ ವಿಶಿಷ್ಟ ಲಕ್ಷಣಗಳನ್ನು ನಾವು ಅಭ್ಯಸಿಸಬೇಕಾಗುತ್ತದೆ.

**ಪೂರ್ವಬಾಲ್ಯ ಹಂತ (2ವರ್ಷದಿಂದ 6ವರ್ಷಗಳವರೆಗೆ)**

**ಭೌತಿಕ ವಿಕಾಸ:**

ಹಸುಳೆಯು ಬೆಳೆಯುವ ವೇಗಕ್ಕೆ ಹೋಲಿಸಿದರೆ, ಪೂರ್ವಬಾಲ್ಯಹಂತದ ವಿಕಾಸದ ಗತಿಯು ಕೊಂಚ ನಿಧಾನವೆಂದೇ ಹೇಳಬಹುದು. ಈ ಹಂತದಲ್ಲಿ ಕಾಲುಗಳು ಬಹಳ ವೇಗವಾಗಿ ಬೆಳೆಯುವುವು, ದೇಹದ ಅರ್ಧದಷ್ಟು ಭಾಗವನ್ನು ಕಾಲುಗಳೇ ವ್ಯಾಪಿಸಿರುತ್ತವೆ. ಶಿರೋಭಾಗದ ಬೆಳವಣಿಗೆಯು ಸ್ವಲ್ಪ ನಿಧಾನವಾಗುವುದು. ಮುಂಡಭಾಗವು ಮಧ್ಯವರ್ತಿ ಗತಿಯನ್ನು ಅನುಸರಿಸುತ್ತದೆ. ಸಾಮಾನ್ಯವಾಗಿ ಈ ಹಂತದ ಹೆಣ್ಣುಮಕ್ಕಳ ತೂಕ ಮತ್ತು ಎತ್ತರ ಕಡಿಮೆ ಇರುತ್ತದೆ. ಅನುವಂಶೀಯತೆ ಮತ್ತು ಪರಿಸರದ ಪ್ರಭಾವ ಹೆಚ್ಚು. ಈ ಹಂತದಲ್ಲಿ ಸ್ನಾಯಿಕ ಬೆಳವಣಿಗೆಯು ಕೂಡ ತೀವ್ರಗತಿಯಲ್ಲೇ ಇರುತ್ತದೆ. ಇನ್ನು ಶಾರೀರಿಕ ಅಂಶಗಳಾದ, ಉಸಿರಾಟ, ಹೃದಯಬಡಿತ ಸ್ವಲ್ಪ ನಿಧಾನವಾದರೆ, ರಕ್ತದೊತ್ತಡವು ಒಂದು ಸಮತೋಲನದಿಂದ ಹೆಚ್ಚಾಗುತ್ತಾ ಹೋಗುವುದು. ಮೆದುಳು ವಯಸ್ಕರ ಮೆದುಳಿನ ತೂಕದ ಶೇ. 90ರಷ್ಟು ತೋರುವುದು. ಶಾಲಾಪೂರ್ವಹಂತದ ಕೊನೆಯ ಭಾಗದಲ್ಲಿ ಮೆದುಳು ಮತ್ತು ಮೆದುಳುಬಳ್ಳಿಯು ಸುಮಾರು ಗರಿಷ್ಟಮಟ್ಟದ ಬೆಳವಣಿಗೆಯನ್ನು ತೋರುವುದು.

**ಭೌದ್ಧಿಕ ವಿಕಾಸ:**

ಎರಡು ವರ್ಷದ ನಂತರ ಬೌದ್ಧಿಕ ವಿಕಾಸವು ತ್ವರಿತವಾಗಿ ಆಗುತ್ತದೆ. ಸುಮಾರು 6 ವರ್ಷಗಳಷ್ಟರಲ್ಲಿ ಮಗುವು ಗಾತ್ರ, ಆಕಾರ, ಬಣ್ಣ, ಸಮಯ ಮತ್ತು ದೂರವನ್ನು ಗ್ರಹಿಸುತ್ತದೆ. ಸ್ಮರಣಶಕ್ತಿಯು ಕೂಡ ಶೀಘ್ರವಾಗಿ ಹೆಚ್ಚಾಗುತ್ತದೆ. ಸೃಜನಶೀಲತೆ, ಕಲ್ಪನಾಸಾಮರ್ಥ್ಯಗಳು ಈ ಹಂತದಲ್ಲಿ ಕಂಡುಬರುತ್ತವೆ. ಈ ಹಂತದಲ್ಲಿ ಮಕ್ಕಳು ಮೂರ್ತವಸ್ತುಗಳನ್ನು ಕುರಿತಂತೆ ಚಿಂತನೆ ಮತ್ತು ತಾರ್ಕಿಕತೆಯನ್ನು ತೋರುತ್ತಾರೆ. ಪರಿಸರವನ್ನು ಅನ್ವೇಷಿಸುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಭಾಷೆಯಲ್ಲಿ ಸಂಕೇತಗಳ ಬಳಕೆ ಮತ್ತು ಸಮಸ್ಯಾ ಪರಿಹಾರ ಕೌಶಲಗಳನ್ನು ವ್ಯಕ್ತಪಡಿಸುತ್ತಾರೆ.

**ಸಾಮಾಜಿಕ ವಿಕಾಸ:**

ಮಗುವು ಅದು ಬೆಳೆಯುವ ಸಮಾಜಕ್ಕೆ ಅನುಗುಣವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತದೆ. ಈ ಹಂತದಲ್ಲಿ ಮಗುವಿನ ಕ್ಷೇತ್ರವು ಮನೆಗಿಂತಲೂ ವಿಶಾಲವಾಗುತ್ತಾ ಸಾಗುತ್ತದೆ. ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಯಾವುದೇ ಭೇದಭಾವವಿಲ್ಲದೇ ಒಟ್ಟಿಗೇ ಆಡುತ್ತಾರೆ. ಇಂತಹ ಸಾಮಾಜೀಕರಣ ಪ್ರಕ್ರಿಯೆಯಿಂದ ಮಕ್ಕಳು ಹಲವಾರು ಸಾಮಾಜಿಕ ಕೌಶಲಗಳನ್ನು ಉದಾಹರಣೆಗೆ, ಸಹಕಾರ, ಸಮನ್ವಯತೆ ಮುಂತಾದುವುಗಳನ್ನು ಕಲಿಯುವರು. ಇದಕ್ಕೆಲ್ಲಾ ಮುಖ್ಯ ಕಾರಣ ಅವರಲ್ಲಿರುವ ಸಾಮಾನ್ಯ ಅಭಿರುಚಿ. ಈ ವಯಸ್ಸಿನಲ್ಲಿ ಕಲ್ಪನಾ ಸಾಮ್ರಾಜ್ಯದ ರಾಜಕುಮಾರ ಮತ್ತು ರಾಜಕುಮಾರಿಯರ ಕಥೆಗಳು ಅವರಿಗೆ ತುಂಬಾ ಇಷ್ಟವಾಗುತ್ತವೆ. ಇವರ ಪ್ರಪಂಚದಲ್ಲಿ ಪ್ರಾಣಿಗಳೂ ಮಾತಾಡುತ್ತವೆ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಆಟಗಳಲ್ಲಿ ಗಂಡುಮಕ್ಕಳಿಗಿಂತ ಪ್ರಬಲವಾಗಿರುತ್ತಾರೆ. ಮಕ್ಕಳು ತಮ್ಮ ವರ್ತನೆಗಳಿಗೆ ದೊಡ್ಡವರ, ನೆರೆಹೊರೆಯವರ ಅನುಮೋದನೆಯನ್ನು ನಿರೀಕ್ಷಿಸುತ್ತವೆ. ಇದು ಮಕ್ಕಳಲ್ಲಿ ನೈತಿಕತೆಯು ಬೆಳೆಯುವ ಮೊದಲ ಹಂತವಾಗಿರುತ್ತದೆ.

**ಭಾವನಾತ್ಮಕ ವಿಕಾಸ:**

ಪೂರ್ವಬಾಲ್ಯಹಂತದಲ್ಲಿ ಭಾವನೆಗಳು ಅಲ್ಪಕಾಲಿಕವಾಗಿರತ್ತವೆ. ಏಕೆಂದರೆ, ಈ ಹಂತದ ಮಕ್ಕಳಲ್ಲಿ ಭಾವನೆಗಳು

ಭರಾಟೆಯಿಂದ ಬದಲಾಗುತ್ತಿರುತ್ತವೆ. ಪ್ರಚೋದನೆ ಹೇಗಾದರೂ ಇರಲಿ, ಅದಕ್ಕೆ ತೋರುವ ಭಾವನಾತ್ಮಕ ಅಭಿವ್ಯಕ್ತಿಗಳು ತೀವ್ರವಾಗಿಯೇ ಇರುತ್ತವೆ. ಅವರಿಗೆ ತಮ್ಮ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳಲು ಬರುವುದಿಲ್ಲ. ಸಾಮಾನ್ಯವಾಗಿ ಈ ಹಂತದಲ್ಲಿ ಮಕ್ಕಳು ಬೀಳುವುದು, ಕೈಕಾಲುಗಳ ಮೂಳೆ ಮುರಿತ, ಬೇಗನೆ ರೋಗಗಳಿಗೆ ತುತ್ತಾಗುವಿಕೆ ಕಂಡುಬರುತ್ತದೆ. ಈ ಎಲ್ಲಾ ಲಕ್ಷಣಗಳು ಅವರು ಉತ್ತರಬಾಲ್ಯ ಹಂತಕ್ಕೆ ಪಾದಾರ್ಪಣ ಮಾಡುತ್ತಿದ್ದಂತೆ, ಕ್ರಮೇಣ ಮಾಯವಾಗುತ್ತವೆ.

**ಉತ್ತರಬಾಲ್ಯ ಹಂತ (6ರಿಂದ 12 ವರ್ಷಗಳು)**

ವ್ಯಕ್ತಿಯ ಬದುಕಿನಲ್ಲಿ ಉತ್ತರಬಾಲ್ಯ ಹಂತವು ಅತ್ಯಂತ ಮುಖ್ಯವಾದುದು. ಹಾಕಿದ ನೀರನ್ನೆಲ್ಲಾ ಹೀರಿಕೊಳ್ಳುವ ಸ್ಪಾಂಜಿನಂತೆ ಇದು. ಈ ಹಂತದ ಮಕ್ಕಳಿಗೆ ಯಾವುದೇ ವಿಷಯ, ವಿಚಾರ ಸಿಕ್ಕರೂ ಅದನ್ನು ಗ್ರಹಿಸುತ್ತಾರೆ.

**ಭೌತಿಕ ವಿಕಾಸ:**

ಉತ್ತರ ಬಾಲ್ಯದ ಹಂತದಲ್ಲಿ ಮಕ್ಕಳ ಎತ್ತರ ಮತ್ತು ತೂಕದಲ್ಲಿ ಸುಮಾರಾಗಿ ಹೆಚ್ಚಳವು ಕಂಡುಬರುವುದು. ಅದರ ಗತಿಯು ನಿಧಾನವಾಗಿರುತ್ತದೆ. ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ವಿಕಾಸದಲ್ಲಿ ಎರಡು ವರ್ಷ ಮುಂದಿರುತ್ತಾರೆ. ಅವರು ಹೆಚ್ಚು ಆರೋಗ್ಯವಂತರಾಗಿರುತ್ತಾರೆ. ಅಲ್ಲದೆ, ಶಾಶ್ವತ ಹಲ್ಲುಗಳನ್ನು ಹೊಂದಿರುತ್ತಾರೆ, ಹಣೆಯು ಚಪ್ಪಟೆಯಾಗಿ ಎದೆಭಾಗವು ವಿಶಾಲವಾಗುವ ಲಕ್ಷಣಗಳನ್ನು ಕಾಣಬಹುದಾಗಿದೆ. ದೈಹಿಕವಾಗಿ ಕಷ್ಟಕರವಾದ ಕೆಲಸ ಮಾಡಲು ಸಹಿಷ್ಣುತೆ, ಹಾಗೂ ಅದಕ್ಕೆ ಅಗತ್ಯವಾದ ಶಕ್ತಿ ಸಾಮರ್ಥ್ಯಗಳು ಕ್ರಮೇಣ ಬೆಳೆಯುತ್ತವೆ.

**ಭೌದ್ಧಿಕ ವಿಕಾಸ:**

ಉತ್ತರ ಬಾಲ್ಯದ ಹಂತದ 6ರಿಂದ 12 ವರ್ಷದಲ್ಲಿನ ಮಕ್ಕಳು ಈ ಕೆಳಗಿನ ಲಕ್ಷಣಗಳನ್ನು ತೋರುತ್ತಾರೆ: ಮಾಹಿತಿ ಗ್ರಹಿಸುವಿಕೆ ಮತ್ತು ವಿಚಾರಗಳ ಸಂಗ್ರಹಶಕ್ತಿ ಇವರಿಗೆ ಹೆಚ್ಚಿನ ಮಟ್ಟದಲ್ಲಿರುತ್ತದೆ. ಈಗಾಗಲೇ ಅವರು ಶಾಲೆಗಳಲ್ಲಿರುವುದರಿಂದ ಅವರ ಕಲಿಕೆ ಮತ್ತು ನೆನಪಿನ ಶಕ್ತಿಯಲ್ಲಿ ಅಗಾಧವಾದ ಹೆಚ್ಚುವರಿಯನ್ನು ಕಾಣಬಹುದು. ತಾರ್ಕಿಕ ಶಕ್ತಿಯೂ ಹೆಚ್ಚಾಗುವುದಲ್ಲದೆ, ವೈಜ್ಞಾನಿಕ ಕಥೆಗಳಲ್ಲಿ ಆಸಕ್ತಿ ಬೆಳೆಯುವುದು. ಹಾಗೆಯೇ ಗಣಿತ ಶಾಸ್ತ್ರದಲ್ಲಿನ ಸಮಸ್ಯಾ ಪರಿಹಾರವೂ ಅವರಿಗೆ ಆಸಕ್ತಿದಾಯಕವಾಗಿರುತ್ತದೆ. ಪೂರ್ವಬಾಲ್ಯದಲ್ಲಿದ್ದ ಕಾಲ್ಪನಿಕ ಭಯಗಳು ಈ ಹಂತದಲ್ಲಿ ದೂರವಾಗುತ್ತವೆ. ಧೈರ್ಯ, ನಿಯತ್ತುಗಳು ಹೆಚ್ಚಾಗುತ್ತವೆ. ಈ ಹಂತದ ಮಕ್ಕಳಿಗೆ ಅನುಗಮನ, ನಿಗಮನಗಳನ್ನಲ್ಲದೆ ಸಾಮಾನ್ಯೀಕರಣವನ್ನೂ ಮಾಡಲು ಸಾಧ್ಯವಾಗುತ್ತದೆ.

**ಸಾಮಾಜಿಕ ವಿಕಾಸ:**

ಶಾಲಾಕಲಿಕೆಯಿಂದಾಗಿ ಸಾಮಾಜೀಕರಣ ಪ್ರಕ್ರಿಯೆಯು ಬಹಳ ತ್ವರಿತವಾಗಿಯೂ ಮತ್ತು ಪರಿಣಾಮಕಾರಿಯಾಗಿಯೂ ನಡೆಯುತ್ತದೆ. ಗುಂಪು ಕಟ್ಟಿಕೊಳ್ಳುವ ಪ್ರವೃತ್ತಿ ಇಲ್ಲಿ ಆರಂಭವಾಗುತ್ತದೆ. ಹೆಣ್ಣುಮಕ್ಕಳು ಕೇವಲ ಹೆಣ್ಣುಮಕ್ಕಳ ಗುಂಪನ್ನು ಹಾಗೆಯೇ ಗಂಡುಮಕ್ಕಳು ಕೇವಲ ಗಂಡುಮಕ್ಕಳ ಗುಂಪನ್ನು ಕಟ್ಟಿಕೊಳ್ಳುತ್ತಾರೆ. ಹಾಗಾಗಿ ಸಹಪಾಠಿಗಳ/ಗೆಳೆಯರ/ಗೆಳತಿಯರ ತಂಡವೇ ಸಾಮಾಜೀಕರಣದ ಪ್ರಮುಖ ಸಾಧನವಾಗಿರುತ್ತದೆ. ಆಗಾಗ್ಗೆ, ದೊಡ್ಡವರ ನೀತಿಪಾಠಗಳನ್ನು ನಿಯಮಗಳನ್ನು ವಿರೋಧಿಸುತ್ತಾರೆ. ಈ ಹಂತವೇ ಮಕ್ಕಳಲ್ಲಿ ಕಂಡುಬರುವ ಅಪರಾಧೀ ಮನೋಭಾವ, ಬಾಲಾಪರಾಧಗಳಿಗೆ ನಿದರ್ಶನವಾಗಿದೆ. ಲಿಂಗಭೇದವು ಗೋಚರವಾಗುವಷ್ಟು ಸ್ಪಷ್ಟವಾಗಿರುತ್ತವೆ. ಪ್ರತಿಭಟನೆಯ ಮನೋಭಾವ ಗಂಡುಮಕ್ಕಳಲ್ಲಿ ಹೆಚ್ಚು ಪ್ರಬಲವಾಗಿರುತ್ತದೆ. ಸಾಮಾಜಿಕ ಪ್ರಜ್ಞೆಯು ಅತಿ ಶೀಘ್ರವಾಗಿ ಬೆಳೆಯುತ್ತದೆ.

**ಹದಿಹರಯ /ತಾರುಣ್ಯ /ಕಿಶೋರ ಹಂತ (12ರಿಂದ 20 ವರ್ಷಗಳು)**

ತಾರುಣ್ಯ ಎಂಬುದು ಇಂಗ್ಲಿಷಿನ "ಅಡೊಲೆಸೆಂಟ್" ಎಂಬುದಕ್ಕೆ ಸಂವಾದಿ ಪದ. ಇದರ ಮೂಲ ಲ್ಯಾಟಿನ್ ಪದವಾಗಿದ್ದು 'ಪಕ್ವತೆಯೆಡೆಗಿನ ಬೆಳವಣಿಗೆ' ಎಂಬುದು ಅದರ ಅರ್ಥ. ಕನ್ನಡದಲ್ಲಿ ಈ ಪದಕ್ಕೆ

ಸಮನಾಗಿ ಹದಿಹರಯ, ಕಿಶೋರ ಎಂಬೀ ಪದಗಳನ್ನೂ ಬಳಸಲಾಗುತ್ತದೆ. ಮುಂದೆ ಈ ಮೂರೂ ಪದಗಳು ಬಳಕೆಯಾದಾಗ ಈ ಒಂದೇ ಅರ್ಥದಲ್ಲಿ ಗ್ರಹಿಸಬೇಕು.

ಈ ಹಂತವು ಅನೇಕ ಗೊಂದಲಗಳ ಮತ್ತು ಅನುಮಾನಗಳ ಬೀಡು ಎಂದು ಹೇಳಲಾಗುತ್ತದೆ. ಬಾಲ್ಯಹಂತ ಮತ್ತು ವಯಸ್ಕ ಹಂತದ ನಡುವಿನ ಈ ಹಂತವು 12ರಿಂದ 20ವರ್ಷಗಳ ವಯೋಮಾನದ ಅವಧಿಯದು. ಈ ಹಂತಕ್ಕೆ ಮಗುವಿನ ಪಾದಾರ್ಪಣವು ಒಮ್ಮೊಮ್ಮೆ ಭಿನ್ನವಾಗಬಹುದು, ಏಕೆಂದರೆ, ಅದು ಮಗುವಿನ ಸಾಮಾಜಿಕ-ಆರ್ಥಿಕ ಸ್ಥಿತಿ, ಆರೋಗ್ಯ ಮತ್ತು ಪೋಷಣೆ-ಹೀಗೆ ಹಲವಾರು ಅಂಶಗಳಿಂದ ಪ್ರಭಾವಿಸಲ್ಪಟ್ಟಿರುತ್ತದೆ. ಅದೇ ರೀತಿ ಸಂಸ್ಕೃತಿಯಿಂದ ಸಂಸ್ಕೃತಿಗೂ ಇದು ಭಿನ್ನವಾಗಿ ಕಂಡುಬರುತ್ತದೆ. ಒಟ್ಟಾರೆ, ಹದಿಹರೆಯದಲ್ಲಿ, ವ್ಯಕ್ತಿಯ ವ್ಯಕ್ತಿತ್ವದಲ್ಲಿ ಬಹುಮುಖೀ ಬದಲಾವಣೆಗಳನ್ನು ಕಾಣಬಹುದಾಗಿದೆ.

**ಭೌತಿಕ ವಿಕಾಸ:**

ಹದಿಹರೆಯದ ಹಂತದಲ್ಲಿ ದೈಹಿಕ ಬೆಳವಣಿಗೆಯು ಅತೀ ಶೀಘ್ರವಾಗಿ ಆಗುತ್ತದೆ. ಮೊದಲೇ ಹೇಳಿದಂತೆ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ವಿಕಾಸ ಪ್ರಕ್ರಿಯೆಯಲ್ಲಿ 2 ವರ್ಷ ಮುಂದಿರುತ್ತಾರೆ. ಆದರೆ ಗಂಡುಮಕ್ಕಳು 14 ವರ್ಷಗಳ ನಂತರ ಶೀಘ್ರವಾಗಿ ಬೆಳೆಯುತ್ತಾರೆ. ಎತ್ತರ, ಗಾತ್ರ, ಮತ್ತು ತೂಕದಲ್ಲಿ ಹೆಚ್ಚಳವನ್ನು ತೋರುತ್ತಾರೆ, ಅಲ್ಲದೆ ದೇಹದ ವಿವಿಧ ಭಾಗಗಳು ವಿವಿಧ ಗತಿಯಲ್ಲಿ ಬೆಳವಣಿಗೆಯನ್ನು ತೋರುತ್ತವೆ. ಕಾಲುಗಳು ಉದ್ದುದ್ದವಾಗುತ್ತವೆ, ಹೆಣ್ಣುಮಕ್ಕಳ ಭುಜವು ಸಪೂರವಾಗಿದ್ದರೆ ಗಂಡುಮಕ್ಕಳ ಭುಜವು ದುಂಡು ದುಂಡಾಗಿ ಸ್ನಾಯಿಕವಾಗುವುದು.

ಗಂಡುಮಕ್ಕಳು ಗಂಡಸರ ಮೈಕಟ್ಟನ್ನು ತೋರಿದರೆ, ಹೆಣ್ಣುಮಕ್ಕಳು ಸ್ತ್ರೀಯರ ಮೈಕಟ್ಟನ್ನು ಹೊಂದುತ್ತಾರೆ. ಗಂಡುಮಕ್ಕಳಲ್ಲಿ ಅವರ ಧ್ವನಿಯು ಗಡುಸಾಗುತ್ತಾ ಸಾಗುತ್ತದೆ, ಇದನ್ನು "ಧ್ವನಿ ಒಡೆಯುವುದು" ಎಂದೇ ಹೇಳುವುದುಂಟು. ಹದಿಹರೆಯದ ಹಂತದಲ್ಲಿ ಹೆಣ್ಣುಮಕ್ಕಳ ಧ್ವನಿಯು ಮಧುರವಾಗುತ್ತದೆ. ಕೇವಲ ಧ್ವನಿಯಲ್ಲಿನ ಈ ಬದಲಾವಣೆಯು ಒಟ್ಟಾರೆ ವ್ಯಕ್ತಿತ್ವವನ್ನು ಗಂಭೀರವಾಗಿಯೇ ಪ್ರಭಾವಿಸುತ್ತದೆ. ಈ ಹಂತದಲ್ಲಿಯೇ ಆನುಷಂಗಿಕ ಲಕ್ಷಣಗಳಾಗಿ ಲೈಂಗಿಕ ಬದಲಾವಣೆಗಳು ತೋರಿಬರುತ್ತವೆ. ಬಾಲ್ಯಹಂತಕ್ಕಿಂತ ಹದಿಹರೆಯದ ಹಂತದಲ್ಲಿ ಮುಖದಲ್ಲಿನ ಸ್ವೇದಗ್ರಂಥಿ ಮತ್ತು ತೈಲ ಗ್ರಂಥಿಗಳು ಹೆಚ್ಚು ಬಿರುಸಿನಿಂದ ಕಾರ್ಯನಿರ್ವಹಿಸುತ್ತವೆ. ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಬ್ಬರಲ್ಲಿಯೂ ಸಂತಾನೋತ್ಪತ್ತಿ ಅಂಗವ್ಯವಸ್ಥೆಯು ಪೂರ್ಣಪ್ರಮಾಣದ ಬೆಳವಣಿಗೆಯನ್ನು ತೋರುತ್ತವೆ. ಹೆಣ್ಣುಮಕ್ಕಳಲ್ಲಿ ಸ್ತನಗಳ ಬೆಳವಣಿಗೆ ಮತ್ತು ಅಸ್ತಿಕುಹುರದ ಬೆಳವಣಿಗೆ ಉಂಟಾದರೆ, ಗಂಡುಮಕ್ಕಳಲ್ಲಿ ಜನನೇಂದ್ರಿಯ ಮತ್ತು ವೃಷಣಗಳ ಬೆಳವಣಿಗೆಯು ಉಂಟಾಗುವುದು. ವಿಶೇಷವಾಗಿ ಹೆಣ್ಣುಮಕ್ಕಳು ತಮ್ಮ ದೇಹರಚನೆಯಲ್ಲಾದ ಬದಲಾವಣೆಗಳಿಗೆ ಹೆಚ್ಚು ಸೂಕ್ಷ್ಮವಾಗಿ ಸ್ಪಂದಿಸುವರು. ಮತ್ತೊಂದು ಪ್ರಮುಖವಾದ ಬದಲಾವಣೆಯೆಂದರೆ, ರೋಮಗಳ ಬೆಳವಣಿಗೆ. ಗಂಡುಮಕ್ಕಳಲಿ ಗಡ್ಡ, ಮೀಸೆ, ಕಪೋಲಕೇಶ ಕಂಡುಬರುವುದು. ಹಾಗೆಯೇ, ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರಲ್ಲಿಯೂ ಕಂಕುಳುಗಳಲ್ಲಿ ಮತ್ತು ಜನನೇಂದ್ರಿಯಗಳ ಮೇಲೆಯೂ ರೋಮಗಳು ಬೆಳೆಯುವುದು, ಹದಿಹರೆಯದ ಪ್ರಮುಖ ಲಕ್ಷಣಗಳಲ್ಲಿ ಒಂದು.

ಹದಿಹರೆಯದ ಹಂತವು ಇನ್ನೇನು ಮುಕ್ತಾಯಗೊಳ್ಳಲಿದೆ ಎನ್ನುವಾಗ, ಎಲ್ಲಾ ಜೈವಿಕ ಪ್ರಕ್ರಿಯೆಗಳ ಗತಿಯು ಗರಿಷ್ಠಮಟ್ಟವನ್ನು ತಲುಪುತ್ತವೆ. ಅಂದರೆ, ಉಸಿರಾಟ, ರಕ್ತಪರಿಚಲನೆ, ಜೀರ್ಣಕ್ರಿಯೆ, ರಕ್ತದೊತ್ತಡ ಮತ್ತು ಹೃದಯದ ಬಡಿತ ಇವೆಲ್ಲವೂ ಸಂಪೂರ್ಣವಾದ ಕಾರ್ಯಕ್ಷಮತೆಯನ್ನು ತೋರುತ್ತವೆ. ಸುಮಾರು 18ನೇ ವಯಸ್ಸಿಗೆ ಮೆದುಳಿನ ಸಂಪೂರ್ಣ ವಿಕಾಸವಾಗಿರುತ್ತದೆ. ಈ ಎಲ್ಲಾ ಬದಲಾವಣೆಗಳು ವ್ಯಕ್ತಿಯೊಬ್ಬನ ಸಾಮಾಜಿಕ ಜೀವನಕ್ಕೆ ತುಂಬಾ ಮುಖ್ಯವಾಗುತ್ತವೆ, ಹಾಗೂ ಹುಡುಗನೊಬ್ಬ ಪುರಷನಾಗಿ ಮತ್ತು ಹುಡುಗಿಯೊಬ್ಬಳು ಸ್ತ್ರೀಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಲು ಈ ಸಾಮಾಜಿಕ ಅನುಮತಿ ಅತ್ಯಂತ ಪ್ರಮುಖವಾಗುತ್ತದೆ. ಹದಿಹರೆಯದ ಹಂತದಲ್ಲಿ ಉತ್ತಮವಾದ ಜೀರ್ಣಕ್ರಿಯೆ ನಡೆಯುವುದರಿಂದ ಅವರು

ಚೆನ್ನಾಗಿ ಊಟ, ತಿಂಡಿ ಮತ್ತು ಇತರ ತಿನಿಸುಗಳನ್ನು ತೆಗೆದುಕೊಳ್ಳುತ್ತಾರೆ, ಅವರ ಆರೋಗ್ಯವು ಈ ಹಂತದಲ್ಲಿ ಉತ್ತಮವಾಗಿಯೇ ಇರುತ್ತದೆ. ಇದರಿಂದಾಗಿ ಯಾವುದೇ ದೈಹಿಕ ಶ್ರಮವಹಿಸುವ ಕೆಲಸವಾದರೂ ಸರಿ, ಲೀಲಾಜಾಲವಾಗಿ ಮಾಡಿ ಮುಗಿಸುವ ತಾಕತ್ತು ಅವರಲ್ಲಿರುತ್ತದೆ. ಗಂಡುಮಕ್ಕಳು ದೈಹಿಕಶ್ರಮವನ್ನು ಬೇಡುವ ಕೆಲಸಗಳಲ್ಲಿ ನಿಷ್ಣಾತಿಯನ್ನು ಹೊಂದಿದ್ದು, ಅಂತಹ ಕಷ್ಟಕರವಾದ ಕೆಲಸಗಳನ್ನೇ ಹೆಚ್ಚು ಇಷ್ಟಪಡುತ್ತಾರೆ. ಆದರೆ, ಹೆಣ್ಣುಮಕ್ಕಳಲ್ಲಿ ಈ ಕೌಶಲವು ಗಣನೀಯವಾಗಿ ಕಡಿಮೆಯಾಗಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಹದಿಹರೆಯದ ಮಕ್ಕಳು ಚೆನ್ನಾಗಿ ಓದಿ, ಒಳ್ಳೆಯ ಅಂಕಗಳನ್ನು ಗಳಿಸಿ, ಉತ್ತಮ ಸಾಧನೆತೋರುವುದಕ್ಕಿಂತ, ಒಳ್ಳೇ ಕ್ರೀಡಾಪಟುವಾಗಿ, ದೈಹಿಕ ಕೌಶಲಗಳ ಪ್ರದರ್ಶನ ಮಾಡುತ್ತಾ ಹೆಚ್ಚು ಜನಪ್ರಿಯರಾಗುತ್ತಾರೆ. ಇದು ಮುಂದೆ ಅವರ ಇಡೀ ವ್ಯಕ್ತಿತ್ವವನ್ನೇ ಪ್ರತಿಬಿಂಬಿಸುವಂತಿರುತ್ತದೆ.

**ಸಂಜ್ಞಾನಾತ್ಮಕ ವಿಕಾಸ:**

ಇದನ್ನು ಜ್ಞಾನವಲಯದ ವಿಕಾಸವೆಂದೂ ಕರೆಯುವರು. ವಯಸ್ಸು ಹೆಚ್ಚಾದಂತೆಲ್ಲಾ ಅವರ ಬುದ್ಧಿಶಕ್ತಿಯೂ ಹೆಚ್ಚಾಗುವುದು, ಅದರಲ್ಲೂ ಹದಿಹರೆಯದವರಲ್ಲಿ ಇದು ಗರಿಷ್ಠ ಮಟ್ಟವನ್ನು ತಲುಪುವುದು. ಪಿಯಾಷೆಯು ಈ ಹಂತವನ್ನು 'ಔಪಚಾರಿಕ ಕಾರ್ಯಗಳ ಹಂತ'ವೆಂದು ಕರೆದಿದ್ದಾನೆ. ಅವರ ಬುದ್ಧಿಯು ಹಲವಾರು ದಿಕ್ಕಿನಲ್ಲಿ ಕೆಲಸಮಾಡುವುದು ಈ ಹಂತದಲ್ಲಿ ಸರ್ವೇಸಾಮಾನ್ಯ. ವಿಚಾರವು ಮೂರ್ತಸ್ವರೂಪದ್ದೇ ಆಗಿರಲಿ, ಅಮೂರ್ತಸ್ವರೂಪದ್ದೇ ಆಗಿರಲಿ, ಅವರು ನಿಸ್ಪೃಹವಾಗಿ ಚಿಂತಿಸಬಲ್ಲರು, ಅರ್ಥಮಾಡಿಕೊಳ್ಳಬಲ್ಲರು, ಅಷ್ಟೇ ಏಕೆ ತಮ್ಮ ದೃಷ್ಟಿಕೋನವನ್ನೂ ಪ್ರತಿಪಾದಿಸಬಲ್ಲರು. ಅನುಗಮನ, ನಿಗಮನ ಚಿಂತನೆ ಮತ್ತು ಸಾಮಾನ್ಯೀಕರಣದಂತಹ ಉನ್ನತ ಮಟ್ಟದ ಬೌದ್ಧಿಕ ಕೌಶಲವನ್ನು ತೋರುವರು. ಅನೇಕ ಆಧಾರ ಕಲ್ಪನೆಗಳನ್ನು/ ಬೌದ್ಧಿಕ ಊಹೆಗಳನ್ನು ರಚಿಸಿಕೊಂಡು ಪ್ರಯೋಗಗಳನ್ನು ಕೈಗೊಳ್ಳಬಲ್ಲರು ಮತ್ತು ಸಮಸ್ಯೆಗಳಿಗೆ ತಮ್ಮದೇ ಆದ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಲ್ಲರು. ಈ ಹಂತದ ಮಕ್ಕಳಲ್ಲಿ ಅಗಾಧವಾದ ನೆನಪಿನ ಶಕ್ತಿಯಿರುವುದು. 'ಸಮಯಪ್ರಜ್ಞೆ' ಈಗ ಅವರಿಗೆ ಚೆನ್ನಾಗಿರುತ್ತದೆ. ಉದಾಹರಣೆಗೆ, ಐತಿಹಾಸಕ ಘಟನೆಗಳಲ್ಲಿ ಕ್ರಿಸ್ತಶಕ ಹಾಗೂ ಕ್ರಿಸ್ತಪೂರ್ವಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಇತ್ಯಾದಿ.

ಹದಿಹರೆಯದಲ್ಲಿ ಮಕ್ಕಳು ಎಲ್ಲಾ ವಿಚಾರಗಳನ್ನು ತಮ್ಮತಮ್ಮಲ್ಲೇ ಮಾತಾಡಿಕೊಳ್ಳುತ್ತಾರೆ. ಅವರು ಚರ್ಚಿಸದ, ಚಿಂತಿಸದ ಯಾವುದೇ ವಿಷಯ ಇರಲು ಸಾಧ್ಯವಿಲ್ಲ. ಅದು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ವಿಚಾರವಾಗಿರಲೂಬಹುದು. ವಾದ ಮಾಡುವುದೆಂದರೆ ಅವರಿಗೆ ಬಹಳಾ ಅಚ್ಚುಮೆಚ್ಚು. ಒಮ್ಮೊಮ್ಮೆ ಅವರ ಆಸಕ್ತಿದಾಯಕ ವಿಚಾರಗಳ ಮೇಲೆ ಗಂಟೆಗಟ್ಟಲೇ ವಾದ–ಪ್ರತಿವಾದ ಮಂಡಿಸುವುದೂ ಇದೆ. ಅವರಲ್ಲಿ ಒಂದು ರೀತಿಯ ಸ್ವತಂತ್ರ ಮನೋಭಾವವನ್ನು, ಸ್ವತಂತ್ರ ಆಲೋಚನಾಶಕ್ತಿಯನ್ನು ಮತ್ತು ಅವರದ್ದೇ ಆದ ನಿರ್ಧಾರಗಳನ್ನು ಕಾಣಬಹುದು. ಹಾಗೆಯೇ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವ ಸಹೃದಯತೆಯನ್ನೂ ಅವರು ತೋರುತ್ತಾರೆ. ಆದರೆ, ಪ್ರತಿಯೊಂದನ್ನು ಪ್ರಶ್ನಿಸುವ ಮನೋಭಾವ ಅವರಲ್ಲಿರುತ್ತದೆ. ದೊಡ್ಡವರಿಗೆ ಇದು ಅವಿಧೇಯತೆಯಾಗಿ ಕಾಣಬಹುದು. ಯಾವುದೇ ಒಂದು ಧಾರ್ಮಿಕ ಆಚರಣೆ, ಸಂಪ್ರದಾಯ ಆಗಿರಲಿ, ಅವೆಲ್ಲವನ್ನೂ ಅವರು ಸುಮ್ಮನೇ ಒಪ್ಪಿಕೊಳ್ಳದೆ ಪ್ರಶ್ನಿಸುತ್ತಾರೆ. ಅವರಿಗೆ ಸಮಾಧಾನಕರವಾದ ವೈಚಾರಿಕತೆ ಇದ್ದರೆ ಮಾತ್ರ ಅದನ್ನು ಒಪ್ಪಿಕೊಳ್ಳುತ್ತಾರೆ. ಇದು, ಮುಂದೆ ಅವರು ತಮ್ಮದೇ ಆದ ಮೌಲ್ಯಗಳನ್ನು ನೈತಿಕತೆಯನ್ನು ಸ್ವತಂತ್ರವಾಗಿ ಬೆಳೆಸಿಕೊಳ್ಳುವುದರ ಸೂಚನೆಯಾಗಿರುತ್ತದೆ. ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬುದು ಅವರಿಗೆ ಗೊತ್ತಾಗುತ್ತದೆ. ಅವರು ಹೆಚ್ಚು ಓದುವ ಹವ್ಯಾಸವನ್ನು ತೋರುತ್ತಾರಲ್ಲದೆ ಆದಷ್ಟು ಪ್ರೇಮಕಥೆಗಳನ್ನು, ಸಾಹಸಮಯ ಕಥೆಗಳನ್ನು ಓದಲು ಇಷ್ಟಪಡುತ್ತಾರೆ. ದಿನಪತ್ರಿಕೆಗಳಲ್ಲಿ ಕ್ರೀಡಾವರದಿ ಇರುವ ಪುಟವೆಂದರೆ ಅವರಿಗೆ ಬಹಳಾ ಇಷ್ಟ. ಸಿಕ್ಕ ಸಿಕ್ಕ ಕಲೆಗಳ ಪ್ರಕಾರಗಳನ್ನು ಕಲಿಯಲು ಉದ್ಯುಕ್ತರಾಗುವವರಾದರೂ ಹದಿಹರೆಯದ ಕೊನೆಯ ಹಂತವನ್ನು ತಲುಪುವಷ್ಟರಲ್ಲಿ ಈ ಆಸಕ್ತಿಯು ಸಂಖ್ಯೆಯಲ್ಲಿ ಕಡಿಮೆಯಾಗುತ್ತಾ ಕೊನೆಗೆ ಒಂದೋ ಅಥವಾ ಎರಡೋ ಕಲಾಪ್ರಕಾರಗಳಿಗೆ/ ಕ್ರೀಡೆಗಳಿಗೆ ಸೀಮಿತವಾಗುತ್ತದೆ. ಮುಂದೆ ಅವುಗಳನ್ನೇ ಪ್ರವೃತ್ತಿಯನ್ನಾಗಿ ಸ್ವೀಕರಿಸಬಹುದಾದ ಲಕ್ಷಣಗಳನ್ನು ಇದು ತೋರುತ್ತದೆ.

**ಭಾವನಾತ್ಮಕ ವಿಕಾಸ:**

ಹದಿಹರೆಯದ ಹಂತದಲ್ಲಿ ಭಾವನೆಗಳು ತೀವ್ರವಾದ ಪ್ರಭಾವವನ್ನು ಬೀರುತ್ತವೆ. ಅವರ ಭಾವಾವೇಗ, ಆವೇಶ, ಭಾವತೀವ್ರತೆ, ದ್ವಂದ್ವಗಳು ಮತ್ತು ಭಾವಘರ್ಷಣೆಗಳು ಗರಿಷ್ಠಮಟ್ಟದಲ್ಲಿರುತ್ತವೆ. ಅವರ ಸೂಕ್ಷ್ಮಸ್ವಭಾವವು ಅವರನ್ನು ಬಹು ಬೇಗನೆ ದುಃಖಕ್ಕೆ ತಳ್ಳುತ್ತದೆ. ಪಿ.ಟಿ.ಯಂಗ್ ಹೇಳುವಂತೆ, ಭಾವನೆಗಳೆಂದರೆ, "ಜೀವಿಯೊಂದರ ಅಸ್ತವ್ಯಸ್ತ ಸ್ಥಿತಿಯಾಗಿದ್ದು, ಇದರಿಂದಾಗಿ ಅದು ಜೀರ್ಣಾಂಗವ್ಯೂಹದ ಕಾರ್ಯದಲ್ಲಿ ವ್ಯತ್ಯಾಸವುಂಟು ಮಾಡುವುದಾಗಿರುತ್ತದೆ ಮತ್ತು ಇದಕ್ಕೆ ನರಮಂಡಲ ಮತ್ತು ಇನ್ನಿತರ ಶಾರೀರಿಕ ಉತ್ಪನ್ನಗಳು ಕಾರಣವಾಗಿರುತ್ತವೆ". ಸಾಮಾನ್ಯವಾಗಿ ಭಾವನೆಗಳು, ಪ್ರೀತಿ, ಭಯ, ಕೋಪ, ವಿನೋದ, ಸಂತೋಷ, ಮತ್ತು ದುಃಖಗಳಾಗಿ/ ಕಣ್ಣೀರಿನ ರೂಪದಲ್ಲಿ/ ಸ್ಥೂಲರೂಪದಲ್ಲಿ ಕಂಡುಬರುತ್ತವೆ. ಅತಿಯಾದ ಭಾವನೆಗಳು ವ್ಯಕ್ತಿತ್ವದ ಸಮತೋಲನವನ್ನು ಕದಡುತ್ತವೆ. ಕೆಲವೊಮ್ಮೆ ಇದು ಆತಂಕ, ಗಾಬರಿ ಮತ್ತು ಕಾತರಗಳಾಗಿ ಬದಲಾಗಿರುತ್ತವೆ. ಉಗುರು ಕಚ್ಚುವಿಕೆ, ದ್ವಂದ್ವಗಳಿಂದ ಯಾವುದೇ ಒಂದು ನಿರ್ಧಾರಕ್ಕೆ ಬರಲಾಗದೇ ತೊಳಲಾಡುವಿಕೆ, ಕೆಲವೊಮ್ಮೆ ಅಸಹಕಾರ, ಜಗಳಗಂಟಿತನ, ಪೋಷಕರೊಡನೆ ಅವಿಧೇಯತೆ ಮತ್ತು ಸಹಪಾಠಿಗಳೊಂದಿಗೆ ವಾಗ್ವಾದ–ಈ ರೀತಿಗಳಲ್ಲಿ ಭಾವನೆಗಳ ಅಸಮತೋಲನವು ವ್ಯಕ್ತವಾಗುವುದು.

ಹದಿಹರಯದಲ್ಲಿ ಭಾವನೆಗಳು ತೀವ್ರವಾದ ಪ್ರಭಾವ ಬೀರುವುವಾದರೂ ತಮ್ಮ ಭಾವನೆಗಳನ್ನು ವ್ಯಕ್ತವಾಗಿ ಗೋಚರವಾಗದಂತೆ ಹದಿಹರೆಯದ ಮಕ್ಕಳು ಯಶಸ್ವಿಯಾಗಿ ಮುಚ್ಚಿಡಬಲ್ಲರು. ಕೆಲವೊಮ್ಮೆ ಅವರ ಭಾವನೆಗಳು ಅಮೂರ್ತ ಸ್ವರೂಪದ್ದಾಗಿರುತ್ತವೆ. ಹಾಗೆಯೇ ಬಹಳ ಬೇಗ ಬದಲಾವಣೆಯಾಗುತ್ತವೆ. ಹದಿಹರೆಯದವರು ಹೊಗಳಿಕೆಗೆ ಬೇಗನೆ ಮಾರುಹೋಗುತ್ತಾರೆ, ಹಾಗೆಯೇ ತೆಗಳಿಕೆ ಮತ್ತು ಅವಮಾನಗಳಿಗೆ ಕುಗ್ಗಿಹೋಗುತ್ತಾರೆ. ಹದಿಹರೆಯದಲ್ಲಿ ವ್ಯಕ್ತವಾಗುವ ಆನುಷಂಗಿಕ ಲಕ್ಷಣಗಳು, ಹಾರ್ಮೋನುಗಳ ಸ್ರಾವ, ಶಾರೀರಕವಾದ ಬದಲಾವಣೆಗಳು ಮತ್ತು ಲೈಂಗಿಕ ವಿಚಾರಗಳಲ್ಲಿನ ಆಕರ್ಷಣೆ ಅವರಲ್ಲಿ ಆತಂಕ ಮತ್ತು ಅಪರಾಧೀ ಭಾವನೆಗಳನ್ನು ಹುಟ್ಟಿಸಲು ಕಾರಣವಾಗುತ್ತದೆ. ಎಷ್ಟೋವೇಳೆ ಅವರಿಗೆ ತಾವು ದೊಡ್ಡವರೆಂದರೆ ದೊಡ್ಡವರಲ್ಲ, ಚಿಕ್ಕವರೆಂದರೆ ಚಿಕ್ಕವರೂ ಅಲ್ಲ ಎಂಬ ಭಾವನೆ ಕಾಡುತ್ತದೆ. ಭಾವನೆಗಳಲ್ಲಿ ತುಂಬಾ ತೊಂದರೆ ಕೊಡುವ ಭಾವನೆ ಎಂದರೆ, ಪ್ರೀತಿ, ಪ್ರೇಮ. ಅದು ಬಾಲ್ಯಹಂತದಲ್ಲಿಯೂ ಇರುತ್ತದೆ. ಆದರೆ ಆಗ ಅದು ಕೇವಲ ವಸ್ತುಗಳ ಮೇಲೆ, ಆಟಿಕೆಗಳ ಮೇಲೆ ಇದ್ದರೆ, ಹದಿಹರೆಯದಲ್ಲಿ ತನ್ನ ವಿರುದ್ಧ ಲಿಂಗಿಯನ್ನು ಕುರಿತು ಉಗಮವಾಗುತ್ತದೆ. ಕೆಲವೊಮ್ಮೆ ಸಾಕುಪ್ರಾಣಿಗಳ ಮೇಲೂ ಪ್ರೀತಿಯು ಉಂಟಾಗುವುದು. ಗಿಲ್ಲಿಲ್ಯಾಂಡ್ ಹೇಳುವಂತೆ, ಬಾಲ್ಯಹಂತದಲ್ಲಿ ಪ್ರೀತಿಗೆ ಲೈಂಗಿಕ ಭಾವವಿರುವುದಿಲ್ಲ, ಆದರೆ, ಹದಿಹರೆಯದ ಹಂತದಲ್ಲಿ ಪ್ರೀತಿಯು ಸಂತೋಷ/ಸುಖದ ಒಂದು ಸೆಲೆಯಾಗಿರುತ್ತದೆ. ಇವಿಷ್ಟೇ ಅಲ್ಲದೆ, ಆನಂದ, ಆಹ್ಲಾದ ಮತ್ತು ಮೃದುಮಧುರ ಭಾವನೆಗಳು ಪ್ರಮುಖವಾಗಿ ಕಂಡುಬರುತ್ತವೆ. ಹದಿಹರೆಯದಲ್ಲಿ ಪ್ರತಿಯೊಬ್ಬರೂ ಒಂದು ರೀತಿಯ ಅಭದ್ರತೆಯ ಭಾವವನ್ನು ಅನುಭವಿಸುತ್ತಾರೆ. ಜೀವನದಲ್ಲಿ ಅನಿಶ್ಚಿತತೆ ಅವರನ್ನು ಕಾಡಲಾರಂಭಿಸಿರುತ್ತದೆ. ಅನಿಶ್ಚಿತತೆ, ಅಭದ್ರತೆಗೆ ವಿರುದ್ಧವಾದುದೆಲ್ಲವೂ ಅವರಲ್ಲಿ ಸಂತೋಷವನ್ನು ತರುತ್ತದೆ, ಉದಾಹರಣೆಗೆ, ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗುವುದು, ವಿದ್ಯಾರ್ಥಿಸಂಘದ ಚುನಾವಣೆಯಲ್ಲಿ ಗೆದ್ದುಬರುವುದು, ಕ್ರೀಡಾಸ್ಪರ್ಧೆಗಳಲ್ಲಿ ಉತ್ತಮ ಸಾಧನೆಯನ್ನು ತೋರುವುದು ಇತ್ಯಾದಿ. ಈ ರೀತಿಯ ಸಾಧನೆಗಳು ಅವರಲ್ಲಿ ಒಂದು ರೀತಿಯ ಆತ್ಮಗೌರವವನ್ನು ಮತ್ತು ಆತ್ಮಸಂತೋಷವನ್ನು ಉಂಟುಮಾಡುತ್ತದೆ. ಅವರಿಗೆ ಸದಾ ತಲೇನೋವಾಗಿ, ಆತಂಕಕ್ಕೆ ಕಾರಣವಾಗುವ ಒಂದು ವಿಚಾರವೆಂದರೆ, ಶಾಲಾ ಪರೀಕ್ಷೆಗಳು, ಟೆಸ್ಟುಗಳು, ಮತ್ತು ಇತರ ಶಾಲಾ ಜವಾಬ್ದಾರಿ ಕೆಲಸಗಳು. ಹಾಗೆಯೇ ಏಕಾಗ್ರತೆಯ ಕೊರತೆ, ವಿಫಲತೆಯ ಭಯ ಇತ್ಯಾದಿ. ಇವುಗಳ ಜೊತೆಗೆ ತಲೆಮಾರಿನ ಅಂತರ, ತಂದೆತಾಯಿ ಮತ್ತು ಮಕ್ಕಳ ನಡುವೆ ಅರ್ಥಪೂರ್ಣ ಸಂಬಂಧವಿಲ್ಲದಿರುವುದು, ಪರಸ್ಪರ ಅರ್ಥಮಾಡಿಕೊಳ್ಳದಿರುವಿಕೆ, ಪೋಷಕರ ಅನಾರೋಗ್ಯ, ಬಡತನ ಮತ್ತು ಕೆಲವು ವ್ಯಕ್ತಿತ್ವದೋಷಗಳೂ ಹದಿಹರೆಯದವರ ಜೀವನವನ್ನು ಚಿಂತಾಕ್ರಾಂತವಾಗುವಂತೆ ಮಾಡಬಲ್ಲವು. ಹದಿಹರೆಯದವರಿಗೆ ಮೂಗಿನತುದಿಯಲ್ಲೇ ಕೋಪವೆನ್ನುವರು. ಮಾಡುತ್ತಿರುವ ಯಾವುದಾದರೂ ಕೆಲಸ

ವಿಫಲವಾದರೆ, ದೊಡ್ಡವರು ಇವರನ್ನು ಅಣಕಿಸಿ ವ್ಯಂಗ್ಯವಾಡಿದರೆ, ಶಿಕ್ಷಕರು ಇವರಿಗೆ ಅವಮಾನ ಮಾಡಿದರೆ, ಮತ್ತು ತರಗತಿಯಲ್ಲಿ ಪಕ್ಷಪಾತಮಾಡಿದರೆ, ಅವರ ಸ್ವಾತಂತ್ರ್ಯವನ್ನು ಅತಿಕ್ರಮಿಸಿದರೆ ಮತ್ತು ಬೇಡದ ಉಪದೇಶ ನೀಡಲು ಬಂದರೆ ಅವರಿಗೆ ಇನ್ನಿಲ್ಲದಷ್ಟು ಕೋಪ ಬರುವುದು.

ಹದಿಹರಯದವರಿಗೆ ಸ್ವಯಂ-ನಿಯಂತ್ರಣ ಚೆನ್ನಾಗಿರುತ್ತದೆ. ಅವರು ಸಾಮಾಜಿಕ ಸಂದರ್ಭಗಳಲ್ಲಿ ಆತಂಕ ಮತ್ತು ಕಾತರಗಳನ್ನು ಸಂಯಮದಿಂದ ನಿಯಂತ್ರಿಸುತ್ತಾರೆ. ಬೇರೆಯವರನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ಅವರು ತಂಡಕ್ಕೆ ನಿಯತ್ತಿನಿಂದ ಇರುತ್ತಾರೆ. ಅವರಿಗೆ ವಾಸ್ತವತೆಯ ಅರಿವು ಚೆನ್ನಾಗಿಯೇ ಇರುತ್ತದೆ. ಹಾಗಾಗಿ ಎದುರಿಗಿರುವ ವ್ಯಕ್ತಿಯ ಬಲಾಬಲಗಳು ಅವರ ತಿಳಿವಳಿಕೆಗೆ ದಕ್ಕುತ್ತವೆ. ಹಿರಿಯರಾಗಿರಲಿ, ಕಿರಿಯರಾಗಿರಲಿ, ತಮಗೆ ಸರಿ ಎನ್ನಿಸಿದಾಗ ಅವರನ್ನು, ಅವರ ಕೆಲಸಗಳನ್ನು ಮುಕ್ತವಾಗಿ ಮೆಚ್ಚುತ್ತಾರೆ. ಹೀಗೆ ಭಾವನಾತ್ಮಕ ವಿಕಾಸವು ಮನೆ ಮತ್ತು ನೆರೆಹೊರೆಯರನ್ನು ಮೀರಿ ವಿಸ್ತಾರಗೊಳ್ಳುತ್ತದೆ. ಕೆಲವೊಮ್ಮೆ ಭಾವನಾತ್ಮಕವಾಗಿ ಸಿನೆಮಾ ನಾಯಕರನ್ನು ಅಪಾರವಾಗಿ ಹಚ್ಚಿಕೊಳ್ಳುತ್ತಾರೆ. ಅವರಂತೆ, ಡ್ರೆಸ್‌ಮಾಡಿಕೊಳ್ಳುವುದು, ಫ್ಯಾಶನ್ ಮಾಡುವುದು, ಶೈಲಿಯನ್ನು ಅನುಸರಿಸುವುದು ಇತ್ಯಾದಿ. ಇದನ್ನು 'ಹೀರೋ-ವರ್ಷಿಪ್' ಅಥವಾ 'ನಾಯಕ ಪೂಜೆ' ಎನ್ನಲಾಗುತ್ತದೆ. ಈ ನಾಯಕರು, ರಾಜಕೀಯದವರಿರಬಹುದು, ಐತಿಹಾಸಿಕ ವ್ಯಕ್ತಿಯೂ ಆಗಿರಬಹುದು ಅಥವಾ ಯಾವುದಾದರೊಂದು ಕಾದಂಬರಿಯ / ಸಿನೆಮಾದ ನಾಯಕ ಅಥವಾ ನಾಯಕಿಯೂ ಆಗಿರಬಹುದು.

ಹದಿಹರೆಯದವರು ಹಲವಾರು ಹಗಲುಗನಸುಗಳನ್ನು ಕಾಣುತ್ತಾರೆ. ಈ ವಯಸ್ಸೇ ಅಂತಹುದು. ಈ ಹಂತದಲ್ಲಿ ಅವರ ಆಸೆ, ಆಕಾಂಕ್ಷೆಗಳು ಮತ್ತು ಮಹತ್ವಾಕಾಂಕ್ಷೆಗಳು ಬಹಳಷ್ಟು ಇರುತ್ತವೆ. ಅವುಗಳಲ್ಲಿ ಕೆಲವು ಈಡೇರುತ್ತವೆ, ಮತ್ತೆ ಕೆಲವು ಈಡೇರುವುದಿಲ್ಲ. ತಮ್ಮ ಈಡೇರದ ಆಸೆ ಆಕಾಂಕ್ಷೆಗಳನ್ನು ಹಗಲುಗನಸಿನಲ್ಲಿ ನೆರವೇರಿಸಿಕೊಳ್ಳುವುದು ಇವರ ಮುಖ್ಯ ಲಕ್ಷಣಗಳಲ್ಲೊಂದು. ಏಕಾಂಗಿತನವನ್ನು ಅವರು ಇಷ್ಟಪಡುವ ಕಾಲವಿದು.ಇವರು ತಮ್ಮ ಅನಿಸಿಕೆಗಳನ್ನು ಭಾವನೆಗಳನ್ನು ಚೆನ್ನಾಗಿ ಅಭಿವ್ಯಕ್ತಿಸಬಲ್ಲರು. ಇತರರೊಂದಿಗೆ ಹೊಂದಿಕೊಂಡು ಹೋಗುವ, ಅನುಸರಿಸಿಕೊಂಡು ಹೋಗುವ ಮತ್ತು ಅನುಕಂಪ, ಸಹಾನುಭೂತಿ ತೋರುವ ಉದಾತ್ತ ಗುಣಗಳು ಇವರಿಗಿರುತ್ತವೆ.

**ಸಾಮಾಜಿಕ ವಿಕಾಸ:**

ಮಾನವ ಒಬ್ಬ ಸಮಾಜಜೀವಿ ಎಂದು ಹೇಳುತ್ತೇವಾದರೂ ಜೈವಿಕವಾಗಿ ಆತ ತನ್ನ ವಾಂಛೆಗಳಿಗೆ ಅನುಗುಣವಾಗಿ ಮೂಲತಃ ಸ್ವಾರ್ಥಿಯೇ ಆಗಿರುತ್ತಾನೆ. ಆದರೆ, ಸಮಾಜಕ್ಕೆ ಹೊಂದಿಕೊಳ್ಳಲೇಬೇಕಾದುದು ಅವನಿಗೆ ಅನಿವಾರ್ಯತೆ. ಇದು ಅವನ ಅಸ್ತಿತ್ವದ ಪ್ರಶ್ನೆ. ಮಗುವಿಗೆ ಮೊದಲಿಗೆ ಕುಟುಂಬ ಮತ್ತು ಕುಟುಂಬ ಸದಸ್ಯರಿಂದ ನಂತರ ಶಾಲೆಯಿಂದ ಸಾಮಾಜೀಕರಣವಾಗುತ್ತದೆ. ದೊಡ್ಡವರಾದಂತೆಲ್ಲಾ ಇತರ ವ್ಯಕ್ತಿಗಳೊಡನೆ ಬೆರೆಯಬೇಕಾದದ್ದು, ವ್ಯವಹರಿಸಬೇಕಾದದ್ದು ಸ್ವಾಭಾವಿಕ. ಹದಿಹರೆಯದ ಹಂತವನ್ನು 'ತಂಡ ಕಾಲ'(Gang age)ವೆಂದೇ ಗುರುತಿಸಿದ್ದಾರೆ. ಸಂಶೋಧನೆಗಳಲ್ಲಿ ಕಂಡುಕೊಂಡಿರುವಂತೆ, ವ್ಯಕ್ತಿಯೊಬ್ಬನ ಮೇಲೆ ಆತನ ತಂಡದ ಪ್ರಭಾವವು ಬಹಳಷ್ಟು ಇರುವುದಾದರೂ ಹಳ್ಳಿಗಳಲ್ಲಿ ತಂಡಕ್ಕಿಂತ ಕುಟುಂಬದ ಪ್ರಭಾವವೇ ಹೆಚ್ಚಾಗಿರುತ್ತದೆ. ತನ್ನದೇ ಆದ ಸ್ವತಂತ್ರ ಜೀವನಕ್ಕಾಗಿ ಹದಿಹರೆಯದವನ ಹೃದಯ ಹೆಚ್ಚಾಗಿ ತುಡಿಯುವುದರಿಂದ ತನ್ನ ಸಹಪಾಠಿಗಳ ಸಹವಾಸ ಆತನಿಗೆ ಹೆಚ್ಚು ಆಪ್ಯಾಯಮಾನವಾಗುತ್ತದೆ. ಕುಟುಂಬದವರೊಂದಿಗಿದ್ದ, ತಾನು, ತನ್ನವರು ಎಂಬ ಭಾವವು ಕ್ರಮೇಣ ವಿಶಾಲವಾಗುತ್ತಾ ತನ್ನ ಗೆಳೆಯರ ಬಳಗದೆಡೆಗೆ ಚಲಿಸುತ್ತದೆ. ಆದರೆ, ಯಾವುದೇ ಗುಂಪಿಗೆ ತಾನು ಸೇರಿದವನಾಗಿರಬೇಕು ಎಂದು ಹೊರಟಾಗ ಆ ಗುಂಪಿನ ಷರತ್ತುಗಳನ್ನು, ನಿಯಮಗಳನ್ನು ಮತ್ತು ಆ ಗುಂಪಿಗೆ ಇರಬೇಕಾದ ವಿಧೇಯತೆಯನ್ನು ಆತ ಬೆಳಸಿಕೊಳ್ಳಲೇಬೇಕಾದ ಒತ್ತಡವಿರುತ್ತದೆ. ಪೋಷಕರ ಜೊತೆಯಲ್ಲಿ ಸಮಾಜವೂ ಕೂಡ ಹದಿಹರೆಯದವರ ಮೇಲೆ, ಹೆಚ್ಚಿನ ಜವಾಬ್ದಾರಿಗಳನ್ನು, ನೀತಿ ಸಂಹಿತೆಯನ್ನು ಹೇರುತ್ತದೆ, ಕೆಲವೊಮ್ಮೆ ಇದು ಹದಿಹರೆಯದವರನ್ನು ಗಲಿಬಿಲಿಗೊಳಿಸಿ, ಹೊಸ ಪಾತ್ರಗಳಲ್ಲಿ ಹೊಂದಿಕೊಳ್ಳುವುದು ಅವರಿಗೆ ಕಷ್ಟವಾಗುತ್ತದೆ.

**ನೈತಿಕ ವಿಕಾಸ:**

ಹದಿಹರೆಯದವರು ಆದರ್ಶ ಜೀವನವನ್ನು ತೋರಲು ಬಯಸುತ್ತಾರೆ. ಆದರೆ ಅವರು ಕಟ್ಟಿಕೊಳ್ಳುವ ಆದರ್ಶಗಳಿಗೆ ಕೆಲವೊಮ್ಮೆ ಅಡಿಪಾಯವೇ ಇರುವುದಿಲ್ಲ. ಹಾಗಾಗಿ ಅದು ವಾಸ್ತವಕ್ಕೆ ದೂರವಿರುತ್ತದೆ. ಅವರ ಆದರ್ಶಗಳಿಗೂ ಮತ್ತು ವಾಸ್ತವಕ್ಕೂ ಅಜಗಜಾಂತರ ವ್ಯತ್ಯಾಸಗಳಿರುತ್ತವೆ. ನೈತಿಕತೆ, ನೀತಿಗಳು, ನೈತಿಕ–ಧೈರ್ಯ, ಹೊಣೆಗಾರಿಕೆ, ವಿಧೇಯತೆ ಮತ್ತು ಪ್ರಾಮಾಣಿಕತೆ ಈ ಕಲ್ಯಾಣಗುಣಗಳು ಒಂದು ಸಾಮಾಜಿಕ ನ್ಯಾಯಕ್ಕಾಗಿ ಮತ್ತು ಅದರ ಸಂರಕ್ಷಣೆಗಾಗಿ ಅವರ ಹೋರಾಟದಲ್ಲಿ ವ್ಯಕ್ತವಾಗುತ್ತವೆ. ಇವುಗಳಿಗೆ ಏನೇ ಅಡ್ಡಿ ಬಂದರೂ ಅವರು ಪ್ರಾಣವನ್ನು ಪಣಕ್ಕಿಟ್ಟಾದರೂ ಅವುಗಳನ್ನು ಉಳಿಸಿಕೊಳ್ಳಲು ಶ್ರಮಿಸುತ್ತಾರೆ. ಅವರಿಗೆ ಈ ಕುರಿತ ಒಂದು ಬದ್ಧತೆ, ಶ್ರದ್ಧೆ ಮತ್ತು ಪ್ರಾಮಾಣಿಕತೆ ಇರುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

ಈ ಕೆಳಗೆ ಬಹುಆಯ್ಕೆಯುಳ್ಳ ಅಸಂಪೂರ್ಣ ಹೇಳಿಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿ ಉತ್ತರದ ಆಯ್ಕೆಯನ್ನು '✓' ಚಿಹ್ನೆಯ ಮೂಲಕ ಸೂಚಿಸಿ:

1. ಸಂಜ್ಞಾನಾತ್ಮಕ ವಿಕಾಸದ ಸಿದ್ಧಾಂತವನ್ನು ಪ್ರತಿಪಾದಿಸಿದ ವ್ಯಕ್ತಿ____________

    ಎ. ಆಲ್‌ಫ್ರೆಡ್ ಬಂಡೂರ

    ಬಿ. ಸಿಗ್ಮಂಡ್‌ಫ್ರಾಯ್ಡ್

    ಸಿ. ಅಬ್ರಹಾಂ ಮಾಸ್ಲೋ

    ಡಿ. ಜೀನ್‌ಪಿಯಾಷೆ

2. ಮನೋ–ಸಾಮಾಜಿಕ ವಿಕಾಸ ಸಿದ್ಧಾಂತವನ್ನು ಪ್ರತಿಪಾಸಿದವರು____________

    ಎ. ಜೀನ್ ಪಿಯಾಷೆ

    ಬಿ. ಜೆರೋಮ್.ಎಸ್.ಬ್ರೂನರ್

    ಸಿ. ಎರಿಕ್‌ಸನ್

    ಡಿ. ಬಿ.ಎಫ್.ಸ್ಕಿನ್ನರ್

3. ಮೂರು ಮುಖ್ಯಹಂತಗಳನ್ನೊಳಗೊಂಡ ನೈತಿಕ ವಿಕಾಸ ಸಿದ್ಧಾಂತವನ್ನು ಪ್ರತಿಪಾದಿಸಿದವರು____________

    ಎ. ರಾಬರ್ಟ್ ಹ್ಯಾವಿಗರ್ಸ್ಟ್

    ಬಿ. ಇ.ಬಿ.ಹರ್‌ಲಾಕ್

    ಸಿ. ಕೋಹ್ಲ್‌ಬರ್ಗ್

    ಡಿ. ಕೋಹ್ಲರ್

4. ಪೂರ್ವ ಬಾಲ್ಯದ ಅವಧಿ____________

    ಎ. 0ಯಿಂದ 2ವರ್ಷಗಳು

    ಬಿ. 2ರಿಂದ 6ವರ್ಷಗಳು

    ಸಿ. 3ರಿಂದ 7ವರ್ಷಗಳು

    ಡಿ. 4 ರಿಂದ 8ವರ್ಷಗಳು

5. ಉತ್ತರಬಾಲ್ಯದ ಅವಧಿ____________

ಎ. 6ರಿಂದ 12ವರ್ಷಗಳು

ಬಿ. 5ರಿಂದ 10ವರ್ಷಗಳು

ಸಿ. 8ರಿಂದ 12 ವರ್ಷಗಳು

ಡಿ. 11ರಿಂದ 16ವರ್ಷಗಳು

6. ಗಂಡು ಮತ್ತು ಹೆಣ್ಣುಮಕ್ಕಳ ವಿಕಾಸವನ್ನು ಹೋಲಿಸಿದರೆ,____________

ಎ. ಹೆಣ್ಣುಮಕ್ಕಳು ಗಂಡು ಮಕ್ಕಳಿಗಿಂತ 2 ವರ್ಷ ಮುಂದೆ ಇರುತ್ತಾರೆ

ಬಿ. ಗಂಡು ಮಕ್ಕಳು ಹೆಣ್ಣುಮಕ್ಕಳಿಗಿಂತ 2 ವರ್ಷ ಮುಂದೆ ಇರುತ್ತಾರೆ

ಸಿ. ಗಂಡು ಮತ್ತು ಹೆಣ್ಣು ಮಕ್ಕಳು ಒಂದೇ ರೀತಿಯನ್ನು ತೋರುತ್ತಾರೆ

ಡಿ. ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸವೇನೂ ಕಂಡುಬರುವುದಿಲ್ಲ.

## 1.4.3.2. ಸಂಜ್ಞಾನಾತ್ಮಕ ಮತ್ತು ಭಾಷಾ ವಿಕಾಸ– ಪಿಯಾಷೆ

ಈ ಸನ್ನಿವೇಶವನ್ನು ಗಮನಿಸಿ: ಅಣ್ಣ ತಮ್ಮರಿಬ್ಬರಿದ್ದರು. ಅದರಲ್ಲಿ ಅಣ್ಣನಿಗೆ ವಯಸ್ಸು 5 ಮತ್ತು ತಮ್ಮ ಅವನಿಗಿಂತ ಒಂದು ವರ್ಷಕ್ಕೆ ಚಿಕ್ಕವನು. ಒಮ್ಮೆ ತಮ್ಮನ ಹುಟ್ಟಿದ ಹಬ್ಬ ಬಂದಿತು. ಆಗ ಅವನು ಅಣ್ಣನಿಗೆ ಹೇಳಿದ: "ನೋಡು ಇನ್ನುಮೇಲೆ ನಿನ್ನನ್ನು ನಾನು ಅಣ್ಣಾ ಎಂದು ಕರೆಯುವುದಿಲ್ಲ, ಏಕೆ ಗೊತ್ತಾ?" ಏಕೆ ಎಂದು ಅಣ್ಣ ಕೇಳಿದಾಗ "ಇವತ್ತು ನನ್ನ ಹುಟ್ಟಿದ ಹಬ್ಬ ಅಂದರೆ ನಾನೀಗ ಒಂದು ವರ್ಷದಷ್ಟು ಹೆಚ್ಚು ಬೆಳೆದಿದ್ದೇನೆ, ಅಂದರೆ ನಾನು ನೀನು ಈಗ ಸಮ–ಸಮ ತಾನೆ?"

ನಿಮಗೆ ತಮಾಷೆ ಎನಿಸುತ್ತಿದಿಯೇ? ಚಿಕ್ಕವನು ಹಾಗೆ ಹೇಳಲು ನಿಜವಾದ ಕಾರಣವೇನು? ಹೇಳಿ ನೋಡೋಣ.ತನ್ನ ಅಣ್ಣನೂ ಒಂದು ವರ್ಷದಷ್ಟು ಹೆಚ್ಚಿಗೆ ಬೆಳೆದಿರತ್ತಾನೆ ಎಂಬ ತರ್ಕ ಮಗುವಿಗೆ ತಿಳಿಯದು.

ಪಿಯಾಷೆಯ ಪ್ರತಿಪಾದನೆಯಂತೆ, ಮಾನವನ ಮನಸ್ಸಿಗೆ ಎರಡು ಆಯಾಮಗಳಿವೆ, ಅವುಗಳೆಂದರೆ, ಸಂಜ್ಞಾನ ರಚನೆ ಮತ್ತು ಸಂಜ್ಞಾನ ಕಾರ್ಯ. ಸಂಜ್ಞಾನ ರಚನೆಯು ಮನಸ್ಸಿನ "ಸ್ಕೀಮಾ" (Schema) ಅಂದರೆ, ಆಕೃತಿಕಲ್ಪಗಳಾಗಿ ಅಥವಾ ಮನಮುದ್ರಿಕೆಗಳಾಗಿ ರೂಪುಗೊಂಡಿರುತ್ತವೆ. ಇಂತಹ ಸ್ಕೀಮಾವು ವ್ಯಕ್ತಿಯೊಬ್ಬನ ಜ್ಞಾನವಲಯದ ಮೂಲ ಘಟಕವಾಗಿದ್ದು ಆತನ ವರ್ತನೆಗಳ ಸುಪ್ತ ಚೈತನ್ಯವಾಗಿರುತ್ತದೆ. ಮಗುವು ಬೆಳೆದಂತೆಲ್ಲಾ ಇಂತಹ ಸ್ಕೀಮಾಗಳು ಬದಲಾಗುತ್ತಾ ಮಾರ್ಪಾಟಾಗುತ್ತವೆ. ಇದಕ್ಕೆ ಮೂಲ ಕಾರಣ, ಮಗುವು ಸಮಾಜ ಹಾಗೂ ಪರಿಸರದೊಂದಿಗೆ ನಡೆಸುವ ನಿರಂತರ ಅಂತರ್‌ಕ್ರಿಯೆಗಳು. ಪರಿಕಲ್ಪನೀಕರಣ ಪ್ರಕ್ರಿಯೆಯು ಸ್ಕೀಮಾ ರಚನೆಗೆ ಬೆಂಬಲನೀಡುತ್ತದೆ. ವಿಕಾಸವು ಮುಂದುವರೆದಂತೆ, ಪ್ರತಿಯೊಂದು ಸ್ಕೀಮಾವೂ ವಿಶಾಲವಾಗುತ್ತಾ ಬದಲಾಗುತ್ತದೆ ಮತ್ತು ಬೇರೆ ಬೇರೆ ಸ್ಕೀಮಾಗಳ ಜೊತೆಯಲ್ಲಿ ಸಹ–ಸಂಬಂಧವನ್ನು ಹೊಂದುತ್ತಾ ಸಂಕೀರ್ಣ ರಚನೆಗಳನ್ನು ಹೊಂದುತ್ತದೆ. ಸಂಜ್ಞಾನ ಕಾರ್ಯವೆಂದರೆ, ಮಾನಸಿಕವಾದ ಮತ್ತು ಬೌದ್ಧಿಕವಾದ ಕಾರ್ಯವಾಗಿದ್ದು, ಎರಡು ಮುಖ್ಯವಾದ ಪ್ರಕ್ರಿಯೆಗಳನ್ನು ಇದು ಹೊಂದಿರುತ್ತದೆ, ಅವುಗಳೆಂದರೆ, ಸಂಗ್ರಹಣ ಮತ್ತು ವ್ಯವಸ್ಥೀಕರಣ. ಈ ಎರಡು ಪ್ರಕ್ರಿಯೆಗಳು ನಿರಂತರವಾಗಿ ಘಟಿಸುತ್ತಿರುತ್ತವೆ. ಈ ಎರಡು ಪ್ರಕ್ರಿಯೆಗಳಿಂದಾಗಿ ವ್ಯಕ್ತಿಯು ತನ್ನ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ತನ್ನ ಮತ್ತು ಪರಿಸರದೊಂದಿಗೆ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಹೀಗೆ, ಮಾಹಿತಿಗಳ ಸಂಗ್ರಹಣ, (Assimilation) ಸಂಸ್ಕರಣ, ವ್ಯವಸ್ಥೀಕರಣ, ಅನುಕೂಲನ, (Accommodation) ಹೊಂದಾಣಿಕೆ ಹಾಗೂ ಸಮತೋಲನ (Equilibration) – ಈ ಪ್ರಕ್ರಿಯೆಗಳೇ ವ್ಯಕ್ತಿಯು ಬೌದ್ಧಿಕವಾಗಿ ವಿಕಾಸವಾಗಲು ಸಹಾಯಮಾಡುತ್ತವೆ.

ಆದ್ದರಿಂದ ಸ್ಕೀಮಾ ಎಂಬುದು ಸಂಜ್ಞಾನಾತ್ಮಕ ರಚನೆಯನ್ನೂ ಸಂಗ್ರಹಣ, ಸ್ವಾಂಗೀಕರಣ/ವ್ಯವಸ್ಥೀಕರಣ, ಸಮತೋಲನೀಕರಣಗಳು ಸಂಜ್ಞಾನಾತ್ಮಕ ಕಾರ್ಯಗಳನ್ನೂ ಪ್ರತಿನಿಧಿಸುತ್ತವೆ.

**ಸಂಗ್ರಹಣ:** ಈಗಾಗಲೇ ವ್ಯವಸ್ಥಿತವಾಗಿರುವ ಜ್ಞಾನದ ಜೊತೆಯಲ್ಲಿ ಹೊಸ ಹೊಸ ವಿಚಾರಗಳು ಬಂದು ಸೇರುತ್ತಲೇ ಇರುತ್ತವೆ. ಹಾಗಾಗಿ ಒಮ್ಮೆ ಕಲಿತ ವಿಚಾರಗಳು ಹಲವಾರು ಬಾರಿ ಪರಿಷ್ಕರಣೆಗೆ ಒಳಗಾಗುವುದನ್ನು ನಾವು ನೋಡುತ್ತೇವೆ. ಹೀಗೆ ಸೇರಿದ ಹೊಸ ವಿಚಾರಧಾರೆಗಳು ವ್ಯಕ್ತಿಯ ವರ್ತನೆಗಳನ್ನು ಅಷ್ಟೇ ಏಕೆ, ಆತನ ವ್ಯಕ್ತಿತ್ವವನ್ನೇ ಪರಿವರ್ತಿಸುವಂತೆ ಇರುತ್ತವೆ. ಅಂದರೆ, ವ್ಯಕ್ತಿಯ ಚಿಂತನಾಶೈಲಿ, ಜೀವನಶೈಲಿ ಎಲ್ಲವೂ ಬದಲಾಗಲು ಸಂಗ್ರಹಣವೆಂಬ ಸಂಜ್ಞಾನಕಾರ್ಯವು ನಾಂದಿ ಹಾಡುವುದು.

**ಸ್ವಾಂಗೀಕರಣ/ವ್ಯವಸ್ಥೀಕರಣ:** ಇದೂ ಕೂಡ ಒಂದು ಬೌದ್ಧಿಕ ಕ್ರಿಯೆಯಾಗಿದ್ದು, ಸಂಗ್ರಹಣದ ಮೂಲಕ ದೊರೆತ ಮಾಹಿತಿಯನ್ನು ಬೌದ್ಧಿಕವಾಗಿ ಸ್ವಾಂಗೀಕರಿಸುವುದು ಅಥವಾ ವ್ಯವಸ್ಥೀಕರಿಸುವುದು ಬಹು ಮುಖ್ಯವಾಗುತ್ತದೆ. ಇಲ್ಲದಿದ್ದರೆ, ಬರೀ ವಿಚಾರ ಸಂಗ್ರಹಣವೇ ವ್ಯಕ್ತಿಯ ವ್ಯಕ್ತಿತ್ವವನ್ನು ಮಾರ್ಪಡಿಸಲು ಸಾಧ್ಯವಿಲ್ಲ. ಹೀಗೆ ವ್ಯವಸ್ಥೀಕರಿಸುವಾಗ ವ್ಯಕ್ತಿಯು ಪರಿಸರದೊಡನೆ, ಇತರರೊಡನೆ ಹೊಂದಾಣಿಕೆ ಮಾಡಿಕೊಳ್ಳುವುದನ್ನೂ ಕಲಿಯುತ್ತಾನೆ. ಇದರಿಂದ ಆತನ ಬೌದ್ಧಿಕವಿಕಾಸವು ಮತ್ತಷ್ಟು ಸುಗಮವಾಗುತ್ತದೆ. ಅಂದರೆ ತನಗೆ ದೊರೆತ ಮಾಹಿತಿ ಅಥವಾ ವಿಚಾರಗಳನ್ನು ತನಗೆ ಸರಿಹೊಂದುವಂತೆ ಅನುಕೂಲನವನ್ನು ವ್ಯಕ್ತಿಯು ಮಾಡಿಕೊಳ್ಳುತ್ತಾನೆ. ಸಂಗ್ರಹಣ ಮತ್ತು ವ್ಯವಸ್ಥೀಕರಣಗಳು ಸಂಜ್ಞಾನ ಕಾರ್ಯಗಳಲ್ಲಿ ಸಿಂಹಪಾಲನ್ನು ಪಡೆದುಕೊಳ್ಳುತ್ತವೆ.

**ಸಮತೋಲನೀಕರಣ:** ವಿಚಾರಗಳು ಬಂದು ಸೇರುವುದು, ವ್ಯವಸ್ಥೀಕರಣಗೊಳ್ಳುವುದು ಅಷ್ಟೇ ಅಲ್ಲದೇ ಒಂದು ಸಮತೋಲನವಾದ ವ್ಯಕ್ತಿತ್ವ ನಿರ್ಮಾಣವಾಗುವುದು ಬಹಳ ಮುಖ್ಯವಾಗುವುದು. ಏನೇ ಆಗಲಿ, ಸ್ವಾಂಗೀಕರಣ ಮತ್ತು ಸಂಗ್ರಹಣಗಳಿಂದ ವ್ಯಕ್ತಿಯು ಇನ್ನೂ ಉತ್ತಮವಾಗಿ ತನ್ನ ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಆಗುವುದೇ ಒಂದು ರೀತಿಯಾಗಿ ಸಮತೋಲನವೆನ್ನಿಸಿಕೊಳ್ಳುತ್ತದೆ. ಪಿಯಾಷೆಯು ಈ ಪ್ರಕ್ರಿಯೆಯನ್ನು ಸಮತೋಲನೀಕರಣವೆಂದು ವ್ಯಾಖ್ಯಾನಿಸಿದ್ದಾನೆ. ಸ್ಕೀಮಾ ರಚನೆಯಾಗುವಾಗ ಹಳೆಯ ರಚನೆಗಳಿಗೂ ಮತ್ತು ಹೊಸದಾದ ರಚನೆಯ ಸೃಷ್ಟಿಗೂ ಮಧ್ಯದಲ್ಲಿ ಈ ಸಮತೋಲನವು ಗೌಣವಾಗಿರುತ್ತದೆ. ಒಮ್ಮೆ ಹೊಸದಾದ ಸ್ಕೀಮಾಗಳು ರಚನೆಯಾಗಿ ಸ್ಪಷ್ಟವಾದ ಕೂಡಲೇ ಅಲ್ಲಿ ಸಮತೋಲನವು ಆಕ್ರಮಿಸಿಕೊಳ್ಳುತ್ತದೆ. ಆದರೆ, ಇದೂ ಕೂಡ ಕ್ರಮೇಣ ಬದಲಾವಣೆಗೆ ಒಳಪಡುತ್ತದೆ. ಹೀಗೆ ವ್ಯಕ್ತಿಯಲ್ಲಿ ಸಮತೋಲನ ಮತ್ತು ಅಸಮತೋಲನಗಳು ಒಂದಾದ ಮೇಲೆ ಒಂದರಂತೆ ನಡೆಯುತ್ತಲೇ ಇರುತ್ತವೆ. ಆದರೂ ಇವೆರಡರ ನಡುವೆ ಕಂಡುಕೊಳ್ಳುವ ಸಮತೋಲನವೇ ಪರಿಸರದೊಡನೆ ಆತ ಹೊಂದುವ ಸೌಹಾರ್ದಯುತವಾದ ಹೊಂದಾಣಿಕೆಗೆ ಕಾರಣವಾಗಿರುತ್ತದೆ.

**ಸಂಜ್ಞಾನಾತ್ಮಕ ವಿಕಾಸದ ಹಂತಗಳು**

ಬೌದ್ಧಿಕ ವಿಕಾಸ ಅಥವಾ ಜ್ಞಾನವಲಯದ ವಿಕಾಸವೂ ಕೂಡ ಹಂತ ಹಂತವಾಗಿಯೇ ನಡೆಯುವುದು. ಅದರಲ್ಲಿ ಒಂದು ಕ್ರಮಬದ್ಧತೆ ಇದೆ. ಪಿಯಾಷೆಯ ಸಿದ್ಧಾಂತದ ಪ್ರಕಾರ, ವ್ಯಕ್ತಿಯ ಸಂಜ್ಞಾನಾತ್ಮಕ ರಚನೆಯು ಸತತವಾಗಿ ಬದಲಾಗುತ್ತಲೇ ಇರುವುದು. ಹಾಗೆಯೇ ಸಂಘಟಿಸುವಾಗ ಕ್ರಮವಾಗಿ, ವ್ಯವಸ್ಥಿತವಾಗಿಯೇ ನಡೆಯುವುದು. ಈ ಹಂತಗಳು ಅಥವಾ ಪ್ರಕ್ರಿಯೆಗಳು ಸಾರ್ವತ್ರಿಕವಾಗಿದ್ದು, ಮಾನವರೆಲ್ಲರಲ್ಲೂ ಕಂಡುಬರುತ್ತವೆ, ಆದರೆ, ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆ ಗತಿಯಲ್ಲಿ ಜರುಗಬಹುದು ಅಷ್ಟೆ. ಹೀಗೆ ಸಂಜ್ಞಾನಾತ್ಮಕ ವಿಕಾಸದಲ್ಲಿ ಸಾರ್ವತ್ರಿಕವಾಗಿ ಕಂಡುಬರುವ ನಾಲ್ಕು ಹಂತಗಳಿವೆ. ಅವುಗಳೆಂದರೆ:

i. ಸಂವೇಗಾತ್ಮಕ ಹಂತ (ಹುಟ್ಟಿನಿಂದ 2 ವರ್ಷಗಳವರೆಗೆ)

ii. ಪೂರ್ವ–ಕಾರ್ಯಗಳ /ಪೂರ್ವ ಸಂಕ್ರಿಯಾತ್ಮಕ ಹಂತ (2 ರಿಂದ 7 ವರ್ಷಗಳವರೆಗೆ)

iii. ಮೂರ್ತಕಾರ್ಯಗಳ /ಮೂರ್ತ ಸಂಕ್ರಿಯಾತ್ಮಕ ಹಂತ (7 ರಿಂದ 11 ವರ್ಷಗಳವರೆಗೆ)

iv. ಔಪಚಾರಿಕ ಕಾರ್ಯಗಳ /ಔಪಚಾರಿಕ ಸಂಕ್ರಿಯಾತ್ಮಕ ಹಂತ (11ರಿಂ 16 ಅಥವಾ ಹದಿಹರೆಯದ ಹಂತ)

ಮೇಲೆ ಹೇಳಿದ ಎಲ್ಲಾ ಹಂತಗಳು, ಶಿಶು ಹಂತ, ಶಾಲಾಪೂರ್ವ ಹಂತ, ಬಾಲ್ಯಾವಸ್ಥೆ, ಮತ್ತು ಹದಿಹರೆಯ ಎಂಬ ಹಂತಗಳಿಗೆ ಸಂವಾದಿಯಾಗಿವೆ. ಪ್ರತಿಯೊಂದು ಹಂತವೂ ಸಾಮಾನ್ಯೀಕರಿಸಬಹುದಾದ ಕೆಲವು ಲಕ್ಷಣಗಳನ್ನು ಮತ್ತು ಅದಕ್ಕೆ ತಕ್ಕುದಾದ ವಯೋಮಾನದ ವರ್ತನೆಗಳನ್ನು ಹೊಂದಿರುತ್ತದೆ.

**ಸಂವೇಗಾತ್ಮಕ ಹಂತ (ಹುಟ್ಟಿನಿಂದ 2 ವರ್ಷಗಳವರೆಗೆ)**

ಪಿಯಾಷೆ ಈ ಹಂತಕ್ಕೆ ನೀಡಿರುವ ಪದವೇ ಈ ಹಂತದ ಅರ್ಥವನ್ನು ತಿಳಿಸುತ್ತದೆ. ಈ ಹಂತದಲ್ಲಿ ಮಗುವು ಮುಖ್ಯವಾಗಿ ತನ್ನ ಪಂಚೇಂದ್ರಿಯಗಳಿಗೆ ಸಿಕ್ಕುವ ಅನುಭವಗಳ ಮೂಲಕ ಬೌದ್ಧಿಕವಾಗಿ ವಿಕಾಸಹೊಂದಲು ಪ್ರಾರಂಭಿಸುತ್ತದೆ. ಈ ಹಂತದಲ್ಲಿ ಮಕ್ಕಳು 'ಅಹಂ ಕೇಂದ್ರಿತ'ರಾಗಿರುತ್ತಾರೆ. ಇನ್ನೊಬ್ಬರ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ಅವರಿನ್ನೂ ಬೆಳೆದಿರುವುದಿಲ್ಲ. ಯಾವುದೇ ವಸ್ತುವಾಗಿರಲಿ, ಅನುಭವವಾಗಿರಲಿ, ಅದರ ಬಗ್ಗೆ ಚಿಂತಿಸುವ ವರ್ತನೆಯನ್ನು ಅವರು ತೋರುವುದಿಲ್ಲ, ಬದಲಿಗೆ ಅನುಭವವನ್ನು ಆಧಾರವಾಗಿಸಿಕೊಳ್ಳುತ್ತಾರೆ. ಆದ್ದರಿಂದ ಪಿಯಾಷೆಯು ಈ ಬುದ್ಧಿವಂತಿಕೆಯನ್ನು 'ಪ್ರಾಯೋಗಿಕ ಬುದ್ಧಿವಂತಿಕೆ' ಎಂದು ಕರೆದಿದ್ದಾನೆ. ಸರಿಯಾಗಿ ಭಾಷೆಯ ಬೆಳವಣಿಗೆಯಾಗಿರದಿದ್ದರೂ ಬೌದ್ಧಿಕ ವಿಕಾಸವು ಅಬಾಧಿತವಾಗಿ ನಡೆಯುತ್ತದೆ. ಆದರೆ, ಈ ಹಂತದಲ್ಲಿ ನೇರ, ಪ್ರತ್ಯಕ್ಷವಾದ ಅನುಭವಗಳು ಮಾತ್ರ ಮಗುವಿಗೆ ಜ್ಞಾನವನ್ನು ತಂದುಕೊಡುತ್ತವೆ.

ಹುಟ್ಟಿನಿಂದ 4 ತಿಂಗಳವರೆಗೆ ಹಸುಳೆಯು ಒಂದು ರೀತಿಯ ಪರಾವರ್ತಿತ ಪ್ರತಿಕ್ರಿಯೆಯನ್ನು ತೋರುತ್ತವೆ. ಮುಂದಿನ 4 ತಿಂಗಳಲ್ಲಿ ಸ್ವಲ್ಪಮಟ್ಟಿಗೆ ತನ್ನ ಕ್ರಿಯೆಯಲ್ಲಿ ಸಮನ್ವಯತೆಯನ್ನು ತೋರುತ್ತವೆ. ಅಂದರೆ, ಪ್ರಚೋದನೆಗಳಿಗೆ ಸಂಬಂಧಪಟ್ಟ ಅನುಕ್ರಿಯೆಗಳನ್ನು ತೋರುತ್ತವೆ. ಅಪ್ಪ, ಅಂದರೆ, ಯಾರು, ಅಮ್ಮ ಎಲ್ಲಿ – ಇತ್ಯಾದಿ ಪ್ರಶ್ನೆಗಳಿಗೆ ಕನಿಷ್ಟಮಟ್ಟದ ಅನುಕ್ರಿಯೆಗಳನ್ನು ತೋರುತ್ತವೆ. ಇದು ಸರಳವಾದ ಸ್ಕೀಮಾಗಳು ಪ್ರಾರಂಭವಾಗುವ ಸಮಯ. ಸುಮಾರು 8ರಿಂದ 9ನೇ ತಿಂಗಳಲ್ಲಿ ವಸ್ತುಗಳು ಬೇರೆ, ತಾನು ಬೇರೆ ಎಂಬುದನ್ನು ಮಗುವು ಅರಿಯಲು ಪ್ರಾರಂಭಿಸುತ್ತದೆ. ಆಟಿಕೆಯೊಂದನ್ನು ತೋರಿಸಿ, ನಂತರ ಅದನ್ನು ಮುಚ್ಚಿಟ್ಟರೆ, ಅದನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತದೆ. ಆ ಆಟಿಕೆಯ ಸ್ಕೀಮಾವು ಮಗುವಿನಲ್ಲಿ ರಚನೆಯಾಗಿದೆ ಮತ್ತು ಅದಕ್ಕಾಗಿ ಆ ಆಟಿಕೆಯನ್ನೇ ಮಗುವು ಹುಡುಕುತ್ತದೆ ಎಂಬುದು ಇದರ ಇಂಗಿತಾರ್ಥ. ಹೀಗೆ ಈ ಹಂತದಲ್ಲಿ ಮಗುವಿನಲ್ಲಿ 2 ವರ್ಷವಾಗುವವರೆಗೆ ಹಲವಾರು ಆಕೃತಿ ಕಲ್ಪಗಳು/ಮನೋಮುದ್ರಿಕೆಗಳು/ಸ್ಕೀಮಾಗಳು ಬೆಳೆಯುವುದರಿಂದ ಮುಂದಿನ ವಿಕಾಸ ಹಂತವು ಸಫಲವಾಗಿ ನಡೆಯಲು ಸಾಧ್ಯವಾಗುತ್ತದೆ.

**ಪೂರ್ವ–ಕಾರ್ಯಗಳ ಹಂತ / ಪೂರ್ವ ಸಂಕ್ರಿಯಾತ್ಮಕ ಹಂತ (2 ರಿಂದ 7 ವರ್ಷಗಳವರೆಗೆ)**

ಪಿಯಾಷೆಯು ಹೇಳುವಂತೆ ವಿಕಾಸಪ್ರಕ್ರಿಯೆಯಲ್ಲಿ ಪ್ರತಿಯೊಂದು ಹಂತವೂ ಮುಂದಿನ ಹಂತದ ವಿಕಾಸಕ್ಕೆ ಅನಿವಾರ್ಯ ಮತ್ತು ಅತ್ಯಗತ್ಯ. ಶಿಶುಹಂತದಲ್ಲಿ ಮಗುವು ಮಾತನಾಡಲಾರದಾದರೂ ಹಲವಾರು ಕ್ರಿಯೆಗಳ ಮೂಲಕ ಅದಕ್ಕೆ ಏನು ಅರ್ಥವಾಗಿದೆ ಎಂಬುದನ್ನು ತೋರುವುದು. ಕೆಲವೊಮ್ಮೆ ಮಗುವು ಕೈಸನ್ನೆ, ಬಾಯ್‌ಸನ್ನೆಯ ಮೂಲಕ ತಾನು ಹೇಳುವುದನ್ನು ಅಭಿವ್ಯಕ್ತಿಸುತ್ತದೆ. ಆದ್ದರಿಂದ ಈ ಹಂತವನ್ನು 'ಕ್ರಿಯಾ ಆಕೃತಿಕಲ್ಪ' ಅಥವಾ 'ಚಟುವಟಿಕಾ ಆಕೃತಿಕಲ್ಪಗಳ ಹಂತ'ವೆಂದು ಕರೆದಿದ್ದಾನೆ. ಮಕ್ಕಳು ಕೇವಲ ತಮ್ಮ ಪಂಚೇಂದ್ರಿಯಗಳನ್ನೇ ಆಧರಿಸದೆ, ಅದಕ್ಕೂ ಮೀರಿದ ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳುವ ಹಂತವಿದು. ಈ ಸಮಯದಲ್ಲಿ ಭಾಷಾ ಬೆಳವಣಿಗೆಯೂ ಆಗುತ್ತಿರುತ್ತದೆ. ಪೂರ್ವಕಾರ್ಯಗಳ ಹಂತವು ಎರಡು ಕ್ರಮವಾದ ಉಪ–ಹಂತಗಳನ್ನು ಹೊಂದಿರುತ್ತವೆ. ಒಂದು, ಪೂರ್ವ–ಪರಿಕಲ್ಪನಾ ಹಂತ–2 ರಿಂದ 4 ವರ್ಷಗಳು ಮತ್ತು ಒಳ–ಅರಿವಿನ /ಅಂತರ್‌ದೃಷ್ಟಿಯ ಹಂತ–4 ರಿಂದ 7 ವರ್ಷಗಳವರೆಗೆ.

**ಪೂರ್ವ-ಪರಿಕಲ್ಪನಾ ಹಂತ 2ರಿಂದ 4 ವರ್ಷಗಳು**

ಸುಮಾರಾಗಿ 2ರಿಂದ 4ವರ್ಷಗಳವರೆಗೆ ಎಲ್ಲಾ ಮಕ್ಕಳು ಈ ಹಂತದಲ್ಲಿರುತ್ತಾರೆ. ಈ ಹಂತದ ಕೆಲವು ವರ್ತನೆಗಳು ಸಾರ್ವತ್ರಿಕವಾಗಿ ಎಲ್ಲಾ ಮಕ್ಕಳಲ್ಲೂ ಕಂಡುಬರುತ್ತವೆ. ಆ ಲಕ್ಷಣಗಳು/ವರ್ತನೆಗಳು ಹೀಗಿವೆ:

ಈ ಹಂತದ ಮಕ್ಕಳು ಅಹಂ-ಕೇಂದ್ರಿತ ವರ್ತನೆಯನ್ನು ತೋರುತ್ತಾರೆ. ಅವರು ಎಲ್ಲವನ್ನು ತಮ್ಮ ದೃಷ್ಟಿಕೋನದಿಂದ ಮಾತ್ರ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಉದಾಹರಣೆಗೆ, ಹುಣ್ಣಿಮೆಯ ದಿನ ದಾರಿಯುದ್ದಕ್ಕೂ ಓಡಿದಾಗ, ಚಂದ್ರನೂ ಅವರಂತೆಯೇ ಆಕಾಶದಲ್ಲಿ ಅದೇ ದಿಕ್ಕಿನಲ್ಲಿ ಓಡುತ್ತಾನೆ ಎಂದು ಅರ್ಥೈಸುತ್ತಾರೆ. ಸಜೀವ ಮತ್ತು ನಿರ್ಜೀವ ವಸ್ತುಗಳ ನಡುವೆ ಅವರಿಗೆ ವ್ಯತ್ಯಾಸ ಕಂಡುಬರುವುದಿಲ್ಲ. ತಮ್ಮದೇ ಆದ ಊಹಾ ಪ್ರಪಂಚದಲ್ಲಿದ್ದು ವಾಸ್ತವತೆಯನ್ನು ಅರ್ಥಮಾಡಿಕೊಳ್ಳಲು ಸ್ವಲ್ಪಮಟ್ಟಿಗೆ ಸಫಲರಾಗುತ್ತಾರೆ. ಅಜ್ಜನ ಕೋಲೇ ಅವರಿಗೆ ಕುದುರೆಯಾಗಿ ಸಂತೋಷವನ್ನು ನೀಡುತ್ತದೆ, ಅವರ ಗೊಂಬೆಗೆ ಜ್ವರ ಬಂದು ಇವರೇ ಡಾಕ್ಟರ್ ಆಗುತ್ತಾರೆ. ಹಕ್ಕಿ ಹೇಗೆ ಹಾರುವುದು ಎಂದು ನಟನೆಯ ಮೂಲಕವೇ ತೋರಿಸುತ್ತಾರೆ. ಹಾಗಾಗಿ ಈ ಹಂತದಲ್ಲಿ 'ಸಾಂಕೇತಿಕ ಚಿಂತನೆ', 'ನಂಬಿಸುವ ಆಟ' ಮತ್ತು ನಾಟಕೀಯತೆಯನ್ನು ಅಭಿವ್ಯಕ್ತಿಸುತ್ತಾರೆ. ಅವರ ಚಿಂತನೆಯಲ್ಲಿ ತಾರ್ಕಿಕ ಅಂಶಗಳು ಇರುವುದಿಲ್ಲ. ಆದ್ದರಿಂದಲೇ ಅವರ ವರ್ತನೆಗಳು/ಉತ್ತರಗಳು ಅರ್ಧ ಸರಿಯಿದ್ದರೆ, ಅರ್ಧ ತಪ್ಪಾಗಿರುತ್ತದೆ. ಸುಮಾರು ಒಂದೂವರೆ ವರ್ಷವಾಗುವಷ್ಟರಲ್ಲಿ 50 ಪದಗಳನ್ನು ಕಲಿತಿರುತ್ತಾರೆ. ಮನೆಯವರು, ನೆರೆಹೊರೆಯವರು, ಬಳಗ, ಮತ್ತು ಪ್ರೀತಿಪಾತ್ರರು ಇವರಿಂದ ಭಾಷಾ ಬೆಳವಣಿಗೆಯು ತೀವ್ರಗತಿಯಲ್ಲಿ ನಡೆಯುತ್ತದೆ.

**ಕ್ರಿಯಾ ಆಕೃತಿಕಲ್ಪ ಅಥವಾ ಚಟುವಟಿಕಾ ಆಕೃತಿಕಲ್ಪಗಳ ಹಂತ(4ರಿಂದ 7 ವರ್ಷಗಳು):**

ಮಗುವು ನಿಜವಾಗಲೂ ಆಲೋಚಿಸಲು ಪ್ರಾರಂಭಿಸುವ ಹಂತ ಇದು. ಆದರೆ ಇಲ್ಲಿಯೂ ಅವರು ಸಂಪೂರ್ಣ ತರ್ಕಬದ್ಧವಾಗಿರುವುದಿಲ್ಲ. ಅವರ ಚಿಂತನೆಗಳು ಪರಸ್ಪರ ವಿರೋಧಾಭಾಸಗಳಿಂದ ಕೂಡಿರುತ್ತವೆ. ಹಾಗಾಗಿ ಮಕ್ಕಳ ಈ ಹಂತದ ಬೌದ್ಧಿಕ ಕ್ರಿಯೆಗಳಲ್ಲಿ ಸ್ವಲ್ಪಮಟ್ಟಿನ ದೋಷವು ಇದ್ದೇ ಇರುತ್ತದೆ. ಉದಾಹರಣೆಗೆ, ತನಗೆ ಒಬ್ಬ ಅಣ್ಣ ಇದ್ದಾನೆ ಎಂದು ತಿಳಿದುಕೊಳ್ಳುವಷ್ಟು ಸುಲಭವಾಗಿ ತನ್ನ ಅಣ್ಣನಿಗೆ ಒಬ್ಬ ತಮ್ಮ ಇದ್ದಾನೆ ಮತ್ತು ಅದು ತಾನೇ ಎಂಬ ಅರ್ಥವು ಮಗುವಿಗೆ ಆಗಿರುವುದಿಲ್ಲ. ಸಂಖ್ಯೆಗಳನ್ನು ಕೂಡಿಸಲು ಬರುವಷ್ಟು ಸುಲಭವಾಗಿ ಕಳೆಯಲು ಬರುವುದಿಲ್ಲ. ಉದ್ದ, ಗಾತ್ರ, ಮತ್ತು ಸಂಖ್ಯೆಗಳ ಪರಿಕಲ್ಪನೆಗಳು ಅವರಲ್ಲಿ ದೋಷಪೂರ್ಣವಾಗಿರುತ್ತವೆ.

**ಮೂರ್ತಕಾರ್ಯಗಳ / ಮೂರ್ತ ಸಂಕ್ರಿಯಾತ್ಮಕ ಹಂತ (7ರಿಂದ 11 ವರ್ಷಗಳವರೆಗೆ)**

ಈ ಹಂತದಲ್ಲಿ ಮಗುವಿನ ಆಲೋಚನೆಗಳು ತಾರ್ಕಿಕ ನೆಲೆಗಟ್ಟನ್ನು ಪಡೆದುಕೊಳ್ಳುತ್ತವೆ. ಪರಿಕಲ್ಪನೀಕರಣ ಪ್ರಕ್ರಿಯೆಯಲ್ಲಿ ಮಕ್ಕಳು ಯಾವಾಗಲೂ ನಿರತರಾಗಿರುವ ಹಂತವಿದು. ಆದರೆ, ಮೂರ್ತಸ್ವರೂಪದ ವಸ್ತುಗಳು, ಅನುಭವಗಳೇ ಇಲ್ಲಿ ಮುಖ್ಯವಾಗುವುದು. ಪಿಯಾಷೆಯು ಬಳಸಿದ "ಸಂಕ್ರಿಯಾತ್ಮಕ"/"ಕ್ರಿಯಾತ್ಮಕ" ಎಂಬ ಪದವು ಒಂದು ಸೂಚ್ಯಾರ್ಥವನ್ನು ನೀಡುವುದು. ಅದೆಂದರೆ, ಕ್ರಿಯಾತ್ಮಕತೆ ಎನ್ನುವುದು ಬೌದ್ಧಿಕಕ್ರಿಯೆಯನ್ನು ಪ್ರತಿನಿಧಿಸುತ್ತದೆ. ಅಂದರೆ, ಗಣಿತದಲ್ಲಿ ಮಾಡುವ, ಸಂಕಲನ, ವ್ಯವಕಲನ, ಗುಣಿಸುವುದು ಮತ್ತು ಭಾಗಿಸುವುದು ಇತ್ಯಾದಿ. ಪೂರ್ವಸಂಕ್ರಿಯಾತ್ಮಕ ಹಂತದಲ್ಲಿ ಮಕ್ಕಳು ಚಿತ್ರರೂಪದಲ್ಲಿ ಪ್ರಾತಿನಿಧ್ಯಗಳನ್ನು ರೂಪಿಸಿಕೊಂಡರೆ, ಮೂರ್ತಸಂಕ್ರಿಯಾತ್ಮಕ ಹಂತದಲ್ಲಿ ಸಾಂಕೇತಿಕ ಪ್ರಾತಿನಿಧ್ಯಗಳನ್ನು ರಚಿಸಿಕೊಳ್ಳುವರು. ಹೀಗಾಗಿ ಅವರ ನೆನಪಿನ ಶಕ್ತಿಯಲ್ಲಿ ಹೆಚ್ಚಳವಾಗುವುದು, ಮತ್ತು ಘಟನೆಗಳನ್ನು, ವಸ್ತುಗಳನ್ನು ಅವರು ಸಾಂಕೇತಿಕ ರೂಪದಲ್ಲಿ ಬಹಳ ಲೀಲಾಜಾಲವಾಗಿ ನೆನಪುಮಾಡಿಕೊಳ್ಳುವರು. ಮಾನಸಿಕವಾಗಿಯೇ ಲೆಕ್ಕಾಚಾರಮಾಡಬಲ್ಲರು, ಬಹಳಷ್ಟು ವಿಚಾರಗಳನ್ನು/ ಮಾಹಿತಿಯನ್ನು ಅಥವಾ ಕ್ರಮಾನುಗತವಾಗಿ ನಡೆಯುವ ಘಟನೆಗಳನ್ನು ಒಂದೇ ಒಂದು ಪದದ ಮೂಲಕ ಸಂಗ್ರಹಿಸಿ ಹೇಳಬಲ್ಲರು. ಒಟ್ಟಾರೆ, ಈ ಹಂತದಲ್ಲಿ ಮಕ್ಕಳು ವೈವಿಧ್ಯಮಯವಾದ ಮಾನಸಿಕ ಕೌಶಲಗಳನ್ನು ಹೊಂದಿರುತ್ತಾರೆ. ಅವುಗಳನ್ನು ಕ್ರೋಢೀಕರಿಸಿ ಈ ಕೆಳಗಿನಂತೆ ಹೇಳಬಹುದು:

- ಪರಿಕಲ್ಪನೆಗಳನ್ನು ಮಾನಸಿಕವಾಗಿ ಗ್ರಹಿಸಿ, ಅರ್ಥಮಾಡಿಕೊಳ್ಳಬಲ್ಲರು, ಸಾಮಾನ್ಯಗಳಲ್ಲಿ ಕಂಡುಬರುವ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸುವರು.
- ಆಂತರಿಕವಾಗಿ ಪರಸ್ಪರ ಸಂಬಂಧ ಹೊಂದಿರುವ ತತ್ವಗಳನ್ನು ಚೆನ್ನಾಗಿ ಗ್ರಹಿಸುವರು ಮತ್ತು ಸಂಶ್ಲೇಷಣೆಯ ಮೂಲಕ ಜ್ಞಾನವನ್ನು ಗಳಿಸುವರು ಹಾಗೂ ವ್ಯವಸ್ಥಾರೂಪದ ಚಿಂತನೆಗಳನ್ನು ಮಾಡಬಲ್ಲರು.
- ಅವರ ಪ್ರಬಲವಾದ ತಾರ್ಕಿಕಶಕ್ತಿಯನ್ನು ಅವರು ಪ್ರದರ್ಶಿಸಬಲ್ಲರು, ಅನುಗಮನ ಮತ್ತು ನಿಗಮನ ರೀತಿಯಲ್ಲಿ ಚಿಂತಿಸಬಲ್ಲರು ಮತ್ತು ಇಂತಹ ಚಿಂತನೆಗಳಿಂದ ಸಾರ್ವತ್ರೀಕರಣಗಳಿಗೆ ಅಗತ್ಯವಾದ ತಾರ್ಕಿಕ ನೆಲೆಗಟ್ಟು ನೆಲೆಗಟ್ಟನ್ನು ರೂಪಿಸಿಕೊಳ್ಳುವರು.
- ಸಂಖ್ಯೆಗಳ ಮತ್ತು ವಸ್ತುಗಳ ಪರಿವರ್ತನೆಯ ನಿಯಮಗಳನ್ನು ಅರ್ಥಮಾಡಿಕೊಳ್ಳುವರು. ಮೇಲ್ನೋಟಕ್ಕೆ ಕಾಣುವ ಬದಲಾವಣೆಗಳು ನಿಜವಾದ ಅರ್ಥದಲ್ಲಿ ಗುಣಾತ್ಮಕವಾಗಿಯಾಗಲೀ ಪರಿಮಾಣಾತ್ಮಕವಾಗಲೀ ಏನನ್ನೂ ಬದಲಾವಣೆಗಳನ್ನು ತರುವುದಿಲ್ಲ ಎಂದು ತಿಳಿದುಕೊಳ್ಳುವರು.
- ಎ=ಬಿ ಹಾಗೂ ಬಿ=ಎ ಎಂಬ ಪರಿಕಲ್ಪನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲರು.
- ಅಹಂಕೇಂದ್ರಿತ ಸ್ವಭಾವದಿಂದ ಮುಕ್ತವಾಗಿರುವರು. ಕೇವಲ ಅವರ ದೃಷ್ಟಿಕೋನವಷ್ಟೇ ಅಲ್ಲದೆ ಬೇರೆಯವರ ದೃಷ್ಟಿಕೋನವನ್ನೂ ಅರ್ಥಮಾಡಿಕೊಳ್ಳುವರು.
- ಗುರುತಿಸುವಿಕೆ, ವರ್ಗೀಕರಣ, ಸ್ಮರಣೆ – ಈ ವರ್ತನೆಗಳನ್ನು ಕೌಶಲದ ಮಟ್ಟದಲ್ಲಿ ಪಡೆಯುವರು.
- ವಸ್ತುಗಳನ್ನು, ಸಂಖ್ಯೆಗಳನ್ನು ಏರಿಕೆಯ ಅಥವಾ ಇಳಿಕೆಯ ಕ್ರಮದಲ್ಲಿ ಜೋಡಿಸಬಲ್ಲರು.
- ಮೂರ್ತಸ್ವರೂಪದಲ್ಲಿನ ಯಾವುದೇ ಸಮಸ್ಯೆಯನ್ನಾಗಲೀ ಅಥವಾ ಕಾರ್ಯವನ್ನಾಗಲೀ ಅಚ್ಚುಕಟ್ಟಾಗಿ ಮಾಡುವರು.
- ಸಮಯ, ಕಾಲ, ದೂರ, ದೇಶ ಮತ್ತು ವಸ್ತುಗಳ ನಡುವಿನ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಂಡು ಕಾರ್ಯನಿರ್ವಹಿಸುವರು.

**ಔಪಚಾರಿಕ ಕಾರ್ಯಗಳ /ಔಪಚಾರಿಕ ಸಂಕ್ರಿಯಾತ್ಮಕ ಹಂತ (11ರಿಂದ 16 ಅಥವಾ ಹದಿಹರೆಯದ ಹಂತ)**

ಈ ಹಂತವು ಹದಿಹರೆಯದ ಉಗಮವೂ ಆಗಿರುತ್ತದೆ. ಅಗಾಧವಾದ ಬೌದ್ಧಿಕ ಸಾಮರ್ಥ್ಯ, ಪಕ್ವಗೊಂಡ ಚಿಂತನೆಗಳು, ಸಮಸ್ಯೆಯೊಂದನ್ನು ವಿಭಿನ್ನ ರೀತಿಗಳಲ್ಲಿ ಗ್ರಹಿಸಿ ಪರಿಹಾರ ಕಂಡುಕೊಳ್ಳುವುದು – ಹೀಗೆ ಒಂದು ರೀತಿಯ ಪ್ರಬುದ್ಧತೆಯನ್ನು ಮಕ್ಕಳು ಈ ಹಂತದಲ್ಲಿ ತೋರುವರು. ಸಂಜ್ಞಾನವಲಯದ ಉನ್ನತಮಟ್ಟದ ಕೌಶಲಗಳು ವ್ಯಕ್ತವಾಗಲು ಪ್ರಾರಂಭವಾಗುವ ಕಾಲ ಇದು. ಅನುಗಮನ–ನಿಗಮನ ರೀತಿಯಲ್ಲಿ ಚಿಂತನೆ, ವಿಮರ್ಶಾತ್ಮಕವಾಗಿ ಘಟನೆಗಳನ್ನು ವಿಶ್ಲೇಷಿಸುವುದು, ಏಕಮುಖ ಚಿಂತನೆ, ಬಹುಮುಖ ಚಿಂತನೆ, ಪಾರ್ಶ್ವಚಿಂತನೆ ಹೀಗೆ ಹಲವಾರು ವಿಧದಲ್ಲಿ ಚಿಂತಿಸಬಲ್ಲರು. ಪ್ರಯೋಗಗಳನ್ನು ಕೈಗೊಳ್ಳುವುದು, ಅದಕ್ಕಾಗಿ ಆಧಾರ ಕಲ್ಪನೆಗಳನ್ನು ರಚಿಸಿಕೊಳ್ಳುವುದು, ತೀರ್ಮಾನಗಳನ್ನು ತೆಗೆದುಕೊಳ್ಳುವುದು ಇಂತಹ ಕೌಶಲಗಳನ್ನು ಬಳಸಿಕೊಳ್ಳುತ್ತಾ ಕಾರ್ಯನಡೆಸುತ್ತಾರೆ. ಸಮಸ್ಯೆಯನ್ನು ಪರಿಹರಿಸಲು ವೈಜ್ಞಾನಿಕ ವಿಧಾನವನ್ನು ಅನುಸರಿಸುತ್ತಾರೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುತ್ತಾರೆ. ಅಮೂರ್ತ ಚಿಂತನೆಗಳನ್ನೂ ಕೂಡ ಸಮರ್ಪಕವಾಗಿ ನಡೆಸುತ್ತಾರೆ.

**ಭಾಷಾ ವಿಕಾಸ:**

ಪೂರ್ವಬಾಲ್ಯಹಂತದಲ್ಲಿ ಭಾಷಾ ಬೆಳವಣಿಗೆಯು ಅತೀ ಶೀಘ್ರವಾಗಿ ನಡೆಯುವುದು. ನೋಮ್‌ಚೋಮ್‌ಸ್ಕೀ (1957) ಹೇಳುವ ಪ್ರಕಾರ, ಎಲ್ಲಾ ಮಕ್ಕಳಲ್ಲೂ ಭಾಷಾ ಸ್ವಾಂಗೀಕರಣದ ಸಾಧನವೊಂದು ಇದ್ದೇ ಇರುತ್ತದೆ. ಇದು ಆಂತರಿಕವಾಗಿರುವ ಒಂದು ಸೌಲಭ್ಯ. ಇದರಿಂದಾಗಿ ಸಾಕಷ್ಟು ವಾಕ್ಚಾತುರ್ಯ, ಶಬ್ದಭಂಡಾರದ ಹೆಚ್ಚಳ, ವ್ಯಾಕರಣಬದ್ಧವಾದ ವಾಕ್ಯಗಳ ರಚನೆ ಮತ್ತು ಉತ್ತಮ ಸಂವಹನ–ಇವೆಲ್ಲವೂ ಸುಲಲಿತವಾಗಿ

ನಡೆಯುವುದು. ಮುಂದುವರೆಸುತ್ತಾ ಚೋಮ್‌ಸ್ಕೀ ಭಾಷಾ ಸ್ವಾಂಗೀಕರಣದ ಸಾಧನವು ಸಾರ್ವತ್ರಿಕವಾಗಿ ಎಲ್ಲರಲ್ಲೂ ಇದ್ದು, ಮಾನವರ ಎಲ್ಲಾ ಬಾಷೆಗಳಿಗೂ ಅನ್ವಯಿಸಬಲ್ಲುದಾಗಿರುತ್ತದೆ ಎಂದು ಪ್ರತಿಪಾದಿಸಿದ್ದಾನೆ. ಈ ಒಂದು ಸಾಮರ್ಥ್ಯವನ್ನು ಮಕ್ಕಳು ತಾವು ಯಾವ ಸಮುದಾಯದಲ್ಲಿ ಬೆಳೆಯುತ್ತಿರುತ್ತಾರೋ ಅಲ್ಲಿಯ ಭಾಷೆಯನ್ನು ಕಲಿಯಲು ಬಳಸಿಕೊಳ್ಳುತ್ತಾರೆ. ಹಾಗಾಗಿ ಬಹು ಸುಲಲಿತವಾಗಿ ಆ ಭಾಷೆಯನ್ನು ತಮ್ಮದನ್ನಾಗಿಸಿಕೊಳ್ಳುತ್ತಾರೆ. ತಮಗೆ ಉಚ್ಚಾರಣೆಯಲ್ಲಿ ತೊಡಕಾಗುವ ಶಬ್ದಗಳನ್ನು ಮಕ್ಕಳು ಕ್ರಮಬದ್ಧವಾದ ಉಚ್ಚಾರಣಾ ತಂತ್ರಗಳ ಮೂಲಕ ಕಲಿತುಕೊಳ್ಳುತ್ತಾರೆ. ಶಾಲಾಪೂರ್ವದ ಹಂತದಿಂದ ಪ್ರಾಥಮಿಕ ಶಾಲೆಗೆ ಬರುವಷ್ಟರಲ್ಲಿ ಮಕ್ಕಳು ಭಾಷೆಯಲ್ಲಿ ಹಲವು ರೀತಿಯ ಪ್ರಾವೀಣ್ಯತೆಯನ್ನು ಗಳಿಸಿಕೊಂಡಿರುತ್ತಾರೆ. ಅದರಲ್ಲೂ ಮೌಖಿಕವಾದ ಕೌಶಲದಲ್ಲಿ ಹೆಚ್ಚಳವನ್ನು ತೋರುತ್ತಾರೆ. ಇದು ಅವರ ಉತ್ತರಬಾಲ್ಯ ಮತ್ತು ಹದಿಹರೆಯದಹಂತದವರೆಗೂ ಮುಂದುವರಿಯುತ್ತಾ ಸಾಗುತ್ತದೆ.

ಪಿಯಾಷೆಯು ಹೇಳುವಂತೆ, ಭಾಷಾ ಕಲಿಕೆ ಮತ್ತು ಮಾತುಗಾರಿಕೆ ಎರಡೂ ಪರಸ್ಪರ ಸಂಬಂಧವನ್ನು ತೋರುತ್ತವೆ. ಮಾತಿನಲ್ಲಿ ಎರಡು ಮುಖ್ಯ ವಿಭಾಗಗಳನ್ನು ಗುರುತಿಸಲಾಗಿದೆ, ಅವುಗಳೆಂದರೆ, 1. ಅಹಂ ಕೇಂದ್ರಿತ ಮಾತು ಮತ್ತು 2. ಸಾಮಾಜಿಕ ಮಾತು. ಅಹಂ ಕೇಂದ್ರಿತ ಮಾತಿನಲ್ಲಿ ಮಕ್ಕಳು ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುವರು ಮತ್ತು ಇದರ ಉದ್ದೇಶ ಕೇವಲ ಮಾತಿನ ಖುಷಿ ಪಡೆಯಲು ಅಷ್ಟೇ. ಅನ್ಯವ್ಯಕ್ತಿಗಳ ಮಾತಿಗೆ ಪ್ರತಿಕ್ರಿಯಿಸುವುದಾಗಲೀ ಅಥವಾ ಚಿಂತನೆಗಳ ವಿನಿಮಯವನ್ನಾಗಲೀ ಮಾಡುವುದು ಅವರ ಉದ್ದೇಶವಾಗಿರುವುದಿಲ್ಲ. ಅಹಂಕೇಂದ್ರಿತ ಮಾತುಗಳನ್ನು 'ಮಿಥ್ಯಾ ಸಂಭಾಷಣೆ' ಅಥವಾ 'ಏಕವ್ಯಕ್ತಿ ಸ್ವಗತ'ವೆಂದು ಕರೆಯಲಾಗುತ್ತದೆ. ಮುಂದಿನ ದಿನಗಳಲ್ಲಿ ಇದು ಸಾಮಾಜೀಕರಣದ ಮಾತುಗಳೆಂದು ಬದಲಾಗುತ್ತದೆ. ಸಾಮಾಜಿಕ ಮಾತುಗಳನ್ನು ಅನ್ಯ ವ್ಯಕ್ತಿಯೊಂದಿಗೆ ನಡೆಸಲಾಗುತ್ತದೆ. ವಿಚಾರ ವಿನಿಮಯ, ಪರಸ್ಪರ ಸಂವಹನ ಮುಂತಾದುವುಗಳು ನಡೆಯುತ್ತವೆ. ಸಾಮಾಜಿಕ ಮಾತುಗಳಲ್ಲಿ ಈ ಕೆಳಕಂಡ ಐದು ವಿಧಗಳನ್ನು ನೋಡಬಹುದಾಗಿದೆ:

1. ಸ್ವೀಕೃತಗೊಂಡ ಮಾಹಿತಿ
2. ವಿಮರ್ಶೆ
3. ಬೇಡಿಕೆಗಳು ಮತ್ತು ಆಜ್ಞೆಗಳು
4. ಪ್ರಶ್ನೆಗಳು
5. ಉತ್ತರಗಳು

ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳು ತಮ್ಮ ಸಾಮಾಜಿಕ ಹೊಂದಾಣಿಕೆ, ಅಗತ್ಯ, ಮತ್ತು ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಾರೆ. ಸಾಮಾಜಿಕ ಮಾತು, ಶಾಲಾ ಕಲಿಕೆ ಮತ್ತು ಸಾಧನೆಗೂ ಸಹಾಯಮಾಡುತ್ತದೆ. ಭಾಷೆಯು ಮಕ್ಕಳ ವರ್ತನೆಗಳನ್ನು, ಚಿಂತನೆಗಳನ್ನು, ಮತ್ತು ಇತರರೊಡನೆ ಮಾಡಿಕೊಳ್ಳುವ ಹೊಂದಾಣಿಕೆಯನ್ನು ಪ್ರಭಾವಿಸುತ್ತದೆ. ಒಟ್ಟಾರೆ ಭಾಷಾಕಲಿಕೆಗೆ ಶಾರೀರಿಕ ಸಿದ್ಧತೆ, ಮಾನಸಿಕ ಸಿದ್ಧತೆ, ಅನುಕರಣೆಯಿಂದ ಕಲಿಯುವುದಕ್ಕಾಗಿ ಉತ್ತಮ ಮಾದರಿ, ಅಭ್ಯಾಸಕ್ಕಾಗಿ ಸಿಕ್ಕುವ ಅವಕಾಶಗಳು, ಅಭಿಪ್ರೇರಣೆ ಮತ್ತು ಮಾರ್ಗದರ್ಶನ – ಇವುಗಳು ತುಂಬಾ ಮುಖ್ಯವಾಗಿ ಬೇಕಾಗುತ್ತವೆ. ಭಾಷಾಕಲಿಕೆಯ ಮೂರು ಮುಖ್ಯ ಕಾರ್ಯಗಳೆಂದರೆ, ಶಾಬ್ದಿಕ ಸಂಪತ್ತನ್ನು ರಚಿಸಿಕೊಳ್ಳುವುದು, ಉಚ್ಚಾರಣೆ, ಮತ್ತು ಪದಗಳನ್ನು ಅರ್ಥಪೂರ್ಣವಾಗಿ, ವ್ಯಾಕರಣಬದ್ಧವಾಗಿ ಜೋಡಿಸಿ ವಾಕ್ಯಗಳನ್ನು ರಚಿಸುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ಆಕೃತಿ ಕಲ್ಪಗಳ ಮೂಲ ____________

ಎ. ಸಮತೋಲನ

ಬಿ.  ಸಂಗ್ರಹಣ

ಸಿ. ವ್ಯವಸ್ಥೀಕರಣ

ಡಿ. ಸಂಗ್ರಹಣ ಮತ್ತು ವ್ಯವಸ್ಥೀಕರಣ

2. ಸಂಜ್ಞಾನ ಕಾರ್ಯಗಳೆಂದರೆ______________

ಎ. ಚಿಂತನೆ ಮತ್ತು ವಿಶ್ಲೇಷಣೆ

ಬಿ. ಅರ್ಥೈಸುವಿಕೆ

ಸಿ. ಸಂಗ್ರಹಣ ಮತ್ತು ವ್ಯವಸ್ಥೀಕರಣ

ಡಿ. ಸಮಸ್ಯಾ ಪರಿಹಾರ

3. ಸಂಜ್ಞಾನಾತ್ಮಕ ವಿಕಾಸದ ಮೂರನೆಯ ಹಂತ______________

ಎ. ಸಂವೇಗಾತ್ಮಕ ಹಂತ

ಬಿ. ಮೂರ್ತ ಸಂಕ್ರಿಯಾತ್ಮಕ ಹಂತ

ಸಿ. ಕಾರ್ಯ-ಪೂರ್ವ ಹಂತ

ಡಿ. ಔಪಚಾರಿಕ ಕಾರ್ಯ ಹಂತ

4. ಕಾರ್ಯ-ಪೂರ್ವಹಂತದಲ್ಲಿ______________

ಎ. ಕಾರ್ಯಹಂತವಿರುತ್ತದೆ

ಬಿ. ಒಳಅರಿವಿನ ಹಂತವಿರುತ್ತದೆ

ಸಿ.ಪೂರ್ವ-ಪರಿಕಲ್ಪನಾ ಹಂತವಿರುತ್ತದೆ

ಡಿ. ಮೇಲಿನ 'ಬಿ' ಮತ್ತು 'ಸಿ' ಎರಡೂ ಇರುತ್ತವೆ

5. "ನಾಟಕೀಯತೆ" ಮತ್ತು "ನಂಬಿಸುವ ಆಟ" ವರ್ತನೆಯು ಕಂಡುಬರುವ ಹಂತ______________

ಎ. 2ರಿಂದ 4 ವರ್ಷಗಳು

ಬಿ. 5ರಿಂದ 7 ವರ್ಷಗಳು

ಸಿ. 0ಯಿಂದ 2 ವರ್ಷಗಳು

ಡಿ. 1 ರಿಂದ 1.5 ವರ್ಷಗಳು

6. ಪೂರ್ವಕಾರ್ಯ ಹಂತವನ್ನು ಗುರುತಿಸುವ ರೀತಿ______________

ಎ. ಕ್ರಿಯಾ ಆಕೃತಿ ಕಲ್ಪಗಳು

ಬಿ. ಸಮತೋಲನ

ಸಿ. ಆಕೃತಿಕಲ್ಪಗಳು

ಡಿ. ಮೂರ್ತ ಕಾರ್ಯಗಳು

## 1.4.3.3. ಭಾವನಾತ್ಮಕ ಮತ್ತು ನೈತಿಕ ವಿಕಾಸ – ಕೋಹ್ಲ್‌ಬರ್ಗ್

ಎಷ್ಟೇ ಅವ್ಯಕ್ತ ಮತ್ತು ಅಮೂರ್ತವಾಗಿದ್ದರೂ ಭಾವನೆಗಳು ನಮ್ಮ ಜೀವನದಲ್ಲಿ ಅತ್ಯಂತ ಪ್ರಭಾವಕಾರಿ ಅಂಶವಾಗಿದೆ. ವ್ಯಕ್ತಿಯ ವಿಕಾಸದ ಮೇಲೆ ಭಾವನೆಗಳ ಪ್ರಭಾವ ಅಪಾರ. ಮಕ್ಕಳು ಸಾಮಾನ್ಯವಾಗಿ ತಮ್ಮ ಭಾವನೆಗಳನ್ನು ಮುಚ್ಚಿಡಲಾರರು. ಅದರಂತೆಯೇ ಅವರಲ್ಲಿ ಭಾವನೆಗಳು ಬಹಳ ಬೇಗ ಬದಲಾಗುತ್ತಿರುತ್ತವೆ. ಅಳುವುದು, ಕೋಪಿಸಿಕೊಳ್ಳುವುದು, ಒಂದು ರೀತಿಯ ಭಾವನೆಗಳಾದರೆ, ಉಗುರು ಕಚ್ಚುವುದು, ಬೆರಳು ಚೀಪುವುದು, ಮಾತಾಡುವಾಗ ತೊದಲುವುದು ಮತ್ತು ಉಗ್ಗುವಿಕೆಗಳು ಭಾವನೆಗಳ ಬೇರೆಯ ಕಥೆಯನ್ನೇ ಹೇಳುತ್ತವೆ. ನವಜಾತ ಶಿಶುವಿನಲ್ಲಿ ಭಾವನೆಗಳಾವವೂ ಇರುವುದಿಲ್ಲ. ಆದರೂ ಕೆಲವೇ ಕೆಲವು, ಉದಾಹರಣೆಗೆ, ಮಗುವಿನ ಸಂತೋಷ, ಸೌಖ್ಯ, ಕಿರಿಕಿರಿ, ಇಂತಹ ಸ್ಥೂಲ ಭಾವನೆಗಳು ಕಂಡುಬರುತ್ತವೆ. ಒಂದು ವರ್ಷದವರೆಗೆ ಮಗುವಿನ ಭಾವನೆಗಳು ಜೈವಿಕ ಅಗತ್ಯಗಳಿಗೆ ಸೀಮಿತವಾಗಿರುತ್ತವೆ. ಅದಕ್ಕೆ ಆಗ, ಆಹಾರ, ರಕ್ಷಣೆ ಮತ್ತು ಪ್ರೀತಿ ಇಷ್ಟು ಮಾತ್ರ ಅವಶ್ಯಕವಾಗಿ ಬೇಕಾಗಿರುತ್ತದೆ.

ವ್ಯಾಟ್ಸನ್ ಹೇಳುವಂತೆ, ಪ್ರೀತಿ, ಭಯ ಮತ್ತು ಕೋಪ– ಈ ಮೂರು ಭಾವನೆಗಳು ಬೇರೆ ಎಲ್ಲಾ ಭಾವನೆಗಳ ಉಗಮಕ್ಕೆ ಮೂಲ ಸೆಲೆಯಾಗಿರುತ್ತವೆ. ಇದು ಸುಮಾರು ಮಗುವಿಗೆ 5 ವರ್ಷ ಆಗುವವರೆಗೂ ಹೀಗೆ ಇರುತ್ತದೆ. ಆದರೆ ಅವುಗಳ ವ್ಯಾಪ್ತಿ ಮತ್ತು ಆಳ ಜಾಸ್ತಿಯಿರುತ್ತದೆ. ಈ ವಯಸ್ಸಿನ ಮಕ್ಕಳಲ್ಲಿ ಭಯ ಹೆಚ್ಚಾಗಿ ಕಂಡುಬರುವುದು, ಅದು ಡಾಕ್ಟರ್, ಪೋಲೀಸ್, ನಾಯಿ ಮತ್ತು ಕತ್ತಲೆ, ಹೀಗೆ ಹಲವು ವಿಚಾರಗಳನ್ನು ಕುರಿತದ್ದಾಗಿರುತ್ತದೆ. ಚಿಕ್ಕ ಮಕ್ಕಳ ತಳಬುಡವಿಲ್ಲದ ಭಯವು ಕ್ರಮೇಣ ವಿಕಾಸಪ್ರಕ್ರಿಯೆ ಮುಂದುವರಿದಂತೆ ಕಡಿಮೆಯಾಗುವುದು ಮತ್ತು ಸಂಪೂರ್ಣವಾಗಿ ಮಾಯವಾಗುವುದು. ಶಾಲಾಪೂರ್ವ ಹಂತದ ಮಕ್ಕಳು ಕೂಡ ತಮ್ಮ ಭಾವನೆಯನ್ನು ಮುಚ್ಚಿಟ್ಟುಕೊಳ್ಳಲಾರರು. ಜೋರಾಗಿ ಧ್ವನಿಯೆತ್ತಿ ಅಳುವುದು, ಕಿರುಚುವುದರ ಮೂಲಕ ಕೋಪವನ್ನು ತೋರುವರು, ವಸ್ತುಗಳನ್ನು ಕಾಲಿನಿಂದ ಒದೆಯುವುದು, ಎಸೆಯುವುದು, ಒಡೆದು ಹಾಕುವುದು – ಹೀಗೆ ಎಲ್ಲಾ ರೀತಿಯ ಬಹಿರಂಗ ಅಸಮಾಧಾನವನ್ನು ವ್ಯಕ್ತಪಡಿಸುವರು. ಆದರೆ 4 ವರ್ಷ ತುಂಬುತ್ತಿದ್ದಂತೆ ಈ ರೀತಿಯ ವರ್ತನೆಗಳು ಕಡಿಮೆಯಾಗುತ್ತವೆ. ನಂತರ ಮಕ್ಕಳು ತಮ್ಮ ಕೋಪ ಮತ್ತು ಆಕ್ರಮಣಕಾರಿ ವರ್ತನೆಗಳನ್ನು ನಿಯಂತ್ರಿಸಲು ಕಲಿಯುತ್ತಾರೆ. ತನಗೆ ಸಿಗಬೇಕಾದ ತಂದೆತಾಯಿಯರ ಪ್ರೀತಿ ಬೇರೊಬ್ಬರ ಪಾಲಾಗುತ್ತಿದೆ ಎಂದಾಗ ಹುಟ್ಟಿಕೊಳ್ಳುವ ಭಾವವೇ ಬೇರೆ. ತಂದೆತಾಯಿಯರು ತೋರುವ ಮಕ್ಕಳಲ್ಲಿನ ಪಕ್ಷಪಾತವು ಹೊಟ್ಟೆಕಿಚ್ಚಿನ ಉಗಮಕ್ಕೆ ಕಾರಣವಾಗುವುದು. ಮುಂದೆ ಇದು ಜೀವನದಲ್ಲಿ ಹಲವಾರು ರೀತಿಯಲ್ಲಿ ಬದಲಾಗುವುದು. ಆಧುನಿಕ ಜೀವನಶೈಲಿಯಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಒತ್ತಡ, ಆತಂಕ, ಆತುರ, ಕಾತರಗಳು ಕಾಡುತ್ತಿರುತ್ತವೆ. ಇವೆಲ್ಲವೂ ಕೂಡ ಮೂಲತಃ ಭಾವನೆಗಳೇ ಆಗಿವೆ. ಇದು ಶಾಲಾ ಮಕ್ಕಳನ್ನೂ ಸಹ ಬಿಟ್ಟಿಲ್ಲ. ಮನೋವೈಜ್ಞಾನಿಕವಾಗಿ ಹೇಳಬೇಕೆಂದರೆ, ಯಾವುದೇ ಕೆಲಸ ಮಾಡುವಾಗ ಒಂದು ಪುಟ್ಟ ಆತಂಕವಿದ್ದರೆ ಒಳ್ಳೆಯದೇ, ಆದರೆ ಅದೇ ಜಾಸ್ತಿಯಾದಾಗ ಎಲ್ಲವೂ ಕೈಕೊಡುವುದು.

ಉತ್ತರ ಬಾಲ್ಯಹಂತದಲ್ಲಿ ಮಕ್ಕಳು ತಮ್ಮ ಭಾವನೆಗಳನ್ನು ನಿಯಂತ್ರಿಸಲು ಕಲಿತಿರುತ್ತಾರೆ. ತಮ್ಮ ಭಾವಾಭಿವ್ಯಕ್ತಿಯನ್ನು ಸುಮಾರಾಗಿ ಸರಿಯಾಗಿಯೇ ಮಾಡುತ್ತಾರೆ. ಆದರೆ, ಬಹಳ ಬೇಗ ಇನ್ನೊಬ್ಬರ ಪ್ರಭಾವಕ್ಕೆ ಒಳಗಾಗಿಬಿಡುತ್ತಾರೆ. ಬೇರೆಯವರಿಂದ ಅವಹೇಳನೆಗೆ ಗುರಿಯಾಗುವ, ತನ್ನ ಕಾರ್ಯದಲ್ಲಿ ವಿಫಲತೆಯನ್ನು ಕಾಣುವ, ಪರೀಕ್ಷೆಗಳಲ್ಲಿ ಫೇಲಾಗುವ ಭಯವು ಅವರನ್ನು ಕಾಡುತ್ತಿರುತ್ತದೆ. ಹೆಣ್ಣುಮಕ್ಕಳು ಹೊಟ್ಟೆಕಿಚ್ಚಿನಲ್ಲಿ ಗಂಡುಮಕ್ಕಳನ್ನು ಮೀರಿಸಿರುತ್ತಾರೆ. ಇವಿಷ್ಟೇ ಅಲ್ಲದೆ, ಸಂತೋಷ, ವಿನೋದ ಲಹರಿ, ಪ್ರೀತಿ, ಕುತೂಹಲ, ದುಃಖ ಮತ್ತು ವಿಶ್ವಾಸಗಳು ಭಾವನೆಗಳ ವಿಸ್ತೃತ ರೂಪವಾಗಿ ಕಂಡುಬರುತ್ತವೆ.

**ಕೋಹ್ಲ್‌ಬರ್ಗ್‌ನ ನೈತಿಕ ವಿಕಾಸ ಸಿದ್ಧಾಂತ**

ಪಿಯಾಜೆಯ ಸಹಚರರಲ್ಲೊಬ್ಬನಾದ ಲಾರೆನ್ಸ್ ಕೋಹ್ಲ್‌ಬರ್ಗ್ ನೈತಿಕ ವಿಕಾಸ ಸಿದ್ಧಾಂತದ ಪ್ರತಿಪಾದಕ. ವಿವಿಧ ಸಂಸ್ಕೃತಿಗಳಿಂದ ಆಯ್ದುಕೊಂಡ ನೂರಾರು ಮಕ್ಕಳ ಮಾಹಿತಿಯ ಆಧಾರದ ಮೇಲೆ ಈತ ತನ್ನ

ವಾದವನ್ನು ನಿರೂಪಿಸಿದ್ದಾನೆ. ಈತನ ಪ್ರಕಾರ, ಸಂಜ್ಞಾನಾತ್ಮಕ ವಿಕಾಸವು ನೈತಿಕ ವಿಕಾಸಕ್ಕೆ ಪ್ರಮುಖವಾದ ಬೆಂಬಲವನ್ನು ನೀಡುತ್ತದೆ. ವ್ಯಕಿಯೊಬ್ಬನ ನ್ಯಾಯದ ಪರಿಕಲ್ಪನೆಯ ವಿಕಾಸವೇ ನೈತಿಕತೆ ಎಂಬುದು ಈತನ ವಾದ. ನೈತಿಕ ತೀರ್ಮಾನಗಳನ್ನು ಒಬ್ಬ ವ್ಯಕ್ತಿಯು ಹೇಗೆ ತೆಗೆದುಕೊಳ್ಳುತ್ತಾನೆ ಎಂಬುದನ್ನು ಇದು ಆಧರಿಸಿರುತ್ತದೆ. ವ್ಯಕ್ತಿಯ ನ್ಯಾಯಪ್ರಜ್ಞೆಯ ಅಂದಾಜುಮಾಡಲು ಇವನು ನೀತಿ ನಿರ್ಧಾರ ಪರೀಕ್ಷೆಯನ್ನು ರೂಪಿಸಿದ್ದಾನೆ. ಈ ಪರೀಕ್ಷೆಯಲ್ಲಿ 'ನೀತಿ ಸಂದಿಗ್ಧತೆ' ಇರುವ ಒಂದು ಸನ್ನಿವೇಶವನ್ನು ತೆರೆದಿಡುತ್ತಾನೆ. ಇದಕ್ಕೆ ವ್ಯಕ್ತಿ ಕೊಡುವ ಉತ್ತರಕ್ಕಿಂತ ಅದಕ್ಕೆ ಕೊಡುವ ಕಾರಣದಲ್ಲಿ ಅವನ ನ್ಯಾಯಪ್ರಜ್ಞೆಯನ್ನು ಮಾಪನ ಮಾಡುತ್ತೇನೆ. ಅವನ ಪರೀಕ್ಷೆಯ ಒಂದು ಉದಾಹರಣೆ ಗಮನಿಸಿ.

**ಸನ್ನಿವೇಶ:** ಮಹಿಳೆಯೊಬ್ಬಳು ಸಾವಿನ ಅಂಚಿನಲ್ಲಿದ್ದಾಳೆ. ಆದರೆ ಅವಳ ಪ್ರಾಣ ಉಳಿಸುವ ಒಂದು ಮದ್ದು ಇದೆ ಎಂಬುದು ವೈದ್ಯರಿಗೆ ತಿಳಿದಿದೆ. ಅದನ್ನು ಇತ್ತೀಚೆಗಷ್ಟೇ ಒಬ್ಬ ವ್ಯಕ್ತಿ ಕಂಡುಹಿಡಿದಿದ್ದಾನೆ. ಅದನ್ನು ತಯಾರಿಸುವುದು ದುಬಾರಿಯಾದರೂ ಆ ವ್ಯಕ್ತಿ ಅದಕ್ಕೆ ಅದರ ಹತ್ತು ಪಟ್ಟು ಹಣ ವಸೂಲಿ ಮಾಡುತ್ತಾನೆ. ಅದರ ಬೆಲೆ 200ಡಾಲರ್ ಆದರೂ ಅದಕ್ಕವನು ಈಗ 2000ಡಾಲರ್ ಬೆಲೆ ಹೇಳುತ್ತಿದ್ದಾನೆ. ಈ ಮಹಿಳೆಯ ಗಂಡ ಅದನ್ನು ಕೊಳ್ಳಲು ಅಗತ್ಯವಾದ ಹಣಕ್ಕಾಗಿ ಪರಿಪರಿಯಾಗಿ ಬೇಡಿ ಈಗ ಕೈಯಲ್ಲಿ 1,000 ಡಾಲರ್ ತಂದಿದ್ದಾನೆ. ಅದಕ್ಕೆ ಆತ, 'ನಾನೇ ಈ ಮದ್ದನ್ನು ತಯಾರಿಸಿದ್ದೇನೆ, ಇದರಿಂದ ನಾನು ಹಣ ಮಾಡಬೇಕು, ಕಡಿಮೆ ಬೆಲೆಗೆ ಕೊಡಲಾಗುವುದಿಲ್ಲ ಎಂದು ಹೇಳುತ್ತಿದ್ದಾನೆ. ಅದಕ್ಕೆ ಆಕೆಯ ಗಂಡ 'ಅಪ್ಪಾ, ಕರುಣೆ ಇಡು, ಈಗ 1,000 ಡಾಲರ್ ತೆಗೆದುಕೊ, ಕಡಿಮೆ ಮಾಡಲು ಆಗದಿದ್ದರೆ ನಿನಗೆ ಉಳಿದ ಹಣವನ್ನು ನಂತರ ತಂದುಕೊಡುತ್ತೇನೆ' ಎನ್ನುತ್ತಾನೆ. ಅದಕ್ಕೆ ಮದ್ದು ತಯಾರಿಸಿದವ ಒಪ್ಪುವುದಿಲ್ಲ. ಮಹಿಳೆಯ ಗಂಡನಿಗೆ ತನ್ನ ಹೆಂಡತಿಯ ಸ್ಥಿತಿಯನ್ನು ನೆನೆದು ರೋಸಿಹೋಗುತ್ತದೆ. ಆತ ಪ್ರಯೋಗಾಲಯವನ್ನು ಮುರಿದು ಮದ್ದು ಕದ್ದು ತೆಗೆದುಕೊಂಡು ಹೋಗಬೇಕಾ? ಇಲ್ಲವಾ? ಹೌದಾದರೆ ಏಕೆ? ಇಲ್ಲವಾದರೆ ಏಕೆ?

ಅವನು ನಿರೂಪಿಸುವ ಆರು ಹಂತಗಳಿಗೆ ಸಂಬಂಧಿಸಿದ ಆರು ವಾದಗಳನ್ನು ಅವನು ಹೀಗೆ ಮುಂದಿಡುತ್ತಾನೆ:

**ಹಂತ 1 (ವಿಧೇಯತೆ):** ಅವನು ಕದಿಯಬಾರದು, ಏಕೆಂದರೆ ಅವನನ್ನು ಮುಂದೆ ಜೈಲಿಗೆ ಹಾಕಲಾಗುತ್ತದೆ. ಅವನು ಕೆಟ್ಟ ವ್ಯಕ್ತಿಯಾಗುತ್ತಾನೆ.

**ಹಂತ 2 (ಸ್ವ ಆಸಕ್ತಿ):** ಅವನು ಕದಿಯಬೇಕು. ಏಕೆಂದರೆ, ಅವನು ಜೈಲಿಗೆ ಹೋಗಬೇಕಾದರೂ ತನ್ನ ಹೆಂಡತಿಯನ್ನು ಬದುಕಿಸಿದೆನೆಂಬ ಸಂತೋಷ ಅವನಿಗಿರುತ್ತದೆ.

**ಹಂತ 3 (ಅನುಸರಣೆ):** ಅವನು ಕದಿಯಬೇಕು. ಏಕೆಂದರೆ, ಅವನ ಹೆಂಡತಿಯ ಪ್ರಾಣ ಈಗ ಉಳಿಸಬೇಕಾಗಿದೆ. ಅವನು ಅನುರೂಪನಾದ ಗಂಡನಾಗಿರಬೇಕು.

**ಹಂತ 4 (ಕಾನೂನು ಸುವ್ಯವಸ್ಥೆ):** ಅವನು ಕದಿಯಬಾರದು. ಏಕೆಂದರೆ, ಅದು ಕಾನೂನಿಗೆ ವಿರುದ್ಧವಾದುದು.

**ಹಂತ 5 (ಪ್ರಜಾಪ್ರಭುತ್ವ ನಿಯಮಗಳು):** ಅವನು ಕದಿಯಬೇಕು. ಏಕೆಂದರೆ, ಕಾನೂನು ಬಾಹಿರವಾದರೂ ಎಲ್ಲರಿಗೂ ತಮ್ಮ ಪ್ರಾಣವನ್ನು ಉಳಿಸಿಕೊಳ್ಳುವ ಹಕ್ಕು ಇದೆ.

**ಹಂತ 6 (ಸಾರ್ವಜನಿಕ ಮಾನವ ನೀತಿಸಂಹಿತೆ):** ಅವನು ಕದಿಯಬೇಕು. ಏಕೆಂದರೆ, ಮತ್ತೊಬ್ಬರಿಗೆ ಆಸ್ತಿಗೆ ಇರುವ ಹಕ್ಕಿಗಿಂತಲೂ ಮಾನವನ ಪ್ರಾಣ ಹೆಚ್ಚು ಮೂಲಭೂತವಾದ ಮೌಲ್ಯ.

ತನ್ನ ಆಳವಾದ ಸಂಶೋಧನೆಯನ್ನು ಆಧರಿಸಿ, ಸಾರ್ವತ್ರಿಕವಾಗಿ ಸಮ್ಮತಿಸಲಾದ ನೈತಿಕ ವಿಕಾಸದಲ್ಲಿನ ಮೂರು ಸ್ತರಗಳನ್ನು ಮತ್ತು ಪ್ರತಿಯೊಂದು ಸ್ತರದಲ್ಲೂ ಕ್ರಮವಾದ ಎರಡು ಹಂತಗಳನ್ನು ಆತ ಗುರುತಿಸಿದ್ದಾನೆ. ಅವುಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ ಗಮನಿಸಿ:

| | | |
|---|---|---|
| ಸ್ತರ–1 | ಪೂರ್ವ–ನೈತಿಕ ಹಂತ<br>(4ರಿಂದ 10 ವರ್ಷಗಳು) | ಹಂತ 1. ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ತೋರುವ ವಿಧೇಯತೆ.<br>ಹಂತ 2. ಬಹುಮಾನಗಳನ್ನು ಮತ್ತು ಪ್ರಶಂಸೆಗಳನ್ನು ಪಡೆಯುವುದಕ್ಕಾಗಿ ಒಳ್ಳೆಯ ನಡತೆ ತೋರುವುದು. |
| ಸ್ತರ–2 | ಸಾಂಪ್ರದಾಯಿಕ ನೈತಿಕ ಹಂತ<br>(10ರಿಂದ 13 ವರ್ಷಗಳು) | ಹಂತ 3. ಪರಸ್ಪರ ಸಂಬಂಧಗಳ ನಿಭಾಯಿಸುವಿಕೆ ಮತ್ತು ಇತರರ ಅನುಮೋದನೆ ಪಡೆಯುವುದು.<br>ಹಂತ 4. ಸಾಮಾಜಿಕ ನೀತಿ, ನಿಯಮಗಳು |
| ಸ್ತರ–3 | ಸ್ವಾಯತ್ತ ನೈತಿಕ ತತ್ವಗಳು<br>(13ವರ್ಷಗಳಿಂದ ಮೇಲ್ಪಟ್ಟು) | ಹಂತ 5. ಪ್ರಜಾಪ್ರಭುತ್ವೀಯ ನಿಯಮಗಳು ಮತ್ತು ಸಮುದಾಯ ಹಿತರಕ್ಷಣೆಯ ನಿಯಂತ್ರಣಗಳು.<br>ಹಂತ 6. ವಿಶ್ವದ ಸಾರ್ವತ್ರಿಕ ತತ್ವಗಳು ಮತ್ತು ವೈಯಕ್ತಿಕ ಮನಸ್ಸಾಕ್ಷಿ, ಆಂತರ್ಯದ ಕರೆ. |

ಕೋಹ್ಲ್‌ಬರ್ಗನನೈತಿಕ ವಿಕಾಸದ ಆರು ಹಂತಗಳನ್ನು ಒಳಗೊಂಡ ಮುಖ್ಯವಾದ ಮೂರು ಸ್ತರಗಳು

ಈಗ ಮೇಲೆ ಹೇಳಿದ ಪ್ರತಿಯೊಂದು ಹಂತವನ್ನು ಸಂಕ್ಷಿಪ್ತವಾಗಿ ತಿಳಿಯೋಣ.

**1. ಪೂರ್ವ ನೈತಿಕ ಹಂತ : (ಸ್ತರ 1: 4ರಿಂದ 10 ವರ್ಷಗಳು)**

ಮಗುವಿಗೆ 4 ವರ್ಷವಾದಾಗ, ಅದರಲ್ಲಿ ಸ್ವಲ್ಪಮಟ್ಟಿನ ಭಾಷಾಬೆಳವಣಿಗೆ, ಮತ್ತು ಬೌದ್ಧಿಕ ಬೆಳವಣಿಗೆಯೂ ಆಗಿರುತ್ತದೆ. ಈ ಹಂತದಲ್ಲಿ ಮಗುವು ಸರಿ–ತಪ್ಪು, ಒಳ್ಳೆಯದು–ಕೆಟ್ಟದು, ಇವುಗಳನ್ನು ಕುರಿತಂತೆ ನಿರ್ಧಾರ ತೆಗೆದುಕೊಳ್ಳಲು ಪ್ರಾರಂಭಿಸುವುದು. ಆದರೆ ಈ ನಿರ್ಧಾರಗಳು ಸ್ವಾಯತ್ತವಾಗಿರುವುದಿಲ್ಲ. ಆದರೆ, ಕೇವಲ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಅಥವಾ ಬಹುಮಾನ, ಪ್ರಶಂಸೆಗಳನ್ನು ಪಡೆದುಕೊಳ್ಳುವುದಕ್ಕಾಗಿ, ಬೇಕು/ಬೇಡಗಳ ಮತ್ತು ಒಳ್ಳೆಯದು/ಕೆಟ್ಟದ್ದರ ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳುವುದು.

**ಹಂತ 1 :** ಶಿಕ್ಷೆಯನ್ನು ಕುರಿತ ಭಯದಿಂದಾಗಿ ಮಗುವಿನಲ್ಲಿ ನೈತಿಕ ಮಟ್ಟವು ಬೆಳೆದಿರುತ್ತದೆ. ಹಾಗಾಗಿ, ಈ ಹಂತದಲ್ಲಿ ಮಕ್ಕಳು ತಂದೆ–ತಾಯಿಯರಿಗೆ ಮತ್ತು ಹಿರಿಯರಿಗೆ ವಿಧೇಯರಾಗಿರುತ್ತಾರೆ, ಇದಕ್ಕೆ ಮುಖ್ಯಕಾರಣ, ಶಿಕ್ಷೆ, ಬೈಗುಳಗಳನ್ನು, ನಿಂದನೆಗಳನ್ನು ತಪ್ಪಿಸಿಕೊಳ್ಳುವುದು.

**ಹಂತ 2 :** ಸರಿಸುಮಾರು 3½ ಯಿಂದ 4 ವರ್ಷದ ಕೊನೆಯ ಭಾಗದಲ್ಲಿ, ಮಗುವು ನಿರ್ದಿಷ್ಟ ನಿರ್ಧಾರದಿಂದ ತನಗೆ ಏನು ಸಿಗುವುದೆಂದು ವಿಚಾರ ಮಾಡಿ, ಅದಕ್ಕಾಗಿ ಸರಿಯಾದ ನಡೆಯನ್ನು ತೆಗೆದುಕೊಳ್ಳುತ್ತದೆ. ಈ ಹಂತದಲ್ಲಿ ಮಗುವು 'ಮಾಡಬಹುದು/ಮಾಡಬಾರದು' ನಿಯಮಗಳಿಗೆ ಬದ್ಧವಾಗಿದ್ದು, ತಂದೆ, ತಾಯಿ ಮತ್ತು ಹಿರಿಯರು ಹೇಳಿದಂತೆ ಕೇಳುವುದು. ಏಕೆಂದರೆ, ಹೀಗೆ ಮಾಡುವುದರಿಂದ ಅವರಿಗೂ ಇಷ್ಟವಾಗುವುದೆಂಬ ಪರಿಜ್ಞಾನವನ್ನು ಮಗುವು ಬೆಳೆಸಿಕೊಳ್ಳುತ್ತದೆ.

**2. ಸಾಂಪ್ರದಾಯಿಕ ನೈತಿಕ ಹಂತ : (ಸ್ತರ 2 : 10 ರಿಂದ 13 ವರ್ಷಗಳು)**

ಈ ಹಂತದಲ್ಲಿ ಮಕ್ಕಳು ಮನೋ–ಸಾಮಾಜಿಕವಾಗಿ, ಮನೋಭಾವನಾತ್ಮಕವಾಗಿ ಬೆಳೆದಿರುತ್ತಾರೆ. ಆದ್ದರಿಂದ ಬಹುಬೇಗನೆ ಇತರರ ಪ್ರಭಾವಕ್ಕೆ ಒಳಗಾಗುತ್ತಾರೆ. ಹೀಗಾಗಿ ಅವರ ನೈತಿಕ ನಿರ್ಧಾರಗಳು, ಇಷ್ಟ ಮತ್ತು ಇಷ್ಟಪಡದೇ ಇರುವುದು ಇತರರಿಂದ ನಿಯಂತ್ರಿಸಲ್ಪಡುವುದು. ಸಮಾಜಕ್ಕೆ ತಾವು ಹೇಗಿದ್ದರೆ ಸರಿ, ಏನು ಮಾಡಿದರೆ ತಪ್ಪು ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವಷ್ಟು ಅವರಲ್ಲಿ ನೈತಿಕ ಮಟ್ಟದ ವಿಕಾಸವಾಗಿರುತ್ತದೆ. ಸಮಾಜದ ರೀತಿ, ರಿವಾಜುಗಳು, ನೀತಿ, ನಿಯಮಗಳು, ಸಂಪ್ರದಾಯಗಳು ಮತ್ತು ಆಚಾರ–ವಿಚಾರಗಳು ಹೇಗೆ ನಮ್ಮನ್ನು ನಿಯಂತ್ರಿಸುತ್ತಿದೆ ಎಂಬುದು ಅವರಿಗೆ ತಿಳಿದಿರುತ್ತದೆ. ಕಳ್ಳತನ,

ದರೋಡೆ, ಹಿಂಸಾಚಾರಗಳು ಮತ್ತು ವ್ಯಭಿಚಾರಗಳೇ ಅಲ್ಲದೆ, ದಯಾಮರಣ, ಮಾನವನ ತದ್ರೂಪಿಯ ಸೃಷ್ಟಿ, ಇತ್ಯಾದಿಗಳೂ ಕೂಡ ಸಾಮಾಜಿಕವಾಗಿ, ನೀತಿಬಾಹಿರವೆನಿಸಿ ತಿರಸ್ಕರಿಸಲ್ಪಟ್ಟಿವೆ. ಈ ಹಂತದಲ್ಲಿನ ಮಕ್ಕಳಿಗೂ ಈರೀತಿಯ ವಿಚಾರಗಳು ತಲುಪುತ್ತವೆ. ಆದ್ದರಿಂದ ಈ ಕುರಿತಂತೆ ಅವರು ಇನ್ನಷ್ಟು ಸೂಕ್ಷ್ಮ ಸಂವೇದಕರಾಗಿ ತಮ್ಮ ನಿರ್ಧಾರಗಳನ್ನು ಸ್ವಾಯತ್ತವಾಗಿ ತೆಗೆದುಕೊಳ್ಳುತ್ತಾರೆ. ಇಲ್ಲಿಯೂ ಕೂಡ ಕ್ರಮವಾಗಿ ಎರಡು ಹಂತಗಳಿವೆ, ಅವುಗಳೆಂದರೆ,

**ಹಂತ 3:** ಮಗುವಿಗೆ ಬೇರೆಯವರಿಂದ ತಿರಸ್ಕೃತರಾಗುವುದು ಇಷ್ಟವಿಲ್ಲ. ಅದು ಇತರರ ಸಮ್ಮತಿ, ಸಾಂಗತ್ಯವನ್ನು ಬಯಸುತ್ತದೆ. ಯಾವ ಮಗುವಿಗೂ ಕೆಟ್ಟ ಹುಡುಗ ಅಥವಾ ಕೆಟ್ಟ ಹುಡುಗಿ ಎಂದು ಕರೆಸಿಕೊಳ್ಳುವ ಇಚ್ಛೆಯಿರುವುದಿಲ್ಲ. ಇದಕ್ಕಾಗಿ, ಮಗುವು ಬೇರೆಯವರ ಬೇಕು, ಬೇಡಗಳನ್ನು, ಇಷ್ಟ ಅನಿಷ್ಟಗಳನ್ನು ಗುರುತಿಸುವುದನ್ನು ಕಲಿಯುತ್ತದೆ, ಹಾಗೂ ಅದಕ್ಕೆ ತಕ್ಕಂತೆ ತನ್ನ ವರ್ತನೆಯನ್ನು ಬದಲಾಯಿಸಿಕೊಳ್ಳುತ್ತದೆ.

**ಹಂತ 4 :** ಸುಮಾರು 12 ಅಥವಾ 13ನೇ ವಯಸ್ಸಿಗೆ ಬರುವಷ್ಟು ಹೊತ್ತಿಗೆ, ಅವರ ನೈತಿಕ ಮಟ್ಟವು ಬಹಳಷ್ಟು ವಿಶಾಲವಾಗಿರುತ್ತದೆ. ಹಾಗಾಗಿ ಅವರ ನೈತಿಕ ನಿರ್ಧಾರಗಳು ಸಾಮಾಜಿಕ ಸಂಪ್ರದಾಯಗಳಿಂದ, ನೀತಿ ಮತ್ತು ನಿಯಮಗಳಿಂದ ಶಿಸ್ತುಬದ್ಧವಾಗಿ ರೂಪಿತವಾಗುತ್ತವೆ.

### 3. ಸ್ವಾಯತ್ತ ನೈತಿಕ ತತ್ವಗಳು : (ಸ್ತರ 3 : 13 ವರ್ಷಗಳಿಗೂ ಮೇಲ್ಪಟ್ಟು)

ಈ ಹಂತವು ಕೇವಲ 13ನೇ ವಯಸ್ಸಿಗೆ ಬಂದ ನಂತರ ನಿಂತುಹೋಗುವುದಿಲ್ಲ; ಅಂದರೆ ನೈತಿಕ ವಿಕಾಸ ಪ್ರಕ್ರಿಯೆಯು ಮಧ್ಯವಯಸ್ಸಿನವರೆಗೂ ಅಥವಾ ಅದಕ್ಕಿಂತ ಮುಂದಕ್ಕೂ ಮುಂದುವರೆಯಬಹುದಾಗಿದೆ. ಆದರೆ, ಯಾವ ವಯಸ್ಸಿನಲ್ಲಿ ಬೇಕಾದರೂ ನಿಂತು ಹೋಗಬಹುದೆಂಬುದೂ ಅಷ್ಟೇ ಸತ್ಯ. ಹೀಗಿದ್ದಾಗ್ಯೂ ಒಬ್ಬ ವ್ಯಕ್ತಿಯ ಜೀವಿತಾವಧಿಯಲ್ಲಿ, ಅತ್ಯುನ್ನತ ಮಟ್ಟದ ನೈತಿಕ ವಿಕಾಸವಾಗುವ ಹಂತ ಇದಾಗಿರುತ್ತದೆ. ಏಕೆಂದರೆ, ವ್ಯಕ್ತಿಯು ತನಗೆ ದಕ್ಕುವ, ಸರಿಯೆನಿಸುವ ಮೌಲ್ಯಗಳನ್ನು, ಧನಾತ್ಮಕ ಧೋರಣೆಗಳನ್ನು ಹಾಗೂ ನೈತಿಕ ವಿಚಾರಗಳನ್ನು ರೂಪಿಸಿಕೊಳ್ಳುತ್ತಾನೆ. ಈ ನಿರ್ಧಾರಗಳು ಸ್ವತಃ ಅವನಿಂದಲೇ ಸೃಷ್ಟಿಗೊಳ್ಳುತ್ತವೆ. ಬೇರೆ ಯಾರಿಗೋ ಒಪ್ಪಿಗೆಯಾದ ಮಾತ್ರಕ್ಕೆ ಆ ಮೌಲ್ಯಗಳನ್ನು ಈತನೂ ಒಪ್ಪಿಕೊಳ್ಳುವುದಾಗಲೀ, ತನ್ನ ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ನಡೆದುಕೊಳ್ಳುವುದಾಗಲೀ ಈ ಹಂತದಲ್ಲಿ ನಡೆಯುವುದಿಲ್ಲ. ಯಾವುದೇ ಮೌಲ್ಯವಾಗಿರಲಿ, ತಾನು ರೂಪಿಸಿಕೊಂಡ, ನೀತಿ, ನಿಯಮ ಮತ್ತು ತತ್ವಗಳ ಚೌಕಟ್ಟಿನಲ್ಲಿ ಸೂಕ್ತವಾಗಿ ಹೊಂದಿಕೊಳ್ಳುವುದಾದಲ್ಲಿ, ಅಂತಹವುಗಳನ್ನು ಮರುಮಾತಿಲ್ಲದೇ ಒಪ್ಪಿಕೊಳ್ಳುವ ವರ್ತನೆಗಳನ್ನು ವ್ಯಕ್ತವಾಗುತ್ತದೆ. ಈ ಸ್ತರದಲ್ಲಿಯೂ ಕ್ರಮವಾಗಿ ಎರಡು ಹಂತಗಳು ಬರುತ್ತವೆ. ಅವುಗಳೆಂದರೆ,

**ಹಂತ 5 :** ವ್ಯಕ್ತಿಯು ಮೌಲ್ಯಗಳನ್ನು ವ್ಯಕ್ತಿಗತ ಮಾಡಿಕೊಳ್ಳುವ ಅಥವಾ ಮೈಗೂಡಿಸಿಕೊಳ್ಳುವ ಹಂತವಿದು. ವ್ಯಕ್ತಿಯು ಮೌಲ್ಯಗಳನ್ನು ಮೌಢ್ಯದಿಂದ ಒಪ್ಪಿಕೊಳ್ಳದೇ, ಅವುಗಳಿಗೆ ತರ್ಕವನ್ನು ಆರೋಪಿಸುತ್ತಾನೆ. ಈ ಹಂತದಲ್ಲಿ ಸಾರ್ವತ್ರಿಕ ಮೌಲ್ಯಗಳ ಬಗ್ಗೆ, ಮಾನವ ಹಕ್ಕುಗಳ ಬಗ್ಗೆ ಚಿಂತಿಸುವ ಸಾಮರ್ಥ್ಯವನ್ನು ಹೊಂದಿರುತ್ತಾನೆ ಹಾಗೂ ಮಾನವನ ಮತ್ತು ಸಮಾಜದ ಹಿತರಕ್ಷಣೆಗಳನ್ನು ಗೌರವಿಸಿ ಕಾಪಾಡಬಲ್ಲವನಾಗಿರುತ್ತಾನೆ.

**ಹಂತ 6 :** ಈ ಹಂತದಲ್ಲಿ ವ್ಯಕ್ತಿಯ ನಿರ್ಧಾರಗಳು ಆತನ ಆತ್ಮಸಾಕ್ಷಿಗೆ, ಮನಸ್ಸಾಕ್ಷಿಗೆ ಅನುಸಾರವಾಗಿರುತ್ತವೆ. ಅವನಲ್ಲಿ ವಿಶ್ವಮಟ್ಟದ ಮೌಲ್ಯಗಳು ಅಂದರೆ, ಸಮಾನತೆ, ಮಾನವೀಯತೆ, ಸಾಮಾಜಿಕ ನ್ಯಾಯಗಳನ್ನು ಕುರಿತಂತೆ ಒಂದು ಸ್ಪಷ್ಟವಾದ ಚಿತ್ರಣ ಮೂಡಿರುತ್ತವೆ. ತನಗೆ ಸರಿ ಎನಿಸಿದ್ದನ್ನು, ಯಾರು ಏನೇ ಅಂದರೂ ಕಡೆಗಣಿಸಿದರೂ ಕೊನೆಗೆ ಅಡ್ಡಿಪಡಿಸಿದರೂ ಕಾನೂನುಗಳ ತೊಡಕಿದ್ದಾಗಲೂ ಮಾಡಿಯೇ ಬಿಡುವ ಅದ್ಭುತವಾದ, ನಿಶ್ಚಲವಾದ ನಿರ್ಧಾರಯುತವಾದ ವರ್ತನೆಗಳನ್ನು ವ್ಯಕ್ತಪಡಿಸುತ್ತಾನೆ. ಈ ಹಂತದಲ್ಲಿ ವ್ಯಕ್ತಿಗಳು "ನಾವು ಅವರಿವರು ಮೆಚ್ಚಲಿ ಎಂದು ಕೆಲಸ ಮಾಡಬಾರದು; ಬದಲಿಗೆ ದೇವರು ಮೆಚ್ಚುವಂತೆ ನಮ್ಮ ಕೆಲಸವನ್ನು ಮಾಡಬೇಕು"– ಎಂಬ ಮಾತನ್ನಾಡುವುದನ್ನು ನಾವು ಆಗಾಗ್ಗೆ ನೋಡುತ್ತಿರುತ್ತೇವೆ. ಹೀಗೆ ವ್ಯಕ್ತಿಗಳು ತಮ್ಮ ಒಳದನಿಯಾದ ಆತ್ಮಸಾಕ್ಷಿಗೆ ಅಥವಾ ಮನಸ್ಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳುತ್ತಾರೆ.

ಹೀಗೆ ಕೋಹ್ಲ್‌ಬರ್ಗ್ ಹೇಳಿದ ನೈತಿಕ ವಿಕಾಸವು, ಶ್ರೇಣೀಕೃತವಾದ ಕ್ರಮಬದ್ಧ ಹಂತಗಳನ್ನು ತೋರುವುದಾದರೂ ಎಲ್ಲಾ ವ್ಯಕ್ತಿಗಳೂ ನಿಶ್ಚಿತವಾಗಿ ಈ ಎಲ್ಲಾ ಹಂತಗಳನ್ನು ಹಾದುಹೋಗುವರು ಮತ್ತು ಅದಕ್ಕೆ ತಕ್ಕಂತೆ ವರ್ತಿಸುವರು ಎಂದು ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ, ಬಹಳಷ್ಟು ವಯಸ್ಕರು, ಎರಡನೇ ಸ್ತರಕ್ಕಿಂತ ಮುಂದೆ ಹೋಗಿರಲಾರರು, ಕೆಲವರು ಮಾತ್ರ 5ನೆಯ ಹಂತವನ್ನು (ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುವಿಕೆ) ತಲುಪುವರು. ಅದರಲ್ಲೂ ಮತ್ತೂ ಕೆಲವು ಕೈಬೆರಳೆಣಿಕೆಯಷ್ಟು ಮಂದಿ 6ನೇ ಹಂತಕ್ಕೇರುತ್ತಾರೆ. ಇಂತಹವರಿಗೆ ಮಾತ್ರ ತರ್ಕಬದ್ಧವಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಲು, ಸರಿ ತಪ್ಪುಗಳನ್ನು ನಿರ್ಧರಿಸಲು, ಮತ್ತು ಸಮಯ ಬಂದರೆ, ತಮ್ಮ ಜೀವವನ್ನು ಪಣಕ್ಕಿಟ್ಟಾದರೂ ತಮ್ಮ ಮೌಲ್ಯವನ್ನು ಎತ್ತಿ ಹಿಡಿಯಲು ಸಾಧ್ಯವಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ಕೋಹ್ಲ್‌ಬರ್ಗ್‌ನ ಪ್ರಕಾರ ನೈತಿಕ ವಿಕಾಸದ ಮೊದಲ ಹಂತವೆಂದರೆ____________

   ಎ. ಮೌಲ್ಯರಹಿತ ಹಂತ

   ಬಿ. ಪೂರ್ವನೈತಿಕ ಹಂತ

   ಸಿ. ಸ್ವಾಯತ್ತ ಮೌಲ್ಯಗಳ ಹಂತ

   ಡಿ. ಸಾಂಪ್ರದಾಯಿಕ ಮೌಲ್ಯಗಳ ಹಂತ

2. ಅನ್ಯಲಿಂಗಿಗಳ ಕುರಿತ ಆಸಕ್ತಿ ಮತ್ತು ಭಾವನೆಗಳು ಪ್ರಮುಖವಾಗಿ ವ್ಯಕ್ತಿಯನ್ನು ಪ್ರಭಾವಿಸುವ ಹಂತ____________

   ಎ. ಪೂರ್ವಬಾಲ್ಯ ಹಂತ

   ಬಿ. ಉತ್ತರಬಾಲ್ಯ ಹಂತ

   ಸಿ. ವಯಸ್ಕ ಹಂತ

   ಡಿ. ಕಿಶೋರಹಂತ

3. ವಿಫಲತೆಯ ಭಯವು ಅಗಾಧವಾಗಿ ಕಾಡುವ ವಯೋಮಾನ____________

   ಎ. ಶಾಲಾ ವಯಸ್ಸು

   ಬಿ. ಹದಿಹರೆಯ

   ಸಿ. ವೃದ್ಧಾಪ್ಯ

   ಡಿ. ಬಾಲ್ಯಹಂತ

4. ಪೂರ್ವನೈತಿಕ ಹಂತದ ವರ್ತನೆ____________

   ಎ. ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ತೋರುವ ವಿಧೇಯತೆ

   ಬಿ. ಸಾರ್ವತ್ರಿಕ ನೈತಿಕ ನಿಯಮಗಳ ಅಭಿವ್ಯಕ್ತಿ

   ಸಿ. ಸಾಮಾಜಿಕ ವ್ಯವಸ್ಥೆಯ ನೈತಿಕತೆಗಳು

   ಡಿ. ಪ್ರಜಾಪ್ರಭುತ್ವದ ಮೌಲ್ಯಗಳು

5. ದಯಾಮರಣ'ವನ್ನು ಕುರಿತಂತೆ ಖಚಿತವಾದ ಮತ್ತು ತಾರ್ಕಿಕವಾದ ನಿರ್ಧಾರ ವ್ಯಕ್ತವಾಗುವ ಹಂತ____________

ಎ. ಸ್ತರ–2 ಹಂತ–3 ಪರಸ್ಪರರ ಸಂಬಂಧದ ನಿರ್ವಹಣೆ ಮತ್ತು ಇತರರ ಅನುಮೋದನೆ

ಬಿ. ಸ್ತರ–2 ಹಂತ–4 ಸಾಮಾಜಿಕ ವ್ಯವಸ್ಥೆಯ ನೈತಿಕ ಮೌಲ್ಯಗಳು

ಸಿ. ಸ್ತರ–3 ಹಂತ–6 ಸಾರ್ವತ್ರಿಕ ನೈತಿಕ ನಿಯಮಗಳು ಮತ್ತು ಅಂತಃಸ್ಸಾಕ್ಷಿ/ಮನಸ್ಸಾಕ್ಷಿ

ಡಿ. ಸ್ತರ–1 ಹಂತ–2 ವರ್ತನೆಗೆ ಪ್ರತಿಯಾಗಿ ಬಹುಮಾನ ಮತ್ತು ಮೆಚ್ಚುಗೆಗಳನ್ನು ಗಳಿಸುವಿಕೆ

6. ಬಾಹ್ಯನಿಯಮಾಧೀನ ಹಂತ' ದಲ್ಲಿ ನೈತಿಕವಿಕಾಸವನ್ನು ಪ್ರಭಾವಿಸುವಂತಹುದು____________

ಎ. ಇತರ ವ್ಯಕ್ತಿಗಳು, ಅಂದರೆ, ಪೋಷಕರು, ಹಿರಿಯರು, ಮತ್ತು ಕುಟುಂಬದ ಇತರ ಸದಸ್ಯರು

ಬಿ. ವ್ಯಕ್ತಿಯೊಬ್ಬನ ಸ್ವಂತ ಮೌಲ್ಯಗಳು

ಸಿ. ಸಮಾಜದ ಹಲವಾರು ಕಾರಕ ಅಂಶಗಳು

ಡಿ. ಸಮೂಹ ಮಾಧ್ಯಮ ಮತ್ತು ಸಾರ್ವಜನಿಕ ಅಂತರ್‌ಕ್ರಿಯೆಗಳು

## 1.4.3.4. ಮನೋ–ಸಾಮಾಜಿಕ ವಿಕಾಸ – ಎರಿಕ್ಸನ್

1. ಸುಮಾರು ಒಂದೂವರೆ ವರ್ಷದ ಮಗುವೊಂದನ್ನು ಕಂಕುಳಲ್ಲಿ ಎತ್ತಿಕೊಂಡಿದ್ದ ಮಹಿಳೆಯೊಬ್ಬಳು ಸಿಟಿ ಬಸ್ಸಿಗೆ ಹತ್ತಿದಳು. ಮಗುವನ್ನು ಎತ್ತಿಕೊಂಡಿದ್ದನ್ನು ನೋಡಿದ ಕೆಲವು ಸಹ–ಪ್ರಯಾಣಿಕರು "ಮಗುವನ್ನು ಕೊಡಿ, ನಾವು ಕೂರಿಸಿಕೊಳ್ಳುತ್ತೇವೆ" ಎಂದು ಕೇಳಿದರು. ಆದರೆ, ಮಗುವು ಅವರ ಬಳಿ ಹೋಗುವುದಿರಲಿ, ಜೋರಾಗಿ ಅಳುವುದಕ್ಕೇ ಆರಂಭಿಸಿತು. ಮಗುವಿನ ಈ ವರ್ತನೆಗೆ ಕಾರಣವೇನು?

ಈ ವಯಸ್ಸಿನ ಮಕ್ಕಳು ಯಾರನ್ನೂ ನಂಬುವುದಿಲ್ಲ, ಮತ್ತು ಅಪರಿಚಿತರೆಂದರೆ ಆ ವಯಸ್ಸಿನ ಮಕ್ಕಳಿಗೆ ಅಭದ್ರತೆ ಕಾಡುವುದು.

2. 10ನೇ ತರಗತಿಯ ಶಿಕ್ಷಕಿ ಸುಶೀಲಾಗೆ ಒಂದು ಸಲ ಆಶ್ಚರ್ಯವಾಯಿತು. ಕಾರಣ ತರಗತಿಯ ಬಹಳಷ್ಟು ಗಂಡುಮಕ್ಕಳು ತಮ್ಮ ತಲೆಯ ಕ್ರಾಪನ್ನು ಇತ್ತೀಚಿನ ಚಲನಚಿತ್ರದಲ್ಲಿಯ ಹೀರೋನಂತೆ ಬದಲಾಯಿಸಿಕೊಂಡು ತುಂಬಾ ಜೋಶ್‌ನಿಂದ ಬಂದಿದ್ದರು. ಆ ಮಕ್ಕಳು ಹೀಗೇಕೆ ಮಾಡಿದ್ದರು? ಏಕೆಂದರೆ, 10ನೇ ತರಗತಿ ವಯಸ್ಸಿನ ಮಕ್ಕಳು "ಪಾತ್ರಗೊಂದಲ"ವೆಂಬ ವಿಕಾಸದ ಹಂತದಲ್ಲಿರುತ್ತಾರೆ, ಆಗ ತಮಗೆ ತುಂಬಾ ಇಷ್ಟವಾದ ಯಾರೇ ಒಬ್ಬರನ್ನು ಅವರಂತೆಯೇ ಇರಲು ಅನುಕರಿಸುತ್ತಾರೆ, ಉದಾಹರಣೆಗೆ ಇಲ್ಲಿ ಸಿನಿಮಾವೊಂದರ ನಾಯಕ ನಟನ ಹೇರ್‌ಸ್ಟೈಲ್‌ನ್ನು ಅನುಸರಿಸಿದ್ದಾರೆ.

ಈ ಸನ್ನಿವೇಶಗಳು ಎರಿಕ್‌ಸನ್ನನ ಸಿದ್ಧಾಂತದ ಅಂಶಗಳಿಗೆ ಸಂಬಂಧಿಸಿದ ಉದಾಹರಣೆಗಳು

ಎರಿಕ್‌ಸನ್‌ನ ಮನೋ–ಸಾಮಾಜಿಕ ವಿಕಾಸದ ಸಿದ್ಧಾಂತದ ಪ್ರಕಾರ ವ್ಯಕ್ತಿಯೊಬ್ಬನು ಎಂಟು ಕ್ರಮಾನುಗತವಾದ ಹಂತಗಳಲ್ಲಿ ಮನೋಸಾಮಾಜಿಕವಾಗಿ ವಿಕಾಸ ಹೊಂದುವನು. ಮತ್ತು ಪ್ರತೀ ಹಂತದಲ್ಲೂ ಅದಕ್ಕೆ ತಕ್ಕಂತೆ ವರ್ತನಾ ಬದಲಾವಣೆಗಳು ಉಂಟಾಗುವುವು. ಇವು ಧನಾತ್ಮಕವಾದ ಬದಲಾವಣೆಗಳಾದಾಗ – ನಂಬಿಕೆ, ಸ್ವಾಯತ್ತತೆ, ಕ್ರಿಯಾಶೀಲತೆ, ಅನನ್ಯತೆ, ಸಲಿಗೆ, ಐಕ್ಯತಾಭಾವ, ಉತ್ಪಾದಕತ್ವ ಮತ್ತು ಧೃಡವ್ಯಕ್ತಿತ್ವ – ಮಗುವು ಮುಂದೆ ವಿಕಾಸದ ಸಂಪೂರ್ಣಹಂತಗಳನ್ನು ತಲುಪಿದಾಗ ಒಳ್ಳೆಯ ಸದೃಢವ್ಯಕ್ತಿಯಾಗಿ ಬೆಳೆದಿರುತ್ತಾನೆ. ಆದರೆ ಇದಕ್ಕೆ ವಿರುದ್ಧವಾಗಿ ಎಲ್ಲಾ ಹಂತಗಳಲ್ಲೂ ಋಣಾತ್ಮಕವಾದ ವರ್ತನೆಗಳನ್ನೇ ರೂಢಿಸಿಕೊಂಡರೆ (ಅದಕ್ಕೆ ಸಾಮಾಜಿಕ ಮತ್ತು ಇತರ ಹಲವಾರು ಕಾರಣಗಳು ಇರುತ್ತವೆ) ಉಪದ್ರವಕಾರಿ, ಸಮಾಜವಿರೋಧಿ ವ್ಯಕ್ತಿಯಾಗಿ ರೂಪುಗೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಅಂದರೆ ಎರಿಕ್‌ಸನ್‌ನ ಪ್ರಕಾರ ಪ್ರತೀ ಹಂತದಲ್ಲೂ ಎರಡು ಧ್ರುವಗಳಂತೆ ಸಂಭಾವ್ಯತೆಗಳು ಕಂಡುಬರುತ್ತವೆ, ಒಂದು ಧನಾತ್ಮಕವಾಗಿದ್ದರೆ, ಅದರ ವಿರುದ್ಧದಲ್ಲಿ

ಋಣಾತ್ಮಕವಾಗಿರುತ್ತದೆ. ವ್ಯಕ್ತಿಯಲ್ಲಿ ಪ್ರತೀ ಹಂತದಲ್ಲಿ ಈ ಎರಡು ಧ್ರುವಗಳ ನಡುವೆ ಒಂದು ಸಂಘರ್ಷ/ಸಂಕ್ಷೋಭೆಗಳು ಅಥವಾ ಸಂಕಷ್ಟಗಳು ಏರ್ಪಟ್ಟು, ವ್ಯಕ್ತಿಯ ಅದನ್ನು ಹೇಗೆ ಪರಿಹರಿಸಿಕೊಳ್ಳುವನೋ ಅದರಂತೆ ಆತನ ವ್ಯಕ್ತಿತ್ವವು ನಿರ್ಮಾಣವಾಗುವುದು.

| ಕ್ರಮ ಸಂಖ್ಯೆ | ವಿಕಾಸ ಹಂತ | ವಯಸ್ಸು(ವರ್ಷಗಳಲ್ಲಿ) | ಮನೋ–ಸಾಮಾಜಿಕ ವಿಕಾಸದ ಹಂತ |
|---|---|---|---|
| 1. | ಶೈಶವ | 0ಯಿಂದ1 ಅಥವಾ 1½ | ನಂಬಿಕೆ/ಅಪನಂಬಿಕೆ |
| 2. | ಹಸುಳೆ | 1 ಅಥವಾ 1½ ಯಿಂದ 2ಅಥವಾ3 | ಸ್ವಾಯತ್ತತೆ/ ನಾಚಿಕೆ ಮತ್ತು ಸಂಶಯ |
| 3. | ಶಾಲಾಪೂರ್ವ | 2 ಅಥವಾ 3ರಿಂದ 5 ಅಥವಾ 6 | ತೊಡಗಿಸಿಕೊಳ್ಳವಿಕೆ/ ಪಾಪಪ್ರಜ್ಞೆ |
| 4. | ಬಾಲ್ಯಾವಸ್ಥೆ | 5 ಅಥವಾ 6ರಿಂದ 11 ಅಥವಾ 12 | ಕ್ರಿಯಾಶೀಲ/ ಕೀಳರಿಮೆ |
| 5. | ಹದಿಹರಯ | 12 ರಿಂದ 18 ಅಥವಾ 19 | ಅನನ್ಯತೆ/ ಪಾತ್ರಗೊಂದಲ |
| 6. | ಪೂರ್ವವಯಸ್ಕ | 19 ರಿಂದ 34ಯಿಂದ | ಸಲಿಗೆ/ ಒಂಟಿತನ |
| 7. | ಮಧ್ಯವಯಸ್ಕ | 34 ರಿಂದ 65 | ಉತ್ಪಾದಕತ್ವ/ಜಡತೆ |
| 8. | ವೃದ್ಧಾಪ್ಯ | 65ರ ನಂತರ | ದೃಢತೆ/ಹತಾಶೆ |

**ಜೀವಿತಾವಧಿಯ ಮನೋ–ಸಾಮಾಜಿಕ ವಿಕಾಸದ ಹಂತಗಳು**

**1. ನಂಬಿಕೆ ಮತ್ತು ಅಪನಂಬಿಕೆಯ ಹಂತ :** ಈ ಹಂತವು ಶೈಶವಾವಸ್ಥೆಯಲ್ಲಿ ಕಂಡುಬರುವುದು. ಹುಟ್ಟಿನಿಂದ ಒಂದು ಅಥವಾ ಒಂದೂವರೆ ವರ್ಷಗಳವರೆಗೆ ಮಗುವು ನಂಬಿಕೆ ಮತ್ತು ಅಪನಂಬಿಕೆ ಎಂಬ ಈ ಹಂತದಲ್ಲಿ ಸಾಗುವುದು. ಇದು ಜೀವನದಲ್ಲಿ ಅತೀ ಮೂಲಭೂತವಾದ ಮೊದಲ ಅವಸ್ಥೆ. ಶಿಶುವು ಈ ಹಂತದಲ್ಲಿ ನಂಬಿಕೆ ಮತ್ತು ಅಪನಂಬಿಕೆ ಎಂಬ ದ್ವಂದ್ವಯುತವಾದ ಸಂಕ್ಷೋಭೆಗೆ ಒಳಗಾಗುವುದು. ಮಗುವು ತನ್ನೆಲ್ಲಾ ಬೇಡಿಕೆಗಳಿಗೆ – ಆಹಾರ, ಪ್ರೀತಿ, ಮಮತೆ, ವಾತ್ಸಲ್ಯ ಮತ್ತು ಸುರಕ್ಷೆ– ತಾಯಿಯನ್ನೇ ಅವಲಂಬಿಸಿರುತ್ತದೆ. ಈ ಬೇಡಿಕೆಗಳು ಮಗುವಿಗೆ ಯಾವ ರೀತಿಯಲ್ಲಿ ಪೂರೈಸಲ್ಪಡುತ್ತವೋ ಮತ್ತು ಹೇಗೆ ಮಗುವು ಸಂತೃಪ್ತ ಭಾವನೆಯನ್ನು ಹೊಂದುತ್ತದೆಯೋ ಅದೇ ರೀತಿ ಮುಂದೆ ಅದರ ವ್ಯಕ್ತಿತ್ವವು ಬೆಳವಣಿಗೆ ಮತ್ತು ವಿಕಾಸವನ್ನು ಹೊಂದುತ್ತದೆ. ಅದಕ್ಕೆ ಸುರಕ್ಷತಾ ಭಾವವು ಮೂಡಬಹುದು ಅಥವಾ ತಾನು ಸುರಕ್ಷಿತವಾಗಿಲ್ಲ ಎಂಬ ಭಾವವೂ ಮೂಡಬಹುದು; ಹಾಗೆಯೇ ತನ್ನನ್ನು ನೋಡಿಕೊಳ್ಳುತ್ತಿರುವವರ ಮೇಲೆ (ತಾಯಿ ಅಥವಾ ಪೋಷಕರು) ನಂಬಿಕೆಯೂ ಬೆಳೆಯಬಹುದು ಅಥವಾ ಅಪನಂಬಿಕೆಯೂ ಬೆಳೆಯಬಹುದು. ಇದು ತನ್ನ ಸುತ್ತಮುತ್ತಲಿನ ಪರಿಸರದ ಬಗ್ಗೆಯೂ ಆಗಿರಬಹುದು. ಸಾಮಾನ್ಯವಾಗಿ, ಈ ಹಂತದಲ್ಲಿ ಮಕ್ಕಳು ಅಪರಿಚಿತರನ್ನು ನಂಬುವುದಿಲ್ಲ. ಅವರ ಬಳಿ ಇರಬೇಕಾದ ಸಂದರ್ಭ ಬಂದದ್ದೇ ಆದರೆ ಹೆದರಿಕೆಯಿಂದ ಅತ್ತು ರಂಪಾಟ ಮಾಡಿಬಿಡುತ್ತಾರೆ! ಮೇಲೆ ಉದಾಹರಿಸಿದ ಸಂದರ್ಭದಂತೆ, ಕಂಕುಳಲ್ಲಿ ಮಗುವನ್ನೆತ್ತಿಕೊಂಡಿರುವ ತಾಯಿಯೊಬ್ಬಳು ಸಿಟಿಬಸ್ಸಿನಲ್ಲಿ ಕಂಡುಬಂದರೆ, ಎಷ್ಟೇ ಜನಜಂಗುಳಿ ಇದ್ದರೂ ಬೇರೆಯವರು ಅನುಕಂಪದಿಂದ ಮಗುವನ್ನು ತಮ್ಮ ಮಡಿಲಲ್ಲಿ ಕೂರಿಸಿಕೊಳ್ಳಲು ಮುಂದಾದರೂ ಮಗು ಅವರ ಬಳಿ ಹೋಗುವುದಿಲ್ಲ. ಇದಕ್ಕೆ ಕಾರಣ, ಮಗುವಿಗೆ ಅಪರಿಚಿತರ ಬಗ್ಗೆ ಸಹಜವಾಗಿಯೇ ಇರುವ ಅಪನಂಬಿಕೆ ಮತ್ತು ಅಸುರಕ್ಷತಾಭಾವ. ಆದರೆ ಎಲ್ಲಾ ಬಾರಿಯೂ ಹೀಗೇ ಆಗಬೇಕೆಂದೇನೂ ಇಲ್ಲ. ಕೆಲವು ಮಕ್ಕಳು ಅಪರಿಚಿತರೊಡನೆಯೂ ಸ್ನೇಹದಿಂದಿದ್ದು, ತಾಯಿಯೊಡನೆ ಆರಾಮವಾಗಿದ್ದಂತೆ ಅವರೊಡನೆಯೂ ಇರಬಲ್ಲವು. ಎರಿಕ್‌ಸನ್ ಹೇಳಬಯಸುವುದು ಇದನ್ನೇ. ವಿಕಾಸದ ಪ್ರತಿಯೊಂದು ಹಂತದಲ್ಲಿಯೂ ಇಂತಹ ದ್ವಂದ್ವಗಳಿಂದ ಕೂಡಿದ ಸಂದರ್ಭಗಳು ಎದುರಾಗುವುವು ಮತ್ತು ಅವರಲ್ಲಿ ಆಯ್ಕೆಯ ಸಾಧ್ಯತೆಯನ್ನು ನೀಡುವುವು. ಕೇವಲ ಒಂದು ವರ್ಷದ ಒಂದು ಮಗುವಿಗೆ ಮೇಲೆ

ನೀಡಿದ ಸಂದರ್ಭವೇ ಒಂದು ಸಂಕ್ಷೋಭೆ. ಇದು ಮಗುವಿನಲ್ಲಿ ನಂಬಿಕೆಯನ್ನೂ ಬೆಳೆಸಬಹುದು ಅಥವಾ ಅಪನಂಬಿಕೆಯನ್ನೂ ಬೆಳೆಸಬಹುದು. ಹೇಗೂ ಇರಲಿ; ಈ ಹಂತದಲ್ಲಿ ಗಳಿಸಿಕೊಂಡ ಯಾವುದೇ ಅನುಭವವು, ಮುಂದಿನ ವಿಕಾಸದ ಹಂತಗಳಿಗೂ ಸಾಗುತ್ತವೆ. ವ್ಯಕ್ತಿತ್ವ ನಿರ್ಮಾಣದ ಪ್ರಕ್ರಿಯೆಯನ್ನು ಪ್ರಭಾವಿಸುತ್ತವೆ. ಮಗುವು ತನ್ನ ಸುತ್ತಮುತ್ತಲಿನ ಪರಿಸರವನ್ನು ಅರ್ಥಮಾಡಿಕೊಳ್ಳುವುದೇ ಅದರ ತಂದೆ–ತಾಯಿಯರ ಮೂಲಕ. ಹಾಗಾಗಿ ಪೋಷಕರು ಮಗುವಿಗೆ, ಪ್ರೀತಿ, ವಾತ್ಸಲ್ಯ, ಮತ್ತು ಮಮತೆ, ಸುರಕ್ಷತೆಗಳನ್ನು ನೀಡುತ್ತಾ ಬೆಳೆಸಿದರೆ, ಅದು ಈ ಪ್ರಪಂಚದ ಬಗ್ಗೆ ಒಂದು ನಂಬಿಕೆಯನ್ನು ಬೆಳೆಸಿಕೊಳ್ಳುತ್ತದೆ; ಇಲ್ಲದಿದ್ದಲ್ಲಿ ಈ ಪ್ರಪಂಚದ ಬಗ್ಗೆಯೇ ಒಂದು ರೀತಿಯ ಅಪನಂಬಿಕೆಯನ್ನು ಬೆಳೆಸಿಕೊಳ್ಳಬಹುದು. ನಂಬಿಕೆಯಿಲ್ಲದೇ ಬೆಳೆಯುವ ಮಗುವಿನಲ್ಲಿ ಯಾವುದೋ ಒಂದು ಭೀತಿಯು ಮನೆಮಾಡಿರುತ್ತದೆ.

**2. ಸ್ವಾಯುತ್ತತೆ, ನಾಚಿಕೆ ಹಾಗೂ ಸಂಶಯ :** ಈ ಹಂತವು ಪೂರ್ವಬಾಲ್ಯದ ಹಂತಕ್ಕೆ ಸೀಮಿತವಾಗಿದ್ದು, ಒಂದನೇ ಅಥವಾ ಒಂದೂವರೆ ವರ್ಷದಿಂದ ಪ್ರಾರಂಭಿಸಿ, ಮೂರು ವರ್ಷದವರೆಗೆ ಇರುತ್ತದೆ. ಈ ಹೊತ್ತಿಗಾಗಲೇ ಮಗುವು ನಂಬಿಕೆ ಮತ್ತು ಅಪನಂಬಿಕೆಯ ಹಂತವನ್ನು ದಾಟಿ, ಪ್ರಸ್ತುತದಲ್ಲಿ ಸ್ವಾಯತ್ತತೆ, ನಾಚಿಕೆ ಮತ್ತು ಸಂಶಯದ ಹಂತವನ್ನು ಎದುರುಸುತ್ತಿರುತ್ತದೆ. ಮಗುವಿನಲ್ಲಿ ಹಲವಾರು ದೈಹಿಕ ಸಾಮರ್ಥ್ಯಗಳು ಮತ್ತು ಸ್ವಲ್ಪಮಟ್ಟಿಗೆ ಭಾಷಾ ಬೆಳವಣಿಗೆಯೂ ಆಗಿರುತ್ತದೆ. ಮಲಮೂತ್ರಗಳ ವಿಸರ್ಜನೆಯ ಮೇಲೆ ಮಗುವು ಹತೋಟಿಯನ್ನು ಸಾಧಿಸಿರುತ್ತದೆ. ಈ ಎಲ್ಲಾ ಆಂತರಿಕ ಸಾಮರ್ಥ್ಯಗಳಿಂದ ಮಗುವು ಸುತ್ತಮುತ್ತಲಿನ ಪರಿಸರವನ್ನು ಅರ್ಥಮಾಡಿಕೊಳ್ಳುವಲ್ಲಿ ತೊಡಗಿರುತ್ತದೆ, ಹಲವಾರು ಪ್ರಯೋಗಗಳನ್ನು ಕೈಗೊಳ್ಳಲು ಮಗುವು ಮುಂದಾಗುತ್ತದೆ. ಅದರ ಸಾಮರ್ಥ್ಯಕ್ಕೆ ಅನುಗುಣವಾಗಿ ತಾನು ಸ್ವತಂತ್ರ, ಸ್ವಾವಲಂಬಿ ಭಾವನೆಯನ್ನು ಬೆಳೆಸಿಕೊಳ್ಳುತ್ತದೆ.

ಈ ಹಂತದಲ್ಲಿ ಪ್ರತಿಯೊಂದು ಕಾರ್ಯವನ್ನೂ ತಾನೇ ಮಾಡಬೇಕೆಂಬ ಹಠ ಮಕ್ಕಳಿಗಿರುತ್ತದೆ. ಅನೇಕ ಕಾರ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಪ್ರಾರಂಭಿಸುತ್ತದೆ. ಆದರೆ, ತಾನು ಮಾಡಲೆಣಿಸುತ್ತಿರುವ ಕಾರ್ಯದ ಸಾಧಕ ಬಾಧಕಗಳ ಅರಿವು ಮಗುವಿಗಿರುವುದಿಲ್ಲ. ಅದು ಚಾಕುವಿನ ಬಳಕೆ, ಬೆಂಕಿ ಪೊಟ್ಟಣಗಳ ಬಳಕೆ, ಅಥವಾ ಪೆನ್ಸಿಲ್, ಪೆನ್ನುಗಳ ಬಳಕೆ, ಯಾವುದೇ ಇರಲಿ, ಅದರ ಪರಿಣಾಮ ತೀವ್ರತೆ, ಮಕ್ಕಳಿಗೆ ತಿಳಿದಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಅತೀ ಎಚ್ಚರಿಕೆಯಿಂದ ಮಗುವನ್ನು ಕಾಪಾಡಿಕೊಳ್ಳಬೇಕಾಗುವುದು. ಆಹಾರದಲ್ಲಿ ತನ್ನದೇ ಆಯ್ಕೆ, ಇಷ್ಟಪಡುವಿಕೆ, ಬಟ್ಟೆಗಳ ಆಯ್ಕೆ, ಬಣ್ಣಗಳ ಆಯ್ಕೆ, ಆಟಿಕೆಗಳಲ್ಲಿ ನೀಡುವ ಆದ್ಯತೆ–ಹೀಗೆ ಇವೆಲ್ಲವುಗಳಲ್ಲಿ ಮಗುವು ತನ್ನತನವನ್ನು ಪ್ರತಿಬಿಂಬಿಸುತ್ತದೆ. ಈ ಸಮಯದಲ್ಲಿ ಮಗುವಿಗೆ ಸಾಕಷ್ಟು ಸ್ವಾತಂತ್ರ್ಯವನ್ನು, ಅವಕಾಶಗಳನ್ನು ನೀಡುತ್ತಾ ಅದರ ಸ್ವಾತಂತ್ರ್ಯ ಮತ್ತು ಮಿತಿಯ ಬಗ್ಗೆ ತಿಳಿದುಕೊಳ್ಳಲು ಅನುವು ಮಾಡಿಕೊಡಬೇಕು. ಯಾವ ಮಕ್ಕಳು ಈ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸುತ್ತಾರೋ ಅಂಥವರಲ್ಲಿ ಒಂದು ಪ್ರಬಲವಾದ ಸುಭದ್ರತೆ ಮತ್ತು ಆತ್ಮವಿಶ್ವಾಸ ಮನೆಮಾಡಿರುತ್ತದೆ. ಹಾಗೆಯೇ, ಯಾವ ಮಕ್ಕಳನ್ನು ಅತೀ ಮುದ್ದಿನಿಂದ ಮುಚ್ಚಟೆಯಾಗಿ ಸಾಕಲಾಗುವುದೋ ಅಥವಾ ಕಠಿಣವಾದ ಪರಿಸರದಲ್ಲಿ ಅಂದರೆ ಅತ್ಯಂತ ಕಟ್ಟುನಿಟ್ಟಿನ ಕಟ್ಟುಪಾಡಗಳಲ್ಲಿ ಬೆಳೆಸಲಾಗುವುದೋ ಅಂತಹ ಮಕ್ಕಳು ಬೇರೆಯವರೆದುರಲ್ಲಿ ನಾಚಿಕೆ ಸ್ವಭಾವವನ್ನು, ಮುಖೇಡಿತನವನ್ನು ವ್ಯಕ್ತಪಡಿಸುತ್ತಾರೆ. ಆದರೆ ಒಂದು ಮಿತಿಯಲ್ಲಿ, ನಾಚಿಕೆ ಮತ್ತು ಸಂಶಯಗಳು ಕೆಡುಕುಂಟುಮಾಡುವುದಿಲ್ಲ. ಇದರಿಂದಾಗಿ, ನಿಜಕ್ಕೂ ಮಗುವಿಗೆ ತನ್ನ ಇತಿ–ಮಿತಿಗಳ ಬಗ್ಗೆ ಅರಿವು ಮೂಡುವುದೇ ಅಲ್ಲದೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ಬಗ್ಗೆ ತಿಳುವಳಿಕೆಯೂ ಬೆಳೆಯುವುದು.

**3. ತೊಡಗಿಸಿಕೊಳ್ಳುವಿಕೆ ಮತ್ತು ಪಾಪಪ್ರಜ್ಞೆ:** ಇದನ್ನು ಶಾಲಾ–ಪೂರ್ವದ ಹಂತವೆಂದು ಗುರುತಿಸಲಾಗಿದ್ದು ಸುಮಾರು 3 ರಿಂದ 6ನೇ ವಯಸ್ಸಿನವರೆಗೆ ಇರುವುದು. ಇಲ್ಲಿ ತೊಡಗಿಸಿಕೊಳ್ಳುವಿಕೆ ಮತ್ತು ಪಾಪಪ್ರಜ್ಞೆಯ ನಡುವೆ ಸಂಘರ್ಷ ಉಂಟಾಗುವುದರಿಂದ ಸಂಕ್ಷೋಭೆಗಳು ಅಥವಾ ದ್ವಂದ್ವಗಳು ಹುಟ್ಟಿಕೊಳ್ಳುವುವು. ಈ ಮೊದಲ ಎರಡು ಹಂತಗಳಲ್ಲಿನ ಸಫಲತೆಯಿಂದ, ಮಗುವು ತನ್ನ ಪರಿಸರದೊಡನೆ ತೊಡಗಿಸಿಕೊಳ್ಳಲು

ಪ್ರಾರಂಭಿಸುವುದು. ಈ ಹಂತವು ಪ್ರಮುಖವಾಗಿ ಪ್ರಶ್ನೆಗಳ ಹಂತವೆಂದು ಗುರುತಿಸಲ್ಪಟ್ಟಿದೆ. ಏಕೆಂದರೆ, ಈ ಹಂತದಲ್ಲಿ ಮಗುವು ಪ್ರತಿಯೊಂದನ್ನೂ ಪ್ರಶ್ನಿಸುತ್ತದೆ. ತನ್ನ ಸುತ್ತಲಿನ ಪರಿಸರವನ್ನು ಕೌತುಕದಿಂದ ವೀಕ್ಷಿಸುತ್ತಾ ಅನ್ವೇಷಿಸುತ್ತಾ ಸದಾ ಚಟುವಟಿಕೆಯಿಂದ ಇರುತ್ತದೆ. ಆದ್ದರಿಂದ ಮಕ್ಕಳಿಗೆ ಪೋಷಕರಿಂದ ಮತ್ತು ಹಿರಿಯರು, ಶಿಕ್ಷಕರುಗಳಿಂದ, ಸಿಗುವ ಪ್ರೋತ್ಸಾಹ ಮತ್ತು ಉತ್ತೇಜನಗಳು ಹಾಗೂ ಲಭ್ಯವಿರುವ ಪರಿಸರದಲ್ಲಿನ ಅವಕಾಶಗಳು, ಅವರಲ್ಲಿ ಸೃಜನಶೀಲವಾದ ಯೋಜನೆಗಳನ್ನು ರೂಪಿಸಿಕೊಳ್ಳಲು ಮತ್ತು ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅವರ ವ್ಯಕ್ತಿತ್ವವನ್ನು ರೂಪಿಸುತ್ತವೆ. ಇಲ್ಲವಾದಲ್ಲಿ, ಅವರಲ್ಲಿ ಒಂದು ರೀತಿಯ ಹಿಂಜರಿಕೆ ಸ್ವಭಾವವನ್ನು, ಅಪರಾಧೀ ಮನೋಭಾವವನ್ನು ಹಾಗೂ ಪಾಪಪ್ರಜ್ಞೆಯನ್ನು ಮೂಡಿಸುತ್ತವೆ. ಇಂತಹ ಅನುಭವಗಳು ಮಗುವಿನ ಮುಂದಿನ ಬೆಳವಣಿಗೆಯನ್ನು ಗಾಢವಾಗಿ ಪ್ರಭಾವಿಸುತ್ತವೆ. ಆದ್ದರಿಂದ, ಪೋಷಕರು, ಮತ್ತು ಮನೆಯ ಹಿರಿಯರು, ಮಕ್ಕಳನ್ನು ಅನವಶ್ಯಕವಾಗಿ ಬೈಯ್ಯುವುದು, ಹೊಡೆಯುವುದು, ಮತ್ತೊಬ್ಬರ ಮುಂದೆ ತೆಗಳುವುದು, ಹೀಯಾಳಿಸುವುದು ಹಾಗೂ ಇನ್ನೊಬ್ಬರೊಡನೆ ಅಸಮಂಜಸವಾಗಿ/ ಅನಾರೋಗ್ಯಕರವಾಗಿ ಹೋಲಿಸುವುದು ಮುಂತಾದ ಋಣಾತ್ಮಕ ಕಾರ್ಯಗಳನ್ನು ಮಾಡಬಾರದು. ಇದೇ ಮಾರ್ಗದರ್ಶನದ ಮಾತುಗಳು ಶಿಕ್ಷಕರಿಗೂ ಅನ್ವಯಿಸುತ್ತವೆ.

**4. ಕ್ರಿಯಾಶೀಲ ಮತ್ತು ಕೀಳರಿಮೆಯ ಹಂತ:** ಸುಮಾರು 6 ರಿಂದ 12ನೇ ವಯಸ್ಸಿನವರೆಗೆ ಈ ಹಂತವು ಕಂಡುಬರುವುದು. ಈ ಸಮಯದಲ್ಲಿ ಮಗುವು ಶಾಲೆಯ ವಾತಾವರಣದಲ್ಲಿರುತ್ತದೆ. ಶಾಲಾ ಪರಿಸರವು ಮಗುವಿಗೆ ಸಂಪೂರ್ಣವಾಗಿ ಹೊಸದಾದ ಅನುಭವವನ್ನು ನೀಡುತ್ತದೆ. ಮನೆಯಲ್ಲಾದರೋ, ಎಲ್ಲಾ ವಿಷಯಗಳಲ್ಲೂ ಮಗುವೇ ಭೂಪತಿ/ ರಾಜಾಧಿರಾಜನಿದ್ದಂತೆ, ಆದರೆ ಶಾಲೆಯಲ್ಲಿ ಅದು ಹತ್ತರಲ್ಲಿ ಒಂದು. ಅಲ್ಲಿನ ನೀತಿ ನಿಯಮಗಳು, ಶಿಕ್ಷಕರಿಂದ ಅದಕ್ಕೆ ಒತ್ತಡವಿರುತ್ತದೆ. ತಂದೆ ತಾಯಿ ಅಥವಾ ಪೋಷಕರೂ ತಮ್ಮ ಮಹತ್ವಾಕಾಂಕ್ಷೆಗಳಿಂದ ಮಕ್ಕಳ ಮೇಲೆ ಒತ್ತಡ ಹೇರುವರು. ವಿಪರ್ಯಾಸವೆಂದರೆ, ಕೆಲವೆಡೆ, ಮಕ್ಕಳನ್ನು ಮನೆಗೆಲಸಗಳಲ್ಲಿಯೂ ಮತ್ತು ಇತರ ಕೆಲಸಗಳಲ್ಲಿ ಹಚ್ಚುತ್ತಾ ಅವರಿಗೆ ಇನ್ನಷ್ಟು ಜವಾಬ್ದಾರಿಯ ಹೊರೆಯನ್ನೂ ಹೊರೆಸುವರು. ಶಾಲೆಯಲ್ಲಿಯೂ ಸ್ಪರ್ಧಾತ್ಮಕ ವಾತಾವರಣವಿದ್ದು, ಮಗುವಿಗೆ ತನ್ನ ಸಹಪಾಠಿಗಳಿಗಿಂತ ತಾನು ಎಲ್ಲದರಲ್ಲೂ ಮುಂದಿರಬೇಕೆಂಬ ಒತ್ತಡವಿರುತ್ತದೆ. ಈ ಸಂದರ್ಭದಲ್ಲಿ ಮಗುವು ಯಶಸ್ವಿಯಾಗಿ ಈ ಎಲ್ಲಾ ಸ್ಪರ್ಧೆಗಳನ್ನು ಜಯಿಸಿ ಬಂದರೆ, ಎಲ್ಲಾ ಒತ್ತಡಗಳನ್ನು ಸಮಯೋಚಿತವಾಗಿ ನಿಭಾಯಿಸುತ್ತಾ ನಿವಾರಿಸಿಕೊಂಡದ್ದೇ ಆದರೆ, ಎಲ್ಲರಿಂದ ಪ್ರಶಂಸೆಯನ್ನು, ಮೆಚ್ಚುಗೆಯನ್ನು ಮತ್ತು ಅಭಿಮಾನವನ್ನು ಪಡೆಯುತ್ತದೆ. ಇದು ಮಗುವಿನ ಚೈತನ್ಯವನ್ನು ಇನ್ನಷ್ಟು ಉತ್ಕರ್ಷಿಸುವುದೇ ಅಲ್ಲದೆ, ಅದರ ಕ್ರಿಯಾಶೀಲತೆಯಲ್ಲಿ ಮತ್ತು ಕ್ರಿಯಾಪಟುತ್ವದಲ್ಲಿ ಧನಾತ್ಮಕವಾದ ಹೆಚ್ಚಳವನ್ನು ತರುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ, ಮಗುವು ಇಂತಹ ಒತ್ತಡಗಳನ್ನು, ಸಂಕ್ಷೋಭೆಗಳನ್ನು ನಿವಾರಿಸಿಕೊಳ್ಳುವಲ್ಲಿ ವಿಫಲವಾದರೆ, ಅದರ ಕಾರ್ಯನಿರ್ವಹಣೆಯು ಕಳಪೆಯಾಗಿಬಿಡುತ್ತದೆ. ಇದು ಯಾವ ತಂದೆತಾಯಿಯರಿಗೂಶಿಕ್ಷಕರಿಗೂ ಸಮ್ಮತವಾಗದು. ಆಗ ಮಗುವು ತನ್ನನ್ನು ತಾನು ತುಂಬಾ ಅಸಹಾಯಕನೆಂದು ಚಿತ್ರಿಸಿಕೊಳ್ಳುತ್ತಾ, ಕೀಳರಿಮೆಯಿಂದ ಬಳಲುವುದು.

ಆದ್ದರಿಂದ ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆಯನ್ನಾಗಲಿ ಅಥವಾ ಕೀಳರಿಮೆಯನ್ನಾಗಲೀ ಬೆಳೆಸುವ ಒಂದು ವೇದಿಕೆಯೆಂದರೆ, ಅದು ಶಾಲೆ. ಹಾಗಾಗಿ, ವಿದ್ಯಾರ್ಥಿಗಳಲ್ಲಿ, ಆತ್ಮವಿಶ್ವಾಸ, ಧನಾತ್ಮಕ ಧೋರಣೆ, ಮೌಲ್ಯಗಳನ್ನು ತುಂಬುವಲ್ಲಿ ಶಿಕ್ಷಕರ ಪಾತ್ರವು ಅತ್ಯಂತ ಪ್ರಮುಖವಾದುದಾಗಿದೆ. ಶಾಲೆ ಮತ್ತು ಶಿಕ್ಷಕರು, ಮಕ್ಕಳಲ್ಲಿ ತಮ್ಮನ್ನು ತಾವು ಸಮರ್ಥರೆಂದು, ಅಮೂಲ್ಯ ವ್ಯಕ್ತಿಗಳೆಂದು ಗುರುತಿಸಿಕೊಳ್ಳಲು ತಿಳಿಸಿಕೊಡಬೇಕು, ಹಾಗೂ ಅವರೆಲ್ಲರೂ ಹೊಣೆಯರಿತು, ಸರಿಯಾದುದನ್ನೇ ಮಾಡುವ ಒಳ್ಳೆಯ ವ್ಯಕ್ತಿಗಳೆಂದು ತಿಳಿದುಕೊಳ್ಳುವ ಅರಿವನ್ನು ಮೂಡಿಸಬೇಕು.

**5. ಅನನ್ಯತೆ ಮತ್ತು ಪಾತ್ರಗೊಂದಲದ ಹಂತ:** ಈ ಹಂತವು ಹದಿಹರೆಯವನ್ನು ಅಂದರೆ 12 ರಿಂದ 19ನೇ ವಯಸ್ಸಿನವರೆಗಿನ ಹಂತವನ್ನು ಪ್ರತಿನಿಧಿಸುತ್ತದೆ. ಈ ಹಂತದಲ್ಲಿ ಮಕ್ಕಳು ಪಾತ್ರಗೊಂದಲದ ಸಂಕ್ಷೋಭೆಗೆ ಒಳಗಾಗುವರು. ಈ ಹೊತ್ತಿಗಾಗಲೇ ಅವರಲ್ಲಿ ನಂಬಿಕೆ, ಸ್ವಾಯತ್ತತೆ, ತೊಡಗಿಸಿಕೊಳ್ಳುವಿಕೆ ಮತ್ತು ಕ್ರಿಯಾಶೀಲತೆಗಳು ವಿಕಾಸಗೊಂಡಿರುತ್ತವೆ. ಆದ್ದರಿಂದ ಅವರಿಗೆ ತಮ್ಮದೇ ಆದ ಒಂದು ಅಸ್ತಿತ್ವವನ್ನು ಕಂಡುಕೊಳ್ಳುವ ಕಾಳಜಿ

ಇರುತ್ತದೆ. ಹಾಗಾಗಿ ತಮ್ಮ ಸ್ವಾತಂತ್ರ್ಯದ ಅನ್ವೇಷಣೆ, ಮತ್ತು ತಮ್ಮದೇ ಆದ ವ್ಯಕ್ತಿತ್ವ ನಿರ್ಮಾಣ ಅವರಿಗೆ ಬಹು ಪ್ರಿಯವೆನಿಸುತ್ತವೆ. ನಿಜ ಹೇಳಬೇಕೆಂದರೆ, ಹದಿಹರೆಯದವರಲ್ಲಿ ಸಂಕ್ಷೋಭೆಯ ತೀವ್ರತೆ ಗರಿಷ್ಠಮಟ್ಟದಲ್ಲಿರುತ್ತದೆ. ಇದಕ್ಕೆ, ಅವರಲ್ಲಿ ಆಗುತ್ತಿರುವ ಶಾರೀರಿಕ ಬದಲಾವಣೆಗಳು–ನಿರ್ನಾಳ ಗ್ರಂಥಿಗಳ ಸ್ರಾವಗಳು ಮತ್ತು ವಿಶಿಷ್ಟವಾದ ಹಾರ್ಮೋನುಗಳ ಬಿಡುಗಡೆ– ಕಾರಣವಿರಬಹುದು. ಇದ್ದಕ್ಕಿದ್ದಂತೆ ತಾನು ದೊಡ್ಡವನಾಗಿದ್ದೇನೆ ಎಂಬ ಭಾವ ಅವರಲ್ಲಿ ಸ್ಫುರಿಸುವುದು. ಅದಕ್ಕೆ ತಕ್ಕಂತೆ ಸಮಾಜವೂ ಅವರನ್ನು ಹಾಗೇ ಗ್ರಹಿಸುವುದು. ಆದರೆ ಅವರು ಇನ್ನೂ ಪರಿಪೂರ್ಣ ಪಕ್ವತೆಯನ್ನು ಪಡೆಯದ ಹದಿಹರೆಯದವರು. ಹಾಗಾಗಿ ಅವರೊಂದು ಗೊಂದಲದ ಪರ್ವತವೇ ಆಗಿರುತ್ತಾರೆ. ಇದೊಂದು ಎಡಬಿಡಂಗಿ ಹಂತ. ಆದ್ದರಿಂದಲೇ ಅವರಿಗೆ ಆಗಾಗ ಧುತ್ತೆಂದು ಎದುರಾಗುವ ಪ್ರಶ್ನೆ "ಹಾಗಾದರೆ ನಾನು ಯಾರು? ಮತ್ತು ಏನು? ಮುಂದೆ ನಾನೇನಾಗಬೇಕು?" ಮತ್ತು "ನಾನು ಹೇಗಿರಬೇಕು?" ಹಾಗೂ "ನನ್ನ ವರ್ತನೆಗಳು ಹೇಗಿರಬೇಕು?" ಈ ಹಂತದಲ್ಲಿ ಅವರು ಸಾಮಾಜಿಕ ಗುಂಪುಗಳಿಂದ ಹೆಚ್ಚು ಪ್ರಭಾವಿತರಾಗುತ್ತಾರೆ, ಅಲ್ಲದೆ ನಾಯಕತ್ವದ ಗುಣಗಳು, ಮುಂದಾಳತ್ವವನ್ನು ವಹಿಸಿಕೊಳ್ಳುವುದು, ತಂಡಸ್ಫೂರ್ತಿ, ಆದರ್ಶ ವ್ಯಕ್ತಿಗಳು– ಇತ್ಯಾದಿಗಳೆಡೆಗೆ ಬಹುಬೇಗ ಆಕರ್ಷಿತರಾಗುತ್ತಾರೆ. ಇತರರಲ್ಲಿ ಇಂತಹ ಗುಣಗಳು ಕಂಡುಬಂದಾಗ, ತಾವೂ ಅವರಂತೆಯೇ ಆಗಲು ಪ್ರಯತ್ನಿಸುತ್ತಾರೆ. ಪರಿಪಕ್ವ ವಯಸ್ಕರಾಗಲು ತಮ್ಮದೇ ಆದ ರೀತಿಯಲ್ಲಿ ಸಿದ್ಧರಾಗುತ್ತಾರೆ.

ಈ ಹಂತದಲ್ಲಿ ಅವರಿಗೆ ಸದಾ ಕಾಡುವ ಒಂದು ಪ್ರಶ್ನೆಯೆಂದರೆ, ತಾವು ಬೇರೆಯವರಿಗೆ ಹೇಗೆ ಕಾಣುತ್ತೇವೆ ಎಂಬುದು. ವ್ಯಕ್ತಿಯೊಬ್ಬ ತನ್ನದೇ ಆದ ಛಾಪು ಮೂಡಿಸಬೇಕೆಂದಾದಲ್ಲಿ, ಇಲ್ಲಿಯವರೆಗೆ, ಈ ಹಿಂದೆ ಕಂಡುಬಂದ ಎಲ್ಲಾ ಹಂತಗಳಲ್ಲಿ ಯಾವ ಮಟ್ಟದ ಯಶಸ್ಸನ್ನು ಪಡೆದುಕೊಂಡಿದ್ದಾನೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ; ಹಾಗೂ ಈ ಹಿಂದಿನ ಸಂಕ್ಷೋಭೆಗಳನ್ನು, ಒತ್ತಡಗಳನ್ನು, ದ್ವಂದ್ವಗಳನ್ನು ಮತ್ತು ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಂಡಿದ್ದ ಎಂಬುದೂ ಮುಖ್ಯವಾಗುತ್ತದೆ. ಈ ಹಿಂದೆ ಯಾವುದೇ ಸವಾಲನ್ನು ಎದುರಿಸುವಾಗ, ವಿಫಲವಾದಲ್ಲಿ, ತನ್ನ ಪಾತ್ರದ ಬಗ್ಗೆ ವ್ಯಕ್ತಿ ಗೊಂದಲಕ್ಕೊಳಗಾಗುತ್ತಾನೆ. ಏನು ಮಾಡಬೇಕು? ಅಥವಾ ಯಾವ ರೀತಿ ವರ್ತಿಸಬೇಕು, ಹೇಗೆ ಮುಂದುವರಿಯಬೇಕು ಅಥವಾ ಯಾವ ವಿಷಯದಲ್ಲಿ ಅಧ್ಯಯನವನ್ನು ಮುಂದುವರಿಸಬೇಕು? ಅಥವಾ ಮುಂದೆ ತಾನೇನಾಗಬೇಕು? ಎಂಬುದರ ಬಗ್ಗೆ ಯಾವ ತಿಳುವಳಿಕೆಯೂ ಇಲ್ಲದೆ, ಗೊತ್ತುಗುರಿ ಇಲ್ಲದ ಆತ್ಮವಿಶ್ವಾಸರಹಿತ ವ್ಯಕ್ತಿಯಾಗಿ ಬಿಡುತ್ತಾನೆ. ಇವನಿಗೆ ಸ್ನೇಹಿತರನ್ನು ಗಳಿಸಲೂ ಆಗದಷ್ಟು ದುರ್ಬಲತೆ ಕಾಡಿಬಿಡಬಹುದು. ಒಮ್ಮೊಮ್ಮೆ ಇಂತಹ ಪಾತ್ರಗೊಂದಲ ಮತ್ತು ತನ್ನನ್ನು ತಾನು ಗುರುತಿಸಿಕೊಳ್ಳುವಿಕೆಯಲ್ಲಿ ತೀವ್ರವಾದ ವಿಫಲತೆಯು ಉಂಟಾದಾಗ, ಇನ್ಯಾವುದೋ ರೀತಿಯಲ್ಲಿ ಅತಿ ಗುರುತಿಸಿಕೊಂಡ ವ್ಯಕ್ತಿತ್ವದವನಾಗಿ ಮಾರ್ಪಾಟು ಹೊಂದಿ ಸಮಾಜವಿರೋಧಿ ವ್ಯಕ್ತಿ, ಕೆಟ್ಟ ವ್ಯಕ್ತಿ ಅಥವಾ ದುಷ್ಟನೂ ಆಗಿಬಿಡಬಹುದು. ಆದ್ದರಿಂದ, ಸಹಿಷ್ಣುತೆಯಿಲ್ಲದೆ, ಯಾರನ್ನೂ ಸಹಿಸಲಾಗದ ವರ್ತನೆಗಳ ಸುಳಿವು ಕಂಡೊಡನೆಯೇ, ಅದಕ್ಕೆ ಕಾರಣ ಆತನಲ್ಲಿರುವ ಪಾತ್ರಗೊಂದಲ ಮತ್ತು ಅನನ್ಯತೆಯ ಕೊರತೆಯ ಸಂಕ್ಷೋಭೆಯೆಂದು ಗುರುತಿಸಿಕೊಳ್ಳಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಶಿಕ್ಷಕರೂ ತಂದೆ ತಾಯಿಗಳೂ ಪೋಷಕರೂ ಹದಿಹರೆಯದವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಾ ಅವರ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಲು ಉತ್ತೇಜಿಸಬೇಕು.

**6. ಸಲಿಗೆ ಮತ್ತು ಒಂಟಿತನದ ಹಂತ :** ಮಾನವನ 19 ರಿಂದ 34ನೇ ವಯಸ್ಸಿನವರೆಗಿನ ಹಂತವು ಸಲಿಗೆ ಮತ್ತು ಒಂಟಿತನವೆಂಬ ಸಂಕ್ಷೋಭೆಯನ್ನು ಒಳಗೊಂಡ ಹಂತವೆಂದು ಎರಿಕ್‌ಸನ್ ಗುರುತಿಸಿದ್ದಾನೆ. ಈ ಹಂತದಲ್ಲಿ ವ್ಯಕ್ತಿಯು ತನ್ನ ವೈಯಕ್ತಿಕ ಸಂಬಂಧಗಳ ಬಗ್ಗೆ ಆಸಕ್ತಿ ವಹಿಸುತ್ತಾನೆ. ಇದೊಂದು ಜೀವಮಾನದಲ್ಲಿಯೇ ಅತ್ಯಂತ ಪ್ರಮುಖವಾದ ಘಟ್ಟವಾಗಿದೆ. ಈ ಸಮಯದಲ್ಲಿ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯನ್ನು ಅತಿಯಾಗಿ ಹಚ್ಚಿಕೊಳ್ಳುವುದು, ಅವರೊಂದಿಗೆ ವೈಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳುವುದು ಮತ್ತು ತನ್ನ ಅಸ್ತಿತ್ವವನ್ನು ಇನ್ನೊಬ್ಬರೊಂದಿಗೆ ಲೀನವಾಗಿಸಿಕೊಳ್ಳುವುದು–ಇತ್ಯಾದಿ ವರ್ತನೆಗಳು ಅಭಿವ್ಯಕ್ತವಾಗುತ್ತವೆ. ಉದಾಹರಣೆಗೆ ಇಂತಹ ಸೌಹಾರ್ದಯುತವಾದ ಸಂಬಂಧವು ಗಂಡ–ಹೆಂಡಿರ ನಡುವೆ, ಆತ್ಮೀಯ ಸ್ನೇಹಿತರುಗಳ

ನಡುವೆ, ಹಾಗೂ ಒಂದು ಅತ್ಯುನ್ನತವಾದ, ಶ್ರೇಷ್ಠವಾದ ಗುರುಶಿಷ್ಯರ ಸಂಬಂಧದಲ್ಲಿ (ಸ್ವಾಮಿ ವಿವೇಕಾನಂದ ಮತ್ತು ಶ್ರೀ ರಾಮಕೃಷ್ಣ ಪರಮಹಂಸ) ನೋಡಬಹುದಾಗಿದೆ. ಕೆಲವೊಂದು ಅಪರೂಪದ ಉದಾಹರಣೆಗಳಲ್ಲಿ, ತನ್ನ ಕುಟುಂಬದ ಏಳಿಗೆಗಾಗಿಯೋ ಅಥವಾ ಆತ್ಮೀಯ ಸ್ನೇಹಿತನಿಗಾಗಿಯೋ ವ್ಯಕ್ತಿಯು ತನ್ನ ಜೀವನವನ್ನೇ ಬಲಿದಾನ ನೀಡುವ ಮಟ್ಟಕ್ಕೂ ಈ ಸಂಬಂಧವು ವಿಸ್ತರಿಸಿಕೊಳ್ಳಬಹುದಾಗಿದೆ.

ಒಂದು ವೇಳೆ, ಇಂತಹ ಅನ್ಯೋನತೆ, ಸಲಿಗೆಗಳನ್ನು ಪಡೆದುಕೊಳ್ಳದೇ ಹೋದರೆ ಅಥವಾ ಒಂದೊಮ್ಮೆ ಬೆಳೆಸಿಕೊಂಡ ಆತ್ಮೀಯ ಅನ್ಯೋನತೆ ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಹಳಸಿದರೆ, ಅದು ಕೊನೆಯವರೆಗೆ ಆ ವ್ಯಕ್ತಿಯಲ್ಲಿ ಒಂಟಿತನವನ್ನು ಅಥವಾ ಏಕಾಕಿತನವನ್ನು ಉಂಟುಮಾಡುತ್ತದೆ. ಆದ್ದರಿಂದ ಇಂತಹ ಸಂಕ್ಷೋಭೆಯನ್ನು ನಿವಾರಿಸಿಕೊಳ್ಳಲು ವ್ಯಕ್ತಿಯು ತನ್ನ ವ್ಯಕ್ತಿತ್ವದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ವ್ಯಕ್ತಿಯಲ್ಲಿ ಉದ್ಭವವಾಗುವ ಆತ್ಮೀಯತೆಯನ್ನು ಗಳಿಸಿಕೊಳ್ಳುವ ತುಡಿತ ಮತ್ತು ತನ್ನತನವನ್ನು ಉಳಿಸಿಕೊಳ್ಳುವ ತುಡಿತ–ಇವೆರೆಡರ ನಡುವೆ ಒಂದು ಸಮತೋಲನವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಪ್ರತಿಯೊಬ್ಬ ವ್ಯಕ್ತಿಯೂ ತನ್ನತನವನ್ನು ಉಳಿಸಿಕೊಳ್ಳುವ ಮಟ್ಟಿಗಾದರೂ ತಾನು ಇತರರಿಗಿಂತ ಬೇರೆ ಎಂಬ ಅನಿಸಿಕೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳಬಲ್ಲ ಶಿಕ್ಷಕರು, ತಂದೆ ತಾಯಿ ಮತ್ತು ಪೋಷಕರು, ಸ್ನೇಹಿತರು, ಧಾರ್ಮಿಕ ನಾಯಕರು, ದಾರ್ಶನಿಕರು, ಮತ್ತು ಮಾರ್ಗದರ್ಶಕರು ಅವರಿಗೆ ದ್ವಂದ್ವವನ್ನು ಪರಿಹರಿಸಿಕೊಳ್ಳುವಲ್ಲಿ ಸಹಾಯಮಾಡಬೇಕು.

**7. ಸೃಜನಶೀಲತೆ/ಉತ್ಪಾದಕತ್ವ ಮತ್ತು ಜಡತೆ :** ಇದು ಮಧ್ಯವಯಸ್ಕರ ಹಂತದಲ್ಲಿ ಕಂಡುಬರುವ ಸ್ಥಿತಿ. ಸುಮಾರು 35ರಿಂದ 65ನೇ ವಯಸ್ಸಿನವರೆಗೆ ವ್ಯಕ್ತಿಯು ಒಬ್ಬ ಹಿರಿಯನಂತೆ, ತಜ್ಞನಂತೆ ಅಥವಾ ವಿಶೇಷ ಪರಿಣಿತನಂತೆ ವಿಕಾಸ ಹೊಂದುವ ಹಂತವಿದಾಗಿರುತ್ತದೆ. ತನ್ನಲ್ಲಿರುವ ಉತ್ಪಾದಕತೆಯ ಸಾಮರ್ಥ್ಯದ ಸಾರ್ಥಕ ಬಳಕೆಗಾಗಿ, ಆತ, ಕಿರಿಯರಿಗೆ ಮಾರ್ಗದರ್ಶಕನಾಗಿ, ಒಂದು ಮಾದರಿ ಪಾತ್ರವಾಗಿ ರೂಪುಗೊಳ್ಳುತ್ತಾನೆ. ಎರಿಕ್‌ಸನ್ ಇದನ್ನು ಸೃಜನಶೀಲತೆ ಎಂದೇ ಕರೆದಿದ್ದಾನೆ. ಏಕೆಂದರೆ ವ್ಯಕ್ತಿಯು ಉತ್ಪಾದಿಸಿ ಹೊರತರುವ ಯಾವುದೇ ಉತ್ಪನ್ನವು ಸಮಾಜಕ್ಕೆ ಒಂದು ಕೊಡುಗೆಯಾಗಿರುತ್ತದೆ. ಇದಕ್ಕೆ ವಿಜ್ಞಾನ, ಕಲೆ, ಅಥವಾ ವಾಣಿಜ್ಯ ಕ್ಷೇತ್ರಗಳೆಂಬ ಭೇದಭಾವವಿರುವುದಿಲ್ಲ. ಈ ಹಂತದಲ್ಲಿ ಸೂಕ್ತವಾಗಿ ವಿಕಾಸ ಹೊಂದಿರುವ ಒಬ್ಬಾತನು ಯಾವುದೇ ವ್ಯಕ್ತಿಯ, ಗುಂಪಿನ ಅಥವಾ ಸೌಲಭ್ಯ ವಂಚಿತರ ಸಮೂಹವಿರಲಿ–ಅವರೆಲ್ಲರನ್ನೂ ಸೂಕ್ತವಾಗಿ ತಲುಪಬಲ್ಲ, ಹಿತರಕ್ಷಣೆಯನ್ನು ಕಾಪಾಡಬಲ್ಲ ಮತ್ತು ಉದ್ಧರಿಸಬಲ್ಲ. ಹೀಗೆ ಶ್ರೇಷ್ಠವಾದ, ಉನ್ನತವಾದ ವ್ಯಕ್ತಿತ್ವವು ವಿಕಾಸವಾಗುವಂತಹ ಹಂತ ಇದು.

ಮೇಲೆ ಹೇಳಿದ ಅಂಶಗಳಿಗೆ ತದ್ವಿರುದ್ಧವಾಗಿ, ಒಬ್ಬ ವ್ಯಕ್ತಿಯು ಸಂಕುಚಿತ ಮನೋಭಾವದ ಸ್ವಾರ್ಥಿಯಾಗಿಯೂ ರೂಪುಗೊಳ್ಳುವ ಸಾಧ್ಯತೆಗಳೂ ಇಲ್ಲದಿಲ್ಲ. ನಿಜವಾದ ಅರ್ಥದಲ್ಲಿ ಹೇಳಬೇಕೆಂದರೆ ಇದೊಂದು ವಿಕಾಸವೇ ಸ್ಥಗಿತಗೊಂಡ ಹಂತವಾಗಿ ಬಿಡುವುದು. ಎರಿಕ್‌ಸನ್‌ನ ಅಭಿಪ್ರಾಯದಂತೆ ಬಹಳಷ್ಟು ಮಂದಿ ಈ ಹಂತದಲ್ಲಿ ಒಂದು ರೀತಿಯ ಜಡತ್ವವನ್ನು ತಲುಪಿಬಿಡುತ್ತಾರೆ. ಆದರೆ ಎಲ್ಲೋ ಕೆಲವರು ಮಾತ್ರ ಸೃಜನಶೀಲರಾಗಿ ಮುಂದುವರಿಯುತ್ತಾ ಜೀವನದ ಸ್ಫೂರ್ತಿಯನ್ನು ಉಳಿಸಿಕೊಂಡಿರುತ್ತಾರೆ.

**8. ದೃಢತೆ ಮತ್ತು ಹತಾಶೆ:** ಮನೋ–ಸಾಮಾಜಿಕ ವಿಕಾಸದಲ್ಲಿ ಕೊನೆಯ ಹಂತವಾಗಿ ಇದು 65 ವಯಸ್ಸಿಗೂ ಮೀರಿದ ಹಿರಿಯರ ಗುಂಪನ್ನು ಒಳಗೊಳ್ಳುತ್ತದೆ. ಇದನ್ನು ವೃದ್ಧಾಪ್ಯವೆಂತಲೂ ಗುರುತಿಸುತ್ತಾರೆ. ಇಡೀ ಜೀವಿತಾವಧಿಯಲ್ಲಿನ ಮುಕ್ತಾಯದ ಘಟ್ಟದಲ್ಲಿನ ಸಂಕ್ಷೋಭೆಯನ್ನು ಹೊಂದಿರುವ ಕಾಲ ಇದಾಗಿರುತ್ತದೆ. ಇದರಲ್ಲಿ ಧೃಢತೆ ಮತ್ತು ಹತಾಶೆಗಳ ಹೊಯ್ದಾಟವಿರುತ್ತದೆ. ಇಲ್ಲಿ ದೃಢತೆ ಎಂದರೆ ವ್ಯಕ್ತಿಯು ತನ್ನಲ್ಲಿ ಈ ಹಿಂದಿನ ಹಂತಗಳಲ್ಲಿ ಆಗಿರುವ ಎಲ್ಲಾ ರೀತಿಯ ವಿಕಾಸದ ಒಟ್ಟಾರೆ ಫಲವಾಗಿ ತನ್ನ ಅಹಂನ್ನು ರೂಪಿಸಿಕೊಳ್ಳುವುದು ಎಂದಾಗಿದೆ. ಅಂದರೆ ಏನೆಲ್ಲಾ ಸಂಕ್ಷೋಭೆಗಳು ಇಲ್ಲಿಯವರೆಗೆ ಅವನ ಜೀವನದಲ್ಲಿ ಒದಗಿ ಬಂದಿದ್ದವು, ಅವುಗಳನ್ನೆಲ್ಲಾ ಆತ ಹೇಗೆ ಪರಿಹರಿಸಿಕೊಂಡ, ಮತ್ತು ಇದರಿಂದಾದ ಎಲ್ಲಾ ಅನುಭವಗಳ

ಒಟ್ಟು ಮೊತ್ತವಾಗಿ ಆತನ ಅಹಂ ವಿಕಾಸಗೊಳ್ಳುವ ಪ್ರಕ್ರಿಯೆಯಾಗಿರುತ್ತದೆ. ಒಂದು ಅರ್ಥದಲ್ಲಿ, ಹೇಳಬೇಕೆಂದರೆ, ಈ ಹಂತದಲ್ಲಿ ವ್ಯಕ್ತಿಯು ತನ್ನ ಇಡೀ ಜೀವನವನ್ನು ಕುರಿತಂತೆ ಒಂದು ಸಾರ್ಥಕ್ಯದ ಭಾವವನ್ನು ಹೊಂದುತ್ತಾನೆ. ಸಂತೃಪ್ತವಾದ, ಆರಾಮವಾದ ಜೀವನದ ಹಂತವನ್ನು ಆತ ತಲುಪಿರುತ್ತಾನೆ, ಹೀಗಾದಾಗ ಜೀವನದ ಬಗ್ಗೆ ಅವನಲ್ಲಿ ಒಂದು ರೀತಿಯ ದೃಢತೆಯೂ ಮತ್ತು ಧನಾತ್ಮಕವಾದ ಧೋರಣೆಯೂ ಬೆಳೆಯುತ್ತದೆ. ಈ ಹಂತದಲ್ಲಿ, ಸಾಮಾನ್ಯವಾಗಿ, ವ್ಯಕ್ತಿಯು ತನ್ನ ಕರ್ತವ್ಯಗಳಿಂದ ವಿಮುಕ್ತಿ ಹೊಂದಿ, ವಿಶ್ರಾಂತ ಜೀವನಕ್ಕೆ ಕಾಲಿಡಲು ತಯಾರಾಗುತ್ತಾನೆ. ವಯೋಧರ್ಮಕ್ಕನುಗುಣವಾಗಿ, ಕುಂದುತ್ತಿರುವ ದೈಹಿಕ ಶಕ್ತಿ, ಸಾಮರ್ಥ್ಯ ಹಾಗೂ ಆರೋಗ್ಯದ ಬಗ್ಗೆ, ಜೀವನದ ಅಂತಿಮಘಟ್ಟವಾದ ಸಾವಿನ ಬಗ್ಗೆ ಗಂಭೀರವಾಗಿ ಚಿಂತಿಸುವುದನ್ನು, ಮುಂದಿನ ದಿನಗಳ ನಿರ್ವಹಣೆ ಮತ್ತು ಒದಗಬಹುದಾದ ದ್ವಂದ್ವಗಳ ನಿವಾರಣೆಗೆ ಕೈಗೊಳ್ಳಬಹುದಾದ ಯೋಜನೆಗಳನ್ನೂ ಕುರಿತು ಸೂಕ್ತ ವರ್ತನೆಗಳನ್ನು ವ್ಯಕ್ತಪಡಿಸುವ ಕಾಲವಿದಾಗಿರುತ್ತದೆ. ಯಾವ ವ್ಯಕ್ತಿಯ ವ್ಯಕ್ತಿತ್ವವು ಸಮತೋಲನವನ್ನು ಹೊಂದಿದ್ದು, ದೃಢತೆಯನ್ನು ಪಡೆದುಕೊಂಡಿರುತ್ತದೋ ಅಂತಹವರಿಗೆ ಮಾತ್ರ ಇಡೀ ಜೀವನವನ್ನು ಒಂದು ಸಾಕ್ಷೀಭಾವದಿಂದ ಅವಲೋಕಿಸಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ, ಅಂದರೆ ಈ ಹಿಂದಿನ ಹಂತಗಳಲ್ಲಿನ ಸಂಕ್ಷೋಭೆಗಳನ್ನು, ದ್ವಂದ್ವಗಳನ್ನು ಸೂಕ್ತವಾಗಿ ನಿವಾರಿಸಿಕೊಳ್ಳಲಾಗದಂತಹವರಿಗೆ, ಜೀವನವು ಸಂಪೂರ್ಣವಾಗಿ ಬೇರೆಯದೇ ಆಗಿ ತೋರಿಬರುತ್ತದೆ. ಅವರಲ್ಲಿ ಒಂದು ರೀತಿಯ ಅಸಂತೃಪ್ತಿ ಮೂಡಿರುತ್ತದೆ. ಈವರೆಗೆ ನಡೆದ, ಸುಧಾರಿಸಲಾಗದ, ಪುನರಾವರ್ತಿಸಲಾಗದ, ಮತ್ತು ಸ್ವಯಂಕೃತ ಅಪರಾಧಗಳ ಬಗ್ಗೆ ತೀವ್ರವಾದ ವೇದನೆ ಅವರಲ್ಲಿ ಮನೆಮಾಡಬಹುದು. ಇದೆಲ್ಲದರ ಪರಿಣಾಮವಾಗಿ ಅವರು ಹತಾಶರಾಗುತ್ತಾರೆ. ಆದರೆ, ಇಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕು, ಅದೆಂದರೆ, ಯಾವುದೇ ಒಂದು ವಿಚಾರದಲ್ಲಿ ಸಂತೃಪ್ತಿ ಅಥವಾ ಅಸಂತೃಪ್ತಿಯನ್ನು ಹೊಂದುವುದು ಒಂದು ಮಟ್ಟದವರೆಗೆ ಅತ್ಯಂತ ಸಹಜವಾದದ್ದು. ಆದರೆ, ಅದೇ ಅತಿಯಾದಾಗ, ಪರಿಣಾಮ ಬೇರೆಯದೇ ಆಗಿಬಿಡುವುದು; ಇಲ್ಲವಾದಲ್ಲಿ ತನ್ನ ಬಗ್ಗೆಯೇ ತಾನು ಕಡುದ್ವೇಷವನ್ನು ಬೆಳೆಸಿಕೊಳ್ಳಬಹುದು ಅಥವಾ ತೀವ್ರವಾದ ಖಿನ್ನತೆಗೆ ಒಳಗಾಗಬಹುದು. ಆದ್ದರಿಂದ ಪ್ರತಿಯೊಬ್ಬರೂ ದ್ವಂದ್ವಗಳ ನಡುವೆ ದೃಢತೆಯನ್ನು ಹೊಂದುವುದು ಹಾಗೂ ವ್ಯಕ್ತಿತ್ವದ ಸಮತೋಲನವನ್ನು ಕಾಪಾಡಿಕೊಳ್ಳುವುದು, ಹತಾಶೆಗಳೊದಗಿದಾಗ ಎದೆಗುಂದದಿರುವುದನ್ನು ಕಲಿತುಕೊಳ್ಳಬೇಕಾಗುತ್ತದೆ. ಹೀಗಾದಾಗ ತಮ್ಮ ಉಳಿದ ಜೀವನವನ್ನು ಸಂತೃಪ್ತಿಯಿಂದ ಕಳೆಯುವಂತೆ ಮಾಡಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಕೈಯಲ್ಲೇ ಇದೆ. ಜ್ಞಾನಿಗಳಾದಂತಹವರಿಗೆ, ಆಧ್ಯಾತ್ಮಿಕ ಒಲವುಳ್ಳವರಿಗೆ ಇಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದೇನೂ ಕಷ್ಟವಾಗುವುದಿಲ್ಲ.

ಎರಿಕ್‌ಸನ್ ಸೂಚಿಸಿದ ಈ ಎಂಟು ಹಂತಗಳು ಪರಸ್ಪರ ಸಂಬಂಧವನ್ನೂ ಅವಲಂಬನೆಯನ್ನೂ ಹೊಂದಿರುತ್ತವೆ. ಯಾವುದೇ ಹಂತದ ಸಫಲತೆಯು, ಅದರ ಹಿಂದಿನ ಹಂತಗಳಲ್ಲಿನ ಸಂಕ್ಷೋಭೆಯ ಯಶಸ್ವೀ ಸಾಧನೆಯನ್ನು ಅವಲಂಬಿಸುತ್ತದೆ. ವ್ಯಕ್ತಿಯು ಹೇಗೆ ಇವೆಲ್ಲವನ್ನು ನಡೆಸುತ್ತಾನೆ ಎಂಬುದನ್ನು ಆಧರಿಸಿ, ಆತನ ವ್ಯಕ್ತಿತ್ವವು ನಿರ್ಮಾಣವಾಗುವುದು.

ಮೊದಲ 1, 2 ಮತ್ತು 3ನೆಯ ಹಂತದಲ್ಲಿ ತಂದೆ, ತಾಯಿಯರ ಪಾತ್ರ ಬಹಳ ಮುಖ್ಯವಾದುದು. ಹಾಗೆಯೇ 4ನೇ, 5ನೇ ಮತ್ತು 6ನೇ ಹಂತದಲ್ಲಿ ಶಿಕ್ಷಕರು ಪ್ರಮುಖವಾಗುವರು. ಹಾಗೆಯೇ 7 ಮತ್ತು 8ನೇ ವಯಸ್ಸಿನಲ್ಲಿ ವ್ಯಕ್ತಿ ಪ್ರೌಢನಾಗಿದ್ದು, ತನ್ನ ವಿಕಾಸಕ್ಕೆ ತಾನೇ ಕಾರಣನಾಗಿರುತ್ತಾನೆ. ಹಿರಿಯರು, ಜ್ಞಾನಿಗಳು, ಧಾರ್ಮಿಕ ಗುರುಗಳು ಮತ್ತು ಆತ್ಮೀಯ ಸ್ನೇಹಿತರು ಮತ್ತು ಇನ್ನು ಮುಂತಾದವರು ಈ ದಿಕ್ಕಿನಲ್ಲಿ ಸಹಾಯಹಸ್ತ ನೀಡಬಲ್ಲವರಾಗಿರುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–4**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ಹುಟ್ಟಿನಿಂದಲೇ ಪ್ರತಿಯೊಂದು ವಿಕಾಸದ ಹಂತದಲ್ಲೂ ವ್ಯಕ್ತಿಯು ಒತ್ತಡದಿಂದ ಕೂಡಿದ ಬಿಕ್ಕಟ್ಟಿನ ಅಥವಾ ಸಂಕ್ಷೋಭೆಗಳ ಸನ್ನಿವೇಶಗಳನ್ನು ಎದುರಿಸುತ್ತಾನೆ ಎಂಬ ಪ್ರತಿಪಾದನೆಯನ್ನು ನೀಡಿದುದು ____________

ಎ. ಲಾರೆನ್ಸ್ ಕೋಹ್ಲ್‌ಬರ್ಗ್

ಬಿ. ಆಲ್ಬರ್ಟ್ ಬಂಡೂರ

ಸಿ. ಎರಿಕ್‌ಎರಿಕ್ಸನ್

ಡಿ. ಜೀನ್ ಪಿಯಾಷೆ

2. “ಪಾತ್ರಗೊಂದಲ” ಕಂಡುಬರುವ ವಯೋಮಾನ____________

ಎ. 12ರಿಂದ 19 ವರ್ಷಗಳು

ಬಿ. 6 ರಿಂದ 12 ವರ್ಷಗಳು

ಸಿ. 19 ರಿಂದ 34 ವರ್ಷಗಳು

ಡಿ. 35 ರಿಂದ 65 ವರ್ಷಗಳು

3. ವ್ಯಕ್ತಿಯು ತನ್ನ ಬಿಕ್ಕಟ್ಟುಗಳನ್ನು ಅಥವಾ ಸಂಕ್ಷೋಬೆಗಳನ್ನು ತಾನೇ ಪರಿಹರಿಸಿಕೊಳ್ಳುವ ಹಂತ____________

ಎ. ಉತ್ಪಾದಕತ್ವ / ಜಡತೆ

ಬಿ. ಧೃಡತೆ / ಹತಾಶೆ

ಸಿ. ಸಲಿಗೆ / ಒಂಟಿತನ

ಡಿ. ಅನನ್ಯತೆ / ಪಾತ್ರಗೊಂದಲ

4. ವ್ಯಕ್ತಿ ತನ್ನ ಅಸ್ತಿತ್ವವನ್ನು ಇನ್ನೊಬ್ಬ ವ್ಯಕ್ತಿಯಲ್ಲಿ ಕಾಣುವುದು____________

ಎ. ಸಲಿಗೆ

ಬಿ. ಒಂಟಿತನ

ಸಿ. ಭ್ರಮೆ

ಡಿ. ಉತ್ಪ್ರೇಕ್ಷೆ

5. 40ನೇ ವಯಸ್ಸಿನಲ್ಲಿ ವ್ಯಕ್ತಿಯೊಬ್ಬನು ಗರಿಷ್ಟ ಸಂತೃಪ್ತಿಯನ್ನು ಹೊಂದಿದ್ದು, ಮುಂದೆ ಯಾವ ಹೊಸ ಕಾರ್ಯಗಳನ್ನು ಕೈಗೊಳ್ಳದಿರುವುದು ____________

ಎ. ಸಮತೋಲನ

ಬಿ. ಸಂತೃಪ್ತಿ

ಸಿ. ಜಡತೆ

ಡಿ. ಅಸಮತೋಲನ

6. “ನಾನು ಯಾರು?”“ನಾನು ಮುಂದೆ ಏನಾಗಬೇಕು?” ಇಂತಹ ಪ್ರಶ್ನೆಗಳು ಕಾಡುವ ಹಂತ ____________

ಎ. ಅನನ್ಯತೆ/ ಪಾತ್ರಗೊಂದಲ

ಬಿ. ಕ್ರಿಯಾಶೀಲ / ಕೀಳರಿಮೆ

ಸಿ. ತೊಡಗಿಸಿಕೊಳ್ಳುವಿಕೆ/ ಅಪರಾಧೀಭಾವ

ಡಿ. ನಂಬಿಕೆ / ಅಪನಂಬಿಕೆ

## 1.4.4 ಸಾರಾಂಶಿಸೋಣ

- ವಿಕಾಸವೊಂದು ಸಂಕೀರ್ಣವಾದ ಪ್ರಕ್ರಿಯೆಯಾಗಿದ್ದು, ಹಲವಾರು ಕ್ಷೇತ್ರಗಳನ್ನು ಒಳಗೊಂಡಿರುತ್ತದೆ.
- ಈ ಭಿನ್ನ ಭಿನ್ನ ಕ್ಷೇತ್ರಗಳು ಪರಸ್ಪರ ಒಂದಕ್ಕೊಂದು ಸಂಬಂಧವನ್ನು ಮತ್ತು ಅವಲಂಬನೆಯನ್ನು ಹೊಂದಿರುತ್ತವೆ.
- ಸಂಜ್ಞಾನಾತ್ಮಕ ವಿಕಾಸವನ್ನು ಜೀನ್‌ಪಿಯಾಷೆಯ ಸಿದ್ಧಾಂತವು ವಿವರಿಸುತ್ತದೆ. ಪಿಯಾಷಿಯ ಪ್ರತಿಪಾದನೆಯ ಪ್ರಕಾರ ಮಾನವನು ಮನಸ್ಸು ಎರಡು ಮುಖ್ಯವಾದ ವಿಭಾಗಗಳನ್ನು ಹೊಂದಿದ್ದು, ಅದನ್ನು ಸಂಜ್ಞಾನಾತ್ಮಕ ರಚನೆ ಮತ್ತು ಸಂಜ್ಞಾನಾತ್ಮಕ ಕಾರ್ಯಗಳೆಂದು ಗುರುತಿಸಲಾಗಿದೆ.
- ಸಂಗ್ರಹಣ, ಅನುಕೂಲನ, ವ್ಯವಸ್ಥೀಕರಣ, ಸ್ವಾಂಗೀಕರಣ ಮತ್ತು ಸಮತೋಲನೀಕರಣ – ಈ ಎಲ್ಲಾ ಪ್ರಕ್ರಿಯೆಗಳಿಂದ ವ್ಯಕ್ತಿಯಲ್ಲಿ ಸಂಜ್ಞಾನಾತ್ಮಕವಾದ ವಿಕಾಸವುಂಟಾಗುವುದು.
- ಪಿಯಾಷೆಯು ಸಂಜ್ಞಾನಾತ್ಮಕ ವಿಕಾಸವು ಕ್ರಮವಾಗಿ ನಾಲ್ಕು ಹಂತಗಳಲ್ಲಿ ಆಗುವುದೆಂದು ಹೇಳಿದನಲ್ಲದೆ, ಆ ಹಂತಗಳನ್ನು ಕ್ರಮವಾಗಿ ಸಂವೇಗಾತ್ಮಕ ಹಂತ (0 ಯಿಂದ 2 ವರ್ಷಗಳು), ಪೂರ್ವಕಾರ್ಯ ಹಂತ (2 ರಿಂದ 7 ವರ್ಷಗಳು), ಮೂರ್ತ ಕಾರ್ಯಗಳ ಹಂತ (7 ರಿಂದ 11 ವರ್ಷಗಳು) ಮತ್ತು ಔಪಚಾರಿಕ ಸಂಕ್ರಿಯಾತ್ಮಕ ಹಂತ (11 ವರ್ಷಗಳಿಗೂ ಮೇಲ್ಪಟ್ಟು) ಎಂದು ಗುರುತಿಸಿದ್ದಾನೆ.
- ಕೋಹ್ಲ್‌ಬರ್ಗ್ ನೈತಿಕವಿಕಾಸ ಪ್ರಕ್ರಿಯೆಯನ್ನು ಕುರಿತು ಪ್ರತಿಪಾದಿಸಿದ್ದಾನೆ. ಕೋಹ್ಲ್‌ಬರ್ಗ್ ಹೇಳುವ ಪ್ರಕಾರ ನೈತಿಕ ವಿಕಾಸವು ಕ್ರಮವಾಗಿ ಮೂರು ಮಟ್ಟಗಳನ್ನು ಹೊಂದಿದ್ದು, ಪ್ರತಿಯೊಂದು ಮಟ್ಟದಲ್ಲಿಯೂ ಕ್ರಮಾಗಿ ಎರಡು ಹಂತಗಳು ಅವುಗಳಿಗೆ ಸಮನಾಗದ ವರ್ತನೆಗಳನ್ನು ಅರ್ಥೈಸಬಹುದಾಗಿದೆ.
- ಸಾಮಾಜಿಕ ಮನೋವಿಜ್ಞಾನಿಯಾದ ಎರಿಕ್‌ಸನ್ ಮನೋ–ಸಾಮಾಜಿಕ ವಿಕಾಸವನ್ನು ಕುರಿತು ತನ್ನ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ.ಎರಿಕ್‌ಸನ್‌ನ ಪ್ರಕಾರ, ವ್ಯಕ್ತಿಯೊಬ್ಬನ ಮನೋ–ಸಾಮಾಜಿಕ ವಿಕಾಸವು ಕ್ರಮಬದ್ಧವಾದ ಎಂಟು ಹಂತಗಳಲ್ಲಿ ಆಗುವುದು. ಆ ಎಂಟು ಹಂತಗಳು ಕ್ರಮವಾಗಿ, ನಂಬಿಕೆ/ ಅಪನಂಬಿಕೆ, ಸ್ವಾಯುತ್ತತೆ/ನಾಚಿಕೆ ಮತ್ತು ಅನುಮಾನ, ತೊಡಗಿಸಿಕೊಳ್ಳುವಿಕೆ/ಅಪರಾಧೀ ಮನೋಭಾವ, ಕ್ರಿಯಾಶೀಲತೆ/ಕೀಳರಿಮೆ, ಅನನ್ಯತೆ/ಪಾತ್ರಗೊಂದಲ, ಸಲಿಗೆ/ಒಂಟಿತನ, ಉತ್ಪಾದಕತ್ವ/ಜಡತೆ ಮತ್ತು ಕೊನೆಯದಾಗಿ ದೃಢತೆ/ಹತಾಶೆ ಆಗಿವೆ.

## 1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, 3 ಮತ್ತು 4

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಡಿ 2. ಸಿ 3. ಸಿ 4. ಬಿ 5. ಎ 6. ಎ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಡಿ 2. ಸಿ 3. ಬಿ 4. ಖ 5. ಎ 6. ಎ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1. ಬಿ 2. ಖ 3. ಬಿ 4. ಎ 5. ಸಿ 6. ಎ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–4**

1. ಸಿ 2. ಎ 3. ಸಿ 4. ಎ 5. ಸಿ 6. ಎ

## 1.4.6. ಘಟಕಾಂತ್ಯ ಅಭ್ಯಾಸಗಳು

1. ಜೀನ್‌ಪಿಯಾಷೆ ಪ್ರತಿಪಾದಿಸಿದ ಸಿದ್ಧಾಂತವನ್ನು ಆಧರಿಸಿ ಸಂಜ್ಞಾನಾತ್ಮಕ ವಲಯದ ವಿಕಾಸ ಹಂತಗಳನ್ನು ವಿವರಿಸಿ.
2. ಸಂಕ್ಷೋಭೆಗಳೆಂದರೇನು? ಎರಿಕ್‌ಸನ್ ಪ್ರತಿಪಾದಿಸಿದಂತೆ ಮನೋ–ಸಾಮಾಜಿಕ ವಿಕಾಸದ ಹಂತಗಳನ್ನು ವಿವರಿಸಿ.
3. ಕೋಹ್ಲ್‌ಬರ್ಗ್ ವಿವರಿಸಿದ ನೈತಿಕ ವಿಕಾಸದ ಆರು ಹಂತಗಳನ್ನು ವಿವರಿಸಿ.

## 1.4.7. ಪರಾಮರ್ಶನ ಗ್ರಂಥಗಳು


1. Elizabeth Hurlock (32nd reprint 2016) Child Development Sixth Edition Mc Graw Hill Educaiton Indian Edition
2. Laura. E.Berk Childhood Development Ninth edition Pearson Education Inc.(2013, 1017)
3. Chauhan S.S. Advanced Educational Psychology Vikas Publishing House Pvt.Ltd. (2010)
4. Dandapani.S. Advanced Educational Psychology (2005) Anmol Publications Delhi
5. Nataraj V. Vikasa manovignana (2010) Srinivas Prakashana Mysore
6. Dr.Suneetha.CN Understanding the learner and the learning process Shruthiloka Prakashana 2011.
7. ಡಾ.ಸುನೀತಾ.ಸಿ.ಎನ್ ಕಲಿಕೆ ಮತ್ತು ಕಲಿಕಾರ್ಥಿ–ಶೈಕ್ಷಣಿಕ ಮನೋವಿಜ್ಞಾನ–ಶೃತಿಲೋಕ ಪ್ರಕಾಶನ 2014
8. John W.Santrock University of Texas at Dallas - Adolescence TATA McGRAW – HILL EDITION (2011)


*********************

# ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ

## ಘಟಕ 5 : ವಿಕಾಸ ಹಂತಗಳು–ಬೆಳವಣಿಗೆ ಪ್ರಕ್ರಿಯೆಯೊಂದಿಗಿನ ವಿಕಾಸಾತ್ಮಕ ಕಾರ್ಯಗಳು ಶಿಶು ಹಂತದಿಂದ ಅಂತಿಮ ಹದಿಹರೆಯದ ಹಂತ

**ಘಟಕದ ರಚನೆ**


1.5.1. ಕಲಿಕಾ ಉದ್ದೇಶಗಳು

1.5.2. ಪೀಠಿಕೆ

1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.5.3.1. ಶಿಶುಹಂತ ಮತ್ತು ಬಾಲ್ಯಾವಸ್ಥೆಯ ವಿಕಾಸಾತ್ಮಕ ಕಾರ್ಯಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.5.3.2. ಹದಿಹರೆಯದ ಪೂರ್ವ ಹಂತ  ಮತ್ತು ಹದಿಹರೆಯದ ವಿಕಾಸಾತ್ಮಕ ಕಾರ್ಯಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.5.3.3. ಅಂತಿಮ ಹದಿಹರೆಯದ ಹಂತದ ವಿಕಾಸಾತ್ಮಕ ಕಾರ್ಯಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1.5.4. ಸಾರಾಂಶಿಸೋಣ

1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

1.5.6. ಘಟಕಾಂತ್ಯ ಅಭ್ಯಾಸಗಳು

1.5.7. ಪರಾಮರ್ಶನ ಸೂಚಿ


## 1.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ವಿಕಾಸಾತ್ಮಕ ಕಾರ್ಯಗಳ ಅರ್ಥವನ್ನು ವಿವರಿಸುವರು;
- ವಿಕಾಸಾತ್ಮಕ ಕಾರ್ಯಗಳ ಪ್ರಾಮುಖ್ಯತೆಯನ್ನು ಸಮರ್ಥಿಸುವರು;
- ವಿಕಾಸದ ವಿವಿಧ ಹಂತಗಳ ಜೊತೆಯಲ್ಲಿನ ವಿಕಾಸಾತ್ಮಕ ಕಾರ್ಯಗಳನ್ನು ಗುರುತಿಸುವರು;
- ಸಂಜ್ಞಾನಾತ್ಮಕ ವಲಯದಲ್ಲಿನ ವಿಕಾಸಾತ್ಮಕ ಕಾರ್ಯಗಳನ್ನು ಏರಿಕೆಯ ಕ್ರಮದಲ್ಲಿ ಪತ್ತೆಹಚ್ಚುವರು;
- ಭಾವವಲಯದಲ್ಲಿನ ವಿಕಾಸಾತ್ಮಕ ಕಾರ್ಯಗಳನ್ನು ಏರಿಕೆಯ ಕ್ರಮದಲ್ಲಿ ನಮೂದಿಸುವರು; ಮತ್ತು
- ನೈತಿಕ ವಿಕಾಸದಲ್ಲಿ ಕಂಡುಬರುವ ವಿಕಾಸಾತ್ಮಕ ಕಾರ್ಯಗಳಿಗೆ ನಿದರ್ಶನಗಳನ್ನು ನೀಡುವರು.

## 1.5.2. ಪೀಠಿಕೆ

ನಮ್ಮ ದೈನಂದಿನ ಜೀವನದಲ್ಲಿ ಹಲವಾರು ರೀತಿಯ ಜನರನ್ನು ನಾವು ಭೇಟಿಮಾಡುತ್ತೇವೆ, ಮಾತನಾಡುತ್ತೇವೆ ಮತ್ತು ನಮ್ಮ ಸುತ್ತಮುತ್ತಲಿನ ಸಮಾಜದೊಡನೆ ಬೆರೆತುಹೋಗಿರುತ್ತೇವೆ. ಇದು ನಿಮಗೆ ಗೊತ್ತೇ ಇದೆ. ಈ ಸಮಾಜವು ಪ್ರತಿಯೊಬ್ಬ ವ್ಯಕ್ತಿಯಿಂದಲೂ ಏನನ್ನೋ ನಿರೀಕ್ಷಿಸುತ್ತದೆ. ಅದು ಉತ್ತಮ ನಡವಳಿಕೆಯಾಗಿರಬಹುದು, ಇಲ್ಲವೇ ಶಕ್ತಿ–ಸಾಮರ್ಥ್ಯಗಳಾಗಿರಬಹುದು. ಈ ಸಾಮಾಜಿಕ ನಿರೀಕ್ಷೆಗಳೇ ಒಟ್ಟಾರೆಯಾಗಿ ಸಾಮಾಜಿಕ ನೀತಿ–ನಿಯಮಾವಳಿಗಳಾಗಿ ರೂಪುಗೊಳ್ಳುತ್ತವೆ. ವ್ಯಕ್ತಿಯೊಬ್ಬನ ಕಾರ್ಯನಿರ್ವಹಣೆ ಮತ್ತು ಆದರ್ಶ ನಡವಳಿಕೆಯ ಅಳತೆಗೋಲಾಗಿ ಈ ಸಾಮಾಜಿಕ ನೀತಿನಿಯಮಾವಳಿಗಳು ಪಾತ್ರವಹಿಸುತ್ತವೆ. ಇವನ್ನೇ ಮನೋವೈಜ್ಞಾನಿಕವಾಗಿ ವಿಕಾಸಾತ್ಮಕ ಕಾರ್ಯಗಳೆಂದು ಗುರುತಿಸಲಾಗಿದೆ. ರಾಬರ್ಟ್ ಹ್ಯಾವಿಗರ್ಸ್ಟ್ ಹೇಳುವಂತೆ, ವಿಕಾಸಾತ್ಮಕ ಕಾರ್ಯಗಳೆಂದರೆ, ಒಂದು ದತ್ತ ವಯೋಮಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಗಳಿಸಿಕೊಂಡಿರಬೇಕಾದ ನಿಗದಿತ ಸಾಮರ್ಥ್ಯಗಳು. ಈ ಘಟಕದಲ್ಲಿ ನೀವು ಈ ವಿಕಾಸಾತ್ಮಕ ಕಾರ್ಯಗಳ ಅರ್ಥ ಮತ್ತು ಅವುಗಳ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವಿರಿ.

## 1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.5.3.1. ಶೈಶವ ಮತ್ತು ಬಾಲ್ಯಾವಸ್ಥೆಯ ವಿಕಾಸಾತ್ಮಕ ಕಾರ್ಯಗಳು

ವಿಕಾಸಾತ್ಮಕ ಕಾರ್ಯಗಳನ್ನು ಕುರಿತು ಪ್ರತಿಪಾದಿಸಿದ ಮೊದಲ ವ್ಯಕ್ತಿ ರಾಬರ್ಟ್ ಹ್ಯಾವಿಗರ್ಸ್ಟ್. ವಿಕಾಸಾತ್ಮಕ ಕಾರ್ಯಗಳು ಸಮಾಜದಿಂದ ನಿಗದಿತವಾದ ವಯೋಮಾನಕ್ಕೆ ಅನುಗುಣವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರಬೇಕಾದ ನಿರ್ದಿಷ್ಟ ವರ್ತನೆಗಳು ಮತ್ತು ಸಾಮರ್ಥ್ಯಗಳಾಗಿರುತ್ತವೆ. ವ್ಯಕ್ತಿಯೊಬ್ಬನು ಈ ನಿಗದಿತ ಸಾಮರ್ಥ್ಯಗಳನ್ನು, ವರ್ತನೆಗಳನ್ನು ಗಳಿಸಿಕೊಂಡಿದ್ದರೆ, ಆತನು ಸುಲಲಿತವಾಗಿ ಸಾಮಾಜಿಕ ಜೀವನವನ್ನು ನಡೆಸಬಲ್ಲನು. ಇದು ವ್ಯಕ್ತಿಯೊಬ್ಬನು ತನ್ನ ಸಮಾಜಕ್ಕೆ ಅತ್ಯಂತ ದಕ್ಷತೆಯಿಂದಲೂ ಮತ್ತು ಪರಿಣಾಮಕಾರಿಯಾಗಿಯೂ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ತಂದುಕೊಡುವುದು. ವಿಕಾಸಾತ್ಮಕ ಕಾರ್ಯಗಳು ಒಂದೇ ರೀತಿಯಾಗಿರದೆ, ಕಾಲಕ್ಕೆ ತಕ್ಕಂತೆ ಮತ್ತು ಸಾಮಾಜಿಕ ಬೇಡಿಕೆಗೆ ಅನುಗುಣವಾಗಿ ಬದಲಾಗುವುವು. ರಾಬರ್ಟ್‌ಹ್ಯಾವಿಗರ್ಸ್ಟ್ ಹೇಳುವಂತೆ, "ವಿಕಾಸಾತ್ಮಕ ಕಾರ್ಯಗಳು ವ್ಯಕ್ತಿಯೊಬ್ಬನ ಬದುಕಿನಲ್ಲಿ ಒಂದು ಗೊತ್ತಾದ ಕಾಲದಲ್ಲಿ ಉಗಮಗೊಳ್ಳುವುವು ಮತ್ತು ಇವುಗಳನ್ನು ಯಶಸ್ವಿಯಾಗಿ ಗಳಿಸಿಕೊಂಡಾಗ, ಸಂತೋಷ ಮತ್ತು ಮುಂದಿನ ಕಾರ್ಯಗಳಲ್ಲಿ ಸಫಲತೆ ಕಾಣುವುದು; ಯಶಸ್ವಿಯಾಗಿ ಗಳಿಸಿಕೊಳ್ಳದೇ ಹೋದಾಗ, ದುಃಖ, ಮತ್ತು ಮುಂದಿನ ಕಾರ್ಯಗಳಲ್ಲಿ ಅಸಫಲತೆ ಕಂಡುತೊಂದರೆಗಳನ್ನುಭವಿಸಬೇಕಾಗುವುದು".

ಗ್ಯಾರಿಸನ್, ಕಿಂಗ್‌ಸ್ಟನ್ ಮತ್ತು ಬರ್ನಾರ್ಡ್ (1977) ಇವರುಗಳು ವಿಕಾಸಾತ್ಮಕ ಕಾರ್ಯಗಳ ಮುಖ್ಯ ಲಕ್ಷಣಗಳನ್ನು ಗುರುತಿಸಿದ್ದಾರೆ. ಅವುಗಳು ಈ ಕೆಳಕಂಡಂತೆ ಇವೆ:

- ವಿಕಾಸಾತ್ಮಕ ಕಾರ್ಯಗಳು ತೃಪ್ತಿಕರವಾಗಿ, ಸಮಗ್ರವಾಗಿ ಸಾಮಾಜಿಕ ಹೊಂದಾಣಿಕೆಯನ್ನು ಮಾಡಿಕೊಳ್ಳಲು ವ್ಯಕ್ತಿಯೊಬ್ಬನಲ್ಲಿರಬೇಕಾದ ಅಗತ್ಯಗಳೇ ಆಗಿರುತ್ತವೆ.
- ವಿಕಾಸಾತ್ಮಕ ಕಾರ್ಯಗಳನ್ನು ಸಕಾಲದಲ್ಲಿ ಸರಿಯಾಗಿ ಕಲಿಯಲೇಬೇಕು, ಇಲ್ಲದಿದ್ದರೆ ಪರಿಣಾಮ ವಿಪರೀತವಾಗುತ್ತದೆ.
- ಒಂದೇ ಸಲಕ್ಕೆ, ಹಲವಾರು ಕಾರ್ಯಗಳನ್ನು ಕಲಿಯುವುದು ಸಾಧ್ಯವಿದ್ದು, ಹಾಗೆಯೇ ಒಂದು

ಕಾರ್ಯದ ಸಫಲತೆಯು ಇನ್ನೂ ಹಲವಾರು ಕಾರ್ಯಗಳ ಕಲಿಕೆಗೆ ಮತ್ತು ಸಾಧನೆಗೆ ಪೂರಕವಾಗಿರುತ್ತದೆ.

- ವಿಕಾಸಾತ್ಮಕ ಕಾರ್ಯಗಳ ವ್ಯಾಪ್ತಿಯು ವ್ಯಕ್ತಿತ್ವದ ವಿವಿಧ ವಲಯಗಳಾದ, ಕೌಶಲ, ಜ್ಞಾನ, ದೃಷ್ಟಿಕೋನಗಳು ಮತ್ತು ವೈವಿಧ್ಯಮಯವಾದ ಕಲಿಕೆಯನ್ನು ಆವರಿಸಿಕೊಂಡಿದೆ.
- ವಿಕಾಸಾತ್ಮಕ ಕಾರ್ಯಗಳು ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ.

ಮೇಲೆ ಹೇಳಿದ ಎಲ್ಲ ಕಾರಣಗಳಿಂದಾಗಿ ವಿಕಾಸಾತ್ಮಕ ಕಾರ್ಯಗಳನ್ನು ಬೆಳೆಯುತ್ತಿರುವ ಮಕ್ಕಳ ಮಾರ್ಗದರ್ಶಕ ಮಾಪನಿ ಎಂದೇ ಕರೆಯಲಾಗುವುದು. ಒಂದು ದತ್ತ ವಯೋಮಾನದಲ್ಲಿ ಒಂದು ಮಗುವು ಏನೆಲ್ಲಾ ಕೌಶಲಗಳನ್ನು, ಜ್ಞಾನವನ್ನು ಮತ್ತು ಸಾಮರ್ಥ್ಯಗಳನ್ನು ಹೊಂದಿರಲೇಬೇಕೆಂಬ ಚಿತ್ರಣವನ್ನು ವಿಕಾಸಾತ್ಮಕ ಕಾರ್ಯಗಳು ನೀಡುತ್ತವೆ. ಇದು ಸಾಮಾಜಿಕ ಅಪೇಕ್ಷೆ ಅಥವಾ ನಿರೀಕ್ಷೆಯೂ ಹೌದು. ಇದರಿಂದಾಗಿ ವಿಕಾಸ ಪ್ರಕ್ರಿಯೆಯು ಸರಿಯಾದ ಮಾರ್ಗದಲ್ಲಿ ಸಾಗುತ್ತಿದೆಯೇ ಅಥವಾ ಇಲ್ಲವೇ ಎಂದು ತಾಳೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಶಿಕ್ಷಣಕ್ಷೇತ್ರದಲ್ಲೂ ವಿಕಾಸಾತ್ಮಕ ಕಾರ್ಯಗಳಿಗೆ ಗುರುತರವಾದ ಸ್ಥಾನವಿದೆ. ಶಿಕ್ಷಣತಜ್ಞರು ಮತ್ತು ಅನುಭವಿ ಶಿಕ್ಷಕರು ಪಠ್ಯಕ್ರಮದ ವಿನ್ಯಾಸವನ್ನು ರಚಿಸುವಾಗ, ಶೈಕ್ಷಣಿಕ ಗುರಿ, ಉದ್ದೇಶಗಳನ್ನು ನಿರ್ಧರಿಸುವಾಗ ವಿಕಾಸಾತ್ಮಕ ಕಾರ್ಯಗಳ ಬುನಾದಿಯನ್ನು ಆಧರಿಸುತ್ತಾರೆ. ಒಂದು ರೀತಿಯಲ್ಲಿ ವಿಕಾಸಾತ್ಮಕ ಕಾರ್ಯಗಳು ಪ್ರಸ್ತುತವು ಹೇಗೆ ಇರಬೇಕೆಂದು ಮತ್ತು ಏನಾಗಬೇಕು ಎಂಬುದನ್ನು ಪ್ರತಿನಿಧಿಸುವುದೇ ಅಲ್ಲದೆ ನಮ್ಮ ಭವಿಷ್ಯವು ಹೇಗಿರಬೇಕು, ಮುಂದಿನ ದಿನಗಳಲ್ಲಿ ಏನೇನು ಆಗಬೇಕಿದೆ ಎಂಬುದರ ನಿರ್ದೇಶನವನ್ನೂ ನೀಡುತ್ತವೆ.

ಗ್ಯಾರಿಸನ್‌ರವರು ಬಾಲ್ಯಹಂತದಲ್ಲಿ ಕಂಡುಬರುವ ವಿಕಾಸಾತ್ಮಕ ಕಾರ್ಯಗಳ ವಿವರಣೆಯನ್ನು ಈ ಕೆಳಕಂಡಂತೆ ಪ್ರತಿಪಾದಿಸಿದ್ದಾರೆ:

**ಪೂರ್ವಬಾಲ್ಯಹಂತ:** ಮಾತನಾಡುವ ಸಾಮರ್ಥ್ಯದ ಗಳಿಕೆ, ಲಿಂಗತ್ವವನ್ನು ಗುರುತಿಸುವುದು ಮತ್ತು ಅದಕ್ಕೆ ತಕ್ಕಂತೆ ನಿರ್ವಹಣೆಗಳನ್ನು ಮಾಡುವುದು ಹಾಗೂ ಲಿಂಗಾಧಾರಿತ ವಿಭೇದನಗಳನ್ನು ಅರಿತಿರುವುದು, ಪ್ರೀತಿ ಮತ್ತು ವಿಶ್ವಾಸವನ್ನು ಅಭಿವ್ಯಕ್ತಿಸುವುದು ಮತ್ತು ಇತರರು ಪ್ರೀತಿ ಮತ್ತು ವಿಶ್ವಾಸವನ್ನು ತೋರಿದಾಗ ಅದನ್ನು ಸಮ್ಮತಿಸುವುದು ಹಾಗೂ ಕೊನೆಯದಾಗಿ ಆದರೆ, ಅತಿ ಮುಖ್ಯವಾಗಿ ಹೇಳಬೇಕಾದುದೇನೆಂದರೆ, ತತ್ವಗಳ ಮತು ನಿಯಮಗಳ ಕಲಿಕೆ ಮತ್ತು ಅವುಗಳ ಸ್ವಾಂಗೀಕರಣ.

**ಉತ್ತರಬಾಲ್ಯಹಂತ:** ಕ್ರೀಡಾ ಕೌಶಲಗಳ ಗಳಿಕೆ, ತರಗತಿಯ ಸಹಪಾಠಿಗಳೊಡನೆ ಮತ್ತು ತಂಡದವರೊಡನೆ ಹೊಂದಾಣಿಕೆ, ಓದುವಿಕೆ, ಬರಹ ಮತ್ತು ಗಣಿತದ ಕಾರ್ಯನಿರ್ವಹಣೆಗಳು, ಕಾಲ, ದೇಶ, ಗಾತ್ರ, ತೂಕ – ಇಂತಹ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವಿಕೆ, ಕಾರ್ಯ–ಕಾರಣ–ಪರಿಣಾಮಗಳ ಗ್ರಹಿಕೆ, ಮೌಲ್ಯಗಳ ಅಳವಡಿಕೆ, ಸ್ವಾವಲಂಬನೆ, ಪ್ರಜಾಪ್ರಭುತ್ವ–ಮೌಲ್ಯಗಳನ್ನು ಮತ್ತು ಧೋರಣೆಗಳನ್ನು ಅಳವಡಿಸಿಕೊಂಡು ವಿಕಾಸಹೊಂದುವುದು.

ವಿಕಾಸಾತ್ಮಕ ಕಾರ್ಯಗಳನ್ನು ಮೈಲಿಗಲ್ಲುಗಳೆಂದೂ ಕರೆಯಲಾಗುವುದು. ವಿಕಾಸಾತ್ಮಕ ಮೈಲಿಗಲ್ಲುಗಳು ಸಾಮರ್ಥ್ಯಗಳಲ್ಲದೇ ಬೇರೇನಲ್ಲ. ಈ ಸಾಮರ್ಥ್ಯಗಳನ್ನು ಸರಿಸುಮಾರು ಎಲ್ಲಾ ಮಕ್ಕಳು ಒಂದು ದತ್ತ ವಯೋಮಾನಕ್ಕೆ ಸಂಬಂಧಪಟ್ಟಂತೆ ಅಭಿವ್ಯಕ್ತಿಸಬಲ್ಲವರಾಗಿರುತ್ತಾರೆ. ಇವು ಭೌತಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಸಂಜ್ಞಾನಾತ್ಮಕ ಹಾಗೂ ಸಂವಹನ ಕೌಶಲಗಳನ್ನು ಕಾಯಕೌಶಲಗಳಾದ, ನಡೆಯುವುದು, ಓಡುವುದು, ಇನ್ನೊಬ್ಬರೊಡನೆ ಭಾವನೆಗಳನ್ನು, ಅನಿಸಿಕೆಗಳನ್ನು ಹಂಚಿಕೊಳ್ಳುವುದು, ಪರಿಚಿತವಾದ ಶಬ್ದಗಳನ್ನು

ಗುರುತಿಸುವುದು ಮತ್ತು ಮಾತುಗಾರಿಕೆ ಇತ್ಯಾದಿಗಳನ್ನೂ ಒಳಗೊಂಡಿರುವುದು. ಬೇಲೆ ಅವರು ವಿವರಿಸಿರುವ ಕೆಳಗಿನ ಕೋಷ್ಟಕವನ್ನು ಗಮನಿಸಿ:

**ಮೈಲಿಗಲ್ಲುಗಳು – ಮೊದಲ 2 ವರ್ಷಗಳಲ್ಲಿನ ಸ್ಥೂಲ ಮತ್ತು ಸೂಕ್ಷ್ಮ ದೈಹಿಕ ಸಾಧನೆಗಳು**

| **ದೈಹಿಕ ಕೌಶಲಗಳು** | **ಸಾಧಿಸುವ ಸರಾಸರಿ ವಯಸ್ಸು** | **ಸುಮಾರು 90% ಮಕ್ಕಳು ಸಾಧಿಸುವ ವಯೋಮಾನ** |
|---|---|---|
| ಮಗುವನ್ನು ಮೇಲೆತ್ತಿ ಹಿಡಿದಾಗ ತಲೆಯನ್ನು ಸ್ಥಿರವಾಗಿ ನೇರವಾಗಿ ನಿಲ್ಲಿಸುವುದು | 6 ವಾರಗಳು | 3 ವಾರಗಳಿಂದ 4 ತಿಂಗಳು |
| ಪ್ರೋತ್ಸಾಹಿಸಿದರೆ, ತೋಳುಗಳನ್ನು ಎತ್ತುತ್ತಾ ತನ್ನನ್ನೇ ಮೇಲೆತ್ತಿಕೊಳ್ಳಲು ಪ್ರಯತ್ನಿಸುವುದು | 2 ತಿಂಗಳು | 3 ವಾರಗಳಿಂದ 4 ತಿಂಗಳು |
| ಪಾರ್ಶ್ವದಿಂದ ಬೆನ್ನಮೇಲೆ ಉರುಳುವುದು | 2 ತಿಂಗಳು | 3 ವಾರಗಳಿಂದ 5 ತಿಂಗಳು |
| ಘನಗಳನ್ನು ಹಿಡಿಯುವುದು | 3 ತಿಂಗಳು 3 ವಾರಗಳು | 2 ರಿಂದ 7 ತಿಂಗಳು |
| ಬೆನ್ನಮೇಲಿಂದ ಪಾರ್ಶ್ವಕ್ಕೆ ಉರುಳುವುದು | ನಾಲ್ಕೂವರೆ ತಿಂಗಳು | 2 ರಿಂದ 7 ತಿಂಗಳು |
| ಒಬ್ಬನೇ ಕುಳಿತುಕೊಳ್ಳುವುದು | 7 ತಿಂಗಳು | 5 ರಿಂದ 9 ತಿಂಗಳು |
| ತೆವಳುವುದು | 7 ತಿಂಗಳು | 5 ರಿಂದ 11 ತಿಂಗಳು |
| ನಿಲ್ಲಲು ಪ್ರಯತ್ನಿಸುವುದು | 8 ತಿಂಗಳು | 5 ರಿಂದ 11 ತಿಂಗಳು |
| ಒಬ್ಬನೇ ನಿಲ್ಲುವುದು | 11 ತಿಂಗಳು | 9 ರಿಂದ 16 ತಿಂಗಳು |
| ತಾನೇ ನಡೆಯುವುದು | 11 ತಿಂಗಳು 3 ವಾರಗಳು | 9 ರಿಂದ 17 ತಿಂಗಳು |
| ಎರಡು ಘನಗಳಿಂದ ಕಂಬಸಾಲುಗಳನ್ನು ಮಾಡುವುದು | 11 ತಿಂಗಳು 3 ವಾರಗಳು | 10 ರಿಂದ 19 ತಿಂಗಳು |
| ವೇಗವಾಗಿ ರಭಸದಿಂದ ಗೀಚುವುದು | 14 ತಿಂಗಳು | 10 ರಿಂದ 21 ತಿಂಗಳು |
| ಮೆಟ್ಟಿಲುಗಳನ್ನು ಒಬ್ಬರ ಸಹಾಯದಿಂದ ಹತ್ತುವುದು | 16 ತಿಂಗಳು | 12 ರಿಂದ 23 ತಿಂಗಳು |
| ಜಿಗಿಯುವುದು | 23 ತಿಂಗಳು 2 ವಾರಗಳು | 17 ರಿಂದ 30 ತಿಂಗಳು |
| ತುದಿಗಾಲಲ್ಲಿ ನಡೆಯುವುದು | 25 ತಿಂಗಳು | 17 ರಿಂದ 30 ತಿಂಗಳು |

ಸೂಚನೆ: ಈ ಮೈಲಿಗಲ್ಲುಗಳು ಒಟ್ಟಾರೆ ವಯೋಮಾನದ ಪ್ರವೃತ್ತಿಯನ್ನು ಸೂಚಿಸುತ್ತವೆ. ಇವುಗಳನ್ನು ತಲುಪುವ ನಿರ್ದಿಷ್ಟ ವಯಸ್ಸಿನಲ್ಲಿ ವ್ಯಕ್ತಿ ಭಿನ್ನತೆಗಳು ಇರುತ್ತವೆ.

**ಮೈಲುಗಲ್ಲುಗಳು – ಸ್ಪರ್ಶ, ರುಚಿ, ವಾಸನೆ ಮತ್ತು ಶ್ರವಣೇಂದ್ರಿಯಗಳ ವಿಕಾಸಾತ್ಮಕ ಕಾರ್ಯಗಳು**

| ವಯಸ್ಸು | ಸ್ಪರ್ಶ | ರುಚಿ ಮತ್ತು ವಾಸನೆ | ಶ್ರವಣ |
|---|---|---|---|
| ಹುಟ್ಟು 0 ಯಿಂದ 5/ 6 ತಿಂಗಳು | ಸ್ಪರ್ಶ, ನೋವಿಗೆ ಪ್ರತಿಕ್ರಿಯಿಸುತ್ತಾರೆ | ಸಿಹಿ, ಹುಳಿ ಮತ್ತು ಕಹಿಯನ್ನು ಕಂಡುಹಿಡಿಯುವರು ಮತ್ತು ಸಿಹಿಯನ್ನು ಇಷ್ಟಪಡುವರು. ವಾಸನೆಗಳನ್ನು ಗುರುತಿಸುವರು ಸಿಹಿ ಆಹಾರ ಖಾದ್ಯಗಳನ್ನು ಇಷ್ಟಪಡುವರು. ತಾಯ ಗರ್ಭದಲ್ಲಿನ ಆಮ್ನಿಯಾಟಿಕ್ ದ್ರವವನ್ನು, ಎದೆಹಾಲಿನ ವಾಸನೆಯನ್ನು ಇಷ್ಟಪಡುವರು. | ಕೆಲವು ಶಬ್ದವಿನ್ಯಾಸಗಳನ್ನು ಗುರುತಿಸುವರು. ಅಪರಿಚಿತ ಧ್ವನಿಗಳಿಗಿಂತ ಅಮ್ಮನ ಧ್ವನಿಯನ್ನು ಕೇಳಲು ಬಯಸುವರು. ಪರಭಾಷೆಗಿಂತ ತಾಯ್ನುಡಿಗೆ ಮನಸ್ಸನ್ನು ನೀಡುವರು. ಶಬ್ದ ಬಂದ ಕಡೆಗೆ ತಲೆ, ಕಣ್ಣನ್ನು ತಿರುಗಿಸುವರು |
| 1 ರಿಂದ 6 ತಿಂಗಳು | ಸಿಕ್ಕಿದ್ದನ್ನೆಲ್ಲಾ ಪದೇ ಪದೇ ಬಾಯಿಗೆ ಹಾಕಿಕೊಳ್ಳಲು ಪ್ರಯತ್ನಿಸುವರು | ಸಪ್ಪೆ ನೀರಿಗಿಂತ ಉಪ್ಪಿನ ರುಚಿ ಇಷ್ಟಪಡುವರು.<br>ಅನುಭವಗಳಿಂದ ತನ್ನ ರುಚಿಯನ್ನು ಆದ್ಯತೆಯಿಂದ ಬದಲಾಯಿಸಿ ಕೊಳ್ಳುವರು. | ಮನುಷ್ಯರ ಧ್ವನಿಯನ್ನು ಕೇಳಲು ಇಷ್ಟಪಡುವರು.<br>ಶಬ್ದ ಎಲ್ಲಿಂದ ಬರುತ್ತಿದೆ ಎಂದು ಗುರುತಿಸುವರು.<br>ತನ್ನದೇ ಭಾಷೆಯ ಒತ್ತಿ ಉಚ್ಚರಿಸುವ ಪದಗಳಿಗೆ ಹೆಚ್ಚಿನ ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳುವರು. |
| 7 ರಿಂದ 12 ತಿಂಗಳು | | | ಮಧುರ ಧ್ವನಿಗಳನ್ನು ಗುರುತಿಸುವರು, ಅರ್ಥಮಾಡಿಕೊಳ್ಳಲು ಅಗತ್ಯವಾದ ಶಬ್ದದ ಘಟಕಗಳನ್ನು ಪತ್ತೆಹಚ್ಚುವರು, ಪರಿಚಿತ ಶಬ್ದಗಳನ್ನು, ಅವುಗಳನ್ನು ಬಳಸುವ ಕ್ರಮಗಳನ್ನು ಪರಿಚಯಿಸಿ ಕೊಳ್ಳುವರು |

ಸೂಚನೆ: ಈ ಮೈಲಿಗಲ್ಲುಗಳು ಒಟ್ಟಾರೆ ವಯೋಮಾನದ ಪ್ರವೃತ್ತಿಯನ್ನು ಸೂಚಿಸುತ್ತವೆ. ಇವುಗಳನ್ನು ತಲುಪುವ ನಿರ್ದಿಷ್ಟ ವಯಸ್ಸಿನಲ್ಲಿ ವ್ಯಕ್ತಿ ಭಿನ್ನತೆಗಳು ಇರುತ್ತವೆ.

## ಮೈಲುಗಲ್ಲುಗಳು-ಶೈಶವದಲ್ಲಿನ ದೃಶ್ಯವಿಕಾಸಾತ್ಮಕ ಕಾರ್ಯಗಳು

| ವಯಸ್ಸು | ವರ್ಣಗಳ ಗ್ರಹಿಸುವಿಕೆ ಮತ್ತು ಕೇಂದ್ರೀಕರಿಸುವಿಕೆ | ಗ್ರಹಿಸುವಿಕೆಯ ಆಳ | ಗ್ರಹಿಸುವಿಕೆಯ ವಿನ್ಯಾಸ | ವಸ್ತುಗಳ ಗ್ರಹಿಸುವಿಕೆ |
|---|---|---|---|---|
| 0 ಯಿಂದ 1 ತಿಂಗಳು | ದೃಶ್ಯಗಳನ್ನು 20/600 ರಷ್ಟು ಸ್ಪಷ್ಟತೆಯಿಂದ ಗ್ರಹಿಸುವುದು | ಚಲನೆಗೆ ಪ್ರತಿಕ್ರಿಯಿಸುವುದು, ಚಲಿಸುವ ವಸ್ತು ಮುಖದ ಹತ್ತಿರ ಬಂದಾಗ ಕಣ್ಣು ಮುಚ್ಚುವುದು (ಪರಾವರ್ತನ ಪ್ರತಿಕ್ರಿಯೆ) | ಆಕರ್ಷಕ ಮುಖಗಳನ್ನು ಆದ್ಯತೆಯಿಂದ ಬಯಸುವುದು | ———————— |
| 2 ರಿಂದ 3 ತಿಂಗಳು | ಹೆಚ್ಚು ಕೇಂದ್ರೀಕರಿಸುವುದು, ಕ್ರಮಬದ್ಧತೆಯಿಂದ ಗ್ರಹಿಸುವುದು | ಎರಡೂ ಕಣ್ಣಿನ ದೃಷ್ಟಿಯನ್ನು ಏಕೀಕರಿಸಿ ಗ್ರಹಿಸುವುದು | ಸರಳ ರಚನೆಯನ್ನು ಗ್ರಹಿಸುವುದು, ಹೆಣ್ಣು, ಗಂಡು ಮುಖಗಳನ್ನು ಗುರುತಿಸುವುದು, ಅಮ್ಮನ ಮುಖವನ್ನು ಗುರುತಿಸುವುದು. | ಗೊತ್ತಾದ ಸ್ಥಳಾವಕಾಶದಲ್ಲಿನ ಚಲಿಸುವ ವಸ್ತುಗಳನ್ನು ಗ್ರಹಿಸುವುದು ಮತ್ತು ಗುರುತಿಸುವುದು |
| 4 ರಿಂದ 5 ತಿಂಗಳು | ವರ್ಣಗಳ ವ್ಯತ್ಯಾಸ ಗುರುತಿಸುವುದು | ಚಿತ್ರರೂಪದ ದೃಶ್ಯಗಳಿಗೆ ಪ್ರತಿಕ್ರಿಯಿಸುವುದು | ಸರಳ ರಚನೆಗಳ ಸೀಮಾರೇಖೆಯನ್ನು ಗುರುತಿಸುವುದು ಭಾವನಾತ್ಮಕವಾಗಿ ಧನಾತ್ಮಕ ಮತ್ತು ಋಣಾತ್ಮಕ ಅಭಿವ್ಯಕ್ತಿಗಳನ್ನು ಗುರುತಿಸುವುದು | ವಸ್ತುಗಳ ಚಲನಾ ಪಥವನ್ನು ಗುರುತಿಸುವುದು, ಮುಂದಿನ ಚಲನೆಯನ್ನು ವಾಸ್ತವವಾಗಿ ನೋಡದಿದ್ದರೂ ಊಹಿಸಿ ಗ್ರಹಿಸುವುದು. |
| 6 ರಿಂದ 9 ತಿಂಗಳು | ದೃಶ್ಯ ಚಟುವಟಿಕೆಗಳು 20/80 ರಷ್ಟು ಸ್ಪಷ್ಟತೆಯನ್ನು ಹೊಂದುವುವು, ಚಲಿಸುವ ವಸ್ತುಗಳನ್ನು ಚೆನ್ನಾಗಿ ಹಿಡಿಯಲು ಪ್ರಯತ್ನಿಸುವುದು. | ಚಿತ್ರರೂಪದ ದೃಶ್ಯಗಳಿಗೆ ಪ್ರತಿಕ್ರಿಯಿಸುವುದರ ಗುಣಾತ್ಮಕ ಹೆಚ್ಚಳ | ಮುಖದ ಭಾವನೆಗಳನ್ನು ಗ್ರಹಿಸುವಿಕೆಯಲ್ಲಿ ಹೆಚ್ಚಳ ಮತ್ತು ಭಾವನೆಗಳನ್ನು ಪೂರ್ಣತೆಯಿಂದ ಅರ್ಥಮಾಡಿಕೊಳ್ಳುವುದು | ———————— |
| 10 ರಿಂದ 12 ತಿಂಗಳು | ———————— | ———————— | ಪತ್ತೆಹಚ್ಚುವ ಚಟುವಟಿಕೆಗಳಲ್ಲಿ ಹೆಚ್ಚಳ, ಪರಿಚಿತ ವಸ್ತುಗಳನ್ನು ಗುರುತಿಸುವುದು, ಅರ್ಧ ಚಿತ್ರಗಳನ್ನು ಗ್ರಹಿಸಲು ಪ್ರಯತ್ನಿಸುವುದು. | ———————— |

ಶೈಶವ ಮತ್ತು ಬಾಲ್ಯಹಂತದಲ್ಲಿ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ದೈಹಿಕ ಅನುಪಾತವು ಒಂದೇ ರೀತಿಯಾಗಿರುತ್ತದೆ. ಬಾಲ್ಯಹಂತದಲ್ಲಿ ಒಟ್ಟಾರೆ ದೈಹಿಕ ಗಾತ್ರದಲ್ಲಿ ಹೆಚ್ಚಳವಾಗುವುದು. ಇಲ್ಲಿ ಎರಡು ಮುಖ್ಯ ಲಕ್ಷಣಗಳನ್ನು ಕಾಣಬಹುದು. ಅದೇಂದರೆ, ಶಿರೋ–ಪಾದಾಭಿಮುಖ ಮತ್ತು ಕೇಂದ್ರದಿಂದ ಪರಿಧಿಯತ್ತ ವಿಕಾಸದ ಪ್ರಗತಿಯು ಕಂಡುಬರುವುದು. ಈ ಕೆಳಗಿನ ಪಟ್ಟಿಯಲ್ಲಿ ಬಾಲ್ಯಹಂತದಲ್ಲಿ ಗುರುತಿಸಲಾದ ವಿಕಾಸಾತ್ಮಕ ಕಾರ್ಯಗಳನ್ನು ನೀವು ನೋಡುವಿರಿ:

**ಮೈಲುಗಲ್ಲುಗಳು–ಪೂರ್ವಬಾಲ್ಯ ಮತ್ತು ಮಧ್ಯಬಾಲ್ಯ ಹಂತದಲ್ಲಿನ ಸ್ಥೂಲವಾದ ದೈಹಿಕ ವಿಕಾಸಾತ್ಮಕ ಕಾರ್ಯಗಳು**

| **ವಯಸ್ಸು** | **ಸ್ಥೂಲ ದೈಹಿಕ ವಿಕಾಸಾತ್ಮಕ ಕಾರ್ಯಗಳು** |
|---|---|
| 2 ರಿಂದ 3 ವರ್ಷಗಳು | ಲಯಬದ್ಧವಾಗಿ ನಡೆಯುವುದು, ಜೋರಾಗಿ ನಡೆಯುವುದು, ಓಡುವುದು ಜಿಗಿಯುವುದು, ಹಾರುವುದು, ಎಸೆಯುವುದು ಮತ್ತು ಹಿಡಿಯುವುದು ಮತ್ತು ಇದಕ್ಕಾಗಿ ದೇಹದ ಎದೆಯ ಭಾಗದಿಂದ ಮೇಲ್ಪಟ್ಟಂತೆ ದೃಢವಾಗಿ ಬಳಸುವುದು.ಸವಾರಿ ಮಾಡುವ ಆಟಿಕೆಗಳನ್ನು ಕಾಲಿನಿಂದ ತಳ್ಳುವುದು ಮತ್ತು ಸ್ವಲ್ಪಮಟ್ಟಿಗೆ ಚಲಿಸುವ ಆಟಿಕೆಗಳ ಚುಕ್ಕಾಣಿಯ ನಿರ್ವಹಣೆ. |
| 3 ರಿಂದ4 ವರ್ಷಗಳು | ಮೆಟ್ಟಿಲುಗಳನ್ನು ಹತ್ತುವುದು, ಪರ್ಯಾಯ ಪಾದಗಳ ಬಳಕೆ, ಮೆಟ್ಟಿಲುಗಳನ್ನು ಇಳಿಯುವುದು, ಒಂದೇ ಕಾಲಿನಲ್ಲಿ ಚಲಿಸುವುದು (ಕುಂಟಾಬಿಲ್ಲೆ ಆಟ), ಹಾರುವುದು, ಜಿಗಿಯುವುದು, ದೇಹದ ಮೇಲ್ಭಾಗವನ್ನು ಸ್ಥಿರವಾಗಿರಿಸಿಕೊಂಡು ಎಸೆಯುವುದು, ಹಿಡಿಯುವುದು, ಮೂರು ಗಾಲಿ ಸೈಕಲ್ಲನ್ನು ತುಳಿಯುವುದು ಮತ್ತು ಓಡಿಸುವುದು. |
| 4 ರಿಂದ 5 ವರ್ಷಗಳು | ಪರ್ಯಾಯ ಪಾದಗಳನ್ನು ಬಳಸಿ ಮೆಟ್ಟಿಲನ್ನು ಇಳಿಯಬಲ್ಲರು, ಸರಳ ಮತು ಸಹಜವಾಗಿ ಓಡುವುದು, ಒಂದೇ ಪಾದದಿಂದ ಹೈ–ಜಂಪ್ ಮತ್ತು ಲಾಂಗ್–ಜಂಪ್ ಮಾಡುವುದು, ದೇಹವನ್ನು ತಿರುಗಿಸುತ್ತಾ ರಭಸದಿಂದ ಚೆಂಡನ್ನು ಎಸೆಯುವುದು ಮತ್ತು ಕಾಲಿಗೆ ಬಲಕೊಟ್ಟು ಕೈಗಳಿಂದ ಚೆಂಡನ್ನು ಹಿಡಿಯುವುದು, ಮೂರು ಗಾಲಿ ಸೈಕಲ್ಲನ್ನು ವೇಗವಾಗಿ ಆದರೆ ಸರಳವಾಗಿ ಓಡಿಸುವುದು. |
| 5 ರಿಂದ 6 ವರ್ಷಗಳು | ಓಡುವ ವೇಗದಲ್ಲಿ ಹೆಚ್ಚಳ, ಸೆಕೆಂಡಿಗೆ 12 ಅಡಿಗಳಷ್ಟು ಓಡುವರು, ಹಗ್ಗದಾಟ (ಸ್ಕಿಪ್ಪಿಂಗ್), ಪಾರ್ಶ್ವಜಿಗಿತ, ಇಡೀ ದೇಹವನ್ನು ಬಳಸಿಕೊಂಡು ಎಸೆಯುವ ಮತ್ತು ಹಿಡಿಯುವ ಕೌಶಲದಲ್ಲಿ ಪಕ್ವತೆ, 2 ಗಾಲಿ ಸೈಕಲ್ಲನ್ನು ಸಹಾಯದಿಂದ ಓಡಿಸುವಿಕೆ. |
| 7 ರಿಂದ 12 ವರ್ಷಗಳು | ಓಡುವ ವೇಗದಲ್ಲಿ ಹೆಚ್ಚಳ, ಸೆಕೆಂಡಿಗೆ 18 ಅಡಿಗಳಷ್ಟು ಓಡುವರು, ನಿರಂತರವಾಗಿ ತಪ್ಪಿಲ್ಲದೇ ಸ್ಕಿಪ್ಪಿಂಗ್ ಆಡುವರು, ಎತ್ತರ ಜಿಗಿತ–4 ರಿಂದ 12 ಇಂಚುಗಳಷ್ಟು, ಮತ್ತು ಉದ್ದ ಜಿಗಿತ 3ರಿಂದ 5 ಅಡಿಗಳಷ್ಟು, ಸಣ್ಣ ಚೆಂಡನ್ನು ಹೆಚ್ಚುದೂರದಿಂದ ಕೌಶಲಪೂರ್ವಕವಾಗಿ ಹಿಡಿಯುವರು, ಬ್ಯಾಟಿಂಗ್ ಕೌಶಲ ಉತ್ತಮವಾಗಿರುವುದು, ವೇಗ, ನಿಖರತೆ ಹೆಚ್ಚುವುದು, ಸರಳವಾದ ಅಥವಾ ಲೀಲಾಜಾಲವಾದ ನಿರ್ವಹಣೆಯನ್ನು ತೋರುವರು. |

**ಬಾಲ್ಯಹಂತದ ಕೆಲವು ಸಂಜ್ಞಾನಾತ್ಮಕ ಸಾಧನೆಗಳು**

| **ವಯಸ್ಸು** | **ಸಂಜ್ಞಾನಾತ್ಮಕ ಸಾಧನೆಗಳು** |
|---|---|
| 2ರಿಂದ 4ವರ್ಷಗಳು | ಪ್ರಾತಿನಿಧಿಕ ಚಟುವಟಿಕೆಗಳಲ್ಲಿ ಆಶ್ಚರ್ಯವೆನಿಸುವಷ್ಟು ಹೆಚ್ಚಳ, ಅದು ಭಾಷೆಯ ಬಳಕೆ, ನಂಬಿಸುವ–ಆಟಗಳು, ಚಿತ್ರಕಲೆ, ಸಂಕೇತಗಳ ಗ್ರಹಿಕೆ, ವಾಸ್ತವದ ಅರಿವು ಮತ್ತು ವರ್ಗೀಕರಣ ಇತ್ಯಾದಿಗಳ ಮೂಲಕ ಕಂಡುಬರುವುದು. ಚಿರಪರಿಚಿತವಾದ ಸಂದರ್ಭಗಳಲ್ಲಿ ಬೇರೆಯವರ ದೃಷ್ಟಿಕೋನವನ್ನೂ ಪರಿಗ್ರಹಿಸುವುದು, ದಿನನಿತ್ಯದ  ಸಂವಹನದಲ್ಲಿ ಹೆಚ್ಚಳ, ಜೀವ–ನಿರ್ಜೀವಗಳ ವಿಭಿನ್ನೀಕರಣ, ಪ್ರತೀ ದಿನದ ಅನುಭವಗಳ ಆಧಾರದಿಂದ ಕೇವಲ ಮ್ಯಾಜಿಕ್‌ನಿಂದ ಏನನ್ನಾದರೂ ಬದಲಾಯಿಸಬಹುದು ಎಂಬುದನ್ನು ಅಲ್ಲಗೆಳೆಯುವರು. ಸಂಭಾಷಣೆಯನ್ನು ಗ್ರಹಿಸುವರು, ಪರಿವರ್ತನೆಗಳನ್ನು ಗುರುತಿಸುವರು, ಉಲ್ಟಾ ಚಿಂತನೆಗಳು, ಮತ್ತು ಕಾರ್ಯ–ಕಾರಣ–ಪರಿಣಾಮಗಳ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವರು. ಸಾಮಾನ್ಯೀಕರಣ ಮತ್ತು ವಿಭಿನ್ನೀಕರಣ ಎರಡನ್ನೂ ಮಾಡಬಲ್ಲರು. ಪರಿಚಯವಿರುವ ವಸ್ತುಗಳನ್ನು ಶ್ರೇಣಿಯ ಪ್ರಕಾರ ಜೋಡಿಸಬಲ್ಲರು ಮತ್ತು ವರ್ಗೀಕರಿಸಬಲ್ಲರು. |
| 4ರಿಂದ 7 ವರ್ಷಗಳು | ನಂಬಿಸುವ–ಆಟಗಳು ಕೇವಲ ಪ್ರಾತಿನಿಧಿಕವೆಂದು ಚೆನ್ನಾಗಿ ಅರ್ಥಮಾಡಿಕೊಳ್ಳುವರು, ಚಮತ್ಕಾರವಾಗಿ ತೋರುವ ಘಟನೆಗಳಿಗೆ/ವಸ್ತುಗಳಿಗೆ ಸೂಕ್ತವಾದ ವಿವರಣೆ ನೀಡುವರು. |
| 7ರಿಂದ 11 ವರ್ಷಗಳು | ಸ್ಪಷ್ಟ ಮಾಹಿತಿಯನ್ನು ಕುರಿತ ಹೆಚ್ಚು ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಚಿಂತನೆ, ತರ್ಕ, ಮೂರ್ತ ಪರಿಕಲ್ಪನೆಗಳ ಪರಿಣತಿ, ವರ್ಗೀಕರಣ, ಏರಿಕೆ ಮತ್ತು ಇಳಿಕೆ ಕ್ರಮದ ಜೋಡಣೆ, ಸ್ಥಳಾವಕಾಶ ವಿವೇಚನೆ, (ಉದಾಹರಣೆಗೆ, ಸಂಜ್ಞಾನ ನಕ್ಷೆಗಳನ್ನು ರಚಿಸುವುದು ಮತ್ತು ದಿಕ್ಕುಗಳನ್ನು ಪ್ರಾತಿನಿಧಿಕವಾಗಿ ಸೂಚಿಸುವುದು ಇತ್ಯಾದಿ). |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ವಿಕಾಸಾತ್ಮಕ ಕಾರ್ಯಗಳನ್ನು ಸೂಚಿಸುವ ಮತ್ತೊಂದು ಪದ__________

   ಎ. ಮೈಲಿಗಲ್ಲುಗಳು

   ಬಿ. ಸ್ಪರ್ಧಾತ್ಮಕ ಕಾರ್ಯಗಳು

   ಸಿ. ವಿಮರ್ಶಾತ್ಮಕ ಕಾರ್ಯಗಳು

   ಡಿ. ದಿನನಿತ್ಯದ ಕಾರ್ಯಗಳು

2. "ನಂಬಿಸುವ–ವರ್ತನೆಗಳು" ಗೋಚರಿಸುವ ಹಂತ__________

   ಎ. ಹದಿಹರೆಯ

   ಬಿ. ಪೂರ್ವಬಾಲ್ಯಹಂತ

   ಸಿ. ಉತ್ತರಬಾಲ್ಯಹಂತ

   ಡಿ. ಉತ್ತರಕಿಶೋರಹಂತ

3. ಮಕ್ಕಳ ತರ್ಕಶಕ್ತಿಯು ಭಾಗಶಃ ವಿಕಾಸಹೊಂದಿರುವ ಹಂತ____________

ಎ. ಪೂರ್ವಬಾಲ್ಯ ಹಂತ

ಬಿ. ಉತ್ತರ ಬಾಲ್ಯ ಹಂತ

ಸಿ. ಶೈಶವ

ಡಿ. ತಂಡ ಯುಗ

4. ಶಾಲಾಪೂರ್ವ ಹಂತದಲ್ಲಿ ಮಕ್ಕಳು ತಮ್ಮಷ್ಟಕ್ಕೇ ತಾವೇ ಮಾತಾಡಿಕೊಳ್ಳುವ ವರ್ತನೆ ____________

ಎ. ಸ್ವಗತ

ಬಿ. ಸಂಭಾಷಣೆ

ಸಿ. ಅಹಂ–ಕೇಂದ್ರಿತ ಮಾತು

ಡಿ. ಸ್ವಯಂ–ಮಾತುಗಳು

5. "ವಿಷಯ ಏನೂಂತ ಹೇಳೋದಕ್ಕಿಂತ ಬರೀ ಬೊಗಳೆಯೇ ಜಾಸ್ತಿ" ಎಂದು ತಿಳಿಯುವವರು____________

ಎ. 4ನೇ ತರಗತಿಯ ವಿದ್ಯಾರ್ಥಿಗಳು

ಬಿ. 3ನೇ ತರಗತಿಯ ವಿದ್ಯಾರ್ಥಿಗಳು

ಸಿ. 6ನೇ ತರಗತಿಯ ವಿದ್ಯಾರ್ಥಿಗಳು

ಡಿ. 5ನೇ ತರಗತಿಯ ವಿದ್ಯಾರ್ಥಿಗಳು

6. ವಿಕಾಸಾತ್ಮಕ ಕಾರ್ಯಗಳ ಭಾಗ____________

ಎ. ಸಂಜ್ಞಾನಾತ್ಮಕ ಸಾಮರ್ಥ್ಯಗಳು

ಬಿ. ಕೌಶಲಗಳು

ಸಿ. ಧೋರಣೆಗಳು

ಡಿ. ಕೌಶಲಗಳು, ಸಂಜ್ಞಾನಾತ್ಮಕ ಸಾಮರ್ಥ್ಯಗಳು ಮತ್ತು ಧೋರಣೆಗಳು

## 1.5.3.2. ಪೂರ್ವ–ಹದಿಹರೆಯ ಮತ್ತು ಹದಿಹರೆಯ ಹಂತದ ವಿಕಾಸಾತ್ಮಕ ಕಾರ್ಯಗಳು

ಹದಿಹರೆಯದವರನ್ನೇ ಕಿಶೋರರೆನ್ನುತ್ತಾರೆ. ಇವರನ್ನು "ಟೀನ್ ಏಜರ್ಸ್" ಎಂದೇ ಗುರುತಿಸಲಾಗುತ್ತದೆ. ಸ್ಟಾನ್ಲಿಹಾಲ್‌ರವರ ಪ್ರಕಾರ ಇದೊಂದು ಆತಂಕ, ತವಕ, ಒತ್ತಡ ಮತ್ತು ಬಿಕ್ಕಟ್ಟುಗಳಿಂದ ಕೂಡಿದ ವಯೋಮಾನವಾಗಿದೆ. ಬಾಲ್ಯಹಂತದ ಅವಲಂಬಿತ ವ್ಯಕ್ತಿತ್ವವೊಂದು ವಯಸ್ಕನಾಗಿ ಸ್ವತಂತ್ರ್ಯನಾಗುವ ನಡುವಿನ ಹಂತವಿದು. ಹಾಗಾಗಿ ಇದೊಂದು ಪರಿವರ್ತನೆಯ ಕಾಲವೆಂದರೂ ಸರಿಯೇ. ಕುರ್ಟ್‌ಲೆವಿನ್ ಹೇಳುವಂತೆ ಈ ಹಂತವು ಯಾವುದೇ ಒಂದು ನಿರ್ದಿಷ್ಟ ಕ್ಷೇತ್ರ ಮತ್ತು ಅದಕ್ಕೆ ಸಂಬಂಧಪಟ್ಟ ವರ್ತನೆಗಳಿಗೆ ಸೇರುವುದಿಲ್ಲ, ಏಕೆಂದರೆ ಈ ವಯೋಮಾನದಲ್ಲಿ ಮಕ್ಕಳು ಬಾಲ್ಯಹಂತವನ್ನು ದಾಟಿರುತ್ತಾರೆ, ಆದರೆ ವಯಸ್ಕ ಹಂತವನ್ನು

ತಲುಪಿರುವುದಿಲ್ಲ. ಆದ್ದರಿಂದ ಬಾಲ್ಯಹಂತದ ಅಥವಾ ವಯಸ್ಕ ಹಂತದ ಲಕ್ಷಣಗಳಂತೆ ಹದಿಯರೆಯದವರ ಲಕ್ಷಣಗಳು ಖಚಿತವಾಗಿ ತಿಳಿಯುವುದು ಕಷ್ಟ ಸಾಧ್ಯ. ಕೆಲವೊಮ್ಮೆ ಇನ್ನೂ ಪಕ್ವಗೊಳ್ಳದ ಮಕ್ಕಳಂತೆ ಕಂಡರೆ, ಮಗದೊಮ್ಮೆ ದೊಡ್ಡವರಂತೆ ಜವಾಬ್ದಾರಿಯುತ ನಡುವಳಿಕೆಯನ್ನು ತೋರುತ್ತಾರೆ. ಇದೊಂದು ಸಂಕೀರ್ಣವಾದ ಹಂತವಾದುದರಿಂದ ಇದನ್ನು ಮೂರು ವಿಭಾಗಗಳಾಗಿ ಅಧ್ಯಯನ ನಡೆಸಲಾಗುತ್ತದೆ, ಅವುಗಳೆಂದರೆ, 1. ಪೂರ್ವ ಹದಿಹರೆಯ, 2. ಹದಿಹರೆಯ ಮತ್ತು 3. ಅಂತಿಮ ಹದಿಹರೆಯ. ಪೂರ್ವ ಹದಿಹರೆಯದಲ್ಲಿ ವ್ಯಕ್ತಿಯಲ್ಲಿ ಆನುಷಂಗಿಕ ಲಕ್ಷಣಗಳ ಉಗಮವಾಗುತ್ತದೆ. ಅಂದರೆ ಜೈವಿಕವಾದ, ಲೈಂಗಿಕ ಲಕ್ಷಣಗಳು ವಿಕಾಸವಾಗುವುವು. ಅವರಲ್ಲಿ ದೈಹಿಕ ವಿಕಸನವಷ್ಟೇ ಅಲ್ಲದೇ ಸಂತಾನೋತ್ಪತ್ತಿಯ ಅಂಗಗಳೂ ಕೂಡ ಪಕ್ವತೆಯನ್ನು ಹೊಂದಲು ಆರಂಭಿಸುವ ಕಾಲವಿದಾಗಿದೆ. ಇದೊಂದು ಜೈವಿಕ ಬದಲಾವಣೆಗಳ ಮತ್ತು ತೀವ್ರವಾದ ಪರಿವರ್ತನೆಗಳ ಕಾಲವಾಗಿರುತ್ತದೆ. ಪೂರ್ವ ಹದಿಹರೆಯ ಮತ್ತು ಹದಿಹರೆಯ ಹಂತವನ್ನು ದಾಟಿದ ನಂತರ ವ್ಯಕ್ತಿಯಲ್ಲಿ ಕಂಡುಬರುವ ಲಕ್ಷಣಗಳು ಅಂತಿಮ ಹದಿಹರೆಯದ ಹಂತವಾಗಿದ್ದು, ಶಾಶ್ವತವಾಗಿರುತ್ತವೆ. ಈ ಕೆಳಗೆ ಪೂರ್ವ–ಹದಿಹರೆಯ, ಹದಿಹರೆಯ ಹಂತದ ಕೆಲವು ವಿಕಾಸಾತ್ಮಕ ಕಾರ್ಯಗಳ ಸೂಚಿಯನ್ನು ನೀಡಲಾಗಿದೆ, ಗಮನಿಸಿ:

**ಪೂರ್ವ–ಹದಿಹರೆಯ ಹಂತ ಮತ್ತು ಹದಿಹರೆಯ ಹಂತದ ಸಂಜ್ಞಾನಾತ್ಮಕ ವಿಕಾಸಾತ್ಮಕ ಕಾರ್ಯಗಳು**

| ವಯಸ್ಸು ವರ್ಷಗಳಲ್ಲಿ | ಪೂರ್ವ ಹದಿಹರೆಯ ಹಂತ (10/11ರಿಂದ 13/14 ವರ್ಷಗಳು) |
|---|---|
| 10, 11, 12, 13 ಮತ್ತು 14 ವರ್ಷಗಳು | ಸಂಕೀರ್ಣ ಚಿಂತನೆಗಳನ್ನು ಕೈಗೊಳ್ಳುವರು, ಮಾತಿನಲ್ಲಿ ಉತ್ತಮ ಅಭಿವ್ಯಕ್ತಿಯನ್ನು ತೋರುವರು, ಸರಿ–ತಪ್ಪುಗಳ ನಿಖರವಾದ ತೀರ್ಮಾನಗಳನ್ನು ತೆಗೆದುಕೊಳ್ಳುವರು, ಅವರ ಯೋಚನೆಗಳು ಮತ್ತು ಚಿಂತನೆಗಳು ಸುವ್ಯವಸ್ಥಿತವಾಗಿ ಮತ್ತು ಸಮಂಜಸವಾಗಿ ಇರುವುವು, ಆಧಾರ ಕಲ್ಪನೆಗಳನ್ನು ರಚಿಸುವರು ಮತ್ತು ಅದಕ್ಕೆ ತಕ್ಕಂತೆ ಪ್ರಯೋಗಗಳನ್ನು ನಡೆಸುವರು, ಅಮೂರ್ತ ಚಿಂತನೆಗಳನ್ನೂ ಮಾಡುವರು.ತೀವ್ರವಾದ ಏಕಾಗ್ರತೆ, ಗಮನಹರಿಸುವಿಕೆ, ಯೋಜಿತ ರೀತಿಯಲ್ಲಿ ಕಾರ್ಯಗಳನ್ನು ನಿರ್ವಹಿಸುವಿಕೆ, ನೆನಪಿನ ಶಕ್ತಿಯಲ್ಲಿ ಅಗಾಧವಾದ ಹೆಚ್ಚಳ – ಇದನ್ನು ಪುನರಾವರ್ತನೆ, ಅರ್ಥಪೂರ್ಣ ಕಲಿಕೆ ಮುಂತಾದ ತಂತ್ರಗಳಿಂದ ಮಾಡಿಕೊಳ್ಳುವರು. ಬಹುಮುಖ ಚಿಂತನೆ ಮತ್ತು ಬಹುಮುಖ ಕಾರ್ಯನಿರ್ವಹಣೆ ಪ್ರಬಲವಾಗುವುದು. ಸಂಜ್ಞಾ/ಸಾಂಕೇತಿಕ ರೂಪದ ಸ್ಮರಣೆ ಹೆಚ್ಚುವುದು ಮತ್ತು ತಮ್ಮ ಜೀವನದ ಘಟನೆಗಳ ಆಳವಾದ ಸ್ಮೃತಿಯೂ ಮತ್ತು ಅದರ ವಿಕಾಸವೂ ಉಂಟಾಗುವುದು. |
| 10/11 ರಿಂದ 13/14 ವರ್ಷಗಳು | ಜ್ಞಾನ ಸಂರಚನಾ ಶಕ್ತಿ ಮತ್ತು ಅನುಭವದಿಂದ ತಮ್ಮ ಜ್ಞಾನವನ್ನು ಕಟ್ಟಿಕೊಳ್ಳುವ ಶಕ್ತಿಯು ವಿಕಾಸ ಹೊಂದುವುದು. ಸಂಜ್ಞಾನಾತ್ಮಕ ಪ್ರಕ್ರಿಯೆಗಳ ಮತ್ತು ಅವುಗಳ ನಡುವಿನ ಅಂತರ್ ಸಂಬಂಧಗಳ ಬಂಧವು ಹೆಚ್ಚಾಗುವುದು. ಕ್ರಮೇಣ ಸಂಜ್ಞಾನಾಧಾರಿತ ಸ್ವಯಂ–ನಿಯಂತ್ರಣವು ಸುಧಾರಣೆಯಾಗುವುದು. ಸಂಕೀರ್ಣವಾದ ವ್ಯಾಕರಣದ ರಚನೆಗಳನ್ನು ಸೃಷ್ಟಿಸುವರು. ಉದಾಹರಣೆಗೆ ಕನ್ನಡದ ಕರ್ತರಿ ಮತು ಕರ್ಮಣಿ ಪ್ರಯೋಗಗಳು. ಸಂದರ್ಭಕ್ಕೆ ತಕ್ಕಂತೆ ಖಚಿತವಾದ ಸಂವಹನವನ್ನು ನಡೆಸುವರು. ಸಾಮಾಜಿಕ ವ್ಯಕ್ತಿಗಳನ್ನು ತುಲನಾತ್ಮಕವಾಗಿ ನೋಡುವರು. ಆತ್ಮಗೌರವವು ಕ್ರಮಾನುಗತವಾಗಿ ಹೆಚ್ಚುವುದು. ಪ್ರಮುಖವಾಗಿ ವ್ಯಕ್ತಿತ್ವ ಲಕ್ಷಣ ಮತ್ತು ಸಾಧನಾ ಕ್ಷೇತ್ರಗಳನ್ನು ಕುರಿತಂತೆ ಲಿಂಗಾಧಾರಿತ ಪಾತ್ರಗಳ ಅರಿವು ವಿಶಾಲವಾಗುವುದು. ಆಪ್ತ ಗೆಳೆಯರ ಸಂಖ್ಯೆಯಲ್ಲಿ ಇಳಿಮುಖವಾಗುವುದು. |

| | |
|---|---|
| 14/15ರಿಂದ 16/17 ವರ್ಷಗಳು | ವಿಕಾಸ ಪ್ರಕ್ರಿಯೆಗಳ ಗತಿ ಮತ್ತು ಕಾರ್ಯಾಧಾರಿತ ಸ್ಮರಣೆಯು ಸತತವಾಗಿ ಹೆಚ್ಚಳವಾಗುತ್ತಾ ಸಾಗುವುದು. ಸಾಂಕೇತಿಕ ಸ್ಮರಣಶಕ್ತಿಯು ಇನ್ನಷ್ಟು ಪ್ರಖರವಾಗುವುದು. ತನಗೆ ಏನು ಗೊತ್ತಿದೆ/ಗೊತ್ತಿಲ್ಲ ಮತ್ತು ಎಷ್ಟು ಗೊತ್ತಿದೆ/ಗೊತ್ತಿಲ್ಲ ಎಂಬುದರ ಅರಿವು ಇರುವುದು. ಸಂಭಾಷಣಾ ತಂತ್ರಗಳು ಉತ್ತಮವಾಗುವುವು. ಸಂಕೀರ್ಣ ವ್ಯಾಕರಣದ ರಚನೆಯನ್ನು ಶುದ್ಧವಾಗಿ ಮಾಡುವರು. ಅರ್ಥವಾಡಿಕೊಳ್ಳುವ ಶಕ್ತಿ ಹೆಚ್ಚುವುದು. ಅಮೂರ್ತ ಪರಿಕಲ್ಪನೆಗಳನ್ನೂ ಅರ್ಥಮಾಡಿಕೊಳ್ಳಬಲ್ಲರು. |
| 16/17ರಿಂದ 19/20 ವರ್ಷಗಳು | ವ್ಯಂಗ್ಯ ಮತ್ತು ಹೀಗಳೆಯುವ ಪದಗಳನ್ನು ಅರ್ಥಮಾಡಿಕೊಳ್ಳಬಲ್ಲರು. ಸ್ವಯಂ–ಅರಿವು, ಉನ್ನತ ಭಾವಗಳೊಂದಿಗೆ ಉತ್ತಮ ನಡೆವಳಿಕೆಯನ್ನು ತೋರುವರು. ಸ್ವಯಂ–ನಿಯಂತ್ರಣ ಸಾಮರ್ಥ್ಯವನ್ನು ಹೊಂದಿದ್ದು, ಇನ್ನೊಬ್ಬರ ಬಗ್ಗೆ ಸಹಾನುಭೂತಿ, ಅನುಕಂಪ, ಸಹ–ಸ್ಪಂದನವನ್ನು ಹೊಂದಿರುವರು. ತೋರಿಕೆಗೆ ಕಂಡ ಅಭಿವ್ಯಕ್ತಿಗಳು ನಿಜವಲ್ಲ, ಏಕೆಂದರೆ, ಪ್ರತಿಯೊಬ್ಬರಲ್ಲೂ ಆಂತರಿಕವಾಗಿ ಹಲವಾರು ಅನಿಸಿಕೆಗಳ/ಭಾವನೆಗಳ ಸಂಮಿಶ್ರಣವಿರುತ್ತದೆ ಎಂಬುದನ್ನು ತಿಳಿದಿರುವರು. ನೈತಿಕ ವರ್ತನೆಗಳು ಹೆಚ್ಚಾಗುವುವು. ಸಾಂಪ್ರದಾಯಿಕವಾದ ಲಿಂಗಾಧಾರಿತ ಪಾತ್ರಗಳು ಮತ್ತು ಅವುಗಳ ನಿರ್ವಹಣೆಯನ್ನು ಗುರುತಿಸಿಕೊಳ್ಳುವುದು ಮತ್ತು ರೂಢಿಗತವಾದ ಸ್ವಯಂ–ಗ್ರಹಿಕೆಯನ್ನು ಗೌಣವಾಗಿಸಿಕೊಳ್ಳುವುದು, ಸಹಪಾಠಿಗಳೊಂದಿಗೆ ತೋರುವ ಸೌಹಾರ್ದತೆ ಮತ್ತು ಸಹಕಾರ ಹೆಚ್ಚಾಗುವುದು. ಸಾಮಾಜಿಕವಾದ ಇತರ ಸಹಭಾಗಿತ್ವಕ್ಕಿಂತ ಸಹಪಾಠಿಗಳೊಡನೆ ಕಳೆಯುವ ಸಮಯ ಹೆಚ್ಚಾಗಿರುವುದು. ಆತ್ಮೀಯ ಸ್ನೇಹಿತರ ಸಂಖ್ಯೆಯಲ್ಲಿ ಮತ್ತಷ್ಟು ಇಳಿಮುಖವಾಗುವುದು. ಪ್ರೀತಿ, ಪ್ರೇಮಗಳು ಉಗಮವಾಗುವ ಕಾಲ. ಈ ಹಂತದ ಗೆಳೆತನವು ದೀರ್ಘಕಾಲಿಕವಾಗಿರುವುದು. ತನ್ನ ವ್ಯಕ್ತಿತ್ವವನ್ನು ಲಿಂಗಾಧಾರಿತವಾಗಿ, ಸಂಪೂರ್ಣ ಮಹಿಳೆ ಅಥವಾ ಪುರುಷನೆಂದು ಒಪ್ಪಿಕೊಳ್ಳುವುದು. ಭಾವನಾತ್ಮಕವಾಗಿ ಪೋಷಕರಿಂದ ಮತ್ತು ಇತರ ಹಿರಿಯರಿಂದ ಸ್ವತಂತ್ರ್ಯವಾಗುವುದು.ಆರ್ಥಿಕ ಸ್ವಾವಲಂಬನೆ, ಉದ್ಯೋಗಕ್ಕಾಗಿ ತಯಾರಾಗುವುದು, ಉತ್ತಮ ನಾಗರಿಕನಲ್ಲಿರಬಹುದಾದ ಬೌದ್ಧಿಕ ಕೌಶಲಗಳು ಮತ್ತು ಪೌರನೀತಿಯ ವಿಕಾಸ.ಸಾಮಾಜಿಕವಾಗಿ ಜವಾಬ್ದಾರಿಯುತನಾಗುವ ಸಾಧನೆಗೈಯುವುದು, ಮದುವೆ ಮತ್ತು ಕುಟುಂಬ ಜೀವನಕ್ಕೆ ತಯಾರಾಗುವುದು. ಪ್ರಾಪಂಚಿಕ ಜ್ಞಾನದ ಜೊತೆಗೆ ಸೌಹಾರ್ದಯುತವಾದ ಪ್ರಜ್ಞಾಮೌಲ್ಯಗಳನ್ನು ವೈಜ್ಞಾನಿಕವಾಗಿ ಬೆಳೆಸಿಕೊಳ್ಳುವುದು. |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ಸ್ಟ್ಯಾನ್ಲೀಹಾಲ್‌ನ ಪ್ರಕಾರ ಹದಿಹರೆಯದ ಹಂತವೆಂದರೆ____________

   ಎ. ಸಾಹಸದಿಂದ ಕೂಡಿರುವುದು

   ಬಿ. ನೆಮ್ಮದಿಯಿಂದ ಕೂಡಿರುವುದು

   ಸಿ. ಆತಂಕ ಮತ್ತು ಒತ್ತಡಗಳಿಂದ ಕೂಡಿರುವುದು

   ಡಿ. ಸೋಮಾರಿಯಾಗಿ ಚಟುವಟಿಕೆಯಲ್ಲದೇ ಇರುವುದು

2. ಪೂರ್ವ–ಹದಿಹರೆಯದ ಹಂತದಲ್ಲಿ ಗೆಳೆಯರ ಸಂಖ್ಯೆಯು____________

   ಎ. ಹೆಚ್ಚಾಗುವುದು

   ಬಿ. ಇಳಿಮುಖವಾಗುವುದು

ಸಿ. ಹೇಗೆ ಇದ್ದಿತ್ತೋ ಹಾಗೇ ಇರುವುದು

ಡಿ. ಸಂಪೂರ್ಣವಾಗಿ ಸೊನ್ನೆಗೆ ಇಳಿಯುವುದು

3. ತಮ್ಮ ವ್ಯಕ್ತಿತ್ವವನ್ನು ಹೇಗಿರುವುದೋ ಹಾಗೆ, ಪುರುಷ ಅಥವಾ ಮಹಿಳೆಯೆಂದು ಒಪ್ಪಿಕೊಳ್ಳುವ ಹಂತ____________

ಎ. ಉತ್ತರಬಾಲ್ಯ ಹಂತ

ಬಿ. ಪೂರ್ವಹದಿಹರೆಯದ ಹಂತ

ಸಿ. ಹದಿಹರಯದ ಹಂತ

ಡಿ.ಅಂತಿಮ ಹದಿಹರಯದ ಹಂತ

5. "ನಾನೊಬ್ಬ ಉತ್ತಮ ಶ್ರೋತೃ" ಎಂದು ತನ್ನ ಸ್ನೇಹಿತರು ಹೇಳುತ್ತಾರೆ ಎಂಬ ಮಗುವು____________

ಎ. ತನ್ನ ಆತ್ಮಗೌರವವನ್ನು ಅಭಿವ್ಯಕ್ತಿಸುತ್ತಿದೆ

ಬಿ. ತನ್ನ ಬಗ್ಗೆ ತಾನೆ ಬೊಗಳೆ ಹೊಡೆಯುತ್ತಿದೆ

ಸಿ. ತನ್ನ ಬಗ್ಗೆ ತಾನೇ ಉತ್ಪ್ರೇಕ್ಷೆಯನ್ನು ಮಾಡಿಕೊಳ್ಳುತ್ತಿದೆ

ಡಿ. ಹಾಗೆಂದು ಕೊಂಡಿದೆ, ಆದರೆ ವಾಸ್ತವವಾಗಿ ಹಾಗಿಲ್ಲ

6. ಹದಿಹರೆಯದ ಹಂತದ ಮಕ್ಕಳು ತೋರುವ ವರ್ತನೆ____________

ಎ. ಹಿರಿಯರೊಡನೆ ಅವರ ಭಾವನಾತ್ಮಕ ಅವಲಂಬನೆ

ಬಿ. ಪೋಷಕರು ಮತ್ತು ಹಿರಿಯರಿಂದ ಭಾವನಾತ್ಮಕ ಸ್ವಾತಂತ್ರ್ಯ

ಸಿ. ಮಿತಿಮೀರಿದ ಭಾವಾವೇಗ

ಡಿ. ಭಾವನಾತ್ಮಕ ಸಮತೋಲನದ ಕೊರತೆ

## 1.5.3.3. ಅಂತಿಮ ಹದಿಹರೆಯದ ವಿಕಾಸಾತ್ಮಕ ಕಾರ್ಯಗಳು

ಹದಿಹರೆಯದ ನಂತರ ಆದರೆ ವಯಸ್ಕ ಹಂತಕ್ಕೂ ಮೊದಲು ಬರುವ ಹಂತವೇ ಅಂತಿಮ ಹದಿಹರೆಯದ ಹಂತ. ಈ ಹಂತವನ್ನು ವಯಸ್ಕಪೂರ್ವ ಹಂತ ಅಥವಾ ನವತರುಣರ ಹಂತವೆಂದೂ ಕರೆಯುವರು. ಇದೊಂದು ಪರಿವರ್ತನೆಯ ಕಾಲವಾಗಿರುತ್ತದೆ. ವ್ಯಕ್ತಿಯೊಬ್ಬನ ಜೀವನದಲ್ಲಿನ ಮೊದಲ ಎರಡು ದಶಮಾನಗಳ ಅಂತ್ಯದಲ್ಲಿ ಕಂಡುಬರುವ ಹಂತ ಇದಾಗಿರುತ್ತದೆ. ಈ ಹಂತದಲ್ಲಿ ವೃತ್ತಿಯ ಬೇಟೆ, ಸಂಗಾತಿಯ ಹುಡುಕಾಟ, ತನ್ನ ಅಸ್ತಿತ್ವದ ಅಥವಾ ತನ್ನತನದ ಛಾಪುಮೂಡಿಸುವ ತವಕ ಪ್ರಬಲವಾಗಿರುತ್ತದೆ. ವಿಕಾಸಾತ್ಮಕ ಕಾರ್ಯಗಳು ಈ ಹಂತದಲ್ಲಿ ಸಕಾರಣವಾಗಿಯೇ ಕುಟುಂಬ, ಸಾಮಾಜಿಕ ಜೀವನ ಮತ್ತು ಕೆಲಸ ಹಾಗೂ ಸಂಪಾದನೆಯ ವಿಚಾರವಾಗಿರುತ್ತವೆ. ಇಲ್ಲಿ ಕುಟುಂಬವೆಂದರೆ, ತನಗೆ ಸರಿಹೊಂದುವ ಜೀವನ ಸಂಗಾತಿಯ ಹುಡುಕಾಟ, ಗೃಹಸ್ಥ ಜೀವನವನ್ನು ನಡೆಸಲು ಬೇಕಾದ ಕೌಶಲಗಳ ಕಲಿಕೆ, ಸಂತಾನೋತ್ಪತ್ತಿ ಮತ್ತು ಮಕ್ಕಳನ್ನು ಬೆಳೆಸುವುದು ಇತ್ಯಾದಿಗಳು ಸೇರಿರುತ್ತವೆ. ಕೆಲಸ/ವೃತ್ತಿಗೆ ಸಂಬಂಧಿಸಿದ ಕಾರ್ಯಗಳೆಂದರೆ, ತನ್ನ ಜೀವನದ ನಿರ್ವಹಣೆಗಾಗಿ ಸಂಪಾದನೆ, ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲ ಸ್ವಾವಲಂಬನೆ, ಆರ್ಥಿಕ ಸ್ವಾತಂತ್ರ್ಯ ಇತ್ಯಾದಿ. ಸಾಮಾಜಿಕವಾಗಿ, ಒಬ್ಬ ಉಪಯುಕ್ತ ವ್ಯಕ್ತಿಯಾಗಿರುವುದು, ಸಾಮಾಜಿಕ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು, ಸಮುದಾಯವನ್ನು ಬೆಂಬಲಿಸುವುದು ಇತ್ಯಾದಿ ವಿಕಾಸಾತ್ಮಕ ಕಾರ್ಯಗಳನ್ನು ಈ ಹಂತದಲ್ಲಿ ನೋಡಬಹುದಾಗಿದೆ.

ಇತ್ತೀಚಿನ ಅಧ್ಯಯನಗಳಲ್ಲಿ ಹದಿಹರೆಯದ ಹಂತದಿಂದ ವಯಸ್ಕಹಂತಕ್ಕೆ ಬದಲಾಗುವ ಪರಿವರ್ತನೆಯನ್ನು 'ವಯಸ್ಕಹಂತದ ಉದಯ' ಎಂದು ಕರೆದಿದ್ದಾರೆ. ಸುಮಾರು 18ರಿಂದ 25 ವಯೋಮಾನದ ವ್ಯಕ್ತಿಗಳು ಈ

ಗುಂಪಿಗೆ ಸೇರುತ್ತಾರೆ. ಪ್ರಯೋಗಿಸಿ ನೋಡುವಿಕೆ, ಅವಿಷ್ಕಾರಗಳು, ಅನ್ವೇಷಣೆಯಂತಹ ಬೌದ್ಧಿಕಮಟ್ಟದ ಕಾರ್ಯಗಳು ಈ ಹಂತದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ತಮಗೆ ಸರಿಹೊಂದುವ ಮತ್ತು ತೃಪ್ತಿಯನ್ನು ಕೊಡುವ ಉದ್ಯೋಗದ ಅನ್ವೇಷಣೆ, ಯಾವ ಮಾರ್ಗವು ತನ್ನ ಜೀವನಕ್ಕೆ ಸರಿಹೊಂದಬಹುದು ಎಂಬ ಸಾಮಾಜಿಕ ಕಳಕಳಿ, ತನ್ನತನವನ್ನು ತೋರುವ ಜೀವನೋಪಾಯದ ಕಾರ್ಯಗಳ ಹುಡುಕಾಟ – ಹೀಗೆ ಸಂಕೀರ್ಣವಾದ ವಿಕಾಸಾತ್ಮಕ ಕಾರ್ಯಗಳ ಹಂತ ಇದು. ಪಿಯಾಷೆಯು ತನ್ನ ಪ್ರಾರಂಭಿಕ ಬರಹಗಳಲ್ಲಿ (1952) ಔಪಚಾರಿಕ ಸಂಕ್ರಿಯಾತ್ಮಕ ಹಂತದಲ್ಲಿ ಹದಿಹರೆಯದ ಹಂತದ ಉಗಮ ಮತ್ತು ಅದರ ಮುಕ್ತಾಯ ಎರಡೂ (ಅಂದರೆ 11ರಿಂದ 15 ವರ್ಷಗಳಲ್ಲಿ) ಇಲ್ಲಿ ಕಂಡುಬರುತ್ತವೆ ಎಂದು ಪ್ರತಿಪಾದಿಸಿದ್ದಾನೆ. ನಂತರ 1972ರಲ್ಲಿ ತನ್ನ ಈ ಪ್ರತಿಪಾದನೆಯನ್ನು ಪರಿಷ್ಕರಿಸಿ, ಔಪಚಾರಿಕ ಸಂಕ್ರಿಯಾತ್ಮಕ ವಿಕಾಸ ಕಾರ್ಯಗಳುಸರಿಸುಮಾರು 15ರಿಂದ 20 ವರ್ಷಗಳವರೆಗೂ ಮುಂದುವರೆಯುವುದೆಂದು ತಿಳಿಸಿದ್ದಾನೆ.

ಅಂತಿಮ ಹದಿಹರೆಯದ ಹಂತದ ವಿಕಾಸಾತ್ಮಕ ಕಾರ್ಯಗಳನ್ನು ಈ ಕೆಳಕಂಡಂತೆ ನಮೂದಿಸಬಹುದಾಗಿದೆ:

- ಉನ್ನತ ಹಂತದ ಸಂಜ್ಞಾನಾತ್ಮಕ ಕಾರ್ಯಗಳಾದ ತೀರ್ಮಾನಿಸುವುದು, ತರ್ಕ, ವಿಮರ್ಶೆ, ಸೃಜನಶೀಲತೆ, ಮತ್ತು ಪರಾ ಸಂಜ್ಞಾನಾತ್ಮಕ ಚಿಂತನೆಗಳನ್ನು(ಸಂಜ್ಞಾನಾತ್ಮಕ ಚಿಂತನೆಗಳನ್ನು ಕುರಿತ ಚಿಂತನೆ) ಮಾಡುವುದು.
- ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಭಾವಾವೇಷಕ್ಕೆ ಒಳಗಾಗದಿರುವುದು ಮತ್ತು ಪೂರ್ವಾಗ್ರಹಪೀಡಿತರಾಗದಿರುವುದು. ಹಾಗೆಯೇ ತಾವು ಹಿಂದೆ ತೆಗೆದುಕೊಂಡ ನಿರ್ಧಾರಗಳಿಂದ ಆದ ಫಲಾಫಲಗಳನ್ನು ಸ್ಪಷ್ಟವಾಗಿ ನೆನೆಪಿಸಿಕೊಂಡು ಸರಿಯಾದ ತೀರ್ಮಾನಕ್ಕೆ ಬರುವುದು.
- ಜ್ಞಾನದ ತತ್‌ಕ್ಷಣದ ಬಳಕೆ, ತ್ವರಿತವಾಗಿ ತಂತ್ರೋಪಾಯಗಳ ಬಳಕೆ ಮತ್ತು ವಿಧಿವಿಧಾನಗಳ ಬಳಕೆ ಇವುಗಳಲ್ಲಾದ ಹೆಚ್ಚಳದಿಂದ ಉತ್ತಮ ಯೋಜನೆ ರೂಪಿಸುವುದು, ಪರ್ಯಾಯ ಪರಿಹಾರಗಳನ್ನು ಪರಿಗಣಿಸುವುದು ಮತ್ತು ಬೌದ್ಧಿಕ ನಿಯಂತ್ರಣವನ್ನು ಸಾಧಿಸುವುದು.
- ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಇತರರ ಅಭಿಪ್ರಾಯಗಳನ್ನು ಸಂಯಮದಿಂದ ಕೇಳುವುದು, ತನ್ನ ಅಭಿಪ್ರಾಯಗಳನ್ನು ಸೂಕ್ತವಾಗಿ ತಿಳಿಸುವುದು, ಗುಂಪು ಚಟುವಟಿಕೆಗಳಲ್ಲಿ ಉತ್ತಮ ಸಹಕಾರ ನೀಡುವುದು. ತನ್ನ ಮತ್ತು ಇತರರ ನಡುವೆ ಒಂದು ಸುರಕ್ಷಾ ಅಂತರವನ್ನು ಕಾಪಾಡಿಕೊಳ್ಳುವುದು.
- ವ್ಯಕ್ತಿ–ವ್ಯಕ್ತಿಗಳ ಸಂಬಂಧದಲ್ಲಿ ಭಾವನೆಗಳ ಪಾತ್ರವು ಗಹನವಾಗಿರುತ್ತದೆಂದು ಅರಿತುಕೊಳ್ಳುವುದು.
- ಸ್ನೇಹಿತರೊಡನೆ ಯಾವಾಗಲೂ ಕಿರಿಕಿರಿ ಮಾಡುತ್ತಾ ಜಗಳಗಂಟತನವನ್ನು ತೋರುವುದು ಸ್ನೇಹಕ್ಕೇ ಮಾರಕವೆಂಬ ಅರಿವು ಮೂಡುವುದು.
- ಕೋಪ ತೋರಿಸಿದಾಗಲೂ ಕೂಡ ಅದು ಸ್ನೇಹವನ್ನು ಹಾಳುಮಾಡುವಂತಿರಬಾರದು ಮತ್ತು ಕೋಪದ ಅಭಿವ್ಯಕ್ತಿಯಲ್ಲಿಯೂ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು, ಅದು ಅತಿ ಸಹಜವೆಂಬಂತೆ ಇರಬೇಕೆಂಬ ಬದಲಾವಣೆಗಳನ್ನು ತಂದುಕೊಳ್ಳುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ಅಂತಿಮ ಹದಿಹರೆಯದ ಹಂತವನ್ನು ಸೂಚಿಸುವ ವಯೋಮಾನ__________

   ಎ. 18/19ರಿಂದ 20/21 ವರ್ಷಗಳು

   ಬಿ. 25 ವರ್ಷಕ್ಕಿಂತಲೂ ಹೆಚ್ಚು

   ಸಿ. 20ರಿಂದ 25 ವರ್ಷಗಳು

   ಡಿ. 17ರಿಂದ 19 ವರ್ಷಗಳು

2. ಉದ್ಯೋಗಸ್ಥನಾಗುವ ಲಕ್ಷಣ ಪ್ರಕಟವಾಗುವ ಹಂತ________________

ಎ. ವಯಸ್ಕ ಹಂತ

ಬಿ. ಅಂತಿಮ ಹದಿಹರೆಯದ ಹಂತ

ಸಿ. ಪೂರ್ವ ಹದಿಹರೆಯದ ಹಂತ

ಡಿ. ಹದಿಹರೆಯದ ಹಂತ

3. ಅಂತಿಮ ಹದಿಹರೆಯದ ಹಂತದಲ್ಲಿ ಕಂಡುಬರುವ ತೀವ್ರವಾದ ಭಾವನಾತ್ಮಕ ಅಂಶವೆಂದರೆ, ____________

ಎ. ವೃತ್ತಿ

ಬಿ. ಪೋಷಕರಾಗುವುದು

ಸಿ. ಜೀವನ ಸಂಗಾತಿಯನ್ನು ಹುಡುಕುವುದು

ಡಿ. ಮಕ್ಕಳನ್ನು ಬೆಳೆಸುವುದು

4. ಅಂತಿಮ ಹದಿಹರೆಯದ ಹಂತದ ಸಾಮಾಜಿಕ ಜೀವನದಲ್ಲಿ ಕಂಡುಬರುವ ಒಂದು ವಿಕಾಸಾತ್ಮಕ ಕಾರ್ಯ____________

ಎ. ದೊಡ್ಡ ಸಮುದಾಯವೊಂದರ ಜವಾಬ್ದಾರಿಯನ್ನು ಹೊರುವುದು

ಬಿ. ಮನೆ ಮತ್ತು ಕುಟುಂಬವನ್ನು ನಿಭಾಯಿಸುವುದು

ಸಿ. ಒಳ್ಳೆಯ ಅಂಕಗಳನ್ನು ಗಳಿಸುವುದು

ಡಿ. ಒಳ್ಳೆಯ ಕ್ರೀಡಾಪಟುವಾಗುವುದು

5. ಅಂತಿಮ ಹದಿಹರೆಯದ ಹಂತವು ಕಾಣಿಸಿಕೊಳ್ಳುವುದು ____________

ಎ. ಪೂರ್ವಹದಿಹರೆಯ ಹಂತ ಮತ್ತು ಕಿಶೋರಹಂತ

ಬಿ. ಹದಿಹರೆಯ ಹಂತ ಮತ್ತು ಪೂರ್ವವಯಸ್ಕ ಹಂತ

ಸಿ. ಅಂತಿಮ ಹದಿಹರೆಯದ ನಂತರ

ಡಿ. ಹದಿಹರೆಯ ಪೂರ್ವ ಹಂತ ಮತ್ತು ಹದಿಹರೆಯದ ಹಂತ

6. ಹದಿಹರೆಯದ ಹಂತದಿಂದ ವಯಸ್ಕ ಹಂತಕ್ಕೆ ಆಗುವ ಪರಿವರ್ತನೆ ____________

ಎ. ಯುವಕರು

ಬಿ. ಉದಯೋನ್ಮುಖ ವಯಸ್ಕರು

ಸಿ. ಹದಿಹರೆಯ

ಡಿ. ಟೀನ್ ಏಜರ್ಸ್

## 1.5.4. ಸಾರಾಂಶಿಸೋಣ:

- ವಿಕಾಸಾತ್ಮಕ ಕಾರ್ಯಗಳನ್ನು ಮೈಲಿಗಲ್ಲುಗಳೆಂದು ಕರೆಯಲಾಗಿದ್ದು ಇದು ವಿವಿಧ ವಿಕಾಸ ಹಂತಗಳಿಗೆ ಅನುಗುಣವಾಗಿರುತ್ತದೆ.

- ಪ್ರತೀ ವಿಕಾಸದ ಹಂತದಲ್ಲಿನ ವಿಕಾಸ ಕಾರ್ಯಗಳ ಸಫಲತೆಯು ವ್ಯಕ್ತಿಯಲ್ಲಿ ಆನಂದವನ್ನು, ಸಂತೋಷವನ್ನು ಉಂಟುಮಾಡುವುದಲ್ಲದೆ, ಮುಂದಿನ ವಿಕಾಸಾತ್ಮಕ ಕಾರ್ಯಗಳ ಕಲಿಕೆಗೆ ಬುನಾದಿಯಾಗುವುದು.
- ವಿಕಾಸ ಕಾರ್ಯಗಳು ಶೈಶವ, ಬಾಲ್ಯ, ಹದಿಹರೆಯ ಮತ್ತು ಅಂತಿಮ ಹದಿಹರೆಯದಹಂತಗಳಿಗೆ ಅನುಗುಣವಾಗಿರುತ್ತವೆ.
- ಮಧ್ಯ–ಬಾಲ್ಯಹಂತದಲ್ಲಿ ಮಕ್ಕಳು ಭೌತಿಕ ಕೌಶಲಗಳನ್ನು ಕಲಿಯುತ್ತಾರೆ ಮತ್ತು ಈ ಕೌಶಲಗಳನ್ನು ಸಾಮಾನ್ಯವಾಗಿ ಆಡುವ ಆಟಗಳಲ್ಲಿ ಬಳಸುತ್ತಾರೆ.
- ಹದಿಹರೆಯದ ಹಂತದಲ್ಲಿ ಅನೇಕ ಪ್ರಮುಖ ವಿಕಾಸಾತ್ಮಕ ಕಾರ್ಯಗಳು ಗಮನಕ್ಕೆ ಬರುತ್ತವೆ: ತನ್ನ ವ್ಯಕ್ತಿತ್ವವನ್ನು ಒಬ್ಬ ಮಹಿಳೆಯೆಂದಾಗಲೀ ಅಥವಾ ಪುರುಷನೆಂದಾಗಲೀ ಒಪ್ಪಿಕೊಳ್ಳುವುದು, ತನ್ನ ಲಿಂಗಾಧಾರಿತ ಪಾತ್ರಗಳನ್ನು ಸುಲಲಿತವಾಗಿ ನಡೆಸುವುದು, ಹಾಗೆಯೇ, ಎರಡೂ ಲಿಂಗದ, ತನ್ನದೇ ವಯೋಮಾನದವರ ಜೊತೆ ಸ್ನೇಹ–ಸಂಬಂಧಗಳನ್ನು ಬೆಳೆಸಿಕೊಳ್ಳುವುದು, ಭಾವನಾತ್ಮಕವಾಗಿ ಪೋಷಕರಿಂದ, ಮತ್ತು ಇತರ ಹಿರಿಯರಿಂದ ಸ್ವತಂತ್ರನಾಗುವುದು, ಮತ್ತು ಆರ್ಥಿಕವಾಗಿ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವನ್ನು ಗಳಿಸುವುದು, ಉದ್ಯೋಗಕ್ಕಾಗಿ ತಯಾರಾಗುವುದು, ಒಬ್ಬ ಉತ್ತಮ ಪೌರನಲ್ಲಿರಬೇಕಾದ ನಡವಳಿಕೆಗಳನ್ನು, ಸಾಮಾಜಿಕ ಜವಾಬ್ದಾರಿಗಳನ್ನು ಹೊರುವುದು, ಮದುವೆ ಮತ್ತು ಕೌಟುಂಬಿಕ ಜೀವನಕ್ಕೆ ಅಣಿಯಾಗುವುದು, ಮತ್ತು ಪ್ರಾಪಂಚಿಕ ಜ್ಞಾನದ ಜೊತೆಗೆ ಸೌಹಾರ್ದಯುತವಾದ ಪ್ರಜ್ಞಾ ಮೌಲ್ಯಗಳನ್ನು ವೈಜ್ಞಾನಿಕವಾಗಿ ಬೆಳೆಸಿಕೊಳ್ಳುವುದು.
- ಅಂತಿಮ ಹದಿಹರೆಯದ ವಿಕಾಸಾತ್ಮಕ ಕಾರ್ಯಗಳು ಪ್ರಮುಖವಾಗಿ ಕುಟುಂಬ, ಉದ್ಯೋಗ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸುದುದಾಗಿದೆ. ಕುಟುಂಬಕ್ಕೆ ಸೇರಿದ ವಿಕಾಸಾತ್ಮಕ ಕಾರ್ಯಗಳೆಂದರೆ, ಜೀವನ ಸಂಗಾತಿಯನ್ನು ಹುಡುಕುವುದು, ಮದುವೆಯಾಗಿ ಒಬ್ಬ ಜವಾಬ್ದಾರಿಯುತ ವ್ಯಕ್ತಿಯಂತೆ ಜೀವನವನ್ನು ನಡೆಸುವುದು, ಮಕ್ಕಳನ್ನು ಪಡೆದು ಅವರನ್ನು ಉತ್ತಮವಾಗಿ ಬೆಳೆಸುವುದು, ಮನೆ ಮತು ಕುಟುಂಬ ಎರಡನ್ನೂ ಸಂತೃಪ್ತಿಕರವಾಗಿ ನಿಭಾಯಿಸುವುದು. ಇಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ವಿಕಾಸಾತ್ಮಕ ಕಾರ್ಯಗಳೂ ಕೂಡ ಮುಖ್ಯವಾಗುತ್ತವೆ. ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ವಿಕಾಸಾತ್ಮಕ ಕಾರ್ಯಗಳೆಂದರೆ, ದೊಡ್ಡ ಸಮುದಾಯವೊಂದರ ಸಾಮಾಜಿಕ ಜವಾಬ್ದಾರಿಯನ್ನು ಹೊರುವುದು, ಕುಟುಂಬ, ವೃತ್ತಿ, ಮನೆ ಮತ್ತು ಸಂಬಂಧಗಳ ಉತ್ತಮ ನಿರ್ವಹಣೆ ಮತ್ತು ನಿಭಾಯಿಸುವಿಕೆ.

## 1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಎ 2. ಬಿ 3. ಎ 4. ಸಿ 5. ಸಿ 6. ಡಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಸಿ 2. ಬಿ 3. ಬಿ 5. ಎ 6. ಬಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1. ಎ 2. ಬಿ 3. ಸಿ 4. ಎ 5. ಬಿ 6. ಬಿ

## 1.5.6. ಘಟಕಾಂತ್ಯ ಅಭ್ಯಾಸಗಳು

1. ವಿಕಾಸಾತ್ಮಕ ಕಾರ್ಯಗಳ ಅರ್ಥ ಮತ್ತು ಪ್ರಾಮುಖ್ಯತೆಯನ್ನು ವಿವರಿಸಿ.

2. ಬಾಲ್ಯಹಂತದ ವಿಕಾಸಾತ್ಮಕ ಕಾರ್ಯಗಳನ್ನು ವಿವರಿಸಿ.

3. ಹದಿಹರೆಯದ ಹಂತದ ಲಕ್ಷಣಗಳನ್ನು ಹಾಗೂ ವಿಕಾಸಾತ್ಮಕ ಕಾರ್ಯಗಳನ್ನು ವಿವರಿಸಿ.

4. ಹದಿಹರೆಯ ಹಂತದ ಮೈಲಿಗಲ್ಲುಗಳನ್ನು ವಿವರಿಸಿ.

## 1.5.7. ಪರಾಮರ್ಶನ ಸೂಚಿ


1. https://www.jeffreyarnett.com. Emerging adulthood A theory of development from Late teens through twenties- “do you feel that you have reached adulthood”

2. https://www.webmd.com-developmental tasks and variations

3. https://www.youtube.com science activity on simple pendulum

4. https://www.ocw.mit.educ. Motion and light experiments and images gallery

5. Elizabeth Hurlock (32nd reprint 2016) Child Development Sixth Edition Mc Graw Hill Educaiton Indian Edition

6. Laura. E.Berk Childhood Development Ninth edition Pearson Education Inc.(2013, 1017)

7. Chauhan S.S. Advanced Educational Psychology Vikas Publishing House Pvt.Ltd. (2010)

8. Dandapani.S. Advanced Educational Psychology (2005) Anmol Publications Delhi

9. Nataraj V. Vikasa manovignana (2010) Srinivas Prakashana Mysore

10. ಡಾ.ಸುನೀತಾ.ಸಿ.ಎನ್: ಶೈಕ್ಷಣಿಕ ಮನೋವಿಜ್ಞಾನ, ಕಲಿಕೆ ಮತ್ತು ಕಲಿಕಾರ್ಥಿ, ಶೃತಿಲೋಕ ಪ್ರಕಾಶನ (2014) ಮೈಸೂರು.

11. Dr.Suneetha.CN Understanding the learner and the learning process Shruthiloka Prakashana 2011 Mysore.

12. John W.Santrock University of Texas at Dallas - Adolescence TATA McGRAW – HILL EDITION (2011)


*********************

# ಬ್ಲಾಕ್ 1 : ಕಲಿಕಾರ್ಥಿ, ವಿಕಾಸ ಮತ್ತು ಕಲಿಕೆ

## ಘಟಕ 6 : ಜ್ಞಾನಗ್ರಹಣ ಮತ್ತು ಕಲಿಕೆ

## ಜ್ಞಾನಗ್ರಹಣದ ಅರ್ಥ, ವ್ಯಾಪ್ತಿ ಮತ್ತು ಕಲಿಕೆಯಲ್ಲಿ ಅದರ ಪಾತ್ರ

### ಘಟಕ ರಚನೆ


1.6.1. ಕಲಿಕಾ ಉದ್ದೇಶಗಳು

1.6.2. ಪೀಠಿಕೆ

1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.6.3.1. ಜ್ಞಾನಗ್ರಹಣದ ಅರ್ಥ, ಸ್ವರೂಪ ಮತ್ತು ಪ್ರಾಮುಖ್ಯತೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

1.6.3.2. ಕಲಿಕೆ ಮತ್ತು ಕಲಿಕೆಯ ಸ್ವರೂಪ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

1.6.3.3. ಕಲಿಕೆಯಲ್ಲಿ ಜ್ಞಾನಗ್ರಹಣದ ಪಾತ್ರ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

1.6.4. ಸಾರಾಂಶಿಸೋಣ

1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1, 2 ಮತ್ತು 3

1.3.6. ಘಟಕಾಂತ್ಯ ಅಭ್ಯಾಸಗಳು

1.3.7. ಪರಾಮರ್ಶನ ಗ್ರಂಥಗಳು


### 1.6.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಜ್ಞಾನಗ್ರಹಣ ಪ್ರಕ್ರಿಯೆಯನ್ನು ವ್ಯಾಖ್ಯೆ ತಿಳಿಸುವರು;
- ಜ್ಞಾನಗ್ರಹಣ ಪರಿಕಲ್ಪನೆಯನ್ನು ಅದರ ಪೂರಕಾಂಶಗಳೊಂದಿಗೆ ವಿವರಿಸುವರು;
- ಕಲಿಕಾ ಸ್ವರೂಪವನ್ನು ವರ್ಣಿಸುವರು; ಮತ್ತು
- ಕಲಿಕೆ ಮತ್ತು ಜ್ಞಾನಗ್ರಹಣಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವರು.

## 1.6.2. ಪೀಠಿಕೆ

ಯಾವುದೇ ಒಂದು ಚಟುವಟಿಕೆ, ಕೆಲಸ ಅಥವಾ ವರ್ತನೆಯಾಗಲಿ, ಅವು ಬಾಹ್ಯಲಕ್ಷಣಗಳನ್ನು ಹೊಂದಿದ್ದು ಆ ಕಾರಣದಿಂದ ಅವುಗಳನ್ನು ಸುಲಭವಾಗಿ ವೀಕ್ಷಿಸಬಹುದೆಂದು ನಿಮಗೆಲ್ಲಾ ತಿಳಿದೇ ಇದೆ. ಆದರೆ ಇದಕ್ಕೆ ವಿರುದ್ಧವಾಗಿ ಕೆಲವು ಕ್ರಿಯೆ/ಪ್ರಕ್ರಿಯೆಗಳು ವಾಸ್ತವವಾಗಿ ಇದ್ದರೂ ಅಥವಾ ನಡೆಯುತ್ತಿದ್ದರೂ ಗೋಚರಕ್ಕೆ ಸಿಕ್ಕುವುದಿಲ್ಲ. ಉದಾಹರಣೆಗೆ ಮನುಷ್ಯನ ಮನಸ್ಸಿನಲ್ಲಿ ಏನೆಲ್ಲಾ ನಡೆಯುತ್ತಿರುತ್ತದೆ, ಆದರೆ ಮೇಲ್ನೋಟಕ್ಕೆ ಏನೂ ಕಾಣಿಸುವುದಿಲ್ಲ, ಅಲ್ಲವೇ? ಇಂತಹ ವರ್ತನೆಗಳನ್ನು ಅಂತರಂಗ ವರ್ತನೆಗಳೆಂದು ಹೇಳಬಹುದೇನೋ! ನಮ್ಮ ಚಿಂತನೆ, ಯೋಜನೆ, ವಿಮರ್ಶೆ, ತಾರ್ಕಿಕ ವಿಶ್ಲೇಷಣೆ ಮುಂತಾದುವುಗಳು ಮನಸ್ಸಿನಲ್ಲೇ ಹೆಚ್ಚು ನಡೆಯುವುವು. ಹಾಗೆಯೇ ಜ್ಞಾನಗ್ರಹಣವೂ ಅಂತರಂಗದ ಅಥವಾ ಮಾನಸಿಕ ಪ್ರಕ್ರಿಯೆಯೇ ಆಗಿರುವುದು. ವ್ಯಕ್ತಿಯ ಜ್ಞಾನಗ್ರಹಣವು ವಿಶೇಷವಾಗಿ ಗಮನ ಹರಿಸುವುದು, ತೀಕ್ಷ್ಣವಾಗಿ ಮನಸ್ಸನ್ನು ಕೇಂದ್ರೀಕರಿಸಿ ನಡೆಸುವ ಚಿಂತನೆ ಮಾಡುವುದು, ಅರ್ಥಮಾಡಿಕೊಳ್ಳುವುದು, ಗ್ರಹಿಕೆ, ಸ್ಮೃತಿ, ಯೋಜನೆ ಮತ್ತು ಸಮಸ್ಯಾ–ಪರಿಹಾರ ಇವೆಲ್ಲವನ್ನು ಒಳಗೊಂಡಿರುತ್ತದೆ. ಜ್ಞಾನಗ್ರಹಣವೊಂದು ಬೌದ್ಧಿಕ ಕ್ರಿಯೆ. ಈ ಘಟಕದಲ್ಲಿ ನೀವು ಜ್ಞಾನಗ್ರಹಣದ ಅರ್ಥ, ಸ್ವರೂಪ ಮತ್ತು ಪ್ರಾಮುಖ್ಯತೆ ಅಷ್ಟೇ ಅಲ್ಲದೆ ಕಲಿಕೆಯಲ್ಲಿ ಜ್ಞಾನಗ್ರಹಣದ ಪಾತ್ರವನ್ನು ತಿಳಿದುಕೊಳ್ಳಲಿದ್ದೀರಿ.

## 1.6.3.1. ಜ್ಞಾನಗ್ರಹಣದ ಅರ್ಥ, ಸ್ವರೂಪ ಮತ್ತು ಪ್ರಾಮುಖ್ಯತೆ

**ಅಭ್ಯಾಸ–I**

ಚಿಕ್ಕ ಮಕ್ಕಳನ್ನು ವೀಕ್ಷಿಸುವ ಸುವರ್ಣಾವಕಾಶವೊಂದು ನಿಮಗೆ ಸಿಕ್ಕಿತು ಎಂದಾದರೆ, ಹೀಗೆ ಮಾಡಿ:

ಕೆಲವು ಚಟುವಟಿಕೆ ಮತ್ತು ಕ್ರಿಯೆಗಳನ್ನು ಎಷ್ಟೇ ಸಲ ಆದರೂ ಸರಿ, ಮಕ್ಕಳು ಅದನ್ನು ಆಯಾಸವಿಲ್ಲದೇ ಪುನಃ ಪುನಃ ಮಾಡುತ್ತಲೇ ಇರುತ್ತಾರೆ. ಈ ಕೆಳಗೆ ನೀಡಿರುವ ನಿದರ್ಶನವನ್ನು ನೋಡಿ, ಮತ್ತು ನಂತರ ನಿಮ್ಮ ಅನುಭವದಿಂದ ಈ ಪಟ್ಟಿಯನ್ನು ಇನ್ನಷ್ಟು ಉದ್ದಮಾಡಿ!!!

1. ಶಿಶುವೊಂದು ಆಟಿಕೆಯೊಂದನ್ನು ಪದೇ ಪದೇ ಕೆಳಕ್ಕೆ ಬೀಳಿಸುತ್ತಲೇ ಇದೆ (ಅಮ್ಮ ಎಷ್ಟು ಬಾರಿ ಎತ್ತಿಕೊಟ್ಟರೂ!)
2. ದಟ್ಟಗಾಲಿಡುತ್ತಿರುವ/ತಪ್ಪು–ತಪ್ಪು ಹೆಜ್ಜೆ ಇಡುತ್ತಿರುವ ಮಗುವೊಂದು ಮೆಟ್ಟಿಲುಗಳನ್ನು ಹತ್ತುವುದು, ಇಳಿಯುವುದು–ಇದನ್ನೇ ಪುನರಾವರ್ತಿಸುತ್ತಿದೆ, ಯಾವ ಆಯಾಸವೂ ಇಲ್ಲದೆ !
3. ಎರಡು ವರ್ಷದ ಹೆಣ್ಣು ಮಗುವೊಂದಕ್ಕೆ ಡಬ್ಬಿಯೊಂದರ ಮುಚ್ಚಳವನ್ನು ತೆಗೆಯಲು ಬಂತು; ಹಾಗೆಯೇ ಪುನಃ ಮುಚ್ಚಲೂ ಬಂತು ! ಈಗ ಆಕೆ ಪುರುಸೊತ್ತಿಲ್ಲದೇ ಆ ಡಬ್ಬಿಯ ಮುಚ್ಚಳವನ್ನು ಹಾಕುವುದೂ, ತೆಗೆಯುವುದೂ–ಮಾಡುತ್ತಲೇ ಇದ್ದಾಳೆ.
4. ಶಾಲಾ ಪೂರ್ವ ಹಂತದ ಮಗುವೊಂದು (ಸುಮಾರು 3 ವರ್ಷಗಳು) ತನ್ನ ಅಮ್ಮನಿಗೆ ಆಕೆ ಡಾಕ್ಟರ್ ಎಂದೂ ಮತ್ತು ತಾನು ಪೇಶೆಂಟ್ (ರೋಗಿ) ಎಂದು ತಾಕೀತು ಮಾಡುವಳು. ರೋಗಿಗೋ ಹೊಟ್ಟೆನೋವು, ಹಾಗಾಗಿ ಅಮ್ಮನಿಗೆ "ಡಾಕ್ಟರ್ ನನಗೆ ಹೊಟ್ಟೆನೋವು ಎಂದು" ನಟಿಸುತ್ತಾ ಹೇಳುತ್ತದೆ. ಮತ್ತೆ ಅಮ್ಮನೇನು ಸುಮ್ಮನಿರುವಳೇ? ಅವಳೂ ಪಕ್ಕಾ ಡಾಕ್ಟರಂತೆ, ನಟಿಸಿ, ಪರೀಕ್ಷಿಸಿ, ಔಷಧವನ್ನು ಕೊಟ್ಟಂತೆ ಮಾಡುತ್ತಾಳೆ. ಔಷದಿಯನ್ನು ತೆಗೆದುಕೊಂಡಂತೆ ಅಭಿನಯಿಸಿದ ಮಗುವು "ಆಹಾ ನನ್ನ ಹೊಟ್ಟೆನೋವು ಈಗ ಮಾಯಾ!" ಎಂದು ಚಪ್ಪಾಳೆ ತಟ್ಟಿ ಸಂತೋಷಿಸುತ್ತದೆ. ಆದರೆ, ಈ ಆಟ ಬರೀ ಒಂದು ಸಲ ಅಲ್ಲ, ಹಲವಾರು ಬಾರಿ, ಅಮ್ಮನಿಗೆ ಸಾಕುಸಾಕಾಗಿ ಹೋಗುತ್ತದೆ. ಆದರೆ ಮಗುವಿಗೆ ಮಾತ್ರ ಇದೇ ಆಟ ಮತ್ತೂ ಮುಂದುವರಿಯಬೇಕೆಂದಿದೆ. ಅದಕ್ಕೆ ಯಾವುದೇ ಬೇಸರವಾಗಲೀ, ಆಯಾಸವಾಗಲೀ ಅಥವಾ ಏಕತಾನತೆಯಾಗಲೀ ಇಲ್ಲ.

ಈ ಎಳೆಯ ಮಕ್ಕಳು ಹೀಗೇಕೆ ಒಂದೇ ಆಟ/ಕಾರ್ಯ/ಚಟುವಟಿಕೆಯನ್ನು ತುಂಬಾಸಲ ಪುನರಾವರ್ತಿಸುತ್ತಾರೆ?ಇಂತಹ ಪುನರಾವರ್ತನೆಗೊಳ್ಳುವ ಕಾರ್ಯ/ಚಟುವಟಿಕೆಗಳಿಂದ ಎಳೆಯ ಕಂದಮ್ಮಗಳು ತಮ್ಮದೇ ಆದ ಸ್ಕೀಮಾವನ್ನು ಅಂದರೆ ಜ್ಞಾನದ ಆಕೃತಿ ಕಲ್ಪಗಳನ್ನು/ಮನೋಮುದ್ರಿಕೆಗಳನ್ನು ಸುಸ್ಥಿರವಾಗಿ ಕಟ್ಟಿಕೊಳ್ಳುತ್ತಾರೆ. ಪುನರಾವರ್ತನೆಯಿಂದಾಗಿ ಈ ಆಕೃತಿಕಲ್ಪಗಳು ಸ್ಪಷ್ಟವಾಗುವುವು ಮತ್ತು ಗೊಂದಲರಹಿತವಾದ ಸಂಜ್ಞಾನಾತ್ಮಕ ರಚನೆಯನ್ನು ಪಡೆದುಕೊಳ್ಳುತ್ತವೆ.

**ಅಭ್ಯಾಸ–II**

ಸುಮಾರು 7ರಿಂದ 10ವರ್ಷದ ಮಕ್ಕಳಿಗೆ ಒಂದು ಸಂಗ್ರಹಣ ಮಾಡುವ ಚಟುವಟಿಕೆಗಳನ್ನು ನೀಡಿ. ಅವರು ಬೇಕಾದರೆ, ಬಳಸಿ ಎಸೆದ ಸ್ಟ್ರಾಗಳು, ಬಾಟಲ್‌ಗಳ ಮುಚ್ಚಳ, ನಾಣ್ಯಗಳು, ಕಲ್ಲುಗಳು, ಹೂವು, ಎಲೆಗಳು ಇತ್ಯಾದಿಗಳನ್ನು ಸಂಗ್ರಹಿಸಲಿ. ನಂತರ ಅವುಗಳನ್ನು ಒಂದೆಡೆಗೆ ಸೇರಿಸಿ, ಸರಿಯಾಗಿ ಜೋಡಿಸಿ ಎಂದು ತಿಳಿಸಿ. ಅವರಿಗೆ ತಿಳಿದಂತೆ ಈ ಜೋಡಣೆಯ ಕಾರ್ಯವನ್ನು ಮಾಡಲಿ. ಇವರ ಚಟುವಟಿಕೆಗಳನ್ನು ವೀಕ್ಷಿಸುವ ನೀವು ಈ ರೀತಿ ಕೆಳಗಿನಂತೆ ದಾಖಲಿಸಿ:

1. 7ರಿಂದ 8 ವರ್ಷಗಳವರೆಗಿನ ಮಕ್ಕಳು ವಸ್ತುಗಳನ್ನು ––––––––ಆಧರಿಸಿ ಜೋಡಿಸಿದರು.
2. 8ರಿಂದ 9 ವರ್ಷಗಳವರೆಗಿನ ಮಕ್ಕಳು ವಸ್ತುಗಳನ್ನು ––––––––ಆಧರಿಸಿ ಜೋಡಿಸಿದರು.
3. 9ರಿಂದ 10 ವರ್ಷಗಳವರೆಗಿನ ಮಕ್ಕಳು ವಸ್ತುಗಳನ್ನು ––––––––ಆಧರಿಸಿ ಜೋಡಿಸಿದರು.

**ಮಕ್ಕಳ ಈ ವರ್ತನೆಗೆ ನಿಮ್ಮ ತೀರ್ಮಾನವೇನು?**

ಉತ್ತರ: ಇಲ್ಲಿ ಮಕ್ಕಳು ತಮ್ಮ ಜ್ಞಾನಗ್ರಹಣದ ಪ್ರಕ್ರಿಯೆಯನ್ನು ವಿವಿಧ ಮಟ್ಟದಲ್ಲಿ ತೋರಿಸುವ ಸಂಭಾವ್ಯತೆ ಇದೆ. ಉದಾಹರಣೆಗೆ, ಬಹಳ ಸುಲಭ/ಸರಳ ವರ್ಗೀಕರಣ ಅಂದರೆ, ಕೇವಲ ಒಂದೇ ಒಂದು ಲಕ್ಷಣವನ್ನು ಆಧರಿಸಿ ವರ್ಗೀಕರಣ ಮಾಡುವುದು. ಅಂದರೆ, ಎಲ್ಲಾ ಕಲ್ಲುಗಳು, ಎಲ್ಲಾ ಹೂವುಗಳು, ಕಡ್ಡಿಗಳು ಇತ್ಯಾದಿ. ಅಥವಾ ಇದರಲ್ಲಿ ಜಾಸ್ತಿ/ಕಮ್ಮಿ, ಅಥವಾ ಯಾವುದಾದರೂ ಶ್ರೇಣಿಯಾಧಾರಿತ ವರ್ಗೀಕರಣ, ಆಕ್ರಮಿಸುವ ಸ್ಥಳವನ್ನು ಆಧರಿಸಿ ಕೂಡ ವರ್ಗೀಕರಣ ಮಾಡಬಹುದು. ಈ ಗ್ರಹಿಕೆ ನಮಗೆ ಮಕ್ಕಳ ಜ್ಞಾನಗ್ರಹಣವನ್ನು ಅರಿಯುವಲ್ಲಿ ಸಹಾಯವಾಗುತ್ತದೆ.

**ಜ್ಞಾನಗ್ರಹಣವೆಂದರೇನು?**

ಜ್ಞಾನಗ್ರಹಣವು ಮಾನಸಿಕವಾಗಿ, ಬೌದ್ಧಿಕವಾಗಿ ನಡೆಯುವ ಪ್ರಕ್ರಿಯೆ ಮತ್ತು ಉತ್ಪನ್ನವಾಗಿದ್ದು, ಇದರ ಪರಿಣಾಮವಾಗಿ ವ್ಯಕ್ತಿಯು ವಿಚಾರಗಳನ್ನು ಅರಿತವನಾಗುತ್ತಾನೆ. ಇದು ಮುಖ್ಯವಾಗಿ ಗಮನಹರಿಸುವಿಕೆ, ಸ್ಮರಣೆ, ಸಾಂಕೇತಿಸುವಿಕೆ, ವರ್ಗೀಕರಣ, ಯೋಜನೆ, ತರ್ಕ, ಚಿಂತನೆ, ಸಮಸ್ಯಾಪರಿಹಾರ, ಸೃಜನಶೀಲತೆ ಮತ್ತು ಕಲ್ಪನೆಯಿಂದ ಕೂಡಿದ ಉತ್ಪ್ರೇಕ್ಷೆಗಳು–ಇಂತಹ ಆಂತರಂಗಿಕ ವಿಚಾರಗಳನ್ನು ಒಳಗೊಂಡಿರುತ್ತದೆ.

ಪಿಯಾಷೆಯು ಹೇಳುವಂತೆ ಯಾವ ವ್ಯಕ್ತಿಯೂ ಹುಟ್ಟಿನಿಂದಲೇ ಜ್ಞಾನವಂತನಾಗಿ ಹುಟ್ಟುವುದಿಲ್ಲ. ಬದಲಿಗೆ ತನ್ನ ಗ್ರಹಿಕೆ, ಸಂವೇದನೆ ಮತ್ತು ಕೈ–ಕಾಲುಗಳ ಚಲನವಲನಗಳಿಂದ ಮನೋರಚನೆಗಳನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗಳಿಂದ ಜ್ಞಾನವಂತನಾಗುತ್ತಾನೆ. ಅನುಭವವು ವಿಶಾಲವಾಗುತ್ತಾ ಹೋದಂತೆ ಮೊದಲು ಕಟ್ಟಿದ ಮನೋಮುದ್ರಿಕೆಗಳು (ಸ್ಕೀಮಾಗಳು) ಮಾರ್ಪಾಡಾಗುತ್ತಾ ಸಾಗುತ್ತವೆ. ಇದರಿಂದಾಗಿ ತನ್ನ ಸುತ್ತಮುತ್ತಲಿನ ಪರಿಸರದೊಂದಿಗೆ ಉತ್ತಮವಾಗಿ ಹೊಂದಿಕೊಳ್ಳಲು ವ್ಯಕ್ತಿಗೆ ಸುಲಭವಾಗುತ್ತದೆ. ಪಿಯಾಷೆಯ ಪ್ರಕಾರ ಪ್ರತಿಯೊಂದು ಮಗುವೂ ತನ್ನ ಬೌದ್ಧಿಕ ಪ್ರಪಂಚವನ್ನು, ಮನೋರಚನೆಗಳನ್ನು ತನ್ನ ಸ್ವಂತ ಅನುಭವಗಳಿಂದಲೇ/ ಅನ್ವೇಷಣೆಗಳಿಂದಲೇ ಕಟ್ಟಿಕೊಳ್ಳವುದು. ಹಾಗಾಗಿ ಆತ ಪ್ರತಿಪಾದಿಸಿದ ಕಲಿಕಾ ಸಿದ್ಧಾಂತವು 'ಸಂರಚನಾ ಉಪಕ್ರಮ'ವೆಂದೇ ಜನಪ್ರಿಯವಾಗಿದೆ.

ಇಂದ್ರಿಯಾಧಾರಿತವಾಗಿ ಅನುಭವದಿಂದ ದೊರಕುವ ಮಾಹಿತಿಯು 'ಸ್ಕೀಮಾ'/'ಆಕೃತಿಕಲ್ಪ'ಗಳಾಗಿ ವ್ಯಕ್ತಿಯ

ಮನಸ್ಸಿನಲ್ಲಿ ದಾಖಲಾದರೂ ವಯಸ್ಸಿಗೆ ತಕ್ಕಂತೆ ಅಥವಾ ಮಗುವು ಬೆಳೆದಂತೆಲ್ಲಾ ಅವುಗಳು ಮಾರ್ಪಾಡಾಗುತ್ತವೆ ಎಂಬ ವಿಚಾರವನ್ನು ಪಿಯಾಷೆಯು ಅತ್ಯಂತ ಖಚಿತವಾಗಿ ಹೇಳಿದ್ದಾನೆ. ಉದಾಹರಣೆಗೆ, ಪ್ರಾರಂಭದಲ್ಲಿ ಸ್ಕೀಮಾಗಳು ಇಂದ್ರಿಯಾಧಾರಿತ ಚಟುವಟಿಕೆಗಳಿಂದ ವಿನ್ಯಾಸಗೊಳ್ಳುತ್ತವೆ. ಆದರೆ ಸ್ವಲ್ಪ ದೊಡ್ಡದಾದ (ಎರಡೂವರೆಯಿಂದ ಮೂರು ವರ್ಷಗಳು) ಮಗುವು ತಾನೂ ಚಿಂತಿಸಬಲ್ಲೆ ಎಂಬ ವರ್ತನೆಗಳನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಮಗುವಿನ ವರ್ತನೆ ಬರೀ ಪರಾವರ್ತಿತ ಪ್ರತಿಕ್ರಿಯೆ ಆಗಿರುವುದಿಲ್ಲ. ಬದಲಿಗೆ ಮಗುವು ತಾನೂ ಏನೇ ಮಾಡುವ ಮೊದಲು ಸ್ವಲ್ಪ ಯೋಚಿಸುತ್ತದೆ. ಇಲ್ಲಿಂದಲೇ ಜ್ಞಾನಗ್ರಹಣದ ಮೊದಲ ಮೆಟ್ಟಿಲು ಪ್ರಾರಂಭವಾಗುತ್ತದೆನ್ನಬೇಕು. ಅಂದರೆ, ಇಂದ್ರಿಯಾಧಾರಿತ/ಸಂವೇಗಾತ್ಮಕ ರೀತಿಯನ್ನು ಬಿಟ್ಟು ಸಂಜ್ಞಾನಾತ್ಮಕ ರೀತಿಗೆ ಪರಿವರ್ತನೆಯಾಗುವ ಈ ಹಂತದಿಂದಲೇ 'ಮಾನಸಿಕ ಪ್ರಾತಿನಿಧ್ಯಗಳ'(mental representations) ಉಗಮವಾಗುವುದು. ನಮ್ಮ ಪ್ರಬಲವಾದ ಮಾನಸಿಕ ಪ್ರಾತಿನಿಧ್ಯಗಳೆಂದರೆ, ಮನಸ್ಸಿನಲ್ಲಿ ಮೂಡುವ 'ಬಿಂಬಗಳು/ಮಾನಸಿಕ ಚಿತ್ರಗಳು'. ಇದು ವಸ್ತುಗಳು, ಜನ, ಅವಕಾಶ, ಘಟನೆ, ಸಂದರ್ಭ– ಹೀಗೆ ಏನು ಬೇಕಾದರೂ ಆಗಿರಬಹುದು. ಮುಂದೆ ಇವೇ 'ಪರಿಕಲ್ಪನೆಗಳಾಗುತ್ತವೆ.' ಹಾಗೆಯೇ ಸಾಮಾನ್ಯೀಕರಣ ಮತ್ತು ವಿಭಿನ್ನೀಕರಣದ ಪ್ರಕ್ರಿಯೆಗಳ ಮೂಲಕ ಇಂತಹ ಪರಿಕಲ್ಪನೆಗಳು ವರ್ಗೀಕರಣಗೊಂಡು ಸುವ್ಯವಸ್ಥಿತವಾಗಿ ಮನದಲ್ಲಿ ಬೇರೂರುತ್ತವೆ. ಉದಾಹರಣೆಗೆ, ನಾಲ್ಕು ಕಾಲುಗಳಿರುವುದು ನಾಯಿ, ಎಂದು ನಿರ್ಧರಿಸಿದ ಮಗು ಸಾಮಾನ್ಯೀಕರಣ ಮತ್ತು ವಿಭಿನ್ನೀಕರಣದ ಪ್ರಕ್ರಿಯೆಯ ಮೂಲಕ ಬೊಗಳುವ ಪ್ರಾಣಿ ನಾಯಿ ಎಂಬ ತೀರ್ಮಾನಕ್ಕೆ ಬರುತ್ತದೆ.

ಮತ್ತೆ ಇನ್ನೊಂದು ಉದಾಹರಣೆಯನ್ನು ನೋಡೋಣ: ನಾವು ಯಾರನ್ನೇ ಆಗಲಿ, ಅವರಂತೆಯೇ ಅಣಕವಾಡಿ ತೋರಿಸುವಾಗ, ಇದೇ ಮನೋಪ್ರಾತಿನಿಧ್ಯಗಳು ವ್ಯಕ್ತಿಯಲ್ಲಿದ್ದಾಗ ಮಾತ್ರ ಅದು ಸಾಧ್ಯ ಅಲ್ಲವೇ? ಯಾರೋ ಒಬ್ಬರು ಮಾಡಿದ ಚಾಕಚಕ್ಯತೆಯನ್ನು ನೀವೂ ಮಾಡಲು ಪ್ರಯತ್ನಿಸಿದಾಗಲೂ ಕೂಡ ಅದು ಸಾಧ್ಯವಾಗುವುದು. ಇಂತಹ ಮನೋಪ್ರಾತಿನಿಧ್ಯಗಳಿಂದ ಮೂಡಿದ ಚಿಂತನಾ ಶಕ್ತಿ, ಸ್ಮೃತಿ, ಅನುಭವ ಶ್ರೀಮಂತಿಕೆ ಮುಂತಾದುವುಗಳಿಂದ ವ್ಯಕ್ತಿ ಇನ್ನಷ್ಟು ಬುದ್ಧಿವಂತಿಕೆಯಿಂದ, ಪರಿಣಾಮಕಾರಿಯಾಗಿ ತನ್ನ ಅರ್ಥಪೂರ್ಣವಾದ ಅನುಭವಗಳನ್ನು ಪ್ರಬಲವಾದ, ನಿರ್ವಹಿಸಬಹುದಾದ ಮತ್ತು ನಿಭಾಯಿಸಬಹುದಾದ ನೆನಪಿನ ತುಣುಕುಗಳನ್ನಾಗಿ ಸಂಗ್ರಹಿಸಿಟ್ಟುಕೊಳ್ಳುತ್ತಾನೆ. ಪಿಯಾಷೆಯ ಸಿದ್ಧಾಂತದಲ್ಲಿ ಜೀವಿಯು ಸಂವೇಗಾತ್ಮಕ ಹಂತದಿಂದ ಮಾನಸಿಕ ಪ್ರಾತಿನಿಧ್ಯಗಳನ್ನು ರಚಿಸಿಕೊಳ್ಳುವ ಹಂತದೆಡೆಗೆ ಪರಿವರ್ತನೆಯಾಗುವ ಪ್ರಮುಖ ಪ್ರಕ್ರಿಯೆಯಲ್ಲಿ, ಮೇಲೆ ವಿವರಿಸಿದ ಜ್ಞಾನಪ್ರಕ್ರಿಯೆಗಳ ಸ್ಪಷ್ಟವಾದ ವಿವರಣೆಯನ್ನು ನೋಡಬಹುದಾಗಿದೆ. ಹಾಗೆಯೇ ಬಾಲ್ಯಹಂತದಿಂದ ವಯಸ್ಕ ಹಂತದವರೆಗೆ ಈ ಪ್ರಕ್ರಿಯೆಯು ಅನೂಚಾನವಾಗಿ ನಡೆಯುತ್ತಲೇ ಇರುವುದು. ಇಂತಹ ಸಂಜ್ಞಾನಾತ್ಮಕ ಕಾರ್ಯದಲ್ಲಿ ಸಂಘಟನೆ, ವ್ಯವಸ್ಥೀಕರಣ ಮತ್ತು ಹೊಂದಾಣಿಕೆಗಳು ನಿರಂತರವಾಗಿ ಘಟಿಸುತ್ತಲೇ ಇರುತ್ತವೆ ಮತ್ತು ಇದು ಜೀವನಪರ್ಯಂತ ಚೈತನ್ಯಪೂರ್ಣವಾದ ಪ್ರಕ್ರಿಯೆಯೂ ಆಗಿರುತ್ತದೆ ಎಂಬುದನ್ನು ನಾವು ಮರೆಯುವಂತಿಲ್ಲ.

ಹೊಂದಾಣಿಕೆ: ವ್ಯಕ್ತಿಯು ತನ್ನ ಸುತ್ತಮುತ್ತಲಿನ ಪರಿಸರದೊಡನೆ ನೇರವಾಗಿ ಅಂತರ್‌ಕ್ರಿಯೆಯಲ್ಲಿ ಒಳಪಟ್ಟಾಗ ಹಲವಾರು ಸ್ಕೀಮಾಗಳನ್ನು ರಚಿಸಿಕೊಳ್ಳುತ್ತಾನೆ. ಈ ಸ್ಕೀಮಾಗಳು ಅವನು ತನ್ನ ಪರಿಸರದೊಂದಿಗೆ, ಸಮಂಜಸವಾಗಿ ಹೊಂದಿಕೊಳ್ಳುವಲ್ಲಿ ಪ್ರಮುಖವಾದ ಪಾತ್ರವನ್ನು ಒಹಿಸುತ್ತವೆ. ಸಂಗ್ರಹಣ ಕಾರ್ಯದಲ್ಲಿ ವ್ಯಕ್ತಿಯು ಈಗಾಗಲೇ ತನ್ನಲ್ಲಿರುವ ಸ್ಕೀಮಾಗಳಿಂದ ಪ್ರತಿಕ್ರಿಯಿಸುತ್ತಾ ದೊರೆತ ಅನುಭವಗಳ ಆಧಾರದಿಂದ ಮತ್ತೆ ಹೊಸ ಹೊಸ ಆಕೃತಿಕಲ್ಪಗಳನ್ನು ರಚಿಸಿಕೊಳ್ಳುವನು. ಇದರಿಂದ ತನ್ನ ಹಳೆಯ ಯೋಚನೆ/ ಕಾರ್ಯವಿಧಾನ ಬದಲಾಗಬೇಕಿದೆ ಎಂದು ಅರ್ಥಮಾಡಿಕೊಂಡ ವ್ಯಕ್ತಿಯು ಹೊಸ ಚಿಂತನೆ/ ಕಾರ್ಯವಿಧಾನಗಳನ್ನು ಅಳವಡಿಸಿಕೊಂಡು ಪರಿಸರದೊಂದಿಗೆ ಉತ್ತಮವಾದ ಹೊಂದಾಣಿಕಯನ್ನು ಮಾಡಿಕೊಳ್ಳುತ್ತಾನೆ.

ಕಾಲ ಕಳೆದಂತೆ ಸಂಗ್ರಹಣ, ಅನುಕೂಲನ, ವ್ಯವಸ್ಥೀಕರಣ, ಮತ್ತು ಹೊಂದಾಣಿಕೆಗಳ ಜೊತೆಯಲ್ಲಿ ಸಮತೋಲನವೂ ಕೂಡ ಬದಲಾಗುತ್ತಾ ಸುಸ್ಥಿರವಾಗುತ್ತಾ ಸಾಗುವುದು–ಎಂಬುದು ಪಿಯಾಷೆಯ ಪ್ರತಿಪಾದನೆ.

ಒಂದು ವೇಳೆ ಮಕ್ಕಳು ಸರಿಯಾಗಿ ಪರಿವರ್ತಿತರಾಗದಿದ್ದರೆ, ಅವರ ಸಂಗ್ರಹಣೆಯು ವ್ಯವಸ್ಥೀಕರಣಕ್ಕೊಳಗಾಗದಷ್ಟು ಮಿತಿಮೀರಿದೆಯೆಂದು ಅರ್ಥೈಸಬಹುದಾಗಿದೆ. ಇದನ್ನು 'ಸಂಜ್ಞಾನಾತ್ಮಕ ಅಸಮತೋಲನ' ಎನ್ನುತ್ತಾನೆ, ಪಿಯಾಷೆ. ವಿಕಾಸದ ಪ್ರಕ್ರಿಯೆಯು ಶೀಘ್ರಗತಿಯಲ್ಲಿದ್ದಾಗ, ಮಕ್ಕಳಲ್ಲಿ ಸಂಜ್ಞಾನಾತ್ಮಕ ಅಸಮತೋಲನ ಉಂಟಾಗುವುದು. ಇದರಿಂದಾಗಿ ಅವರು ಸಂಜ್ಞಾನಾತ್ಮಕವಾದ ಅಸ್ಥಿರತೆ/ಅಶಾಂತಿ/ ಚಂಚಲತೆಯನ್ನು ಅನುಭವಿಸುವರು. ಯಾವಾಗ ಅವರಿಗೆ ದೊರಕುವ ಹೊಸ ವಿಚಾರಗಳು/ಅನುಭವಗಳು ತಮ್ಮ ಹಳೆಯವಕ್ಕೆ ಹೊಂದಾಣಿಕೆಯಾಗುವುದಿಲ್ಲ ಎಂಬ ಅರಿವು ಮೂಡುವುದೋ ಆಗ ಅವರು ಸಂಗ್ರಹಣದಿಂದ ಅನುಕೂಲನ, ವ್ಯವಸ್ಥೀಕರಣ ಮತ್ತು ಸಂಘಟನೆಗೆ ಮಾನಸಿಕವಾಗಿ ಸ್ಥಳಾಂತರಗೊಳ್ಳುವರು. ಇದರಿಂದಾಗಿ ಈ ಮೊದಲೇ ರೂಪಿತವಾಗಿದ್ದ ಸ್ಕೀಮಾ/ಆಕೃತಿಕಲ್ಪಗಳು ಪರಿವರ್ತನೆಯಾಗುವುವು. ಹಾಗೂ ಇದು ಮುಂದಿನ ಕಾರ್ಯಹಂತಗಳಲ್ಲಿ ಸಫಲವಾಗುತ್ತಾ ಸಾಗುವುದರಿಂದ ಮಕ್ಕಳು 'ಸಮತೋಲನವನ್ನು' ಹೊಂದುವರು. ಪಿಯಾಜೆಯು ಹೀಗೆ ಸಂಜ್ಞಾನಾತ್ಮಕವಾಗಿ 'ಹಿಂದಕ್ಕೂ–ಮುಂದಕ್ಕೂ' ಆಗುವ ಬೌದ್ಧಿಕ ಚಲನೆಯನ್ನೇ 'ಸಮತೋಲನ–ಅಸಮತೋಲನ ಪ್ರಕ್ರಿಯೆ' ಎಂದು ಕರೆದು, 'ಸಮತೋಲನೀಕರಣ'ವೆಂದು ವ್ಯಾಖ್ಯಾನಿಸಿದ್ದಾನೆ.

ಸಂಘಟನೆ: ವ್ಯಕ್ತಿಯೊಬ್ಬನು ಗಳಿಸಿದ ಸ್ಕೀಮಾಗಳು ಸಂಘಟನಾ ಪ್ರಕ್ರಿಯೆಯಲ್ಲೂ ಬದಲಾಗುವುವು. ಇದು ಪರಿಸರದೊಡನೆ ಆಗುವ ನೇರವಾದ ಅಂತರ್‌ಕ್ರಿಯೆಯಿಂದ ಆಗುವುದಾದರೂ ಇದೊಂದು ಅಂತರಂಗದ ಪ್ರಕ್ರಿಯೆ. ಹಲವಾರು ಸ್ಕೀಮಾಗಳು ಅಂತರಂಗದಲ್ಲಿ ಪರಸ್ಪರ ಬಂಧಗಳಿಂದ ಒಂದು ಸಂಕೀರ್ಣ ರಚನೆಯಾಗಿ ಮಾರ್ಪಾಟಾಗುವುವು. ಉದಾಹರಣೆಗೆ, ವ್ಯಕ್ತಿಯು ಈಗಾಗಲೇ ಗಳಿಸಿದ ಜ್ಞಾನ, ರಚಿಸಿಕೊಂಡ ಸ್ಕೀಮಾಗಳನ್ನು ಪ್ರಸ್ತುತ ಘಟಿಸುವ ಹೊಸ ಘಟನೆಯೊಂದಿಗೆ ಹೋಲಿಸಿ, ಅದು ಎಷ್ಟರಮಟ್ಟಿಗೆ ಅದರಂತೆಯೇ ಇದೆ (ಹತ್ತಿರ) ಅಥವಾ ಅದರಿಂದ ಭಿನ್ನವಾಗಿದೆ ಎಂದು ಗಮನಿಸಿಕೊಳ್ಳುವನು. ಯಾವಾಗ ಗಳಿಸಿದ ಸ್ಕೀಮಾಗಳು ವಿಶಾಲವಾದ ವ್ಯಾಪ್ತಿಯುಳ್ಳ ಹಲವಾರು ಸ್ಕೀಮಾಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದುವುವೋ ಆಗ, ಒಂದು ಸುಸ್ಥಿರವಾದ ಸಮತೋಲನ ಉಂಟಾಗುವುದೆಂದು ಪಿಯಾಷೆ ಪ್ರತಿಪಾದಿಸುತ್ತಾನೆ. ಅವುಗಳ ಸಹಯೋಗದಿಂದ ವ್ಯಕ್ತಿಯು ಹೊರಪ್ರಪಂಚದಲ್ಲಿ ಇನ್ನಷ್ಟು ದಕ್ಷನೂ ಮತ್ತು ಪ್ರಬಲನೂ ಆಗುತ್ತಾನೆ.

ಮಕ್ಕಳು ಸಂವೇಗಾತ್ಮಕ ಹಂತದಿಂದ ಕ್ರಿಯಾಪೂರ್ವ ಹಂತಕ್ಕೆ ಅಂದರೆ, 2ನೇ ವರ್ಷದಿಂದ 7ನೇ ವರ್ಷಗಳವರೆಗಿನ ವಿಕಾಸಾತ್ಮಕ ಪ್ರಕ್ರಿಯೆಯಲ್ಲಿ ಸಾಗುವಾಗ, ಕಣ್ಣಿಗೆ ಕಾಣುವ ಒಂದು ಪರಿವರ್ತನೆಯೆಂದರೆ, ಅವರ ಪ್ರಾತಿನಿಧಿಕ ಅಥವಾ ಸಾಂಕೇತಿಕ ಚಟುವಟಿಕೆಗಳಲ್ಲಿ ಆಗುವ ಸಾಮರ್ಥ್ಯಗಳಲ್ಲಿನ ಅತ್ಯದ್ಭುತವಾದ ಹೆಚ್ಚಳ. ಪಿಯಾಷೆ ಹೇಳುವಂತೆ, ಎಲ್ಲಾ ಬೌದ್ಧಿಕ ಪ್ರಾತಿನಿಧ್ಯಗಳಿಗೆ ಮೂಲ ಕಾರಣ ಭಾಷೆ. ಅದರಂತೆಯೇ ಬಾಲ್ಯದಲ್ಲಿನ 'ನಂಬಿಸುವ ಆಟ' ಇಂತಹ ಪ್ರಾತಿನಿಧ್ಯಗಳಿಗೆ ಒಂದು ಉತ್ತಮ ನಿದರ್ಶನ. ಹೊಸದಾಗಿ ಗಳಿಸಿಕೊಂಡ ಸ್ಕೀಮಾಗಳನ್ನು ಮಕ್ಕಳು ಇಂತಹ ನಾಟಕಗಳಿಂದ ಸದೃಢಗೊಳಿಸಿಕೊಳ್ಳುತ್ತಾರೆ. ಆದ್ದರಿಂದಲೇ ಎಳೆಯ ಮಕ್ಕಳನ್ನು ವೈವಿಧ್ಯಮಯವಾದ ಅನುಭವಗಳಿಗೆ ಅಂದರೆ, ಚಿತ್ರಗಳು, ಕಾರ್ಟೂನ್ ಕಥೆಗಳು, ಫೋಟೋಗಳು, ರೇಖಾಚಿತ್ರಗಳು, ಮಾದರಿಗಳು, ಆಟಿಕೆಗಳು (ಅವರ "ನಂಬಿಸುವ ಆಟಗಳಿಗೆ" ನೆರವಾಗುವ) ನಕ್ಷೆಗಳು, ನಕ್ಷಾ–ಓದುವಿಕೆ ಇತ್ಯಾದಿಗಳಿಗೆ ತೆರೆದಿಡಬೇಕು. ಇದು ಅವರ ಜ್ಞಾನಗ್ರಹಣ ಸಾಮರ್ಥ್ಯವನ್ನು ಹೆಚ್ಚಿಸುವುದು. ಮಕ್ಕಳು ಬೆಳೆಯುತ್ತಾ ಹೋದಂತೆ, ಹೆಚ್ಚು ವ್ಯಾಪ್ತಿಯುಳ್ಳ ಸಂಕೇತಗಳನ್ನೂ ಅರ್ಥಮಾಡಿಕೊಳ್ಳುತ್ತಾರೆ. ಅವರ ಜ್ಞಾನದ ಹೆಬ್ಬಾಗಿಲು ಇಲ್ಲಿಂದಲೇ ಮುಕ್ತವಾಗಿ ತೆರೆದುಕೊಳ್ಳುತ್ತದೆ.

ಪಿಯಾಷೆಯ ಪ್ರಕಾರ ಮೂರ್ತ ಸಂಕ್ರಿಯಾತ್ಮಕ ಹಂತವು ಅಂದರೆ 7ರಿಂದ 11 ವರ್ಷಗಳು ಸಂಜ್ಞಾನಾತ್ಮಕ ವಿಕಾಸದಲ್ಲಿ ಒಂದು ಮುಖ್ಯವಾದ ತಿರುವು. ಚಿಂತನೆಗಳು, ಯೋಚನೆಗಳು ಮತ್ತಷ್ಟು ತಾರ್ಕಿಕವಾಗುತ್ತಾ ಉತ್ತಮ ಸಂರಚನೆಯನ್ನು ಹೊಂದುವುದೇ ಅಲ್ಲದೇ ಸಾಕಷ್ಟು ನಮ್ಯತೆಯ ಲಕ್ಷಣಗಳನ್ನು ತೋರುವುವು. ಇವರ ಈ ಚಿಂತನೆಗಳು ದೊಡ್ಡವರ ಚಿಂತನೆಗೆ ಏನೂ ಕಡಿಮೆಯಿರದಂತೆ ಇರುತ್ತವೆ. ವರ್ಗೀಕರಣ, ಅವಕಾಶಾಧಾರಿತ ತರ್ಕ, ಶ್ರೇಣೀಕರಣ, ಮತ್ತು ಸಂಜ್ಞಾನಾತ್ಮಕ ನಕ್ಷಾ ರಚನೆ – ಇವೆಲ್ಲಾ ಸಾಮರ್ಥ್ಯಗಳು ವಿಕಾಸಗೊಳ್ಳುತ್ತವೆ.

ಸುಮಾರು 11 ವರ್ಷಗಳ ನಂತರದಲ್ಲಿ ಮಕ್ಕಳು ಔಪಚಾರಿಕ ಸಂಕ್ರಿಯಾತ್ಮಕ ಹಂತವನ್ನು ತಲುಪುತ್ತಾರೆ. ಇಲ್ಲಿ ಅಮೂರ್ತ ಚಿಂತನೆ, ವೈಜ್ಞಾನಿಕ ಚಿಂತನೆ ಮತ್ತು ಕ್ರಮಬದ್ಧ ಆಲೋಚನೆಗಳನ್ನು ತೋರುತ್ತಾರೆ. ಈಗ ಅವರಿಗೆ ಮೂರ್ತವಾದ ವಸ್ತುಗಳಾಗಲೀ / ಘಟನೆಗಳಾಗಲೀ / ಸಂದರ್ಭಗಳಾಗಲೀ ಅಷ್ಟಾಗಿ ಬೇಕಾಗುವುದಿಲ್ಲ. ಬದಲಿಗೆ ತಮ್ಮದೇ ಆದ ಚಿಂತನಾ ವಿನ್ಯಾಸದಿಂದ ಆಂತರಿಕವಾಗಿ ವಿಮರ್ಶಾತ್ಮಕವಾಗಿ ಅಳೆದು–ತೂಗಿ ನೋಡಿ ತಮ್ಮದೇ ಒಂದು ಸಾಮಾನ್ಯೀಕರಣ ನಿಯಮಗಳನ್ನು ಕಟ್ಟಿಕೊಳ್ಳುತ್ತಾರೆ. ಇನ್ನು ಹದಿಹರೆಯದಲ್ಲಿ ಮಕ್ಕಳು ಆಧಾರಕಲ್ಪನೆಗಳಿಂದ ನಿಗಮನ ತರ್ಕವನ್ನು ಮಾಡುವ ಸಾಮರ್ಥ್ಯದಲ್ಲಿ ಪಳಗುತ್ತಾರೆ. ಏನಾದರೂ ಸಮಸ್ಯೆ ಎದುರಾದಾಗ, ಮೊದಲಿಗೆ ಒಂದು ಆಧಾರಕಲ್ಪನೆಯನ್ನು(hypothesis) ರಚಿಸಿಕೊಂಡು ಊಹಾತ್ಮಕವಾದ ಪ್ರತ್ಯಯಗಳನ್ನು ಪ್ರಯೋಗಾತ್ಮಕವಾಗಿ ಬಳಸಿಕೊಳ್ಳುತ್ತಾ ಅವುಗಳು ಉತ್ಪನ್ನಗಳ ಮೇಲೆ ಹೇಗೆ ಪ್ರಭಾವಿಸುವುವು ಎಂದು ಅಧ್ಯಯನ ನಡೆಸುತ್ತಾರೆ. ತನ್ಮೂಲಕ ಸಮಸ್ಯೆಯ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಆದ್ದರಿಂದ ಈ ಹಂತದ ಮಕ್ಕಳು ಕೇವಲ ಸ್ಕೀಮಾ ರಚನೆಯಾಗುವ ಪ್ರಕ್ರಿಯೆ, ಸಮಸ್ಯೆಗಳ ಸಂವೇದನೆ, ಅವುಗಳ ಅರ್ಥೈಸುವಿಕೆ, ಮತ್ತು ಪರಿಹಾರ ಕಂಡುಕೊಳ್ಳುವಿಕೆಯೇ ಅಲ್ಲದೆ, ಗಮನ ಹರಿಸುವಿಕೆ, ಏಕಾಗ್ರತೆ – ಹೀಗೆ ಹಲವು ರೀತಿಯ ಮನೋಬಲಗಳನ್ನೂ ಕೂಡ ಪಡೆದುಕೊಂಡಿರುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣಗೊಳಿಸಲು ಸಮರ್ಪಕ ಉತ್ತರಗಳನ್ನು ಗುರುತಿಸಿ.

1. ಜ್ಞಾನಗ್ರಹಣವು ಒಂದು____________

   ಎ. ದೈಹಿಕ ಚಟುವಟಿಕೆ

   ಬಿ. ಮಾನಸಿಕ ಚಟುವಟಿಕೆ

   ಸಿ. ಸಾಮಾಜಿಕ ಚಟುವಟಿಕೆ

   ಡಿ. ಭಾವನಾತ್ಮಕ ಚಟುವಟಿಕೆ

2. ಸ್ಕೀಮಾಗಳ ಬದಲಿಗೆ ಬಳಸುವ ಮತ್ತೊಂದು ಪದ____________

   ಎ. ನಕ್ಷೆಗಳು

   ಬಿ. ಪ್ರತಬಿಂಬಗಳು

   ಸಿ. ಮಾನಸಿಕ ಪ್ರಾತಿನಿಧ್ಯಗಳು

   ಡಿ. ಪ್ರತಿಫಲನಗಳು

3. ಸಂಗ್ರಹಣ ಮತ್ತು ವ್ಯವಸ್ಥೀಕಣಗಳಲ್ಲಿನ ಸಮತೋಲನವೇ____________

   ಎ. ಸ್ಥಿರತೆ

   ಬಿ. ಸಂಜ್ಞಾನಾತ್ಮಕ ಸಮತೋಲನ

   ಸಿ. ಸಂಜ್ಞಾನಾತ್ಮಕ ಚಂಚಲತೆ

   ಡಿ. ಸಂಜ್ಞಾನಾತ್ಮಕ ಅಸಮತೋಲನ

4. ಸುಮಾರು 7 ವರ್ಷಗಳ ಮಕ್ಕಳಲ್ಲಿ ಜ್ಞಾನಗ್ರಹಣವನ್ನು ಹೆಚ್ಚಿಸುವಂತಹವು____________

   ಎ. ನಂಬಿಸುವ ಆಟಗಳು

   ಬಿ. ಯೋಜಿತ ಕಾರ್ಯಗಳು

   ಸಿ. ಪ್ರಾತ್ಯಕ್ಷಿಕೆಗಳು

   ಡಿ. ತಾರ್ಕಿಕ ವಿಶ್ಲೇಷಣೆಗಳು

5. ಚಿಕ್ಕ ಮಕ್ಕಳು ತೋರುವ, ಆಯಾಸವೇ ಕಾಣದ ಪುನರಾವರ್ತಿತ ಚಟುವಟಿಕೆಗಳ ಪರಿಣಾಮ__________

ಎ. ಸಧೃಡವಾದ ಸ್ಕೀಮಾಗಳ ರಚನೆ

ಬಿ. ಆಯಾಸ ಮತ್ತು ಸುಸ್ತು

ಸಿ. ಬೇಸರ ಮತ್ತು ಏಕತಾನತೆ

ಡಿ. ಅಭ್ಯಾಸಗಳ ಪ್ರಬಲತೆ

6. ಜ್ಞಾನಗ್ರಹಣವು ಪರಿಸರದೊಂದಿಗಿನ ಅಂತರ್‌ಕ್ರಿಯೆಯ ಜೊತೆಗೆ ಒಳಗೊಂಡಿರುವ ಮತ್ತೊಂದು ಅಂಶ__________

ಎ. ಇಂದ್ರಿಯಾಧಾರಿತ ಗ್ರಹಣ, ಗಮನಹರಿಸುವಿಕೆ, ಮತ್ತು ಏಕಾಗ್ರತೆ

ಬಿ. ಕಲ್ಪನೆ, ಪ್ರಶ್ನಿಸುವಿಕೆ ಮತ್ತು ಮಾಡಿಕಲಿ ಚಟುವಟಿಕೆಗಳು

ಸಿ. ಕಂಠಪಾಠ

ಡಿ. ಏನೇ ಮಾಡಿದರೂ ಅರ್ಥಮಾಡಿಕೊಂಡು ಮಾಡುವುದು.

## 1.6.3.2. ಕಲಿಕೆ ಮತ್ತು ಕಲಿಕೆಯ ಸ್ವರೂಪ

ಕಲಿಕೆಯೊಂದು ಪ್ರಕ್ರಿಯೆ. ಕಲಿಕೆಯಿಂದಾಗಿ ವ್ಯಕ್ತಿಯ ವರ್ತನೆಗಳಲ್ಲಿ ಬದಲಾವಣೆಗಳು ಕಂಡುಬರುತ್ತವೆ. ವುಡ್‌ವರ್ಥ್ ಹೇಳುವಂತೆ, "ಅನುಭವಗಳಿಂದಾಗಿ ವ್ಯಕ್ತಿಯೊಬ್ಬನಲ್ಲಿ ಆಗುವ ಯಾವುದೇ ಶಾಶ್ವತವಾದ ಬದಲಾವಣೆಗಳೇ ಕಲಿಕೆ". ಗಾರ್ಡ್‌ನರ್ ಮರ್ಫಿಯವರ ಪ್ರಕಾರ, "ಕಲಿಕೆಯೊಂದು ವ್ಯಕ್ತಿಯು ಗಳಿಸಿಕೊಳ್ಳುವ ಆತಂಕ–ಕಡಿಮೆ ಮಾಡಿಕೊಳ್ಳುವ ಪ್ರಕ್ರಿಯೆಯಾಗಿದೆ." ಕಲಿಕೆಯು ವ್ಯಕ್ತಿಯೊಬ್ಬನಲ್ಲಿ ಜೀವನಕ್ಕೆ ಅತ್ಯಗತ್ಯವೂ ಅನಿವಾರ್ಯವೂ ಆದ ಹೊಂದಾಣಿಕೆ ಮತ್ತು ಮಾರ್ಪಾಡುಗಳನ್ನು ಅಥವಾ ಪರಿವರ್ತನೆಗಳನ್ನು ಮೂಡಿಸುವುದರ ಮೂಲಕ ಅವನನ್ನು ಜೀವನಕ್ಕೆ ತಯಾರುಮಾಡುವ ಪ್ರಕ್ರಿಯೆಯಾಗಿದೆ. ಒಂದು ಪರಿಕಲ್ಪನೆಯಾಗಿ ಕಲಿಕೆಯು ಉದ್ದೇಶಪೂರಿತವಾದ ಗುರಿಯೆಡೆಗೆ ಉಪಕ್ರಮಿಸುವ ಕಾರ್ಯ. ಇದರ ವ್ಯಾಪ್ತಿಯು ಹಿರಿದು. ಇದು ವ್ಯಕ್ತಿತ್ವದ ಮೂರೂ ಆಯಾಮಗಳನ್ನು–ಸಂಜ್ಞಾನವಲಯ, ಭಾವವಲಯ ಮತ್ತು ಕಾಯಜನ್ಯ ವಲಯಗಳನ್ನು– ಆವರಿಸಿಕೊಂಡಿದೆ. ಇದೊಂದು ನಿರಂತರವಾಗಿ ನಡೆಯುವ ಕ್ರಿಯೆಯಾಗಿರುವುದರಿಂದ ಜೀವನಪರ್ಯಂತ ಕಂಡುಬರುವುದು. ಇದು ವ್ಯಕ್ತಿಯ ಲಿಂಗ, ವಯಸ್ಸು, ಪೀಳಿಗೆ, ಸಂಸ್ಕೃತಿ, ದೇಶ ಇಂತಹ ಯಾವುದೇ ಪ್ರತ್ಯಯಗಳಿಂದಲೂ ಅಬಾಧಿತವಾಗಿ ನಡೆಯುವುದು. ಕ್ರೊ ಮತ್ತು ಕ್ರೊ ಅವರ ಅಭಿಪ್ರಾಯದಂತೆ, ಕಲಿಕೆಯು ನಿರಂತರವಾದ ಪ್ರಕ್ರಿಯೆಯಷ್ಟೇ ಅಲ್ಲದೆ, ಹಲವಾರು ವಿಧಗಳಲ್ಲಿ ನಡೆಯಬಲ್ಲುದು. ಆದ್ದರಿಂದ ಕಲಿಕೆಯ ವಿಧಾನಗಳು ವೈವಿಧ್ಯಮಯವಾಗಿರುತ್ತವೆ.

ಕಲಿಕೆಯು ಅನುಭವ ಮತ್ತು ಅಭ್ಯಾಸಗಳನ್ನು ಪ್ರಮುಖವಾಗಿ ಅವಲಂಬಿಸುತ್ತದೆ. ಇದು ಬೆಳವಣಿಗೆ ಮತ್ತು ವಿಕಾಸ ಪ್ರಕ್ರಿಯೆಗಳ ಅವಿಭಾಜ್ಯ ಅಂಗವೂ ಹೌದು. ಕಲಿಕೆಯ ಸ್ವರೂಪವನ್ನು ಹಲವಾರು ಸಿದ್ಧಾಂತಗಳು ವಿವರಿಸಿವೆ. ಹಿಲ್‌ಗಾರ್ಡ್ ಮತ್ತು ಸ್ನೇಹಿತರು ಈ ಎಲ್ಲಾ ಸಿದ್ಧಾಂತಗಳನ್ನು ಒಟ್ಟಾರೆ ಎರಡು ವಿಭಾಗಗಳನ್ನಾಗಿ ಮಾಡಿದ್ದಾರೆ, ಅವುಗಳೆಂದರೆ, 1. ಸಾಹಚರ್ಯ ಸಿದ್ಧಾಂತಗಳು ಮತ್ತು 2. ಕ್ಷೇತ್ರ ಸಿದ್ಧಾಂತಗಳು. ಸಾಹಚರ್ಯ ಸಿದ್ಧಾಂತಗಳು ವರ್ತನಾ ಸಿದ್ಧಾಂತಗಳೆಂದು ಜನಪ್ರಿಯವಾಗಿವೆ. ವರ್ತನಾ ಸಿದ್ಧಾಂತದ ಪ್ರಕಾರ ಕಲಿಕೆಯೆಂಬುದು ಪ್ರಚೋದನೆ ಮತ್ತು ಅನುಕ್ರಿಯೆಗಳ ನಡುವಿನ ಬಂಧವಾಗಿರುತ್ತದೆ. ಆದ್ದರಿಂದ ಇವುಗಳನ್ನು ಎಸ್–ಆರ್ ಸಿದ್ಧಾಂತಗಳೆಂದು (stimulus-response)ಕರೆಯುವರು. ಈ ವರ್ತನಾ ಸಿದ್ಧಾಂತಗಳಲ್ಲೂ ಎರಡು ವಿಭಾಗಗಳಿದ್ದು, 1. ಪುನರ್ಬಲನ ಸಹಿತ ವರ್ತನಾ ಸಿದ್ಧಾಂತಗಳು ಮತ್ತು 2. ಪುನರ್ಬಲನ ರಹಿತ ವರ್ತನಾ ಸಿದ್ಧಾಂತಗಳು ಎಂದು ಗುರುತಿಸಲ್ಪಟ್ಟಿವೆ.

ಕ್ಷೇತ್ರ ಸಿದ್ಧಾಂತಗಳನ್ನು ಸಂಜ್ಞಾನಾತ್ಮಕ ಸಿದ್ಧಾಂತಗಳೆಂದೂ ಕರೆಯುವರು. ಈ ವಿಭಾಗದ ಬಹುಪಾಲು ಸಿದ್ಧಾಂತಗಳು ಸಮಗ್ರಾಕೃತಿ(ಗೆಸ್ಟಾಲ್ಟ್)ಮನೋವಿಜ್ಞಾನ ಶಾಖೆಗೆ ಸೇರಿದವುಗಳಾಗಿವೆ. ಇಲ್ಲಿ ಕಲಿಕೆಯನ್ನು ಉದ್ದೇಶ, ಅರ್ಥಮಾಡಿಕೊಳ್ಳುವಿಕೆ, ಒಳನೋಟ, ಸಮಸ್ಯಾಪರಿಹಾರ ಮತ್ತು ಸ್ಮೃತಿ ಇವುಗಳ ನೆಲೆಗಟ್ಟಿನಲ್ಲಿ ವಿವರಿಸಲಾಗುವುದು. ಹಾಗಾಗಿ ಕಲಿಕೆಯು ಕೆಲವು ನಿಯಮಗಳಿಗೆ ಅನುಸಾರವಾಗಿ ನಡೆಯುವುದೆಂದು ಕ್ಷೇತ್ರ ಸಿದ್ಧಾಂತಗಳು ಪ್ರತಿಪಾದಿಸುತ್ತವೆ. ಆ ನಿಯಮಗಳನ್ನು ಕಲಿಕಾ ಸಿದ್ಧತೆ, ಪಕ್ವತೆ, ಸಾಹಚರ್ಯದ ನಿಯಮ, ಹೋಲಿಕೆ, ಸಾಮ್ಯತೆ, ವಿಭಿನ್ನತೆ, ವಿಭೇದನ, ಅಭ್ಯಾಸ, ಪುನರ್ಬಲನ–ತಂತ್ರಾಧಾರಿತ, ಬಹುಮಾನ–ಶಿಕ್ಷೆ, ಫಲಿತಾಂಶದ ಅರಿವು, ಸೂಚನೆ–ಸಂಕೇತಗಳು, ಸಾಮಾನ್ಯೀಕರಣ, ಪ್ರತ್ಯಕ್ಷಾನುಭವದ ನಿಯಮಗಳು, ಪೂರ್ಣ–ಅಂಶಿಕ ಸಂಬಂಧಗಳು, ಮತ್ತು ಒಳನೋಟ ಕಲಿಕೆ–ಹೀಗೆ ಹಲವಾರು ನಿಯಮಗಳನ್ನಾಧರಿಸಿ ವಿವರಿಸಲಾಗುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

I. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿ ಎನಿಸಿದುದನ್ನು '√' ಚಿಹ್ನೆಯಿಂದ ಮತ್ತು ತಪ್ಪು ಎನಿಸಿದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

1. ಕಲಿಕೆಯು ವ್ಯಕ್ತಿಯನ್ನು ಹೊಂದಾಣಿಕೆ ಮತ್ತು ಮಾರ್ಪಾಡುಗಳ ಮೂಲಕ ಜೀವನಕ್ಕೆ ಸಿದ್ಧಗೊಳಿಸುತ್ತದೆ.
2. ಕಲಿಕೆಯು ವ್ಯಕ್ತಿಯಲ್ಲಿ ಒಂದು ಶಾಶ್ವತವಾದ ಬದಲಾವಣೆಯನ್ನು ತರುವುದು.
3. ವ್ಯಕ್ತಿಯೊಬ್ಬನ ಜೀವನದಲ್ಲಿ ಒಂದು ಹಂತದ ನಂತರ ಕಲಿಕೆಯು ಸ್ಥಗಿತಗೊಳ್ಳುವುದು.
4. ಕಲಿಕೆಯು ಅನುಭವ ಮತ್ತು ಅಭ್ಯಾಸಗಳನ್ನು ಅವಲಂಬಿಸಿದೆ.
5. ಕಲಿಕೆಯು ಕೇವಲ ಸಂಜ್ಞಾನಾತ್ಮಕ ವಲಯಕ್ಕೆ ಸೀಮಿತವಾಗಿದೆ.
6. ಕಲಿಕೆಯು ವ್ಯಕ್ತಿಯೊಬ್ಬನ ಜೀವನದ ಅವಿಭಾಜ್ಯ ಅಂಗವಾಗಿದೆ.

II. ಈ ಕೆಳಗೆ ನೀಡಲಾಗಿರುವ ಎ–ಪಟ್ಟಿಯ ಅಂಶಗಳನ್ನು ಬಿ–ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ ಬರೆಯಿರಿ

| ಕ್ರಮ ಸಂಖ್ಯೆ | ಎ ಪಟ್ಟಿ | ಕ್ರಮಸಂಖ್ಯೆ | ಬಿ ಪಟ್ಟಿ |
|---|---|---|---|
| 1. | ವುಡ್ ವರ್ಥ್ | ಎ. | ನಂಬಿಸುವ ಆಟ |
| 2. | ಗಾರ್ಡ್‌ನರ್ ಮರ್ಫಿ | ಬಿ. | ಕಲಿಕೆಯು ಒಂದು ನಿರಂತರವಾದ ಪ್ರಕ್ರಿಯೆ |
| 3. | ಜೀನ್ ಪಿಯಾಜೆ | ಸಿ. | ಕಲಿಕೆಯು ಒಂದು ಸಾಪೇಕ್ಷವಾದ ಶಾಶ್ವತ ಬದಲಾವಣೆ |
| 4. | ಕ್ರೌ ಮತ್ತು ಕ್ರೌ | ಡಿ. | ಕಲಿಕೆಯು ಒಂದು ಆತಂಕ ಕಡಿಮೆ ಮಾಡುವ ಪ್ರಕ್ರಿಯೆ |

## 1.6.3.3. ಕಲಿಕೆಯಲ್ಲಿ ಜ್ಞಾನಗ್ರಹಣದ ಪಾತ್ರ

ಈ ಹಿಂದಿನ ಚರ್ಚೆಯಲ್ಲಿ ಜ್ಞಾನಗ್ರಹಣದ ಅರ್ಥವನ್ನು ಮತ್ತು ಅದರ ಸ್ವರೂಪವನ್ನು ತಿಳಿದುಕೊಂಡೆವು. ಜ್ಞಾನಗ್ರಹಣವೊಂದು ಮಾನಸಿಕ ಮತ್ತು ಬೌದ್ಧಿಕ ಪ್ರಕ್ರಿಯೆಯಾಗಿದ್ದು, ಅದು ಗಮನಹರಿಸುವಿಕೆ, ಅರ್ಥಮಾಡಿಕೊಳ್ಳುವಿಕೆ, ವರ್ಗೀಕರಣ, ಸಂಕೇತಿಸುವಿಕೆ, ವಿಚಾರಗಳ ಸಂಘಟನೆ, ವಿಮರ್ಶೆ, ತರ್ಕ, ಸಮಸ್ಯಾ ಪರಿಹಾರ ಮತ್ತು ಸೃಜನಶೀಲತೆ–ಇವೆಲ್ಲವುಗಳನ್ನು ಒಳಗೊಂಡಿರುತ್ತದೆ. ಕಲಿಕೆಯೂ ಕೂಡ ಒಂದು ಪ್ರಕ್ರಿಯೆಯೇ ಆಗಿದ್ದು, ಜ್ಞಾನಗ್ರಹಣ ಅದರ ಒಂದು ಪ್ರಬಲವಾದ ಅಂಗ. ಕಲಿಕೆಯಾಗಬೇಕಾದರೆ, ವಿಚಾರಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಕಲಿಯುವ ವಿಚಾರಗಳು ಅರ್ಥಪೂರ್ಣವಾಗಿರಬೇಕಾದುದು ಮೊಟ್ಟ ಮೊದಲ ಅಗತ್ಯವಾಗಿರುತ್ತದೆ. ವ್ಯಕ್ತಿ ಏನನ್ನಾದರೂ ಕಲಿಯಬೇಕಾದರೆ ಅದು ಅರ್ಥಪೂರ್ಣವೆನಿಸಬೇಕು.

ಕಲಿಕೆಯು ಸಂಕೀರ್ಣವಾದಂತೆಲ್ಲಾ ಸಂಕೇತಗಳ ಬಳಕೆಯೂ ಹೆಚ್ಚಾಗುವುದು. ನಾವು ಎಲ್ಲದಕ್ಕೂ ಸಂಕೇತಗಳನ್ನು ಬಳಸುತ್ತೇವೆ, ಉದಾಹರಣೆಗೆ, ವಸ್ತುಗಳು, ಭಾವನೆಗಳು, ಯೋಚನೆಗಳು ಮತ್ತು ಚಿಂತನೆಗಳು ಇತ್ಯಾದಿ. ಈ ಸಂಕೇತಗಳು ಎಷ್ಟು ನಿರ್ದಿಷ್ಟತೆಯನ್ನು ತೋರುತ್ತವೆಯೋ ಅವುಗಳ ಅರ್ಥವೂ ಅಷ್ಟೇ ನಿರ್ದಿಷ್ಟವಾಗಿ ಸ್ಪಷ್ಟವಾಗಿ ಇರುತ್ತವೆ. ಸಂಕೇತಗಳ ಮೂಲಕ ಅನುಭವಗಳನ್ನು ಲೀಲಾಜಾಲವಾಗಿ ಸಂವಹನಗೊಳಿಸಬಹುದಾಗಿದೆ. ಹಾಗೆ ಹೇಳುವುದಾದರೆ, ನಮ್ಮ ಭಾಷೆಯೇ ಒಂದು ಮಹತ್ತರವಾದ ಸಂಕೇತಗಳ ಮೊತ್ತವಲ್ಲವೇ? ಪದಗಳು, ಪದಗುಚ್ಛಗಳು, ವಾಕ್ಯಗಳು, ವ್ಯಾಖ್ಯಾನಗಳು, ನಿಯಮಗಳು, ಸಾರ್ವತ್ರೀಕರಣಗಳು ಮತ್ತು ಸಾರ್ವತ್ರಿಕ ತತ್ವಗಳು ಇವೆಲ್ಲವೂ–ಭಾಷಾರೂಪದಲ್ಲಿನ ಸಂಕೇತಗಳೇ ಆಗಿದ್ದು, ಅತ್ಯಂತ ಸ್ಫುಟವಾಗಿ ಕಾರ್ಯಗತಗೊಳ್ಳುತ್ತವೆ. ಅಂದರೆ, ಅರ್ಥವು ಬಳಸುವ ಪದಗಳಲ್ಲಿ ಇರುವುದಿಲ್ಲ, ಬದಲಿಗೆ ಯಾವ ವ್ಯಕ್ತಿ ಅದನ್ನು ಹೇಗೆ ಬಳಸುತ್ತಾನೆ ಎಂಬುದರಲ್ಲಿ ಇರುತ್ತದೆ,

ಮನೋವಿಜ್ಞಾನಿಗಳಾದ ಮೋರ್ಸ್ ಮತ್ತು ವಿಂಗೋರವರು ಕಲಿಕೆ ಮತ್ತು ಅರ್ಥಪೂರ್ಣತೆಯ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿದ್ದಾರೆ. ಆಸುಬೆಲ್‌ರವರು ಕೂಡ ಕಲಿಕೆಯಲ್ಲಿ ಅರ್ಥವು ಅರ್ಥಪೂರ್ಣ ಕಲಿಕೆಯ ಮೊತ್ತವಾಗಿರುತ್ತದೆ ಎಂದಿದ್ದಾರೆ. ಯಾವುದೇ ಶೈಕ್ಷಣಿಕ ವ್ಯವಸ್ಥೆಯನ್ನು ತೆಗೆದುಕೊಳ್ಳಿ, ವಿದ್ಯಾರ್ಥಿಗಳು ವೈವಿಧ್ಯಮಯವಾದ ವಿಷಯಗಳನ್ನು ಕಲಿಯಬೇಕಾದೆ. ಈ ವಿಷಯಗಳು ತಥ್ಯ, ಪರಿಕಲ್ಪನೆಗಳು, ನಿಯಮಗಳು, ಸಾಮಾನ್ಯೀಕರಣಗಳು, ಸಮಸ್ಯಾ ಪರಿಹಾರಗಳು ಮತ್ತು ಕೆಲವು ನಿರ್ದಿಷ್ಟವಾದ ಕೌಶಲಗಳನ್ನು ಹೊಂದಿರುತ್ತವೆ.

**ತಥ್ಯ(Facts)ಗಳ ಕಲಿಕೆ :** ತಥ್ಯವೆಂದರೆ ಒಂದು ಸತ್ಯವಾದ ಅಂಶವಾಗಿದ್ದು, ವಾಕ್ಯಗಳಲ್ಲಿ ಅಭಿವ್ಯಕ್ತಿಸಬಹುದಾಗಿರುತ್ತದೆ. ಅದು ಯಾವುದೇ ಘಟನೆಗಳು ಅಥವಾ ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳೂ ಆಗಿರಬಹುದು. ತಥ್ಯವು ಯಾವಾಗಲೂ ಆದರ್ಶೀಕೃತಗೊಂಡ ಶಾಶ್ವತವಾದ ಅರ್ಥವನ್ನು ಹೊಂದಿರುತ್ತದೆ. ಆದರೂ ಕೆಲವು ಬಾರಿ ಹೊಸ ವಿಚಾರಗಳನ್ನು ಹೊರಗೆಳೆದಾಗ, ಅಥವಾ ಅನ್ವೇಷಿಸಿದಾಗ ತಥ್ಯಗಳು ಪುನಃ ವಿಶಾಲವಾದ ಅರ್ಥವನ್ನು ಪಡೆಯಬಹುದು. ತಥ್ಯಗಳು ವೈಚಾರಿಕತೆಯ ಮೂಲ ಘಟಕಗಳಾಗಿದ್ದು ಇವುಗಳ ಹೊರತಾಗಿ, ವಿಶ್ಲೇಷಣೆ, ತಾರ್ಕಿಕ ಬೆಂಬಲ, ಪ್ರಯೋಗಗಳನ್ನು ಕೈಗೊಳ್ಳುವುದು ಅಥವಾ ಅರಿವಿನ ಹೆಚ್ಚಳ – ಇವೆಲ್ಲವೂ ಸಾಧ್ಯವಿಲ್ಲದ ಮಾತೇ ಸರಿ. ಕೆಲವೊಮ್ಮೆ ಅರ್ಥಗೊತ್ತಿಲ್ಲದಿದ್ದರೂ, ತಥ್ಯಗಳನ್ನು ನೆನಪಿಸಿಕೊಳ್ಳಲು ಮತ್ತು ಬಳಸಿಕೊಳ್ಳಲು ಸಾಧ್ಯವಿದೆ. ಹಾಗಾಗಿ ಎಷ್ಟೋ ಸಲ ನಮ್ಮ ವಿದ್ಯಾರ್ಥಿಗಳು ತಥ್ಯಗಳ ಕಲಿಕೆಯಲ್ಲಿ ಕಂಠಪಾಠ ಮಾಡುವ ಅಭ್ಯಾಸಗಳನ್ನು ಬೆಳೆಸಿಕೊಂಡು ಬಿಡುತ್ತಾರೆ, ಆದರೆ ಹೀಗಾಗಬಾರದು. ಶಿಕ್ಷಕರು ಈ ಸಂದರ್ಭದಲ್ಲಿ ಹಲವಾರು ಕಲಿಕಾ ಅನುಭವಗಳನ್ನು ನೀಡುವುದರ ಮೂಲಕ ತಥ್ಯಗಳನ್ನು ಅರ್ಥಮಾಡಿಸಬೇಕು ಮತ್ತು ನಂತರದಲ್ಲಿ ಅವುಗಳನ್ನೂ ಮೂಲ ಅರ್ಥದಲ್ಲಿ ಗ್ರಹಿಸಿರುವರೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪುನರಾರ್ತನೆ ಹಾಗೂ ಅಭ್ಯಾಸಗಳನ್ನೂ ನೀಡಬೇಕು.

ವುಡ್‌ರಫ್ ತಥ್ಯಾಂಶಗಳ ಕಲಿಕೆಗೆ ಸಹಾಯವಾಗಬಲ್ಲ ಮೂರು ಸಲಹೆಗಳನ್ನು ನೀಡಿದ್ದಾನೆ:

1. ವಿಷಯವೊಂದರ ತಥ್ಯಗಳು ಭಾವನೆಗಳೊಂದಿಗೆ ಬೆರೆತಿರಬೇಕು.
2. ತಥ್ಯಗಳನ್ನು ಅರ್ಥದಿಂದ ಕೂಡಿದ ಒಂದು ಪೂರ್ಣದಂತೆ ರಚಿಸಿಕೊಳ್ಳಬೇಕು.
3. ಹೊಸ ಸಂದರ್ಭಗಳಲ್ಲಿ ಈಗಾಗಲೇ ಕಲಿತಿರುವ ತಥ್ಯಗಳನ್ನು ಬಳಸುವ ಅವಕಾಶಗಳನ್ನು ಸೃಷ್ಟಿಸಬೇಕು.

ಕ್ಲಾಸ್‌ಮೇಯರ್ ಈ ಕೆಳಕಂಡ ನಿಯಮಗಳನ್ನು ತಥ್ಯಗಳ ಕಲಿಕೆಯಲ್ಲಿ ಅಳವಡಿಸಿಕೊಂಡರೆ ಉತ್ತಮವಾಗಿ ಸುಧಾರಣೆಯಾಗುವುದು ಎಂದು ಹೇಳಿದ್ದಾನೆ:

1. ತಥ್ಯಗಳನ್ನು ಕಲಿಕೆಗೆ ಸಾಧ್ಯವಾಗುವ ಚಿಕ್ಕ ಚಿಕ್ಕ ಘಟಕಗಳನ್ನಾಗಿ ಸಂರಚಿಸಿಕೊಂಡರೆ ಕಲಿಕೆಯು ಸುಲಭಸಾಧ್ಯವಾಗುವುದು. ಹೀಗೆ ಮಾಡುವಾಗ, ಕ್ಲಿಷ್ಟತಾ ಮಟ್ಟ, ಕಲಿಕಾ ವಿಚಾರದ ಗಾತ್ರ, ಮತ್ತು ಅದು ಒಳಗೊಂಡಿರುವ ಅಂಶಗಳ ನಡುವಿನ ಸಂಬಂಧ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡಿರಬೇಕು.

2. ಮೊದಲನೇ ಪ್ರಯತ್ನದಲ್ಲಿಯೇ ಕರಾರುವಾಕ್ಕಾಗಿ ಸರಿಯಾದ ಅನುಕ್ರಿಯೆಯನ್ನು ಪಡೆಯಬೇಕು.
3. ಸರಿಯಾದ ಅನುಕ್ರಿಯೆಗಳನ್ನು(responses) ಪುನರ್ಬಲನ(reinforcement)ದಿಂದ ಪ್ರಬಲಗೊಳಿಸಬೇಕು. ಹಾಗೆಯೇ ದೋಷಗಳನ್ನು ತೆಗೆದುಹಾಕಬೇಕು ಅಥವಾ ತಿದ್ದಿ ಸರಿಪಡಿಸಬೇಕು.
4. ತಥ್ಯಗಳ ಕಲಿಕೆ, ಅಭ್ಯಾಸ ಮತ್ತು ಅದರ ಮೇಲ್ವಿಚಾರಣೆ – ಈ ಕಾರ್ಯವು ತಥ್ಯಗಳು ವ್ಯಕ್ತಿಯಲ್ಲಿ ಸ್ಥಾಯಿಯಾಗಿ ಒಂದು ಶಾಶ್ವತ ಕಲಿಕಾ ವಿಚಾರವಾಗಿ ಅಳವಡಿಕೆಯಾಗುವವರೆಗೂ ನಿರಂತರವಾಗಿ ಸಾಗುತ್ತಿರಬೇಕು.

**ಪರಿಕಲ್ಪನೆಗಳ ಕಲಿಕೆ:** ಜೀವನದಲ್ಲಿ ನಾವು ಏನೆಲ್ಲಾ ಸಂದರ್ಭಗಳನ್ನು, ಅನುಭವಗಳನ್ನು, ಘಟನೆಗಳನ್ನು ಮತ್ತು ವ್ಯಕ್ತಿಗಳನ್ನು ಎದುರಿಸುತ್ತೇವೆ, ಅಲ್ಲವೇ? ಈ ಎಲ್ಲಾ ಅನುಭವಗಳು ನಮ್ಮ ಮೆದುಳಿನಲ್ಲಿ ದಾಖಲಾಗುತ್ತವೆ. ಇವುಗಳೇ ಬೌದ್ಧಿಕ ಪ್ರಾತಿನಿಧಿಕಗಳು. ಮತ್ತು ಇಂತಹ ಬೌದ್ಧಿಕ ಪ್ರಾತಿನಿಧ್ಯಗಳನ್ನೇ(intellectual representations) ಪರಿಕಲ್ಪನೆಗಳೆಂದು ಕರೆಯುವರು. ಕ್ಲಾಸ್‌ಮೇಯರ್ ಅವರ ಅಭಿಪ್ರಾಯದಂತೆ, ಪರಿಕಲ್ಪನೆಗಳೆಂದರೆ, ವ್ಯಕ್ತಿಯೊಬ್ಬನು ಪದಗಳಿಗೆ, ಸಂಕೇತಗಳಿಗೆ ಅಥವಾ ತನ್ನ ನೇರವಾದ ಪ್ರತ್ಯಕ್ಷ ಅನುಭವಗಳಿಗೆ ಕೊಡುವ ಅರ್ಥವೇ ಆಗಿರುತ್ತದೆ. ಪರಿಕಲ್ಪನೆಯೆಂದರೆ, ಒಂದು ಪದ ಅಥವಾ ಸಂಕೇತಗಳ ಸಮೂಹವಾಗಿದ್ದು, ಅದರದ್ದೇ ಆದ ಸಾಮಾನ್ಯ ಲಕ್ಷಣಗಳನ್ನು ಹೊಂದಿರುತ್ತವೆ ಮತ್ತು ಇತರ ಪರಿಕಲ್ಪನೆಗಳಿಂದ ವಿಭಿನ್ನವಾಗಿರುತ್ತವೆ. ಭಾಷೆ ಮತ್ತು ಪರಿಕಲ್ಪನೆಗಳಿಗೆ ಒಂದು ಅವಿನಾಭಾವ ಸಂಬಂಧವಿದೆ. ಓಸ್‌ಗುಡ್‌ರವರು ಹೇಳುವಂತೆ, ವ್ಯಕ್ತಿಯು ಭಾಷೆಯ ಮೂಲಕ ಮತ್ತು ಅದಕ್ಕೆ ದೊರಕುವ ಅನುಕ್ರಿಯೆಗಳ ಮೂಲಕ ತನ್ನ ಅನುಭವಗಳನ್ನು ಪುನಃ ಕಟ್ಟಿಕೊಳ್ಳುವ ಮತ್ತು ಸಂರಚಿಸಿಕೊಳ್ಳುವ ನಿರಂತರವಾದ ಪ್ರಕ್ರಿಯೆಯಿಂದ ಪರಿಕಲ್ಪನೆಗಳು ಮೂಡುತ್ತವೆ.

ವೈಗೋಟ್‌ಸ್ಕೀಯವರು ಹೇಳುವಂತೆ, ಪರಿಕಲ್ಪನೆಯೆಂದರೆ ಒಂದು ಸಾಮಾನ್ಯೀಕರಣಗೊಂಡ ಸರಳವಾದ ಸತ್ಯದ ಅಭಿವ್ಯಕ್ತಿ. ಈ ಪರಿಕಲ್ಪನೀಕರಣದಿಂದಾಗಿ ಭಾಷಾ ವಿಕಸನವಾಗಿ, ಭಾಷಾಸ್ವರೂಪವು ರೂಪುಗೊಳ್ಳುವುದು. ಸಾಮಾಜಿಕವಾಗಿ ಒಂದು ಪರಿಕಲ್ಪನೆಯು ಸಾರ್ವತ್ರಿಕತೆಯನ್ನು ಪಡೆಯುವುದರಿಂದ ಮನುಷ್ಯ–ಮನುಷ್ಯರ ನಡುವೆ ಸಂವಹನ ಸಾಧ್ಯವಾಯಿತು. ನಿಜ ಅರ್ಥದಲ್ಲಿ ಹೇಳುವುದಾದರೆ, ವ್ಯಕ್ತಿಗಳು ತಮ್ಮ ಜೀವನದಲ್ಲಿ ವಿಷಯಗಳ ಸಂಗ್ರಹಣ, ಸಮತೋಲನ ಮತ್ತು ಹೊಂದಾಣಿಕೆ ಮಾಡಿಕೊಳ್ಳಲು ಭಾಷೆ ಮತ್ತು ಪರಿಕಲ್ಪನೆಗಳ ಸಂಬಂಧವು ಅತಿ ಮುಖ್ಯವಾಗಿರುತ್ತದೆ. ಆದ್ದರಿಂದಲೇ ಪರಿಕಲ್ಪನೆಗಳು ಅರ್ಥಪೂರ್ಣ ಸ್ವೀಕಾರ ಕಲಿಕೆಗೆ ಮತ್ತು ಸಮಸ್ಯಾ ಪರಿಹಾರ ಕೌಶಲ ಕಲಿಕೆಗೆ ಅನುಕೂಲ ಮಾಡಿಕೊಡುತ್ತವೆ ಎಂದು ಹೇಳುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3**

I. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

1. ಜ್ಞಾನಗ್ರಹಣ ಮತ್ತು ಕಲಿಕೆಯ ನಡುವೆ ಯಾವುದೇ ಸಂಬಂಧವಿರುವುದಿಲ್ಲ.
2. ಜ್ಞಾನಗ್ರಹಣವು, ಗಮನಹರಿಸುವುದು, ಅರ್ಥಮಾಡಿಕೊಳ್ಳುವುದು, ವರ್ಗೀಕರಣ ಮತ್ತು ಸಮಸ್ಯಾಪರಿಹಾರಗಳನ್ನು ಹೊಂದಿರುತ್ತದೆ.
3. ಕೆಲವೊಮ್ಮೆ ತಥ್ಯಗಳ ಕಲಿಕೆಗೆ ಪುನರಾವರ್ತನೆ, ಅಭ್ಯಾಸಗಳ ಅಗತ್ಯವಿದೆ.
4. ಕಲಿಕೆಗೆ ಜ್ಞಾನಗ್ರಹಣವೇನೂ ಪ್ರಬಲವಾದ ಬೆಂಬಲವಲ್ಲ.
5. ಕಲಿಕೆಗೆ ತಥ್ಯಗಳು ಜ್ಞಾನದ ಮೂಲ ಘಟಕಗಳು.
6. ಅನುಭವ ಮತ್ತು ಅರ್ಥಪೂರ್ಣತೆಯು ತಥ್ಯಗಳ ಕಲಿಕೆಯನ್ನು ಸುಲಭಗೊಳಿಸುವುವು.

II. ಈ ಕೆಳಗೆ ನೀಡಲಾಗಿರುವ 'ಎ' ಪಟ್ಟಿಯ ಅಂಶಗಳನ್ನು ಮತ್ತು 'ಬಿ' ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ ಬರೆಯಿರಿ

| ಕ್ರಮ ಸಂಖ್ಯೆ | ಎ ಪಟ್ಟಿ | ಕ್ರಮ ಸಂಖ್ಯೆ | ಬಿ ಪಟ್ಟಿ |
|---|---|---|---|
| 1. | ಓಸ್‌ಗುಡ್ | ಎ. | ವಿಷಯದ ತಥ್ಯಗಳು ಮತ್ತು ಭಾವನೆಗಳು ಸಮ್ಮಿಲನಗೊಳ್ಳಬೇಕು |
| 2. | ಡೇವಿಡ್ ಆಸುಬೆಲ್ | ಬಿ. | ಅಭ್ಯಾಸ ಮಾಡುವಾಗ ಸರಿಯಾದ ಅನುಕ್ರಿಯೆಗಳನ್ನು ಪುನರ್ಬಲನ ನೀಡಿ ಪ್ರಬಲಗೊಳಿಸಬೇಕು |
| 3. | ಕ್ಲಾಸ್‌ಮೇಯರ್ | ಸಿ. | ನಮ್ಮ ಹಳೆಯ ಜ್ಞಾನವು ಹೊಸ ಅನುಭವಗಳಿಂದ ಪುನಃ–ಸಂರಚನೆಗೆ ಮತ್ತು ಪುನಃ–ರೂಪಣಕ್ಕೆ ಒಳಪಡುವುವು |
| 4. | ವುಡ್‌ರಫ್ | ಡಿ. | ಅರ್ಥಪೂರ್ಣ ಸ್ವೀಕಾರ ಕಲಿಕೆ |

## 1.6.4. ಸಾರಾಂಶಿಸೋಣ

- ಮಾನವನ ವ್ಯಕ್ತಿತ್ವದಲ್ಲಿ ಸಂಜ್ಞಾನಾತ್ಮಕ ವಲಯವೊಂದು ಮುಖ್ಯವಾದ ಭಾಗವಾಗಿದೆ. ಈ ವಲಯದಲ್ಲಿ ಬುದ್ಧಿ ಆಧಾರಿತ ಕೌಶಲಗಳು ಕಂಡುಬರುತ್ತವೆ. ಅಂದರೆ, ಅರ್ಥಮಾಡಿಕೊಳ್ಳುವುದು, ತಾರ್ಕಿಕ ವಿಶ್ಲೇಷಣೆ, ಯೋಜನೆ, ಚಿಂತನೆ, ಸಂಶ್ಲೇಷಣೆ, ಪರಿಕಲ್ಪನೀಕರಣ, ಸಮಸ್ಯಾ ಪರಿಹಾರ ಮತ್ತು ಕೌಶಲ ಕಲಿಕೆ ಇತ್ಯಾದಿಗಳೆಲ್ಲವೂ ಸಂಜ್ಞಾನಾತ್ಮಕ ವಲಯದ ಕಾರ್ಯಗಳೇ ಆಗಿವೆ.
- ನಿರ್ಧಾರಗಳನ್ನು ಅಥವಾ ತೀರ್ಮಾನಗಳನ್ನು ತೆಗೆದುಕೊಳ್ಳುವುದು, ಸಮಸ್ಯಾ ಪರಿಹಾರ ಕಂಡುಕೊಳ್ಳುವುದು, ವಿಶ್ಲೇಷಣೆ ಮತ್ತು ಸಂಶ್ಲೇಷಣೆ, ತರ್ಕ ಮತ್ತು ಚಿಂತನೆ – ಇವೆಲ್ಲವೂ ಬೌದ್ಧಿಕ ಕಾರ್ಯಗಳೇ ಆಗಿದ್ದರೂ ಜ್ಞಾನಗ್ರಹಣವು ಇವೆಲ್ಲಕ್ಕೂ ಮೂಲವಾದ ಘಟಕಾಂಶವಾಗಿದೆ.
- ಸಂಜ್ಞಾನಾತ್ಮಕ ವಲಯದಲ್ಲಿ ಜ್ಞಾನಗಳಿಕೆಯ ಕಾರ್ಯವು ಸದಾ ನಡೆಯುತ್ತಿರುತ್ತದೆ, ಇದು ವಿಚಾರಗಳ ಸಂಗ್ರಹಣ, ಅನುಕೂಲನ, ವ್ಯವಸ್ಥೀಕರಣ, ಹೊಂದಾಣಿಕೆ ಮತ್ತು ಸಮತೋಲನಗಳ ರೂಪದಲ್ಲಿ ಆಗುವುದು. ಅಲ್ಲದೇ ಜ್ಞಾನಗ್ರಹಣವು ಇಂದ್ರಿಯಾನುಭೂತಿ, ಪ್ರತ್ಯಕ್ಷ ಅನುಭೂತಿ, ಗಮನಿಸುವಿಕೆ ಮತ್ತು ಏಕಾಗ್ರತೆಗಳನ್ನೂ ಹೊಂದಿರುತ್ತದೆ. ಆದ್ದರಿಂದಲೇ ಜ್ಞಾನಗ್ರಹಣ ಮತ್ತು ಕಲಿಯುವಿಕೆಗೆ ನೇರವಾದ ಮತ್ತು ಧನಾತ್ಮಕವಾದ ಪರಸ್ಪರ ಸಂಬಂಧವಿದೆ.
- ಕಲಿಕೆಯೊಂದು ಪ್ರಕ್ರಿಯೆಯಾಗಿದ್ದು ಜೀವನಪರ್ಯಂತ ನಡೆಯುವುದು. ವ್ಯಕ್ತಿಯು ಕಲಿಕಾ ಪ್ರಕ್ರಿಯೆಯಲ್ಲಿ ತಥ್ಯ, ಪರಿಕಲ್ಪನೆ, ನಿಯಮಗಳು, ಸಾಮಾನ್ಯೀಕರಣಗಳು, ವಿಬೇಧನಗಳು, ಜೀವನ ಕೌಶಲಗಳು ಮತ್ತು ಸಮಸ್ಯಾ ಪರಿಹಾರ ಕೌಶಲಗಳನ್ನು ಕಲಿಯುತ್ತಾನೆ.ಕಲಿಕೆಗೆ ಜ್ಞಾನಗ್ರಹಣವಿರಲೇಬೇಕು ಮತ್ತು ಜ್ಞಾನಗ್ರಹಣವಾಗಬೇಕಾದರೆ, ಕಲಿಯುವ ವಿಚಾರವು ಅರ್ಥವನ್ನು ಹೊಂದಿರಬೇಕು.
- ತಥ್ಯಗಳ ಕಲಿಕೆಯಲ್ಲಿ ಅರ್ಥಹೊಂದಿರುವುದು ಮತ್ತು ಜ್ಞಾನಗ್ರಹಣಗಳಷ್ಟೇ ಅಲ್ಲದೆ, ಪುನರಾವರ್ತನೆಗಳು, ಅಭ್ಯಾಸ ಮತ್ತು ಹಲವು ಬಾರಿ ಚರ್ವಿತ–ಚರ್ವಣವಾಗುವ ಕಲಿಕಾ ಸಂದರ್ಭಗಳೂ ಕೂಡ ಬೇಕಾಗುತ್ತವೆ.
- ಭಾಷಾ ಬೆಳವಣಿಗೆಯು ಜ್ಞಾನಗ್ರಹಣವನ್ನು ಮತ್ತು ವಿಶೇಷವಾಗಿ ಕಲಿಕೆಯನ್ನು ಪ್ರಭಾವಿಸುತ್ತದೆ.
- ಜ್ಞಾನಗ್ರಹಣವು ಅರ್ಥಪೂರ್ಣ ಕಲಿಕೆಯಷ್ಟೇ ಅಲ್ಲದೆ, ಕಲಿಕೆಯ ವಿವಿಧ ತಂತ್ರಗಳನ್ನು, ಪದ್ಧತಿಗಳನ್ನು ಕೂಡ ಪ್ರಭಾವಿಸುತ್ತದೆ.
- ಇತ್ತೀಚೆಗೆ, ಪರಿಣಾಮಕಾರಿ ಕಲಿಕೆಗೆ ಹೊಸ ತಂತ್ರೋಪಾಯಗಳಾಗಿ, ಸಹಕಾರ–ಕಲಿಕೆ, ಪರಸ್ಪರ–

ಬೋಧನೆ, ತಂಡ–ಬೋಧನೆ ಇತ್ಯಾದಿಗಳು ಬಳಕೆಗೆ ಬಂದಿವೆ. ಅದೇ ರೀತಿ, ಗುಂಪು–ಯೋಜನೆಗಳು, ಮತ್ತು ವೈಯಕ್ತಿಕ–ಯೋಜನೆಗಳು ಕೂಡ ಪ್ರಭಾವೀ ಕಲಿಕಾ ತಂತ್ರೋಪಾಯಗಳಾಗಿ ಜನಪ್ರಿಯವಾಗಿವೆ.

## 1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

1. ಬಿ 2. ಸಿ 3. ಬಿ 4. ಎ 5. ಎ 6. ಎ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

1. √ 2. x 3. x 4. √ 5. x 6. √

2. 1–ಸಿ 2–ಡಿ 3–ಎ 4–ಬಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3**

I. 1. x 2. √ 3.√ 4. x 5. √ 6. √

II. ಎ–4 ಬಿ–3 ಸಿ–1 ಡಿ–2

## 1.6.6. ಘಟಕಾಂತ್ಯ ಅಭ್ಯಾಸಗಳು

1. ಜ್ಞಾನಗ್ರಹಣವೆಂದರೇನು? ವಿವರಿಸಿ.
2. ಪಿಯಾಷೆಯ ಪ್ರತಿಪಾದನೆಗೆ ಅನುಗುಣವಾಗಿ ಜ್ಞಾನಗ್ರಹಣ ಪ್ರಕ್ರಿಯೆಯನ್ನು ವಿವರಿಸಿ.
3. ಕಲಿಕೆ ಮತ್ತು ಜ್ಞಾನಗ್ರಹಣಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸಿ.

## 1.6.7. ಪರಾಮರ್ಶನ ಗ್ರಂಥಗಳು


1. Elizabeth B.Hurlock Child Development Sixth edition, McGraw Hill Education (India) private limited
2. Laura. E.Berk Childhood Development Ninth edition Pearson Education Inc.(2013, 1017)
3. Chauhan S.S. Advanced Educational Psychology Vikas Publishing House Pvt.Ltd. (2010)
4. Dandapani.S. Advanced Educational Psychology (2005) Anmol Publications Delhi
5. Nataraj V. Vikasa manovignana (2010) Srinivas Prakashana Mysore
6. Dr.Suneetha.CN Understanding the learner and the learning process Shruthiloka Prakashana 2011.
7. Kuppuswamy B. Advanced Educational Psychology Sterling Publishers Private Limited (2005)


*********************

# ಬ್ಲಾಕ್ 2: ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ

## ಘಟಕ 1: ಬಾಲ್ಯ–ಪರಿಕಲ್ಪನೆ

## (ಬಾಲ್ಯಹಂತವೊಂದು ಸಾಮರಸ್ಯ ಮತ್ತು ಏಕರೂಪತೆಯಿಂದ ಕೂಡಿದ ಹಂತ ಎಂಬ ತಪ್ಪು ಗ್ರಹಿಕೆಯ ಕೂಲಂಕಷ ವಿಮರ್ಶೆ)

**ಘಟಕದ ರಚನೆ**


2.1.1. ಕಲಿಕಾ ಉದ್ದೇಶಗಳು

2.1.1. ಪೀಠಿಕೆ

2.1.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.1.3.1 ಬಾಲ್ಯಹಂತ–ಅರ್ಥ ಮತ್ತು ಸ್ವರೂಪ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.1.3.2 ಬಾಲ್ಯಹಂತದ ಬಗ್ಗೆ ಇರುವ ತಪ್ಪು ಗ್ರಹಿಕೆ ಮತ್ತು ಅದರ ಕೂಲಂಕಷ ವಿಮರ್ಶೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.1.4. ಸಾರಾಂಶಿಸೋಣ

2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

2.1.6. ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಸೂಚಿ


### 2.1.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಬಾಲ್ಯಹಂತದ ಅರ್ಥ ಮತ್ತು ಸ್ವರೂಪವನ್ನು ವಿವರಿಸುವರು;
- ಬಾಲ್ಯಹಂತದ ವಿವಿಧ ಆಯಾಮಗಳನ್ನು ವರ್ಣಿಸುವರು;
- ಬಾಲ್ಯಹಂತವೊಂದು ಸಾಮರಸ್ಯತೆ ಮತ್ತು ಏಕರೂಪತೆಯಿಂದ ಕೂಡಿದ ಹಂತವೆಂಬ ತಪ್ಪುಗ್ರಹಿಕೆಗಳಿಗೆ ನಿದರ್ಶನ ನೀಡುವರು;
- ಬಾಲ್ಯಹಂತದ ಸೈದ್ಧಾಂತಿಕ ನಿಲುವು ವಾಸ್ತವಕ್ಕಿಂತ ಹೇಗೆ ಬೇರೆಯೆಂಬುದನ್ನು ಸ್ಪಷ್ಟಪಡಿಸುವರು;
- ಬಾಲ್ಯಹಂತದ ತಪ್ಪುಗ್ರಹಿಕೆಗಳನ್ನು ಕೂಲಂಕಷವಾಗಿ ವಿಮರ್ಶಿಸುವರು; ಮತ್ತು
- ಬಾಲ್ಯಹಂತದ ಶೈಕ್ಷಣಿಕ ನಿಹಿತಾರ್ಥಗಳನ್ನು ಗುರುತಿಸುವರು.

## 2.1.2. ಪೀಠಿಕೆ

ಬಾಲ್ಯವು ಎಲ್ಲರ ಜೀವನದಲ್ಲಿಯೂ ಬರುವ ವಿವಿಧ ಹಂತಗಳಲ್ಲೊಂದು ಎಂಬುದು ನಮೆಗೆಲ್ಲಾ ತಿಳಿದಿರುವ ವಿಚಾರ. ಈ ಮೊದಲೇ ನಾವು ತಿಳಿದಂತೆ, ಎ.ಬಿ.ಹರ್ಲಾಕ್‌ರವರು ಮಾನವನ ಜೀವನವನ್ನು ಅಂದರೆ, ಹುಟ್ಟಿನಿಂದ ವೃದ್ಧಾಪ್ಯದವರೆಗೆ, ಒಟ್ಟಾರೆ, ಹನ್ನೊಂದು ಕ್ರಮಾನುಗತವಾದ ಹಂತಗಳಾಗಿ ವಿಭಜಿಸಿದ್ದಾರೆ. ಬಾಲ್ಯಹಂತವು ಸುಮಾರು 3 ವರ್ಷಗಳಿಂದ 12 ವರ್ಷಗಳ ವಯೋಮಾನದಲ್ಲಿ ಕಂಡುಬರುವುದು. ಈ ಬಾಲ್ಯಹಂತವನ್ನು ಹಲವಾರು ಸಿದ್ಧಾಂತಿಗಳು ವಿವಿಧ ದೃಷ್ಟಿಕೋನಗಳಿಂದ ವಿವರಿಸಿದ್ದಾರೆ. ಇವರಲ್ಲಿ ಜೀನ್ ಪಿಯಾಷೆ, ಎರಿಕ್ ಎರಿಕ್ಸನ್, ಬಂಡೂರ ಮತ್ತು ಬ್ರೂನರ್ ಮುಂತಾದವರು ಮುಂಚೂಣಿಯಲ್ಲಿ ಕಾಣಸಿಗುವರು. ಪೂರ್ವಬಾಲ್ಯವಂತೂ ಎಲ್ಲವನ್ನೂ ಹೀರಿಕೊಳ್ಳುವ ಸ್ಪಾಂಜ್ ಇದ್ದಂತೆ ಎಂದೆವಲ್ಲ, ಅದನ್ನು ನೆನಪಿಸಿಕೊಳ್ಳಿ. ಶಾಲೆಯಲ್ಲಿನ ಮೊದಲ ಅನುಭವಗಳು ಅವರಿಗೆ ಪ್ರಪಂಚದ ಪರಿಜ್ಞಾನವನ್ನು ಮತ್ತು ಕೌಶಲಗಳನ್ನು ಒದಗಿಸುವುವು. ಇಲ್ಲಿಂದಲೇ ಸಾಮಾಜೀಕರಣದ ಪ್ರಕ್ರಿಯೆಯು ಅತ್ಯಂತ ಪರಿಣಾಮಕಾರಿಯಾಗಿ ಪ್ರಾರಂಭವಾಗುವುದು. ವಿಕಾಸ ಸಿದ್ಧಾಂತಿಗಳು ಬಾಲ್ಯಹಂತವನ್ನು ಕೆಲವು ಸಾರ್ವತ್ರೀಕರಣಗಳ ಚೌಕಟ್ಟಿನಲ್ಲಿ ವಿವರಿಸಿರುವರಾದರೂ ವ್ಯಕ್ತಿಭಿನ್ನತೆಯನ್ನು ಬಿಟ್ಟುಕೊಟ್ಟಿಲ್ಲ. ಇದರಿಂದ ಬಾಲ್ಯವು ಈಗಾಗಲೇ ಕೊಡಮಾಡಿರುವ ಸಾರ್ವತ್ರೀಕರಣಗಳಿಗಿಂತ ಭಿನ್ನವಾಗಿಯೂ ಇರಬಹುದು ಎಂಬ ವಿಚಾರವನ್ನು ನಾವು ಗಮನಿಸಬೇಕು. ಹಾಗೂ ಈ ವ್ಯತ್ಯಾಸಕ್ಕೆ ಪರಿಸರ ಮತ್ತು ಅನುವಂಶೀಯತೆಗಳಷ್ಟೇ ಅಲ್ಲದೆ ಬೇರೆ ಕಾರಣಗಳೂ ಇರಬಹುದು, ಉದಾಹರಣೆಗೆ, ಬಡತನ, ಅನಾರೋಗ್ಯ, ಒತ್ತಡ ಮತ್ತು ಬಿಕ್ಕಟ್ಟಿನಿಂದ ಕೂಡಿದ ಸಂದರ್ಭಗಳು, ಆತಂಕ, ಸಾಮಾಜಿಕ–ಆರ್ಥಿಕ ಸ್ಥಿತಿಗತಿ ಮತ್ತು ವೈವಿಧ್ಯಮಯವಾದ ಸಂಸ್ಕೃತಿ ಇತ್ಯಾದಿ. ಈ ಘಟಕದಲ್ಲಿ ನಾವು ಬಾಲ್ಯವನ್ನು ಸಂಪೂರ್ಣವಾಗಿ ಬೇರೆಯದೇ ಆದ ನೆಲೆಗಟ್ಟಿನಲ್ಲಿ ತಿಳಿಯಲಿದ್ದೇವೆ.

## 2.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.1.3.1. ಬಾಲ್ಯಹಂತ–ಅರ್ಥ ಮತ್ತು ಸ್ವರೂಪ

ಯೂನಿಸೆಫ್ ನಡೆಸಿದ ಒಂದು ಸಮೀಕ್ಷಣಾ ವರದಿಯೊಂದು ಪ್ರಸ್ತುತ ಭಾರತದಲ್ಲಿನ ಮಕ್ಕಳ ಬಾಲ್ಯಹಂತವನ್ನು ಕುರಿತಂತೆ ಹಲವಾರು ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಿದೆ. ಅದರ ಕೆಲವು ಭಾಗಗಳನ್ನು ಈ ಕೆಳಗೆ ನೀಡಲಾಗಿದೆ. ಈ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿ:

ಪ್ರಸ್ತುತ ಜಾಗತಿಕ ಕಾಲಮಾನದಲ್ಲಿ ಸುಮಾರು 75 ಮಿಲಿಯನ್ ಮಕ್ಕಳು ಅಂದರೆ 3 ವರ್ಷಗಳಿಂದ 18 ವರ್ಷಗಳ ವಯೋಮಾನದವರು ಶಾಲಾ ಮೆಟ್ಟಿಲನ್ನು ತುಳಿದಿರುವುದಿಲ್ಲ. ಒಂದು ವೇಳೆ ಶಾಲೆಗೆ ಹೋಗಿದ್ದರೆ, ಅದು ಭಾಗಶಃ ಮಾತ್ರ. ಇದಕ್ಕೆ ಕಾರಣ, ಹಲವಾರು ರೀತಿಯ ಸಂಕ್ಷೋಭೆಗಳು ಮತ್ತು ಪ್ರಾಕೃತಿಕ ದುರಂತಗಳು. ಯೂನಿಸೆಫ್‌ನ ಒಂದು ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ದೆಹಲಿ, ಕೋಲ್ಕತ್ತಾ, ಮತ್ತು ಮುಂಬಯಿ ನಗರಗಳು ಕೊಳಚೆ ಪ್ರದೇಶಗಳನ್ನು ಅತಿ ಹೆಚ್ಚಾಗಿಯೇ ಹೊಂದಿವೆ. ಹಾಗೆಯೇ ನಗರಗಳಲ್ಲಿನ ಮಕ್ಕಳಿಗಿಂತ ಗ್ರಾಮೀಣ ಮಕ್ಕಳು ಬಹಳಷ್ಟು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಯೂನಿಸೆಫ್‌ನ ಕಾರ್ಯವಾಹಕ ನಿರ್ದೇಶಕರಾದ ಆಂತೋನಿ ಲೇಕ್‌ರವರು ಹೇಳುವಂತೆ "ಬಡತನ ಮತ್ತು ಹಸಿವು ಎಳೆ ಮಕ್ಕಳನ್ನು ದಾರುಣವಾಗಿ ಹಿಂಸಿಸುತ್ತದೆ. ಇದರ ಪರಿಣಾಮ ಘೋರವಾಗಿರುತ್ತದೆ. ಬೇರೆ ಎಲ್ಲಾ ಮಕ್ಕಳಿಗಿಂತ ಇವರುಗಳು ಚಿಕ್ಕವರಾಗಿದ್ದರೂ ಅತ್ಯಂತ ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಗಿರುತ್ತದೆ". ಭಾರತವು ಹಲವಾರು ದಶಕಗಳಿಂದಲೂ ಬಡತನದ ವಿರುದ್ಧ ಸೆಣಸಾಡುತ್ತಿದ್ದರೂ ಅಪೇಕ್ಷಿತ ಫಲಿತಾಂಶವನ್ನು ಇನ್ನೂ ಕಾಣಬೇಕಿದೆ.

ಭಾರತೀಯ ಸಮಾಜದಲ್ಲಿ ಕನಿಷ್ಟ–ಸಾಮಾಜಿಕ–ಸ್ತರದಲ್ಲಿ ಕಂಡುಬರುವ ಜನರು ಅತ್ಯಂತ ಬಡತನದಲ್ಲಿರುತ್ತಾರೆ. ಅವರ ಜೀವನವು ಬಡತನದ ರೇಖೆಗಿಂತ ಕೆಳಮಟ್ಟದಲ್ಲಿರುತ್ತದೆ. ಇಂತಹ ಕುಟುಂಬಗಳಲ್ಲಿ ಮಕ್ಕಳ ಮೇಲೆ ಮಿತಿಮೀರಿದ ಒತ್ತಡವಿರುತ್ತದೆ. ಇದನ್ನು ಬದಿಗಿಟ್ಟು, ಸಾಮಾನ್ಯ ಕುಟುಂಬದಲ್ಲಿನ ಚಿತ್ರಣವನ್ನು ತೆಗೆದುಕೊಂಡರೆ,

ಪ್ರತಿಯೊಂದು ಕುಟುಂಬದಲ್ಲಿಯೂ ಮಕ್ಕಳ ಮೇಲೆ ಅವರ ಬಾಲ್ಯಹಂತದಿಂದಲೇ ಅತಿಯಾದ ಭರವಸೆಯನ್ನು ಹೊಂದಿರುವ ಪೋಷಕರು ಸರ್ವೇಸಾಮಾನ್ಯ. ಹಾಗೆಯೇ ವಿಕಾಸ ಸಿದ್ಧಾಂತಿಗಳು ಹೇಳುವ ಬಾಲ್ಯಹಂತದ ವಿಕಾಸಾತ್ಮಕ ಪ್ರಕ್ರಿಯೆಗಳು ಮತ್ತು ವಿಕಾಸಾತ್ಮಕ ಕಾರ್ಯಗಳು ವಾಸ್ತವಕ್ಕೆ ಹೊಂದಿಕೊಳ್ಳಲಾರದವಾಗಿವೆ. ಉದಾಹರಣೆಗೆ ಪಿಯಾಷೆಯ ಸಿದ್ಧಾಂತದ ಪ್ರಕಾರ, ಮಗುವೊಂದು ಸುಮಾರು 8 ರಿಂದ 10 ವರ್ಷದಲ್ಲಿರುವಾಗ ಮೂರ್ತ–ಸಂಕ್ರಿಯಾತ್ಮಕ ಹಂತದಲ್ಲಿರುತ್ತದೆ. ಎಲ್ಲಾ ಮೂರ್ತಸ್ವರೂಪದ ವಿಕಾಸಾತ್ಮಕ ಕಾರ್ಯಗಳನ್ನು ಈ ಮಗುವು ಗಳಿಸಿಕೊಂಡಿದ್ದು ಆ ಸಾಮರ್ಥ್ಯವನ್ನು ತೋರಬೇಕು. ಆದರೆ, ವಾಸ್ತವ ಇದಕ್ಕಿಂತ ಭಿನ್ನವಾಗಿದೆ. ಬಹಳಷ್ಟು ಸಣ್ಣ ಸಣ್ಣ ಊರುಗಳಲ್ಲಿ ಮತ್ತು ಹಳ್ಳಿಗಳಲ್ಲಿ, ಹಾಗೆಯೇ ಮುಂಬಯಿಯಂತಹ ನಗರಗಳಲ್ಲಿ ಬಡವರ ಮಕ್ಕಳು ಹೋಟೆಲ್ಲಿನಲ್ಲಿ ಕ್ಲೀನರ್‌ಗಳಾಗಿರುತ್ತಾರೆ. ಈಗ ಇನ್ನಷ್ಟು ಉದಾಹರಣೆಗಳನ್ನು ನೋಡೋಣ:

1. ಸಣ್ಣ ಮಕ್ಕಳು ಅಂಗಡಿಗಳಲ್ಲಿ ಪೊಟ್ಟಣ ಕಟ್ಟುವ ಕೆಲಸ, ಅಂಗಡಿಮುಂಗಟ್ಟುಗಳನ್ನು ಶುಚಿ ಮಾಡುವ ಕೆಲಸ, ಹೂ–ಮಾರುವುದು – ಇಂತಹ ಕೆಲಸಗಳನ್ನು ಮಾಡುತ್ತಾರೆ.
2. ದಿನಪತ್ರಿಕೆಗಳನ್ನು ಮನೆಮನೆಗೆ ಹಂಚುವ ಕೆಲಸ ಮಾಡುತ್ತಾರೆ.
3. ವರ್ಕ್‌ಶಾಪ್‌ಗಳಲ್ಲಿ, ಗ್ಯಾರೇಜುಗಳಲ್ಲಿ ಮತ್ತು ಸೈಕಲ್ ಶಾಪ್‌ಗಳಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಾರೆ.

ಮೇಲೆ ಹೇಳಿದ ಎಲ್ಲಾ ಉದಾಹರಣೆಗಳು ಎಳೆಯ ಮಕ್ಕಳು, ಅವರ ಬಾಲ್ಯ ಮತ್ತು ಮನೋವಿಜ್ಞಾನಿಗಳು ಹೇಳಿರುವ ಬಾಲ್ಯಹಂತದ ವರ್ತನೆಗಳು ಇವೆಲ್ಲವನ್ನೂ ಮತ್ತೊಮ್ಮೆ ನೆನಪಿಸಿ, ಚಿಂತನೆಗೆ ಒಳಗುಮಾಡುತ್ತವೆ. ಆದ್ದರಿಂದ ಸಿದ್ಧಾಂತಗಳು ಏನನ್ನೇ ಹೇಳಿದರೂ ವಾಸ್ತವವು ಬೇರೆಯೇ ಆಗಿರುವುದು ಎಂಬ ಸತ್ಯಾಂಶವು ಕಣ್ಣಿಗೆ ರಾಚುವಂತೆ ಇದೆ. ಎಷ್ಟೋ ಸಂದರ್ಭಗಳಲ್ಲಿ ಮಕ್ಕಳ ಬಾಲ್ಯಹಂತವನ್ನು ತಪ್ಪಾಗಿ ಗ್ರಹಿಸಿ ಅದರಂತೆ ನಡೆದುಕೊಂಡ ಘಟನೆಗಳೂ ಕಾಣಸಿಗುತ್ತವೆ. ಈಗ ಬಾಲ್ಯಹಂತವನ್ನು ಕುರಿತಂತೆ ಕೆಲವು ಸೈದ್ಧಾಂತಿಕ ವಿಚಾರಗಳನ್ನು ಗಮನಿಸೋಣ.

ಮಗುವಿನ ಸುಮಾರು 3 ವರ್ಷಗಳಿಂದ 12 ವರ್ಷಗಳವರೆಗೆ ಬಾಲ್ಯಹಂತವನ್ನು ಗುರುತಿಸಲಾಗಿದೆ. ಒಟ್ಟಾರೆ ಈ ವರ್ಷಗಳನ್ನು ಕ್ರಮವಾಗಿ ಪೂರ್ವ ಬಾಲ್ಯಹಂತ ಮತ್ತು ಉತ್ತರ ಬಾಲ್ಯಹಂತವೆಂಬ ಎರಡು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಹಾಗೆಯೇ ಬಾಲ್ಯಹಂತದ ವರ್ತನೆಗಳನ್ನು ಸಿದ್ಧಾಂತಿಗಳು ವಿವಿಧ ದೃಷ್ಟಿಕೋನಗಳಿಂದ ವಿವರಿಸಿದ್ದಾರೆ. ಉದಾಹರಣೆಗೆ, ಜೀನ್‌ಪಿಯಾಷೆಯು ಸಂಜ್ಞಾನಾತ್ಮಕ ವಿಕಾಸದ ಜ್ಞಾನವಲಯದ ವರ್ತನಗಳಾಗಿ, ಎರಿಕ್‌ಸನ್ ಮನೋ–ಸಾಮಾಜಿಕ ವರ್ತನೆಗಳಾಗಿ ವಿವರಿಸಿದ್ದಾರೆ. ಇನ್ನು ಹರ್ಲಾಕ್, ಹ್ಯಾವಿಗರ್ಸ್ಟ್ ಮತ್ತು ಜಿ.ಸ್ಟ್ಯಾನ್ಲೀ ಹಾಲ್‌ರವರು ವಿಕಾಸಾತ್ಮಕ ಕಾರ್ಯಗಳ ಮೂಲಕ ಇಡೀ ಜೀವಮಾನಕ್ಕೇ ಒಂದು ವಿವರಣೆಯನ್ನು ನೀಡಿದ್ದಾರೆ. ಹಾಗೆಯೇ ಬಾಲ್ಯಹಂತದ ಪ್ರಮುಖ ಗುಣಲಕ್ಷಣಗಳನ್ನು ನಮೂದಿಸಿದ್ದಾರೆ. ಮಗುವು ಹುಟ್ಟಿದಂದಿನಿಂದ ಮೊದಲ 6 ವರ್ಷಗಳನ್ನು ಪೂರ್ವಬಾಲ್ಯವೆಂದೂ ನಂತರದ 6 ರಿಂದ 12 ವರ್ಷಗಳನ್ನು ಉತ್ತರಬಾಲ್ಯವೆಂದೂ ಗುರುತಿಸಲಾಗಿದೆ. ಪೂರ್ವಬಾಲ್ಯಹಂತದಲ್ಲಿ ದೇಹದ ಎತ್ತರ, ಗಾತ್ರ, ಸುತ್ತಳತೆ, ವಿವಿಧ ಅಂಗಗಳು ಮತ್ತು ತೂಕದಲ್ಲಿ ಹೆಚ್ಚಳವಾಗುವುದು. ಆದರೂ ವಿಕಾಸದ ಗತಿ ಮಂದವಾಗಿಯೇ ಇರುವುದು. ಪೂರ್ವಬಾಲ್ಯಹಂತದಲ್ಲಿ ಮಕ್ಕಳು ಕಡಿಮೆ ರೋಗನಿರೋಧಕ ಶಕ್ತಿಯಿಂದ ಹಲವಾರು ಕಾಯಿಲೆಗಳಿಗೆ ತುತ್ತಾಗುವರು, ಆದರೆ, ಉತ್ತರಬಾಲ್ಯಹಂತವು ಪ್ರಾರಂಭವಾಗುತ್ತಿದ್ದಂತೆ ಹೆಚ್ಚು ನಿರೋಧಕ ಶಕ್ತಿಯ ಬೆಳವಣಿಗೆಯಾಗಿ, ಆರೋಗ್ಯವಂತರಾಗುವರು. ಆಹಾರಾಭ್ಯಾಸ, ನಿದ್ದೆ, ಮತ್ತು ಮಲ–ಮೂತ್ರ ವಿಸರ್ಜನೆಗಳ ಮೇಲಿನ ಹತೋಟಿ–ಇವೆಲ್ಲವುಗಳ ವಿಕಾಸವಾಗಿರುತ್ತದೆ. ಉತ್ತರಬಾಲ್ಯ ಹಂತದಲ್ಲಿ ತಮ್ಮ ದೇಹದ ಮೇಲಿನ ಉತ್ತಮ ಹಿಡಿತದಿಂದಾಗಿ ಹಲವಾರು ಕೌಶಲಪೂರಿತವಾದ ಸಾಮರ್ಥ್ಯಗಳನ್ನು, ವಿಭೇದನ ಕೌಶಲಗಳನ್ನು ತೋರುವರು. ಹರ್ಲಾಕ್‌ರವರು ಹೇಳುವಂತೆ, ಸ್ವಯಂ–ಸೇವೆ, ಸಮಾಜ ಸೇವೆ ಮತ್ತು ಕ್ರೀಡಾ–ಕೌಶಲಗಳ ಸಾಮರ್ಥ್ಯವನ್ನು ಉತ್ತಮಮಟ್ಟದಲ್ಲಿ ಹೊಂದಿರುತ್ತಾರೆ. ಓಡುವುದು, ಹಾರುವುದು, ಜಿಗಿಯುವುದು – ಇಂತಹ ಚಟುವಟಿಕೆಗಳನ್ನು ಲೀಲಾಜಾಲವಾಗಿ ಮಾಡುವರು. ಹಾಗೆಯೇ ಅತೀ ವೇಗವಾಗಿ

ಚಲಿಸುವ ವಸ್ತುಗಳು, ನಿರ್ದಿಷ್ಟತೆ ಮತ್ತು ವೇಗ ಎರಡನ್ನೂ ಹೊಂದಿರುವ ಚಲನೆ ಅವರನ್ನು ಹೆಚ್ಚು ಮೋಜಿಗೆ ಎಳೆಯುತ್ತವೆ. ಇದು ಸುಮಾರು 7 ವರ್ಷಗಳಿಂದ 9 ವರ್ಷಗಳವರೆಗೆ ಕಾಣಬರುತ್ತದೆ. 10 ರಿಂದ 12 ವರ್ಷಗಳಲ್ಲಿ ಅವರು ದೈಹಿಕವಾಗಿ ಹೆಚ್ಚು ಬಲಾಢ್ಯರಾಗುವುರು ಮತ್ತು ಎಲ್ಲಾ ರೀತಿಯ ಕೆಲಸಗಳನ್ನೂ ಮಾಡಬಲ್ಲವರಾಗಿರುತ್ತಾರೆ. ಹೀಗೆ ಎಲ್ಲಾ ಸಾಮರ್ಥ್ಯಗಳಲ್ಲಿ ಹೆಚ್ಚಳ, ಆಯಾಸವನ್ನು ತಡೆದುಕೊಳ್ಳುವ ಶಕ್ತಿ, ಆಟ–ಓಟಗಳಲ್ಲಿ ಗುರಿ ತಲುಪುವ ಛಲ, ಮತ್ತು ಏನನ್ನೇ ಮಾಡಲಿ, ಕೌಶಲಪೂರ್ವಕವಾಗಿ ನಿರ್ವಹಿಸುವ ಲಕ್ಷಣಗಳನ್ನು ಉತ್ತರಬಾಲ್ಯದ ಹಂತದಲ್ಲಿರುವ ಮಕ್ಕಳು ತೋರುತ್ತಾರೆ.

ಬಾಲ್ಯಹಂತದಲ್ಲಿ ಮಕ್ಕಳು ಶಾಲೆಯನ್ನು ಸೇರುವುದರಿಂದಾಗಿ ಅವರಲ್ಲಿ ಭಾಷಾ ಬೆಳವಣಿಗೆಯು ಬಹಳ ತ್ವರಿತಗತಿಯಿಂದ ನಡೆಯುವುದು. ಮಕ್ಕಳು ಏನಾದರೂ ತಪ್ಪು ಉಚ್ಚಾರಣೆಗಳನ್ನು ಅಥವಾ ತಪ್ಪು ಪದಗಳ ಬಳಕೆಯನ್ನು ಕಲಿತದ್ದೇ ಆದರೆ, ಅವುಗಳನ್ನು ಇಲ್ಲಿಯೇ ಸರಪಡಿಸಬೇಕಾಗುತ್ತದೆ, ಏಕೆಂದರೆ, ಮುಂದೆ ಹೋದಂತೆ ಸರಿಪಡಿಸುವಿಕೆ ಒಂದು ಸವಾಲಾಗಿ ಬಿಡುತ್ತದೆ. ಭಾಷಾಬೆಳವಣಿಗೆಯಿಂದಾಗಿ ಮಕ್ಕಳ ಸಾಮಾಜೀಕರಣವೂ ಶಾಲಾ ವಾತಾವರಣದಲ್ಲಿ ಮುಕ್ತವಾಗಿ ನಡೆಯುವುದು. ಉತ್ತರಬಾಲ್ಯಹಂತದಲ್ಲಿ ಮಕ್ಕಳು ತಮ್ಮದೇ ಆದ ರಹಸ್ಯಭಾಷೆಯನ್ನು ಸೃಷ್ಟಿಸಿಕೊಳ್ಳುವರು (ಎಲ್ಲ ಅಕ್ಷರಗಳ ಮಧ್ಯೆ 'ಕ' ವನ್ನು ಬಳಸುವುದು ಅಥವಾ ತಿರುವುಮುರುವಾಗಿ ಮಾತಾಡುವುದು ಇತ್ಯಾದಿ !). ಇಂತಹ ರಹಸ್ಯ ಭಾಷೆಯನ್ನು ಆತ್ಮೀಯ ಸ್ನೇಹಿತರುಗಳು ತಮ್ಮ ತಮ್ಮಲ್ಲೇ ಮಾತಾಡುವಾಗ ಮತ್ತು ಗುಟ್ಟು ಮಾಡುವಾಗ, ಇನ್ನೊಬ್ಬರನ್ನು ಆಡಿಕೊಳ್ಳುವಾಗ ಬಳಸುವರು.

ಜ್ಞಾನವಲಯದ ವಿಕಾಸವೂ ಕೂಡ ಬಾಲ್ಯಹಂತದಲ್ಲಿ ಕಂಡುಬರುವುದರಿಂದ, ಮಕ್ಕಳು ಹೆಚ್ಚು ಬುದ್ಧಿವಂತರಾಗಿ ತೋರುವರು. ಈ ವಯೋಮಾನದಲ್ಲಿ ಅವರು ಮೂರ್ತ ಸಂಕ್ರಿಯಾತ್ಮಕ ಹಂತದಲ್ಲಿರುತ್ತಾರೆ. ಪಿಯಾಷೆ ಅಭಿಪ್ರಾಯ ಪಡುವಂತೆ, ಈ ಹಂತದ ಮಕ್ಕಳ ಚಿಂತನೆಗಳು ಸ್ಪಷ್ಟವಾಗಿದ್ದು, ಕಾಲ, ದೇಶ, ವಸ್ತುಗಳ ಸಂಬಂಧವಾಗಿ ಮತ್ತು ವಸ್ತುಗಳ ತೂಕ, ಗಾತ್ರ, ಉದ್ದ/ಎತ್ತರ ಇತ್ಯಾದಿಗಳನ್ನು ಕುರಿತಂತೆ, ಮೂರ್ತ ಸಂಕ್ರಿಯಾತ್ಮಕ ಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ವಾಸ್ತವವನ್ನು ಬಯಸುತ್ತಾರೆ. ಮಾಹಿತಿಯನ್ನು ಗ್ರಹಿಸುವ ವೇಗವೂ ಅತಿ ಹೆಚ್ಚಾಗಿದ್ದು ಅವುಗಳಿಂದ ಶೀಘ್ರವಾಗಿ ಅನುಭವಾಧಾರಿತ ಸ್ಕೀಮಾಗಳನ್ನು ರಚಿಸಿಕೊಳ್ಳುತ್ತಾರೆ. ಈ ಹಂತದಲ್ಲಿನ ಮಕ್ಕಳು ಶಾಲೆಯಲ್ಲಿರುವುದರಿಂದಲೇ ಅವರ ಕಲಿಕಾಮಟ್ಟ ಮತ್ತು ಸ್ಮರಣೆ ಉನ್ನತ ಮಟ್ಟದಲ್ಲಿರುತ್ತದೆ. ತಾರ್ಕಿಕ ಚಿಂತನೆಯ ಸಾಮರ್ಥ್ಯದಲ್ಲಿ ಹೆಚ್ಚಳ, ವೈಜ್ಞಾನಿಕ ಕಥೆಗಳಲ್ಲಿ ಆಸಕ್ತಿಯ ಬೆಳವಣಿಗೆ, ಹಾಗೂ ಗಣಿತದ ಸಮಸ್ಯೆಗಳನ್ನು, ಸವಾಲುಗಳನ್ನು ಬಿಡಿಸುವಲ್ಲಿ ಹೆಚ್ಚಿನ ಉತ್ಸಾಹವನ್ನು ನೋಡಬಹುದು. ಧೈರ್ಯ, ಸಾಹಸ ಮತ್ತು ಸೃಜನಶೀಲ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು. ಇದು ತಂಡಯುಗವಾಗಿರುವುದರಿಂದ ತಮ್ಮ ತಂಡಕ್ಕೆ ಅವರು ಯಾವಾಗಲೂ ನಿಯತ್ತಿನಿಂದ ಇರುತ್ತಾರೆ. ಪೂರ್ವಬಾಲ್ಯದಲ್ಲಿ ಕಾಡಿಸುತ್ತಿದ್ದ ಭಯ, ಭೀತಿಗಳು ಕಲ್ಪನೆಗಳಿಂದ ಅವರು ಮುಕ್ತರಾಗಿರುತ್ತಾರೆ. ಅನುಗಮನ ರೀತಿಯ ತರ್ಕ, ಚಿಂತನೆಗಳ ಮೂಲಕ ಸಾರ್ವತ್ರೀಕರಣಗಳನ್ನು ಮಾಡುತ್ತಾರೆ. ಪ್ರಚಲಿತ ವಿದ್ಯಾಮಾನಗಳಲ್ಲಿ ಆಸಕ್ತಿಯನ್ನು ಹೊಂದಿದ್ದು, ಕಾರ್ಯ–ಕಾರಣ–ಫಲಿತಾಂಶಗಳ ಸಂಬಂಧಗಳಲ್ಲಿ ಅಭಿರುಚಿಯನ್ನು ತೋರುತ್ತಾರೆ. ಪರಿಸರದೊಡನೆ, ನಮ್ಯತೆಯಿಂದ ಪರಿಣಾಮಕಾರಿಯಾಗಿ ಹೊಂದಾಣಿಕೆ ಮಾಡಿಕೊಳ್ಳುವ ಕಲೆಯಲ್ಲಿ ಪರಿಣಿತರಾಗುತ್ತಾ ಮುಂದುವರೆಯುತ್ತಾರೆ.

ಈ ಹಂತದಲ್ಲಿನ ಮಕ್ಕಳು ತಮ್ಮ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಉತ್ತಮ ಪ್ರಯತ್ನ ನಡೆಸುವರಲ್ಲದೇ, ತಾವು ಈ ಹಿಂದೆ ಅನುಭವಿಸಿದ ಭಯಗಳಿಂದ ಹೊರಬರುತ್ತಾರೆ. ಸಂತೋಷ ಅಥವಾ ದುಃಖ ತರುವ ಅನುಭವಗಳು ಮತ್ತು ನೆನಪುಗಳು ಇದ್ದೇ ಇರುತ್ತವೆಯಾದರೂ ಗೊತ್ತಿದ್ದೋ ಗೊತ್ತಿಲ್ಲದೆಯೋ ಕೆಲವು ನಿಖರವಾದ ಅನುಬಂಧಗಳಿಂದ ಮತ್ತು ಕೆಲವೊಮ್ಮೆ ಅನುಕರಣೆಯ ಮೂಲಕ ಇಂತಹ ಭಯಗಳಿಂದ ಹೊರಬರುವ ಕ್ರಮಗಳನ್ನು ಅವರೇ ನಿಯೋಜಿಸಿಕೊಳ್ಳುತ್ತಾರೆ. ಹಾಗಿದ್ದಾಗ್ಯೂ ಅಪರಿಚಿತರು, ದೆವ್ವ, ಭೂತಗಳು, ಕತ್ತಲೆ ಮತ್ತು ಅಸಹಜವಾದ ಮತ್ತು ಕಾಲ್ಪನಿಕವಾದ ಭಯಂಕರ ಪ್ರಾಣಿಗಳು ಅವರ ಭೀತಿಗೆ ಕಾರಣವಾಗಿರುತ್ತವೆ.

ಅದರಂತೆಯೇ ಕೋಪತಾಪಗಳು, ಹೊಡೆದಾಡುವ ಪ್ರವೃತ್ತಿ ಚೆನ್ನಾಗಿಯೇ ವ್ಯಕ್ತವಾಗುತ್ತವೆ. ಆದರೂ ಅದು ಕ್ಷಣಿಕ. ನಂತರದಲ್ಲಿ ಅದೆಲ್ಲವನ್ನೂ ಮರೆತು ಸ್ನೇಹಿತರಾಗಿ ಕಲೆತು ಆಡುತ್ತಿರುತ್ತಾರೆ. ಮತ್ಸರವು ಇನ್ನೊಂದು ಅಭಿವ್ಯಕ್ತಿಯಾಗಿರುತ್ತದೆ. ಕೆಲವೊಮ್ಮೆ ಅದನ್ನು ವಸ್ತುಗಳ ಮೇಲೆ, ಅವುಗಳನ್ನು ಹಾಳುಮಾಡುವುದು, ಪುಡಿಪುಡಿ ಮಾಡುವುದರ ಮೂಲಕ ತೋರುತ್ತಾರೆ. ಹೀಗೆ ವಿಚ್ಛಿದ್ರಕಾರಿ ನಡುವಳಿಕೆಗಳಂತೆಯೇ, ಪ್ರೀತಿ, ಸಂತೋಷ, ಒಗ್ಗಟ್ಟಿನಲ್ಲಿನ ಹಿತ ಇವೆಲ್ಲವೂ ವಿಕಾಸಹೊಂದುವ ಕಾಲವಿದಾಗಿರುತ್ತದೆ. ಕಾಲ ಮುಂದುವರಿದಂತೆ, ಬಹಿರಂಗವಾಗಿ ಅಭಿವ್ಯಕ್ತಿಯಾಗುವ ವರ್ತನೆಗಳು ಆದಷ್ಟು ಕಡಿಮೆಯಾಗುತ್ತವೆ. ಆದರೆ, ಒಂದು ರೀತಿಯ ನಾಚಿಕೆಯ ಸ್ವಭಾವವನ್ನು ಬೆಳೆಸಿಕೊಳ್ಳುತ್ತಾರೆ. ಕುತೂಹಲ ಮತ್ತು ಅನ್ವೇಷಣಾ ಕೌಶಲಗಳು ಅವರಲ್ಲಿ ತುಂಬಿತುಳುಕುವಷ್ಟಿರುತ್ತದೆ. ಆದ್ದರಿಂದಲೇ ಕಂಡದ್ದೆಲ್ಲವನ್ನೂ ಪ್ರಶ್ನಿಸುವ ಪ್ರವೃತ್ತಿಯನ್ನು ತೋರುತ್ತಾರೆ.

ಸಾಮಾಜೀಕರಣ ಪ್ರಕ್ರಿಯೆಯು ಶಾಲೆಯಲ್ಲಿ ಹೆಚ್ಚು ವಿಶಾಲತೆಯನ್ನು ಹೊಂದಿದ ಪರಿಣಾಮವಾಗಿ ಮಕ್ಕಳು ಹೊರ ಪ್ರಪಂಚವನ್ನು ಮತ್ತಷ್ಟು ಕುತೂಹಲದಿಂದ ಅನ್ವೇಷಣೆಗೆ ಒಳಪಡಿಸುತ್ತಾರೆ. ಇದರಲ್ಲಿ ಕೆಲವು ಸಾಮಾಜಿಕ ನಿಯಮಗಳನ್ನು ಅರಿತುಕೊಂಡು, ಮನಃಪೂರ್ವಕವಾಗಿ ಅವುಗಳನ್ನು ಒಪ್ಪಿಕೊಂಡು ಅದರಂತೆ ನಡೆದುಕೊಳ್ಳುತ್ತಾರೆ. ಕೆಲವು ಸಾಮಾಜಿಕ ರೀತಿ, ನೀತಿ, ರಿವಾಜುಗಳನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಇದಕ್ಕೆ ಅವರದೇ ಆದ ಕಾರಣಗಳಿರುತ್ತವೆ. ಇಂತಹ ವಿರೋಧಗಳಿಗೆ ತಮ್ಮದೇ ಆದ ತರ್ಕ ಮತ್ತು ಕಾರಣಗಳಿಂದ ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಸಾಮಾನ್ಯವಾಗಿ ಈ ಮಕ್ಕಳೆಲ್ಲರಿಗೂ ಒಂದೇ ಗುರಿಯಿದ್ದು, ಆಸಕ್ತಿಯಿದ್ದು ಎಲ್ಲರೂ ಒಗ್ಗಟ್ಟಿನಿಂದ ಯಾವುದಾದರೂ ಒಂದು ಸಾಧನೆಗೆ ಹೆಚ್ಚು ಬದ್ಧರಾಗಿರುತ್ತಾರೆ. ಅದರಲ್ಲೂ ಕ್ರೀಡೆ ಇವರಿಗೆ ಅಚ್ಚುಮೆಚ್ಚಿನ ಕ್ಷೇತ್ರವಾಗಿದ್ದು, ತಂಡಸ್ಫೂರ್ತಿಯಿಂದ ಕೂಡಿದ ಹಲವಾರು ಗುಂಪು/ತಂಡಗಳನ್ನು ಒಂದು ಶಾಲೆಯಲ್ಲಿ ಕಾಣಬಹುದಾಗಿದೆ. ಹೀಗೆ 'ತಾವು, ತಮ್ಮ ಗುಂಪು' ಎಂಬ ತಾದಾತ್ಮ್ಯತೆಯು ಮಕ್ಕಳಲ್ಲಿ ಒಂದು ವಿಚಿತ್ರವಾದ ಶಕ್ತಿಯಾಗಿ ಬೆಂಬಲ ನೀಡುವುದೇ ಅಲ್ಲದೇ ಹಿರಿಯರನ್ನು ಮತ್ತು ದೊಡ್ಡವರ ಮಾತುಗಳನ್ನು ಅಲ್ಲಗಳೆದು ವಿರೋಧಿಸುವ ಸಾಮರ್ಥ್ಯವನ್ನು ನೀಡುತ್ತದೆ. ಯಾರೇ ಇತರರು, ಅದು ದೊಡ್ಡವರಾಗಿದ್ದರೂ ಅಷ್ಟೆ, ಅವರನ್ನು ನಿಯಂತ್ರಿಸುವುದು ಅವರಿಗೆ ಇಷ್ಟವಾಗದ ವಿಷಯ. ಪೂರ್ವಬಾಲ್ಯ ಹಂತದಲ್ಲೇ ಮಕ್ಕಳಲ್ಲಿ 'ಅಹಂ' ಭಾವವು ಉದಯಿಸುವುದಾದರೂ ಆ ಹಂತದಲ್ಲಿ ನೈತಿಕತೆ, ಮೌಲ್ಯಗಳ ಮತ್ತು ನೀತಿ–ನಿಯಮಗಳ ವಿಕಾಸವಾಗಿರುವುದಿಲ್ಲ. ಮಗುವು ಒಮ್ಮೆ ಸರಿಯಾಗಿ ಸಾಮಾಜೀಕರಣಕ್ಕೆ ಒಳಪಟ್ಟ ನಂತರ ಈ ನೈತಿಕ ವಿಕಾಸವು ಪ್ರಾರಂಭವಾಗುವುದು. ಪಿಯಾಷೆಯು ಹೇಳುವಂತೆ ನೈತಿಕ ವಿಕಾಸವು ಮತ್ತು ಮೌಲ್ಯಗಳ ವಿಕಾಸವು ಮಗುವಿನ ನರಮಂಡಲದ ಸಂಪೂರ್ಣ ವಿಕಸನದ ನಂತರ ಆಗುವುದು. ಭಾಷಾ ಬೆಳವಣಿಗೆಯೂ ಕೂಡ ಸಾಮಾಜಿಕ ಮತ್ತು ನೈತಿಕ ವಿಕಾಸವನ್ನು ಬಹುವಾಗಿ ಪ್ರಭಾವಿಸುವುದು. ಸುಮಾರು 11ನೇ ವರ್ಷಗಳಷ್ಟರಲ್ಲಿ ಸಾಮಾಜಿಕ ನೀತಿ ನಿಯಮಗಳನ್ನು ಮಕ್ಕಳು ಸಮ್ಮತಿಸಿ, ವಿಧೇಯತೆಯಿಂದ ಕಲಿಯುವರು. ಸೂಕ್ಷ್ಮವಾಗಿ ಅವಲೋಕಿಸಿದರೆ ಮಕ್ಕಳು ಆಡುವ ಕ್ರೀಡೆಗಳಲ್ಲಿ ಇವು ಗೋಚರವಾಗುತ್ತವೆ.

ಗ್ಯಾರಿಸನ್ ಮತ್ತು ಸಹಚರರು ಬಾಲ್ಯಹಂತದ ವಿಕಾಸಾತ್ಮಕ ಕಾರ್ಯಗಳನ್ನು ಈ ಕೆಳಕಂಡಂತೆ ಗುರುತಿಸಿದ್ದಾರೆ:

- ಲಿಂಗಾಧಾರಿತ ಪಾತ್ರಗಳನ್ನು ಗುರುತಿಸಿ ಅದರಂತೆ ನಡೆದುಕೊಳ್ಳುವುದು;
- ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸುವುದು ಮತ್ತು ಸಮ್ಮತಿಸುವುದು;
- ನಿಯಮಗಳ ಕಲಿಕೆ ಮತ್ತು ಅವುಗಳನ್ನು ಅಂತರ್ಗತಮಾಡಿಕೊಳ್ಳುವುದು;
- ಆಟ ಮತ್ತು ಪಂದ್ಯಗಳಿಗೆ / ಕ್ರೀಡೆಗಳಿಗೆ ಅಗತ್ಯವಿರುವ ಕೌಶಲಗಳನ್ನು ಕಲಿಯುವುದು;
- ತಮ್ಮ ಗುಂಪಿನ ಸದಸ್ಯರೊಂದಿಗೆ ಹೊಂದಿಕೊಂಡು ಹೋಗುವುದನ್ನು ಕಲಿಯುವುದು;
- ಓದು, ಬರಹ ಮತ್ತು ಲೆಕ್ಕ ಮಾಡುವುದು;
- ಕಾಲ, ದೇಶ, ಅವಕಾಶ, ಸಂಖ್ಯೆ, ಹಣದ ಲೆಕ್ಕಾಚಾರ, ತೂಕ, ಕಾರ್ಯ–ಕಾರಣ–ಪರಿಣಾಮಗಳ

ಸಂಬಂಧ – ಈ ಪರಿಕಲ್ಪನೆಗಳನ್ನು ಅರಿಯುವುದು;

- ದೈನಂದಿನ ಜೀವನದಲ್ಲಿ ಮೌಲ್ಯಗಳನ್ನು ಅನ್ವಯಿಸಿಕೊಳ್ಳುವುದು;
- ಸ್ವಾವಲಂಬಿಯಾಗಲು ತಯಾರಾಗುವುದು; ಮತ್ತು
- ಜೀವನದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಮತ್ತು ದೃಷ್ಟಿಕೋನಗಳನ್ನು ಅಳವಡಿಸಿಕೊಳ್ಳುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

I. ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಬಾಲ್ಯಹಂತವನ್ನು ವಿಭಜಿಸಬಹುದಾದ ರೀತಿ____________

   ಎ. ಪೂರ್ವಬಾಲ್ಯ ಹಂತ ಮತ್ತು ಉತ್ತರ ಬಾಲ್ಯಹಂತವೆಂಬ ಎರಡು ಹಂತಗಳಾಗಿ

   ಬಿ. ಒಳ–ಆಲೋಚನೆಯ ಹಂತ ಮತ್ತು ಪೂರ್ವ–ಪರಿಕಲ್ಪನಾ ಹಂತವೆಂಬ ಎರಡು ಹಂತಗಳಾಗಿ

   ಸಿ. ಶಾಲಾ–ಪೂರ್ವ ಹಂತ, ಪೂರ್ವಬಾಲ್ಯ ಹಂತ ಮತ್ತು ಉತ್ತರ ಬಾಲ್ಯ ಹಂತವೆಂದು ಮೂರು ಭಾಗಗಳಾಗಿ

   ಡಿ. ಶಾಲಾಪೂರ್ವ ಹಂತ ಮತ್ತು ಉತ್ತರ ಬಾಲ್ಯಹಂತವೆಂಬ ಎರಡು ಭಾಗಗಳಾಗಿ

2. ಭಾಷಾ ವಿಕಾಸ ಪ್ರಕ್ರಿಯೆಯನ್ನು ಹೆಚ್ಚು ಪ್ರಭಾವಿಸುವ ಅಂಶ____________

   ಎ. ಪೋಷಕರು

   ಬಿ. ಶಾಲೆ

   ಸಿ. ನೆರೆಹೊರೆಯವರು

3. ಬಾಲ್ಯಹಂತವು ಸೇರಿರುವ ಹಂತ____________

   ಎ. ಸಂವೇಗಾತ್ಮಕ ಹಂತ

   ಬಿ. ಕಾರ್ಯಪೂರ್ವ–ಸಂಕ್ರಿಯಾತ್ಮಕ ಹಂತ

   ಸಿ. ಮೂರ್ತ ಕಾರ್ಯಗಳ ಸಂಕ್ರಿಯಾತ್ಮಕ ಹಂತ

   ಡಿ. ಔಪಚಾರಿಕ ಕಾರ್ಯಗಳ ಸಂಕ್ರಿಯಾತ್ಮಕ ಹಂತ

4. ಉತ್ತರ ಬಾಲ್ಯ ಹಂತವನ್ನು ಗುರುತಿಸುವ ಮತ್ತೊಂದು ರೀತಿ____________

   ಎ. ಒಳ–ಆಲೋಚನಾ ಹಂತ

   ಬಿ. ಪ್ಲಾಸ್ಟಿಕ್‌ನಂತಹ ವಯೋಮಾನ

   ಸಿ. ಸೃಜನಾತ್ಮಕ ಹಂತ

   ಡಿ. ತಂಡ ಯುಗ

5. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯಿಂದ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

   ಎ. ಬಾಲ್ಯಹಂತದ ಅನುಭವವು ಮಗುವಿನಲ್ಲಿ ಅನೇಕ ಸಾಮಾಜಿಕ ಮೌಲ್ಯಗಳ ಕಲಿಕೆಗೆ ಕಾರಣವಾಗುವುದು.

ಬಿ. ಮಕ್ಕಳು ತಮ್ಮ ಬಾಲ್ಯಹಂತದಲ್ಲಿ ಪ್ರತಿಯೊಂದನ್ನೂ ಯಾವುದೇ ಪ್ರಶ್ನೆಗಳಲ್ಲಿದೇ ಸುಮ್ಮನೇ ಒಪ್ಪಿಕೊಳ್ಳುತ್ತಾರೆ.

ಸಿ. ಪೂರ್ವ–ಬಾಲ್ಯ ಹಂತದಲ್ಲಿ ಮಕ್ಕಳು ಉತ್ತಮವಾದ ರೋಗನಿರೋಧಕ ಶಕ್ತಿಯನ್ನು ತೋರುತ್ತಾರೆ.

ಡಿ. ಮಗುವಿನ ಮೊದಲ 6 ವರ್ಷಗಳನ್ನು ಪೂರ್ವ–ಬಾಲ್ಯಹಂತವೆನ್ನುವರು.

ಇ. ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ವಿಕಾಸದ ಪ್ರಕ್ರಿಯೆಯಲ್ಲಿ ಮುಂದಿರುತ್ತಾರೆ.

ಎಫ್. ಮಕ್ಕಳು ಉತ್ತರಬಾಲ್ಯ ಹಂತದಲ್ಲಿ ಏನೇ ಆದರೂ ಆಯಾಸಗೊಳ್ಳದಿರುವುದು ಅವರ ಒಂದು ಪ್ರಮುಖ ಲಕ್ಷಣವಾಗಿದೆ.

## 2.1.3.2. ಬಾಲ್ಯಹಂತದ ಬಗ್ಗೆ ಇರುವ ತಪ್ಪು ಗ್ರಹಿಕೆ ಮತ್ತು ಅದರ ಕೂಲಂಕಷ ವಿಮರ್ಶೆ

**ಅಭ್ಯಾಸ : I**

ಪುಟ್ಟಮಕ್ಕಳು ತಮ್ಮ ಬಾಲ್ಯಹಂತದಿಂದ ವಂಚಿತರಾಗಿರುವುದನ್ನು ಅಥವಾ ಬಾಲ್ಯಹಂತವನ್ನು ಕಳೆದುಕೊಂಡಿರುವುದನ್ನು ನೀವು ಗಮನಿಸಿರುವಿರಿ. ಅಂತಹ ಮಕ್ಕಳ ಎರಡು ಸನ್ನಿವೇಶಗಳನ್ನು ವಿವರಿಸಿ.

ಈಗಾಗಲೇ ನಾವು ಬಾಲ್ಯಹಂತದ ಬಗ್ಗೆ ತಿಳಿದಿರುವ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ವಾಸ್ತವದ ಮಕ್ಕಳ ಬಾಲ್ಯವನ್ನು ಗಮನಿಸಿದರೆ, ತಲ್ಲಣ, ಭಯದ ಅನುಭವವಾಗುತ್ತದೆ. ಬಾಲ್ಯಹಂತದ ವಿಕಾಸಾತ್ಮಕ ಕಾರ್ಯಗಳು, ವರ್ತನೆಗಳು ಮತ್ತು ಲಕ್ಷಣಗಳು ಆದರ್ಶದ ಹೇಳಿಕೆಗಳಷ್ಟೆ ಎನಿಸುತ್ತವೆ. ಅತಿ ಕಡಿಮೆ ಆರ್ಥಿಕ ವರಮಾನ ಹೊಂದಿರುವ ಕುಟುಂಬದ ಮಕ್ಕಳು, ಬೀದಿ–ಮಕ್ಕಳು ಅಥವಾ ಕೊಳಚೆ–ಪ್ರದೇಶದ ಮಕ್ಕಳು ಅಷ್ಟೇ ಏಕೆ, ಮಕ್ಕಳ ಅಪಹರಣದಲ್ಲಿ ಸೊರಗಿದ ಮಕ್ಕಳು, ಬಾಲ–ಕಾರ್ಮಿಕರು, ಮಕ್ಕಳ ವೇಶ್ಯಾವಾಟಿಕೆಯಲ್ಲಿ ಸಿಲುಕಿ ನಲುಗಿರುವ ಮಕ್ಕಳು ಮತ್ತು ದೊಡ್ಡವರಿಂದ ಅಸಭ್ಯ–ವರ್ತನೆಗೆ ಈಡಾದ ಮಕ್ಕಳು ಇವರೆಲ್ಲರೂ ತಮ್ಮ ಬಾಲ್ಯಹಂತವನ್ನು ಕಳೆದುಕೊಂಡವರೇ. ಉದಾಹರಣೆಗೆ, ಒಂದು ಕೂಲಿಕೆಲಸ ಮಾಡುವ ಮನೆಯಲ್ಲಿ 10 ವರ್ಷದ ಹೆಣ್ಣು ಮಗುವೊಂದು, ತನ್ನ ತಮ್ಮ–ತಂಗಿಯರನ್ನು ನೋಡಿಕೊಳ್ಳುತ್ತಾ ಮನೆಗೆಲಸ ಮಾಡುತ್ತಿರುವುದನ್ನು ಸರ್ವೇಸಾಮಾನ್ಯವಾಗಿ ನಾವು ನೋಡಿರುತ್ತೇವೆ. ಇಲ್ಲಿ ತಾಯಿಯೂ ಕೂಡ ಹೊರಗೆ ಬೇರೆ ಕೆಲಸಗಳನ್ನು ಮಾಡುತ್ತಾ ನಾಲ್ಕು ಕಾಸು ಸಂಪಾದಿಸಲು ಹೋಗಿರುತ್ತಾಳೆ. ಇನ್ನು ಈ ಕುಟುಂಬದ ಯಜಮಾನನಾದವನು ಅಳತೆ ಮೀರಿ ಕುಡಿದು ಇಲ್ಲೋ ಬಿದ್ದುಕೊಂಡಿರುತ್ತಾನೆ. ತನ್ನ ಕುಟುಂಬದ ಜವಾಬ್ದಾರಿ ತನ್ನದೇ ಎಂದು ಅರಿಯದ ಹೊಣೆಗೇಡಿ ಅಪ್ಪನಾಗಿರುತ್ತಾನೆ. ಆತ ಹೆಂಡತಿಗೆ ಒಳ್ಳೆಯ ಗಂಡನಾಗಿರುವುದಿಲ್ಲ, ಮಕ್ಕಳಿಗೆ ಒಳ್ಳೆಯ ತಂದೆಯಾಗಿರುವುದಿಲ್ಲ. ಇಂತಹ ಕುಟುಂಬಗಳು ಲಕ್ಷಾಂತರವಿದ್ದು, ಇವರುಗಳ ಜೀವನವು ಬಡತನದ ರೇಖೆಗಿಂತ ಕೆಳಮಟ್ಟದಲ್ಲಿರುತ್ತದೆ. ಹೀಗಿದ್ದಾಗ್ಯೂ ಗಂಡುಮಕ್ಕಳನ್ನೇ ಬಯಸುವ ಕುಟುಂಬಗಳಿಗೇನೂ ಕಡಿಮೆ ಇಲ್ಲ. ಅವನನ್ನು ಅತಿ ಜಾಗರೂಕತೆಯಿಂದ ಬೆಳೆಸಿ, ಹೆಣ್ಣು ಮಗುವನ್ನು ಉದಾಸೀನತೆಯಿಂದ ಬೆಳಸುವರಲ್ಲದೇ ಹೆಣ್ಣು ಮಗು ಹುಟ್ಟುವುದೆಂದು ಮೊದಲೇ ಗೊತ್ತಾದರೆ ಆ ಮಗುವೇ ಬೇಡವೆಂದು ಭ್ರೂಣಹತ್ಯೆಗೆ ಮುಂದಾಗುವ ಸಮಾಜ ಇಂದು ನಮ್ಮ ಕಣ್ಣ ಮುಂದೆಯೇ ಇದೆ. ಹೀಗೆ ಹೆಣ್ಣು ಮಕ್ಕಳು, ಬೇಡದ ಮಕ್ಕಳಾಗಿ ಈ ಪ್ರಪಂಚಕ್ಕೆ ಬರುತ್ತಾರೆ.

**ಬಾಲ್ಯಹಂತದ ಬಗ್ಗೆ ಇರುವ ತಪ್ಪು ಗ್ರಹಿಕೆ ಮತ್ತು ಅದರ ಕೂಲಂಕಷ ವಿಮರ್ಶೆ:**

ಬಾಲ್ಯಹಂತವೆಂಬ ಪರಿಕಲ್ಪನೆ ಬೆಳಕಿಗೆ ಬಂದುದು ಸುಮಾರು 17 ಮತ್ತು 18ನೇ ಶತಮಾನದಲ್ಲಿ. ಇದಕ್ಕೂ ಮೊದಲು ಚಿಕ್ಕ ಮಕ್ಕಳನ್ನು ದೊಡ್ಡವರ ಅಪೂರ್ಣ ರೂಪವೆಂದೇ ತಿಳಿಯಲಾಗುತ್ತಿತ್ತು. ಮಕ್ಕಳು ಮುಗ್ಧರು, ಅವರಿಗೆ ರಕ್ಷಣೆ, ಮಾರ್ಗದರ್ಶನ ಅಗತ್ಯ ಎಂಬುದನ್ನು ಕಂಡುಕೊಂಡದ್ದೇ 1600ರಲ್ಲಿ. ಇಂಗ್ಲೀಷ್ ತತ್ವಜ್ಞಾನಿಯಾದ ಜಾನ್ ಲೋಕೆ ಆಗತಾನೇ ಹುಟ್ಟಿದ ಮಗುವೊಂದು 'ಖಾಲೀ ಸ್ಲೇಟಿನಂತೆ' ಎಂದು ಹೇಳಿದುದನ್ನು ನೆನಪಿಸಿಕೊಳ್ಳಬಹುದು. 1760ರ ಆಸುಪಾಸಿನಲ್ಲಿ ಇಂಗ್ಲೆಂಡ್‌ನಲ್ಲಿ ಕೈಗಾರಿಕೀಕರಣದ ಹವ ಹುಟ್ಟಿಕೊಂಡಿತು. ಅದು 18ನೆಯ ಶತಮಾನದಲ್ಲೂ ಪ್ರಖರವಾಗಿ ಮುಂದುವರೆಯಿತು. ಆ ಸಮಯದಲ್ಲಿ ಬ್ರಿಟನ್ನಿನಲ್ಲಿ ಮಕ್ಕಳನ್ನು ಫ್ಯಾಕ್ಟರಿಗಳಲ್ಲಿ ಮತ್ತು ಗಣಿಗಳಲ್ಲಿನ ಕೆಲಸಕ್ಕೆ ನಿಯಮಿಸಿಕೊಳ್ಳಲಾಗುತ್ತಿತ್ತು. ಅಲ್ಲಿ ಉದ್ದುದ್ದದ ಹೊಗೆಗೊಳವೆಗಳಲ್ಲಿನ ಕಿಟ್ಟವನ್ನು ತೆಗೆದು ಸ್ವಚ್ಛಮಾಡುವ ಕೆಲಸವನ್ನು ಈ ಮಕ್ಕಳು ಮಾಡಬೇಕಾಗಿರುತ್ತಿತ್ತು. ಈ ಕೆಲಸಗಳು ಸಾಕಷ್ಟು ದೀರ್ಘಾವಧಿಯವಾಗಿದ್ದು ಚಿಕ್ಕ ಮಕ್ಕಳಿಗೆ ಅಪಾಯಕಾರಿಯಾಗಿರುತ್ತಿದ್ದವು. ಈ ಶತಮಾನದಲ್ಲಿಯೇ ಬಾಲ್ಯಹಂತ ಮತ್ತು ಮಕ್ಕಳನ್ನು ಕುರಿತಾದ ಅನೇಕ ಅರಿವು ಮೂಡಿಸುವ ಕಾರ್ಯಕ್ರಮಗಳು ಜರುಗಿದುವು. ಅದರಲ್ಲೂ ವಿಶೇಷವಾಗಿ ಬಡವರ ಮತ್ತು ಮಧ್ಯಮವರ್ಗದ ಮಕ್ಕಳ ರಕ್ಷಣೆ ಮತ್ತು ಅವರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳು, ಈ ಕುರಿತ ಅರಿವು ಮೂಡಿಸುವ ಕಾರ್ಯಕ್ರಮಗಳು ಮತ್ತು ಲೇಖನಗಳು ಸಮೂಹ ಮಾಧ್ಯಮಗಳಲ್ಲಿ ಕಾಣಿಸಿಕೊಂಡವು.

ಮಧ್ಯಕಾಲೀನ ಇತಿಹಾಸದ ಫ್ರೆಂಚ್ ಇತಿಹಾಸತಜ್ಞನಾದ 20ನೇ ಶತಮಾನದ ಫಿಲಿಪ್ಪೀ ಆರಿಸ್ 'ಸೆಂಚುರೀಸ್ ಆಫ್ ಚಿಲ್ಡ್ರನ್'(1960) ಎಂಬ ತನ್ನ ಗ್ರಂಥದಲ್ಲಿ ಬಾಲ್ಯಾವಸ್ಥೆಯೆಂಬುದು ಸಾಮಾಜಿಕವಾಗಿ ಸೃಷ್ಟಿಗೊಂಡದ್ದೇ ಹೊರತು ಪ್ರಕೃತಿ ಸಹಜವಾದದ್ದೇನಲ್ಲ ಎಂದು ಅಭಿಪ್ರಾಯಪಡುತ್ತಾನೆ. ಆದ್ದರಿಂದಲೇ ಬಾಲ್ಯಹಂತ ಎಂಬ ಪರಿಕಲ್ಪನೆಯು ಕಾಲಕಾಲಕ್ಕೆ ತಕ್ಕಂತೆ ವಿಕಾಸ ಹೊಂದುತ್ತಾ ಮಾರ್ಪಾಡಾಗುತ್ತಾ ಸಾಗಿದೆ. ಅಲ್ಲದೇ ಸಾಮಾಜಿಕವಾಗಿ ಬದಲಾಗುವ ಜನಜೀವನ ಮತ್ತು ಕಾಲಕ್ಕೆ ತಕ್ಕಂತೆ ಬದಲಾಗುವ ದೊಡ್ಡವರ ನಿರೀಕ್ಷೆಗಳಿಗೆ ತಕ್ಕಂತೆ ಬಾಲ್ಯಹಂತವೆಂಬ ಪರಿಕಲ್ಪನೆಯು ಪ್ರಭಾವಿಸಲ್ಪಡುವುದು. ಕೆಲವರು ತಿಳಿದುಕೊಂಡಿರುವಂತೆ, ಮಕ್ಕಳಿಗೆ ಯಾವ ಚಿಂತೆಯೂ ಇರುವುದಿಲ್ಲ ಮತ್ತು ಅವರು ದುಡಿಮೆ ಮಾಡಬೇಕಿಲ್ಲ, ಏಕೆಂದರೆ ಅವರದ್ದೇ ಆದ ಯಾವ ಜವಾಬ್ದಾರಿಗಳೂ ಇರುವುದಿಲ್ಲ, ಅವರದ್ದು ಏನಿದ್ದರೂ ತಿಂದುಂಡು ಆಡಿ, ಕುಣಿದು ಕುಪ್ಪಳಿಸುವ ಕಾಲ, ಹಾಗಾಗಿ ಬಾಲ್ಯ ಎಲ್ಲರಿಗೂ ಸಂತಸದಾಯಕವಾಗಿಯೇ ಇರುವುದು. ಪ್ರತಿಯೊಬ್ಬರೂ ಜೀವನದಲ್ಲಿ ಬಾಲ್ಯದ ದಿನಗಳನ್ನು ಸುವರ್ಣಯುಗವೆಂದೇ ಭಾವಿಸುವರು. ಆದರೆ, ವಾಸ್ತವವಾಗಿ ಬಾಲ್ಯಹಂತದಲ್ಲಿಯೂ ಸಂತೋಷ, ದುಃಖ, ಆತಂಕ, ಕೌತುಕ ಮತ್ತು ಸಂಕಷ್ಟಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಬಾಲ್ಯಹಂತವೆಂದರೆ, ದೊಡ್ಡವರ ಮಧ್ಯಪ್ರವೇಶವಿಲ್ಲದ, ಪೋಷಕರ ಮೂಗುತೂರಿಸುವಿಕೆಯಿಲ್ಲದ, ಆಟ–ಓಟ–ಪಾಠ, ಕಲಿಯುವಿಕೆ, ಸಾಮಾಜೀಕರಣ, ಅನ್ವೇಷಣೆ ಮತ್ತು ಕುತೂಹಲಗಳಿಂದ ಕೂಡಿದ ಹಂತವಾಗಿ ಭಾವಿಸಬಹುದು. ಹಾಗಿದ್ದರೂ ಮಕ್ಕಳು ಕೆಲವು ಹೊಣೆಗಾರಿಕೆಯನ್ನು ಮತ್ತು ಜವಾಬ್ದಾರಿಯನ್ನೂ ದೊಡ್ಡವರೊಡನೆ ವ್ಯವಹರಿಸುವಾಗ ಕಲಿಯುವರು.

ಮೊದಲ ಬ್ಲಾಕ್‌ನಲ್ಲಿನ ಬಾಲ್ಯವನ್ನು ಕುರಿತ ವಿವರಣೆಗಳು ಮತ್ತು ಪಠ್ಯಾಂಶಗಳು ಬಾಲ್ಯ ಮತ್ತು ಬಾಲ್ಯಹಂತದ ಲಕ್ಷಣಗಳನ್ನು ಒಂದು ಆದರ್ಶೀಕೃತ ಸನ್ನಿವೇಶದಲ್ಲಿ ಹೇಳುತ್ತವೆ. ಆದರೆ, ಪ್ರಪಂಚದಲ್ಲಿ ಅದೇ ವಯೋಮಾನದ ಎಷ್ಟೋ ಮಕ್ಕಳಿದ್ದರೂ ಅವರಿಗೆ ಇಂತಹ ಬಾಲ್ಯವಾಗಲೀ ಅಥವಾ ಬಾಲ್ಯಹಂತದ ಅನುಭವಗಳಾಗಲೀ ಆಗಿರುವುದಿಲ್ಲ ಎಂಬುದು ಅಷ್ಟೇ ನಿಜ. ಜೀನ್‌ಪಿಯಾಷೆಯು ಹೇಳಿದ ಜ್ಞಾನವಲಯದ ವಿಕಾಸ, ಕೋಹ್ಲ್‌ಬರ್ಗ್ ಹೇಳಿದ ನೈತಿಕ ವಿಕಾಸ, ಹಾಗೆಯೇ ರಾಬರ್ಟ್‌ಹ್ಯಾವಿಗರ್ಸ್ಟ್ ಮತ್ತು ಹರ್ಲಾಕ್‌ರವರು ವಿವರಿಸಿರುವ ವಿಕಾಸಾತ್ಮಕ ಕಾರ್ಯಗಳಾಗಲೀ ಸಾರ್ವತ್ರಿಕವಾಗಿ ಸಮ್ಮತವಾಗಿದ್ದರೂ ಕೆಲವು ನಿರ್ದಿಷ್ಟ ಮಕ್ಕಳ ವಿಚಾರದಲ್ಲಿ ಈ ಎಲ್ಲಾ ಸಿದ್ಧಾಂತಗಳು ಹಿಂದೆ ಸರಿಯುವುವು. ಉದಾಹರಣೆಗೆ, 'ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳು'. ಇದು ಇತ್ತೀಚಿನ ದಿನಗಳಲ್ಲಿ ಪ್ರಚಲಿತವಾಗಿರುವ ಪರಿಕಲ್ಪನೆ. ಇದರ ಅಡಿಯಲ್ಲಿ ನಿರ್ಗತಿಕ ಮಕ್ಕಳು, ತಿರಸ್ಕರಿಸಲ್ಪಟ್ಟ ಮಕ್ಕಳು,

ಕೊಳಚೆ ನಿವಾಸಿಗಳು ಮತ್ತು ಬೀದಿ ಮಕ್ಕಳು, ಬಾಲ ಕಾರ್ಮಿಕರು, ಕಾನೂನುಬಾಹಿರ ಕಾರ್ಯಗಳಿಗಾಗಿ ಅಪಹರಿಸಲ್ಪಟ್ಟ ಮಕ್ಕಳು, ಮಕ್ಕಳ–ವೇಶ್ಯಾವಾಟಿಕೆ, ಬಾಲಾಪರಾಧಿಗಳು, ಮಾನಸಿಕ ಅಥವಾ ದೈಹಿಕವಾಗಿ ಅಸ್ವಸ್ಥರು, ಪ್ರಾಕೃತಿಕ ವಿಕೋಪಕ್ಕೆ ಸಿಲುಕಿದ, ಯುದ್ಧದ ಬಲಿಪಶುಗಳಾದ ಮತ್ತು ದ್ವಂದಗಳಿಂದ ಕಂಗಾಲಾದ ಮಕ್ಕಳು, ನಿರಾಶ್ರಿತರೆಂದು ಘೋಷಿಸಲ್ಪಟ್ಟವರು, ಹೆಚ್.ಐ.ವಿ ಅಥವಾ ಏಡ್ಸ್ ರೋಗಪೀಡಿತ ಮಕ್ಕಳು, ವಿಕಲಾಂಗ ಮಕ್ಕಳು, ಮಾರಣಾಂತಿಕ ರೋಗಗಳಿಂದ ಅಥವಾ ವಾಸಿಮಾಡಲಾಗದ ರೋಗಗಳಿಂದ ನರಳುತ್ತಿರುವ ಮಕ್ಕಳು ಇವರೆಲ್ಲರೂ ಒಳಗೊಳ್ಳುತ್ತಾರೆ. ಈ ಮಕ್ಕಳ ವಿಚಾರವನ್ನು ಕುರಿತಂತೆ ಬ್ಲಾಕ್–2, ಘಟಕ–4ರಲ್ಲಿ ಇನ್ನೂ ವಿವರವಾಗಿ ನೀವು ತಿಳಿದುಕೊಳ್ಳುವಿರಿ.

ಮೇಲೆ ಹೇಳಿದ ರೀತಿಯ ಮಕ್ಕಳ ಬಾಲ್ಯವು ಸಾಮಾನ್ಯ ಮಕ್ಕಳ ಬಾಲ್ಯದಂತಿರುವುದಿಲ್ಲವೆಂದು ಹೇಳಲೇಬೇಕಾಗಿಲ್ಲ ಅಲ್ಲವೇ? ಇವರ ಜ್ಞಾನವಿಕಾಸ, ಭಾವ ವಿಕಾಸ, ನೈತಿಕ ವಿಕಾಸ, ಸಾಮಾಜಿಕ ವಿಕಾಸ– ಹೀಗೆ ಯಾವುದೇ ವಿಕಾಸಾತ್ಮಕ ಪ್ರಕ್ರಿಯೆಗಳು ಸಾಮಾನ್ಯ ರೀತಿಯಲ್ಲಿ ಆಗಿರಲು ಸಾಧ್ಯವೇ ಇಲ್ಲ. ಬಡತನ, ಅನಕ್ಷರತೆ, ಕುಡಿತ ಮತ್ತು ಮಾದಕ ವಸ್ತುಗಳ ವ್ಯಸನಿಗಳಾಗಿರುವುದು, ಬಾಲಕಾರ್ಮಿಕರಾಗುವುದು, ಮಕ್ಕಳನ್ನು ಅಪಹರಿಸಿ ಅನೈತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುವುದು ಮತ್ತು ಮಕ್ಕಳನ್ನು ಅಪಹರಿಸಿ ಅವರನ್ನು ಭಿಕ್ಷೆಬೇಡಲು ಕಳಿಸುವುದು–ಇವೆಲ್ಲಾ ಈ ದಿನಗಳ ಹೊತ್ತಿಉರಿಯುತ್ತಿರುವ ಸಮಸ್ಯೆಗಳು. ಭಾರತವೊಂದು ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರವಾಗಿರುವುದರಿಂದ ಇಲ್ಲಿ ದುಡಿಯುವ ಕೈಗಳಿಗೆ ಹೆಚ್ಚಿನ ಬೇಡಿಕೆಯಿರುವುದು. ಹಾಗಾಗಿ, ಅತಿ ವೃದ್ಧರಾಗಿರುವವರು ಮತ್ತು ಅತಿ ಚಿಕ್ಕಮಕ್ಕಳು ಈ ಬೇಡಿಕೆಯಿಂದ ಹೊರಗುಳಿಯುವರು, ಮತ್ತು ಸರಿಯಾಗಿ ಹೊಂದಿಕೆಯಾಗುವ ಮಕ್ಕಳೆಂದರೆ, ನಮ್ಮ ಹದಿಹರೆಯದ ಮಕ್ಕಳೇ. ಬಾಲ ಕಾರ್ಮಿಕರ ಒಂದು ಸಮೀಕ್ಷೆಯ ಪ್ರಕಾರ ಬಾಲ್ಯಹಂತದ ಮತ್ತು ಹದಿಹರೆಯದ ಹಂತದ ಮಕ್ಕಳೇ ಇಲ್ಲಿ ದುಡಿಯುವ ಮಕ್ಕಳಾಗಿರುತ್ತಾರೆ. ಎಷ್ಟೋ ವೇಳೆ ತಮ್ಮ ಕುಟುಂಬವನ್ನು ಸಲಹುವ ಜವಾಬ್ದಾರಿಯು ಈ ಮಕ್ಕಳ ಮೇಲೆಯೇ ಇರುತ್ತದೆ. ಹೀಗಾಗಿ ಬಾಲ್ಯದ ಸುಂದರ ಅನುಭವಗಳು ಅವರಿಗೆ ಕನಸಿನ ಮಾತೇ ಸರಿ.

ಈಗ ಇನ್ನೊಂದು ಮಜಲಿಗೆ ನಮ್ಮ ಮನಸ್ಸನ್ನು ತೆರೆಯೋಣ. ವಿಜ್ಞಾನ ಮತ್ತು ತಂತ್ರಜ್ಞಾನವು ನಮ್ಮನ್ನು ಆಳುತ್ತಿರುವುದು ನಿಮಗೆಲ್ಲಾ ತಿಳಿದೇ ಇದೆ. ಮೊಬೈಲ್ ಫೋನ್‌ಗಳು, ಟಿ.ವಿ.ಯಲ್ಲಿನ ಕಾರ್ಯಕ್ರಮಗಳು, ಕಂಪ್ಯೂಟರ್ ಮತ್ತು ಇಂಟರ್‌ನೆಟ್, ಹಾಗೂ ಹಲವಾರು ವೀಡಿಯೋ ಗೇಮ್‌ಗಳನ್ನು ಒದಗಿಸುತ್ತಿರುವ ಆಧುನಿಕ ವಿದ್ಯುನ್ಮಾನ ಯಂತ್ರಗಳು ಇಂದಿನ ಮಕ್ಕಳನ್ನು ಹೊರ ಪ್ರಪಂಚದ ಗೊಡವೆಗೇ ಹೋಗದಂತೆ ತಡೆಹಿಡಿಯುತ್ತಿವೆ. ದಿನದಿಂದ ದಿನಕ್ಕೆ ಈ ಪ್ರವೃತ್ತಿಯು ಹೆಚ್ಚಾಗುತ್ತಿರುವುದು ಕಳವಳಕಾರಿಯಾದ ಅಂಶವೇ ಸರಿ. ಹಾಗೇ ಇಂದಿನ ದಿನಗಳು ಮಾಹಿತಿಯಿಂದ ತುಂಬಿ ಹೋಗಿವೆ. ಎಲ್ಲಿ ಹೋದರೂ ಮಾಹಿತಿಯೆಂಬ ರಾಕ್ಷಸನ ಧಾಳಿಯನ್ನು ನೋಡಬಹುದಾಗಿದೆ. ಒಂದು ಸಮೀಕ್ಷೆಯ ಪ್ರಕಾರ ಸುಮಾರು 87%ರಷ್ಟು ತಂದೆತಾಯಿಯರು ತಮ್ಮ ಮಕ್ಕಳು ಹೆಚ್ಚು ಹೆಚ್ಚು ಮಾಹಿಯನ್ನು ಸಂಗ್ರಹಿಸಿದರೆ, ಹೆಚ್ಚು ಯಶಸ್ವೀ ಮಕ್ಕಳಾಗಿ, ಬಹಳ ತ್ವರಿತವಾಗಿ ವಿಕಾಸ ಹೊಂದುತ್ತಾರೆ ಎಂದು ತಿಳಿದುಕೊಂಡಿದ್ದಾರೆ. ಇಂತಹ ತಪ್ಪುತಪ್ಪಾದ ಮಹತ್ವಾಕಾಂಕ್ಷೆಯು ಮಕ್ಕಳ ಸಹಜವಾದ ವಿಕಾಸಪ್ರಕ್ರಿಯೆಯನ್ನು ವಿಧ್ವಂಸಗೊಳಿಸುವುದೇ ಅಲ್ಲದೇ ಮಕ್ಕಳು ನಿಜವಾಗಿ ವಿಕಾಸಹೊಂದುವ ಮೊದಲೇ ಕೆಲವು ವಿಚಾರಗಳನ್ನು ತಿಳಿದುಕೊಳ್ಳುವ, ಅವರ ವ್ಯಕ್ತಿತ್ವಕ್ಕೆ ಮಾರಕವಾಗುವ ಅಸಮತೋಲನವನ್ನು ಉಂಟುಮಾಡುವ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಕೆಲವು ತಂದೆತಾಯಿಯರಂತೆ ತಮ್ಮ ಮಕ್ಕಳನ್ನು ಇನ್ನೊಬ್ಬರ ಮಕ್ಕಳೊಂದಿಗೆ ಹೋಲಿಸಿ ನೋಡುವುದು ಮತ್ತು ಅವರಂತೆ ಅಥವಾ ಅವರಿಗಿಂತ ಇನ್ನೂ ಚೆನ್ನಾಗಿ ಓದಬೇಕು, ಒಳ್ಳೆಯ ಅಂಕಗಳನ್ನು ತೆಗೆದುಕೊಳ್ಳಬೇಕೆಂಬ ಒತ್ತಡವನ್ನು ಹೇರುವುದು ಅಕ್ಷಮ್ಯ ಅಪರಾಧವೇ ಸರಿ.

ಈ ಹಿಂದೆ ಹೇಳಿರುವಂತೆ ಮಕ್ಕಳ ಸಿದ್ಧತಾ ಹಂತವನ್ನು ಗಮನಿಸದೆ, ಅವರನ್ನು ವಿಕಾಸ ಪ್ರಕ್ರಿಯೆಯಲ್ಲಿ ಬಲವಂತದಿಂದ ತೊಡಗಿಸಿದಾಗ ಆಗುವ ಅಪಾಯ ಘೋರವಾಗಿರುತ್ತದೆ. ಮಾಹಿತಿತಂತ್ರಜ್ಞಾನದ ಈ ಯುಗದಲ್ಲಿ ಪ್ರತಿಯೊಂದೂ ಮಕ್ಕಳ ಬೆರಳ ತುದಿಯಲ್ಲಿನ ಒಂದು 'ಕ್ಲಿಕ್'ನಲ್ಲಿಯೇ ಇದೆ, ಅಷ್ಟೇ ಅಲ್ಲ, ಆ

ಮಾಹಿತಿಯು ಯಾವುದೇ 'ಸೆನ್ಸಾರ್' ಪ್ರಕ್ರಿಯೆಗೆ ಒಳಪಡದೇ ಅವರನ್ನು ತಲುಪುವುದು ಮುಂದೆಂದೂ ಸರಿಪಡಿಸಲಾಗದ ದೋಷವಾಗುವುದು. ಮಕ್ಕಳ ಮುಗ್ಧತೆಯನ್ನೇ ಬಲಿತೆಗೆದುಕೊಳ್ಳುವ ಇಂತಹ ಕೃತ್ಯಗಳು ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಅನೇಕ ಸಮಸ್ಯೆಗಳನ್ನು ಹೊತ್ತು ತರುತ್ತವೆ.

ಮಕ್ಕಳು ಹುಟ್ಟುವ ಪರಿಸರವೂ ಕೂಡ ಅಷ್ಟೇ ಮುಖ್ಯವಾದುದು. ಏಕೆಂದರೆ, ಮಗುವು ಯಾವ ಪರಿಸರದಲ್ಲಿ ಹುಟ್ಟುವುದೋ, ಅಲ್ಲಿನ ಪ್ರಭಾವಕ್ಕೆ ತಕ್ಕಂತೆ ಬೆಳೆಯುವುದು, ಹಾಗೆಯೇ ಭ್ರೂಣಾವಸ್ಥೆಯಲ್ಲಿ ಮತ್ತು ಪ್ರಸವೋತ್ತರ ಸಮಯದಲ್ಲಿ ಕುಟುಂಬದ ಪಾತ್ರ ಮಹತ್ತರವಾಗಿರುತ್ತದೆ. ಮಗುವಿನ ಸ್ವಾಸ್ಥ್ಯ ಮತ್ತು ವಿಕಾಸಕ್ಕೆ ಈ ಪರಿಸರಗಳು ಸೌಹಾರ್ದಯುತವಾಗಿರಬೇಕು. ಬದಲಿಗೆ, ಬಡತನ, ತಾತ್ಸಾರ, ನಿಂದನೆ, ಕುಡಿತ, ಮಾದಕ ವ್ಯಸನ, ಆಶ್ರಯವಿಲ್ಲದಿರುವುದು ಮತ್ತು ಕೌಟುಂಬಿಕ ದೌರ್ಜನ್ಯ – ಇವುಗಳು ಮಗುವಿನಲ್ಲಿನ ಸುಪ್ತ ಸಾಮರ್ಥ್ಯಗಳನ್ನು ಪೊರೆದು, ಪೋಷಿಸಿ ಬೆಳಸಲಾರವು. ಇಂತಹ ಋಣಾತ್ಮಕವಾದ ಅಂಶಗಳು ಮಗುವಿನ ಆರೋಗ್ಯ, ಸ್ವಾಸ್ಥ್ಯ, ಮತ್ತು ಅದರ ವ್ಯಕ್ತಿತ್ವದ ಸಮತೋಲನವನ್ನು ತೀವ್ರವಾಗಿ ಘಾಸಿ ಮಾಡುತ್ತವೆ. ಅನ್ಯಾಯ ಮತ್ತು ಅಸಮಾನತೆಗಳು ಚಿಕ್ಕ ವಯಸ್ಸಿನಲ್ಲಿ ಅದರಲ್ಲೂ ಮುಖ್ಯವಾಗಿ ಮೊದಲ ಎಂಟು ವರ್ಷಗಳಲ್ಲಿ ಪೂರ್ವಬಾಲ್ಯಹಂತದ ವಿಕಾಸವನ್ನು ಹಾಳುಗೆಡಹುತ್ತವೆ. ಪ್ರಮುಖವಾಗಿ ಈ ವಯೋಮಾನದಲ್ಲಿ ಮಕ್ಕಳು ಹಲವಾರು ಪ್ರಮುಖ ಕೌಶಲಗಳನ್ನು ಮತ್ತು ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವರು. ಆದರೆ ಅದಕ್ಕೆ ಅಗತ್ಯವಾದ ವಾತಾವರಣವಿರಬೇಕಷ್ಟೇ. ಇದು ಸೂಕ್ಷ್ಮ ಸಾಮಾಜಿಕ ವಿಚಾರ.

**ಬಾಲ್ಯಹಂತದ ವಿಕಾಸ ಪ್ರಕ್ರಿಯೆಯನ್ನು ಸಂಸ್ಕೃತಿಯು ಹೇಗೆ ಪ್ರಭಾವಿಸುವುದು ಎಂಬುದನ್ನು ನೋಡೋಣ:**

ಮಗುವಿನ ವಿಕಾಸದಲ್ಲಿ ಸಂಸ್ಕೃತಿಯ ಪಾತ್ರ ಬಹಳ ದೊಡ್ಡದೆಂದೇ ಹೇಳಬೇಕು. ಇದನ್ನು ನಾವು ಅರ್ಥಮಾಡಿಕೊಳ್ಳಲು ಕೆಲವು ದೇಶಗಳ ಸಂಸ್ಕೃತಿಯನ್ನು ಮತ್ತು ಮಕ್ಕಳ ಮೇಲೆ ಅದರ ಪ್ರಭಾವವನ್ನು ಗಮನಿಸೋಣ. ಆಸ್ಟ್ರೇಲಿಯನ್ನರ ಸಾಂಸ್ಕೃತಿಕವಾದ ಆದರೆ ತಪ್ಪುಗ್ರಹಿಕೆ ಏನೆಂದರೆ, ಮಕ್ಕಳನ್ನು 'ನಿಷ್ಕ್ರಿಯ ವೀಕ್ಷಕ'ರೆಂದು ಪರಿಗಣಿಸಿರುವುದು ಮತ್ತು ಅವರ ಜೀವನವು ಬಹು ಸರಳವಾಗಿ ಯಾವುದೇ ರೀತಿಯ ಗೊಂದಲ, ಕೋಲಾಹಲಗಳಿಲ್ಲದೇ ಇರುವುದೆಂದು ಭಾವಿಸಿರುವುದು. ಕೆಲವು ಶಿಕ್ಷಕರು ಮತ್ತು ಪೋಷಕರು, ಮಕ್ಕಳೆಂದರೆ, ಒಂದು ದೊಡ್ಡ ಖಾಲಿ ಇರುವ ಪೀಪಾಯಿಯಂತೆ, ಅದರಲ್ಲಿ ನಾವು ತುಂಬಿಸಿದ ವಿಚಾರಗಳಂತೆ ಅವರು ವಿಕಾಸಹೊಂದುವರು ಎಂದು ಪ್ರತಿಪಾದಿಸುವರು. ಇಂತಹ ತರ್ಕಹೀನವಾದ ತಪ್ಪುಗ್ರಹಿಕೆಗಳು ನೇರವಾಗಿ ಅಥವಾ ಪರೋಕ್ಷವಾಗಿ ಪೂರ್ವಬಾಲ್ಯಹಂತವು ಅಸಮತೋಲನವಾಗುವುದಕ್ಕೆ ಮೂಲ ಕಾರಣವಾಗುತ್ತವೆ.

ಕೆಲವು ಮುಂದುವರಿದ ರಾಷ್ಟ್ರಗಳಲ್ಲಿ ಪೂರ್ವಬಾಲ್ಯ ಹಂತದ ಶಿಕ್ಷಣವನ್ನು ಕುರಿತು ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ನಡೆಸುತ್ತಾರೆ, ಇದು 2ರಿಂದ 5ವರ್ಷದ ಮಕ್ಕಳಿಗೆ ಎಂದು ನಿಗದಿತವಾಗಿರುತ್ತದೆ. ಭಾರತದಲ್ಲಿ ಮಗುವು ಶಾಲೆಗೆ ಹೋಗಿ ಒಂದನೇ ತರಗತಿಯಲ್ಲಿ ಗುರುತಿಸಿಕೊಳ್ಳಲು 6ವರ್ಷವಾಗಿರಬೇಕು. ಪೂರ್ವಬಾಲ್ಯ ಹಂತದ ಶಿಕ್ಷಣವನ್ನು ಶಿಶುವಿಹಾರಗಳು, ನರ್ಸರಿಗಳು, ಮಾಂಟಿಸೋರಿ ಶಿಕ್ಷಣ ಮತ್ತು ಅಂಗನವಾಡಿ ಶಿಕ್ಷಣ ಇವುಗಳ ರೂಪದಲ್ಲಿ ಕೊಡಲಾಗುತ್ತದೆ. ಪೂರ್ವಬಾಲ್ಯಹಂತವು ದೈಹಿಕ, ಬೌದ್ಧಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಮತ್ತು ನೈತಿಕ ಈ ಎಲ್ಲಾ ವಿಕಾಸಗಳು ನಡೆಯುವ ಘಟ್ಟವಾಗಿರುತ್ತದೆ.

ಎಳವೆಯಲ್ಲಿ ಮಕ್ಕಳು ಆಟದ ಮೂಲಕ ತಮ್ಮ ಸುತ್ತಮುತ್ತಲಿನ ಪರಿಸರದೊಡನೆ ಒಡನಾಡುವರು. ಆಟಗಳ ಮೂಲಕ ಮಕ್ಕಳು ಬಹಳಷ್ಟನ್ನು ಕಲಿಯುವರು, ಅಲ್ಲಿ ಅವರು ದೊಡ್ಡವರಂತೆ ನಟಿಸುವ ಆಟವನ್ನೂ ಆಡುವರು, ಹೀಗೆ ತಮ್ಮಲ್ಲಿ ಅಡಗಿದ್ದ ಹಲವಾರು ಭೀತಿ, ಹೆದರಿಕೆಗಳನ್ನು ದಾಟಿ ಮುಂದೆ ಬರುವರು. ಯಾರದೇ ಮೇಲ್ವಿಚಾರಣೆಯಿಲ್ಲದೇ ಆಡುವ ಆಟಗಳಲ್ಲಿ ಮಕ್ಕಳು ಒಂದು ಗುಂಪಿನೊಡನೆ ಹೇಗೆ ವರ್ತಿಸಬೇಕು, ಹೇಗೆ ಸಹಕರಿಸಬೇಕು, ಸಮಸ್ಯೆ ಉಂಟಾದರೆ ಅದನ್ನು ಹೇಗೆ ಪರಿಹರಿಸಿಕೊಳ್ಳಬೇಕು ಇತ್ಯಾದಿ ಕೌಶಲಗಳನ್ನು ಗುಣಾತ್ಮಕವಾಗಿ ಕಲಿಯುವರು. ಆಟಗಳು ಮಕ್ಕಳ ವಿಕಸನಕ್ಕೆ ಬಹು ಮುಖ್ಯವೆಂದು ಪರಿಗಣಿಸಿದರೂ

ಅದನ್ನು ಒದಗಿಸುವ ಪರಿಸರದ ಮೇಲೆ ಎಲ್ಲವೂ ಅವಲಂಬಿತವಾಗಿದೆ. ಬಡಮಕ್ಕಳಿಗೆ ಸರಿಯಾದ ಪ್ರೋತ್ಸಾಹ, ಬೆಂಬಲ ಸಿಗುವುದು ಕಡಿಮೆಯೇ. ತಂದೆತಾಯಿಯರೂ ಕೂಡ ಆಡುವ ಬದಲು ದುಡಿಯಲು ಹೋಗು ಎನ್ನುವವರೇ ಆಗಿದ್ದು ಮಕ್ಕಳ ಮೇಲೆ ಹೊರೆ ಹೊರೆಸುತ್ತಾರೆ. ಇದಕ್ಕೆ ಕಾರಣ ಬಡತನ. ಅದೇ ರೀತಿ ಆರ್ಥಿಕವಾಗಿ ಹಿಂದುಳಿದ ಕುಟುಂಬದ ಮಕ್ಕಳಿಗೆ ಒಳ್ಳೆಯ ಪುಸ್ತಕಗಳಾಗಲೀ, ಕಂಪ್ಯೂಟರ್ ಇತ್ಯಾದಿ ಹೊರ ಜಗತ್ತಿಗೆ ತೆರೆದುಕೊಳ್ಳುವ ಸಾಮಗ್ರಿಗಳಾಗಲೀ ಸಿಗುವುದಿಲ್ಲ.

ಮೇಲೆ ವಿವರಿಸಿದ ಹಲವಾರು ಅಂಶಗಳು ಮಕ್ಕಳ ಬೆಳವಣಿಗೆಗೆ ಗಂಡಾಂತರಕಾರಿಯಾಗಿವೆ. ಇದನ್ನು ತಡೆಯಲು ಸರ್ಕಾರ, ಸರ್ಕಾರೀ ನಿಯಮಾವಳಿಗಳು, ಕೆಲವು ಸ್ವಯಂ–ಸೇವಾ ಸಂಘಗಳು ಶಕ್ತಿಮೀರಿ ತಮ್ಮ ಪ್ರಯತ್ನವನ್ನು ಮಾಡುತ್ತಿವೆ. ಉದಾಹರಣೆಗೆ, ಮಕ್ಕಳ ಸಂರಕ್ಷಣೆ, ಹಿತರಕ್ಷಣಾ ವೇದಿಕ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇತ್ಯಾದಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2**

I.ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಬಾಲ್ಯಹಂತವೆಂಬ ಪರಿಕಲ್ಪನೆಯು__________
   - ಎ. ಒಂದೇ ರೀತಿ ಶಾಶ್ವತವಾಗಿರುವುದು
   - ಬಿ. ಪರಿವರ್ತನೆಗೆ ಒಳಪಡುವುದು
   - ಸಿ. ಸಮಾಜಕ್ಕೆ ತಕ್ಕಂತೆ ಬದಲಾಗುವುದು
   - ಡಿ. ಸಂಸ್ಕೃತಿಗೆ ತಕ್ಕಂತೆ ಬದಲಾಗುವುದು
2. 18ನೇ ಶತಮಾನದಲ್ಲಿ ಬ್ರಿಟಿಷ್ ಮಕ್ಕಳನ್ನು__________
   - ಎ. ಶಾಲೆಗೆ ಕಳುಹಿಸಲಾಗುತ್ತಿತ್ತು
   - ಬಿ. ಶಾಲೆಗೆ ಕಳುಹಿಸುತ್ತಿರಲಿಲ್ಲ
   - ಸಿ. ಕಾರ್ಖಾನೆಗಳಲ್ಲಿ ಮತ್ತು ಗಣಿಗಳಲ್ಲಿ ಚಿಮಣಿಗಳನ್ನು ಸ್ವಚ್ಛಮಾಡುವ ಕೆಲಸಕ್ಕೆ ಕಳುಹಿಸಲಾಗುತ್ತಿತ್ತು
   - ಡಿ. ಬೇಕಾದಷ್ಟು ವಿರಾಮದ ವೇಳೆಯಲ್ಲಿರಿಸಲಾಗುತ್ತಿತ್ತು
3. ಬಾಲ್ಯಹಂತದ ಪರ್ಯಾಯವನ್ನು ಕಾಣುವುದು__________
   - ಎ. ಕಷ್ಟಕರ ಪರಿಸರದಲ್ಲಿನ ಮಕ್ಕಳಲ್ಲಿ
   - ಬಿ. ಹದಹರೆಯದವರಲ್ಲಿ
   - ಸಿ. ಉನ್ನತ ಸಮಾಜೋ–ಆರ್ಥಿಕ ಸ್ಥಿತಿಯಲ್ಲಿರುವ ಮಕ್ಕಳಲ್ಲಿ
   - ಡಿ. ಗ್ರಾಮೀಣ ಮಕ್ಕಳಲ್ಲಿ

II. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿ ಎನಿಸಿದುದಕ್ಕೆ '✓' ಚಿಹ್ನೆಯ ಮತ್ತು ತಪ್ಪು ಎನಿಸಿದುದಕ್ಕೆ 'X' ಚಿಹ್ನೆಯ ಮೂಲಕ ಸೂಚಿಸಿ:

- ಎ. ಮಾಧ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನಗಳು ಮಕ್ಕಳನ್ನು ಹೆಚ್ಚು ಹೆಚ್ಚು ಸಾಮಾಜೀಕರಣಕ್ಕೆ ಒಳಪಡಿಸಿವೆ.
- ಬಿ. ಬಡತನ, ನಿರಾಶ್ರಯ, ಮತ್ತು ಕೌಟುಂಬಿಕ ದೌರ್ಜನ್ಯಗಳು ಮಗುವಿನ ಗರಿಷ್ಠ ವಿಕಾಸಕ್ಕೆ ತಡೆಯೊಡ್ಡುತ್ತವೆ.
- ಸಿ. ಮಕ್ಕಳೆಂದರೆ ಒಂದು ಖಾಲೀ ಪಾತ್ರೆಯಂತೆ ಮತ್ತು ದೊಡ್ಡವರು ಅದರಲ್ಲಿ ವಿಚಾರಗಳನ್ನು ಜ್ಞಾನವನ್ನು ತುಂಬುವರು ಎಂಬ ಚಿಂತನೆ ಸರಿಯಾದುದು.

ಡಿ. ಪೂರ್ವಬಾಲ್ಯಹಂತದಲ್ಲಿ ಬೆಳವಣಿಗೆಯ ಗತಿಯು ತೀವ್ರವಾಗಿರುತ್ತದೆ.

ಇ. ಮಕ್ಕಳನ್ನು ಆಟ ಆಡಲು ಬಿಡುವುದು ಒಂದು ನಿರರ್ಥಕವಾದ ಕೆಲಸ.

ಎಫ್. ಕಡಿಮೆ ಆರ್ಥಿಕ ವರಮಾನ ಹೊಂದಿರುವ ಕುಟುಂಬದ ಮಕ್ಕಳಿಗೆ ಪುಸ್ತಕಗಳು ಮತ್ತು ಕಂಪ್ಯೂಟರ್‌ಗಳು ಬಳಸಲು ಸಿಗುವುದಿಲ್ಲ.

## 2.1.4. ಸಾರಾಂಶಿಸೋಣ

- ಎಲ್ಲರ ಜೀವನದಲ್ಲೂ ಬಾಲ್ಯವೊಂದು ಪ್ರಮುಖವಾದ ಹಂತ. ಸುಮಾರು 3ನೇ ವರ್ಷದಿಂದ 12ವರ್ಷದ ವಯೋಮಾನವನ್ನು ಬಾಲ್ಯಹಂತವೆಂದು ಕರೆಯಲಾಗಿದೆ. ಇದರಲ್ಲಿ 3ರಿಂದ 6 ವರ್ಷಗಳವರೆಗೆ ಪೂರ್ವಬಾಲ್ಯವೆಂದು ಮತ್ತು 6ರಿಂದ 12ವರ್ಷಗಳವರೆಗೆ ಉತ್ತರಬಾಲ್ಯವೆಂದು ವಿಭಜಿಸಲಾಗಿದೆ.
- ಪೂರ್ವಬಾಲ್ಯ ಹಂತದಲ್ಲಿ ಮಕ್ಕಳು ತೀವ್ರವಾಗಿ ಬೆಳೆಯುತ್ತಾರೆ.
- ಉತ್ತರ ಬಾಲ್ಯಹಂತದಲ್ಲಿ ಸಾಮಾಜಿಕ ಸೇವೆಗಳನ್ನು, ಸ್ವಯಂ–ಸೇವೆಗಳನ್ನು ಮಾಡಬಲ್ಲವರಾಗಿದ್ದು, ಆಟ, ಪಂದ್ಯ ಮತ್ತು ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ..
- ಉತ್ತರ ಬಾಲ್ಯವನ್ನು "ತಂಡಯುಗ"ವೆಂದು ಕರೆಯಲಾಗಿದೆ. ಅವರಲ್ಲಿ ಅದಮ್ಯವಾದ ಕುತೂಹಲ ಮತ್ತು ಅನ್ವೇಷಣಾ ಬುದ್ಧಿಯಿರುತ್ತದೆ.
- ಸೈದ್ಧಾಂತಿಕವಾಗಿ ಕಂಡುಬರುವ ಈ ವಿಚಾರಗಳು ಎಲ್ಲ ಮಕ್ಕಳ ಅದರಲ್ಲೂ ಕಷ್ಟಕರ ಪರಿಸ್ಥಿತಿಯಲ್ಲಿರುವ ಮಕ್ಕಳ ವಾಸ್ತವತೆಗೆ ಹೊಂದಿಕೊಳ್ಳುವುದಿಲ್ಲ

## 2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1.ಎ 2. ಬಿ 3.ಸಿ 4.ಡಿ

5. ಎ– √, 6. ಬಿ– X, 7. ಸಿ–X, 8. ಡಿ– √, ಇ– √, ಎಫ್– √

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

I : 1. ಬಿ 2. ಸಿ 3. ಎ

II : ಎ– X, ಬಿ– √, ಸಿ– X, ಡಿ– √, ಇ– X, ಎಫ್–√

## 2.1.6. ಘಟಕಾಂತ್ಯ ಅಭ್ಯಾಸಗಳು

1. ಬಾಲ್ಯಹಂತದ ಲಕ್ಷಣಗಳನ್ನು ವಿವರಿಸಿ.
2. ಬಾಲ್ಯಹಂತದ ಬಗ್ಗೆ ಇರುವ ತಪ್ಪುಗ್ರಹಿಕೆಗಳಾವುವು? ಅವುಗಳನ್ನು ವಿಮರ್ಶಿಸಿ. ನಿಮ್ಮ ಉತ್ತರವನ್ನು ನಿದರ್ಶಿಸಿ.

## 1.1.7. ಪರಾಮರ್ಶನ ಸೂಚಿ


1. https://www.sage publications.com 2009 – 10.1177/090756819011398-
2. https://study.com / academy/lesson/how-individual -difference-impact-early childhood development
3. https://www.samarmagazine.org/ archive/article.id-190-kakkar, sudhi (1978) – The inner world- A psychoanalytic study of children
4. Elizabeth B.Hurlock Child Development Sixth edition, McGraw Hill Education (India) private limited
5. Laura. E.Berk Childhood Development Ninth edition Pearson Education Inc.(2013, 1017)
6. Chauhan S.S. Advanced Educational Psychology Vikas Publishing House Pvt.Ltd. (2010)
7. Dandapani.S. Advanced Educational Psychology (2005) Anmol Publications Delhi
8. Nataraj V. Vikasa manovignana (2010) Srinivas Prakashana Mysore
9. Dr.Suneetha.CN Understanding the learner and the learning process Shruthiloka Prakashana 2011.
10. Kuppuswamy B. Advanced Educational Psychology Sterling Publishers Private Limited (2005)


*********************

# ಬ್ಲಾಕ್ 2 : ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ
# ಘಟಕ 2 : ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿ ಬಾಲ್ಯಹಂತ

## ಘಟಕದ ರಚನೆ


2.2.1. ಕಲಿಕಾ ಉದ್ದೇಶಗಳು

2.2.2. ಪೀಠಿಕೆ

2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.2.3.1. ಜೀವನವನ್ನು ಕುರಿತಂತೆ ಮಕ್ಕಳ ದೃಷ್ಟಿಕೋನ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.2.3.2. ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿ ಮಕ್ಕಳ ಅನುಭವಗಳು ಮತ್ತು ಅವರ ಕಾರ್ಯಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.2.4. ಸಾರಾಂಶಿಸೋಣ

2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

2.2.6. ಘಟಕಾಂತ್ಯ ಅಭ್ಯಾಸಗಳು

2.2.7. ಪರಾಮರ್ಶನ ಗ್ರಂಥಗಳು


## 2.2.2. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಮಕ್ಕಳ ದೃಷ್ಟಿಕೋನಗಳ ಲಕ್ಷಣಗಳನ್ನು ವಿವರಿಸುವರು;
- ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿ ಮಕ್ಕಳ ಅನುಭವಗಳು ಹೇಗೆ ಭಿನ್ನವಾಗಿರುತ್ತವೆ ಎಂಬುದನ್ನು ವಿವರಿಸುವರು;
- ನಿರ್ದಿಷ್ಟ ಸಂಸ್ಕೃತಿಗಳಲ್ಲಿನ ಮತ್ತು ಸಮಾಜಗಳಲ್ಲಿನ ವೈವಿಧ್ಯಮಯವಾದ ದೃಷ್ಟಿಕೋನಗಳನ್ನು, ಕಾರ್ಯವೈಖರಿಯನ್ನು ಮತ್ತು ಅನುಭವಗಳನ್ನು ಗುರುತಿಸುವರು; ಮತ್ತು
- ವಿವಿಧ ಸಂಸ್ಕೃತಿಗಳಲ್ಲಿನ ಮಕ್ಕಳ ಚಟುವಟಿಕೆಗಳನ್ನು, ಕಾರ್ಯಗಳನ್ನು ಮತ್ತು ಅನುಭವಗಳನ್ನು ಹೋಲಿಸಿ ವಿಶ್ಲೇಷಿಸುವರು.

## 2.2.2. ಪೀಠಿಕೆ

ಪ್ರತಿಯೊಬರಿಗೂ ಅವರದ್ದೇ ಆದ ಬಾಲ್ಯಜೀವನವೊಂದು ಇದ್ದೇ ಇರುತ್ತದೆ. ಆ ಹಂತದ ಅನುಭವಗಳು, ನೆನಪುಗಳು, ಗಳಿಸಿಕೊಂಡ ಜ್ಞಾನ ಇವು ಜೀವನವಿಡೀ ಜೊತೆಗೆ ಸಾಗುತ್ತವೆ. ಕೆಲವರಿಗೆ ಬಾಲ್ಯದ ನೆನಪು ಸಿಹಿಯಾಗಿದ್ದರೆ, ಮತ್ತೆ ಕೆಲವರಿಗೆ ಆ ನೆನಪೇ ಬೇಡವಾಗಿರುತ್ತದೆ. ಪ್ರಖ್ಯಾತ ಮನೋವಿಜ್ಞಾನಿಯೊಬ್ಬರು ಹೇಳುವಂತೆ ಕೆಲವರಿಗೆ ಬಾಲ್ಯಹಂತವೊಂದು ಕೇವಲ ಜೈವಿಕವಾದ ಅಸ್ತಿತ್ವವಾಗಿದ್ದು ವಿಕಾಸವನ್ನು ಹೊಂದುತ್ತದೆ. ಆದರೆ, ಬಾಲ್ಯ ಹಾಗಲ್ಲ. ಬಾಲ್ಯಹಂತವು ಇದಕ್ಕಿಂತ ಬಹಳಷ್ಟು ಮಿಗಿಲಾದದ್ದಾಗಿರುತ್ತದೆ. ಎಲ್ಲಾ ಸಂಸ್ಕೃತಿಗಳಲ್ಲೂ ಮತ್ತು ಸಮಾಜಗಳಲ್ಲೂ ಬಾಲ್ಯಹಂತವನ್ನು ವ್ಯಕ್ತಿಯೊಬ್ಬನ ಪ್ರಾರಂಭಿಕ ಹಂತವೆಂದೇ ಪರಿಗಣಿಸಲಾಗಿದೆ. ಹೀಗಿರುವಾಗ ಸಾಮಾನ್ಯವಾಗಿ ಸಂಸ್ಕೃತಿ ಮತ್ತು ಸಮಾಜಗಳು ಬದಲಾದಂತೆ ಮಗುವಿನ ದೃಷ್ಟಿಕೋನದಲ್ಲಿ ಆಗುವ ಬದಲಾವಣೆಗಳೇನು ಮತ್ತು ಅದು ಹೇಗೆ ತನ್ನ ಜೀವನವನ್ನು ಕಟ್ಟಿಕೊಳ್ಳುತ್ತದೆ ಎಂಬ ವಿಚಾರವನ್ನೇ ನೀವು ಈ ಘಟಕದಲ್ಲಿ ಅಭ್ಯಸಿಸಲಿದ್ದೀರಿ.

## 2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.2.3.1. ಜೀವನವನ್ನು ಕುರಿತಂತೆ ಮಕ್ಕಳ ದೃಷ್ಟಿಕೋನ–ಅರ್ಥ ಮತ್ತು ಸ್ವರೂಪ

ಈ ಕೆಳಗೆ ಒಂದು ನಿದರ್ಶನವನ್ನು ಸಂಭಾಷಣೆಯ ರೂಪದಲ್ಲಿ ನೀಡಲಾಗಿದೆ. ಇದು ತರಗತಿಯ ಶಿಕ್ಷಕಿ ಮತ್ತು ವಿದ್ಯಾರ್ಥಿಗಳ ನಡುವೆ ನಡೆಯುವ ಒಂದು ಮಾತುಕತೆ. ಇದನ್ನು ಓದಿದಾಗ ನಿಮಗೆ ಮಕ್ಕಳು ತಮ್ಮ ಪ್ರಪಂಚವನ್ನು ಹೇಗೆ ಕಟ್ಟಿಕೊಳ್ಳುತ್ತಾರೆ ಎಂಬ ಸ್ಥೂಲ ಚಿತ್ರಣವು ದೊರೆಯುತ್ತದೆ. ಈ ರೀತಿಯ ಮಕ್ಕಳ ದೃಷ್ಟಿಕೋನಗಳು ಸಾಮಾನ್ಯವಾಗಿ ಒಂದು ಮಿತಿಯಲ್ಲಿಯೇ ಇರುತ್ತವೆ. ಆದರೆ ಶಿಕ್ಷಕರಾಗಿ ಆ ಮಕ್ಕಳ ದೃಷ್ಟಿಕೋನಗಳನ್ನು ಅರಿಯುವುದು ಮುಖ್ಯ.

ತರಗತಿಯ ಶಿಕ್ಷಕರೊಬ್ಬರು ಒಂದು ಒಣಗಿದ ಮರದ ದಿಮ್ಮಿಯ ಬಳಿ ತಮ್ಮ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಏನಾದರೂ ಜೀವಿಗಳು ಕಾಣುತ್ತವೆಯೋ ನೋಡಿ ಎಂದು ಹೇಳುವರು. ತನ್ಮೂಲಕ ವಿದ್ಯಾರ್ಥಿಗಳು ಜೀವಿಗಳ ಬಗ್ಗೆ, ಜೀವನದ ಬಗ್ಗೆ ಯಾವ ದೃಷ್ಟಿಕೋನವನ್ನು ಹೊಂದಿದ್ದಾರೆ ಎಂಬುದನ್ನು ತಿಳಿಯುವುದು ಅವರ ಉದ್ದೇಶವಾಗಿತ್ತು. ತೆರೆದ ಬಯಲಿನಲ್ಲಿ ಬಿದ್ದಿರುವ ಮರದ ದಿಮ್ಮಿಯಲ್ಲಿನ ಜೀವಿಗಳು ಛಳಿಯನ್ನು ಹೇಗೆ ತಡೆದುಕೊಳ್ಳಬಲ್ಲವು ಎಂಬುದು ಚರ್ಚಿಸಬೇಕಾದ ವಿಷಯವಾಗಿತ್ತು. ಮಕ್ಕಳಿಗೆ ಮರಕೊರೆದು ತಿಂದು ಬದುಕುವ ಕೀಟವೊಂದು ಕಣ್ಣಿಗೆ ಬೀಳಬೇಕೆ, ಅದೂ ಹೇಗೆ ಎಂದರೆ, ತನ್ನ ಆರೂ ಜೊತೆ ಕಾಲುಗಳನ್ನು ಆಕಾಶಕ್ಕೆ ತೂರಿಬಿಟ್ಟು ಅಡ್ಡಾಡುವಂತೆ !!1 ತಕ್ಷಣವೇ ಸಮಯಪ್ರಜ್ಞೆಯಿಂದ ಶಿಕ್ಷಕರು ನೋಡಿ ಮಕ್ಕಳೇ ಈ ಕೀಟಕ್ಕೆ ಎಷ್ಟೊಂದು ಕಾಲುಗಳು ಒಮ್ಮೆ ಎಣಿಸಿಬಿಡಿ ನೋಡೋಣ ಎಂದರು.

ಸೀತಾ: ಒಟ್ಟು ಹತ್ತು ಕಾಲುಗಳು ಮೇಡಂ

ಶಿಕ್ಷಕರು: ಹತ್ತಾ ?

ಸೀತಾ : ಹೂಂ ಮೇಡಂ 12 ಅಲ್ಲವೇ?

ಶಿಕ್ಷಕರು: ನಮಗೂ ಹತ್ತು ಕಾಲುಗಳಿದ್ದಿದ್ದರೆ, ಹೇಗಿರುತ್ತಿತ್ತು?

ಪ್ರವೀಣ: ಇಲ್ಲಪ್ಪ ನನಗೇನೋ ಎರಡೇ ಸಾಕು

ಶಿಕ್ಷಕರು: ಹೀಗೇ ಸುಮ್ಮನೇ ಕಲ್ಪನೆ ಮಾಡಿಕೊಳ್ಳೋದಪ್ಪಾ, ಒಂದು ವೇಳೆ ಇದ್ದಿದ್ದರೆ, ಆ ಹತ್ತು ಕಾಲುಗಳಿಗೂ ಷೂಗಳು, ಕಾಲುಚೀಲಗಳು, ಹೋ;;;;;;;;

ಸೀತಾ: ಇಲ್ಲ ಇಲ್ಲ ;;;;;

ಶಿಕ್ಷಕರು: ನೋಡಿ ಚಳಿಗಾಲದಲ್ಲಿ ನಾವು ಷೂಗಳನ್ನು ಕಾಲುಚೀಲಗಳನ್ನು ಬಳಸುತ್ತೇವೆ ತಾನೆ? ಈ ಕೀಟಗಳು ಏನು ಮಾಡಬೇಕು ಪಾಪ ಛಳಿಯಾದಾಗ? ಅವುಗಳಿಗೆ ಷೂಗಳು ಮತ್ತು ಕಾಲುಚೀಲಗಳು ಬೇಡವೇ?

ಪ್ರವೀಣ: ಅವುಗಳು ತಮ್ಮ ಕಾಲುಗಳನ್ನು ಒಳಗೆಳೆದುಕೊಂಡು ಬೆಚ್ಚಗಿರುತ್ತವೆ.

ಸೀತಾ: ನನಗೇನೋ ಹಾಗೆನಿಸುವುದಿಲ್ಲ, ಆದರೆ ಅವುಗಳು ತಮ್ಮ ಕವಚದೊಳಗೆ ಕಾಲುಗಳನ್ನು ಸೆಳೆದು ಕೊಳ್ಳಬಹುದು ಮತ್ತು ಚಳಿಯಿಂದ ರಕ್ಷಣೆಯನ್ನು ಪಡೆದುಕೊಳ್ಳಬಹುದು.

ಶಿಕ್ಷಕರು: ಏನು? ಕವಚದೊಳಗಾ?

ಪ್ರವೀಣ: ಅವುಗಳು ಮರದ ಪೊಟರೆಯೊಳಗೆ ಹೋಗಿಬಿಡಬಹುದು.

ಸೀತಾ: ಇಲ್ಲ ಇಲ್ಲ, ಅವುಗಳು ತಮ್ಮ ಕವಚದೊಳಗೆ ಸೇರಿಕೊಳ್ಳುವುವು ಮತ್ತು ಅಲ್ಲೇ ಬೆಚ್ಚಗೆ ಇರುವುವು

ಶಿಕ್ಷಕರು: ಹಾಂ, ಹೌದು ಅನಿಸುತ್ತದೆ, ನಾವು ಹೇಗೆ ಬೆಚ್ಚಗಿನ ಉಣ್ಣೆಯ ಹೊದಿಕೆಯೊಳಗೆ ಸೇರಿಕೊಳ್ಳುವೆವೋ ಹಾಗೆ !!

ಸೀತಾ: ಒಂದು ಆಮೆಯ ಹಾಗೆ,

ಶಿಕ್ಷಕರು: ಆಮೆಯ ಹಾಗೋ ಇಲ್ಲಾ ಶಂಕು ಹುಳದ ಹಾಗೋ? ಏಕೆಂದರೆ, ಶಂಕು ಹುಳುಗಳೂ ಕೂಡ ಛಳಿಗಾಲದಲ್ಲಿ ತಮ್ಮ ಗಟ್ಟಿಯಾದ ಕವಚದೊಳಗೆ ಆಶ್ರಯವನ್ನು ಪಡೆಯುತ್ತವೆ.

ಮೇಲಿನ ನಿದರ್ಶನದ ಮೂಲಕ ನಿಮಗೆ ಏನು ಗೋಚರವಾಯಿತು?

**ಮೇಲಿನ ಸಂವಹನದ ವಿಶ್ಲೇಷಣೆ ಮತ್ತು ವಿಮರ್ಶೆ:**

ಮೇಲಿನ ಸಂದರ್ಭದಲ್ಲಿ ಮರದ ಕೀಟಗಳು ತಮ್ಮನ್ನು ಛಳಿಯಿಂದ ಹೇಗೆ ರಕ್ಷಿಸಿಕೊಳ್ಳುತ್ತವೆ ಎಂಬ ವಿಚಾರದ ಬಗ್ಗೆ ಚರ್ಚೆಯಾಗಿದ್ದನ್ನು ಕಂಡೆವು. ಶಿಕ್ಷಕರು ಸಹಜವಾಗಿಯೇ ದೊರೆತ ಒಂದು ಸನ್ನಿವೇಶವನ್ನು ಬಹಳ ಚೆನ್ನಾಗಿ ಇಲ್ಲಿ ಬಳಸಿಕೊಂಡಿದ್ದಾರೆ. ಅಂದರೆ ಬೆನ್ನು ಅಡಿಯಾಗಿ ಬಿದ್ದ ಒಂದು ಕೀಟ ಮತ್ತು ಗಾಳಿಯಲ್ಲಿ ತೂರಿಕೊಂಡಂತಿದ್ದ ಅದರ ಆರು ಜೊತೆ ಕಾಲುಗಳು !! ಇಲ್ಲಿ ಪ್ರವೀಣ ತನಗೆ ಎರಡು ಕಾಲಿವೆ, ಅಷ್ಟೇ ಸಾಕು ಎಂದು ಪ್ರತಿಕ್ರಿಯಿಸಿದ್ದಾನೆ. ಆದರೆ ಶಿಕ್ಷಕರು ಘಟನೆಯನ್ನು ಸಮಸ್ಯೆಯನ್ನಾಗಿ ಕಲಾತ್ಮಕವಾಗಿ ಬದಲಾಯಿಸಿದ್ದಾರೆ. ನಮಗೂ ಹತ್ತು ಕಾಲಿದ್ದು, ಒಂದು ವೇಳೆ ಷೂಸ್, ಕಾಲುಚೀಲಗಳನ್ನು ಹಾಕಿಕೊಳ್ಳಬೇಕೆಂದರೆ ಹೇಗೆ? ಎಂದು. ಇದು ಸೃಜನಶೀಲತೆಗೂ ಅವಕಾಶ ನೀಡಿದೆ. ನಂತರ ಮರದ ಕೀಟಗಳು ಹೇಗೆ ತಮ್ಮನ್ನು ಛಳಿಯಿಂದ ರಕ್ಷಿಸಿಕೊಳ್ಳುತ್ತವೆ ಎಂಬ ಪಠ್ಯದ ನಿಜವಾದ (ಹೊಂದಾಣಿಕೆ ಮತ್ತು ಮಾರ್ಪಾಡುಗಳು ಎಂಬ ಜೀವವಿಜ್ಞಾನದ ಪಾಠ) ಪರಿಕಲ್ಪನೆಯೆಡೆಗೆ ಸಂಭಾಷಣೆಯನ್ನು ತೆಗೆದುಕೊಂಡು ಹೋಗಿದ್ದಾರೆ. ಮಧ್ಯದಲ್ಲಿ ಪ್ರವೀಣನು ಚರ್ಚೆಯಿಂದ ಹಿಂದೆ ಸರಿದಿದ್ದನ್ನು ನೀವು ಗಮನಿಸಿರಬಹುದು. ಹಾಗಾಗಿ ಶಿಕ್ಷಕರು ಚರ್ಚೆಯನ್ನು ಮುಂದುವರಿಸುವಲ್ಲಿ ಪ್ರಶ್ನೆಗಳನ್ನು ಮತ್ತೆ ಕೇಳಬೇಕಾಗುತ್ತದೆ. ಮಕ್ಕಳು ತಮ್ಮ ಅನುಭವಗಳು ಹಾಗೂ ಈ ಹಿಂದೆ ಗಳಿಸಿದ ಜ್ಞಾನದಿಂದ ತಮಗೆ ತೋಚಿದ ಉತ್ತರವನ್ನು ನೀಡಿದ್ದಾರೆ. ಅದು ಅವರ ದೃಷ್ಟಿಕೋನವನ್ನು ಪ್ರತಿಬಿಂಬಿಸಿರುವುದನ್ನು ನೀವು ನೋಡಿದಿರಿ. ಮೇಲಿನ ಉದಾಹರಣೆಯಲ್ಲಿ ಮಕ್ಕಳು ತಮ್ಮತಮ್ಮಲ್ಲೇ ಹೇಗೆ ಅಂತರ್‌ಕ್ರಿಯೆ ನಡೆಸುವರೆಂದು ನೋಡಬಹುದಾಗಿದೆ. ಇಲ್ಲಿ ಪ್ರತಿಯೊಬ್ಬರೂ ಇನ್ನೊಬ್ಬರ ಮಾತನ್ನು ಆಸಕ್ತಿಯಿಂದ ಕೇಳುತ್ತಿದ್ದಾರೆ ಮತ್ತು ತಮ್ಮ ಮಾತನ್ನು ಕೂಡ ಅರ್ಥವಾಗುವಂತೆ ಹೇಳಿದ್ದಾರೆ. ತಮ್ಮ ಅನುಭವದ ಆಧಾರದಿಂದ ಇನ್ನಿತರ ಕವಚಹೊಂದಿರುವ ಪ್ರಾಣಿಗಳು ಚಳಿಯಂದ ಹೇಗೆ ರಕ್ಷಿಸಿಕೊಳ್ಳುತ್ತವೆ ಎಂದು ಹೋಲಿಸಿ ನೋಡಿ ತೀರ್ಮಾನಗಳನ್ನು ನೀಡಿದ್ದಾರೆ. ಹಾಗೂ ಮೇಲಿನ ಉದಾಹರಣೆಯಲ್ಲಿ ಶಿಕ್ಷಕರ ಪಾತ್ರದ ಮೂಲಕ ನೀವು ಆ ವಯೋಮಾನದ ಮಕ್ಕಳ ದೃಷ್ಟಿಕೋನ ಮತ್ತು ಜೀವನವನ್ನು ಕುರಿತಂತೆ ಅವರು ಅರ್ಥ ಮಾಡಿಕೊಂಡ ರೀತಿಯನ್ನು ತಿಳಿಯಬಹುದು.

ಇತ್ತೀಚಿನ ಸಂಶೋಧನೆಯಲ್ಲಿ ಮಕ್ಕಳ ಧ್ವನಿಗೆ, ಅವರ ಅಭಿಪ್ರಾಯಗಳಿಗೆ, ಅವರು ಅರ್ಥಮಾಡಿಕೊಳ್ಳುವ ರೀತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗುತ್ತಿದೆ. ಮುಖ್ಯವಾಗಿ ಮಕ್ಕಳು ಮಾತಾಡಬೇಕು, ತಮಗೆ ಏನು ಅನ್ನಿಸಿದೆಯೋ ಅದನ್ನು ಅವರು ಮುಕ್ತವಾಗಿ ಹಂಚಿಕೊಳ್ಳಬೇಕು ಎಂಬ ಉದ್ದೇಶಕ್ಕೆ ಹೆಚ್ಚಿನ ಅವಕಾಶಗಳನ್ನು ನೀಡಲಾಗುತ್ತದೆ. ಇದರ ಮೂಲಕ ಮಕ್ಕಳು ತಮ್ಮ ಜೀವನವನ್ನು ಹೇಗೆ ಕಟ್ಟಿಕೊಳ್ಳುತ್ತಿದ್ದಾರೆ, ಅವರಲ್ಲಿ ಯಾವ ಧೋರಣೆಗಳು, ಮೌಲ್ಯಗಳು ಬೆಳೆಯುತ್ತಿವೆ ಮತ್ತು ಇದಕ್ಕೆ ಕಾರಣವೇನು– ಇತ್ಯಾದಿ ಚಿಂತನೆಗಳು ಸಂಶೋಧನಾ ಪ್ರಶ್ನೆಗಳಾಗಿವೆ. ಇದು ಸಾಮಾಜಿಕವಾದ ಸಂರಚನಾವಾದದ ಪ್ರತಿಪಾದನೆ. ಮಕ್ಕಳು ಕೇವಲ ಮಾಹಿತಿಯ ಶೇಖರಣಾ ಯಂತ್ರವಾಗದೇ ಜ್ಞಾನವನ್ನು ಕಟ್ಟಿಕೊಳ್ಳುವ ಜೀವಂತ ವ್ಯಕ್ತಿಗಳಾಗಬೇಕೆಂಬುದು ಇದರ ಕಳಕಳಿ. ಮಕ್ಕಳನ್ನು ಕುರಿತಂತೆ ಕೇವಲ "ಇದ್ದಾರೆ" ಎಂಬುದಕ್ಕಿಂತ "ಆಗಲಿದ್ದಾರೆ" ಎಂಬುದಕ್ಕೆ ಹೆಚ್ಚು ಒತ್ತುಕೊಡಲಾಗಿದೆ. ಮಕ್ಕಳು ತಮಗೆ ದೊರೆತ ಅನುಭವದಿಂದಲೇ ಬೆಳೆಯುತ್ತಾರೆ.

ಶಿಕ್ಷಕರು 'ವಿದ್ಯಾರ್ಥಿಗಳು, ನಮಗಿಂತಾ ಚಿಕ್ಕವರು ಅವರಿಗೇನು ಗೊತ್ತಿರುತ್ತದೆ' ಎಂಬ ಉಡಾಫೆಯಿಂದಲಾಗಲೀ ಅಥವಾ 'ಹೋ ನಮ್ಮ ವಿದ್ಯಾರ್ಥಿಗಳು ತಾನೇ, ನನಗೆ ಚೆನ್ನಾಗಿ ಗೊತ್ತು' ಎಂಬ ಅತಿಯಾದ ನಂಬಿಕೆಯಿಂದಾಗಲೀ ಇರುವುದು ಈ ಕಾಲಕ್ಕೆ ಹೊಂದಿಕೆಯಾಗುವುದಿಲ್ಲ. ಶಿಕ್ಷಕರಾದ ನಾವು ಈ ಕಡೆಗೆ ಸ್ವಲ್ಪ ಗಮನ ನೀಡಬೇಕು. ಏಕೆಂದರೆ ಕಾಲ ಬದಲಾಗಿದೆ, ನಾವು ಕೂಡ ಬದಲಾಗಬೇಕಿದೆ. ಎಲ್ಲಾ ಮಕ್ಕಳಿಗೂ ನಾವು ಹೇಳಿದ್ದು ಅರ್ಥವಾಗುವುದೆಂದಾಗಲೀ, ನಾವು ಹೇಳಿದ್ದಷ್ಟೇ, ಅದನ್ನು ಬಿಟ್ಟು ಮತ್ತಿನ್ನೇನನ್ನೂ ಅವರು ಅರ್ಥಮಾಡಿಕೊಂಡಿರುವುದಿಲ್ಲ ಎಂದಾಗಲೀ ಅಂದು ಕೊಂಡರೆ ನಾವು ವಾಸ್ತವವನ್ನು ಮರೆಯುತ್ತಿದ್ದೇವೆ ಎಂದೇ ಆಗುವುದು.

ಶಾಲಾಪೂರ್ವ ಹಂತದಲ್ಲಿನ ಮಕ್ಕಳನ್ನು ಕುರಿತ ಸಂಶೋಧನೆಗಳಲ್ಲಿ ಕಂಡುಬಂದಿರುವ ಇನ್ನೊಂದು ಅಂಶವೆಂದರೆ, ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಚೋದಿಸುವ ಪ್ರಶ್ನೆಗಳನ್ನು ಕೇಳಿದಾಗ, ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಂಡಾಗ ಮತ್ತು ಭಾವನಾತ್ಮಕವಾಗಿ ಬೆಂಬಲ ನೀಡಿದಾಗ ಅವರು ಉತ್ತಮವಾಗಿ ಕಲಿಯುವರು. ಹಾಗೆಯೇ ಅವರಿಂದ ಸೆಳೆಯಲ್ಪಡುವ ಉತ್ತರಗಳು ಅವರಿಗೆ ತಮ್ಮಲ್ಲೇ ಒಂದು ರೀತಿಯ ಆತ್ಮವಿಶ್ವಾಸವನ್ನು ತಂದುಕೊಡುವುದು. ಇದರಿಂದ ಅವರು ಕಲಿಕಾ–ಸಂತೋಷವೆಂದರೇನೆಂದು ಮನನ ಮಾಡಿಕೊಳ್ಳುವರು. ಹಾಲ್ಡೆನ್‌ರವರು ಇನ್ನೊಂದು ಆಸಕ್ತಿಯುತ ವಿಚಾರದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಅದೆಂದರೆ, ಮಗುವಿನ ದೃಷ್ಟಿಕೋನ ಮತ್ತು ಮಕ್ಕಳ ದೃಷ್ಟಿಕೋನವನ್ನು ಯಾರು ರೂಪಿಸುತ್ತಿದ್ದಾರೆ ಎಂಬ ಪ್ರಶ್ನೆಯ ಮೂಲಕ ಒಂದು ಸೂಕ್ಷ್ಮ ವಿಭೇದನಕ್ಕೆ ಅಭಿವ್ಯಕ್ತಿಯನ್ನು ನೀಡಿದ್ದಾರೆ. ಅಂದರೆ ದೃಷ್ಟಿಕೋನಗಳನ್ನು ಯಾರೋ ಒಬ್ಬರು ಎಲ್ಲ ಮಕ್ಕಳ ಪರವಾಗಿ ಹೇಳುತ್ತಿದ್ದಾರೆಯೇ ಅಥವಾ ಮಗುವು ತನ್ನ ದೃಷ್ಟಿಕೋನವನ್ನು ತಾನೇ ಅಭಿವ್ಯಕ್ತಿಸುತ್ತಿದೆಯೇ? ಎಂಬ ಸೂಕ್ಷ್ಮ ಪ್ರಶ್ನೆ. ಮಗುವಿನ ದೃಷ್ಟಿಕೋನವೆಂದರೆ, ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಹಿತರಕ್ಷಣೆಗಾಗಿ ಮತ್ತು ಅವರ ಉನ್ನತಿಗಾಗಿ ರೂಪುಗೊಳ್ಳುವ ಅಭಿವ್ಯಕ್ತಿಗಳು. ಹಾಗೆಯೇ, ಮಕ್ಕಳ ದೃಷ್ಟಿಕೋನವೆಂದರೆ, ಮಕ್ಕಳು ತಮ್ಮ ಕೊಡುಗೆಯಾಗಿ ನೀಡಿದ ವಿಚಾರಗಳನ್ನು ದೊಡ್ಡವರು ಅಥವಾ ಹಿರಿಯರು ಅಥವಾ ವಯಸ್ಕರು ಬಳಸಿಕೊಂಡು ಮಾಡುವ ಅಭಿವ್ಯಕ್ತಿಯೆಂದಾಗುವುದು. ಅಂದರೆ, ಮಗುವಿನ ದೃಷ್ಟಿಕೋನವೆಂದರೆ, ಮಕ್ಕಳ ಅಭಿಪ್ರಾಯಗಳನ್ನು ವಯಸ್ಕರು ಬಳಸಿಕೊಂಡು ಅಭಿವ್ಯಕ್ತಿಸುವಿಕೆಯೆಂದು ಮತ್ತು ಮಕ್ಕಳ ದೃಷ್ಟಿಕೋನಗಳೆಂದರೆ, ಮಕ್ಕಳು ತಮ್ಮ ಭಾವನೆಗಳಿಗೆ, ಅನುಭವಗಳಿಗೆ ಮತ್ತು ಅಭಿವ್ಯಕ್ತಿಗಳಿಗೆ ತಮ್ಮ ಧ್ವನಿಯನ್ನೇ ಬಳಸುವುದು ಮತ್ತು ಅದನ್ನೇ ಪ್ರಬಲಗೊಳಿಸುವುದು ಎಂಬ ಅರ್ಥವನ್ನು ನೀಡಲಾಗಿದೆ. ಯೂನಿಸೆಫ್ 2009 ಮಕ್ಕಳ ಹಕ್ಕುಗಳು ಎಂಬ ವಿಷಯಕ್ಕೆ ಸಂಬಂಧಿಸಿದಂತೆ, ಯುನೈಟೆಡ್ ನೇಶನ್ಸ್‌ನಲ್ಲಿನ ಒಂದು ಸಮ್ಮೇಳನದಲ್ಲಿ ಮಕ್ಕಳ ಅಭಿಪ್ರಾಯಗಳಿಗೆ ಮತ್ತು ಅವರ ಧ್ವನಿಗೆ ವಯಸ್ಕರ ಅಭಿಪ್ರಾಯಗಳಷ್ಟೇ ಪ್ರಾಮುಖ್ಯತೆಯನ್ನು ನೀಡಬೇಕೆಂಬ ಶಿಫಾರಸು ಮಾಡಿರುವುದನ್ನು ಗಮನಿಸಬೇಕು. ಆದ್ದರಿಂದ ಯುನೈಟೆಡ್ ನೇಶನ್ಸ್‌ನ ಮಕ್ಕಳ ಹಕ್ಕುಗಳು ಎಂಬ ಕಾಯಿದೆಯ (ಯೂನಿಸೆಫ್ 2009) ಪರಿಪಾಲನೆಯಲ್ಲಿ ಶಾಲಾಪೂರ್ವ ಹಂತದ ಶಿಕ್ಷಕರ ಪಾತ್ರವು ಅತ್ಯಂತ ಮುಖ್ಯವಾಗಿರುತ್ತದೆ. ಅಷ್ಟೇ ಅಲ್ಲದೆ ಶಾಲಾಪೂರ್ವದ ಪಠ್ಯಕ್ರಮವೂ

ಕೂಡ ಅದಕ್ಕೆ ತಕ್ಕ ವಿನ್ಯಾಸವನ್ನು ಹೊಂದಿರಬೇಕಾಗುತ್ತದೆ (ಮಿನಿಸ್ಟ್ರಿ ಆಫ್ ಎಜುಕೇಶನ್ ಅಂಡ್ ಸೈನ್ಸ್ 2010).

**ದೃಷ್ಟಿಕೋನವೆಂದರೇನು?**

**ಮಕ್ಕಳ ದೃಷ್ಟಿಕೋನಗಳನ್ನು ಕುರಿತಂತೆ ಸಂಶೋಧನಾ ವರದಿಗಳು**

ದೃಷ್ಟಿಕೋನ(Perspective)ವೆಂದರೆ, ಏನನ್ನಾದರೂ ಅಥವಾ ಯಾರನ್ನಾದರೂ ಒಬ್ಬರು ನೋಡುವ ರೀತಿಯೆಂದು ಹೇಳಬಹುದು. ಉದಾಹರಣೆಗೆ, ಆಟಿಕೆಗಳು ಮಕ್ಕಳ ಮನಸ್ಸನ್ನು ಕೆಡಿಸುತ್ತವೆ ಎಂದು ನೀವು ಅಂದುಕೊಂಡರೆ, ನಿಮ್ಮ ದೃಷ್ಟಿಯಲ್ಲಿ ಆಟಿಕೆಯ ಅಂಗಡಿಯೊಂದು ಕೆಟ್ಟ ಸ್ಥಳವೆಂದಾಗುವುದು. ಇದಕ್ಕೆ ಸಂವಾದಿಯಾದ ಇಂಗ್ಲಿಷಿನ 'Perspective' ಎಂಬುದು ಲ್ಯಾಟೀನ್ ಮೂಲದಿಂದ ಬಂದ ಪದವಾಗಿದ್ದು ಅದಕ್ಕೆ ''Look through'' or ''perceive'' ಎಂಬ ಅರ್ಥವಿದೆ. 'ಮುಖೇನ ನೋಡುವುದು', 'ನೋಡುವ ರೀತಿ' ಅಥವಾ 'ಗ್ರಹಿಸು' ಎಂಬ ಅರ್ಥವೇ ಬರುವುದು. ಹಾಗಾಗಿ ದೃಷ್ಟಿಕೋನವೆಂದರೆ, ಏನಾದರೂ ಒಂದನ್ನು ಕುರಿತು ಮಾಡುವ ಚಿಂತನೆ, ವ್ಯಕ್ತಪಡಿಸುವ ಅಭಿಪ್ರಾಯಗಳಾಗಿದ್ದು ಇದಕ್ಕೆ ಆ ವ್ಯಕ್ತಿಯ ಅನುಭವಗಳು ಮತ್ತು ನಂಬಿಕೆಗಳು ಪ್ರಭಾವ ಬೀರಿರುತ್ತವೆ.

ಶಿಕ್ಷಣ ಕ್ಷೇತ್ರದ ಒಂದು ಅಡ್ಡಸೀಳಿಕೆಯ ವಿನ್ಯಾಸ ಹೊಂದಿದ್ದ ಸಂಶೋಧನೆಯೊಂದರಲ್ಲಿ ಪೂರ್ವ ಬಾಲ್ಯಹಂತದ ಮಕ್ಕಳ ಶಿಕ್ಷಣವನ್ನು ಆಯ್ದುಕೊಳ್ಳಲಾಗಿತ್ತು. ಇಲ್ಲಿ ಮಕ್ಕಳ ದೃಷ್ಟಿಕೋನವನ್ನೇ ವಿಶೇಷವಾಗಿ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿತ್ತು. ಈ ಕ್ಷೇತ್ರದಲ್ಲಿ ನಡೆಸಿದ ಹಲವಾರು ಸಂಶೋಧನೆಗಳ ಪ್ರಕಾರ ದೃಷ್ಟಿಕೋನಗಳು ಅನುವಂಶೀಯವಾಗಿರದೆ ಗಳಿಸಿದ ಲಕ್ಷಣಗಳಾಗಿರುತ್ತವೆ. ಇದಕ್ಕೆ ವ್ಯಕ್ತಿಯ ಅನುಭವಗಳು, ಇತರರ ಜೊತೆಯಲ್ಲಿ ನಡೆಯುವ ಅಂತರ್‌ಕ್ರಿಯೆಗಳು, ಸಾಂದರ್ಭಿಕ ಸನ್ನಿವೇಶಗಳು, ಪರಿಸರ, ಸಂಸ್ಕೃತಿ ಮತ್ತು ಸಾಮಾಜಿಕ ಅಂಶಗಳು ಕಾರಣವಾಗಿರುತ್ತವೆ. ವಿಕಾಸದ ಬಹುಮುಖೀ ಪ್ರಕ್ರಿಯೆಗೆ ಈ ದೃಷ್ಟಿಕೋನಗಳೇ ಬಲವಾದ ಆಧಾರವಾಗಿರುತ್ತವೆ. ಇಲ್ಲಿ ಇನ್ನೊಂದು ಪದವನ್ನು ಜೊತೆ ಜೊತೆಯಲ್ಲಿಯೇ ಬಳಸುತ್ತೇವೆ ಅದೆಂದರೆ, ಇಂದ್ರಿಯಾನುಭೂತಿ (Perception and Perspectives) ಅಥವಾ ಪ್ರತ್ಯಕ್ಷಾನುಭೂತಿ. ಕನ್ನಡ ಭಾಷೆಯಲ್ಲಿ ಸ್ಪಷ್ಟವಾಗಿಯೇ ಇವೆರಡರ ನಡುವೆ ವ್ಯತ್ಯಾಸವನ್ನು ಗುರುತಿಸಬಹುದು. ಪ್ರತ್ಯಕ್ಷಾನುಭೂತಿಯು ಒಂದು ಪ್ರಕ್ರಿಯೆಯಾಗಿದ್ದು, ಇಂದ್ರಿಯಾಧಾರಿತ ಅಥವಾ ಪಂಚೇಂದ್ರಿಯಗಳ ಮೂಲಕ ದೊರಕುವ ಮಾಹಿತಿ/ ವಿಷಯ/ಅನುಭವಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಅರ್ಥಪೂರ್ಣವಾದ ಉತ್ಪನ್ನಗಳನ್ನು ನೀಡುವುದೇ ಆಗಿದೆ. ಹಾಗಾಗಿ ಪ್ರತ್ಯಕ್ಷಾನುಭವಗಳು ಇಂದ್ರಿಯಗಳ ಕೊಡುಗೆಗಳಾಗಿರುತ್ತವೆ. ಇಂದ್ರಿಯಗಳಿಗೆ ದೊರಕುವ ಪ್ರಚೋದನೆಗಳನ್ನು ಪ್ರಕ್ರಿಯೆಗೆ ಒಳಪಡಿಸಿದಾಗ ಅರ್ಥಪೂರ್ಣತೆಯನ್ನು ಪಡೆದುಕೊಳ್ಳುತ್ತವೆ. ಪರಿಸರದಿಂದ ದೊರಕುವ ಇಂತಹ ಪ್ರಚೋದನೆಗಳನ್ನು ವ್ಯಕ್ತಿಯು ಸದಾ ಪ್ರಕ್ರಿಯೆಗೆ ಒಳಪಡಿಸುತ್ತಾ ಅರ್ಥಪೂರ್ಣವಾಗಿಸಿಕೊಂಡು ತನ್ನ ಸ್ಮೃತಿ ಪಟಲದಲ್ಲಿ ಜೋಡಿಸಿಕೊಳ್ಳುತ್ತಾನೆ. ಈ ಪ್ರಕ್ರಿಯೆಯು ಕೆಲವೊಮ್ಮೆ ಬುದ್ಧಿಪೂರ್ವಕವಾಗಿ ಆದರೆ, ಇನ್ನೂ ಕೆಲವೊಮ್ಮೆ ಗೊತ್ತಿಲ್ಲದೆಯೇ ಆಗುವುದು. ಆದ್ದರಿಂದಲೇ ಪಂಚೇಂದ್ರಿಯಗಳನ್ನು ಜ್ಞಾನೇಂದ್ರಿಯಗಳೆಂದು ಗುರುತಿಸಿ ಅವುಗಳನ್ನು ಜ್ಞಾನಸಂಪಾದನೆಯ ಮಹಾದ್ವಾರಗಳೆಂದು ಕರೆಯುವರು. ಹೀಗೆ ಜ್ಞಾನವಲಯದಲ್ಲಿನ ಪ್ರಕ್ರಿಯೆಯಾಗಿರುವ ಪ್ರತ್ಯಕ್ಷಾನುಭೂತಿಯು ಒಂದು ಬೌದ್ಧಿಕ ಕ್ರಿಯೆಯಾಗಿರುತ್ತದೆ. ಇದರ ಮೇಲೆ ಹಿಂದಿನ ಕಲಿಕೆ ಮತ್ತು ಅನಭವಗಳ ಪ್ರಭಾವವೂ ಇರುತ್ತದೆ.

ಶೈಕ್ಷಣಿಕ ಸಂಶೋಧನೆಗಳೂ ಕೂಡ ಮಕ್ಕಳ ಕಲಿಕೆ ಮತ್ತು ವಿಕಾಸವು ಸಮಾಜ ಮತ್ತು ಸಂಸ್ಕೃತಿಯಿಂದ ಗಂಭೀರವಾಗಿಯೇ ಪ್ರಭಾವಿಸಲ್ಪಡುವುದೆಂದು ಹೇಳುತ್ತವೆ. ವಿವಿಧ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಯಿಂದ ಬಂದ ಮಕ್ಕಳ ಸಂಜ್ಞಾನಾತ್ಮಕ ಕಾರ್ಯಗಳೂ ಕೂಡ ವೈವಿಧ್ಯಮಯವಾಗಿರುತ್ತವೆ. ಉದಾಹರಣೆಗಾಗಿ ಹೇಳುವುದಾದರೆ, ಯೂರೋಪ್ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಸ್ವೀಡನ್ ಮತ್ತು ಇಟಲಿ ದೇಶಗಳಲ್ಲಿ ಮಕ್ಕಳು ಬೇರೆ ಬೇರೆ ಸನ್ನಿವೇಶಗಳ ಚೌಕಟ್ಟುಗಳಲ್ಲಿ ಸಾಮಾಜಿಕ ಮತ್ತು ಸಂಜ್ಞಾನಾತ್ಮಕ ಜ್ಞಾನವನ್ನು ಗಳಿಸುವರು.

ಇದಕ್ಕೆ ಅವರುಗಳು ಯಾವ ದೇಶದ ಹಿನ್ನೆಲೆಯಿಂದ ಬಂದಿದ್ದಾರೆ ಎಂಬುದೇ ಮುಖ್ಯ ಕಾರಣವಾಗಿರುತ್ತದೆ. ಆದರೆ, ನಮ್ಮ ದೇಶದಲ್ಲಿ ನೋಡಿ, ವೈವಿಧ್ಯಮಯವಾದ ಸಾಂಸ್ಕೃತಿಕ ಹಿನ್ನೆಲೆಯಿರುವ ಮಕ್ಕಳು ಒಟ್ಟಿಗೇ ಒಂದೇ ಶಾಲೆಗೆ ಹೋಗುತ್ತಾರೆ, ಆಸ್ಟ್ರೇಲಿಯಾದಲ್ಲಿಯೂ ಹೀಗೇ ನಡೆಯುವುದು. ಹಾಗಾಗಿ ಇಂತಹ ಸಂದರ್ಭದಲ್ಲಿ ಮಕ್ಕಳು ತಮ್ಮ ತಮ್ಮ ಅನುಭವಕ್ಕೆ ತಕ್ಕಂತೆ ಮತ್ತು ತಮ್ಮ ದೃಷ್ಟಿಕೋನಕ್ಕೆ ತಕ್ಕಂತೆ ವರ್ತಿಸುವರು.

ಬಾಲ್ಯಹಂತದಲ್ಲಿ ಸುಮಾರು 100 ಬಿಲಿಯನ್ ನ್ಯೂರಾನ್‌ಗಳು(ನರಕೋಶಗಳು) ಒಂದರೊಳಗೊಂದು ಸೇರಿಕೊಂಡು ಒಂದು ಸಂಕೀರ್ಣವಾದ ನರವ್ಯೂಹ ಅಥವ ನರಮಂಡಲದ ರಚನೆಯನ್ನು ಮಾಡಿಕೊಳ್ಳುವುವು. ಮೆದುಳಿನ ಈ ಸಂಕೀರ್ಣವಾದ ನರಜಾಲಗಳಲ್ಲಿ ನಡೆಯುವ ಬೌದ್ಧಿಕಕ್ರಿಯೆಗೆ ಪರಿಸರ ಮತ್ತು ಅನುವಂಶಿಯತೆಗಳು ಸಮ-ಸಮವಾಗಿ ಕೊಡುಗೆಯನ್ನು ನೀಡುತ್ತವೆ. ಇದರಿಂದಾಗಿ ವ್ಯಕ್ತಿಯು ಹೆಚ್ಚು ಅನುಭವಗಳನ್ನು ಗಳಿಸುತ್ತಾ ವಿಕಾಸಹೊಂದುವನು. ಅದರಲ್ಲೂ ಪೂರ್ವಬಾಲ್ಯಹಂತ ಮತ್ತು 'ಮಾಹಿತಿ ಕ್ರಾಂತಿ' ಇವೆರಡರ ಘರ್ಷಣೆ ತೀವ್ರವಾಗಿಯೇ ಇದೆಯೆಂದು ಹೇಳಬಹುದು. ಹಾಗಾಗಿ ಬಾಲ್ಯಹಂತ ಮತ್ತು ಅಲ್ಲಿನ ವಿಕಾಸಾತ್ಮಕ ಕಾರ್ಯಗಳು ಸದಾ ಪರಿವರ್ತನೆಗೆ ಒಳಗಾಗುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ಸಮಾಜ-ಇತಿಹಾಸ ತಜ್ಞ ಅರೀಸ್(1962) ಪ್ರತಿಪಾದಿಸಿದಂತೆ "ಮಗುವು ವಯಸ್ಕನ ಪುಟ್ಟ ಅಭಿವ್ಯಕ್ತಿ" !!.

20ನೇ ಶತಮಾನದ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಬಾಲ್ಯಹಂತವನ್ನು ಮನೋವಿಶ್ಲೇಷಣಾ ಸಿದ್ಧಾಂತದ ಪ್ರಕಾರ ವಿವರಿಸಿದ್ದಾನೆ. ಇವನ ಪ್ರತಿಪಾದನೆಯಂತೆ ಬಾಲ್ಯಹಂತದ ವಿಕಾಸವೂ ಕೂಡ ಮನೋ-ಲೈಂಗಿಕ ಲಕ್ಷಣಗಳನ್ನು ತೋರುವುದು. ಆದರೆ, ಜೀನ್ ಪಿಯಾಷೆ ನೀಡಿದ ಬೌದ್ಧಿಕ ಪ್ರಾತಿನಿಧಿಕಗಳು, ಕೋಹ್ಲ್‌ಬರ್ಗ್ ನೀಡಿದ ನೈತಿಕ ವಿಕಾಸ ಚೋಮ್‌ಸ್ಕೀ ನೀಡಿದ ಭಾಷಾ ವಿಕಾಸ ಇವು ಮಗುವಿನ ವಿಕಾಸದ ಇತರ ಮಜಲುಗಳನ್ನು ಕುರಿತು ವಿವರಿಸುತ್ತವೆ. ಆದರೆ ಈ ಎಲ್ಲಾ ಸಿದ್ಧಾಂತಗಳೂ ಕೂಡ ವಿಶೇಷವಾಗಿ ಯೂರೋಪಿಯನ್ ನೆಲೆಗಟ್ಟಿನಲ್ಲಿ ಹುಟ್ಟಿಕೊಂಡವು ಎಂಬುದು ಲ್ಯೂಕ್ (1989) ರವರ ಪ್ರಬಲವಾದ ವಾದ. ಇಂದಿನ ಮಕ್ಕಳು ಬಹುಬೇಗ ಅಕ್ಷರಸ್ಥರಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದಕ್ಕೆ ಕಾರಣ ಕ್ರಾಂತಿಕಾರಿಯಾಗಿ ಬದಲಾವಣೆಯಾದ ವಿದ್ಯುನ್ಮಾನ ಮಾಧ್ಯಮಗಳು. ಮಕ್ಕಳು ತಾವು ಏನೇ ಮಾಡುವುದಕ್ಕೂ ಮೊದಲು ಯೋಚಿಸಿ ಮಾಡಬೇಕಾದ ಕಾಲಘಟ್ಟದಲ್ಲಿದ್ದಾರೆ. ಏನೇ ಒಂದು ಬಟನ್ ಒತ್ತಿದರೂ ಅದರ ಆಗು-ಹೋಗುಗಳಿಗೆ, ಪ್ರಯತ್ನ-ಪ್ರಮಾದಗಳಿಗೆ ತಾವೇ ಹೊಣೆಗಾರರಾಗಿರುತ್ತೇವೆ ಎಂಬುದನ್ನು ಬಹುಬೇಗ ಮಕ್ಕಳು ತಿಳಿದುಕೊಂಡಿದ್ದಾರೆ. ಭಾರತದ ಸನ್ನಿವೇಶದಲ್ಲಿ ಬಾಲ್ಯವನ್ನು ಕುರಿತ ಗಂಭೀರವಾದ ಸಂಶೋಧನೆಗಳ ತುರ್ತು ಅಗತ್ಯವಿದೆ.

## ಮಕ್ಕಳ ದೃಷ್ಟಿಕೋನ ಮತ್ತು ಸಾಮಾಜಿಕ ಸಂರಚನೆ

ಸಾಮಾಜಿಕ ಸಂರಚನಾ ವಾದವು ಮಕ್ಕಳು ತಮ್ಮ ದೃಷ್ಟಿಕೋನಗಳನ್ನು ಹೇಗೆ ರಚಿಸಿಕೊಳ್ಳುವರು, ಯಾರಿಂದ ಅಥವಾ ಯಾವುದರಿಂದ ರಚಿಸಿಕೊಳ್ಳುವರು ಮತ್ತು ಮುಂದೆ ಅದರ ಉದ್ದೇಶ ಅಥವಾ ಪ್ರಯೋಜನವೇನು ಎಂಬ ವಿಚಾರಗಳನ್ನು ಕುರಿತು ತಿಳಿಸಿಕೊಡುತ್ತದೆ. ಇದಕ್ಕಾಗಿ ಸಂಸ್ಕೃತಿ, ಸಮಾಜ ಮತ್ತು ಸಮುದಾಯಗಳು, ಹಾಗೂ ಐತಿಹಾಸಿಕವಾದ ವಿವಿಧ ಕಾಲಮಾನಗಳನ್ನು ಆಧಾರವಾಗಿ ಇಟ್ಟುಕೊಂಡು ಸಾಮಾಜಿಕ-ಸಂರಚನಾ ಸಿದ್ಧಾಂತವು ತನ್ನ ಕಾರ್ಯವನ್ನು ಯೋಜಿಸಿದೆ. ಜೇಮ್ಸ್ ಮತ್ತು ಜೇಮ್ಸ್ (2008) ಸಾಮಾಜಿಕ ಸಂರಚನಾವಾದವನ್ನು "ಮಾನವರು ತಮ್ಮ ದೈನಂದಿನ ಚಟುವಟಿಕೆಗಳಿಂದ, ಅಂತರ್‌ಕ್ರಿಯೆಗಳಿಂದ ಮತ್ತು ಚರ್ಚೆ, ವಿಮರ್ಶೆಗಳಿಂದ ವಾಸ್ತವದ ಅನ್ವೇಷಣೆಯನ್ನು ಮಾಡುವುದರ ಮೂಲಕ ಕಟ್ಟಿಕೊಳ್ಳುವ ಸೈದ್ಧಾಂತಿಕ ನಿಲುವುಗಳೆಂದು" ವ್ಯಾಖ್ಯಾನಿಸಿದ್ದಾರೆ. ಮಗುವೊಂದನ್ನು ಮುಂದೆ ಒಬ್ಬ ಕರಾರುವಾಕ್ಕಾದ, ನಿಖರವಾದ ಮನುಷ್ಯನಾಗುವ ಜೀವಿಯೆಂದು ಪರಿಗಣಿಸಲಾಗುತ್ತದೆ. ಆದ್ದರಿಂದಲೇ ಪ್ರಸ್ತುತ ಕೈಗಾರಿಕೀಕರಣಗೊಂಡ ಸಮಾಜಗಳಲ್ಲಿ ಮಕ್ಕಳು ಒಂದು ಗೊತ್ತಾದ ಸಾಮಾಜಿಕ ಸ್ಥಾನಮಾನಗಳಿಂದ, ಸುಯೋಜಿತವಾದ ಯೋಜನೆಗಳಿಂದ, ರಕ್ಷಣೆ ಮತ್ತು ಶೈಕ್ಷಣಿಕ ವ್ಯವಸ್ಥೆಗಳಿಂದ ಉದಯೋನ್ಮುಖ ವ್ಯಕ್ತಿಗಳಾಗಿ ಗುರುತಿಸಲ್ಪಡುವರು

ಎಂದು ಕೋರ್‌ಟ್ರಪ್ (2002) ಪ್ರತಿಪಾದಿಸಿದ್ದಾನೆ. ಏನೇ ಇರಲಿ, ಮಗುವೊಂದು ಇನ್ನು ಮುಂದೆ ಏನೋ ಆಗಬೇಕಾಗಿರುವ ಆದರೆ ಈಗ ಪ್ರಸ್ತುತದಲ್ಲಿ ಕೆಲವು ನ್ಯೂನತೆಗಳು/ಕೊರತೆಗಳನ್ನು ಹೊಂದಿರುವ ಜೀವಿಯೇ ಆಗಿರುತ್ತದೆ ಎಂದು ವುಡ್‌ಹೆಡ್ (2013)ರವರ ವಾದ. ಆದರೆ ವಯಸ್ಕ ಹಂತವನ್ನು ಸಾರಾಸಗಟಾಗಿ, ಒಂದು ನಿಶ್ಚಿತವಾದ, ಪಕ್ಕಾ ವ್ಯವಸ್ಥಿತವಾದ ಮತ್ತು ಸ್ವಾವಲಂಬಿತವಾದ ಹಂತವೆಂದೇನೂ ಹೇಳಲಾಗುವುದಿಲ್ಲ. ಹೀಗಾಗಿ ಮಗು ಮತ್ತು ವಯಸ್ಕರ ನಡುವಿನ ವ್ಯತ್ಯಾಸಗಳು ಗೋಜಲಾಗಿ, ಸಂಕೀರ್ಣವಾಗಿ ಕಾಣುತ್ತವೆ.

ಪಿಯಾಷೆ ಹೇಳುವ ಪ್ರಕಾರ ಸಂಜ್ಞಾನಾತ್ಮಕ ವಿಕಾಸವು ಸ್ಕೀಮಾ ರಚನೆಗಳನ್ನು ಒಳಗೊಂಡಿರುತ್ತದೆ. ಇಂತಹ ಸ್ಕೀಮಾಗಳು ಅಥವಾ ಆಕೃತಿಕಲ್ಪಗಳು ವ್ಯಕ್ತಿಯ ಗತಿಸಿಹೋದ ಅನುಭವಗಳನ್ನು ವ್ಯವಸ್ಥಿತವಾಗಿ ಜೋಡಿಸಿದ್ದರ ಅಭಿವ್ಯಕ್ತಿಯಾಗಿರುತ್ತವೆ. ಇವುಗಳು ಮುಂದಿನ ಅನುಭವಗಳಿಗೆ ಹಾಗೂ ಸನ್ನಿವೇಶಗಳಿಗೆ ಉಪಯುಕ್ತವಾಗುವಂತೆ ಇರುತ್ತವೆ. ದೊರಕುವ ಮಾಹಿತಿ/ವಿಚಾರ/ಅನುಭವಗಳನ್ನು ಅರ್ಥಮಾಡಿಕೊಳ್ಳಲು, ಅವುಗಳ ಮಧ್ಯದಲ್ಲಿ ಕಂಡುಬರುವ ಕೊರತೆಗಳನ್ನು ಅರ್ಥಪೂರ್ಣವಾಗಿ ತುಂಬಿಸಿಕೊಳ್ಳಲು ಹಾಗೂ ಕೆಲವು ತೀರ್ಮಾನಗಳನ್ನು ತತ್‌ಕ್ಷಣದಲ್ಲಿ ತೆಗೆದುಕೊಳ್ಳಲು ಸ್ಕೀಮಾಗಳು ಸಹಾಯಮಾಡುತ್ತವೆ. ಹೀಗೆ ಮಕ್ಕಳಲ್ಲಿ ಆಕೃತಿಕಲ್ಪಗಳು ಇಡೀ ಪ್ರಪಂಚವನ್ನೇ ಅರ್ಥಮಾಡಿಕೊಳ್ಳುವಲ್ಲಿ ಇನ್ನಿಲ್ಲದಂತೆ ಸಹಾಯಮಾಡುವುವು. ಆದರೆ ಕೆಲವೊಮ್ಮೆ ಇಲ್ಲೂ ಕೂಡ ದೋಷವು ನುಸುಳಬಹುದು. ತಪ್ಪುಗಳು ಆಗಬಹುದು. ಸ್ಕೀಮಾಗಳು ವ್ಯಕ್ತಿಯ ಸಾಮಾಜಿಕ ಅಂತರ್‌ಕ್ರಿಯೆಗೂ ಮಾರ್ಗದರ್ಶನವನ್ನು ನೀಡುವುವು.

**ಮಕ್ಕಳ ದೃಷ್ಟಿಕೋನಗಳು ಹೇಗೆ ರೂಪಿತವಾಗುತ್ತವೆ?**

ಮಗುವು ಒಂದಲ್ಲಾ ಒಂದು ವಿಧದಲ್ಲಿ ಸಾಮಾಜಿಕ ಅಂತರ್‌ಕ್ರಿಯೆಯಲ್ಲಿ ತೊಡಗಿಕೊಂಡಿರುತ್ತದೆ. ಈ ಅನುಭವಗಳು ಮಗುವಿನ ಮನಸ್ಸಿನಲ್ಲಿ ಆಕೃತಿಕಲ್ಪಗಳಾಗಿ ದಾಖಲಾಗುತ್ತವೆ. ಈ ಸ್ಕೀಮಾಗಳು ಅನುಭವದಿಂದ, ಸಾಮಾಜಿಕ ಅಂತರ್‌ಕ್ರಿಯೆಗಳಿಂದ, ಸಾಮಾಜಿಕ ಮಾಹಿತಿಗಳಿಂದ ವಿವಿಧ ಲಕ್ಷಣಗಳನ್ನು ಪಡೆದುಕೊಳ್ಳುತ್ತವೆ. ತಮ್ಮ ಸುತ್ತಮುತ್ತಲೂ ಇರುವ ಹಿರಿಯರ, ದೊಡ್ಡವರ ವರ್ತನೆಗಳನ್ನು ನೋಡುತ್ತಾ ಮಕ್ಕಳು ಬೆಳೆಯುತ್ತಾರೆ. ಅವರ ಚಟುವಟಿಕೆಗಳನ್ನು, ಕ್ರಿಯೆಗಳನ್ನು ಅವರಂತೆಯೇ ತಾವೂ ಮಾಡಲು ಕಲಿಯುತ್ತಾರೆ. ಹೀಗೆ ದೊರಕುವ ದೊಡ್ಡವರ ಒಡನಾಟದಲ್ಲಿ ಅವರ ಸಂಸ್ಕೃತಿ, ಸಾಮಾಜಿಕ ನಡೆವಳಿಕೆಗಳು ಸಾಮಾಜಿಕ ಬಳುವಳಿಗಳಾಗಿ ಮಕ್ಕಳಿಗೆ ದೊರಕುತ್ತವೆ. ಸಾಹಚರ್ಯ ಸಿದ್ಧಾಂತಗಳ ಪ್ರತಿಪಾದನೆಯಂತೆ, ಮಕ್ಕಳು ಬೇರೆಯವರನ್ನು ನೋಡುತ್ತಾ, ಕೇಳುತ್ತಾ, ಬೆಳೆಯುತ್ತಾರೆ. ಆದರೆ ಆ ಬೇರೆ ವ್ಯಕ್ತಿಗಳು ತಮ್ಮದೇ ಆದ ಸಂಸ್ಕೃತಿ, ಸಾಮಾಜಿಕ ನಡವಳಿಕೆಯನ್ನು ಹೊಂದಿದ್ದು, ಮಕ್ಕಳು ಅವರನ್ನು ಮತ್ತು ಅವರೊಡನೆ ಕಂಡುಬಂದ ಸಂಬಂಧಗಳನ್ನು ತಮ್ಮ ಬೌದ್ಧಿಕ ಪ್ರಾತಿನಿಧಿಕಗಳಲ್ಲಿ ದಾಖಲಿಸಿಕೊಂಡಿರುತ್ತಾರೆ. ಇವುಗಳು ಮಕ್ಕಳು ಮುಂದೆ ತಮ್ಮ ಸಾಮಾಜಿಕ ಸಂಬಂಧಗಳನ್ನು ಕಟ್ಟಿಕೊಳ್ಳುವಲ್ಲಿ ಸಹಾಯಮಾಡುತ್ತವೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಒಮ್ಮೆ ರೂಪಿತವಾದ ಸ್ಕೀಮಾಗಳು ವ್ಯಕ್ತಿಯು ಏನನ್ನು ಗಮನಿಸುತ್ತಿದ್ದಾನೆ, ಹಾಗೂ ಹೇಗೆ ಸ್ಮೃತಿಯಲ್ಲಿ ದಾಖಲಿಸಿಕೊಳ್ಳುತ್ತಿದ್ದಾನೆ, ನಂತರದಲ್ಲಿ ನೆನಪು ಮಾಡಿಕೊಂಡು ಅವುಗಳನ್ನು ಹೇಗೆ ಬಳಸಿಕೊಳ್ಳುತ್ತಾನೆ ಈ ಎಲ್ಲಾ ಪ್ರಕ್ರಿಯೆಗಳನ್ನು ತೀವ್ರವಾಗಿ ಪ್ರಭಾವಿಸುತ್ತವೆ. ಈಗಾಗಲೇ ರೂಪಿತವಾಗಿರುವ ಸ್ಕೀಮಾಗಳಂತೆಯೇ ಅಥವಾ ಸುಮಾರಾಗಿ ಅದರಂತೆಯೇ ಇರುವ ಲಕ್ಷಣಗಳನ್ನು ಹೊಂದಿರುವ ಸ್ಕೀಮಾಗಳ ನೆನಪು ಮಾಡಿಕೊಳ್ಳುವುದು ಮತ್ತು ಬಳಸುವುದು ಸುಲಭ. ಆದರೆ, ಆ ರೀತಿಯ ಸಾಮ್ಯತೆ ಇಲ್ಲದ ಸ್ಕೀಮಾಗಳ ಬಳಕೆ ಕಷ್ಟಸಾಧ್ಯವಾಗುವುದು. ಆದರೆ ವಿಕಾಸ ಪ್ರಕ್ರಿಯೆಯಲ್ಲಿ ಹೊಸ ಹೊಸ ಸ್ಕೀಮಾಗಳ ರಚನೆಯಾಗುವುದು ವ್ಯಕ್ತಿಯು ಧನಾತ್ಮಕವಾಗಿ ಬೆಳೆಯುತ್ತಿರುವುದರ ಸಂಕೇತವಾಗಿರುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.

1. ಮಕ್ಕಳ ದೃಷ್ಟಿಕೋನವೆಂದರೆ__________

   ಎ. ಮಕ್ಕಳು ಕಂಡಂತೆ

   ಬಿ. ಮಕ್ಕಳನ್ನು ಕಂಡಂತೆ

   ಸಿ. ಮಕ್ಕಳಿಗೆ ಒಳಿಗಾಗುವಂತೆ

   ಡಿ. ಮಕ್ಕಳ ಕಾಣುವಿಕೆಯಂತೆ

2. ಇತ್ತೀಚಿನ ಸಂಶೋಧನೆಗಳ ಪ್ರಕಾರ ಮಕ್ಕಳು ಕಲಿಯುವುದು __________

   ಎ. ಶಿಕ್ಷಕರು ನೀಡುವ ಉಕ್ತಲೇಖನಗಳಿಂದ

   ಬಿ. ಶಿಕ್ಷಕರು ಮಕ್ಕಳೊಂದಿಗೆ ಅನ್ಯೋನ್ಯತೆಯಿಂದ ಪ್ರಚೋದಿಸುತ್ತಾ ಬೆಂಬಲದಿಂದ

   ಸಿ. ತರಗತಿಯಲ್ಲಿ ಹೆಚ್ಚು ಅಂತರ್‌ಕ್ರಿಯೆ ನಡೆದಾಗ ಕಲಿಯುವರು

   ಡಿ. ಬೋಧನೆ ಹೇಗೇ ಇದ್ದರೂ ಮಕ್ಕಳು ಕಲಿಯುವರು

3. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯಿಂದ ಮತ್ತು ತಪ್ಪಾದುದನ್ನು '**X**' ಚಿಹ್ನೆಯ ಮೂಲಕ ಸೂಚಿಸಿ:

   1. ದೃಷ್ಟಿಕೋನಗಳು ಅನುವಂಶೀಯವಾಗಿರುವುದಿಲ್ಲ, ಅವುಗಳನ್ನು ಗಳಿಸಲಾಗುತ್ತದೆ.
   2. ಪ್ರತ್ಯಕ್ಷಾನುಭೂತಿಯು ಇಂದ್ರಿಯಾನುಭೂತಿಯಿಂದ ಆಗುವುದು.
   3. ವ್ಯಕ್ತಿಯೊಬ್ಬನ ಸಂಜ್ಞಾನಾತ್ಮಕ ಕೌಶಲಗಳನ್ನು ಸಂಸ್ಕೃತಿ ಮತ್ತು ಸಾಮಾಜಿಕ ಹಿನ್ನೆಲೆಗಳು ಪ್ರಭಾವಿಸುವುದಿಲ್ಲ.
   4. ಸಂಸ್ಕೃತಿಗಳು ವೈವಿಧ್ಯವಾಗಿದ್ದರೂ ಬಾಲ್ಯಹಂತದ ಅನುಭವಗಳು ಒಂದೇರೀತಿಯಾಗಿರುತ್ತವೆ.
   5. ಬಾಲ್ಯಹಂತವನ್ನು ವಿದ್ಯುನ್ಮಾನ ಮಾಧ್ಯಮಗಳು ಪ್ರಬಲವಾಗಿ ಪ್ರಭಾವಿಸುತ್ತವೆ.
   6. ಸ್ಕೀಮಾಗಳೆಂದರೆ ಮನೋಚಿತ್ರಣಗಳು.

## 2.2.3.2. ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿ ಮಕ್ಕಳ ಅನುಭವಗಳು ಮತ್ತು ಅವರ ಕಾರ್ಯಗಳು

ಒಂದು ಕ್ಷಣ ಯೋಚನೆ ಮಾಡಿ ಹೇಳಿ, ಯಾವ ಅಂಶಗಳು ನಿಮ್ಮ ಸಂತೋಷವನ್ನು ಮತ್ತು ಆರೋಗ್ಯವನ್ನು ಪ್ರಭಾವಿಸುತ್ತವೆ? ಬೇರೆಯವರೊಡನೆ ಇರುವ ಸಂಬಂಧಗಳೇನಾದರೂ ನಿಮ್ಮ ಮನಸ್ಸಿನಲ್ಲಿ ಬಂತೇನು? ಒಂದು ವೇಳೆ, ಈಗ ನಿಮ್ಮದಾಗಿರುವ ನಿಮ್ಮ ಕುಟುಂಬ, ಕೌಟುಂಬಿಕ ಸಂಬಂಧಗಳು, ಸ್ನೇಹಿತರು, ಸಹ–ಕೆಲಸಗಾರರು, ಶಿಕ್ಷಕರು, ಮಾರ್ಗದರ್ಶಕರು, ಆಟದ ಗೆಳೆಯರು, ನಿಮ್ಮ ತಂಡ ಇವರೆಲ್ಲರನ್ನು ಹೊರತುಪಡಿಸಿದರೆ, ನೀವೇನು ಆಗುವಿರಿ? ಬೆಳೆಸಲು ಮಕ್ಕಳು, ವ್ಯಕ್ತಿಗಳು ನಿಮ್ಮ ಸುತ್ತ ಇಲ್ಲವೆಂದಾದರೆ, ನಿಮ್ಮ ಜೀವನ ಹೇಗಿರುವುದು ಯೋಚಿಸಿ.

ನಿಜವೇನೆಂದರೆ, ಮಾನವನಿಗೆ ಒಬ್ಬಂಟಿಯಾಗಿ ಇರಲು ಆಗುವುದೇ ಇಲ್ಲ. ಏಕೆಂದರೆ ಅವನೊಬ್ಬ ಸಂಘಜೀವಿ. ನಮ್ಮಲ್ಲಿ ಪ್ರತಿಯೊಬ್ಬರೂ ಇನ್ನೊಬ್ಬರೊಡನೆ ಸಂಬಂಧ ಹೊಂದಿರುತ್ತೇವೆ ಮತ್ತು ಇದು ಪರಸ್ಪರ ಕೂಡ. ಗೊತ್ತಿದ್ದೋ ಗೊತ್ತಿಲ್ಲದೆಯೋ, ಒಳ್ಳೆಯದೋ, ಕೆಟ್ಟದ್ದೋ, ನಮ್ಮ ಜೀವನದಲ್ಲಿ ಇತರರ ಪಾತ್ರವಿದ್ದೇ ಇರುತ್ತದೆ. ಈಗ ಸಂಸ್ಕೃತಿಯು ಮಕ್ಕಳ ಅನುಭವಗಳನ್ನು ಮತ್ತು ಅವರ ದೃಷ್ಟಿಕೋನಗಳನ್ನು

ಹೇಗೆ ಪ್ರಭಾವಿಸುವುದೆಂದು ನೋಡೋಣ

## ಸಂಸ್ಕೃತಿ ಮತ್ತು ಮಕ್ಕಳ ದೃಷ್ಟಿಕೋನಗಳು

ಇಡೀ ವಿಶ್ವದ ಯಾವುದೇ ಮೂಲೆಯಲ್ಲಿರುವ ಸಂಸ್ಕೃತಿಯನ್ನು ನೀವು ತೆಗೆದುಕೊಂಡರೂ ಮಕ್ಕಳನ್ನು ಪೋಷಕರು ಬೆಳೆಸುವ ವಿನ್ಯಾಸದಲ್ಲಿ ಅವರವರ ಸಂಸ್ಕೃತಿಯ ಪಾತ್ರವೇ ಮೇಲುಗೈಯಾಗಿರುತ್ತದೆ. ತಂದೆತಾಯಿಯರು ಮಕ್ಕಳನ್ನು ಹೇಗೆ ಬೆಳೆಸುವರು, ಯಾವ ರೀತಿಯಲ್ಲಿ ರಕ್ಷಿಸುವರು, ಮಕ್ಕಳಿಂದ ಅವರು ಏನನ್ನು ಅಪೇಕ್ಷಿಸುವರು, ಮಕ್ಕಳ ಯಾವ ವರ್ತನೆಗಳನ್ನು ಮೆಚ್ಚುವರು ಮತ್ತು ಯಾವುದನ್ನು ಶಿಕ್ಷಿಸುವರು  ಇವೆಲ್ಲಕ್ಕೂ ಮೂಲವೇ ಅವರ ಸಂಸ್ಕೃತಿ. ಸಂಸ್ಕೃತಿಯು ಬೇರೆಯಾದಾಗ ಅವರು ಬಳಸುವ ಭಾಷೆಯೂ ಬದಲಾಗುವುದುಂಟು. ಪ್ರತಿಯೊಂದು ಸಂಸ್ಕೃತಿಗೂ ತನ್ನದೇ ಆದ ಆಳವಾಗಿ ಬೇರೂರಿರುವ ಸಂಪ್ರದಾಯ, ರೀತಿರಿವಾಜುಗಳು ಇದ್ದು, ವ್ಯಕ್ತಿಯೊಬ್ಬನ ವರ್ತನೆಗಳನ್ನು, ಧೋರಣೆಗಳನ್ನು ಮತ್ತು ಜೀವನವನ್ನು ಅದು ರೂಪಿಸುವುದು. ತಮ್ಮ ಸಮುದಾಯದಲ್ಲಿನ ಮತ್ತು ಸಂಸ್ಕೃತಿಯಲ್ಲಿನ ನಂಬಿಕೆಗಳನ್ನು, ವಿಶ್ವಾಸಗಳನ್ನು ತಂದೆತಾಯಿಯರು ಮಕ್ಕಳಿಗೆ ಕಲಿಸುವರು. ಹೀಗೆ ಮಗುವಿಗೆ ದೊರಕುವ ಪರಿಸರವು ಸಂಸ್ಕೃತಿಯಿಂದ ಹೆತ್ತವರ ಮೂಲಕ ಬಂದುದಾಗಿರುತ್ತದೆ.

ಭಾರತದ ಸಂಸ್ಕೃತಿಯನ್ನು ಗಮನಿಸಿ. ಇಲ್ಲ 'ಅತಿಥಿ ದೇವೋ ಭವ' ಎಂಬುದು ಸಂಸ್ಕೃತಿ. ಇಲ್ಲಿ ಮನೆಗೆ ಬರುವವರು ಹೇಳಿ ಕೇಳಿ, ಅನುಮತಿ ತೆಗೆದುಕೊಂಡು ಬರಬೇಕಾಗಿಲ್ಲ. ಮನೆಗೆ ಹಿತೈಷಿಗಳು ಬರುವುದೇ ಹಬ್ಬ. ಹಾಗಾಗಿ ಮಕ್ಕಳು ಇದನ್ನೇ ಪರಿಚಯಿಸಿಕೊಂಡಿರುತ್ತಾರೆ. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಹಾಗಲ್ಲ. 'ನಾನು ನಿಮ್ಮ ಮನೆಗೆ ಯಾವ ದಿನ, ಯಾವ ವೇಳೆ ಬರಬಹುದು' ಎಂದು ಕೇಳಿ ಅನುಮತಿ ಪಡೆದು ಹೋಗಬೇಕು. ಆಪ್ತರಿಗೂ ಇದು ಅನ್ವಯವಾಗುತ್ತದೆ. ಹಾಗಾಗಿ ಅಲ್ಲಿನ ಮಗು ಅದನ್ನೇ ಕಲಿಯುತ್ತದೆ.

ಭಾರತದ ಸಮುದಾಯಗಳ ಸಂಸ್ಕೃತಿಗಳಲ್ಲಿ ತಾಯಿಯೇ ಮಗುವಿನ ಹಿತರಕ್ಷಣೆಗಳನ್ನು ನೋಡಿಕೊಳ್ಳುವವಳು. ಆದರೆ ಕೆಲವು ಕುಟುಂಬಗಳಲ್ಲಿ ಇತರ ದೊಡ್ಡವರು, ಅಥವಾ ಬೇರೆಯವರು, ದೊಡ್ಡಪ್ಪ-ಚಿಕ್ಕಪ್ಪಂದಿರು, ದೊಡ್ಡಮ್ಮ-ಚಿಕ್ಕಮ್ಮಂದಿರು, ಅಣ್ಣ-ಅಕ್ಕಂದಿರು, ಹೀಗೆ ಬಹುಜನರ ಗಮನದಲ್ಲಿ ಮಕ್ಕಳು ಬೆಳೆಯುವರು. ಕೂಡು ಕುಟುಂಬಗಳಲ್ಲಿ ಈ ವ್ಯವಸ್ಥೆಯನ್ನು ನಾವು ನೋಡಬಹುದು. ಹಿರಿಯರ ಮತ್ತು ತಂದೆತಾಯಿಯರ ನಂಬಿಕೆಗಳು, ಚಿಂತನೆಗಳು, ಮೌಲ್ಯಗಳು, ಸಂಪ್ರದಾಯಗಳು, ಮನೆಯಲ್ಲಿನ ರೀತಿ-ರಿವಾಜುಗಳು, ಮನೋಧೋರಣೆಗಳು-ಇತ್ಯಾದಿಗಳು ಮಗುವಿನ ದೃಷ್ಟಿಕೋನಗಳ ವಿಕಾಸಕ್ಕೆ ಕಾರಣವಾಗುತ್ತವೆ.

## ಮಕ್ಕಳ ದೃಷ್ಟಿಕೋನಗಳು ಮತ್ತು ಸಮಾಜದ ಪಾತ್ರ

ಸಮಾಜವು ತನ್ನ ರೀತಿ-ನೀತಿಗಳಿಂದ ತನ್ನ ಸದಸ್ಯರ ನಡವಳಿಕೆಯನ್ನು ನಿಯಂತ್ರಿಸುತ್ತದೆ, ನೈತಿಕತೆಯನ್ನು ನಿರ್ಧರಿಸುತ್ತದೆ. ಪ್ರತಿಯೊಂದು ಸಮಾಜದಲ್ಲಿಯೂ ವ್ಯಕ್ತಿಯೊಬ್ಬ ಉತ್ಪಾದಕನಾಗಿರಬೇಕೆಂಬ ಅಪೇಕ್ಷೆಯಿದೆಯೇ ಹೊರತು ಸಮಾಜಕ್ಕೊಂದು ಹೊರೆಯಾಗುವುದಲ್ಲ. ಸಮುದಾಯ, ಶಾಲೆ, ಹಾಗೂ ಸಮಾಜ ಈ ಎಲ್ಲಾ ಪ್ರಾತಿನಿಧಿಕಗಳ ಮುಖಾಂತರ ಆಗುವ ಸಾಮಾಜೀಕರಣ ಪ್ರಕ್ರಿಯೆಯಿಂದಾಗಿ ವ್ಯಕ್ತಿಯು ಭಾಷೆಯನ್ನು, ನಡವಳಿಕೆಗಳನ್ನು, ಮೌಲ್ಯಗಳನ್ನು, ಧೋರಣೆಗಳನ್ನು ಮತ್ತು ತನ್ನ ಜೀವನ ನಿರ್ವಹಣೆಗಾಗಿ ಅಗತ್ಯವಾಗಿರುವ ಕೌಶಲಗಳನ್ನು ಕಲಿಯುತ್ತಾನೆ. ಅದರ ಜೊತೆಯಲ್ಲಿಯೇ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುವುದನ್ನು ಮತ್ತು ಅದನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದನ್ನು ಕಲಿತಿರುತ್ತಾನೆ. ಏಕೆಂದರೆ ಸಂಸ್ಕೃತಿ ಅನುವಂಶೀಕವಾದುದಲ್ಲ, ಗಳಿಸಿಕೊಳ್ಳವಂತಹದು.

ಬಹುಪಾಲು ಏಷಿಯಾದ ಸಂಸ್ಕೃತಿಯಲ್ಲಿ, ವ್ಯಕ್ತಿ-ವ್ಯಕ್ತಿಗಳ ನಡುವೆ ಇರಬೇಕಾದ ಮೂಲಭೂತ ಸಂಬಂಧಗಳಿಗೆ ಮಹತ್ವವಿದೆ. ಪರಸ್ಪರರಲ್ಲಿರಬೇಕಾದ ಸೌಹಾರ್ದತೆ, ಸಹಕಾರ, ಬೆಂಬಲ ಮತ್ತು ಒಬ್ಬರಿಗೊಬ್ಬರು ಸೇರಿದವರಂತೆ ಇರಬೇಕಾದ ಅವಶ್ಯಕತೆಯನ್ನು ಇಲ್ಲಿ ಗೌರವಿಸಲಾಗುವುದು. ಆದರೆ ಅಮೇರಿಕನ್ನರ ಸಂಸ್ಕೃತಿಯಲ್ಲಿ ವ್ಯಕ್ತಿಯೇ ಮುಖ್ಯವಾಗುತ್ತಾನೆ. ಅವನ ಅವಶ್ಯಕತೆಗಳು, ಬೇಡಿಕೆಗಳು, ಸೌಲಭ್ಯಗಳು ಅತಿ ಮುಖ್ಯವಾಗುತ್ತವೆ. ಇಲ್ಲಿ

ಇತರರೊಡನೆ ಇರಬೇಕಾದ ಯಾವ ಸಂಬಂಧಗಳನ್ನು ಅವರು ಗುರುತಿಸುವುದೂ ಇಲ್ಲ, ಗೌರವಿಸುವುದೂ ಇಲ್ಲ. ಆದ್ದರಿಂದಲೇ ಬ್ರೌನ್(1999) ರವರು ಹೇಳುವಂತೆ, "ಮಗುವೊಂದರ ಚಿಂತನೆ, ಆಲೋಚನೆಗಳು ಪರಿಸರದಿಂದಾಗಲೀ ಅಥವಾ ಮಾನಸಿಕವಾಗಿಯಾಗಲೀ ಮೂಡುವುದಕ್ಕಿಂತ ಸುತ್ತಮುತ್ತಲ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಾಮಾಜಿಕ ಸಂಬಂಧದ ಫಲಶ್ರುತಿಯಾಗಿರುತ್ತದೆ". ಬಾಲ್ಯಹಂತವು ಸಾರ್ವತ್ರಿಕವಾಗಿ ಅಥವಾ ಸಹಜವಾಗಿಯಲ್ಲದೆ ಸಾಮಾಜಿಕ ಸನ್ನಿವೇಶಗಳು ಮತ್ತು ಸಂಸ್ಕೃತಿಯೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ಮಕ್ಕಳನ್ನು ವಯಸ್ಕರಿಗಿಂತ ಭಿನ್ನವಾಗಿಯೇ ನೋಡಲಾಗುತ್ತದೆ. ಮಕ್ಕಳಲ್ಲಿ ಯಾವುದೇ ಕೊರತೆಯಿರುವುದಿಲ್ಲ ಬದಲಿಗೆ, ದೊಡ್ಡವರು ಮಕ್ಕಳನ್ನು ನೋಡುವ ದೃಷ್ಟಿಕೋನ ಸರಿಯಾಗಿರಬೇಕು. ಅವರನ್ನು ಅವರದೇ ಸಂದರ್ಭದಲ್ಲಿ ನೋಡಬೇಕು. ಇದು ಸಾಮಾನ್ಯವಾಗಿ ಹೇಳುವ ಸೈದ್ಧಾಂತಿಕ ವಿಚಾರಕ್ಕೆ ವಿರೋಧವಾಗಿರುತ್ತದೆ.

ಬಾಲ್ಯಹಂತವನ್ನು ವಿವಿಧ ಸಂಸ್ಕೃತಿ ಮತ್ತು ಸಮಾಜಗಳಲ್ಲಿ ವಿವಿಧರೀತಿಯಿಂದ ನೋಡಲಾಗುತ್ತದೆ. ಅಷ್ಟೇ ಅಲ್ಲದೆ, ಬಾಲ್ಯಹಂತದ ಮೇಲೆ ಸಾಕಷ್ಟು ವೈವಿಧ್ಯಮಯವಾದ ಪ್ರತ್ಯಯಗಳ ಪ್ರಭಾವಗಳಿರುತ್ತವೆ, ಅವುಗಳಲ್ಲಿ ಕೆಲವನ್ನು ಹೀಗೆ ಗುರುತಿಸಬಹುದು, ಲಿಂಗ, ಜನಾಂಗ, ಸಾಮಾಜಿಕ-ಆರ್ಥಿಕ ಸ್ಥಿತಿ ಇತ್ಯಾದಿ.

**ವ್ಯಕ್ತಿಗತ ಸಮಾಜ ಮತ್ತು ಸಮಷ್ಟಿಗತ ಸಮಾಜ**

ವ್ಯಕ್ತಿಗತ ಸಮಾಜದಲ್ಲಿ ವ್ಯಕ್ತಿಯು ಕೇವಲ ತನ್ನನ್ನೇ ಮುಖ್ಯವೆಂದುಕೊಳ್ಳುತ್ತಾನೆ. ಬೇರೆ ಇತರರಿಗಿಂತ ತನ್ನ ಬೇಡಿಕೆಗಳು, ಅಗತ್ಯಗಳ ಬಗ್ಗೆ ಹೆಚ್ಚು ಕಾಳಜಿವಹಿಸುತ್ತಾನೆ. ಆದರೆ ಸಮಷ್ಟಿಗತ ಸಮಾಜದಲ್ಲಿ ವ್ಯಕ್ತಿಯು ತನ್ನ ಅಸ್ತಿತ್ವವನ್ನು ತನ್ನ ಗುಂಪಿನೊಡನೆ/ಸಮೂಹದೊಡನೆ ಗುರುತಿಸಿಕೊಳ್ಳುತ್ತಾನೆ. 'ಸಮೂಹದ ಗುರಿಯೇ ತನ್ನ ಗುರಿ' ಎಂದು ಭಾವಿಸುತ್ತಾನೆ. ತನ್ನ ಸುಖ-ಸಂತೋಷಕ್ಕಿಂತ ತಾನು ಸೇರಿರುವ ಗುಂಪಿನ ಶ್ರೇಯಸ್ಸು, ಅಲ್ಲಿರುವವರ ಸುಖ-ಸಂತೋಷಗಳು ಮುಖ್ಯವೆಂದು ಭಾವಿಸುತ್ತಾನೆ. ವ್ಯಕ್ತಿ ಸಂಸ್ಕೃತಿಗೆ ತಕ್ಕಂತೆ ಸ್ವೀಕೃತನಾಗುತ್ತಾನೆ. ಅಂದರೆ, ವ್ಯಕ್ತಿಗತ ಸಮಾಜವು ವ್ಯಕ್ತಿಯನ್ನು ಗೌರವಿಸಿದರೆ, ಸಮಷ್ಟಿಗತ ಸಮಾಜವು ವ್ಯಕ್ತಿ-ವ್ಯಕ್ತಿಗಳ ನಡುವಿನ ಬಾಂಧವ್ಯವನ್ನು ಬೆಂಬಲಿಸುತ್ತದೆ. ಹಾಗಾಗಿ ವ್ಯಕ್ತಿಗತ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಆಯ್ಕೆ, ಅವಕಾಶ ಮತ್ತು ಗುರಿಗಳು ಇರುತ್ತವೆ. ಆದರೆ ಸಮಷ್ಟಿಗತ ಸಮಾಜದಲ್ಲಿ ಪರಸ್ಪರ ಅಂತರಸಂಬಂಧವಿರುವ ಅವಲಂಬನೆ ಪ್ರಮುಖವಾಗುತ್ತದೆ. ಸಾಮಾಜಿಕ ಸೌಹಾರ್ದತೆ, ಇನ್ನೊಬ್ಬರಿಗಾಗಿ ತೋರಬೇಕಾಗಿರುವ ಮುಲಾಜುಗಳು, ಅಲ್ಲದೆ ಸಹಕಾರ, ಸಹ-ಬಾಳ್ವೆ ಇವುಗಳು ಇಲ್ಲಿನ ಮೌಲ್ಯಗಳಾಗಿರುತ್ತವೆ. ಆದರೆ ಬಹಳಷ್ಟು ಸಮಾಜ ಮತ್ತು ಸಂಸ್ಕೃತಿಗಳಲ್ಲಿ ಇವೆರಡೂ ಲಕ್ಷಣಗಳ ಒಂದು ಸುಂದರವಾದ ಮಿಶ್ರಣವನ್ನು ನೋಡಬಹುದಾಗಿದೆ. ಅಮೇರಿಕನ್ನರು ವ್ಯಕ್ತಿಗತ ಸಮಾಜವನ್ನು ಪ್ರಬಲವಾಗಿ ಬೆಂಬಲಿಸಿದರೆ, ಇನ್ನುಳಿದ ಪಾಶ್ಚಿಮಾತ್ಯ ಯುರೋಪಿಯನ್ ರಾಷ್ಟ್ರಗಳು ಸಮಷ್ಟಿಗತ ಸಮಾಜದೆಡೆಗೆ ಒಲವನ್ನು ತೋರುತ್ತವೆ. ನಮ್ಮ ಭಾರತದಲ್ಲಿ ಎಂತಹ ವ್ಯವಸ್ಥೆಯಿದೆಯೆಂದು ನಿಮಗನಿಸಿದೆ?

ಸಮಾಜಶಾಸ್ತ್ರದ ಅಧ್ಯಯನಗಳಲ್ಲಿ ಕಂಡುಬಂದಿರುವಂತೆ ಹೊರದೇಶದಿಂದ ವಲಸಿಗರಾಗಿ ಬಂದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನೆಲೆಸಿರುವವರು ಶಿಕ್ಷಣವನ್ನು ತಮ್ಮ ಜೀವನೋದ್ಧಾರ ಅಸ್ತ್ರವೆಂದೇ ಪರಿಗಣಿಸಿದ್ದಾರೆ. ಅವರ ದೇಶದಲ್ಲಿ ಒಳ್ಳೆಯ ಶಿಕ್ಷಣ ಮತ್ತು ಒಳ್ಳೆಯ ವೃತ್ತಿಗಳ ಅವಕಾಶವಿಲ್ಲದಿದ್ದರಿಂದ ಹೊರದೇಶಗಳಿಗೆ ತಾವು ಬರಬೇಕಾಯಿತು ಎಂದು ಅವರು ತಮ್ಮ ಮಕ್ಕಳಿಗೆ ಹೇಳುತ್ತಲೇ, ತಮ್ಮ ಸಂಸ್ಕೃತಿಯ ಲಕ್ಷಣಗಳನ್ನು, ಮೌಲ್ಯಗಳನ್ನು ಉಳಿಸಿಕೊಂಡು ಕೆಲವು ಬದಲಾವಣೆಗಳನ್ನು ಮಾಡಿಕೊಂಡಿರುತ್ತಾರೆ. ಇಂತಹವರ ಮಕ್ಕಳು ಚೆನ್ನಾಗಿ ಈ ಅವಕಾಶವನ್ನು ಬಳಸಿಕೊಂಡು ತಮ್ಮ ಜೊತೆಯವರಿಗಿಂತ ಹಾಗೂ ಅವರ ದೇಶದಲ್ಲಿನ ಅವರ ಓರಿಗೆಯವರೆಲ್ಲರಿಗಿಂತ ಹೆಚ್ಚು ಸಾಧನೆಗಳನ್ನು ಮಾಡುತ್ತಾರೆ.

ಕೆಲವು ಸಮುದಾಯ ಮತ್ತು ಸಂಸ್ಕೃತಿಯಲ್ಲಿ ಸಮಯಪಾಲನೆಗೆ ಹೆಚ್ಚು ಮಹತ್ವವನ್ನು ಕೊಡಲಾಗುತ್ತದೆ. ಇನ್ನಿತರ ಜೀವನಕ್ರಮಗಳಿಗಿಂತ ಇವರ ಜೀವನಗತಿಯು ಸಾಮಾನ್ಯವಾಗಿ ವೇಗವಾಗಿರುತ್ತದೆ. ಅದೇ ರೀತಿ ಇನ್ನಿತರ ಸಂಸ್ಕೃತಿಯಲ್ಲಿ ಒಂದು ರೀತಿಯ "ನಿಧಾನವೇ ಪ್ರಧಾನ" ಎಂಬ ಧೋರಣೆಯಂತೆ, ಎಲ್ಲವನ್ನು

ಬಹಳ ಆರಾಮವಾಗಿ ತೆಗೆದುಕೊಳ್ಳುವುದುಂಟು. ಇವರ ಜೀವನವಿಡೀ ನಿಧಾನಗತಿಯಿಂದ ಸಾಗುವುದು. ಸಾಮಾಜಿಕ ಪಾತ್ರಗಳು, ಮತ್ತು ಸಾಮಾಜಿಕ ನಿಯಮಗಳು ಕೂಡ ವ್ಯಕ್ತಿಯನ್ನು ಮತ್ತು ಅವನ ವರ್ತನೆಯನ್ನು ನಿಯಂತ್ರಿಸುತ್ತವೆ. ಸಮಾಜದ ಕಟ್ಟುಪಾಡುಗಳು ಮತ್ತು ಸಮಾಜದ ನಿರೀಕ್ಷೆಗಳು ವ್ಯಕ್ತಿಯನ್ನು ನಿರ್ದಿಷ್ಟ ರೀತಿಯಲ್ಲಿ ನಡೆಯುವಂತೆ ಮಾಡುತ್ತವೆ. ಉದಾಹರಣೆಗೆ, ಭಾರತದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳು ಒಂದು ವಯೋಮಾನದ ನಂತರ ಒಟ್ಟೊಟ್ಟಿಗೆ ಕುಳಿತುಕೊಳ್ಳುವುದಾಗಲೀ ಒಟ್ಟಿಗೆ ಇರುವುದಾಗಲೀ ಸಾಧ್ಯವಿಲ್ಲ. ವ್ಯಕ್ತಿಯು ಯಾವ ಹಿನ್ನೆಲೆಯಿಂದ ಬಂದಿದ್ದರೂ ಸಾಮಾಜಿಕ ಕಟ್ಟುಪಾಡುಗಳು ಎಲ್ಲರಿಗೂ ಸರ್ವಸಮನಾಗಿರುತ್ತವೆ. ಅದೇ ರೀತಿ ಸಾಮಾಜಿಕ ಪಾತ್ರಗಳೆಂದರೆ, ಶಿಕ್ಷಕರು, ಪೋಷಕರು, ಸಂಸ್ಥೆಯ ಮುಖ್ಯಸ್ಥರು ಮತ್ತು ವಿದ್ಯಾರ್ಥಿಗಳು –ಇವರಿಗೂ ಕೂಡ ಒಂದು ಸಾಮಾಜಿಕ ಸಂಹಿತೆ ಇರುತ್ತದೆ. ಇವರುಗಳು ಅದರಂತೆಯೇ ನಡೆದುಕೊಳ್ಳಬೇಕೆಂಬುದು ಸಮಾಜದ ನಿರೀಕ್ಷೆ ಮತ್ತು ಅಪೇಕ್ಷೆ.

ಸಮಾಜದಲ್ಲಿ ವ್ಯಕ್ತಿಯ ಕಾರ್ಯ ಮತ್ತು ಚಟುವಟಿಕೆಗಳು ನಾಟಕವೊಂದರಲ್ಲಿನ ಪಾತ್ರದಂತೆ ಕಾಣಬರುತ್ತವೆ. ರಂಗಮಂದಿರದಲ್ಲಾದರೋ ವೇದಿಕೆಯು ಪಾತ್ರಗಳನ್ನು ಸೃಷ್ಟಿಸಿದರೆ, ಸಂಸ್ಕೃತಿಯು ವ್ಯಕ್ತಿಯ ನಡವಳಿಕೆಗಳನ್ನು ವರ್ತನೆಗಳನ್ನು ತನ್ನ ಪೂರ್ವನಿಶ್ಚಿತ ಸಾಮಾಜಿಕ ಕಟ್ಟುಪಾಡುಗಳಿಗೆ ತಕ್ಕಂತೆ, ರೀತಿ–ನೀತಿ–ನಿಯಮಾವಳಿಗಳಿಗೆ ತಕ್ಕಂತೆ ನಿಯಂತ್ರಿಸುತ್ತದೆ. ಉದಾಹರಣೆಗೆ ಶಾಲೆಗೆ ಸೇರಿದ ನಂತರ ಎಷ್ಟೋ ನೀತಿ, ನಿಯಮಗಳಿಗೆ ತಕ್ಕಂತೆ ವರ್ತಿಸುವುದನ್ನು ಮಕ್ಕಳು ಕಲಿಯುತ್ತಾರೆ. ನಿಶ್ಯಬ್ದವಾಗಿರುವುದು, ಏನನ್ನಾದರೂ ಹೇಳಬೇಕೆನಿಸಿದಾಗ ಮೊದಲು ಕೈ ಎತ್ತಿ ಶಿಕ್ಷಕರ ಅನುಮತಿಗಾಗಿ ಕಾಯುವುದು, ನಂತರ ಅವರು ಅವಕಾಶ ನೀಡಿದಾಗ ಹೇಳುವುದು ಇತ್ಯಾದಿ. ಆದ್ದರಿಂದಲೇ ಮಕ್ಕಳನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ಅವರ ದೃಷ್ಟಿಕೋನಗಳನ್ನು ತಿಳಿಯಬೇಕೆಂದರೆ, ಅವರ ಹಿನ್ನೆಲೆಯನ್ನು, ಸಂಸ್ಕೃತಿಯನ್ನು ಮತ್ತು ಅವರ ಸಮಾಜವನ್ನು ಅರಿಯುವುದು ಅತ್ಯಗತ್ಯವಾಗಿರುತ್ತದೆ.

ಹಲವಾರು ಸಂಶೋಧನೆಗಳಿಂದ ತಿಳಿದುಬಂದಿರುವ ಒಂದು ವಿಚಾರವೆಂದರೆ, ಸಾಮಾನ್ಯವಾಗಿ ಅಮೇರಿಕಾ ದೇಶದ ಮಕ್ಕಳು ಸ್ವಲ್ಪ ಹೆಚ್ಚು ಕ್ರೂರತೆಯನ್ನು ವ್ಯಕ್ತಪಡಿಸುತ್ತಾರೆ. ಅವರ ಉಗ್ರತೆ, ಆಕ್ರಮಣಕಾರಿತ್ವ ಅಲ್ಲಿ ಸರ್ವೇಸಾಮಾನ್ಯವಾದ ವಿಚಾರವಾಗಿಬಿಟ್ಟಿದೆ. ಅಲ್ಲಿನ ಸಮೂಹಮಾಧ್ಯಮದ ಪ್ರಭಾವದಿಂದ ಬೇಕಾದಷ್ಟು ವಿಚ್ಛಿದ್ರಕಾರಿ ಘಟನೆಗಳನ್ನು, ಆಕ್ರಮಣಗಳನ್ನು ಮತ್ತು ಕೊಲೆ–ಹತ್ಯೆಗಳನ್ನು ನೋಡಿದ್ದರ ಪರಿಣಾಮವಾಗಿ ಅವರು ಅದನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೆ. ಹಾಗಾಗಿ ಶಾಲೆಗಳಲ್ಲಿ ಮಕ್ಕಳು ತಮ್ಮ ಸಹಪಾಠಿಗಳೊಂದಿಗೆ ಜಗಳವಾಡುವಾಗ ಪಿಸ್ತೂಲು, ಗನ್ನುಗಳನ್ನು ಕೂಡ ಬಳಸಿ ಏನೆಂದು ಅರ್ಥವಾಗುವುದಕ್ಕೂ ಮುಂಚೆ ಕೊಲೆಯನ್ನೇ ಮಾಡಿರುವ ಘಟನೆಗಳೂ ಕೂಡ ವರದಿಯಾಗಿವೆ. ಅಮೇರಿಕಾ ಮತ್ತು ಯೂರೋಪಿಯನ್ ಸಮಾಜದಲ್ಲಿ ಅವರ ಸಂಸ್ಕೃತಿಯಂತೆ ಅಲ್ಲಿನ ವ್ಯಕ್ತಿಗಳು ವ್ಯಕ್ತಿದೃಷ್ಟಿಗೆ ಹೆಚ್ಚು ಬೆಲೆಕೊಡುತ್ತಾರೆ. ಏಕೆಂದರೆ ಅದು ವ್ಯಕ್ತಿಗತ ಸಂಸ್ಕೃತಿ ಮತ್ತು ವ್ಯಕ್ತಿಗತ ಸಮಾಜ. ಹಾಗಾಗಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆ. ಉದಾಹರಣೆಗೆ ಅವರಲ್ಲಿನ ಸಾಹಿತ್ಯವನ್ನೇ ತೆಗೆದುಕೊಳ್ಳಿ, ಇಲಿಯಡ್‌ನಿಂದ ಹಿಡಿದು, ಹಕ್ಲೀಬೆರ್ರೀ ಫಿನ್‌ರವರ ಸಾಹಸಮಯ ಕಥೆಗಳವರೆಗೆ, ಅಲ್ಲಿ ಬರುವ ಕಥಾನಾಯಕರುಗಳು ಸ್ವಾವಲಂಬಿಯಾದ, ಸ್ವತಂತ್ರರಾದ ವ್ಯಕ್ತಿಗಳಾಗಿದ್ದು, ತಮಗೆ ಬೇಕೆನಿಸಿದಾಗ ಬೇಕೆನಿಸಿದ್ದನ್ನು ಪಡೆಯಲು ಮನೆಯನ್ನು ತೊರೆದು ಹೊರಟೇ ಬಿಡುತ್ತಾರೆ. ಅವರನ್ನು ಯಾವ ಸೆಳತವಾಗಲೀ, ಕರ್ತವ್ಯವಾಗಲೀ ತಡೆದು ನಿಲ್ಲಿಸಲು ಸಾಧ್ಯವಿಲ್ಲ. ಇತ್ಯಾದಿ ಅಂಶಗಳನ್ನು ತಜ್ಞರು ಗುರುತಿಸಿದ್ದಾರೆ. ಹೀಗೆ ವ್ಯಕ್ತಿಗತ ಸಮಾಜದಲ್ಲಿ ಮತ್ತು ವ್ಯಕ್ತಿಗತ ಸಂಸ್ಕೃತಿಯಲ್ಲಿ ವ್ಯಕ್ತಿಯ ವರ್ತನೆಗಳು ಮತ್ತು ನಡೆವಳಿಕೆಗಳು ಆ ವ್ಯಕ್ತಿಯ ಸ್ವಂತದ ಗುರಿಗಳಿಂದ ರೂಪಿತವಾಗುತ್ತವೆಯೇ ಹೊರತು ಸಾಮಾಜಿಕ ಗುರಿ ಅಥವಾ ಉದ್ದೇಶಗಳಿಂದ ಅಲ್ಲ. ಅಂದರೆ, ತಮ್ಮ ಕುಟುಂಬದ ಗುರಿ, ಸಮುದಾಯದ ಏಳಿಗೆ, ಅಥವಾ ಸಾಮಾನ್ಯರ ಅನುಕೂಲಗಳು – ಇವು ಯಾವುವೂ ಅವರ ವರ್ತನೆಗೆ ಕಾರಣವಾಗುವುದಿಲ್ಲ.

ಸಮಷ್ಟಿಗತ ಸಂಸ್ಕೃತಿಯಲ್ಲಿ ಕುಟುಂಬಕ್ಕೆ ನಿಯತ್ತಾಗಿರಬೇಕೆಂದು ವ್ಯಕ್ತಿಯನ್ನು ನಿಯಂತ್ರಿಸಲಾಗುವುದು. ಹಾಗೆ, ಒಂದು ಗುಂಪಿನ ನಿಯಮಗಳಿಗೆ ಬದ್ಧರಾಗಿರಬೇಕಾಗುತ್ತದೆ. ತನ್ನದೇ ಆದ ಗುಂಪಿನ ಸದಸ್ಯರ

ನಡುವೆ ಸೌಹಾರ್ದಯುತವಾದ ಸಂಬಂಧ, ಪರಸ್ಪರ ಅರ್ಥಮಾಡಿಕೊಳ್ಳುವಿಕೆ, ಮತ್ತು ಒಬ್ಬರಿಗೊಬ್ಬರು ಬೆಂಬಲನೀಡುವುದು ಇವೆಲ್ಲವೂ ಷರತ್ತುಬದ್ಧ ನಿಯಮಗಳಾಗಿರುತ್ತವೆ. ಆಫ್ರಿಕಾದ ಜನರಲ್ಲಿ, ಏಶಿಯಾದಲ್ಲಿ, ಮತ್ತು ಭಾರತದಲ್ಲಿ ಹಾಗೂ ಲ್ಯಾಟಿನ್ ಅಮೇರಿಕಾದಲ್ಲಿ ಸಮಷ್ಟಿಗತ ಸಾಮಾಜಿಕ ವ್ಯವಸ್ಥೆ ಇದೆ. ಇಲ್ಲಿ ತನ್ನ ಜನರಿಗಾಗಿ ತ್ಯಾಗ ಮಾಡುವ, ಪ್ರಾಣವನ್ನೇ ಒತ್ತೆ ಇಟ್ಟು ಅವರನ್ನು ಕಾಪಾಡುವ ವ್ಯಕ್ತಿಯು ಪರಮಪೂಜ್ಯನಾದ ನಾಯಕನಾಗುತ್ತಾನೆ. ಇತರ ಎಲ್ಲರಿಗೂ ಅವನು ಮಾದರಿಯಾಗುತ್ತಾನೆ. ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಆತನ ಗುಂಪಿನಿಂದ ಗುರುತಿಸಲಾಗುವುದು. ಎಲ್ಲರೊಡನೊಂದಾಗುವುದು ಈ ಸಂಸ್ಕೃತಿಯ ಮೇರು ಲಕ್ಷಣವಾಗಿರುತ್ತದೆ. ಕುಟುಂಬಕ್ಕಾಗಿ ವ್ಯಕ್ತಿ, ಸಮುದಾಯಕ್ಕಾಗಿ ಕುಟುಂಬ, ನಗರಕ್ಕಾಗಿ ಸಮುದಾಯ, ದೇಶಕ್ಕಾಗಿ ನಗರವನ್ನು ಬಿಟ್ಟುಕೊಡಬೇಕು ಎಂಬ ಸುಭಾಷಿತ ನಮ್ಮಲ್ಲಿ ಜನಪ್ರಿಯವಾಗಿದೆ.

ಭಾರತದಲ್ಲಿ ಧರ್ಮ ಮತ್ತು ಧಾರ್ಮಿಕ ಭಾವನೆಗಳು ಜೀವನದ ಬೇರೆಲ್ಲಾ ಸಂದರ್ಭಗಳನ್ನು, ಸನ್ನಿವೇಶಗಳನ್ನು ನಿಯಂತ್ರಿಸುತ್ತದೆ ಮತ್ತು ಪ್ರತಿದಿನದ ದೈನಂದಿನ ಚಟುವಟಿಕೆಗಳಿಂದ ಹಿಡಿದು, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಇತ್ಯಾದಿ ಎಲ್ಲ ಕ್ಷೇತ್ರಗಳ ಮೇಲೆ ಧರ್ಮದ ಪ್ರಬಲವಾದ ಹಿಡಿತವಿದೆ ಎಂಬುದು ಜನಸಂಖ್ಯಾಶಾಸ್ತ್ರದ ಸಂಶೋಧನೆಗಳಲ್ಲಿ ಕಂಡುಬಂದ ಒಂದು ವಿಚಾರ. ಏಶಿಯನ್ನರ ಒಂದು ಸ್ವಭಾವವೆಂದರೆ, ಯಾವುದು ಏಕರೂಪತೆಯೊಂದಿಗೆ ಹೊಂದಿಕೊಳ್ಳುವುದೋ ಅದು ಸಹಜವಾಗಿ ಸಾಮರಸ್ಯವನ್ನು ತರುವುದು. ಆದ್ದರಿಂದ ಒಂದೇ ರೀತಿಯ ಘಟನೆಗಳು, ಜನರು, ಆಚಾರ–ವಿಚಾರ, ಸನ್ನಿವೇಶ ಸಂದರ್ಭಗಳು ಒಂದು ಸಾಮಾನ್ಯ ಅಂಶದಿಂದ ಸಾಮ್ಯತೆಯನ್ನು ಹೊಂದಿದ್ದರೆ, ಅವುಗಳು ಸಹಜವಾಗಿ ಚಲನಶೀಲವಾಗಿರುತ್ತವೆ. ಈ ನಿಯಮವನ್ನು ಪಾಶ್ಚಿಮಾತ್ಯರು ಅಷ್ಟಾಗಿ ಪಾಲಿಸುವುದಿಲ್ಲ. ಒಟ್ಟಿನಲ್ಲಿ ಮಕ್ಕಳು ಚಟುವಟಿಕೆಗಳ ಮೂಲಕ, ಅನುಭವಗಳ ಮೂಲಕ ಮತ್ತು ಸಕ್ರಿಯವಾಗಿ ಭಾಗವಹಿಸುವ ಕ್ರಿಯೆಗಳ ಮೂಲಕ ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಹಾಗೆಯೇ ತಮ್ಮಲ್ಲಿ ಸ್ಕೀಮಾಗಳ ರಚನೆಯನ್ನು ಮಾಡಿಕೊಳ್ಳುತ್ತಾರೆ ಮತ್ತು ಈ ಸ್ಕೀಮಾಗಳು ಪದೇ ಪದೇ ಅನುಭವಗಳನ್ನು ಆಧರಿಸಿ ಬದಲಾವಣೆಯಾಗುತ್ತವೆ ಮತ್ತು ವ್ಯಕ್ತಿಯಲ್ಲಿ ಸಮತೋಲನವನ್ನು ತರುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.

1. ಭಾಷಾ ವಿಕಾಸವು ನಡೆಯುವ ಮಾರ್ಗ____________

   ಎ. ಅನುವಂಶೀಯತೆ

   ಬಿ. ಸಮಾಜ

   ಸಿ. ಸಾಂಸ್ಕೃತಿಕ ಪ್ರತ್ಯಯಗಳು

   ಡಿ. ಪರಿಸರ

2. ಏಶಿಯಾದ ಸಂಸ್ಕೃತಿಗಳಲ್ಲಿ ಪೋಷಿಸುವ ಅಂಶ____________

   ಎ. ವೈಯಕ್ತಿಕತೆ

   ಬಿ. ಸಾಂಘಿಕತೆ

   ಸಿ. ಪ್ರತ್ಯೇಕತೆ

   ಡಿ. ಗುಂಪಿನ ಸ್ವಭಾವ

ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

1. ಬಾಲ್ಯವು ಸಾಮಾಜಿಕ ಸನ್ನಿವೇಶಗಳಿಗೆ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳಿಗೆ ಜೋಡಣೆಯಾಗಿರುತ್ತದೆ.
2. ವ್ಯಕ್ತಿಗತ ಸಮಾಜದಲ್ಲಿ ವ್ಯಕ್ತಿಗಳು ಸಮೂಹದೊಂದಿಗೆ ಯಾವಾಗಲೂ ಹೊಂದಿಕೊಂಡಿರುತ್ತಾರೆ.
3. ಸಮಷ್ಟಿಗತ ಸಮಾಜವು ಪರಸ್ಪರ ಅವಲಂಬನೆಯಿಂದಿರುವುದಕ್ಕೆ ಹೆಚ್ಚು ಬೆಲೆಯನ್ನು ಕೊಡುತ್ತದೆ.
4. ಸಾಮಾಜಿಕ ಸೌಹಾರ್ದತೆ, ಇತರರಿಗಾಗಿ ತೋರುವ ದಾಕ್ಷಿಣ್ಯ, ಮತ್ತು ಎಲ್ಲರೊಂದಿಗಿನ ಸಾಹಚರ್ಯೆ– ಇವುಗಳು ಸಮಷ್ಟಿಗತಸಮಾಜದ ಪ್ರಮುಖ ಅಂಶಗಳು.
5. ಹಲವಾರು ಸಂಶೋಧನಾ ವರದಿಗಳ ಪ್ರಕಾರ ಅಮೇರಿಕಾ ದೇಶವು ಅತ್ಯಂತ ಆಕ್ರಮಣಕಾರಿ ಸಮಾಜಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದು.
6. ಅಮೇರಿಕಾ ಮತ್ತು ಯುರೋಪಿಯನ್ ರಾಷ್ಟ್ರಗಳು ವ್ಯಕ್ತಿ ಮತ್ತು ವ್ಯಕ್ತಿಯ ಸ್ವಾತಂತ್ರ್ಯವನ್ನು ಬೆಂಬಲಿಸುತ್ತವೆ.

## 2.2.4. ಸಾರಾಂಶಿಸೋಣ

- ಯಾವುದೇ ಸಂಸ್ಕೃತಿಯಿರಲಿ, ಸಮಾಜವಿರಲಿ, ಅಲ್ಲಿ ಮಾನವನ ಜೀವನದಲ್ಲಿ ಬಾಲ್ಯವು ಇದ್ದೇ ಇರುತ್ತದೆ. ಆದರೆ ಮಕ್ಕಳ ದೃಷ್ಟಿಕೋನಗಳು ಸಂಸ್ಕೃತಿ ಮತ್ತು ಸಮಾಜಗಳು ಬೇರೆಯಾದಂತೆ ಬೇರೆ ಬೇರೆಯಾಗಿರುತ್ತವೆ. ಅವರ ದೃಷ್ಟಿಕೋನಗಳಿಗೆ ಬಹುಮುಖವಿರುತ್ತದೆ.
- ಯಾವುದೇ ವಸ್ತುವಿರಲಿ, ಘಟನೆಯಿರಲಿ, ವ್ಯಕ್ತಿಗಳಿರಲಿ, ಅವುಗಳನ್ನು ವ್ಯಕ್ತಿಯು ಹೇಗೆ ನೋಡುತ್ತಾನೆ, ಪರಿಗಣಿಸುತ್ತಾನೆ ಮತ್ತು ಅರ್ಥಮಾಡಿಕೊಳ್ಳುತ್ತಾನೆ ಎಂಬುದೇ ದೃಷ್ಟಿಕೋನವೆಂದಾಗುತ್ತದೆ.
- ದೃಷ್ಟಿಕೋನಗಳು ವೈಯುಕ್ತಿಕವಾಗಿರುತ್ತವೆ. ಇವುಗಳು ಅನುವಂಶೀಯವಾಗಿರುವುದಿಲ್ಲ ಬದಲಿಗೆ ಗಳಿಸಿಕೊಂಡದ್ದಾಗಿರುತ್ತವೆ.
- ಸಾಮಾಜಿಕ ಸಂರಚನಾ ಸಿದ್ಧಾಂತವು ಮಕ್ಕಳು ಹೇಗೆ ತಮ್ಮ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುತ್ತಾರೆ, ಯಾರಿಂದ, ಹೇಗೆ ಮತ್ತು ಏಕೆ ಬೆಳೆಸಿಕೊಳ್ಳುತ್ತಾರೆ ಎಂಬ ವಿಚಾರಗಳನ್ನು ಹಾಗೆಯೇ ಮಕ್ಕಳು ತಮ್ಮ ಜೀವನವನ್ನು ಹೇಗೆ ಕಟ್ಟಿಕೊಳ್ಳುತ್ತಾರೆ ಎಂಬ ವಿಚಾರವನ್ನು ಕುರಿತು ವಿವರಿಸುತ್ತದೆ.
- ಜೇಮ್ಸ್ ಮತ್ತು ಜೇಮ್ಸ್ (2008) ಸಾಮಾಜಿಕ ಸಂರಚನಾವಾದವನ್ನು "ಮಾನವರು ತಮ್ಮ ದೈನಂದಿನ ಚಟುವಟಿಕೆಗಳಿಂದ, ಅಂತರ್‌ಕ್ರಿಯೆಗಳಿಂದ ಮತ್ತು ಚರ್ಚೆ, ವಿಮರ್ಶೆಗಳಿಂದ ವಾಸ್ತವದ ಅನ್ವೇಷಣೆಯನ್ನು ಮಾಡುವುದರ ಮೂಲಕ ಕಟ್ಟಿಕೊಳ್ಳುವ ಸೈದ್ಧಾಂತಿಕ ನಿಲುವುಗಳೆಂದು" ವ್ಯಾಖ್ಯಾನಿಸಿದ್ದಾರೆ.
- ಮಗುವೊಂದನ್ನು ಮುಂದೆ ಒಬ್ಬ ಕರಾರುವಾಕ್ಕಾದ, ನಿಖರವಾದ ಮನುಷ್ಯನಾಗುವ ಜೀವಿಯೆಂದು ಪರಿಗಣಿಸಲಾಗುತ್ತದೆ.
- ಪಿಯಾಷೆ ಹೇಳುವ ಪ್ರಕಾರ ಸಂಜ್ಞಾನಾತ್ಮಕ ವಿಕಾಸವು ಸ್ಕೀಮಾ ರಚನೆಗಳನ್ನು ಒಳಗೊಂಡಿರುತ್ತದೆ. ಸ್ಕೀಮಾಗಳು ಅಥವಾ ಆಕೃತಿ ಕಲ್ಪಗಳು ವ್ಯಕ್ತಿಯ ಗತಿಸಿಹೋದ ಅನುಭವಗಳನ್ನು ವ್ಯವಸ್ಥಿತವಾಗಿ ಜೋಡಿಸಿದ್ದರ ಅಭಿವ್ಯಕ್ತಿಯಾಗಿರುತ್ತವೆ ಮತ್ತು ಇವುಗಳು ಮುಂದಿನ ಅನುಭವಗಳಿಗೆ ಹಾಗೂ ಸನ್ನಿವೇಶಗಳಿಗೆ ಉಪಯುಕ್ತವಾಗುವಂತೆ ಇರುತ್ತವೆ.
- ದೊರಕುವ ಮಾಹಿತಿ/ವಿಚಾರ/ಅನುಭವಗಳನ್ನು ಅರ್ಥಮಾಡಿಕೊಳ್ಳಲು, ಅವುಗಳ ಮಧ್ಯದಲ್ಲಿ ಕಂಡುಬರುವ ಖಾಲಿ ಜಾಗಗಳನ್ನು ಅರ್ಥಪೂರ್ಣವಾಗಿ ತುಂಬಿಸಿಕೊಳ್ಳಲು ಹಾಗೂ ಕೆಲವು ತೀರ್ಮಾನಗಳನ್ನು ತತ್‌ಕ್ಷಣದಲ್ಲಿ ತೆಗೆದುಕೊಳ್ಳಲು ಸ್ಕೀಮಾಗಳು ಸಹಾಯಮಾಡುತ್ತವೆ.

- ಒಟ್ಟಿನಲ್ಲಿ ಮಕ್ಕಳು ಚಟುವಟಿಕೆಗಳ ಮೂಲಕ, ಅನುಭವಗಳ ಮೂಲಕ ಮತ್ತು ಸಕ್ರಿಯವಾಗಿ ಭಾಗವಹಿಸುವ ಕ್ರಿಯೆಗಳ ಮೂಲಕ ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಮಗುವಿನ ಜೀವನದಲ್ಲಿ ಬರುವ ಆಂತರಿಕ ಮತ್ತು ಅಂತರ್ ವ್ಯಕ್ತಿಗಳ ನಡುವೆ ನಡೆಯುವ ಅಂತರ್‌ಕ್ರಿಯೆಗಳಿಂದ ತಮ್ಮದೇ ಆದ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುತ್ತಾರೆ.

## 2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1.ಎ 2.ಬಿ 3. ಎ– √ ; ಬಿ– √ ; ಸಿ– X ; ಡಿ– X ಇ– √ ; ಎಫ್–√

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1.ಸಿ 2.ಬಿ 3. ಎ– √ ಬಿ– X ಸಿ– √ ಡಿ– √ ಇ– √ ಎಫ್– √

## 2.2.6. ಘಟಕಾಂತ್ಯ ಅಭ್ಯಾಸಗಳು

1. ಮಕ್ಕಳ ದೃಷ್ಟಿಕೋನ ಎಂದರೇನು? ಅವು ಹೇಗೆ ಉಂಟಾಗುತ್ತವೆ ವಿವರಿಸಿ.
2. ಬಾಲ್ಯವನ್ನು ಸಮಾಜವು ಹೇಗೆ ರೂಪಿಸುತ್ತದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

## 1.2.7. ಪರಾಮರ್ಶನ ಸೂಚಿ:


1. Kirova-Petrova, Anna. Alberta Journal of Educational Research; Edmonton Vol. 46, Iss. 2, (Summer 2000): 99.
2. https://study.com/academy/lesson/how-individual-differences-impact-early-childhood-development.html

a. https://www.ncbi.nlm.nih.gov/books/NBK310550/-

3. https://theconversation.com/diversity-in-the-classroom-means-children-develop-differently-33899
4. http://abkibgnab.com book Introduction to early childhood a multidimensional approach to child centred care and learning Allyn and Bacon
5. http://aifs.gov.all/publications/differential parenting-children-divers-cultural-(Gonzalez-Mena 2001)
6. Nyla R.Branscombe Robert A.Baron Adapted by Preeti Kapur Social Psychology fourteenth edition Pearson (2017)
7. Sultana Ali Norazi Torill Moen (2016) -Childhood as a social construction-journal of Educational and Social Research- MCSER publishing Rome-Italy.
8. Shelley E.Taylor – Letitia Anne Peplau – David O.Sears Pearson – Twelfth Edition (2006;2017).
9. John W.Santrock Adolescence Twelfth Edition, Tata McGraw-Hill Edition


*********************

# ಬ್ಲಾಕ್ 2 : ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ

## ಘಟಕ 3 : ಬಾಲ್ಯಹಂತದ ಮೇಲೆ ವೈವಿಧ್ಯತೆ, ವ್ಯತ್ಯಾಸಗಳು ಮತ್ತು ಕಡೆಗಣಿಸುವುದರ ಪರಿಣಾಮ

**ಘಟಕದ ರಚನೆ**


2.3.1. ಕಲಿಕಾ ಉದ್ದೇಶಗಳು

2.3.2. ಪೀಠಿಕೆ

2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.3.3.1. ಬಾಲ್ಯಹಂತದ ಮೇಲೆ ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದಿಂದ ವೈವಿಧ್ಯತೆಯ ಪರಿಣಾಮ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.3.3.2. ಬಾಲ್ಯಹಂತದ ಮೇಲೆ ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದಿಂದ ವ್ಯತ್ಯಾಸಗಳ ಪರಿಣಾಮ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.3.3.3. ಬಾಲ್ಯಹಂತದ ಮೇಲೆ ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದಿಂದ ಕಡೆಗಣಿಸುವುದರ ಪರಿಣಾಮ

1.3.3.3. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

2.3.4. ಸಾರಾಂಶಿಸೋಣ

2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

2.3.6. ಘಟಕಾಂತ್ಯ ಅಭ್ಯಾಸಗಳು

2.3.7. ಪರಾಮರ್ಶನ ಸೂಚಿ


## 2.3.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

ವೈವಿಧ್ಯತೆಯ ಕಾರಕ ಅಂಶಗಳನ್ನು ಮತ್ತು ಬಾಲ್ಯಹಂತದ ಮೇಲೆ ಅದರ ಪರಿಣಾಮಗಳನ್ನು ಗುರುತಿಸುವರು;

- ಸಾಮಾಜಿಕ–ಸಾಂಸ್ಕೃತಿಕ ದೃಷ್ಟಿಕೋನದಿಂದ ಬಾಲ್ಯಹಂತವನ್ನು ತಿಳಿಯವಲ್ಲಿ ವ್ಯತ್ಯಾಸಗಳ ಪರಿಣಾಮ ಮತ್ತು ಪ್ರಾಮುಖ್ಯತೆಯನ್ನು ವಿವರಿಸುವರು;
- ಕಡೆಗಣಿಸುವಿಕೆಯ ಅರ್ಥ ಮತ್ತು ಸ್ವರೂಪವನ್ನು ನಿದರ್ಶಿಸುವರು;
- ಕಡೆಗಣಿಸುವಿಕೆಯು ಬಾಲ್ಯಹಂತದ ಮೇಲೆ ಬೀರುವ ಪರಿಣಾಮವನ್ನು ವಿವರಿಸುವರು;
- ಸಾಮಾಜಿಕ–ಸಾಂಸ್ಕೃತಿಕ ದೃಷ್ಟಿಕೋನದಿಂದ ಬಾಲ್ಯಹಂತವನ್ನು ಅರಿಯುವಲ್ಲಿ ವೈವಿಧ್ಯತೆ ಮತ್ತು ವ್ಯತ್ಯಾಸಗಳಿಗಿರುವ ಅಂತರವನ್ನು ಗುರುತಿಸುವರು; ಮತ್ತು
- ವಿವಿಧ ಸಂಸ್ಕೃತಿಗಳಲ್ಲಿನ ಮಕ್ಕಳ ಚಟುವಟಿಕೆಗಳನ್ನು, ಕಾರ್ಯಗಳನ್ನು ಮತ್ತು ಅನುಭವಗಳನ್ನು ಹೋಲಿಸಿ ನೋಡುವರು.

## 1.3.2. ಪೀಠಿಕೆ

'ವೈವಿಧ್ಯತೆಯಲ್ಲಿ ಏಕತೆ' ಭಾರತದ ಪ್ರಮುಖ ಲಕ್ಷಣ ಎಂಬುದು ನಿಮಗೆ ತಿಳಿದಿದೆ. ಈ ವೈವಿಧ್ಯತೆ ನಮ್ಮ ಶ್ರೀಮಂತಿಕೆ ಕೂಡ. ಈ ವೈವಿಧ್ಯತೆಯನ್ನು ನಾವು ಸಂಭ್ರಮಿಸಬೇಕೇ ವಿನಾ ಅವುಗಳನ್ನು ಇತರ ದೃಷ್ಟಿಕೋನದೊಂದಿಗೆ ಕಾಣುವುದು ಸರಿಯಲ್ಲ. ವೈವಿಧ್ಯತೆ ಸಮಾಜದ ಏಳಿಗೆಗೆ ಪೂರಕವಾಗಬೇಕು. ಹಾಗಾಗದಿದ್ದರೆ ಅದು ಸಮಾಜವನ್ನು ಅವನತಿಯಂಚಿಗೆ ತೆಗೆದುಕೊಂಡು ಹೋಗುತ್ತದೆ. ವೈವಿಧ್ಯತೆಯನ್ನು ಸಂಭ್ರಮಿಸಲು ಬಾರದಿದ್ದರೆ ಅವು ವ್ಯತ್ಯಾಸಗಳಾಗಿ, ಸ್ತರಗಳ ಸೃಷ್ಟಿಗೆ ಕಾರಣವಾಗಿಬಿಡುತ್ತವೆ. ಸಮಾಜದಲ್ಲಿ ಸಮಾನತೆಯನ್ನು ಅನುಭವಿಸಲು ಅಡ್ಡಿಯುಂಟುಮಾಡುತ್ತವೆ. ಸಮಾಜದ ಕೆಲವು ವರ್ಗಗಳನ್ನು ಕಡೆಗಣಿಸುವ ಅಪಾಯಕ್ಕೆ ಕೊಂಡೊಯ್ಯುತ್ತದೆ. ಭಾರತದಲ್ಲೂ ವೈವಿಧ್ಯತೆಯನ್ನು ವ್ಯತ್ಯಾಸದ ನೆಲೆಯಲ್ಲಿ ಪರಿಗಣಿಸಿದ ಕಾರಣದಿಂದಾಗಿ ಇಂದು ಅನೇಕ ವರ್ಗಗಳು ಸಮಾಜದ ಅಂಚಿನಲ್ಲಿವೆ. ಸಮಾನತೆ, ಸ್ವಾತಂತ್ರ್ಯ ಇವುಗಳಿಂದ ವಂಚಿತವಾಗಿ ಮೂಲವಾಹಿನಿಗೆ ಬರಲಾಗದೆ ತೊಂದರೆಗೊಳಗಾಗಿವೆ. ಈ ಸನ್ನಿವೇಶ ಮಕ್ಕಳ ಬಾಲ್ಯದ ಮೇಲೆ ಅತ್ಯಂತ ಅಪಾಯಕಾರಿಯಾದ ಪರಿಣಾಮಗಳನ್ನುಂಟುಮಾಡುತ್ತವೆ. ಇದರ ಕುರಿತು ಇಡೀ ಭಾರತ ಸಮಾಜವೇ ಎಚ್ಚೆತ್ತುಕೊಳ್ಳಬೇಕಾಗಿದೆ. ಇದರ ಕುರಿತಾಗಿಯೇ ನಾವು ಈ ಘಟಕದಲ್ಲಿ ಚರ್ಚಿಸಲಿದ್ದೇವೆ.

## 2.3.3.1. ಬಾಲ್ಯಹಂತದ ಮೇಲೆ ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದಿಂದುಂಟಾಗುವ ವೈವಿಧ್ಯತೆಯ ಪರಿಣಾಮ

ಯಾವುದಾದರೊಂದು ದೈನಂದಿನ ತರಗತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ತನ್ನಿ. ನಿಮ್ಮ ತರಗತಿಯಲ್ಲಿಯೇ ಕಂಡು ಬರುವ ವೈವಿಧ್ಯಮಯ ಅಂಶಗಳನ್ನು ಗಮನಿಸಿ, ಮತ್ತು ಅವುಗಳನ್ನು ಒಂದು ಕಡೆಗೆ ನಿಮಗೆ ಅನುಕೂಲವಾಗುವಂತೆ ನಮೂದಿಸಿ. ಉದಾಹರಣೆಗೆ ತರಗತಿಯ ಮಕ್ಕಳು ಹಬ್ಬಗಳನ್ನು ಆಚರಿಸುವ ರೀತಿಯನ್ನು ಕುರಿತು ಬರೆಯಲು ಹೇಳಿ. ಇದೇ ರೀತಿ ಇನ್ನೂ ಬೇರೆ ಅಂಶಗಳಾದ ಪೋಷಕರ ಸಾಕ್ಷರತೆ/ಅನಕ್ಷರತೆ, ಅವರ ಉದ್ಯೋಗ, ಮಾಸಿಕ/ವಾರ್ಷಿಕ ವರಮಾನ, ಸಾಮಾಜಿಕ_ಆರ್ಥಿಕ ಸ್ಥಿತಿ, ಆಹಾರ ಅಭ್ಯಾಸಗಳು, ಜಾತಿ/ಮತ/ಪಂಗಡಗಳು, ಸಾಂಪ್ರದಾಯಿಕ ವೇಷಭೂಷಣಗಳು, ಅವರಲ್ಲಿನ ಕಲೆ ಮತ್ತು ಸಾಹಿತ್ಯ ಹೀಗೆ ಹಲವಾರು ವಿಷಯಗಳನ್ನು ಕುರಿತಂತೆ ನೀವು ಮಾಹಿತಿಯನ್ನು ಸಂಗ್ರಹಿಸಿದಾಗ ವೈವಿಧ್ಯತೆಯ ವಿಶ್ವರೂಪವೇ ನಿಮ್ಮ ಕಣ್ಣೆದುರು ನಿಂತಂತಾಗುತ್ತದೆ !!! ಆದರೆ ಈ ಚಟುವಟಿಕೆಗಳನ್ನು ನೀವು ಮಾಡಿಸುವಾಗ ಬಹು ಎಚ್ಚರದಿಂದ ಇರಬೇಕು, ಇದರಿಂದ ಯಾವುದೇ ಮಗುವಿನ ಭಾವನೆಗಳಿಗೆ ಧಕ್ಕೆ ಉಂಟಾಗಬಾರದು. ಈ ಚಟುವಟಿಕೆಯ ಮುಖ್ಯ ಉದ್ದೇಶವೇ ಮಕ್ಕಳಿಗೆ ತಮ್ಮ ತರಗತಿಯಲ್ಲಿಯೇ ಇರುವ ವಿಶಿಷ್ಟವಾದ ಮತ್ತು ವೈವಿಧ್ಯಮಯವಾದ ಅಂಶಗಳನ್ನು ಅವರ ಗಮನಕ್ಕೆ ತರುವುದು. ಈ ವೈವಿಧ್ಯತೆಯನ್ನು ಸರಿಯಾಗಿ ಗುರುತಿಸಿ, ಒಪ್ಪಿಕೊಂಡು, ಮೆಚ್ಚುವುದು. ಇದರಿಂದಾಗಿ ತರಗತಿಯೊಂದರಲ್ಲಿನ ವಿದ್ಯಾರ್ಥಿಗಳಲ್ಲಿ ಪರಸ್ಪರ ಸಹಕಾರ, ಸೌಹಾರ್ದತೆ ಮತ್ತು ಸಹಜೀವನದ ಸ್ಫೂರ್ತಿ ಉಂಟಾಗುವುದು. ಈ ಎಲ್ಲಾ ಪ್ರಕ್ರಿಯೆಗಳ ಗಮ್ಯವೇ "ನಾವೂ ಬದುಕೋಣ; ಇತರರನ್ನು ಬದುಕಲು ಬಿಡೋಣ" ಎಂಬ ಮೂಲ ನಿಯಮವೇ ಆಗಿದೆ.

ಈ ಕೆಳಗೆ ಒಂದು ಆಸಕ್ತಿದಾಯಕವಾದ ಸಂಶೋಧನಾ ವರದಿಯೊಂದನ್ನು ಕೊಡಲಾಗಿದೆ. ಆ ನಿಜಾಂಶಗಳನ್ನು ಅರಿಯಲು ಈಗ ಪ್ರಯತ್ನ ಪಡೋಣ. ಬೇರೆ ಬೇರೆ ಧರ್ಮ, ಸಂಸ್ಕೃತಿಗೆ ಸೇರಿದ ವ್ಯಕ್ತಿಗಳು ಪರಸ್ಪರರೊಂದಿಗೆ ಹೇಗೆ ಒಂದು ಮಟ್ಟದ ಸಂಭಾಷಣೆ, ಸಂವಹನವನ್ನು ಹಾಗೂ ಒಂದು ಮಟ್ಟದ ಮೌನವನ್ನು ಅಳವಡಿಸಿಕೊಂಡು ಒಟ್ಟಿಗೇ ಸೌಹಾರ್ದತೆಯಿಂದ ಇರುತ್ತಾರೆ ಎಂಬ ವಿಚಾರವನ್ನು ಈ ಸಂಶೋಧನೆಯಲ್ಲಿ ತಿಳಿಸಲಾಗಿದೆ. ಕೆಲವೊಂದು ಸಮುದಾಯದಲ್ಲಿ ಹೆಚ್ಚು ಮಾತಾಡುವುದು, ಬಾಹ್ಯ ಚಟುವಟಿಕೆಗಳಲ್ಲಿ ವಾಚಾಳಿಯಾಗಿರುವುದನ್ನು ಹೆಮ್ಮೆಯ ವಿಷಯವೆನ್ನುತ್ತಾರೆ. ಆದರೆ ಮತ್ತೂ ಕೆಲವು ಸಮುದಾಯದಲ್ಲಿ ಅದನ್ನೇ ಮೂರ್ಖತೆಯ ಅಭಿವ್ಯಕ್ತಿಯೆಂದು ಪರಿಗಣಿಸುತ್ತಾರೆ. ಇದು ಮಕ್ಕಳು ಎಷ್ಟು ಮಾತಾಡಬಲ್ಲರು, ಹೇಗೆ ಮಾತಾಡಬಲ್ಲರು ಎಂಬುದನ್ನು ಪ್ರಭಾವಿಸುತ್ತದೆ. ಹಾಗೆಯೇ ಮಾತಾಡಲೇಬೇಕಾದ ಸಂದರ್ಭ ಬಂದಾಗ ಎಷ್ಟು ಸಹಜತೆಯಿಂದ

ಅವರಿಗೆ ಇದು ಸಾಧ್ಯವಾಗುವುದು ಎನ್ನುವುದರ ಮೇಲೆ ಕೂಡ ಇದು ಪರಿಣಾಮ ಬೀರುವುದು, ಅಲ್ಲವೇ? ಅದೇ ರೀತಿ ಕೆಲವು ಸಂಸ್ಕೃತಿಯಲ್ಲಿ ಮಕ್ಕಳನ್ನು ದೊಡ್ಡವರಂತೆಯೇ ಪರಿಗಣಿಸುತ್ತಾರೆ ಹಾಗೂ ಅವರೊಡನೆ ಸಂಭಾಷಿಸುತ್ತಾರೆ. ಆದರೆ ಇತರ ಸಂಸ್ಕೃತಿಯಲ್ಲಿ ಮಕ್ಕಳನ್ನು ಕೇವಲ ಪ್ರೇಕ್ಷಕರನ್ನಾಗಿಸಿರುತ್ತಾರೆ. ಇಲ್ಲಿ ಅವರಿಗೆ ಎಲ್ಲಾ ವಿಚಾರ/ವಿಷಯಗಳು ನೇರವಾಗಿ ತಲುಪುವುದಿಲ್ಲ. ಬದಲಿಗೆ, ಎಲ್ಲರೂ ಕೂಡಿ ಮಾಡುವ ಚಟುವಟಿಕೆಗಳಲ್ಲಿ, ಆಟಗಳಲ್ಲಿ, ಕ್ರಿಯೆಗಳ ಮೂಲಕ ತಿಳಿಸಲಾಗುತ್ತದೆ. ಹಾಗೆಯೇ ಪರಸ್ಪರ ವ್ಯಕ್ತಿಗಳು ಮಾತನಾಡುವಾಗ, ಹೇಗೆ ಮತ್ತು ಎಲ್ಲಿ ಅದನ್ನು ಅರ್ಧಕ್ಕೆ ತಡೆದು ತಾವು ಮಾತಾಡಬೇಕೆಂಬುದು ಕೂಡ ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆಯಾಗಿರುತ್ತದೆ. ಕೆಲವರ ಪ್ರಕಾರ ಮಧ್ಯೆ ಮಧ್ಯೆ ಮಕ್ಕಳು ತಮ್ಮ ಅನುಮಾನಗಳನ್ನು ಬಗೆಹರಿಸಿಕೊಳ್ಳಲಾದರೂ ಪ್ರಶ್ನೆಗಳನ್ನು ಕೇಳುವುದೋ ಅಥವಾ ಮಾತನಾಡುವುದೋ ಮಾಡಬೇಕು, ಇದರಿಂದ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂಬುದು ಖಚಿತವಾಗುವುದು ಎನ್ನುವರು. ಇನ್ನು ಕೆಲವರಲ್ಲಿ ಹೇಳುವುದನ್ನು ಸಂಪೂರ್ಣವಾಗಿ ಕೇಳಲು ಶ್ರೋತೃಗಳು (ಮಕ್ಕಳು) ದೀರ್ಘಾವಧಿ ಮೌನ, ವಿರಾಮವನ್ನು ಅನುಸರಿಸಬೇಕು. ಅನಿಸಿಕೆಗಳನ್ನು ಹೇಳಲೆಂದೇ ನೀಡುವ ಅವಕಾಶಗಳಲ್ಲಿ ಮಾತ್ರ ಮಾತನಾಡಬೇಕೆಂಬ ನಿಯಂತ್ರಣವಿರುತ್ತದೆ.

ಪ್ಯಾಟ್ರೀಸಿಯಾ ಗ್ರೀನ್‌ಫಿಲ್ಡ್‌ರವರು ಪ್ರಶ್ನಿಸುವ ಕೌಶಲಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಜಪಾನ್ ಮತ್ತು ಅಮೇರಿಕಾ ದೇಶದ ಮಕ್ಕಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಜಪಾನ್ ದೇಶದ ಮಕ್ಕಳು ಪ್ರಶ್ನೆಗಳನ್ನು ಕೇಳಲು ಬಹಳ ಹಿಂಜರಿಯುತ್ತಾರೆ. ಇದಕ್ಕೆ ಕಾರಣ ಅವರ ಸಂಸ್ಕೃತಿಯಲ್ಲಿ ಮಕ್ಕಳು ಪ್ರಶ್ನಿಸುವುದನ್ನು ಋಣಾತ್ಮಕ ಅಂಶವನ್ನಾಗಿ ಪರಿಗಣಿಸಲಾಗುತ್ತದೆ. ತರಗತಿಯ ಸನ್ನಿವೇಶದಲ್ಲಿ ಇದನ್ನು ನೋಡಿದಾಗ, ಜಪಾನ್‌ನಲ್ಲಿ ಮಕ್ಕಳು ಪ್ರಶ್ನೆಗಳನ್ನು ಕೇಳಿದರೆ, ಅವರು ತಾವು ಹೇಳಿದಾಗ ಸರಿಯಾಗಿ ಕೇಳಿಸಿಕೊಂಡಿಲ್ಲವೆಂದು ಅಥವಾ ಅರ್ಥಮಾಡಿಕೊಂಡಿಲ್ಲವೆಂದು ಅಥವಾ ತಮ್ಮ ಬೋಧನಾ ಕ್ರಮವನ್ನು ಹೀಗಳೆಯಲು ಪ್ರಶ್ನೆ ಕೇಳುತ್ತಿದ್ದಾರೆಂದೇ ಶಿಕ್ಷಕರು ಅರ್ಥೈಸುತ್ತಾರೆ. ಇದಕ್ಕೆ ವಿರುದ್ಧವಾಗಿ ಅಮೇರಿಕಾ ದೇಶದ ಮಕ್ಕಳು ಸಹಜವಾಗಿಯೇ ಎಂಬಂತೆ ಹಲವಾರು ಪ್ರಶ್ನೆಗಳನ್ನು ತರಗತಿಯಲ್ಲಿ ಕೇಳುವರು. ಇದಕ್ಕೆ ಕಾರಣ ಅಮೇರಿಕಾದ ಸಂಸ್ಕೃತಿ. ಅಲ್ಲಿ ಹೀಗೆ ಪ್ರಶ್ನಿಸುವುದನ್ನು ಗೌರವಪೂರ್ವಕವಾಗಿ ನೋಡುವರಲ್ಲದೆ, ಅದನ್ನು ಮಕ್ಕಳ ಸಕ್ರಿಯವಾದ ಭಾಗವಹಿಸುವಿಕೆ ಮತ್ತು ಪ್ರಶ್ನೆಗಳು ಅವರ ಆಸಕ್ತಿಯ ಅಭಿವ್ಯಕ್ತಿಯೆಂದು ಪರಿಗಣಿಸುತ್ತಾರೆ.

ಮೇಲೆ ಪ್ರಸ್ತುತಪಡಿಸಿದ ನಿದರ್ಶನಗಳು ವೈವಿಧ್ಯತೆಯ ಹಲವಾರು ಮುಖಗಳನ್ನು ನಮಗೆ ಪರಿಚಯಿಸಿವೆ. ಈ ಪ್ರಪಂಚದಲ್ಲಿ ಯಾರೂ ಕೂಡ ವೈವಿಧ್ಯತೆಯ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಿಲ್ಲ. ಹಾಗಾದರೆ ವೈವಿಧ್ಯತೆ ಎಂದರೇನು, ಅದರ ಲಕ್ಷಣಗಳೇನು ಎಂಬುದನ್ನು ಮತ್ತು ಇದನ್ನು ಕುರಿತಂತೆ ಶಾಲೆಗಳ ಗುರಿ ಮತ್ತು ಉದ್ದೇಶಗಳೇನು, ಇದರಲ್ಲಿ ಶಿಕ್ಷಕರ ಪಾತ್ರವು ಹೇಗಿರಬೇಕು ಎಂಬ ವಿಚಾರಗಳನ್ನು ತಿಳಿಯಲು ಪ್ರಯತ್ನಿಸೋಣ.

ವೈವಿಧ್ಯತೆ ಭಾರತೀಯ ಸಮಾಜದ ಒಂದು ಅವಿಭಾಜ್ಯ ಅಂಗ. ಆಚಾರ, ವಿಚಾರ, ವಸ್ತು, ಸನ್ನಿವೇಶಗಳು, ಮತ್ತು ಸಂಧರ್ಭಗಳಲ್ಲಿ ಕಂಡುಬರುವ ಭಿನ್ನತೆಯನ್ನೇ ವೈವಿಧ್ಯತೆಯೆನ್ನಬಹುದು. ಇದು ಪ್ರತಿಯೊಬ್ಬರ ಬದುಕಿಗೂ ಅನ್ವಯಿಸುವುದು. ಉದಾಹರಣೆಗೆ ಸಮಾಜದ ಮೂಲ ಘಟಕವಾದ ಕುಟುಂಬವನ್ನೇ ತೆಗೆದುಕೊಳ್ಳಿ, ಒಂದು ಕುಟುಂಬದಂತೆ ಇನ್ನೊಂದಿರುವುದಿಲ್ಲ. ಹಾಗೆಯೇ ನೆರೆಹೊರೆ, ಸಮುದಾಯಗಳು, ಶಾಲೆ, ಧರ್ಮ, ಜಾತಿ, ಮತ, ವರ್ಣ, ಮತ್ತು ಸಂಸ್ಕೃತಿ ಇವೆಲ್ಲವು ವೈವಿಧ್ಯತೆಯ ಆಗರಗಳೇ. ವೈವಿಧ್ಯತೆಯನ್ನು ವ್ಯತ್ಯಾಸವೆಂದು ತಿಳಿಯಬಾರದು. ವೈವಿಧ್ಯತೆಯಲ್ಲಿ ಮೆಚ್ಚುಗೆ, ಪ್ರಶಂಸೆ, ಬೆರಗು, ಪ್ರೀತಿ, ಅಚ್ಚರಿ, ಸಮಾಜಪರತೆ, ಇತರರ ಕುರಿತ ಸದ್ಭಾವನೆ, ಇವೆಲ್ಲವೂ ಇದೆ. ಆದುದರಿಂದಲೇ ಅದು ಸಮಾಜಮುಖಿಯಾದುದು. ವೈವಿಧ್ಯತೆ ಮತ್ತು ವ್ಯತ್ಯಾಸ ಇವೆರಡನ್ನು ಬೇರ್ಪಡಿಸುವ ರೇಖೆ ಬಹಳ ಸೂಕ್ಷ್ಮ ಎಂಬುದು ನಿಜವಾದರೂ ಅವೆರಡೂ ಒಂದೇ ಅಲ್ಲ. ವೈವಿಧ್ಯತೆಯು ಸಾಮಾಜಿಕವಾಗಿ ವಿಶಾಲವಾಗಿದ್ದು, ಧರ್ಮ, ಆಚಾರ, ವಿಚಾರ, ಸಂಸ್ಕೃತಿ ಮತ್ತು ರಾಜಕೀಯ ಹೀಗೆ ಅರ್ಥವನ್ನು ಪಡೆದುಕೊಂಡರೆ, ವ್ಯತ್ಯಾಸವು ವ್ಯಕ್ತಿಗೆ ಸೀಮಿತವಾಗಿದ್ದು ವ್ಯಕ್ತಿಭಿನ್ನತೆಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ವೈವಿಧ್ಯತೆ ಎಂಬ ಪದ ಇಂಗ್ಲಿಷಿನ 'Diversity' ಎಂಬುದಕ್ಕೆ ಸಂವಾದಿಯಾಗಿದೆ. ಇದು ಫ್ರೆಂಚ್ ಮೂಲದ "ಡೈವರ್ಸೈಟ್" ಎಂಬ ಪದದಿಂದ ಬಂದಿದ್ದು "ಏಕರೂಪ ಇಲ್ಲದಂತೆ ಮಾಡುವುದು" ಎಂಬುದು ಇದರ ಅರ್ಥ. ಮೆರ್ರಿಯಮ್ ವೆಬ್‌ಸ್ಟರ್ ನಿಘಂಟಿನಲ್ಲಿ ವೈವಿಧ್ಯತೆಯನ್ನು ಹೀಗೆ ವ್ಯಾಖ್ಯಾನಿಸಲಾಗಿದೆ : "ವಿಭಿನ್ನವಾದ ಅಂಶಗಳಿಂದ ಮಾಡಲ್ಪಟ್ಟಿರುವ, ವಿಶೇಷವಾಗಿ ವಿವಿಧ ರೀತಿಯ ಜನರನ್ನು ಹೊಂದಿರುವ ಷರತ್ತಿನಿಂದ ಒಂದು ಸಮೂಹ ಅಥವಾ ಗುಂಪು ಅಥವಾ ಒಂದು ಸಂಘಟನೆಯ ರಚನೆಯಾಗುವುದೇ ವೈವಿಧ್ಯತೆ ಎನಿಸಿಕೊಳ್ಳುತ್ತದೆ." ಓಕ್ಲಾಹೋಮಾ ವಿಶ್ವವಿದ್ಯಾನಿಲಯವು ವೈವಿಧ್ಯತೆಯನ್ನು ಕಲಿಕಾರ್ಥಿಗಳ ದೃಷ್ಟಿಕೋನದಿಂದ ವ್ಯಾಖ್ಯಾನಿಸಿದೆ. "ಕಲಿಕಾರ್ಥಿಗಳಲ್ಲಿನ ವೈವಿಧ್ಯತೆಯನ್ನು ಸಾಮಾನ್ಯವಾಗಿ ಅವರ ಸಮುದಾಯ ಅಥವಾ ಜನಾಂಗೀಯ ಹಿನ್ನೆಲೆಯಿಂದ ಗುರುತಿಸಲಾಗುವುದು. ಹಾಗಿದ್ದರೂ ವೈವಿಧ್ಯತೆಯೆಂಬುದು ಒಂದು ವಿಶಾಲವಾದ ಪರಿಕಲ್ಪನೆ. ಇಂತಹ ವೈವಿಧ್ಯತೆಯು ಪ್ರತಿಯೊಬ್ಬ ವಿದ್ಯಾರ್ಥಿಯ ವಿಭಿನ್ನತೆಯನ್ನು ಒಳಗೊಂಡಿರುತ್ತದೆ. ಲಿಂಗ, ಆರ್ಥಿಕ ಸ್ಥಿತಿ, ಜನಾಂಗ, ದೇಶ ಅಥವಾ ರಾಷ್ಟ್ರದ ಹಿನ್ನೆಲೆಯು ವೈವಿಧ್ಯತೆಗೆ ಕಾರಣವಾಗುವುದು. ವೈವಿಧ್ಯತೆಯು ಸಂಸ್ಕೃತಿ, ಭೌಗೋಳಿಕ ಲಕ್ಷಣಗಳು, ಮದುವೆ ಆಗಿರುವುದು / ಆಗಿಲ್ಲದಿರುವುದು, ಧರ್ಮ, ಸಾಮರ್ಥ್ಯಗಳು ಮತ್ತು ಅಸಾಮರ್ಥ್ಯಗಳು, ಕೌಟುಂಬಿಕ ರಚನೆ, ಸ್ವಾಸ್ಥ್ಯ, ಆರೋಗ್ಯ, ಮೌಲ್ಯಗಳು, ಧೋರಣೆಗಳು ಮತ್ತು ರಾಜಕೀಯ, ಅಲ್ಲದೆ ಇವೆಲ್ಲಕ್ಕಿಂತಲೂ ಇನ್ನೂ ಹೆಚ್ಚು ಅಂಶಗಳು ವೈವಿಧ್ಯತೆಗೆ ಕಾರಕಗಳಾಗಿವೆ. ತರಗತಿಯಂತೂ ವಿದ್ಯಾರ್ಥಿಗಳ ಭಿನ್ನತೆಯಿಂದಲೇ ವೈವಿಧ್ಯತೆಯನ್ನು ಹೊಂದಿರುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಶೈಲಿಯೂ ವೈವಿಧ್ಯತೆಯನ್ನು ತೋರುತ್ತದೆ. ಆದ್ದರಿಂದ ತರಗತಿಯ ವೈವಿಧ್ಯತೆಯು ವಿದ್ಯಾರ್ಥಿಗಳ ಕಲಿಕಾ ಶೈಲಿ, ಅವರ ಹಿನ್ನೆಲೆ, ಶೈಕ್ಷಣಿಕ ಹಿನ್ನೆಲೆ, ಭಾಷೆ, ಮನೆಯವರ ಬೆಂಬಲ ಇತ್ಯಾದಿ ಅಂಶಗಳನ್ನು ಹೊಂದಿರುತ್ತದೆ. ಆದ್ದರಿಂದಲೇ ಮಾನವ ಸಮುದಾಯದಲ್ಲಿ ವೈವಿಧ್ಯತೆಯು ಅತ್ಯಂತ ಸಹಜವಾದ ಅಂಶವೆಂದು ಪರಿಗಣಿಸಲಾಗಿದೆ. ಕುಟುಂಬ, ಸಮುದಾಯ, ಸಂಸ್ಕೃತಿ, ಮತ್ತು ಭಾಷೆ ಮತ್ತು ಧರ್ಮ–ಇವುಗಳು ಮುಖ್ಯವಾದ ವೈವಿಧ್ಯತೆಯ ಕಾರಕ ಅಂಶಗಳು. ಇವುಗಳಲ್ಲಿ ಕೆಲವನ್ನು ಈಗ ವಿಶದವಾಗಿ ಚರ್ಚಿಸೋಣ:

**ಮನೆಯಲ್ಲಿನ ಸಂಸ್ಕೃತಿಯ ವೈವಿಧ್ಯತೆ**

ಮನೆಯಲ್ಲಿನ ಸಂಪ್ರದಾಯದಂತೆ, ರೀತಿ–ರಿವಾಜುಗಳಂತೆ ಮಕ್ಕಳು ಬೆಳೆಯುತ್ತಾರೆ ಮತ್ತು ಈ ಪ್ರಪಂಚಕ್ಕೆ ತೆರೆದುಕೊಳ್ಳುತ್ತಾರೆ. ಅವರ ಹಿನ್ನೆಲೆಗೆ ತಕ್ಕಂತೆ ಹೊರಗಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳುತ್ತಾರೆ, ಮತ್ತು ಅನುಭವಗಳಿಗೆ ತಕ್ಕ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಸಂಸ್ಕೃತಿಯು ಮಕ್ಕಳ ಎಳವೆಯಲ್ಲಿ ಅವರ ಜ್ಞಾನಸಂಪಾದನೆಯನ್ನು, ಕಲಿಕೆಯನ್ನು ಮತ್ತು ಪ್ರಾರಂಭಿಕ ಸಾಕ್ಷರತೆಯನ್ನು ಪ್ರಭಾವಿಸುತ್ತದೆ. 'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು...'ಎಂಬ ಮಾತನ್ನು ನೀವು ಕೇಳಿರುವಿರಿ. ಕೆಲವರ ಮನೆಯಲ್ಲಿ ಪುಸ್ತಕಗಳು ಓದಲು ಸಿಗಬಹುದು, ಓದಲು ಪ್ರೇರಣೆ, ಪ್ರೋತ್ಸಾಹ ಸಿಗಬಹುದು, ಅದು ಅವರ ಕಲಿಕೆಯನ್ನು ಧನಾತ್ಮಕವಾಗಿ ಪ್ರಭಾವಿಸುವುದು. ಅದೇ ರೀತಿ ಎಣಿಸುವುದು, ಸರಳವಾದ ಕೂಡಿ–ಕಳೆಯುವ ಲೆಕ್ಕಗಳು ಅತ್ಯಂತ ಸಹಜವಾಗಿ ದೈನಂದಿನ ಅನುಭವಗಳಲ್ಲಿ ಹಾಸುಹೊಕ್ಕಾಗಿರುವುವು. ದೊಡ್ಡವರ ಚಟುವಟಿಕೆಗಳನ್ನು ಮಕ್ಕಳು ಬಹಳ ಏಕಾಗ್ರತೆಯಿಂದ ವೀಕ್ಷಿಸುತ್ತಿರುತ್ತಾರೆ ಮತ್ತು ಅವರಂತೆಯೇ ಆ ಕೆಲಸಗಳನ್ನು ಅನುಕರಣೆಯಿಂದ ಮಾಡಲು ಕಲಿಯುತ್ತಾರೆ. ಆದ್ದರಿಂದ ಅವರಿಗೆ ಯಾವ ರೀತಿಯ ಮಾದರಿ ದೊರಕುವುದೋ ಅದೇ ರೀತಿಯಾಗಿ ಅವರ ವ್ಯಕ್ತಿತ್ವವು ರೂಪಿತವಾಗುವುದು.

ಶಾಲಾಪೂರ್ವ ಮತ್ತು ಶಾಲಾ ಮಕ್ಕಳಲ್ಲಿ ಭಾಷೆ ಮತ್ತು ಸಂಸ್ಕೃತಿ ಅತೀ ಹೆಚ್ಚಾದ ವೈವಿಧ್ಯತೆಯನ್ನು ತೋರುವ ಪ್ರತ್ಯಯಗಳಾಗಿವೆ. ಮನೆಯಲ್ಲಿ ದೊರೆಯುವ ವಾತಾವರಣ, ಪ್ರೋತ್ಸಾಹ ಮತ್ತು ಬೆಂಬಲ ಮಕ್ಕಳ ಕಲಿಕಾ ಸಿದ್ಧತೆಯನ್ನು ಚುರುಕುಗೊಳಿಸುತ್ತವೆ. ಸಾಕ್ಷರತೆಯು ಈಗ ಚಿಕ್ಕಮಕ್ಕಳಿಂದಲೇ ಪ್ರಾರಂಭವಾಗುತ್ತಿರುವುದು ಒಂದು ದೊಡ್ಡ ಬದಲಾವಣೆಯೇ ಸರಿ. ಮಕ್ಕಳು ಔಪಚಾರಿಕವಾದ ಕಲಿಕಾ ವಾತಾವರಣಕ್ಕೆ ಬರುವ ಮೊದಲೇ ಅಕ್ಷರಸ್ಥರಾಗಿರುತ್ತಾರೆ. ಹಾಗೆಯೇ ಸಂಖ್ಯಾಜ್ಞಾನವು ಕೂಡ

ಶಾಲಾಪೂರ್ವದಲ್ಲಿಯಾ ಸಿಕ್ಕಿರುತ್ತದೆ. ಹಿಂದೆ ನಮ್ಮ ಮನೆಗಳಲ್ಲಿ 'ಬಾಯಿಪಾಠ'ದ ಅಭ್ಯಾಸವಿತ್ತು. ಇದು ಶಾಲೆಗೆ ಬರುವ ಮೊದಲು ಅಗತ್ಯವಾದ ಅದೆಷ್ಟೋ ಕೌಶಲಗಳನ್ನು ಕಲಿಸಿಬಿಡುತ್ತಿತ್ತು.

**ಕುಟುಂಬ ಮತ್ತು ಪೋಷಕರ ನಂಬಿಕೆಗಳು ಹಾಗೂ ವೈವಿಧ್ಯತೆ**

ಮನೆಯಲ್ಲಿ ತಂದೆತಾಯಿಯರು ಮತ್ತು ದೊಡ್ಡವರು ಹೇಗೆ ಅಕ್ಷರಜ್ಞಾನವನ್ನು, ಸಂಖ್ಯಾಜ್ಞಾನವನ್ನು ಬಳಸುವರೋ ಅದರ ನೇರ ಪ್ರಾತಿನಿಧ್ಯವನ್ನು ಮಕ್ಕಳ ವರ್ತನೆಗಳಲ್ಲಿ ನೋಡಬಹುದು. ಮಕ್ಕಳು ಶಾಲೆಗೆ ಸರಿಯಾಗಿ ಹೋಗುವುದಕ್ಕೂ ಮೊದಲೇ ಅಕ್ಷರಗಳನ್ನು ಕಲಿತಿರಬೇಕು, ಮಗ್ಗಿ ಗೊತ್ತಿರಬೇಕು, ಬಣ್ಣ, ವಸ್ತುಗಳ ಜ್ಞಾನವಿರಬೇಕು ಎಂಬುದು ಪೋಷಕರ ಮತ್ತು ಮನೆಯವರೆಲ್ಲರ ಅಭಿಪ್ರಾಯವಾಗಿರುತ್ತದೆ.

ಮನೆಯಲ್ಲಿ ಎಷ್ಟರಮಟ್ಟಿಗೆ ಮೇಲೆ ಹೇಳಿದ ಅನುಭವಗಳು ಮಕ್ಕಳಿಗೆ ದೊರಕುತ್ತವೆ? ಸಾಮಾಜಿಕ, ಬೌದ್ಧಿಕ, ಮತ್ತು ವಸ್ತು–ಸಂಪನ್ಮೂಲಗಳು ಮಕ್ಕಳಿಗೆ ಎಷ್ಟು ತಲುಪುತ್ತವೆ ಹಾಗೂ ವೈವಿಧ್ಯತೆಗೆ ಹೇಗೆ ಕಾರಣವಾಗಿವೆ? ಮತ್ತು ಶಾಲೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಗುಣಮಟ್ಟದ ಕಲಿಕಾ ವಾತಾವರಣವು ಎಷ್ಟರಮಟ್ಟಿಗೆ ದೊರಕುವುದು? ಈ ಎಲ್ಲಾ ಪ್ರಶ್ನೆಗಳ ಉತ್ತರಕ್ಕಾಗಿ, ಮೊದಲಿಗೆ ಮಕ್ಕಳು ಯಾವ ಸಾಮಾಜಿಕ ಸ್ತರದಿಂದ ಬಂದಿದ್ದಾರೆ, ಪೋಷಕರ ಶೈಕ್ಷಣಿಕ ಅರ್ಹತೆಗಳೇನು, ಯಾವ ಜನಾಂಗ ಮತ್ತು ಯಾವ ರಾಷ್ಟ್ರೀಯತೆ ಮುಂತಾದ ಪ್ರಮುಖ ವೈವಿಧ್ಯತೆಯ ಕಾರಕಗಳ ಬಗ್ಗೆ ಮಾಹಿತಿಯಿರಬೇಕು.

ಒಟ್ಟಾರೆಯಾಗಿ ಮಕ್ಕಳ ಪ್ರಾರಂಭಿಕ ಶಿಕ್ಷಣಕ್ಕೆ ಮನೆಯ ವಾತಾವರಣ, ಸಂಸ್ಕೃತಿ, ಬಹಳ ಮುಖ್ಯವಾಗಿದ್ದು ಪ್ರಮುಖವಾದ ಪ್ರಭಾವವನ್ನು ಬೀರುತ್ತವೆ. ಲೂಯಿಸ್ ಮೋಲ್ (1992) ರವರು ಹೇಳುವಂತೆ, ಮಕ್ಕಳು ಶಾಲೆಗೆ ಯಾವಾಗ ಹೋಗಲು ಪ್ರಾರಂಭಿಸಬೇಕು, ಯಾವಾಗ ಶಾಲಾಧಾರಿತ ಕೌಶಲಗಳನ್ನು ಕಲಿಯಬೇಕು. ಎಂದು ತಿಳಿಸುವ ಪೋಷಕರ ನಿರ್ಧಾರಗಳು, ಸಾಮಾಜಿಕ ರೀತಿ–ನೀತಿ ಮತ್ತು ಕಟ್ಟುಪಾಡುಗಳು ಇತ್ಯಾದಿ ಅಂಶಗಳು ಮಕ್ಕಳ ಜ್ಞಾನಭಂಡಾರದ ಉದಯಕ್ಕೆ ಕಾರಣವಾಗುತ್ತವೆ.

ಪೂರ್ವ–ಸಂಕ್ರಿಯಾತ್ಮಕ ಹಂತದಲ್ಲಿ ಮಕ್ಕಳು ಮೂರ್ತಸ್ವರೂಪದ ಕಾರ್ಯಗಳನ್ನು ಅನುಭವಗಳನ್ನು ಆಧರಿಸಿ ಮಾಡಬಲ್ಲವರಾಗಿರುತ್ತಾರೆ (ಪಿಯಾಜೆ 1960). ಆದ್ದರಿಂದ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಮಾದರಿ ವ್ಯಕ್ತಿಗಳನ್ನು ನೋಡುತ್ತಾ ಇತರರು ಮಾಡುವ ಕೌಶಲಗಳನ್ನು ನೋಡುತ್ತಾ ತಾವೇ ಸ್ವತಃ ಕಲಿಯಬೇಕಾಗುತ್ತದೆ /ಕಲಿಯಲು ಸಾಧ್ಯವಿದೆ ಎಂಬುದು ಪಿಯಾಷೆ ಸಿದ್ಧಾಂತದ ಇಂಗಿತಾರ್ಥ. ಅದೇ ರೀತಿ ತಮಗಿಂತ ಭಿನ್ನವಾದವರ ಕೌಶಲಗಳನ್ನು ಅವರ ಕಾರ್ಯಸಿದ್ಧಿಯನ್ನು ಕೂಡ ನೋಡುತ್ತಾ ಮಕ್ಕಳು ಕಲಿಯಬಹುದಾಗಿದೆ ಮತ್ತು ಹಾಗೆ ಆಗಬೇಕು ಸಹ. ಅಂದರೆ ಒಂದು ಜನಾಂಗದ ಮಕ್ಕಳು ತಮ್ಮಂತೆಯೇ ಇರುವ ಇತರ ಧರ್ಮದವರ, ಭಾಷೆಯವರಲ್ಲಿನ ಕಲಿಯಬಹುದಾದ ವಿಚಾರಗಳಿಗೆ ತೆರೆದ ಮನಸ್ಸಿನವರಾಗಿರಬೇಕು.

ಮಕ್ಕಳಿಗೆ ಇಂತಹ ವೈವಿಧ್ಯತೆಯ ಬಗ್ಗೆ ತಿಳಿದುಕೊಳ್ಳಲು ಸನ್ನಿವೇಶಗಳನ್ನು ಶಿಕ್ಷಕರು ಸೃಜಿಸಬೇಕಾಗುತ್ತದೆ. ವೈವಿಧ್ಯತೆಗಳನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಂಡು ಮೆಚ್ಚುವುದಕ್ಕೆ ಪೂರಕವಾದ ಸನ್ನಿವೇಶಗಳನ್ನು ಶಾಲೆ ಮತ್ತು ಶಿಕ್ಷಕರು ಒದಗಿಸಿಕೊಡಬೇಕಾಗುತ್ತದೆ. ಈ ಕೆಳಗೆ ಕೆಲವು ಸಲಹೆಗಳನ್ನು ನೀಡಲಾಗಿದೆ. ಅವುಗಳನ್ನು ಅಳವಡಿಸಿಕೊಂಡರೆ, ಮಕ್ಕಳಿಗೆ ವೈವಿಧ್ಯತೆಯ ಬಗ್ಗೆ ಸರಿಯಾದ ಕಲಿಕೆ ಮತ್ತು ತರಬೇತಿಯನ್ನು ನೀಡಬಹುದಾಗಿದೆ.

- ಶಾಲೆಯನ್ನು ಸಮುದಾಯದತ್ತ ಕರೆದುಕೊಂಡು ಹೋಗುವುದು (ಕ್ಷೇತ್ರಭೇಟಿ) ಅಥವಾ ಸಮುದಾಯದ ಪ್ರತಿನಿಧಿಗಳನ್ನು ಶಾಲೆಗೆ ಕರೆಸುವುದು.
- ತಮ್ಮ ಸುತ್ತಮುತ್ತ ಹಾಗೂ ನೆರೆಹೊರೆಯರನ್ನು ವೀಕ್ಷಿಸಲು, ಭೇಟಿಮಾಡಲು ಕರೆದುಕೊಂಡು ಹೋಗುವುದು ಮತ್ತು ವಿಶೇಷತೆಗಳನ್ನು ಗಮನಿಸಲು ಹೇಳುವುದು. ಹಾಗೆ ಕೆಲವು ಮಾಹಿತಿಯನ್ನು ಸಂಗ್ರಹಿಸಲು ಹೇಳಿಕೊಡುವುದು ಉದಾಹರಣೆಗೆ, ಆ ಪರಿಸರದಲ್ಲಿ ಸಿಕ್ಕುವ ಎಲ್ಲಾ ವಿಚಾರಗಳ ಬಗ್ಗೆ ಅಂದರೆ,

ಸಾರಿಗೆ ಸಂಕೇತಗಳು, ಚಿಹ್ನೆಗಳು, ಪ್ರಚಾರ ಫಲಕಗಳು, ಬಂಗಲೆಗಳು, ಅವುಗಳ ಹೆಸರುಗಳು, ಮನೆ ನಂಬರ್‌ಗಳು ಇತ್ಯಾದಿ.

- ಬೇರೆ ಶಾಲೆಯಿಂದ ಅತಿಥಿಗಳನ್ನು ಕರೆಸುವುದು.
- ಪೋಷಕರು ಕೆಲಸ ಮಾಡುವ ಸ್ಥಳಗಳನ್ನು ಭೇಟಿಮಾಡುವುದು.
- ಸಮುದಾಯದ ವಿಶಿಷ್ಟವಾದ ಕೇಂದ್ರಗಳನ್ನು ಭೇಟಿಮಾಡುವುದು.
- ಸಮುದಾಯದಲ್ಲಿನ ವಿಶೇಷ ತಜ್ಞರುಗಳನ್ನು ಮಾತನಾಡಿಸುವುದು.
- ಪಠ್ಯಕ್ರಮದಲ್ಲಿನ ವಿಷಯಗಳಿಗೆ ಸಂಬಂಧ ಪಟ್ಟ ಸ್ಥಳಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗುವುದು.
- ಸಮುದಾಯದ ಬಗ್ಗೆ ಕಾಳಜಿ ವಹಿಸುವುದು.
- ಅಂತರ್ಜಾಲದ ಉಪಯುಕ್ತತೆಯನ್ನು ಮಕ್ಕಳಿಗೆ ಪರಿಚಯಿಸುವುದು.
- ಶಾಲೆ/ತರಗತಿಯ ಹಂತದಲ್ಲಿಯೇ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು: ಒಬ್ಬ ವಿದ್ಯಾರ್ಥಿ ಮತ್ತೊಬ್ಬನನ್ನು ಅವನ ಮನೆ ಭಾಷೆ, ಸಂಸ್ಕೃತಿ, ಅವರು ಆಚರಿಸುವ ಹಬ್ಬಗಳು ಇತ್ಯಾದಿಗಳೊಂದಿಗೆ ಪರಿಚಯಿಸಿ ತಾನು ಹೆಚ್ಚು ಮೆಚ್ಚಿಕೊಂಡದ್ದನ್ನು ಸಕಾರಣವಾಗಿ ಹೇಳುವುದು. ವಿವಿಧ ಹಬ್ಬಗಳನ್ನು ಶಾಲಾಹಂತದಲ್ಲಿ ಆಚರಿಸುವುದು ಇತ್ಯಾದಿ. ವಿದ್ಯಾರ್ಥಿಗಳ ಮನೆಭಾಷೆಯ ಪದ್ಯಗಳನ್ನು, ಹಾಡುಗಳನ್ನು ಹಾಡಿಸುವುದು, ವಿವಿಧ ವಿಷಯಗಳಲ್ಲಿನ ಪರಿಕಲ್ಪನೆಗಳ ಸ್ಪಷ್ಟೀಕರಣಕ್ಕೆ ವೈವಿಧ್ಯಮಯವಾದ ಉದಾಹರಣೆಗಳನ್ನು ಮಕ್ಕಳ ಸಂಸ್ಕೃತಿಗಳಿಂದಲೇ ಉದಾಹರಿಸುವುದು ಇತ್ಯಾದಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ವೈವಿಧ್ಯತೆಯು ಒಂದು______________

   ಎ. ಸಾಮಾಜಿಕ ನಿಯಮ

   ಬಿ. ವಿಜ್ಞಾನದ ಒಂದು ಶಾಖೆ

   ಸಿ. ನಶ್ವರವಾದ ಅಂಶ

   ಡಿ. ಧಾರ್ಮಿಕ ಅಂಶ

2. ವೈವಿಧ್ಯತೆಯು ವ್ಯಕ್ತವಾಗುವ ಸ್ಥಳ______________

   ಎ. ಕುಟುಂಬ

   ಬಿ. ಶಾಲೆ

   ಸಿ. ಸಮುದಾಯ

   ಡಿ. ಮೇಲೆ ಹೇಳಿದ ಎಲ್ಲವೂ

3. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

   a) ಕುಟುಂಬ ಮತ್ತು ಪೋಷಕರ ನಂಬಿಕೆಗಳು ವೈವಿಧ್ಯತೆಗೆ ಕಾರಣವಾಗುವುವು.

   b) ಸಮುದಾಯಗಳು ಯಾವಾಗಲೂ ಏಕರೂಪದ ರಚನೆಯನ್ನು ಹೊಂದಿದ್ದು ವೈವಿಧ್ಯತೆಯ ಲವಲೇಶವೂ ಇರುವುದಿಲ್ಲ

   c) ಶಾಲೆಯೊಂದು ವೈವಿಧ್ಯತೆಗೆ ಅತ್ಯುತ್ತಮ ಉದಾಹರಣೆ.

d) ವೈವಿಧ್ಯತೆಯು ರಾಷ್ಟ್ರದ ವಿಕಾಸಕ್ಕೆ ಒಂದು ತೊಡಕೇ ಸರಿ.

e) ಒಂದು ಆದರ್ಶ ಸಮಾಜದಲ್ಲಿ ವೈವಿಧ್ಯತೆಗೆ ಸ್ವಲ್ಪವೂ ಅವಕಾಶವಿರುವುದಿಲ್ಲ

## 2.3.3.2. ಬಾಲ್ಯಹಂತದ ಮೇಲೆ ಸಾಮಾಜಿಕ–ಸಾಂಸ್ಕೃತಿಕ ದೃಷ್ಟಿಕೋನದಿಂದುಂಟಾಗುವ ವ್ಯತ್ಯಾಸಗಳ ಪರಿಣಾಮ

**ಅಭ್ಯಾಸ – I**

ನಿಮ್ಮ ತರಗತಿಯಲ್ಲಿ ಈ ರೀತಿಯ ಚಟುವಟಿಕೆಯನ್ನು ಮಾಡಬಹುದು. ನಿಮ್ಮ ವಿದ್ಯಾರ್ಥಿಗಳಿಗೆ ತಮ್ಮ ಸ್ನೇಹಿತರುಗಳಲ್ಲಿ ಕಂಡುಬರುವ ವೈವಿಧ್ಯತೆಗಳನ್ನು ಮತ್ತು ಭಿನ್ನತೆಗಳನ್ನು ಗುರುತಿಸಿ ಪಟ್ಟಿಮಾಡಲು ಹೇಳಿ. ಮಾಹಿತಿಯನ್ನು ಈ ಕೆಳಕಂಡ ಪಟ್ಟಿಯಂತೆ ನಮೂದಿಸಲು ಹೇಳಿ. ನಂತರ ಅವರ ಅಭಿಪ್ರಾಯವನ್ನು ಕೇಳಿ, ಯಾವುದಾದರೂ ಒಂದೇ ಒಂದು ಪ್ರತ್ಯಯವು ಬೇರೆ ವಿದ್ಯಾರ್ಥಿಗಳಲ್ಲಿ ಹೇಗೆ ಬೇರೆ ಬೇರೆಯಾಗಿ ಕಾಣವುದು ಎಂದು ವೀಕ್ಷಿಸಿ ವರದಿ ಮಾಡಲು ಪ್ರೋತ್ಸಾಹಿಸಿ. ಉದಾಹರಣೆಗೆ

| ವಿದ್ಯಾರ್ಥಿಯ ಹೆಸರು | ಆಸಕ್ತಿ | ಎತ್ತರ ಮತ್ತು ಬಣ್ಣ | ವಿಶೇಷ ಪ್ರತಿಭೆ | ಸೃಜನಶೀಲತೆ |
|---|---|---|---|---|
| ಎ. (ಹುಡುಗ) | ಕನ್ನಡ ಕಥೆಗಳನ್ನು ಓದುವುದು | 4 ಅಡಿ. ________ | ಉತ್ತಮ ಚರ್ಚಾಪಟು | ________ |
| ಬಿ. (ಹುಡುಗಿ) | ಒಗಟುಗಳನ್ನು ಬಿಡಿಸುವುದು | 4 ಅಡಿ.________ | ಚೆಸ್ ಆಟಗಾರ್ತಿ | ________ |
| ಸಿ. (ಹುಡುಗಿ) | ಟಿ.ವಿ. ನೋಡುವುದು | 4 ಅಡಿ.________ | ರಂಗೋಲಿ ಚಿತ್ರಗಳನ್ನು ಬಿಡಿಸುವುದು | ________ |
| ಡಿ. (ಹುಡುಗ) | ಟ್ರೆಕ್ಕಿಂಗ್ | 5 ಅಡಿ.________ | ನಾಯಕತ್ವ ವಹಿಸುವುದು | ________ |
| ಇ. (ಹುಡುಗ) | ಸಾಕು ಪ್ರಾಣಿಗಳನ್ನು ಸಾಕುವುದು | 5 ಅಡಿ.________ | ತೋಟಗಾರಿಕೆ | ________ |
| ಎಫ್.(ಹುಡುಗಿ) | ಕ್ರೀಡೆ | 4 ಅಡಿ.________ | ಉತ್ತಮ ಕ್ರೀಡಾಪಟು | ________ |

ಈ ಘಟಕದಲ್ಲಿ ವ್ಯತ್ಯಾಸಗಳು ಮತ್ತು ವೈವಿಧ್ಯತೆಗಳೆಂಬ ಎರಡು ಪದಗಳನ್ನು ನೀವು ಗಮನಿಸುವಿರಿ, ಇವೆರಡರ ನಡುವೆ ತುಂಬಾ ಹತ್ತಿರದ ಸಂಬಂಧವೇ ಇದೆಯಾದರೂ ಎರಡೂ ಒಂದೇ ಅಲ್ಲ. ಇವೆರಡೂ ಬಹಳ ಪ್ರಬಲವಾಗಿ ಮಕ್ಕಳ ಬಾಲ್ಯಹಂತದ ಮೇಲೆ ಪರಿಣಾಮವನ್ನು ಬೀರುವುವು. 'ವ್ಯತ್ಯಾಸ'ದ ಪರಿಕಲ್ಪನೆಯನ್ನು ಈಗ ವಿಶೇಷವಾಗಿ ಗಮನಿಸೋಣ. ಸಾಮಾನ್ಯವಾಗಿ ವ್ಯತ್ಯಾಸವನ್ನು ವ್ಯಕ್ತಿಭಿನ್ನತೆಯ ಮೂಲಕ ನೋಡಲಾಗುವುದು. ಸಮಾಜದಲ್ಲಿ ವ್ಯಕ್ತಿಗಳು ವಿಧವಿಧವಾಗಿ ಸಂಘಟನೆಯಾಗುವರು, ಉದಾಹರಣೆಗೆ, ಕುಟುಂಬ, ಅಕ್ಕಪಕ್ಕದವರು, ಸಹಪಾಠಿಗಳು, ಸಾಮಾಜಿಕ ತಂಡಗಳು, ಸಮುದಾಯಗಳು, ದೇಶೀಯರು, ವಿದೇಶೀಯರು ಇತ್ಯಾದಿ. ಹೀಗೆ ಒಂದು ಗುಂಪನ್ನು ನೋಡಿದರೆ ಅಲ್ಲಿ ಕೆಲವು ಸಾಮ್ಯತೆಗಳು ಮತ್ತು ಕೆಲವು ಭಿನ್ನತೆಗಳು ಇದ್ದೇ ಇರುತ್ತವೆ. ಸಮಾಜವೊಂದರಲ್ಲಿ ವಿವಿಧ ಧರ್ಮ, ಸಂಸ್ಕೃತಿ, ಸಾಮಾಜಿಕ–ಆರ್ಥಿಕ ಸ್ಥಿತಿ, ಉದ್ಯೋಗ, ಸಾಕ್ಷರತೆ, ವಿದ್ಯಾರ್ಹತೆ, ಸಾಮಾಜಿಕ ಸ್ತರಗಳು ವ್ಯತ್ಯಾಸಗಳಾಗಿ ಕಂಡುಬರುವ ಅಂಶಗಳಾಗಿರುತ್ತವೆ. ಮೇಲೆ ಹೇಳಿದ ಎಲ್ಲಾ ಉದಾಹರಣೆಗಳಲ್ಲೂ ಒಂದೊಂದೂ ಮತ್ತಷ್ಟು ಉಪವಿಭಾಗಗಳನ್ನು ಹೊಂದಿರುವುದೇ ಅಲ್ಲದೆ ಪ್ರತಿಯೊಂದು ಉಪವಿಭಾಗವೂ ಇನ್ನೊಂದು ಉಪವಿಭಾಗದಿಂದ ಭಿನ್ನವಾಗಿರುತ್ತದೆ. ಹೀಗಿರುವುದರಿಂದ ಮಗುವಿನ ವಿಕಾಸದ ಮೇಲೆ ಇಂತಹ ವ್ಯತ್ಯಾಸಗಳು ಎಷ್ಟೇ ಸೂಕ್ಷ್ಮವಾಗಿದ್ದರೂ ಸಹ ಪರಿಣಾಮ ಬೀರುವುವು.

ವ್ಯಕ್ತಿಭಿನ್ನತೆಯಲ್ಲಿ ಬುದ್ಧಿಶಕ್ತಿ, ಆಸಕ್ತಿ, ಭಾವನೆಗಳು, ಧೋರಣೆಗಳು, ಅಭಿಕ್ಷಮತೆ, ಮೌಲ್ಯಗಳು ಮತ್ತು ಸೃಜನಶೀಲತೆಯನ್ನು ಗೋಚರವಾಗಬಲ್ಲ ಕ್ಷೇತ್ರಗಳಾಗಿ ಗುರುತಿಸಲಾಗಿದೆ. ಭಿನ್ನತೆಗೆ ಇಷ್ಟೇ ಸಾಕಾಗದೆ, ಮಗುವಿನ ಕೌಟುಂಬಿಕ ಹಿನ್ನೆಲೆ, ಸಂಸ್ಕೃತಿ ಮತ್ತು ಶಾಲೆಯೂ ಸಹ ಕಾರಕಾಂಶಗಳಾಗಿ ಪಾತ್ರವಹಿಸುತ್ತವೆ. ಖಾಸಗಿ ಶಾಲೆ, ಸರ್ಕಾರಿ ಶಾಲೆ, ಮಿಶಿನರಿ ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು, ಮೈನಾರಿಟಿ ಸೌಲಭ್ಯದಿಂದ ನಡೆಸುವ ಶಾಲೆಗಳು, ಮಕ್ತಬ್ ಮತ್ತು ಮದರಸಾಗಳು ಈ ಎಲ್ಲವೂ ಔಪಚಾರಿಕ ಶಿಕ್ಷಣದ ಪ್ರಾತಿನಿಧಿಕಗಳಾಗಿದ್ದರೂ ಒಂದು ಇದ್ದಂತೆ ಇನ್ನೊಂದು ಇಲ್ಲವೆಂಬುದು ನಿಮಗೇ ತಿಳಿದಿರುವ ಸಂಗತಿ.

ಮಗುವಿನ 2ನೇ ವರ್ಷದಿಂದ 5ನೇ ವರ್ಷದವರೆಗೆ, ಹಲವಾರು ಅಂಶಗಳು ಅದರ ವಿಕಾಸದ ಮೇಲೆ ಪ್ರಭಾವ ಬೀರುವುವು. ಇವು ಮಗುವಿನಿಂದ ಮಗುವಿಗೆ ಬೇರೆ ಬೇರೆಯಾಗಿರುತ್ತದೆ. ಕೆಲವು ಬಾಹ್ಯ ಪ್ರತ್ಯಯಗಳಾಗಿದ್ದರೆ, ಉದಾಹರಣೆಗೆ, ಪರಿಸರ, ಅಲ್ಲಿಂದ ಸಿಗುವ ಅನುಭವಗಳು ಮತ್ತು ಕೆಲವು ಆಂತರಿಕ ಪ್ರತ್ಯಯಗಳಾಗಿರುತ್ತವೆ, ಉದಾಹರಣೆಗೆ, ಅನುವಂಶೀಯವಾಗಿ ಬರುವ ಗುಣಲಕ್ಷಣಗಳು, ಅಂದರೆ, ದೈಹಿಕ ರಚನೆ, ಆರೋಗ್ಯ, ಕೆಲವು ಜನ್ಮದಾರಭ್ಯ ಬಂದ ರೋಗಗಳು ಇತ್ಯಾದಿ. ಆದ್ದರಿಂದ ಪೋಷಣೆ ಮತ್ತು ಪ್ರಕೃತಿ ಎರಡೂ ಮಗುವಿನ ವಿಕಾಸದ ಮೇಲೆ ಪರಿಣಾಮ ಬೀರುವುದನ್ನು ಸಾರ್ವತ್ರಿಕವಾಗಿ ಗುರುತಿಸಲಾಗಿದೆ. ಕೆಲವೊಮ್ಮೆ ಅನುವಂಶೀಯತೆಯು ಮಗುವಿನ ಬುದ್ಧಿಶಕ್ತಿ, ಭಾವನೆ, ಸಮತೋಲನ, ಸಾಮಾಜಿಕ, ದೈಹಿಕ ಮತ್ತು ಭಾಷಾವಿಕಾಸವನ್ನು ಕುಂಠಿತಗೊಳಿಸಬಹುದು ಅಥವಾ ಹೆಚ್ಚಳವನ್ನು ತರಬಹುದು ಅಥವಾ ಸಾಮಾನ್ಯವಾದ ಪ್ರಭಾವವನ್ನೂ ಬೀರಬಹುದು. ಇದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

**ಸಂಜ್ಞಾನಾತ್ಮಕ ವಿಕಾಸ:** ವ್ಯಕ್ತಿಗಳಲ್ಲಿ ಕೆಲವು ಗುಣಗಳನ್ನು ಗಮನಿಸಿ. ನಾವು "ಅದೆಲ್ಲಾ ಹುಟ್ಟಿನಿಂದಲೇ ಬಂದ ವರ" ಎಂದು ಹೇಳುವುದಿಲ್ಲವೇ? ಕೆಲವರು ತೀಕ್ಷ್ಣ ಬುದ್ಧಿಮತಿಯನ್ನು ಪಡೆದಿರಬಹುದು, ಕೆಲವರಲ್ಲಿ ಅದ್ವಿತೀಯವಾದ ಸಂಗೀತ ಪ್ರತಿಭೆ ತಮ್ಮ ಹಿರಿಯರಿಂದ ಬಂದಿರಬಹುದು, ಅಥವಾ ಯಾವುದೇ ಕಲಾಪ್ರಕಾರದ ಸಾಧನೆ ಸುಲಲಿತವಾಗಲು ಅವರ ವಂಶಾವಳಿ ಕಾರಣವಾಗಿರಬಹುದು. ಆದರೆ ಕೆಲವು ಸಾಧನೆಗಳು ಅವರ ತಲೆಮಾರಿನಲ್ಲೇ ಇರದಿದ್ದರೂ ವ್ಯಕ್ತಿಯೊಬ್ಬನು ಪ್ರತಿಭಾವಂತನಾಗಿರಬಹುದು. ಹಾಗೆಯೇ ಮಗುವು ಗರ್ಭಾವಸ್ಥೆಯಲ್ಲಿದ್ದಾಗ ತೊಂದರೆಗಳಾಗಿದ್ದರೆ, ಸಹಜವಾದ ಹೆರಿಗೆ ಆಗಿಲ್ಲದಿದ್ದರೆ, ಅವಧಿಪೂರ್ವದಲ್ಲಿ ಮಗುವು ಹುಟ್ಟಿದ್ದರೆ, ಆಗಲೂ ಮಗುವಿನ ವಿಕಾಸವು ವ್ಯತ್ಯಯಗೊಂಡಿರುತ್ತದೆ.

**ಭಾವನಾತ್ಮಕ ವಿಕಾಸ:** ಕೆಲವು ತಾಯಂದಿರು ತಮ್ಮ ಇಬ್ಬರು ಮಕ್ಕಳಲ್ಲಿ ಕಂಡುಬರುವ ಅಜಗಜಾಂತರ ವ್ಯತ್ಯಾಸಗಳ ಬಗ್ಗೆ ಹೇಳುವುದನ್ನು ನೀವು ಆಗಾಗ ಕೇಳಿರಬಹುದು ಅಥವಾ ನೋಡಿರಬಹುದು. ಒಂದೇ ತಾಯಿಯ ಮಕ್ಕಳಾಗಿದ್ದೂ ಒಂದೇ ಕುಟುಂಬದಲ್ಲಿ ಬೆಳೆಯುತ್ತಿದ್ದರೂ ಅವರಲ್ಲಿ ಭಿನ್ನತೆಯೇನೂ ಕಡಿಮೆಯಿರುವುದಿಲ್ಲ. ಅವರಲ್ಲಿ ಒಬ್ಬನು ತನ್ನ ಭಾವನೆಗಳನ್ನು ಯಾವುದೇ ಭೀಡೆಯಿಲ್ಲದೆ ಅಭಿವ್ಯಕ್ತಿಸುವವನು ಮತ್ತು ಕೋಪ, ದುಃಖ ಯಾವುದನ್ನೂ ಮುಚ್ಚಿಟ್ಟುಕೊಳ್ಳಲಾರದವನು ಅಂದರೆ ಅವನದೆಲ್ಲಾ ಬಹಿರ್ಮುಖಿ ವ್ಯಕ್ತಿತ್ವದಂತೆ, ಅದೇ ಇನ್ನೊಬ್ಬನು ಅವನ ಸಹೋದರನೇ ಆದರೂ ತುಂಬಾ ತಾಳ್ಮೆ, ಸಹಿಷ್ಣುತೆಯನ್ನು ತೋರುವವನು. ಅವನದು ಒಂದು ರೀತಿಯ ಅಂತರ್ಮುಖಿ ವ್ಯಕ್ತಿತ್ವ. ಆದ್ದರಿಂದ ಮಕ್ಕಳ ಭಾವನಾತ್ಮಕ ವಲಯವನ್ನು ಶಿಕ್ಷಕರು ಗುರುತಿಸಿದರೆ, ಶೈಕ್ಷಣಿಕ ಕಾರ್ಯಕ್ರಮಗಳು ಅವರ ನಿಜವಾದ ವಿಕಾಸಕ್ಕೆ ಕಾರಣವಾಗುವುವು. ಕೆಲವು ಮಕ್ಕಳಿಗೆ ತಮ್ಮ ಅನಿಸಿಕೆಯನ್ನು ಹೇಗೆ ವ್ಯಕ್ತಪಡಿಸಬೇಕು, ತಮ್ಮ ಅಸಮಾಧಾನವನ್ನು ರಚನಾತ್ಮಕವಾದ ಕ್ರಿಯೆಗಳಾಗಿ ಹೇಗೆ ಬದಲಾಯಿಸಿಕೊಳ್ಳಬೇಕೆಂದು ಗೊತ್ತಿರುವುದಿಲ್ಲ. ಅದೇ ಇನ್ನೂ ಕೆಲವರಿಗೆ ತಮ್ಮ ಭಾವನೆಗಳನ್ನು ಹೇಗೆ ನಿಯಂತ್ರಿಸಬೇಕೆಂಬುದೇ ಗೊತ್ತಿರುವುದಿಲ್ಲ. ಹೀಗೆ ಮಕ್ಕಳು ವ್ಯಕ್ತಿಭಿನ್ನತೆಯನ್ನು ತೋರುತ್ತಾರೆ. ಬಹಳಷ್ಟು ಮಕ್ಕಳು ಈ ಹಂತದಲ್ಲಿ ಹತಾಶೆ, ನೋವನ್ನು ಮತ್ತು ಭಯವನ್ನು ಅನುಭವಿಸುತ್ತಾರೆ. ಆದರೆ ಅವುಗಳ ಅಭಿವ್ಯಕ್ತಿ ಕೋಪ–ತಾಪಗಳಲ್ಲಿ, ಆಕ್ರಮಣಕಾರಿ ವರ್ತನೆಗಳಲ್ಲಿ ಆಗಿಬಿಡುತ್ತದೆ. ಮಕ್ಕಳ ಈ ಅಸಹಾಯಕ ಸ್ಥಿತಿಯನ್ನು ನಿಭಾಯಿಸಿ, ಅವರಿಗೆ ಇಂತಹ ಭಾವನೆಗಳ ಸ್ವರೂಪ ಮತ್ತು ಪರಿಣಾಮಗಳನ್ನು ಪರಿಚಯಿಸಿದ್ದೇ ಆದರೆ ಮುಂದೆ ಅವರು ಉತ್ತಮವಾದ ಭಾವನಾತ್ಮಕ ಬುದ್ಧಿಶಕ್ತಿಯಿಂದ ಜೀವನದಲ್ಲಿ ಮುಂದುವರೆಯುವರು.

**ಭಾಷಾ ವಿಕಾಸ:** ವ್ಯಕ್ತಿ–ವ್ಯಕ್ತಿಗಳ ನಡುವಿನ ವ್ಯಕ್ತಿಭಿನ್ನತೆಯು ಭಾಷೆಯ ಮೂಲಕ ಸ್ಪಷ್ಟವಾಗಿ ಗೋಚರಿಸುತ್ತದೆ. ಬಹುಭಾಷಾ ಮತ್ತು ಬಹು–ಸಂಸ್ಕೃತಿಯ ಭಾರತದಲ್ಲಿ ಇದು ಎದ್ದು ಕಾಣುವ ಅಂಶ. ಇಂದಿನ ಕಂಪ್ಯೂಟರ್ ಯುಗದಲ್ಲಿ ಮಕ್ಕಳು ಕಾಗದಗಳ ಮೇಲಿನ ಅಕ್ಷರಗಳನ್ನು ಓದುವುದಕ್ಕಿಂತ ಕಂಪ್ಯೂಟರನಲ್ಲಿ ಓದುವುದು ಹೆಚ್ಚು. ಹಾಗಾಗಿ ಪ್ರಸಕ್ತ ಸಂಶೋಧನೆಗಳು ಮಕ್ಕಳ ಬಾಷಾವಿಕಾಸದಲ್ಲಿ ಈ ಬದಲಾದ ಸನ್ನಿವೇಶಕ್ಕೆ ಹೆಚ್ಚು ಗಮನವನ್ನು ನೀಡಿವೆ. ಕಂಪ್ಯೂಟರೀಕರಣವು ಮಕ್ಕಳ ಭಾಷಾವಿಕಾಸ ಹಾಗೂ ಸಾಕ್ಷರತೆಯನ್ನು ಹೇಗೆ ಪ್ರಭಾವಿಸಿವೆ ಎಂಬುದು ಇತ್ತೀಚಿನ ಸಂಶೋಧನೆಗಳ ಪ್ರಧಾನ ವಿಷಯವಾಗಿದೆ. ಆದರೂ ಮಕ್ಕಳು ದೈನಂದಿನ ಚಟುವಟಿಕೆಗಳಲ್ಲಿ ಯಾರೊಡನೆ ಎಷ್ಟು ಮಾತನ್ನಾಡುತ್ತಾರೆ, ಮತ್ತು ಎಷ್ಟು ಅಂತರ್‌ಕ್ರಿಯೆಗಳು ನಡೆಯುತ್ತವೆ ಎಂಬುದು ಅವರ ವಿಕಾಸದ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತದೆ.

ಹಿರಿಯರೊಡನೆ, ಗುಣವಂತ ವ್ಯಕ್ತಿಗಳೊಡನೆ, ಪೋಷಕರೊಡನೆ, ಸಹೋದರ–ಸಹೋದರಿಯರೊಡನೆ ಮತ್ತು ಶಿಕ್ಷಕರೊಡನೆ ನಡೆಸುವ ಮಾತುಕತೆಗಳು ಮಕ್ಕಳಲ್ಲಿನ ವಾಕ್ಚಾತುರ್ಯಕ್ಕೆ ಮತ್ತು ಶಬ್ದಭಂಡಾರದ ಹೆಚ್ಚಳಕ್ಕೆ ಕಾರಣವಾಗುವುದಷ್ಟೇ ಅಲ್ಲದೇ ಮುಂದೆ ಅವರ ಗುಣಾತ್ಮಕ ಸಾಕ್ಷರತೆಗೂ ಬೆಂಬಲವಾಗುವುದು. ವಿವಿಧ ವಿಷಯಗಳ ಕಲಿಕೆಗೂ ಸಾಮಾಜಿಕವಾಗಿ, ಭಾವನಾತ್ಮಕವಾಗಿ ಸ್ವಾಸ್ಥ್ಯದಿಂದಿರುವುದಕ್ಕೂ ಭಾಷೆ ಉತ್ತಮ ಮಾಧ್ಯಮವಾಗುವುದು. ಮನೆ ವಾತಾವರಣದಲ್ಲಿ ಸಿಕ್ಕುವ ಭಾಷಾ ಬೆಳವಣಿಗೆ ಪ್ರಾರಂಭದಲ್ಲಿಯಾದರೆ, ತರಗತಿಯಲ್ಲಿ ಮೇಲಮೇಲಕ್ಕೆ ಹೋದಾಗ ಅಲ್ಲಿ ದೊರಕುವ ಶಾಬ್ದಿಕ ಅನುಭವಗಳು ಪಠ್ಯಪುಸ್ತಕದಲ್ಲಿನ ಗ್ರಾಂಥಿಕ ಭಾಷೆ, ಚಿಕ್ಕ ವಯಸ್ಸಿನಲ್ಲೇ ದೊರಕುವುದರಿಂದ ಅವರ ಕಲಿಕೆಯು ಉತ್ತಮವಾಗಿರುತ್ತದೆ. ಆದರೆ ಬೋಧನಾ ಮಾಧ್ಯಮದ ವಿಷಯಕ್ಕೆ ಬಂದಾಗ ಕನ್ನಡ ಮಾಧ್ಯಮ ಮತ್ತು ಇಂಗ್ಲೀಷ್ ಮಾಧ್ಯಮಗಳ ವಿಚಾರದಲ್ಲಿ ಸೂಕ್ಷ್ಮವಾಗಿ ಋಣಾತ್ಮಕತೆ, ಅಂದರೆ ಗುಣ ಮತ್ತು ದೋಷವೆರಡೂ ಕಂಡುಬರುವುದು. ಅದೇ ರೀತಿ, ಗ್ರಾಮ್ಯ ಭಾಷೆ, ನಗರದ ಭಾಷೆ, ಗ್ರಾಂಥಿಕ ಭಾಷೆಗಳು ವಿಭಿನ್ನತೆಯಿಂದ ಕೂಡಿದ್ದು ವಿದ್ಯಾರ್ಥಿಗಳಲ್ಲಿನ ಭಿನ್ನತೆಗೂ ಕಾರಣವಾಗುತ್ತವೆ. ಹಾಗೆಯೇ ಶಿಕ್ಷಕರು ತರಗತಿಯಲ್ಲಿ ಬಳಸುವ ಭಾಷೆ ಕೂಡ ಮಕ್ಕಳ ಭಾಷಾವಿಕಾಸವನ್ನು ಪ್ರಭಾವಿಸುವುದು. ಹೀಗಿದ್ದರೂ ತರಗತಿಯ ಭಾಷಾಬಳಕೆಯು ವಿದ್ಯಾರ್ಥಿಯ ವಿಕಾಸದ ಮಟ್ಟಕ್ಕೆ ತಕ್ಕಂತಿರಬೇಕಾದದ್ದು ಬಹು ಮುಖ್ಯ. ಕೆಲವು ಸಮಸ್ಯೆಗಳು ಉದಾಹರಣೆಗೆ, ಮಾತಿನ ದೋಷ, ತಡವಾದ ಭಾಷಾ ಬೆಳವಣಿಗೆ, ಶ್ರವ್ಯ–ಪ್ರಕ್ರಿಯಾ ದೋಷಗಳು, ಕಿವುಡುತನ, ನಿಧಾನಗತಿಯ ವಿಕಾಸ ಇವು ತರಗತಿಯಲ್ಲಿ ಹೆಚ್ಚಿನ ಭಿನ್ನತೆಯನ್ನು ತರುತ್ತವೆ.

**ಸಾಮಾಜಿಕ ವಿಕಾಸ:** ನಮ್ಮ ದೇಶದಲ್ಲಿ ವೈವಿಧ್ಯತೆ ಮತ್ತು ಭಿನ್ನತೆಗೇನೂ ಕೊರತೆಯಿಲ್ಲ, ಇದಕ್ಕೆ ಕಾರಣವೂ ನಿಮಗೆ ಗೊತ್ತಿದೆ. ಅವೆಂದರೆ ಇಲ್ಲಿಯ ಬಹುಸಂಸ್ಕೃತಿ, ಭಾಷೆ ಮತ್ತು ಧರ್ಮ. ಮಗುವು ತಾನು ಬೆಳೆಯುತ್ತಿರುವ ಸಮುದಾಯಕ್ಕೆ ತಕ್ಕಂತೆ ವಿಕಾಸ ಹೊಂದುತ್ತದೆ. ಸಮಾಜದ ಮೂಲ ಘಟಕ ಕುಟುಂಬ. ಪ್ರತಿಯೊಂದು ಕುಟುಂಬಕ್ಕೂ ತನ್ನದೇ ಆದ ಜೀವನ ಶೈಲಿ, ಮತ್ತು ಆದರ್ಶಗಳಿರುತ್ತವೆ. ಹಾಗಾಗಿ ತನ್ನ ಕುಟುಂಬದಲ್ಲಿನ ಅನುಭವಗಳನ್ನು ಆಧರಿಸಿಯೇ ಮಗುವು ಬೆಳೆಯುವುದು. ಆದರೆ ಶಾಲೆ? ಶಾಲೆಯಲ್ಲಿ ಹತ್ತು ಹಲವಾರು ವೈವಿಧ್ಯಮಯವಾದ ಕುಟುಂಬಗಳಿಂದ ಮಕ್ಕಳು ಬಂದಿರುತ್ತಾರೆ. ಆದುದರಿಂದಲೇ ಶಾಲೆ ಒಂದು ಪುಟ್ಟ ಸಮಾಜ ಎಂದು ಹೇಳಲಾಗುತ್ತದೆ. ಪ್ರತಿಯೊಂದು ಮಗುವೂ ತರಗತಿಯೊಂದರಲ್ಲಿ ತನ್ನದೇ ಆದ ಬುದ್ಧಿಲಬ್ಧ, ಭಾವನಾತ್ಮಕ ಬುದ್ಧಿಲಬ್ಧ, ಧೋರಣೆ, ಮೌಲ್ಯ, ಆಸಕ್ತಿ ಮತ್ತು ಅಭಿಕ್ಷಮತೆಗಳಿಂದ ಕೂಡಿದ್ದು ಮತ್ತೊಂದು ಮಗುವನ್ನು ಈ ಎಲ್ಲವುಗಳಿಂದ ಪ್ರಭಾವಿಸುತ್ತದೆ. ಅಷ್ಟೇಅಲ್ಲದೆ ಶಿಕ್ಷಕರು ಈ ರೀತಿಯ ಅಸಮಾನತೆಗಳಿಂದ ಕೂಡಿರುವ ತರಗತಿಯ ಮಕ್ಕಳಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ.

ಮೇಲೆ ಹೇಳಿದ ವ್ಯತ್ಯಾಸಗಳೇ ಅಲ್ಲದೆ ವ್ಯಕ್ತಿತ್ವದಲ್ಲಿನ ವ್ಯತ್ಯಾಸಗಳಾಗಿ ಮಾಹಿತಿ ಸಂಸ್ಕರಣಾ ಸಾಮರ್ಥ್ಯ, ದೋಷಪೂರಿತ ಕಲಿಕಾ ಶೈಲಿ ಕಂಡುಬರಬಹುದು. ಕೆಲವು ಮಕ್ಕಳು ದೃಶ್ಯಾಧಾರಿತ ಕಲಿಕೆಯನ್ನು ಬಯಸಿದರೆ, ಇನ್ನೂ ಕೆಲವು ಶ್ರವ್ಯಾಧಾರಿತ ಕಲಿಕೆಯನ್ನು ಇಷ್ಟಪಡುವರು. ಆದರೆ ಮತ್ತೂ ಕೆಲವರು ಮಾಡಿ ಕಲಿ ಎಂಬ ನಿಯಮಕ್ಕೆ ತಕ್ಕಂತೆ ತಮ್ಮಿಂದ ನಿರ್ವಹಿಸಬಲ್ಲ ಕೌಶಲಗಳ ಕಲಿಕೆಗೆ ಆದ್ಯತೆ ನೀಡುವರು. ಗಾರ್ಡ್‌ನರ್‌ನ

ಬಹು–ಬುದ್ಧಿವಂತಿಕೆ ಸಿದ್ಧಾಂತದಲ್ಲಿ ವಿದ್ಯಾರ್ಥಿಗಳನ್ನು ಅವರ ವೈವಿಧ್ಯಮಯವಾದ ಬುದ್ಧಿವಂತಿಕೆಯಿಂದ ಮತ್ತು ಸಾಮರ್ಥ್ಯಗಳಿಂದ ಗುರುತಿಸಬಹುದಾಗಿದೆ, ಉದಾಹರಣೆಗೆ, ದೃಶ್ಯ/ಅವಕಾಶ ಆಧಾರಿತ ಜಾಣತನ, ಶಾಬ್ದಿಕ/ಭಾಷಾ ಜಾಣತನ, ಗಣಿತ/ತಾರ್ಕಿಕ ಜಾಣತನ, ಶರೀರ ಕೌಶಲಗಳ ಜಾಣತನ, ಸಂಗೀತದಲ್ಲಿನ ಜಾಣತನ, ಇತ್ಯಾದಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ವೈಯುಕ್ತಿಕವಾದ ಕಾರಕ ಅಂಶವೊಂದು ಸಂಚಯಿತ ಪರಿಣಾಮವನ್ನು ಬೀರುವುದಾದರೆ, ಅದು____________

   ಎ. ವೈವಿಧ್ಯತೆ

   ಬಿ. ವ್ಯತ್ಯಾಶಗಳು

   ಸಿ. ವ್ಯಕ್ತಿಭಿನ್ನತೆ

   ಡಿ. ಸಾಕ್ಷರತೆ

2. ಮಗುವು ಸಹಜವಾಗಿಯೇ ವಿಕಾಸ ಹೊಂದುವುದು____________

   ಎ. ತಾನು ಸೇರಿದ ಸಮುದಾಯಕ್ಕೆ ತಕ್ಕಂತೆ

   ಬಿ. ಸಾಮಾ–ಆರ್ಥಿಕ ಸ್ಥಿತಿಗೆ ತಕ್ಕಂತೆ

   ಸಿ. ಅನುವಂಶೀಯತೆಗೆ ತಕ್ಕಂತೆ

   ಡಿ. ಬುದ್ಧಿಶಕ್ತಿಯ ಮಟ್ಟಕ್ಕೆ ತಕ್ಕಂತೆ

3. ಹೊಂದಿಸಿ ಬರೆಯಿರಿ:

'ಎ' ಪಟ್ಟಿಯ ಅಂಶಗಳನ್ನು 'ಬಿ' ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ.

| 'ಎ' ಪಟ್ಟಿ | | 'ಬಿ' ಪಟ್ಟಿ |
|---|---|---|
| ಎ. ಗಾರ್ಡ್‌ನರ್ | 1. | ಸಂಸ್ಕೃತಿ ಮತ್ತು ಸಂಭಾಷಣೆ ಸಾಮರ್ಥ್ಯದ ನಡುವಿನ ಸಹ–ಸಂಬಂಧ |
| ಬಿ. ಬ್ರೂನರ್ ಮತ್ತು ವೈಗೋಟ್‌ಸ್ಕೀ | 2. | ಪ್ರಶ್ನಿಸುವ ನಡುವಳಿಕಗೆ |
| ಸಿ. ಗ್ರೀನ್‌ಫೀಲ್ಡ್ ಮತ್ತು ಕೋಕಿಂಗ್ | 3. | ಬಹು–ಬುದ್ಧಿವಂತಿಕೆ |
| ಡಿ. ಬಾರ್ಬರಾ ರಾಗಾಫ್ | 4. | ಭಾಷಾ ವಿಕಾಸ |

## 2.3.3.3. ಬಾಲ್ಯಹಂತದ ಮೇಲೆ ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಪರಿಣಾಮದಿಂದ ಕಡೆಗಣಿಸುವುದರ ಪರಿಣಾಮ

ಮಕ್ಕಳು ಗುಂಪಿನಲ್ಲಿ ಆಟವಾಡುತ್ತಿರುವಾಗ ಪರಸ್ಪರ ಒಬ್ಬರಿಗೊಬ್ಬರು ತಳ್ಳಾಡುವುದನ್ನು ಮತ್ತು ಎಳೆದಾಡುವುದನ್ನು ನೀವು ನೋಡಿರಬಹುದು. ಇದೆಲ್ಲಾ ಆಟದಲ್ಲಿ ಸರ್ವೇಸಾಮಾನ್ಯ ಕೂಡ. ಹಾಗೆಯೇ ಥ್ರೋಬಾಲ್, ಕಬಡ್ಡಿ, ಷಟಲ್ ಕಾಕ್ ಆಟಗಳಲ್ಲಿ ಬೌಂಡರೀ ಲೈನ್‌ಗಳನ್ನು ಕೂಡ ನೀವು ನೋಡಿರುವಿರಿ. ಆಟಗಾರ ಅಥವಾ ಚೆಂಡು ಒಂದು ವೇಳೆ ಆ ಬೌಂಡರೀ ಲೈನನ್ನು ದಾಟಿದರೆ, ಅಥವಾ ತುಳಿದರೆ, ಅದು

'ಔಟ್' ಎಂದು ಅಥವಾ ಔಟ್‌ಬಾಲ್ ಎಂದಾಗುತ್ತದೆ. ಎದುರಾಳಿಯ ಪಾಳೆಯಕ್ಕೆ ಇದು ಲಾಭಕಾರಿ. ಹೀಗೆ ಈ ಎಲ್ಲ ಆಟಗಳಲ್ಲಿ ಆಡುವವರು ಗಮನಿಸಬೇಕಾದ 'ಅಂಚು' ಅಥವಾ 'ಅಂಚಿನ ಗೆರೆ' ಇರುತ್ತದೆ.

ಮಾರ್ಜಿನ್ ಅಥವಾ ಬೌಂಡರಿ ಲೈನಿನಿಂದ ಆಚೆ ಎಂದರೆ ನಿಜವಾದ ಅರ್ಥದಲ್ಲಿ, ನೀವು ಪಠ್ಯವನ್ನು ಬರೆಯುವಾಗ ಆ ಹಾಳೆಯಲ್ಲಿ ಬಿಡುವ ಮಾರ್ಜಿನ್ ಎಂದಾಗಬಹುದು. ನಿಮ್ಮ ತರಗತಿಯಲ್ಲಿ ಮಕ್ಕಳಿಗೆ ಮಾರ್ಜಿನ್ ಲೈನನ್ನು ಬಿಟ್ಟು ಬರೆಯಬೇಕು ಎಂದು ತಾಕೀತು ಮಾಡುತ್ತೀರಲ್ಲವೇ? ಸುಮಾರು 1970ರ ಆಸುಪಾಸಿನಲ್ಲಿ ಈ ಪದಕ್ಕೆ ಬೇರೆಯದೇ ಅರ್ಥವು ಹುಟ್ಟಿಕೊಂಡಿತು ಎಂದು ಕಾಣುತ್ತದೆ. ಯಾರನ್ನಾದರೂ ಮುಖ್ಯ ಕೆಲಸವೊಂದರಲ್ಲಿ ಮಾರ್ಜಿನ್ ಮಾಡುವುದೆಂದರೆ ಅವರಿಗೆ ಯಾವುದೇ ಅಧಿಕಾರ ಸಿಗದಂತೆ, ಸೌಲಭ್ಯ ಸಿಗದಂತೆ, ಹೆಸರು ಕೀರ್ತಿ ಇಲ್ಲದಂತೆ ಅಥವಾ ಹೇಳಹೆಸರಿಲ್ಲದಂತೆ ಮಾಡುವುದು ಎಂಬ ಅರ್ಥಬರುವ ಆಘಾತಕಾರಿ ಬೆಳವಣಿಗೆಯನ್ನು ನೋಡುತ್ತಿದ್ದೇವೆ. ಇಂಗ್ಲೀಷಿನ "ಮಾರ್ಜಿನಲೈಸ್ಡ್ (marginalized)" ಪದಕ್ಕೆ ಕನ್ನಡದಲ್ಲಿ 'ಕಡೆಗಣಿಸುವಿಕೆ' ಎಂದು ಅನುವಾದವನ್ನು ಮಾಡಿಕೊಳ್ಳಬಹುದು. ಒಂದು ಸಮಾಜದಲ್ಲಿ ಕೆಲವು ವ್ಯಕ್ತಿಗಳನ್ನು, ಕೆಲವು ಸಮುದಾಯಗಳನ್ನು, ಕೆಲವು ಗುಂಪುಗಳನ್ನು ಕಡೆಗಣಿಸಲಾಗುತ್ತಿದೆ ಎಂಬ ಕೂಗನ್ನು ನೀವು ಆಗಾಗ ಸಮೂಹ ಮಾಧ್ಯಮಗಳಲ್ಲಿ ನೋಡಿರುತ್ತೀರಿ. ಏನೋ ಒಂದು ಅವಕಾಶದಿಂದ ಗುಂಪೊಂದು ವಂಚಿತವಾದಾಗ ಇಂಥವರು ತಾತ್ಸಾರಕ್ಕೆ ಒಳಪಟ್ಟಿದ್ದಾರೆಂದು ಹೇಳುವ ಸಂದರ್ಭಗಳನ್ನು ನೀವು ನೋಡಿರುತ್ತೀರಿ.

**ಅಭ್ಯಾಸ:II**

ಈಗ ನಿಮ್ಮ ದೈನಂದಿನ ಅನುಭವದಲ್ಲಿ ಬಂದ ಈ ರೀತಿಯ ಕಡೆಗಣಿಸುವಿಕೆಗೆ ಉದಾಹರಣೆಗಳನ್ನು ನೀಡಲು ಪ್ರಯತ್ನಿಸಿ. ಅವುಗಳ ಪಟ್ಟಿಯನ್ನು ತಯಾರಿಸಿ ಉದಾಹರಣೆಗಳನ್ನು ಗಮನಿಸಿ

1. ಸ್ತ್ರೀಯರನ್ನು ಕುಟುಂಬದ ಮುಖ್ಯವಾದ ನಿರ್ಧಾರಗಳಲ್ಲಿ ಸೇರಿಸಿಕೊಳ್ಳುವುದಿಲ್ಲ ಮತ್ತು ಅವರ ಅಭಿಪ್ರಾಯಗಳಿಗೆ ಬೆಲೆ ಕೊಡದೆ ಇರುವ ಸಂದರ್ಭಗಳಿವೆ.
2. ಬಡವರನ್ನು ತಾತ್ಸಾರದಿಂದ ಕಾಣಲಾಗುತ್ತದೆ.

ಈಗ 'ಕಡೆಗಣಿಸು'ವಿಕೆಯ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸೋಣ

ಸುಮಾರು 1968 ನಲ್ಲೇ ಈ ಪರಿಕಲ್ಪನೆಯ ಉಗಮವಾಯಿತು. ಲಾಸ್ ಏಂಜಲೀಸ್ ಟೈಮ್ಸ್‌ನ ಒಂದು ವರದಿಯಲ್ಲಿ (ದಿನಾಂಕ ಜೂನ್ 20ರ 1968ರ ವರದಿ) "ನೀಗ್ರೋಗಳನ್ನು ಕಡೆಗಣಿಸಲಾಗಿದೆ, ಬಹುಸಂಖ್ಯಾತರ ಸಮಾಜದಲ್ಲಿ ಬಡವರಾದವರನ್ನು ನಿರ್ಲಕ್ಷಿಸಲಾಗಿದೆ" ಎಂದು ವಿಶ್ಲೇಷಿಸಲಾಗಿತ್ತು. ಅಂದಿನಿಂದ "ಕಡೆಗಣಿಸುವಿಕೆ" ಎಂಬ ಪದವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಲಾವಣೆಯನ್ನು ಪಡೆದುಕೊಂಡಿತು. ಸಮಾಜವೊಂದರಲ್ಲಿ ಕೆಲವರನ್ನು ಅದರ ಗಡಿಯಾಚೆಗೆ ತಳ್ಳಿದರೆ, ಅವರನ್ನು ಕಡೆಗಣಿಸಲ್ಪಟ್ಟವರೆಂದು ಗುರುತಿಸಲಾಗುವುದು. ಉದಾಹರಣೆಗೆ ಶಾಲೆಯೊಂದರಲ್ಲಿ ಸಮಾರಂಭವೊಂದು ನಡೆಯುತ್ತಿರುವಾಗ, ಬರೀ ಇಂಗ್ಲೀಷ್ ಹಾಡು–ಡ್ಯಾನ್ಸಗಳದ್ದೇ ಮೇಲುಗೈಯಾದರೆ, ಗ್ರಾಮೀಣ ಸೊಗಡಿನ ಜಾನಪದ ಕಲೆಗಳು ಮೂಲೆಗುಂಪಾಗುವುವು. ಇಂತಹ ಸನ್ನಿವೇಶದಲ್ಲಿ ಇದನ್ನು ಕಡೆಗಣಿಸಲಾಗಿದೆ ಎಂದು ಹೇಳಬಹುದು.

'ಮಾರ್ಜಿನ್' ಎಂಬ ಪದಕ್ಕೆ ಲ್ಯಾಟೀನ್ ಮೂಲವಿದ್ದು 'ಮಾರ್ಜೋ' ಎಂದರೆ ಲ್ಯಾಟಿನ್‌ನಲ್ಲಿ ಗಡಿ, ಬಾರ್ಡರ್, ಸೀಮಾರೇಖೆಯೆಂದಿದ್ದಿತ್ತಾದರೂ 1920ರ ಸುಮಾರಿಗೆ, ಅಕ್ಷರಶಃ ಅರ್ಥವನ್ನು ಕಳೆದುಕೊಂಡು, ವಿಶಾಲವಾದ ಧ್ವನಿತಾರ್ಥವನ್ನು ಪಡೆದುಕೊಂಡಿತು. ಆಗ 'ಮಾರ್ಜಿನಲೈಸ್ಡ್' ಎಂಬ ಪದ ಸಮಾಜದಿಂದ ಹೊರಗೆ ತಳ್ಳಲ್ಪಟ್ಟು ಅಧಿಕಾರವಂಚಿತರಾಗುವುದು ಎಂಬ ಅರ್ಥದಿಂದ ಚಲಾವಣೆಗೆ ಬಂದಿತು. ಹೀಗೆಂದರೆ ಕನ್ನಡದಲ್ಲಿ "ಕಡೆಗಣಿಸುವಿಕೆ" ಎಂದಾಗಬಹುದು. ಈ ಪದ ವ್ಯಕ್ತಿಯೊಬ್ಬನನ್ನು / ಗುಂಪೊಂದನ್ನು/ ಏನೇನೂ ಬೆಲೆಯಿಲ್ಲದಂತೆ ನಡೆಸಿಕೊಳ್ಳುವುದು ಎಂಬ ಅರ್ಥವನ್ನು ಪಡೆದುಕೊಂಡಿದೆ.

**ಕಡೆಗಣಿಸುವಿಕೆ ಎಂದರೇನು?**

ಕಡೆಗಣಿಸುವಿಕೆಯೊಂದು ಸಾಮಾಜಿಕ ಪ್ರಕ್ರಿಯೆ. ಸಾಮಾನ್ಯವಾಗಿ ಇದು ಬಹುಸಂಖ್ಯಾತ ಸಮಾಜದಲ್ಲಿ ಕಂಡುಬರುವುದು. ಬಹುಸಂಖ್ಯಾತ ಸಮಾಜವೆಂದರೆ, ಅನೇಕ ಗುಂಪಿನ ಜನರು ಮತ್ತು ಬಹುಮತೀಯ ವ್ಯಕ್ತಿಗಳು ಒಟ್ಟಾಗಿ ಸೇರಿ ರಾಜಕೀಯ ಶಕ್ತಿಯನ್ನು ಪ್ರತಿನಿಧಿಸುವುದು ಮತ್ತು ಅಧಿಕಾರವನ್ನು ಬಳಸುವುದು. ಇದಕ್ಕೆ ನಮ್ಮ ದೇಶವನ್ನೇ ಉದಾಹರಣೆಯನ್ನಾಗಿ ತೆಗೆದುಕೊಳ್ಳಬಹುದು. ಭಾರತದಲ್ಲಿ ಹಲವಾರು ಸಂಸ್ಕೃತಿ, ಭಾಷೆ, ಧರ್ಮಗಳ ಹಿನ್ನೆಲೆಯಿದ್ದರೂ ಒಟ್ಟಾಗಿ ಸೇರಿ ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿಸಿರುವುದು ಬಹುಸಂಖ್ಯಾತ ಸಮಾಜವನ್ನು ಪ್ರತಿನಿಧಿಸುತ್ತಿದೆ. ಇಲ್ಲಿ ಪ್ರತಿಯೊಬ್ಬರ ಧ್ವನಿಗೂ ಬೆಲೆ ಇರಬೇಕು. ಒಂದು ಆದರ್ಶ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವವೊಂದು ಉನ್ನತ ನಾಗರೀಕತೆಯ ಪ್ರತೀಕ. ಆದರೆ ಇಂತಹ ಸಾಮಾಜಿಕ ಹಿನ್ನೆಲೆಯಲ್ಲಿ ಕೆಲವರು, ಕೆಲವು ಗುಂಪಿನವರು, ಸಮುದಾಯದವರು, ಸಂಸ್ಕೃತಿಯವರು ಸರ್ಕಾರದ ಸೌಲಭ್ಯದಿಂದ ವಂಚಿತರಾದರೆ, ಅವರ ಅಸ್ತಿತ್ವಕ್ಕೆ ಧಕ್ಕೆ ಬಂದರೆ, ಅದನ್ನು ಕಡೆಗಣಿಸುವಿಕೆ ಎಂದು ವ್ಯಾಖ್ಯಾನಿಸಲಾಗುತ್ತದೆ.

"ಯಾವುದಾದರೂ ಒಂದು ವ್ಯವಸ್ಥೆಯ ಕೇಂದ್ರದಲ್ಲಿ ಸಿಕ್ಕುವ ಸೌಲಭ್ಯ, ಸೌಕರ್ಯಗಳಿಂದ ಮತ್ತು ಅಧಿಕಾರದಿಂದ ವಂಚಿತರಾಗಿ ಆ ವ್ಯವಸ್ಥೆಯ ಅಂಚಿಗೆ ತಳ್ಳಲ್ಪಡುವುದು ಕಡೆಗಣಿಸುವಿಕೆ" ಎಂದು ಸಾರ್ವಜನಿಕ ಆರೋಗ್ಯ ವಿಶ್ವಕೋಶ ವ್ಯಾಖ್ಯೆ ನೀಡಿದೆ. ಇದು ಮಾನವ ಸಮಾಜಗಳಲ್ಲಿ ಬಹಿರಂಗವಾಗಿ ನಡೆಯುವ ಕ್ರಿಯೆ. ಯಾರನ್ನಾದರೂ ಒಂದು ವ್ಯವಸ್ಥೆಯಲ್ಲಿ ಇಷ್ಟಪಡದಿದ್ದಾಗ ಅಥವಾ ಅವರಿಂದ ಏನೂ ಪ್ರಯೋಜನವಿಲ್ಲವೆಂದಾದಾಗ, ಅವರನ್ನು ನಿರ್ದಾಕ್ಷಿಣ್ಯವಾಗಿ ವ್ಯವಸ್ಥೆಯಿಂದ ಇಲ್ಲವಾಗುವಂತೆ ಅಥವಾ ಆ ವ್ಯವಸ್ಥೆಯಲ್ಲಿ ಅವರ ಅಸ್ತಿತ್ವವೇ ಇಲ್ಲದಂತೆ ಅಥವಾ ಇದ್ದರೂ ಇಲ್ಲದಂತೆ ಮಾಡುವ ಪ್ರವೃತ್ತಿ ಇದೆ. ಇದನ್ನೇ 'ಕಡೆಗಣಿಸುವಿಕೆ' ಎಂದು ಕರೆಯಲಾಗಿದೆ. ಹೀಗೆ ಮುಖ್ಯವಾಹಿನಿಯಿಂದ ಅಂಚಿಗೆ ತಳ್ಳಲ್ಪಟ್ಟ ಆದರೆ ಮುಖ್ಯವಾಹಿನಿಗೆ ತಾವು ಸೇರ್ಪಡೆಯಾಗುವ ಎಲ್ಲ ಸಾಧ್ಯತೆಗಳಿದ್ದರೂ ಅದರಿಂದ ವಂಚಿತವಾದ ಗುಂಪನ್ನು ಕಡೆಗಣಿಸಲ್ಪಟ್ಟ ಗುಂಪೆಂದು/ಕಡೆಗಣಿಸಲ್ಪಟ್ಟ ಸಮೂಹವೆಂದು ಗುರುತಿಸಲಾಗುವುದು. ಹೀಗೆ ಆದವರ ಉಳಿಗಾಲವು ಮತ್ತು ಮುಂದುವರೆಯುವ ಅವಕಾಶಗಳು ಬಹಳ ಸೀಮಿತವಾಗಿರುತ್ತವೆ.

ಆರ್ಕೋರ್‌ಕೋಲೀಯವರ ಪ್ರಕಾರ, "ಕಡೆಗಣಿಸುವಿಕೆ ಎಂದರೆ, ಸಮಾಜದ ಇತರ ಎಲ್ಲರಿಂದ ದೂರ ಉಳಿಯುವುದು ಅಥವಾ ಬೇರ್ಪಡುವುದು, ಬಲವಂತವಾಗಿ ಸಮಾಜದ ಅಂಚಿಗೆ ತಳ್ಳಲ್ಪಡುವುದು, ಏನೇ ಆದರೂ ಸಾಮಾಜಿಕ ವ್ಯವಸ್ಥೆಯ ಕೇಂದ್ರಭಾಗವನ್ನು ಸೇರದಂತೆ ಮಾಡುವುದೇ ಆಗಿರುತ್ತದೆ. ಈ ರೀತಿ ಕಡೆಗಣಿಸಲ್ಪಟ್ಟವರನ್ನು ಸಮಾಜದ ಒಂದು ಭಾಗವೆಂದೇ ಪರಿಗಣಿಸುವುದಿಲ್ಲ (2010)". ಅಂದರೆ ಸಮಾಜವೊಂದರಲ್ಲಿ ಅಷ್ಟೇನೂ ಪ್ರಮುಖವಲ್ಲದವರನ್ನು ಅಥವಾ ಅಧಿಕಾರರಹಿತರನ್ನು ಏನೂ ಸೌಲಭ್ಯವಿಲ್ಲದ, ಸೌಕರ್ಯವಿಲ್ಲದ ಸ್ಥಾನದಲ್ಲಿ ನಿಯಂತ್ರಿಸುವುದೇ ಕಡೆಗಣಿಸುವಿಕೆ ಎನಿಸಿಕೊಳ್ಳುತ್ತದೆ. ಯುನೆಸ್ಕೋ ಹೀಗೆ ಕಡೆಗಣಿಸಲ್ಪಟ್ಟ ಮಕ್ಕಳನ್ನು ಕುರಿತು ವಿವರಿಸುವಾಗ "ಮಿಲಿಯಾಂತರ ಮಕ್ಕಳು ತಮ್ಮ ಮೂಲಶಿಕ್ಷಣದ ಹಕ್ಕಿನಿಂದ ದೂರವೇ ಉಳಿದಿದ್ದಾರೆ, ಅದರಲ್ಲೂ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈಗಲೂ ಹಲವಾರು ಅಂಶಗಳು, ಉದಾಹರಣೆಗೆ, ವರಮಾನದ ವ್ಯತ್ಯಾಸಗಳು ಮತ್ತು ಸಾಮಾಜಿಕ ಅಂತಸ್ತು, ಇವುಗಳು ಪ್ರಾಥಮಿಕ ಶಿಕ್ಷಣದ ಅವಕಾಶದಿಂದ ಎಷ್ಟೋ ಮಕ್ಕಳನ್ನು ವಂಚಿತರನ್ನಾಗಿಸಿದೆ" ಎಂದು ಹೇಳಿದೆ.

ಹೀಗೆ ಕಡೆಗಣಿಸುವಿಕೆಯೊಂದು ಸಾಮಾಜಿಕ ಕೆಡುಕೆಂಬಂತೆ ಪರಿಗಣಿತವಾಗಿದೆ. ಅಲ್ಪಸಂಖ್ಯಾತರು, ಅವರ ಉಪಗುಂಪುಗಳು ಇಂತಹ ಪಿಡುಗಿಗೆ ಬಲಿಪಶುವಾಗಿವೆ, ಮೂಲಭೂತ ಸೌಲಭ್ಯದಿಂದ ವಂಚಿತರಾಗಿವೆ, ಅವರ ಆಸೆ, ಆಕಾಂಕ್ಷೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ.

ಭಾರತದ ಇತಿಹಾಸವನ್ನು ಸಿಂಹಾವಲೋಕನವನ್ನು ಮಾಡಿನೋಡಿ. ಪುರಾತನ ಕಾಲದಲ್ಲಿ ಶಿಕ್ಷಣವೆಂಬುದು ಎಲ್ಲರಿಗೂ ದಕ್ಕುವ ವಿಚಾರವೇ ಆಗಿರಲಿಲ್ಲ. ಶಿಕ್ಷಣವನ್ನು ಪಡೆದುಕೊಳ್ಳುವಲ್ಲಿಯೇ ಭೇದಭಾವವಿತ್ತು, ಅಸಮಾನತೆಯಿತ್ತು. ಜಾತಿ ಆಧಾರಿತ ಸಮಾಜವಾಗಿದ್ದ ಭಾರತದಲ್ಲಿ ಅಸಮಾನತೆ ಇತ್ತು. ಹಲವಾರು

ತಲೆಮಾರುಗಳ ತನಕ ಶಿಕ್ಷಣ ಕೇವಲ ಕೆಲವು ಗುಂಪಿನವರಿಗೆ ಮೀಸಲಾಗಿತ್ತು. ಇನ್ನುಳಿದ ಬಹಳಷ್ಟು ಮಂದಿಗೆ, ವಿಶೇಷವಾಗಿ ಕಡೆಗಣಿಸಲ್ಪಟ್ಟ ಗುಂಪಿನವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡದವರಿಗೆ ಹಾಗೂ ಇನ್ನಿತರ ಹಿಂದುಳಿದ ಜನಾಂಗದವರಿಗೆ, ಧಾರ್ಮಿಕವಾಗಿ ಅಲ್ಪಸಂಖ್ಯಾತರಾಗಿದ್ದವರಿಗೆ, ಮತ್ತು ಹೆಣ್ಣುಮಕ್ಕಳಿಗೆ ಶೈಕ್ಷಣಿಕ ಅವಕಾಶಗಳು ಕೈಗೆಟುಕದ ನಕ್ಷತ್ರಗಳಾಗಿದ್ದುವು.

ಕಡೆಗಣಿಸಲಾದ ಗುಂಪುಗಳು ಬಹಳಷ್ಟಿವೆ. ಆದರೆ ಸಮಾಜಶಾಸ್ತ್ರ ಅಧ್ಯಯನಕಾರರು, ಅವುಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಒಂದು, ವ್ಯಕ್ತಿಗತವಾದ ಕಡೆಗಣಿಸುವಿಕೆ ಮತ್ತು ಎರಡು, ಸಮುದಾಯದ ಕಡೆಗಣಿಸುವಿಕೆ. ಹೆಣ್ಣುಮಕ್ಕಳು, ವಿಕಲಾಂಗರು, ದಲಿತರು, ಮತ್ತು ಪರಿಶಿಷ್ಟ ಪಂಗಡಗಳು –ಇವರೆಲ್ಲರನ್ನು ಸಮುದಾಯದ ಕಡೆಗಣಿಸುವಿಕೆಯಲ್ಲಿನ ಗುಂಪಿಗೆ ಸೇರಿಸಲಾಗಿದೆ. ಅದೇ ರೀತಿ ಇನ್ನೊಂದು ವರ್ಗೀಕರಣದಲ್ಲಿ ನಾಲ್ಕು ಪ್ರಮುಖವಾದ ವಿಷಯಗಳನ್ನು ಆಧರಿಸಿದ ಗುಂಪುಗಳನ್ನು ನೋಡಬಹುದು, ಅವುಗಳು ಈ ಕೆಳಗಿನಂತಿವೆ:

**ಸಮೂಹ ಆಧಾರಿತ:** ಇದು ಕೆಲವು ಗುಂಪಿಗೆ ಸೇರಿದ್ದು, ಅಂದರೆ, ಪೌರಾತ್ಯ, ಜನಾಂಗೀಯ, ಸ್ಥಳೀಯ, ಜಾತಿ, ಭಾಷೆ, ಅಲ್ಪಸಂಖ್ಯಾತ, ಧಾರ್ಮಿಕ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಹೆಣ್ಣುಮಕ್ಕಳು –ಇವರನ್ನು ಸಮೂಹಗಳಲ್ಲಿ ನೋಡಬಹುದಾಗಿದೆ. ಈ ರೀತಿಯ ಸಮೂಹಗಳು ಕಡೆಗಣಿಸುವಿಗೆ ಒಳಗಾಗಿರುತ್ತವೆ.

**ಬಡತನ ಆಧಾರಿತ:** ವ್ಯಕ್ತಿಗಳ ಸಾಮಾಜಿಕ–ಆರ್ಥಿಕ ಸ್ಥಿತಿಯ ಕಾರಣದಿಂದ ಇವರನ್ನು ಕಡೆಗಣಿಸಲಾಗಿರುತ್ತದೆ. ಸತತವಾಗಿ ಬಡತನದಲ್ಲಿರುವವರು, ಆರ್ಥಿಕವಾಗಿ ತುಂಬಾ ದುರ್ಬಲರಾಗಿರುವವರು, ಬಾಲಕಾರ್ಮಿಕರು, ಬೀದಿಮಕ್ಕಳು, ಮತ್ತು ಮನೆಗೆಲಸದ ಮಕ್ಕಳು ಈ ಗುಂಪಿಗೆ ಸೇರುತ್ತಾರೆ.

**ಭೌಗೋಳಿಕ ಪ್ರದೇಶ ಆಧಾರಿತ:** ಪದವೇ ಹೇಳುತ್ತಿರುವಂತೆ ಇದು ಕೆಲವು ಭೌಗೋಳಿಕ ಪ್ರದೇಶದಲ್ಲಿರುವವರನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ನಗರದ ಕೊಳಚೆ ಪ್ರದೇಶಗಳು, ಕುಗ್ರಾಮಗಳು ಮತ್ತು ಬರಗಾಲ ಪೀಡಿತ ಪ್ರದೇಶಗಳು, ಗಡ್ಡಿರೇಖೆಯ ಭಾಗದ ಜನರು, ನಿರಾಶ್ರಿತರು ಮತ್ತು ಯುದ್ಧಕಾರಣದಿಂದಾಗಿ ಸ್ಥಳಾಂತರಗೊಂಡವರು.

**ವೈಯಕ್ತಿಕ ಅಂಶಗಳನ್ನಾಧರಿಸಿ:** ಈ ವಿಭಾಗದಲ್ಲಿ ವಿಶೇಷ ಅಗತ್ಯತೆಗಳನ್ನು ಬೇಡುವ ವ್ಯಕ್ತಿಗಳು ಅಂದರೆ, ಅನಾಥರು, ತೀವ್ರವಾದ ಮಾರಣಾಂತಿಕವಾದ ರೋಗಗಳಿಂದ ನರಳುತ್ತಿರುವವರು, ಏಡ್ಸ್ ರೋಗಿಗಳು, ಇತ್ಯಾದಿ. ನಮ್ಮ ದೇಶದಲ್ಲಿ ಹೆಣ್ಣುಮಕ್ಕಳು ಕಡೆಗಣಿಸುವಿಕೆಗೆ ಒಳಗಾಗುತ್ತಾರೆ, ಹೆಣ್ಣು ಭ್ರೂಣಹತ್ಯೆಯಿಂದ ಹಿಡಿದು ಅನೇಕ ಕ್ರೌರ್ಯಕ್ಕೆ ಮತ್ತು ಹಿಂಸೆಗೆ ಲಿಂಗತ್ವವೇ ಕಾರಣವಾಗಿರುತ್ತದೆ. ಹಾಗೆಯೇ ತೃತೀಯಲಿಂಗಿಗಳು ಕೂಡ ಈ ಗುಂಪಿಗೆ ಸೇರುತ್ತಾರೆ. ಒಂದು ಸಮೀಕ್ಷೆಯ ಪ್ರಕಾರ 12.6 ಮಿಲಿಯನ್ ಮಕ್ಕಳು (2001) ಅಪಾಯಕಾರಿ ಕೆಲಸಗಳಲ್ಲಿ ತೊಡಗಿದ್ದಾರೆ. 14 ವರ್ಷದೊಳಗಿನ ಬಾಲಕಾರ್ಮಿಕರನ್ನು ಹೊಂದಿರುವ ಅತ್ಯಂತ ದೊಡ್ಡ ದೇಶವೆಂದರೆ ಭಾರತ. ಇಂತಹ ಮಕ್ಕಳಲ್ಲಿ ಬೀದಿಮಕ್ಕಳು, ಲೈಂಗಿಕ ಕಾರ್ಯಕರ್ತರ ಮಕ್ಕಳು ಇನ್ನೂ ಕೀಳಾದ ಅನುಭವಗಳಿಗೆ ತುತ್ತಾಗುವರು.

ಕಡೆಗಣಿಸುವಿಕೆಯು ವ್ಯಕ್ತಿಗಳ ಮೇಲೆ ಆಗುವ ಪರಿಣಾಮಗಳು

- ಕಡೆಗಣಿಸಲ್ಪಟ್ಟ ವ್ಯಕ್ತಿಗಳು ಯಾವಾಗಲೂ ತಿರಸ್ಕೃತರಾಗಿರುತ್ತಾರೆ, ಎಲ್ಲರಿಂದ ಹೊರಗುಳಿದವರಾಗಿರುತ್ತಾರೆ, ಬಲಿಪಶುಗಳಾಗಿದ್ದು ಎಲ್ಲಾ ಸಾಮಾಜಿಕ ಸೌಲಭ್ಯಗಳಿಂದ ಮತ್ತು ಸಾಮಾಜಿಕವಾಗಿ ಗುರುತಿಸಿಕೊಳ್ಳುವಿಕೆಯಿಂದ ವಂಚಿತರಾಗಿರುತ್ತಾರೆ.
- ಕ್ಷೀಣಿಸಿದ ಆರೋಗ್ಯ, ಭಾವನಾತ್ಮಕವಾದ ಆಘಾತಗಳು ಪ್ರಬಲವಾಗಿದ್ದು, ಇವು ಸುಲಭವಾಗಿ ಪರಿಹಾರವಾಗುವಂತಿರುವುದಿಲ್ಲ.
- ಅವರು ಸ್ನೇಹಿತರಿಂದ ವಂಚಿತರಾಗಿರುತ್ತಾರೆ. ಅವರನ್ನು ಮಾತನಾಡಿಸುವವರು ಯಾರೂ ಇರುವುದಿಲ್ಲ.

ಅವರ ಆಸಕ್ತಿ ಏನು, ಅವರ ಮುಂದಿನ ಭವಿಷ್ಯವೇನು ಎಂಬುದು ಯಾರಿಗೂ ಬೇಕಾಗಿರುವುದಿಲ್ಲ. ಅವರ ಅಸ್ತಿತ್ವಕ್ಕೆ ಬೆಲೆಯೇ ಇಲ್ಲದಂತೆ ಅವರನ್ನು ಕಾಣಲಾಗುತ್ತದೆ.

- ಅವರು ಕಲಿಕೆಯಲ್ಲಿ ಹಿಂದೆ ಬೀಳುತ್ತಾರೆ, ಕಾರಣ ಅವರಗೆ ಕಲಿಯುವುದರಲ್ಲಿ ಆಸಕ್ತಿ ಉಳಿಸಿಕೊಳ್ಳಲಾಗುವುದಿಲ್ಲ. ಶಾಲೆಯಲ್ಲಿರುವವರು ಬಹಳ ಬೇಗ ಶಾಲೆ ಬಿಡುತ್ತಾರೆ.
- ಅವರ ಮೇಲೆ ಸಮಾಜದ ಋಣಾತ್ಮಕ ದೃಷ್ಟಿಯಿರುತ್ತದೆ. ಅವರನ್ನು ಕಳಂಕಿತರನ್ನಾಗಿಸಿದ ಸಮಾಜ ಯಾವುದಕ್ಕೂ ಅವರನ್ನು ಸೇರಿಸಿಕೊಳ್ಳುವುದಿಲ್ಲ.
- ಸಾಮಾಜಿಕವಾಗಿ ಯಾವುದೇ ಕೊಡುಗೆಯನ್ನು ನೀಡಲು ಅವರಿಗೆ ಅವಕಾಶಗಳು ಬಹಳ ಸೀಮಿತವಾಗಿರುತ್ತದೆ.
- ಅವರು ಖಿನ್ನತೆಯಿಂದ ನರಳುತ್ತಾರಲ್ಲದೆ, ಸ್ವ-ಹಿಂಸಾ ಪ್ರವೃತ್ತಿಯನ್ನು ತೋರುತ್ತಾರೆ.
- ಆತ್ಮವಿಶ್ವಾದ ಕೊರತೆಯ ಜೊತೆಗೆ ಬಡತನದಿಂದ ಬಳಲುತ್ತಾರೆ.

ಕಡೆಗಣಿಸಲಾದವರನ್ನು ಗುರುತಿಸುವುದು ಹೇಗೆ?

ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಮತ್ತು ಶಾಲೆಯ ಪರಿಸರದಲ್ಲಿ ಸೂಕ್ಷ್ಮವಾಗಿ ವೀಕ್ಷಿಸಿದರೆ, ಕಡೆಗಣಿಸಲ್ಪಟ್ಟವರನ್ನು ಗುರುತಿಸಲು ಸಾಧ್ಯವಿದೆ. ಹೀಗೆ ಗುರುತಿಸಲು ಅನುಕೂಲವಾಗುವ ಕೆಲವು ಲಕ್ಷಣಗಳನ್ನು ಈ ಕೆಳಗೆ ನೀಡಲಾಗಿದೆ ಗಮನಿಸಿ:

- ಶಾಲೆ ಬಿಟ್ಟವರು
- ಪ್ರತಿ ತರಗತಿಯಲ್ಲಿಯೂ ಸ್ಥಗಿತಗೊಂಡವರು
- ಆಕ್ರಮಣಕಾರಿ ಮತ್ತು ಸ್ವಯಂ-ಹಿಂಸಾ ಪ್ರವೃತ್ತಿಯನ್ನು ತೋರುವವರು
- ಅತೀ ಭಯ, ಆತಂಕ ಮತ್ತು ಇತರರೊಡನೆ ಮಾತನ್ನು ಪ್ರಾರಂಭಿಸಲು ಹಿಂಜರಿಯುವವರು
- ಕೌಶಲ ಬೆಳವಣಿಗೆಗೆ ಅವಕಾಶಗಳ ಅಭಾವ, ಸರಾಸರಿ ಮಟ್ಟಕ್ಕಿಂತ ಕಡಿಮೆ ನಿರ್ವಹಣಾ ಕೌಶಲಗಳು, ಸೂಕ್ಷ್ಮ ಕೆಲಸಗಳನ್ನು ಮಾಡಲು ಅಸಾಮರ್ಥ್ಯರಾದವರು
- ಅಪಕ್ವತೆ ಕಾಣಿಸುವಂತಿರುವವರು

**ಅಭ್ಯಾಸ : III**

ಈ ರೀತಿಯ ಕಡೆಗಣಿಸುವಿಕೆಯಿಂದ ಬಾಲ್ಯದ ಮೇಲೆ ಆಗುವ ಪರಿಣಾಮಗಳನ್ನು ನೀವು ಈಗಾಗಲೇ ಗಮನಿಸಿರುವಿರಿ. ಈ ರೀತಿಯ ನಾಲ್ಕು ಪರಿಣಾಮಗಳನ್ನು ಪಟ್ಟಿಮಾಡಿ.

| |
|---|
| |

ಕಡೆಗಣಿಸುವಿಕೆಯ ಪ್ರಭಾವ ಬಾಲ್ಯದ ಮೇಲೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಆಗುತ್ತದೆ.

- ಬಡತನ, ಅಸ್ಪೃಶ್ಯತೆ, ಲಿಂಗತ್ವ ಇತ್ಯಾದಿಗಳ ಪರಿಣಾಮವನ್ನು ಮಗುವು ನೇರವಾಗಿ ಅನುಭವಿಸುತ್ತದೆ;
- ಪೌಷ್ಟಿಕ ಆಹಾರವಿಲ್ಲದೆ ಮಕ್ಕಳ ಆರೋಗ್ಯಸ್ಥಿತಿ ಉತ್ತಮವಾಗಿಲ್ಲದಿರುವುದು;

- ಉತ್ತಮ ಶಾಲೆಗಳು ಹಾಗೂ ಶೈಕ್ಷಣಿಕ ಅನುಕೂಲತೆ ಇಲ್ಲದೆ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುವುದು;
- ಶಾಲೆಗೆ ಹೋಗುವ ಮಕ್ಕಳಿಗೆ ಅಗತ್ಯವಾದ ಕಲಿಕಾ ಸಾಮಗ್ರಿಗಳು, ಪುಸ್ತಕಗಳಿಲ್ಲದೆ ಸಾಧನೆ ಕುಂಠಿತವಾಗುವುದು;
- ಸಮಾಜದ ದೃಷ್ಟಿಕೋನದಿಂದಾಗಿ ಆತ್ಮವಿಶ್ವಾಸ ಕಡಿಮೆಯಾಗುವುದು;
- ಆತ್ಮಗೌರವಕ್ಕೆ ಧಕ್ಕೆ ಉಂಟಾಗುವುದು;
- ಸಮಾಜದಲ್ಲಿ ಭಾಗವಹಿಸುವ ಕೌಶಲಗಳು ಬೆಳೆಯದಿರುವುದು;
- ಸಾಮಾಜಿಕ ಭಾಗವಹಿಕೆ ಕಡಿಮೆ ಮಟ್ಟದಲ್ಲಿರುವುದು;
- ಅಸಹಜವಾದ ಭೀತಿ, ಅಭದ್ರತೆ ಕಾಡುವುದು;
- ಉತ್ತಮ ಪೌರರಾಗುವ ಅವಕಾಶದಿಂದ ವಂಚಿತರಾಗುವುದು;
- ಸಮಾಜದ ಕುರಿತು ಋಣಾತ್ಮಕ ಭಾವ ಮೂಡುವುದು;
- ಸಮಾಜದ ಎಲ್ಲ ಸವಲತ್ತುಗಳಿಂದ ವಂಚಿತರಾಗುವುದು;
- ಮೂಲಭೂತ ಹಕ್ಕುಗಳು ಸಿಗದಿರುವುದು;
- ಉತ್ತಮ ಆಹಾರ, ವಸತಿ ಮತ್ತು ವಿರಾಮ ದೊರಕದಿರುವುದು;
- ಮಗುವಿನ ಸಾಮಾಜೀಕರಣಕ್ಕೆ ಅಡ್ಡಿಯುಂಟಾಗುವುದು; ಮತ್ತು
- ವಿವಿಧ ಸಂಸ್ಕೃತಿಗಳಿಗೆ ತೆರೆದುಕೊಳ್ಳುವ ಅವಕಾಶವನ್ನು ನಿರಾಕರಿಸುವುದು.

ಈ ಪಟ್ಟಿ ಇನ್ನೂ ಬೆಳೆಯುತ್ತಲೇ ಹೋಗುವುದು. ಸೂಕ್ಷ್ಮ ದೃಷ್ಟಿಯುಳ್ಳ ಪ್ರತಿಯೊಬ್ಬರಿಗೂ ಇದು ದಿನನಿತ್ಯ ಅನುಭವಕ್ಕೆ ಬರುವ ಸಂಗತಿ.

**ಕಡೆಗಣಿಸುವಿಕೆಯ ಸನ್ನಿವೇಶದಲ್ಲಿ ಶಾಲೆ/ ಅಧ್ಯಾಪಕರ ಪಾತ್ರ :**

ಸಮಾಜದಲ್ಲಿ ಅಪೇಕ್ಷಣೀಯ ಬದಲಾವಣೆಯನ್ನು ತರುವ ನಿಯೋಗ ಶಾಲೆಯಾದರೆ ಅಧ್ಯಾಪಕ ಸಮಾಜವನ್ನು ಸುಧಾರಿಸುವ ನಿಯೋಗಿ. ಅಧ್ಯಾಪಕನಿಗೆ ಪ್ರಮುಖವಾಗಿ ಮೂರು ರೀತಿಯ ಸಾಮಾಜಿಕ ಕರ್ತವ್ಯಗಳಿರುತ್ತವೆ. ಒಂದು, ಆಯಾ ಸಮುದಾಯದಲ್ಲಿ ಉತ್ತಮವಾದ ಅಭ್ಯಾಸ, ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅನ್ವಯಿಸಿಕೊಳ್ಳುವುದು; ಎರಡು, ಅವುಗಳನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವುದು ಮತ್ತು ಅನಪೇಕ್ಷಣೀಯವಾದವುಗಳನ್ನು ಬದಲಿಸಿ ಜನತೆಯನ್ನು ಒಳಿತಿನೆಡೆಗೆ ಕೊಂಡೊಯ್ಯುವುದು. ಈ ಹಿನ್ನೆಲೆಯಲ್ಲಿ ಆಯಾ ಸಮುದಾಯದಲ್ಲಿ ಈ ರೀತಿಯ ಕಡೆಗಾಣಿಸುವಿಕೆ ಏಕೆ ಮತ್ತು ಹೇಗೆ ಆಗುತ್ತಿದೆ ಎಂಬುದನ್ನು ಕಂಡುಕೊಳ್ಳುವುದು, ಅವುಗಳ ಪರಿಣಾಮವನ್ನು ಎಲ್ಲರಿಗೂ ತಿಳಿಸಿ ಹೇಳುವುದು ಮತ್ತು ಮುಂದೆ ಹಾಗಾಗದಂತೆ ಜನರಲ್ಲಿ ಜಾಗೃತಿ ಮೂಡಿಸುವುದು. ಈ ಕೆಲಸಗಳನ್ನು ಮಾಡಲು ಶಾಲೆ ಅಂತೆಯೇ ಅಧ್ಯಾಪಕರು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು.

ಇಡೀ ಪ್ರಪಂಚದಲ್ಲಿ ಸುಮಾರು 1.8 ಮಿಲಿಯನ್ ಮಕ್ಕಳು ಶಾಲೆಗೆ ಹೋಗುವ ವಯೋಮಾನದವರಾಗಿದ್ದು, ಅವರೆಲ್ಲರನ್ನು ಕಡೆಗಣಿಸಲಾಗುವ ಪ್ರಕ್ರಿಯೆಯಿಂದ ಕಾಪಿಡಲು ಒಟ್ಟು ಶೈಕ್ಷಣಿಕ ವ್ಯವಸ್ಥೆ, ಶಿಕ್ಷಕರು ಮತ್ತು ಸಮಾಜ ಮನಸ್ಸು ಮಾಡಬೇಕು. ಹೊಸ ಹೊಸ ವಿಧಾನಗಳಿಂದ ಮಕ್ಕಳಲ್ಲಿ ಕಲಿಕೆಯುಂಟಾಗುವಂತೆ ಮಾಡುತ್ತಾ ಅವರಲ್ಲಿ ಪರಿವರ್ತನೆಗಳನ್ನು ತರಬೇಕಾಗುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

I. ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಕಡೆಗಣಿಸಲ್ಪಟ್ಟ ವ್ಯಕ್ತಿಗಳೆಂದರೆ____________

ಎ. ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾದವರು

ಬಿ. ಪ್ರಬಲವಾದ ಗುಂಪು

ಸಿ. ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳುವ ಗುಂಪು

ಡಿ. ಮೇಲಿನ ಯಾವುದೂ ಅಲ್ಲ

2. ಬಡತನವನ್ನು ಆಧರಿಸಿದ ಕಡೆಗಣಿಸುವಿಕೆಯಲ್ಲಿ ಒಳಗೊಳ್ಳುವ ಸಮೂಹ____________

ಎ. ಶ್ರೀಮಂತರು

ಬಿ. ಕನಿಷ್ಠ ಮಟ್ಟದ ಸಮಾಜೋ–ಆರ್ಥಿಕ ಸ್ಥಿತಿಯಲ್ಲಿರುವವರು

ಸಿ.ಕೆಳಮಟ್ಟದ ಜನರು

ಡಿ. ಸಾಮಾನ್ಯ ಜನರು

3 ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

ಎ. ಸಮುದಾಯ ಆಧಾರಿತ ಕಡೆಗಣಿಸುವಿಕೆಯಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟವರ್ಗದವರು ಸೇರುತ್ತಾರೆ.

ಬಿ. ಏಡ್ಸ್ ರೋಗಪೀಡಿತನ್ನು ವೈಯಕ್ತಿಕವಾಗಿ ಕಡೆಗಣಿಸಲಾಗಿರುತ್ತದೆ.

ಸಿ. ಕೇವಲ ಮಹಿಳೆಯರನ್ನು ಮಾತ್ರ ಕಡೆಗಣಿಸಲಾದವರೆಂದು ಗುರುತಿಸಲಾಗಿದೆ.

ಡಿ. ಬಾಲಕಾರ್ಮಿಕರು ಸಣ್ಣ ಕೈಗಾರಿಕೆಗಳ ಉತ್ಪನ್ನವಾಗಿದ್ದಾರೆ.

ಇ. ಕಡೆಗಣಿಸಲಾದ ಜನರು ಬಹಳ ಸ್ವಲ್ಪವೇ ಇದ್ದಾರೆ.

ಎಫ್. ಪುರಾತನ ಭಾರತದಲ್ಲಿ ಶೈಕ್ಷಣಿಕ ಸೌಲಭ್ಯವು ಎಲ್ಲರಿಗೂ ಸಮಾನವಾಗಿ ದೊರಕುತ್ತಿತ್ತು.

## 2.3.4. ಸಾರಾಂಶಿಸೋಣ

- ಬಾಲ್ಯಹಂತವು ಅತೀ ಕ್ರಿಯಾಶೀಲ ಹಂತವಾಗಿದ್ದು, ಹಲವಾರು ಅಂಶಗಳಿಂದ ಪ್ರಭಾವಿಸಲ್ಪಡುತ್ತದೆ.
- ವೈವಿಧ್ಯತೆ, ವಿಭಿನ್ನತೆ ಮತ್ತು ವ್ಯತ್ಯಾಸಗಳು ಹಾಗೂ ಕಡೆಗಣಿಸಲ್ಪಡುವಿಕೆ ಇವುಗಳು ಮುಖ್ಯವಾದ ಮೂರು ಕಾರಕ ಅಂಶಗಳಾಗಿ ವಿಕಾಸವಾಗುತ್ತಿರುವ ಮಕ್ಕಳನ್ನು ಪ್ರಭಾವಿಸುತ್ತವೆ. ಈ ಮೂರು ಕಾರಕ ಅಂಶಗಳಿಗೂ ಸಾಮಾಜಿಕ–ಸಾಂಸ್ಕೃತಿಕ ಆಯಾಮದ ಸಂಬಂಧವಿದೆ.
- ವೈವಿಧ್ಯತೆಯನ್ನು ಕೆಲವು ಅಂಶಗಳಾದ, ಸಂಸ್ಕೃತಿ, ಧರ್ಮ, ಪೋಷಕರ ಹಿನ್ನೆಲೆ, ಸಾಮಾಜಿಕ–ಆರ್ಥಿಕ ಸ್ಥಿತಿ, ಮತ್ತು ಇನ್ನು ಹಲವು ಜನಸಂಖ್ಯಾಧಾರಿತ ವಿಚಾರಗಳ ಮೂಲಕ ಗುರುತಿಸಬಹುದಾಗಿದೆ.
- ವ್ಯತ್ಯಾಸಗಳನ್ನು ವ್ಯಕ್ತಿಭಿನ್ನತೆಯ ಮೂಲಕ ನೋಡಬಹುದಾಗಿದೆ, ಬುದ್ಧಿಶಕ್ತಿ, ಭಾವನೆಗಳು, ಭಾಷಾ ಸಾಮರ್ಥ್ಯಗಳು, ಮತ್ತು ಇತರ ವೈಯಕ್ತಿಕ ಗುಣಲಕ್ಷಣಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು.
- ಭಾರತ ಬಹುಸಂಸ್ಕೃತಿ ಮತ್ತು ಬಹುಭಾಷಾ ದೇಶವಾಗಿದ್ದು, ಪ್ರತಿಯೊಂದು ಮಟ್ಟದಲ್ಲಿಯೂ ವಿಶೇಷ ಗುಣಲಕ್ಷಣಗಳನ್ನು ಹೊಂದಿದೆ. ಯಾವ ವ್ಯಕ್ತಿಗಳನ್ನು ಅಧಿಕಾರದಿಂದ, ಸೌಲಭ್ಯಗಳಿಂದ, ಮತ್ತು ಸೌಕರ್ಯಗಳಿಂದ ಕೈಬಿಡಲಾಗಿದೆಯೋ ಅಂತಹವರನ್ನು ಕಡೆಗಣಿಸಲ್ಪಟ್ಟವರೆಂದು ಗುರುತಿಸಲಾಗಿದೆ.

ಅವರಿಗೂ ಇದೇ ದೇಶದ ಪೌರತ್ವವಿರುವುದಾದರೂ ಅವರು ಕಡೆಗಣಿಸಲ್ಪಟ್ಟಿರುತ್ತಾರೆ.

- ಅಧಿಕಾರಶಾಹಿ ಸಮುದಾಯಗಳಿಗೂ ಮತ್ತು ಕಡೆಗಣಿಸಲಾದ ಸಮೂಹಕ್ಕೂ ಬಹಳಷ್ಟು ವ್ಯತ್ಯಾಸಗಳಿವೆ.
- ಕಡೆಗಣಿಸುವಿಕೆಯು ಬಾಲ್ಯದ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುತ್ತದೆ.
- ಕಡೆಗಣಿಸುವಿಕೆಯ ವಿರುದ್ಧ ಶಾಲೆಗಳು/ ಅಧ್ಯಾಪಕರು ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿದೆ.

## 2.3.1. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1.ಎ 2.ಡಿ 3. ಎ– √ ಬಿ– X ಸಿ– √ ಡಿ– √ ಇ–X

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1.ಸಿ 2. ಎ 3. ಎ–3; ಬಿ–4; ಸಿ–2; ಡಿ–1

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1.ಎ 2.ಬಿ 3. ಎ– √ ಬಿ– √ ಸಿ– X ಡಿ– X ಇ– X ಎಫ್–X

## 2.3.6. ಘಟಕಾಂತ್ಯ ಅಭ್ಯಾಸಗಳು:

1. ವೈವಿಧ್ಯತೆ ಎಂದರೇನು? ಮಗುವಿನ ಸಮಾಜೋ–ಸಾಂಸ್ಕೃತಿಕ ವಿಕಾಸವನ್ನು ಅದು ಹೇಗೆ ಪ್ರಭಾವಿಸುತ್ತದೆ?
2. ಕಡೆಗಣಿಸುವಿಕೆಯನ್ನು ವಿವರಿಸಿ. ಮಕ್ಕಳ ವಿಕಾಸದ ಮೇಲೆ ಕಡೆಗಣಿಸುವಿಕೆಯು ಹೇಗೆ ಪರಿಣಾಮ ಬೀರುವುದು ವಿವರಿಸಿ.
3. ವ್ಯತ್ಯಾಸಗಳು ಮಗುವಿನ ಸಮಾಜೋ–ಸಾಂಸ್ಕೃತಿಕ ವಿಕಾಸವನ್ನು ಹೇಗೆ ಪ್ರಭಾವಿಸುವುದು ಎಂಬುದನ್ನು ವಿವರಿಸಿ.
4. ಸಮಾಜದಲ್ಲಿನ ಕಡೆಗಣಿಸುವಿಕೆಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು ಮಾರ್ಗೋಪಾಯಗಳನ್ನು ತಿಳಿಸಿ.

## 2.3.7. ಪರಾಮರ್ಶನ ಸೂಚಿ


1. https://www.ncbi.nlm.nih.gov/books/NBK310550/-
2. https://theconversation.com/diversity-in-the-classroom-means-children-develop-differently-33899
3. https://extension publications.unl.edu/assets/pdf
4. https://study.com/academy/lesson/how-individual-differences-impact-early-childhood-development.html
5. Sultana Ali Norazi Torill Moen (2016) -Childhood as a social construction-journal of Educational and Social Research- MCSER publishing Rome-Italy.
6. Shelley E.Taylor – Letitia Anne Peplau – David O.Sears Pearson – Twelfth Edition (2006;2017).
7. John W.Santrock Adolescence Twelfth Edition, Tata McGraw-Hill Edition


*********************

# ಬ್ಲಾಕ್ 2 : ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ

## ಘಟಕ : 4 ಕಷ್ಟಕರ ಪರಿಸ್ಥಿತಿಯಲ್ಲಿ ಮಕ್ಕಳ ಬಾಲ್ಯಹಂತ

**ಘಟಕದ ರಚನೆ**


2.4.1. ಕಲಿಕಾ ಉದ್ದೇಶಗಳು

2.4.2. ಪೀಠಿಕೆ

2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.4.3.1. ಬಾಲ್ಯಹಂತ ಮತ್ತು ಕಷ್ಟಕರ ಪರಿಸ್ಥತಿಗಳು (ಜೈಲು/ಯುದ್ಧ ಪರಿಣಾಮಗಳನ್ನು ಎದುರಿಸುತ್ತಿರುವ ಕುಟುಂಬಗಳು ಮತ್ತು ಸಂಘರ್ಷಕರ ಸನ್ನಿವೇಶಗಳು)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.4.3.2. ಬಾಲ್ಯಹಂತ ಮತ್ತು ಕಷ್ಟಕರ ಪರಿಸ್ಥತಿಗಳು (ಬಡತನದ ಕುಟುಂಬಗಳು ಮತ್ತು ನಗರದ ಕೊಳಚೆ ಪ್ರದೇಶದ ಮಕ್ಕಳು)

1.4.3.3. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.4.3.4. ಬಾಲ್ಯಹಂತ ಮತ್ತು ಕಷ್ಟಕರ ಪರಿಸ್ಥತಿಗಳು (ಹೆಣ್ಣುಮಕ್ಕಳ ವಿಕಾಸ, ದಲಿತ/ಬುಡಕಟ್ಟು ಕುಟುಂಬಗಳಲ್ಲಿ ಅವರ ವಿಕಾಸ)

1.4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

2.4.4. ಸಾರಾಂಶಿಸೋಣ

2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

2.4.6. ಘಟಕಾಂತ್ಯ ಅಭ್ಯಾಸಗಳು

2.4.7. ಪರಾಮರ್ಶನ ಸೂಚಿ


## 2.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಕಷ್ಟಕರ ಪರಿಸ್ಥಿತಿಗಳ ಅರ್ಥ ಮತ್ತು ಸ್ವರೂಪವನ್ನು ವಿವರಿಸುವರು;
- ಯುದ್ಧ ಪರಿಣಾಮಗಳನ್ನು ಎದುರಿಸುತ್ತಿರುವ ಕುಟುಂಬಗಳಲ್ಲಿ ಬಾಲ್ಯಹಂತದ ಮಕ್ಕಳ ಸಮಸ್ಯೆಗಳನ್ನು ವಿಶ್ಲೇಷಿಸುವರು;
- ಅತೀ ಬಡತನದ ಕುಟುಂಬಗಳ ಮತ್ತು ಕೊಳಚೆ ಪ್ರದೇಶದಲ್ಲಿನ ಮಕ್ಕಳ ಪರಿಸ್ಥಿತಿಯನ್ನು ವಿವರಿಸುವರು; ಮತ್ತು
- ದಲಿತ/ಬುಡಕಟ್ಟು ಕುಟುಂಬಗಳಲ್ಲಿ ಮಕ್ಕಳ ಬಾಲ್ಯವನ್ನು ವಿಶೇಷವಾಗಿ ಹೆಣ್ಣುಮಕ್ಕಳ ಬಾಲ್ಯವನ್ನು ಅವರ ಕಷ್ಟಕರ ಪರಿಸ್ಥಿತಿಗಳನ್ನು ವಿವರಿಸುವರು.

## 2.4.2. ಪೀಠಿಕೆ

ಬಾಲ್ಯವನ್ನು ಕುರಿತಂತೆ ಮನೋವಿಜ್ಞಾನಿಗಳು, ಶಿಕ್ಷಣತಜ್ಞರು ಆದರ್ಶಮಯವಾಗಿ ವರ್ಣಿಸಿರುವರಾದರೂ ನಾವು ನಮ್ಮ ದೇಶದಲ್ಲಿ ಕಾಣುವಂತೆ ಮಕ್ಕಳ ಬಾಲ್ಯ ಭಿನ್ನವಾಗಿಯೇ ಇದೆ. ಒಟ್ಟು ಬಾಲ್ಯವನ್ನು ಕುರಿತಂತೆ ಸಾಮಾನ್ಯೀಕರಿಸಿ, ಈ ಹಂತದ ಮಕ್ಕಳು ಹೀಗೆಯೇ ಇರುತ್ತಾರೆ ಎಂದು ಹೇಳುವುದೇ ಕಷ್ಟ. ನಮ್ಮೆದುರೇ ಬದುಕುವ ಮಕ್ಕಳ ಬಾಲ್ಯ ಒಬ್ಬರಿಂದೊಬ್ಬರಿಗೆ ತೀರಾ ಭಿನ್ನವಾಗಿರುವುದೂ ನಮ್ಮ ಗಮನದಲ್ಲಿದೆ. ಅತ್ಯಂತ ಕಾಳಜಿ, ಜೋಪಾನ, ಪ್ರೀತಿ, ವಾತ್ಸಲ್ಯ, ಮಮತೆಯೊಂದಿಗೆ ಕಣ್ಣಲ್ಲಿ ಕಣ್ಣಿಟ್ಟು ಕಾಪಾಡುವ ಸನ್ನಿವೇಶದಲ್ಲಿರುವ ಮಕ್ಕಳ ಜೊತೆಜೊತೆಗೇ, ಯಾರಿಗೂ ಬೇಡವಾದ, ಹುಟ್ಟಿದ ಕೆಲದಿನಗಳಲ್ಲೇ ಮತ್ತೊಬ್ಬರ ಜೀವನ ಹೊರೆಯುವಂತೆ ಭಿಕ್ಷುಕರ ಜೋಳಿಗೆಯಲ್ಲಿ ಜೋಲುವ ಮಕ್ಕಳೂ ಇದ್ದಾರೆ. ಈ ರೀತಿಯ ಮಕ್ಕಳನ್ನು ನೋಡುವವರಿಲ್ಲ; ಕೇಳುವವರಿಲ್ಲ. ಡಾರ್ವಿನ್ನನ ವಾದಕ್ಕೆ ಅತಿ ಹತ್ತಿರವಾಗಿರುವವರು ಇವರು. ತಮ್ಮನ್ನು ಉಳಿಸಿಕೊಳ್ಳುವ ಶಕ್ತಿ ಇದ್ದರೆ ಉಳಿಯುತ್ತಾರೆ; ಇಲ್ಲವಾದರೆ ಅಳಿಯುತ್ತಾರೆ ಎಂಬ ಸ್ಥಿತಿ. ಈ ರೀತಿಯ ಮಕ್ಕಳನ್ನು "ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳು"ಎಂದು ಗುರುತಿಸಲಾಗುತ್ತಿದೆ. ಈ ವಾಸ್ತವತೆಯನ್ನು ಅದಕ್ಕೆ ಬೇಕಾದ ಎಲ್ಲ ಸಿದ್ಧತೆಯೊಂದಿಗೆ ಎದುರಿಸುವುದು ಶಿಕ್ಷಣಕ್ಕೆ ಒಂದು ದೊಡ್ಡ ಸವಾಲು. ಈ ರೀತಿಯ ಮಕ್ಕಳ ಸನ್ನಿವೇಶ ಎಂತಹುದು, ಅವರ ಕಷ್ಟಗಳೇನು, ಇವುಗಳ ಶೈಕ್ಷಣಿಕ ನಿಹಿತಾರರ್ಥಗಳೇನು ಎಂಬುದನ್ನು ನೀವು ಈ ಘಟಕದಲ್ಲಿ ತಿಳಿಯಲಿದ್ದೀರಿ.

ಮೊಟ್ಟಮೊದಲ ಬಾರಿಗೆ **"ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳು"** ಎಂಬ ಪರಿಕಲ್ಪನೆಯನ್ನು ಪ್ರಪಂಚಕ್ಕೆ ಪರಿಚಯಿಸಿದ ಘಟನೆಯೆಂದರೆ ಅದು ವರ್ಲ್ಡ್‌ಸಮ್ಮಿತ್ ಫಾರ್ ಚಿಲ್ಡ್ರನ್ 1990 (World Summit for Children-WSC 1990). ಈ ಶೃಂಗಸಭೆಯ ಪ್ರಕಾರ, ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳು ಎಂಬ ಒಂದು ಸಮೂಹದಲ್ಲಿ ಹಲವಾರು ರೀತಿಯ ಉಪ–ಗುಂಪುಗಳನ್ನು ಮತ್ತು ಪ್ರತಿಯೊಂದು ಉಪ–ಗುಂಪಿನಲ್ಲೂ ಅಗಾಧ ಸಂಖ್ಯೆಯ ಮಕ್ಕಳನ್ನೂ ಗುರುತಿಸಲಾಗಿದೆ. ಕಷ್ಟಕರ ಪರಿಸ್ಥಿತಿಗೆ ಸಿಕ್ಕು ನಲುಗುವ ಮಕ್ಕಳನ್ನು ಹೀಗೆ ಗುರುತಿಸಲಾಗಿದೆ:

- ನಿರ್ಗತಿಕ ಮಕ್ಕಳು
- ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳು
- ಬೀದಿ ಮಕ್ಕಳು ಮತ್ತು ಕೊಳಚೆ ನಿವಾಸಿಗಳು
- ಬಾಲ ಕಾರ್ಮಿಕರು
- ಅಪಹರಿಸಲ್ಪಟ್ಟ ಮಕ್ಕಳು
- ಹೆಣ್ಣುಮಕ್ಕಳ ಸಾಗಾಟದಲ್ಲಿ ಬಲಿಪಶುಗಳಾದವರು
- ಬಾಲಾಪರಾಧಿಗಳು
- ವಿಕಲಾಂಗರು ಮತ್ತು ಬುದ್ಧಿಮಾಂದ್ಯ ಮಕ್ಕಳು
- ಯುದ್ಧ, ಸಂಘರ್ಷ ಮತ್ತು ಪ್ರಾಕೃತಿಕ ದುರಂತಗಳಿಗೆ ಪಕ್ಕಾದವರು
- ನಿರಾಶ್ರಿತರ ಮಕ್ಕಳು
- ಹೆಚ್.ಐ.ವಿ. ಅಥವಾ ಏಡ್ಸ್ ರೋಗ ಪೀಡಿತರು
- ಅಸಹಾಯಕ ಮಕ್ಕಳು
- ಮಾರಣಾಂತಿಕ ರೋಗಗಳಿಂದ ನರಳುತ್ತಿರುವ ಮಕ್ಕಳು

ಮೇಲೆ ಹೇಳಿದ ಯಾವುದೇ ವಿಭಾಗದಲ್ಲಿರುವ ಮಗುವು ಆ ವರ್ಗಕ್ಕೆ ಸೇರಲು ಹಲವಾರು ಗುರುತರವಾದ ಕಾರಣಗಳುಂಟು. ಉದಾಹರಣೆಗೆ, ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬಕ್ಕೆ ಪಲ್ಲಟ, ಶಿಕ್ಷಣ ಮತ್ತು ಉದ್ಯೋಗಗಳ ನಡುವಿನ ಕಂದರ, ಅನಕ್ಷರತೆ, ಧೂಮಪಾನ, ಮದ್ಯಪಾನ ಮತ್ತು ಮಾದಕ ವಸ್ತುಗಳ ವ್ಯಸನಿಗಳಾದ ಪೋಷಕರು, ಬಡತನ, ಹಸಿವು ಮತ್ತು ದಾರಿದ್ರ್ಯ, ವಿಚ್ಛೇದಿತ ತಂದೆತಾಯಿಯರು, ಬಾಲ್ಯವಿವಾಹ, ಮುಂತಾದವು. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳೆನ್ನುವ ನಾವು ಮೇಲೆ ನೀಡಿದ ನಿದರ್ಶನಗಳನ್ನು ಕೂಲಂಕಷವಾಗಿ ಗಮನಿಸಬೇಕು. ಉತ್ತಮ ಶಿಕ್ಷಣವಿಲ್ಲದ, ಒಳ್ಳೆಯ ಜೀವನವಿಲ್ಲದ ಇಂತಹ ಮಕ್ಕಳು ಸಮಾಜ–ವಿರೋಧೀ ಸಂಘಟನೆಗಳ ಸುಳಿಗೆ ಸುಲಭವಾಗಿ ಸಿಲುಕಿಕೊಳ್ಳುತ್ತಾರೆ.

## 2.4.3.1. ಬಾಲ್ಯಹಂತ ಮತ್ತು ಕಷ್ಟಕರ ಪರಿಸ್ಥಿತಿಗಳು (ಜೈಲು/ಯುದ್ಧ ಪರಿಣಾಮಗಳನ್ನು ಎದುರಿಸುತ್ತಿರುವ ಕುಟುಂಬಗಳು ಮತ್ತು ಸಂಘರ್ಷಕರ ಸನ್ನಿವೇಶಗಳು)

ಈ ಸನ್ನಿವೇಶವನ್ನು ಗಮನಿಸಿ.

ಎ. ಮೇರಿ ಒಬ್ಬ ಸೈನ್ಯಾಧಿಕಾರಿಯ ಮಗಳು. ಅವಳ ಬಾಲ್ಯಾವಸ್ಥೆಯಲ್ಲಿ ಯುದ್ಧದ ವಾತಾವರಣ ಇದ್ದದ್ದರಿಂದ ಬಹಳಷ್ಟು ಸಲ ಅವರು ವಾಸಸ್ಥಾವನ್ನು ಬದಲಾಯಿಸಬೇಕಾಗುತ್ತಿತ್ತು. ಪ್ರತಿ ಸಲ ಮನೆ ಬದಲಾಯಿಸಿದಾಗಲೂ ಹೊಸ ನೆರೆಹೊರೆಯವರೊಂದಿಗೆ ಹೊಸದಾಗಿ ಸ್ನೇಹ, ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕಾಗುತ್ತಿತ್ತು. ಮೇರಿ ಆ ದಿನಗಳನ್ನು ವರ್ಣಿಸುವುದು ಹೀಗೆ: "ನಮ್ಮ ಪ್ರತಿ ರಾತ್ರಿಯೂ ಆತಂಕದ ಆಗರವೇ ಆಗಿತ್ತು. ಅದರಲ್ಲೂ ಟೆಲಿಫೋನ್ ರಿಂಗಣಿಸಿದರಂತೂ ಹೃದಯವೇ ಬಾಯಿಗೆ ಬಂದಂತೆ ಆಗುತ್ತಿತ್ತು. ನನ್ನ ತಂದೆ ಇರಾಕ್ ಯುದ್ಧದ ದಿನಗಳಲ್ಲಿ ಸೈನ್ಯಾಧಿಕಾರಿಯಾಗಿ ಹೊರಟ ಆ ದಿನಗಳು ಅದೆಷ್ಟು ಕಷ್ಟಕರವಾಗಿದ್ದುವು!

ಬಿ. ಕಾರ್ಗಿಲ್ ಯುದ್ಧ 1991ರಲ್ಲಿ ನಡೆದಾಗ ಹುಸೇನ್ 13 ವರ್ಷದವನಾಗಿದ್ದ ಮತ್ತು 7ನೇ ತರಗತಿಯಲ್ಲಿ ಓದುತ್ತಿದ್ದ. ತರಗತಿಯಲ್ಲಿರುವಾಗಲೇ ಆತನ ಶಾಲೆಯು ಬಾಂಬ್ ಧಾಳಿಗೆ ಸಿಲುಕಿತ್ತು. ಅದರಲ್ಲಿ ಒಬ್ಬ ವಿದ್ಯಾರ್ಥಿಯು ಕೊನೆಯುಸಿರೆಳೆದನು. ಇಬ್ಬರು ಶಿಕ್ಷಕರು ಮತ್ತು ಇಬ್ಬರು ವಿದ್ಯಾರ್ಥಿಗಳು ಮಾರಣಾಂತಿಕವಾಗಿ ಗಾಯಗೊಂಡರು. ಮುಂದೆ ಹುಸೇನ್ ಉನ್ನತ ಶಿಕ್ಷಣಕ್ಕಾಗಿ ಕಾರ್ಗಿಲನ್ನು ಬಿಟ್ಟನು. ಅವನು ಎಲ್ಲೇ ಹೋದರೂ ಅವನನ್ನು ಬೇರೆಯವರು ಗುರುತಿಸುತ್ತಿದ್ದುದು ಕಾರ್ಗಿಲ್ ಯುದ್ಧದ ಹಿನ್ನೆಲೆಯಿಂದಲೇ. ಇದು ಆತನನ್ನು ತೀವ್ರವಾಗಿ ಕುಗ್ಗಿಸುತ್ತಿತ್ತು. ಇದರಲ್ಲಿ ಅವನದೇನೂ ತಪ್ಪಿಲ್ಲದಿದ್ದರೂ ಜನರು ಅವನನ್ನು ಸಂಶಯದ ದೃಷ್ಟಿಯಿಂದಲೇ ನೋಡುತ್ತಿದ್ದರು. 'ನಾನು ನನ್ನ ನಿಜ ಸ್ವರೂಪದಲ್ಲಿ ಯಾವಾಗ ಈ ಪ್ರಪಂಚದಲ್ಲಿ ಬಾಳುತ್ತೇನೆ? ಯಾವಾಗ ಎಲ್ಲರೂ ನನ್ನನ್ನೂ ಸಾಮಾನ್ಯನಂತೆ ಗುರುತಿಸಿ ವ್ಯವಹರಿಸುತ್ತಾರೆ? ಯಾವಾಗ ಸಾಮಾಜಿಕವಾದ ಬೆಲೆ ಗೌರವಗಳು ನನ್ನದಾಗುತ್ತವೆ ಎಂಬ ಕೊರಗಿನಲ್ಲೇ ಜೀವನ ತಳ್ಳುತ್ತಿದ್ದನು.

ಯುದ್ಧವು ಮಕ್ಕಳನ್ನು ಹೇಗೆ ಪೀಡಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮೇಲೆ ಹೇಳಿದ ಉದಾಹರಣೆಗಳೊಡನೆ, ನಮ್ಮ ದೇಶದ ಗಡಿಭಾಗದಲ್ಲಿ ನಿತ್ಯ ನಡೆಯುವ ಯುದ್ಧದ ಚಕಮಕಿಯನ್ನು ನಾವು ಗಮನಿಸಬಹುದು. ಇಂಡಿಯಾ ಮತ್ತು ಪಾಕಿಸ್ಥಾನವನ್ನು ಬೇರ್ಪಡಿಸುವ ಲೈನ್ ಆಫ್ ಕಂಟ್ರೋಲ್‌ನ ಆಸು ಪಾಸಿನವರ ಜನಜೀವನವನ್ನು ವಿಶ್ಲೇಷಿಸಿದರೆ ಇನ್ನಷ್ಟು ಕಠಿಣ ಪರಿಸ್ಥಿತಿಗಳ ವಿವರಣೆ ನಮಗೆ ಸಿಕ್ಕುವುದು. ಯಾವಾಗಲೂ ಭಯದ ವಾತಾವರಣದಲ್ಲಿ ಇಲ್ಲಿನ ಜನರು ವಾಸಿಸುತ್ತಾರೆ. ಮನೆ, ಶಾಲೆಗಳು ಗಾವುದ ದೂರ, ಆದರೆ ಎಲ್ಲಿ ನೋಡಿದರಲ್ಲಿ ಬರೀ ಬಾಂಬುಗಳಿಂದ ತುಂಬಿರುವ ಟ್ಯಾಂಕರ್‌ಗಳು, ಟ್ರೆಂಚ್‌ಗಳು ಮತ್ತು ಬಂಕರ್‌ಗಳು ಕಾಣಸಿಗುತ್ತವೆ. ಮನೆಯಲ್ಲಿರುವವರನ್ನೂ ಬಿಡದೆ ಬಾಂಬ್‌ಗಳಿಂದ ಧಾಳಿ ಮಾಡುವರು, ಅಮಾಯಕ ಜನಗಳು ಕೆಲಸ ಮಾಡುವ ಸ್ಥಳಗಳನ್ನು ಗುರಿಯಾಗಿಸಿಕೊಂಡು ಬಾಂಬ್‌ಗಳನ್ನು ಎಸೆಯುವರು. ಇಂತಹ ಬಾಂಬ್ ಧಾಳಿಗಳು ಯಾವಾಗ ಆಗಬಹುದು ಎಂದು ತಿಳಿಯುವುದು ಸಾಧ್ಯವೇ ಇಲ್ಲ. ಆದರೆ ಯಾವಾಗಲೂ ಇಂತಹ ಹಿಂಸಾತ್ಮಕ ಕೃತ್ಯಗಳು ಜನರ ನಿತ್ಯಜೀವನದ ಚಟುವಟಿಕೆಗಳು ನಡೆಯುವ ಸ್ಥಳದಲ್ಲೇ

ಆಗುತ್ತವೆ. ಸಾಮಾನ್ಯವಾಗಿ ಇಂತಹ ವಲಯಗಳನ್ನು 'ಗ್ರೇ–ವಲಯ'ಗಳೆಂದು ಗುರುತಿಸುತ್ತಾರೆ. ಇವು ಸುರಕ್ಷಿತವಲ್ಲ, ಇಲ್ಲಿ ಯಾರೂ ಯಾರಮೇಲೂ ನಿಯಂತ್ರಣವನ್ನು ಹೊಂದಿರುವುದಿಲ್ಲ, ಯಾವ ಸಮಯದಲ್ಲಿ ಬೇಕಾದರೂ ಇಲ್ಲಿ ಹಿಂಸಾಚಾರ ಪ್ರಾರಂಭವಾಗಬಹುದು. ಈ ಪ್ರದೇಶದ ನಾಗರಿಕರು ಸಾವಿನ ನೆರಳಲ್ಲೇ ತಮ್ಮ ಜೀವನವನ್ನು ಸಾಗಿಸುವರು. ಅಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳು ದಾರಿತಪ್ಪುವುವು. ಸ್ಥಳಾಂತರಗಳಿಂದ ಕುಟುಂಬ ಸದಸ್ಯರನ್ನು ಕಳೆದುಕೊಳ್ಳುವುದು ಅಥವಾ ಅವರ ಸಾವು ಇಲ್ಲಿ ಸರ್ವೇಸಾಮಾನ್ಯ. ಸಾಮಾಜಿಕ ಸಾರಿಗೆ ವ್ಯವಸ್ಥೆ ಯಾವಾಗ ಬೇಕಾದರೂ ಕೈಕೊಟ್ಟು ನಿಲ್ಲಬಹುದು. ಜನರು ತಮ್ಮ ಆಸ್ತಿಪಾಸ್ತಿಯನ್ನು ಕಳೆದುಕೊಳ್ಳುವುದೇ ಅಲ್ಲದೇ ತಮ್ಮ ಪ್ರೀತಿಪಾತ್ರರಿಂದ ಅಗಲಿ ಇರಬೇಕಾಗುವುದು.

ಮಗುವೊಂದು ಹುಟ್ಟುವಾಗ ಅತ್ಯಂತ ನಿರ್ಮಲವಾದ, ಮುಗ್ಧವಾದ ಮನಸ್ಸಿನಿಂದ ಹುಟ್ಟುತ್ತದೆ. ಆದರೆ ಯುದ್ಧ ಮತ್ತು ಗಲಾಟೆ, ಜಗಳಗಳು ಮಗುವನ್ನು ಮುಂದೆ ಹಿಂಸಾಚಾರಿಯಾಗುವಂತೆ ಮಾಡುತ್ತವೆ. ಸಾಮಾಜಿಕ ಕಟ್ಟುಪಾಡುಗಳೇ ಇಲ್ಲದೆ ಇಡೀ ವ್ಯವಸ್ಥೆಯೇ ಹದಗೆಟ್ಟು ಹೋದಾಗ ಮಕ್ಕಳು ಮುಖ್ಯವಾಗಿ ಬಲಿಪಶುಗಳಾಗುತ್ತಾರೆ. ಅವರನ್ನು ಅವರ ತಂದೆತಾಯಿಯರಿಂದ ಬೇರ್ಪಡಿಸಿ ಎಳೆದೊಯ್ಯುತ್ತಾರೆ. ಅಲ್ಲದೆ ಅವರ ಮೇಲೆ ಹಿಂಸೆ ಮತ್ತು ಅತ್ಯಾಚಾರಗಳನ್ನು ನಡೆಸುತ್ತಾರೆ. ಇನ್ನು ಯುದ್ಧದಲ್ಲಿ ಹೋರಾಡುವವರಲ್ಲಿ ಕೆಲವರು ವೀರಸ್ವರ್ಗವನ್ನು ಸೇರಿದರೆ, ಪ್ರಾಣ ಉಳಿಸಿಕೊಂಡವರಲ್ಲಿ ಸಾವು–ಬದುಕಿನ ನಡುವೆ ಹೋರಾಟ ಮಾಡುವ ಸಮಸ್ಯೆ ಎದುರಾಗುತ್ತದೆ. ಅವರು ಕೈ–ಕಾಲುಗಳನ್ನು ಕಳೆದುಕೊಳ್ಳಬಹುದು. ಅವರು ದೀರ್ಘಾವಧಿಯ ಮನೋ–ಸಾಮಾಜಿಕ ತೊಂದರೆಗಳನ್ನು ಅನುಭವಿಸುವರು.

ರಕ್ಷಣಾ ಇಲಾಖೆಯವರ ಪ್ರಕಾರ ವಿಕಾಸದ ವಿವಿಧ ಹಂತದಲ್ಲಿರುವ ಮಕ್ಕಳ ಮೇಲೆ ಯುದ್ಧವು ವಿವಿಧ ರೀತಿಯ ಪರಿಣಾಮಗಳನ್ನು ಬೀರುವುದು. ಅವುಗಳಲ್ಲಿ ಕೆಲವನ್ನು ಈ ಕೆಳಗೆ ನೀಡಲಾಗಿದೆ:

- 3 ರಿಂದ 6 ವರ್ಷದ ಮಕ್ಕಳು ಆತಂಕ, ಒತ್ತಡ, ದೈಹಿಕವಾದ ನೋವು ಮತ್ತು ಆಯಾಸ ಹಾಗೂ ತಂದೆತಾಯಿಯರಿಂದ ತಮ್ಮನ್ನು ಬೇರ್ಪಡಿಸಬಹುದೆಂಬ ಭಯದಿಂದ ಯಾವಾಗಲೂ ಒದ್ದಾಡುತ್ತಿರುತ್ತಾರೆ.
- ತಮ್ಮ ತಂದೆತಾಯಿಯರ ಅನುಪಸ್ಥಿತಿ ಮತ್ತು ಅದರಿಂದ ಒದಗುವ ಅಪಾಯಕಾರಿ ಸನ್ನಿವೇಶಗಳನ್ನು ಸ್ವಲ್ಪ ದೊಡ್ಡ ಮಕ್ಕಳು ಅರ್ಥಮಾಡಿಕೊಳ್ಳುವರು, ಮತ್ತು ಅದನ್ನು ಹೆದರಿಕೆ, ತಿರಸ್ಕಾರ ಮತ್ತು ಆಕ್ರಮಣಕಾರಿ ವರ್ತನೆಗಳ ಮೂಲಕ ವ್ಯಕ್ತಪಡಿಸುವರು.
- ಹದಿಹರೆಯದವರದ್ದೇ ಹೆಚ್ಚು ಅಪಾಯಕಾರಿ ಪರಿಸ್ಥಿತಿಯಾಗಿರುತ್ತದೆ. ಅವರು ಮಾದಕವಸ್ತುಗಳ ವ್ಯಸನಿಗಳಾಗುವರು, ಮತ್ತು ಅವಧಿಪೂರ್ವದಲ್ಲಿಯೇ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗುವರು.
- ಮಿಲಿಟರಿ ಪೋಷಕರನ್ನು ಹೊಂದಿರುವ ಮಕ್ಕಳಿಗೆ ಶೈಕ್ಷಣಿಕವಾದ ತೊಂದರೆಗಳು ಎದುರಾಗುವುವು. ಏಕೆಂದರೆ ಪದೇ ಪದೇ ಅವರ ವರ್ಗಾವಣೆಯಾಗುವುದರಿಂದ ಅವರ ಶಾಲೆಯೂ ಬದಲಾಗುತ್ತಾ ಸಾಗುತ್ತದೆ.

2015ರಲ್ಲಿ ಯೂನಿಸೆಫ್ ಸುಮಾರು 1,500 ಮಕ್ಕಳು ತಮ್ಮ ಹಕ್ಕುಗಳಿಂದ ವಂಚಿತರಾಗಿರುವುದನ್ನು ಸಿರಿಯಾದಿಂದ ವರದಿ ಮಾಡಿತು. ಸುಮಾರು 60% ಮಕ್ಕಳು ಸಾವನ್ನಪ್ಪಿದ್ದರು. ಕೆಲವರು ಮಾರಣಾಂತಿಕವಾಗಿ ಗಾಯಗೊಂಡಿದ್ದರು, ಇದು ನಡೆದದ್ದು ಸಿರಿಯಾದ ಮೇಲೆ ನಡೆದ ಬಾಂಬ್ ಧಾಳಿಯಲ್ಲಿ. ಈ ಬಾಂಬ್ ಧಾಳಿಯು ದಟ್ಟವಾದ ಜನವಸತಿಗಳಿರುವ ಪ್ರದೇಶಗಳ ಮೇಲೆಯೇ ನಡೆದಿತ್ತು. ಇಂತಹ ಯುದ್ಧವಲಯದಲ್ಲಿನ ಮಕ್ಕಳು ವರ್ಷಗಟ್ಟಲೇ ಶಾಲೆಯ ಮೆಟ್ಟಿಲನ್ನೇ ತುಳಿಯಲು ಆಗುವುದಿಲ್ಲ. ಏಕೆಂದರೆ ಅವರ ಶಾಲೆಗಳೇ ಬಾಂಬ್ ಧಾಳಿಗೆ ಸಿಲುಕಿ ನಾಶವಾಗಿರುವುದೂ ಉಂಟು. ಶಾಲೆಗೆ ಹೋಗುವ ದಾರಿಯೂ ಕೂಡ ಅಷ್ಟೇ ಅಪಾಯಕಾರಿ. ಅದರ ಜೊತೆಯಲ್ಲಿ ಪುಸ್ತಕಗಳಿಗೆ, ಬರೆಯಲು ಪೆನ್ನು ಹಾಳೆಗಳಿಗೂ ಬರ ಬರುವಷ್ಟು ಆರ್ಥಿಕ ಕಷ್ಟಗಳೂ ಸೇರಿರುತ್ತವೆ.

ವಿಶ್ವದಾದ್ಯಂತ 18 ವರ್ಷದವರೆಗಿನ 75 ಮಿಲಿಯನ್ ಮಕ್ಕಳು 3ರಿಂದ ಶಾಲಾ ಪೂರ್ವ ಅಥವಾ ಶಾಲಾ/ಕಾಲೇಜುಗಳಲ್ಲಿ ಅತಿ ಹೆಚ್ಚು ಗೈರುಹಾಜರಾಗುವರು ಮತ್ತು ಕಲಿಕೆಯ ನಡುವೆ ತೊಡಕನ್ನು ಎದುರಿಸುವರು. ಸತತವಾಗಿ ನಡೆಯುವ ವಿಧ್ವಂಸಕ ಕೃತ್ಯಗಳು ಮತ್ತು ಜೊತೆಯಲ್ಲಿ ನಡೆಯುವ ಪ್ರಕೃತಿ ವಿಕೋಪಗಳು ಇದಕ್ಕೆ ಕಾರಣ. ಯೂನಿಸೆಫ್‌ನ ಒಂದು ವರದಿಯ ಪ್ರಕಾರ ಸಿರಿಯಾ ದೇಶದ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಯುದ್ಧ ಮತ್ತು ಹೊಡೆದಾಟಗಳನ್ನು ಬಿಟ್ಟರೆ ಬೇರೇನೂ ಗೊತ್ತಿಲ್ಲ. ಹೀಗೆ ಅತಿಯಾಗಿ ಯುದ್ಧದ ಸನ್ನಿವೇಶಗಳಲ್ಲೇ ಮಕ್ಕಳು ಬೆಳೆಯುವಂತಾದಾಗ ಅವರಲ್ಲಿ ಸಹಜವಾಗಿ ಆಗಬೇಕಾಗಿದ್ದ ಸಂಜ್ಞಾನಾತ್ಮಕ ವಿಕಾಸ ಮತ್ತು ಭಾವನಾತ್ಮಕವಾದ ಸಮತೋಲನ ಇವೆಲ್ಲವೂ ಕನಿಷ್ಟ ಮಟ್ಟದವಾಗಿ ಬದಲಾಗುತ್ತವೆ.

**ಯುದ್ಧದ ಪರಿಣಾಮಗಳು**

ಆರ್ಥಿಕ ಸ್ಥಿತಿಯ ಮೇಲೆ ಆಗುವ ಪರಿಣಾಮಗಳು: ಯದ್ಧದಿಂದ ಕುಟುಂಬದ ಯಜಮಾನನು ತೀರಿಕೊಂಡಾಗ ಅವನನ್ನು ನಂಬಿದ್ದ ಕುಟುಂಬವು ಬೀದಿಪಾಲಾಗುತ್ತದೆ. ಆಸ್ತಿಪಾಸ್ತಿಗಳು ಕಳೆದುಹೋಗುವುದು, ಮನೆಮಠಗಳನ್ನು ಮತ್ತೆ ಕಟ್ಟಿಕೊಳ್ಳಲೇಬೇಕಾದ ಅನಿವಾರ್ಯತೆ, ಸೈನ್ಯದಲ್ಲಿದ್ದು ಗಾಯಾಳುವಾಗಿ ಮನೆಸೇರಿದವರ ಶುಶ್ರೂಷೆಗಾಗಿ ತಗಲುವ ಖರ್ಚು– ಇವೆಲ್ಲವೂ ಮನೆವಾರ್ತೆಯ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುವುವು.

ಸಾಮಾಜಿಕ ಪರಿಣಾಮಗಳು: ಸಾಮಾನ್ಯವಾಗಿ ಯುದ್ಧದ ಕಾದಾಟದಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯರಾಗುವ ಹೆಣ್ಣುಮಕ್ಕಳು ತಮ್ಮ ಕುಟುಂಬದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಅದೇಷ್ಟೇ ಹಿಂಸಾಕೃತ್ಯಗಳು ನಡೆದಿದ್ದರೂ ತಮ್ಮ ಜೀವನವನ್ನು ಮತ್ತೆ ಕಟ್ಟಿಕೊಳ್ಳುವ ಅನಿವಾರ್ಯತೆ ಅವರಿಗೆ ಎದುರಾಗುತ್ತದೆ.

ಶಾಲೆ ಮತ್ತು ತರಬೇತಿ: ನಿಜವಾಗಿ ಹೇಳಬೇಕೆಂದರೆ, ಶಾಲಾಕಲಿಕೆ ಜೊತೆಯಲ್ಲಿಯೇ ಪ್ರಬಲವಾಗಿ ಹೊಡೆದಾಡುವ ಕೌಶಲಗಳ ತರಬೇತಿಯನ್ನು ನಾವು ಮದರಸಾಗಳಲ್ಲಿ ಕಣ್ಣಾರೆ ನೋಡಬಹುದು. ಉದಾಹರಣೆಗೆ ಆಫ್ಘನ್ ಮತ್ತು ಕಾಶ್ಮೀರದ ಸಂಘರ್ಷಗಳಲ್ಲಿ. ಆಫ್ಘನ್ ನಿರಾಶ್ರಿತರ ವಸತಿತಾಣದಲ್ಲಿ ಮುಜಾಹುದ್ದೀನ್ ಮತ್ತು ತಾಲಿಬಾನಿನ ಉಗ್ರ ಸಂಘಟನೆಯ ತರಬೇತಿಯನ್ನು ನೀಡುತ್ತಿದ್ದರು. ಆದರೆ ಇತ್ತೀಚಿಗೆ ಮಕ್ಕಳನ್ನು ಹೀಗೆ ಸೈನಿಕರನ್ನಾಗಿ ತಯಾರು ಮಾಡುವುದನ್ನು ವಿರೋಧಿಸಲಾಗುತ್ತಿದೆ.

ಬಾಲ ನ್ಯಾಯಿಕ ಸ್ಥಿತಿ: ಹೇಗಾದರೂ ಮಾಡಿ ಹಣ ಸಂಪಾದನೆ ಮಾಡಬೇಕೆಂಬ ಹುಂಬತನಕ್ಕೆ ಬಿದ್ದ ಹದಿಹರೆಯದ ಗಂಡುಮಕ್ಕಳು ಅದಕ್ಕಾಗಿ ಏನು ಮಾಡಲೂ ತಯಾರಾಗುತ್ತಾರೆ. ಇದೊಂದು ಆತಂಕಕಾರಿ ಬೆಳವಣಿಗೆ. ಎನ್.ಜಿ.ಒ. (N.G.O – SPARC) ಸಂಸ್ಥೆಗಳಲ್ಲಿ ಒಂದಾದ ಸ್ಪಾರ್ಕ್ ಹೇಳಿರುವಂತೆ ಕರಾಚಿಯಲ್ಲಿ ಅರೆಸ್ಟ್ ಆದ ಸುಮಾರು 80% ಮಕ್ಕಳಲ್ಲಿ ಅಕ್ರಮವಾಗಿ ಇಟ್ಟುಕೊಂಡಿದ್ದ ಗನ್ನುಗಳು ಕಂಡುಬಂದುವು. ಇವರೆಲ್ಲರೂ 18 ವರ್ಷದ ಒಳಗಿನ ಮಕ್ಕಳಾಗಿದ್ದರು.

ಯೂನಿಸೆಫ್ ವರದಿಯಂತೆ ಯದ್ಧಗಳಿಂದ ಬಹಳ ಹೆಚ್ಚು ತೊಂದರೆಯನ್ನು ಅನುಭವಿಸುವವರು ಮಕ್ಕಳು. ಅವರಿಗೆ ಮಾನಸಿಕ ಸ್ವಾಸ್ಥ್ಯವು ಕೆಡುವುದೇ ಅಲ್ಲದೆ ಜೀವನಪರ್ಯಂತ ನೆನಪಿನಲ್ಲಿಟ್ಟುಕೊಳ್ಳುವಂತಹ ದುಃಖ, ನೋವು ಸಂಕಟವನ್ನು ಅವರು ಅನುಭವಿಸುತ್ತಾರೆ. ಬಿಸ್ಸೆಲ್ ಹೇಳುವಂತೆ, ನಿರಂತರವಾದ ಯುದ್ಧ, ಹಿಂಸೆ ಮತ್ತು ಕ್ರೌರ್ಯಗಳಿಗೆ ಎಳೆಯ ಮಕ್ಕಳು ಬಲಿಪಶುವಾಗುತ್ತಾರೆ. ಇದು ಮಾನವೀಯತೆ ನಿಯಮಾವಳಿ ಮತ್ತು ಅಂತಾರಾಷ್ಟ್ರೀಯ ಮಾನವತಾ ಹಕ್ಕುಗಳಿಗೆ ವಿರುದ್ಧವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಇನ್ನೂ ಆಘಾತಕಾರಿಯಾದ ವಿಚಾರವೆಂದರೆ, ಮಕ್ಕಳನ್ನು ಅಪಹರಿಸುವುದು, ಅವರನ್ನು ಅಶ್ಲೀಲವಾಗಿ ಬಳಸುವುದು ಮತ್ತು ಚಿಕ್ಕ ಮಕ್ಕಳನ್ನು ವೇಶ್ಯಾವಾಟಿಕೆಗೆ ತಳ್ಳುವುದು. ಈ ರೀತಿಯ ಶೋಷಣೆಯ ಸಾವಿರಾರು ರೀತಿಗಳಲ್ಲಿ ಮಕ್ಕಳನ್ನು ಹಿಂಸಿಸಲಾಗುವುದು. ತಮ್ಮ ಸುತ್ತಮುತ್ತ ಬರೀ ಹೊಡೆದಾಟ, ಬಡಿದಾಟ, ಕೊಲೆ, ಸುಲಿಗೆ ಮತ್ತು ಹಿಂಸಾಚಾರವನ್ನು ನೋಡುತ್ತಾ ತಮ್ಮ ತಂದೆತಾಯಿಯರಿಂದ ದೂರವಾದ ಮಕ್ಕಳು ಮಾನಸಿಕವಾಗಿ ಕುಗ್ಗಿಹೋಗುವುದೇ ಅಲ್ಲದೆ ಖಿನ್ನತೆಗೆ ಒಳಗಾಗುವರು.

ಸಂಘರ್ಷ ಸನ್ನಿವೇಶಗಳು: ಸಾಮಾಜಿಕ ಹಿನ್ನೆಲೆಯಲ್ಲಿ ಸಂಘರ್ಷವೆಂಬ ಪದವು ಬೇರೆಯದೇ ಅರ್ಥವನ್ನು ಪಡೆದುಕೊಂಡಿದೆ. ಎರಡು ತಂಡಗಳ ನಡುವೆ ಸಮಸ್ಯೆಯೊಂದರ ಪರಿಹಾರ ಕ್ರಮಗಳಲ್ಲಿ ಕಂಡುಬರುವ ಪರಸ್ಪರ ವಿರೋಧವಾದ ಅಭಿಪ್ರಾಯಗಳಿಂದ ಉಂಟಾಗುವ ಸನ್ನಿವೇಶವನ್ನೇ ಸಂಘರ್ಷ ಸನ್ನಿವೇಶವೆಂದು ಕರೆಯಬಹುದಾಗಿದೆ. ಸಂಘರ್ಷವು ಯಾವಾಗಲೂ ವಿರೋಧವಾಗಿರುವ ಎರಡು ಗುಂಪುಗಳ ನಡುವೆ ನಡೆಯುವುದು, ಉದಾಹರಣೆಗೆ, ಎರಡು ಅಥವಾ ಎರಡಕ್ಕಿಂತ ಹೆಚ್ಚು ತಂಡಗಳ ನಡುವೆ ನಡೆಯುವ ಹೊಡೆದಾಟಗಳು, ರಾಷ್ಟ್ರಗಳ ನಡುವೆ ನಡೆಯುವ ಶೀತಲ ಸಮರ ಇತ್ಯಾದಿ. ಸಂಘರ್ಷ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನ ವಿವರಣೆಯನ್ನು ಗಮನಿಸೋಣ:

ಇಂಡಿಯಾ–ಪಾಕಿಸ್ತಾನ ಮತ್ತು ಇಂಡಿಯಾ–ಚೈನಾಗಳ ನಡುವೆ ನಡೆಯುತ್ತಿರುವ ಸಂಘರ್ಷವು ಕೊನೆಗೊಳ್ಳದ ಲಕ್ಷಣವನ್ನು ತೋರುತ್ತಿದೆ. ಈಗಾಗಲೇ ಕಾರ್ಗಿಲ್ ಯುದ್ಧದಲ್ಲಿ ಬಸವಳಿದ, ಬವಣೆಗೀಡಾದ ವ್ಯಕ್ತಿಗಳು ಇತಿಹಾಸವನ್ನು ಸೇರಿದ್ದಾರೆ. ಜಮ್ಮು–ಕಾಶ್ಮೀರದ ಹಳ್ಳಿಯಾದ ಹಂಡರ್‌ಮನ್ ಮತ್ತು ಅದರಂತಹ ಇನ್ನಷ್ಟು ಹಳ್ಳಿಗಳು ಅವುಗಳ ಗಡಿರೇಖೆಯಲ್ಲಿನ ಅನಿಶ್ಚಿತತೆಯಿಂದ ಇನ್ನೂ ನರಳುತ್ತಿವೆ. ಈ ಹಳ್ಳಿಗಳು ಸರಣಿಯಲ್ಲಿ ನಾಲ್ಕು ಯುದ್ಧಗಳನ್ನು ನೋಡಿವೆ. ಏಕೆಂದರೆ, ಅವುಗಳು ಭೌಗೋಳಿಕವಾಗಿ ಒಂದೇ ಕಡೆಯಿರುವ ಆದರೆ ಎರಡು ವೈರಿ ರಾಷ್ಟ್ರಗಳಿಗೆ ಸೇರಿದ ಪ್ರದೇಶಗಳು. ಲೈನ್ ಆಫ್ ಕಂಟ್ರೋಲ್‌ನಿಂದಾಗಿ ಕುಟುಂಬಗಳು ಒಡೆದು ಹೋದವು, ಪ್ರೀತಪಾತ್ರರು ದೂರದೂರ ಸರಿದರು, ಮನೆಗಳು ಸ್ಥಳಾಂತರಗೊಂಡವು. ಸತತವಾಗಿ ಇಲ್ಲಿಯ ಜನರು ಅಸುರಕ್ಷತಾಭಾವದಿಂದ ಇರುವರು. ಹೆದರಿಕೆ, ಏರಿದ ಹೃದಯದ ಬಡಿತ, ಜೊತೆಗೆ ದೈನಂದಿನ ಕಾರ್ಯಗಳು, ಊಟ, ನಿದ್ದೆ, ಮತ್ತು ಇನ್ನಿತರ ವ್ಯವಹಾರಗಳೆಲ್ಲವೂ ಭಯದ ನೆರಳಲ್ಲಿಯೇ ನಡೆಯುವುದು.

ಯುನೈಟೆಡ್ ನೇಶನ್ಸ್‌ನ ಡಿಸಾರ್ಮಮೆಂಟ್ ಫೋರಮ್ (United Nations Institute for Disarmment Forum – UNIDIR 2011)ನವರು ಹೇಳುವಂತೆ ಯುದ್ಧವೆಂದರೆ, ದೇಶ ದೇಶಗಳ ನಡುವೆ ನಡೆಯುವುದೊಂದೇ ಆಗಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಇದರ ಅರ್ಥ ಮತ್ತು ವ್ಯಾಪ್ತಿ ವಿಸ್ತಾರವಾಗಿ, ಬೀದಿಗಳಲ್ಲಿ ನಡೆಯುವ ಗ್ಯಾಂಗ್‌ವಾರ್, ಅಥವಾ ಒಂದು ನಿರ್ದಿಷ್ಟ ಸಮುದಾಯದ ಮೇಲೆ ಅಥವಾ ಜನಾಂಗಗಳ ಮೇಲೆ ಹೇಳದೇ ಕೇಳದೇ ಹೊಡೆದಾಟ ಇವುಗಳನ್ನೂ ಒಳಗೊಳ್ಳುವುದು. ಒಮ್ಮೊಮ್ಮೆ ಇಡೀ ಒಂದು ರಾಷ್ಟ್ರದ ಮೇಲೆ ಅತಿ ಹಿಂಸಾತ್ಮಕವಾದ ದಾಳಿಯಿಂದ ಯುದ್ಧವನ್ನು ಸಾರುವುದು, ಕಾರಣವೇ ಇಲ್ಲದೇ ಹೊಡೆದಾಟಗಳನ್ನು ಪ್ರಾರಂಭಿಸಿ ಕೆಣಕುವುದು, ಮತ್ತು ಅವರ ಭೌಗೋಳಿಕ ಪ್ರದೇಶಗಳನ್ನು ಅತಿಕ್ರಮಣ ಮಾಡುವುದು ಅಥವಾ ಬಾಂಬ್ ಧಾಳಿಯಿಂದ ಛಿದ್ರ–ಛಿದ್ರ ಮಾಡುವುದು ಇತ್ಯಾದಿಗಳೂ ಇದರೊಳಗೆ ಸೇರಿಕೊಂಡಿವೆ. ಕಾಶ್ಮೀರಿ ಮಕ್ಕಳು, ಸಂಘರ್ಷಣೆಯಲ್ಲಿ, ಅವರ ಮೇಲೆ ಎಸೆದ ಕಲ್ಲುಗಳು, ಮತ್ತು ಧ್ವಂಸಕಾರಕ ಅಸ್ತ್ರಗಳ ಧಾಳಿಗೆ ಬಲಿಯಾವುದು, ಗಾಯಗೊಳ್ಳುವುದು ಸಾಮಾನ್ಯವಾದ ದೃಶ್ಯವಾಗಿದೆ. ಅವರಲ್ಲಿ ಕೆಲವರು ತುಂಬಾ ಗಂಭೀರ ಗಾಯಗಳಿಗೆ ತುತ್ತಾಗುವರು, ಮತ್ತೂ ಕೆಲವರು ಪ್ರಾಣವನ್ನೇ ಕಳೆದುಕೊಳ್ಳುವರು. ಕೆಲವರು ಕಣ್ಣುಗಳನ್ನು ಕಳೆದುಕೊಂಡು ಜೀವನಪರ್ಯಂತ ಕುರುಡರಾಗುವರು. ಆದರೂ ಬದುಕಿ ಉಳಿದವರು ತಾವು ಕಂಡ ರುದ್ರಭೀಕರ ದೃಶ್ಯಗಳನ್ನು ತಮ್ಮ ಜೀವಮಾನದಲ್ಲಿ ಮರೆಯಲಾರರು.

ಕಾಶ್ಮೀರದಲ್ಲಿಯೂ ಎಳೆಯ ತಲೆಮಾರಿನವರು ತಮ್ಮ ಕುಟುಂಬದವರು, ಮತ್ತು ಸ್ನೇಹಿತರು ಹಿಂಸಿಸಲ್ಪಟ್ಟು, ಶೋಷಿಸಲ್ಪಟ್ಟು, ಚಿತ್ರಹಿಂಸೆಗೆ ಗುರಿಯಾಗಿ ಪ್ರಾಣಬಿಟ್ಟಿದ್ದನ್ನು ನೋಡುತ್ತಲೇ ದೊಡ್ಡವರಾಗುತ್ತಿದ್ದಾರೆ. ಅವರು ತಮ್ಮ ನಾಗರಿಕ ಹಕ್ಕುಗಳನ್ನು ಬಲವಂತವಾಗಿ ಕಿತ್ತೆಸೆದು, ತಮ್ಮ ರಾಜ್ಯವನ್ನು ಅವರದ್ದನ್ನಾಗಿಸಿಕೊಳ್ಳುವ ಭರದಲ್ಲಿ ಚಿಕ್ಕ ಮಕ್ಕಳೆಂದು ಕೂಡ ನೋಡದೆ ಹಿಂಸಿಸಿದವರೆಡೆಗೆ ತಾವೂ ಕಲ್ಲೆಸೆದು ರೋಷವನ್ನು ವ್ಯಕ್ತಪಡಿಸಲು ಸಜ್ಜಾದರೆ ಆಶ್ಚರ್ಯವೇನೂ ಇಲ್ಲ. ಪಾಪ! ಎಳೆಯ ಮಕ್ಕಳಾದರೂ ದೊಡ್ಡವರ ಹೊಡೆದಾಟದಲ್ಲಿ ಅವರೂ ಭಾಗಿಯಾಗಬೇಕಾಗಿ ಬಂದದ್ದು ದುರಾದೃಷ್ಟವೇ ಸರಿ. "ಸಂಘರ್ಷಗಳಲ್ಲಿರುವ ಮಕ್ಕಳು ಮತ್ತು ನ್ಯಾಯ" ಎಂಬ ಕಾರ್ಯವು 18 ವರ್ಷದೊಳಗಿನ ಮಕ್ಕಳನ್ನು ಒಳಗೊಳ್ಳುವುದು. ಇಂತಹವರು

ಬಾಲಾಪರಾಧಿಗಳಾಗಿರುವರು, ತಾವು ಮಾಡಿದ್ದ ಅಪರಾಧಗಳಿಗೆ ನ್ಯಾಯಯುತವಾದ ಶಿಕ್ಷೆ ಅಥವಾ ಪರಿಹಾರ ಕ್ರಮಕ್ಕಾಗಿ ಅವರನ್ನು ಇಂತಹ ನ್ಯಾಯ–ವ್ಯವಸ್ಥೆಯ ಮುಂದೆ ತರಲಾಗುವುದು. ಸಣ್ಣ–ಪುಟ್ಟ ಕಳ್ಳತನ, ಕುಡಿತ, ಜೂಜು, ಹೊಡೆದಾಟ, ಕೆಲಸಗಳ್ಳನಾಗುವುದು, ಶಾಲೆಗೆ ಚಕ್ಕರ್ ಹೊಡೆಯುವುದು. ಭಿಕ್ಷೆ ಬೇಡುವುದು, ಇತ್ಯಾದಿಗಳು ಚಿಕ್ಕಮಟ್ಟದ ಅಪರಾಧವಾದರೆ, ಇನ್ನೂ ಕೆಲವರು ಅತಿ ದೊಡ್ಡ ಅಪರಾಧಗಳನ್ನು ಲೀಲಾಜಾಲವಾಗಿ ಮಾಡುವರು. ಎಷ್ಟೋಸಲ ಪೂರ್ವಾಗ್ರಹದಿಂದ, ಅಸಮಾನತೆಯಿಂದ ಮತ್ತು ರೂಢಿಗತವಾದ ಶಿಕ್ಷಾನಿಯಮಗಳು ಮಕ್ಕಳನ್ನು ಸಂಘರ್ಷಕ್ಕೆಳೆಯುವುವು ಹಾಗೂ ಯಾವುದೇ ಅಪರಾಧ ಘಟಿಸಿಲ್ಲದಿದ್ದರೂ ಅವರು ನ್ಯಾಯಸ್ಥಾನಕ್ಕೆ ಬರುವಂತೆ ಮಾಡುವುವು.

ಈ ಪ್ರಪಂಚಕ್ಕೆ ಯಾರೂ ಹುಟ್ಟುತ್ತಲೇ ಕೆಟ್ಟವರಾಗಿ/ಕಳ್ಳರಾಗಿ ಬರುವುದಿಲ್ಲ. ಕೇವಲ ಸನ್ನಿವೇಶಗಳು ಮತ್ತು ಸಂದರ್ಭಗಳು ವ್ಯಕ್ತಿಯನ್ನು ಹಾಗೆ ರೂಪಿಸುವುದು. ಮೂಲಭೂತ ಸೌಕರ್ಯಗಳ ಕೊರತೆ, ಅನ್ನ–ಆಹಾರಗಳ ಅಭಾವ, ಬಡತನ, ಹಸಿವು ಮತ್ತು ದಾರಿದ್ರ್ಯ, ಮಕ್ಕಳನ್ನು ಬಾಲಾಪರಾಧಿಗಳನ್ನಾಗಿಸುವುದು. ಹೀಗೆ ಅಪರಾಧೀ ವರ್ತನೆಗಳನ್ನು ತೋರುವ ಮಕ್ಕಳು ಅವರ ಕುಟುಂಬಕ್ಕೂ ತಲೆನೋವಾಗಿರುತ್ತಾರೆ. ಅದೇ ರೀತಿ ಮಗುವಿನ ಪೋಷಕರಲ್ಲಿ ಜೈಲಿಗೆ ಹೋಗಿಬಂದವರಿದ್ದರೆ, ಮಗುವಿಗೂ ಸಮಾಜವನ್ನೆದುರಿಸುವುದು ಕಠಿಣವಾದ ಸವಾಲೇ ಸರಿ. ಬಾಲ್ಯಹಂತದಲ್ಲಿ ಹಲವಾರು ಲಕ್ಷಣಗಳು ವಿಕಾಸಗೊಂಡು ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತವೆ. ಆದರೆ ಇಂತಹ ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳು ಯಾವಾಗಲೂ ದುಃಖಿತರಾಗಿರುತ್ತಾರೆ, ಸ್ನೇಹಿತರಿಂದ ದೂರವಿರುತ್ತಾರೆ, ಅತಿ ಬೇಗ ಕೋಪಗೊಳ್ಳುವುದು, ಸಣ್ಣ ಸಣ್ಣ ವಿಷಯಕ್ಕೂ ವಾದ ಮಾಡುವುದು, ಜಗಳಗಂಟಿತನ ತೋರುವುದು ಮತ್ತು ಹೊಡೆದಾಡುವುದು– ಈ ರೀತಿಯ ವರ್ತನೆಗಳನ್ನು ತೋರುತ್ತಾರೆ. ಸದಾ ಆತಂಕದಿಂದ ಕೂಡಿದ್ದು ಬೆದರಿದವರಂತೆ ಇರುತ್ತಾರೆ. ಕಷ್ಟಕರ ಪರಿಸ್ಥಿತಿಗಳನ್ನು ಎದುರಿಸಲಾಗದಿದ್ದಾಗ ಮನೆ ಬಿಟ್ಟು ಓಡಿಹೋಗುವ ಪ್ರವೃತ್ತಿಯನ್ನು ತೋರುತ್ತಾರೆ. ಕೊನೆಯಲ್ಲಿ ಬೀದಿಮಕ್ಕಳಾಗಿ ಸಮಾಜ–ವಿರೋಧೀ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಜೈಲಿನಿಂದ ಮರಳಿ ಬಂದ ನಂತರದ್ದು ಇನ್ನೊಂದು ದಾರುಣವಾದ ಕಥೆಯಾಗುವುದು. ಹೀಗೆ ಅವರು ಹೇಗೂ ನೆಮ್ಮದಿಯಿಲ್ಲದ ಸ್ಥಿತಿಯನ್ನು ತಲುಪುವರು. ಅದರಲ್ಲೂ ಜೈಲಿಗೆ ಹೋಗಿಬಂದ ಮಹಿಳೆ ಮತ್ತು ಮಕ್ಕಳದ್ದು ಗಂಡಸರಿಗಿಂತಲೂ ಕಷ್ಟಕರವಾದ ಪರಿಸ್ಥಿತಿಯಾಗಿರುತ್ತದೆ. ಇದರಿಂದ ಹೊರಬರಲು ವ್ಯಕ್ತಿಗಳು ಮತ್ತಷ್ಟು ಕುಡಿತ, ಮಾದಕ ವಸ್ತುಗಳ ವ್ಯಸನಿಗಳಾಗುವರು. ಇಂತಹ ಕೌಟುಂಬಿಕ ಸಂಘರ್ಷಗಳು ಮಕ್ಕಳನ್ನು ಇನ್ನಷ್ಟು ಚಂಚಲಚಿತ್ತರನ್ನಾಗಿ ಮಾಡುವುದೇ ಅಲ್ಲದೇ, ಅವರ ವ್ಯಕ್ತಿತ್ವವನ್ನು ಛಿದ್ರ–ಛಿದ್ರ ಮಾಡುವುವು.

ಜೈಲಿಗೆ ಹೋಗಿ ಬರುವುದೆಂದರೆ ಹೇಳಿದಷ್ಟು ಸರಳವಾಗೇನೂ ಇರುವುದಿಲ್ಲ. ಅದು ಸಾಕಷ್ಟು ಸಮಯ ತೆಗೆದುಕೊಂಡು ಅಘಾತಕಾರಿ ಘಟನೆಯಾಗಿ ಅನಾವರಣಗೊಳ್ಳುವ ಪ್ರಕ್ರಿಯೆಯಾಗಿರುತ್ತದೆ. ಬಂಧನದಲ್ಲಿರುವುದರ ಅಡ್ಡ ಪರಿಣಾಮಗಳು, ಜೈಲು ಶಿಕ್ಷೆ, ಜೈಲುವಾಸ ಮತ್ತು ಬಿಡುಗಡೆಯಾದ ನಂತರ ಮತ್ತೆ ಸಮಾಜಮುಖಿಯಾಗಿ ಸಹಜ ಜೀವನ ನಡೆಸಲು ಬರುವಿಕೆ – ಇವು ಯಾವುವು ಸರಳವಾಗಿರುವುದಿಲ್ಲ. ಎಲ್ಲದಕ್ಕೂ ಸಮಾಜವು ಕಟಕಿಯಾಡುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1.ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳೆಂದರೆ____________

ಎ. ಸೌಹಾರ್ದಯುತವಾದ ವಾತಾವರಣದಲ್ಲಿರುವವರು

ಬಿ. ನಿರ್ಗತಿಕ ಮಕ್ಕಳು

ಸಿ. ತುಂಬಾ ಚಿಕ್ಕ ಮಕ್ಕಳು

ಡಿ. ಕೇವಲ ಹದಿಹರೆಯದವರು ಮಾತ್ರ

2. ಶೈಕ್ಷಣಿಕ ಅವಕಾಶಗಳಿಂದ ಮತ್ತು ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾದ ಮಕ್ಕಳೆಂದರೆ__________

ಎ. ಸಮಾಜವಿರೋಧೀ ಸಂಘಟನೆಗಳ ಬಲಿಪಶುಗಳು

ಬಿ. ಸಮಾಜಕ್ಕೆ ಒಂದು ಹೊರೆಯಾದ ಮಕ್ಕಳು

ಸಿ. ಯಾರಿಗೂ ಬೇಡದ ಮಕ್ಕಳು

ಡಿ. ಯಾವುದಕ್ಕೂ ಪ್ರಯೋಜನಕ್ಕೆ ಬಾರದ ಮಕ್ಕಳು

3. ಆತಂಕ, ಸಂಘರ್ಷ, ಒತ್ತಡ ಮತ್ತು ಬಿಕ್ಕಟ್ಟುಗಳು ಸಾಮಾನ್ಯವಾಗಿರುವುದು__________

ಎ. ಪರ್ವತ ಪ್ರದೇಶಗಳಲ್ಲಿ ವಾಸಿಸುವರಲ್ಲಿ

ಬಿ. ಕರಾವಳೀ ಪ್ರದೇಶಗಳಲ್ಲಿ ವಾಸಿಸುವರಲ್ಲಿ

ಸಿ. ಲೈನ್ ಆಫ್ ಕಂಟ್ರೋಲ್ ಪ್ರದೇಶದಲ್ಲಿ

ಡಿ. ಭಾರತದ ಮಧ್ಯ ಭಾಗದಲ್ಲಿ

4. ಯುದ್ಧ ಭೀತಿಯಿರುವ ಪ್ರದೇಶಗಳಲ್ಲಿ ರಾಜಕೀಯ ಸಂದೇಶಗಳು ತಲುಪುವುದು__________

ಎ. ಸಮೂಹ ಮಾಧ್ಯಮಗಳ ಮೂಲಕ

ಬಿ. ಅಂತಾರಾಷ್ಟ್ರೀಯ ಪ್ರತಿನಿಧಿಗಳಿಂದ

ಸಿ. ರಾಷ್ಟ್ರೀಯ ರಾಯಭಾರಿಗಳಿಂದ

ಡಿ. ಗೊತ್ತು–ಪರಿಚಯವಿರದ ಬಾಂಬ್ ಧಾಳಿಗಳಿಂದ

5. ಗ್ರೇ–ವಲಯವೆಂಬುದು__________

ಎ. ಅತಿ ಎಚ್ಚರಿಕೆಯಿಂದ ಕಾಯುತ್ತಿರುವ ಪ್ರದೇಶಗಳು

ಬಿ. ಎರಡೂ ಪಾರ್ಶ್ವಗಳೂ ಯಾರ ನಿಯಂತ್ರಣದಲ್ಲಿರುವುದು

ಸಿ. ತುಂಬಾ ಅಪಾಯಕಾರಿ ವಲಯ

ಡಿ. ಸುಟ್ಟ ಬೂದಿಯಿಂದ ಕೂಡಿರುವ ಪ್ರದೇಶ

6. ಮಿಲಿಟರಿ ಕುಟುಂಬದ ಮಕ್ಕಳು ಎದುರಿಸುವ ಸವಾಲೆಂದರೆ__________

ಎ. ಶೈಕ್ಷಣಿಕ ಕ್ಷೇತ್ರ

ಬಿ. ಸಾಮಾಜಿಕ ಜೀವನ

ಸಿ. ಧಾರ್ಮಿಕ ಜೀವನ

ಡಿ. ಕ್ರೀಡಾ ಕ್ಷೇತ್ರ

7. ಯುದ್ಧದ ಪರಿಣಾಮಗಳಲ್ಲಿ ಅತ್ಯಂತ ಕಾಳಜಿಯನ್ನು ಮತ್ತು ಆತಂಕವನ್ನು ಬಯಸುವ ಅಂಶ__________

ಎ. ಗಂಡು ಮಕ್ಕಳು ಬಾಲ ಅಪರಾಧಿಗಳಾಗುವ ಪ್ರವೃತ್ತಿಯನ್ನು ತೋರುತ್ತಿರುವುದು

ಬಿ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನು ಕಳೆದುಕೊಂಡಿರುವುದು

ಸಿ. ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಅತೀ ಕಳಪೆಯಾಗಿ ಬರೆದಿರುವುದು

ಡಿ. ಅವಿಧೇಯ ವಿದ್ಯಾರ್ಥಿಗಳು

8. ಸಾಮಾಜಿಕ ಹಿನ್ನೆಲೆಯಲ್ಲಿ 'ಸಂಘರ್ಷ' ಎಂಬ ಪದದ ಅರ್ಥ__________

ಎ. ಮನಸ್ಸಿನ ಹೊಯ್ದಾಟ

ಬಿ. ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯವಿಲ್ಲದಿರುವುದು

ಸಿ. ವ್ಯಕ್ತಿಯೊಬ್ಬನ ಮೇಲಿನ ಎರಡು ಸಮಾನಾಂತರ ಆದರೆ ವಿರೋಧವಾದ ಬಲಗಳು

ಡಿ. ಎರಡು ಅಥವಾ ಇನ್ನೂ ಹೆಚ್ಚು ಗುಂಪುಗಳ ನಡುವಿನ ಭಿನ್ನಾಭಿಪ್ರಾಯಗಳು

9. ವ್ಯಕ್ತಿಯೊಬ್ಬ ಜೈಲಿನಿಂದ ಬಿಡುಗಡೆಯಾಗಿ ತನ್ನ ಜೀವನಕ್ಕೆ ಮರಳುವಾಗಿನ ಪರಿಣಾಮವು__________

ಎ. ಮಕ್ಕಳಿಗೆ ಅತೀವವಾದ ಸಂತೋಷವನ್ನು ತರುವುದು

ಬಿ. ಮಕ್ಕಳಿಗೆ ಸವಾಲಾಗಿದ್ದು, ಒತ್ತಡವನ್ನು ತಂದಿರುವುದು

ಸಿ. ಏನೂ ವಿಶೇಷವಾದ ಪರಿಣಾಮ ಬೀರದಿರುವುದು

ಡಿ. ಮಕ್ಕಳಿಗೆ ಧನಾತ್ಮಕವಾಗಿರುವುದು

## 2.4.3.2. ಬಾಲ್ಯಹಂತ ಮತ್ತು ಕಷ್ಟಕರ ಪರಿಸ್ಥಿತಿಗಳು (ಬಡತನದ ಕುಟುಂಬಗಳು ಮತ್ತು ನಗರದ ಕೊಳಚೆ ಪ್ರದೇಶದ ಮಕ್ಕಳು)

ಸುಧೇಶ್ನಾ ಚಟರ್ಜೀ ಅವರು ಕೊಳಚೆ ಪ್ರದೇಶದ ಮಕ್ಕಳ ಕುರಿತು ನಡೆಸಿದ ಒಂದು ಸಂಶೋಧನಾ ವರದಿಯನ್ನು (2012) ಗಮನಿಸೋಣ.

ಕೊಳಚೆ ಪ್ರದೇಶದ ನಿವಾಸಿಗಳ ಮಕ್ಕಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುತ್ತಾರೆ. ಅದರಲ್ಲೂ ಮುಖ್ಯವಾಗಿ ನೈರ್ಮಲ್ಯ ವ್ಯವಸ್ಥೆ, ಶುದ್ಧ ಕುಡಿಯುವ ನೀರು, ಕಸದ ವ್ಯವಸ್ಥಿತವಾದ ಸಂಗ್ರಹಣೆ ಮತ್ತು ವಿಲೇವಾರಿ, ಸೂಕ್ತವಾದ ಸ್ಥಳಾವಕಾಶದ ಕೊರತೆ (ಮನೆಯ ಒಳಗೆ) ಇದಾವುದೂ ಇಲ್ಲದಿದ್ದರೂ ಆ ಮಕ್ಕಳು ತಮ್ಮ ಬಾಲ್ಯವನ್ನು ಅಲ್ಲಿಯೇ ಕಳೆದಿರುತ್ತಾರೆ. ಅವರು ಆಟ ಆಡುವ ಸ್ಥಳ ತುಂಬಾ ಒರಟಾಗಿದ್ದು, ಮಟ್ಟಸವಾಗಿರುವುದಿಲ್ಲ, ಹಳ್ಳ ದಿಣ್ಣೆಗಳಿಂದ ಕೂಡಿರುತ್ತದೆ. ಈ ಮಕ್ಕಳು ದೊಡ್ಡವರೊಡನೆ ಕೆಲವು ಜವಾಬ್ದಾರಿಗಳನ್ನು ಹಂಚಿಕೊಳ್ಳಲೇಬೇಕು, ಅವರಿಗೆ ತಾವು ಇನ್ನೂ ಚಿಕ್ಕವರೆಂದು ನೆನೆಸಿಕೊಳ್ಳಲೂ ಪುರುಸೊತ್ತು ಇರುವುದಿಲ್ಲ. ಖಾಲಿ ನಿವೇಶನಗಳು, ಮೈದಾನ ಪ್ರದೇಶಗಳು, ಊರಿನ ಎಲ್ಲಾ ಕಸವನ್ನು ಸಂಗ್ರಹಿಸಿಕೊಂಡು ಒಂದೆಡೆ ಸಂಗ್ರಹಿಸುವ ತಿಪ್ಪೆಯ ಜಾಗಗಳೇ ಇವರ ಆಟದ ಜಾಗಗಳು. ತಳ್ಳೋಗಾಡಿಗಳು, ನಿಲ್ಲಿಸಿದ ಆಟೋರಿಕ್ಷಾಗಳು, ಕೆಟ್ಟುನಿಂತ ಕಾರು, ಬೈಕುಗಳು, ಗುಜರಿಗೆ ಹಾಕುವಂತಿರುವ ಗಾಡಿಗಳು ಇವರ ಪ್ರಿಯವಾದ ಆಟದ ಕ್ಷೇತ್ರಗಳು. ಬೀದಿಮಕ್ಕಳಾಗಿ ಬೆಳೆಯುವ ಇವರು, ಬರೀ ಕಾಲಲ್ಲೇ ನಡೆಯುವರು. ಶುಚಿಯೆಂದರೇನೆಂದು ಅರಿಯುವ ಪ್ರಮೇಯವೇ ಇವರಿಗೆ ಬಂದಿರುವುದಿಲ್ಲ. ಹಾಗಾಗಿ ದೊಡ್ಡ ದೊಡ್ಡ ತಿಪ್ಪೆಯ ರಾಶಿಯ ಮೇಲೆ, ಕಸದ ಗುಡ್ಡೆಯ ಮೇಲೆಲ್ಲಾ ಹತ್ತಿ ಇಳಿಯುವುದು ಇವರಿಗೆ ಸಾಮಾನ್ಯ. ಹೆಣ್ಣುಮಕ್ಕಳಂತೂ ಕೇವಲ 5 ವರ್ಷಕ್ಕೇನೇ ಕಂಕುಳಲ್ಲಿ ಒಂದು ತಮ್ಮನನ್ನೋ ತಂಗಿಯನ್ನೋ ಎತ್ತಿಕೊಂಡು ತಿರುಗುತ್ತಾರೆ. ಅಲ್ಲಲ್ಲಿ ಕಾಣಸಿಗುವ ಅಂಗಡಿ ಮುಂಗಟ್ಟುಗಳಲ್ಲಿ, ಬೇಕರಿಗಳಲ್ಲಿ, ತಿಂಡಿತಿನಿಸುಗಳಿಗಾಗಿ ಕೈಯೊಡ್ಡಿ ಭಿಕ್ಷೆ ಬೇಡುತ್ತಾ ಸಿಕ್ಕದ್ದನ್ನು ತಿಂದು ಬೆಳೆಯುತ್ತಾರೆ.

**ನಗರವಾಸಿ ಬಡಮಕ್ಕಳು**

20 ಮಿಲಿಯನ್‌ಗಿಂತಲೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ನಗರಗಳನ್ನು ಮಹಾನಗರವೆಂದು ಕರೆಯುತ್ತಾರೆ. ಭಾರತದಲ್ಲಿ ದೆಹಲಿ, ಕೋಲ್ಕತ್ತಾ ಮತ್ತು ಮುಂಬಯಿ ಇವುಗಳು ಮಹಾನಗರಳೆಂದು ಗುರುತಿಸಲ್ಪಟ್ಟಿವೆ. ಸುಮಾರು 60 ವರ್ಷಗಳಿಂದಲೂ ಭಾರತವು ಬಡತನದ ವಿರುದ್ಧ ಹೋರಾಡುತ್ತಲೇ ಇದೆ. ಬಾಲಕಾರ್ಮಿಕರಾಗಲೀ, ಬಾಲಾಪರಾಧಿಗಳಾಗಲೀ, ಮೂಲ ಕಾರಣ ಬಡತನವೊಂದೇ. ಇದರ

ಮುಂದೆ ಮಕ್ಕಳ ಹಕ್ಕು, ಅವರ ಸ್ವಾತಂತ್ರ್ಯ ಮತ್ತು ವಿಕಾಸ – ಎಲ್ಲವೂ ಕನ್ನಡಿಯ ಗಂಟಂತಾಗಿದೆ. ಆದರೂ ಹಲವಾರು ಸರ್ಕಾರೀ ನಿಯಮಗಳು ಮತ್ತು ಸೌಲಭ್ಯಗಳು ಕಾರ್ಮೋಡದಲ್ಲಿ ಕಂಡುಬರುವ ಮಿಂಚಿನ ಬೆಳಕಿನಂತೆ ಒಂದು ಆಶಾಕಿರಣವೆನ್ನಬಹುದು. ಈ ದಿಸೆಯಲ್ಲಿ ಹಲವಾರು ಸಂಘ ಸಂಸ್ಥೆಗಳು ಕೈಗೂಡಿಸಿ ಕೆಲಸ ಮಾಡುತ್ತಿವೆ. ಅದರಲ್ಲಿ "ಚೈಲ್ಡ್ ರೈಟ್ಸ್ ಅಂಡ್ ಯೂ" (Child Rights and You – CRY) ಕೂಡಾ ಒಂದು.

ಹಣ, ವಾಸ, ವಸತಿ, ಆಹಾರ ಮತ್ತು ಬಟ್ಟೆ ಇಂತಹ ಮೂಲಭೂತ ಅವಶ್ಯಕತೆಗಳಿಗೂ ಅಭಾವವಾದಾಗ ಅದು ಬಡತನವೇ. ಕುಟುಂಬವೊಂದಕ್ಕೆ ಸರಿಯಾದ ವರಮಾನವಿಲ್ಲದೇ ಬರೀ ಬೇಡಿಕೆಗಳು, ಅಗತ್ಯತೆಗಳ ಕೊರತೆಯಿಂದ ಬಳಲುತ್ತಿದ್ದರೆ ಅದನ್ನೇ ಬಡತನವೆನ್ನುವರು. ಇದರಲ್ಲಿ ತೀರಾ ಕನಿಷ್ಟ ಸೌಕರ್ಯವೂ ಇಲ್ಲದಿರುವ ದಟ್ಟದಾರದ್ರ್ಯದಿಂದ ಹಿಡಿದು ಕೆಲವು ವಸ್ತುಗಳ ಮತ್ತು ಮೂಲ ಅವಶ್ಯಕತೆಗಳ, ಸೌಖ್ಯದ ಅಭಾವದವರೆಗೂ ಬಡತನದ ವ್ಯಾಪ್ತಿ ಕಂಡುಬರುತ್ತದೆ. ಬಡತನವು ಮಗುವಿನ ಹಕ್ಕನ್ನು ಕಿತ್ತುಕೊಳ್ಳುವುದೇ ಅಲ್ಲದೆ ಅದರ ಅಸ್ತಿತ್ವಕ್ಕೆ ಕೊಡಲಿ ಪೆಟ್ಟಂತೆ ಕ್ರೂರವಾಗಿರುತ್ತದೆ. ಇದರಿಂದಾಗಿ ಮಗುವಿನ ಉಳಿವು ಅಳಿವಿನ ಪ್ರಶ್ನೆಯೂ ಎದುರಾಗುವುದು, ಇನ್ನು ಅದರ ವಿಕಾಸವೆಲ್ಲಿಯ ಮಾತು? ಬಡತನದಲ್ಲಿ ನರಳುತ್ತಿರುವ ತಂದೆತಾಯಿಯರು ಮಕ್ಕಳಿಗೂ ಬಡತನವನ್ನೇ ಉಡುಗೊರೆಯಾಗಿ ನೀಡುವರು. ಅವರು ಮಾಡುವ ಸಾಲಗಳನ್ನು ಮಕ್ಕಳೇ ತೀರಿಸಬೇಕಾದ ಪರಿಸ್ಥಿತಿ ತೀರಾ ಸಾಮಾನ್ಯ. ಬಡತನದಿಂದ ದೊಡ್ಡವರು ಪಡುವ ಬವಣೆಗೂ ಮಕ್ಕಳು ಬಡತನದಿಂದ ಅನುಭವಿಸುವ ಸಂಕಷ್ಟಗಳಿಗೂ ವ್ಯತ್ಯಾಸವಿದೆ. ಬಡತನದ ವಾತಾವರಣದಲ್ಲಿ ಬೆಳೆವ ಮಕ್ಕಳ ದೈಹಿಕ, ಬೌದ್ಧಿಕ, ಭಾವನಾತ್ಮಕ ವಿಕಾಸಗಳು ಪ್ರಶ್ನಾರ್ಹವಾಗಿರುತ್ತವೆ.

ಯೂನಿಸೆಫ್‌ನ ವರದಿಯಂತೆ, "ಬಡತನದಲ್ಲಿ ಬೆಳೆವ ಮಕ್ಕಳು ಅವರ ವಿಕಾಸಕ್ಕಾಗಿ ಅತ್ಯಗತ್ಯವಾಗಿ ಬೇಕಾದ ವಸ್ತು ಸಂಪನ್ಮೂಲಗಳ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಂಪನ್ಮೂಲಗಳ ಅಭಾವವನ್ನು ತೀವ್ರವಾಗಿ ಅನುಭವಿಸುತ್ತಾರೆ. ಇದರಿಂದಾಗಿ ಅವರು ಬಾಲ್ಯದ ಸುಖ–ಸಂತೋಷಗಳಿಂದ ಮತ್ತು ತಮ್ಮ ಹಕ್ಕುಗಳಿಂದ ವಂಚಿತರಾಗುತ್ತಾರೆ. ಅವರಲ್ಲಡಗಿರುವ ಸುಪ್ತ ಪ್ರತಿಭೆಗಳು ಅನಾವರಣಗೊಳ್ಳಲು ಸಿಗಬೇಕಾಗಿದ್ದ ಅವಕಾಶಗಳಿಂದಲೂ ವಂಚಿತರಾಗುತ್ತಾರೆ. ಸಮಾಜದಲ್ಲಿ ಸಮಾನತೆಯಿಂದ ತಾವೂ ಭಾಗಿಯಾಗುವ ಎಲ್ಲಾ ಅವಕಾಶಗಳಿಂದಲೂ ಹೊರಗುಳಿಯುತ್ತಾರೆ". ಬಡತನದ ಕುಟುಂಬದಲ್ಲಿನ ಮಕ್ಕಳು ಈ ಕೆಳಕಂಡಂತೆ ಏಳು ರೀತಿಯ ಕೊರತೆಗಳನ್ನು ಅನುಭವಿಸುತ್ತಾರೆ:

1.ಸಮರ್ಪಕವಾದ ಆಹಾರ–ಪೋಷಣೆ 2.ಕುಡಿಯುವ ಶುದ್ಧ ನೀರು 3.ನೈರ್ಮಲ್ಯಕ್ಕಾಗಿ ಬೇಕಾದ ಸೌಲಭ್ಯಗಳು 4.ಸ್ವಾಸ್ಥ್ಯ ಮತ್ತು ಆರೋಗ್ಯ 5.ವಸತಿ/ಆಶ್ರಯ 6.ಶಿಕ್ಷಣ ಮತ್ತು 7.ಮಾಹಿತಿ. ಏಳು ಕ್ಷೇತ್ರಗಳಲ್ಲಿ ಯಾವುದಾದರೂ ಒಂದರಲ್ಲಿ ಕೊರತೆಯುಂಟಾದರೆ, ಅದು ಇನ್ನೊಂದನ್ನು ಮತ್ತೂ ಕೊರತೆಯುಂಟಾಗುವಂತೆ ಪ್ರಭಾವಿಸುವುದು. ನಗರದ ಮಕ್ಕಳು ಅನುಭವಿಸುವ ಕೊರತೆ ಮತ್ತು ಅಭಾವಗಳ ಎರಡರಷ್ಟನ್ನು ಗ್ರಾಮೀಣ ಮಕ್ಕಳು ಅನುಭವಿಸುವರು. ಯುನಿಸೆಫ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಆಂಥೋನಿ ಲೇಕ್‌ರವರು ಹೇಳುವಂತೆ, "ಬಡತನದ ಪರಿಣಾಮಗಳು ಮಕ್ಕಳನ್ನು ಅತಿ ಹೆಚ್ಚು ಘಾಸಿ ಮಾಡುತ್ತವೆ. ಅದರಲ್ಲೂ ಎಳೆಯ ಮಕ್ಕಳು ಗಂಭೀರವಾದ ತೊಂದರೆಗಳಿಂದ ನರಳುವರು".

**ಭಾರತದಲ್ಲಿ ಮಕ್ಕಳ ಬಾಲ್ಯಹಂತದ ಮೇಲೆ ಬಡತನದ ಪರಿಣಾಮ**

- ಬಡ ಕುಟುಂಬಗಳಲ್ಲಿ ಮಕ್ಕಳಿಗೆ ಸರಿಯಾದ ಆಹಾರದ ಪೋಷಣೆಯಿರುವುದಿಲ್ಲ, ಹಸಿವು ಅವರ ದಿನನಿತ್ಯದ ಅಳಲಾಗಿರುತ್ತದೆ. ನ್ಯೂನ ಪೋಷಣೆಯಿಂದಾಗಿ ಮಗುವಿನಲ್ಲಿ ಆತ್ಮವಿಶ್ವಾಸದ ಕೊರತೆಯುಂಟಾಗುವುದು

- ಶೈಕ್ಷಣಿಕ ಅವಕಾಶಗಳು ಕನಿಷ್ಟ ಮಟ್ಟಕ್ಕೆ ಅಥವಾ ಇಲ್ಲವೇ ಇಲ್ಲ ಎಂಬ ಮಟ್ಟಕ್ಕೆ ಇಳಿದಿರುತ್ತದೆ. ವಿದ್ಯೆಗಾಗಿ ಯಾವ ಪ್ರಚೋದನೆಗಳಾಗಲೀ ಪ್ರೋತ್ಸಾಹಕರ ವಾತಾವರಣವಾಗಲೀ ಇರುವುದಿಲ್ಲ.

- ಮಕ್ಕಳ ಭಾಷಾ ಬೆಳವಣಿಗೆಯು ಕುಂಠಿತವಾಗಿರುತ್ತದೆ. ಏಕೆಂದರೆ ಸತತವಾಗಿ ಅವರ ಕಿವಿಯ ಮೇಲೆ ಬೀಳುವ ಭಾಷೆಯೆಂದರೆ ಕೇವಲ ಇನ್ನೊಬ್ಬರ ಆಜ್ಞೆ ಅಥವಾ ಅಧಿಕಾರಯುತವಾದ ಹೇಳಿಕೆಗಳು ಮಾತ್ರ. ಬಹಳಷ್ಟು ಸಲ ಅವರು ಒತ್ತಡದಿಂದ ಅಥವಾ ಬಲವಂತದಿಂದ ಮೌನವಾಗಿರಬೇಕಾಗುತ್ತದೆ.
- ಬಡತನದ ರೇಖೆಗಿಂತ ಕೆಳಮಟ್ಟದಲ್ಲಿ ಜೀವನ ಸಾಗಿಸುವ ಕುಟುಂಬಗಳಲ್ಲಿ ಪೋಷಕರು ತಮ್ಮ ಮಕ್ಕಳೊಂದಿಗೆ ಬಹಳ ಕಠಿಣವಾಗಿ ವರ್ತಿಸುತ್ತಾರೆ ಮತ್ತು ಪರಸ್ಪರ ಸಂಭಾಷಣೆಯಲ್ಲಿ ತೊಡಗುವ ಅಂತರ್ ಸಂಬಂಧಗಳು ಅವರಲ್ಲಿರುವುದಿಲ್ಲ.

ಬಡತನದ ಬವಣೆಯಲ್ಲಿ ಬಳಲುತ್ತಿರುವ ಬಹುಪಾಲು ಮಕ್ಕಳು ಮೂಲಭೂತ ಸೌಲಭ್ಯ–ಸೌಕರ್ಯಗಳೂ ಇಲ್ಲದ ಕಡುದಾರಿದ್ರ್ಯವನ್ನು ಅನುಭವಿಸುತ್ತಿರುತ್ತಾರೆ. ಆದರೆ ಆ ಮಕ್ಕಳ ಸಹಪಾಠಿಗಳು ಇವರ ಮೇಲೆ ಬೀರುವ ಮೊದಲ ಪ್ರಭಾವವೆಂದರೆ ಹೇಗಾದರೂ ಮಾಡಿ ಹಣ ಸಂಪಾದನೆ ಮಾಡಬೇಕು ಎಂಬ ಒತ್ತಡ. ಅದಕ್ಕಾಗಿ ಏನು ಬೇಕಾದರೂ ಮಾಡಲು ಅವರ ಸ್ನೇಹಿತರ ತಂಡ ತಯಾರಾಗಿರುತ್ತದೆ. ಅವರಿಗೆ 'ದುಡ್ಡೇ ದೊಡ್ಡಪ್ಪ'. ಇದು ಮುಂದೆ ಅವರು ಸಮಾಜ–ವಿರೋಧೀ ವ್ಯಕ್ತಿಗಳಾಗಿ ಬೆಳೆಯುವುದರ ಮುನ್ಸೂಚನೆಯಾಗಿರುತ್ತದೆ.

**ಬೀದಿ ಮಕ್ಕಳು ಮತ್ತು ನಗರದ ಕೊಳಚೆ ಪ್ರದೇಶಗಳು**

ಈ ಕೆಳಗೆ ನೀಡಲಾಗಿರುವ ಒಂದು ಸಂಶೋಧನಾ ವರದಿಯನ್ನು ಗಮನಿಸಿ, ವಿಮರ್ಶಿಸಿ;

ಕೊಳಚೆ ಪ್ರದೇಶದ ನಿವಾಸಿಗಳ ಏಳಿಗೆಗಾಗಿ ಸ್ವಯಂ–ಸಂಘಗಳ ವತಿಯಿಂದ ಮತ್ತು ಸರ್ಕಾರದ ವತಿಯಿಂದಲೂ ಪ್ರಯತ್ನಗಳು ನಡೆಯತ್ತಿವೆ. ಈ ಸಂಘಟನೆಗಳ ಅಭಿಪ್ರಾಯದ ಪ್ರಕಾರ ಇಂತಹ ಕಾರ್ಯಕ್ರಮಗಳು ಅವರ ಮಕ್ಕಳ ಏಳಿಗೆಯ ಮೇಲೂ ಪರಿಣಾಮ ಬೀರುತ್ತವೆ. ಆದರೆ ಅದು ಹಾಗೆ ಆಗುತ್ತಿಲ್ಲ. ಉದಾಹರಣೆಗೆ, ಸಾರ್ವತ್ರಿಕ ಶೌಚಾಲಯಗಳ ಸಂಖ್ಯೆಯಲ್ಲಿ ಹೆಚ್ಚಳವನ್ನು ತರಲು ಪ್ರಯತ್ನಗಳಾದವು. ಆದರೆ ಏನಾಯಿತು? ಅಲ್ಲಿ ಮಕ್ಕಳಿಗಂತೂ ಹೋಗಲು ಯಾವಾಗಲೂ ಸಾಧ್ಯವಾಗಲಿಲ್ಲ. ಏಕೆಂದರೆ ಅದೊಂದು ಭೀತಿ ಹುಟ್ಟಿಸುವ ತಾಣವಾಗಿರುತ್ತಿತ್ತು. ಇಲ್ಲವೇ ಅಲ್ಲಿ ದೊಡ್ಡವರದೇ ಒಂದು ಉದ್ದವಾದ ಸರತಿಯ ಸಾಲು ಇರುತ್ತಿತ್ತು. ಮಕ್ಕಳು ಅಲ್ಲೇ ಶೌಚಾಲಯವನ್ನು ಬಳಸಬೇಕೆಂದಿದ್ದರೆ ಸಾಕಷ್ಟು ಸಮಯ ಅದಕ್ಕಾಗಿ ಕಾಯಬೇಕಾಗುತ್ತಿತ್ತು (ಸುಧೇಷ್ಣಾ ಚಟರ್ಜಿ 2012). ಹಾಗಾಗಿ ತಮ್ಮ ಶೌಚಕಾರ್ಯವನ್ನು ಶೌಚಾಲಯದ ಹೊರಗೆ ಅಲ್ಲೇ ಬೀದಿಬದಿಯಲ್ಲೋ ಇಲ್ಲಾ ತಮ್ಮ ಮನೆಯ ಎದುರುಗಡೆಯೋ ಮುಗಿಸಿಕೊಳ್ಳುವುದು ಅಲ್ಲಿನ ಸಾಮಾನ್ಯ ದೃಶ್ಯವಾಗಿದೆ. ದಿನದುದ್ದಕ್ಕೂ ಬೀದಿಯಲ್ಲೇ ಆಟವಾಡುತ್ತಾ ಸಮಯ ಕಳೆವ ಮಕ್ಕಳಿವರು (ದೆಹಲಿಯ ನಿಜ಼ಾಮುದ್ದೀನ್ ಕೊಳಚೆ ಪ್ರದೇಶ).

ಸ್ಲಮ್ ಅಂದರೆ ಕೊಳಚೆಪ್ರದೇಶ ಎಂಬ ಪದವು ಮೊಟ್ಟ ಮೊದಲಬಾರಿಗೆ ಲಂಡನ್‌ನಲ್ಲಿ 19ನೇ ಶತಮಾನದ ಪ್ರಾರಂಭದಲ್ಲಿ ಬಳಸಲಾಗಿತ್ತು. ಅಲ್ಲಿ ಅದರ ಅರ್ಥ 'ಒಂದು ಕೆಳದರ್ಜೆಯ ಕೋಣೆ' ಅಥವಾ 'ಊರ ಹೊರಗಿನ ಯಾರಿಗೂ ಬೇಡವಾದ ಜಾಗ' ಎಂದಾಗಿತ್ತು. ಸಾಮಾನ್ಯವಾಗಿ ಸ್ಲಮ್‌ಗಳನ್ನು ಸಾರ್ವಜನಿಕ ಅಧಿಕಾರಿಗಳಾಗಲೀ ಅಥವಾ ಯಾರೇ ಆಗಲಿ ಭೇಟಿ ಮಾಡುವುದಿಲ್ಲ. ಯಾರೂ ಗುರುತಿಸುವುದೂ ಇಲ್ಲ. ನಗರದ ಇತರ ಭಾಗಗಳೇ ಬೇರೆ, ಸ್ಲಮ್‌ಗಳಿಗೂ ನಗರದ ಬೇರೆ ಭಾಗಗಳಿಗೂ ಸಂಬಂಧವೇ ಇಲ್ಲ ಎಂಬಂತೆ ಕಂಡುಬರುತ್ತವೆ. ಅಲ್ಲಿ ಮೂಲಭೂತವಾದ ಯಾವುದೇ ಸೌಕರ್ಯ, ಸೌಲಭ್ಯವಿರುವುದಿಲ್ಲ. ಆದರೆ ನಗರದ ಅತ್ಯಂತ ಜನಸಾಂದ್ರತೆಯಿರುವ ಪ್ರದೇಶವೆಂದರೆ ಅದು ಕೊಳಚೆ ಪ್ರದೇಶಗಳು. ಅಲ್ಲಿನ ಮನೆಗಳು ಸಾಕಷ್ಟು ಗಾಳಿ ಬೆಳಕಿಲ್ಲದ ಕೋಳಿಗೂಡಿನಂತಿರುತ್ತವೆ. ದುರ್ಗಂಧ ಮೇರೆ ಇಲ್ಲದಂತೆ ಎಲ್ಲ ಕಡೆಗೂ ವ್ಯಾಪಿಸಿರುತ್ತದೆ. ಕೊಳಚೆ ನೀರು ಹೋಗಲು ಯಾವ ವ್ಯವಸ್ಥೆಯೂ ಇರುವುದಿಲ್ಲ. ಭಿಕ್ಷೆಬೇಡುವ, ಪ್ಲಾಸ್ಟಿಕ್ ಆಯುವ, ದಟ್ಟದಾರಿದ್ರ್ಯದ ಜೊತೆಗೆ ರೋಗರುಜಿನಗಳನ್ನು ಅಂಟಿಸಿಕೊಂಡಿರುವ ಜನರೇ ಇಲ್ಲಿನ ನಿವಾಸಿಗಳಾಗಿರುತ್ತಾರೆ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಾಗಲೀ, ನೈರ್ಮಲ್ಯದ ವ್ಯವಸ್ಥೆಯಾಗಲೀ ವಿದ್ಯುಚ್ಛಕ್ತಿ, ಮತ್ತು ಇತರ ಮೂಲ ಸೇವೆಗಳಾವುವೂ ಇವರನ್ನು ತಲುಪುವುದಿಲ್ಲ. ಚುನಾವಣೆಯ ವೇಳೆ

ರಾಜಕಾರಿಣಿಗಳು ಸ್ವಲ್ಪ ಗಮನವೀಯುವರಾದರೂ ಅದರ ನಂತರ ಹಳೇ ಕಥೆಯೇ ಮುಂದುವರಿಯುವುದು. ಇಲ್ಲಿನ ನಿವಾಸಿಗಳಿಗೆ ಸಾಮಾನ್ಯವಾಗಿ ಉಸಿರಾಟದ ತೊಂದರೆಗಳು, ದಮ್ಮು, ಅಥವಾ ಆಸ್ತಮಾ, ವಾಂತಿ, ಭೇದಿ, ಕಾಲರಾ, ಜಂತುಹುಳುಗಳು, ರಕ್ತಹೀನತೆ ಮತ್ತು ಹುಳುಕಡ್ಡಿ/ಗಜಕರ್ಣಗಳಂತಹ ರೋಗರುಜಿನಗಳು ಕಾಡುತ್ತವೆ.

ಬೀದಿಮಕ್ಕಳು ಎಂಬ ಪದವು 1980ರಲ್ಲಿ ಬಳಕೆಗೆ ಬಂದಿತು. ಈ ಮಕ್ಕಳು ತಮ್ಮ ದಿನದ ಬಹುಪಾಲು ಸಮಯವನ್ನು ನಗರಗಳ ಬೀದಿಯಲ್ಲಿ ಕಳೆಯುವರು, ಅಲ್ಲಿ ತಮಗೆ ತೋಚಿದ ಸಣ್ಣ–ಪುಟ್ಟ ಕೆಲಸಗಳನ್ನು ಮಾಡಿಕೊಂಡು ತಮ್ಮ ಮತ್ತು ತಮಗೆ ಸೇರಿದ ಕುಟುಂಬ ಸದಸ್ಯರ ಹೊಟ್ಟೆತುಂಬಿಸುವರು. ಇವರನ್ನು ನೋಡಿಕೊಳ್ಳಲಾಗಲೀ ಅಥವಾ ಕಾಳಜಿ ತೋರುವವರಾಗಲೀ ಯಾರೂ ಇರುವುದಿಲ್ಲ, ಯಾವ ದೊಡ್ಡವರೂ ಇವರ ಜವಾಬ್ದಾರಿಯನ್ನು ಹೊತ್ತಿರುವುದಿಲ್ಲ. ಬೀದಿ ಮಕ್ಕಳೆಂದರೆ, ಬೀದಿಬದಿಯಲ್ಲಿ ಏನಾದರೂ ಕೆಲಸ ಮಾಡುವ ಮಕ್ಕಳು, ತಿರಸ್ಕೃತರಾದ ಮತ್ತು ನಿರ್ಲಕ್ಷಿತರಾದ ಮಕ್ಕಳು, ಅನಾಥರು, ವಿಕಲಾಂಗ ಮಕ್ಕಳು, ಬಾಲಕಾರ್ಮಿಕರು, ಯುದ್ಧ ಸಂಘರ್ಷದಲ್ಲಿ ಸಿಲುಕಿದ ಮಕ್ಕಳು ಮತ್ತು ಬಾಲ–ತಾಯಂದಿರುಗಳು.

ಯೂನಿಸೆಫ್ ಸಂಸ್ಥೆ ಬೀದಿಮೇಲಿನ ಮಕ್ಕಳು ಮತ್ತು ಬೀದಿಮೇಲಿರದ ಮಕ್ಕಳಲ್ಲಿ ಭಿನ್ನತೆಯನ್ನು ಪರಿಗಣಿಸುತ್ತದೆ. ಬೀದಿಮಕ್ಕಳೆಂದರೆ ಅವರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳು ಒಟ್ಟಾಗಿದ್ದು ಬೀದಿಯೇ ತಮ್ಮ ಮನೆಯೆಂದು ಭಾವಿಸಿರುತ್ತಾರೆ. ತಮ್ಮ ಸಹಚರರಲ್ಲಿ ಕೆಲವರಿಗೆ ಅವರ ಕುಟುಂಬವು ಇದ್ದಿರಬಹುದು. ಆದರೆ ಅವರೂ ಕೂಡ ಬೀದಿಮೇಲೆ ಇರುವವರು. ಅದರಲ್ಲಿ ಕೆಲವರು ತಮ್ಮ ಕುಟುಂಬದವರೊಡನೆಯ ಎಲ್ಲಾ ಸಂಬಂಧಗಳನ್ನು ಕಡಿದು/ತೊರೆದು ಬಂದವರಾಗಿರುತ್ತಾರೆ. ಇವರು ಅಕ್ಷರಶಃ ಬೀದಿಮೇಲೆಯೇ ವಾಸಿಸುತ್ತಾರೆ. ಬೀದಿಮಕ್ಕಳಲ್ಲಿ, ಅನಾಥ ಮಕ್ಕಳು, ತಂದೆತಾಯಿಯರಿಂದ ತ್ಯಜಿಸಲ್ಪಟ್ಟ ಮಕ್ಕಳು, ಓಡಿಬಂದವರ ಮಕ್ಕಳು ಅಥವಾ ಹೀನಾಯವಾಗಿ ನಡೆಸಿಕೊಂಡ ಕುಟುಂಬದಿಂದ ಬಂದ ಮಕ್ಕಳು ಕಂಡುಬರುತ್ತಾರೆ. ಇವರಲ್ಲಿ ಏಡ್ಸ್ ರೋಗಪೀಡಿತರೂ ಇರುತ್ತಾರೆ.

ಬೀದಿಮೇಲಿರದ ಮಕ್ಕಳೆಂದರೆ ಅವರಲ್ಲಿ ಇನ್ನೂ ತಮ್ಮ ಮನೆಯವರೊಡನೆ ಸಂಬಂಧವಿರುತ್ತದೆ ಮತ್ತು ಅವರಿಗೆ ಅವರದ್ದೇ ಆದ ಎಂಥದೋ ಒಂದು ಜೋಪಡಿಯಂತಹ ವಸತಿಯಿರುತ್ತದೆ. ಇವರಲ್ಲಿ ಕೆಲವರು ಶಾಲೆಗೂ ಹೋಗುತ್ತಾರೆ. ಆದರೆ ಅವರ ಪೋಷಕರೇ ಅವರನ್ನು ಬೀದಿಗೆ ತಳ್ಳುತ್ತಾರೆ. ಭಿಕ್ಷೆಬೇಡಿಕೊಂಡು ಬರಲು ಬಲವಂತ ಮಾಡುತ್ತಾರೆ. ಕೆಲವೊಮ್ಮೆ ಮಕ್ಕಳೇ ಶಾಲೆಗಿಂತ ಇದೇ ಚೆನ್ನಾಗಿದೆಯೆನಿಸಿ ತಾವೇ ಬೀದಿಮೇಲಿರಲು ನಿರ್ಧರಿಸುತ್ತಾರೆ. ಹೀಗೆ ಬೀದಿಮಕ್ಕಳಲ್ಲಿ ಒಟ್ಟಾರೆ ನಾಲ್ಕು ವಿಧಗಳನ್ನು ನೋಡಬಹುದು, ಅವುಗಳೆಂದರೆ 1. ಕುಟುಂಬವನ್ನು ಹೊಂದಿರುವ ಬೀದಿಕಾರ್ಮಿಕರು 2. ಸ್ವತಂತ್ರ ಬೀದಿಕಾರ್ಮಿಕರು– ತಮ್ಮ ಕುಟುಂಬವಿದ್ದರೂ ಬೀದಿಯಲ್ಲೇ ಆಗಾಗ ಮಲಗುವವರು 3. ತಮ್ಮ ಕುಟುಂಬದವರೊಡನೆ ಯಾವುದೇ ಸಂಪರ್ಕವಿಟ್ಟುಕೊಳ್ಳದ ಮಕ್ಕಳು 4. ಬೀದಿಕುಟುಂಬದ ಮಕ್ಕಳು (ರಾಜ್‌ನೀ ಮತ್ತು ಇತರರು ಕಂಡಂತೆ 1994). ಈ ಮಕ್ಕಳು ನಮ್ಮ ದೋಷಪೂರಿತ ಸಮಾಜದ ಮತ್ತು ಸಾಮಾಜಿಕ ನಿಯಮಗಳ ಬಲಿಪಶುಗಳಾಗಿ ಕಂಡುಬರುತ್ತಾರೆ.

ಬೀದಿ ಜೀವನ ನಡೆಸುವ ಮಕ್ಕಳಲ್ಲಿ ಬಹುಪಾಲು ಗಂಡು ಮಕ್ಕಳೇ ಹೆಚ್ಚು. ಎಲ್ಲಾ ಬೀದಿ ಮಕ್ಕಳನ್ನು ಸೇರಿಸಿ ನೋಡಿದರೆ, ಸುಮಾರು 71 ರಿಂದ 91% ಇವುರುಗಳೇ ಆಗಿದ್ದಾರೆ. ಆದರೆ ಇತ್ತೀಚಿಗೆ ಗಂಡು ಮತ್ತು ಹೆಣ್ಣುಮಕ್ಕಳ ಸಂಖ್ಯೆ ಗಣನೀಯವಾಗಿಯೇ ಏರುತ್ತಿದೆ. ಬಹುತೇಕ ಎಲ್ಲಾ ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳನ್ನು ಮನೆಗೆಲಸದವರನ್ನಾಗಿ ಇಟ್ಟುಕೊಳ್ಳುತ್ತಾರೆ. ಅವರನ್ನು ಕೇವಲ ಮನೆಕೆಲಸದವರನ್ನಾಗಿ ನೋಡದೆ ಇನ್ನೆಲ್ಲಾ ರೀತಿಯಲ್ಲಿ ಬಳಸಿಕೊಂಡು ಶೋಷಿಸುತ್ತಾರೆ. ಇದೇ ಅವರನ್ನು ಬೀದಿಮಕ್ಕಳನ್ನಾಗಿಸುತ್ತದೆ. ಸುಮಾರು 5ರಿಂದ 16 ವರ್ಷಗಳವರೆಗೆ ಮಕ್ಕಳು ತಮ್ಮವರಿಂದ ದೂರ ಇರುವ ಪ್ರವೃತ್ತಿಯನ್ನು ತೋರುತ್ತಾರೆ. ಉಳಿದವರು ತಮ್ಮ ಕುಟುಂಬವನ್ನು ಬೆಂಬಲಿಸುತ್ತಾರೆ. ಸಾಮಾನ್ಯವಾಗಿ ನಗರದ ಕೊಳಚೆ ಪ್ರದೇಶದ ನಿವಾಸಿಗಳಾದ ಇವರು ಬಡತನದ ಒಂದೇ ಕಾರಣದಿಂದ ಜೀವನದಲ್ಲಿ ಬಹಳ ಕೆಳಮಟ್ಟಕ್ಕೆ ಇಳಿದುಬಿಟ್ಟಿರುತ್ತಾರೆ. ಹಾಗೆಯೇ

ಒಂದು ನಿಖರವಾದ ವರಮಾನವಿಲ್ಲದ ಇವರುಗಳು ಅರೆ–ನಗರಗಳಲ್ಲೂ ಗ್ರಾಮ್ಯಪ್ರದೇಶಗಳಿಂದ ಬಹಳ ದೂರವಿರುವ ಪ್ರದೇಶಗಳಲ್ಲೂ ಕಂಡುಬರುತ್ತಾರೆ. ಇವರಿಗೆ ವಾಸಕ್ಕಾಗಿ ತಮ್ಮದೇ ಸ್ವಂತ ಜಾಗವಿರುವುದಿಲ್ಲ, ಹೇಳಿಕೊಳ್ಳುವಂತಹ ಕೆಲಸವೂ ಇರುವುದಿಲ್ಲ. ಗಾಳಿ ಬಂದಂತೆ ತೂರಿಕೊಳ್ಳುವ ಜನರಿವರು.

ನಗರೀಕರಣದಿಂದ ಇಡೀ ವಿಶ್ವದಲ್ಲಿ ಮಿಲಿಯಾಂತರ ಮಕ್ಕಳು ಬೀದಿಮಕ್ಕಳಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಅದರಲ್ಲೂ ಹೆಚ್ಚಾಗಿ ಆಫ್ರಿಕಾ ಖಂಡದಲ್ಲಿ. ಇವರು ಅಸಮಾನತೆ, ಆರ್ಥಿಕ ಸಂಕಷ್ಟಗಳು, ನ್ಯೂನ–ಪೋಷಣೆ, ಕುಬ್ಜ–ಬೆಳವಣಿಗೆ, ಜೊತೆಗೆ ಶಾಲಾ ಕಲಿಕೆ, ಮತ್ತಿತರ ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಶಾಲೆಯನ್ನು ಅರ್ಧದಲ್ಲೇ ಬಿಡುವ ಹೆಣ್ಣುಮಕ್ಕಳ ಸಂಖ್ಯೆಯೂ ಹೆಚ್ಚು. ಹೆಚ್ಚಿನ ಮರಣದರ ಮತ್ತು ಅನಾರೋಗ್ಯ, ಲಸಿಕೆಗಳಿಂದ ತಡೆಯಬಹುದಾದ ರೋಗಗಳ ಹೆಚ್ಚಳ, ಅಪೌಷ್ಟಿಕತೆ ಇಂತಹ ಋಣಾತ್ಮಕ ಅಂಶಗಳು ದಕ್ಷಿಣ ಏಶಿಯಾ ಭಾಗದಲ್ಲೇ ಅತೀ ಹೆಚ್ಚು (SAARC and UNICEF -2001). ನಮ್ಮ ದೇಶದಲ್ಲಿ ತ್ವರಿತವಾಗಿ ಆಗುತ್ತಿರುವ ನಗರೀಕರಣದ ಜೊತೆ ಜೊತೆಯಲ್ಲಿಯೇ ಕೊಳಚೆ ಪ್ರದೇಶಗಳು ಮತ್ತು ಬೀದಿಕಾರ್ಮಿಕ ಮಕ್ಕಳ ಸಂಖ್ಯೆ ಕೂಡಾ ಹೆಚ್ಚುತ್ತಿವೆ. ಭಾರತದ ಜನಗಣತಿಯ ಪ್ರಕಾರ ಸ್ಲಮ್ ಅಥವಾ ಕೊಳಚೆಪ್ರದೇಶಗಳೆಂದರೆ, ಶಿಥಿಲಗೊಂಡ, ವಾಸಕ್ಕೆ ಯೋಗ್ಯವಲ್ಲದ, ಅತಿ ಕಿರಿದಾದ ಸ್ಥಳವಾಗಿದ್ದರೂ ತುಂಬಿತುಳುಕುವ ಜನರನ್ನು ಹೊಂದಿರುವ, ನಗರದ ಹೊರಗಡೆಯಲ್ಲಿ ಕಂಡುಬರುವ ಅತಿ ಕೊಳಕಾದ ಪ್ರದೇಶಗಳಾಗಿರುತ್ತವೆ. ಇಲ್ಲಿ ಒಳಚರಂಡಿ ವ್ಯವಸ್ಥೆಗಳಾಗಲಿ, ನೈರ್ಮಲ್ಯದ ಯಾವುದೇ ಕ್ರಮಗಳಾಗಲೀ ಕಾಣಸಿಗುವುದಿಲ್ಲ. ಕಿರಿದಾದ ಬೀದಿಗಳು ಅಥವಾ ಗಲ್ಲಿಗಳು, ಸ್ವಚ್ಛ ಗಾಳಿ ಬೆಳಕಿಲ್ಲದ, ಯಾವುದೇ ದೃಷ್ಟಿಯಿಂದಲೂ ಸುರಕ್ಷಿತವಲ್ಲದ ಈ ಜಾಗಗಳು ಆರೋಗ್ಯಕರ ವಾತಾವರಣಕ್ಕೆ ತದ್ವಿರುದ್ಧವಾಗಿರುತ್ತವೆ. ಜನಗಣತಿಯ ಪ್ರಕಾರ 65.5 ಮಿಲಿಯನ್‌ರಷ್ಟು ಜನರು ಇಂತಹ ಸ್ಲಮ್‌ಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ನಗರದ 17.4% ಜನರು ಇವರೇ ಆಗಿದ್ದಾರೆ. ಇವರಲ್ಲಿ 8.1 ಮಿಲಿಯನ್ ಮಕ್ಕಳಿದ್ದು, ಅವರೆಲ್ಲರೂ 0ಯಿಂದ 6ವರ್ಷದವರಾಗಿರುತ್ತಾರೆ. ಶುದ್ಧ ಕುಡಿಯುವ ನೀರಿನ ಅಭಾವ, ಅಪೌಷ್ಟಿಕತೆ ಮತ್ತು ನೈರ್ಮಲ್ಯದ ಕೊರತೆಯಿಂದಾಗಿ ಇಲ್ಲಿನ ಮಕ್ಕಳು ಸದಾ ರೋಗದಿಂದ ನರಳುತ್ತಾರೆ. ಇದರಿಂದಾಗಿ ಇಲ್ಲಿನ ಮರಣದ ದರವೂ ಕೂಡ ಹೆಚ್ಚಾಗಿರುತ್ತದೆ.

ಕೈಗಾರಿಕೀಕರಣವು ಇಂತಹ ಸ್ಲಮ್‌ಗಳ ಸೃಷ್ಟಿಯನ್ನು ವಿಸ್ತರಿಸಿದೆ. ಬಾಲಾಪರಾಧಕ್ಕೆ ಕಾರಣವಾಗುವಂತಹ ಕೆಡುಕಿನ ಪರಿಸರಕ್ಕೂ ಮೂಲವಾಗಿದೆ. ಇದರಿಂದಾಗಿ, ನಿರ್ಗತಿಕರಾದ, ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳು ಹೆಚ್ಚಾಗುತ್ತಿದ್ದಾರೆ. ಕೈಗಾರಿಕೀಕರಣದಿಂದ ಮಕ್ಕಳನ್ನು ಬಲಿಪಶುವನ್ನಾಗಿಸುವುದು, ಶೋಷಣೆ ಮಾಡುವುದು ಮತ್ತು ಇದರಿಂದಾಗಿ ಅವರುಗಳು ಬಾಲಪರಾಧಿಗಳಾಗುವುದು – ಇವೆಲ್ಲಾ ನಡೆಯುತ್ತಿವೆ. ಕುಟುಂಬದ ಆಂತರಿಕ ಸಂಬಂಧವನ್ನು ತಿರಸ್ಕರಿಸುವುದು, ಧಾರ್ಮಿಕ ಸಂಪ್ರದಾಯಗಳನ್ನು ದುರ್ಬಲಗೊಳಿಸುವುದು, ಮೌಲ್ಯಗಳ ಅವಹೇಳನ, ಲಿಂಗತ್ವದ ಬಗ್ಗೆ ಬೆಳೆಸಿಕೊಳ್ಳುವ ವಿಭಿನ್ನ ದೃಷ್ಟಿಕೋನ, ಮತ್ತು ನಶಿಸುತ್ತಿರುವ ನೈತಿಕತೆ –ಇವುಗಳು ನಗರೀಕರಣ ಮತ್ತು ಕೈಗಾರಿಕೀಕರಣದ ಉಪ–ಉತ್ಪನ್ನಗಳಾಗಿವೆ.

ನಗರದ ಕೊಳಚೆಪ್ರದೇಶದಲ್ಲಿ ವಾಸಿಸುವ ಮಕ್ಕಳು ವಿವಿಧ ರೀತಿಯ ಅಪಾಯಕಾರಿ ಸನ್ನಿವೇಶಗಳಲ್ಲಿ ಸಿಲುಕಿದ್ದಾರೆ. ಪ್ರತೀ 8 ಮಕ್ಕಳಲ್ಲಿ ಒಂದು ಮಗುವು (0ಯಿಂದ 6ವರ್ಷಗಳ) ಇನ್ನೂ ಪೂರ್ಣಗೊಳ್ಳದ ಅಪಾರ್ಟ್‌ಮೆಂಟುಗಳ ಕಟ್ಟಡಗಳಲ್ಲಿ ವಾಸಿಸುತ್ತದೆ. 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಸುಮಾರು 8 ಮಿಲಿಯನ್ ಮಕ್ಕಳು ದೇಶದ ಸುಮಾರು 49,000 ಸ್ಲಮ್‌ಗಳಲ್ಲಿ ವಾಸಿಸುತ್ತಿದ್ದಾರೆ. "ಮರೆತ ಧ್ವನಿಗಳು– ಭಾರತದ ಸ್ಲಮ್‌ನಲ್ಲಿ ವಾಸಮಾಡುವ ಮಕ್ಕಳು" ಎಂಬ ಲೇಖನದಲ್ಲಿ ಇಂತಹ ಮಕ್ಕಳು ಅತೀ ಅಪಾಯಕಾರಿ ಸನ್ನಿವೇಶಗಳಲ್ಲಿದ್ದು ಅವರು ಮುಂದೆ ಏನು ಬೇಕಾದರೂ ಆಗುವ ಸಾಧ್ಯತೆಯನ್ನು 'ರಿಯಾಲಿಟಿ ಚೆಕ್' ಸಮೀಕ್ಷೆಯನ್ನು ಆಧರಿಸಿ ವರದಿ ಮಾಡಲಾಗಿದೆ. ಬೇರೆಲ್ಲಾ ಮಕ್ಕಳಿಗಿಂತ ಸ್ಲಮ್‌ನ ಮಕ್ಕಳು ಎರಡರಷ್ಟು ಪಾಲು ವಾಂತಿ, ಭೇದಿ ಮತ್ತು ಕಾಲರಾ, ರೋಗಗಳಿಗೆ ತುತ್ತಾಗುತ್ತಾರೆ.

ಸ್ಲಮ್‌ಗಳ ಸೃಷ್ಟಿಗೆ ಮತ್ತು ಸ್ಲಮ್ ಮಕ್ಕಳ ಕಷ್ಟಗಳಿಗೆ ಹಲವಾರು ಕಾರಣಗಳುಂಟು, ಅವುಗಳನ್ನು ಈ ಕೆಳಗೆ ಕಂಡಂತೆ ಪಟ್ಟಿ ಮಾಡಬಹುದಾಗಿದೆ:

- ಪ್ರಕೃತಿ ವಿಕೋಪಗಳು, ಯುದ್ಧ, ಪ್ರವಾಹ, ಬರ ಮತ್ತು ಭೂಕಂಪ
- ತಂದೆ ಅಥವಾ ತಂದೆ–ತಾಯಿಯಿಬ್ಬರ ಮರಣ, ಅಥವಾ ಪೋಷಕರಿಂದ ತಿರಸ್ಕರಿಸಲ್ಪಡುವುದು
- ಅನೈತಿಕ ಸಂಬಂಧದ ಫಲವಾಗಿ ಹುಟ್ಟುವ ಮಕ್ಕಳು
- ಕಡು ಬಡತನದ ಕಾರಣವಾಗಿ ಮಕ್ಕಳನ್ನು ಸರಿಯಾಗಿ ಸಾಕಲಾಗದೇ ಇರುವುದು
- ಪೋಷಕರಲ್ಲಿ ಒಬ್ಬರು ಅಥವಾ ಇಬ್ಬರೂ ವಿಕಲಾಂಗರಾಗಿರುವುದು
- ಪೋಷಕರಲ್ಲಿ ಒಬ್ಬರು ಅಥವಾ ಇಬ್ಬರೂ ಮಾರಣಾಂತಿಕ ರೋಗದಿಂದ ನರಳುವುದು ಅಥವಾ ಮಾನಸಿಕ ಅಸ್ವಸ್ಥರಾಗಿರುವುದು
- ಸೌಹಾರ್ದತೆಯಿರದ ಕುಟುಂಬ ಅಥವಾ ವಿಚ್ಛೇದಿತ ಕುಟುಂಬ
- ಪೋಷಕರೇ ಸಮಾಜ–ವಿರೋಧಿ ಚಟುವಟಿಕೆಗಳಲ್ಲಿ ಸೇರಿಕೊಂಡಿರುವುದು
- ಪೋಷಕರೇ ಮಕ್ಕಳನ್ನು ಭಿಕ್ಷೆ ಬೇಡಲು ಅಥವಾ ಸಮಾಜ–ವಿರೋಧಿ ಚಟುವಟಿಕೆಗಳಲ್ಲಿ ಸೇರುವಂತೆ ಬಲವಂತ ಪಡಿಸುವುದು ಮತ್ತು ಅದಕ್ಕಾಗಿ ಹಿಂಸಿಸುವುದು

ನಿರಾಶ್ರಿತರ ಮಕ್ಕಳು, ದಾರಿದ್ರ್ಯ, ಕೆಳಸ್ತರದವರು, ಅಲ್ಪಸಂಖ್ಯಾತರು, ಅನಾಥರು, ಮಾದಕ ವ್ಯಸನಿಗಳಾದ ಮಕ್ಕಳು, ಭಿಕ್ಷುಕರು, ಅಪಹರಿಸಲ್ಪಟ್ಟ ಮಕ್ಕಳು, ಲೈಂಗಿಕವಾಗಿ ಶೋಷಿತರಾದವರು, ಬೀದಿ ಕಾರ್ಮಿಕ ಮಕ್ಕಳು – ಇಂತಹ ಎಲ್ಲಾ ಮಕ್ಕಳಿಗೂ ಸ್ಲಮ್‌ಗಳೊಡನೆ ನೇರವಾದ ಸಂಬಂಧವಿರುತ್ತದೆ. ಸ್ಲಮ್ ಮಕ್ಕಳ ಬಾಲ್ಯಹಂತವು ಬೇರೆಯದೇ ವಿನ್ಯಾಸವನ್ನು ಹೊಂದಿರುತ್ತದೆ, ಇದನ್ನು ಅರಿತಾಗ ಬಾಲ್ಯದ ವಿಸ್ತೃತ ಕ್ಷೇತ್ರದ ಬಗ್ಗೆ ತಿಳಿಯದೇ ಮಾತನಾಡುವ ಸಿದ್ಧಾಂತಗಳನ್ನು ಮತ್ತು ಬಾಲ್ಯಹಂತದ ಸಾರ್ವತ್ರಿಕ ಲಕ್ಷಣಗಳನ್ನು ನೀಡಿದ ಮನೋವಿಜ್ಞಾನಿಗಳನ್ನು ನಾವು ಮತ್ತೊಮ್ಮೆ ವಿಮರ್ಶಾ ದೃಷ್ಟಿಯಿಂದ ನೋಡುವ ಅಗತ್ಯವಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಭಾರತದಲ್ಲಿ 98,000 ಮಂದಿ ವಾಂತಿ–ಬೇದಿಯಿಂದಲೇ ಸಾವನ್ನಪ್ಪುತ್ತಾರೆ. ಶುದ್ಧ ಕುಡಿಯುವ ನೀರಿನ ಅಭಾವ, ಸಾಕಷ್ಟು ನೈರ್ಮಲ್ಯವನ್ನು ಕಾಪಾಡಿಕೊಳ್ಳದಿರುವುದು, ಇಂತಹ ಅನಾರೋಗ್ಯ ವಾತಾವರಣವನ್ನು ಸೃಷ್ಟಿಸುತ್ತವೆ. ರೋಗ ಹರಡುವಿಕೆಯಿಂದ ಸಾಂಕ್ರಾಮಿಕ ರೋಗಗಳು ಉಲ್ಬಣಗೊಳ್ಳುತ್ತವೆ. ಇನ್ನೊಂದು ವಿಚಾರ ಎಂದರೆ ಬಾಲ್ಯವಿವಾಹವನ್ನು ಅತಿ ಹೆಚ್ಚು ಹೊಂದಿರುವ ದೇಶವೆಂದರೆ ಇಂದಿಗೂ ಭಾರತವೇ. ಪ್ರತಿ 3 ಹೆಣ್ಣು ಮಕ್ಕಳಲ್ಲಿ ಒಂದು ಹೆಣ್ಣು ಮಗುವು ಬಾಲವಧುವಾಗಿರುತ್ತಾಳೆ. ನಂತರದಲ್ಲಿ ಹಲವಾರು ಕಾರಣಗಳಿಂದ ಇಂತಹ ಅತಿ ಚಿಕ್ಕ ವಯಸ್ಸಿನಲ್ಲಿ ಮದುವೆಯಾದ ಹೆಣ್ಣುಮಕ್ಕಳು ಮುಂದೆ ವೇಶ್ಯಾವಾಟಿಕೆಯಲ್ಲಿ ಅಥವಾ ಇನ್ನೊಬ್ಬರ ಮನೆಯ ಕೆಲಸದಾಳಾಗಿ ಬದಲಾಗುತ್ತಾರೆ. ಭಾರತದ ರಾಜ್ಯಗಳಲ್ಲಿ ಮುಖ್ಯವಾಗಿ ಬಡತನದ ಕಾರಣದಿಂದಾಗಿ ರಾಜಾಸ್ಥಾನ, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ್, ಜಾರ್‌ಖಂಡ್, ಒರಿಸ್ಸಾ, ಛತ್ತೀಸ್‌ಘರ್ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಇಂತಹ ಘಟನೆಗಳು ಹೆಚ್ಚಾಗಿ ಕಂಡುಬರುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1.ಬಡತನವೆಂದರೆ____________

ಎ. ವ್ಯಕ್ತಿಯೊಬ್ಬನ ಅತಿ ಕಡಿಮೆ ವರಮಾನ

ಬಿ. ಅಗತ್ಯತೆಗಳ ಅತೀವ್ರ ಕೊರತೆ ಮತ್ತು ಸೌಲಭ್ಯಗಳ, ಸೌಕರ್ಯಗಳ ಅಭಾವ

ಸಿ. ಹಣದ ಕೊರತೆ

ಡಿ. ನಿರುದ್ಯೋಗ

2. ಅತಿ ಬಡತನದ ಕುಟುಂಬಗಳಲ್ಲಿ ಮಕ್ಕಳು____________

ಎ. ಅಪೌಷ್ಟಿಕತೆಯಿಂದ ನರಳುವರು

ಬಿ. ಉತ್ತಮ ಆರೋಗ್ಯದ ಕಾಳಜಿಯನ್ನು ಪಡೆಯುವರು

ಸಿ. ಅಭಿಪ್ರೇರಣೆ ಮತ್ತು ಪ್ರೋತ್ಸಾಹವನ್ನು ಪಡೆಯುವರು

ಡಿ. ಅಭ್ಯಾಸದಲ್ಲಿ ಕಡಿಮೆ ಗುಣಮಟ್ಟವನ್ನು ತೋರುವರು

3. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'x' ಚಿಹ್ನೆಯ ಮೂಲಕ ಸೂಚಿಸಿ:

ಎ. ಬಡತನದ ರೇಖೆಗಿಂತ ಕೆಳಗಿನ ಜೀವನ ನಡೆಸುವ ಪೋಷಕರು ಮಕ್ಕಳನ್ನು ಬಹಳ ಕಟುವಾಗಿ ನಡೆಸಿಕೊಳ್ಳುವರು

ಬಿ. ಬಡಕುಟುಂಬದ ಮಕ್ಕಳು ಆಹಾರದ ಕೊರತೆಯನ್ನು ಅನುಭವಿಸುವರು.

ಸಿ. ಬಹು ಪಾಲು ಸ್ಲಮ್‌ನ ಮಕ್ಕಳು ಉಸಿರಾಟದ ಸಮಸ್ಯೆ, ಭೇದಿ, ಮತ್ತು ರಕ್ತಹೀನತೆಯಿಂದ ನರಳುವರು.

ಡಿ. ಬೀದಿಮಕ್ಕಳಿಗೆ ಮನೆಯಿರುತ್ತದಾದರೂ ಅವರು ತಮ್ಮ ಬಹಳಷ್ಟು ಸಮಯವನ್ನು ಬೀದಿಯಲ್ಲೇ ಕಳೆಯುವರು.

ಇ. ಬೀದಿಮಕ್ಕಳಲ್ಲಿ ಸುಮಾರು 50%ಕ್ಕೂ ಹೆಚ್ಚು ಗಂಡು ಮಕ್ಕಳೇ ಇರುತ್ತಾರೆ.

ಎಫ್. 0ಯಿಂದ 6 ವರ್ಷದೊಳಗಿನ ಸುಮಾರು 8.1 ಮಿಲಿಯನ್ ಮಕ್ಕಳು ಕೊಳಚೆಪ್ರದೇಶದ ನಿವಾಸಿಗಳಾಗಿರುತ್ತಾರೆ

## 2.4.3.3. ಬಾಲ್ಯಹಂತ ಮತ್ತು ಕಷ್ಟಕರ ಪರಿಸ್ಥಿತಿಗಳು : ಹೆಣ್ಣುಮಕ್ಕಳಾಗಿ ವಿಕಾಸ ಮತ್ತು ದಲಿತ / ಬುಡಕಟ್ಟು ಕುಟುಂಬಗಳಲ್ಲಿ ಮಕ್ಕಳ ವಿಕಾಸ

ಸಂಸ್ಕೃತದಲ್ಲಿ 'ದಲಿತ' ಎಂಬ ಪದದ ಅರ್ಥ 'ತುಳಿಯಲ್ಪಟ್ಟವರು' ಎಂಬುದಾಗಿ. ಹಿಂದೂ ಧರ್ಮದ ನಾಲ್ಕು ವರ್ಣಗಳ ವಿನ್ಯಾಸದಲ್ಲಿ ದಲಿತರನ್ನು ಹೊರಪಡಿಸಲಾಗಿದ್ದು ಅವರನ್ನು ಐದನೆಯ ವರ್ಣವಾದ "ಪಂಚಮ"ರೆಂದು ಕರೆಯಲಾಗಿದೆ. ಪರಿಶಿಷ್ಟ ಜಾತಿಯವರನ್ನು ದಲಿತರೆಂದೂ ಗುರುತಿಸಿದ್ದಾರೆ. ಇವರನ್ನು ಅಸ್ಪೃಶ್ಯರೆಂದೂ ಕರೆಯುವರು. ಸತತವಾಗಿ ಇವರನ್ನು ಶೈಕ್ಷಣಿಕ ಸೌಲಭ್ಯಗಳಿಂದ ಬಹಳ ಹಿಂದಿನಿಂದಲೂ ವಂಚಿಸಲಾಗಿದೆ. ಈಗಲೂ ದಲಿತರಲ್ಲಿ ಸುಶಿಕ್ಷಿತರಾದವರ ಸಂಖ್ಯೆ ಬೇರೆಯವರೊಡನೆ ಹೋಲಿಸಿ ನೋಡಿದರೆ ತುಂಬಾ ಕಡಿಮೆಯೇ.

ಬಹಳ ಹಿಂದಿನಿಂದಲೂ ವರ್ಣಾಧಾರಿತ ಸಮಾಜವನ್ನು ಹೊಂದಿರುವ ನಮ್ಮ ದೇಶದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದಲಿತರನ್ನು ದಮನಿಸಲಾಗಿದ್ದು ಅದು ಈಗಲೂ ಮುಂದುವರಿಯುತ್ತಿದೆ. ಭಾರತೀಯ ಸಮಾಜವು ಅನೇಕ ಸಾಮಾಜಿಕ ಸ್ತರಗಳು ಜಾತಿ ಮತ್ತು ವರ್ಗದ ಆಧಾರದಿಂದ ರೂಪಿತವಾಗಿವೆ. ವರ್ಣಾಧಾರಿತ ವರ್ಗೀಕರಣದಲ್ಲಿ ವ್ಯಕ್ತಿಯು ಮಾಡುವ ಕಸುಬು ಅಥವಾ ಕೆಲಸ/ವೃತ್ತಿಯನ್ನು ಆಧರಿಸಲಾಗುತ್ತಿತ್ತು. ಪ್ರಸ್ತುತದಲ್ಲಿಯೂ ಶಿಕ್ಷಣ ಸೌಲಭ್ಯವು ದಲಿತರನ್ನು ತಲುಪುವುದು ಒಂದು ಮಹತ್ತಾದ ಸವಾಲಾಗಿದೆ.

ಭಾರತೀಯ ಸಮಾಜದಲ್ಲಿ ಉಚ್ಚ ವರ್ಗವೆಂದರೆ ಪುರೋಹಿತರು ಮತ್ತು ಗುರುಕುಲಗಳನ್ನು ನಡೆಸುತ್ತಿದ್ದ

ಗುರುಗಳೆಂದು ಹೇಳಲಾಗುವುದು. ಅವರೇ ಬ್ರಾಹ್ಮಣರು. ಇವರ ನಂತರದಲ್ಲಿ ಬರುವ ವರ್ಗವೆಂದರೆ, ಯುದ್ಧಗಳಲ್ಲಿ ಹೋರಾಡಬಲ್ಲ ಕ್ಷತ್ರಿಯರದ್ದು. ಮೂರನೇ ವರ್ಗವಾಗಿ ಕಂಡುಬರುವುದು ವೈಶ್ಯರು ಅಂದರೆ ವರ್ತಕರು. ಹಾಗೂ ನಾಲ್ಕನೇ ವರ್ಗವಾಗಿ ಬಂದವರು ಇತರ ಎಲ್ಲಾ ಕೆಲಸಗಳನ್ನು ಮಾಡುವ ಕಸುಬಿನವರಾದ ಶೂದ್ರರು. ಇವರೆಲ್ಲರಿಗಿಂತ ಅತ್ಯಂತ ಕನಿಷ್ಟತಮವಾಗಿ ಪರಿಗಣಿಸಿದ ವರ್ಗವೆಂದರೆ ದಲಿತರು. ಇವರಿಗೆ ಯಾವ ಜಾತಿಯನ್ನೂ ಆರೋಪಿಸದೆ ಅಸ್ಪೃಶ್ಯರೆಂಬ ಪದದಿಂದ ಗುರುತಿಸಲಾಗುತ್ತಿತ್ತು. ಇವರ ಮೇಲೆ ಅತ್ಯಂತ ಹೀನಾಯವಾದ ಮತ್ತು ಅನ್ಯಾಯವಾದ ಕಟ್ಟುಪಾಡುಗಳನ್ನು ಹೇರಲಾಗಿತ್ತು.

ಆರ್ಥಿಕ ದೃಷ್ಟಿಯಿಂದ ನೋಡಿದರೆ, ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿಯಾಗಿಸುತ್ತಾ ಉತ್ಪನ್ನಕಾರಕನಾಗಿಸಬೇಕು ಮತ್ತು ತನ್ನ ಕುಟುಂಬಕ್ಕೂ ಹಾಗೂ ಸಮಾಜಕ್ಕೂ ಅವನು ಪೂರಕವಾಗಿಯೂ ಉಪಯುಕ್ತವಾಗಿಯೂ ಇರುವಂತೆ ತಯಾರು ಮಾಡಬೇಕು. ಶಿಕ್ಷಣವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಪ್ರಬಲಗೊಳಿಸುವುದೇ ಅಲ್ಲದೆ ಉತ್ತಮವಾದ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು. ಆದರೆ ಬಹುಪಾಲು ದಲಿತ ಕುಟುಂಬಗಳು ದಾರಿದ್ರ್ಯ, ಬಡತನ ಮತ್ತು ಅನಕ್ಷರತೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂಬ ಆಸಕ್ತಿಯಾಗಲೀ, ಹುಮ್ಮಸ್ಸಾಗಲೀ ಇರುವುದಿಲ್ಲ. ಇವರ ಮನೆಗಳೂ ಕೂಡ ಊರ ಹೊರಗೆ ಇದ್ದು ಮಕ್ಕಳು ಶಾಲೆಗೆ ಬರಬೇಕೆಂದರೆ ಸಾಕಷ್ಟು ದೂರ ಕ್ರಮಿಸಲೇ ಬೇಕಾದ ಅನಿವಾರ್ಯತೆ ಇರುವುದರಿಂದ ಮಕ್ಕಳು ಶಾಲೆಯ ಹೊರಗೆ ಉಳಿಯುವಂತಾಗಿದೆ.

ಇತ್ತೀಚಿನ ಚಿತ್ರ ಸ್ವಲ್ಪ ಬೇರೆಯದೇ ಇದೆ. ದಲಿತ ವಲಯದಲ್ಲಿ ಧಾರ್ಮಿಕ ಚಿಂತನೆಗಳಿಂದಾಗಿ ಅವರಲ್ಲಿ ಕೆಲವರು ತಮ್ಮ ನಂಬಿಕೆಗಳನ್ನು, ವಿಶ್ವಾಸಗಳನ್ನು ಬದಲಿಸಿಕೊಂಡಿದ್ದಾರೆ. ಉದಾಹರಣೆಗೆ ಬೌದ್ಧಧರ್ಮ, ಕ್ರಿಸ್ತಧರ್ಮ ಮತ್ತು ಸಿಕ್ ಧರ್ಮವನ್ನು ಭರವಸೆಯಿಂದ ನೋಡುತ್ತಿದ್ದಾರೆ. ಪರಿಶಿಷ್ಟ ಜಾತಿಯ ರಾಷ್ಟ್ರೀಯ ಸಮಿತಿಯು 'ದಲಿತ' ಎಂಬ ಪದವು ಮತ್ತು ಅದರ ಬಳಕೆಯು ಭಾರತೀಯ ಸಂವಿಧಾನಕ್ಕೆ ವಿರುದ್ಧವಾದುದೆಂದು ಪರಿಗಣಿಸುತ್ತದೆ. ಆದರೆ ಇನ್ನೂ ಕೆಲವು ಮೂಲಗಳ ಪ್ರಕಾರ 'ದಲಿತ' ಎಂಬ ಪದವು ಪರಿಶಿಷ್ಟ ಜಾತಿಯನ್ನಷ್ಟೇ ಅಲ್ಲದೆ ಮತ್ತೂ ಹಲವಾರು ಸಮುದಾಯಗಳನ್ನು ಒಳಗೊಂಡಿದೆ, ಮುಖ್ಯವಾಗಿ ಯಾರನ್ನು ದಬಾವಣೆ ಮಾಡಿ, ದಮನಿಸಿ ನಡೆಸಿಕೊಳ್ಳುವರೋ ಅವರೆಲ್ಲರನ್ನು ಪ್ರತಿನಿಧಿಸುವ ಪದವೇ 'ದಲಿತ' ಎಂದು ಹೇಳುವರು. ಇದೇ ರೀತಿಯ ಸನ್ನಿವೇಶಗಳು ಮತ್ತು ಸಂದರ್ಭಗಳು ನೇಪಾಲದಲ್ಲಿ ಕಂಡುಬಂದಿವೆ. ಪರಿಶಿಷ್ಟ ಜಾತಿಯವರು ಇಡೀ ಭಾರತಾದ್ಯಂತ ಹರಡಿಕೊಂಡಿದ್ದಾರೆ. ಇವರ ಜನಸಂಖ್ಯೆಯು 16.6% ಇದ್ದು, 2011ರ ಜನಗಣತಿಯ ಪ್ರಕಾರ, ಉತ್ತರ ಪ್ರದೇಶದಲ್ಲಿ 21%, ಪಶ್ಚಿಮ ಬಂಗಾಲದಲ್ಲಿ 11%, ಬಿಹಾರದಲ್ಲಿ 8% ಮತ್ತು ತಮಿಳುನಾಡಿನಲ್ಲಿ 7% ಕಂಡುಬಂದಿದ್ದಾರೆ.

**ಹೆಣ್ಣುಮಕ್ಕಳಾಗಿ ವಿಕಾಸ**

ಹೆಣ್ಣು ಮಕ್ಕಳಾಗಿ ಹುಟ್ಟಿ, ಬೆಳೆದು ವಿಕಾಸ ಹೊಂದುವುದು ಅಷ್ಟೇನೂ ಸುಲಭವಲ್ಲ. ವರದಕ್ಷಿಣೆ ಕಿರುಕುಳ, ಹೆಣ್ಣು–ಭ್ರೂಣ ಹತ್ಯೆ, ಲಿಂಗಾಧಾರಿತ ಅಬಾರ್ಷನ್‌ಗಳು, ಶೋಷಣೆ ಇವೆಲ್ಲವುಗಳು ಇತ್ತೀಚಿಗೆ ಮಿತಿಮೀರಿವೆ. ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸುವ ಅಗತ್ಯವೇ ಇಲ್ಲ, ಅದು ಸಮಯ, ದುಡ್ಡು ಮತ್ತು ಶ್ರಮ ಇವುಗಳ ವ್ಯರ್ಥಾಲಾಪವಾಗುವುದು ಎಂದು ಭಾವಿಸುವ ಈ ಜನರು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದೇ ಇಲ್ಲ. ಇಂತಹ ಹೆಣ್ಣುಮಕ್ಕಳ ಸಂಖ್ಯೆ ಒಂದು ಮಿಲಿಯನ್‌ಗಿಂತ ಹೆಚ್ಚು. ಬಡತನದ ಕುಟುಂಬವಾಗಿದ್ದರೂ ಮಗನಿಗೆ ಮೊದಲ ಪೋಷಣೆ ಸಿಗುವುದು. ಹೆಣ್ಣು ಮಗುವಿನ ಊಟವೂ ಅವರೆಲ್ಲರೂ ತಿಂದು ಉಳಿಸಿದ್ದು ಮಾತ್ರ. ಏಕೆಂದರೆ, "ಹೆಣ್ಣು ಮಕ್ಕಳದೇನು ಮಹಾ?" ಎಂಬ ಧೋರಣೆ, ಅವರಿಗೆ, ಅವರ ಜೀವನಕ್ಕೆ ಕಿಂಚಿತ್ತೂ ಬೆಲೆಯಿಲ್ಲ. ಹೆಣ್ಣುಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಸಿಗುವುದು ಕೂಡ ಕಡಿಮೆಯೇ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಹೆಣ್ಣುಮಕ್ಕಳನ್ನು ದೇವರ ಹೆಸರಿನಲ್ಲಿ ವೇಶ್ಯೆಯರನ್ನಾಗಿಸುವ ಕೆಟ್ಟ ಸಂಪ್ರದಾಯವಿದೆ. ಒಂದು ಸಮೀಕ್ಷೆಯ ಪ್ರಕಾರ ಸುಮಾರು 50,000 ದೇವದಾಸಿಯರು ದಕ್ಷಿಣ ಭಾರತದ ಹಲವಾರು ದೇವಾಲಯಗಳಲ್ಲಿ ಕಾಣಸಿಗುತ್ತಾರೆ. ಹಾಗೆಯೇ ಭಾರತಾದ್ಯಂತ ಸುಮಾರು 1.2 ಮಿಲಿಯನ್ ಬಾಲವೇಶ್ಯೆಯರು

ಇದ್ದಾರೆ. ಎಷ್ಟೋ ಕುಟುಂಬಗಳಲ್ಲಿ ಹೆಣ್ಣು ಮಕ್ಕಳನ್ನು "ಒಂದು ಹೊರೆ' ಎಂದು ಪರಿಗಣಿಸುವರು ಮತ್ತು ಯಾವಾಗಲೂ ಹೆಣ್ಣು ಮಗುವೊಂದು 'ಬೇಡದ ಮಗುವಾಗಿಯೇ' ಇರುವುದು. ಈ ದೇಶದಲ್ಲಿ ವಿಧವೆಯರದ್ದು ಇನ್ನೊಂದು ಗೋಳು. ಅವರನ್ನು ತಿರಸ್ಕಾರದಿಂದ ನೋಡುವುದೇ ಅಲ್ಲದೆ 'ಶಾಪಗ್ರಸ್ತರೆಂಬ' ಹಣೆಪಟ್ಟಿ ಬೇರೆ. ಭಾರತದಲ್ಲಿ ವಿಧವೆಯರ ಸಂಖ್ಯೆ ಸುಮಾರು 40,000 ಮಿಲಿಯನ್‌ಗಿಂತಲೂ ಹೆಚ್ಚು.

ನಮ್ಮ ದೇಶದಲ್ಲಿ ಪ್ರಪಂಚದ ಜನಸಂಖ್ಯೆಯ ಒಂದೂವರೆಯಷ್ಟು ಜನರು ಅತಿ ಶೀಘ್ರವಾಗಿ ಬೆಳಯುವವರಾಗಿರುತ್ತಾರೆ. ಇವರಲ್ಲಿ ಒಂದು ಕಾಲು ಭಾಗದಷ್ಟು 19 ವರ್ಷದ ಹೆಣ್ಣುಮಕ್ಕಳೇ ಇದ್ದಾರೆ. ಇವರಲ್ಲಿ ಬಹಳಷ್ಟು ಮಕ್ಕಳು ಶಾಲೆಯ ಮುಖವನ್ನೇ ನೋಡಿರುವುದಿಲ್ಲ. ಇವರ ಮುಂದಿನ ಭವಿಷ್ಯಕ್ಕೆ ಯಾವುದೇ ಭರವಸೆಗಳು ಇರುವುದಿಲ್ಲ. ಬದಲಿಗೆ ಅತಿ ಚಿಕ್ಕ ವಯಸ್ಸಿನಿಂದಲೇ ಮದುವೆ, ಬಡತನ ಮತ್ತು ಪುನರಾವರ್ತನೆಯಾಗುವ ಗರ್ಭಧಾರಣೆಯೆಂಬ ವಿಷವರ್ತುಲದಲ್ಲಿ ಸಿಲುಕಿ ನರಳುತ್ತಾರೆ.

ಹೆಣ್ಣು ಮಕ್ಕಳ ಶೋಷಣೆ ಮತ್ತು ಅವರ ಮೇಲೆ ತೋರುವ ದಬ್ಬಾಳಿಕೆ, ಅವರಲ್ಲಿ ದೋಷಪೂರಿತ ವರ್ತನೆ, ಖಿನ್ನತೆ, ಆತಂಕ, ಹೊಟ್ಟೆಬಾಕತನ ಅಥವಾ ಹಸಿವೆಯೇ ಇಲ್ಲದಿರುವುದು. ಮತ್ತು ಮನೋ-ದೈಹಿಕ ಪೀಡನೆಗಳಿಗೆ ದಾರಿ ಮಾಡಿಕೊಡುತ್ತದೆ. ಇಂತಹ ಭೇದಭಾವ, ತಾರತಮ್ಯ ಮತ್ತು ನಿರ್ಲಕ್ಷ್ಯಗಳು ಅವರಲ್ಲಿ ಆತ್ಮವಿಶ್ವಾಸದ ಕೊರತೆಗೆ ಕಾರಣವಾಗುವುದಷ್ಟೇ ಅಲ್ಲದೆ, ಇಡೀ ಜೀವನದ ಬಗ್ಗೆಯೇ ಒಂದು ರೀತಿಯ ಜುಗುಪ್ಸೆಯನ್ನು ತರಬಹುದು. ಗೊತ್ತಿದ್ದೋ ಗೊತ್ತಿಲ್ಲದೆಯೋ ಹೆಣ್ಣುಮಕ್ಕಳು ರೂಢಿಗತವಾದ ಸ್ತ್ರೀ ಪಾತ್ರಗಳಲ್ಲಿಯೇ ತಮ್ಮನ್ನು ಗುರುತಿಸಿಕೊಳ್ಳುವರು. ಅಧಿಕಾರಯುತವಾದ ಮತ್ತು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣುಮಕ್ಕಳು ಮನೋ-ಸಾಮಾಜಿಕ ಬೇನೆಗಳಿಗೆ ಒಳಗಾಗಿ ಸಮಾಜದ ಮುಖ್ಯವಾಹಿನಿಯಿಂದ ದೂರವೇ ಉಳಿಯುವರು. ಮನೋ-ಸಾಮಾಜಿಕ ಬೇನೆಗಳು ಶಾರೀರಿಕವಾಗಿ ಅಲ್ಲದಿದ್ದರೂ ವ್ಯಸ್ತಗೊಂಡ ಮನಸ್ಸಿನ ಅಭಿವ್ಯಕ್ತಿಯಾಗಿರುತ್ತದೆ. ಇದಕ್ಕೆ ವೈದ್ಯಕೀಯ ನೆರವೂ ಬೇಕಾಗುತ್ತದೆ. ಮನೋ-ಸಾಮಾಜಿಕ ಬೇನೆಗಳಿಗೆ ಉದಾಹರಣೆಯೆಂದರೆ, ಆತಂಕ, ಮೈ-ಕೈ ನೋವು, ತಲೆನೋವು, ಹೊಟ್ಟೆನೋವು ಮತ್ತು ಇಂತಹದ್ದೇ ಎಂದು ವೈದ್ಯರಲ್ಲಿ ಸ್ಪಷ್ಟವಾಗಿ ಹೇಳಿಕೊಳ್ಳಲಾಗದ ನೋವು ಇತ್ಯಾದಿ. ಇಂತಹವುಗಳು ವಿಶೇಷವಾಗಿ ಹೆಣ್ಣು ಮಕ್ಕಳನ್ನು ಕಾಡಿಸುವ ರೋಗಗಳಾಗಿರುತ್ತವೆ.

ಹೆಣ್ಣುಮಕ್ಕಳನ್ನು ಹೀಗೆ ನೋಯಿಸುವಲ್ಲಿ ನಮ್ಮ ಸಂಸ್ಕೃತಿಯ ಉಡುಗೊರೆಯೂ ಇಲ್ಲದಿಲ್ಲ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎನ್ನುವುದು, ಗಂಡುಮಕ್ಕಳಿಲ್ಲದ ತಂದೆತಾಯಿಯರಿಗೆ ಸ್ವರ್ಗ ಪ್ರಾಪ್ತಿ ಇಲ್ಲ ಎಂದು ಹಬ್ಬಿಸುವುದು ಭಾರತದ ಪುರುಷ ಪ್ರಧಾನ ಸಮಾಜದ ಬಳುವಳಿ. ಈ ಅಂಶ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡು ಬಿಟ್ಟಿದೆ. ಇದನ್ನು ಕಿತ್ತೊಗೆಯಲು ಶಿಕ್ಷಣ ಹೆಚ್ಚಿನ ಮಟ್ಟದಲ್ಲೇ ಕಾರ್ಯಪ್ರವೃತ್ತವಾಗಬೇಕಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳಲ್ಲಿ ತುಂಬಿರಿ

1. ದಲಿತ ಎಂಬ ಪದದ ಅರ್ಥ____________

   ಎ. ಹೊರಗುಳಿದವರು

   ಬಿ. ಶೋಷಿತರು

   ಸಿ. ತುಳಿತಕ್ಕೆ ಒಳಗಾದವರು

   ಡಿ. ದಬ್ಬಾಳಿಕೆಗೆ ಒಳಪಟ್ಟವರು

2. ಮಿಲಿಯಾಂತರ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ, ಏಕೆಂದರೆ____________

ಎ. ಅದು ಅಪಾಯಕಾರಿ

ಬಿ. ಒಂದು ನಿರರ್ಥಕ ಪ್ರಯತ್ನ

ಸಿ. ಶಾಲೆಗೆ ಹೋಗುವುದಕ್ಕಿಂತ ಮದುವೆಯಾಗಿ ಗೃಹಿಣಿಯಾಗುವುದು ಮುಖ್ಯ

ಡಿ. ಮನೆಯಲ್ಲಿ ಅದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಿದೆ

3. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

ಎ. ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳಿಗೆ ದೊರಕುವ ವೈದ್ಯಕೀಯ ಸೌಲಭ್ಯಗಳು ತುಂಬಾ ಕಡಿಮೆ

ಬಿ. ಬಡ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಮೊದಲ ಆದ್ಯತೆಯಿಂದ ಆಹಾರ ಸಿಗುವುದು.

ಸಿ. ಚಿಕ್ಕ ವಯಸ್ಸಿನಲ್ಲಿ ಮದುವೆ, ಪುನರಾವರ್ತನೆಗೊಳ್ಳುವ ಬಸುರಿ–ಬಾಣಂತನ ಮತ್ತು ಬಡತನದ ವಿಷವರ್ತುಲದಲ್ಲಿ ಹೆಣ್ಣು ಮಕ್ಕಳು ಹೈರಾಣಾಗುವರು.

ಡಿ. ಹಿಂದೂಧರ್ಮದಲ್ಲಿ ದಲಿತರನ್ನು ನಾಲ್ಕನೇ ವರ್ಣದಲ್ಲಿ ಸೇರಿಸಲಾಗಿದೆ.

ಇ. ಭಾರತದಲ್ಲಿ ಜಾತಿ ಆಧಾರದ ಮೇಲೆ ಸಂಕೀರ್ಣವಾದ ಸಾಮಾಜಿಕ ಸ್ತರಗಳನ್ನು ಕಾಣುತ್ತೇವೆ.

ಎಫ್. ಉತ್ತರ ಪ್ರದೇಶ, ಬಿಹಾರ, ಮತ್ತು ಛತ್ತೀಸ್‌ಗಡ್ ಇವುಗಳು ತುಂಬಾ ಚೆನ್ನಾಗಿ ವಿಕಾಸ ಹೊಂದಿರುವ ರಾಜ್ಯಗಳು.

## 2.4.4. ಸಾರಾಂಶಿಸೋಣ

- ಸಾಮಾನ್ಯವಾಗಿ ನಾವು ನೋಡುವ ಬಾಲ್ಯಹಂತದ ವಿಕಾಸವು ನೈಜಸ್ಥಿತಿಯಲ್ಲಿ ಬೇರೆಯದೇ ರೀತಿಯಲ್ಲಿ ಗೋಚರಿಸುತ್ತದೆ. ಬಡತನದ ಬೇಗೆಯಲ್ಲಿ ಬೆಳೆಯುತ್ತಿರುವ ಮಕ್ಕಳು, ಜೈಲು ಸೇರಿರುವ ಪೋಷಕರ ಮಕ್ಕಳು, ಬೀದಿಮಕ್ಕಳು, ಬಾಲಕಾರ್ಮಿಕರು –ಇವರುಗಳನ್ನು "ಕಷ್ಟಕರ ಪರಿಸ್ಥಿತಿ"ಯಲ್ಲಿನ ಮಕ್ಕಳನ್ನಾಗಿ ನೋಡಬಹುದು.
- ಯುದ್ಧದ ಪರಿಣಾಮಕ್ಕೆ ಒಳಗಾದ ಕುಟುಂಬದ ಮಕ್ಕಳು, ಸ್ಲಮ್‌ನ ಮಕ್ಕಳು, ಬಾಲಾಪರಾಧಿಗಳು, ಅಪಹರಿಸಲ್ಪಟ್ಟ ಮಕ್ಕಳು, ಬಾಲಭಿಕ್ಷುಕರು ಕೂಡ ಇದೇ ಗುಂಪಿಗೆ ಸೇರುವರು.
- ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳು, ತಿರಸ್ಕೃತರು, ಯಾರಿಗೂ ಬೇಡವಾದವರು, ಬಾಲವೇಶ್ಯೆಯರು, ದೈಹಿಕವಾಗಿ ಮತ್ತು ಮಾನಸಿಕವಾಗಿ ಸವಾಲಿನ ಮಕ್ಕಳು ಹೀಗೆ ಇವರ ಸಂಖ್ಯೆ ಮುಂದುವರೆಯುತ್ತದೆ. ಈ ಎಲ್ಲಾ ಮಕ್ಕಳು ಒಟ್ಟಾರೆಯಾಗಿ "ಕಷ್ಟಕರ ಪರಿಸ್ಥಿತಿಯಲ್ಲಿನ ಮಕ್ಕಳು" ಎಂಬ ಪರಿಕಲ್ಪನೆಯ ಒಳಗೆ ಬರುತ್ತಾರೆ.

## 2.4.4. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1.ಬಿ 2.ಎ 3.ಸಿ 4.ಡಿ 5.ಬಿ 6.ಎ 7.ಎ 8.ಡಿ 9.ಬಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1.ಎ, 2.ಎ, 3. ಎ– √, ಬಿ– √, ಸಿ– √, ಡಿ–'x', ಇ–'x', ಎಫ್– √, ಜಿ– √, ಹೆಚ್–√

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1.ಸಿ 2.ಬಿ 3. ಎ–√, ಬಿ–'x', ಸಿ–√, ಡಿ–'x', ಇ– √, ಎಫ್–'x'

## 2.4.4. ಘಟಕಾಂತ್ಯ ಅಭ್ಯಾಸಗಳು

1. ಕಷ್ಟಕರ ಪರಿಸ್ಥಿತಿಯಲ್ಲಿ ಬಾಲ್ಯಹಂತವೆಂದರೇನು? ಅವುಗಳಲ್ಲಿ ಯಾವುದಾದರೂ ಎರಡನ್ನು ವಿವರಿಸಿ.
2. ವಿಕಾಸ ಹೊಂದುತ್ತಿರುವ ಮಗುವಿನ ಮೇಲೆ ಬಡತನವು ಹೇಗೆ ಪರಿಣಾಮ ಬೀರಬಹುದು? ನಿಮ್ಮ ಉತ್ತರವನ್ನು ನಿದರ್ಶಿಸಿ.
3. ಯುದ್ಧ ಮತ್ತು ಸಂಘರ್ಷಗಳು ಮಗುವಿನ ಮೇಲೆ ಹೇಗೆ ಪರಿಣಾಮ ಬೀರುವುವು? ಅವರ ಶೈಕ್ಷಣಿಕ ವಿಕಾಸವು ಇವುಗಳಿಂದ ಹೇಗೆ ತೊಂದರೆಗೆ ಈಡಾಗುವುದು? ವಿವರಿಸಿ.
4. ಹೆಣ್ಣು ಮಕ್ಕಳ ವಿಕಾಸದ ಗತಿಯನ್ನು ವಿಮರ್ಶಿಸಿ.

## 2.4.5. ಪರಾಮರ್ಶನ ಸೂಚಿ


1. https://www.planindia.org. K.Sekar and Kavitha P. Children in difficult circumstances a research report.
2. https://www.cry.rog/blog/impact - poverty-children-India
3. https://www.undir.org. - Child in armed conflict- United Nations Institute for Disarmament Research. Disarmament Forum (three-2011) – Children and conflict
4. https://www.jnnurm.rajiv Rajiv Avas Yojana – Slum development plan
5. https://www.childlineindia.org.in effects of poverty are more damaging to children. Anthony Lake, Executive Director UNICEF
6. SAARC and UNICEF report on high girl dropout, deprivation of school and facilities, mortality, ill health and vaccine preventable diseases, malnutrition in South Asian countries (2012).
7. Child Friendly Smart Cities (CFSC) – report on status of children of Urban India – Baseline Study 2016 (National Institute of Urban Affairs)
8. UNICEF – ROSA – report on the programmes on war affected children at the Refugee Study Centre (RSC)
9. 1500 severe violations of the rights of the children in Syria A UNICEF documentation (2015)
10. ERIK FRASER - The Dalits of India Education and Development (2010)
11. Nambissan G.B. (2009) Exclusion and Discrimination in Schools: Experiencesof Dalit Children. Indian Institute of Dalit Students and UNICEF
12. Sudeshna Chattarjee CEO Action for Children's environment (ACE) – Early Childhood matter 2012. Children growing up in Indian slums: challenges and opportunities for new born.


*********************

# ಬ್ಲಾಕ್ 2 : ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ

# ಘಟಕ 5 : ಭಾರತದ ಸಮಾಜೋ–ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಮಕ್ಕಳು

**ಘಟಕದ ರಚನೆ**


2.5.1. ಕಲಿಕಾ ಉದ್ದೇಶಗಳು

2.5.2. ಪೀಠಿಕೆ

2.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.5.3.1. ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದ ಅರ್ಥ ಮತ್ತು ಸ್ವರೂಪ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.5.3.2. ಭಾರತದ ಸಮಾಜೋ–ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಮಕ್ಕಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.5.3.3. ಮಗುವಿನ ವಿಕಾಸ ಮತ್ತು ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

2.5.4. ಸಾರಾಂಶಿಸೋಣ

2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

2.5.6. ಘಟಕಾಂತ್ಯ ಅಭ್ಯಾಸಗಳು

2.5.7. ಪರಾಮರ್ಶನ ಸೂಚಿ


## 2.5.1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಭಾರತೀಯ ಸಮಾಜದ ಸಮಾಜೋ–ಸಾಂಸ್ಕೃತಿಕ ಸ್ವರೂಪವನ್ನು ವಿವರಿಸುವರು;
- ಮಗುವಿನ ವಿಕಾಸಕ್ಕೂ ಮತ್ತು ಸಮಾಜೋ–ಸಾಂಸ್ಕೃತಿಕ ಅಂಶಗಳಿಗೂ ಇರುವ ಸಹ–ಸಂಬಂಧವನ್ನು ವಿಶ್ಲೇಷಿಸುವರು;
- ಭಾರತದ ಸಮಾಜೋ–ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಮಕ್ಕಳ ಸ್ಥಾನಮಾನಗಳನ್ನು ವಿಶ್ಲೇಷಿಸುವರು;
- ಸಮಾಜೋ–ಸಾಂಸ್ಕೃತಿಕ ದೃಷ್ಟಿಯಿಂದ ಮಗುವಿನ ವಿಕಾಸವನ್ನು ತಿಳಿಯುವುದರ ಪ್ರಾಮುಖ್ಯತೆಯನ್ನು ಸಮರ್ಥಿಸುವರು; ಮತ್ತು
- ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದಿಂದ ಶೈಕ್ಷಣಿಕ ನಿಹಿತಾರ್ಥಗಳನ್ನು ಚರ್ಚಿಸುವರು.

## 2.5.2. ಪೀಠಿಕೆ

ಭಾರತಕ್ಕೆ ವಿಶಿಷ್ಟವಾಗಿರುವ ವೈವಿಧ್ಯತೆ ಹಾಗೂ ಏಕತೆಗೆ ಹಲವಾರು ಅಂಶಗಳು ಕಾರಣವಾಗಿವೆ. ನಮ್ಮ ಸಂಸ್ಕೃತಿ, ಧರ್ಮ, ಭೌಗೋಳಿಕ ಪ್ರದೇಶಗಳು, ಸಮಾಜೋ–ಆರ್ಥಿಕ ಸ್ಥಿತಿ ಮತ್ತು ಇದೇ ರೀತಿಯ ಇತರ ಹಲವು ಅಂಶಗಳು. ಅದರಲ್ಲಿಯೂ ಸಮಾಜೋ–ಸಾಂಸ್ಕೃತಿಕ ಅಂಶವು ಅತಿ ಪ್ರಮುಖವಾದ ಅಂಶವಾಗಿ ವ್ಯಕ್ತವಾಗಿದೆ. ಆದ್ದರಿಂದ ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳಲು ಇದೊಂದು ಅಸ್ತ್ರವಾಗಿ ಶಿಕ್ಷಕರಿಗೆ ಸಹಾಯ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ. ಇವುಗಳನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಸಮಾಜ, ಸಮಾಜದ ವಿವಿಧ ಘಟಕಗಳು, ಅದರ ಸ್ತರಗಳು, ಅಲ್ಲಿನ ಜಾತೀಯ ವ್ಯವಸ್ಥೆ, ಸಾಮಾಜಿಕ ಶ್ರೇಣಿಗಳು ಮತ್ತು ಸಮಾಜದ ರಚನೆ ಹಾಗೂ ಅದರ ವರ್ಗೀಕರಣ ಮತ್ತು ಸಾಮಾಜಿಕ ಚಲನೆ ಇವುಗಳ ಬಗ್ಗೆ ನೀವು ಈ ಘಟಕದಲ್ಲಿ ಅರಿಯುವಿರಿ. ಇವುಗಳ ಹಿನ್ನೆಲೆಯಲ್ಲಿ ಮಕ್ಕಳ ಬಾಲ್ಯವನ್ನು ವಿಶ್ಲೇಷಿಸಲಾಗುವುದು. ಏಕೆಂದರೆ ಮಗುವೊಂದು ಸಮಾಜೋ–ಸಾಂಸ್ಕೃತಿಕ ಅಂಶಗಳ ಸಮಷ್ಟಿಯಾಗಿರುತ್ತದೆ. ಹಾಗೆಯೇ ಈ ದೃಷ್ಟಿಕೋನದಿಂದ ಶೈಕ್ಷಣಿಕ ನಿಹಿತಾರ್ಥಗಳನ್ನು ಕೂಡ ಚರ್ಚಿಸುವಿರಿ.

## 2.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.5.3.1. ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನದ ಅರ್ಥ ಮತ್ತು ಸ್ವರೂಪ

ಈ ಕೆಳಗೆ ನೀಡಲಾಗಿರುವ ಉದಾಹರಣೆಗಳನ್ನು ಗಮನಿಸಿ:

- ಇಂಡೋನೇಸಿಯಾದ ಮೂಲವಾಸಿಗರು ಅಥವಾ ಅಲ್ಲಿಗೆ ಹೋಗಿ ನೆಲೆಸಿದವರನ್ನು ಬ್ಯಾಲನಿಗಳೆನ್ನುತ್ತಾರೆ. ಬ್ಯಾಲನೀಗಳನ್ನು ಅಂತರ್ಮುಖಿಗಳೆಂದು ವರ್ಣಿಸುತ್ತಾರೆ. ಅವರು ನೋಡಲು ಏನೇನೂ ಭಾವನೆಗಳೇ ಇಲ್ಲದವರಂತೆ ಕಾಣಿಸುತ್ತಾರೆ. ಏಕೆಂದರೆ ಯಾರೊಡನೆಯೂ ಅವರು ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ. ಯಾರನ್ನೂ ಹೆಚ್ಚಾಗಿ ಹಚ್ಚಿಕೊಳ್ಳುವುದಿಲ್ಲ. ಪ್ರತಿಯೊಬ್ಬನೂ ತಾನಾಯಿತು ತನ್ನ ಪಾಡಾಯಿತು ಎಂಬಂತೆ ತನ್ನಷ್ಟಕ್ಕೆ ತಾನೇ ಇರುತ್ತಾನೆ.
- ನವಾಹೋ ಇಂಡಿಯನ್ನರು ಏನೇ ಅಡೆತಡೆಗಳಿದ್ದರೂ ಸೌಕರ್ಯಗಳ ಕೊರತೆಯಿದ್ದರೂ ಅವುಗಳ ಕಡೆಗೆ ಗಮನವಿರಿಸದೆ ಶ್ರಮಜೀವಿಗಳಾಗಿ ತಮ್ಮ ಕಾಯಕವನ್ನು ಮುಂದುವರೆಸುವವರು. (ನವಾಹೋ ಇಂಡಿಯನ್ನರೆಂದರೆ, ಅಮೇರಿಕಾ ದೇಶದ ಮೂಲನಿವಾಸಿಗಳಾಗಿದ್ದು, ಅರಿಝೋನಾ, ನವ–ಮೆಕ್ಸಿಕೋ ಮತ್ತು ಆಗ್ನೇಯ–ಉತಾಹ್‌ನ ಭೂಪ್ರದೇಶವನ್ನು ಸಾಗುವಳಿ ಮಾಡಿಕೊಂಡು ವಾಸಿಸುತ್ತಿರುವವರ ಗುಂಪು).
- ಎಸ್ಕಿಮೋಗಳು ಒರಟಾದ ಜನಗಳು
- ನ್ಯೂಜಿನಿಯಾದ ಅರಪೇಶ್‌ಗಳು ಸ್ವಾಭಿಮಾನ ಮತ್ತು ಸ್ಪರ್ಧಾಮನೋಭಾವ ಇಲ್ಲದವರು (ಅರಪೇಶ್ ಎಂದರೆ, ನ್ಯೂಜಿನಿಯಾದ ಸೆಪಿಕ್ ಜಿಲ್ಲೆಯ ವಾಸಿಗಳಾದ ಪ್ಯಾಪುವಾನ್ ಜನಾಂಗದವರು–ನಾಗರಿಕತೆಗೆ ಒಳಪಡದ ಅನಾಗರೀಕರು).
- ಪರ್ವತಾರೋಹಣದಲ್ಲಿ ಷೆರ್ಪಾಗಳು ತುಂಬಾ ಸಹಾಯ ಮಾಡುವರು
- ಸಾಮಾನ್ಯವಾಗಿ ಬುಡಕಟ್ಟು ಜನಾಂಗದವರಿಗೆ ಹಸಿರು ಔಷಧಗಳ ಜ್ಞಾನ ಚೆನ್ನಾಗಿ ಇರುತ್ತದೆ ಮತ್ತು ಅವರಲ್ಲಿ ಬಹಳಷ್ಟು ಜನರಿಗೆ ಹಾವು ಹಿಡಿಯವುದು ಲೀಲಾಜಾಲವಾದ ಕೆಲಸ.
- ಕರಾವಳಿ ತೀರದ ಜನರು ಕಷ್ಟಜೀವಿಗಳು ಮತ್ತು ಅವರಲ್ಲಿ ಸಹಿಷ್ಣತಾ ಶಕ್ತಿಯು ಹೆಚ್ಚಾಗಿರುತ್ತದೆ.

ಕೆಲವು ಸಮೂಹಗಳ ಜನರಲ್ಲಿ ಅವರದ್ದೇ ಆದ ವಿಶೇಷ ಪ್ರತಿಭೆ, ಲಕ್ಷಣಗಳಿರುತ್ತದೆ ಎಂಬುದು ಮೇಲೆ

ನೀಡಿದ ಉದಾಹರಣೆಗಳನ್ನು ನೀವು ಗಮನಿಸಿದರೆ ಗೊತ್ತಾಗುವುದು. ಅವರುಗಳು ಹೀಗಿರಲು ಕಾರಣವೇನು?

ಈ ಪ್ರಪಂಚದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಂಪ್ರದಾಯ ಮತ್ತು ಸಂಸ್ಕೃತಿಯಿಂದ ರೂಪಿತವಾಗಿರುತ್ತಾನೆ. ಆದರೆ ಸಂಸ್ಕೃತಿಗೆ ಹಲವಾರು ಪ್ರತ್ಯಯಗಳು ಕೊಡುಗೆಯನ್ನು ನೀಡಿರುತ್ತವೆ. ಉದಾಹರಣೆಗೆ, ಉಡುಗೆ-ತೊಡುಗೆ, ಅವರವರ ರೀತಿ-ರಿವಾಜುಗಳು, ಸಂಪ್ರದಾಯ, ಆಹಾರಾಭ್ಯಾಸ, ಅಥವಾ ಒಂದು ಗೊತ್ತಾದ ಜಾತಿಯಲ್ಲಿನ ನಿಯಮಾವಳಿಗಳು, ನಿಯಂತ್ರಣಗಳು ಇತ್ಯಾದಿ. ಭಾರತವೊಂದು ಬಹುಸಂಸ್ಕೃತಿಯ ಮತ್ತು ವೈವಿಧ್ಯಮಯ ಸಮಾಜಗಳ ಒಂದು ಸಂಚಯಿತ ಮೊತ್ತವೆಂದೇ ಹೇಳಬಹುದು. ಸ್ಥೂಲವಾಗಿ ಭಾರತದ ಸಂಸ್ಕೃತಿಯು ಆರ್ಯನ್ನರು ಮತ್ತು ದ್ರಾವಿಡರ ಸಂಸ್ಕೃತಿಯ ಸಂಕಲನವಾಗಿದೆ.

ಸಮಾಜೋ-ಸಾಂಸ್ಕೃತಿಕ ಎಂಬ ಪದಪುಂಜದಲ್ಲಿ ಎರಡು ಮುಖ್ಯ ಪದಗಳು ಸೇರಿಕೊಂಡಿವೆ, ಅವೆಂದರೆ, ಸಮಾಜ ಮತ್ತು ಸಂಸ್ಕೃತಿ. ಇವುಗಳು ಒಂದನ್ನು ಬಿಟ್ಟು ಇನ್ನೊಂದು ಇರಲಾರದು, ಇವೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆದರೆ ವಿಶ್ಲೇಷಣಾ ದೃಷ್ಟಿಯಿಂದ ಇವೆರಡನ್ನು ವಿಭಜಿಸಿ ಅರಿಯಲು ಪ್ರಯತ್ನಿಸೋಣ.

ಸಾಮಾಜಿಕವೆಂದರೆ, ಒಂದು ಸಮಾಜದ ರಚನೆಯಾಗಿದ್ದು ಅಲ್ಲಿನ ಜನರು ಪರಸ್ಪರ ಯಾವ ರೀತಿ ಒಬ್ಬರೊಡನೊಬ್ಬರು ವರ್ತಿಸುತ್ತಾರೆ, ಸಮಾಜದಲ್ಲಿರುವ ಸಮೂಹಗಳು ಪರಸ್ಪರ ಹೇಗೆ ವರ್ತಿಸುತ್ತಿವೆ, ಗುಂಪಿನ ಒಳಗೂ ಹಾಗೂ ಇತರ ಗುಂಪುಗಳ ಜೊತೆಗೂ ಯಾವ ರೀತಿಯ ಸಂಬಂಧಗಳು ಪ್ರಚಲಿತದಲ್ಲಿವೆ ಎಂಬುದರ ಚಿತ್ರಣ. ಉದಾಹರಣೆಗೆ, ಕುಟುಂಬ, ಜಾತಿ, ಸಮಾಜೋ-ಆರ್ಥಿಕ ಸಂಘಟನೆಗಳು, ಅಧಿಕಾರ ಹಾಗೂ ಶಕ್ತಿ-ಸಾಮಥ್ಯಗಳು ಹೇಗೆ ಹಂಚಿಕೆಯಾಗಿವೆ ಎಂಬುದರ ವಿವರಣೆಯೇ 'ಸಾಮಾಜಿಕ' ಎಂಬ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ಸಂಸ್ಕೃತಿಯೆಂದರೆ, ಸಾಮಾಜಿಕವಾದ ಗುಂಪು, ಸಮುದಾಯಗಳು ಒಟ್ಟಾರೆಯಾಗಿ ಅನುಸರಿಸುವ ಸಂಪ್ರದಾಯಗಳು, ಮೌಲ್ಯಗಳು, ಚಿಂತನೆಗಳು, ಸಂಕೇತಗಳು ಮತ್ತು ಈ ಕಾರ್ಯಗಳ ಮೂಲಕ ಆ ಸಮುದಾಯದಲ್ಲಿ ನಡೆವ ಅಂತರ್‌ಕ್ರಿಯೆಗಳ ಸ್ವರೂಪವಾಗಿರುತ್ತದೆ. ಸಮಾಜೋ-ಸಾಂಸ್ಕೃತಿಕ ಪರಿಕಲ್ಪನೆಯು ಹೆಚ್ಚು ಕ್ರಿಯಾಶೀಲವಾದ ಸಾರ್ವತ್ರಿಕ ಪ್ರಕ್ರಿಯೆಯಾಗಿದೆ. ಭಾರತದಲ್ಲಿ ಸತತವಾದ ಹೊರದೇಶಿಗರ ಧಾಳಿಯಿಂದಲೂ ಆಕ್ರಮಣಗಳಿಂದಲೂ ಸಂಸ್ಕೃತಿ ಹಲವಾರು ರೀತಿಯ ಬದಲಾವಣೆಗಳನ್ನು ಕಂಡಿದೆ. ಪಾಶ್ಚಿಮಾತ್ಯರ ಆಳ್ವಿಕೆಯೂ ಕೂಡ ಭಾರತದ ಮೇಲೆ ಪ್ರಭಾವ ಬೀರಿದೆ. ಸಾಮಾಜಿಕ ಸ್ವಾವಲಂಬನೆ, ಸಾಮಾಜಿಕ ಪರಸ್ಪರಾವಲಂಬನೆ ಮತ್ತು ಸಾಮಾಜಿಕ ಅಂತರ್‌ಕ್ರಿಯೆಗಳು ಸಾಮಾಜಿಕ ಜೀವನದ ಮೂಲ ಲಕ್ಷಣವಾಗಿವೆ. ನಮ್ಮ ಚಾರಿತ್ರ್ಯ, ನಮ್ಮ ಕಾಳಜಿ, ನಮ್ಮ ಮಹತ್ವಾಕಾಂಕ್ಷೆಗಳು ಒಂದಲ್ಲಾ ಒಂದು ರೀತಿಯಲ್ಲಿ ನಾವು ಇನ್ನೊಬ್ಬರೊಡನೆ ನಡೆಸುವ ಅಂತರ್‌ಕ್ರಿಯೆಯಿಂದ ರೂಪಿತವಾಗುತ್ತವೆ. ಇದೊಂದು ರೀತಿಯ ಕೊಡು-ಕೊಳ್ಳುವಿಕೆಯ ಸಂಬಂಧವೆಂದೇ ಹೇಳಬಹುದು. ವ್ಯಕ್ತಿಯೊಬ್ಬನ ಮೇಲೆ ಹೀಗೆ ಸಾಮಾಜಿಕ ಪ್ರಭಾವವು ಸತತವಾಗಿ ಕ್ರಿಯಾಶೀಲವಾಗಿರುತ್ತದೆ.

ಸಂಸ್ಕೃತಿಯು ವ್ಯಕ್ತಿಯೊಬ್ಬನು ಯಾವ ರೀತಿಯಲ್ಲಿ ಬೆಳೆಯುತ್ತಾನೆ, ಎಂಬುದನ್ನೂ ತಿಳಿಸುತ್ತದೆ. ಉದಾಹರಣೆಗೆ, ಅದು ಅಮೇರಿಕಾ ದೇಶವೆ? ಭಾರತವೇ? ಭಾರತವೆಂದಾದರೆ, ಗ್ರಾಮೀಣ ಭಾರತವೇ ಅಥವಾ ನಗರೀಕೃತ ಭಾರತವೇ ಎಂಬ ಪ್ರಶ್ನೆಗಳಿಗೆ ಉತ್ತರಗಳೇ ಆ ವ್ಯಕ್ತಿಯ ವ್ಯಕ್ತಿತ್ವವು ಮುಂದೆ ಹೇಗೆ ವಿಕಾಸಹೊಂದಬಹುದು ಎಂಬ ಸೂಚನೆಯನ್ನು ನೀಡುತ್ತದೆ. ಸಂಸ್ಕೃತಿಯಲ್ಲಿ ಹಲವಾರು ಉಪ-ವಿಭಾಗಗಳಿದ್ದು, ಪ್ರತಿಯೊಂದೂ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ. ಪ್ರತಿಯೊಂದು ಸಂಸ್ಕೃತಿಯು ತನ್ನದೇ ಆದ ನೀತಿ-ಸಂಹಿತೆಯನ್ನು ಹೊಂದಿದ್ದು ವ್ಯಕ್ತಿಗಳ ಮೌಲ್ಯಗಳನ್ನು, ನೈತಿಕತೆಯನ್ನು ಮತ್ತು ನಡುವಳಿಕೆಗಳನ್ನು ತಿದ್ದಿ ತೀಡಿ ರೂಪಿಸುವುದು. ಇದರಿಂದ ಮಗುವು ಸಮಾಜಕ್ಕೆ ಸುಲಲಿತವಾಗಿ ಹೊಂದಿಕೊಳ್ಳುವುದನ್ನು ಕಲಿಯುತ್ತದೆ. ಇದನ್ನೇ ಸಾಮಾಜೀಕರಣವೆನ್ನುವರು. ಸಮಾಜವೊಂದರ ಸದಸ್ಯರುಗಳ ಆದರ್ಶೀಕೃತ ನಡವಳಿಕೆಯನ್ನು ವ್ಯಕ್ತಿಯೊಬ್ಬನು ತನ್ನಲ್ಲಿ ಅಳವಡಿಸಿಕೊಳ್ಳುವುದೇ ಸಾಮಾಜೀಕರಣ. ಹಾಗೆ ನೋಡಿದರೆ ವ್ಯಕ್ತಿ-ವ್ಯಕ್ತಿಗಳ ನಡುವೆ

ಬರುವ ಭಿನ್ನತೆಗೆ ವೈವಿಧ್ಯಮಯವಾದ ಸಾಮಾಜೀಕರಣವೇ ಕಾರಣವಾಗಿರುತ್ತದೆ. ಉದಾಹರಣೆಗೆ ಷೆರ್ಪಾಗಳು, ನೇಪಾಳಿಗಳು, ಸಮುದ್ರ ತೀರದ ಜನರು, ಎಸ್ಕಿಮೋಗಳು ಮತ್ತು ಬುಡಕಟ್ಟು ಜನಾಂಗದವರು ಇವರ ಜೀವನಕ್ರಮಗಳು.

ಕುಟುಂಬವು ಸಮಾಜದ ಮೂಲ ಘಟಕ. ಮನೆಯೇ ಮಗುವಿನ ಮೊದಲ ಪಾಠಶಾಲೆ, ನಂತರದಲ್ಲೂ ಕೂಡ ಅದು ನಿಜವೇ. ಸಾಮಾಜಿಕವಾಗಿ ಸಮ್ಮತವಾದ ಕೌಶಲಗಳ ಕಲಿಕೆಗೆ, ನಡವಳಿಕೆಗಳಿಗೆ ಮತ್ತು ಸಂಭಾವಿತ ವ್ಯಕ್ತಿತ್ವಕ್ಕೆ, ಒಳ್ಳೆಯದು/ಕೆಟ್ಟದ್ದು ನಿರ್ಧಾರಗಳಿಗೆ, ತಪ್ಪು–ಸರಿಗಳ ಅರಿವಿಗೆ ಹೀಗೆ ಕೊನೆಗೆ ಜೀವನ ಕೌಶಲಗಳ ಕಲಿಕೆಗೂ ಕುಟುಂಬವೇ ಮೂಲವೆಂದು ಹೇಳಬಹುದು. ಕುಟುಂಬಗಳು ಬೇರೆಯಾದಂತೆ ವ್ಯಕ್ತಿಗಳು, ಅವರ ವ್ಯಕ್ತಿತ್ವವೂ ಕೂಡ ಬೇರೆಯಾಗಿರುತ್ತದೆ.

**ಸಾಮಾಜಿಕ ಮೌಲ್ಯಗಳಲ್ಲಿ ಬದಲಾವಣೆಗಳು:** ಮಕ್ಕಳ ನೈತಿಕ ಮೌಲ್ಯಗಳು ಒಂದು ಅರ್ಥದಲ್ಲಿ ಸಮಾಜದ ಮೌಲ್ಯಗಳೇ ಆಗಿರುತ್ತವೆ. ಸಾಮಾಜಿಕ ಮೌಲ್ಯಗಳು ಬದಲಾದಂತೆ ಮಕ್ಕಳ ಮೌಲ್ಯಗಳೂ ಕೂಡ ಬದಲಾಗುತ್ತವೆ. ಪೋಷಕರು ಮನೆಯಲ್ಲಿ ಧೂಮಪಾನ ಕೆಟ್ಟದ್ದೆಂದು ಹೇಳಿಕೊಟ್ಟರೆ ಮಗುವು ಹಾಗೆ ಕಲಿಯುವುದು. ಉದಾಹರಣೆಗೆ ಕುಡಿಯುವ ಅಭ್ಯಾಸವನ್ನೇ ತೆಗೆದುಕೊಳ್ಳಿ, ಕೂಲಿಕೆಲಸಗಾರನೊಬ್ಬ ಕುಡಿದರೆ, ಅದು ಕೆಟ್ಟದ್ದು, ಅದೇ ಒಬ್ಬ ಶ್ರೀಮಂತ ವ್ಯಕ್ತಿ ಕುಡಿದರೆ ತಪ್ಪೇನೂ ಇಲ್ಲ, ಬದಲಿಗೆ ಅವರು ಹಾಗೇ ಇರುವುದು ಸರಿ ಎಂದು ಸಮಾಜವು ನಿರ್ಧರಿಸುತ್ತದೆ. ಚಿಕ್ಕ ಮಕ್ಕಳು ತಿನ್ನಲು, ಊಟ ಮಾಡಲು, ಶಾಲೆಯಲ್ಲಿ ಕೊಟ್ಟ ಮನೆಗೆಲಸಗಳನ್ನು ಮಾಡಲು ಹಠ ಮಾಡುತ್ತಾರೆಂದು ಏನೇನೋ ಆಮಿಷ ತೋರಿಸಿ ಊಟ ಮಾಡಿಸುವುದು ಅಥವಾ ಹೋಮ್‌ವರ್ಕ್ ಮಾಡಿಸಿದುದರ ಪರಿಣಾಮವಾಗಿ ದೊಡ್ಡವನಾದ ಮೇಲೆ ಅವನು ಏನೇ ಕೆಲಸ ಮಾಡಿಕೊಡಲು ಲಂಚವನ್ನು ನಿರೀಕ್ಷಿಸುವುದರಲ್ಲಿ ಏನು ತಪ್ಪಿದೆ? ಹೀಗೆ ಸಮಾಜ ಮತ್ತು ಸಂಸ್ಕೃತಿ ಎರಡೂ ಮಗುವಿನ ವಿಕಾಸವನ್ನು ವಿನ್ಯಾಸಗೊಳಿಸುವುವು. ಭಾರತೀಯ ಸಮಾಜದಲ್ಲಿ ಮಗುವೊಂದರ ವಿಕಾಸವು ಬಹು–ಸಂಸ್ಕೃತಿ, ವ್ಯಕ್ತಿನಿಷ್ಠತೆ, ಮತ್ತು ಸಾಂದರ್ಭಿಕ ಅನುಭವಗಳಿಂದ ಅರಳುವುದು.

ಪ್ರತಿಯೊಂದು ಸಮಾಜವೂ ತನ್ನದೇ ಆದ ಸಂಸ್ಕೃತಿಯ ಪರಂಪರೆಯನ್ನು ಹೊಂದಿರುತ್ತದೆ. ಇದು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಇದನ್ನು 'ಸಾಮಾಜಿಕ ಅನುವಂಶೀಯತೆ' ಎನ್ನುವರು. ಭಾರತವು ಅತಿ ಶ್ರೀಮಂತವಾದ ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಪ್ರಖ್ಯಾತ ಸಮಾಜಶಾಸ್ತ್ರಜ್ಞ ಇ.ಬಿ.ಟೈಲರ್ ಹೇಳುವಂತೆ, "ಸಾಮಾಜಿಕ ಅನುವಂಶೀಯತೆಯು ವ್ಯಕ್ತಿಯೊಬ್ಬ ಸಮಾಜದ ಸದಸ್ಯರುಗಳೊಡನೆ ಅಂತರ್‌ಕ್ರಿಯೆಯ ಸಮಾಜೀಕರಣದಿಂದ ಗಳಿಸಿಕೊಳ್ಳುವ ಸಂಕೀರ್ಣವಾದ ಪೂರ್ಣವಾಗಿದ್ದು, ಅದರಲ್ಲಿ ಜ್ಞಾನ, ನಂಬಿಕೆಗಳು, ನೈತಿಕ ನಿಯಮಗಳು, ಸಂಪ್ರದಾಯಗಳು ಮತ್ತು ಇನ್ನು ಹಲವಾರು ಸಾಮರ್ಥ್ಯಗಳು, ಅಭ್ಯಾಸಗಳು ಸೇರಿಕೊಂಡಿರುತ್ತವೆ". ಮನುಷ್ಯರೆಲ್ಲರೂ 23 ಜೊತೆ ಕ್ರೋಮೋಸೋಮುಗಳನ್ನು ಹೊಂದಿರುವ ಜೀವಿಗಳೆಂಬುದು ಸಾರ್ವತ್ರಿಕ ಸತ್ಯವಾದರೂ ಸಮಾಜ ಮತ್ತು ಸಂಸ್ಕೃತಿ ಪ್ರತಿಯೊಬ್ಬರನ್ನು ಅದ್ವಿತೀಯವಾಗಿ ಪರಿವರ್ತಿಸುತ್ತವೆ. ಉದಾಹರಣೆಗೆ, ಅಮೆರಿಕನ್ನರು, ಆಂಗ್ಲೋ ಇಂಡಿಯನ್ನರು, ಬ್ರಿಟಿಷರು, ಮತ್ತು ಭಾರತೀಯರು ತಮ್ಮ ಸ್ವಂತ ಲಕ್ಷಣಗಳಿಂದ ಒಬ್ಬರಿಂದ ಒಬ್ಬರು ಭಿನ್ನವಾಗಿರುವರು. ಹಾಗೆ ನೋಡಿದರೆ ಸಂಸ್ಕೃತಿಯೇ ಮಾನವನ ಶಿಕ್ಷಕ.ಅದು ಕೆಲವೊಮ್ಮೆ ನೇರವಾಗಿ ಮತ್ತೊಮ್ಮೆ ಪರೋಕ್ಷವಾಗಿ ಅವನನ್ನು ತಿದ್ದಿ ತೀಡಿ ವಿಕಾಸಗೊಳಿಸುತದೆ. ತನ್ನ ಸಮುದಾಯದ ಸಂಪ್ರದಾಯಗಳಿಂದ, ನಂಬಿಕೆಗಳಿಂದ, ಧಾರ್ಮಿಕ ಆಚಾರ–ವಿಚಾರಗಳಿಂದ ಮಗುವು ವಿಕಾಸಗೊಳ್ಳುತ್ತಾ ಸಾಗುತ್ತದೆ, ಹಾಗೆಯೇ ತನ್ನ ಕುಲಕಸುಬುಗಳನ್ನು ಅನಾಯಾಸವಾಗಿ ಕಲಿತುಕೊಳುತ್ತದೆ. ನಮ್ಮ ಅಗತ್ಯತೆಗಳು, ಧೋರಣೆಗಳು, ಆಶಯಗಳು ನಮ್ಮ ಸಂಸ್ಕೃತಿಗೆ ಅನುಗುಣವಾಗಿರುತ್ತವೆ. ಆದ್ದರಿಂದ ಸಿ.ಕೆ.ಕ್ಲಕ್ಹೋನ್ ಹೇಳುವಂತೆ "ನಮ್ಮ ಜೀವನದ ಪ್ರತಿಯೊಂದು ತಿರುವಿನಲ್ಲೂ ಸಂಸ್ಕೃತಿಯ ಹಿಡಿತವಿರುತ್ತದೆ, ಅದು ಹುಟ್ಟಿನಿಂದ ಕೊನೆಯುಸಿರಿನವರಗೂ ಇದು ನಮಗೆ ಗೊತ್ತಿರಲಿ, ಇಲ್ಲದಿರಲಿ ಹೀಗೇ ಆಗುವುದು. ಇದರಿಂದಾಗಿ ವ್ಯಕ್ತಿ ಅವನಿಗಾಗಿಯೇ ರೂಪಿತವಾದ ನಿಖರವಾದ ವರ್ತನೆಗಳನ್ನು ಇನ್ನೊಬ್ಬರಿಂದ ಕಲಿತುಕೊಳ್ಳುತ್ತಾನೆ".

ಸಂಸ್ಕೃತಿಯು ಮಾನವ ನಿರ್ಮಿತ. ಅದನ್ನು ಕಲಿತು ಗಳಿಸಲಾಗುವುದೇ ಹೊರತು ಹುಟ್ಟಿನಿಂದ ಬರುವಂತಹುದಲ್ಲ. ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಅದ ವಿಶಿಷ್ಟತೆಯಿಂದ ಕೂಡಿದ್ದು, ಒಂದರಂತೆ ಇನ್ನೊಂದಿರುವುದಿಲ್ಲ, ಸಂಸ್ಕೃತಿಯ ಸ್ವಭಾವವು ಸ್ಥಿರವೂ ಆಗಿರುತ್ತದೆ ಮತ್ತು ಬದಲಾವಣೆಗಳನ್ನೂ ಹೊಂದುತ್ತದೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಗೂ ಎರಡು ಪರಿಸರಗಳಲ್ಲಿ ಜೀವಿಸುತ್ತಾನೆ, ಬೆಳೆಯುತ್ತಾನೆ, ಕೆಲಸ ಮಾಡುತ್ತಾ ವಿಕಾಸ ಹೊಂದುತ್ತಾನೆ. ಆ ಎರಡು ಪರಿಸರಗಳೆಂದರೆ, ಒಂದು, ಭೌತಿಕ ಪರಿಸರ ಅಂದರೆ ವಸ್ತುಗಳ, ಪ್ರಾಣಿ ಮತ್ತು ಸಸ್ಯಗಳ ಪ್ರಪಂಚ ಮತ್ತು ಇನ್ನೊಂದು ಮಾನವ ನಿರ್ಮಿತ ಪರಿಸರ ಅಥವಾ ಸಾಮಾಜಿಕ ಪರಿಸರ. ಎರಡನೆಯ ಪರಿಸರವು ಆದ್ಯಂತವಾಗಿ ಬದಲಾಗುತ್ತಾ ಸಾಗುವುದು. ಇದಕ್ಕೆ ಮಾನವನ ಬೇಡಿಕೆಗಳೇ ಕಾರಣ. ಬೃಹತ್ ಕಟ್ಟಡಗಳು, ಸಾರಿಗೆ–ಸಂಪರ್ಕ ವ್ಯವಸ್ಥೆ, ವ್ಯವಸಾಯದಲ್ಲಿನ ಆಧುನಿಕ ವಿಧಾನಗಳು ಇತ್ಯಾದಿ.

ಸಮಾಜವೊಂದು ತಮ್ಮಲ್ಲೇ ಅಂತರ್‌ಕ್ರಿಯೆ ನಡೆಸುವ ವ್ಯಕ್ತಿಗಳಿಂದ ಕೂಡಿದ್ದು, ಸಂಸ್ಕೃತಿಯು ಅವರ ಜೀವನದ ಶೈಲಿಯೇ ಆಗಿರುತ್ತದೆ. ಸಂಸ್ಕೃತಿಯ ಇನ್ನೊಂದು ಪ್ರಮುಖ ಅಂಶವೆಂದರೆ, ಭಾಷೆ. ಆಹಾರ ಅಭ್ಯಾಸ, ಆಹಾರ ತಯಾರಿಸುವ ರೀತಿ, ಅದನ್ನು ತಿನ್ನುವ ರೀತಿ, ಇವೆಲ್ಲವೂ ಸಂಸ್ಕೃತಿಯ ಎಳೆಗಳೇ. ಸಂಸ್ಕೃತಿಯ ಇನ್ನೆರಡು ಅವಿಭಾಜ್ಯ ಅಂಗಗಳೆಂದರೆ, ಧರ್ಮ ಮತ್ತು ದಾರ್ಶನಿಕತೆ. ಪರಿಸರದ ಪ್ರಭಾವದಿಂದಲೂ ಸಂಸ್ಕೃತಿಯು ವಿಶಿಷ್ಟ ಲಕ್ಷಣಗಳನ್ನು ಪಡೆದುಕೊಳ್ಳುತ್ತದೆ.

ಭಾಷೆಯಲ್ಲಿ ಶಾಬ್ದಿಕ ಸಂಕೇತಗಳಿದ್ದು, ಅವು ಒಂದು ಗೊತ್ತಾದ ವಸ್ತುವಿನೊಂದಗೆ ಜೋಡಣೆಯಾಗಿರುತ್ತದೆ. ಅದು ಪದಗಳಾಗಿರಬಹುದು, ಸಂಖ್ಯೆಗಳಾಗಿರಬಹುದು, ಬಣ್ಣ, ಅಥವಾ ಮೌಖಿಕ ಅಭಿವ್ಯಕ್ತಿಯೂ ಆಗಿರಬಹುದು. ತಾವು ಆಡುವ ಭಾಷೆಗಿಂತ ಬೇರೆ ಭಾಷೆಯ ಪದಗಳು ಕೆಲವರಿಗೆ ತಮಾಷೆಯೆನಿಸಬಹುದು. ಭಾಷೆಯು ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವುದು. ಸಮಾಜದ ವಿವಿಧ ಸ್ತರಗಳಲ್ಲಿನ ವ್ಯಕ್ತಿಗಳೊಡನೆ ಪರೀಕ್ಷಿಸಿ ನೋಡಿ. ಕೆಳವರ್ಗದ ವ್ಯಕ್ತಿಗಳ ಭಾಷೆಗೂ ಮಧ್ಯಮ ವರ್ಗದ ವ್ಯಕ್ತಿಗಳ ಭಾಷೆಗೂ ಹಾಗೆಯೇ ಉನ್ನತ ವರ್ಗಗಳ ವ್ಯಕ್ತಿಗಳ ಭಾಷೆಗೂ ಸಾಕಷ್ಟು ವ್ಯತ್ಯಾಸಗಳಿರುವುದನ್ನು ನೀವು ಕಾಣುವಿರಿ. ಗ್ರಾಮೀಣ ಭಾಷೆಗೂ ಮತ್ತು ನಗರದ ಭಾಷೆಗೂ ಹೀಗೆಯೇ ವ್ಯತ್ಯಾಸಗಳಿರುತ್ತವೆ. ಎಲ್ಲರೂ ಅವರ ಭಾಷೆ ಮಾತ್ರ ಸರಿಯಾದುದು, ಉಳಿದುದು ಸರಿಯಲ್ಲ ಅಂದುಕೊಳ್ಳುವುದುಂಟು.

ಸಮಾಜದಲ್ಲಿ ಸಂಸ್ಕೃತಿಯ ಕುರುಹುಗಳಿದ್ದಂತೆಯೇ ಸಾಮಾಜಿಕ ರಚನೆಯನ್ನು ವರ್ಗಗಳಾಗಿಯೂ ನೋಡಬಹುದು. ಪ್ರತಿ ಸಾಮಾಜಿಕ ವರ್ಗವೂ ಕೂಡ ತನ್ನದೇ ಆದ ಭಾಷಾಲಕ್ಷಣಗಳನ್ನು ಹೊಂದಿರುತ್ತದೆ. ವ್ಯಕ್ತಿಯೊಬ್ಬನ ಸಾಮಾಜಿಕ ವರ್ಗವು ಆತನ ಮಾತು, ಭಾಷೆ, ಶೈಕ್ಷಣಿಕ ಸ್ಥಾನಮಾನಗಳು, ಆತನ ಜ್ಞಾನಭಂಡಾರ, ಚಿಂತನೆಗಳು ಹಾಗೂ ಆತ ಭಾಷೆಯ ಮೇಲೆ ಹೊಂದಿರುವ ಹಿಡಿತ–ಇವುಗಳನ್ನು ನಿರ್ಧರಿಸುತ್ತವೆ. ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ಗಮನಿಸಿದ ಮೇಲೆ ಕೆಳಕಂಡಂತೆ ತೀರ್ಮಾನಿಸಬಹುದು:

- ಸಂಸ್ಕೃತಿಯಿಂದ ಪೂರ್ವ ಬಾಲ್ಯಹಂತದಲ್ಲಿ ಮಗುವಿಗೆ ದೊರಕುವ ಅನುಭವಗಳು ಅದರ ಮುಂದಿನ ವಿಕಾಸಕ್ಕೆ ಬುನಾದಿಯಾಗುವುವು.
- ಮಗುವನ್ನು ಬೆಳೆಸುವ ಪ್ರಕ್ರಿಯೆಯ ಮೇಲೆ ಸಂಸ್ಕೃತಿಯ ಪ್ರಭಾವವಿರುತ್ತದೆ.
- ಏಕರೀತಿಯ ಅನುಭವಗಳು ಏಕರೀತಿಯ ವ್ಯಕ್ತಿತ್ವವುಳ್ಳ ವ್ಯಕ್ತಿಗಳನ್ನು ಉತ್ಪಾದಿಸುತ್ತದೆ.
- ಯಾವ ಸಂಸ್ಕೃತಿಯಲ್ಲಿ ಮಗುವು ವಿಕಾಸ ಹೊಂದುವುದೋ ಅಲ್ಲಿಯ ಮೌಲ್ಯಗಳನ್ನು, ಧೋರಣೆಗಳನ್ನು, ಚಿಂತನೆಗಳನ್ನು, ನಂಬಿಕೆಗಳನ್ನು ಮತ್ತು ರೀತಿರಿವಾಜುಗಳನ್ನು ಅದು ತನ್ನಲ್ಲಿ ಅಂತರ್ಗತ ಮಾಡಿಕೊಳ್ಳುತ್ತದೆ.
- ಸಾಂಸ್ಥಿಕ ಸಂಘಟನೆಗಳು, ವಿವಿಧ ಧಾರ್ಮಿಕ ಕಟ್ಟಡಗಳು, ಪ್ರಾರ್ಥನಾ ಮಂದಿರಗಳು ಮತ್ತು ಇತರ ಧಾರ್ಮಿಕ ಕೇಂದ್ರಗಳು – ಇವೆಲ್ಲವೂ ಸಂಸ್ಕೃತಿಯ ಉತ್ಪನ್ನಗಳಾಗಿರುತ್ತವೆ.

ಈಗ ನಾಣ್ಯದ ಇನ್ನೊಂದು ಮುಖವಾದ ಸಾಮಾಜಿಕ ಅಂಶಗಳನ್ನು ನೋಡೋಣ. ಒಂದೇ ಗುರಿ,

ಉದ್ದೇಶ, ನಂಬಿಕೆಗಳು, ಧೋರಣೆಗಳು ಮತ್ತು ಒಂದೇ ರೀತಿಯ ಕಾರ್ಯಶೈಲಿಯನ್ನು ಹೊಂದಿರುವ ಹಲವಾರು ಗುಂಪುಗಳನ್ನು ಒಂದು ಸಮಾಜದಲ್ಲಿ ನಾವು ನೋಡುತ್ತೇವೆ. ಸಮಾಜವು ಎಲ್ಲರನ್ನೂ ತನ್ನದೇ ಆದ ಸಾರ್ವತ್ರಿಕ ನಿಯಮಗಳಿಂದ ಮತ್ತು ಕಟ್ಟುಪಾಡುಗಳಿಂದ ನಿಯಂತ್ರಿಸುತ್ತದೆ. ಈ ನಿಯಮಗಳು ಸಮಾಜದಲ್ಲಿರುವ ವ್ಯಕ್ತಿಗಳಿಂದಲೇ ರೂಪಿತವಾಗುತ್ತವೆ ಎಂಬುದನ್ನು ನಾವು ಮರೆಯಬಾರದು. ಸಮಾಜವು ವ್ಯಕ್ತಿಗಳಿಂದ ರೂಪಿತಗೊಳ್ಳುತ್ತದೆ ಎಂಬುದು ಎಷ್ಟು ಸತ್ಯವೋ ಸಮಾಜವು ವ್ಯಕ್ತಿಗಳನ್ನು ರೂಪಿಸುತ್ತದೆ ಎಂಬುದೂ ಅಷ್ಟೇಸತ್ಯ. ಕುಟುಂಬವು ಸಮಾಜದ ಮೂಲ ಘಟಕವಾಗಿದ್ದು ಮಗುವಿನ ವಿಕಾಸಕ್ಕೆ ಭದ್ರ ಆಸರೆಯಾಗಿರುತ್ತದೆ. ಹಾಗೆಯೇ ಕುಟುಂಬವನ್ನು ಸಮಾಜವು ನಿಯಂತ್ರಿಸುವುದು. ಜನಾಂಗ, ದೇಶ, ಜಾತಿ, ಮತ, ಅಥವಾ ವರ್ಗ ಇವುಗಳು ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ಹೊಂದಿದ್ದು ಜನರ ವರ್ತನೆಗಳನ್ನು, ನಡವಳಿಕೆಗಳನ್ನು ರೂಪಿಸುತ್ತವೆ.

ಕೈಗಾರಿಕೀಕರಣಕ್ಕೆ ಒಳಪಟ್ಟ ಪ್ರಜಾಪ್ರಭುತ್ವ ಸಮಾಜವು ಅಲ್ಲಿನ ಸದಸ್ಯರ ಬದಲಾವಣೆಗಳಿಗೆ, ಅವರ ಬದಲಾದ ಧೋರಣೆ ಮತ್ತು ಮೌಲ್ಯಗಳಿಗೆ, ಜೀವನ ಶೈಲಿಗೆ ತಕ್ಕಂತೆ ಪರಿವರ್ತನೆಗೊಳ್ಳುತ್ತವೆ. ಆದರೆ ಬುಡಕಟ್ಟು ಜನಾಂಗಗಳಲ್ಲಿ ಹೀಗೆ ಆಗುವುದಿಲ್ಲ. ಏಕೆಂದರೆ ಬುಡಕಟ್ಟು ಜನಾಂಗಗಳು ಸಾವಿರಾರು ವರ್ಷಗಳಿಂದಲೂ ತಮ್ಮ ಜನಾಂಗದ ಕಟ್ಟುಪಾಡುಗಳಿಗೆ ಮತ್ತು ನಂಬಿಕೆಗಳಿಗೆ ಬದ್ಧರಾಗಿರುತ್ತವೆ. ಒಂದು ಬುಡಕಟ್ಟು ಜನಾಂಗದ ಕುಟುಂಬದಲ್ಲಿ ಬೆಳೆಯುವ ಮಗುವು ಅವರ ಸಂಪ್ರದಾಯದಂತೆಯೇ ವಿಕಾಸಹೊಂದುವುದು. ಇವು ಸೀಮಿತವಾದ ಸಾಮಾಜೀಕರಣಕ್ಕೆ ಒಳಗಾಗುವುದರಿಂದ ಮಗುವಿನ ವಿಕಾಸವು ಹಲವಾರು ಇತಿಮಿತಿಗಳನ್ನು ಹೊಂದಿರುತ್ತದೆ. ಬುಡಕಟ್ಟು ಜನಾಂಗದವರನ್ನು ಹೊರತುಪಡಿಸಿ, ಬೇರೆಲ್ಲಾ ಸಮಾಜಗಳಲ್ಲಿ ಸಾಮಾಜಿಕ ಸ್ತರಗಳನ್ನು ನೋಡಬಹುದು. ಆದ್ದರಿಂದ ಅಲ್ಲಿ ಅಸಮಾನತೆಯನ್ನೂ ಕಾಣುತ್ತೇವೆ. ಒಂದು ಸಾಮಾಜಿಕ ಸ್ತರದಲ್ಲಿರುವ ವ್ಯಕ್ತಿಯು ಇನ್ನೊಂದು ಸಾಮಾಜಿಕ ಸ್ತರದ ವ್ಯಕ್ತಿಗಿಂತ ಭಿನ್ನವಾಗಿರುತ್ತಾನೆ. ಹಾಗೆಯೇ ಒಂದು ಸಾಮಾಜಿಕ ಸ್ತರದಲ್ಲಿರುವ ವ್ಯಕ್ತಿ–ವ್ಯಕ್ತಿಗಳ ನಡುವೆ ಮುಕ್ತವಾದ ಅಂತರ್‌ಕ್ರಿಯೆಗಳು ನಡೆಯುತ್ತವೆ. ಆರ್ಥಿಕ ಸ್ಥಿತಿ ಇನ್ನೊಂದು ಕಾರಕ ಅಂಶವಾಗಿದ್ದು ಇದೂ ವ್ಯಕ್ತಿಯ ಅಸ್ತಿತ್ವವನ್ನು ಪ್ರಭಾವಿಸುತ್ತದೆ. ಸಮಾಜೋ–ಆರ್ಥಿಕ ಸ್ಥಿತಿಗೆ ವ್ಯಕ್ತಿಯ ಶಿಕ್ಷಣ, ಉದ್ಯೋಗ, ಮತ್ತು ವರಮಾನ ಇವುಗಳು ಮುಖ್ಯವಾಗಿದ್ದು, ಇವು ವ್ಯಕ್ತಿಗೆ ಸಾಮಾಜಿಕ ಪ್ರತಿಷ್ಠೆಯನ್ನು ತಂದುಕೊಡುತ್ತವೆ. ಜಾತಿ ಮತ್ತು ವರ್ಗಗಳೆಂಬ ಎರಡು ಕಾರಕ ಅಂಶಗಳು ಸಮಾಜವನ್ನು ಅನೇಕ ಸ್ತರಗಳನ್ನಾಗಿ ವಿಭಜಿಸುತ್ತದೆ. ಬೇರೆಲ್ಲೂ ಕಾಣಸಿಗದ, ಆದರೆ ಭಾರತದಲ್ಲಿ ಮಾತ್ರ ದಟ್ಟವಾಗಿರುವ ಸಂಕೀರ್ಣ ವ್ಯವಸ್ಥೆ ಎಂದರೆ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆ. ಪ್ರತಿಯೊಂದು ಧರ್ಮದಲ್ಲಿಯೂ ಅದರದ್ದೇ ಆದ ಜಾತಿ ವ್ಯವಸ್ಥೆ ಇರುತ್ತದೆ. ಜಾತಿ ಆಧಾರದಿಂದಲೂ ಸಮಾಜವು ಶ್ರೇಣೀಕೃತ ರಚನೆಯನ್ನು ಹೊಂದುತ್ತದೆ. ವ್ಯಕ್ತಿಯ ಜಾತಿಯು ಆತನ ಹುಟ್ಟಿನಿಂದಲೇ ನಿರ್ಧಾರವಾಗುವ ಸಾಮಾಜಿಕ ವ್ಯವಸ್ಥೆ ನಮ್ಮದು. ಇದೊಂದು ಸ್ಥಿರವಾದ ಮತ್ತು ಶಾಶ್ವತವಾದ ಸತ್ಯ. ಆದರೆ, ವ್ಯಕ್ತಿಯು ತನ್ನ ಇಚ್ಛೆಯಿಂದ ಅಥವಾ ಬಲವಂತದಿಂದ ಮತಾಂತರಗೊಂಡಾಗ ಬದಲಾಗಬಹುದು. ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಜಾತಿಯವರ ಮನೆಗಳೆಲ್ಲಾ ಊರ ಮಧ್ಯದಲ್ಲಿದ್ದು, ಕೆಳ ಜಾತಿಯವರ ಮನೆಗಳು ದೂರದಲ್ಲಿ, ಊರ ಹೊರಗೆ ಇರುತ್ತವೆ. ಇತ್ತೀಚಿಗೆ ಕೆಲವು ಸಾಮಾಜಿಕ ನಿಯಮಗಳು ಮತ್ತು ಕಟ್ಟುಪಾಡುಗಳು ಸ್ವಲ್ಪಮಟ್ಟಿಗೆ ಸಡಿಲಗೊಂಡಿವೆ. ಆದರೆ ಒಂದೇ ಜಾತಿಯ ವ್ಯಕ್ತಿಗಳೊಡನೆ ಒಡನಾಡುವಾಗ ಮತ್ತು ಇತರ ಜಾತಿಯವರೊಂದಿಗೆ ಒಡನಾಡುವಾಗ ಸ್ವಲ್ಪವಾದರೂ ವ್ಯತ್ಯಾಸವು ಇನ್ನೂ ಉಳಿದುಕೊಂಡಿದೆ ಎನ್ನಬಹುದು.

ಹೊಸದಾಗಿ ಹುಟ್ಟಿಕೊಳ್ಳುವ ನಗರಗಳು ವರ್ಗವ್ಯವಸ್ಥೆಯಿಂದ ರಚಿತವಾಗುತ್ತವೆ. ವರ್ಗವ್ಯವಸ್ಥೆಯಲ್ಲಿ ಸಾಮಾಜಿಕ ರಚನೆಯು ಸಮಾಜೋ–ಆರ್ಥಿಕ ಸ್ಥಿತಿಯಿಂದಲೂ ಮತ್ತು ಸಾಮಾಜಿಕ ಅಂತಸ್ತಿನಿಂದಲೂ ಉಂಟಾಗುತ್ತದೆ. ವರ್ಗವ್ಯವಸ್ಥೆಯು ಹುಟ್ಟಿನಿಂದ ನಿರ್ಧಾರವಾಗುವುದಿಲ್ಲ. ಬದಲಿಗೆ, ವ್ಯಕ್ತಿಯೊಬ್ಬನ ಸಾಧನೆ, ಮತ್ತು ಶ್ರಮಗಳನ್ನು ಆಧರಿಸಿರುತ್ತದೆ. ದೊಡ್ಡ ದೊಡ್ಡ ಮಹಾನಗರಗಳಲ್ಲಿ ಉನ್ನತ ವರ್ಗದ ಜನರು ನಗರದ ಕೇಂದ್ರ ಭಾಗದಲ್ಲೂ ಮತ್ತು ಕೆಳವರ್ಗದ ಜನರು ನಗರದ ಹೊರಭಾಗದಲ್ಲಿ, ದೂರದಲ್ಲಿರುತ್ತಾರೆ. ಹೀಗೆ

ವರ್ಗವ್ಯವಸ್ಥೆಯು ಸಾಮಾಜಿಕ ಚಲನೆಯನ್ನು ಸೃಷ್ಟಿಸುತ್ತದೆ.

ಬುಡಕಟ್ಟು ಜನಾಂಗಗಳಲ್ಲಿ ತಾರತಮ್ಯವಿಲ್ಲದ ಏಕತಾ ಭಾವವಿದೆ. ಆದರೆ ಅವರು ತಮ್ಮ ಮೂಲ ಸ್ಥಳವನ್ನು ಬಿಟ್ಟು ಉದ್ಯೋಗಕ್ಕಾಗಿ ಹೊರಗಡೆ ಎಲ್ಲೂ ಹೋಗದಂತೆ ಅವರ ಸಮಾಜವು ಅವರನ್ನು ನಿಯಂತ್ರಿಸುತ್ತದೆ. ಹಾಗೆಯೇ ಜಾತಿವ್ಯವಸ್ಥೆಯು ಅಸಮಾನತೆಯಿಂದ ರಚಿತವಾಗಿದ್ದು ಸಾಮಾಜಿಕ ಚಲನಶೀಲತೆಯನ್ನು ವಿರೋಧಿಸುತ್ತದೆ. ಆದ್ದರಿಂದ ಇವೆರಡೂ ಮುಚ್ಚಿದ–ಸಾಮಾಜಿಕ ವ್ಯವಸ್ಥೆಯೆನ್ನಿಸಿಕೊಳ್ಳುತ್ತವೆ. ಆದರೆ ವರ್ಗವ್ಯವಸ್ಥೆಯು ವ್ಯಕ್ತಿಯ ಸಾಧನೆಯನ್ನು ಆಧರಿಸುವುದರಿಂದ, ಸಮಾನತೆಯನ್ನೂ ಮತ್ತು ಸಾಮಾಜಿಕ ಚಲನಶೀಲತೆಯನ್ನೂ ಪೋಷಿಸುತ್ತದೆ. ಹೀಗೆ ಇಲ್ಲಿ ಸಾಮಾಜಿಕ ಸ್ಥಾನಮಾನವು 'ಸಾಧನೆ'ಯಿಂದ ನಿರ್ಧರಿತವಾದರೆ, ಜಾತಿ ಆಧಾರಿತ ವ್ಯವಸ್ಥೆಯಲ್ಲಿ ಸಾಮಾಜಿಕ ಸ್ಥಾನಮಾನವು 'ಜಾತಿ'ಯಿಂದ ನಿರ್ಧಾರವಾಗುತ್ತದೆ". ಅದೇ ರೀತಿ ಜಾತಿರಹಿತ ಮತ್ತು ವರ್ಗರಹಿತ ಸಮಾಜದಲ್ಲಿ ಮಧ್ಯಮ ವರ್ಗದ ಜನರು ಅಥವಾ ದುಡಿಯುವ ವರ್ಗದ ಜನರು ತುಂಬಿರುತ್ತಾರೆ. ಇವರೇ ಒಂದು ರೀತಿಯಲ್ಲಿ ಬಹುಸಂಖ್ಯಾತರು. ಸಾಮಾಜಿಕ ಸ್ಥಾನಮಾನಗಳು ವ್ಯಕ್ತಿಯು ಹೊಂದಿರುವ ಶಕ್ತಿ–ಸಾಮರ್ಥ್ಯಗಳನ್ನು ಆಧರಿಸಿರುತ್ತವೆ.

ವ್ಯಕ್ತಿಯ ಶಕ್ತಿ, ಸಾಮರ್ಥ್ಯ ಮತ್ತು ವಿಶೇಷ ಕೌಶಲಗಳು, ಶ್ರೀಮಂತಿಕೆ, ಆಸ್ತಿಪಾಸ್ತಿಗಳು, ಗದ್ದೆ ಜಮೀನುಗಳ ಒಡೆತನ, ಜ್ಞಾನ ಭಂಡಾರ, ಮತ್ತು ಉನ್ನತವಾದ ಶೈಕ್ಷಣಿಕ ಅರ್ಹತೆ ಇವುಗಳು ವ್ಯಕ್ತಿಯ ವರ್ತನೆಗಳನ್ನು ಪ್ರಭಾವಿಸುತ್ತವೆ. ಆದ್ದರಿಂದಲೇ ವ್ಯಕ್ತಿಯಿಂದ ವ್ಯಕ್ತಿಗೆ ಜೀವನ ಶೈಲಿಯೂ ಬದಲಾಗುವುದು. ಹೀಗೆ, ಸಾಮಾಜಿಕ ಸ್ಥಾನಮಾನ, ಜೀವನ ಶೈಲಿ, ಸಾಮಾಜಿಕ ಪ್ರತಿಷ್ಠೆಗಳು ವ್ಯಕ್ತಿಯ ನಡವಳಿಕೆಯ ಮೇಲೆ ಪರಿಣಾಮವನ್ನು ಬೀರುವುವು. ಅದು ಅವರ ಉಡುಗೆ–ತೊಡುಗೆ, ವಾಸಿಸುವ ಮನೆ, ಅವರ ಮನೋರಂಜನಾ ಆಯ್ಕೆಗಳು ಮತ್ತು ವರ್ತನೆಗಳಾಗಿರಬಹುದು. ವ್ಯಕ್ತಿಯು ಉನ್ನತ ಅಥವಾ ಕೆಳಮಟ್ಟದ ವರ್ಗ�ಯಾವುದೇ ಸ್ಥಾನಮಾನದಲ್ಲಿದ್ದರೂ ಅವನು ಅದರ ಬಗ್ಗೆ ಜಾಗೃತನಾಗಿರುತ್ತಾನೆ. ಆದರೆ ಮುಕ್ತ ಸಾಮಾಜಿಕ ವ್ಯವಸ್ಥೆಯಲ್ಲಿ (ವರ್ಗರಹಿತ ಮತ್ತು ಜಾತಿರಹಿತ) ಇದು ಹಾಗಿರುವುದಿಲ್ಲ. ವ್ಯಕ್ತಿಯ ಸಾಧನೆಯು ಅವನನ್ನು ಯಾವ ಎತ್ತರಕ್ಕೆ ಬೇಕಾದರೂ ಕೊಂಡೊಯ್ಯಬಹುದು.

**ಸಾಮಾಜಿಕ ಪಕ್ವತೆ:**

ಮಗುವಿನ ಸಾಮಾಜಿಕ ವಿಕಾಸದಲ್ಲಿ ಶ್ರೇಣೀಕೃತ ಹಂತಗಳನ್ನು ನೋಡಬಹುದಾಗಿದೆ. ಮಗುವಿನಲ್ಲಿ ಸಾಮಾಜೀಕರಣದ ಪ್ರಕ್ರಿಯೆಗಳನ್ನು ಈ ಕೆಳಗೆ ಕಂಡಂತೆ ಗುರುತಿಸಬಹುದಾಗಿದೆ.

- ಇತರರ ಬಗ್ಗೆ ಅರಿವು: ಇದು ಶಿಶುವಿನ ಹಂತದಲ್ಲೇ ಸೂಕ್ಷ್ಮವಾಗಿ ಪ್ರಾರಂಭವಾಗಿರುತ್ತದೆ, ತನ್ನ ಅಮ್ಮ, ಅಪ್ಪ ಮತ್ತು ಕುಟುಂಬದವರು ಮತ್ತು ಇತರರನ್ನು ಮಗುವು ಸರಿಯಾಗಿಯೇ ಗುರುತಿಸಿ ಅದರಂತೆ ವರ್ತಿಸುತ್ತದೆ.
- ಸಾಮಾಜಿಕ ಗುಂಪುಗಳೊಡನೆ ಬೆರೆಯುವುದು: ಶಾಲೆಗೆ ಹೋಗುವಷ್ಟರಲ್ಲೇ ಮಕ್ಕಳು ಸಾಕಷ್ಟು ಸಾಮಾಜೀಕರಣಕ್ಕೆ ಒಳಗಾಗಿರುತ್ತಾರೆ. ಕ್ರಮೇಣ ಅಲ್ಲಿಂದ ತಂಡ ಸ್ಫೂರ್ತಿಯಿಂದ ಕೆಲಸ ಮಾಡುವುದನ್ನು ಮತ್ತು ಸಂಘಟನೆಗಳಲ್ಲಿ ತಾವೂ ಒಬ್ಬರಾಗುವುದನ್ನು ಕಲಿಯುತ್ತಾರೆ. ಘೂರ್ಹೀಯವರು ಹೇಳುವಂತೆ, "ಬದುಕಿನ ಒಂದು ಘಟ್ಟದಲ್ಲಿ ಒಬ್ಬನೇ ಆಡುವುದಕ್ಕಿಂತ ತಂಡ ಕಟ್ಟಿಕೊಂಡು ಆಡುವುದು ಹೆಚ್ಚು ಸಂತೋಷ" ಎಂಬುದನ್ನು ಮಗು ತಿಳಿದುಕೊಳ್ಳುತ್ತಾನೆ. 10ವರ್ಷಗಳಾಗುವಷ್ಟರಲ್ಲಿ ಮಕ್ಕಳು ತಂಡ–ಸ್ಫೂರ್ತಿಗೆ ಒಲಿದಿರುತ್ತಾರೆ ಮತ್ತು ಅದನ್ನು ಅಳವಡಿಸಿಕೊಳ್ಳಲು ಪ್ರಾರಂಭಿಸುತ್ತಾರೆ. ಸ್ಪರ್ಧಾತ್ಮಕವಾದ ಕ್ರೀಡೆಗಳಲ್ಲಿ ಭಾಗವಹಿಸುವುದು ಅವರಿಗೆ ಹೆಚ್ಚು ಇಷ್ಟವಾಗುತ್ತದೆ. ಇಲ್ಲಿಂದಲೇ ಮಗುವಿಗೆ ತಾನು ಒಬ್ಬನೇ ಅಲ್ಲ, ತಾನು ಯಾರಿಗೋ ಸೇರಿದವನು ಅಥವಾ ಯಾವುದೇ ಒಂದು ಗುಂಪು, ಅದು ತಮ್ಮ ಗುಂಪು ಎಂಬ "ಸೇರಿರುವುದರ ಭಾವನೆ" ಅವರಲ್ಲಿ ತುಂಬುವುದು.
- ಗಂಡು ಮತ್ತು ಹೆಣ್ಣು ಮಕ್ಕಳ ಸಂಬಂಧದಲ್ಲಿ ಬದಲಾವಣೆ: ಬಾಲ್ಯಹಂತದಲ್ಲಿ ಗಂಡುಮಕ್ಕಳು ಮತ್ತು

ಹೆಣ್ಣುಮಕ್ಕಳು ಎಲ್ಲರೂ ಕೂಡಿ ಒಟ್ಟಾಗಿಯೇ ಆಟವಾಡುವರು. ನಂತರದಲ್ಲಿ, ಅವರು ಬೇರೆಬೇರೆ ಗುಂಪುಗಳನ್ನು ಕಟ್ಟಿಕೊಳ್ಳುವರು. ಗಂಡುಮಕ್ಕಳು ಗಂಡುಮಕ್ಕಳದ್ದೇ ಗುಂಪನ್ನು ಮತ್ತು ಹೆಣ್ಣುಮಕ್ಕಳು ಹೆಣ್ಣುಮಕ್ಕಳದ್ದೇ ಗುಂಪನ್ನು ಕಟ್ಟಿಕೊಳ್ಳುವರು. ಇದು ಅವರ ಹದಿಹರೆಯನ್ನು ತಲುಪುವವರೆಗೂ ಇರುವುದು.

- ಹದಿಹರೆಯದಲ್ಲಿ ಅನ್ಯಲಿಂಗೀಯರ ಬಗ್ಗೆ ಆಸಕ್ತಿ ಹೆಚ್ಚಾಗುವುದು: ಇದರಿಂದಾಗಿ ಗುಂಪೊಂದರಲ್ಲಿ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಇಬ್ಬರನ್ನೂ ನೋಡಬಹುದು. ಏನೇ ಆಗಲೀ, ಭಾರತದಂತಹ ಸಂಪ್ರದಾಯಸ್ಥ ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಹದಿಹರೆಯದಲ್ಲಿ ಮುಕ್ತವಾಗಿ ಬೆರೆಯಲು ಸಾಧ್ಯವಿಲ್ಲ. ಇದಕ್ಕೆ ಇತ್ತೀಚಿನ ದೃಷ್ಟಿಕೋನದಿಂದ ಸಾಕಷ್ಟು ಟೀಕೆಗಳು ಬಂದಿವೆ, ಅತಿಯಾದ ಬಿಗಿಯ ವಾತಾವರಣ ಒಳ್ಳೆಯದಲ್ಲ, ಅವರು ಮುಕ್ತವಾಗಿ ಆಟ-ಪಾಠಗಳಲ್ಲಿ ಒಟ್ಟಾಗಿ ಸೇರುವುದು ತಪ್ಪೇನಲ್ಲ, ಆದರೆ ಸರಿಯಾದ ಮಾರ್ಗದರ್ಶನ ಮತ್ತು ಆಪ್ತಸಲಹೆಗಳು ಇರಬೇಕು ಎಂದು ಹೇಳಲಾಗುತ್ತದೆ.

ಸಾಮಾಜಿಕ ಬದಲಾವಣೆಯಿಂದಾಗಿ ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಗುರುತರವಾದ ವ್ಯತ್ಯಾಸಗಳು, ಪರಿವರ್ತನೆಗಳು ಆಗುತ್ತವೆ. ನಮ್ಮ ದೇಶದಲ್ಲಿ ಸಮಾಜವು ಶ್ರೇಣೀಕೃತ ರಚನೆ ಹೊಂದಿರುವುದರಿಂದ ಮೇಲ್ಜಾತಿಯವರು, ಶ್ರೀಮಂತರು ಹಾಗೂ ಹಿರಿಯರು ಸಮಾಜದ ಮೇಲೆ ತಮ್ಮ ಹತೋಟಿಯನ್ನು, ಹಿಡಿತವನ್ನು ಮತ್ತು ಅಧಿಕಾರವನ್ನು ಹೊಂದಿರುತ್ತಾರೆ. ಕೆಳಜಾತಿಯವರು ಮತ್ತು ಅವಲಂಬಿತರು ಇವರ ಆಜ್ಞೆಯನ್ನು ಅಥವಾ ಇವರು ಹೇಳಿದ ಕೆಲಸಗಳನ್ನು ವಿಧೇಯತೆಯಿಂದ ಪಾಲಿಸದಿದ್ದರೆ, ಅವರಿಂದ ಶಿಕ್ಷೆಗೆ ಒಳಪಡುತ್ತಾರೆ. ಆದರೆ ಭಾರತ ಸಂವಿಧಾನವು ಒಂದು ಆದರ್ಶ ಸಮಾಜಕ್ಕೆ ಆದ್ಯತೆ ನೀಡುವುದರಿಂದ ಒಂದು ತಾರ್ಕಿಕ ನೆಲೆಗಟ್ಟಿನಲ್ಲಿ ಅಧಿಕಾರಶಾಹೀ ಸಮಾಜದಿಂದ ಸಮಾನತಾವಾದಿ ಸಮಾಜದ ರಚನೆಯಾಗಬೇಕಿದೆ, ಹಾಗೂ ಸಾಮಾಜಿಕ ರಚನೆಯು ಕಟ್ಟುನಿಟ್ಟಿನ ಶ್ರೇಣೀಕೃತ ವ್ಯವಸ್ಥೆಯಿಂದ ಜಾತಿರಹಿತ, ವರ್ಗರಹಿತ ಸಮಾಜವಾಗಬೇಕಿದೆ. ಅದರಂತೆಯೇ ವ್ಯಕ್ತಿಗಳು ಅವಲಂಬಿತರಾಗದೇ ಸ್ವಾವಲಂಬಿಗಳಾಗಬೇಕಿದೆ. ಇಂತಹ ಆದರ್ಶ ಸಮಾಜದಲ್ಲಿ ಬಡತನ, ಅಜ್ಞಾನ ಮತ್ತು ಅನಕರತೆಯೆಂಬ ಮಾತೇ ಇರಬಾರದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಸಂಸ್ಕೃತಿಯೆಂದರೆ__________

   ಎ. ವ್ಯಕ್ತಿಯೊಬ್ಬನ ಜಾತಿ

   ಬಿ. ವ್ಯಕ್ತಿಯೊಬ್ಬನ ಧರ್ಮ

   ಸಿ. ವ್ಯಕ್ತಿಯೊಬ್ಬನ ವರ್ಗ

   ಡಿ. ಮೌಲ್ಯಗಳು, ನೈತಿಕ ನಿಯಮಗಳು ಮತ್ತು ನಡವಳಿಕೆ

2. ಸಮಾಜದ ಮೂಲ ಘಟಕ__________

   ಎ. ವ್ಯಕ್ತಿ

   ಬಿ. ಕುಟುಂಬ

   ಸಿ. ಶಾಲೆ

   ಡಿ. ಸಮುದಾಯ

3. ವರ್ಗವನ್ನು ನಿರ್ಣಯಿಸುವ ಅಂಶ__________

   ಎ. ಸಮಾಜೋ-ಆರ್ಥಿಕ ಸ್ಥಿತಿ

ಬಿ. ಸಂಪ್ರದಾಯ

ಸಿ. ವ್ಯಕ್ತಿಯೊಬ್ಬನ ನೈತಿಕತೆ

ಡಿ. ಸಾಕ್ಷರತೆ

4. ಸಮಾಜವೊಂದರ ಸಾಂಸ್ಕೃತಿಕ ಪರಂಪರೆಯೇ ___________

ಎ. ಅನುವಂಶೀಯತೆ

ಬಿ. ಸಮಾಜದ ಮೆರುಗು

ಸಿ. ಇತಿಹಾಸ

ಡಿ. ಸಾಮಾಜಿಕ ಅನುವಂಶೀಯತೆ

5. ಸಂಸ್ಕೃತಿ ಎಂಬುದು___________

ಎ. ಅನುವಂಶೀಯತೆಯಿಂದ ಬರುವುದು

ಬಿ. ಮಾನವ ನಿರ್ಮಿತ

ಸಿ. ಗೊಂದಲಮಯ

ಡಿ. ಆಹಾರಾಭ್ಯಾಸ

6. ಭಾಷೆ ___________

ಎ. ಅಂತರ್‌ಕ್ರಿಯೆಯ ಮೂಲ

ಬಿ. ಸಂಸ್ಕೃತಿಯ ಪ್ರಮುಖ ಉತ್ಪನ್ನ

ಸಿ. ಇಬ್ಬರು ವ್ಯಕ್ತಿಗಳ ನಡುವಿನ ಸೇತುವೆ

ಡಿ. ಸಂಸ್ಕೃತಿ

7. ಬ್ಯಾಲನಿಗಳನ್ನು ವರ್ಣಿಸಬಹುದಾದ ರೀತಿ___________

ಎ. ಅಂತರ್ಮುಖಿಗಳು

ಬಿ. ಉಭಯ ಮುಖಿಗಳು

ಸಿ. ಬಹಿರ್ಮುಖಿಗಗಳು

ಡಿ. ಭಾವರಹಿತರು

8. ವ್ಯಕ್ತಿಯೊಬ್ಬನ ಭಾಷೆಯು ___________

ಎ. ಆತನ ಅನುವಂಶೀಯತೆಯನ್ನು ಅವಲಂಬಿಸಿರುತ್ತದೆ

ಬಿ. ಸಂದರ್ಭಗಳನ್ನು ಅವಲಂಬಿಸಿರುತ್ತದೆ

ಸಿ. ಆತನ ಸಂಸ್ಕೃತಿಯನ್ನು ಸೂಚಿಸುತ್ತದೆ

ಡಿ. ಆತನ ವಿದ್ಯಾರ್ಹತೆಯನ್ನು ಸೂಚಿಸುತ್ತದೆ

9. ವ್ಯಕ್ತಿಯೊಬ್ಬನನ್ನು ನಿಯಂತ್ರಿಸುವಂತಹುದು ___________

ಎ. ಆತನ ಕರ್ತವ್ಯ

ಬಿ. ಸಾಮಾಜಿಕ ಕಟ್ಟುಪಾಡುಗಳು

ಸಿ. ಆತನ ಹಕ್ಕುಗಳು

ಡಿ. ಸ್ವಯಂ ವ್ಯಕ್ತಿಯೇ

10. ಸಾಮಾಜಿಕ ಸ್ತರಗಳು ಕಂಡುಬರದಿರುವುದು____________

ಎ. ಪಾಶ್ಚಿಮಾತ್ಯ ಸಮಾಜಗಳಲ್ಲಿ

ಬಿ. ಭಾರತೀಯ ಸಮಾಜಗಳಲ್ಲಿ

ಸಿ. ಬುಡಕಟ್ಟು ಜನಾಂಗಗಳಲ್ಲಿ

ಡಿ. ವರ್ಗಾಧಾರಿತ ಸಮಾಜಗಳಲ್ಲಿ

## 2.5.3.2. ಭಾರತದ ಸಮಾಜೋ–ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಮಕ್ಕಳು

ವ್ಯಕ್ತಿ–ವ್ಯಕ್ತಿಗಳು ಪರಸ್ಪರ ಭೇಟಿಯಾದಾಗ ಹೇಗೆ ಉಭಯ ಕುಶಲೋಪರಿಯನ್ನು ವಿಚಾರಿಸಿಕೊಳ್ಳುವರು, ಹೇಗೆ ವಂದಿಸುವರು, ಎಂದು ಹೋಲಿಕೆ ಮಾಡಿನೋಡಿ. ಇದಕ್ಕೆ ತರಹೇವಾರಿ ಜನರನ್ನು ನೀವು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಉದಾಹರಣೆಗೆ, ಭಾರತೀಯರ ಜೊತೆಗೆ, ಜಪಾನ್, ಚೈನಾ ಇತರ ಪಾಶ್ಚಿಮಾತ್ಯರು, ಇತ್ಯಾದಿ. ತಮಾಷೆಯೆಂದರೆ, ಭಾರತದಲ್ಲಿಯೇ ಈ ಚಟುವಟಿಕೆಯನ್ನು ಮಾಡಿದರೆ, ಒಂದು ದೊಡ್ಡ ಪಟ್ಟಿಯೇ ತಯಾರಾಗುವುದು, ಏಕೆಂದರೆ ಅಷ್ಟೊಂದು ವೈವಿಧ್ಯತೆಯನ್ನು ಭಾರತೀಯ ಸಮಾಜ ಹೊಂದಿದೆ.

ವ್ಯಕ್ತಿ ತನ್ನ ಸಂಪ್ರದಾಯಗಳಿಂದ, ರೀತಿರಿವಾಜುಗಳಿಂದ, ಕೆಲವೊಮ್ಮೆ ತಾನು ವಾಸಿಸುವ ಭೌಗೋಳಿಕ ನೆಲೆಯಿಂದಲೂ ಪ್ರಭಾವಿತನಾಗಿರುತ್ತಾನೆ ಎಂಬುದನ್ನು ಮೇಲಿನ ಚಟುವಟಿಕೆಗಳು ಸ್ಪಷ್ಟಪಡಿಸುತ್ತವೆ. ವಿಕಾಸವೊಂದು ಅತಿ ದೀರ್ಘವಾದ, ಸತತವಾದ ಮತ್ತು ಸಂಚಯಿತ ಪ್ರಕ್ರಿಯೆಯೆಂದು ನಮಗೆ ಗೊತ್ತಿದೆ. ಪ್ರತಿಯೊಂದು ಹಂತವೂ ಮುಂದಿನ ಹಂತಕ್ಕೆ ಬೆಂಬಲ ನೀಡುತ್ತಾ ಬುನಾದಿಯಾಗುವುದೆಂದೂ ಕೂಡ ನೋಡಿದ್ದೇವೆ. ವ್ಯಕ್ತಿಯೊಬ್ಬನ ವ್ಯಕ್ತಿತ್ವದ ವಿಕಾಸವನ್ನು ರೂಪಿಸಲು ಹಲವಾರು ನಿರ್ಣಾಯಕ ಅಂಶಗಳು ಪಾತ್ರವಹಿಸುತ್ತವೆ ಎಂದೂ ಬಲ್ಲೆವು, ಅವುಗಳಲ್ಲಿ ಕೆಲವು ವರ್ತನೆಗಳು ಪೂರ್ವಹಂತದಲ್ಲಿ ಮುಖ್ಯವೆನಿಸಿದರೆ ಇನ್ನೂ ಕೆಲವು ಉತ್ತರ ಹಂತದಲ್ಲಿ ಮುಖ್ಯವೆನಿಸುವುವು. ಉದಾಹರಣೆಗೆ, ಅಹಂ ಕೇಂದ್ರಿತ ವರ್ತನೆಯು ಬಾಲ್ಯಹಂತದಲ್ಲಿ ಅತಿ ಶೀಘ್ರವಾಗಿ ಬೆಳೆಯುವುದು, ಹಾಗೆಯೇ ಸ್ವಯಂ–ಪರಿಕಲ್ಪನೆಯು ಜೀವನಪರ್ಯಂತ ವಿಕಾಸವಾಗುತ್ತಲೇ ಇರುವುದು.

**ವ್ಯಕ್ತಿಯೊಬ್ಬನ ವ್ಯಕ್ತಿತ್ವದ ನಿರ್ಣಾಯಕಗಳು:**

- ಒಂದು ಪರಿಸರದ ಭೌತಿಕ ಮತ್ತು ಭೌಗೋಳಿಕ ಅಂಶಗಳು ವ್ಯಕ್ತಿದ ವಿಕಾಸಕ್ಕೆ ಕಾರಣವಾಗಿರುತ್ತವೆ.
- ಮರುಭೂಮಿಯಲ್ಲಿ ವಾಸಿಸುವ ಜನರು, ಪರ್ವತ ಪ್ರದೇಶದಲ್ಲಿ ವಾಸಿಸವವರು, ಹಾಗೆಯೇ ಸಮತಟ್ಟಾದ ಪ್ರದೇಶದಲ್ಲಿ ವಾಸಿಸುವವರು ಇವರುಗಳಲ್ಲಿ ಅಗಾಧವಾದ ವ್ಯತ್ಯಾಸಗಳನ್ನು ಕಾಣಬಹುದು. ಅವರ ಎತ್ತರ, ಗಾತ್ರ, ಬಣ್ಣ ಮತ್ತು ಜೀವನ ಶೈಲಿ ಎಲ್ಲವೂ ಬೇರೆ ಬೇರೆಯಾಗಿರುತ್ತದೆ. ಅದೇ ರೀತಿ ಸಾಮಾಜಿಕ ಪರಿಸರವೂ ವಿಕಾಸದ ಮೇಲೆ ಪ್ರಭಾವ ಬೀರುವುದು. ಸಾಮಾಜೀಕರಣ ಪ್ರಕ್ರಿಯೆಯು ಮಗುವಿನಲ್ಲಿ ಕುಟುಂಬದಿಂದಲೇ ಪ್ರಾರಂಭವಾಗುವುದು. ಮಗುವಿನ ಇಷ್ಟಗಳು, ಇಷ್ಟವಿಲ್ಲದಿರುವ ಘಟನೆಗಳು, ಜನರ ಬಗ್ಗೆ ರೂಢಿಗತವಾದ ವರ್ತನೆಗಳು, ಸುರಕ್ಷತೆ ಮತ್ತು ಷರತ್ತುಬದ್ಧ ಭಾವನಾತ್ಮಕ ಜವಾಬ್ದಾರಿಗಳು–ಇವೆಲವೂ ಪೂರ್ವಬಾಲ್ಯಹಂತದಿಂದಲೇ ಪ್ರಾರಂಭವಾಗಿರುತ್ತವೆ. ಕುಟುಂಬದ ನೈತಿಕತೆಯು ಮಗುವಿನಲ್ಲಿ ಆತ್ಮವಿಶ್ವಾಸವನ್ನು ಬಲಪಡಿಸುವುದು.
- ಮಕ್ಕಳ ನ್ಯಾಯಯುತವಾದ ಬೇಡಿಕೆಯನ್ನೂ ಪೂರೈಸಲಾಗದ ಪೋಷಕರ ಬಡತನ ಮಕ್ಕಳಲ್ಲಿ

ಹತಾಶೆಯನ್ನುಂಟು ಮಾಡುತ್ತವೆ.

- ಸಮಾಜೋ-ಆರ್ಥಿಕ ಸ್ಥಿತಿ ಮತ್ತು ಮಕ್ಕಳು ಮಾತನಾಡುವ ಕೌಶಲ್ಯ ಇವೆರಡಕ್ಕೂ ಪರಸ್ಪರ ಸಂಬಂಧವಿದೆ, ಆಶ್ಚರ್ಯವೆನಿಸಿತೇ? ಸಂಶೋಧನೆಗಳಿಂದ ಕಂಡುಬಂದ ಅಂಶವೆಂದರೆ, ಉನ್ನತ ಸಮಾಜೋ_ಆರ್ಥಿಕ ಸ್ಥಿತಿಯುಳ್ಳವರ ಮಕ್ಕಳು ಕನಿಷ್ಟ ವರಮಾನವಿರುವವರ ಮಕ್ಕಳಿಗಿಂತ ಬೇಗ ಮಾತನ್ನು ಕಲಿಯುತ್ತವೆ ಮತ್ತು ಬಹು ಬೇಗನೆ ಚೆನ್ನಾಗಿ ಮಾತನಾಡುತ್ತವೆ. ಇದಕ್ಕೆ ಕಾರಣ ಪೋಷಕರು, ಉನ್ನತ ವರಮಾನವಿರುವವರು ಮಕ್ಕಳಿಗೆ ಒಳ್ಳೆಯ ಮಾದರಿಯಾಗಿದ್ದು, ಮಕ್ಕಳ ಕಲಿಕೆಗೆ, ಉಚ್ಚಾರಣೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾರೆ.
- ಸಂಸ್ಕೃತಿ ಮತ್ತು ಸಂಪ್ರದಾಯಗಳು ಮಕ್ಕಳ ವಿಕಾಸಕ್ಕೆ ಮೂಲ ಕಾರಣವಾಗುವುವು, ಉದಾಹರಣೆಗೆ, ನಮ್ಮ ದೇಶದ ಮಕ್ಕಳ ವರ್ತನೆಗಳನ್ನು ವಿದೇಶದ ಮಕ್ಕಳ ವರ್ತನೆಗೆ ಹೋಲಿಸಿ ನೋಡಿ.
- ಸಂಪ್ರದಾಯಬದ್ಧ ಭಾರತದಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳ ನಡುವೆ ಒಂದು ಅಂತರವಿದ್ದೇ ಇರುತ್ತದೆ, ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇದು ಒಂದು ದೊಡ್ಡ ವಿಷಯವೇ ಅಲ್ಲ, ಅಷ್ಟೇ ಅಲ್ಲ, ಅವರು ಒಟ್ಟಿಗೇ ಬೆಳೆಯುವುದೇ ಆ ದೇಸಿಗರ ಸಾಮಾನ್ಯ ಮತ್ತು ಸಹಜ ವರ್ತನೆ.
- ತಾವು ಬೆಳೆವ ಪರಿಸರ, ಧರ್ಮ ಮತ್ತು ಸಂಪ್ರದಾಯಗಳಿಗೆ ತಕ್ಕಂತೆ ಮಕ್ಕಳ ವರ್ತನೆಯಿರುತ್ತದೆ. ಕಡಿಮೆ ಸಮಾಜೋ-ಆರ್ಥಿಕ ಸ್ಥಿತಿಯಿರುವ ಕುಟುಂಬದಲ್ಲಿ ಮಕ್ಕಳು ಅವರ ಸಂಪ್ರದಾಯಗಳನ್ನೇ ಅಣಕು ಆಟವಾಡುತ್ತಾರೆ. ಉದಾಹರಣೆಗೆ, ಅಡುಗೆ ಆಟ, ಪಾತ್ರೆ ತೊಳೆಯುವ ಆಟ, ಇತ್ಯಾದಿ. ಇಂತಹ ಮಕ್ಕಳು ಸಾಮಾಜಿಕವಾಗಿ ಹೊಂದಾಣಿಕೆ ಮಾಡಿಕೊಳ್ಳಲು ಹೆಣಗಾಡುತ್ತಾರೆ. ಯಾವಾಗಲೂ ತಮ್ಮ ಉಡುಗೆ-ತೊಡುಗೆಗಳ ಬಗ್ಗೆ, ವರ್ತನೆಗಳ ಬಗ್ಗೆ, ಸೂಕ್ಷ್ಮ ಸಂವೇದನೆಯಿಂದ ಕೂಡಿದ್ದು ತಾವು ಬಡವರು ಎಂಬ ವಿನಮ್ರತೆ/ಕೀಳರಿಮೆಯನ್ನು ಹೊಂದಿರುತ್ತಾರೆ.
- ಸುಸ್ಥಿತಿಯಲ್ಲಿರುವ ಕುಟುಂಬದ ಮಕ್ಕಳು ವಿಭಿನ್ನವಾದ ಆದರೆ ಹೆಚ್ಚು ಸಹಕಾರ ಬೇಡುವ ಆಟಗಳನ್ನು ಆಡುತ್ತಾರೆ.

ಮೇಲಿನ ವಿಚಾರಗಳು ವ್ಯಕ್ತಿ ಮತ್ತು ಸಮಾಜದ ನಡುವೆ ಇರುವ ಸಂಬಂಧವನ್ನು ಹೇಳುತ್ತವೆ. ಆದ್ದರಿಂದಲೇ ವ್ಯಕ್ತಿಯೊಬ್ಬನ ಪ್ರತಿಭೆ ಮತ್ತು ಸಾಮರ್ಥ್ಯಗಳು ಪೂರ್ಣವಾಗಿ ವಿಕಾಸಗೊಳ್ಳಲು ಸಮಾಜವು ಅವಕಾಶಗಳನ್ನು ಒದಗಿಸಬೇಕು. ಮುಕ್ತ ಸಮಾಜದಲ್ಲಿ, ಸಾಧನೆಗಳು, ಸಮಾನ ಅವಕಾಶಗಳು, ಸಾಮರ್ಥ್ಯಗಳು ಮತ್ತು ಆಸಕ್ತಿಗಳು ವ್ಯಕ್ತಿಯನ್ನು ಸಾಮಾಜಿಕವಾಗಿ ಉನ್ನತಸ್ತರಕ್ಕೆ ಕೊಂಡೊಯ್ಯುತ್ತವೆ. ಜಾತಿವ್ಯವಸ್ಥೆಯ ಸಮಾಜದಲ್ಲಿ ಇಂತಹ ಮೇಲ್ಮುಖ ಚಲನೆ ಸಾಧ್ಯವಿಲ್ಲದ ಮಾತು. ಹೀಗೆ ವ್ಯಕ್ತಿಯೊಬ್ಬನ ಆಸೆ, ಆಕಾಂಕ್ಷೆ ಮತ್ತು ಅಭಿಲಾಷೆಗಳನ್ನು ಮತ್ತು ಆತನಲ್ಲಿ ಇರಬಹುದಾದ ಶಕ್ತಿ-ಸಾಮರ್ಥ್ಯಗಳನ್ನು ಜಾತಿ ಆಧಾರಿತ ಸಮಾಜವು ಸಮಾಧಿ ಮಾಡುವುದು. ಗ್ರಾಮೀಣ ಪ್ರದೇಶಗಳಲ್ಲಿ ಜನರು ಇನ್ನೂ ಹಳೆಯ ಸಂಪ್ರದಾಯಬದ್ಧ ವ್ಯವಸ್ಥೆಯಲ್ಲಿಯೇ ಇದ್ದಾರೆ. ಆದರೆ, ನಗರದ ಮುಕ್ತ ವಾತಾವರಣದಲ್ಲಿರುವ ಜನರು ಆಧುನಿಕವಾದ ಸಮಾಜದೆಡೆಗೆ ಮತ್ತು ಮುಕ್ತ ವಾತಾವರಣಕ್ಕೆ ಪರಿವರ್ತನೆಯಾಗುತ್ತಿದ್ದಾರೆ. ಮನೆಯಲ್ಲಿ ಮಗುವು ಬೆಳೆಯುವುದಕ್ಕೂ ಮತ್ತು ಶಾಲೆಯಲ್ಲಿ ಅದೇ ಮಗುವು ವಿಕಾಸ ಹೊಂದುವುದಕ್ಕೂ ಬಹಳಷ್ಟು ವ್ಯತ್ಯಾಸಗಳಿದ್ದು, ಇವೆರಡರ ಮಿಶ್ರಣವಾಗಿ ಮಗುವಿನ ವಿಕಾಸವುಂಟಾಗತ್ತದೆ. ಹೀಗೆ ಸಮಾಜ ಮತ್ತು ಸಂಸ್ಕೃತಿಯ ಹಿನ್ನೆಲೆಯು ಮಗುವಿನ ಶಿಕ್ಷಣವನ್ನು ಪ್ರಭಾವಿಸುತ್ತದೆ. ಇದನ್ನು ಅರಿತ ಶಿಕ್ಷಕರು ಮಕ್ಕಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅವರ ಸಂವೇದನೆಗಳಿಗೆ ಸಹ-ಸ್ಪಂದನವನ್ನು ನೀಡುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಕೆಳಗೆ ಬಹುಆಯ್ಕೆಯ ಪ್ರಶ್ನೆಗಳನ್ನು ನೀಡಲಾಗಿದೆ. ನಿಮ್ಮ ಸರಿ ಉತ್ತರದ ಆಯ್ಕೆಯನ್ನು '✓' ಚಿಹ್ನೆಯ ಮೂಲಕ ಸೂಚಿಸಿ:

1. ಅಹಂ–ಕೇಂದ್ರಿತ ವರ್ತನೆಯು ಶೀಘ್ರವಾಗಿ ವಿಕಾಸವಾಗಲು ಪ್ರಾರಂಭವಾಗುವುದು____________

ಎ. ಶೈಶವ 0 ಯಿಂದ 2 ವರ್ಷಗಳಲ್ಲಿ

ಬಿ. ಹದಿಹರೆಯ 13ರಿಂದ 19 ವರ್ಷಗಳಲ್ಲಿ

ಸಿ. ವಯಸ್ಕ ಹಂತ 21 ವರ್ಷಗಳಲ್ಲಿ

ಡಿ. ಬಾಲ್ಯಹಂತ 6ರಿಂದ 12 ವರ್ಷಗಳಲ್ಲಿ

2. ಸ್ವಯಂ–ಪರಿಕಲ್ಪನೆಯ ವಿಕಾಸವು ____________

ಎ. ಸ್ಥಗಿತಗೊಳ್ಳುವ ಪ್ರಕ್ರಿಯೆಯಾಗಿದ್ದು ಒಂದು ವಯಸ್ಸಿನಲ್ಲಿ ಸಂಪೂರ್ಣ ನಿಲ್ಲುತ್ತದೆ.

ಬಿ. ನಿರಂತರ ಪ್ರಕ್ರಿಯೆಯಾಗಿದ್ದು ಜೀವನಪರ್ಯಂತ ನಡೆಯುತ್ತದೆ.

ಸಿ. ಶಾಲಾ ಹಂತದಲ್ಲಿ ನಡೆಯುವ ವಿಕಾಸ ಪ್ರಕ್ರಿಯೆ.

ಡಿ. ಹೆಚ್ಚಾಗಿ ವಯಸ್ಕ ಹಂತದಲ್ಲಿ ಕಂಡುಬರುವ ಪ್ರಕ್ರಿಯೆ.

3. ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'x' ಚಿಹ್ನೆಯ ಮೂಲಕ ಸೂಚಿಸಿ:

ಎ. ಭೌಗೋಳಿಕ ಪರಸರವು ವ್ಯಕ್ತಿತ್ವವನ್ನು ರೂಪಿಸುತ್ತದೆ.

ಬಿ. ಮಗುವಿನ ಇಷ್ಟ/ಇಷ್ಟವಿಲ್ಲ ಎಂಬ ಅನಿಸಿಕೆಯು ಕುಟುಂಬ ಮತ್ತು ಪೋಷಕರಿಂದ ಪ್ರಭಾವಿಸಲ್ಪಡದು.

ಸಿ. ಮರುಭೂಮಿಯಲ್ಲಿ ವಾಸಿಸುವರ ಜೀವನಶೈಲಿಯು ಬೇರೆ ಪ್ರದೇಶಗಳಲ್ಲಿ ಇರುವವರಂತೆಯೇ ಇರುತ್ತದೆ.

ಡಿ. ಬಡತನದ ಕುಟುಂಬದ ಮಗುವು ಹೆಚ್ಚು ಹತಾಶೆಯನ್ನು ಅನುಭವಿಸುತ್ತದೆ.

ಇ. ಮುಕ್ತ ಸಾಮಾಜಿಕ ವ್ಯವಸ್ಥೆಯು ವ್ಯಕ್ತಿಯ ಸಾಮಾಜಿಕ ದರ್ಜೆಯ ಮೇಲ್ಮುಖ ಚಲನೆಗೆ ಸಹಾಯ ಮಾಡುವುದಿಲ್ಲ.

ಎಫ್. ವ್ಯಕ್ತಿಯ ಆಸೆ, ಆಕಾಂಕ್ಷೆ, ಮತ್ತು ಸಾಮರ್ಥ್ಯಗಳು ಜಾತಿ ಆಧಾರಿತ ಸಮಾಜದಲ್ಲಿ ನಿರ್ಬಂಧಿಸಲ್ಪಡುತ್ತವೆ.

ಜಿ. ಜಾತಿ ಆಧಾರಿತ ಸಮಾಜವು ಒಂದು ಮುಚ್ಚಿದ ಸಾಮಾಜಿಕ ವ್ಯವಸ್ಥೆಗೆ ಉದಾಹರಣೆ.

ಹೆಚ್. ಮಗುವು ಮನೆಯಲ್ಲಿ ಬೆಳೆಯುವುದು ಮತ್ತು ಶಾಲೆಯಲ್ಲಿ ಬೆಳೆಯುವುದು ಇವೆರಡರ ನಡುವೆ ವ್ಯತ್ಯಾಸವಿಲ್ಲ.

ಐ. ಆಧುನಿಕ ಸಂಸ್ಕೃತಿ ನಿಯಮಗಳು ಸಾಧನೆ ಆಧಾರಿತ ಸಾಮಾಜಿಕ ಶ್ರೇಣಿಯನ್ನು ರಚಿಸುತ್ತವೆ.

## 2.5.3.3. ಮಗುವಿನ ವಿಕಾಸ ಮತ್ತು ಶೈಕ್ಷಣಿಕ ನಿಹಿತಾರ್ಥಗಳು

ಕೆಳಗಿನ ಸಂಶೋಧನಾ ಫಲಿತಾಂಶಗಳನ್ನು ಗಮನಿಸಿ.

1. ಪ್ರಖ್ಯಾತ ಮಾನವಶಾಸ್ತ್ರಜ್ಞೆಯಾದ ಮಾರ್ಗರೇಟ್ ಮೀಡ್ ಸಮೋವಾ ಎಂಬ ಒಂದು ಸಣ್ಣ ಊರಿನ (ವಿಕಾಸ ಹೊಂದಿರದ ಆದಿಮ ಸಂಸ್ಕೃತಿಯುಳ್ಳ) ಕಿಶೋರರ ಮೇಲೆ ನಡೆಸಿದ ಒಂದು ಸಂಶೋಧನಾ ವರದಿಯಲ್ಲಿ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಂಸ್ಕೃತಿಯ ಸ್ಥಿತಿಗತಿಗಳು ಪಾತ್ರವಹಿಸುತ್ತವೆ ಹಾಗೂ ಸುಭದ್ರತೆಯ ಭಾವವು ವ್ಯಕ್ತಿತ್ವದ ರಚನೆಯ ನಿರ್ಣಾಯಕ ಕಾರಣಗಳಲ್ಲಿ ಒಂದು ಎಂಬ ಫಲಿತಾಂಶವನ್ನು

ತೋರಿಸಿಕೊಟ್ಟಿದ್ದಾರೆ. ಕೆ.ಮ್ಯಾಕ್‌ಕಿನ್ನನ್‌ರವರು 2ರಿಂದ 3 ವರ್ಷದ ಒಟ್ಟು 16 ಮಂದಿಯನ್ನು ಆಯ್ಕೆ ಮಾಡಿಕೊಂಡು, ಸುಮಾರು 8 ವರ್ಷಗಳವರೆಗೆ ವಿಕಾಸಾತ್ಮಕ ಅಧ್ಯಯನವನ್ನು ನಡೆಸಿ ಅದರ ಆಧಾರ ಮೇಲೆ ಆ ಮಕ್ಕಳನ್ನು ನಾಲ್ಕು ವರ್ಗಗಳಲ್ಲಿ ವಿಂಗಡಿಸಿದ್ದಾರೆ. ಅವುಗಳನ್ನು ಈ ಕೆಳಗೆ ನೀಡಲಾಗಿದೆ.

ಎ. ಹಿಂಜರಿಕೆ ಸ್ವಭಾವದ ಮಕ್ಕಳು: ಈ ಗುಂಪಿನ ಮಕ್ಕಳು ಯಾವಾಗಲೂ ಬೇರೆಯವರೊಡನೆ ಸೇರಲು ಇಷ್ಟಪಡುವುದಿಲ್ಲ. ಅಂತಹ ಸಂದರ್ಭಗಳಿಂದ ತಪ್ಪಿಸಿಕೊಳ್ಳುತ್ತಿದ್ದರು.

ಬಿ. ಅನುಸರಿಸಿಕೊಂಡು ಹೋಗುವ ಮಕ್ಕಳು: ಈ ಗುಂಪಿನ ಮಕ್ಕಳು ಯಾವುದೇ ಸಂದರ್ಭ, ಸನ್ನಿವೇಶಗಳು ಎದುರಾದರೂ ಅನುಸರಿಸಿಕೊಂಡು, ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು.

ಸಿ. ಜಾರಿಕೊಳ್ಳುವ ಗುಣಹೊಂದಿರುವ ಮಕ್ಕಳು: ಈ ಗುಂಪಿನ ಮಕ್ಕಳು ಜವಾಬ್ದಾರಿಯಿಂದ ಏನನ್ನೂ ಮಾಡದೆ ಬರೀ ಜಗಳಗಂಟಿತನ ತೋರಿಸುವುದೇ ಅಲ್ಲದೆ ಆಕ್ರಮಣಕಾರಿಯೂ ಆಗಿದ್ದರು.

ಡಿ. ಎಚ್ಚರಿಕೆ ಸ್ವಭಾವದ ಮಕ್ಕಳು: ಈ ಗುಂಪಿನ ಮಕ್ಕಳು ಸಾಮಾಜಿಕ ಸಂದರ್ಭಗಳಿಗೆ ಸೂಕ್ಷ್ಮತೆಯನ್ನು ಹೊಂದಿದ್ದು ಪ್ರತಿಯೊಂದು ನಡೆಯಲ್ಲೂ ಎಚ್ಚರಿಕೆಯಿಂದ ಇರುತ್ತಿದ್ದರು. ಸ್ವಲ್ಪ ನಾಚಿಕೆ ಸ್ವಭಾವವನ್ನು ಹೊಂದಿದ್ದರೂ ಅದರಿಂದ ಹೊರಬಂದರೆಂದರೆ, ಎಲ್ಲರೊಂದಿಗೂ ಯಾವುದೇ ಹಿಂಜರಿಕೆಯಿಲ್ಲದೆ ಬೆರೆತು ಒಂದಾಗುತ್ತಿದ್ದರು.

ಸಂಶೋಧನೆಯಲ್ಲಿ ಕಂಡುಬಂದ ಇನ್ನೊಂದು ವಿಚಾರವೆಂದರೆ, ಯಾವ ಮಕ್ಕಳೂ ಮೇಲೆ ಹೇಳಿದ ವರ್ಗೀಕರಣದ ಗುಂಪುಗಳಿಗೆ ಸದಾ ಬದ್ಧರಾಗಿರುತ್ತಿರಲಿಲ್ಲ, ಆಗಾಗ ಬೇರೆ ಗುಂಪಿನ ಲಕ್ಷಣಗಳನ್ನು ತೋರಿಸುತ್ತಿದ್ದರು. ಸಾಕಷ್ಟು ಧೀರ್ಘಕಾಲಿಕವಾಗಿಯೇ ನಡೆಸಿದ್ದ ಈ ಸಂಶೋಧನೆಯು ಮುಂದೆ ಮಕ್ಕಳು ತಮ್ಮ ವರ್ತನೆಗಳನ್ನು ಬದಲಾಯಿಸಿಕೊಂಡಿದ್ದಾರೆಯೇ ಎಂಬುದನ್ನು ವಿಶ್ಲೇಷಿಸಿತು. ತಮ್ಮ ಬೆಳವಣಿಗೆಯ ಪೂರ್ವದಲ್ಲಿ ಬಳಸಿದ ಸಂಪನ್ಮೂಲಗಳನ್ನೇ ಅವರು ಇನ್ನಷ್ಟು ಅಭಿವೃದ್ಧಿ ಪಡಿಸಿದ್ದರಿಂದ, ಉತ್ತಮ ಮಾರ್ಗದರ್ಶನ ಶಿಕ್ಷಕರಿಂದ ದೊರಕಿದ್ದರಿಂದ ಅವರ ಗುಣಗಳು ಪ್ರಬಲವಾಗಿ ವಿಕಾಸಗೊಂಡಿದ್ದವು. ಅನುಭವೀ ಶಿಕ್ಷಕರು ಮಕ್ಕಳಲ್ಲಿ ಒಳ್ಳೆಯ ಬದಲಾವಣೆಗಳನ್ನು ತರಬಲ್ಲರೆಂಬ ಅಂಶವೂ ಈ ಸಂಶೋಧನೆಯ ಫಲಿತಾಂಶದಲ್ಲಿ ಕಂಡುಬಂದಿತು.

ಮಕ್ಕಳ ವಿಕಾಸದಲ್ಲಿ ಕಂಡುಬರುವ ಹಲವಾರು ಸಾರ್ವತ್ರೀಕರಣಗಳು, ವಿಕಾಸದ ಮೇಲೆ ಪ್ರಭಾವ ಬೀರುವ ಅಂಶಗಳು ಇವುಗಳನ್ನು ಗಮನದಲ್ಲಿರಿಸಿಕೊಂಡು ಶೈಕ್ಷಣಿಕ ವ್ಯವಸ್ಥೆಯನ್ನು ವಿನ್ಯಾಸಗೊಳಿಸಬೇಕಾದ ಅಗತ್ಯವಿದೆ. ಇಂತಹ ವಿಚಾರದ ಮೇಲೆ ಬೆಳಕು ಚೆಲ್ಲಬಲ್ಲ ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ.

- ವ್ಯಕ್ತಿಭಿನ್ನತೆ ಪರಿಕಲ್ಪನೆಯನ್ನು ಎಲ್ಲಾ ಶಿಕ್ಷಕರು ತಿಳಿದುಕೊಂಡಿರಲೇಬೇಕು. ಪ್ರತಿಯೊಂದು ಮಗುವು ತನ್ನದೇ ಆದ ಸಾಮರ್ಥ್ಯಗಳನ್ನು ಮತ್ತು ದೌರ್ಬಲ್ಯಗಳನ್ನು ಹೊಂದಿರುತ್ತದೆ. ಆದ್ದರಿಂದ ಬೋಧನಾ–ಕಲಿಕಾ ಸನ್ನಿವೇಶಗಳು ಮಕ್ಕಳ ಮಟ್ಟಕ್ಕೆ ತಕ್ಕಂತೆ ಇರಬೇಕು. ಅವರ ಬೌದ್ಧಿಕ ಮಟ್ಟ, ಆಸಕ್ತಿ, ಪ್ರತಿಭೆ, ಹಿನ್ನೆಲೆ, ಸಾಮರ್ಥ್ಯಗಳು ಮತ್ತು ಕಷ್ಟಗಳು, ಅವರ ಮಿತಿಗಳು ಈ ಎಲ್ಲವನ್ನು ಪರಿಗಣಿಸುವ ವ್ಯವಸ್ಥೆಯಿರಬೇಕು.
- ಶಾಲೆಯು ಸಾಮಾಜೀಕರಣ ಪ್ರಕ್ರಿಯೆಯನ್ನು ಶೀಘ್ರಗೊಳಿಸುವುದು. ಮಕ್ಕಳು ತಮ್ಮದೇ ಆದ ಗುಂಪುಗಳನ್ನು ಮಾಡಿಕೊಳ್ಳುವರು. ಅವರದ್ದೇ ವಯೋಮಾನ, ಲಿಂಗ, ಆಸಕ್ತಿ, ಮತ್ತು ಗುರಿಗಳನ್ನು ಸಾಮಾನ್ಯವಾಗಿ ಹೊಂದಿರುವವರದ್ದೇ ಒಂದು ಗುಂಪಾಗಿ ರಚಿತವಾಗುವುದು. ಆದ್ದರಿಂದ ಸಹಪಾಠಿಗಳು ಸಾಮಾಜೀಕರಣದ ಮುಖ್ಯ ಪಾತ್ರಧಾರಿಗಳಾಗಿರುತ್ತಾರೆ.
- ಮಕ್ಕಳು ಅವಿಧೇಯರಾಗಿ, ದೊಡ್ಡವರ ಮಾತನ್ನು ಕೇಳದೆ ತಿರುಗಿಬೀಳಬಹುದು. ಅವರ ಸ್ನೇಹಿತರ ಬಳಗವು ಹಿರಿದಾಗುವುದು. ಈ ಹಂತದಲ್ಲಿ ಬಾಲಾಪರಾಧಿಗಳು ಕಂಡುಬರುವರು.

- ಶಾಲೆಗಳು ಸೂಕ್ತವಾದ ಮತ್ತು ಯುಕ್ತವಾದ ಸೌಹಾರ್ದಯುತವಾದ ಕಲಿಕಾ ವಾತಾವರಣವನ್ನು ಒದಗಿಸಬೇಕು.
- ಮಕ್ಕಳಿಗೆ ಸೂಕ್ತವಾದ ಸುರಕ್ಷೆ ಮತ್ತು ಅವರ ಅಭಿವ್ಯಕ್ತಿಗಳಿಗೆ ತಕ್ಕುದಾದ ಸ್ವಾತಂತ್ರ್ಯವು ಇರಬೇಕು.
- ತಾರತಮ್ಯವಿಲ್ಲದೆ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳನ್ನು ಸರಿಸಮವಾಗಿ ನೋಡಬೇಕು. ಎಂದಿಗೂ ಹೆಣ್ಣುಮಕ್ಕಳನ್ನು ಮತ್ತು ಗಂಡುಮಕ್ಕಳನ್ನು ಪರಸ್ಪರ ಹೋಲಿಸಿ ನೋಡಬಾರದು.
- ಪ್ರಜಾಪ್ರಭುತ್ವದ ತತ್ವಗಳಿಂದ ಕೂಡಿದ ತರಗತಿಯು ಕಲಿಕೆಗೆ ಪುಷ್ಟಿ ನೀಡಬೇಕು.
- ಭಾವಾವೇಶಕ್ಕೆ ಮಕ್ಕಳು ಒಳಗಾದಾಗ ಅವರನ್ನು ತಾಳ್ಮೆಯಿಂದ ಮತ್ತು ಬುದ್ಧಿವಂತಿಕೆಯಿಂದ ನಡೆಸಿಕೊಳ್ಳಬೇಕು.
- ವ್ಯಕ್ತಿ ಗೌರವವನ್ನು ಮಕ್ಕಳಿಗೂ ತೋರಿಸಬೇಕು ಮತ್ತು ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.
- ಅಪೇಕ್ಷಿತ ವರ್ತನೆಗಳನ್ನು ಮಕ್ಕಳು ತೋರಿಸಿದಾಗ ಅವುಗಳನ್ನು ಗುರುತಿಸಿ, ಮೆಚ್ಚುಗೆಯನ್ನು ತೋರುತ್ತಾ ಪುಷ್ಟೀಕರಿಸಬೇಕು.
- ಪ್ರಯೋಗಗಳನ್ನು ನಡೆಸಲು, ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಅವರಿಗೆ ಉತ್ತಮ ಸಾಹಿತ್ಯವನ್ನು ಒದಗಿಸುವುದೇ ಅಲ್ಲದೆ ಓದುವ ಹವ್ಯಾಸವನ್ನು ಕಲಿಸಬೇಕು.
- ಶಾಲೆಯು ಮಕ್ಕಳಿಗೆ ಕ್ರೀಡೆಗಳಿಗೆ, ಆಟ–ಪಾಠಗಳಿಗೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶಗಳನ್ನು ನೀಡಬೇಕು.
- ನೈತಿಕವಾಗಿ ಕೆಳಮಟ್ಟದ ಹಿನ್ನೆಲೆಯಿರುವ ಸಂಸ್ಕೃತಿಯಿಂದ ಬಂದ ಮಕ್ಕಳಿಗೆ ಮತ್ತು ಕಾಲುಕೆರೆದು ಜಗಳಕಾಯುವ ಜನರ ಹಿನ್ನೆಲೆಯಿಂದ ಬಂದ ಮಕ್ಕಳ ಬಗ್ಗೆ ಶಿಕ್ಷಕರು ಎಚ್ಚರಿಕೆಯಿಂದ ಇದ್ದು ವೈಯುಕ್ತಿಕ ಗಮನ ನೀಡಬೇಕು.
- ದೈಹಿಕವಾಗಿ ಪುಷ್ಟಿಯಾಗಿ ಬೆಳೆದಿರುವ ಮಗುವು ಎಲ್ಲರೊಡನೆ ಸಹಜವಾಗಿ ಬೆರೆತು ಬೆಳೆಯಬಲ್ಲದು, ಆದರೆ ದೈಹಿಕವಾಗಿ ಅಶಕ್ತವಾದ ಮಗುವಿಗೆ ಇದು ಸಾಧ್ಯವಾಗುವುದಿಲ್ಲ, ಇಂತಹವರಿಗೆ ವಿಶೇಷ ಸೌಲಭ್ಯವನ್ನು ನೀಡುವುದರ ಮೂಲಕ ಅವರನ್ನೂ ಮುಖ್ಯವಾಹಿನಿಯೆಡೆಗೆ ಕೊಂಡೊಯ್ಯಬೇಕು.
- ಮಗುವು ಅತಿ ದಪ್ಪ ಅಥವಾ ಅತಿ ಸಪೂರವಿದ್ದರೆ, ಅಥವಾ ತುಂಬಾ ಎತ್ತರ ಅಥವಾ ಕುಳ್ಳಾಗಿದ್ದರೆ ಅದರಲ್ಲಿ ಕೀಳರಿಮೆ ಬೆಳೆಯುವ ಸಾಧ್ಯತೆಯಿರುವುದು. ಅವರನ್ನು "ಧಡಿಯಾ" ಎಂತಲೋ ಅಥವಾ "ಮೂಳೇ ಚಕ್ಕಳ" ಎಂತಲೋ, ಅಡ್ಡಹೆಸರಿಡುವುದನ್ನು ತಡೆಯಬೇಕು. ಅದು ಅವರ ಸಾಮಾಜಿಕ ಬೆಳವಣಿಗೆಗೆ ಮಾರಕವಾಗುತ್ತದೆ.
- ದೈಹಿಕ ವಿಕಾಸ ಕಡಿಮೆ ಮಟ್ಟದಲ್ಲಿರುವ ಮಕ್ಕಳು ಅವರ ಮಟ್ಟಕ್ಕೆ ಸರಿ ಹೊಂದುವ ಮಕ್ಕಳೊಡನೆ ಬೆರೆಯಬೇಕು. ಇಲ್ಲದಿದ್ದರೆ, ಅವರು ಅವರಿಗಿಂತ ಕಿರಿಯವರ ಜೊತೆಯಲ್ಲಿ ಕಾಲಕಳೆಯುವರು. ಹಾಗಾಗಿ ಇಂತಹ ಮಕ್ಕಳು ಸಾಮಾಜಿಕವಾಗಿ ಅವರ ವಯೋಮಾನಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಹಿಂದೆ ಬೀಳುತ್ತಾರೆ.
- ಬುದ್ಧಿವಂತ ಮಕ್ಕಳು ಸಾಮಾಜಿಕವಾಗಿ ಬೇಗನೆ ಪಕ್ವಗೊಳ್ಳುತ್ತಾರೆ. ಆದರೆ ಮಂದಬುದ್ಧಿಯವರು ಬೇರೆಯವರಿಗಿಂತ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಾರೆ. ಬೌದ್ಧಿಕ ವಿಕಾಸವು ಇತರರೊಡನೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಸುತ್ತದೆ, ಅದರಿಂದ ಮುಂದೆ ನಾಯಕತ್ವದ ಗುಣಗಳ ವಿಕಾಸವೂ ಆಗುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. "ಹಿಂಜರಿಕೆ ಸ್ವಭಾವದ" ಮಕ್ಕಳು ____________

   ಎ. ಅತಿ ಚಟುವಟಿಕೆಗಳನ್ನು ತೋರುವರು

   ಬಿ. ಭಾವನೆಗಳಲ್ಲಿ ಮುಳುಗಿರುವರು

   ಸಿ. ಸುಲಭವಾಗಿ ಇತರರೊಡನೆ ಬೆರೆಯುವರು

   ಡಿ. ಇತರರೊಡನೆ ಬೆರೆಯುವುದನ್ನು ತಪ್ಪಿಸಿಕೊಳ್ಳುವರು

2. "ಜಾರಿಕೊಳ್ಳುವ ಗುಣವನ್ನು ಹೊಂದಿರುವ" ಮಕ್ಕಳು____________

   ಎ. ತುಂಬಾ ಸ್ನೇಹ ಜೀವಿಗಳು

   ಬಿ. ಜಗಳಗಂಟಿಗರು ಮತ್ತು ಆಕ್ರಮಣಕಾರಿಗಳು

   ಸಿ. ಸಹಕಾರ ಮನೋಭಾವದವರು

   ಡಿ. ನಿಷ್ಕ್ರಿಯ ಮನೋಭಾವದವರು

3. ತಮ್ಮದೇ ಲಿಂಗದವರೊಡನೆ ಆಡುವ ಮಕ್ಕಳು (ಗಂಡು ಮಕ್ಕಳು ಗಂಡು ಮಕ್ಕಳೊಂದಿಗೆ ಮತ್ತು ಹೆಣ್ಣು ಮಕ್ಕಳು ಹೆಣ್ಣು ಮಕ್ಕಳೊಂದಿಗೆ) ತೋರುವ ವರ್ತನೆ ____________

   ಎ. ಲಿಂಗ ವಿಭೇದನ

   ಬಿ. ಮುಗ್ಧತೆ

   ಸಿ. ಸಂಪ್ರದಾಯ

   ಡಿ. ಧರ್ಮ

4. ಈ ಕೆಳಗೆ ಮಗುವಿನ ವಿಕಾಸಕ್ಕೆ ಸಂಬಂಧಿಸಿದ ಕೆಲವು ಶೈಕ್ಷಣಿಕ ನಿಹಿತಾರ್ಥಗಳನ್ನು ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

ಎ. ಅಪೇಕ್ಷಿತ ವರ್ತನೆಗಳನ್ನು ಗುರುತಿಸಿ, ಮೆಚ್ಚುಗೆ ಸೂಚಿಸಿ, ಪೋಷಿಸಬೇಕು.

ಬಿ. ಸ್ವಲ್ಪ ಮಂದಬುದ್ಧಿ ಇರುವ ಮಕ್ಕಳು ನಿಧಾನವಾಗಿ ಸಾಮಾಜಿಕ ಪಕ್ವತೆಯನ್ನು ಹೊಂದುತ್ತಾರೆ.

ಸಿ. ಕಡಿಮೆ ದೈಹಿಕ ವಿಕಾಸ ಹೊಂದಿರುವ ಮಗುವು ತನಗೆ ಸರಿಹೊಂದುವವರ ಜೊತೆಯಲ್ಲಿ ಆಡಬೇಕು.

ಡಿ. ಮಕ್ಕಳ ವಯೋಮಾನಕ್ಕೆ ತಕ್ಕಂತೆ ಆಟ, ಕ್ರೀಡೆ ಮತ್ತು ಸೂಕ್ತವಾದ ದೈಹಿಕ ಅಭ್ಯಾಸಗಳಿಗೆ ಶಾಲೆಯು ಯಥೇಚ್ಛವಾದ ಅವಕಾಶಗಳನ್ನು ನೀಡಬೇಕು.

ಇ. ಪ್ರಜಾಪ್ರಭುತ್ವ ಅಭ್ಯಾಸಗಳು ಕಲಿಕೆಗೆ ಅನುಕೂಲವಾಗಿರುತ್ತದೆ.

ಎಫ್. ಹೆಣ್ಣು ಮತ್ತು ಗಂಡು ಮಕ್ಕಳನ್ನು ಸರಿಸಮಾನವಾಗಿ ಕಾಣಬೇಕು ಮತ್ತು ಅವರನ್ನು ಪರಸ್ಪರ ಹೋಲಿಸಬಾರದು.

## 2.5.4. ಸಾರಾಂಶಿಸೋಣ

- ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಸಮಾಜ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವ ಅವಶ್ಯಕತೆಯಿದೆ. ಏಕೆಂದರೆ, ಸಮಾಜ ಮತ್ತು ಸಂಸ್ಕೃತಿ ಇವೆರಡೂ ಮಕ್ಕಳ ವಿಕಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.
- ಸಮಾಜವೆಂದರೆ, ವ್ಯಕ್ತಿ ವ್ಯಕ್ತಿಗಳ ನಡುವೆ ಮತ್ತು ಜನರ ಗುಂಪುಗಳ ನಡುವೆ ನಡೆಯುವ ಅಂತರ್‌ಕ್ರಿಯೆಗಳ ವಿನ್ಯಾಸವಾಗಿದೆ. ಗುಂಪು–ಗುಂಪುಗಳ ನಡುವೆಯೂ ಮತ್ತು ಗುಂಪಿನ ಒಳಗೇ ನಡೆಯುವ ಅಂತರ್‌ಕ್ರಿಯೆಗಳು ಬಹಳ ಮುಖ್ಯವಾಗುತ್ತವೆ.
- ಕುಟುಂಬ, ಮತ, ಜಾತಿ, ಸಮಾಜೋ–ಆರ್ಥಿಕ ಸಂಘಟನೆಗಳು ಇವುಗಳನ್ನು ಸಮಾಜದ ಘಟಕಗಳಾಗಿ ಹೆಸರಿಸಬಹುದಾಗಿದೆ.
- ಸಂಸ್ಕೃತಿಯೆಂದರೆ, ಒಂದು ಗುಂಪಿನ ಜನರು ಎಲ್ಲರೂ ಸೇರಿ ಅನುಸರಿಸುವ ಚಿಂತನೆಗಳು, ಮೌಲ್ಯಗಳು, ಸಂಕೇತಗಳು ಮತ್ತು ಅವರಲ್ಲಿ ನಡೆಯುವ ಅಂತರ್ ಕ್ರಿಯೆಗಳು. ಸಾಮಾಜಿಕ ಅಂತರ್‌ಕ್ರಿಯೆ, ಮತ್ತು ಸಾಮಾಜಿಕ ಅಂತರಾವಲಂಬನೆ ಇವೆರಡೂ ಸಾಮಾಜಿಕ ಜೀವನದ ಅವಿಭಾಜ್ಯ ಅಂಗವಾಗಿವೆ.
- ಪ್ರತಿಯೊಂದು ಸಮಾಜವೂ ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುತ್ತದೆ ಮತ್ತು ಅದು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಇದನ್ನು ಸಾಮಾಜಿಕ ಅನುವಂಶೀಯತೆ ಎನ್ನುವರು.
- ಭಾರತವು ಅತಿ ಶ್ರೀಮಂತವಾದ ಸಾಂಸ್ಕೃತಿಕ ಪರಂಪರೆಗೆ ಹೆಸರಾಗಿದೆ. ಇದು ಮಗುವಿನ ಬೆಳವಣಿಗೆಯ ಮೇಲೂ ಪ್ರಭಾವ ಬೀರುವುದು. ಆದ್ದರಿಂದ ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷವಾಗಯೂ ಸಂಸ್ಕೃತಿಯನ್ನು ಮಹಾನ್ ಶಿಕ್ಷಕನೆನ್ನುವರು.
- ಸಮಾಜವು ವಿವಿಧ ರೀತಿಯ ಸ್ತರಗಳನ್ನು ಹೊಂದಿರುತ್ತದೆ. ಸಮಾಜೋ–ಆರ್ಥಿಕ ಸ್ಥಿತಿಯು ಸಮಾಜದಲ್ಲಿನ ವಿವಿಧ ಸ್ತರಗಳ ರಚನೆಗೆ ಕಾರಣವಾಗುವುದು. ಶಿಕ್ಷಣ, ಉದ್ಯೋಗ ಮತ್ತು ವರಮಾನವನ್ನು ಆಧರಿಸಿ ಸಮಾಜದಲ್ಲಿ ಅನೇಕ ಸ್ತರಗಳ ವರ್ಗೀಕರಣವಾಗುವುದು. ಜಾತಿ ಮತ್ತು ವರ್ಗಗಳೂ ಕೂಡ ಸಮಾಜದ ರಚನೆಯಲ್ಲಿ ಸಕ್ರಿಯವಾದ ಭಾಗವಾಗಿವೆ.
- ಭಾರತದಲ್ಲಿ ಹುಟ್ಟಿನಿಂದ ವ್ಯಕ್ತಿಯ ಜಾತಿಯು ನಿರ್ಧಾರವಾಗುತ್ತದೆ. ಆದರೆ, 'ವರ್ಗ'ದಲ್ಲಿ ವ್ಯಕ್ತಿಯ ಸಾಧನೆಯಿಂದ ಸಾಮಾಜಿಕ ರಚನೆಯಾಗುವುದು.
- ಸಮಾಜ ಮತ್ತು ಸಂಸ್ಕೃತಿಗಳು ವ್ಯಕ್ತಿತ್ವದ ನಿರ್ಣಾಯಕ ಅಂಶಗಳಾಗಿವೆ. ತರಗತಿಯೊಂದು ಪುಟ್ಟ ಸಮಾಜವಾಗಿದ್ದು, ಅಲ್ಲಿ ವಿವಿಧ ರೂಪದ ಗುಂಪುಗಳಿಂದ ಕೂಡಿದ ವಿದ್ಯಾರ್ಥಿಗಳಿರುತ್ತಾರೆ. ಇವರೆಲ್ಲರಿಗೂ ಸಾಮೂಹಿಕವಾಗಿ ಬೋಧನೆ, ಪರೀಕ್ಷೆ ಮತ್ತು ಪಠ್ಯಕ್ರಮ, ಇವುಗಳಲ್ಲಿ ವ್ಯಕ್ತಿಭಿನ್ನತೆಯನ್ನು ಕಡೆಗಣಿಸದೆ ಶೈಕ್ಷಣಿಕ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಶಾಲೆಗಳ ಮೇಲಿದೆ.

## 2.5.5.ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1.ಡಿ 2. ಬಿ 3.ಎ 4.ಡಿ 5.ಬಿ 6.ಡಿ 7.ಎ 8.ಸಿ 9.ಬಿ 10.ಸಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1.ಡಿ 2.ಬಿ 3. ಎ– √, ಬ–X, ಸಿ–X, ಡಿ–√, ಇ–X, ಎಫ್– √, ಜಿ– √, ಹೆಚ್– X, ಐ–√

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1.ಡಿ 2.ಬಿ 3.ಎ 4. ಎ– √, ಬ– X ಸಿ– √, ಡಿ– √, ಇ– √, ಎಫ್–√,

## 2.5.6. ಘಟಕಾಂತ್ಯ ಅಭ್ಯಾಸಗಳು

1. ಭಾರತದ ಸಮಾಜ ಮತ್ತು ಸಂಸ್ಕೃತಿಯ ಆಯಾಮಗಳನ್ನು ವಿವರಿಸಿ.
2. ಭಾರತೀಯ ಹಿನ್ನೆಲೆಯಲ್ಲಿ ಮಕ್ಕಳನ್ನು ಅರಿಯವು ಸಮಾಜ–ಸಂಸ್ಕೃತಿಯ ದೃಷ್ಟಿಕೋನವೆಂದರೆನು? ವಿವರಿಸಿ.
3. ಸಮಾಜ–ಸಂಸ್ಕೃತಿಯ ದೃಷ್ಟಿಕೋನದ ಶೈಕ್ಷಣಿಕ ನಿಹಿತಾರ್ಥಗಳಾವುವು? ವಿವರಿಸಿ.

## 2.5.7. ಪರಾಮರ್ಶನ ಸೂಚಿ


1. https://www.eric.ed.gov/cultural differences- interrelationship- cultural pluralism- resources, materials-teacher role- diversity in children: A multicultural approach to the education of young children. Early Childhood Education Series – Kendall, Frances E.
2. https://www.nap.edu/read/9197/chapter 3
3. https:/www.naeyc.org National Association for the Education of Young Children
4. https://www.ncbi.nlm.gov/books NBK 310550/
5. https://www.extension publications.unl.edu/assets/pdf
6. Shelley E.Taylor-Letitia Anne Peplau-David O.Sears PEARSON Social Psychology twelfth ediction (2006; 2017).
7. Nyla R.Branscombe, Robert A.Baron, Adapted by Preeti Kapur PERSON Social Psychology twelfth edition (2017)
8. Laura E Berk Illinois State University Child Development PEARSON ninth edition (2017)
9. John W.Santrock University of Texas at Dallas - Adolescence TATA McGRAW – HILL EDITION (2011)
10. Elizabeth B.Hurlock Child Development Sixth Edition Mc Graw Hill Eduaion – Indian Edition (2016)
11. Mathur.S.S. Educational Psychology


*********************

# ಬ್ಲಾಕ್ 2: ಬಾಲ್ಯಹಂತ ಮತ್ತು ಸಮಾಜೋ–ಸಾಂಸ್ಕೃತಿಕ ದೃಷ್ಟಿಕೋನ
# ಘಟಕ 6: ವೈವಿಧ್ಯತೆ ಮತ್ತು ಬೋಧನಾಶಾಸ್ತ್ರದ ನಿಹಿತಾರ್ಥಗಳು

**ಘಟಕದ ರಚನೆ**


2.6.1. ಕಲಿಕಾ ಉದ್ದೇಶಗಳು

2.6.2. ಪೀಠಿಕೆ

2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.6.3.1. ಬೋಧನಾ ಶಾಸ್ತ್ರ ಮತ್ತು ವೈವಿಧ್ಯತೆ – ಅರ್ಥ ಮತ್ತು ಸ್ವರೂಪ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.6.3.2. ಬಾಲ್ಯಹಂತದ ವೈವಿಧ್ಯತೆಗಳು ಮತ್ತು ಬೋಧನಾ ಶಾಸ್ತ್ರದ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.6.3.3. ಹದಿಹರೆಯ ಮತ್ತು ಅಂತಿಮ ಹದಿಹರೆಯ ಹಂತದ ವೈವಿಧ್ಯತೆಗಳು ಮತ್ತು ಬೋಧನಾ ಶಾಸ್ತ್ರದ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

2.3.4. ಸಾರಾಂಶಿಸೋಣ

2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

2.3.6. ಘಟಕಾಂತ್ಯ ಅಭ್ಯಾಸಗಳು

2.3.7. ಪರಾಮರ್ಶನ ಸೂಚಿ


## 2.6.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಬೋಧನಾಶಾಸ್ತ್ರದ ಅರ್ಥ ಮತ್ತು ಸ್ವರೂಪವನ್ನು ವಿವರಿಸುವರು;
- ವಿಕಾಸದ ವಿವಿಧ ಹಂತಗಳಲ್ಲಿ ವೈವಿಧ್ಯತೆಯ ಅರ್ಥ ಮತ್ತು ಸ್ವರೂಪವನ್ನು ವಿವರಿಸುವರು;
- ಬೋಧನಾಶಾಸ್ತ್ರ ಮತ್ತು ವಿಕಾಸದ ಹಂತಗಳ ನಡುವಿನ ಸಂಬಂಧವನ್ನು ಗುರುತಿಸುವರು;
- ಬಾಲ್ಯಹಂತದ ವೈವಿಧ್ಯತೆಯಲ್ಲಿ ಬೋಧನಾಶಾಸ್ತ್ರದ ನಿಹಿತಾರ್ಥಗಳನ್ನು ವಿವರಿಸುವರು; ಮತ್ತು
- ಹದಿಹರೆಯ ಮತ್ತು ಅಂತಿಮ ಹದಿಹರೆಯ ಹಂತದ ವೈವಿಧ್ಯತೆಗೆ ಬೋಧನಾಶಾಸ್ತ್ರದ ನಿಹಿತಾರ್ಥಗಳನ್ನು ಗುರುತಿಸುವರು.

## 2.6.2. ಪೀಠಿಕೆ

ಬೋಧನಾಶಾಸ್ತ್ರವೆಂಬುದು ಇಂಗ್ಲೀಷಿನ 'ಪೆಡಗಾಜಿ' ಎಂಬ ಪದಕ್ಕೆ ಸಂವಾದಿಯಾದದ್ದು. ಸಾಮಾನ್ಯಾರ್ಥದಲ್ಲಿ ಇದನ್ನು ಬೋಧನಾ–ವಿಜ್ಞಾನ ಅಥವಾ ಬೋಧನಾ–ವಿಧಾನಗಳೆಂದು ಹೇಳುವುದೂ ಉಂಟು. ಬೋಧನಾಶಾಸ್ತ್ರವು ಜ್ಞಾನದ ಒಂದು ಶಾಖೆಯಾಗಿದ್ದು, ವಿಶೇಷವಾಗಿ ಮಕ್ಕಳ ಕಲಿಕೆಯನ್ನು ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಬೋಧನೆಯಲ್ಲಿ ಮುಖ್ಯವಾಗಿ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಇದರ ಅನ್ವಯವನ್ನು ಕಾಣಬಹುದಾಗಿದೆ. ಶಾಲೆಯೊಂದು ಪುಟ್ಟ ಸಮಾಜ. ಇಲ್ಲಿನ ಮಕ್ಕಳು ವೈವಿಧ್ಯತೆಯನ್ನು ಹೊಂದಿದವರು. ಈ ವೈವಿಧ್ಯತೆ ಸಂಕೀರ್ಣವಾದುದರಿಂದ ಇದಕ್ಕನುಗುಣವಾಗಿ ಬೋಧಿಸುವುದು ಶಿಕ್ಷಕರಿಗೆ ಒಂದು ಸವಾಲಿನ ವಿಷಯವೇ. ಮಕ್ಕಳಲ್ಲಿ ವ್ಯಕ್ತಿಭಿನ್ನತೆ ಇರುವುದರಿಂದ ಪಠ್ಯಕ್ರಮದ ಅಳವಡಿಕೆ, ಬೋಧನೆ ಇತ್ಯಾದಿಗಳನ್ನು ಅದಕ್ಕನುಗುಣವಾಗಿ ಹೊಂದಿಸಿಕೊಳ್ಳಬೇಕು. ಮಕ್ಕಳ ಬುದ್ಧಿಶಕ್ತಿ, ಭಾವನೆಗಳು, ಸಾಮಾಜಿಕ ಸಾಮರ್ಥ್ಯಗಳು, ಧೋರಣೆಗಳು, ಅಭಿಕ್ಷಮತೆಗಳು ಮತ್ತು ಸೃಜನಶೀಲತೆ ಇವು ಒಬ್ಬರಿಂದ ಒಬ್ಬರಿಗೆ ಬೇರೆಯಾಗಿರುತ್ತವೆ. ಇದನ್ನು ವ್ಯಕ್ತಿಭಿನ್ನತೆಯೆನ್ನುವರು. ಅಷ್ಟೇ ಅಲ್ಲದೆ ಅವರು ವಿವಿಧ ಧರ್ಮಗಳಿಗೆ, ಮತ–ಜಾತಿಗಳಿಗೆ, ಸಂಸ್ಕೃತಿಗೆ ಸೇರಿದವರಾಗಿದ್ದು ವಿವಿಧ ಭಾಷೆಗಳನ್ನು ಮಾತನಾಡುವವರಾಗಿರುತ್ತಾರೆ. ಈ ವಿಚಾರಗಳನ್ನೂ ವೈವಿಧ್ಯತೆ ಎಂದು ಗುರುತಿಸಲಾಗಿದೆ. ವೈವಿಧ್ಯತೆಯಲ್ಲಿ ವಿವಿಧ ಭಾಷೆಗಳು, ಉಡುಗೆ–ತೊಡುಗೆಗಳು, ಸಂಸ್ಕೃತಿ ಇತ್ಯಾದಿಗಳೂ ಸೇರಿರುತ್ತವೆ. ಈ ಘಟಕದಲ್ಲಿ ನೀವು ಮೇಲೆ ಹೇಳಿದ ಪ್ರತ್ಯಯಗಳಿಗೆ ಅನುಗುಣವಾಗಿ ಇರಬೇಕಾದ ಬೋಧನಾ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲಿದ್ದೀರಿ. ಬೋಧನಾಶಾಸ್ತ್ರದ ಅರ್ಥ, ಸ್ವರೂಪ ಮತ್ತು ತರಗತಿಗಳಲ್ಲಿ ಅದರ ಅನ್ವಯನವನ್ನು ಕುರಿತು ಅಧ್ಯಯನ ನಡೆಸಲಿದ್ದೀರಿ.

## 2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 2.6.3.1. ಬೋಧನಾ ಶಾಸ್ತ್ರ ಮತ್ತು ವೈವಿಧ್ಯತೆ – ಅರ್ಥ ಮತ್ತು ಸ್ವರೂಪ

### ಬೋಧನಾಶಾಸ್ತ್ರ – ಅರ್ಥ ಮತ್ತು ಸ್ವರೂಪ

ಪೆಡಗಾಜಿ (ಬೋಧನಾಶಾಸ್ತ್ರ) ಎಂಬ ಪದಕ್ಕೆ "ಪೆಡಗಾಜಿಯಾ" ಎಂಬ ಲ್ಯಾಟಿನ್ ಪದವೇ ಮೂಲ. ಒಂದು ಶೈಕ್ಷಣಿಕ ವಿಷಯದ ಅಥವಾ ಸಿದ್ಧಾಂತದ ಪರಿಕಲ್ಪನೆಗಳನ್ನು ಬೋಧಿಸುವ ವಿಧಾನ ಮತ್ತು ಬೋಧನಾ ಅಭ್ಯಾಸ ಎಂಬುದು ಇದರ ಅರ್ಥ. ಬೋಧನಾಶಾಸ್ತ್ರವು ಮಕ್ಕಳ ಕಲಿಕೆಯನ್ನು ಕೇಂದ್ರವಾಗಿರಿಸಿಕೊಂಡ ಪ್ರಕ್ರಿಯೆ. ಆದ್ದರಿಂದಲೇ ಶಿಕ್ಷಕರು ಈ ಶಾಸ್ತ್ರದ ಅನುಭವವನ್ನು ಹೊಂದಿರಬೇಕು. ಆ ಮೂಲಕ ಬೋಧನೆಯಲ್ಲಿ ಬಳಸಬಹುದಾದ ಸಿದ್ಧಾಂತಗಳನ್ನು ಮತ್ತು ಅವುಗಳ ಬಳಕೆಯನ್ನು ಕಲಿಯಬೇಕು. ಬೋಧನಾ ತಂತ್ರಗಳು, ಕೌಶಲಗಳು, ಪದ್ಧತಿಗಳು, ಉಪಮಾರ್ಗಗಳು, ವಿಧಾನಗಳು ಮತ್ತು ಸಂವಹನ ಕೌಶಲಗಳು ಇವೆಲ್ಲವನ್ನೂ ನಾವು ಬೋಧನಾಶಾಸ್ತ್ರದ ಅಂಶಗಳಾಗಿ ಬೋಧಿಸಲು ಅಧ್ಯಯನ ಮಾಡುವುದರಿಂದ ಶಿಕ್ಷಕರು ಮಕ್ಕಳ ಆಸಕ್ತಿ, ಅವರ ಅಗತ್ಯತೆಗಳು, ಹಿನ್ನೆಲೆ ಮತ್ತು ಕಲಿಕಾ ಮಟ್ಟ ಸಹಾಯವಾಗುತ್ತದೆ. ಬಿ.ಜಿ.ಸ್ಟ್ಯಾನ್ಲೀ ಅವರ ಪ್ರಕಾರ, ಶಿಕ್ಷಕರು ಮಕ್ಕಳೊಡನೆ ಅನ್ಯೋನ್ಯತೆಯಿಂದ ಇರುವುದು ಹೇಗೆ, ತರಗತಿಯ ಸಮಾಜೋ–ಬೌದ್ಧಿಕ ಪರಿಸರದೊಡನೆ ಹೊಂದಿಕೊಂಡು ಮುನ್ನಡೆಯುವುದು ಹೇಗೆ ಎಂಬುದನ್ನು ವಿವರಿಸುವ ಶಾಸ್ತ್ರವಿದು. ಬೋಧನಾಶಾಸ್ತ್ರದ ಕ್ಷೇತ್ರ ಬಹಳ ವಿಶಾಲವಾದುದು. ಅವಲಂಬನೆಯ ಕಲಿಕೆಯಿಂದ ಸ್ವಾವಲಂಬನೆಯ ಕಲಿಕೆಯೆಡೆಗೆ ವಿದ್ಯಾರ್ಥಿಗಳನ್ನು ಕೊಂಡೊಯ್ಯುವುದು ಬೋಧನಾಶಾಸ್ತ್ರದ ಗುರಿ. ಮಾನವನನ್ನು ವಿಕಾಸದ ಪಥದಲ್ಲಿ ಕೊಂಡೊಯ್ಯುವುದು ಇದರ ಒಂದು ಆಯಾಮವಾದರೆ, ಉದ್ಯೋಗಕ್ಕೆ ವ್ಯಕ್ತಿಗಳನ್ನು ತಯಾರು ಮಾಡುವುದು ಇದರ ಮತ್ತೊಂದು ಆಯಾಮ.

'ಬೋಧನಾಶಾಸ್ತ್ರ'ವು ಕಲಿಕಾ ಉದ್ದೇಶಗಳು, ವಿಷಯ ವಿಶ್ಲೇಷಣೆ, ಪಾಠ ಯೋಜನೆ, ಪಾಠಯೋಜನೆಯ ಅನ್ವಯ, ಸಮಗ್ರ ಮತ್ತು ನಿರಂತರ ಮೌಲ್ಯಮಾಪನ ಪ್ರಕ್ರಿಯೆ ಇವೆಲ್ಲವನ್ನು ಒಳಗೊಂಡಿರುತ್ತದೆ. ಅಲ್ಲದೆ,

ಇದು ಕಲಿಕಾ ಸಮಸ್ಯೆಗಳ ಮತ್ತು ದೋಷಗಳ ನಿದಾನ ಮತ್ತು ಪರಿಹಾರಗಳನ್ನೂ ಒಳಗೊಂಡಿರುತ್ತದೆ.

ಪರಿಣಾಮಕಾರಿ ಮತ್ತು ದಕ್ಷ ಶಿಕ್ಷಕರು ಬಹು ಎಚ್ಚರಿಕೆಯಿಂದ ಸೂಕ್ತವಾದ ಬೋಧನಾಶಾಸ್ತ್ರದ ತಂತ್ರಗಳನ್ನು ಬಳಸುತ್ತಾರೆ. ವೈವಿಧ್ಯಮಯವಾದ ಬೋಧನಾ ಉಪಕ್ರಮಗಳ ಬಳಕೆ ಶಾಲಾ ತರಗತಿಗಳಲ್ಲಿ ಸಾಮಾನ್ಯವಾದ ವಿಚಾರ. ಕಲಿಕೆಯ ವಸ್ತು, ವಿದ್ಯಾರ್ಥಿಗಳ ವೈವಿಧ್ಯತೆ, ವ್ಯಕ್ತಿಭಿನ್ನತೆಯನ್ನು ತಿಳಿದ ಶಿಕ್ಷಕರು ಹಾಗೂ ಹಲವಾರು ಸಾಂದರ್ಭಿಕ ವ್ಯತ್ಯಯಗಳು ಬೋಧನಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಬೋಧನಾಶಾಸ್ತ್ರವನ್ನು **"ಶಿಕ್ಷಕರು, ವಿದ್ಯಾರ್ಥಿಗಳು, ಕಲಿಕಾ ಪರಿಸರ ಮತ್ತು ಕಲಿಕಾ ಕಾರ್ಯಗಳ ನಡುವೆ ನಡೆಯುವ ಅಂತರ್‌ಕ್ರಿಯೆ ಎಂದು"** ವ್ಯಾಖ್ಯಾನಿಸಲಾಗಿದೆ. ತರಗತಿಯಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪರಸ್ಪರ ಬೆಂಬಲ, ಬೋಧನಾ ಉಪಕ್ರಮಗಳ ಬಳಕೆ ಇತ್ಯಾದಿ ವಿಷಯಗಳನ್ನು ಬೋಧನಾಶಾಸ್ತ್ರವು ವಿವರಿಸುತ್ತದೆ. ಶಿಕ್ಷಕ ಕೇಂದ್ರಿತ ಬೋಧನೆಯಿಂದ ಹಿಡಿದು ವಿದ್ಯಾರ್ಥಿ ಕೇಂದ್ರಿತ ಬೋಧನೆಯವರೆಗಿನ ಎಲ್ಲಾ ರೀತಿಯ ಬೋಧನಾ ಉಪಕ್ರಮಗಳಿಗೂ ಇಲ್ಲಿ ಪ್ರಾಶಸ್ತ್ಯವಿದೆ. ಕೆಲವು ಕಲಿಕಾ ವಿಚಾರಗಳಲ್ಲಿ ಶಿಕ್ಷಕರದ್ದೇ ಮೇಲುಗೈಯಾಗಿದ್ದರೆ, ಇತರ ಕೆಲವು ಕಲಿಕಾ ವಿಚಾರಗಳಿಗೆ ವಿದ್ಯಾರ್ಥಿ ಕೇಂದ್ರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು. ಎಲ್ಲಾ ವಿಷಯಗಳನ್ನು ವಿದ್ಯಾರ್ಥಿ ಕೇಂದ್ರಿತವಾಗಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಅಮೂರ್ತ ಪರಿಕಲ್ಪನೆಗಳ ಬೋಧನೆಗೆ ಶಿಕ್ಷಕ ಕೇಂದ್ರಿತ ವಿಧಾನ ಒಳ್ಳೆಯದಾದರೆ, ಮೂರ್ತ ಪರಿಕಲ್ಪನೆಗಳ ಬೋಧನೆಗೆ ವಿದ್ಯಾರ್ಥಿ ಕೇಂದ್ರಿತವಾಗಿರುವುದು ಒಳ್ಳೆಯದು.

**ಶಿಕ್ಷಕ ಕೇಂದ್ರಿತ ಬೋಧನಾಶಾಸ್ತ್ರ:** ಈ ವಿಧಾನದಲ್ಲಿ ಶಿಕ್ಷಕನೇ ಪ್ರಮುಖ ವ್ಯಕ್ತಿ. ಬೊಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಈತನಿಗೇ ಕೇಂದ್ರ ಸ್ಥಾನ. ಈ ಸನ್ನಿವೇಶದಲ್ಲಿ ಉಪನ್ಯಾಸ ವಿಧಾನ, ಉಪನ್ಯಾಸ–ಪ್ರಾತ್ಯಕ್ಷಿಕೆಯ ವಿಧಾನಗಳನ್ನು ಬಳಸಲಾಗುತ್ತದೆ. ಈ ವಿಧಾನ ಕಟುವಾಗಿ ಟೀಕೆಗೆ ಒಳಗಾಗಿದ್ದರೂ ಇದರಲ್ಲಿ ಗುಣಗಳು ಇಲ್ಲದಿಲ್ಲ. ಬೋಧನೆಯ ನಡುವೆ ಪ್ರಶ್ನೆಗಳನ್ನು ಕೇಳಿ ಮಕ್ಕಳನ್ನು ಚರ್ಚೆಗೆ ಪ್ರೋತ್ಸಾಹಿಸುವುದರ ಮೂಲಕ ದ್ವಿಮುಖ ಸಂವಹನವನ್ನು ಸಾಧಿಸಿ, ಈ ವಿಧಾನಗಳನ್ನೂ ಪರಿಣಾಮಕಾರಿಯಾಗಿಸಬಹುದು.

**ಕಲಿಕಾರ್ಥಿ ಕೇಂದ್ರಿತ ಬೋಧನಾಶಾಸ್ತ್ರ:** ಸಕ್ರಿಯವಾದ ಕಲಿಕೆ, ಭಾಗವಹಿಕೆ ಸಹಿತ ಕಲಿಯುವುದು, ಮಾಡಿ–ಕಲಿ, ಮತ್ತು ಸಂರಚನಾ ವಿಧಾನ ಇವೆಲ್ಲವೂ ಕಲಿಕಾರ್ಥಿ ಕೇಂದ್ರಿತ ಬೋಧನಾ ಶಾಸ್ತ್ರದ ಪರಿಕಲ್ಪನೆಗಳಾಗಿವೆ. ಈ ವಿಧಾನದಲ್ಲಿ ವಿದ್ಯಾರ್ಥಿಗಳೇ ಕೇಂದ್ರ ಸ್ಥಾನದಲ್ಲಿರುತ್ತಾರೆ. ಸಕ್ರಿಯವಾಗಿ ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಪೂರ್ವಜ್ಞಾನವನ್ನು ಬಳಸಿಕೊಳ್ಳುತ್ತಾ ಅನುಭವಗಳಿಂದ ಹೊಸ ಜ್ಞಾನವನ್ನು ಕಟ್ಟಿಕೊಳ್ಳುತ್ತಾರೆ. ಇಲ್ಲಿ ಶಿಕ್ಷಕರ ಪಾತ್ರ ಕಲಿಕೆಗೆ ಅನುಕೂಲಿಸುವುದು ಮಾತ್ರ. ಇದೊಂದು ಪರಿಣಾಮಕಾರಿ ತಂತ್ರೋಪಾಯವೆಂದು ಗುರುತಿಸಲ್ಪಟ್ಟಿದೆ. ಕಲಿಕಾರ್ಥಿಯು ಸ್ವಯಂ ಪ್ರೇರಣೆಯಿಂದ ಕಲಿಕಾ ವಿಚಾರಗಳನ್ನು ಪಡೆದುಕೊಳ್ಳುತ್ತಾನೆ. ಶಿಕ್ಷಕರು ಇಂತಹ ಕಲಿಕಾ ವಾತಾವರಣವನ್ನು ಸೃಷ್ಟಿಸಲು ಸಾಕಷ್ಟು ಶ್ರಮಪಡಬೇಕು.

**ಕಲಿಕಾ ಕೇಂದ್ರಿತ ಬೋಧನಾಶಾಸ್ತ್ರ:** ಸಾಪೇಕ್ಷವಾಗಿ ಇದೊಂದು ಹೊಸ ಪದವೆಂದೇ ಹೇಳಬೇಕು. ಈ ವಿಧಾನದಲ್ಲಿ ವಿದ್ಯಾರ್ಥಿ ಕೇಂದ್ರಿತ ಮತ್ತು ಶಿಕ್ಷಕ ಕೇಂದ್ರಿತ ಬೋಧನೆಗಳ ಮಿಶ್ರಣವನ್ನು ನೋಡಬಹುದು. ಶಿಕ್ಷಕರು ಯಾವುದೇ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವ ಮುನ್ನ, ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ, ತರಗತಿಯ ಭೌತಿಕ ಪರಿಸರ, ಬೋಧನಾ–ಕಲಿಕಾ ಸಾಮಗ್ರಿಗಳ ಲಭ್ಯತೆ, ಇತ್ಯಾದಿಗಳನ್ನು ಗಮನಿಸಬೇಕು. ಇದರ ಪರಿಣಾಮವಾಗಿ ಬೋಧನೆಯು ಕಲಿಕಾರ್ಥಿಯ ಸಾಧನೆಯ ಜೊತೆಗೆ ಸ್ವಾವಲಂಬಿತ ಕಲಿಕಾರ್ಥಿಗಳನ್ನು ಸೃಷ್ಟಿಸಿ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿಸಿ ಅವರನ್ನು ಸ್ವತಂತ್ರ ವಿದ್ಯಾರ್ಥಿಗಳನ್ನಾಗಿಸುವುದು. ಈ ನೆಲೆಯಲ್ಲಿ ಶಿಕ್ಷಕರು ನಮ್ಯತೆಯೊಂದಿಗಿನ ಕ್ರಿಯಾಶೀಲತೆಯಿಂದ ಶ್ರೇಷ್ಠ ಉತ್ಪನ್ನದ ನಿರೀಕ್ಷೆಯನ್ನು ಮಾಡಬಹುದಾಗಿದೆ. ಕೇವಲ ಒಂದೇ ಬೋಧನಾ ಉಪಮಾರ್ಗವನ್ನಷ್ಟೇ ಅಲ್ಲದೆ ಹಲವು ಬೋಧನಾ ವಿಧಾನಗಳ ಸಮ್ಮಿಶ್ರ ಬಳಕೆಯಿಂದಲೂ ಅಪೇಕ್ಷಿತ ಪರಿಣಾಮಗಳನ್ನು ಉಂಡುಮಾಡಬಹುದಾಗಿದೆ.

**ವೈವಿಧ್ಯತೆ ಅರ್ಥ ಮತ್ತು ಸ್ವರೂಪ**

ಜೀವನವೇ ವೈವಿಧ್ಯತೆಗಳ, ವ್ಯತ್ಯಾಸಗಳ ಮತ್ತು ಹೋಲಿಕೆಗಳ ಸಂತೆ ಎಂದು ಹೇಳಬಹುದೇನೋ!! ಹಾಗಿಲ್ಲದೇ ಹೋಗಿದ್ದರೆ ಜೀವನವೊಂದು ಏಕತಾನತೆಯ ನೀರಸ ಪ್ರಕ್ರಿಯೆಯಾಗಿರುತ್ತಿತ್ತು. ಅಲ್ಲವೇ? ಒಂದು ಘಳಿಗೆ ಹೀಗೇ ಯೋಚಿಸಿ ನೋಡಿ, ನಾವೆಲ್ಲರೂ ರೋಬೋಟುಗಳ ಹಾಗಿದ್ದಿದ್ದರೆ, ಏನು ಆಗುತ್ತಿತ್ತು? ಯೋಚಿಸಲೂ ಸಾಧ್ಯವಿಲ್ಲ ಅಲ್ಲವೇ? ವೈವಿಧ್ಯತೆಯೆಂಬುದೊಂದು ವರ. ವಸ್ತುಗಳಲ್ಲಿ, ಘಟನೆಗಳಲ್ಲಿ, ವ್ಯಕ್ತಿಗಳಲ್ಲಿ ವೈವಿಧ್ಯತೆ, ಇರುವುದರಿಂದಲೇ ಜೀವನಕ್ಕೆ ಒಂದು ಅರ್ಥವಿದೆ. ತರಗತಿಯೂ ವೈವಿಧ್ಯತೆಗಳ ಆಗರವೇ. ವಿದ್ಯಾರ್ಥಿಗಳಲ್ಲಿ ವ್ಯತ್ಯಾಸಗಳು ಮತ್ತು ವೈವಿಧ್ಯತೆಗಳು ಸಹಜ ಮಾತ್ರವಲ್ಲ; ಗಮನಿಸಲು ಆಸಕ್ತಿ ಇರುವ ವ್ಯಕ್ತಿಗೆ ಅದೊಂದು ಅದ್ಭುತ ಅನುಭವ. ಇದು ಧರ್ಮ, ಜಾತಿ–ಮತ, ರಾಷ್ಟ್ರೀಯತೆ, ಭೌಗೋಳಿಕ ಅಂಶಗಳು, ಸಮಾಜೋ–ಆರ್ಥಿಕ ಸ್ಥಿತಿ, ಸಂಸ್ಕೃತಿ, ಪೋಷಕರ ವಿದ್ಯಾರ್ಹತೆ, ಉದ್ಯೋಗ ಇತ್ಯಾದಿಗಳಲ್ಲಿರಬಹುದು ಇಲ್ಲವೇ ವಿದ್ಯಾರ್ಥಿಗಳ ಧೋರಣೆ, ಆಸಕ್ತಿ, ಮೌಲ್ಯ–ಪರಿಕಲ್ಪನೆ, ಬುದ್ಧಿಶಕ್ತಿ, ಸೃಜನಶೀಲತೆ, ಭಾವನೆಗಳು ಮತ್ತು ಸಾಮಾಜಿಕ ಕೌಶಲಗಳಲ್ಲಿರಬಹುದು.

ಇಂಗ್ಲಿಷಿನ 'diversity' ಎಂಬ ಪದ ವೈವಿಧ್ಯತೆ ಎಂಬುದಕ್ಕೆ ಸಂವಾದಿಯಾದುದು. ಇಂಗ್ಲೀಷಿನ ಈ ಪದಕ್ಕೆ ' ಫ್ರೆಂಚ್ ಭಾಷೆಯ "ಡೈವರ್ಸೈಟ್" ಎಂಬ ಪದವೇ ಮೂಲ. ಅಲ್ಲಿ, "ಏಕರೂಪ ಇಲ್ಲದಂತೆ ಮಾಡುವುದು" ಎಂಬುದು ಇದರ ಅರ್ಥ. ಮೆರ್ರಿಯಮ್ ವೆಬ್‌ಸ್ಟರ್ ನಿಘಂಟಿನಲ್ಲಿ ವೈವಿಧ್ಯತೆಯನ್ನು ಹೀಗೆ ವ್ಯಾಖ್ಯಾನಿಸಲಾಗಿದೆ: "ವಿಭಿನ್ನವಾದ ಅಂಶಗಳಿಂದ ಮಾಡಲ್ಪಟ್ಟಿರುವ, ವಿಶೇಷವಾಗಿ ವಿವಿಧ ರೀತಿಯ ಜನರನ್ನು ಹೊಂದಿರುವ ಷರತ್ತಿನಿಂದ ಒಂದು ಸಮೂಹ ಅಥವಾ ಗುಂಪು ಅಥವಾ ಒಂದು ಸಂಘಟನೆ ರೂಪುಗೊಳ್ಳುವುದೇ ವೈವಿಧ್ಯತೆ" ಬ್ಲಾಕ್ 2 ಘಟಕ 3ನ್ನು ನೀವು ಮತ್ತೆ ಗಮನಿಸಿ, ಅಲ್ಲಿ ವೈವಿಧ್ಯತೆ ಮತ್ತು ವ್ಯತ್ಯಾಸ ಈ ಪರಿಕಲ್ಪನೆಗಳನ್ನು ಚರ್ಚಿಸಲಾಗಿದೆ.

ವೈವಿಧ್ಯತೆ ಮತ್ತು ವ್ಯತ್ಯಾಸಗಳನ್ನು ಹೊಂದಿರುವ ವಿವಿಧ ವಯೋಮಾನದ ಮಕ್ಕಳಿಗೆ ಬೋಧನೆಯ ಅಳವಡಿಕೆ ಹೇಗೆ ಎಂಬುದು ಈಗ ಗಮನಿಸಬೇಕಾದ ವಿಚಾರ.

ಈ ನಿಟ್ಟಿನಲ್ಲಿ ಮೊದಲ ಕೆಲಸವೆಂದರೆ, ವೈವಿಧ್ಯತೆಯನ್ನು ಗೌರವಿಸುವುದು. ಏಕೆಂದರೆ, ವೈವಿಧ್ಯತೆಯು ನಮ್ಮ ಪರಿಸರವನ್ನು ಹೆಚ್ಚು ಶ್ರೀಮಂತಗೊಳಿಸುತ್ತದೆ, ಸೃಜನಶೀಲವಾಗಿಸುತ್ತದೆ ಮತ್ತು ಪರಿಸರವನ್ನು ಉತ್ಪನ್ನಕಾರಕವಾಗಿಸುತ್ತದೆ. ವೈವಿಧ್ಯತೆ ಉಳಿಯಬೇಕಾದರೆ ಅದನ್ನು ಗುರುತಿಸಬೇಕು, ಒಪ್ಪಿಕೊಳ್ಳಬೇಕು ಮತ್ತು ಗೌರವಿಸಬೇಕು. ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದಲ್ಲಿ ಇದು ಕೆಲಮಟ್ಟಿಗೆ ಸಾಧ್ಯವಾಗಿದೆ. ನಮ್ಮ ರಾಷ್ಟ್ರದಲ್ಲಿ ಕಂಡುಬರುವಷ್ಟು ಮತ, ಧರ್ಮ, ಭಾಷೆ ಸಂಸ್ಕೃತಿಯ ವೈವಿಧ್ಯತೆ ಬೇರೆಲ್ಲೂ ಕಂಡುಬರುವುದಿಲ್ಲ. ಪ್ರತಿಯೊಬ್ಬರ ಜನಾಂಗ, ಜಾತಿ, ಸಂಸ್ಕೃತಿ, ಧರ್ಮ, ಸಂಪ್ರದಾಯ, ಭೌಗೋಳಿಕ ವೈವಿಧ್ಯತೆ, ಸಾಮಾಜಿಕ ಕಟ್ಟು–ಕಟ್ಟಳೆಗಳು, ಹಲವಾರು ಸಾಮಾಜಿಕ ವರ್ಗಗಳು, ಮತ್ತು ಸಾಮರ್ಥ್ಯ ಉಳ್ಳವರು ಹಾಗೂ ವಿಶೇಷ ಸಾಮರ್ಥ್ಯ ಉಳ್ಳವರು–ಹೀಗೆ ಬಗೆಬಗೆಯ ಅಂಶಗಳನ್ನು ಒಳಗೊಂಡ ರಾಷ್ಟ್ರ ನಮ್ಮದು. ಇವೆಲ್ಲವುಗಳಿಂದ ಪೂರ್ಣತೆಗೆ ವಿಕಾಸ ಹೊಂದುವುದು ನಮ್ಮ ಗುರಿ. (ಅಂದರೆ, ವಸುಧೈವ ಕುಟುಂಬಕಂ). ಕಾನೂನಿನ ಮುಂದೆ ಎಲ್ಲರೂ ಒಂದೇ.

ಸೂಕ್ತ ಮತ್ತು ಯುಕ್ತವಾದ ಪರಿಣಾಮಕಾರಿ ಬೋಧನಾಶಾಸ್ತ್ರದ ಅನ್ವಯ: ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷಿತ ಗುರಿಗಳನ್ನು ತಲುಪಲು ಪರಿಣಾಮಕಾರಿ ಬೋಧನೆಯ ಅನ್ವಯ ಪ್ರಮುಖವಾದ ಅಂಶ. ಇದರಿಂದ ವಿದ್ಯಾರ್ಥಿಗಳಲ್ಲಿ ಉತ್ತಮವಾದ ಸಾಮಾಜಿಕ ಕೌಶಲಗಳ ಕಲಿಕೆ, ಭಾವನೆಗಳ ವಿಕಾಸ, ಮತ್ತು ಉತ್ಪಾದಕತ್ವವನ್ನು ನಿರೀಕ್ಷಿಸಬಹುದಾಗಿದೆ. ಬೋಧನಾ ವಿಧಾನಗಳ ಆಯ್ಕೆ ಸವಾಲಿನ ಕೆಲಸ. ಪ್ರತಿ ತರಗತಿಯಲ್ಲಿ ಪರಿಣಾಮಕಾರಿ ಬೋಧನಾ ವಿಧಾನದ ಆಯ್ಕೆ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ. ಎಲ್ಲ ಸನ್ನಿವೇಶಗಳಿಗೆ ಎಲ್ಲ ಮಕ್ಕಳಿಗೆ ಎಲ್ಲ ತರಗತಿಗಳಿಗೆ ಹೊಂದಿಕೆಯಾಗುವ ಸರ್ವೌಷಧ ರೂಪವಾದ ಬೋಧನೆ ಎಂಬುದು ಇಲ್ಲ.

ಉದಾಹರಣೆಗೆ, ಕಲಿಕಾರ್ಥಿ ಕೇಂದ್ರಿತ ಬೋಧನೆಯು ತರಗತಿಯಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದಾಗ ಪರಣಾಮಕಾರಿಯಾಗುತ್ತದೆ, ಆದರೆ ತರಗತಿಯಲ್ಲಿ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿದ್ದಾಗ ಈ ವಿಧಾನವು ಯುಕ್ತವಲ್ಲ. ಈ ಕೆಳಗೆ ಕೆಲವು ಮಾರ್ಗೋಪಾಯಗಳನ್ನು ನೀಡಲಾಗಿದೆ. ಗಮನಿಸಿ:

- ವಿದ್ಯಾರ್ಥಿಗಳ ವಯಸ್ಸಿಗೆ ಮತ್ತು ಬೋಧಿಸುವ ವಿಷಯಕ್ಕೆ ಅನುಗುಣವಾದ ಬೋಧನಾವಿಧಾನಗಳ ಬಗ್ಗೆ ಶಿಕ್ಷಕರು ತಿಳಿದಿರಬೇಕು;
- ಇಡೀ ತರಗತಿಯನ್ನು ಬೋಧನೆಗೆ ಅಳವಡಿಸಿಕೊಳ್ಳಬಲ್ಲ ಕೌಶಲ, ಮತ್ತು ಸಣ್ಣ ತರಗತಿಯಲ್ಲಿ ಬಳಸಬಹುದಾದ ಬೋಧನಾ ವಿಧಾನಗಳು ಮತ್ತು ತಂಡ–ತಂತ್ರಗಳ ಬಗ್ಗೆ ತಿಳಿದಿರಬೇಕು;
- ಪಠ್ಯಪುಸ್ತಕದಲ್ಲಿನ ವಿಚಾರಕ್ಕೆ ಪೂರಕವಾದ ವಿಚಾರಗಳನ್ನು ಮತ್ತು ಬೋಧನಾ–ಕಲಿಕಾ ಸಾಮಗ್ರಿಗಳ ಅರ್ಥಪೂರ್ಣ ಅನ್ವಯವನ್ನು ಅರಿತಿರಬೇಕು;
- ವಿದ್ಯಾರ್ಥಿಗಳು ಉತ್ತರ ನೀಡಲು ವಿಫುಲ ಅವಕಾಶಗಳನ್ನು ಕೊಡಬೇಕು; ಹಾಗೆಯೇ ಅವರ ಉತ್ತರಗಳನ್ನು ಸಾಕಷ್ಟು ವಿಸ್ತರಿಸುವ ಜಾಣ್ಮೆ ಇರಬೇಕು;
- ಸ್ಥಳೀಯ ಭಾಷೆಯ ಮತ್ತು ಆಡುಮಾತಿನ ಪದಗಳನ್ನು ಹಿತಮಿತವಾಗಿ ಬಳಸಬೇಕು;
- ವೈವಿಧ್ಯಮಯವಾದ ಕಲಿಕಾ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು; ಮತ್ತು
- ವಿದ್ಯಾರ್ಥಿಗಳ ಬಗ್ಗೆ ಮತ್ತು ಅವರ ಕಲಿಯುವ ಸಾಮರ್ಥ್ಯಗಳ ಬಗ್ಗೆ ಧನಾತ್ಮಕವಾದ ದೃಷ್ಟಿಕೋನವಿರಬೇಕು.

ರಾಷ್ಟ್ರೀಕರಣಗೊಂಡ ಪರೀಕ್ಷೆಗಳು, ಪಠ್ಯಕ್ರಮದ ಆದರ್ಶಗಳು, ಮತ್ತು ಸರ್ಕಾರದ ಶೈಕ್ಷಣಿಕ ನಿಯಮಾವಳಿಗಳು ಭೋಧನಾಶಾಸ್ತ್ರದ ಮೇಲೆ ಪರಿಣಾಮಬೀರುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಬೋಧನಾಶಾಸ್ತ್ರವೆಂದರೆ____________

   ಎ. ಮಕ್ಕಳ ವರ್ತನೆ

   ಬಿ. ಮಕ್ಕಳ ವಿಕಾಸ

   ಸಿ. ಮಕ್ಕಳ ವಿಕಾಸಾತ್ಮಕ ಕಾರ್ಯಗಳು

   ಡಿ. ಮಕ್ಕಳ ಕಲಿಕೆ

2. ಬೋಧನಾಶಾಸ್ತ್ರ ಒಳಗೊಂಡಿರುವ ಅಂಶಗಳು____________

   ಎ. ಶಿಕ್ಷಕ, ವಿದ್ಯಾರ್ಥಿ ಕಲಿಕಾ ಪರಿಸರ ಮತ್ತು ಕಲಿಕಾ ಫಲಶ್ರುತಿ

   ಬಿ. ಶಿಕ್ಷಕ, ವಿದ್ಯಾರ್ಥಿ ಮತ್ತು ವಿಷಯ

   ಸಿ. ಬೋಧನಾ ಉಪಮಾರ್ಗಗಳು, ವಿಧಾನ ಮತ್ತು ತಂತ್ರಗಳು ಕಲಿಕಾ ಫಲಶ್ರುತಿಗಳು, ನೈದಾನಿಕ ಅಂಶಗಳು ಮತ್ತು ಪರಿಹಾರಗಳು

   ಡಿ. ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ

3. ವಿದ್ಯಾರ್ಥಿ ಕೇಂದ್ರಿತ ಉಪಮಾರ್ಗವು ಪರಿಣಾಮಕಾರಿಯಾಗಿರುವುದು____________

   ಎ. ಕಡಿಮೆ ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ

   ಬಿ. ಏಕರೂಪತೆಯಿರುವ ತರಗತಿಗಳಲ್ಲಿ

ಸಿ. ಹೆಚ್ಚು ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ

ಡಿ. ವೈವಿಧ್ಯತೆ ಹೆಚ್ಚಾಗಿರುವ ತರಗತಿಗಳಲ್ಲಿ

4. ಪರಿಣಾಮಕಾರಿ ಬೋಧನಾಶಾಸ್ತ್ರವು ಸಹಾಯ ಮಾಡುವ ಅಂಶ______________

ಎ. ಪರಿಣಾಮಕಾರಿ ಕಲಿಕೆ

ಬಿ. ಶೈಕ್ಷಣಿಕ ಸಾಧನೆ, ಸಾಮಾಜಿಕ ಮತ್ತು ಭಾವನಾತ್ಮಕ ವಿಕಾಸ

ಸಿ. ಪರಿಣಾಮಕಾರಿ ವಾಕ್ಪಟುತ್ವ

ಡಿ. ಉತ್ತಮ ಸಾಮಾಜಿಕ ಸಂಬಂಧ ಸಾಧನೆ

5. ಸಮನ್ವಯಿತ ತರಗತಿಗಳು ಸವಾಲಾಗಿರುವುದು______________

ಎ. ಶಿಕ್ಷಕರಿಗೆ

ಬಿ. ನಿರ್ವಾಹಕರಿಗೆ

ಸಿ. ಆಡಳಿತ ಮಂಡಳಿಯವರಿಗೆ

ಡಿ. ಮೇಲೆ ಹೇಳಿದ ಎಲ್ಲರಿಗೆ

6. ವೈವಿಧ್ಯತೆಯೆಂದರೆ, ______________

ಎ. ಪ್ರಜಾಪ್ರಭುತ್ವದ ಭೂಮಿಕೆಯಲ್ಲಿ "ಒಪ್ಪಿಕೊಳ್ಳುವುದು" ಮತ್ತು "ಗೌರವಿಸುವುದು"

ಬಿ. ಎಲ್ಲಾ ವ್ಯತ್ಯಾಸಗಳು ಮತ್ತು ವೈವಿಧ್ಯತೆಗಳು

ಸಿ. ಒಗ್ಗಟ್ಟು ಮತ್ತು ವೈವಿಧ್ಯತೆಗಳು

ಡಿ. ವಿವಿಧ ಸಂಸ್ಕೃತಿ ಮತ್ತು ಜನಾಂಗಗಳು

7. ವೈವಿಧ್ಯತೆಯ ಕುರಿತು ಬೋಧನಾಶಾಸ್ತ್ರದ ಶೈಕ್ಷಣಿಕ ನಿಹಿತಾರ್ಥವು ಆಧರಿಸಿರುವುದು______________

ಎ. ವಿಕಾಸಾತ್ಮಕ ಕಾರ್ಯಗಳ ಗುರಿ ಮತ್ತು ಉದ್ದೇಶಗಳ ಸಾಧನೆ

ಬಿ. ಬೋಧನಾ ತಂತ್ರಗಳು ಮತ್ತು ಭೋಧಿಸಬೇಕಾದ ಪಠ್ಯ

ಸಿ. ವಿವಿಧ ವಯೋಮಾನದಲ್ಲಿನ ವಿದ್ಯಾರ್ಥಿಗಳ ವರ್ತನೆಗಳು

ಡಿ. ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳು

8. ಕಲಿಕೆ ಕೇಂದ್ರಿತ ಬೋಧನಾ ಉಪಮಾರ್ಗವೆಂದರೆ______________

ಎ. ಕಲಿಕಾರ್ಥಿಗಳು ಕೇಂದ್ರದಲ್ಲಿರುತ್ತಾರೆ

ಬಿ. ಶಿಕ್ಷಕರು ಕಲಿಕಾ ಸಂದರ್ಭಗಳನ್ನು ನಿಯಂತ್ರಿಸುವರು

ಸಿ. ಕಲಿಯುವ ವಿಷಯವೇ ಮುಖ್ಯವಾಗಿರುವುದು

ಡಿ. ಶಿಕ್ಷಕ ಕೇಂದ್ರಿತ ಮತ್ತು ಕಲಿಕಾರ್ಥಿ ಕೇಂದ್ರಿತ ಇವೆರಡರ ಸಂಕಲನವಾಗಿದೆ

## 2.6.3.2. ಬಾಲ್ಯಹಂತದ ವೈವಿಧ್ಯತೆಗಳು ಮತ್ತು ಬೋಧನಾ ಶಾಸ್ತ್ರದ ನಿಹಿತಾರ್ಥಗಳು

ಪೂರ್ವ ಬಾಲ್ಯಹಂತದಲ್ಲಿ ವೈವಿಧ್ಯತೆಯನ್ನು ಬೆಂಬಲಿಸುವುದಕ್ಕೆ ಇರಡು ಮುಖ್ಯ ಆಯಾಮಗಳಿವೆ, ಅವುಗಳೆಂದರೆ,

1. ಮಕ್ಕಳು ತಮ್ಮ ಬಗ್ಗೆ, ತಮ್ಮ ಕುಟುಂಬ, ಮತ್ತು ಸಮುದಾಯದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ಮತ್ತು ಭಾವನೆಗಳನ್ನು ಆತ್ಮವಿಶ್ವಾಸವನ್ನು ಹೊಂದಲು ಸಹಾಯ ಮಾಡುವುದು
2. ಮಕ್ಕಳಿಗೆ ವಿವಿಧತೆಯ ಪರಿಚಯವನ್ನು ಮಾಡಿಕೊಡುವುದು, ಇಲ್ಲಿಯವರೆಗೆ ಪರಿಚಯವಿಲ್ಲದ ಮತ್ತು ತಮ್ಮ ಅಳವಿಗೆ ಮೀರಿದ ಅನುಭವಗಳೆಡೆಗೆ ತೆರೆದ ಮನಸ್ಸಿನಿಂದ ನೋಡಲು ಸಹಾಯ ಮಾಡುವುದು

ಈ ಕೆಳಗೆ ನೀಡಲಾಗಿರುವ ಚಟುವಟಿಕೆಗಳನ್ನು ನಿಮ್ಮ ತರಗತಿಗಳಲ್ಲಿ ಪ್ರಯತ್ನಿಸಿ ನೋಡಿ

ಪುಸ್ತಕಗಳು, ಚಿತ್ರಪಟಗಳು, ಕಲಾಕೃತಿಗಳು, ಗೊಂಬೆಗಳು, ಅಡುಗೆ ಪಾತ್ರೆಗಳು, ಪರಿಸರವನ್ನು ಕುರಿತ ಅವರ ಭಾಷೆಯಲ್ಲಿನ ಮುದ್ರಿತ ವಿಚಾರಗಳು, ಫೋಟೋಗಳು, ಗೆಯ್ಮೆ ಪುಸ್ತಕಗಳು ಮತ್ತು ನಿದರ್ಶನಗಳು – ಇತ್ಯಾದಿಗಳನ್ನು ಸಂಪನ್ಮೂಲವಾಗಿ ಬಳಸಿಕೊಳ್ಳುವುದರಿಂದ ಅವರಿಗೊಂದು ಹೊಸ ಅನುಭವವು ತೆರೆದುಕೊಂಡಂತಾಗುವುದು. ಇತರ ಸಂಸ್ಕೃತಿಯ ಆಚಾರ ವಿಚಾರಗಳನ್ನು ತಿಳಿದುಕೊಳ್ಳಲು ಇವುಗಳು ಸಹಾಯ ಮಾಡುವುವು. ಕೆಲವು ಹಬ್ಬಗಳು ಒಂದೊಂದು ಭೌಗೋಳಿಕ ನೆಲೆಯಲ್ಲಿ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ನಡೆಯುತ್ತವೆ, ಆದ್ದರಿಂದ ಅವುಗಳ ಚಿತ್ರಗಳನ್ನು, ಫೋಟೋಗಳನ್ನು ಶಾಲೆಯ ಆವರಣದಲ್ಲೆಲ್ಲಾ ಕಾಣುವಂತೆ ಹಾಕಬೇಕು. ಬರೀ ತರಗತಿಯಲ್ಲಷ್ಟೇ ಅಲ್ಲ, ಪೋಷಕರ ಕೈಪಿಡಿಯಲ್ಲಿಯೂ ಅವುಗಳ ಪ್ರಾತಿನಿಧ್ಯವಿರಬೇಕು, ಮತ್ತು ಶಾಲೆಯ ವಾರ್ಷಿಕ ವರದಿಯಲ್ಲಿಯೂ ವಿಶೇಷವಾಗಿ ಆಚರಸಿದ ಘಟನೆಗಳ ಬಗ್ಗೆ ದಾಖಲೆ ಇರಬೇಕು.

ಯಾವ ಚಟುವಟಿಕೆಯೇ ಆಗಲಿ, ಕೆಳಗಿನ ವಿಷಯಗಳ ಕಡೆ ಗಮನಹರಿಸುವಂತೆ ಮಾಡಬೇಕು:

- ಇದರಲ್ಲಿ ನಾನು ಕಂಡುಕೊಂಡದ್ದೇನು?
- ಇದರ ವಿಶೇಷತೆಗಳೇನು?
- ನಾನು ಮೆಚ್ಚಿದ ಅಂಶಗಳೇನು?
- ಅವೇಕೆ ನನಗೆ ಮೆಚ್ಚುಗೆಯಾದವು?

ಒಟ್ಟಿನಲ್ಲಿ ವೈವಿಧ್ಯತೆಗಳನ್ನು ಮಕ್ಕಳು ಮೆಚ್ಚಿಕೊಳ್ಳುವ ಕಡೆ ಗಮನವಿರಬೇಕು.

ಮೊದಲಿಗೆ ಬಾಲ್ಯಹಂತದ ಮಕ್ಕಳು ಅಂದರೆ, 2 ಅಥವಾ 3 ವರ್ಷಗಳಿಂದ 11 ಅಥವಾ 12 ವರ್ಷಗಳವರೆಗಿನ ಮಕ್ಕಳ ವಿಕಾಸಾತ್ಮಕ ಕಾರ್ಯಗಳನ್ನು ತೆಗೆದುಕೊಳ್ಳೋಣ. ಏಕೆಂದರೆ, ವಿಕಾಸಾತ್ಮಕ ಕಾರ್ಯಗಳು ಪ್ರಬಲವಾದ ಸಮರ್ಥನೆಯನ್ನು ನೀಡುವುದಲ್ಲದೆ, ಇವುಗಳನ್ನು ಆಧರಿಸಿ ಬೋಧನಾಶಾಸ್ತ್ರದ ನಿಹಿತಾರ್ಥಗಳನ್ನು ಗುರುತಿಸುವುದು ಸುಲಭ. ಪೂರ್ವ ಬಾಲ್ಯಹಂತ (2 ರಿಂದ 4 ವರ್ಷಗಳು) ಮತ್ತು ಉತ್ತರ ಬಾಲ್ಯಹಂತ (4 ರಿಂದ 11 ವರ್ಷಗಳು) ಎಂಬ ಎರಡು ಹಂತಗಳನ್ನು ಬಾಲ್ಯದಲ್ಲಿ ಮಗುವು ದಾಟಿಬರುತ್ತದೆ. ಬೋಧನಾಶಾಸ್ತ್ರದ ಶೈಕ್ಷಣಿಕ ನಿಹಿತಾರ್ಥಗಳನ್ನು ತಿಳಿಯಲು ನಾವು ಶಾಲೆಗೆ ಹೋಗುವ ಮಕ್ಕಳನ್ನೇ ಆಯ್ದುಕೊಳ್ಳಬೇಕು. ಆಗ ಅದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಹಂತವೆಂದಾಗುವುದು. ಆಗ ಮಕ್ಕಳ ವಯಸ್ಸು 5 ರಿಂದ ಅಥವಾ 6 ರಿಂದ 11 ಅಥವಾ 12 ವರ್ಷಗಳವರೆಗಿನ ಕಾಲಮಾನವಾಗುವುದು.

ರಾಬರ್ಟ್ ಹ್ಯಾವಿಗರ್ಸ್ಟ್, ಪಿಯಾಜೆ, ಹರ್ಲಾಕ್ ಅವರುಗಳು ಹೇಳಿರುವಂತೆ, ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳು "ನಂಬಿಸುವ ಆಟಗಳು" ಮತ್ತು ಇತರ ಚಿಂತನಾ ಪ್ರಕ್ರಿಯೆಗಳು ಮಾನಸಿಕ ಪ್ರಾತಿನಿಧ್ಯಗಳೆಂದು ಅರ್ಥಮಾಡಿಕೊಂಡಿರುತ್ತಾರೆ. ಮ್ಯಾಜಿಕ್ ಅನಿಸುವಂತಹ ಜೀವಿಗಳನ್ನು, ಉತ್ಪ್ರೇಕ್ಷಿತ ಘಟನೆಗಳನ್ನು ನಂಬುತ್ತಾರೆ. ಮತ್ತು ಹೀಮ್ಯಾನ್, ಬ್ಯಾಟ್‌ಮ್ಯಾನ್, ಶಕ್ತಿಮಾನ್–ಹೀಗೆ ಕಲ್ಪನಾ ಸಾಮ್ರಾಜ್ಯದ ಪಾತ್ರವನ್ನು ಇಷ್ಟಪಡುತ್ತಾರೆ.

ಉತ್ತರಬಾಲ್ಯದಲ್ಲಿ ಅವರ ಯೋಚನೆಗಳು, ಹೆಚ್ಚು ಸಂಘಟಿತವಾಗಿರುತ್ತವೆ. ಮೂರ್ತ ಪರಿಕಲ್ಪನೆಗಳ ಕಾರ್ಯಗಳಲ್ಲಿ ಹೆಚ್ಚು ಅರ್ಥಬದ್ಧವಾಗಿ ಯೋಚಿಸಬಲ್ಲವರಾಗಿರುತ್ತಾರೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲು ಸಮರ್ಥರಾಗಿರುತ್ತಾರೆ. ಪಿಯಾಜೆ ಹೇಳಿರುವ ಸಂಜ್ಞಾನಾತ್ಮಕ ಕೌಶಲಗಳಲ್ಲಿ ಪ್ರೌಢಿಮೆಯನ್ನು ತೋರುತ್ತಾರೆ.

ತರಗತಿಯಲ್ಲಿನ ವೈವಿಧ್ಯತೆಯು, ವಿದ್ಯಾರ್ಥಿಗಳ ಕಲಿಕಾ ಶೈಲಿ, ಅವರ ಹಿನ್ನೆಲೆ, ಕಲಿಕಾ ಮಟ್ಟ, ಸಮಸ್ಯೆಗಳ ಪರಿಹರಿಸುವ ಕೌಶಲ, ಶೈಕ್ಷಣಿಕ ಹಿನ್ನೆಲೆ, ಮನೆಯಲ್ಲಿ ಮಾತನಾಡುವ ಭಾಷೆ, ಬೋಧನಾ ಮಾಧ್ಯಮ, ಗ್ರಾಮೀಣ ಮತ್ತು ನಗರದ ವಾತಾವರಣಗಳ ಹಿನ್ನೆಲೆ, ಹಾಗೂ ಮನೆಯಲ್ಲಿ ಅವರಿಗೆ ಸಿಗುವ ಬೆಂಬಲ ಇವುಗಳನ್ನು ಒಳಗೊಳ್ಳುತ್ತದೆ. ಕಲಿಕಾರ್ಥಿಗಳ ಕಲಿಕಾಗತಿಯು ಅವರ ಆಸಕ್ತಿ, ಬುದ್ಧಿಮಟ್ಟ ಹಾಗೂ ಸಂಸ್ಕೃತಿಯ ಹಿನ್ನೆಲೆಗೆ ಅನುಗುಣವಾಗಿರುತ್ತದೆ. ತರಗತಿಯೊಂದು ವೈವಿಧ್ಯಗಳ ಆಗರವೆಂದೇ ಹೇಳಬಹುದು. ಅಲ್ಲಿ ಪ್ರತಿಭಾವಂತರು, ಸಾಮಾನ್ಯ ಕಲಿಕಾ ಮಟ್ಟದವರು, ಸೃಜನಶೀಲರು, ನಿಧಾನಗತಿಯ ಕಲಿಕಾರ್ಥಿಗಳು, ನ್ಯೂನ ಸಾಮರ್ಥ್ಯ ಉಳ್ಳವರು, ವಿಕಲಾಂಗರು – ಹೀಗೆ ಕಲಿಸಲು ಸವಾಲುಗಳನ್ನೊಡ್ಡುವ ವಿವಿಧ ರೀತಿಯ ಮಕ್ಕಳಿರುತ್ತಾರೆ. ಆದ್ದರಿಂದ ಅವರನ್ನು ಅರ್ಥಮಾಡಿಕೊಳ್ಳುವುದು ಅನಿವಾರ್ಯ. ಇದಕ್ಕೆ ಅಗಾಧವಾದ ತಾಳ್ಮೆ, ವಿಶೇಷ ಶಿಕ್ಷಣಗಳ ಅವಶ್ಯಕತೆ ಇದೆ.

**ಅಂತರ್ಗತ ತರಗತಿಗಳಲ್ಲಿ, ದೊಡ್ಡ ತರಗತಿಗಳಲ್ಲಿ, ಸಂಪನ್ಮೂಲಗಳ ಅಭಾವವಿರುವ ತರಗತಿಗಳಲ್ಲಿ ಬೋಧನಾಶಾಸ್ತ್ರದ ಅಳವಡಿಕೆ:**

ಬೋಧನಾಶಾಸ್ತ್ರದ ಪರಿಣಾಮಕಾರಿತ್ವ ಎಂಬುದು ಸಾಪೇಕ್ಷವಾದ ಪರಿಕಲ್ಪನೆ ಎಂಬುದನ್ನು ಸೇವಾ–ಪೂರ್ವ ಮತ್ತು ಸೇವಾನಿರತ ಶಿಕ್ಷಕರೆಲ್ಲರೂ ಗಮನದಲ್ಲಿಡಬೇಕು. ಅಂತರ್ಗತ ಸನ್ನಿವೇಶವುಳ್ಳ ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಗಂಭೀರವಾಗಿಯೇ ಅರ್ಥಮಾಡಿಕೊಂಡಿರಬೇಕು. ಅವರ ವೈವಿಧ್ಯಮಯವಾದ ಸಾಮರ್ಥ್ಯಗಳಿಗೆ ತಕ್ಕಂತೆ ಶಿಕ್ಷಕರು ಮೊದಲೇ ತಯಾರಿ ಮಾಡಿಕೊಂಡಿರಬೇಕು. ಇಲ್ಲಿ ಗುಂಪು ಚಟುವಟಿಕೆಗಳು ಸಹಾಯವಾಗಬಲ್ಲವು. ದೊಡ್ಡ ತರಗತಿಗಳಲ್ಲಿ, ರೂಢಿಗತವಾದ ಕೆಲವು ಕಾರ್ಯಗಳನ್ನು ಮಾಡುವುದು ಒಳಿತು, ಉದಾಹರಣೆಗೆ, ಹಾಜರಾತಿಯನ್ನು ತೆಗೆದುಕೊಳ್ಳುವುದು, ಗುಂಪು ನಿರ್ದೇಶನ ನೀಡುವುದರ ಮೂಲಕ ತರಗತಿಯ ಶಿಸ್ತನ್ನು ಕಾಪಾಡಿಕೊಳ್ಳುವುದು ಇತ್ಯಾದಿ. ತಂಡಗಳ ಕಾರ್ಯಗಳನ್ನು ಪರೀಕ್ಷಿಸುವುದು, ಪ್ರತಿಯೊಬ್ಬರ ಅಭಿಪ್ರಾಯಗಳನ್ನು ಸಂಗ್ರಹಿಸಲು ಕಾರ್ಯಹಾಳೆಗಳನ್ನು ನೀಡುವುದು ಇತ್ಯಾದಿ. ಹೀಗೆ ಮಾಡುವುದರಿಂದ ದೊಡ್ಡ ತರಗತಿಗಳಲ್ಲಿ ಉಂಟಾಗಬಹುದಾದ ಗೊಂದಲಗಳು ನಿಯಂತ್ರಣಕ್ಕೆ ಬರುತ್ತವೆ ಮತ್ತು ಬೋಧನೆಗೆ ಸಿಗುವ ಸಮಯವನ್ನು ಹೆಚ್ಚಿಸುತ್ತವೆ. ಪ್ರಶ್ನೆ ಕೇಳುವಿಕೆ, ಸಕ್ರಿಯ ಚರ್ಚೆ ಇವೂ ಸಹಾಯಕ್ಕೆ ಬರುತ್ತವೆ. ಸಂಪನ್ಮೂಲಗಳ ಅಭಾವವಿರುವ ತರಗತಿಗಳಲ್ಲಿ ಶಿಕ್ಷಕರು ಸ್ವಲ್ಪ ಸೃಜನಶೀಲರಾಗಿರಬೇಕಾಗುತ್ತದೆ. ಸ್ಥಳೀಯವಾಗಿ ಸಿಗುವ ವಸ್ತುಗಳನ್ನೇ ಬಳಸಿಕೊಂಡು ಬೋಧನೆಯನ್ನು ಪರಿಣಾಮಕಾರಿಯಾಗಿಸಬೇಕಾಗುತ್ತದೆ. ಪಾಠಗಳನ್ನು ಸುತ್ತಮುತ್ತಲಿನ ಪರಿಸರದ ಸನ್ನಿವೇಶಕ್ಕೆ ಹೊಂದಿಸಿ ವಿವರಿಸುವುದರಿಂದ ಸಂಪನ್ಮೂಲಗಳ ಅಭಾವವನ್ನು ಸರಿತೂಗಿಸಬಹುದು. ಈ ಎಲ್ಲಾ ತಂತ್ರಗಳು ಸಂಪನ್ಮೂಲ ತುಂಬಿರುವ ತರಗತಿಯಲ್ಲಿಯೂ ಸಹಾಯ ಮಾಡುವುವು. ಮುಖ್ಯವಾಗಿ ಮಕ್ಕಳಿಗೆ ಇವು ಆಸಕ್ತಿದಾಯಕವಾಗಿರಬೇಕಷ್ಟೆ.

**ಅಂತರ್ಗತತೆ ಮತ್ತು ಸಮಾನತೆ:**

ಇಂದಿನ ಶಾಲೆಗಳಲ್ಲಿ ಎಲ್ಲಾ ರೀತಿಯ ಮಕ್ಕಳೂ ಒಟ್ಟಿಗೆ ಕಲಿಯುತ್ತಿರುವ ಸಂದರ್ಭಗಳು ಸಾಮಾನ್ಯವಾಗಿವೆ. ಇಲ್ಲಿ ಪ್ರತಿಭಾವಂತ ಮಕ್ಕಳಿರುವಂತೆ, ಸಾಮಾನ್ಯ ಮಕ್ಕಳು ಮತ್ತು ವಿಶೇಷ ಚೇತನರೂ ಇರುತ್ತಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗುವುದು. ಸಹಜವಾಗಿ ಸಾಮಾನ್ಯ ಮಕ್ಕಳನ್ನು ನಿಭಾಯಿಸುವುದೇ ಕಷ್ಟವಾಗಿರುವಾಗ ವಿಶೇಷ ಚೇತನರ ಅಗತ್ಯಗಳನ್ನೂ ಈಡೇರಿಸುತ್ತಾ ತರಗತಿಯನ್ನು ನಡೆಸುವುದು ಅವರಿಗೆ ಒಂದು ದೊಡ್ಡ ಸವಾಲೇ ಸರಿ. ಈ ಎಲ್ಲ ಮಕ್ಕಳನ್ನು ಕುರಿತಂತೆ ಶಿಕ್ಷಕರಲ್ಲಿ ಧನಾತ್ಮಕ ಮನೋಭಾವ ಬಹಳ ಮುಖ್ಯ. ಅವರಲ್ಲಿ ಸಾಮಾಜಿಕ ಕಳಕಳಿ, ಜವಾಬ್ದಾರಿ ಮತ್ತು ಸಹ–ಸ್ಪಂದನಗಳು ಇದ್ದಾಗ, ವಿಶೇಷ

ಚೇತನರ ಬೇಡಿಕೆಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಅವರನ್ನೂ ವಿಕಾಸ ಪ್ರಕ್ರಿಯೆಯಲ್ಲಿ ಸಂಪೂರ್ಣ ತೊಡಗಿಸುವ ಶಕ್ತಿ–ಸಾಮರ್ಥ್ಯಗಳು ಶಿಕ್ಷಕರಲ್ಲಿ ಕಂಡಬರುತ್ತದೆ. ಬೋಧನೆ ಫಲಪ್ರದವಾಗುತ್ತದೆ. ಶಿಕ್ಷಕರಲ್ಲಿ ಧನಾತ್ಮಕ ಧೋರಣೆಯಿಲ್ಲದೇ ಹೋದಾಗ ವಿದ್ಯಾರ್ಥಿಗಳೇ ಬಲಿಪಶುಗಳಾಗುತ್ತಾರೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಇಂತಹ ವಿದ್ಯಾರ್ಥಿಗಳನ್ನು ಉದಾಸೀನ ಮಾಡುವುದಾಗಲೀ, ಇವರ ಕುರಿತು ನಿರ್ಲಕ್ಷ್ಯ ತೋರಿಸುವುದಾಗಲೀ, ಮಾಡಿದಾಗ ಅದು ಅವರ ಕಲಿಕಾ ನಿರ್ವಹಣೆಯ ಮೇಲೆ ಋಣಾತ್ಮಕ ಪ್ರಭಾವ ಬೀರುವುದು ಮತ್ತು ಇದರಿಂದಾಗಿ ಅವರ ಕಲಿಕಾ ಫಲವು ನಿರೀಕ್ಷಿಸಿದುದನ್ನು ಕೊಡದೇ ಹೋಗಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಬೋಧನಾ – ಕಲಿಕಾ ಸಾಮಗ್ರಿಗಳು ತುಂಬಾ ಉಪಯುಕ್ತವಾದುವುಗಳು. ಆದರೆ ಅವು__________

   ಎ. ವಿದ್ಯಾರ್ಥಿಗಳ ಅಗತ್ಯ ಮತ್ತು ಆಸಕ್ತಿಗೆ ಹೊಂದುವಂತಿದ್ದರೆ ಮಾತ್ರ

   ಬಿ. ಒಳ್ಳೆಯ ಅಂಕಗಳನ್ನು ಗಳಿಸಲು ಪೂರಕವಾಗಿದ್ದರೆ ಮಾತ್ರ

   ಸಿ. ಸುಲಭವಾಗಿ ಬಳಸಲು ಮತ್ತು ನಿರ್ವಹಿಸಲು ಸಾಧ್ಯವಾಗುವಂತಿದ್ದರೆ ಮಾತ್ರ

   ಡಿ. ಅತೀ ಕಡಿಮೆ ಬೆಲೆಗೆ ಅಥವಾ ಪುಕ್ಕಟೆ ಸಿಗುವಂತಿದ್ದರೆ ಮಾತ್ರ

2. ಸಮೂಹ ಕಾರ್ಯಗಳಲ್ಲಿ ದಿನನಿತ್ಯ ಕಡ್ಡಾಯವಾಗಿ ನಡೆಸುವ ಕೆಲಸಗಳು__________

   ಎ. ಕಲಿಕೆಯಲ್ಲಿ ಏಕತಾನತೆಯನ್ನು ತರುವುದು

   ಬಿ. ಗೊಂದಲಗಳನ್ನು ಕಡಿಮೆ ಮಾಡಿ ಬೋಧನಾ ಸಮಯವನ್ನು ಹೆಚ್ಚಿಸುವುದು

   ಸಿ. ಏನೇನೂ ಪ್ರಯೋಜನವಿಲ್ಲದ್ದು

   ಡಿ. ತೊಂದರೆ ಮಾಡುತ್ತಾ ತರಗತಿಯನ್ನು ಅಸ್ತವ್ಯಸ್ತಗೊಳಿಸುವುದು

3. ಈ ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

   ಎ. ಪರಿಣಾಮಕಾರಿ ಬೋಧನೆಯು ಯಾವಾಗಲೂ ಸಂದರ್ಭವನ್ನು ಅವಲಂಬಿಸಿರುತ್ತದೆ.

   ಬಿ. ಅಂತರ್ಗತ ತರಗತಿಗಳು ಇತ್ತೀಚಿನ ದಿನಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತಿವೆ.

   ಸಿ. ದೊಡ್ಡ ತರಗತಿಗಳಲ್ಲಿ ದೈನಂದಿನ ರೂಢಿಗತ ಕಾರ್ಯಗಳನ್ನು ಅಭ್ಯಾಸ ಮಾಡುವುದು ಮುಖ್ಯ.

   ಡಿ. ಕಲಿಕಾ ಅಸಾಮರ್ಥ್ಯವು ತರಗತಿಯ ವೈವಿಧ್ಯತೆಯನ್ನೇನೂ ಹೆಚ್ಚಿಸುವುದಿಲ್ಲ.

   ಇ. ಉತ್ತರ ಬಾಲ್ಯಹಂತದಲ್ಲಿ ಮಕ್ಕಳು ಮೂರ್ತ ಪರಿಕಲ್ಪನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ.

   ಎಫ್. ಸಾಮಾಜಿಕವಾಗಿ ಸೌಲಭ್ಯವಂಚಿತರಾದವರಲ್ಲಿ ಹೆಣ್ಣುಮಕ್ಕಳೂ ಸೇರುತ್ತಾರೆ.

## 1.6.3.3. ಹದಿಹರೆಯ ಮತ್ತು ಅಂತಿಮ ಹದಿಹರೆಯ ಹಂತದ ವೈವಿಧ್ಯತೆಗಳು ಮತ್ತು ಬೋಧನಾ ಶಾಸ್ತ್ರದ ನಿಹಿತಾರ್ಥಗಳು

ಈ ಕೆಳಗೆ ಸೂಚಿಸಿರುವ ಚಟುವಟಿಕೆಗಳನ್ನು ನಿಮ್ಮ ತರಗತಿಯಲ್ಲಿ ಅಳವಡಿಸಿ.

ತರಗತಿಯ ಮಕ್ಕಳಿಗೆ ನಾಟಕಗಳನ್ನು ಅಭಿನಯಿಸುವಂತೆ ಪ್ರೋತ್ಸಾಹಿಸಿ. ಅನಕ್ಷರತೆ, ದೌರ್ಜನ್ಯ, ಶೋಷಣೆ, ಜಾತೀಯತೆ ಇತ್ಯಾದಿ ವಿಚಾರಗಳು ಅದರ ವಸ್ತುವಾಗಿರಲಿ. ಅಭಿನಯವು ಈ ವಿಚಾರಗಳ ಪರಿಣಾಮವನ್ನು ವ್ಯಕ್ತಪಡಿಸುವಂತಿರಲಿ. ಅಭಿನಯದನಂತರ, ವಿದ್ಯಾರ್ಥಿಗಳಿಗೆ ಆ ವಿಚಾರಗಳ ಕುರಿತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹೇಳಿ.

ಮೇಲೆ ಹೇಳಿದ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಮಾಡುವಾಗ, ಶಿಕ್ಷಕರಾಗಿ ಅವರಲ್ಲಿ ಆಗುತ್ತಿರುವ ಪರಿವರ್ತನೆಗಳನ್ನು ನೀವು ಗುರುತಿಸಬಲ್ಲಿರಿ. ಅವರ ಅಭಿವ್ಯಕ್ತಿಗಳಲ್ಲಿ, ಪಾತ್ರ ನಿರ್ವಹಣೆಯಲ್ಲಿ, ಸಂಭಾಷಣೆಗಳಲ್ಲಿ ಈ ಮಕ್ಕಳು ಇವರ ಹಿಂದಿನ ಹಂತದವರಿಗಿಂತ ಸ್ವಲ್ಪವಾದರೂ ಪಕ್ವಗೊಂಡವರಂತೆ ಕಾಣಿಸುವುದರಲ್ಲಿ ಅನುಮಾನವೇ ಇಲ್ಲ. ಏಕೆಂದರೆ ಇವರು ಹದಿಹರೆಯದ ಹಂತದಲ್ಲಿರುವ ಮಕ್ಕಳು. ತಮ್ಮನ್ನು ತಾವು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯದ ಜೊತೆಗೆ ಇತರರನ್ನೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇವರಿಗಿರುತ್ತದೆ. ಅಮೂರ್ತವಾಗಿ ಚಿಂತಿಸುವ ಮತ್ತು ಕಲಾತ್ಮಕವಾಗಿ ತಮ್ಮ ಅಭಿವ್ಯಕ್ತಿಗಳನ್ನು ರೂಪಿಸುವ ಶಕ್ತಿ–ಸಾಮರ್ಥ್ಯ ಇವರಲ್ಲಿ ಈ ವೇಳೆಗೆ ರೂಪುಗೊಂಡಿರುತ್ತದೆ. ಹದಿಹರೆಯ ಮತ್ತು ಅಂತಿಮ ಹದಿಹರೆಯ ಹಂತದ ಮಕ್ಕಳ ಲಕ್ಷಣಗಳನ್ನು ಹಾಗೂ ಅವರ ತರಗತಿಯು ಯಾವ ರೀತಿ ಬದಲಾಗಬೇಕಿದೆ ಎಂಬುದನ್ನು ಕುರಿತಂತೆ ಬೋಧನಾಶಾಸ್ತ್ರದ ನಿಹಿತಾರ್ಥಗಳನ್ನು ವಿಚಾರಮಾಡೋಣ.

ಹದಿಹರೆಯದವರ ಮತ್ತು ಅಂತಿಮ ಹದಿಹರೆಯದವರ ಸ್ವರೂಪವನ್ನು ಪರೋಕ್ಷವಾಗಿ ತಿಳಿಸುವ ಆಯಾ ಹಂತದ ವಿಕಾಸಾತ್ಮಕ ಕಾರ್ಯಗಳನ್ನು ನೀವು ಈಗಾಗಲೇ ತಿಳಿದಿದ್ದೀರಿ. ಅವೆಲ್ಲವನ್ನೂ ಈಗ ನೆನಪಿಸಿಕೊಳ್ಳಿ. ಒಂದು ರೀತಿಯ ಪ್ರೌಢ ವ್ಯಕ್ತಿತ್ವವನ್ನು ಹೊಂದಿರುವ ಈ ಹಂತದ ಮಕ್ಕಳನ್ನು ಶಾಲಾ ಸನ್ನಿವೇಶದಲ್ಲಿ ಸ್ನೇಹಿತರಂತೆ ಕಾಣಬೇಕು. ನಮ್ಮ ಹಿರಿಯರು ಈ ಮಾತನ್ನು ಹೇಳುವುದು ನೀವು ಕೇಳಿರಬೇಕಲ್ಲವೆ? "ಬೆಳೆದ ಮಗನನ್ನು ನಿನ್ನ ಸ್ನೇಹಿತನಂತೆ ಕಾಣು". ಹಾಗೆಯೇ ಬೋಧನಾಶಾಸ್ತ್ರವೂ ಅದನ್ನೇ ಹೇಳುತ್ತದೆ. ಬೋಧನಾ ವಿಧಾನಗಳು ವಿದ್ಯಾರ್ಥಿ–ಸ್ನೇಹಿಯಾಗಿರಬೇಕು. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧವು ಪ್ರಜಾಪ್ರಭುತ್ವ ಮೌಲ್ಯಗಳಿಗನುಗುಣವಾಗಿರಬೇಕು. ಬೋಧನಾ ತಂತ್ರಗಳು, ಮತ್ತು ಬೋಧನಾ ಕೌಶಲಗಳು ವಿದ್ಯಾರ್ಥಿಗಳ ಮಟ್ಟಕ್ಕನುಗುಣವಾಗಿ ಆಧುನಿಕವಾಗಿರಬೇಕು. ಬೋಧನಾ ತರಗತಿಗಳು ಅವರ ಸಾಮರ್ಥ್ಯಗಳನ್ನು ಒರೆಹಚ್ಚುವಂತಿರಬೇಕು. ಇಲ್ಲದಿದ್ದರೆ ಕಲಿಕೆಯಲ್ಲಿ ನಿರಾಸಕ್ತಿಯುಂಟಾಗುತ್ತದೆ. ತಂಡ ಕಾರ್ಯಗಳು, ಗುಂಪು–ನಿಯೋಜಿತ ಕಾರ್ಯಗಳು, ವೈಯಕ್ತಿಕ ಮತ್ತು ಸಾಮೂಹಿಕ ಅನ್ವೇಷಣೆಗಳು ಅವರಿಗೆ ಹೆಚ್ಚು ಪ್ರಿಯವಾದುದು. ಶಿಕ್ಷಕರ ಮಾರ್ಗದರ್ಶನದೊಂದಿಗೆ ಇಲ್ಲವೇ ಮಾರ್ಗದರ್ಶನವಿಲ್ಲದೆ ಸಮೀಕ್ಷೆಗಳನ್ನು ಹಾಗೂ ಪ್ರಯೋಗ, ಅನ್ವೇಷಣೆಗಳನ್ನು ಮಾಡಲು ಮುಕ್ತವಾದ ಸನ್ನಿವೇಶಗಳನ್ನು ಸೃಷ್ಟಿಮಾಡುವ ಜವಾಬ್ದಾರಿ ಶಿಕ್ಷಕರದು. ಚರ್ಚಾಕೂಟ ಮತ್ತು ವಾದ–ವಿವಾದಗಳೂ ಕೂಡ ಇಲ್ಲಿ ಪರಿಣಾಮಕಾರಿ. ಇದು ಅವರ ವಿಮರ್ಶಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಚಟುವಟಿಕೆಗಳು ಅವರಿಗೆ ಸಂತೃಪ್ತಿಯನ್ನು ನೀಡುತ್ತವೆ. ಇವೆಲ್ಲವೂ ಸುಲಭವೇನಲ್ಲ. ಸಾಂಧರ್ಭಿಕ ತೊಂದರೆಗಳನ್ನು ಶಿಕ್ಷಕರು ಚಾಕಚಕ್ಯತೆಯಿಂದ ಎದುರಿಸಿ ಸಮತೋಲನವನ್ನು ಕಾಪಾಡಿಕೊಂಡು ಮುಂದೆ ಸಾಗಬೇಕು.

ಒಂದೇ ರೀತಿಯ ಮಕ್ಕಳಿರುವ ತರಗತಿಯಲ್ಲಿ ಬೋಧನೆ ಸರಳ. ಹಾಗಾಗಿ ಇಲ್ಲಿ ಬೋಧನೆಗೆ ಹೆಚ್ಚು ಸಮಯ ಸಿಗುತ್ತದೆ. ಸನ್ನಿವೇಶ ಹೇಗೇ ಇದ್ದರೂ ಯಾವುದೇ ವಿದ್ಯಾರ್ಥಿಯನ್ನು ಅತೀ ಹೊಗಳುವುದಾಗಲೀ ಅಥವಾ ಅತೀ ತೆಗಳುವುದಾಗಲೀ ಮಾಡಬಾರದು. ಯಾರಿಗೂ "ಇವನು ಇಂತಹವನು" ಎಂಬ ಹಣೆಪಟ್ಟಿಯನ್ನು ಹಾಕಬಾರದು. ಎಲ್ಲರನ್ನೂ ಸಮಾನವಾಗಿ ಕಾಣಬೇಕು. ವೈವಿಧ್ಯತೆ ಇರುವ ತರಗತಿಗಳಲ್ಲೂ ಬಹಳಷ್ಟು ಪ್ರಯೋಜನವಿದೆ. ವಿದ್ಯಾರ್ಥಿಗಳು ಸಕ್ರಿಯವಾಗಿರಲು, ಪ್ರತಿಭಾವಂತರಿಂದ ಹಿಂದುಳಿದ ಮಕ್ಕಳು ಪ್ರೇರಣೆ ಹೊಂದಲು, ಎಲ್ಲರ ಕುರಿತ ಸಹನೆ, ಮೆಚ್ಚುಗೆಯನ್ನು ಬೆಳೆಸಿಕೊಳ್ಳಲು ಈ ತರಗತಿಗಳಲ್ಲಿ ಸಾಧ್ಯವಿದೆ.

**ಬೋಧನಾಶಾಸ್ತ್ರದ ನಿಹಿತಾರ್ಥಗಳು**

- ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ವೈಯಕ್ತಿಕ ಮಾಹಿತಿಯನ್ನು– ಸಾಮರ್ಥ್ಯಗಳು, ಆಸಕ್ತಿ, ಧೋರಣೆಗಳು, ಅಭಿಕ್ಷಮತೆ, ಮತ್ತು ಇತರ ವ್ಯಕ್ತಿತ್ವದ ವಿಶೇಷತೆಗಳು– ಪಡೆದುಕೊಳ್ಳಬೇಕು.
- ಬೋಧನಾ–ಕಲಿಕಾ ಪ್ರಕ್ರಿಯೆಗಳು ನಮ್ಯತೆಯಿಂದ ಕೂಡಿದ್ದು, ಪಠ್ಯಕ್ರಮಕ್ಕೆ ಅನುಗುಣವಾಗಿರಬೇಕು. ವೈವಿಧ್ಯವಾದ ಬೋಧನಾ ವಿಧಾನಗಳನ್ನು, ತಂತ್ರೋಪಾಯಗಳನ್ನು ಮತ್ತು ಮಾರ್ಗೋಪಾಯಗಳನ್ನು–

ಕ್ಷೇತ್ರಭೇಟಿ ಮತ್ತು ಗುಂಪು ಚಟುವಟಿಕೆ ಇತ್ಯಾದಿ– ಅನ್ವಯಿಸಿಕೊಳ್ಳಬೇಕು.

- ವೈಯಕ್ತಿಕ ಗಮನ ಮುಖ್ಯ ಬೋಧನೆಯ ಅನಿವಾರ್ಯ ಭಾಗವಾಗಿರಬೇಕು.
- ವಿಶೇಷ ಬೋಧನೆ, ಸೇತುಬಂಧ ಕಾರ್ಯಕ್ರಮ, ನೈದಾನಿಕ ಪರೀಕ್ಷೆ ಮತ್ತು ಪರಿಹಾರ, ಮಾರ್ಗದರ್ಶನ ಮತ್ತು ಸಮಾಲೋಚನೆ–ಇವೆಲ್ಲವನ್ನೂ ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ತರಗತಿಯ ಗಾತ್ರವನ್ನು ನಿರ್ಧರಿಸುವ ಸ್ವಾತಂತ್ರ್ಯ ಶಿಕ್ಷಕರಿಗೆ ಇರಬೇಕು.
- ವಿದ್ಯಾರ್ಥಿಗಳು ತಮ್ಮ ಸಂಸ್ಕೃತಿಯನ್ನು ಉಳಿಸಿ ಇತರ ಸಂಸ್ಕೃತಿಯನ್ನು ಗೌರವಿಸಲು, ನಾಗರಿಕ ಸಮಾಜ ನಿರ್ಮಾಣ ಮಾಡಲು, ಯಾವುದೇ ಭಿನ್ನಾಭಿಪ್ರಾಯಗಳು ಗುಂಪಿನ ಪ್ರೀತಿ, ವಿಶ್ವಾಸವನ್ನು ಕಲಕದಂತೆ ಸಮತೋಲನ ಕಾಪಾಡಲು ಶಿಕ್ಷಕರು ಗಮನಹರಿಸಬೇಕು.
- ವಿದ್ಯಾರ್ಥಿಗಳ ರೂಢಿಗತ ಮತ್ತು ಸಾಂಪ್ರದಾಯಿಕ ನಡೆ–ನುಡಿಗಳು, ಜನಾಂಗೀಯ ಆಚರಣೆಗಳು ಮತ್ತು ಆಹಾರಾಭ್ಯಾಸ – ಇವುಗಳು ತರಗತಿಯ ಶಾಂತಿಯನ್ನು ಕದಡದಂತೆ ನೋಡಿಕೊಳ್ಳಬೇಕು.
- ಯಾವುದೇ ಪೂರ್ವಾಗ್ರಹವಿಲ್ಲದೆ ಅಧ್ಯಾಪಕರು ಮುಕ್ತವಾದ ವೈಚಾರಿಕತೆಗೆ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಜನಾಂಗೀಯ ಭಾವನೆಗಳಿಗೆ ಮತ್ತು ಮೌಲ್ಯಗಳ ಸಹಿಷ್ಣುತೆಗೆ ಮಾರ್ಗದರ್ಶನ ನೀಡಬೇಕು.
- ರೂಢಿಗತ ಲಿಂಗಾಧಾರಿತ ಲಕ್ಷಣಗಳನ್ನು ಗುರುತಿಸಿ, ಅದನ್ನು ಮೀರಿ ವಸ್ತುನಿಷ್ಠವಾಗಿ ಆಲೋಚಿಸಿ ವರ್ತಿಸಲು ಸಿದ್ಧಗೊಳಿಸಬೇಕು.
- ತರಗತಿಯಲ್ಲಿ ಯಾವುದೇ ಒಂದು ಜಾತಿ/ಸಮುದಾಯವನ್ನು ಕುರಿತು ಋಣಾತ್ಮಕ ಹೇಳಿಕೆಗಳನ್ನು ಬಳಸದೆ/ ಬಳಸಲು ಬಿಡದೆ, ಎಲ್ಲರನ್ನೂ ಪ್ರೀತಿಯ ನೆಲೆಯಲ್ಲೇ ಒಂದುಗೂಡಿಸುವ ಮನೋಭಾವವನ್ನು ಹುಟ್ಟುಹಾಕಬೇಕು.
- ತರಗತಿಯನ್ನು, ಗ್ರಂಥಾಲಯವನ್ನು, ಬೆಳಗಿನ ಪ್ರಾರ್ಥನೆಗೆ ಸೇರುವ ಜಾಗವನ್ನು ನಾಗರಿಕತೆಗಳ, ಸಾಂಸ್ಕೃತಿಕ ಪರಂಪರೆಗಳ ಚಿತ್ರಗಳು, ಮಾಹಿತಿಗಳು ಮತ್ತು ಅದನ್ನು ಕುರಿತಾದ ಮೆಚ್ಚುಗೆಯ ಲೇಖನಗಳು ಇವುಗಳಿರುವ ಬುಲೆಟಿನ್ ಬೋರ್ಡ್‌ಗಳಿಂದ, ಚಿತ್ರಪಟಗಳಿಂದ, ನಕ್ಷೆಗಳಿಂದ ಅಲಂಕರಿಸಬೇಕು. ತರಗತಿಗಳಲ್ಲಿ ಅವುಗಳ ಕುರಿತಾದ ಚರ್ಚೆಯನ್ನು ಮುಂದುವರಿಸಬೇಕು.
- ಶಿಕ್ಷಕರು ಮಕ್ಕಳಿಗೆ ನೀಡುವ ಮನೆಗೆಲಸಗಳು ಮಕ್ಕಳ ಸಂಸ್ಕೃತಿಗೆ ಸಂಬಂಧಿಸಿದುದಾಗಿದ್ದು, ಅವುಗಳನ್ನು ತರಗತಿಯಲ್ಲಿ ಸಂಪನ್ಮೂಲವಾಗಿ ಬಳಸಿಕೊಳ್ಳಬೇಕು. ಅದನ್ನು ಪರಸ್ಪರ ಮೆಚ್ಚುಗೆಯ ಹಿನ್ನೆಲೆಯಲ್ಲಿ ಪ್ರೋತ್ಸಾಹಿಸಬೇಕು.
- ಭಿನ್ನ ಸಮುದಾಯದ/ ಜನಾಂಗದ ಮಕ್ಕಳನ್ನು ಒಟ್ಟಿಗೆ ಕೂರಿಸಿದ ಮಾತ್ರಕ್ಕೆ ಸೌಹಾರ್ದತೆ ಬೆಳೆಯುವುದಿಲ್ಲ. ವೈವಿಧ್ಯತೆಯನ್ನು ಪೋಷಿಸುವ ಹಿನ್ನೆಲೆಯಲ್ಲಿ ಚಟುವಟಿಕೆಗಳನ್ನು ಯೋಜಿಸಿ ಕಾರ್ಯಗತಗೊಳಿಸಬೇಕು. ವಿದ್ಯಾರ್ಥಿಗಳು ಮೊದಲಿಗೆ ವೈಯಕ್ತಿಕ ವಿಚಾರಗಳನ್ನು ಪರಸ್ಪರ ತಿಳಿದುಕೊಂಡು, ನಂತರದಲ್ಲಿ ಒಟ್ಟಾಗಿ ಸೇರಿ, ಗುರಿಯೆಡೆಗೆ ಸಾಗುವ ಪ್ರಯತ್ನವನ್ನು ಮಾಡಬೇಕು. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಇತರ ಸಂಸ್ಕೃತಿಯವರ ಸ್ನೇಹವನ್ನು ಬೇಗನೆ ಗಳಿಸಿಕೊಳ್ಳುವರು.
- ಸಹಕಾರ–ಕಲಿಕಾ ತಂತ್ರವನ್ನು ಬಳಸಿದಾಗ ಭಿನ್ನ ಜನಾಂಗದವರೊಡನೆ ಸೌಹಾರ್ದತೆಯನ್ನು ಸಾಧಿಸುವುದರ ಜೊತೆಗೆ ಸಾಮಾಜಿಕವಾಗಿ ಪ್ರಾತಿನಿಧ್ಯ ಕಡಿಮೆ ಇರುವ ಗುಂಪಿನ ಮಗುವಿಗೂ ಭಾಗವಹಿಕೆಗೆ ಅವಕಾಶ ನೀಡಬಹುದು. ಮಗುವನ್ನು ಸಾರ್ವಜನಿಕವಾಗಿ ತಿದ್ದಬಾರದು, ಮೆಚ್ಚುಗೆಯನ್ನು ಸಾರ್ವಜನಿಕವಾಗಿಯೇ ತಿಳಿಸಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಹದಿಹರೆಯ ಮತ್ತು ಅಂತಿಮ ಹದಿಹರೆಯದ ಹಂತದವರಿಗೆ ಬೋಧನಾಶಾಸ್ತ್ರದ ನಿಹಿತಾರ್ಥ__________

   ಎ. ಮದುವೆ ಮತ್ತು ಕೌಟುಂಬಿಕ ಜೀವನಕ್ಕೆ ತಯಾರಿ

   ಬಿ. ಉನ್ನತ ವ್ಯಾಸಂಗದಲ್ಲಿ ಆಸಕ್ತಿ

   ಸಿ. ಪೋಷಕರ ಮೇಲಿನ ಅವಲಂಬನೆ

   ಡಿ. ಅವಿಧೇಯತೆ

2. ಅಂತಿಮ ಹದಿಹರೆಯದ ಹಂತದವರು__________

   ಎ. ಗೊಂದಲಗೊಂಡ ವರ್ತನೆಗಳನ್ನು ತೋರುತ್ತಾರೆ

   ಬಿ. ಸುಸಂಘಟಿತವಾದ ಚಿಂತನೆಗಳನ್ನು ಮಾಡುತ್ತಾರೆ

   ಸಿ. ವಯಸ್ಕರಂತೆ ವರ್ತನೆಗಳನ್ನು ತೋರುತ್ತಾರೆ

   ಡಿ. ಬಹುಮುಖ ಆಸಕ್ತಿಯನ್ನು ಹೊಂದಿರುತ್ತಾರೆ

3.ಈ ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

ಎ. ಬೋಧನಾಶಾಸ್ತ್ರಕ್ಕೂ ಮತ್ತು ವೈವಿಧ್ಯತೆಗೂ ಯಾವುದೇ ಸಂಬಂಧವಿಲ್ಲ.

ಬಿ. ಶಿಕ್ಷಕರ ಪೂರ್ವಾಗ್ರಹ ಪೀಡಿತ ವರ್ತನೆಯು ಮಕ್ಕಳ ಕಲಿಕೆಯನ್ನು ಬಾಧಿಸುತ್ತದೆ.

ಸಿ. ಸಾಮೀಪ್ಯವೊಂದೇ ಸಾಮಾಜಿಕ ಸೌಹಾರ್ದತೆಯನ್ನು ತರುವುದಿಲ್ಲ.

ಡಿ. ಸಹಕಾರ ಕಲಿಕೆಯು ವಿವಿಧ ಜನಾಂಗೀಯ ಗುಂಪುಗಳ ನಡುವಿನ ಪರಸ್ಪರ ಸಂಬಂಧವನ್ನೇನೂ ಸುಧಾರಿಸುವುದಿಲ್ಲ.

ಇ. ಶಾಲಾ ಪರಿಸರ ಮತ್ತು ತರಗತಿಗಳು ವಿದ್ಯಾರ್ಥಿಗಳ ವೈವಿಧ್ಯಮಯವಾದ ಸಂಸ್ಕೃತಿಯ ಪ್ರಾತಿನಿಧಿಕಗಳಿಂದ ಅಲಂಕೃತಗೊಂಡಿರಬೇಕು.

ಎಫ್. ಸಾಮಾಜಿಕ ಸಂಪ್ರದಾಯಗಳು, ಮತ್ತು ಜನಾಂಗೀಯ ಗುಂಪುಗಳನ್ನು ಆಡಿಕೊಳ್ಳುವುದನ್ನು ಯಾರೂ ಸಹಿಸುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳು ತಿಳಿದಿರಲೇಬೇಕು.

## 1.6.4. ಸಾರಾಂಶಿಸೋಣ

- ಬೋಧನಾ–ಕಲಿಕಾ ಪ್ರಕ್ರಿಯೆಯು ಒಂದು ಕ್ರಿಯಾಶೀಲ ಚಟುವಟಿಕೆಯಾಗಿದ್ದು ಬೋಧನಾಶಾಸ್ತ್ರವು ಈ ಪ್ರಕ್ರಿಯೆಗೆ ವೈಜ್ಞಾನಿಕ ಲಕ್ಷಣವನ್ನು ನೀಡುವುದು.
- ಬೋಧನಾಶಾಸ್ತ್ರವೆಂದರೆ ಬೋಧನೆ–ಕಲಿಕೆಯ ವಿಜ್ಞಾನ
- ವೈವಿಧ್ಯತೆ ಎಂಬ ಕಾರಕವು ಬೋಧನಾಶಾಸ್ತ್ರದ ಅಳವಡಿಕೆಯನ್ನು ಪ್ರಭಾವಿಸುತ್ತದೆ. ವೈವಿಧ್ಯತೆಯೆಂದರೆ, ಸಂಸ್ಕೃತಿ, ಜಾತಿ, ಮತ, ಧರ್ಮ, ಭೌಗೋಳಿಕ ಪ್ರದೇಶಗಳು, ಹಾಗೂ ವ್ಯಕ್ತಿ ಭಿನ್ನತೆಗಳಾದ ಆಸಕ್ತಿ, ಬುದ್ಧಿಶಕ್ತಿ, ಧೋರಣೆ, ಅಭಿಕ್ಷಮತೆ, ಸೃಜನಶೀಲತೆ ಮತ್ತು ಇನ್ನಿತರ ಲಕ್ಷಣಗಳು.

- ಬೋಧನೆಯನ್ನು ಶಿಕ್ಷಕ ಕೇಂದ್ರಿತ, ವಿದ್ಯಾರ್ಥಿ ಕೇಂದ್ರಿತ ಮತ್ತು ಕಲಿಕಾ ಕೇಂದ್ರಿತ ಎಂಬ ಮೂರು ವಿಭಾಗಗಳನ್ನು ಮಾಡಿಕೊಳ್ಳಬಹುದು.
- ಬೋಧನಾಶಾಸ್ತ್ರದ ನಿಹಿತಾರ್ಥಕ್ಕನುಗುಣವಾಗಿ ವೈವಿಧ್ಯತೆಯನ್ನು ಎರಡು ದೃಷ್ಟಿಕೋನದಿಂದ ನೋಡಬೇಕು 1. ವೈವಿಧ್ಯತೆಯನ್ನು ಒಪ್ಪಿಕೊಳ್ಳುವುದು ಮತ್ತು 2. ವೈವಿಧ್ಯತೆಯನ್ನು ಗೌರವಿಸುವುದು.
- ಬೋಧನಾಶಾಸ್ತ್ರದ ನಿಹಿತಾರ್ಥಗಳು ಬಾಲ್ಯಹಂತ, ಹದಿಹರೆಯ ಮತ್ತು ಅಂತಿಮ ಹದಿಹರೆಯದ ಹಂತದವರಿಗೆ ಭಿನ್ನವಾಗಿವೆ. ಅವುಗಳ ಪ್ರಕಾರ ಯಾವುದೇ ಕಾರಣಕ್ಕೂ ಶಿಕ್ಷಕರು ಪೂರ್ವಾಗ್ರಹ ಪೀಡಿತರಾಗಬಾರದು, ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡಬಾರದು. ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಬೇಕು. ವಿದ್ಯಾರ್ಥಿಗಳನ್ನು ಧನಾತ್ಮಕ ದೃಷ್ಟಿಕೋನದಿಂದ ನೋಡಬೇಕು. ಮಕ್ಕಳಿಗೆ ಮುಜುಗರವಾಗುವ ಚಟುವಟಿಕೆಗಳನ್ನಾಗಲೀ, ಮನೆಗೆಲಸವನ್ನಾಗಲೀ ನೀಡಬಾರದು. ವೈವಿಧ್ಯತೆಯನ್ನು ಮಕ್ಕಳು ಇಷ್ಟಪಡುವಂತಹ ಪ್ರಶಂಸಿಸುವಂತಹ ಬೋಧನಾ ವಿಧಾನ, ತಂತ್ರಗಳು ಮತ್ತು ಮಾರ್ಗೋಪಾಯಗಳನ್ನು ಬಳಸಿಕೊಳ್ಳಬೇಕು.

## 1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1.ಡಿ 2.ಸಿ 3.ಎ 4.ಬಿ 5.ಡಿ 6.ಎ 7.ಎ 8.ಡಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1.ಎ 2. ಬಿ 3. ಎ–√ ಬಿ– X ಸಿ–√ ಡಿ– X, ಇ–√ ಎಫ್–√

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1.ಸಿ 2.ಎ,

3. ಎ– X ಬ– √ ಸಿ– √ ಡಿ– X ಇ– √ ಎಫ್–√

## 1.6.6. ಘಟಕಾಂತ್ಯ ಅಭ್ಯಾಸಗಳು

1. ಬೋಧನಾಶಾಸ್ತ್ರವೆಂದರೇನು? ತರಗತಿಯ ವೈವಿಧ್ಯತೆ ಹಾಗೂ ಬೋಧನಾ ಶಾಸ್ತ್ರದ ನಡುವಿನ ಸಂಬಂದವನ್ನು ವಿವರಿಸಿ.
2. ವೈವಿಧ್ಯತೆಯ ಪರಿಕಲ್ಪನೆಯನ್ನು ಉದಾಹರಣೆಗಳೊಂದಿಗೆ ವಿವರಿಸಿ.
3. ಹದಿಹರೆಯ ಮತ್ತು ಅಂತಿಮ ಹದಿಹರೆಯದ ಹಂತದವರ ವೈವಿಧ್ಯತೆಗಳಿಗೆ ಬೋಧನಾಶಾಸ್ತ್ರದ ನಿಹಿತಾರ್ಥಗಳನ್ನು ಗುರುತಿಸಿ.
4. ಬಾಲ್ಯಹಂತದ ಬೋಧನಾ ವಿಧಾನವು ತರಗತಿಯ ವೈವಿಧ್ಯತೆಯಿಂದ ಹೇಗೆ ಪ್ರಭಾವಿಸಲ್ಪಟ್ಟಿದೆ? ನಿದರ್ಶನಗಳ ಸಹಾಯದಿಂದ ವಿವರಿಸಿ.

## 2.6.7. ಪರಾಮರ್ಶನ ಸೂಚಿ


1. Kirova-Petrova, Anna. Alberta Journal of Educational Research; Edmonton Vol. 46, Iss. 2, (Summer 2000): 99.
2. https://theconversation.com/diversity-in-the-classroom-means-children-develop-differently-33899
3. https://www.ncbi.nlm.nih.gov/books/NBK310550/
4. https://study.com/academy/lesson/how-individual-differences-impact-early-childhood-development.html
5. https://www.learningportal.iiep.unesco.org/en/improve-learning/teachers-pedagogy/appropriate and effective
6. https://www.learningportal.iiep.unesco.org/en/improve-learning/schools-classrooms/schools-conditions
7. https://www.learningportal.iiep.unesco.org/en/improve-curriculum-materials/supplementary-learning materials
8. https://www.learningportal.iiep.unesco.org/en/improve-teachers-pedagogy/preservice teacher training
9. https://www.learningportal.iiep.unesco.org/en/improve-teachers-pedagogy/in-service teacher training
10. Kendall, Frances E. Early Childhood Education Series (ERIC) Diversity in the Classroom: A Multicultural Approach to the Education of Young Children.

# ಬ್ಲಾಕ್ 3 : ಹದಿಹರೆಯದವರ ವಿಚಾರಗಳು ಮತ್ತು ಕಾಳಜಿಗಳು

## ಘಟಕ 1 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಸಾಂಸ್ಕೃತಿಕ ಭಿನ್ನತೆಗಳು ಮತ್ತು ಹದಿಹರೆಯ

### ಘಟಕದ ರಚನೆ


3.1.1. ಕಲಿಕಾ ಉದ್ದೇಶಗಳು

3.1.2. ಪೀಠಿಕೆ

3.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.1.3.1. ಹದಿಹರೆಯದವರ ಮೇಲೆ ಸಾಂಸ್ಕೃತಿಕ ಭಿನ್ನತೆಗಳ ಪ್ರಭಾವ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.1.1.2. ಸಂಸ್ಕೃತಿಯಿಂದ ಪ್ರಭಾವಿತವಾದ ಹದಿಹರೆಯದ ಆಯಾಮಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.1.4. ಸಾರಾಂಶಿಸೋಣ

3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

3.1.6. ಘಟಕಾಂತ್ಯ ಅಭ್ಯಾಸಗಳು

3.1.7. ಪರಾಮರ್ಶನ ಸೂಚಿ


### 3.1.1. ಕಲಿಕಾ ಉದ್ದೇಶಗಳು:

ಈ ಅಧ್ಯಾಯವನ್ನು ಅಭ್ಯಾಸ ಮಾಡಿದ ನಂತರ ವಿದ್ಯಾರ್ಥಿಗಳು ಈ ಕೆಳಕಂಡ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವರು:

- ಹದಿಹರೆಯ ಹಂತದ ಮಹತ್ವವನ್ನು ವಿವರಿಸುವರು;
- ಕುಟುಂಬದ ಅಂತರ್‌ಕ್ರಿಯೆಯ ಮೇಲೆ ಸಾಂಸ್ಕೃತಿಕ ಹಿನ್ನೆಲೆಯ ಪಾತ್ರವನ್ನು ಚರ್ಚಿಸುವರು;
- ಹದಿಹರೆಯದವರ ಶಾಲಾ ವರ್ತನೆಯ ಮೇಲೆ ವಿವಿಧ ಸಂಸ್ಕೃತಿಗಳು ಬೀರುವ ಪ್ರಭಾವವನ್ನು ವರ್ಣಿಸುವರು;
- ಹದಿಹರೆಯದವರ ಸಮವಯಸ್ಕ ಸಂಬಂಧಗಳ ಮೇಲೆ ಸಂಸ್ಕೃತಿಯ ಪ್ರಭಾವವನ್ನು ವಿವರಿಸುವರು;
- ಹದಿಹರೆಯದವರು ವೈಯಕ್ತಿಕ ಬಿಂಬ ರೂಪಿಸಿಕೊಳ್ಳುವಲ್ಲಿ ಸಾಂಸ್ಕೃತಿಕ ಭಿನ್ನತೆಯ ಪರಿಣಾಮವನ್ನು ಚರ್ಚಿಸುವರು;
- ಹದಿಹರೆಯದವರ ಸಂಸ್ಕೃತಿ ಹೇಗೆ ಅವರ ಸ್ವಾವಲಂಬನೆ ಅಥವಾ ಪರಾವಲಂಬನೆಯ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ವಿವರಿಸುವರು;
- ವಿವಿಧ ಸಾಂಸ್ಕೃತಿಕ ಹಿನ್ನೆಲೆಯ ಪರಿಣಾಮವಾಗಿ ಹದಿಹರೆಯದವರಲ್ಲಿನ ನೈತಿಕ ವ್ಯತ್ಯಾಸಗಳನ್ನು ವಿಶ್ಲೇಷಿಸುವರು;
- ಹದಿಹರೆಯದವರ ಅಹಂನ ಮೇಲೆ ಸಂಸ್ಕೃತಿಯ ಪರಿಣಾಮವನ್ನು ಚರ್ಚಿಸುವರು; ಮತ್ತು
- ಸಾಂಸ್ಕೃತಿಕ ಗೊಂದಲ ಹೇಗೆ ವ್ಯಕ್ತಿ ತನ್ನತನವನ್ನು ಗುರುತಿಸುಕೊಳ್ಳುವಲ್ಲಿ ಅಡ್ಡಿಯಾಗುತ್ತದೆ ಎಂಬುದನ್ನು ವಿವರಿಸುವರು.

### 3.1.2. ಪೀಠಿಕೆ

ಹದಿಹರೆಯವು ವಿಕಾಸದ ಒಂದು ಹಂತ. ಬಾಲ್ಯಾವಸ್ಥೆ ಮತ್ತು ವಯಸ್ಕ ಹಂತಗಳ ನಡುವಣ ಸಂಕ್ರಮಣ ಕಾಲವಿದು. ಹದಿಹರೆಯದವರೆಲ್ಲರೂ ದೈಹಿಕ, ಸಾಮಾಜಿಕ ಮತ್ತು ಭಾವನಾತ್ಮಕ ಬದಲಾವಣೆಗಳಿಗೆ ಒಳಗಾಗುತ್ತಾರೆ. ಇದೇ ಸಮಯದಲ್ಲಿ ಅವರು ತಮ್ಮ ಅನನ್ಯತೆ (identity)ಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿರುತ್ತಾರೆ. ವಿಭಿನ್ನ ಹಿನ್ನೆಲೆಗಳುಳ್ಳ ಹದಿಹರೆಯದವರು ಭಿನ್ನ ಸಾಂಸ್ಕೃತಿಕ ರೂಢಿಗಳಿಂದ ಪ್ರಭಾವಿತರಾಗುತ್ತಾರೆ. ಜೊತೆಗೆ ಭಿನ್ನ ಧೋರಣೆಗಳನ್ನುಳ್ಳ ಹೆತ್ತವರ ನಿರೀಕ್ಷೆಯ ಪ್ರಭಾವಗಳಿಗೂ ಒಳಗಾಗುತ್ತಾರೆ. ಈ ಸಾಮಾಜಿಕ ಹಾಗೂ ಸಾಂಸ್ಕೃತಿಕ ಧೋರಣೆಗಳು ವಿಕಾಸದ ಗತಿಯನ್ನು ಬದಲಿಸಬಹುದು. ವ್ಯಕ್ತಿ ಅನನ್ಯತೆ, ಸಾಮಾಜಿಕ ವರ್ತನೆ ಮತ್ತು ಹೆತ್ತವರಿಂದ ದೂರವಾಗುವುದು ಇತ್ಯಾದಿ ಅಂಶಗಳೂ ಹದಿಹರೆಯದವರ ವಿಕಾಸದ ಮೇಲೆ ಪ್ರಭಾವ ಬೀರುತ್ತವೆ.

ಕುಟುಂಬ ಜೀವನ ಹದಿಹರೆಯದವರ ವ್ಯಕ್ತಿತ್ವ ಮತ್ತು ವೈಯಕ್ತಿಕ ಬಿಂಬಗಳ ಬೆಳವಣಿಗೆಗೆ ತಳಹದಿಯಾಗಿದೆ. ಹದಿಹರೆಯದವರ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಮತ್ತು ಸಾಮಾಜಿಕ ವರ್ತನೆಗೆ ಸಾಮಾಜಿಕ ನಿಯಮಗಳು ಮತ್ತು ಮೌಲ್ಯಗಳು ಮೂಲಗಳಾಗಿವೆ. ಹದಿಹರೆಯದವರನ್ನು ಬೆಳೆಸುವಿಕೆ ಅವರ ಜನಾಂಗದ ಸಮೂಹ, ಮೌಲ್ಯಗಳು, ಸಂಪ್ರದಾಯಗಳು ಮತ್ತು ಅವರ ಸಾಮಾಜಿಕ ಸ್ಥಿತಿಗತಿಗಳಿಂದ ಪ್ರಭಾವಿತವಾಗುತ್ತವೆ. ಒಂದು ಕುಟುಂಬದಲ್ಲಿ ಬೆಳೆಯುತ್ತಿರುವ ಹದಿಹರೆಯದವನ ತಾರುಣ್ಯದ ಸ್ವರೂಪ, ಪೋಷಕರ ನಿಯಂತ್ರಣ ಮತ್ತು ಕುಟುಂಬದ ಜವಾಬ್ದಾರಿಗಳು ಅವನ/ಅವಳ ಇತರ ಸಮವಯಸ್ಕರಿಗಿಂತ ಬಿನ್ನವಾಗಿರುತ್ತದೆ. ಹಾಗಾಗಿ ಹದಿಹರೆಯದವರು ಅನನ್ಯತೆಯ ಗೊಂದಲಕ್ಕೆ ಒಳಗಾಗುತ್ತಾರೆ. ಇದು ಕುಟುಂಬದೊಡನೆ ಘರ್ಷಣೆಗೂ ಕಾರಣವಾಗಬಹುದು. ಇದರ ಜೊತೆಗೆ ಹದಿಹರೆಯದವರು ಬದುಕುತ್ತಿರುವ ಸಮುದಾಯದ ಸಂಸ್ಕೃತಿಯೂ ಹದಿಹರೆಯದವನ ವಿಕಾಸ, ವರ್ತನೆ, ಮೌಲ್ಯಗಳು ಹಾಗೂ ನಂಬಿಕೆಗಳ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ. ಕುಟುಂಬದ ಧಾರ್ಮಿಕ ಆಚರಣೆಗಳು ಮತ್ತು ಉತ್ತಮ ಸಂವಹನ ಹದಿಹರೆಯದವರ ಮೇಲೆ ಧನಾತ್ಮಕ ಪ್ರಭಾವ ಬೀರುತ್ತವೆ. ಧನಾತ್ಮಕ ಸಾಂಸ್ಕೃತಿಕ ಮೌಲ್ಯಗಳು ಮತ್ತು ನಂಬಿಕೆಗಳನ್ನು ತಮ್ಮ ಮಕ್ಕಳಲ್ಲಿ ಬೆಳಸುವ ಪೋಷಕರು ಹದಿಹರೆಯದವರ ಆತ್ಮಾಭಿಮಾನ ಮತ್ತು ಶೈಕ್ಷಣಿಕ ಯಶಸ್ಸುಗಳನ್ನು ಹೆಚ್ಚಿಸಲು ಸಹಾಯ ಮಾಡುವರು.

### 3.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ವಿಶ್ವದಲ್ಲಿಯೇ ಅತಿ ಹೆಚ್ಚಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿರುವ ದೇಶ ಭಾರತ, ಆದ್ದರಿಂದ ಹದಿಹರೆಯದವರು ಸಾಂಸ್ಕೃತಿಕ ಭಿನ್ನತೆಯನ್ನು ಅರ್ಥ ಮಾಡಿಕೊಳ್ಳುವ ಮೂಲಕ ತಮ್ಮನ್ನು ತಾವು, ತಮ್ಮ ಕುಟುಂಬ ಹಾಗೂ ವಯಸ್ಕರನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಸಂಸ್ಕೃತಿ ಎಂಬುದು ಸಮಾಜದ ಜನರ ವರ್ತನೆಯ ವಿನ್ಯಾಸಗಳು, ನಂಬಿಕೆಗಳು, ಮನೋಭಾವಗಳು, ಮೌಲ್ಯಗಳು ಮತ್ತು ಪ್ರತ್ಯಾಕ್ಷನುಭವಗಳಿಗೆ ಸಂಬಂಧಿಸಿದೆ. ಸಾಂಸ್ಕೃತಿಕ ಭಿನ್ನತೆಯನ್ನು ಅರ್ಥಮಾಡಿಕೊಳ್ಳುವ ಹದಿಹರೆಯದವರು ಜನರೊಂದಿಗೆ ಉತ್ತಮ ಸಂಬಂಧ ಬೆಳಸಿಕೊಳ್ಳಬಲ್ಲರು. ಸಾಂಸ್ಕೃತಿಕ ಭಿನ್ನತೆಗಳು ಹದಿಹರೆಯದವರ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಮುಂದೆ ವಿವರವಾಗಿ ತಿಳಿಯೋಣ.

### 3.1.3.3. ಹದಿಹರೆಯದವರ ಮೇಲೆ ಸಾಂಸ್ಕೃತಿಕ ಭಿನ್ನತೆಗಳ ಪ್ರಭಾವ:

**1. ಕುಟುಂಬದ ಅಂತರ್‌ಕ್ರಿಯೆಗಳು :** ಭಿನ್ನ ಸಂಸ್ಕೃತಿ ಅಥವಾ ಭಿನ್ನಜನಾಂಗೀಯ ಹಿನ್ನೆಲೆಯ ಕುಟುಂಬಗಳಿಂದ ಬಂದ ಹದಿಹರೆಯದವರು ತಮ್ಮ ಕುಟುಂಬದ ಸಂಸ್ಕೃತಿ ಹಾಗೂ ಸಮುದಾಯದ ಸಂಸ್ಕೃತಿಯ ನಡುವೆ ಸಮತೋಲನವಾದ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ. ಬಹಳ ಸಂದರ್ಭಗಳಲ್ಲಿ, ಮೊದಲ ಪೀಳಿಗೆಯ ಕುಟುಂಬಗಳಿಂದ ಬಂದ ಭಾರತೀಯ ಹದಿಹರೆಯದವರು ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು

ಬಯಸುತ್ತಾರೆ ಮತ್ತು ಇದರ ಪರಿಣಾಮವಾಗಿ, ಅವರ ಕುಟುಂಬದ ಹಿರಿಯರು ತಮ್ಮ ಮಕ್ಕಳು ತಮ್ಮದೇ ಆದ ಸಾಂಸ್ಕೃತಿಕ ಮೌಲ್ಯಗಳು ಮತ್ತು ಒಪ್ಪಿಕೊಳ್ಳುವಂತಹ ವರ್ತನೆಯನ್ನು ಮನೆಯಲ್ಲಿ ಪ್ರದರ್ಶಿಸಬೇಕೆಂದು ಬಯಸುತ್ತಾರೆ.

ಉದಾಹರಣೆಗೆ: ಭಾರತೀಯ ಸಾಂಪ್ರದಾಯಿಕ ಕುಟುಂಬದಿಂದ ಬಂದ ಹದಿಹರೆಯದವನು ಮನೆಯಲ್ಲಿ ಹಿರಿಯರಿಗೆ ತಲೆಬಾಗಿ ನಮಸ್ಕರಿಸುತ್ತಾನೆ. ಆದರೆ ಮನೆಯ ಹೊರಗೆ ಹಿರಿಯರು ಸಿಕ್ಕಾಗ 'ನಮಸ್ಕಾರ' ಎಂದು ಹೇಳಿ ಕೈ ಮುಗಿಯುವುದರ ಮೂಲಕ ಗೌರವಿಸುತ್ತಾನೆ. ಅದ್ದರಿಂದ ಹದಿಹರೆಯದವರು ದೈನಂದಿನ ನಿರೀಕ್ಷೆಗಳನ್ನು ಪೂರೈಸಲು ಮನೆ ಮತ್ತು ಹೊರಗಡೆ ಭಿನ್ನವಾದ ಎರಡೂ ಸಂಸ್ಕೃತಿಯ ವರ್ತನೆಗಳನ್ನು ತೋರುತ್ತಾನೆ.

**2. ಶಾಲಾ ವರ್ತನೆ:** ಶಾಲೆಯಲ್ಲಿ ಹದಿಹರೆಯದ ಮಕ್ಕಳು ಭಿನ್ನವಾದ ಸಂಸ್ಕೃತಿಯ ಅನುಭವವನ್ನು ಪಡೆಯುತ್ತಾರೆ. ಅವರು ಈವರೆಗೆ ಬೆಳೆದುಬಂದ ಸಂಸ್ಕೃತಿಗೂ ಶಾಲೆಯ ಸಂಸ್ಕೃತಿಗೂ ತುಂಬಾ ವ್ಯತ್ಯಾಸವಿರುತ್ತದೆ. ನಡೆ, ನುಡಿ ಇವುಗಳನ್ನು ಕುರಿತಂತೆ ಶಾಲೆಯ ನಿರೀಕ್ಷೆಗಳು ಈವರೆಗಿನ ಅಭ್ಯಾಸಕ್ಕಿಂತ ಭಿನ್ನವಾಗಿರುತ್ತದೆ. ಅಲ್ಲದೆ ಹದಿಹರೆಯದವರ ಗೆಳೆಯರ ಗುಂಪಿನ ವರ್ತನೆಗಳೂ ಹೊಸದಾಗಿಯೇ ಕಾಣುತ್ತದೆ. ಶಾಲೆಯಲ್ಲಿ, ಈವರೆಗೆ ಆಡದ ಆಟಗಳು, ಸಂಗೀತ, ನೃತ್ಯ, ನಾಟಕ, ಇತ್ಯಾದಿ ಈವರೆಗೆ ತೆರೆದುಕೊಂಡಿಲ್ಲದ ಚಟುವಟಿಕೆಗಳಲ್ಲೂ ಭಾಗವಹಿಸಬೇಕಾಗುತ್ತದೆ. ಇವೆಲ್ಲವೂ ಹದಿಹರೆಯದವನಿಗೆ 'ನಾನೇಕೆ ಭಿನ್ನ' ಎಂಬ ಭಾವನೆ ಮೂಡಿಸುತ್ತದೆ. ಈ ಎಲ್ಲ ವಿಷಯಗಳಿಗೂ ಹದಿಹರೆಯದವರು ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಹೊಂದಾಣಿಕೆ ನಿಧಾನವಾದರೆ, ಸಾಧ್ಯವಾಗದಿದ್ದರೆ ಮೂದಲಿಕೆ, ಬೆದರಿಕೆ, ಪ್ರತ್ಯೇಕತೆ ಇತ್ಯಾದಿ ಸಮಸ್ಯೆಗಳನ್ನೂ ಎದುರಿಸಬೇಕಾಗುತ್ತದೆ. ಇದು ಶಾಲಾ ಸಾಧನೆಯ ಮೇಲೂ ಪರಿಣಾಮ ಬೀರುತ್ತದೆ.

**3. ಸಮವಯಸ್ಕರ ಸಂಬಂಧಗಳು:** ಹದಿಹರೆಯದವರಲ್ಲಿ ಸಮವಯಸ್ಕರ ಜೊತೆಗಿನ ಸಂಬಂಧಗಳು ಬಹಳ ಪ್ರಮುಖವಾದವುಗಳು. ಸಾಂಸ್ಕೃತಿಕ ಭಿನ್ನತೆಗಳು ಸಮವಯಸ್ಕರೊಡನೆ ಸಂಬಂಧ ಬೆಳೆಸಿಕೊಳ್ಳುವಲ್ಲಿ, ಅದನ್ನು ಉಳಿಸಿಕೊಳ್ಳುವಲ್ಲಿ ಪ್ರಭಾವ ಬೀರುತ್ತವೆ. ಸಂಸ್ಕೃತಿ ಅವರ ಸಂವಹನ ಮತ್ತು ಆಂಗಿಕ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಅಲ್ಲದೆ, ಹದಿಹರೆಯದವರ ಪ್ರಣಯ ಸಂಬಂಧಗಳು, ಘರ್ಷಣೆಗಳು, ಬೇಕು–ಬೇಡಗಳು ಮತ್ತು ತಾರುಣಕ್ಕೆ ಸಂಬಂಧಿಸಿದ ಇತರೆ ವಿಷಯಗಳ ಮೇಲೆ ಸಂಸ್ಕೃತಿಯ ನೇರ ಪರಿಣಾಮವಿದೆ. ಅದ್ದರಿಂದ ಭಿನ್ನ ಸಂಸ್ಕೃತಿಯ ಹದಿಹರೆಯದವರು ಪರಸ್ಪರ ಅರ್ಥ ಮಾಡಿಕೊಳ್ಳುವಲ್ಲಿ ಕಷ್ಟಪಡುತ್ತಾರೆ.

ಉದಾಹರಣೆ: ಭಾರತೀಯ ಸಂಸ್ಕೃತಿಯಲ್ಲಿ ನೇರವಾಗಿ ಕಣ್ಣಲ್ಲಿ ಕಣ್ಣಿಟ್ಟು ಎದುರಿಸಿ ನೋಡುವುದು ಆಕ್ರಮಣ ಪ್ರವೃತ್ತಿ ಹಾಗೂ ಅಗೌರವ ಸೂಚಿಸುತ್ತಾರೆ. ಆದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅದು ಸೂಕ್ಷ್ಮ ಅವಧಾನವನ್ನು ಸೂಚಿಸುತ್ತದೆ.

ವಿವಿಧ ಸಂಸ್ಕೃತಿಯಿಂದ ಬಂದ ಹದಿಹರೆಯದವರು ವಿಭಿನ್ನವಾದ ಸೃಜನಾತ್ಮಕ ಅಭಿವ್ಯಕ್ತಿ ಸಾಮರ್ಥ್ಯ ಹೊಂದಿರುತ್ತಾರೆ. ಜನಪ್ರಿಯ ಸಂಸ್ಕೃತಿ ಈ ಮಕ್ಕಳಲ್ಲಿರುವ ವ್ಯತ್ಯಾಸಗಳನ್ನು ಹೊಡೆದುಹಾಕಿ, ಅವರಲ್ಲಿ ಪರಸ್ಪರ ಹೊಂದಾಣಿಕೆ ತರಲು ಪ್ರಯತ್ನಿಸುತ್ತದೆ.

**4. ವೈಯಕ್ತಿಕ ಬಿಂಬ:** ಸಾಂಸ್ಕೃತಿಕ ಭಿನ್ನತೆಗಳು ಹದಿಹರೆಯದವರು ತಮ್ಮನ್ನು ತಾವು ಹೇಗೆ ಗ್ರಹಿಸುತ್ತಾರೆ ಎಂಬುದರ ಮೇಲೆ ಪರಿಣಾಮ ಬೀರುತ್ತವೆ. ಇದರ ಪರಿಣಾಮವಾಗಿ ಅವರು ತಮಗೆ ಇಷ್ಟವಾಗುವ ವಿಶಿಷ್ಟಗುಣಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಅಥವಾ ತಮಗೆ ಸೂಕ್ತವಾದ ರೀತಿಯಲ್ಲಿ ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹದಿಹರೆಯದವರು 'ಇತರರು ತಮ್ಮನ್ನು ಮೆಚ್ಚಿಕೊಳ್ಳಬೇಕು'(ಸ್ವೀಕೃತಿ) ಎಂಬ ತಮ್ಮ ಅಗತ್ಯಕ್ಕಾಗಿ ಹೋರಾಡುತ್ತಾರೆ. ಉದಾಹರಣೆಗೆ: ಶಾಲೆಯಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಲು ಸಾಧ್ಯವಾಗದಿರುವ ಹದಿಹರೆಯದವನು ನಾಚಿಕೆ ಪಟ್ಟುಕೊಳ್ಳುತ್ತಾನೆ. ಇದರಿಂದ ಅವನ ಆತ್ಮಾಭಿಮಾನ ಕಡಿಮೆಯಾಗಿ ಇತರೆ ಹದಿಹರೆಯದವರೊಡನೆ ಪರಿಣಾಮಕಾರಿಯಾಗಿ ಅಂತರ್‌ಕ್ರಿಯೆ ನಡೆಸಲು ಅವನಿಗೆ

ಕಷ್ಟವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಹಿರಿಯರು, ಅಧ್ಯಾಪಕರು, ಹೆತ್ತವರು, 'ಅವನಿಗೆ ಈಗ ಇಂಗ್ಲಿಷ್ ಬಾರದೆ ಇರಬಹುದು, ಅವನು ಮುಂದೆ ಕಲಿಯುತ್ತಾನೆ, ಎಂದು ಹೇಳುತ್ತಲೇ 'ಅವನ ಭಾಷೆಯಲ್ಲಿ ಅವನು ಅದೆಷ್ಟು ಚೆನ್ನಾಗಿ ಮಾತನಾಡುತ್ತಾನೆ ಎಂಬುದನ್ನು ಗಮನಿಸು, ಅದೆಷ್ಟು ಚೆನ್ನಾಗಿ ಹಾಡುತ್ತಾನೆ ಕೇಳು' ಇತ್ಯಾದಿ ಪ್ರೋತ್ಸಾಹಕ ಮಾತುಗಳಿಂದ, ಹದಿಹರೆಯದವರನ್ನು ತಿದ್ದುವುದು ಮಾತ್ರವಲ್ಲದೆ, ಇತರರ ಸಂಸ್ಕೃತಿಯ ಅಂಶಗಳನ್ನು ಗುರುತಿಸುವುದನ್ನೂ ಪ್ರಶಂಸಿಸುವುದನ್ನೂ ವಿಜೃಂಭಿಸುವುದನ್ನೂ ಕಲಿಸಬೇಕಾಗುತ್ತದೆ. ಇದು ಸಮಾಜದ ಹಿರಿಯ ಪೀಳಿಗೆಯ ಕರ್ತವ್ಯ.

**5. ಸ್ವಾವಲಂಬನೆ ವಿರುದ್ಧ ಪರಾವಲಂಬನೆ:** ಕೆಲವು ಕುಟುಂಬಗಳಲ್ಲಿ ಮಕ್ಕಳು ಸ್ವತಂತ್ರವಾಗಿ ಬೆಳೆಯುತ್ತಾರೆ. ಮತ್ತೆ ಕೆಲವು ಕುಟುಂಬಗಳಲ್ಲಿ ಎಲ್ಲವನ್ನೂ ಕುಟುಂಬದ ಇತರ ಸದಸ್ಯರೇ ಮಾಡಿಕೊಡುವುದರಿಂದ ಪರಾವಲಂಬನೆ ಬೆಳೆದು ಬಿಟ್ಟಿರುತ್ತದೆ. ಈ ಸ್ವಾವಲಂಬನೆ–ಪರಾವಲಂಬನೆ ಬೇರೆ ಬೇರೆ ಮಟ್ಟದಲ್ಲಿರುತ್ತದೆ. ಕೆಲವು ಕುಟುಂಬಗಳಲ್ಲಿ ಒಂದು ಲೋಟ ನೀರು ಕುಡಿಯಬೇಕಾದರೂ ಯಾರಾದರೂ ಮಗು ಇರುವಲ್ಲಿಗೆ ತಂದುಕೊಟ್ಟು ಅಭ್ಯಾಸ ಮಾಡಿರುತ್ತಾರೆ. ಮತ್ತೆ ಕೆಲವು ಕುಟುಂಬಗಳ ಮಕ್ಕಳು ತಮ್ಮ ಶಿಕ್ಷಣದ ವೆಚ್ಚವನ್ನು ತಾವೇ ಭರಿಸುವ ಸನ್ನಿವೇಶಗಳೂ ಇರುತ್ತವೆ. ಹೀಗೆ ಸ್ವಾವಲಂಬನೆ ಮತ್ತು ಪರಾವಲಂಬನೆಯ ಸನ್ನಿವೇಶ ಕುಟುಂಬ, ಶಾಲೆ, ಸಮುದಾಯ ಇವುಗಳಲ್ಲಿ ಭಿನ್ನವಾದಾಗ ಹದಿಹರೆಯದವರಿಗೆ ಹೊಂದಾಣಿಕೆ ಕಷ್ಟವಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹದಿಹರೆಯದವರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಲಾಗುತ್ತದೆ. ಅವರಿಗೆ ವಾಹನಗಳನ್ನು ಚಲಾಯಿಸಲು ಮತ್ತು ಅರೆಕಾಲಿಕ ಉದ್ಯೋಗಗಳನ್ನು ಮಾಡಲು ಅವಕಾಶ ನೀಡಲಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಇವುಗಳು ತುಂಬಾ ತಡವಾಗಿ ಕಂಡುಬರುತ್ತವೆ. ಒಬ್ಬ ವ್ಯಕ್ತಿ ಎಷ್ಟು ಬೇಗ ಸ್ವಾವಲಂಬಿಯಾಗುತ್ತಾನೆ ಎನ್ನುವುದು ಅವನು ಬೆಳೆದು ಬಂದ ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ.

**6. ನೈತಿಕ ಭಿನ್ನತೆಗಳು:** ಹದಿಹರೆಯದವರಲ್ಲಿ ನೈತಿಕತೆಯನ್ನು ಬೆಳೆಸುವ ಜವಾಬ್ದಾರಿ ಪೋಷಕರದು. ಅವರ ವಿಕಾಸದ ಬೇರುಗಳು ಕುಟುಂಬ ಸಂಸ್ಕೃತಿಯಲ್ಲಿದೆ. ಆದರೆ, ಹದಿಹರೆಯದವರ ವಿಕಾಸಕ್ಕೆ ಕುಟುಂಬದ ಹೊರಗಿನವರ ವರ್ತನೆಗಳೇ ಹೆಚ್ಚು ಕಾರಣವಾಗುತ್ತವೆ. ಹದಿಹರೆಯದವರ ಪೋಷಕರು ಭಿನ್ನಸಂಸ್ಕೃತಿಯ ಹಿನ್ನೆಲೆಯುಳ್ಳವರಾದುದರಿಂದ ಅವರು ಹದಿಹರೆಯದವರಲ್ಲಿ ಬೆಳೆಸುವ ಮೌಲ್ಯಗಳೂ ಭಿನ್ನವಾಗಿರುತ್ತವೆ. ಭಾರತೀಯರಲ್ಲಿ ತಾಯಿ, ತಂದೆ, ಗುರು, ಅತಿಥಿ ಎಲ್ಲರಿಗೂ ದೇವರಿಗೆ ಸಮಾನವಾದ ಸ್ಥಾನವಿದೆ. ಇವರೆಲ್ಲರಿಗೂ ಈ ಮಟ್ಟದ ಪ್ರಾಮುಖ್ಯತೆ ಕೆಲವು ಸಂಸ್ಕೃತಿಗಳಲ್ಲಿ ಇಲ್ಲದಿರಬಹುದು.

**7. ಅಹಂನ ಮೇಲಾಗುವ ಪರಿಣಾಮ:** ತನ್ನ ಯಾವ ವರ್ತನೆಗಳನ್ನು ಕುರಿತು ತಾನು ಹೆಮ್ಮೆ ಪಡಬೇಕು, ಯಾವ ವಿಷಯಗಳಲ್ಲಿ ವಿನಮ್ರನಾಗಿರಬೇಕು ಎಂಬುದನ್ನು ನಿರ್ಧರಿಸಲು ಹದಿಹರೆಯದವರಿಗೆ ಕಷ್ಟವಾಗುತ್ತದೆ. 'ಅಪ್ಪ, ಇವತ್ತು ಟಿಕೆಟ್ ಬುಕ್ ಮಾಡಿಸಲು ಹೋಗಿದ್ದೆನಲ್ಲ, ಕ್ಯೂನಲ್ಲಿ ನಿಂತಿದ್ದೆ, ಒಬ್ಬ ವ್ಯಕ್ತಿ ನಾನು ನೋಡುತ್ತಿದ್ದಂತೆಯೇ ಮೆಲ್ಲಗೆ ನನ್ನ ಮುಂದಿದ್ದವರ ಮಧ್ಯೆ ಸೇರಿಕೊಂಡ. ನಾನು ಎಷ್ಟು ಹೊತ್ತಿನಿಂದ ಕ್ಯೂನಲ್ಲಿ ನಿಂತಿದ್ದೆ! ನನಗೆ ಕೋಪವೇ ಬಂದಿತು. ಸರಿಯಾಗಿ ಬೈದು ಹಿಂದೆ ಕಳಿಸಿದೆ' ಎಂದವನಿಗೆ ಅಪ್ಪ "ಹಾಗೆಲ್ಲಾ ಮಾಡಬಾರದಪ್ಪ" ಎನ್ನುತ್ತಾರೆ. ಏನೋ ಸಾಧಿಸಿದೆ ಎಂದು ಹೇಳಹೊರಟವನ 'ಅಹಂ'ಗೆ ಧಕ್ಕೆ ಬರುತ್ತದೆ. ಏನು ಮಾಡಬೇಕಿತ್ತು ಎಂಬುದು ಸ್ಪಷ್ಟವಾಗುವುದಿಲ್ಲ. ಹಾಗಾದರೆ ಅವನನ್ನು ಕ್ಯೂನಲ್ಲಿ ಮುಂದೆ ಬರಲು ಬಿಟ್ಟು ಒಳ್ಳೆಯವನಾಗಬೇಕೇ? ಅದು ಸರಿಯೇ ಇತ್ಯಾದಿ ವಿಷಯಗಳು ಬೆಳವಣಿಗೆಯ ಬೇರಾವ ಹಂತದಲ್ಲೂ ಕಾಡದಿರುವಷ್ಟು ಇಲ್ಲಿ ಕಾಡುತ್ತದೆ. ನಾನೇನು ಮಾಡಿದರೆ ಒಳ್ಳೆಯವನಾಗಬಹುದು? ಜನ ನನ್ನನ್ನು ಯಾವಾಗ ಮೆಚ್ಚಬಹುದು? ನಾನು ಹೇಗೆ ಜನಪ್ರಿಯನಾಗಬಹುದು? ಇತ್ಯಾದಿ ವಿಷಯಗಳನ್ನು ಹದಿಹರೆಯದವರು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತಾರೆ. ಈ ಸಮಾಜದಲ್ಲಿ ಏನು ಮಾಡಿದರೆ ಸರಿ, ಏನು ಮಾಡಿದರೆ ತಪ್ಪು ಎಂಬ ನಿರ್ಧಾರವನ್ನು ತೆಗೆದುಕೊಳ್ಳುವುದು ಅವರಿಗೆ ಸಮಸ್ಯೆಯಾಗುತ್ತದೆ. ಒಂದೇ ವರ್ತನೆ ಭಿನ್ನ ಸಂಸ್ಕೃತಿಗಳಲ್ಲಿ ಭಿನ್ನ ರೀತಿಗಳಲ್ಲಿ ಪರಿಗಣಿತವಾಗಬಹುದು. ಉದಾಹರಣೆಗೆ: ಸಿಖ್ ಕುಟುಂಬಗಳಲ್ಲಿ ಅವರ ಹದಿಹರೆಯದ ಮಕ್ಕಳನ್ನು ಬಲವಾದ ಇಚ್ಛಾಶಕ್ತಿಯುಳ್ಳವರಾಗಿ ಮತ್ತು ಅಗತ್ಯವಿದ್ದಾಗ ತಮ್ಮ ಸಮಸ್ಯೆಗಳನ್ನು

ತಾವೇ ಎದುರಿಸುವಂತೆ ಬೆಳೆಸುತ್ತಾರೆ. ಅವರು ತಮ್ಮ ಮಕ್ಕಳಲ್ಲಿ ಆತ್ಮ ಗೌರವವನ್ನು ಬೆಳೆಸುತ್ತಾರೆ. ಆದರೆ, ದಕ್ಷಿಣ ಭಾರತೀಯ ಸಂಸ್ಕೃತಿಯಲ್ಲಿ ವ್ಯಕ್ತಿಯ ಪ್ರತಿಷ್ಠೆ ಅಥವಾ ಹೆಮ್ಮೆಗಿಂತ ಗುಂಪಿನ ಪ್ರತಿಷ್ಠೆಗೆ ಹೆಚ್ಚು ಒತ್ತುಕೊಡುತ್ತಾರೆ. ಆದ್ದರಿಂದ ಸಿಖ್ ಮಕ್ಕಳಿಗೆ ದಕ್ಷಿಣ ಭಾರತೀಯ ಮಕ್ಕಳು ಅಂಜುಬುರುಕರಂತೆ ಕಂಡುಬರುತ್ತಾರೆ. ಅದೇ ರೀತಿ ದಕ್ಷಿಣ ಭಾರತೀಯ ಮಕ್ಕಳು ಸಿಖ್ ಮಕ್ಕಳನ್ನು ತುಂಬಾ ಜಂಬದ ಮಕ್ಕಳೆಂದು ಪರಿಗಣಿಸುತ್ತಾರೆ. ಇದು

**8. ಸಾಂಸ್ಕೃತಿಕ ಗೊಂದಲ:** ತಾರುಣ್ಯದ ವರ್ಷಗಳು ಹದಿಹರೆಯದವರಿಗೆ ತಮ್ಮ ಅನನ್ಯತೆಯನ್ನು ಕಂಡುಕೊಳ್ಳುವ ಕಾಲ. ಮುಖ್ಯವಾಹಿನಿಯ ಸಂಸ್ಕೃತಿಯಿಂದ ಬಾರದೇ ಇರುವ ಮಕ್ಕಳು ತಮ್ಮತನವನ್ನು ಕಂಡುಕೊಳ್ಳುವಲ್ಲಿ ತೊಂದರೆ ಎದುರಿಸುತ್ತಾರೆ. ಒಂದು ಕಡೆ, ಹದಿಹರೆಯದವರು ತಮ್ಮನ್ನು ಕುಟುಂಬದೊಡನೆ ಗುರುತಿಸಿಕೊಳ್ಳುತ್ತಾರೆ. ಮತ್ತೊಂದು ಕಡೆ ಸಮವಯಸ್ಕರೊಡನೆ ಗುರುತಿಸಿಕೊಳ್ಳುತ್ತಾರೆ, ಇದು ಮುಖ್ಯವಾಹಿನಿ ಸಂಸ್ಕೃತಿಯ ಭಾಗವಾಗಿರಬಹುದು. ಜೀವನದ ಈ ಹಂತದಲ್ಲಿ, ವೈಯಕ್ತಿಕ ಭಿನ್ನತೆಗಳು ಎದ್ದು ಕಾಣುತ್ತವೆ.

ವಿಶ್ವದಾದ್ಯಂತ ಬಹುಸಂಸ್ಕೃತಿ ಹರಡುತ್ತಿರುವ ಈ ಕಾಲದಲ್ಲಿ ಬಹಳಷ್ಟು ಪೋಷಕರು ತಮ್ಮ ಕುಟುಂಬ, ಜನಾಂಗ ಅಥವಾ ರಾಷ್ಟ್ರೀಯ ಸಂಸ್ಕೃತಿ ತಮ್ಮ ಬೆಳೆಯುತ್ತಿರುವ ಮಕ್ಕಳ ಮೇಲೆ ಬೀರುತ್ತಿರುವ ಪ್ರಭಾವ ನೋಡಿ ಆಶ್ಚರ್ಯ ಚಕಿತರಾಗಿದ್ದಾರೆ. ಲೈಂಗಿಕ ಪರಿಪಕ್ವತೆಯ ಕಾಲ ಮತ್ತು ಪ್ರಾಢಾವಸ್ಥೆಯನ್ನು ತಲುಪುವಲ್ಲಿನ ಸಮಸ್ಯೆಗಳು ಎಲ್ಲಾ ಹದಿಹರೆಯದವರಿಗೂ ಒಂದೇ ಆಗಿರುತ್ತವೆ. ಸಾಂಸ್ಕೃತಿಕ ಭಿನ್ನತೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಪೋಷಕರು ತಮ್ಮ ಹದಿಹರೆಯದ ಮಕ್ಕಳನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಪರಿಪಕ್ವರಾದ ಪ್ರೌಢರಾಗಿ ಬೆಳೆಯುವಂತೆ ಸಹಾಯ ಮಾಡಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ– 1**

ಹದಿಹರೆಯದವರಿಗೆ ಸಂಬಂಧಿಸಿದ ಕೆಲವು ಸನ್ನಿವೇಶಗಳನ್ನು ಕೆಳಗೆ ಕೊಡಲಾಗಿದೆ. ಹದಿಹರೆಯದವರಲ್ಲಿ ಬದಲಾವಣೆಗಳನ್ನು ತರಲು ಕಾರಣವಾದ ಸಂಸ್ಕೃತಿಯ ಘಟಕಗಳನ್ನು ಗುರುತಿಸಿ:

1. ಸುಮ ಎರಡು ದಿನಗಳಿಂದ ಶಾಲೆಗೆ ಹೋಗದೆ ಮನೆಯಲ್ಲೇ ಇದ್ದಳು. ಕೆಲವು ದಿನಗಳ ಹಿಂದೆ ಅವಳ ಗೆಳತಿಯರು ಮನೆಯಲ್ಲಿ ಹೇಳದೆ ಸಿನಿಮಾಕ್ಕೆ ಹೋಗೋಣ ಎಂದು ತುಂಬಾ ಒತ್ತಾಯಿಸಿದ್ದರು. ಸುಮ ಮನೆಯಲ್ಲಿ ಹೇಳದೆ, ತರಗತಿಗೆ ಚಕ್ಕರ್ ಹಾಕಿ ಅವರೊಡನೆ ಹೋಗಲು ಒಪ್ಪಲಿಲ್ಲ. ಮಾರನೆಯ ದಿನದಿಂದ ಗೆಳತಿಯರು ಅವಳನ್ನು ವಿಚಿತ್ರವಾಗಿ ಆಡಿಕೊಳ್ಳುತ್ತಿದ್ದಾರೆ. ಸರಿಯಾಗಿ ಮಾತನಾಡಿಸುತ್ತಲೂ ಇಲ್ಲ. ಇದರಿಂದ ಸುಮಾ ಖಿನ್ನಳಾಗಿದ್ದಳು. ಅವಳ ಈ ವರ್ತನೆಯನ್ನು ಕಂಡ ತಂದೆತಾಯಿಯರು ಅವಳನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು, 'ನಿನಗೇನಾಗಿದ್ದರೂ ನಾವು ನಿನ್ನೊಡನಿದ್ದೇವೆ, ಏನಾಯಿತು ಹೇಳು' ಎಂದು ಕೇಳಿ, ನಡೆದುದನ್ನೆಲ್ಲಾ ತಿಳಿದು ಸಾಕಷ್ಟು ಧೈರ್ಯ ಹೇಳಿದ ಮೇಲೆ ಸುಮ ಈಗ ಸರಿಯಾಗಿದ್ದಾಳೆ.

2. ನೀರಜ್ ಒಂದು ವಾರದಿಂದಲೂ ಯಾರೊಡನೆಯೂ ಮಾತನಾಡುತ್ತಿಲ್ಲ. ಗೆಳೆಯರೊಡನೆ ಆಡಲೂ ಹೋಗುತ್ತಿಲ್ಲ. ಈವರೆಗೆ ಅತ್ಯಂತ ಹೊಗಳಿಕೆಗೆ ಪಾತ್ರನಾಗಿದ್ದ ಅವನು ಒಮ್ಮೆಗೇ ಬೇರೆಯಾಗಿದ್ದಾನೆ. ಕಾರಣ, ಅವನ ತರಗತಿಯ ಒಬ್ಬ ವಿದ್ಯಾರ್ಥಿ ಹೇಳಿದ ಚಾಡಿ ಮಾತನ್ನು ನಂಬಿ ಅಧ್ಯಾಪಕರು ತರಗತಿಯಲ್ಲಿ ಎಲ್ಲರೆದುರಿಗೆ ಅವನನ್ನು ಥಳಿಸಿದ್ದಾರೆ. ಮೂರು ದಿನಗಳಿಂದ ಅವನ ಗೆಳೆಯ ರೋನಿ ಅವರ ಮನೆಗೆ ದಿನಾ ಸಂಜೆ ಹೋಗಿ ಅವನೊಡನೆ ಕುಳಿತು ಮಾತನಾಡಿ 'ಅದಕ್ಕೆ ಅವನು ಯಾವ ರೀತಿಯೂ ಕಾರಣನಲ್ಲ; ಚಾಡಿ ಹೇಳಿದ ವಿದ್ಯಾರ್ಥಿ ಮತ್ತು ವಿಚಾರಿಸದೆ ನಂಬಿದ ಅಧ್ಯಾಪಕರದೇ ತಪ್ಪು' ಎಂಬುದನ್ನು ಮನಗಾಣಿಸಿ ಸಮಾಧಾನ ಮಾಡಿದ್ದಾನೆ. ನಿನ್ನೆಯಿಂದ ನೀರಜ್ ಮೊದಲ ಸ್ಥಿತಿಗೆ ಮರಳುತ್ತಿದ್ದಾನೆ.

3. ಬಶೀರ್ ಮತ್ತು ಸಮೀರರ ಅವಳಿ ಸೋದರರು. ಮೊನ್ನೆಯಷ್ಟೇ ಅವರ ತಾಯಿ ತೀರಿಕೊಂಡರು. ಅವರಿಬ್ಬರೂ ಅತ್ಯಂತ ದುಃಖಿತರಾಗಿ ಅಸಹಾಯಕ ಸ್ಥಿತಿಯಲ್ಲಿ ಸೊರಗಿಹೋಗಿದ್ದರು. ಅವರು ಕೆಲವೇ ದಿನಗಳಲ್ಲಿ ನಡೆಯಲಿದ್ದ ಪರೀಕ್ಷೆಯನ್ನೂ ಬರೆಯುವುದಿಲ್ಲವೆಂಬ ನಿರ್ಧಾರವನ್ನು ಕೇಳಿ ಅವರಿಗೆ ಅತ್ಯಂತ

ಪ್ರೀತಿಪಾತ್ರರಾದ ನೆರೆಹೊರೆಯವರು ಅವರ ಮನೆಗೆ ಓಡಿಹೋದರು. ಸತತವಾಗಿ ಅವರಿಗೆ, ಅವರ ತಂದೆಗೆ ಆರೈಕೆ ಮಾಡಿ, ಸಮಾಧಾನ ಹೇಳಿ, ಪರೀಕ್ಷೆಗೆ ಹೋಗದಿದ್ದರೆ ಆಗುವ ಪರಿಣಾಮಗಳನ್ನು ಪರಿಪರಿಯಾಗಿ ವಿವರಿಸಿ ಪರೀಕ್ಷೆಗೆ ಹೋಗುವಂತೆ ಮನವೊಲಿಸಿದರು.

4. ರೋನಾಲ್ಡನಿಗೆ ಪರೀಕ್ಷೆಯಲ್ಲಿ ಯಾವಾಗಲೂ ಕಡಿಮೆ ಅಂಕಗಳೇ ಸಿಗುತ್ತಿತ್ತು. ಇದರಿಂದಾಗಿ ಶಾಲೆ ಮತ್ತು ಮನೆಯಲ್ಲಿ ಅವನನ್ನು ಕಂಡರೆ ಎಲ್ಲರಿಗೂ ಒಂದು ರೀತಿಯ ತಿರಸ್ಕಾರದ ಭಾವನೆ. ಇದರಿಂದ ಅವನು ಯಾವಾಗಲೂ ಬೇಸರದಿಂದಲೇ ಇರುತ್ತಿದ್ದ. ಇದನ್ನು ಗಮನಿಸಿದ ಇಗರ್ಜಿಯ ಗುರುಗಳೊಬ್ಬರು ಅವನ ಸ್ಥಿತಿಗೆ ನಿಜವಾದ ಕಾರಣವನ್ನು ಕಂಡುಕೊಂಡರು. ಅವನನ್ನು ಹತ್ತಿರ ಕರೆದು, ಬೈಬಲ್ಲಿನ ಒಂದು ಸಣ್ಣ ಭಾಗವನ್ನು ಓದಲು ಹೇಳಿಕೊಟ್ಟು, ಅವನನ್ನು ಹುರಿದುಂಬಿಸಿ ಪೂಜೆಯ ವೇಳೆಯಲ್ಲಿ ಓದುವಂತೆ ಮಾಡಿದರು. ಅವನು ಬಹಳವೇ ಚೆನ್ನಾಗಿ ಓದಿದ. ಗುರುಗಳು ಎಲ್ಲರೆದುರಿಗೆ ರೋನಾಲ್ಡನನ್ನು ಬಾಯಿತುಂಬಾ ಹೊಗಳಿದರು. ಅವನು ಸಿಗುವಾಗಲೆಲ್ಲಾ ಅದೇ ವಿಷಯಕ್ಕೆ ಅವನನ್ನು ಪ್ರಶಂಸಿಸುತ್ತಿದ್ದರು. ರೋನಾಲ್ಡ ಸ್ವಲ್ಪ ಸ್ವಲ್ಪವಾಗಿ ಹೆಚ್ಚು ಅಂಕಗಳನ್ನು ಪಡೆಯಲು ಪ್ರಾರಂಭಿಸಿ, ವರ್ಷದ ಕೊನೆಯ ವೇಳೆಗೆ ಅತಿ ಹೆಚ್ಚು ಅಂಕಗಳನ್ನು ಪಡೆದ. ಇಂದು ಒಬ್ಬ ದೊಡ್ಡ ವೈದ್ಯನಾಗಿ ಜನಸೇವೆ ಮಾಡುತ್ತಿದ್ದಾನೆ.

## 3.1.3.2. ಸಂಸ್ಕೃತಿಯಿಂದ ಪ್ರಭಾವಿತವಾಗುವ ಹದಿಹರೆಯದ ಆಯಾಮಗಳು

ಸಂಸ್ಕೃತಿಯು ಹದಿಹರೆಯದ ವಿಕಾಸ ಮತ್ತು ಬೆಳವಣಿಗೆಯ ಮೇಲೆ, ಆ ಮೂಲಕ ವ್ಯಕ್ತಿತ್ವದ ಎಲ್ಲ ಅಂಶಗಳ ಮೆಲೆಪ್ರಭಾವ ಬೀರುತ್ತದೆ. ಇದರಿಂದ ಸಂಸ್ಕೃತಿ ಬದಲಾದರೆ ವ್ಯಕ್ತಿತ್ವವೂ ಬದಲಾಗುತ್ತದೆ ಎಂಬ ಅಂಶ ಸ್ಪಷ್ಟ. ಹದಿಹರೆಯದ ಕೆಲವು ಗುಣಲಕ್ಷಣಗಳ ಮೂಲಗಳು ಮಾನವನ ಶರೀರರಚನೆಯಲ್ಲಾಗಲೀ ಸಂಜ್ಞಾನಾತ್ಮಕ ರಚನೆಗಳಲ್ಲಾಗಲೀ ಇರದೆ ಸಂಸ್ಕೃತಿಯಲ್ಲಿ ಬೇರೂರಿರುತ್ತದೆ. ಸಂಸ್ಕೃತಿ ಎಂಬುದು ಕಲಿತು ಬರುವಂತಹುದು; ಸಮುದಾಯ ಕಟ್ಟಿಕೊಂಡದ್ದು. ಇದು ವ್ಯಕ್ತಿಯ ಬದುಕಿನ ಎಲ್ಲ ಅಂಶಗಳ ಮೇಲೆ ಪ್ರಭಾವ ಬೀರುತ್ತದೆ. ಉದಾಹರಣೆಗೆ, ಸಾಮಾಜಿಕ ಜವಾಬ್ದಾರಿಗಳು, ಲೈಂಗಿಕ ಅಭಿವ್ಯಕ್ತಿ, ನಂಬಿಕೆಗಳು, ಇತ್ಯಾದಿ. ಜೊತೆಗೆ ವ್ಯಕ್ತಿ–ವ್ಯಕ್ತಿಯನ್ನು ಗುರುತಿಸುವ ಉಡುಗೆ, ವೃತ್ತಿ, ಭಾಷೆ ಇವುಗಳೂ ಸಂಸ್ಕೃತಿಯ ಫಲಗಳೇ ಆಗಿರುತ್ತವೆ.

ಸಂಸ್ಕೃತಿಯು ಹದಿಹರೆಯದವರ ವಿಕಾಸದ ವಿವಿಧ ಆಯಾಮಗಳ ಮೇಲೆ ಪ್ರಭಾವ ಬೀರುತ್ತದೆ. ಇವುಗಳಲ್ಲಿ ಹದಿಹರೆಯದವರ ದೈಹಿಕ, ಜ್ಞಾನಾತ್ಮಕ, ಸಾಮಾಜಿಕ, ಭಾವನಾತ್ಮಕ ವಿಕಾಸ ಹಾಗೂ ಅವರ ಆತ್ಮಗೌರವದ ಮೇಲೆ ಸಂಸ್ಕೃತಿಯ ಪ್ರಭಾವವನ್ನು ಅರ್ಥ ಮಾಡಿಕೊಳ್ಳೋಣ.

**ದೈಹಿಕ ವಿಕಾಸ:** ಹದಿಹರೆಯದ ವಿಕಾಸಾತ್ಮಕ ಬದಲಾವಣೆಗಳಲ್ಲಿ ಲೈಂಗಿಕ ಪಕ್ವತೆ ಪ್ರಮುಖವಾದುದು. ಇದು ಒಂದು ಜೈವಿಕ ವಿದ್ಯಮಾನವಾಗಿ ಕಂಡುಬಂದರೂ ಮಾನವನ ಶರೀರದಲ್ಲಿ ಅದು ಒಂದು ಸಂಕೀರ್ಣಸ್ಥಿತಿಯಲ್ಲೇ ಉಂಟಾಗುವುದು. ಲೈಂಗಿಕ ಪಕ್ವತೆಯ ಸಾಂಸ್ಕೃತಿಕ ಪರಿಣಾಮಗಳನ್ನು ಸಂಶೋಧನೆಗಳ ಫಲಿತಾಂಶಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಬಾಲಕಿಯರಲ್ಲಿ ಲೈಂಗಿಕ ಪಕ್ವತೆಯು ರಜಸ್ವಲೆಯರಾಗುವುದರಿಂದ ಗುರುತಿಸಲ್ಪಡುತ್ತದೆ. ಇವ್ಲೆತ್ ಮತ್ತು ಟಾನರ್(1990) ಎಂಬುವರು ಪ್ರಪಂಚದಾದ್ಯಂತ ಹದಿಹರೆಯದವರ ಲೈಂಗಿಕ ವಿಕಾಸವನ್ನು ಕುರಿತು ಅಧ್ಯಯನ ಮಾಡಿ, ಋತುಮತಿಗಳಾಗುವ ವಯೋಮಾನಕ್ಕೆ ಸಂಬಂಧಿಸಿದಂತೆ ಸಂಸ್ಕೃತಿಗಳ ನಡುವೆ ವ್ಯತ್ಯಾಸವಿದೆ ಎಂದು ಗುರುತಿಸಿದ್ದಾರೆ. ಅಂದರೆ, ಸಂಸ್ಕೃತಿಯು ಋತುಮತಿಯಾಗುವ ವಯೋಮಾನದ ಮೇಲೆ ಪರಿಣಾಮಬೀರುತ್ತದೆ ಎಂದರ್ಥ. ವಿವಿಧ ಸಂಸ್ಕೃತಿಗಳಲ್ಲಿ ಪೌಷ್ಟಿಕ ಆಹಾರ ತೆಗೆದುಕೊಳ್ಳುವ ಪ್ರಮಾಣದಲ್ಲಿ ವ್ಯತ್ಯಾಸಗಳಿವೆ. ಋತುಮತಿಯಾಗುವ ವಯೋಮಾನದಲ್ಲಿ ವ್ಯತ್ಯಾಸವನ್ನು ಐತಿಹಾಸಿಕವಾಗಿಯೂ ಗುರುತಿಸಬಹುದು. ಮುಂದುವರೆದ ದೇಶಗಳಲ್ಲಿ ಬಾಲಕಿಯರು ಮುಂದುವರೆಯುತ್ತಿರುವ ದೇಶಗಳಲ್ಲಿನ ಅದೇ ವಯಸ್ಸಿನ ಬಾಲಕಿಯರಿಗಿಂತ ಬೇಗನೆ ಋತುಮತಿಗಳಾಗುತ್ತಾರೆ. ಉನ್ನತ ಸಮಾಜೋ ಆರ್ಥಿಕ ಸ್ಥಾನಮಾನಗಳ ಕುಟುಂಬಗಳ ಬಾಲಕಿಯರು ಕೆಳಮಟ್ಟದ ಸಮಾಜೋ ಆರ್ಥಿಕ ಸ್ಥಾನಮಾನಗಳ

ಕುಟುಂಬಗಳ ಅದೇ ವಯಸ್ಸಿನ ಬಾಲಕಿಯರಿಗಿಂತ ಬೇಗನೆ ಋತುಮತಿಗಳಾಗುತ್ತಾರೆ. ನಗರ ಪ್ರದೇಶದ ಬಾಲಕಿಯರು ಗ್ರಾಮೀಣ ಪ್ರದೇಶದ ಅದೇ ವಯಸ್ಸಿನ ಬಾಲಕಿಯರಿಗಿಂತ ಬೇಗನೆ ಋತುಮತಿಗಳಾಗುತ್ತಾರೆ. ಏಕೆಂದರೆ, ನಗರ ಪ್ರದೇಶದಲ್ಲಿ ವಾಸಿಸುವವರು ಉತ್ತಮ ಗುಣಮಟ್ಟದ ಆಹಾರವನ್ನು ತೆಗೆದುಕೊಳ್ಳುತ್ತಾರೆ.

**ಸಂಜ್ಞಾನಾತ್ಮಕ ವಿಕಾಸ:**

ಹದಿಹರೆಯದವರ ವಿಕಾಸವನ್ನು ಕುರಿತು ಚರ್ಚಿಸುವಾಗ ಈ ವಿಷಯವನ್ನು ಕುರಿತಂತೆ ನಿರಂತರವಾಗಿ ಚರ್ಚೆಗಳು ನಡೆದಿವೆ. ಇವುಗಳಲ್ಲಿ ಪ್ರಮುಖವಾದವು:

ಪಿಯಾಜೆಯವರ ವಿಕಾಸಾತ್ಮಕ ಹಂತಗಳ ಸಿದ್ಧಾಂತ, ಕೊಹ್ಲಬರ್ಗ್‌ರ ನೈತಿಕ ವಿವೇಚನೆಯ ವಿಕಾಸ ಸಿದ್ಧಾಂತ, ಬುದ್ಧಿಶಕ್ತಿಯ ವಿಕಾಸವನ್ನು ಕುರಿತ ಚರ್ಚೆಗಳು, ಮತ್ತು ಶೈಕ್ಷಣಿಕ ಸಾಧನೆಯನ್ನು ಕುರಿತ ಚರ್ಚೆಗಳು.

ಪಿಯಾಜೆಯವರ ಸಿದ್ಧಾಂತದ ವಿಚಾರಗಳನ್ನು ನೀವು ಈಗಾಗಲೇ ಕಲಿತಿರುವಿರಿ. ಅದನ್ನು ನೆನಪಿಸಿಕೊಳ್ಳಿ. ಅವರ ಪ್ರಕಾರ, ಹದಿಹರೆಯದವರು 'ಮೂರ್ತ ಕಾರ್ಯ ಹಂತ'ದಿಂದ 'ಔಪಚಾರಿಕ ಕಾರ್ಯ ಹಂತ'ಕ್ಕೆ ವಿಕಾಸ ಹೊಂದುವರು. ಈ ಹಂತದ ವೈಶಿಷ್ಟ್ಯಗಳೆಂದರೆ, ಈ ವಯೋಮಾನದವರು ಹೆಚ್ಚು ಅಮೂರ್ತವಾಗಿ ಚಿಂತಿಸಬಲ್ಲವರಾಗಿರುತ್ತಾರೆ. ಇದು ಸುಮಾರು ಹನ್ನೊಂದನೇ ವಯಸ್ಸಿನಿಂದ ವಯಸ್ಕ ಹಂತದವರೆಗೆ ಸಾಗುತ್ತದೆ. ಹದಿಹರೆಯದವರಲ್ಲಿ ಈ ರೀತಿಯ ಸಾಮರ್ಥ್ಯವು ಬೆಳೆಯುವುದು ಎಲ್ಲ ಸಂಸ್ಕೃತಿಗಳಲ್ಲಿ ಸಮಾನವಾದ ಅಂಶವಾದರೂ ಇದು ಪ್ರಾರಂಭವಾಗುವ, ಮುಂದುವರೆಯುವ ವಯೋಮಾನಗಳಲ್ಲಿ ಸಂಸ್ಕೃತಿಯಿಂದ ಸಂಸ್ಕೃತಿಗೆ ವ್ಯತ್ಯಾಸವಿದೆ ಎಂದು ಸಂಶೋಧನೆಗಳು ಹೇಳುತ್ತವೆ. ಅಂದರೆ ಸಂಸ್ಕೃತಿಯು ಹದಿಹರೆಯದ ಸಂಜ್ಞಾನಾತ್ಮಕ ಅಂಶಗಳ ಮೇಲೆ ಪ್ರಭಾವ ಬೀರುತ್ತದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಔಪಚಾರಿಕ ಕಾರ್ಯಹಂತವು ಚಿಂತನೆ ವಿಕಾಸವಾಗುವ ಕೊನೆಯ ಘಟ್ಟ ಎಂಬ ಅಂಶವನ್ನು ಸಾಂಸ್ಕೃತಿಕ ಮನೋವಿಜ್ಞಾನಿಗಳೂ ಪ್ರಶ್ನಿಸಿದ್ದಾರೆ. ಔದ್ಯೋಗೀಕರಣಗೊಂಡ ಸಮಾಜಗಳ ಬಹುಮಂದಿ ಹದಿಹರೆಯದವರು ಔಪಚಾರಿಕ ಕಾರ್ಯಹಂತವನ್ನು ತಲುಪಿದರೂ ತಾಂತ್ರಿಕವಾಗಿ ಮುಂದುವರೆಯದ ಸಮಾಜಗಳಲ್ಲಿ ಅದೇ ವಯಸ್ಸಿನ ಹದಿಹರೆಯದವರು ಆ ಸಾಮರ್ಥ್ಯಗಳನ್ನು ತೋರಿಲ್ಲವೆಂಬುದನ್ನು ಸಂಶೋಧನೆಗಳು ಎತ್ತಿ ಹಿಡಿದಿವೆ. ಅಂದರೆ ಅಂತಹ ಕೌಶಲಗಳಿಗೆ ತೆರೆದುಕೊಳ್ಳದ ಸಂಸ್ಕೃತಿಗಳಲ್ಲಿ ಆ ಸಾಮಥ್ಯಗಳು ಬೆಳೆಸಿಕೊಳ್ಳಲಿಲ್ಲ ಎಂಬುದು ಅಂತಹ ಅಚ್ಚರಿಯುಂಟುಮಾಡುವ ವಿಚಾರವೇನೂ ಅಲ್ಲ. ಸಂಶೋಧನೆ ಎತ್ತಿ ಹಿಡಿದಿರುವ ಮತ್ತೊಂದು ಅಂಶವೆಂದರೆ ಭಿನ್ನ ಸಂಸ್ಕೃತಿಯವರ ನಡುವೆ ಬುದ್ಧಿಶಕ್ತಿಯಲ್ಲಿರುವ ವ್ಯತ್ಯಾಸ. ವಿವಿಧ ಸಾಂಸ್ಕೃತಿಕ ಮತ್ತು ಜನಾಂಗೀಯ ಸಂಸ್ಕೃತಿಗಳಲ್ಲಿ ವ್ಯವಸ್ಥಿತವಾಗಿಯೇ ಸಾಮಾನ್ಯ ಬುದ್ಧಿಶಕ್ತಿಯಲ್ಲಿ ವ್ಯತ್ಯಾಸವಿದೆ ಎಂದು ಕೆಲವು ಸಂಶೋಧಕರು ನಿರಂತರವಾಗಿ ವಾದಿಸುತ್ತಾರೆ. ಮತ್ತೆ ಕೆಲವು ಸಂಶೋಧಕರು ಇದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಅವರ ಪ್ರಕಾರ ಬುದ್ಧಿಶಕ್ತಿಯಲ್ಲಿನ ವ್ಯತ್ಯಾಸವು ಇತರ ಅಂಶಗಳಾದ ಪೌಷ್ಟಿಕತೆ ಇತ್ಯಾದಿ ಅಂಶಗಳಿಗೆ ಸಂಬಂಧಿಸಿದುದು. ಅನೇಕ ಅಧ್ಯಯನಗಳ ಪ್ರಕಾರ ಪೌಷ್ಟಿಕತೆ ಮತ್ತು ಹದಿಹರೆಯದವರ ಬುದ್ಧಿಶಕ್ತಿಯ ನಡುವೆ ಸಂಬಂಧವಿದೆ. ದುರ್ಬಲ ಆಹಾರವು ಮೆದುಳಿನ ವಿಕಾಸದಲ್ಲೂ ಮಿತಿಯನ್ನುಂಟುಮಾಡುತ್ತದೆ. ಇದರ ಪರಿಣಾಮವಾಗಿ ಸಂಜ್ಞಾನಾತ್ಮಕ ಕಾರ್ಯಗಳು ಹಿಂದೆ ಬೀಳುತ್ತವೆ. ಹದಿಹರೆಯದವರ ಶಾಲಾಸಾಧನೆಗೆ ಸಂಬಂಧಿಸಿದಂತೆ ಭಿನ್ನ ಸಂಸ್ಕೃತಿಗಳಲ್ಲಿ ವ್ಯತ್ಯಾಸ ಕಂಡುಬಂದಿದೆ. ಬುದ್ಧಿಮತ್ತೆ ಮತ್ತು ಶಾಲಾ ಸಾಧನೆಗಳಿಗೂ ಸಂಬಂಧವಿರುವುದರಿಂದ ಇವುಗಳನ್ನೂ ಮೇಲಿನಂತೆಯೇ ಪರಿಗಣಿಸಬಹುದು. ಪೌಷ್ಟಿಕತೆ, ಬುದ್ಧಿಮತ್ತೆ, ಶಾಲಾಸಾಧನೆಗಳ ನಡುವೆ ಧನಾತ್ಮಕ ಸಂಬಂಧವಿರುವುದರಿಂದ ಸಂಸ್ಕೃತಿಗಳಲ್ಲಿ ಈ ವಿಷಯಗಳ ನಡುವೆ ಸಂಬಂಧ ಕಂಡುಬಂದಿರಬಹುದೇನೋ. ಇದಕ್ಕೆ ಮತ್ತೂ ಹೆಚ್ಚಿನ ಸಂಶೋಧನೆಗಳ ಅಗತ್ಯವಿದೆ. ಶಿಕ್ಷಣದ ಸಾಂಸ್ಕೃತಿಕ ಮೌಲ್ಯ, ಶ್ರಮದಿಂದ ಉತ್ತಮ ಫಲ ಎಂಬುದರ ಕುರಿತ ನಂಬಿಕೆ, ಹೆತ್ತವರ ನಿರೀಕ್ಷೆ ಮತ್ತು ಒತ್ತಾಸೆ, ಸಕ್ರಿಯವಾದ ತರಗತಿ ಬೋಧನೆ ಮುಂತಾದವು ಸ್ಪಷ್ಟವಾಗಿ ಶಾಲಾಸಾಧನೆಗೆ ಕಾರಣವಾಗುತ್ತವೆ. ಇವುಗಳನ್ನು ಹೆಚ್ಚು ಗಣನೆಗೆ ತೆಗೆದುಕೊಳ್ಳುವ ಸಂಸ್ಕೃತಿಗಳಲ್ಲಿ ಹದಿಹರೆಯದವರ ಶೈಕ್ಷಣಿಕ ಸಾಧನೆ ಉತ್ತಮವಾಗಿರಬಹುದು.

**ಸಮಾಜೋ–ಭಾವನಾತ್ಮಕ ವಿಕಾಸ**

ಹದಿಹರೆಯದವರಿಗೆ ಕುಟುಂಬ ಮತ್ತು ಸಮವಯಸ್ಕರ ಗುಂಪುಗಳು ಸಮಾಜೋ–ಭಾವನಾತ್ಮಕ ವಿಕಾಸಕ್ಕೆ ಪ್ರಮುಖ ಸಾಮಾಜಿಕ ಸನ್ನವೇಶಗಳು. ಕುಟುಂಬದ ಸಂದರ್ಭಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳಲ್ಲಿ ಮೂರು ಅಂಶಗಳು ಗಮನಾರ್ಹವಾಗಿವೆ. ಹೆತ್ತವರು ಮತ್ತು ಹದಿಹರೆಯದವರ ಘರ್ಷಣೆಗಳ ಪರಿಣಾಮಗಳು, ಹೆತ್ತವರಿಂದ ಸ್ವಾಯತ್ತತೆ ಪಡೆದುಕೊಳ್ಳುವ ಹಂಬಲ, ಮತ್ತು ಹೆತ್ತವರ ವಾತ್ಸಲ್ಯ ಹಾಗೂ ಅದರ ಪರಿಣಾಮಗಳಿಗೆ ಸಂಬಂಧಿಸಿದಂತೆ ಹೇರಳವಾದ ಅಧ್ಯಯನಗಳಾಗಿವೆ. ಕೊನೆಯದನ್ನು ಎರಡು ರೀತಿಯಲ್ಲಿ ಗುರುತಿಸಲಾಗಿದೆ. ಒಂದು, ದೈಹಿಕವಾಗಿ (ಅಪ್ಪಿಕೊಳ್ಳುವುದು, ಮುದ್ದಾಡುವದು ಈ ವರ್ತನೆಗಳ ಮೂಲಕ ವ್ಯಕ್ತಪಡಿಸುವಿಕೆ) ಮತ್ತೊಂದು ಶಾಬ್ದಿಕ(ಹೊಗಳುವುದು, ಆಸೆಯನ್ನು ವ್ಯಕ್ತಪಡಿಸುವುದು ಇತ್ಯಾದಿ)ವಾಗಿ ವ್ಯಕ್ತಪಡಿಸುವುದು. ಹೆತ್ತವರು ತೋರುವ ವಾತ್ಸಲ್ಯ ಹದಿಹರೆಯದವರಲ್ಲಿ ಮನೋವೈಜ್ಞಾನಿಕ ಸ್ವಾಸ್ಥ್ಯ, ಆತ್ಮಗೌರವದ ಹೆಚ್ಚಳ ಮತ್ತು ಶೈಕ್ಷಣಿಕ ಸಾಧನೆಯಲ್ಲಿ ಉತ್ತಮಿಕೆ ಇತ್ಯಾದಿಗಳೊಂದಿಗೆ ಧನಾತ್ಮಕ ಸಂಬಂಧಗಳನ್ನು ತೋರಿಸಿಕೊಟ್ಟಿದೆ. ಇದಕ್ಕೆ ವಿರುದ್ಧವಾಗಿ ಹೆತ್ತವರ ಪ್ರೀತಿ ವಾತ್ಸಲ್ಯಗಳಿಲ್ಲದಾಗ ಆಕ್ರಮಣಶೀಲತೆ, ದುರ್ವರ್ತನೆ, ಭಾವನಾತ್ಮಕ ಪ್ರತಿಕ್ರಿಯಾಶೀಲತೆ ಇಲ್ಲದಿರುವುದು ಮತ್ತು ಖಿನ್ನತೆಯ ಲಕ್ಷಣಗಳೊಂದಿಗೆ ಋಣಾತ್ಮಕ ಸಂಬಂಧಗಳನ್ನು ತೋರಿಸಿಕೊಟ್ಟಿದೆ. ಹೆತ್ತವರ ವಾತ್ಸಲ್ಯದ ಸಾರ್ವತ್ರಿಕತೆಯ ಹೊರತಾಗಿಯೂ ಹೆತ್ತವರ ವಾತ್ಸಲ್ಯದ ಪ್ರಮಾಣವು ಎಲ್ಲ ಸಂಸ್ಕೃತಿಗಳಲ್ಲಿ ಒಂದೇ ಆಗಿರುವುದಿಲ್ಲ. ಸಾಮಾಜಿಕವಾಗಿ ಹೆಚ್ಚು ಸಂಕೀರ್ಣವೂ ಮತ್ತು ಕೈಗಾರಿಕೀಕರಣಕ್ಕೆ ಒಳಗಾಗಿರುವ ಸಂಸ್ಕೃತಿಗಳಲ್ಲಿ ಹೆತ್ತವರು ಕಡಿಮೆ ವಾತ್ಸಲ್ಯ ತೋರುತ್ತಾರೆ. ಸಂಪ್ರದಾಯಬದ್ಧ ಸಂಸ್ಕೃತಿಗಳವರಿಗೆ ಹೋಲಿಸಿದರೆ ತಿರಸ್ಕಾರ ತೋರುವಷ್ಟು ಕಠೋರರೂ ಆಗಿರುತ್ತಾರೆ. ಈ ವ್ಯತ್ಯಾಸಗಳಿಗೆ ಎರಡು ರೀತಿಯ ವಿವರಣೆಗಳನ್ನು ಕೊಡಲಾಗಿದೆ:

1) ಕೈಗಾರಿಕೀಕೃತ ದೇಶಗಳಲ್ಲಿ ಹೆತ್ತವರು ಸಾಂಪ್ರದಾಯಿಕ ಸಮಾಜಗಳಲ್ಲಿರುವ ಹೆತ್ತವರಿಗಿಂತ ಕೆಲಸದ ಕಾರಣಕ್ಕಾಗಿ ಹೆಚ್ಚು ಹೊತ್ತು ಮನೆಯಿಂದ ಹೊರಗಿರುತ್ತಾರೆ. ಇದು ಹದಿಹರೆಯದವರಲ್ಲಿ ತಮ್ಮ ಬಗ್ಗೆ ಕಾಳಜಿ ಇಲ್ಲ ಎಂಬ ಭಾವನೆ ಹೆಚ್ಚಿಸಲು ಕಾರಣವಿರಬಹುದು.

2) ಕೈಗಾರಿಕೀಕರಣವು ವ್ಯಕ್ತಿ ಪ್ರತ್ಯೇಕತಾವಾದಕ್ಕೆ ಎಡೆ ಮಾಡಿಕೊಟ್ಟಿರಬಹುದು. ಪ್ರತ್ಯೇಕತಾವಾದದ ಒಂದು ಅಂಶವೆಂದರೆ, ವ್ಯಕ್ತಿಯ ಅಗತ್ಯಗಳು ಇತರರ ಅಗತ್ಯಗಳಿಗಿಂತ ಮಿಗಿಲು ಎಂಬ ಪರಿಗಣನೆ. ಆದ್ದರಿಂದ ಇಂತಹ ಸಮಾಜಗಳಲ್ಲಿ ಸಂಗ್ರಾಹಕ ಸಮಾಜ(collectivists society)ದಂತೆ ಪೋಷಕರು ಮಕ್ಕಳಿಗೆ ಹೆಚ್ಚಿನ ಕಾಳಜಿ ಮತ್ತು ವಾತ್ಸಲ್ಯವನ್ನು ತೋರಲಾರರು. ಇದರಿಂದ 'ತಮಗೆ ಬೇಕಾದಂತೆ ನಡೆಯುವ' ಸಮಾಜವು ಸೃಷ್ಟಿಯಾಗುವುದು. ಕುಟುಂಬಕ್ಕೆ ಸಂಬಂಧಿಸಿದ ಇತರರಲ್ಲಿ ಪ್ರೀತಿ ಹೆಚ್ಚಾಗುವುದು. ಹೆತ್ತವರ ಅಗತ್ಯಗಳು ಮತ್ತು ನಿರೀಕ್ಷೆಗಳು ಹಾಗೂ ಹದಿಹರೆಯದವರ ಅಗತ್ಯಗಳು ಮತ್ತು ನಿರೀಕ್ಷೆಗಳ ನಡುವಿನ ಸಂಘರ್ಷ ಎದ್ದು ಕಾಣುವುದು.

3) ಹದಿಹರೆಯದವರ ವಿಕಾಸಕ್ಕೆ ಸಮವಯಸ್ಕರ ಸಂಬಂಧಗಳು ಮತ್ತೊಂದು ಪ್ರಧಾನ ಸಾಮಾಜಿಕ ಸನ್ನಿವೇಶವಾಗಿರುವುದು. ವಿವಿಧ ಸಂಸ್ಕೃತಿಗಳಲ್ಲಿ ಹದಿಹರೆಯದವರು ತಮ್ಮ ಸಮವಯಸ್ಕರೊಂದಿಗೆ ಕಳೆಯುವ ಅವಧಿ ಭಿನ್ನವಾಗಿರುವುದು. ಭಾರತದಲ್ಲಿ ಬಹು ಮಂದಿ ಹೆತ್ತವರು ತಮ್ಮ ಮಕ್ಕಳು ಯಾವ ರೀತಿಯ ಸಮವಯಸ್ಕರ ಸಂಪರ್ಕದಲ್ಲಿದ್ದಾರೆ ಎಂಬುದರ ಕುರಿತು ಎಚ್ಚರಿಕೆ ವಹಿಸುತ್ತಾರೆ.

**ಆತ್ಮಗೌರವ:**

**ಅಭ್ಯಾಸ–I**

ಕೆಳಗಿನ ಸನ್ನಿವೇಶವನ್ನು ಓದಿ ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿ.

ಶಾಲಾ ಮೇಲ್ವಿಚಾರಕರಾದ ಬಸಪ್ಪನವರು ಈ ಸನ್ನಿವೇಶವನ್ನು ಸಾಮಾನ್ಯವಾಗಿ ಹಂಚಿಕೊಳ್ಳುತ್ತಲೇ

ಇರುತ್ತಾರೆ. ಅವರಿಗೆ ಶಾಲೆಗಳಿಗೆ ಭೇಟಿಕೊಟ್ಟು ಮಕ್ಕಳ ಪರಿಸ್ಥಿತಿಯನ್ನು ಗಮನಿಸಿಕೊಳ್ಳುವುದು ಅವರ ಕೆಲಸ. ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲ, ವಿದ್ಯಾರ್ಥಿಗಳ ಆರ್ಥಿಕ ಪರಿಸ್ಥಿತಿ, ಮಾನಸಿಕ ಸ್ವಾಸ್ಥ್ಯ ಇತ್ಯಾದಿ ವಿಷಯಗಳ ಕುರಿತೂ ಅವರಿಗೆ ಕಾಳಜಿ. ಹಾಗಾಗಿ ಅವರು ಒಂದು ಸಲ ಹಳ್ಳಿಯ ಒಂದು ಶಾಲೆಯಲ್ಲಿ ಮಕ್ಕಳ ಮನೆಯಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ತೊಡಗುತ್ತಾರೆ. ಈಗಿನಂತೆ ಮಧ್ಯಾಹ್ನದ ಊಟ, ಉಪಚಾರಗಳ ಸೌಲಭ್ಯವಿಲ್ಲದಿದ್ದ ಕಾಲ ಅದು. ಹಾಗಾಗಿ ಮಕ್ಕಳು ಮಧ್ಯಾಹ್ನದ ಊಟಕ್ಕೆ ಏನು ತಂದಿದ್ದಾರೆ ಎಂದು ಗಮನಿಸುವುದರ ಮೂಲಕ ಅವರ ಸ್ಥಿತಿಗತಿಗಳನ್ನು ತಿಳಿಯಲು ಎಲ್ಲ ಮಕ್ಕಳ ಊಟದ ಡಬ್ಬಿಯನ್ನು ಅವರಿಗೆ ಗೊತ್ತಿಲ್ಲದೆ ತೆರೆದು ನೋಡುವುದೆಂದು ತೀರ್ಮಾನಿಸಿ, ಮಕ್ಕಳಿಗೆ ಆಟವಿರುವ ಸಮಯದಲ್ಲಿ ತೆರೆದು ನೋಡುತ್ತಾರೆ. ಒಂದೊಂದು ಡಬ್ಬಿಯಲ್ಲಿ ಒಂದೊಂದು ರೀತಿಯ ತಿನಿಸು ಇರುತ್ತದೆ. ಒಂದು ಡಬ್ಬಿಯಲ್ಲಿ ಮಾತ್ರ ಏನೂ ಇರುವುದಿಲ್ಲ. ಅವರಿಗೆ ಅರ್ಥವಾಗುವುದಿಲ್ಲ. ಇರಲಿ, ಊಟದ ಸಮಯದಲ್ಲಿ ನೋಡೋಣ ಎಂದು ಕಾದು, ಮಕ್ಕಳನ್ನು ಊಟಕ್ಕೆ ಬಿಟ್ಟಾಗ ಅವರು ಊಟ ಮಾಡುವ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ. 13–14 ವಯಸ್ಸಿನ ಮಂಜ ಖಾಲಿ ಡಬ್ಬ ಹಿಡಿದು ದೂರ ಓಡಿಹೋಗಿ ಸ್ವಲ್ಪ ಹೊತ್ತಿನಲ್ಲೇ ಮರಳಿಬಂದು, ನಲ್ಲಿಯ ಕೆಳಗೆ ಡಬ್ಬಿ ತೊಳೆದು, ಚೀಲದಲ್ಲಿ ಹಾಕಿ, ಬಸಪ್ಪನವರು ಕುಳಿತಿದ್ದ ಕಡೆಗೇ ಓಡಿಬರುತ್ತಿರುತ್ತಾನೆ. ಅವರು 'ಏನು ಮಗು, ಡಬ್ಬಿಯಲ್ಲಿ ಏನು ತಂದಿದ್ದೆ, ಏನು ತಿಂದೆ, ಇಷ್ಟು ಬೇಗ ಊಟ ಆಯಿತೇ' ಎಂದು ಕೇಳಲು ಅವನು ಉತ್ತರ ಕೊಡುವ ಮೊದಲೇ ಉಳಿದ ಮಕ್ಕಳು 'ಅವನು ಹಾಗೇ ಸರ್, ದಿನಾಲೂ ಬೇಗನೆ ಊಟ ಮುಗಿಸಿ, ಓಡಿ ಬಂದುಬಿಡ್ತಾನೆ, ಆಟ ಆಡಲು ಅವಸರ' ಎನ್ನುತ್ತಾರೆ. ಬಸಪ್ಪನವರು ತರಗತಿ ಪ್ರಾರಂಭವಾದ ಮೇಲೆ ಅವನೊಬ್ಬನನ್ನೇ ಕರೆದು 'ಯಾಕೆ ಮಗು, ಡಬ್ಬಿಯಲ್ಲಿ ಏನೂ ಇರಲಿಲ್ಲವಲ್ಲ, ಏಕೆ ಎಂದು ಕೇಳಲು, 'ಹೌದು, ಸರ್, ನಮ್ಮ ಮನೇಲಿ ಒಂದು ಹೊತ್ತಿಗೆ ಆಗುವಷ್ಟು ಮಾತ್ರ ತಿನ್ನಲು ಇರುತ್ತದೆ. ನಾನು ಊಟ ತರುವುದಿಲ್ಲ ಎಂದು ಗೊತ್ತಾದರೆ, ನನ್ನ ಗೆಳೆಯರು ಊಟ ಕೊಡುತ್ತಾರೆ, ಅದು ನನಗೆ ಇಷ್ಟವಿಲ್ಲ, ಅದಕ್ಕೇ ಹಾಗೆ ಮಾಡುತ್ತೇನೆ ಎಂದು ಹೇಳುತ್ತಾನೆ.

ಮಂಜನದು ಹದಿಹರೆಯದ ವಯಸ್ಸು. ಅವನು ಹಾಗೆ ಮಾಡಲು ಕಾರಣ

1. ಅವಮಾನವಾಗುವುದನ್ನು ತಡೆಯಲು
2. ಆತ್ಮಗೌರವವನ್ನು ಉಳಿಸಿಕೊಳ್ಳಲು
3. ಗೆಳೆಯರಿಗೆ ಬೇಸರವಾಗದಿರಲು
4. ಹಸಿವೆಯನ್ನು ತೋರಿಸದಿರಲು

ನಿಮ್ಮ ಉತ್ತರ 2 ಎಂದಾಗಿದ್ದರೆ ಉತ್ತರ ಸರಿ.

ಹಾಗಾದರೆ 'ಆತ್ಮಗೌರವ' ಎಂದರೇನು?

ಇದು ವ್ಯಕ್ತಿ ತನ್ನ ಹಾಗೂ ತನ್ನ ಸನ್ನಿವೇಶದ ಮೌಲ್ಯದ ಕುರಿತು ತಾನೇ ಮಾಡುವ ತೀರ್ಮಾನಗಳು. ಇತರರು ತಮಗೆ ತಿನ್ನಲು ಆಹಾರ ಇಲ್ಲ ಎಂದು ತಿಳಿಯುವುದು, ಅದರಿಂದ ಅವರ ಮನೆಯ ಗೌರವ ಕಡಿಮೆಯಾಗುವುದು ಅವನಿಗೆ ಬೇಕಿರಲಿಲ್ಲ.

ಈ ರೀತಿ ಹದಿಹರೆಯದವರು ತಮ್ಮಲ್ಲಿ ಗುರುತಿಸಿಕೊಂಡಿರುವ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಳ್ಳಲು, ಅವುಗಳಿಗೆ ಧಕ್ಕೆ ಬಾರದಂತೆ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ರೀತಿಯ ಆತ್ಮ ಗೌರವವನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆಯಲ್ಲಿ ಹದಿಹರೆಯದವರು ತಮ್ಮ ಮೌಲ್ಯಗಳನ್ನು ಶ್ರೇಣೀಕೃತ ರೀತಿಯಲ್ಲಿ ವ್ಯವಸ್ಥೆಗೊಳಸಿಕೊಳ್ಳುತ್ತಾರೆ. ಮಧ್ಯ ಬಾಲ್ಯದಿಂದ ಹದಿಗರೆಯದವರೆಗೆ, ಆತ್ಮಗೌರವದ ಕುರಿತಾದ ವ್ಯಕ್ತಿವ್ಯತ್ಯಾಸವು ಹೆಚ್ಚಾಗುತ್ತಾ ಹೋಗಿ ಸ್ಥಿರವಾಗುತ್ತದೆ. ಈ ಎಲ್ಲ ಸನ್ನಿವೇಶಗಳಲ್ಲೂ ಅವರು ಇತರರ ವರ್ತನೆಗಳೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುತ್ತಿರುತ್ತಾರೆ.

ವ್ಯಕ್ತಿಯ ಆತ್ಮಗೌರವವು ಶಾಲೆಯಲ್ಲಿನ ಯಶಸ್ಸು ಅಥವಾ ಉದ್ಯೋಗದಲ್ಲಿನ ಯಶಸ್ಸು, ಗೆಳೆಯರು ಮತ್ತು ಕುಟುಂಬದವರೊಂದಿಗಿನ ತೃಪ್ತಿಕರ ಸಂಬಂಧಗಳು, ಇತರರೊಂದಿಗಿನ ನಮ್ಮ ಅಂತರ್ ಕ್ರಿಯೆಗಳಲ್ಲಿ ನೀತಿಸಮ್ಮತವಾದ ರೀತಿಯ ನಡೆವಳಿಕೆ ಅಥವಾ ಅಪೇಕ್ಷಣೀಯ ವೃತ್ತಿಗಳ ಸನ್ನಿವೇಶಗಳನ್ನು ಆಧರಿಸಿರುತ್ತದೆ ಎಂದು ನಾವು ಸಾಮಾನ್ಯವಾಗಿ ಅಂದುಕೊಳ್ಳುತ್ತೇವೆ. ಆದರೆ, ವ್ಯಾಸಂಗ ವಿಷಯಗಳಲ್ಲಿನ ಮತ್ತು ವೃತ್ತಿಪರ ಕ್ಷೇತ್ರಗಳಲ್ಲಿನ ಸೋಲು ಮುಂತಾದ ಇತರ ಋಣಾತ್ಮಕ ಸನ್ನಿವೇಶಗಳು ವ್ಯಕ್ತಿಯ ಆತ್ಮಗೌರವವನ್ನು ಕುಗಿಸಲು ಕಾರಣವಾಗುತ್ತವೆ. ವ್ಯಕ್ತಿ ವೈಯಕ್ತಿಕವಾಗಿ ಬಹಳ ಮುಖ್ಯ ಎಂದು ಪರಿಗಣಿಸುವ ಮೌಲ್ಯಗಳನ್ನು ತೃಪ್ತಿಪಡಿಸಲು ಆತ್ಮಗೌರವ ಪ್ರಮುಖವಾದುದು ಎಂಬುದು ಕಳೆದ ಹಲವಾರು ವರ್ಷಗಳಿಂದ ಮನೋವಿಜ್ಞಾನಿಗಳ ಅಭಿಪ್ರಾಯ. ಸಾಂಸ್ಕೃತಿಕ ಅಂಶಗಳು ಆತ್ಮ ಗೌರವವನ್ನು ಹೆಚ್ಚಿಸಲು ಕಾರಣವಾಗುತ್ತವೆ ಎಂಬದು ಬಹಳ ಮುಖ್ಯವಾದ ಅಂಶ. ಸಂಶೋಧನಾ ಅಧ್ಯಯನಗಳ ಪ್ರಕಾರ, ವ್ಯಕ್ತಿಯ ಆತ್ಮಗೌರವವು, ಅವರ ಸಾಂಸ್ಕೃತಿಕ ಪರಿಸರಗಳಲ್ಲಿ, ಇತರರು ನಂಬಿರುವ ಮೌಲ್ಯಗಳನ್ನು ಆದ್ಯತೆಯ ಮೇರೆಗೆ ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬುದನ್ನು ಅವಲಂಬಿಸಿರುತ್ತದೆ.

ಮಕ್ಕಳ ಆತ್ಮಗೌರವ ಮತ್ತು ಮಕ್ಕಳ ಕುರಿತ ಪೋಷಕರ ವಾತ್ಸಲ್ಯ ಮತ್ತು ಸ್ವೀಕಾರ ಮನೋಭಾವ ಹಾಗೂ ಪರಿಪಕ್ವ, ನ್ಯಾಯಯುತ, ವಿವೇಚನಾತ್ಮಕ ವರ್ತನೆಯ ನಿರೀಕ್ಷೆ ಇವುಗಳಿಗೆ ಧನಾತ್ಮಕ ಸಂಬಂಧವಿದೆ. ಇದಕ್ಕೆ ಹೊರತಾಗಿ ಪೋಷಕರ ಅತಿಯಾದ ನಿಯಂತ್ರಣ, ಮಧ್ಯಪ್ರವೇಶ ಇವುಗಳು ಮತ್ತು ಮಕ್ಕಳ ಆತ್ಮಗೌರವ ಇವುಗಳಿಗೆ ಋಣಾತ್ಮಕ ಸಂಬಂಧವಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಹೊಂದಿಸಿ ಬರೆಯಿರಿ.

| | | | |
|---|---|---|---|
| a | ಪಿಯಾಜೆಯವರ ಸಂಜ್ಞಾನಾತ್ಮಕ ವಿಕಾಸದ ಹಂತ ಸಿದ್ಧಾಂತ | ಹದಿಹರೆಯದವರ ಸಮಾಜೋ–ಭಾವನಾತ್ಮಕ ವಿಕಾಸವಾಗಿದೆ. | 1 |
| c | ಕೋಹ್ಲಬರ್ಗರವರ ಸಿದ್ಧಾಂತ | ಶಿಕ್ಷಣದ ಸಾಂಸ್ಕೃತಿಕ ಮೌಲ್ಯ | 2 |
| b | ಉತ್ತಮ ಶಾಲಾ ಸಾಧನೆ | ನೈತಿಕ ವಿವೇಚನೆ | 3 |
| d | ಪ್ರಧಾನ ಸಾಮಾಜಿಕ ಸನ್ನವೇಶಗಳೆಂದರೆ ಕುಟುಂಬ ಮತ್ತು ಸಮವಯಸ್ಕರು | ಹದಿಹರೆಯದವರು ಮೂರ್ತಕಾರ್ಯ ಹಂತದಿಂದ ಔಪಚಾರಿಕ ಕಾರ್ಯಹಂತಕ್ಕೆ ವಿಕಾಸಗೊಳ್ಳುವರು. | 4 |

## 3.1.4. ಸಾರಾಂಶಿಸೋಣ:

- ವಿವಿಧ ಹಿನ್ನೆಲೆಯಿಂದ ಬಂದಿರುವ ಹದಿಹರೆಯದವರು ಭಿನ್ನ ಸಾಂಸ್ಕೃತಿಕ ನೀತಿಗಳು ಹಾಗೂ ಸಮಾಜದ ಮಾನದಂಡಗಳು ಮತ್ತು ಮೌಲ್ಯಗಳ ಬಗ್ಗೆ ಹೊಂದಿರುವ ಮನೋಧೋರಣೆಗಳಿಂದ ರೂಪಿತವಾದ ಪೋಷಕರ ನಿರೀಕ್ಷಣೆಯಿಂದ ಪ್ರಭಾವಿತರಾಗುತ್ತಾರೆ.
- ಸಾಂಸ್ಕೃತಿಕ ಭಿನ್ನತೆಗಳು ಹದಿಹರೆಯದವರ ವೈಯಕ್ತಿಕ, ಕುಟುಂಬದ, ಶಾಲೆಯ ಹಾಗೂ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಸಾಂಸ್ಕೃತಿಕ ಭಿನ್ನತೆಯನ್ನು ಅರ್ಥಮಾಡಿಕೊಳ್ಳುವ ಹದಿಹರೆಯದವರು ಜನರೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಳ್ಳಬಲ್ಲರು.
- ಸಾಂಸ್ಕೃತಿಕ ಭಿನ್ನತೆಗಳು, ಕುಟುಂಬದ ಅಂತರ್ ಕ್ರಿಯೆಗಳು, ಶಾಲಾ ವರ್ತನೆ, ಸಮವಯಸ್ಕ ಸಂಬಂಧಗಳು, ವೈಯಕ್ತಿಕ ಬಿಂಬ ಮತ್ತು ಇದರೊಂದಿಗೆ ಸ್ವಾವಲಂಬನೆ ಪರಾವಲಂಬನೆ, ನೈತಿಕ ಭಿನ್ನತೆಗಳು, ಅಹಂನ

ಮೇಲಾಗುವ ಪರಿಣಾಮ ಮತ್ತು ಸಾಂಸ್ಕೃತಿಕ ಗೊಂದಲ ಮುಂತಾದವುಗಳು ಹದಿಹರೆಯದ ಮೇಲೆ ಪ್ರಭಾವ ಬೀರುತ್ತವೆ.

- ಸಾಂಸ್ಕೃತಿಕ ಭಿನ್ನತೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಪೋಷಕರು ತಮ್ಮ ಹದಿಹರೆಯದ ಮಕ್ಕಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲರು ಮತ್ತು ಅವರನ್ನು ಪರಿಪಕ್ವ ಪ್ರೌಢವ್ಯಕ್ತಿಗಳಾಗಿ ರೂಪುಗೊಳ್ಳಲು ನೆರವಾಗಬಲ್ಲರು.

## 3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಕುಟುಂಬ
2. ಸಮವಯಸ್ಕರ ಗುಂಪು
3. ಸಮುದಾಯ
4. ಇಗರ್ಜಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2:**

a - 4, b - 3, c - 2, d - 1

## 3.1.6. ಘಟಕಾಂತ್ಯ ಅಭ್ಯಾಸಗಳು

1. ಹದಿಹರೆಯದವರ ಬೆಳವಣಿಗೆಯ ಮೇಲೆ ಸಾಂಸ್ಕೃತಿಕ ಭಿನ್ನತೆಗಳ ಪಾತ್ರವನ್ನು ಚರ್ಚಿಸಿರಿ.
2. ಕುಟುಂಬದ ಅಂತರ್ ಕ್ರಿಯೆಗಳು ಸಾಂಸ್ಕೃತಿಕ ಭಿನ್ನತೆಗಳಿಂದ ಹೇಗೆ ಪ್ರಭಾವಿತವಾಗುತ್ತವೆ ವಿವರಿಸಿ.
3. ವಿಭಿನ್ನ ಸಂಸ್ಕೃತಿಗಳಿಂದ ಹದಿಹರೆಯದವರ ಶಾಲಾವರ್ತನೆ ಹೇಗೆ ಪ್ರಭಾವಿತವಾಗುತ್ತದೆ ಎಂಬುದನ್ನು ವಿಶ್ಲೇಷಿಸಿ.
4. ಸಮವಯಸ್ಕರ ಸಂಬಂಧಗಳ ಮೇಲೆ ಸಾಂಸ್ಕೃತಿಕ ಭಿನ್ನತೆಗಳ ಪರಿಣಾಮವನ್ನು ಚರ್ಚಿಸಿ.

## 3.1.7. ಪರಾಮರ್ಶನ ಸೂಚಿ


1. Damon verial (2017). How cultural differences influence adolescent development. www.livestrong.com
2. Stuffworks.com how can adolescent development change according to culture and ubringing.
3. Julie Christenson, Role of culture in the influencing of parenting styles, www.livestrong.com.
4. Chen C.S. and Susan Farrugia (2017) Culture and Adolescent Development, online readings in Psychology and Culture, University of California, Irvine.


*********************

# ಬ್ಲಾಕ್ 3 : ಹದಿಹರೆಯದವರ ವಿಚಾರಗಳು ಮತ್ತು ಕಾಳಜಿಗಳು

## ಘಟಕ 2 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಆರ್ಥಿಕ ಬದಲಾವಣೆಗಳು ಮತ್ತು ಹದಿಹರೆಯ

ಘಟಕದ ರಚನೆ


3.2.1. ಕಲಿಕಾ ಉದ್ದೇಶಗಳು

3.2.2. ಪೀಠಿಕೆ

3.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.2.3.1. ಹದಿಹರೆಯದವರ ಮೇಲೆ ಆರ್ಥಿಕ ಬದಲಾವಣೆಗಳ ಪರಿಣಾಮ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.2.3.2. ಹದಿಹರೆಯದವರ ಮೇಲೆ ನಗರೀಕರಣದ ಪರಿಣಾಮ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.2.4. ಸಾರಾಂಶಿಸೋಣ

1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

1.2.6. ಘಟಕಾಂತ್ಯ ಅಭ್ಯಾಸಗಳು

1.2.7. ಪರಾಮರ್ಶನ ಸೂಚಿ


## 3.2.1. ಕಲಿಕಾ ಉದ್ದೇಶಗಳು

ಈ ಅಧ್ಯಾಯವನ್ನು ಅಭ್ಯಾಸ ಮಾಡಿದ ನಂತರ ನೀವು ಈ ಕೆಳಕಂಡ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವಿರಿ:

- ಹದಿಹರೆಯದವರ ಮೇಲೆ ಆರ್ಥಿಕ ಬದಲಾವಣೆಗಳ ಪರಿಣಾಮವನ್ನು ವಿವರಿಸುವಿರಿ;
- ಹದಿಹರೆಯದವರ ಮೇಲೆ ನಗರೀಕರಣದ ಧನಾತ್ಮಕ ಪರಿಣಾಮಗಳನ್ನು ಪಟ್ಟಿಮಾಡುವಿರಿ;
- ಹದಿಹರೆಯದವರ ಮೇಲಾಗುವ ನಗರೀಕರಣದ ದುಷ್ಪರಿಣಾಮಗಳನ್ನು ಚರ್ಚಿಸುವಿರಿ; ಮತ್ತು
- ಹದಿಹರೆಯದವರ ಮೇಲಾಗುವ ನಗರೀಕರಣದ ದುಷ್ಪರಿಣಾಮಗಳಿಗೆ ಉದಾಹರಣೆಗಳನ್ನು ನೀಡುವಿರಿ.

## 3.2.2. ಪೀಠಿಕೆ

ನಿಮ್ಮ ಸುತ್ತಮುತ್ತಲೂ ನೀವು ಅನೇಕ ಬದಲಾವಣೆಗಳನ್ನು ದಿನನಿತ್ಯ ಗಮನಿಸುತ್ತಲೇ ಇರುತ್ತೀರಿ. ಇವುಗಳು ವ್ಯಕ್ತಿ ಮತ್ತು ಸಮಾಜದ ಮೇಲೆ ನಿರಂತರವಾಗಿ ಪ್ರಭಾವ ಬೀರುತ್ತಿರುತ್ತವೆ. ಅವು ಸಾಮಾಜಿಕ, ನೈತಿಕ, ರಾಜಕೀಯ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿರಬಹುದು. ಇವುಗಳಲ್ಲಿ ಪ್ರಮುಖವಾಗಿ ಆರ್ಥಿಕ ಬದಲಾವಣೆಗಳು

ವ್ಯಕ್ತಿ ಮತ್ತು ಸಮಾಜದ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡುತ್ತವೆ. ಒಂದು ಆರ್ಥಿಕ ವ್ಯವಸ್ಥೆಯ ರಚನೆಯಲ್ಲಿ ಉಂಟಾಗುವ ಬದಲಾವಣೆಯೇ ಆರ್ಥಿಕ ಬದಲಾವಣೆ. ಈ ಬದಲಾವಣೆಗಳು ವ್ಯಕ್ತಿಜೀವನದ ಎಲ್ಲ ಹಂತಗಳ ಮೇಲೆ ಪ್ರಭಾವ ಬೀರುತ್ತವಾದರೂ ಹದಿಹರೆಯದವರ ಬದುಕಿನ ಮೇಲೆ ವಿಶೇಷ ಪ್ರಭಾವ ಬೀರುತ್ತವೆ. ಈ ಘಟಕದಲ್ಲಿ ನಾವು ಆರ್ಥಿಕ ಬದಲಾವಣೆಗಳು ಹದಿಹರೆಯದವರ ಬದುಕಿನ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಚರ್ಚಿಸೋಣ.

ಆರ್ಥಿಕ ಬದಲಾವಣೆಗಳು ಹದಿಹರೆಯದವರ ಮೇಲೆ ಪ್ರಭಾವ ಬೀರುತ್ತವೆ ಎಂಬುದಕ್ಕೆ ಸ್ಪಷ್ಟ ಆಧಾರಗಳಿವೆ. ಈ ಬದಲಾವಣೆಗಳು ಬೃಹತ್ ಅಥವಾ ಸ್ಥೂಲ ಸಂದರ್ಭಗಳಿಗಿಂತ ಸೂಕ್ಷ್ಮ ಸಂದರ್ಭಗಳಲ್ಲಿ ಹೆಚ್ಚು ವ್ಯಕ್ತವಾಗುತ್ತವೆ. ಹದಿಹರೆಯದವರ ಕುಟುಂಬ, ಸಮವಯಸ್ಕರು, ಶಾಲೆ ಮತ್ತು ನೆರೆಹೊರೆಯ ಪರಿಸರ ಇವುಗಳೂ ಸೂಕ್ಷ್ಮ ಸಂದರ್ಭಗಳಾದರೆ, ತಲೆಮಾರುಗಳಿಂದ ವರ್ಗಾಯಿಸಲಾಗುವ, ಗುಂಪಿನ ವರ್ತನಾ ವಿನ್ಯಾಸಗಳು, ನಂಬಿಕೆಗಳು ಮತ್ತು ಎಲ್ಲ ರೀತಿಯ ಸಾಂಸ್ಕೃತಿಕ ಕೊಡುಗೆಗಳು ಇತ್ಯಾದಿ ಅಂಶಗಳು ಸ್ಥೂಲ ಸಂದರ್ಭಗಳನ್ನು ಪ್ರತಿನಿಧಿಸುತ್ತವೆ. ಇಂದಿನ ಸಂದರ್ಭದಲ್ಲಿ ನಗರೀಕರಣ, ಜಾಗತೀಕರಣ, ಡಿಜಿಟಲೀಕರಣ ಇವುಗಳೂ ಸ್ಥೂಲ ಸಂದರ್ಭಗಳಾಗುತ್ತವೆ. ಹದಿಹರೆಯದವರ ಮೇಲೆ ಆರ್ಥಿಕ ಬದಲಾವಣೆಗಳ ಪರಿಣಾಮ ಹೆಚ್ಚು ಪ್ರತ್ಯಕ್ಷವಾಗಿರುವುದಕ್ಕಿಂತ ಪರೋಕ್ಷವಾಗಿರುತ್ತವೆ. ಸ್ಥೂಲ ಸಂದರ್ಭಗಳು ಸೂಕ್ಷ್ಮ ಸಂದರ್ಭಗಳನ್ನು ಪ್ರಭಾವಿಸಿ, ಬದಲಾವಣೆಗಳನ್ನುಂಟುಮಾಡಿ, ಈ ಬದಲಾವಣೆಗಳು ಹದಿಹರೆಯದವರನ್ನು ಬಹಳಮಟ್ಟಿಗೆ ಪ್ರಭಾವಿಸುತ್ತವೆ.

## 1.2.3.1. ಹದಿಹರೆಯದವರ ಮೇಲೆ ಆರ್ಥಿಕ ಬದಲಾವಣೆಯ ಪರಿಣಾಮ:

**ಅಭ್ಯಾಸ-II**

- ನೆರೆಮನೆಯ ಗೋಪಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿ ಉನ್ನತ ವ್ಯಾಸಂಗಕ್ಕಾಗಿ ಜರ್ಮನಿಗೆ ಹೋಗಿದ್ದಾನೆ.
- ನನ್ನ ಅತ್ತಿಗೆಯ ಮಗಳು ಎಂ.ಟೆಕ್ ಮುಗಿಸಿ, ಅಮೆರಿಕಾದ ಜನಪ್ರಿಯ ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದಾಳೆ.
- ನೀನು ಬಿ.ಎಸ್.ಸಿ. ಗೆ ಹೋಗುವುದು ಬೇಡ; ಇಂಜಿನಿಯರಿಂಗ್ ಕೋರ್ಸ್ ಮಾಡು, ಒಳ್ಳೆಯ ಕೆಲಸ ಸಿಗುತ್ತದೆ, ಮುಂದೆ ಒಳ್ಳೆಯ ಜೀವನ ಸಂಗಾತಿ ಸಿಗುತ್ತಾಳೆ ಎಂದು ಅಪ್ಪ ಹೇಳುತ್ತಿದ್ದಾರೆ.

ಮೇಲಿನ ಮೂರು ದೃಷ್ಟಾಂತಗಳು ಯಾವ ಕ್ಷೇತ್ರದಲ್ಲಿನ ಪರಿಣಾಮಗಳು ಎಂಬುದನ್ನು ಗುರುತಿಸಿ:

1) ಸಾಮಾಜಿಕ
2) ರಾಜಕೀಯ
3) ಆರ್ಥಿಕ
4) ಶಿಕ್ಷಣ

ನಿಮ್ಮ ಉತ್ತರ '3' ಆಗಿದ್ದರೆ ಸರಿಯಾಗಿದೆ. ಇಂದಿನ ನಮ್ಮ ಬದುಕು, ಅದರಲ್ಲೂ ಹದಿಹರೆಯದ ಹಂತದಲ್ಲಿ ತೆಗೆದುಕೊಳ್ಳಬೇಕಾದ ಪ್ರಮುಖ ನಿರ್ಧಾರಗಳು ಪ್ರಮುಖವಾಗಿ ಈ ಆರ್ಥಿಕ ಕ್ಷೇತ್ರದಲ್ಲಿನ ಬದಲಾವಣೆಗಳನ್ನು ಅವಲಂಬಿಸಿದೆ. ಇವು ಹದಿಹರೆಯದವರ ವಿಕಾಸಾತ್ಮಕ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂದಿನ ಸನ್ನಿವೇಶದಲ್ಲಿ ಆರ್ಥಿಕ ಬದಲಾವಣೆಗಳನ್ನು ದಟ್ಟವಾಗಿ ಕಾಣಿಸುವ ಜಾಗತೀಕರಣ, ಡಿಜಿಟಲೀಕರಣ, ನಗರೀಕರಣ ಮತ್ತು ಕೈಗಾರಿಕೀಕರಣದಂತಹ ಬದಲಾವಣೆಗಳು ಹದಿಹರೆಯದವರ ದೃಷ್ಟಿಯಿಂದ ಪ್ರಮುಖವಾಗುತ್ತವೆ. ಹದಿಹರೆಯದವರು ಈ ಬದಲಾವಣೆಗಳನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಆ ಬದಲಾವಣೆಗಳಿಗೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬುದರ ಮೇಲೆ ಅವರ ಬೆಳವಣಿಗೆ ನಿರ್ಧಾರವಾಗುತ್ತದೆ.

ಸೂಕ್ಷ್ಮ ಸಂದರ್ಭಗಳಲ್ಲಿ ಹದಿಹರೆಯದವರು ಈ ಬದಲಾವಣೆಗಳಿಗೆ ಹೇಗೆ ಪ್ರತಿಕ್ರಿಯೆ ನೀಡುತ್ತಾರೆ, ಈ ಆರ್ಥಿಕ ಸಂದರ್ಭಗಳು ಅವರಲ್ಲಿ ಯಾವ ರೀತಿಯ ವರ್ತನೆಗಳನ್ನು ಅಪೇಕ್ಷಿಸುತ್ತವೆ ಎಂಬುದನ್ನು ನೋಡೋಣ.

ಆರ್ಥಿಕ ಬದಲಾವಣೆಗಳು ಪ್ರಮುಖವಾಗಿ ಶಿಕ್ಷಣ, ವಿರಾಮದ ಬಳಕೆಯ ರೀತಿ, ಸಮವಯಸ್ಕರ ಸಂಬಂಧಗಳು ಮತ್ತು ಕುಟುಂಬ ವ್ಯವಸ್ಥೆ ಮತ್ತು ಸಂಬಂಧಗಳನ್ನು ಅತಿ ಸೂಕ್ಷ್ಮ ಹಂತಗಳಲ್ಲೂ ಪ್ರಭಾವಿಸಿವೆ.

**ಶಿಕ್ಷಣ**

ಆರ್ಥಿಕ ಕ್ಷೇತ್ರದಲ್ಲಿನ ಪ್ರಭಾವದಿಂದ ಶಿಕ್ಷಣದಲ್ಲಿ ಆಗಿರುವ ಪ್ರಮುಖ ಬದಲಾವಣೆ ಎಂದರೆ ಶಿಕ್ಷಣದ ಪರಿಮಾಣಾತ್ಮಕ ಬೆಳವಣಿಗೆ(quantitative development). ಇದು ಆರ್ಥಿಕ ಅಭಿವೃದ್ಧಿಗೆ ಪೋಷಕವಾಗಿದೆಯೇ ಎಂಬುದನ್ನು ಪ್ರಶ್ನಿಸಲಾಗುತ್ತಿದೆ. ಏಕೆಂದರೆ ಇಂದಿನ ಶೈಕ್ಷಣಿಕ ಫಲಿತಗಳು ಹಾಗೂ ಉದ್ಯೋಗ ಮಾರುಕಟ್ಟೆಗಳ ಬೇಡಿಕೆಗಳ ನಡುವೆ ಅಪಹೊಂದಿಕೆಯಾಗಿದೆ. ಜಗತ್ತು ಮುಂದುವರೆಯುತ್ತಿರುವ ಗತಿಯಲ್ಲಿ ಶಿಕ್ಷಣ ಪ್ರಗತಿಯಾಗುತ್ತಿಲ್ಲ. ಜಗತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ನಾಗಾಲೋಟದಲ್ಲಿ ಓಡುತ್ತಿರುವ ಈ ಸಂದರ್ಭದಲ್ಲೂ ಅನೇಕ ಶಿಕ್ಷಕರು ಗಣಕ ಪರಿಜ್ಞಾನಕ್ಕೆ ಸಂಬಂಧಿಸಿದಂತೆ ಅನಕ್ಷರಸ್ಥರಾಗಿಯೇ ಇದ್ದಾರೆ. ಇವರು ಇಂತಹ ವ್ಯವಸ್ಥೆಗೆ ಹದಿಹರೆಯದವರನ್ನು ತಯಾರುಮಾಡುವುದಾದರೂ ಹೇಗೆ? ಹೀಗೆ ಸಮಾಜದ ಆರ್ಥಿಕ ಅಗತ್ಯಗಳಿಗೆ ಅನುಗುಣವಾಗಿ ಶಿಕ್ಷಣವು ಹದಿಹರೆಯದವರನ್ನು ಸಿದ್ಧಗೊಳಿಸುತ್ತಿಲ್ಲ. ಇದರ ಪರಿಣಾಮವನ್ನು ಅನುಭವಿಸುವವರು ಹದಿಹರೆಯದವರು.

**ವಿರಾಮ ಕಾಲದ ಬಳಕೆಯ ಸಂದರ್ಭಗಳು ಮತ್ತು ಸಮವಯಸ್ಕರ ಸಂಬಂಧಗಳಲ್ಲಿ ಬದಲಾವಣೆಗಳು**

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಹದಿಹರೆಯದವರಿಗೆ ಸಾಕಷ್ಟು ವಿರಾಮದ ಸಮಯ ಸಿಗುತ್ತದೆ. ಈ ಸಮಯವನ್ನು ಅವರು ತಮ್ಮ ಬದುಕಿನ ಭವಿಷ್ಯವನ್ನು ಹಸನುಗೊಳಿಸುವ ಅನೇಕ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕಲಿಯುವುದರ ಮೂಲಕ ಶ್ರೀಮಂತಗೊಳಿಸಿಕೊಳ್ಳಬಹುದು. ಕ್ರೀಡೆ, ಕುಟುಂಬದವರೊಡನೆ ತೊಡಗಿಕೊಳ್ಳುವುದು, ವೃತ್ತಿ ಕೌಶಲಗಳ ತರಬೇತಿ, ಸಮಾಜ ಸೇವೆ, ಅರೆ ಕಾಲಿಕ ಉದ್ಯೋಗ ಮಾಡಿ ಪೋಷಕರಿಗೆ ಸಹಾಯ–ಹೀಗೆ ಬೆಳೆಯಲು ಹತ್ತು ಹಲವು ಮಾರ್ಗಗಳಿವೆ. ಇಂದು ಹಾಗಾಗುತ್ತಿಲ್ಲ. ಸಮವಯಸ್ಕ ಹದಿಹರೆಯದವರು ಒಟ್ಟಾಗಿ ಅಷ್ಟೇನೂ ಉಪಯೋಗವಾಗದ ರೀತಿಯಲ್ಲಿ ಮೊಬೈಲ್ ಚಟುವಟಿಕೆಗಳು, ಹರಟೆ, ಇತ್ಯಾದಿಗಳಲ್ಲಿ ಕಾಲಹರಣ ಮಾಡುವುದನ್ನು ನಾವು ಗಮನಿಸುತ್ತಿದ್ದೇವೆ. ಇವರನ್ನು ಸಂಪೂರ್ಣವಾಗಿ ಕಡ್ಡಾಯವಾಗಿ ತೊಡಗಿಸಿಕೊಳ್ಳುವ ಚಟುವಟಿಕೆಗಳೂ ನಮ್ಮ ಸಮುದಾಯದಲ್ಲಿರುವುದಿಲ್ಲ. ಕೆಲವೊಮ್ಮೆ ಅಪವರ್ತನೆಗಳಿಗೆ ಎಡೆಯಾಗುವ ಸಂದರ್ಭಗಳೂ ಇವೆ. ಬದುಕಿನಲ್ಲೇ ಅತ್ಯಂತ ಫಲಪ್ರದವಾದ ಈ ಸಮಯವು ಹೀಗೆ ಪೋಲಾಗಿಬಿಡುತ್ತದೆ.

ಹದಿಹರೆಯದವರ ವಿರಾಮ ಕಾಲಕ್ಕೆ ಸಂಬಂಧಿಸಿದಂತೆ ಅತಿ ಸ್ಪಷ್ಟವಾಗಿ ಕಾಣುವ ಬದಲಾವಣೆ ಎಂದರೆ ಮಾಧ್ಯಮದ ಬಳಕೆಯೇ. ದೂರದರ್ಶನ ಮತ್ತು ದೃಕ್–ಶ್ರವಣ ಮಾಧ್ಯಮಗಳಿಗೆ ಹೊರತಾಗಿ, ಇಂದು ಸಂವಹನ ಮತ್ತು ಅಂತರ ಕ್ರಿಯಾ ಮಾಧ್ಯಮಗಳಾದ ಮೊಬೈಲ್ ಮತ್ತು ಅಂತರ್ಜಾಲಗಳೇ ಯುವಜನರ ಬದುಕನ್ನು ವ್ಯಾಪಕವಾಗಿ ಆವರಿಸಿಬಿಟ್ಟಿವೆ. ಬದುಕಿಗೆ ಅಗತ್ಯವಾಗಿ ಬೇಕಾದ, ಜನರ ಸಂಬಂಧಗಳನ್ನು ಬೆಸೆದು–ಬೆಳೆಸಿಕೊಳ್ಳುವುದು, ಲಲಿತ ಕಲೆಗಳ ಮೂಲಕ ಸ್ವ ಅಭಿವ್ಯಕ್ತಿ, ಮುಖಾಮುಖಿ ಸಂವಹನ ಇವೆಲ್ಲಾ ಗಾಳಿಯಲ್ಲಿ ತೂರಿಹೋಗಿವೆ. ಎದುರಿಗೆ ಸಿಗುವ ಅವಕಾಶಗಳಿರುವಾಗಲೂ ಮೊಬೈಲ್ ಮತ್ತು ಆನ್‌ಲೈನ್ ಗಳ ಮೂಲಕ ಸಂವಹನ, ಅನಗತ್ಯವಾದ ಸಂದೇಶ ರವಾನೆ ಇವು ಓದುವ ಅಭ್ಯಾಸ ಆ ಮೂಲಕ ಚಿಂತನಾ ಕೌಶಲಗಳನ್ನು ಸ್ಥಗಿತಗೊಳಿಸಿವೆ. ಸೈಬರ್ ಬೆದರಿಕೆ, ಕಾಮಪ್ರಚೋದನಾತ್ಮಕ ಅಂಶಗಳು, ನಿಂದೆಗಳಿಗೆ ಅವಕಾಶವಾಗುತ್ತಿರುವುದು ಹದಿಹರೆಯದವರ ಮೇಲೆ ಬಹುಕಾಲ ಉಳಿಯುವ ಋಣಾತ್ಮಕ ಪರಿಣಾಮಗಳನ್ನುಂಟುಮಾಡುತ್ತಿವೆ.

**ವಲಸೆಯ ಸ್ಥಿತಿಗತಿಗಳಲ್ಲಿ ಬದಲಾವಣೆ**

ಇದು ಹದಿಹರೆಯದವರಿಗೆ ಹೊಸ ಸವಾಲುಗಳನ್ನು ಒಡ್ಡುತ್ತಿವೆ. ಜಾಗತಿಕವಾದ ಬದಲಾವಣೆಗಳಿಂದ ಇಂದು ಕುಟುಂಬ ವಲಸೆ ಹೋಗಬೇಕಾದ ಅವಶ್ಯಕತೆ ಎದುರಾಗುತ್ತಿದೆ. ಉತ್ತಮ ಗುಣಮಟ್ಟದ ಜೀವನ ಸಾಧ್ಯತೆ, ಮಕ್ಕಳ ಭವಿಷ್ಯದ ಭರವಸೆ ಇತ್ಯಾದಿ ಅಂಶಗಳಿಂದ ಆಕರ್ಷಿತರಾಗಿ ಪೋಷಕರು ವಲಸೆ ಹೋಗುವ ಸನ್ನಿವೇಶಗಳು ಇಂದು ಸಾಮಾನ್ಯವಾಗಿದೆ. ಇದರಿಂದಾಗಿ ಹೊಸ ಸಾಂಸ್ಕೃತಿಕ ನೆಲೆಗಳಿಗೆ ಆ ಸನ್ನಿವೇಶಗಳ ಬೇಡಿಕೆಗಳಿಗೆ ಹದಿಹರೆಯದವರು ತಮ್ಮನ್ನು ಒಗ್ಗಿಸಿಕೊಳ್ಳಬೇಕಾಗಿದೆ. ಇದು ಸಾಧ್ಯವಾಗದಾಗ ತಲ್ಲಣ, ಒತ್ತಡಗಳನ್ನು ಎದುರಿಸಬೇಕಾಗುತ್ತದೆ. ಇದರಿಂದಾಗಿ ಸಮವಯಸ್ಕರ ಸ್ನೇಹ ಬಂಧಗಳು ತಾತ್ಕಾಲಿಕವಾಗುತ್ತವೆ. ಇವುಗಳೂ ಹದಿಹರೆಯದವರ ಮೇಲೆ ಪರಿಣಾಮ ಬೀರುತ್ತದೆ.

**ಕುಟುಂಬ ಮತ್ತು ಕುಟುಂಬ ಸಂಬಂಧಗಳಲ್ಲಿನ ಬದಲಾವಣೆಗಳು**

ಸ್ಥೂಲ ಆರ್ಥಿಕ ಸಂದರ್ಭಗಳಿಂದಾಗಿ ಕುಟುಂಬ ರಚನೆಯಲ್ಲಿ ಬದಲಾವಣೆಗಳಾಗಿವೆ. ಒಟ್ಟು ಕುಟುಂಬ ಪದ್ಧತಿ ನಿಧಾನವಾಗಿ ಅಳಿಸಿಹೋಗುವ ಅಂಚಿನಲ್ಲಿದೆ. ಒಂದೇ ಮಗುವಿರುವ ಕುಟುಂಬವೇ ಪ್ರಮಾಣಬದ್ಧವೆಂಬಂತಾಗಿದೆ. ಇಂದಿನ ವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಮಿತಿಗಳಿವೆ, ಅಪಾಯಗಳಿವೆ. ಈ ಸನ್ನಿವೇಶದಿಂದಾಗಿ ಹದಿಹರೆಯದವರು ಅನೇಕ ಸದವಕಾಶಗಳಿಂದ ವಂಚಿತರಾಗುತ್ತಾರೆ. ಅಜ್ಜ, ಅಜ್ಜಿ ಮತ್ತು ಹಿರಿಯರ ಪ್ರೀತಿ, ವಾತ್ಸಲ್ಯ, ಸಮಾಜದ ನಡೆವಳಿಕೆಗೆ ಮಾರ್ಗದರ್ಶನ, ಸಮಾಲೋಚನೆ ಇತ್ಯಾದಿ ಅನೇಕ ಧನಾತ್ಮಕ ಕಲಿಕೆ ಅವರಿಗಿಲ್ಲವಾಗುತ್ತದೆ. ಇದು ಹದಿಹರೆಯದವರ ಇಂದಿನ ಮತ್ತು ಮುಂದಿನ ಬದುಕಿಗೆ ಸಿಗಬಹುದಾಗಿದ್ದ ಮಾನಸಿಕ, ಭಾವನಾತ್ಮಕ ಮತ್ತು ನೈತಿಕ ಒತ್ತಾಸೆಗಳನ್ನು ಇಲ್ಲವಾಗಿಸುತ್ತಿದೆ. ಮಾತ್ರವಲ್ಲ, ಸಮಾಜದ ಮೇಲೆ ಆತಂಕಕಾರಿ ಪರಿಣಾಮಗಳನ್ನು ಬೀರುತ್ತಿವೆ. ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತಿವೆ. ಮಾನವೀಯ ಸಂಬಂಧಗಳು ಮಾಯವಾಗುತ್ತಿವೆ. ಅವಿಭಕ್ತ ಜೀವನದ ಆನಂದ ಅಳಿಸಿಹೋಗುತ್ತಿದೆ. ಒಂಟಿ ಪೋಷಕ ಕುಟುಂಬ, ತೇಪೆ ಹಾಕಿದ ಕುಟುಂಬಗಳು, ವಿಚ್ಛೇದಿತ ಕುಟುಂಬಗಳು ಹೆಚ್ಚುತ್ತಿವೆ. ಇವು ಅಪೇಕ್ಷಣೀಯವಲ್ಲ ಎಂಬುದನ್ನು ಇವುಗಳ ಪರಿಣಾಮಗಳು ಎತ್ತಿ ತೋರಿಸುತ್ತಿವೆ. ಇವು ಹದಿಹರೆಯದವರ ಮಾನಸಿಕ, ಭಾವನಾತ್ಮಕ, ಶೈಕ್ಷಣಿಕ ಹೀಗೆ ಎಲ್ಲ ಆಯಾಮಗಳಲ್ಲಿ ಋಣಾತ್ಮಕ ಪರಿಣಾಮವನ್ನು ಬೀರುತ್ತವೆ. ಹೊಂದಾಣಿಕೆ, ಸಂವಹನ, ಮಕ್ಕಳ ಪೋಷಣೆ ಇವು ಗಮನಾರ್ಹವಾಗಿ ಸವಾಲುಗಳಾಗುತ್ತಿವೆ.

ನಗರೀಕರಣ ಮತ್ತು ಕುಟುಂಬಗಳ ಚಲನಶೀಲತೆಯ ಹೆಚ್ಚಳದಿಂದಾಗಿ ಸ್ಥಳೀಯ ಸಮುದಾಯಗಳಲ್ಲಿ ಬೇರೂರಲು ಸಾಧ್ಯವಾಗುತ್ತಿಲ್ಲ. ಹದಿಹರೆಯದವರು ಸಮುದಾಯದ ರಕ್ಷಣೆ ಮತ್ತು ಮಾರ್ಗದರ್ಶನಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದರೂ ಮಧ್ಯಮವರ್ಗದ ಕುಟುಂಬಗಳು ಸಾಮಾಜಿಕ ಶ್ರೇಣಿಯ ಅಡೆತಡೆಗಳನ್ನು ದಾಟಿಕೊಂಡು ಇಂತಹ ಸನ್ನಿವೇಶಗಳಿಗೆ ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳುತ್ತಿವೆ.

**ಶಾಲಾ ಸಂದರ್ಭಗಳಲ್ಲಿನ ಬದಲಾವಣೆಗಳು**

ಆರ್ಥಿಕ ಬದಲಾವಣೆಗಳ ಪರಿಣಾಮದಿಂದಾಗಿ ಶಾಲೆಗಳ ಪರಿಕಲ್ಪನೆ ಬದಲಾಗಿದೆ. ಮಕ್ಕಳನ್ನು ಪರೀಕ್ಷೆಗೆ ಸಿದ್ಧಪಡಿಸುವುದು, ಶಾಲೆಗೆ ಉತ್ತಮ ಫಲಿತಾಂಶವನ್ನು ತಂದುಕೊಡುವುದೇ ಶಾಲೆಗಳ ಪರಮಧ್ಯೇಯ ಎಂಬಂತಾಗಿದೆ. ಶಾಲೆಗಳು ಮಾನವನ ವ್ಯಕ್ತಿತ್ವವನ್ನು ರೂಪಿಸುವ ನಿಯೋಗಗಳಾಗದೆ ಹಣ ಮಾಡುವ ದಂಧೆಯಾಗಿವೆ. ಚಿಂತನೆಯನ್ನು ಉದ್ದೀಪಿಸುವ ಪಠ್ಯ ಮತ್ತು ಪರಾಮರ್ಶನಗಳ ಜಾಗವನ್ನು ಜನಪ್ರಿಯ ಗೈಡುಗಳು ಆಕ್ರಮಿಸಿಕೊಂಡಿವೆ. ಓದುವುದು ಹವ್ಯಾಸವಾಗುವುದಿರಲಿ, ಅಭ್ಯಾಸವೂ ಮರೆಯಾಗುತ್ತಿದೆ. ಹದಿಹರೆಯದವರು ಸ್ಪರ್ಧೆಯಲ್ಲಿ ಓಡುವ ಕೋಣಗಳಂತೆ ನೆಟ್ಟ ದೃಷ್ಟಿಯಿಂದ ವಿಚಲಿತರಾಗದೆ ತಮ್ಮ ಪ್ರಪಂಚವನ್ನು ತಾವೇ ಸಂಕುಚಿತಗೊಳಸಿಕೊಳ್ಳುವಂತಾಗಿದೆ. ಇದು ಆತಂಕ, ಒತ್ತಡ ಮತ್ತು ಅಹಂಭಾವವನ್ನು ಹೆಚ್ಚಿಸಿದೆ. ವ್ಯಕ್ತಿತ್ವ ವಿಕಾಸ, ಕಲಿಕೆಯ ಆನಂದ ಸಾಧ್ಯವಿಲ್ಲವಾಗುತ್ತಿದೆ. ಅಗತ್ಯಗಳ ಒತ್ತಡಕ್ಕೆ ಬಿದ್ದ ಪೋಷಕರು ತಮ್ಮ ಪಾಲಿನ ಕಾಣಿಕೆಯನ್ನೂ ಕೊಡುತ್ತಾರೆ. ಅವರ ನಿರ್ಧಾರಗಳು ಬಯಕೆಗಳು ನಡೆಯುತ್ತವೆಯೇ ವಿನಾ

ಹದಿಹರೆಯದವರ ಅಭಿಕ್ಷಮತೆ, ಆಸಕ್ತಿ ಬೆಳಕಿಗೆ ಬರುವುದೇ ಇಲ್ಲ. ಅವರ ಆಯ್ಕೆಗಳಿಗೆ ಅತಿ ಕಡಿಮೆ ಮಟ್ಟದ ಅವಕಾಶಗಳಿರುತ್ತವೆ. ವಿವಿಧ ಕೋರ್ಸುಗಳಿಂದ ಸಿಗುವ ವರಮಾನ/ ಲಾಭವೆಷ್ಟು ಎಂಬುದರ ಮೇಲೆಯೇ ಶೈಕ್ಷಣಿಕ ಆಯ್ಕೆಗಳು ನಿರ್ಧಾರವಾಗುತ್ತವೆ. ಇದರ ಪರಿಣಾಮವಾಗಿ ವೃತ್ತಿ ಆಯ್ಕೆಗಳು ಮತ್ತು ವೈಯಕ್ತಿಕ ಆಕಾಂಕ್ಷೆಗಳ ನಡುವೆ ಹೊಂದಾಣಿಕೆಯಾಗದೆ, ನಿರಾಸೆ, ಒತ್ತಡ, ಮತ್ತು ಆತಂಕಗಳು ಹೆಚ್ಚಾಗುತ್ತಿವೆ.

**ಕುಟುಂಬ ಮತ್ತು ಸಮಾಜಗಳ ಮೌಲ್ಯ ವ್ಯವಸ್ಥೆಯಲ್ಲಿ ಬದಲಾವಣೆ:**

ಆರ್ಥಿಕ ಪರಿಣಾಮಗಳಿಂದಾಗಿ ವಿಶ್ವದಾದ್ಯಂತ ಮೌಲ್ಯವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆ. ಮಾನವನ ಬದುಕಿನಲ್ಲಿ ಸಂಪತ್ತು ಕೇಂದ್ರ ಸ್ಥಾನವನ್ನು ಆಕ್ರಮಿಸಿದೆ. ಇದರಿಂದಾಗಿ ಎಲ್ಲವನ್ನೂ ಸಂಪತ್ತಿನ ಗಳಿಕೆಗಾಗಿಯೇ ಮಾಡಬೇಕು ಎಂಬ ಭಾವನೆ ಬೇರೂರಿದೆ. ಸೇವಾ ಮನೋಭಾವವನ್ನು ಸ್ವಾರ್ಥ ಧೋರಣೆ ಆಕ್ರಮಿಸಿಕೊಂಡಿದೆ. ಮಾನವೀಯ ಮೌಲ್ಯಗಳು ಮರೆಯಾಗುತ್ತಿವೆ. ವ್ಯಕ್ತಿಯ ಬದುಕಿಗೆ, ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ಸಮಾಜದಲ್ಲಿ ಆತಂಕಕಾರಿ ಮೌಲ್ಯಗಳು ತಲೆ ಎತ್ತುತ್ತಿವೆ. ಇದರಿಂದಾಗಿ ಹದಿಹರೆಯದವರು ಮೌಲ್ಯಗಳ ಸಂಘರ್ಷವನ್ನು ಎದುರಿಸುವಂತಾಗಿದೆ. ಯಾವುದು ತೃಪ್ತಿ ಮತ್ತು ಆನಂದವನ್ನುಂಟುಮಾಡಬಲ್ಲುದು ಎಂದು ಇತರರು ಹೇಳುತ್ತಾರೆಯೋ ಅಥವಾ ಅವರೇ ಭಾವಿಸುತ್ತಾರೆಯೋ ಅದು ಬಯಸಿದುದನ್ನು ಕೊಡುವುದಿಲ್ಲವೆಂಬ ನಿರಾಶೆ ಮೂಡುತ್ತಿದೆ. ಇವು ಹದಿಹರೆಯದವರು 'ಅನಿಶ್ಚಿತ ಸ್ಥಿತಿ'ಯನ್ನು ಅನುಭವಿಸುವಂತೆ ಮಾಡಿದೆ.

**ಅಭ್ಯಾಸ–II**

ಆರ್ಥಿಕ ಬದಲಾವಣೆಗಳ ಬೃಹತ್ ಸನ್ನಿವೇಶಗಳ ಪರಿಣಾಮವಾಗಿ ಮೌಲ್ಯಗಳಲ್ಲಿ ಆಗಿರುವ ಪಲ್ಲಟಗಳು ನಿಮ್ಮ ಗಮನಕ್ಕೂ ಬಂದಿರುತ್ತವೆ. ನೀವು ಗಮನಿಸಿರುವಂತೆ ಮೌಲ್ಯಗಳಿಗೆ ಸಂಬಂಧಿಸಿದಂತೆ ಆಗಿರುವ ನಾಲ್ಕು ಪಲ್ಲಟಗಳನ್ನು ಪಟ್ಟಿಮಾಡಿ.

1.
2.
3.
4.

**ಸಮಾಜದ ವಿವಿಧ ವರ್ಗಗಳಲ್ಲಿ ಬದಲಾವಣೆ:**

ಹೊಸ ಆರ್ಥಿಕ ಬದಲಾವಣೆಗಳು ಸಮಾಜದ ವಿವಿಧ ವರ್ಗಗಳ ಮೇಲೆ ಪ್ರಭಾವ ಬೀರಿದ್ದು ಇವು ಹದಿಹರೆಯದವರನ್ನು ಪ್ರಭಾವಿಸಿವೆ. ಮಧ್ಯಮ ವರ್ಗದವರು ತಮ್ಮ ಸಾಮಾಜಿಕ ಮಟ್ಟವನ್ನು ಉಳಿಸಿಕೊಳ್ಳಲು ಬಯಸಿದರೂ ಎದುರಾಗುತ್ತಿರುವ ಆರ್ಥಿಕ ಬೇಡಿಕೆಗಳನ್ನು ನಿಭಾಯಿಸುವಲ್ಲಿ ಕಷ್ಟಪಡುತ್ತಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಬಯಸಿದರೂ ಆರ್ಥಿಕ ಬೇಡಿಕೆಗಳು ಮಧ್ಯೆ ಬರುತ್ತಿವೆ. ಇದು ಹದಿಹರೆಯದವರಲ್ಲಿ ಅತೃಪ್ತಿಯನ್ನುಂಟುಮಾಡುತ್ತಿವೆ. ತಮಗೆ ಸಾಮರ್ಥ್ಯವಿದ್ದರೂ ಒಳ್ಳೆಯ ಅವಕಾಶಗಳನ್ನು ಪಡೆಯಲು ಸಾಧ್ಯವಿಲ್ಲದಾಗಿ ನಿರಾಶೆ ಮನೆಮಾಡಿಕೊಳ್ಳುತ್ತಿದೆ.

**ಬೇಡಿಕೆಯ ಕೌಶಲಗಳ ಸ್ವರೂಪದಲ್ಲಿ ಬದಲಾವಣೆ:**

ಆರ್ಥಿಕ ಬದಲಾವಣೆಗಳ ಪರಿಣಾಮದಿಂದ, ಆರ್ಥಿಕ ಕ್ಷೇತ್ರದ ಬೇಡಿಕೆಗಳ ಸ್ವರೂಪದಲ್ಲಿ ಬದಲಾವಣೆಯಾಗಿದೆ. ಆದರೆಹದಿಹರೆಯದವರನ್ನು ಸಿದ್ಧಗೊಳಿಸುವ ಸಂಸ್ಥೆಗಳು ಅದೇ ಬದಲಾವಣೆಗಳನ್ನು ಅಳವಡಿಸಿಕೊಂಡಿಲ್ಲ. ಬೇಡಿಕೆಯಲ್ಲಿರುವ ಕೌಶಲಗಳನ್ನೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಹೀಗಾಗಿ ಸೂಕ್ತ ಕೌಶಲಗಳ ಕೊರತೆಮತ್ತುವೃತ್ತಿ ಅವಕಾಶಗಳ ಕೊರತೆಗಳು ಹದಿಹರೆಯದವರಿಗೆ ಸ್ಥಿರ ಮತ್ತು ಉತ್ಪಾದಕ ಕೆಲಸವೊದಗಿಸುವ ಅವಕಾಶಗಳನ್ನು ಮೊಟಕು ಮಾಡುತ್ತಿವೆ.

ಆರ್ಥಿಕ ಬದಲಾವಣೆಗಳು ಜಗತ್ತಿನಲ್ಲಿ ಹೆಚ್ಚಿನ ಅಂತರ್ ಸಂಪರ್ಕಗಳಗೆ ಎಡೆಮಾಡಿಕೊಟ್ಟಿವೆ. ಹದಿಹರೆಯದವರ ವಿಕಾಸ ಕಾರ್ಯಗಳು ಎಲ್ಲರಲ್ಲೂ ಹದಿಹರೆಯದ ಇದೇ ಕಾಲದಲ್ಲಿ ನಡೆಯುತ್ತವೆ ಎಂದು ಹೇಳಲು ಅಸಾಧ್ಯವಾಗುವಂತಾಗಿದೆ. ಅಂದರೆ ಹದಿಹರೆಯದವರ ವಿಕಾಸ ಪ್ರಕ್ರಿಯೆಯಲ್ಲಿನ ಮನೋ– ಸಾಮಾಜಿಕ ಹೊಂದಾಣಿಕೆ ವಿವಿಧ ಹದಿಹರೆಯದವರಲ್ಲಿ ಬೇರೆ ಬೇರೆ ಕಾಲಗಳಲ್ಲಿ ಆರಂಭವಾಗುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಕೆಲವರು ಪ್ರಯೋಜನಕಾರಿಯಾಗಿಸಿಕೊಳ್ಳಬಹುದು, ಮತ್ತೆ ಕೆಲವರು ಜಾಗತೀಕರಣದ ಬೇಡಿಕೆಗಳಿಗೆ ಹೊಸ ತಾಂತ್ರಿಕತೆಗೆ ಅತಿಯಾಗಿ ಸ್ಪಂದಿಸಿ ವಿಶೇಷ ಪ್ರಯೋಜನ ಪಡೆದುಕೊಳ್ಳದೆಯೂ ಇರಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ಆರ್ಥಿಕ ಬದಲಾವಣೆಗಳಿಗೆ ಸಂಬಂಧಿಸಿದಂತೆ ಹದಿಹರೆಯದವರನ್ನು ಪ್ರಭಾವಿಸಿರುವ ಅಂಶಗಳನ್ನು ಕುರಿತಂತೆ ಸರಿಯಾದ ಹೇಳಿಕೆಗಳನ್ನು '✓' ಚಿಹ್ನೆಯ ಮೂಲಕ ಗುರುತಿಸಿ.

1. ಶಿಕ್ಷಣದಲ್ಲಿ ಪರಿಮಾಣಾತ್ಮಕ ಬೆಳವಣಿಗೆಯಾಗಿದೆ.
2. ಹದಿಹರೆಯದವರು ಅವರಿಗೆ ಸಿಗುವ ವಿರಾಮಕಾಲವನ್ನು ಇಂದು ಅತ್ಯಂತ ರಚನಾತ್ಮಕವಾಗಿ ಬಳಸಿಕೊಳ್ಳುತ್ತಿದ್ದಾರೆ.
3. ಹದಿಹರೆಯದವರ ವಿರಾಮ ಕಾಲಕ್ಕೆ ಸಂಬಂಧಿಸಿದಂತೆ ಅತಿ ಸ್ಪಷ್ಟವಾಗಿ ಕಾಣುವ ಬದಲಾವಣೆ ಎಂದರೆ ಮಾಧ್ಯಮದ ಬಳಕೆಯೇ.
4. ವಿಚ್ಛೇದಿತ ಕುಟುಂಬಗಳು ಹದಿಹರೆಯದವರ ಮಾನಸಿಕ, ಭಾವನಾತ್ಮಕ, ಶೈಕ್ಷಣಿಕ ಹೀಗೆ ಎಲ್ಲ ಆಯಾಮಗಳಲ್ಲಿ ಋಣಾತ್ಮಕ ಪರಿಣಾಮವನ್ನು ಬೀರುತ್ತವೆ.
5. ಅವಿಭಕ್ತ ಕುಟುಂಬ ಪದ್ಧತಿ ನಿಧಾನವಾಗಿ ಅಳಿಸಿಹೋಗುವ ಅಂಚಿನಲ್ಲಿದೆ.
6. ಉತ್ತಮ ಗುಣಮಟ್ಟದ ಜೀವನ ಸಾಧ್ಯತೆ, ಮಕ್ಕಳ ಭವಿಷ್ಯದ ಭರವಸೆ ಇತ್ಯಾದಿ ಅಂಶಗಳಿಂದ ಆಕರ್ಷಿತರಾಗಿ ಪೋಷಕರು ವಲಸೆ ಹೋಗುವ ಸನ್ನಿವೇಶಗಳು ಸಾಮಾನ್ಯವಾಗಿದೆ.
7. ಚಿಂತನೆಯನ್ನು ಉದ್ದೀಪಿಸುವ ಪಠ್ಯ ಮತ್ತು ಪರಾಮರ್ಶನಗಳ ಜಾಗವನ್ನು ಜನಪ್ರಿಯ ಗೈಡುಗಳು ಆಕ್ರಮಿಸಿಕೊಂಡಿವೆ.
8. ಕೆಲವು ದೇಶಗಳ ಮೌಲ್ಯವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆ.
9. ಆರ್ಥಿಕ ಕ್ಷೇತ್ರದ ಬೇಡಿಕೆಗಳ ಸ್ವರೂಪದಲ್ಲಿ ಬದಲಾವಣೆಯಾಗಿದೆ.

## 3.2.3.2. ಹದಿಹರೆಯದವರ ಜೀವನದ ಮೇಲೆ ಆರ್ಥಿಕ ಬದಲಾವಣೆಗಳ ಪರಿಣಾಮವನ್ನು ಕುರಿತ ಸಂಶೋಧನಾ ಸಾಕ್ಷ್ಯಗಳು

ಆರ್ಥಿಕ ಬದಲಾವಣೆಗೆಗಳು ಹದಿಹರೆಯದವರನ್ನು ಪ್ರಭಾವಿಸುತ್ತದೆ ಎಂದು ಹೇಳಲು ಸಂಶೋಧನಾ ಸಾಕ್ಷಿಗಳು ಅಥವಾ ಪುರಾವೆಗಳು ಇವೆ. ಈ ಸತ್ಯಾಂಶಗಳನ್ನು ಕೆಳಗಿನ ಅಧ್ಯಯನಗಳು ಸಮರ್ಥಿಸಿವೆ. ಆರ್ಥಿಕ ಬದಲಾವಣೆಗಳ ಎರಡು ಪ್ರಧಾನ ಫಲಿತಾಂಶಗಳಿಗೆ ಸಂಬಂಧಿಸಿದ ಸಂಶೋಧನೆಯ ಫಲಿತಗಳನ್ನು ಅರ್ಥ ಮಾಡಿಕೊಳ್ಳೋಣ.

1. ಹದಿಹರೆಯದವರ ಮೇಲೆ ಮಾಹಿತಿ ಸಂವಹನ ತಂತ್ರಜ್ಞಾನದ ಪ್ರಭಾವ
2. ಹದಿಹರೆಯದವರ ಮೇಲೆ ಜಾಗತೀಕರಣದ ಪ್ರಭಾವ

ಹದಿಹರೆಯದವರ ಮೇಲೆ ಮಾಹಿತಿ ಸಂವಹನ ತಂತ್ರಜ್ಞಾನದ ಪ್ರಭಾವವನ್ನು ಕುರಿತಂತೆ ಹೇರಳವಾದ

ಸಂಶೋಧನೆಗಳು ನಡೆದಿವೆ. ಈ ಸಂಶೋಧನೆಗಳು ಧನಾತ್ಮಕವಾದ ಮತ್ತು ಋಣಾತ್ಮಕವಾದ ಪರಿಣಾಮಗಳನ್ನು ಗುರುತಿಸಿವೆ. ಈ ಸಂಶೋಧನೆಗಳ ಪ್ರಕಾರ ಮಾಹಿತಿ ಸಂವಹನ ತಂತ್ರಜ್ಞಾನವು

- ಅಸಾಮರ್ಥ್ಯಗಳಿರುವ ಹದಿಹರೆಯದವರ ಕಲಿಕೆಗೆ ಅನುಕೂಲಿಸಿದೆ.
- ಹದಿಹರೆಯದವರ ಆರೋಗ್ಯ ಸಮಸ್ಯೆಗಳ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ.
- ಅಂತಿಮ ಹದಿಹರೆಯದ ಕಾಲದಲ್ಲಿ ಪ್ರಭಾವಿಸಿದೆ. ಇದರ ಪರಿಣಾಮವಾಗಿ ನಿಲ್ಲುವ ಭಂಗಿಯಲ್ಲಿ ದೋಷ, ಕಣ್ಣುಗಳಿಗೆ ಸಂಬಂಧಿಸಿದ ದೋಷಗಳು ಕಂಡುಬಂದಿವೆ.
- ಹದಿಹರೆಯದವರ ಸಾಮಾಜಿಕ ಸಂಪರ್ಕವಲಯಗಳನ್ನು ವಿಸ್ತರಿಸಿದೆ.
- ಸಾಮಾಜಿಕ ಪರಸ್ಪರ ಕ್ರಿಯೆಯ ಪ್ರಮುಖ ಸಾಧನವಾಗಿ ಕಂಪ್ಯೂಟರ್‌ಗಳ ಬಳಕೆ ಅಧಿಕವಾಗಿದೆ.
- ಗೆಳೆಯರೊಂದಿಗೆ ಸ್ನೇಹ ಸಂಬಂಧಗಳು ಸುಧಾರಿಸಿವೆ. (freeman-Lango,zooo; Lenhart 2001)
- ಸ್ನೇಹ ಸಂಬಂಧಗಳು ಭೌಗೋಳಿಕ ಮಿತಿಗಳನ್ನು ಮೀರಿ ವಿಸ್ತಾರಗೊಂಡಿದೆ. ಸ್ನೇಹವು ಎದುರಿಗಿರುವವರ ಜೊತೆಗಿದ್ದುದು ಈಗ ಎದುರಿಗಿಲ್ಲದವರ ಜೊತೆಯೂ ಸಾಧ್ಯವಾಗಿದೆ.
- ಭೌಗೋಳಿಕವಾಗಿ ದೂರವಿರುವ, ಅಸಾಮರ್ಥ್ಯ ಅಥವಾ ಅನಾರೋಗ್ಯದ ಕಾರಣ ಮನೆಯಲ್ಲೇ ಉಳಿಯಬೇಕಾದ ಯುವಜನತೆ ನೇರ ಸಂಪರ್ಕದೊಂದಿಗೆ ಅಂತರ್ಜಾಲದ ಮೂಲಕ ಸಂವಹನವನ್ನು ಸುಗಮಗೊಳಿಸಿಕೊಳ್ಳಲು ಸಾಧ್ಯವಾಗಿದೆ.
- ದೂರವಾಣಿಯ ಮೂಲಕ ಮಾತನಾಡಲು ಅವಕಾಶವಿರುವುದರಿಂದಹದಿಹರೆಯದವರ ಸಂವಹನಮತ್ತು ಆತ್ಮವಿಶ್ವಾಸ ಹೆಚ್ಚಿದೆ.
- ನೇರ ಮಾನವಸಂಪರ್ಕದ ಕಡಿತದ ಪರಿಣಾಮ ಕಡಿಮೆಯಾಗುವುದರಿಂದ ಹದಿಹರೆಯದವರಿಗೆ ಸಾಮಾಜಿಕ ಒಂಟಿತನದ ಬಾಧೆಯುಂಟಾಗಿ ಇದು ಕೌಟುಂಬಿಕ ಸಂಬಂಧಗಳ ಮೇಲೆ ಪರಿಣಾಮ ಬೀರಿದೆ.
- ವ್ಯಕ್ತಿಗಳನ್ನು ಮುಖಾಮುಖಿಯಾಗಿ ಕಾಣದೆ, ಸಂವಹನ ಮಾಡುತ್ತಿರುವ ವ್ಯಕ್ತಿಯ ಕುರಿತ ಕುರುಹುಗಳಿಲ್ಲದೆ ಸಂವಹನದ ಸಾಧ್ಯತೆ ಹೆಚ್ಚಾದ ಕಾರಣ– ಇತರರಿಗೆ ಸುಲಭವಾಗಿ ಕಿರುಕುಳ ಕೊಡವುದು ಸಾಧ್ಯವಾಗಿದೆ. ಇದುಸೈಬರ್–ಬೆದರಿಕೆ, ಸೈಬರ್ ಅನುಸರಣೆ, ಕಿರುಕುಳದ ಸಂಭಾಷಣೆ ಅಥವಾ ಬೈಗುಳ, ಹಾಗೂ ಕಣ್ಣೆದುರಿಗೆ ಕಾಣುವಂತೆ ಲಿಂಗ ಬೇಧ ಭಾವ, ಸಲಿಂಗಕಾಮದಂತಹ ಗುಂಪು ಮಾನಕಗಳ ಉಲ್ಲಂಘನೆ ಇತ್ಯಾದಿ ಪರಿಣಾಮಗಳುಂಟಾಗಿವೆ.
- ಅಂತರ್ಜಾಲದಲ್ಲಿ ತೊಡಗಿಕೊಳ್ಳುವುದರಿಂದ ಕುಟುಂಬದ ಸದಸ್ಯರು ಮತ್ತು ಗೆಳೆಯರೊಂದಿಗೆ ನೇರ ಸಂವಹನದಲ್ಲಿ ತೊಡಗುವುದಕ್ಕೆ ಬಳಸುತ್ತಿದ್ದ ಸಮಯ ಕಡಿತಗೊಂಡಿದೆ.
- ಹದಿಹರೆಯದವರು ಬಹು ಋಣಾತ್ಮಕ ಪ್ರಭಾವಗಳಿಗೆ ತೆರೆದುಕೊಳ್ಳುವ ಅಪಾಯಗಳು ಕಾಣಿಸಿಕೊಳ್ಳುತ್ತಿವೆ. ವೆಬ್ ತಾಣಗಳಲ್ಲಿ ಅಲೆದಾಡುವ ಮತ್ತು ಚ್ಯಾಟ್‌ಗಳ ಬಲೆಯ ಸುಳಿಯಲ್ಲಿ ಹದಿಹರೆಯದವರನ್ನು ಸಿಕ್ಕಿಹಾಕಿಸುವವರು, ಲೈಂಗಿಕ ಅಶ್ಲೀಲತೆ, ಹಿಂಸಾತ್ಮಕ ವೀಡಿಯೋ ಆಟಗಳಿಂದ ಹಿಡಿದು ಮಕ್ಕಳಿಗೆ ಕಿರುಕುಳ ಕೊಡುವವರೆಗೆ ಅನಾಗರಿಕ ವರ್ತನೆಗಳು ನಡೆಯುತ್ತಿವೆ.

**ಹದಿಹರೆಯದವರ ಮೇಲೆ ಜಾಗತೀಕರಣದ ಪರಿಣಾಮ**

ಪೀಟರ್ಸನ್‌ರವರ ಪ್ರಕಾರ(2000) ಹದಿಹರೆಯದವರು ಇಂದಿನ ಜಾಗತೀಕರಣ ಮತ್ತು ಅಪಕೈಗಾರಿಕೀಕರಣ(de industrialisation)ಗೊಳ್ಳುತ್ತಿರುವ ವಿಶ್ವದಲ್ಲಿ ಯಶಸ್ವಿಯಾಗಿ ತಾರುಣ್ಯಾವಸ್ಥೆಯನ್ನು

ದಾಟಿ ಬರಲು ಹದಿಹರೆಯದವರು ನಾಲ್ಕು ನಿರ್ದಿಷ್ಟ ವ್ಯಕ್ತಿತ್ವ ಗುಣ ಲಕ್ಷಣಗಳನ್ನು ಹೊಂದಿರಬೇಕು.

- ಕಂಪ್ಯೂಟರ್, ಅಂತರಜಾಲ, ಸೆಲ್ ಫೋನ್ ಇತ್ಯಾದಿ ಇಂದಿನ ತಂತ್ರಜ್ಞಾನಗಳನ್ನು ಬಳಸುವ ಕೌಶಲಗಳನ್ನು ಮೈಗೂಡಿಸಿಕೊಂಡಿರಬೇಕು.ಹೆಚ್ಚು ಜಾಗತಿಕವಾದ ಸಮಾಜದಲ್ಲಿ ಅಂತರರಾಷ್ಟ್ರೀಯ ಆರ್ಥಿಕತೆ ಮತ್ತು ಹದಿಹರೆಯದವರ ಭವಿಷ್ಯದ ವೃತ್ತಿ ಅವಕಾಶಗಳು ಹೊಸ ತಂತ್ರಜ್ಞಾನದ ಜ್ಞಾನವನ್ನು ಅವಲಂಬಿಸಿದೆ. ಹದಿಹರೆಯದವರು ಅವರ ಜೀವನಾದ್ಯಂತ ಕಲಿಯಲು ಅಭಿಪ್ರೇರಿತರಾಗಬೇಕು ಹಾಗೂ ಶಾಲೆ ಮುಗಿಸಿದ ಮಾತ್ರಕ್ಕೆ ಶಿಕ್ಷಣ ಮುಗಿಯಿತೆಂದು ತಿಳಿಯಬಾರದು.
- ಇಂದಿನ ತರುಣ ಪೀಳಿಗೆಯವರು ಭಿನ್ನವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿರುವ ಜನರನ್ನು ಒಪ್ಪಿಕೊಂಡು ಅವರೊಡನೆ ಯಶಸ್ವಿ ಒಡನಾಟದಲ್ಲಿರಬೇಕು. ಇವರು ಅವರ ತಂದೆತಾಯಿಯರ ಪೀಳಿಗೆಯವರಿದ್ದಂತೆಇರಲು ಸಾಧ್ಯವಿಲ್ಲ. ಅನೇಕ ದೇಶಗಳ ಜನರೊಡಗೂಡಿ ಬದುಕಿ, ವೃತ್ತಿಯನ್ನು ಕೈಗೊಂಡು ಸಂಭಾಳಿಸಿ, ಯಶಸ್ವಿಯಾಗಿ ಸ್ವದೇಶಕ್ಕೆ ಅನುಕೂಲಕರವಾಗಿ ಬದುಕಬೇಕು.
- ಅಂತಿಮವಾಗಿಹದಿಹರೆಯದವರು ಬದಲಾಗುತ್ತಿರುವ ಜಾಗತಿಕ ಸಮಾಜ ಮತ್ತು ಬದಲಾಗುತ್ತಿರುವ ಜಾಗತಿಕ ಆರ್ಥಿಕತೆಗೆ ಸರಾಗವಾಗಿ ಹೊಂದಿಕೊಳ್ಳಲು ಕಲಿಯಬೇಕು.

  ಅಪಕೈಗಾರಿಕೀಕರಣ, ನಗರೀಕರಣ, ಆಧುನೀಕರಣ ಮತ್ತು ಜಾಗತೀಕರಣಗಳು ಒಟ್ಟಾಗಿ ಅನೇಕ ಗಮನಾರ್ಹ ಬದಲಾವಣೆಗಳಿಗೆ ಕಾರಣವಾಗಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಅವಿಭಕ್ತ ಕುಟುಂಬಗಳು ದುರ್ಬಲವಾಗುತ್ತಿರುವುದು, ಕುಟುಂಬಗಳು ವಿಭಜನೆಗೊಳ್ಳುತ್ತಿರುವುದು, ಇಬ್ಬರು ಪೋಷಕರೂ ಉದ್ಯೋಗಸ್ಥರಾಗುವುದು, ಮಹಿಳೆಯರ ಮತ್ತು ಪುರುಷರ ಬದಲಾಗುತ್ತಿರುವ ಪಾತ್ರಗಳು, ಹೆಚ್ಚಿದ ವಲಸೆ, ದಿನನಿತ್ಯದ ಬದುಕಿನ ಪಾಶ್ಚಿಮಾತ್ಯೀಕರಣ, ಶಿಶುಪೋಷಣೆಯ ಕ್ರಮದಲ್ಲಿ ಬದಲಾವಣೆ, ಭಾಷೆಗಳ ಜಾಗತೀಕರಣ, ಬಹುಮಾಧ್ಯಮದ ಪ್ರಭಾವಗಳು ಇತ್ಯಾದಿ. ಈ ಮೇಲಿನ ಹಲವು ಬದಲಾವಣೆಗಳ ಪರಿಣಾಮವಾಗಿ ಸಾಮಾಜಿಕ ಮನೋವಿಜ್ಞಾನ, ಕುಟುಂಬ ಮನೋವಿಜ್ಞಾನ ಮತ್ತು ಕುಟುಂಬ ಸಂಬಂಧಗಳು ಕುಟುಂಬ ಹಾಗೂ ವ್ಯಕ್ತಿ ಮನೋವಿಜ್ಞಾನವನ್ನು ವಿಶೇಷವಾಗಿ ಬದಲಾಯಿಸಿವೆ.

  ಹಿಂದೆ ಕುಟುಂಬ ಮತ್ತು ವ್ಯಕ್ತಿ ಮನೋವಿಜ್ಞಾನವು ವಿಸ್ತೃತ ಕುಟುಂಬ, ಭಾರತದ ಸಾಂಪ್ರದಾಯಿಕ ಮೌಲ್ಯವ್ಯವಸ್ಥೆ ಮತ್ತು ಶಿಶುಪಾಲನಾ ಪದ್ಧತಿಗಳಿಂದ ರೂಪುಗೊಳ್ಳುತ್ತಿದ್ದವು. ಆದರೆ ಸಮಾಜೋ–ಆರ್ಥಿಕರಚನೆಗಳಲ್ಲಿ ಮೂಲಭೂತ ಬದಲಾವಣೆಗಳಾಗಿ, ಸಾಂಪ್ರದಾಯಿಕವಾದ 'ನಾವು ಮತ್ತು ನಮ್ಮವರು' ಎಂಬ ಭಾವ ಮಾಯವಾಗಿ 'ನಾನು ಮತ್ತು ನನ್ನದು' ಎಂಬ ಭಾವ ಎದ್ದು ಕಾಣುತ್ತಿದೆ.

- ಸಂಶೋಧನೆಗಳು ದೃಢಪಡಿಸುವಂತೆ ಕಡಿಮೆ ಪ್ರಮಾಣದ ಜಾಗತೀಕರಣ ಪ್ರಭಾವಕ್ಕೆ ಗುರಿಯಾಗಿ ಭಾರತೀಯ ತರುಣರು ಯುರೋಪಿಯನ್ನರಿಗಿಂತ ಅಧಿಕಾರಕ್ಕೆ ಸಂಬಂಧಿಸಿದ ಮೌಲ್ಯಗಳಿಗೆ ಗಣನೀಯವಾಗಿ ಹೆಚ್ಚು ಒತ್ತು ಕೊಡುತ್ತಾರೆ, ಅಲ್ಲದೆ ಗುಂಪಿನ ಒಳಗೆ ನಿಷ್ಠೆ ಮತ್ತು ಅಧ್ಯಾತ್ಮಿಕ ಪರಿಶುದ್ಧತೆಗೂ ಬೆಲೆ ಕೊಡುತ್ತಾರೆ, ಹೆಚ್ಚು ಜಾಗತೀಕರಣಗೊಂಡ ಭಾರತೀಯ ಯುವಕರು ಅವರ ಹಣಕಾಸಿನ ಲಾಭಕ್ಕಾಗಿ ನೈತಿಕ ಮೌಲ್ಯಗಳನ್ನು ತ್ಯಜಿಸುವುದುಂಟು. ನೈತಿಕ ನಿಲುವುಗಳಿಗೆ ಸಂಬಂಧಿಸಿ ಹೇಳುವುದಾದರೆ ಭಾರತೀಯ ಹದಿಹರೆಯದವರು ಯುರೋಪಿನ ಹದಿಹರಿಯದವರಿಗಿಂತ ಭಿನ್ನರಾಗಿರುತ್ತಾರೆ, ಭಾರತೀಯ ಯುವಜನತೆ ಅಲ್ಪಕಾಲಿಕ ಲಾಭಗಳನ್ನು ಪಡೆಯಲು ಪ್ರೇರೇಪಿತರಾದರೂ ಸಾಂಸ್ಕೃತಿಕ ತತ್ವಗಳನ್ನು ಪಾಲಿಸಲು ಸಿದ್ಧರಾಗಿರುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ : 2**

1. ಹದಿಹರೆಯದವರ ಮೇಲೆ ಜಾಗತೀಕರಣ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನದ ಉಂಟುಮಾಡಿರುವ ಪ್ರಭಾವಗಳಿಂದ ಉತ್ತಮಗೊಂಡಿರುವ ಅಂಶಗಳನ್ನು ಗುರುತಿಸಿ:

1. ಅಸಾಮರ್ಥ್ಯಗಳಿರುವ ಹದಿಹರೆಯದವರ ಕಲಿಕೆ
2. ಸಾಮಾಜಿಕ ಸಂಪರ್ಕವಲಯ
3. ಗೆಳೆಯರೊಂದಿಗೆ ಸ್ನೇಹ ಸಂಬಂಧಗಳು
4. ಸಂವಹನ
5. ಹದಿಹರೆಯದವರ ಆತ್ಮವಿಶ್ವಾಸ
6. ಕೌಟುಂಬಿಕ ಸಂಬಂಧಗಳು
7. ಸಮಷ್ಟಿ ಮೌಲ್ಯವ್ಯವಸ್ಥೆ
8. ವೈಯಕ್ತಿಕ ಮೌಲ್ಯಗಳು

## 3.2.4. ಸಾರಾಂಶಿಸೋಣ:

- ಆರ್ಥಿಕ ವ್ಯವಸ್ಥೆಯ ರಚನೆಯಲ್ಲಿ ಉಂಟಾಗುವ ಬದಲಾವಣೆಯೇ ಆರ್ಥಿಕ ಬದಲಾವಣೆಎನ್ನಬಹುದು. ಇದು ಸವಾಜಗಳಲ್ಲಿ, ಸಂಸ್ಕೃತಿಗಳಲ್ಲಿ ಮತ್ತು ರಾಷ್ಟ್ರ ಹಾಗೂ ಜಾಗತಿಕ ಮಟ್ಟಗಳಲ್ಲಿ ಬದಲಾವಣೆಯನ್ನುಂಟು ಮಾಡಬಹುದು.
- ಕುಟುಂಬದ ಆರ್ಥಿಕ ಸಂಕಷ್ಟದಿಂದ ಪೋಷಕರು ಹಾಗೂ ಹದಿಹರೆಯದವರ ಸಂಬಂಧ ಮತ್ತು ಪೋಷಕರ ವೈವಾಹಿಕ ಸಂಬಂಧಗಳು ತೊಂದರೆಗೊಳಗಾಗುತ್ತವೆ ಮತ್ತು ಇವು ಹದಿಹರೆಯದವರ ಬೆಳವಣಿಗೆಯ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ.
- ನಗರೀಕರಣ ಎನ್ನುವುದು ಕೇವಲ ಆರ್ಥಿಕ ಅಥವಾ ಪ್ರಾದೇಶಿಕ ಪ್ರಕ್ರಿಯೆಯಾಗಿರದೇ ಅದೊಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆ ಜನರ ಜೀವನಪದ್ಧತಿ ಮತ್ತು ವ್ಯಕ್ತಿಗಳ ನಡುವಿನ ಅಂತರ್‌ಕ್ರಿಯೆಯ ಮೇಲೆ ಪ್ರಭಾವ ಬೀರುತ್ತದೆ. ಹದಿಹರೆಯದವರು ನಮ್ಮ ಸಮಾಜದಲ್ಲಿ ಹೆಚ್ಚು ಪ್ರಭಾವಕ್ಕೊಳಗಾಗುವವರಾಗಿರುತ್ತಾರೆ.
- ಆರ್ಥಿಕ ಬದಲಾವಣೆಗಳು ಶಿಕ್ಷಣ, ವಿರಾಮ ಮತ್ತು ಸಮವಯಸ್ಕರ ಸಂಬಂಧಗಳು, ಕುಟುಂಬಗಳು ಮತ್ತಿತರ ಸೂಕ್ಷ್ಮ ಸಂದರ್ಭಗಳನ್ನು ಪ್ರಭಾವಿಸಿವೆ. ಈ ಪ್ರತಿಯೊಂದು ಸಂದರ್ಭಗಳು ಹದಿಹರೆಯದವರ ಜೀವನವನ್ನು ಪ್ರಭಾವಿಸಿ ವಿವಿಧ ರೀತಿಯ ಮತ್ತು ವಿವಿಧ ಪ್ರಮಾಣದ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಬಯಸುತ್ತದೆ.

## 3.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

1,3,4,5,6,7.9 – ಸರಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ : 2**

1,2,3,4,5

## 3.2.6. ಘಟಕಾಂತ್ಯ ಅಭ್ಯಾಸಗಳು

1 ಹದಿಹರೆಯದವರ ಮೇಲೆ ಆಗುವ ಆರ್ಥಿಕ ಪರಿಣಾಮಗಳನ್ನು ಚರ್ಚಿಸಿರಿ

2. ಹದಿಹರೆಯದವರ ಮೇಲೆ ಆಗುವ ಆರ್ಥಿಕ ಪರಿಣಾಮಗಳಿಗೆ ಸಂಬಂಧಿಸಿದಂತೆ ಕನಿಷ್ಠ 20 ಅಧ್ಯಯನಗಳ ಸಂಶೋಧನಾ ಫಲಿತಾಂಶಗಳನ್ನು ಸಂಗ್ರಹಿಸಿ

## 3.2.7. ಪರಾಮರ್ಶನ ಸೂಚಿ


1. Viplav Mehta, What are the economic effects of urbanization? www.quora.com.
2. Camilla siu Na Ho (1991), Economic hardship, family relationships and adolescent distress, IOWAStateUniversity, http://lib.dr.iastate.edu/rtd.
3. HO, Camilla S; Lempers, Jacques, D: clarklampers, Damia S, Effects of Economic Hardship on adolescent self esteem: A family mediation model, www.questia.com.
4. Flisher A.J. et al (2001) urbanization and adolescent risk behavior, south african medical journal.
5. Mehta. P (1992) Urbanization and its consequences on children. ICCW News Bull, 1992 July-Dec.
6. WiheminaKalu, Impact of urbanization on life patterns of the adolescent, Scholar. Google.co.in.
7. 7. Coleman, 1974: In Camilla S. et al.(1995): Effects of Economic Hardship on Adolescent Self-Esteem:PUBLICATION:Adolescence,VOLUME/ISSUE: Vol. 30, No. 117, PUBLICATION DATE:Spring 1995)_
8. Conger, K.J., Matthews L.S., Elder, G.H., Jr. (1999).Pathways of economic influence on adolescent adjustment. Am Aug;27(4):519-41.
9. Patterson, Dishion& Bank (1984). Patterson, G. R., Dishion, T. J., & Bank, L. (1984). Family interaction: A process model of deviancy training. Aggressive Behaviour. 10. 253-267.
10. Coleman, J. C. (1974). Relationships in adolescence. Boston, MA: Routledge & Kegan Paul.
11. Weiss, R. S. (1974). The provisions of social relationships. In Z. Rubin (Ed.), Doing unto others. Englewood Cliffs, NJ: Prentice-Hall.
12. Ibrahim F. Baig (2013). Examining the Impact Information Communication Technology (ICT) Has on Adolescents with Disabilities. International Journal of Information and Education Technology, Vol. 3, No. 6, December 2013.
13. Walter Renner(2014).The Effects of Globalization on Indian Youth: Health Related Concerns and Empirical Findings from Moral Foundations Theory - Conference Paper Conference: International Scientific and Research Conference: “Current Issues of Science and Research in the Global World” at Vienna.
14. INFORMATION AND COMMUNICATION TECHNOLOGIES AND THEIR IMPACT ON CHILDREN AND YOUTH HEALTH, School and Health 21, 3/ 2008, Social and Health Aspects of Health Education.

15. Brignall, T.W., III &Valey, T. V. (2005). The impact of Internet communication on social interaction. Sociological Spectrum, 25, 335-348

16. Freeman-Longo, R. E. (2000). Children, teens, and sex on the Internet. Sexual Addiction and Compulsivity, 7, 75-90.

17. Pankoke-Babatz, U., & Jeffrey, P. (2002). Documented norms and conventions on the internet. International Journal of Human-Computer Interaction, 14(2), 219-235.

18. Fleming, M.&Rickwood, D. (2004). Teens in cyberspace. Youth Studies Australia.

19. Brignall, T.W. III&Valey, T. V. (2005). The impact of Internet communication on social interaction. Sociological Spectrum, 25, 335-348.

20. Littlefield, L. (2004, November 3). Psychosocial aspects of mobile phone use among adolescents. Melbourne: The Australian Psychological Society.

21. Bryant, J. A., Sanders-Jackson, A., & Smallwood A. M. K. (2006). IMing, text messaging, adolescent social networks. Journal of Computer-Mediated Communication, 11(2), article 10.

22. . Brignall, T.W., III&Valey, T. V. (2005). The impact of Internet communication on social interaction. Sociological Spectrum, 25, 335-348

23. Wakefield, M. A.& Rice, C. J. (2008). The impact of cyber-communication on today's youth (ACAPCD-14). Alexandria, VA: American Counselling Association.

24. Olsen, S. (2006). Keeping kids safe on social sites. Retrieved July 17, 2006, from CNET News.com. Pankoke-Babatz, U.& Jeffrey, P. (2002).

25. Subrahmanyam, Kaveri, and Gloria Lin (Winter, 2007). "Adolescents on the net: internet use and well-being. (Survey). ." Adolescence, 42 (168): pp.659-681.

26. Gogineni R.R., Kallivayalil, R.A., Sharma, S., Rataemane, S., &Akhtar, S. Globalization of culture: Impact on Indian psyche. Indian J. Soc. Psychiatry, 2018.

27. Petersen, Anne C. (2000). Adolescents in the 21st century: Preparing for an uncertain future in Furlong, Andy, and Carmel, Fred (1997, 2007). Young people and social change: Individualization and risk in modernity. Buckingham: Open University Press.

28. https://www.way.org.my/.../youth.../Youth%20an...

*********************

# ಬ್ಲಾಕ್ 3 : ಹದಿಹರೆಯದವರ ವಿಚಾರಗಳು ಮತ್ತು ಕಾಳಜಿಗಳು

## ಘಟಕ 3 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಮಾಧ್ಯಮದ ಪರಿಣಾಮ

**ಅಧ್ಯಾಯದ ರಚನೆ:**


3.3.1. ಕಲಿಕಾ ಉದ್ದೇಶಗಳು

3.3.2. ಪೀಠಿಕೆ

3.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.3.3.1. ಹದಿಹರೆಯದವರ ಮೇಲೆ ಮಾಧ್ಯಮದ ಧನಾತ್ಮಕ ಪರಿಣಾಮ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ– 1

3.3.3.2. ಹದಿಹರೆಯದವರ ಮೇಲೆ ಮಾಧ್ಯಮದ ಋಣಾತ್ಮಕ ಪರಿಣಾಮ

ನಿಮ್ಮ ಪ್ರಗತಿ ಪರೀಕ್ಷಿಸಿಕೊಳಿ– 2

3.3.3.3. ಹದಿಹರೆಯದವರ ಮೇಲೆ ಮಾಧ್ಯಮದ ಪರಿಣಾಮವನ್ನು ನಿರ್ವಹಿಸುವ ಕ್ರಮಗಳು–ಪೋಷಕರಿಗೆ ಸಲಹೆಗಳು.

3.3.4. ಸಾರಾಂಶಿಸೋಣ

3.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

3.3.6. ಘಟಕಾಂತ್ಯ ಅಭ್ಯಾಸಗಳು

3.3.7. ಪರಾಮರ್ಶನ ಗ್ರಂಥಗಳು


### 3.3.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಹದಿಹರೆಯದವರ ಮೇಲೆ ಮಾಧ್ಯಮದ ಧನಾತ್ಮಕ ಪ್ರಭಾವವನ್ನು ಚರ್ಚಿಸುವರು;
- ಹದಿಹರೆಯದವರ ಮೇಲೆ ಮಾಧ್ಯಮದ ಋಣಾತ್ಮಕ ಪ್ರಭಾವವನ್ನು ವಿಶ್ಲೇಷಿಸುವರು; ಮತ್ತು
- ಹದಿಹರೆಯದವರ ಮೇಲೆ ಮಾಧ್ಯಮದ ಪ್ರಭಾವವನ್ನು ನಿರ್ವಹಿಸಲು ಕ್ರಮಗಳನ್ನು ಸೂಚಿಸುವರು;

### 3.3.2. ಪೀಠಿಕೆ:

ಸಾಮಾಜಿಕ ಮತ್ತು ಆರ್ಥಿಕ ಪರಿಸರದಲ್ಲಿನ ಬದಲಾವಣೆಗಳಿಗೆ ಅತ್ಯಂತ ಹೆಚ್ಚು ಪ್ರಭಾವಕ್ಕೊಳಗಾಗುವ ಸಮಾಜದ ಭಾಗವೇ ಹದಿಹರೆಯದವರದು. ಮಾರುಕಟ್ಟೆ ಆಧಾರಿತ ಆರ್ಥಿಕತೆ ಮತ್ತು ಜೀವನ ಶೈಲಿ ಯುವಜನರಲ್ಲಿ ಮಾಧ್ಯಮದ ಬಗ್ಗೆ ಆಸಕ್ತಿ ಮೂಡಲು ಕಾರಣವಾಗಿದೆ. ಎಲೆಕ್ಟ್ರಾನಿಕ್ ಮಾಧ್ಯಮ ಅದರಲ್ಲೂ ಪ್ರಮುಖವಾಗಿ ದೂರದರ್ಶನ ಹದಿಹರೆಯದವರ ವರ್ತನೆ ಹಾಗೂ ಜೀವನದ ಆಯ್ಕೆಗಳ ಮೇಲೆ ಪ್ರಭಾವ

ಬೀರುತ್ತಿದೆ. ವಿಶ್ವದಾದ್ಯಂತ ಕಂಡುಬಂದಂತೆ ಮಾಧ್ಯಮವು ಹದಿಹರೆಯದವರಲ್ಲಿ ಹಿಂಸೆ ಹಾಗೂ ಅಪರಾಧಿ ವರ್ತನೆಗಳನ್ನು ಹೆಚ್ಚಿಸುತ್ತಿದೆ. ಗ್ರಾಹಕ ರೀತಿಯ ಜೀವನ ಶೈಲಿ ಅಳವಡಿಸಿಕೊಳ್ಳುವಲ್ಲಿ ಕುಟುಂಬದ ಸದಸ್ಯರಲ್ಲಿ ಅಶಾಂತಿಗೆ ಕಾರಣವಾಗುತ್ತಿದೆ. ಅನಿಶ್ಚಯವಾದ ಭವಿಷ್ಯ ಮತ್ತು ಲಾಭಕರ ಉದ್ಯೋಗಗಳ ಕೊರತೆ ಹದಿಹರೆಯದವರಲ್ಲಿ ಆತಂಕವನ್ನು ಹೆಚ್ಚಿಸುತ್ತಿದೆ. ಹದಿಹರೆಯದವರು ಮಾಧ್ಯಮಗಳ ಮೇಲೆ ಹೆಚ್ಚು ಅವಲಂಬಿತರಾಗುವಂತೆ ಮಾಡುತ್ತಿದೆ. ಕಳೆದ ದಶಕದಿಂದ ಮಾಧ್ಯಮ ಎಲ್ಲರನ್ನು ತಲುಪುತ್ತಿರುವುದರಿಂದ ಸಣ್ಣ ಸಣ್ಣ ಪಟ್ಟಣಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಹದಿಹರೆಯದವರು ಮಾಧ್ಯಮದ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ.

## 3.3.3. ಹದಿಹರೆಯದವರ ಮೇಲೆ ಮಾಧ್ಯಮದ ಪರಿಣಾಮ:

ಮಾಧ್ಯಮ ಇಂದು ಹದಿಹರೆಯದವರ ಮೇಲೆ ಆಗಾಧವಾದ ಪರಿಣಾಮ ಬೀರುತ್ತಿದೆ. ದೂರದರ್ಶನ, ಕಂಪ್ಯೂಟರ್, ವೀಡಿಯೋ ಆಟಗಳು ಮತ್ತು ಸಾಮಾಜಿಕ ಜಾಲತಾಣಗಳು ಹದಿಹರೆಯದವರ ಜೀವನದ ಮೇಲೆ ಮಹತ್ತರವಾದ ಪರಿಣಾಮ ಬೀರುತ್ತವೆ. ಆದರೆ ಮಾಧ್ಯಮದಲ್ಲಿರುವುದೆಲ್ಲವೂ ಕೆಟ್ಟದ್ದಲ್ಲ. ಅದನ್ನು ಸರಿಯಾದ ರೀತಿ ಬಳಸಿಕೊಂಡರೆ, ಮಾಧ್ಯಮವು ಜೀವನವನ್ನು ಒಳ್ಳೆಯ ರೀತಿಯಲ್ಲಿ ಬದಲಾಯಿಸಿಬಲ್ಲದು, ಮಾಧ್ಯಮ ಹದಿಹರೆಯದ ಮಕ್ಕಳ ಮೇಲೆ ಎರಡೂ ರೀತಿಯ–ಧನಾತ್ಮಕ ಹಾಗೂ ಋಣಾತ್ಮಕ– ಪರಿಣಾಮಗಳನ್ನು ಉಂಟುಮಾಡಿದೆ.

ಮುಂದುವರೆದ ಮತ್ತು ಮುಂದುವರೆಯುತ್ತಿರುವ ದೇಶಗಳಲ್ಲಿರುವ ಹದಿಹರೆಯದವರಲ್ಲಿ ಹಣಉಳ್ಳವರು ಇತ್ತೀಚೆಗೆ ಜಾಲತಾಣದಲ್ಲಿ ಕಾಲಕಳೆಯುವ ಸಮಯವನ್ನು ಹೆಚ್ಚುಮಾಡುತ್ತಿದ್ದಾರೆ.ಆದರೆ ಹಿರಿಯ ಹದಿಹರೆಯದವರು ದೂರದರ್ಶನ ವೀಕ್ಷಿಸುವುದನ್ನು ಕಡಿಮೆಮಾಡುತ್ತಿದ್ದಾರೆ, ವೀಡಿಯೊ ಆಟಗಳನ್ನಾಡುವುದರಲ್ಲಿ ಮತ್ತು ಸಂಗೀತ ಆಲಿಸುವುದು, ಕಂಪ್ಯೂಟರ್ ಬಳಸುವುದು ಇವುಗಳಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ.

ಹದಿಹರೆಯದವರು ಅವರ ಹಿಂದಿನ ಹಂತದ ಮಕ್ಕಳಿಗಿಂತ ಮುದ್ರಣ ಮಾಧ್ಯಮವನ್ನು ಹೆಚ್ಚು ಬಳಸುತ್ತಾರೆ. ಆದರೆ ಈ ಬಗ್ಗೆ ಮಾಧ್ಯಮಗಳ ಬಳಕೆಯಲ್ಲಿ ಹೆಚ್ಚು ವ್ಯಕ್ತಿ ವ್ಯತ್ಯಾಸಗಳಿರುವುದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಹದಿಹರೆಯದವರ ಮೇಲೆ ಮಾಧ್ಯಮಗಳ ಪರಿಣಾಮವೇನು ಎಂಬುದು ಪ್ರಸ್ತುತ ನಾವು ಗಮನಿಸಬೇಕಾದ ವಿಷಯ.

**ಅಭ್ಯಾಸ–2**

ಈ ಕೆಳಗೆ ದೂರದರ್ಶನದ ಪರಿಣಾಮಕ್ಕೆ ಸಂಬಂಧಿಸಿದ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳು ನಿಮ್ಮ ಪ್ರಕಾರ ಹೌದಾದರೆ 'ಹೌದು' ಎಂದೂ ಇಲ್ಲವಾದರೆ 'ಇಲ್ಲ' ಎಂದೂ ತಿಳಿಸಿ.

**ದೂರದರ್ಶನವು**

1. ಮನೋರಂಜನೆಯನ್ನು ಒದಗಿಸುತ್ತದೆ
2. ಮುದ್ರಣ ಮಾಧ್ಯಮದಿಂದ ದೂರವಿಡುತ್ತದೆ
3. ನಿಷ್ಕ್ರಿಯ ಚಟುವಟಿಕೆಯನ್ನು ಪೋಷಿಸುತ್ತದೆ.
4. ಅಪಾಯಕಾರಿ ಆಕ್ರಮಣಕಾರಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ.
5. ಚಿಂತನೆಯನ್ನು ಕುಂಠಿತಗೊಳಿಸುತ್ತದೆ.
6. ವಿಷಯಗಳ ವಿಶ್ಲೇಷಣಾ ಸಾಮರ್ಥ್ಯವನ್ನು ಮೊಟಕುಗೊಳಿಸುತ್ತದೆ.
7. ಲಿಂಗಪಾತ್ರ ರೂಢಿಗಳನ್ನು ಪೋಷಿಸುತ್ತದೆ.

8. ಮಹಿಳೆಯರು ಮತ್ತು ಪುರುಷರ ಸ್ವಭಾವವನ್ನು ವಾಸ್ತವಕ್ಕೆ ದೂರವಾಗಿ ಚಿತ್ರಿಸುತ್ತದೆ.

9. ಜೀವನದ ಅವಾಸ್ತವಿಕ ಚಿತ್ರಣವನ್ನು ನೀಡುತ್ತದೆ.

10. ಉತ್ತಮ ಹವ್ಯಾಸಗಳನ್ನು ಬೆಳೆಸುತ್ತದೆ.

11. ಸಹಜವಲ್ಲದ ಪ್ರವೃತ್ತಿಗಳನ್ನು ಸಹಜವೆಂಬಂತೆ ನಂಬಿಸುತ್ತದೆ.

12. ಮಹಿಳೆಯರು ಕಾಲದ ಸದುಪಯೋಗ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

13. ಮಕ್ಕಳಿಗೆ ಉತ್ತಮ ಶೈಕ್ಷಣಿಕ ಅನುಭವಗಳನ್ನು ನೀಡುತ್ತದೆ.

14. ಸೃಜನಶೀಲತೆಯನ್ನು ಕುಂಠಿತಗೊಳಿಸುತ್ತದೆ.

ನೀವು ದೂರದರ್ಶನದ ಹಲವಾರು ಒಳ್ಳೆಯ ಮತ್ತು ಒಳ್ಳೆಯದಲ್ಲದ ಪರಿಣಾಮಗಳನ್ನು ಗುರುತಿಸುವಿರಿ. ಇದು ಮಾಧ್ಯಮಕ್ಕೆ ಸಂಬಂಧಿಸಿದ ಇತರ ಸಾಧನಗಳಿಗೆ ಸಂಬಂಧಿಸಿದಂತೆಯೂ ನಿಜವೇ. ಒಟ್ಟಿನಲ್ಲಿ ಮಾಧ್ಯಮವು ಹದಿಹರೆಯದವರ ಮೇಲೆ ಉಂಟು ಮಾಡುವ ಧನಾತ್ಮಕ ಮತ್ತು ಋಣಾತ್ಮಕ ಪ್ರಭಾವಗಳನ್ನು ಈ ಘಟಕದಲ್ಲಿ ಚರ್ಚಿಸೋಣ.

### 3.3.3.1. ಹದಿಹರೆಯದವರ ಮೇಲೆ ಮಾಧ್ಯಮದ ಧನಾತ್ಮಕ ಪರಿಣಾಮಗಳು:

**1. ಸಮಾಜದ ಅರಿವು ಬೆಳೆಸಲು ಸಹಾಯಕ:** ಹೆಚ್ಚಿನ ಹದಿಹರೆಯದವರು ಮನೆಯ ಮಗುವಾಗಿಯೇ ಹಿರಿಯರ 'ಸುಭದ್ರ' ಕೋಟೆಯಲ್ಲಿ ಬದುಕು ಸಾಗಿಸುತ್ತಿರುತ್ತಾರೆ. ಆದರೆ ಮಾಧ್ಯಮಕ್ಕೆ ತೆರೆದುಕೊಳ್ಳುವುದರಿಂದ ಸಮಾಜ ಹಾಗೂ ಜಗತ್ತಿನ ವಿದ್ಯಮಾನಗಳ ಕುರಿತು ಜಾಗೃತರಾಗುತ್ತಾರೆ. ಸಾಮಾಜಿಕ ಜವಾಬ್ದಾರಿಯುಳ್ಳ ಪ್ರಜೆಗಳನ್ನು ರೂಪಿಸಲು ಈ ಸಾಂಸ್ಕೃತಿಕ ಮತ್ತು ರಾಜಕೀಯ ಜಾಗೃತಿ ಅತ್ಯಂತ ಅವಶ್ಯಕ. ಜಾಗತಿಕ ಸಮಾಚಾರಗಳಿಂದ ತುಂಬಿ ತುಳುಕುತ್ತಿರುತ್ತವ ದೂರದರ್ಶನದ ವಾರ್ತಾ ವಾಹಿನಿಗಳು, ನಿಯತಕಾಲಿಕೆಗಳು, ಸಾಮಾಜಿಕ ಜಾಲತಾಣಗಳು ಹದಿಹರೆಯದವರಿಗೆ ತನ್ನ ನೆರೆಕೆರೆಗಿಂತ ಜಗತ್ತಿನಲ್ಲಿ ಅತಿ ಹೆಚ್ಚಿನ ವಿದ್ಯಮಾನಗಳು ನಡೆಯುತ್ತಿರುತ್ತವೆ ಎಂಬುದನ್ನು ಕಂಡುಕೊಳ್ಳಲು ಸಹಾಯ ಮಾಡುತ್ತವೆ.

**2. ಸಾಮಾಜಿಕ ಕೌಶಲಗಳನ್ನು ಬೆಳೆಸಲು ಸಹಾಯಕ:** ಹೆಚ್ಚಿನ ಹದಿಹರೆಯದವರು ಸಾಮಾಜಿಕವಾಗಿ ಆಭಾಸ ಮಾಡಿಕೊಳ್ಳುವುದುಂಡು. ಮಾಧ್ಯಮಅವರಿಗೆ ಸಾಮಾಜಿಕ ಕೌಶಲಗಳನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತದೆ. ಹೊಸ ಸ್ನೇಹಿತರನ್ನು ಗಳಿಸಿಕೊಳ್ಳಲು ನೆರವಾಗುವುದರ ಮೂಲಕ ಇದು ಅವರ ಸಾಮಾಜಿಕ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇದರ ಜೊತೆಗೆ ಸಾಮಾಜಿಕ ವಿಶ್ವಾಸ, ಮಾಧ್ಯಮಗಳ ಬಳಕೆಯಲ್ಲಿ ಹೆಚ್ಚಿನ ಸಾಕ್ಷರತೆ ಮತ್ತು ಹೆಚ್ಚಿನ ಸಾಮಾಜಿಕ ಬೆಂಬಲ ಪಡೆಯಲು ಇದರಿಂದ ಸಾಧ್ಯವಾಗುತ್ತದೆ. ಸಾಮಾಜಿಕ ಮಾಧ್ಯಮಅವರಲ್ಲಿ ವೈವಿಧ್ಯಮಯವಾದ ಸಾಮಾಜಿಕ ಕೌಶಲಗಳನ್ನು ಬೆಳೆಸುವುದರ ಜೊತೆಗೆ, ಆಧುನಿಕ ಸಮಾಜದಲ್ಲಿ ಯಶಸ್ವಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲು ನೆರವಾಗುತ್ತದೆ. ತತ್ ಕ್ಷಣದಲ್ಲಿ ಸಂದೇಶಗಳ ರವಾನೆಯಗುವುದರಿಂದ ಹದಿಹರೆಯದ ಸ್ನೇಹಿತರಲ್ಲಿ ನಿಕಟ ಬಾಂಧವ್ಯ ಬೆಳೆಯುವ ಅವಕಾಶಗಳು ಹೆಚ್ಚು. ಅಪರಿಚಿತರೂ ಸಾಮಾಜಿಕ ಬೆಂಬಲ ನೀಡಬಹುದು. ಗೂಗಲ್ ಗೆಳೆತನ, ಫೇಸ್ ಬುಕ್ ಗೆಳೆತನ ಬೆಳೆಯಲು ಸಾಧ್ಯವಾಗುತ್ತದೆ.

**3. ಹದಿಹರೆಯದವರು ಮಾಧ್ಯಮಗಳಿಗೆ ತೆರೆದುಕೊಳ್ಳುವದಷ್ಟೇ ಮುಖ್ಯವಲ್ಲ; ಅದನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದು ಪ್ರಮುಖವಾದ ಅಂಶ.** ಸರಿಯಾದ ರೀತಿಯಲ್ಲಿ ಸ್ವೀಕರಿಸಿದರೆ, ಮಾಧ್ಯಮ ಹದಿಹರೆಯದವರಲ್ಲಿ ಸ್ಫೂರ್ತಿತುಂಬುತ್ತದೆ: ಹದಿಹರೆಯದ ವ್ಯಕ್ತಿ ಹೊಡೆದಾಟದ ಚಿತ್ರಗಳನ್ನು ನೋಡಿದಾಗ, ಅದರಲ್ಲಿರುವ ಹಿಂಸೆಯನ್ನು ಋಣಾತ್ಮಕವಾಗಿಯೇ ಸ್ವೀಕರಿಸುತ್ತಾನೆ ಎಂದು ಹೇಳಲಾಗುವುದಿಲ್ಲ. ಸಮಾಜದ ಈ ಚಿತ್ರವನ್ನು ಬದಲಿಸುವಲ್ಲಿ ನಾನೇನು ಮಾಡಬಹುದು ಎಂದು ಆಲೋಚಿಸಬಹುದು. ತನ್ನಲ್ಲೇ ಒಬ್ಬ ಉತ್ತಮ ನಾಯಕನನ್ನು ಕಾಣಬಹುದು.

ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿದರೆ ಆ ಚಿತ್ರವನ್ನು ಸ್ಫೂರ್ತಿಯಚಿಲುಮೆಯಾಗಿ ಬಳಸಿಕೊಳ್ಳಬಹುದು. ಬ್ರೂಸ್‌ಲೀಯಂತಹ ಚಿತ್ರಗಳನ್ನು ನೋಡಿ ಹದಿಹರೆಯದವನು ಕರಾಟೆ ಕಲಿಯಲು ಪ್ರಾರಂಭಿಸಬಹುದು, ಹದಿಹರೆಯದವರು ತಾವು ಮೆಚ್ಚಿದ ನಾಯಕನನ್ನು ಅನುಕರಿಸಲು ಬಯಸುತ್ತಾರೆ. ಅವನು ಮಾದಕ ವಸ್ತುಗಳಿಂದ ದೂರವಿರಿ ಎಂದು ಹೇಳಿದರೆ ಅವರು ಅದನ್ನು ಪಾಲಿಸುತ್ತಾರೆ. ದೇಶದ ಮೂಲೆಮೂಲೆಗಳಲ್ಲಿರುವ ಪ್ರತಿಭಾಸಂಪನ್ನ ಗಾಯಕರನ್ನು, ನಟರನ್ನು ಗುರುತಿಸಬಹುದು. ಅವಕಾಶವಿರದಿದ್ದ ಪ್ರತಿಭಾ ಸಂಪನ್ನರನ್ನು ಪ್ರೋತ್ಸಾಹಿಸಿ 'ಸ್ಟಾರ್' ಗಳಾಗಲು ಸೆಲೆಬ್ರಿಟಿಗಳಾಗಿ ಮಿಂಚಲು ಮಾಧ್ಯಮವು ಸಹಾಯವಾಗುವುದು.

**4. ಸೂಕ್ಷ್ಮಚಲನ ಕೌಶಲಗಳನ್ನು ಕಲಿಯಲು ಸಹಾಯಕ:** ವೀಡಿಯೋ ಗೇಮ್ಸ್‌ಗಳನ್ನು ಸಾಮಾನ್ಯವಾಗಿ ಎಲ್ಲರೂ ಟೀಕಿಸುವುದನ್ನು ಕಾಣುತ್ತೇವೆ. ಆದರೆ ಇದರಲ್ಲಿಯೂ ಕೆಲವು ಉತ್ತಮ ಅಂಶಗಳಿವೆ. ಕೆಲವು ವೀಡಿಯೋ ಆಟಗಳ ಮೂಲಕ ಹದಿಹರೆಯದ ಮಕ್ಕಳು ಸೂಕ್ಷ್ಮವಾದ ಚಲನ ಕೌಶಲಗಳು ಹಾಗೂ ಸಮನ್ವಯವನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ.

**5. ಓದು-ಬರಹದ ಕೌಶಲಗಳನ್ನು ರೂಡಿಸಿಕೊಳ್ಳಲು ಸಹಾಯಕ:** ಒರ್ವ ಪ್ರಖ್ಯಾತನಾದ ವ್ಯಕ್ತಿ ತನ್ನ ಅಚ್ಚು-ಮೆಚ್ಚಿನ ಪುಸ್ತಕದ ಬಗ್ಗೆ ಮಾತನಾಡಿದಾಗ ಹದಿಹರೆಯದವರೂ ಸಹ ಆ ಪುಸ್ತಕ ಪಡೆದುಕೊಳ್ಳಲು ಇಚ್ಚಿಸುತ್ತಾರೆ. ಇದರೊಂದಿಗೆ ಅಂತರ್‌ಜಾಲದ ಬ್ಲಾಗ್‌ಗಳಲ್ಲಿ, ಹರಟೆಕೋಣೆ (Chat room)ಗಳಲ್ಲಿ ಭಾಗವಹಿಸಲು ಇಚ್ಛಿಸಿದಾಗ ಅವರು ತಮ್ಮ ಓದು ಮತ್ತು ಬರಹದ ಕೌಶಲಗಳನ್ನು ಸುಧಾರಿಸಿಕೊಳ್ಳಬೇಕಾಗುತ್ತದೆ. ಇಂದಿನ ಹದಿಹರೆಯದ ಮಕ್ಕಳು ಹೆಚ್ಚಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪಾಲ್ಗೊಳ್ಳುವುದರಿಂದ ಅವರ ಓದು-ಬರಹ ಸಾಮರ್ಥ್ಯ ಹೆಚ್ಚಾಗುತ್ತದೆ. ಸಾಹಿತ್ಯಾಸಕ್ತಿ ಬೆಳೆಸಿಕೊಂಡು ಉದಯೋನ್ಮುಖ ಬರಹಗಾರರಾಗಬಹುದು.

**ಶೈಕ್ಷಣಿಕ ನಿಹಿತಾರ್ಥಗಳು**

- ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ಆಯ್ಕೆಯ ಮೇರೆಗೆ ವೀಕ್ಷಿಸಲು ಮಾರ್ಗದರ್ಶನ ಮಾಡಬೇಕು.
- ಸಾಮಾಜಿಕ ಕೌಶಲಗಳು ಮೂಡುವುದರೊಂದಿಗೆ ಸಾಮಾಜಿಕ ಮಾಧ್ಯಮಗಳು ಒಡ್ಡುವ ಅಪಾಯಗಳ ಬಗ್ಗೆ ಅರಿವು ಮೂಡಿಸಬೇಕು.
- ಮಾಧ್ಯಮಗಳನ್ನು ಹೇಗೆ, ಎಷ್ಟು ಬಳಸಬೇಕು ಎಂಬುದನ್ನು ಕುರಿತ ಅರಿವು ಮೂಡಿಸಬೇಕು.
- ಏನನ್ನು ಜನರು ಇಷ್ಟಪಡುತ್ತಾರೆ ಎನ್ನುವುದಕ್ಕಿಂತ ಏನನ್ನು ಇಷ್ಟಪಡಬೇಕು ಎಂಬುದರ ಕುರಿತು ತಿಳಿಹೇಳಬೇಕು. ಚಿಂತನೆಯನ್ನು ಉದ್ದೀಪಿಸುವ, ಸಾಮಾಜಿಕ ಸಂವೇದನೆಗಳಿಗೆ ಒಳಗುಮಾಡುವ, ಸುದ್ದಿ ಆಧಾರಿತ ಕಾರ್ಯಕ್ರಮಗಳನ್ನು ವೀಕ್ಷಿಸಲು ಪ್ರೋತ್ಸಾಹಿಸಬೇಕು.
- ಓದುವ ಆಸಕ್ತಿಯನ್ನು ಬೆಳೆಸುವ ರೀತಿಯ ಮಾಧ್ಯಮಗಳ ಬಳಕೆಯನ್ನು ಉತ್ತೇಜಿಸಬೇಕು
- ಮಾಧ್ಯಮಗಳ ಬಳಕೆ ಕೇವಲ ಮನರಂಜನೆಗೆ ಮಾತ್ರವಲ್ಲದೆ ಇತರ ಅವಶ್ಯಕ ಅರಿವು ಮತ್ತು ಕೌಶಲಗಳನ್ನು ಬೆಳೆಸುತ್ತಿದೆಯೇ ಎಂಬುದನ್ನು ಗಮನಿಸಿಕೊಳ್ಳುತ್ತಿರಬೇಕು.
- ಮನೆಯವರೊಂದಿಗೆ ಮತ್ತು ಶಾಲೆಯ ಗೆಳೆಯರೊಂದಿಗೆ ದೂರದರ್ಶನ ಮತ್ತಿತರ ಮಾಧ್ಯಮಗಳ ಮಾಹಿತಿಗಳ/ ಕಾರ್ಯಕ್ರಮಗಳ ಕುರಿತು ಆಗಾಗ್ಗೆ ಬಗ್ಗೆ ಚರ್ಚೆ ಮಾಡಬೇಕು.
- ಮಾಹಿತಿ/ ಕಾರ್ಯಕ್ರಮಗಳನ್ನು ಮನೋರಂಜನೆಯ ದೃಷ್ಟಿಯಿಂದ ಮಾತ್ರವಲ್ಲದೆ ಬೌದ್ಧಿಕ- ವೈಚಾರಿಕ ದೃಷ್ಟಿಯಿಂದ ನೋಡಲು ಮತ್ತು ವಿಮರ್ಶಿಸಲು ತಿಳಿಸಿಕೊಡಬೇಕು.
- ಏಕಪಕ್ಷೀಯ/ ಪೂರ್ವಾಗ್ರಹದ ಅಭಿಪ್ರಾಯಗಳನ್ನು ಮೀರಿ ವಸ್ತುನಿಷ್ಠವಾಗಿ ಮಾಧ್ಯಮಗಳ ಮಾಹಿತಿಗಳನ್ನು ವಿಚಾರಮಾಡಲು ತರಬೇತಿ ನೀಡಬೇಕು.
- ಜಾಹೀರಾತುಗಳನ್ನು ಎಚ್ಚರಿಕೆಯಿಂದ ವಿಮರ್ಶಿಸಿ ಸ್ವೀಕರಿಸಲು ಕಲಿಸಬೇಕು.

• ಮಾಧ್ಯಮಗಳು ಒದಗಿಸುವ ವಾರ್ತೆಯ/ಕಾರ್ಯಕ್ರಮಗಳ ಸಿಂಧುತ್ವ ಗುರುತಿಸಲು ತರಬೇತಿ ನೀಡಬೇಕು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ಹದಿಹರೆಯದವರ ಮೇಲೆ ಧನಾತ್ಮಕ ಪರಿಣಾಮ ಬೀರುವ ಯಾವುದಾದರೂ ಆರು ಅಂಶಗಳನ್ನು ಪಟ್ಟಿ ಮಾಡಿರಿ:

1.

2.

3.

4.

5.

6.

## 1.3.3.2. ಹದಿಹರೆಯದವರ ಮೇಲೆ ಮಾಧ್ಯಮದ ಋಣಾತ್ಮಕ ಪರಿಣಾಮ

ನಾವು ಇಂದು ಮಾಹಿತಿ ಪ್ರಪಂಚದಲ್ಲಿ ಮುಳುಗಿ ಹೋಗುತ್ತಿದ್ದೇವೆ. ಆದರೆ ಹದಿಹರೆಯದವರಿಗೆ ಮಾಹಿತಿಯನ್ನು ಸರಿಯಾಗಿ ಬಳಸಿಕೊಳ್ಳುವ ಸಿದ್ಧತೆ ಇಲ್ಲವಾದರೆ ಅಪಾಯಗಳಾಗುವ ಸಂದರ್ಭಗಳೇ ಹೆಚ್ಚು. ಸಾಮಾಜಿಕ ಮಾಧ್ಯಮದ ಋಣಾತ್ಮಕ ಪರಿಣಾಮಗಳನ್ನು ಗಮನಿಸಿ:

ಫೇಸ್‌ಬುಕ್ ಖಿನ್ನತೆ: ಸಾಮಾಜಿಕ ಮಾಧ್ಯಮಕ್ಕೆ ಸಂಬಂಧಿಸಿದ ಭಾವನಾತ್ಮಕ ಅಡಚಣೆ ಇದು. ಸಾಮಾಜಿಕ ಮಾಧ್ಯಮದ ಜೊತೆಗಾರರೊಡನೆ ತಾವು ಸರಿಸಮವಾಗಿಲ್ಲ ಎಂದೆನಿಸಿದಾಗ ಹದಿಹರೆಯದವರು ಒಂದು ರೀತಿಯ ಖಿನ್ನತೆಗೆ ಒಳಗಾಗುತ್ತಾರೆ. ಇದೇ ಫೇಸ್‌ಬುಕ್ ಖಿನ್ನತೆ. ಫೇಸ್‌ಬುಕ್ ಜೊತೆಗಾರರಿಗೆ ಸರಿಸಮಾನವಾಗಲು ಅಥವಾ ಅವರನ್ನು ಮೀರಿ ಮುಂದೆ ಹೋಗಲು ಯತ್ನಿಸಿ ಸಾಧ್ಯವಾಗದಾದಾಗ ಈ ರೀತಿಯ ಭಾವನಾತ್ಮಕ ಅಡಚಣೆ ಉಂಟಾಗುತ್ತದೆ.

**4. ವಿಕೃತದೇಹದ ಬಿಂಬ:** ಇಂದು ವಿಶ್ವದಾದ್ಯಂತ ಪರಿಪೂರ್ಣತೆಯಿಂದ ಕೂಡಿದ ಜನರ ಕುರಿತದ್ದೇ ಮಾತು. ಹೊಳೆಯುವ ಚರ್ಮ, ಮಾಟವಾದ ದೇಹ ಮತ್ತು ಒತ್ತಾದ ಕಪ್ಪಗಿನ ಆಕರ್ಷಕ ಕೇಶರಾಶಿ – ಹೀಗೆ ಯುವಜನಾಂಗದವರೆಲ್ಲರಿಗೂ ಎಲ್ಲವೂ ಅಮೋಘವಾಗಿಯೇ ಇರಬೇಕು. ಇದರ ಕಡೆಗೇ ಎಲ್ಲರ ಗಮನ. ಇದು ಸ್ವಾಭಾವಿಕವಲ್ಲ, ಸಹಜವಲ್ಲ ಎಂಬುದನ್ನು ಮಾಧ್ಯಮಗಳು ತಿಳಿಹೇಳದೆ ಈ ಭ್ರಮೆಯಲ್ಲೇ ಯುವಜನಾಂಗವನ್ನು ಮುಳುಗಿಸಿ ಬಿಡುತ್ತದೆ. ಪೋಟೋಷಾಪ್‌ನ ತಾಂತ್ರಿಕತೆ ಅಸಾಧ್ಯವಾದುದೆಲ್ಲವನ್ನೂ ಸಾಧ್ಯವಾಗಿಸುತ್ತದೆ. ಈ ಭ್ರಮೆಯನ್ನೇ ಯುವಜನರು ನಿಜವೆಂದು ನಂಬುತ್ತಾರೆ. ದೇಹಬಿಂಬದ ಸಂಘರ್ಷದಿಂದ ಅನೆರಾಕ್ಸಿಯ ಮತ್ತು ಬುಲಿಮಿಯ (ಹಸಿವು ರೋಗ) ದಂತಹ ಸಮಸ್ಯೆಗಳನ್ನು ಕಾಣುತ್ತೇವೆ. ಇದು ಕೇವಲ ಹದಿಹರೆಯದ ಹುಡುಗಿಯರಿಗಷ್ಟೆ ಸೀಮಿತವಾಗಿರದೇ ಹುಡುಗರಲ್ಲಿಯೂ ಕಂಡುಬರುತ್ತಿದೆ. ಮಾಧ್ಯಮದಿಂದ ಜನಪ್ರಿಯವಾದ ದೇಹಬಿಂಬ ಹೊಂದಲು ಸಾಧ್ಯವಾಗದಿದ್ದಾಗ ತಾವು ಸುಂದರವಾಗಿಲ್ಲವೆಂದು ಭಾವಿಸುವುದೇ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ.

**2. ಹಿಂಸೆಯೇ ಸಹಜವೆಂಬ ಮನೋಭಾವ ಮೂಡಿಸುವಿಕೆ:** ಇಂದು ದೂರದರ್ಶನ, ವೀಡಿಯೋಗೇಮ್ಸ್ ಮತ್ತು ಸಿನಿಮಾಗಳಲ್ಲಿರುವ ಹಿಂಸೆ ಭಯ ಹುಟ್ಟಿಸುವಂತಿದೆ, ಹದಿಹರೆಯದವರು ಪ್ರತಿದಿನ ಇದನ್ನು ನೋಡುತ್ತಾ ಹಲವಾರು ಘಂಟೆಗಳನ್ನು ಕಳೆಯುತ್ತಿದ್ದಾರೆ. ದೂರದರ್ಶನದಲ್ಲಿ ಹಿಂಸೆಯನ್ನು ಹೆಚ್ಚಾಗಿ ವೀಕ್ಷಿಸುತ್ತಿರುವುದರಿಂದ ಹುಡುಗರಲ್ಲಿ ಆಕ್ರಮಣ ಪ್ರವೃತ್ತಿಯನ್ನು ಕಾಣುತ್ತಿದ್ದೇವೆ. ಸಂಶೋಧನಾ ಅಧ್ಯಯನಗಳ ವಿಮರ್ಶಕರ

ಅಭಿಪ್ರಾಯದಂತೆ ದೂರದರ್ಶನದ ಹಿಂಸೆಯು ಹದಿಹರೆಯದವರಲ್ಲಿ ಸೇಡಿನ ಭಾವನೆ ಮತ್ತು ಆಲೋಚನೆಗಳನ್ನು ಬಿತ್ತಬಹುದು, ವಾಚಿಕ, ದೈಹಿಕ ಮತ್ತು ಸಂಬಂಧಾತ್ಮಕ ಆಕ್ರಮಣ ವರ್ತನೆಗಳನ್ನು ಬೆಳಸಬಹುದು. ಅತಿಯಾಗಿ ಹಿಂಸೆಗೆ ತೆರೆದುಕೊಳ್ಳುವುದರಿಂದ 'ಇದು ಸಹಜವೇ' ಎಂಬ ಭಾವನೆ ಬರಲೂ ಸಾಕು. ಆಮೇರಿಕಾದ ಶಾಲೆಗಳಲ್ಲಿ ನಡೆಯುತ್ತಿರುವ ಹಿಂಸಾತ್ಮಕ ಘಟನೆಗಳು ಇದಕ್ಕೆ ಸಾಕ್ಷಿಯಾಗಿವೆ. ದೂರದರ್ಶನ ಅಥವಾ ವಾರ್ತಾಪತ್ರಿಕೆಗಳಲ್ಲಿ ವರದಿಯಾಗುವ ಆತ್ಮಹತ್ಯೆಗಳಿಂದ ಹದಿಹರೆಯದರಲ್ಲಿ ಆತ್ಮಹತ್ಯೆಯ ಅಪಾಯಗಳು ಹೆಚ್ಚಾಗಿವೆ.

ಈ ಕೆಳಕಂಡ ಗುಂಪಿನ ಮಕ್ಕಳು ದೂರದರ್ಶನದಲ್ಲಿ ಕಂಡುಬರುವ ಹಿಂಸೆಗೆ ಆಕರ್ಷಿತರಾಗುತ್ತಿದ್ದಾರೆ.

- ಅಲ್ಪಸಂಖ್ಯಾತ ಹಾಗೂ ವಲಸೆ ಬಂದ ಗುಂಪಿನ ಮಕ್ಕಳು.
- ಭಾವನಾತ್ಮಕವಾಗಿ ವಿಚಲಿತವಾದ ಮಕ್ಕಳು
- ಕಲಿಕಾ ದೌರ್ಬಲ್ಯತೆಯುಳ್ಳ ಮಕ್ಕಳು
- ಪೋಷಕರಿಂದ ದುರುಪಯೋಗಕ್ಕಾಗಿ ಒಳಗಾದ ಮಕ್ಕಳು.
- ತುಂಬಾ ತೊಂದರೆಯಲ್ಲಿರುವ ಕುಟುಂಬದ ಮಕ್ಕಳು

**3. ಅಪಾಯಕರ ಲೈಂಗಿಕ ವರ್ತನೆ:**

ಹದಿಹರೆಯದವರು ತಮ್ಮ ಅನುಭವಕ್ಕೆ ಹೊಸದಾದ ಲೈಂಗಿಕತೆಯ ಅನುಭವಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಸಹಜವಾಗಿಯೇ ಲೈಂಗಿಕ ವಿಷಯಗಳ ಬಗ್ಗೆ ಆಸಕ್ತಿ ಇರುತ್ತದೆ. ಮಾಧ್ಯಮದಲ್ಲಿ ಬಿತ್ತರವಾಗುವ ಲೈಂಗಿಕ ವಿಷಯಗಳು ಹದಿಹರೆಯದವರಲ್ಲಿ ಗೊಂದಲವನ್ನು ಸೃಷ್ಟಿಸುತ್ತವೆ. ಹದಿಹರೆಯದವರಲ್ಲಿನ ಲೈಂಗಿಕ ವರ್ತನೆಗಳು ಜವಾಬ್ದಾರಿಯುತವಾಗಿರುವುದಿಲ್ಲ. ಅವರು ಎಲ್ಲವನ್ನೂ ಕುತೂಹಲದ ಹಿನ್ನೆಲೆಯಲ್ಲೇ ಗ್ರಹಿಸಿ ಅನ್ವಯಿಸುತ್ತಾರೆ. ಇದು ಕೆಲವೊಮ್ಮೆ ಬೇಜವಾಬ್ದಾರಿಯ ಲೈಂಗಿಕ ವರ್ತನೆ ಮತ್ತು ಅನಪೇಕ್ಷಿತ ಗರ್ಭಧಾರಣೆಗೆ ಕಾರಣವಾಗುತ್ತದೆ.

ಮಾಧ್ಯಮಗಳು ಮಕ್ಕಳಿಗೆ ಲೈಂಗಿಕ ವರ್ತನೆಗಳು ಸಾಮಾನ್ಯ ಹಾಗೂ ಅಪಾಯಮುಕ್ತ ಎಂಬ ರೀತಿಯಲ್ಲಿ ಬಿಂಬಿಸುತ್ತವೆ. ಇದು ಎಲ್ಲರಲ್ಲಿಯೂ ಕಂಡುಬರಬಹುದಾದ ಸಾಮಾನ್ಯ ವರ್ತನೆ ಎಂಬ ರೀತಿಯಲ್ಲಿ ಇವುಗಳನ್ನು ಮನಗಾಣಿಸುತ್ತವೆ. ಅವಿವಾಹಿತರ ಲೈಂಗಿಕತೆಯನ್ನು ಸಹಜವೆಂಬಂತೆ ಬಿತ್ತರಿಸುತ್ತವೆ. ಇದರ ಪರಿಣಾಮಗಳ ಅರಿವಿಲ್ಲದ ಹದಿಹರೆಯದವರು ಇವುಗಳ ಅಪಾಯಗಳಿಗೆ ಒಳಗಾಗುವ ಸಾಧ್ಯತೆಗಳಿವೆ. ಹದಿಹರೆಯದವರ ಪ್ರಕಾರ ಮಾಧ್ಯಮವೇ ಲೈಂಗಿಕತೆಯ ಬಗ್ಗೆ ಅತ್ಯಂತ ಹೆಚ್ಚು ಮಾಹಿತಿಗೆ ಮೂಲವಾಗಿದೆ. ಹೆಚ್ಚಿನ ಅಧ್ಯಯನಗಳು ದಾಖಲಿಸಿರುವಂತೆ ಹದಿಹರೆಯದವರ ಲೈಂಗಿಕ ಮನೋಧೋರಣೆಗಳು, ಮೌಲ್ಯಗಳು ಮತ್ತು ನಂಬಿಕೆಗಳು ಮಾಧ್ಯಮದಿಂದ ಪ್ರಭಾವಿತವಾಗುತ್ತವೆ.

**1. ಎಲ್ಲವನ್ನೂ ವಾಣಿಜ್ಯೀಕರಣಗೊಳಿಸುವ ಪ್ರವೃತ್ತಿ :** ಸಂತೋಷವು ಹಣದಿಂದ ಸಿಗುವಂತಹುದು ಎಂಬ ಅಸತ್ಯವನ್ನು ಅತಿ ಸತ್ಯವೆಂಬಂತೆ ಮಾಧ್ಯಮಗಳು ವ್ಯಕ್ತಮಾಡುತ್ತವೆ. ಹೊಸ ಬಟ್ಟೆಗಳು, ಹೊಸ ಆಟಗಳನ್ನು ಕೊಳ್ಳುವ ಮೂಲಕ ಅವರ ಜೀವನ ಪರಿಪೂರ್ಣವಾಗುತ್ತದೆ ಎಂದು ಅವರು ಭಾವಿಸುತ್ತಾರೆ. ಜಾಹೀರಾತುದಾರರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಹದಿಹರೆಯದವರನ್ನು ಗುರಿಯಾಗಿಸಿಕೊಳ್ಳುತ್ತಾರೆ. ಸಂತೋಷದ ವಾಣಿಜ್ಯೀಕರಣದ ವಿಚಾರಗಳಿಗೆ ಹದಿಹರೆಯದವರು ಬಲಿಯಾಗುತ್ತಿದ್ದಾರೆ.

ಮಗುವಿನ ಬೆಳವಣಿಗೆಯ ಹಂತದಲ್ಲಿ ವಾಣಿಜ್ಯೀಕರಣದ ಪ್ರಭಾವವನ್ನು ಕಾಣುತ್ತೇವೆ. ಹದಿಹರೆಯದವರು ವ್ಯಾಪಾರಿಗಳ ಲಾಭದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಈ ಮಕ್ಕಳು ಜಾಹೀರಾತುದಾರರ ಮಾತುಗಳನ್ನು ಸುಲಭವಾಗಿ ನಂಬುತ್ತಾರೆ. ಆ ವಸ್ತುಗಳನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ ನಾವು

ವಂಚಿತರಾಗಿದ್ದೇವೆ ಎಂದು ಭಾವಿಸುತ್ತಾರೆ. ಒಬ್ಬ ಸಾಮಾನ್ಯ ಮಗು ಪ್ರತಿವರ್ಷ ಸುಮಾರು 20,000 ವಾಣಿಜ್ಯದ ಜಾಹೀರಾತುಗಳನ್ನು ನೋಡುತ್ತಾನೆ. ಇದರಲ್ಲಿ ಶೇ.60 ಭಾಗ ವಾಣಿಜ್ಯ ಜಾಹೀರಾತುಗಳು ಸಕ್ಕರೆ ಲೇಪಿತ ಧಾನ್ಯಗಳು, ಚಾಕಲೇಟ್‌ಗಳು, ಕೊಬ್ಬಿನ ಆಹಾರ ಪದಾರ್ಥಗಳು ಮತ್ತು ಗೊಂಬೆಗಳು ಹಾಗೂ ಆಟಿಕೆಗಳು. ಗೊಂಬೆಗಳನ್ನಾಧರಿಸಿದ ವ್ಯಂಗ್ಯ ಚಿತ್ರಗಳು ಇವುಗಳನ್ನು ಒಳಗೊಳ್ಳುತ್ತವೆ. ಮದ್ಯಪಾನ ಮತ್ತು ಸಿಗರೇಟ್ ಸೇವನೆಗೆ ಸಂಬಂಧಿಸಿದಂತಹ ಜಾಹೀರಾತುಗಳು ಹದಿಹರೆಯದವರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ.

**5.ಸ್ಥೂಲಕಾಯ:** ಹದಿಹರೆಯದವರು ಹೆಚ್ಚಿನ ಸಮಯವನ್ನು ದೂರದರ್ಶನ ಅಥವಾ ಕಂಪ್ಯೂಟರ್‌ಗಳ ಮುಂದೆ ಕಳೆಯುತ್ತಿದ್ದಾರೆ. ಹೊರಗಡೆ ಹೋಗಿ ಆಟವಾಡುವುದು ಇಂದಿನ ದಿನಗಳಲ್ಲಿ ತುಂಬಾ ಕಡಿಮೆಯಾಗಿದೆ. ಇದರ ಜೊತೆಗೆ ಸರಿಯಲ್ಲದ ಆಹಾರಾಭ್ಯಾಸಗಳು ಮತ್ತು ಸಿದ್ಧ ಆಹಾರಗಳ ಕಡೆಗೆ ಇರುವ ಆಕರ್ಷಣೆ ಹದಿಹರೆಯದರಲ್ಲಿ ಸ್ಥೂಲಕಾಯ ಅಥವಾ ಬೊಜ್ಜು ಮೈಗೆ ಕಾರಣವಾಗುತ್ತದೆ.

**6. ಶಾಲೆಯ ಸಾಧನಾ ಮಟ್ಟದಲ್ಲಿ ಇಳಿಕೆ :** ದೂರದರ್ಶನ ಮತ್ತು ಇತರೆ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ತೆರೆದುಕೊಂಡ ಮಕ್ಕಳು ಶಾಲಾ ವಿಷಯಗಳಲ್ಲಿ ಹೆಚ್ಚು ಶ್ರಮ ಮತ್ತು ಪ್ರಯತ್ನಗಳನ್ನು ತೊಡಗಿಸದ ಕಾರಣ ಇವು ಅವರ ಶಾಲಾ ಸಾಧನೆಯ ಮೇಲೆ ಪರಿಣಾಮ ಬೀರುತ್ತದೆ. ಒಂದುಅಧ್ಯಯನದ ಪ್ರಕಾರ ಶಾಲೆಯಲ್ಲಿ ಉತ್ತಮ ಅಂಕಗಳಿಸುವ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ದೂರದರ್ಶನ ವೀಕ್ಷಿಸಿರುವುದಿಲ್ಲ. ಯಾವ ಹದಿಹರೆಯದವರು ತಮ್ಮ ಮಲಗುವ ಕೋಣೆಗಳಲ್ಲಿ ದೂರದರ್ಶನ ಹೊಂದಿದ್ದಾರೆಯೋ ಅವರು ತಮ್ಮ ಮಲಗುವ ಕೋಣೆಗಳಲ್ಲಿ ದೂರದರ್ಶನ ಇಲ್ಲದಿರುವ ಮಕ್ಕಳಿಗಿಂತ ಕಡಿಮೆ ಮಟ್ಟದ ಶೈಕ್ಷಣಿಕ ಸಾಧನೆ ಮಾಡಿರುವುದು ಕಂಡುಬರುತ್ತದೆ.

**ಹದಿಹರೆಯದವರ ಮೇಲೆ ಮಾಧ್ಯಮದ ಪ್ರಭಾವ ನಿರ್ವಹಿಸಲು ಕ್ರಮಗಳು:**

- ಮಾಧ್ಯಮಗಳಿಗೆ ತೆರೆದುಕೊಳ್ಳುವುದು ಆಧುನಿಕ ಜೀವನದ ಒಂದು ಭಾಗವಾಗಿದೆ, ಆದರೆ ಮನರಂಜನೆಯ ಕಾರಣಕ್ಕಾಗಿ ಮಾಧ್ಯಮವನ್ನು ಹೇಗೆ, ಎಷ್ಟು ಮತ್ತು ಯಾವಾಗ ಬಳಸಬೇಕು ಎಂಬುದನ್ನು ಕುರಿತು ಅವರಿಗೆ ಅರಿವು ಕೊಡಲೇಬೇಕು. ಈ ಕೆಳಗಿನ ಕೆಲವು ಕ್ರಮಗಳ ಮೂಲಕ ಹದಿಹರೆಯದವರ ಮೇಲೆ ಸಾಮಾಜಿಕ ಮಾಧ್ಯಮದ ಋಣಾತ್ಮಕ ಪ್ರಭಾವವನ್ನು ನಿರ್ವಹಿಸಬಹುದು.
- ಹದಿಹರೆಯದವರು ಇಷ್ಟಪಡುವ ಸಂಗೀತ, ಚಿತ್ರಗಳು, ದೂರದರ್ಶನ ಕಾರ್ಯಕ್ರಮಗಳು, ಆಟಗಳು ಮತ್ತು ನಾಯಕನಟರನ್ನು ತಿಳಿದುಕೊಳ್ಳಿರಿ. ಅವರಿಗೆ ಇಷ್ಟವಾದ ವಿಷಯಗಳನ್ನು ತಿಳಿದುಕೊಳ್ಳುವ ಮೂಲಕ ಅವುಗಳಮೇಲೆ ನಿಯಂತ್ರಣ ಸಾಧಿಸಬಹುದು.
- ಹದಿಹರೆಯದವರು ಮೊಬೈಲ್‌ನಲ್ಲಿ ಯೂಟ್ಯೂಬ್ ವೀಡಿಯೋಗಳನ್ನು ನೋಡುವುದು ತುಂಬಾ ಸುಲಭವಾಗಿದೆ. ಅವರು ಏನು ನೋಡುತ್ತಿದ್ದಾರೆ ಎಂಬುದನ್ನು ನಿಯಂತ್ರಿಸುವುದು ಕಷ್ಟ. ಆದ್ದರಿಂದ ಅವರು ಏನನ್ನು ವೀಕ್ಷಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿ, ಅವರನ್ನು ಒಲೈಸಿ, ಅವರಿಗೆ ಕೆಲವು ನಿಯಮಗಳು ಹಾಗೂ ಮಿತಿಗಳನ್ನು ವಿಧಿಸಬಹುದು.
- ಹದಿಹರೆಯದವರಿಗೆ ಬರುವ ಸಂದೇಶಗಳ ಬಗ್ಗೆ ಅವರೊಡನೆ ನೇರವಾಗಿ ಮಾತನಾಡಿರಿ. ಉದಾಹರಣೆಗೆ: ನಿಮ್ಮ ಹದಿಹರೆಯದ ಮಗ ಒಂದು ಹುಡುಗಿಯನ್ನು ಪ್ರೀತಿಸುತ್ತಿದ್ದರೆ, ಅವನಿಗೆ ಹೆಣ್ಣು ಮಕ್ಕಳ ಸ್ನೇಹ, ಜೀವನದ ಆಯ್ಕೆಗಳು, ಆತ್ಮಗೌರವ ಹಾಗೂ ಲೈಂಗಿಕತೆಯ ಬಗ್ಗೆ ತಿಳಿಸಬಹುದು.
- ಹದಿಹರೆಯದವರ ಆಯ್ಕೆಗಳ ಮೇಲೆ ನಿಗಾವಹಿಸುವುದೆಂದರೆ ಮಾಧ್ಯಮ ವೀಕ್ಷಿಸಲೇಬಾರದು ಎಂದು ಅವರನ್ನು ತಡೆಯುವುದಲ್ಲ, ಅವರಿಗೆ ಮಾಧ್ಯಮದ ಋಣಾತ್ಮಕ ಪರಿಣಾಮಗಳ ಅರಿವು ಮೂಡಿಸಿ, ವೀಕ್ಷಣೆಯ ಮೂಲಕ ಗರಿಷ್ಟ ಪ್ರಯೋಜನಗಳನ್ನು ಸಾಧಿಸುವುದಾಗಿದೆ.
- ಹದಿಹರೆಯದವರ ಮೊಬೈಲ್‌ನಲ್ಲಿರುವ ಅನಾವಶ್ಯಕ 'ಆಪ್'ಗಳು, ಆಟಗಳು ಹಾಗೂ ಚಿತ್ರಗಳನ್ನು

ಹೆತ್ತವರು ತೆಗೆದು ಹಾಕಬಾರದು. ಅದರ ಅಪಾಯಕಾರಿ ಪರಿಣಾಮಗಳನ್ನು ತಿಳಿಸಿ, ಅವರೇ ತೆಗೆಯುವಂತೆ ಮನವೊಲಿಸಬೇಕು. ನಿಷೇದಿಸಬೇಕು ಮತ್ತು ಅವರಿಗೆ ಇವುಗಳನ್ನು ಏಕೆ ನಿಷೇದಿಸುತ್ತಿದ್ದೇವೆ ಎಂಬುದಕ್ಕೆ ವಿವರಣೆ ನೀಡಬೇಕು. ಇದರಿಂದ ಅವರಲ್ಲಿ ನಂಬಿಕೆ ವಿಶ್ವಾಸವಿಟ್ಟಿದ್ದೇವೆ ಎಂಬುದನ್ನು ಖಚಿತಪಡಿಸಿದಂತಾಗುತ್ತದೆ.

- ಮಾಧ್ಯಮವನ್ನು ಕುರಿತ ಕೆಲವು ಪ್ರಶ್ನೆಗಳನ್ನು ಕೇಳಿ ಹದಿಹರೆಯದವರಿಗೆ ಅದನ್ನುಅರ್ಥೈಸಲು ತಿಳಿಸಬೇಕು. ದೂರದರ್ಶನದ ಒಂದು ಜಾಹೀರಾತನ್ನು ಆಯ್ದುಕೊಂಡು ಅದರ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿರಿ. ಈ ಜಾಹೀರಾತೀನ ಹಿಂದೆ ಯಾರಿದ್ದಾರೆ? ಅವರ ಪ್ರೇರಣೆ ಏನು? ನಿಮಗೆ ಇದರ ಬಗ್ಗೆ ಏನನ್ನಿಸುತ್ತದೆ/ ನೀವು ಇದರಿಂದ ಏನನ್ನು ಬಯಸುತ್ತೀರಿ? ಇವುಗಳ ಪರಿಣಾಮಗಳೇನು? ಇತ್ಯಾದಿ ಪ್ರಶ್ನೆಗಳನ್ನು ಅವರೊಂದಿಗೆ ಚರ್ಚಿಸಬಹುದು.
- ಇದೇ ರೀತಿ ಹದಿಹರೆಯದವರ ಮೆಚ್ಚಿನ ನಾಯಕ/ನಾಯಕಿಯ ಬಗ್ಗೆ ಪ್ರಶ್ನಿಸಬೇಕು. ನೀವು ಆ ನಾಯಕನನ್ನು ಏಕೆ ಇಷ್ಟಪಡುತ್ತೀರಿ? ದೈನಂದಿನ ಜೀವನದಲ್ಲಿ ಅವನುಪ್ರತಿಪಾದಿಸಿದ ಅಂಶಗಳನ್ನು ಪಾಲಿಸುತ್ತಾನೆಯೇ? ನೀವು ಇಚ್ಚಿಸುವ ನಾಯಕನ ಯಾವ ಮೌಲ್ಯಗಳನ್ನು ನೀವು ಇಷ್ಟಪಡುತ್ತೀರಿ? ಎಂಬ ಪ್ರಶ್ನೆಗಳನ್ನು ಉತ್ತರಿಸಲು ಸೂಚಿಸಬಹುದು. ಇವು ಅವರ ಅಭಿಪ್ರಾಯಗಳನ್ನು ವಿಶ್ಲೇಷಿಸಿ ಅವುಗಳ ಪ್ರಯೋಜನ, ಪರಿಣಾಮಗಳನ್ನು ಗುರುತಿಸಿಕೊಳ್ಳಲು ಸಹಾಯಮಾಡುತ್ತದೆ.
- ಮಾಧ್ಯಮದ ಉದಾಹರಣೆಗಳನ್ನೇ ಆಯ್ಕೆ ಮಾಡಿಕೊಂಡು, ಬದುಕಿನಲ್ಲ ನೈಜತೆ ಹಾಗೂ ಭ್ರಮೆಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಹದಿಹರೆಯದವರಿಗೆ ಸಹಾಯ ಮಾಡಿರಿ. ಉದಾಹರಣೆಗೆ ಧಾರಾವಾಹಿಗಳ ಪಾತ್ರ, ವಸ್ತುಗಳು ಇತ್ಯಾದಿಗಳನ್ನು ಕುರಿತು ಚರ್ಚಿಸಬಹುದು.
- ಹದಿಹರೆಯದವರಿಗೆ ಇತರರ ಪ್ರೀತಿ, ವಿಶ್ವಾಸ, ನಂಬಿಕೆಗಳು ಅತ್ಯಂತ ಆವಶ್ಯಕ. ಹೇಳುವುದನ್ನು ಹೇಳಬೇಕಾದ, ಅವರ ಮನಸ್ಸಿಗೆ ಒಗ್ಗುವಂತೆ ಅವರ ಮನೋವೈಜ್ಞಾನಿಕ ಅಂಶಗಳಿಗನುಗುಣವಾಗಿ ಹೇಳಿದರೆ ಖಂಡಿತವಾಗಿಯೂ ಕೇಳುತ್ತಾರೆ. ಅವರು ನಡೆದುಕೊಳ್ಳುವ ರೀತಿಗಿಂತ ಅವರನ್ನು ಮನವೊಲಿಸಿ ನಡಿಸಿಕೊಳ್ಳುವ ರೀತಿಯಲ್ಲಿ ಅವರನ್ನು ಬೆಳೆಸುವ ನಮ್ಮೆಲ್ಲರ ಪ್ರಯತ್ನಗಳ ಯಶಸ್ಸು ಅಡಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೆಳಗಿನವುಗಳಲ್ಲಿ ಹದಿಹರೆಯದವರ ಮೇಲೆ ಮಾಧ್ಯಮದ ಧನಾತ್ಮಕ ಪ್ರಭಾವವನ್ನು ಗುರುತಿಸುವ ಹೇಳಿಕೆಗಳನ್ನು '✓' ಚಿಹ್ನೆಯ ಮೂಲಕ ಸೂಚಿಸಿ.

1. ಭಾಷಾ ಬೆಳವಣಿಗೆಯನ್ನು ಉಂಟುಮಾಡುತ್ತದೆ.
2. ಉನ್ನತ ಶಿಕ್ಷಣಕ್ಕೆ ಸಹಾಯಮಾಡುತ್ತದೆ.
3. ಲೈಂಗಿಕ ವರ್ತನೆಗಳ ಕುರಿತ ಸಮರ್ಪಕ ಮಾಹಿತಿ ನೀಡುತ್ತದೆ.
4. ಪುರುಷರು ಮತ್ತು ಮಹಿಳೆರನ್ನು ರುನು ಕುರಿತ ರೂಢಕಲ್ಪನೆಗಳನ್ನು ಪೋಷಿಸುತ್ತದೆ..
5. ಸೂಕ್ಷ್ಮಚಲನ ಕೌಶಲಗಳು ಮತ್ತು ಸಮನ್ವಯವನ್ನು ಬೆಳೆಸುತ್ತದೆ.
6. ವ್ಯಾಪಕವಾದ ಮಾಹಿತಿ ನೀಡುತ್ತದೆ.

## 3.3.4. ಸಾರಾಂಶಿಸೋಣ:

- ಮಾಧ್ಯಮ ಇಂದು ಹದಿಹರೆಯದವರ ಮೇಲೆ ಅಗಾಧವಾದ ಪರಿಣಾಮ ಬೀರುತ್ತಿದೆ. ದೂರದರ್ಶನ, ಕಂಪ್ಯೂಟರ್, ವೀಡಿಯೋ ಆಟಗಳು ಮತ್ತು ಸಾಮಾಜಿಕ ಜಾಲತಾಣಗಳು ಹದಿಹರೆಯದವರ

ಜೀವನದ ಮೇಲೆ ಮಹತ್ತರವಾದ ಪರಿಣಾಮಬೀರುತ್ತಿವೆ. ಆದರೆ ಮಾಧ್ಯಮದಲ್ಲಿರುವುದೆಲ್ಲವೂ ಕೆಟ್ಟದ್ದಲ್ಲ, ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಬಹಳಷ್ಟು ಪ್ರಯೋಜನಗಳಿವೆ.

- ಮಾಧ್ಯಮ ಹದಿಹರೆಯದವರ ಮೇಲೆ ಧನಾತ್ಮಕ ಮತ್ತುಋಣಾತ್ಮಕಎರಡೂರೀತಿಯ ಪರಿಣಾಮಗಳನ್ನು ಉಂಟುಮಾಡುತ್ತದೆ.
- ಹದಿಹರೆಯದವರಲ್ಲಿ ಅರಿವು, ಸಾಮಾಜಿಕ ಕೌಶಲಗಳನ್ನು ಬೆಳೆಸುತ್ತದೆ, ಸ್ಫೂರ್ತಿ ತುಂಬುತ್ತದೆ. ಸೂಕ್ಷ್ಮಗತಿ ಕೌಶಲಗಳನ್ನು, ಓದಿನ ಕೌಶಲಗಳನ್ನು ಬೆಳೆಸುತ್ತದೆ.
- ವಿಕೃತದೇಹದ ಬಿಂಬ ಪೋಷಣೆ, ಹಿಂಸೆಯನ್ನು ಸಾಮಾನ್ಯೀಕರಿಸುವಿಕೆ, ಅಪಾಯಕರ ಲೈಂಗಿಕ ವರ್ತನೆಗೆ ಪ್ರಚೋದನೆ, ವಾಣಿಜ್ಯೀಕರಣಗೊಳಿಸುವಿಕೆ, ಬೊಜ್ಜು ಬೆಳೆಸುವಿಕೆ ಮತ್ತು ಶಾಲಾ ಸಾಧನೆಯ ಅವಗಣನೆ ಇವೆಲ್ಲವೂ ಮಾಧ್ಯಮದ ಋಣಾತ್ಮಕ ಪರಿಣಾಮಗಳು.
- ಹದಿಹರೆಯದವರಿಗೆ ಮಾಧ್ಯಮದ ಬಳಕೆಯನ್ನು ಕುರಿತಾದ ಅರಿವು, ಸಿದ್ಧತೆ ಮತ್ತು ತರಬೇತಿಗಳ ಅವಶ್ಯಕತೆ ಇದೆ.

## 1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಘಟಕದಲ್ಲಿ ಈ ಕುರಿತ ಚರ್ಚೆಯನ್ನು ಗಮನಿಸಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1, 5 ಮತ್ತು 6

## 3.3.6.ಘಟಕಾಂತ್ಯ ಅಭ್ಯಾಸಗಳು

1. ಹದಿಹರೆಯದವರ ಮೇಲೆ ಮಾಧ್ಯಮ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.
2. ಹದಿಹರೆಯದವರ ಮೇಲೆ ಮಾಧ್ಯಮದ ಪ್ರಭಾವವನ್ನು ನಿರ್ವಹಿಸಲು ಸೂಕ್ತ ಕ್ರಮಗಳನ್ನು ಸೂಚಿಸಿರಿ.

## 3.3.7. ಪರಾಮರ್ಶನ ಸೂಚಿ

1 Chhanditachakravarty (2017), positive and negative influences of media on teenagers, www.momjunction.com.

2 Debolina Raja (2017) Teenage Social Medica Addiction and its effects. www.monjunction.com

3 Rakhee.M (2017) Social skills activities for teens and young children. www.momjunction.com

4 Impact of media use on children and youth. www.ncbi.nlm.nih.gov.

*********************

# ಬ್ಲಾಕ್ 3 : ಹದಿಹರೆಯದವರ ವಿಚಾರಗಳು ಮತ್ತು ಕಾಳಜಿಗಳು

## ಘಟಕ 4 : ಹದಿಹರೆಯದವರ ಬೆಳವಣಿಗೆಯ ಸಂದರ್ಭೋಚಿತ ಚೌಕಟ್ಟುಗಳು ಕ್ಲಿಷ್ಟ ಸನ್ನಿವೇಶಗಳಲ್ಲಿ ಹದಿಹರೆಯದವರು

**ಘಟಕದ ರಚನೆ**


3.4.1. ಕಲಿಕಾ ಉದ್ದೇಶಗಳು

3.4.2. ಪೀಠಿಕೆ

3.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.4.3.1. ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.4.3.2. ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ರಕ್ಷಿಸಲು ಇರುವ ಕಾನೂನು ಸೌಲಭ್ಯಗಳು ಮತ್ತು ಸಮಸ್ಯೆಗಳನ್ನು ನಿರ್ವಹಿಸಲು ಸಲಹೆಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.4.4. ಸಾರಾಂಶಿಸೋಣ

3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

3.4.6. ಘಟಕಾಂತ್ಯ ಅಭ್ಯಾಸಗಳು

3.4.7. ಪರಾಮರ್ಶನ ಸೂಚಿ


## 3.4.1. ಕಲಿಕಾ ಉದ್ದೇಶಗಳು:

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು.

- ಸಮಾಜದಲ್ಲಿ ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ಗುರುತಿಸುವರು;
- ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ರಕ್ಷಿಸಲು ಇರುವ ಕಾನೂನಿನ ಸೌಲಭ್ಯಗಳನ್ನು ಚರ್ಚಿಸುವರು;
- ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ನಿರ್ವಹಿಸಲು ಕ್ರಮಗಳನ್ನು ಸೂಚಿಸುವರು;
- ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರ ಸಮಸ್ಯೆಗಳನ್ನುವಿವರಿಸುವರು; ಮತ್ತು
- ಈ ಸನ್ನಿವೇಶದ ಶೈಕ್ಷಣಿಕ ನಿಹಿತಾರ್ಥಗಳನ್ನು ಗುರುತಿಸುವರು.

## 3.4.2. ಪೀಠಿಕೆ:

ಮಕ್ಕಳ ಮೂಲ ಅಗತ್ಯಗಳಾದ ಆಹಾರ, ವಸತಿ, ಶಿಕ್ಷಣ, ವೈದ್ಯಕೀಯ ನೆರವುಅಥವಾರಕ್ಷಣೆ ಮತ್ತು ಭದ್ರತೆಯಂತಹ ಅಂಶಗಳು ಪೂರೈಕೆಯಾಗದಿದ್ದಾಗ ಅವರು ಕ್ಲಿಷ್ಟ ಸನ್ನಿವೇಶದಲ್ಲಿದ್ದಾರೆ ಎಂದು ಪರಿಗಣಿಸಲಾಗುತ್ತದೆ.ಇಂತಹ ಮಕ್ಕಳು ಅಪೌಷ್ಟಿಕತೆ, ಕಾಯಿಲೆಗಳು ಮತ್ತು ತೀವ್ರವಾದ ಸನ್ನಿವೇಶಗಳಲ್ಲಿ ಕೆಲವೊಮ್ಮೆ ಸಾವಿಗೀಡಾಗುವಂತಹ ಅಪಾಯದಲ್ಲಿರುತ್ತಾರೆ. ಇಂತಹ ಮಕ್ಕಳ ವಾತಾವರಣ ಹಾಗೂ ಸನ್ನಿವೇಶಗಳನ್ನು ಬದಲಾಯಿಸಿದ್ದಲ್ಲಿ ಅವರು ಈ ತೊಂದರೆ ಎದುರಿಸುವುದರ ಜೊತೆಗೆ ಮುಂದೆ ಅವರ ಮಕ್ಕಳು ಸಹ ತೊಂದರೆಗೀಡಾಗುವ ಸಾಧ್ಯತೆಇರುತ್ತದೆ.ಅತಿಯಾದ ಬಡತನದಿಂದ ಉಂಟಾಗುವ ಸಾಮಾಜಿಕ ಬದಲಾವಣೆ ಭಾರತದಲ್ಲಿ ಕ್ಲಿಷ್ಟ ಸನ್ನಿವೇಶದಲ್ಲಿರುವ ಮಕ್ಕಳು ಹೆಚ್ಚಾಗಲು ಕಾರಣವಾಗಿದೆ. ಈ ರೀತಿಯ ಮಕ್ಕಳನ್ನು ಕುರಿತು ನೀವು ಹಿಂದಿನ ಬ್ಲಾಕ್‌ನಲ್ಲಿ ತಿಳಿದಿರುವಿರಾದರೂ ಇಲ್ಲಿ ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ಕುರಿತು ಚರ್ಚಿಸೋಣ.

## 3.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.4.3.1. ಕ್ಲಿಷ್ಟ ಸನ್ನಿವೇಶಗಳಲ್ಲಿ ಹದಿಹರೆಯದವರು

ಈ ಘಟಕವನ್ನಾರಂಭಿಸುವ ಮುನ್ನ ಸ್ವಾಮಿ ಜಗದಾತ್ಮಾನಂದಜೀಯವರು ತಮ್ಮ "ಬದುಕಲು ಕಲಿಯಿರಿ" (ಸಂಪುಟ–1 ರಲ್ಲಿ ಪುಟ 36 ರಿಂದ 40) ಎಂಬ ಕೃತಿಯಲ್ಲಿ ಉಲ್ಲೇಖಿಸಿರುವ ಒಂದು ಘಟನೆಯನ್ನು ಗಮನಿಸೋಣ.

ಎಡ್‌ವರ್ಡ್ ಎಂಟು ವರ್ಷದ ಅನಾಥ ಬಾಲಕ. ಇವನ ಮನೆಯವರು ಅತ್ಯಂತ ಬಡವರು. ಹೊಟ್ಟೆ ಹೊರೆಯಲು ಸಾಧ್ಯವಾಗದೆ, ಈತ ಅಪರಾಧಿಗಳ ಗ್ಯಾಂಗ್‌ನಲ್ಲಿ ಸೇರಿಕೊಂಡು ಕಳ್ಳತನ, ಕ್ರೌರ್ಯ, ಲೂಟಿ ಮತ್ತು ಕೊಲೆಗಳಂತಹ ಪಾತಕಗಳಲ್ಲಿ ತೊಡಗಿದ್ದ. ಇದೇ ಹುಡುಗ ಒಮ್ಮೆ ಒಬ್ಬ ಹೆಂಗಸನ್ನು ಲೂಟಿಮಾಡಲು ಪ್ರಯತ್ನಿಸುತ್ತಿದ್ದಾಗ, ಸೆಕ್ಯೂರಿಟಿಯವರು ಇವನನ್ನು ಗುರುತಿಸಿ ದಸ್ತಗಿರಿ ಮಾಡಿದರು. ವಿಚಾರಣೆ ಎಲ್ಲಾ ಮುಗಿದ ಮೇಲೆ ಇವನನ್ನು 'ಬಾಯ್ಸ್ ಟೌನ್' ಎಂಬ ಬಾಲಾಪರಾಧಿಗಳ ಪುನರ್ವಸತಿಗೃಹಕ್ಕೆ ಸೇರಿಸಲಾಯಿತು. ಅಲ್ಲಿ ಒಬ್ಬ ಧರ್ಮಾಧಿಕಾರಿ ಇವನ ಪಾಲನೆ ಪೋಷಣೆಯನ್ನು ನೋಡಿಕೊಳ್ಳುತ್ತಿದ್ದರು. 'ಯಾರೂ ಜನ್ಮತಃ ಕೆಟ್ಟವರಲ್ಲ; ಸನ್ನಿವೇಶಗಳು ಜನರನ್ನು ಕೆಟ್ಟವರಾಗಿಸುತ್ತವೆ' ಎಂದವರು ನಂಬಿದ್ದರು. ಹೀಗಾಗಿ ಅಲ್ಲಿಯ ಮಕ್ಕಳೆಲ್ಲರನ್ನೂ ಉತ್ತಮ ಪ್ರಜೆಗಳಾಗಿ ಪರಿವರ್ತಿಸಲು ಸತತವಾಗಿ ಶ್ರಮಿಸುತ್ತಿದ್ದರು. ಈ ಹುಡುಗನ ಎಲ್ಲ ದುರ್ವರ್ತನೆಗಳನ್ನು ಸಹಿಸಿಕೊಂಡು ಅತ್ಯಂತ ಪ್ರೀತಿಯಿಂದ ಸಾಕಿದರು. ಹೀಗಿರುವಾಗಲೇ ಆ ಹುಡುಗ ಒಂದು ದಿನ ಅವರ ಕೊಠಡಿಗೆ ಬಂದು, ' ಓಹೋ, ಸಂಭಾವಿತರೇ, ನೀವು ನನ್ನನ್ನು ಒಳ್ಳೆಯವನಾಗಿ ಮಾರ್ಪಡಿಸುತ್ತೇನೆಂದು ಪಣ ತೊಟ್ಟಿರುವಿರಲ್ಲವೇ? ಅದೆಲ್ಲಾ ಆಗದ ಮಾತು, ಈಗ ತಾನೆ ನಾನು ವಾರ್ಡನ್ನರನ್ನು ಒದ್ದು ಬಂದಿದ್ದೇನೆ' ಎಂದ. ಧರ್ಮಾಧಿಕಾಗಳು ವಿಚಲಿತರಾಗಲಿಲ್ಲ. 'ಎಡ್ವರ್ಡ್, ಈಗಲೂ ನಾನು ಹೇಳವುದು ಅದೇ, ನೀನು ಒಳ್ಳೆಯವನೇ, ನೀನು ಒಳ್ಳೆಯ ಸಹವಾಸದಲ್ಲಿ ಬೆಳೆದಿದ್ದರೆ ಒಳ್ಳೆಯವನೇ ಆಗುತ್ತಿದ್ದೆ, ನಿನಗೆ ಅದು ಸಿಗಲಿಲ್ಲವಾಗಿ ಹೀಗಾಗಿದ್ದೀಯೆ, ಇದಕ್ಕೆ ನೀನು ಕಾರಣನಲ್ಲ, ನಿನ್ನ ಸನ್ನಿವೇಶ ಕಾರಣವಷ್ಟೆ, ನಾನು ನೀನು ಕೆಟ್ಟವನೆಂದು ಭಾವಿಸಿದ್ದರಲ್ಲವೇ ಪರಿವರ್ತಿಸುವ ಪ್ರಶ್ನೆ' ಎಂದರು. ಎಡ್‌ವರ್ಡ್ ಕಣ್ಣಲ್ಲಿ ನೀರು ತುಂಬಿ ಬಂದಿತು. ಅವರ ಕಾಲ ಮೇಲೆ ಬಿದ್ದು ಅವನು ಕ್ಷಮೆ ಕೇಳಿದ. ಇದೇ ಹುಡುಗ ಮುಂದೆ ಹತ್ತು ವರ್ಷಗಳ ನಂತರ ಅತ್ಯುತ್ತಮ ದರ್ಜೆಯಲ್ಲಿ ಪದವೀಧರನಾದ. ಸೈನ್ಯಕ್ಕೆ ಸೇರಿ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ಅನೇಕ ಪದಕಗಳನ್ನು ಪಡೆದ.

ಬಡತನ ಮಕ್ಕಳನ್ನು ಅಪಾಯಕಾರಿ ಸನ್ನಿವೇಶಗಳಿಗೆ ಕೊಂಡೊಯ್ಯಬಹುದು. ಹದಿಹರೆಯದವರ ಬಡತನದ ಸನ್ನಿವೇಶ ಅವರ ವಿಕಾಸ ಪ್ರಕ್ರಿಯೆಯ ಮೇಲೆ ಭೀಕರ ಪರಿಣಾಮಗಳನ್ನು ಬೀರಬಹುದು. ಆದುದರಿಂದಲೇ

ಅವರನ್ನು ಗಮನಿಸಿ, ಅವರ ವರ್ತನೆಗಳ ಕಾರಣಗಳನ್ನು ತಿಳಿದುಕೊಳ್ಳುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದಲ್ಲಿರುವವರ ವರ್ತನೆಗಳನ್ನು ಮತ್ತು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ.

## 3.4.3. ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರು

ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳು ಈ ಕೆಳಕಂಡ ವಿಶೇಷ ಗುಂಪುಗಳಿಗೆ ಸೇರಿದವರಾಗಿರುತ್ತಾರೆ. ಮಾದಕವ್ಯಸನಿಗಳು, ಏಡ್ಸ್‌ಗೆ ಬಲಿಯಾದ ಹದಿಹರೆಯದವರು ಮತ್ತು ಏಡ್ಸ್‌ಗೆ ಬಲಿಯಾದ ಪೋಷಕರನ್ನು ಹೊಂದಿರುವ ಹದಿಹರೆಯದವರು, ಹದಿಹರೆಯದಲ್ಲಿ ವೇಶ್ಯಾವೃತ್ತಿ ಮಾಡುತ್ತಿರುವವರು ಮತ್ತು ಅವರ ಮಕ್ಕಳು, ಬಾಲಾಪರಾಧಿಗಳು, ಅಪರಾಧಗಳಲ್ಲಿ ಭಾಗಿಯಾಗಿರುವ ಹದಿಹರೆಯದವರು, ಬೀದಿಯಲ್ಲಿ ಅಲೆದಾಡುವ ಹದಿಹರೆಯದವರು, ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಕಡೆಗಣಿಸಲ್ಪಟ್ಟ ಬಾಲಕ–ಬಾಲಕಿಯರು ಮತ್ತು ಹದಿಹರೆಯದವರು. ಸಮಾಜದಲ್ಲಿ ಇಂತಹ ಹದಿಹರೆಯದ ಮಕ್ಕಳ ಸಂಖ್ಯೆ ಶೇ.20 ರಷ್ಟಿದೆ. ಇಂತಹ ಮಕ್ಕಳನ್ನು ರಕ್ಷಿಸಲು ಮುನ್ನೆಚ್ಚರಿಕೆ ಹಾಗೂ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಲು ವಿಶೇಷ ಗಮನ ನೀಡುವ ಅಗತ್ಯತೆಯಿದೆ.

ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳಿಗೆ ಸೂಕ್ತ ಮಧ್ಯವರ್ತನಾ ಕ್ರಮಗಳನ್ನು ಕೈಗೊಳ್ಳುವಾಗ ಅವರು ವಾಸಿಸುವ ಪರಿಸರ, ಪೋಷಕರು, ಅವರ ಕುಟುಂಬಗಳು ಮತ್ತು ಸಮಾಜವನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಸಮನ್ವಯ ಅಥವಾ ಅಂತರ್ಗತ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳುವುದರಿಂದ ಇವರ ಸಮಸ್ಯೆಗಳಿಗೆ ಪರಿಹಾರ ಕಾಣಬಹುದಾಗಿದೆ.

"ಜೀವನದ ಅತಿ ಕಡಿಮೆ ಅಥವಾ ಹೆಚ್ಚು ಅವಧಿಯ ಕಾಲ ದೈಹಿಕ ಮತ್ತು ಮಾನಸಿಕ ಆರೋಗ್ಯದ ತೀವ್ರತರವಾದ ಬಹು ಅಪಾಯಗಳಿಗೆ ಒಳಗಾದವರನ್ನು ಕ್ಲಿಷ್ಟ ಸನ್ನಿವೇಶದಲ್ಲಿರುವ ಮಕ್ಕಳು ಎಂದು ಹೇಳಬಹುದು. ಇವರು ಪ್ರಮುಖವಾಗಿ ವಯಸ್ಕರ ಆರೈಕೆ ಮತ್ತು ರಕ್ಷಣೆಯ ಕೊರತೆಯಿರುವವರು ಮತ್ತು ಸಾಮಾನ್ಯವಾಗಿ ಸಮಾಜದ ಮುಖ್ಯವಾಹಿನಿಯ ಹೊರಗಡೆಜೀವನ ಸಾಗಿಸುವಂತವಹವರಾಗಿರುತ್ತಾರೆ "–UNESCAP (ಏಷಿಯಾ ಮತ್ತು ಫೆಸಿಫಿಕ್ ದೇಶಗಳ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕಆಯೋಗ) 2008.

ಕ್ಲಿಷ್ಟ ಸನ್ನಿವೇಶಗಳಲ್ಲಿರುವ ವಿವಿಧ ವರ್ಗದ ಮಕ್ಕಳ ಗುಂಪುಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳೋಣ

ವಸತಿಯನ್ನಾಧರಿಸಿದಂತೆ, ಸ್ಲಂಗಳಲ್ಲಿ ವಾಸಿಸುವ ಮಕ್ಕಳು, ವಲಸೆ ಬಂದ ಮಕ್ಕಳು, ಅಲೆಮಾರಿಗಳ ಮಕ್ಕಳು, ಕೈದಿಗಳ ಮಕ್ಕಳು, ಬೀದಿ ಮಕ್ಕಳು; ಬಡತನವನ್ನಾಧರಿಸಿದಂತೆ ಪರಿತ್ಯಕ್ತ ಹಾಗೂ ಮನೆಯಿಲ್ಲದ ಮಕ್ಕಳು, ಬಿಕ್ಷಾಟನೆಯ ಮಕ್ಕಳು, ಬಾಲಕಾರ್ಮಿಕರು, ತೀವ್ರ ಬಡತನದಲ್ಲಿರುವ ಮಕ್ಕಳು; ನೈಸರ್ಗಿಕ ವಿಕೋಪದ ಪರಿಣಾಮಗಳಿಗೆ ಸಂಬಂಧಿಸಿದಂತೆ ನೈಸರ್ಗಿಕ ವಿಪತ್ತುಗಳಿಂದ ತೊಂದರೆಗೊಳಗಾದ ಮಕ್ಕಳು; ಮಕ್ಕಳ ದುರುಪಯೋಗಕ್ಕೆ ಸಂಬಂಧಿಸಿದಂತೆ ವೇಶ್ಯಾವೃತ್ತಿಯಲ್ಲಿರುವ ಹದಿಹರೆಯದ ಮಕ್ಕಳು, ವೇಶ್ಯೆಯರ ಮಕ್ಕಳು, ಲೈಂಗಿಕ ದುರುಪಯೋಗಕ್ಕೊಳಗಾದ ಮಕ್ಕಳು, ಲೈಂಗಿಕ ಉದ್ದೇಶಕ್ಕೆ ಬಳಸಿಕೊಂಡ ಮಕ್ಕಳು, ಏಡ್ಸ್‌ಗೆ ಬಲಿಯಾದ ಮಕ್ಕಳು, ಅಪಾಯಕಾರಿ ಉದ್ಯೋಗಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳು, ಕಾಣೆಯಾದ ಹಾಗೂ ಕಳ್ಳಸಾಗಾಣಿಕೆಗೆಬಲಿಯಾದಮಕ್ಕಳು, ಬಾಲ್ಯವಿವಾಹಕ್ಕೆ ಬಲಿಯಾದಮಕ್ಕಳು, ಬಾಲಾಪರಾಧಿಗಳು, ಮಾದಕವ್ಯಸನಕ್ಕೊಳಗಾದ ಮಕ್ಕಳು; ಅಲ್ಲದೆ ವಿಕಲಚೇತನ ಮಕ್ಕಳು, ಅನಾಥ ಮಕ್ಕಳು ಮತ್ತು ನಪುಂಸಕರಾಗಿ ಹುಟ್ಟಿದ ಮಕ್ಕಳು.

**ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ಕೆಳಕಂಡಂತೆ ಗುರುತಿಸಬಹುದು:**

ಮಾದಕ ವ್ಯಸನಿಗಳಾದವರು, ಏಡ್ಸ್ ರೋಗಕ್ಕೆ ತುತ್ತಾದವರುಮತ್ತು ಏಡ್ಸ್ ರೋಗಕ್ಕೆ ತುತ್ತಾದವರ ಮಕ್ಕಳು, ಹದಿಹರೆಯದ ವೇಶ್ಯೆಯರು, ಅಂತಹವರ ಮಕ್ಕಳು , ಬಾಲಾಪರಾಧಿಗಳು, ಮಾನಸಿಕವಾಗಿ ಮತ್ತು ದೈಹಿಕವಾಗಿ

ಊನತೆ ಉಳ್ಳವರು ಈ ವರ್ಗಕ್ಕೆ ಸೇರುತ್ತಾರೆ. ಸರಿಸುಮಾರು ಹದಿ ವಯಸ್ಸಿನಲ್ಲಿ ಇರುವ ಸುಮಾರು ಶೇಕಡ 20% ರಷ್ಟು ಮಂದಿ ಈ ವರ್ಗದಲ್ಲಿರಬಹುದು.

**ಹದಿಹರೆಯದವರು ಕ್ಲಿಷ್ಟ ಸನ್ನಿವೇಶಗಳಲ್ಲಿರಲು ಕಾರಣಗಳು:**

ಹದಿಹರೆಯದವರು ಕ್ಲಿಷ್ಟ ಸನ್ನಿವೇಶಗಳಲ್ಲಿ ಸಿಕ್ಕಿಕೊಳ್ಳಲು ಬಡತನ ಒಂದೇ ಅಲ್ಲದೆ ಹಲವಾರು ಕಾರಣಗಳಿರಬಹುದು. ಅವುಗಳನ್ನು ಹೀಗೆ ಪಟ್ಟಿಮಾಡಬಹುದು :

ಶೋಷಣೆಗೆ ಒಳಗಾಗುವ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದು, ಹೆತ್ತವರಿಂದ ದೂರವಿರುವುದು ಅಥವಾ ದತ್ತು ತೆಗೆದುಕೊಂಡವರ ಬಳಿ ಇರುವುದು, ಘರ್ಷಣೆಯಲ್ಲಿ ಹತ್ಯೆಗೆ ಒಳಗಾಗುವುದು, ದಿಕ್ಕು ದೆಸೆ ಇಲ್ಲದಿರುವುದು, ಲೈಂಗಿಕ ಶೋಷಣೆಗೆ ಗುರಿಯಾಗುವುದು, ಪೋಷಕರ ಅಥವಾ ಸನ್ನಿವೇಶಗಳ ಕಾರಣದಿಂದ ಬಾಲಕಾರ್ಮಿಕರಾಗಿರುವುದು ಹೆತ್ತವರ ಅನಾರೋಗ್ಯ, ಕಡುಬಡತನ, ಸೇವೆಯ ಅಲಭ್ಯತೆ, ಆಹಾರ ಬಟ್ಟೆ, ವಸತಿ ಸೌಕರ್ಯವಿಲ್ಲದಿರುವಿಕೆ, ನಗರೀಕರಣ ಅಲ್ಲದೆ ಸಾಮಾಜಿಕ ಸಮಸ್ಯೆಗಳು ಸಮಾಜೋ– ಸಾಂಸ್ಕೃತಿಕ ಕಾರಣಗಳು. ಮಕ್ಕಳೇ ವರದಿ ಮಾಡಿರುವಂತೆ ಶೋಷಣೆ ಅಲಕ್ಷ್ಯ ಕೌಟುಂಬಿಕ ಕ್ರೌರ್ಯ, ಯುದ್ಧ , ಜನಾಂಗೀಯ ಘರ್ಷಣೆ ಇವು ಬಹುಮುಖ್ಯವಾದ ಕಾರಣಗಳಾಗಿ ವರದಿಯಾಗಿವೆ.

ಕ್ಲಿಷ್ಟ ಸನ್ನಿವೇಶಗಳು ಮಕ್ಕಳ ಭೌತಿಕ, ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯದ ಮೇಲೆ ಪರಿಣಾಮ ಬೀರುತ್ತವೆ. ಇದರ ಪರಿಣಾಮವಾಗಿ ಮಕ್ಕಳು ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುವ ಶಕ್ತಿ ಕಳೆದುಕೊಳ್ಳುತ್ತಾರೆ. ಅಂತರ್ ವ್ಯಕ್ತಿ ಸಂಬಂಧಗಳನ್ನು ಹಾಳು ಮಾಡಿಕೊಳ್ಳುತ್ತಾರೆ. ಆಘಾತ/ಕ್ಷೋಭೆಗೆ (trauma) ಗುರಿಯಾಗುವ ಮಕ್ಕಳು ಜೀವನಾದ್ಯಂತ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇವರ ಕಷ್ಟಗಳು ಬಾಲ್ಯ, ಹರೆಯ ಮತ್ತು ವಯಸ್ಕ ಹಂತಗಳಲ್ಲೂ ಮುಂದುವರೆಯುತ್ತವೆ.

ಹಿಂಸಾಚಾರ, ಆಘಾತ, ಸಾಮಾಜಿಕ ವರ್ತನಾ ಸಮಸ್ಯೆಗಳು ಕ್ಲಿಷ್ಟ ಸನ್ನಿವೇಶದಲ್ಲಿರುವ ಮಕ್ಕಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಇದರ ಜೊತೆಗೆ ಘನಘೋರ ಸ್ವಪ್ನಗಳು, ನಿದ್ರಾಹೀನತೆ , ಗೆಳೆಯರೊಡನೆ ಸೇರದಿರುವುದು, ದುಃಖ, ಹಸಿವು, ರುಚಿ ಇಲ್ಲದಿರುವುದು, ಹಿಂಜರಿಕೆಗಳು ಎಳೆಯ ಮಕ್ಕಳಲ್ಲಿ ಕಾಣಿಸಿಕೊಂಡರೆ, ಹದಿಹರೆಯದವರಲ್ಲಿ ಏಕಾಗ್ರತೆಯ ದುರ್ಬಲತೆ, ಆತಂಕ, ನಿರಾಶೆ, ಆಶಾಹೀನತೆ, ಆಕ್ರಮಣಕಾರಿ ವರ್ತನೆಗಳು ಕಾಣಿಸಿಕೊಳ್ಳುತ್ತವೆ. ಜೊತೆಗೆ ಸಮಾಜ ವಿರೋಧಿ ವರ್ತನೆ, ವಿಕೃತಗೊಂಡ ಮೌಲ್ಯಗಳಾದ ಕಳ್ಳತನ, ಸುಳ್ಳು ಹೇಳುವಿಕೆ, ಮೋಸ ಮಾಡುವಿಕೆ ಈ ವರ್ತನೆಗಳನ್ನು ಹದಿಹರೆಯದವರು ತಮ್ಮ ಬದುಕಿನ ಉಳಿವಿಗಾಗಿ ಬಳಸಿಕೊಳ್ಳುತ್ತಾರೆ . ಪುನಃಪುನಃ ಮರುಕಳಿಸುವ ಋಣಾತ್ಮಕ ಮತ್ತು ಕ್ರೂರ ಅನುಭವಗಳು, ಆತಂಕ, ಭವಿಷ್ಯದ ಭಯ, ಆಶಾಭಂಗ, ಕೋಪ, ಒಂಟಿತನ, ಅಪನಂಬಿಕೆ, ತಿರಸ್ಕಾರಕ್ಕೆ ಗುರಿಯಾಗುವಿಕೆ ಇಂತಹ ಮನೋವೈಜ್ಞಾನಿಕ ಸಮಸ್ಯೆಗಳಿಂದ ಅವರು ಬಳಲುತ್ತಾರೆ (UNICEF 2003) ಸಮಾಜೋ–ಆರ್ಥಿಕ ದೃಷ್ಟಿಯಿಂದ ಅನನುಕೂಲ ಸ್ಥಿತಿಯಲ್ಲಿರುವ ಕುಟುಂಬಗಳ ಸದಸ್ಯರು ಹೆಚ್ಚಿಗೆ ಬಾಲ್ಯದ ಮಾನಸಿಕ ರೋಗಗಳಿಗೆ, ಭಾವನಾತ್ಮಕ ಮತ್ತು ವರ್ತನಾ ಸಮಸ್ಯೆಗಳಿಗೆ ಗುರಿಯಾಗುತ್ತಾರೆ. ಅಲ್ಲದೆ ಇವರು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ತೊಂದರೆಯನ್ನೂ ಅನುಭವಿಸುತ್ತಾರೆ. (Sawyer et al., 2001)

ಹತ್ತರಿಂದ ಹದಿನಾರನೇ ವಯಸ್ಸಿನಲ್ಲಿ ಇರುವಕ್ಲಿಷ್ಟ ಸನ್ನಿವೇಶದ ಗಂಡು ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದ ವರ್ತನಾ ಸಮಸ್ಯೆಗಳು ಕಂಡುಬರುತ್ತವೆ. ಅವರು ಸಮಾಜ ವಿರೋಧಿ ವರ್ತನೆಯನ್ನು ಪದೇ ಪದೇ ತೋರಿಸಿ ಸಿಕ್ಕಿಹಾಕಿಕೊಳ್ಳುವ ಸಮಯದಲ್ಲಿ ಮನೆ ಬಿಟ್ಟು ಓಡಿ ಹೋಗುತ್ತಾರೆ.(Kavitha. Sekar& Raj 2012)

ಹೆಚ್ಚಿನ ಒತ್ತಡಕ್ಕೆ ಗುರಿಯಾದ ಕ್ಲಿಷ್ಟ ಸನ್ನಿವೇಶದ ಹದಿಹರೆಯದವರು ವರ್ತನಾ ಸಮಸ್ಯೆಗಳನ್ನು ತೋರುತ್ತಾರೆ. ಹೆತ್ತವರ ಕಾಳಜಿ ಮತ್ತು ಮೇಲ್ವಿಚಾರಣೆ ಇಲ್ಲದಿರುವುದು, ದೋಷಪೂರಿತ ವ್ಯಕ್ತಿತ್ವಗಳನ್ನು ಮಾದರಿಯಾಗಿ

ಅನುಸರಿಸುವುದು, ಅತಿ ಚುರುಕುತನ, ಕೆಲಸಗಳ್ಳತನ, ಒಂಟಿತನ, ಶಾಲೆಯಲ್ಲಿ ಕಿರಿಕಿರಿ, ಅವಿಧೇಯತೆ, ದುರ್ಬಲತೆ, ಏಕಾಗ್ರತೆಯ ಕೊರತೆ, ಮುಂತಾದ ವರ್ತನಾ ಸಮಸ್ಯೆಗಳು ಇವರಲ್ಲಿ ಸಾಮಾನ್ಯವಾಗಿರುತ್ತವೆ.

ಈ ಮೇಲಿನ ವರ್ತನೆಗಳನ್ನು ತೋರುವ ಮಕ್ಕಳು ಹೆಚ್ಚಿನ ಒತ್ತಡಕ್ಕೆ ಗುರಿಯಾಗಿ ಅನಪೇಕ್ಷಿತ ವರ್ತನೆಗಳನ್ನು ತೋರುತ್ತಾರೆ. ಇವು ಹೆತ್ತವರಿಂದ, ಶಿಕ್ಷಕರಿಂದ ಮತ್ತು ಇತರರಿಂದ ಅಹಿತಕರ ಪ್ರತಿಕ್ರಿಯೆಗಳನ್ನು ಹೊರತರುತ್ತವೆ. ಇವುಗಳೊಂದಿಗೆ ಜಾತಿ, ಸಾಂಸ್ಕೃತಿಕ ರೂಢಿಗಳು, ಬಡತನ, ಅಸಮರ್ಥತೆ ಮತ್ತು ಒಂಟಿ ತಂದೆ ಅಥವಾ ಒಚಿಟಿ ತಾಯಿತನ ಇತ್ಯಾದಿಗಳು ಮಕ್ಕಳಲ್ಲಿ ಆತ್ಮಗೌರವವನ್ನು ಕುಂದಿಸುತ್ತವೆ.

ಕ್ಲಿಷ್ಟ ಸನ್ನಿವೇಶದ ಹದಿಹರೆಯದವರಲ್ಲಿ ಕೊಳಗೇರಿ ಮಕ್ಕಳು ಅನುಭವಿಸುವ ಕ್ಲಿಷ್ಟ ಸನ್ನಿವೇಶಗಳು ಬೇರೆಯೇ ಆಗಿರುತ್ತವೆ. ಅವರಿಗೆ ದೈನಂದಿನಮೂಲ ಚಟುವಟಿಕೆಗಳಿಗೂ ಸ್ಥಳವಿರುವುದಿಲ್ಲ, ಸುತ್ತಲೂ ಕಸದ ರಾಶಿ ಇದ್ದು ನೈರ್ಮಲ್ಯದ ಹೆಸರೇ ಇಲ್ಲದಂತಹ ಪರಿಸ್ಥಿತಿ, ಶುದ್ಧವಾದ ಕುಡಿಯುವ ನೀರಿನ ಕೊರತೆ, ಶಾಲೆಗೆ ದಾಖಲಾತಿಯಾಗದ ಮಕ್ಕಳು ಆಚೀಚೆ ಓಡಾಡಿಕೊಂಡೇ ಕಾಲ ಕಳೆಯುವುದು, ದಾಖಲಾದರೂ ಅನೇಕ ಕಾರಣಗಳಿಂದಾಗಿ ಶಾಲೆಗೆ ಹೋಗದಿರುವುದು, ಮಕ್ಕಳು ಕಸದ ರಾಶಿಯಲ್ಲೇ ಆಡುವುದು, ಮಕ್ಕಳೇ ಹೆತ್ತವರ ಬಹುವಿಧದ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು ಮತ್ತು ನೆರೆಹೊರೆಯವರ ಕೆಲಸಗಳನ್ನು ಮಾಡುವುದು ಇತ್ಯಾದಿ.

ಕ್ಲಿಷ್ಟ ಸನ್ನಿವೇಶದಲ್ಲಿರುವ ಮತ್ತೊಂದು ಪ್ರಕಾರದ ಮಕ್ಕಳೆಂದರೆ ವಲಸೆ ಮಕ್ಕಳು ( 3 ರಿಂದ 18 ವರ್ಷ ವಯಸ್ಸಿನವರು). ಹೆತ್ತವರು ಇರುವ ಅಥವಾ ಇಲ್ಲದಿರುವಂತಹವರು ದೇಶ/ರಾಜ್ಯ/ ಜಿಲ್ಲೆಗಳ ಗಡಿಗಳಿಂದ ಬರುವವರಾಗಿರುತ್ತಾರೆ. ಅವರು ವಲಸೆ ಹೋಗಲು ಅನೇಕ ಕಾರಣಗಳಿರುತ್ತವೆ, ಉದಾಹರಣೆಗೆ ತುರ್ತುಪರಿಸ್ಥಿತಿ, ನೈಸರ್ಗಿಕ ವಿಕೋಪ, ಮಾನವೀಯತೆಯ ಬಿಕ್ಕಟ್ಟು, ಕ್ರಾಂತಿ, ಕಡುಬಡತನ, ನಿಂದನೆಯಿಂದ ಪಾರಾಗುವುದು, ಸಂಘರ್ಷಗಳಿಂದ ಹೊರಬರುವುದು, ಜನಾಂಗೀಯ ಸಮಸ್ಯೆಗಳು, ಲೈಂಗಿಕ ಕಿರುಕುಳ ಮುಂತಾದವು. ಇವುಗಳಲ್ಲದೆ ಉತ್ತಮ ಶೈಕ್ಷಣಿಕ ಮತ್ತು ವೃತ್ತಿ ಅವಕಾಶಗಳಿಗಾಗಿ ಮೋಸದ ಜಾಲಕ್ಕೆ ಬಿದ್ದು ನರಳುವುದೂ ಕಾಣಬರುತ್ತದೆ. ಇವರು ವಲಸೆಯ ಮಾರ್ಗದಲ್ಲೂ ಮತ್ತು ವಲಸೆಪ್ರದೇಶಗಳಲ್ಲೂ ಅನೇಕ ಕಷ್ಟಗಳಿಗೆ ಗುರಿಯಾಗುವುದುಂಟು.

ಸೆರೆಮನೆಯಲ್ಲಿರುವವರ ಮಕ್ಕಳ ಬವಣೆಯ ಪರಿಯೇ ಬೇರೆ. ಮಾನಸಿಕ ಆರೋಗ್ಯ ಹದಗೆಟ್ಟು, ಹೊಂದಿಕೊಳ್ಳಬಹುದಾದ ಸಾಮಾಜಿಕ ವರ್ತನೆಯೂ ಇಲ್ಲವಾಗಿ, ಶೈಕ್ಷಣಿಕ ಅವಕಾಶಗಳೂ ಇಲ್ಲವಾಗಿರುತ್ತದೆ. ಹಣಕಾಸಿನ ಕಷ್ಟಗಳಲ್ಲದೆ ಭಾವನಾತ್ಮಕ ಆಘಾತಗಳಿಂದಲೂ ನರಳುತ್ತಾರೆ. ಆ ಮಕ್ಕಳು ನೇರವಾಗಿ ಅವರ ಸಮುದಾಯದಲ್ಲಿಯೇ ಕ್ರೌರ್ಯ, ಅವಮಾನಗಳನ್ನು ಅನುಭವಿಸುತ್ತಾರೆ. ಅಲ್ಲದೆ ಮಾದಕ ವ್ಯಸನಿಯಾಗಿ ಶಾಲಾ ಚಟುವಟಿಕೆಗಳಿಗೆ ಗಮನಕೊಡಲಾಗದೆ, ಸಮಾಜ ವಿರೋಧಿ ಚಟುಚಟಿಕೆಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆಯೇ ಹೆಚ್ಚು.

ಬೀದಿ ಮಕ್ಕಳು ಬಡತನದಿಂದಾಗಿ ವಸತಿ ಇಲ್ಲದೆ ನಗರಪಟ್ಟಣಗಳ ಮತ್ತು ಹಳ್ಳಿಗಳ ಬೀದಿಬದಿಯಲ್ಲಿ, ಹಾಳು ಗುಡಿ– ಮಂಟಪಗಳಲ್ಲಿ ವಾಸಿಸುವವರು. UNICEF ನ ಪ್ರಕಾರ 18 ವರ್ಷದ ಒಳಗೆ ಇರುವ ಬೀದಿ ಮಕ್ಕಳು ಅನುಪಯುಕ್ತ ಭೂಭಾಗಗಳಲ್ಲಿ ಆಕ್ರಮಿತವಲ್ಲದ ಕಟ್ಟಡಗಳಲ್ಲಿ ವಾಸಿಸುವವರು. ಈ ಮಕ್ಕಳು ರಕ್ಷಣೆ ಇಲ್ಲದೆ ಅನೇಕ ಸಲ ಅನೇಕ ರೀತಿಯ ನಿಂದನೆಗೆ, ಶೋಷಣೆಗೆ ಗುರಿಯಾಗುವವರು, ಕೆಲವು ಸ್ಥಳೀಯ ವ್ಯಾಪಾರೋದ್ಯಮಿಗಳು ಇವರನ್ನು ಗುತ್ತಿಗೆ ತೆಗೆದುಕೊಂಡು ಶಿಕ್ಷಣದ ಅವಕಾಶದಿಂದ ವಂಚಿಸಿಬಿಡುವರು. NGOಗಳು ಅಂತಹ ಕೆಲವು ಮಕ್ಕಳನ್ನು ಶಾಲೆಗಳಿಗೆ ಹೋಗುವಂತೆ ಪುನರ್ವಸತಿ ಕೇಂದ್ರಗಳಿಗೆ ಸೇರಿಸಿ ಸುರಕ್ಷಿತ ಕುಟುಂಬ ಜೀವನ ಪರಿಸರವನ್ನು ಒದಗಿಸುವುದುಂಟು.

ಭಿಕ್ಷೆ ಬೇಡುವ ಮಕ್ಕಳೂ ಇದೇ ರೀತಿಯ ಸಮಸ್ಯೆಗಳಿಂದ ಬಳಲುವರು. ಈ ಭಿಕ್ಷೆ ಬೇಡುವಿಕೆಯ ಅಭ್ಯಾಸದಿಂದ ಅವರಲ್ಲಿ ಸುಪ್ತವಾಗಿರುವ ಸಾಮರ್ಥ್ಯಗಳು ವಿಕಾಸವಾಗದೆ ಹೋಗಬಹುದು. ಇನ್ನೂ ಕೆಲವು ಸ್ಥಳಗಳಲ್ಲಿ ಭಿಕ್ಷೆ ಬೇಡುವ ಮಕ್ಕಳುಕ್ರೌರ್ಯಕ್ಕೆ ತುತ್ತಾಗುವುದೂ ಉಂಟು.

ಮಕ್ಕಳು ಆರ್ಥಿಕ ಚಟುವಟಿಕೆ /ದುಡಿಮೆಯ ಕಾರ್ಯಗಳಲ್ಲಿ ಮತ್ತು ಅಪಾಯಕಾರಿ ಉದ್ಯೋಗಗಳಲ್ಲಿ ಅರೆಕಾಲಿಕ ಅಥವಾ ಪೂರ್ಣಕಾಲಿಕವಾಗಿ ನಿರತರಾದಾಗ ಅವರು ಬಾಲಕಾರ್ಮಿಕರೆನಿಸಿಕೊಳ್ಳುತ್ತಾರೆ. ಇದರಿಂದ ಆ ಮಕ್ಕಳು ತಮ್ಮ ಬಾಲ್ಯಾವಸ್ಥೆಯಿಂದ ವಂಚಿತರಾಗುತ್ತಾರೆ. ಇದು ಅವರ ಭೌತಿಕ ವಿಕಾಸಕ್ಕೆ ಮಾತ್ರ ಅಪಾಯಕಾರಿಯಾಗಿದೆ ಮಾನಸಿಕ ವಿಕಾಸಕ್ಕೆ ಅಪಾಯಕಾರಿಯಾಗಿದೆ. ಆದ್ದರಿಂದ ಅಪಾಯಕಾರಿ ಕಸುಬುಗಳಿಂದ ಮಕ್ಕಳನ್ನು ಸಂರಕ್ಷಿಸಿ ಶೈಕ್ಷಣಿಕ ಅವಕಾಶಗಳನ್ನು ಒದಗಿಸಬೇಕು.

ಬಡತನವೆಂದರೆ, ಸತತ ಆರ್ಥಿಕ ಮುಗ್ಗಟ್ಟಿನಿಂದ ನರಳುತ್ತಿರುವುದು. ಇದು ಹದಿಹರೆಯದವರ ವಿಕಾಸದ ಮೇಲೆ ಧ್ವಂಸಕಾರಿ ಪರಿಣಾಮಗಳನ್ನುಂಟು ಮಾಡುವುದು. ಇದು ಸಾಮಾಜಿಕ ಮತ್ತು ಮನೋವೈಜ್ಞಾನಿಕವಾದ ಕಷ್ಟಗಳನ್ನುಂಟುಮಾಡುತ್ತದೆ. ಮೊಟ್ಟಮೊದಲಿಗೆ ಬಡವರುದುರ್ಬಲರು, ಬಹಳ ಅಪರೂಪವಾಗಿ ನಿರ್ಧಾರ ಕೈಗೊಳ್ಳುವಂತಹವರಾಗಿರುತ್ತಾರೆ. ದುರಂತಗಳ ಬಲಿಪಶುಗಳಾಗಿ ಅವರಿಗೆ ಆಯ್ಕೆಗಳೂ ಕಡಿಮೆ, ಗೌರವವೂಕಡಿಮೆ. ಇವೆಲ್ಲವೂ ಅಸಮರ್ಪಕ ಶಿಕ್ಷಣ ಮತ್ತು ಓದು–ಬರಹದ ಅಸಮರ್ಥತೆಯ ಫಲ.

ಸಂಶೋಧನಾ ಅಧ್ಯಯನಗಳ ಪ್ರಕಾರ ಹದಿಹರೆಯದ ಬಡಮಕ್ಕಳು ಈ ಕೆಳಗಿನ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಸಂಘರ್ಷ, ಹಿಂಸೆ, ಮನೆಯಲ್ಲಿ ಅಸ್ಥಿರತೆಮತ್ತು ಅವ್ಯವಸ್ಥೆ, ಹೆತ್ತವರ ಬೇಜವಾಬ್ದಾರಿಮತ್ತು ಸರ್ವಾಧಿಕಾರ, ಮಾರ್ಗದರ್ಶನದ ಕೊರತೆ, ಇತ್ಯಾದಿ.

ನಿಮಗೆ ತಿಳಿದಿರುವಂತೆ ನೈಸರ್ಗಿಕ ಪ್ರಕೋಪ ಅಥವಾ ಅಪಾಯಗಳು ಅಂದರೆ ಭೂಕಂಪ, ಪ್ರವಾಹ, ಕ್ಷಾಮ ಚಂಡಮಾರುತ ಮುಂತಾದವುಗಳು ಮಾಡುವ ಹಾನಿ ಹೇಳಲಸಾಧ್ಯ. ಈ ನೈಸರ್ಗಿಕ ಪ್ರಕೋಪಗಳಿಂದ ಅನೇಕ ಮಂದಿ ಮನೆ–ಮಠ ಕಳೆದುಕೊಂಡಾಗ ಅವರು, ಅವರ ಮಕ್ಕಳು ಭೌತಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗೆ ತುತ್ತಾಗುವರು. ಇದರಿಂದ ಹದಿಹರೆಯದ ಮಕ್ಕಳ ಶಿಕ್ಷಣ, ಪ್ರಗತಿ ಕುಂಠಿತವಾಗುವುದು, ಉದ್ಯೋಗ ಭರವಸೆ ಕ್ಷೀಣಿಸುವುದು.

ಹದಿಹರೆಯದವರ ಮೇಲಾಗುವ ದೌರ್ಜನ್ಯದ ವರದಿಗಳು ಆಘಾತಕಾರಿಯಾಗಿದೆ. ಮಕ್ಕಳನ್ನು ಭೌತಿಕವಾಗಿ, ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಶೋಷಣೆ ಮಾಡುವುದು ದೈನಂದಿನ ವರದಿಗಳಾಗಿವೆ. ಹದಿಹರೆಯದವರನ್ನು ಮನೆಗಳಲ್ಲಿ, ಶಾಲೆಗಳಲ್ಲಿ, ಅನಾಥಾಲಯಗಳಲ್ಲಿ, ಬೀದಿಗಳಲ್ಲಿ, ಕಾರ್ಯ ಕೈಗೊಳ್ಳುವ ಸ್ಥಳಗಳಲ್ಲಿ ಬಲಾತ್ಕಾರದ ಲೈಂಗಿಕ ಉದ್ರೇಕಕ್ಕೆ ಗುರಿ ಮಾಡುವುದು ಅಪಾಯಕಾರಿ ಮತ್ತು ಅವಮಾನಕರವಾದುದು. ದೇಹದಂಡನೆಗೊಳಗಾಗುವ ಅಲಕ್ಷಕ್ಕೆ, ಬೈಗುಳಕ್ಕೆ, ನಿಂದನೆಗೆ ಗುರಿಯಾಗುವ ಮಕ್ಕಳು ತೀವ್ರವಾದ ಪರಿಣಾಮಗಳನ್ನು ಅನುಭವಿಸುತ್ತಾರೆ. ವಿಶ್ವ ಆರೋಗ್ಯ ಸಂಸ್ಥೆ (WHO)ಯ ಪ್ರಕಾರ ವಿಕಾಸಾತ್ಮಕವಾಗಿ ಸಮಂಜಸವಾದ ಬೆಂಬಲ ನೀಡುವ ಪರಿಸರವನ್ನು ಇಲ್ಲವಾಗಿಸುವುದೇ ಭಾವನಾತ್ಮಕ ನಿಂದನೆ. ಇದು ಮಕ್ಕಳ/ ಹರೆಯದವರ ವ್ಯಕ್ತಿತ್ವದ ಸರ್ವತೋಮುಖ ವಿಕಾಸಕ್ಕೆ ಕೊಡಲಿ ಪೆಟ್ಟಾಗುವುದು. ಲೈಂಗಿಕ ಕಿರುಕುಳಕ್ಕೆ ತುತ್ತಾದ ಪರಿಣಾಮದಿಂದ ಹದಿಹರೆಯದವರು ಅವಮಾನ, ಸ್ವನಿಂದೆ, ಹತಾಶೆ, ಆತಂಕ, ಒತ್ತಡ, ಸ್ವಗೌರವ ನಾಶ, ದೇಹ–ದಂಡನೆಯ ವರ್ತನೆಗಳನ್ನು ಬೆಳೆಸಿಕೊಳ್ಳುವರು.

**ಮಕ್ಕಳ ಸಾಗಣೆ**

ಮಕ್ಕಳನ್ನು ಸಾಗಣೆ ಮಾಡುವುದು, ಅಮಾಯಕ ಮಕ್ಕಳನ್ನು ದುರುಪಯೋಗ ಅಥವಾ ಕೀಳ್ಬಳಕೆ ಮಾಡುವುದು, ಮಕ್ಕಳನ್ನು ಸೇವಕರಂತೆ ಬಳಸುವುದು, ಕೆಲಸಕ್ಕೆ ನೇಮಿಸಿಕೊಳ್ಳುವುದು, ಶೋಷಣೆ ಮಾಡುವುದು ಮತ್ತು ಕೆಲಸ ಮಾಡಲು ಒತ್ತಾಯ ಮಾಡುವುದು ಇಲ್ಲವೇ ಮಕ್ಕಳನ್ನೇ ಮಾರಾಟ ಮಾಡುವುದು ಇಂದು

ಹೇರಳವಾಗಿ ನಡೆಯುತ್ತಿದೆ. ಲೈಂಗಿಕ ಶೋಷಣೆಯೊಂದಿಗೆ ಬಲಾತ್ಕಾರದ ಬಾಲ್ಯವಿವಾಹವೂ ನಡೆಯುತ್ತಿದೆ. ಮನೆಗೆಲಸದ ತೊತ್ತಿನಾಳುಗಳಂತೆ ದುಡಿಸಿಕೊಳ್ಳುವುದು, ಫ್ಯಾಕ್ಟರಿಗಳಲ್ಲಿ ದುಡಿಸಿಕೊಳ್ಳುವುದು, ಜೇಬುಗಳ್ಳತನಕ್ಕೆ, ಭಿಕ್ಷೆಗೆ, ಮಾದಕ ವಸ್ತುಗಳ ಸಾಗಣೆ ಮಾಡಿಸಲು ಮತ್ತು ಕ್ರಿಮಿನಲ್ ಕೆಲಸ ಮಾಡಿಸಿಕೊಳ್ಳಲು ಹದಿಹರೆಯದವರನ್ನು ಬಳಸಲಾಗುತ್ತಿದೆ.

ಕ್ಲಿಷ್ಟ ಸನ್ನಿವೇಶಗಳಲ್ಲಿರುವ ಹದಿಹರೆಯದವರಿಗೆ ಸಹಾಯ ಮಾಡಲು ಕುಟುಂಬಗಳು, ಸಮುದಾಯ, ಸಮಾಜ, ಸೇವಾ ಸಂಸ್ಥೆಗಳು, ಶಾಲೆಗಳು ಇವುಗಳೆಲ್ಲ ಶ್ರಮಿಸಿ ಬಡತನ ಕ್ರೌರ್ಯವರ್ತನೆ, ಇತ್ಯಾದಿ ಅಪವರ್ತನೆಗಳಿಗೆ ಪ್ರೇರಕವಾಗುವ ಪ್ರಭಾವಗಳನ್ನು ಕಡಿಮೆ ಮಾಡಲು ಮತ್ತು ನಿವಾರಿಸಲು ಇಂದು ಗಂಭೀರವಾಗಿ ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಕೆಳಗಿನ ಸಲಹೆಗಳನ್ನು ಪರಿಗಣಿಸಬಹುದು.

- ಮಕ್ಕಳನ್ನು ಗುರುತಿಸಿ ವಾತ್ಸಲ್ಯದಿಂದ ಮಾತನಾಡಿ, ಅವರ 'ಸನ್ನಿವೇಶ' ಕುರಿತು ನೇರ ಮತ್ತು ದಿಟ್ಟ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಬೇಕು.
- ಆ ಮಕ್ಕಳ ಜೊತೆ ಇದ್ದು ಅವರಿಗೆ ಸೂಕ್ತ ನೆರವು ದೊರಕುವಂತೆ ಮಾಡಬೇಕು
- ಆ ಮಕ್ಕಳ ವರ್ತನೆಯಲ್ಲಿ 'ಎಚ್ಚರಿಕೆ ನೀಡುವ' ಲಕ್ಷಣಗಳನ್ನು ಕಡೆಗಣಿಸಬಾರದು
- ಅಪಹಾಸ್ಯ ಅಥವಾ ಅಸಮ್ಮತಿ ಸೂಚಕವರ್ತನೆಯನ್ನು ತೋರಬಾರದು.
- ಸುಳ್ಳು ಭರವಸೆಯನ್ನು ಕೊಡಬಾರದು
- ಅಂತಹ ಮಕ್ಕಳು ತಮ್ಮ ಸಮಸ್ಯೆ ಹೇಳಲು ಮುಂದಾದರೆ ನಿರಾಕರಿಸಬಾರದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ನಿಮ್ಮ ಶಾಲೆಗೆ ದಾಖಲಾಗಿರುವ ಕ್ಲಿಷ್ಟ ಸನ್ನಿವೇಶಗಳಲ್ಲಿರುವ ಮಕ್ಕಳಿಗೆ ಸಹಾಯ ಮಾಡಲು ನಿಮ್ಮ ಸಹೋದ್ಯೋಗಿಗಳೊಂದಿಗೆ ಒಂದು ಕಾರ್ಯಯೋಜನೆಯನ್ನು ತಯಾರಿಸಿ.

## 3.4.3.2.ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ರಕ್ಷಿಸಲು ಇರುವ ಕಾನೂನಿನ ಸೌಲಭ್ಯಗಳು ಮತ್ತು ಸಮಸ್ಯೆಗಳನ್ನು ನಿರ್ವಹಿಸಲು ಸಲಹೆಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು

ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ರಕ್ಷಿಸಲು ಹಲವಾರು ಸೌಲಭ್ಯಗಳನ್ನು ಕಾನೂನಿನಲ್ಲಿ ಒದಗಿಸಲಾಗಿದೆ. ಅವುಗಳಲ್ಲಿ ಪ್ರಮುಖ ಸೌಲಭ್ಯಗಳೆಂದರೆ:

ಅವನ/ಅವಳ ನಡತೆಯ ಸ್ವರೂಪ ಮತ್ತು ಪರಿಣಾಮಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವ ಅಗತ್ಯವಾದ ಪರಿಪಕ್ವತೆ ಹೊಂದಿರದಿದ್ದಲ್ಲಿ, 12 ವರ್ಷದೊಳಗಿರುವ ಮಗುವನ್ನು ಅಪರಾಧಕ್ಕಾಗಿ ತಪ್ಪಿತಸ್ಥರಾಗಿ ಬಂಧಿಸಿಡುವಂತಿಲ್ಲ. (ಸೆಕ್ಷನ್ 82–83 ಭಾರತೀಯದಂಡ ಸಂಹಿತೆ (ಐ.ಪಿ.ಸಿ)

ಭಾರತೀಯ ದಂಡಸಂಹಿತೆ (ಸೆಕ್ಷನ್ 317)ರ ಪ್ರಕಾರ ಮಕ್ಕಳು ಅಥವಾ ಹದಿಹರೆಯದವರನ್ನು ಪರಿತ್ಯಜಿಸಿದರೆ ಮತ್ತು ತೊಂದರೆಗೆ ಒಡ್ಡಿದರೆ ಶಿಕ್ಷೆಗೊಳಗಾಗುತ್ತಾರೆ.

ಭಾರತೀಯ ದಂಡ ಸಂಹಿತೆ ಸೆಕ್ಷನ್ 361ರ ಪ್ರಕಾರ ಕಾನೂನಾತ್ಮಕವಾಗಿ ಪಾಲಕರ ರಕ್ಷಣೆಯಲ್ಲಿರುವ ಮಕ್ಕಳನ್ನು ಅಪಹರಿಸುವುದು ಶಿಕ್ಷಾರ್ಹವಾಗಿದೆ.

ಭಾರತೀಯ ದಂಡಸಂಹಿತೆ ಸೆಕ್ಷನ್ 363–ಎರ ಪ್ರಕಾರ ಚಿಕ್ಕವಯಸ್ಸಿನ ಮಕ್ಕಳನ್ನು ಬಿಕ್ಷೆಗೆ ಬಳಸಿಕೊಳ್ಳಲು ಅವರನ್ನು ಅಪಹರಿಸುವುದು ಅಥವಾ ಊನಗೊಳಿಸುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.

ಭಾರತೀಯ ದಂಡಸಂಹಿತೆ ಸೆಕ್ಷನ್ 366ಎ, 372, 373 ಮತ್ತು 376ರಪ್ರಕಾರ ಲೈಂಗಿಕ ಉದ್ದೇಶಕ್ಕಾಗಿ ಮತ್ತು ಅತ್ಯಾಚಾರಕ್ಕಾಗಿ ಚಿಕ್ಕವಯಸ್ಸಿನ ಹೆಣ್ಣು ಮಕ್ಕಳನ್ನು ಪಡೆದುಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.

ಹುಡುಗರು ಮತ್ತು ಹುಡುಗಿಯರಿಗೆ ಮದುವೆ ಮಾಡಲು ಕಾನೂನಾತ್ಮಕವಾಗಿ ಇರುವ ಮದುವೆಯ ವಯಸ್ಸನ್ನು ಕಡಿಮೆಗೊಳಿಸುವುದು ಅಪರಾಧವಾಗುತ್ತದೆ.

ಈ ಮೇಲ್ಕಂಡ ಕಾನೂನುಗಳನ್ನು ಸರಿಯಾಗಿ ಜಾರಿಗೊಳಿಸುವುದು ಮತ್ತು ನಿರ್ವಹಿಸುವುದು ಅಗತ್ಯ. ಭಾರತೀಯ ದಂಡ ಸಂಹಿತೆಗೆ ಕೆಲವು ಮಾರ್ಪಾಡುಗಳನ್ನು ತಂದು ಮಕ್ಕಳನ್ನು ವಿವಿಧ ಉದ್ದೇಶಗಳಿಗಾಗಿ ದುರುಪಯೋಗ ಮಾಡಿಕೊಳ್ಳುವುದು ಮತ್ತು ಉದ್ಯೋಗ ಕೊಡಿಸುವ ನೆಪದಲ್ಲಿ ಮೋಸ ಮಾಡುವವರನ್ನು ಶಿಕ್ಷೆಗೊಳಪಡಿಸಬೇಕಾಗಿದೆ.

**ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರ ಸಮಸ್ಯೆಗಳನ್ನು ನಿರ್ವಹಿಸಲು ಸಲಹೆಗಳು:**

ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಈ ಕೆಳಕಂಡ ಕ್ರಮಗಳನ್ನು ಸೂಚಿಸಲಾಗಿದೆ.

- ಹೆಚ್ಚಿನ ವಿಶ್ವವಿದ್ಯಾನಿಲಯಗಳಲ್ಲಿ ಅಪರಾಧ ನ್ಯಾಯವಿಜ್ಞಾನಕ್ಕೆ ಸಂಬಂಧಿಸಿದ ಕೋರ್ಸ್‌ಗಳನ್ನು ಪ್ರಾರಂಭಿಸಬೇಕು. (ಪ್ರಸ್ತುತ ಕೇವಲ 10 ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ ಈ ವಿಷಯದ ಕೋರ್ಸ್‌ಗಳು ಕಂಡುಬರುತ್ತವೆ).
- ಹದಿಹರೆಯದವರ ಸಮಸ್ಯೆಗಳ ಬಗ್ಗೆ ಪೋಲೀಸ್ ಇಲಾಖೆ ಮತ್ತು ಕಾನೂನು ಜಾರಿಗೊಳಿಸುವ ಇತರೆ ಇಲಾಖೆಗಳಿಗೆ ಅರಿವು ಮೂಡಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಪ್ರೇರೇಪಿಸಬೇಕು.
- ಆಯ್ದ ನಗರಗಳಲ್ಲಿ ಹದಿಹರೆಯದವರಿಗಾಗಿ ಸಹಾಯವಾಣಿ ಹಾಗೂ ಬಾಲಕ–ಬಾಲಕಿಯರಿಗೆ ಏಡ್ಸ್ ಅರಿವು ಮೂಡಿಸುವ ಬಾಲಕೇಂದ್ರಗಳನ್ನು ಸ್ಥಾಪಿಸಬೇಕು.
- ಆಯ್ದ ಸ್ಥಳಗಳಲ್ಲಿ ಪೋಲಿಸ್–ವಿದ್ಯಾರ್ಥಿ ಸಂಪರ್ಕ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಬೇಕು (ಕೆಲವು ಉದಾಹರಣೆಗಳೆಂದರೆ DARE – Drug Abuse Resistance Education, GREAT – Gang Resistane Education Programme, JUMP – Juvenile Mentioring Programme etc.)
- ಮಾದಕ ವ್ಯಸನಗಳ ಮುಕ್ತಿ ಕೇಂದ್ರಗಳನ್ನು ಬಲಗೊಳಿಸಿ, ಅವುಗಳನ್ನು ಹದಿಹರೆಯದವರ ಸ್ನೇಹಿಯಾಗಿಸಬೇಕು ಮತ್ತು ಇಂತಹ ಕೇಂದ್ರಗಳನ್ನು ನಡೆಸಲು ಸರ್ಕಾಕೇತರ ಮತ್ತು ಸಮುದಾಯಧಾರಿತ ಸಂಘಟನೆಗಳನ್ನು ಪ್ರೋತ್ಸಾಹಿಸಬೇಕು.
- ದೈಹಿಕ ಹಾಗೂ ಮಾನಸಿಕ ಸವಾಲುಗಳುಳ್ಳ ಹದಿಹರೆಯದ ಮಕ್ಕಳ ಅಭಿವೃದ್ಧಿ ಹಾಗೂ ಪುನರ್ವಸತಿಗಾಗಿ ಸಂವೇದನಾ ಕಾರ್ಯಕ್ರಮಗಳನ್ನು ಏರ್ಪಡಿಸಿ, ಸರ್ಕಾರೇತರ ಸಂಸ್ಥೆಗಳು ಇದರಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು.

**ಶೈಕ್ಷಣಿಕ ನಿಹಿತಾರ್ಥಗಳು**

ಕ್ಲಿಷ್ಟ ಸನ್ನಿವೇಶದಲ್ಲಿರುವ ಮಕ್ಕಳನ್ನು ಗುರುತಿಸುವಾಗ ಅವರು ಬೆಳೆದ ಪರಿಸರ ಅಂದರೆ–ಕುಟುಂಬ ಮತ್ತು ನೆರೆ ಹೊರೆ ಮತ್ತು ಸಮಾಜದ ಬಗ್ಗೆ–ತಿಳಿಯುವುದು ಅಗತ್ಯ. ಶಾಲೆಯು ಒಂದು ಸಾಮಾಜಿಕ ಸಂಸ್ಥೆಯಾದುದರಿಂದ ಆ ವಲಯ ಅಥವಾ ಪ್ರಾಂತ್ಯದಲ್ಲಿರುವ ಎಲ್ಲ ಮಕ್ಕಳಿಗೂ ಶಿಕ್ಷಣ ಒದಗಿಸುವ ಜವಾಬ್ದಾರಿ ಶಾಲೆಯದಾಗಿರುತ್ತದೆ. ತಾವಾಗೇ ಶಿಕ್ಷಣ ಬಯಸಿ ಬರುವ ಮಕ್ಕಳಿಗೆ ಮಾತ್ರ ಶಿಕ್ಷಣ ಒದಗಿಸುವುದಷ್ಟೇ

ಶಾಲೆಗಳ ಜವಾಬ್ದಾರಿಯಲ್ಲ. ಸಮುದಾಯದಲ್ಲಿರುವ ಎಲ್ಲ ಮಕ್ಕಳೂ ಸರಿಯಾದ ಶಿಕ್ಷಣ ಪಡೆಯುವುದು ಅವರ ಹಕ್ಕಾಗಿರುತ್ತದೆ. ಈ ದೃಷ್ಟಿಯಿಂದ, ಶಾಲಾ ಸಿಬ್ಬಂದಿವರ್ಗವು ಈ ಕೆಳಗಿನ ಪ್ರಧಾನ ಕಾರ್ಯಗಳನ್ನು ಕೈಗೊಳ್ಳಬೇಕು

ಕ್ಲಿಷ್ಟ ಸನ್ನಿವೇಶದಲ್ಲಿರುವ ಮಕ್ಕಳನ್ನು ಗುರುತಿಸುವುದು ಅವರ ಸಮಸ್ಯೆಗಳಿಗೆ ಕಾರಣಗಳನ್ನು ಮತ್ತು ಪರಿಹಾರಗಳನ್ನು ಕಂಡುಹಿಡಿಯುವುದು

ಶಾಲೆಗಳು ಸಮುದಾಯದ ಇತರ ನಿಯೋಗಿಗಳೊಡನೆ ಸಂಪರ್ಕಿಸಿ ಒಟ್ಟಾರೆ ಪ್ರಯತ್ನ ಕೈಗೊಳ್ಳಬೇಕು. ಅಂತಹ ಹದಿಹರೆಯದವರನ್ನು ಗುರುತಿಸಿ ವಿಶ್ವಾಸ ಮತ್ತು ತಾಳ್ಮೆಯಿಂದ ಅವರನ್ನು ನಿರ್ವಹಿಸಬೇಕು. ಅವರ ಸಮಸ್ಯೆಗಳಿಗೆ ಕಾರಣಗಳನ್ನು ಕಂಡುಕೊಳ್ಳಬೇಕು. ಇದಕ್ಕಾಗಿ ಮಾರ್ಗದರ್ಶಿಸುವ ಸೂಕ್ತ ವ್ಯಕ್ತಿಗಳನ್ನು ಆಹ್ವಾನಿಸಿ ಚರ್ಚಿಸಬೇಕು,ಅಗತ್ಯವಾಗಿರುವ ನಿಧಿಗಾಗಿ ಹಣಕಾಸಿನ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಬೇಕು.

ಇಂತಹ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯಲು ಅನೇಕ ಕಾರಣಗಳಿರಬಹುದು. ಅದಕ್ಕಾಗಿ ಪರಿಹಾರಾತ್ಮಕ ಶಿಕ್ಷಣಕ್ಕಾಗಿ ಹೆಚ್ಚಿನ ಪ್ರಯತ್ನ ಅಥವಾ ಸಂಪೂರ್ಣ ಬೇರೆಯೇ ಕ್ರಮಗಳನ್ನು (ಆ ಮಕ್ಕಳು ಎದುರಿಸುತ್ತಿರುವ ಕ್ಲಿಷ್ಟ ಸನ್ನಿವೇಶಗಳನ್ನು ಪರಿಗಣಿಸಿ) ಅನುಸರಿಸಬೇಕು.

ಅಂತಹ ಮಕ್ಕಳಿಗೆ ಬೋಧಿಸುವಾಗ, ಬೋಧನಾಕ್ರಮ ಸಮಯ, ವೇಗ, ಕಲಿಕೆಯ ಕ್ರಮಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಶಾಲೆ, ಸರ್ಕಾರ, ಕುಟುಂಬ, ಸಮುದಾಯ ಮತ್ತು ಇತರ ನಿಯೋಗಿಗಳ ಸಹಯೋಗ ಅಗತ್ಯವಾಗುತ್ತದೆ. ಪಠ್ಯವಿಷಯ ಬೋಧಿಸಿ ಮುಗಿಸುವುದಕ್ಕಿಂತ ಮಿಗಿಲಾಗಿ, ಅಂತಹವಿದ್ಯಾರ್ಥಿಯತ್ತ ವೈಯಕ್ತಿಕ ಗಮನ ನೀಡುವುದು, ಅವರನ್ನು ಅರ್ಥ ಮಾಡಿಕೊಳ್ಳುವ ಸಮ್ಮತ ಮನೋಭಾವ, ವಿಶ್ವಾಸ ಅಗತ್ಯವಾಗುವುದು. ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಧೋರಣೆಯೊಂದಿಗೆ ಅಂತರ್ಗತ (inclusive)ಮನೋಧೋರಣೆ ಶಿಕ್ಷಕರಲ್ಲಿ ಇರಬೇಕಾದ ಅಗತ್ಯ. ಅಂದರೆ ಶಾಲೆಗಳೂ ಅಂತರ್ಗತ ತತ್ವದಿಂದ ಒಟ್ಟು ಸೌಖ್ಯಕ್ಕಾಗಿ ಶ್ರಮಿಸಬೇಕು. ಪಠ್ಯವಿಷಯದ ಮೇಲಿನ ಪ್ರೌಢಿಮೆಗಿಂತ ಇಂತಹ ಸನ್ನಿವೇಶಗಳು ಮಕ್ಕಳ ಭಾವನಾತ್ಮಕ, ಸಾಮಾಜಿಕ ಮತ್ತು ವೈಯಕ್ತಿಕ ಅಗತ್ಯಗಳಿಗೆ ಸ್ಪಂದಿಸುವ ಸಾಮಾಜಿಕ ಕೌಶಲಗಳನ್ನು ಹೊಂದಿರಬೇಕಾಗುತ್ತದೆ. ಶಾಲೆಯ ಪ್ರತಿಯೊಬ್ಬರು ಸಿದ್ಧ ಹಸ್ತ ಚಾಚಿ, ವ್ಯಕ್ತಿ ಅನುಭವಿಸುವ ಕ್ಲಿಷ್ಟ ಸನ್ನಿವೇಶದಿಂದ ಪಾರಾಗಲು ಸಹಕರಿಸಬೇಕು.

ಕೂಡಿ ಕಲಿಯುವುದು, Collaborative Learning) ವ್ಯಕ್ತೀಕರಿಸಿದ ಬೋಧನೆ, ಸಾಮಾಜಿಕ ಕಲಿಕೆ, ಇತ್ಯಾದಿ ವಿಶೇಷ ಮಧ್ಯವರ್ತನಗಳನ್ನು ಇವರ ಬೋಧನೆಗೆ ಅಳವಡಿಸಿಕೊಳ್ಳಬೇಕಾಗುತ್ತದೆ. ಶಿಕ್ಷಕರ ಆಳವಾದ ಅವಲೋಕನ, ಅನುಭೂತಿ, ಪ್ರೀತಿ, ಕಾಳಜಿ ಮತ್ತು ಸೃಜನಶೀಲತೆಗಳು ಅಪೇಕ್ಷಿತ ಬದಲಾವಣೆ ತರುವಲ್ಲಿ ಖಚಿತವಾಗಿ ಸಹಾಯಕ್ಕೆ ಬರುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕಾನೂನು ಸೌಲಭ್ಯಗಳನ್ನು ದಂಡಸಂಹಿತೆಯ ವಿವರಣೆಯೊಂದಿಗೆ ಹೊಂದಿಸಿರಿ.

| | **ಕಾನೂನಿನ ಸೌಲಭ್ಯಗಳು** | **ದಂಡ ಸಂಹಿತೆಯ ವಿವರಣೆ** | |
|---|---|---|---|
| ಅ | (ಸೆಕ್ಷನ್ 82–83 ಭಾರತೀಯದಂಡ ಸಂಹಿತೆ (ಐ.ಪಿ.ಸಿ) | ಲೈಂಗಿಕ ಉದ್ದೇಶಕ್ಕಾಗಿ ಚಿಕ್ಕವಯಸ್ಸಿನ ಹೆಣ್ಣು ಮಕ್ಕಳನ್ನುಪಡೆದುಕೊಳ್ಳುವುದು ಶಿಕ್ಷಾರ್ಹ | 1 |
| ಆ | ಭಾರತೀಯದಂಡಸಂಹಿತೆ (ಸೆಕ್ಷನ್ 317) | ಚಿಕ್ಕವಯಸ್ಸಿನಮಕ್ಕಳನ್ನುಬಿಕ್ಷೆಗೆ ಬಳಸಿಕೊಳ್ಳಲು ಊನಗೊಳಿಸುವುದು ಶಿಕ್ಷಾರ್ಹ | 2 |

| | | | |
|---|---|---|---|
| ಇ | ಭಾರತೀಯದಂಡಸಂಹಿತೆಸೆಕ್ಷನ್ 361 | ಪಾಲಕರ ರಕ್ಷಣೆಯಲ್ಲಿರುವ ಮಕ್ಕಳನ್ನು ಅಪಹರಿಸುವುದು ಶಿಕ್ಷಾರ್ಹ | 3 |
| ಈ | ಭಾರತೀಯ ದಂಡ ಸಂಹಿತೆ ಸೆಕ್ಷನ್ 363–ಎ | ಮಕ್ಕಳು ಅಥವಾ ಹದಿಹರೆಯದವರನ್ನು ಪರಿತ್ಯಜಿಸಿದರೆ ಮತ್ತು ತೊಂದರೆಗೆ ಒಡ್ಡಿದರೆ ಶಿಕ್ಷಾರ್ಹ | 4 |
| ಉ | ಭಾರತೀಯ ದಂಡ ಸಂಹಿತೆ ಸೆಕ್ಷನ್ 366ಎ, 372, 373 ಮತ್ತು 376 | 12 ವರ್ಷದೊಳಗಿರುವ ಮಗುವನ್ನು ಅಪರಾಧಕ್ಕಾಗಿ ತಪ್ಪಿತಸ್ಥರಾಗಿಸುವುದು | 5 |

## 3.4.5. ಸಾರಾಂಶಿಸೋಣ:

- ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳು ಈ ಕೆಳಗಿನ ವಿಶೇಷ ಗುಂಪುಗಳಿಗೆ ಸೇರಿದವರಾಗಿರುತ್ತಾರೆ: ಮಾದಕವ್ಯಸನಿಗಳು, ಏಡ್ಸ್‌ಗೆ ಬಲಿಯಾದ ಮತ್ತು ಏಡ್ಸ್‌ಗೆ ಬಲಿಯಾದ ಪೋಷಕರನ್ನು ಹೊಂದಿರುವ ಹದಿಹರೆಯದವರು, ಹದಿಹರೆಯದಲ್ಲಿ ವೇಶ್ಯಾವೃತ್ತಿ ಮಾಡುವವರು, ಬಾಲಾಪರಾಧಿಗಳು, ಅಪರಾಧಗಳಲ್ಲಿ ಭಾಗಿಯಾಗಿರುವವರು, ಬೀದಿಯಲ್ಲಿಅಲೆದಾಡುವ ಹದಿಹರೆಯದವರು, ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಕಡೆಗಣಿಸಲ್ಪಟ್ಟ ಬಾಲಕ–ಬಾಲಕಿಯರು ಮತ್ತು ಹದಿಹರೆಯದವರು.
- ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದವರನ್ನು ರಕ್ಷಿಸಲು ಕಾನೂನಿನಡಿ ಇರುವ ಕೆಲವು ಸೌಲಭ್ಯಗಳೆಂದರೆ – ಭಾರತೀಯ ದಂಡ ಸಂಹಿತೆ ಸೆಕ್ಷನ್ 82–83, ಐ.ಪಿ.ಸಿ. ಸೆಕ್ಷನ್ 317, ಐ.ಪಿ.ಸಿ. ಸೆಕ್ಷನ್ 361, 363ಎ, ಐ.ಪಿ.ಸಿ. ಸೆಕ್ಷನ್ 366ಎ, 372, 373 ಮತ್ತು 376.
- ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ನಿರ್ವಹಿಸಲು ಸೂಚಿಸಿರುವ ಕೆಲವು ಸಲಹೆಗಳು ಈ ಕೆಳಕಂಡಂತಿವೆ: ಅಪರಾಧ ನ್ಯಾಯ ವಿಜ್ಞಾನಕ್ಕೆ ಸಂಬಂಧಿಸಿದ ಕೋರ್ಸ್‌ಗಳನ್ನು ಪ್ರಾರಂಭಿಸುವುದು, ಪೋಲಿಸ್ ಹಾಗೂ ಇತರೆ ಕಾನೂನು ಜಾರಿಗೊಳಿಸುವ ನಿಯೋಗಗಳನ್ನು ಸಂವೇದನಾಶೀಲರನ್ನಾಗಿಸುವುದು, ಏಡ್ಸ್ ಅರಿವು ಮೂಡಿಸುವ ಬಾಲ ಕೇಂದ್ರಗಳು ಮತ್ತು ಹದಿಹರೆಯದವರಿಗೆ ಸಹಾಯವಾಣಿಗಳನ್ನು ಸ್ಥಾಪಿಸುವುದು, ಪೋಲಿಸ್–ವಿದ್ಯಾರ್ಥಿ ಸಂಪರ್ಕ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು, ಮಾದಕ ವ್ಯಸನ ಮುಕ್ತಿ ಕೇಂದ್ರಗಳನ್ನು ಬಲಗೊಳಿಸುವುದು, ಅರಿವು ಮೂಡಿಸುವ ಶಿಬಿರಗಳನ್ನು ವ್ಯವಸ್ಥೆಗೊಳಿಸುವುದು.

## 3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1:**

ಕಾರ್ಯಯೋಜನೆಯನ್ನು ಎಸ್ ಡಿ ಎಂ ಸಿ ಸದಸ್ಯರು, ಮುಖ್ಯೋಪಾಧ್ಯಾಯರು ಮತ್ತು ಪೋಷಕರೊಂದಿಗೆ ಚರ್ಚಿಸಿ ಕಾರ್ಯರೂಪಕ್ಕೆ ತನ್ನಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಅ–5, ಆ–4, ಇ–3, ಈ–2, ಉ–1

## 3.4.6. ಘಟಕಾಂತ್ಯ ಅಭ್ಯಾಸಗಳು

1. ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳ ವಿವಿಧ ವಿಧಗಳನ್ನು ವಿವರಿಸಿ, ಅವರನ್ನು ರಕ್ಷಿಸಲು ಭಾರತೀಯ ದಂಡಸಂಹಿತೆಯಲ್ಲಿರುವ ಸೌಲಭ್ಯಗಳನ್ನು ವಿವರಿಸಿ.
2. ಕ್ಲಿಷ್ಟ ಸನ್ನಿವೇಶದಲ್ಲಿರುವ ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಕ್ರಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

## 3.4.7. ಪರಾಮರ್ಶನ ಸೂಚಿ


1. Report of the working Group on Adolescents for the tenth five year plan. Planning Commission, Govt. of India.
2. CIDC in the context of sustainable development Goals. http://www.ncper.gov.in/view_file.php?fid=99.
3. CIDC report. www.planindia.org.


*********************

# ಬ್ಲಾಕ್ 3 : ಹದಿಹರೆಯದವರ ವಿಚಾರಗಳು ಮತ್ತು ಕಾಳಜಿಗಳು

# ಘಟಕ 5 : ಹದಿಹರೆಯದ ಹೊಂದಾಣಿಕೆಯ ಸಮಸ್ಯೆಗಳು, ಭಾವನಾತ್ಮಕ ತೊಂದರೆಗಳು ಮತ್ತು ಅಪಾಯಕಾರಿ ವರ್ತನೆಗಳನ್ನು ಅರ್ಥಮಾಡಿಕೊಳ್ಳುವಿಕೆ, ಅನನ್ಯತೆಯ ಗೊಂದಲ, ಪೋಷಕ–ಮಗುವಿನ ಸಂಘರ್ಷ, ಮಾದಕ ವ್ಯಸನ

## ಘಟಕದ ರಚನೆ


1.5.1. ಕಲಿಕಾ ಉದ್ದೇಶಗಳು

3.5.2. ಪೀಠಿಕೆ

3.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.5.3.1. ಹದಿಹರೆಯದ ಹೊಂದಾಣಿಕೆಯ ಸಮಸ್ಯೆಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.5.3.2. ಭಾವನಾತ್ಮಕ ತೊಂದರೆಗಳು ಹಾಗೂ ಅಪಾಯಕಾರಿ ವರ್ತನೆಗಳನ್ನು ಅರ್ಥಮಾಡಿಕೊಳ್ಳುವಿಕೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.5.3.3 ಅನನ್ಯತೆಯ ಬಿಕ್ಕಟ್ಟು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

3.5.3.4. ಪೋಷಕ–ಮಗುವಿನ ಸಂಘರ್ಷ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–4

3.5.3.5. ಮಾದಕ ವ್ಯಸನ ಮತ್ತು ದುರ್ಬಳಕೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–5

3.5.4. ಸಾರಾಂಶಿಸೋಣ

3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1,2,3,4 ಮತ್ತು 5

3.5.6. ಘಟಕಾಂತ್ಯ ಅಭ್ಯಾಸಗಳು

3.5.7. ಪರಾಮರ್ಶನ ಸೂಚಿ


## 3.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಹದಿಹರೆಯದವರ ಹೊಂದಾಣಿಕೆಯ ಸಮಸ್ಯೆಗಳ ಕಾರಣಗಳು ಮತ್ತು ಸಂಬಂಧಿತ ಅಂಶಗಳನ್ನು ಚರ್ಚಿಸುವರು;
- ಹದಿಹರೆಯದವರು ಸಮಸ್ಯೆಗಳನ್ನು ನಿಭಾಯಿಸುವ ಮಾರ್ಗಗಳನ್ನು ವಿವರಿಸುವರು;

- ಹದಿಹರೆಯದವರಲ್ಲಿ ಕಂಡುಬರುವ ಭಾವನಾತ್ಮಕ ತೊಂದರೆಗಳ ವರ್ತನಾ ಚಿಹ್ನೆಗಳನ್ನು ಪಟ್ಟಿ ಮಾಡುವರು;
- ತಮ್ಮದೇ ಅದ ಪದಗಳಲ್ಲಿ ಅನನ್ಯತೆಯ ಗೊಂದಲವನ್ನು ವ್ಯಾಖ್ಯಾನಿಸುವರು;
- ಅನನ್ಯತೆಯ ಗೊಂದಲಕ್ಕೆ ಕಾರಣಗಳನ್ನು ಗುರುತಿಸುವರು;
- ಹದಿಹರೆಯದವರ ಅನನ್ಯತೆಯ ಗೊಂದಲವನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ವಿವರಿಸುವರು;
- ಹದಿಹರೆಯ ಹಂತದಲ್ಲಿ ಪೋಷಕರು ಹಾಗೂ ಮಕ್ಕಳ ನಡುವಿನ ಸಂಘರ್ಷಕ್ಕೆ ಕಾರಣಗಳನ್ನು ನೀಡುವರು;
- ಹದಿಹರೆಯ ಹಂತದಲ್ಲಿ ಪೋಷಕರು ಹಾಗೂ ಮಕ್ಕಳ ನಡುವಿನ ಸಂಬಂಧವನ್ನು ಸುಧಾರಿಸುವ ಕ್ರಮಗಳನ್ನು ಚರ್ಚಿಸುವರು;
- ಹದಿಹರೆಯದ ಮಕ್ಕಳಲ್ಲಿ ಮಾದಕ ವ್ಯಸನಕ್ಕೆ ಕಾರಣಗಳನ್ನು ಪಟ್ಟಿ ಮಾಡುವರು; ಮತ್ತು
- ಮಾದಕ ವ್ಯಸನದಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ಕ್ರಮಗಳನ್ನು ಸೂಚಿಸುವಿರಿ.

## 3.5.2. ಪೀಠಿಕೆ

ಹದಿಹರೆಯ ಎಂಬುದು ವ್ಯಕ್ತಿಯ ಜೀವನದ ಮಹತ್ತರವಾದ ಬದಲಾವಣೆಯ ಕಾಲ, ವಿಕಾಸದ ಹಂತದ ಒತ್ತಡಗಳನ್ನು ನಿರ್ವಹಿಸಲು ಹದಿಹರೆಯದವರು ತಮ್ಮ ವರ್ತನೆಗಳನ್ನು ಧನಾತ್ಮಕವಾಗಿ ಬದಲಾಯಿಸಿಕೊಳ್ಳುತ್ತಾರೆ. ಅದನ್ನೇ ಹೊಂದಾಣಿಕೆ ಎನ್ನುತ್ತೇವೆ, ಅಥವಾ ಋಣಾತ್ಮಕವಾಗಿ ಬದಲಾಯಿಸಿಕೊಳ್ಳುತ್ತಾರೆ. ಅವುಗಳನ್ನು ಅಪಸಮಾಯೋಜಿತ ವರ್ತನೆಗಳೆನ್ನುತ್ತೇವೆ.

ಹದಿಹರೆಯದ ವಿಕಾಸದ ಹಂತವನ್ನು "ಪ್ರಕ್ಷುಬ್ದತೆಯ ಕಾಲ', 'ಸಂಕ್ಷೋಭೆ ಮತ್ತು ಪ್ರಯಾಸ'ಗಳ ಕಾಲ, 'ಭಾವನಾತ್ಮಕ ಅಸ್ಥಿರತೆಯ ಹಂತ' ಮತ್ತು 'ಸಮಸ್ಯೆಯ ಯುಗ' ಎಂಬ ಮಾತುಗಳಲ್ಲಿ ವರ್ಣಿಸಲಾಗಿದೆ. ಈ ರೀತಿ ಪರಿಗಣಿಸಿರುವ ಹೇಳಿಕೆಗಳು ನಮ್ಮಲ್ಲಿ ಆಸಕ್ತಿಯನ್ನು ಮೂಡಿಸುತ್ತವೆ. ಸಂಕೀರ್ಣ ಹಾಗೂ ಚಲನಶೀಲ ಸ್ವರೂಪದ ಸಾಮಾಜಿಕ ಸನ್ನಿವೇಶ ಇವರಿಗೆ ಹಲವಾರು ಸವಾಲುಗಳನ್ನೊಡ್ಡುತ್ತದೆ. ಹೀಗಾಗಿ ಹದಿಹರೆಯದವರು ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ತಿಳಿದು ಆ ಮೂಲಕ ಅವುಗಳನ್ನು ಪರಿಹರಿಸಲು ಶಿಕ್ಷಕರಾಗಿ ನಾವೇನು ಮಾಡಬಹುದು ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ.

## 3.5.3.1. ಹದಿಹರೆಯದ ಹೊಂದಾಣಿಕೆಯ ಸಮಸ್ಯೆಗಳು

ಬಾಲ್ಯಾವಸ್ಥೆ ಮತ್ತು ಪ್ರೌಢವಸ್ಥೆಯ ನಡುವಿನ ವ್ಯಕ್ತಿಯ ಜೀವನದ ಹಂತವೇ ಹದಿಹರೆಯ. ಮಾನವನ ಬೆಳವಣಿಗೆಯ ಈ ಹಂತದಲ್ಲಿ ಹದಿಹರೆಯದವರು ಪರಾವಲಂಬನೆಯಿಂದ ಸ್ವಾವಲಂಬನೆಯಡೆಗೆ ಸಾಗುತ್ತಾರೆ. ಕುಟುಂಬದ ಹಾಗೂ ಸಮವಯಸ್ಕರ ಗುಂಪಿನ ಭಾಗವಾಗಿ ಪ್ರೌಢಾವಸ್ಥೆಯನ್ನು ತಲುಪುವ ಒಂದು ಸಂಕ್ರಮಣದ ಕಾಲವಿದು. ಹದಿಹರೆಯ ಸುಮಾರು ಒಂದು ದಶಕದ ಕಾಲ ಕಂಡುಬರುವ ವಿಶಿಷ್ಟ ಹಂತ. ಈ ಹಂತದಲ್ಲಿ ಅವರು ಬಾಲಕ–ಬಾಲಕಿಯರು ಅಲ್ಲ ಹಾಗೂ ಸಂಪೂರ್ಣ ಪ್ರೌಢರೂ ಆಗಿರುವುದಿಲ್ಲ. ಹಾಗಾಗಿ ಅವರು, ಈ ಹಂತದಲ್ಲಿ ಎರಡೂ ಹಂತಗಳ ಹಲವಾರು ಸವಾಲುಗಳನ್ನು, ಸೌಲಭ್ಯಗಳನ್ನು ಹಾಗೂ ನಿರೀಕ್ಷಣೆಗಳನ್ನು ಎದುರಿಸಬೇಕಾಗುತ್ತದೆ. ಹದಿಹರೆಯದವರ ಹೋರಾಟಗಳು ಹಾಗೂ ಘರ್ಷಣೆಗಳನ್ನು ಕೆಲವೊಮ್ಮೆ ಪೋಷಕರು ಮತ್ತು ಸ್ನೇಹಿತರು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಗೊಂದಲ ಹಾಗೂ ಬಗೆಹರಿಸಲಾಗದ ಘರ್ಷಣೆಗಳಿಂದ, ಕೆಲವು ಹದಿಹರೆಯದವರು ಸನ್ನಿವೇಶಗಳನ್ನು ಸಮರ್ಪಕವಾಗಿ ಎದುರಿಸಲಾಗದೇ ತಾವು ಸಂದಿಗ್ಧ ಸನ್ನಿವೇಶದಲ್ಲಿ ಸಿಲುಕಿದ್ದೇವೆ ಎಂದು ಭಾವಿಸಿ ಇದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.

19ನೇ ಶತಮಾನದ ಜರ್ಮನ್ ಲೇಖಕರಾದ ಫಿಲ್ಲರ್ ಮತ್ತು ಗೊತೆಯವರು ಹದಿಹರೆಯದ ಪರಿಕಲ್ಪನೆಯ ಉದಯಕ್ಕೆ ಕಾರಣರಾದರೆ, ಅದನ್ನು ತಮ್ಮ ಲೇಖನಗಳ ಮೂಲಕ ಹೆಚ್ಚು ಪ್ರಚುರ ಪಡಿಸಿದವರು ಸ್ಟಾನ್ಲಿ ಹಾಲ್‌ರವರು. ಈ ಹಂತದಲ್ಲಿ ಸಾಂಸ್ಕೃತಿಕ ಭಿನ್ನತೆಗಳು ಕಂಡುಬರುತ್ತದೆ. ಸಂಕ್ಷೋಭೆ ಮತ್ತು ಪ್ರಯಾಸಗಳು ಸಾರ್ವತ್ರಿಕವಾಗಿರುವುದಿಲ್ಲವಾದರೂ ಹದಿಹರೆಯಲ್ಲಿ ವಿವಿಧ ರೀತಿಗಳಲ್ಲಿ ಅನುಭವಕ್ಕೆ ಬರುತ್ತದೆ.

ಅನ್ನಾ ಫ್ರಾಯ್ಡ್(1958) ರವರು ನಿರೂಪಿಸಿದಂತೆ ಬೆಳವಣಿಗೆ ಮತ್ತು ಪರಿಪಕ್ವತೆಯ ಪ್ರತಿಯೊಂದು ಪ್ರಗತಿಯ ಹೆಜ್ಜೆಯಲ್ಲಿಯೂ ಹಲವು ಹೊಸ ಲಾಭಗಳೊಂದಿಗೆ ಹಲವು ಸಮಸ್ಯೆಗಳು ಕಂಡುಬರುತ್ತವೆ. ಅದ್ದರಿಂದ ಈ ಹಂತವನ್ನು 'ವಿಕಾಸದ ವಿಚಲನೆಯ' ಹಂತ ಎಂದು ಪರಿಗಣಿಸಲಾಗಿದೆ. ಈ ಹಂತದಲ್ಲಿ ಕಂಡುಬರುವ ತೊಂದರೆಗಳಿಗೆ ಆಂತರಿಕ ಘರ್ಷಣೆಗಳು, ಮಾನಸಿಕ ಅಸಮತೋಲನ, ಅಸಮರ್ಪಕ ವರ್ತನೆ ಮತ್ತು ಲೈಂಗಿಕ ಪರಿಕಲ್ಪನೆಗಳು ಕಾರಣವಾಗಿವೆ. ಹದಿಹರೆಯದವರು ಲೈಂಗಿಕ ಪರಿಪಕ್ವತೆಯಿಂದ ಉಂಟಾಗುವ ಬದಲಾವಣೆಗಳಿಂದ ಆತಂಕ ಮತ್ತು ಉದ್ವೇಗಳನ್ನು ಅನುಭವಿಸುತ್ತಾರೆ. ಪ್ರೌಢಾವಸ್ಥೆಗೆ ಸಾಗುವ ಹಂತದಲ್ಲಿ ನಿರ್ದಿಷ್ಟ ನಿಯಮಾನುಸಾರದ ಬದಲಾವಣೆಗಳು ಕಂಡುಬರುವುದಿಲ್ಲ.

**ಹದಿಹರೆಯದವರ ಸಮಸ್ಯೆಗಳ (ಒತ್ತಡಗಳ) ಕಾರಣಗಳು ಮತ್ತು ಸಂಬಂಧಿತ ಅಂಶಗಳು:**

**ಬದಲಾಗುತ್ತಿರುವ ದೇಹ ಮತ್ತು ನೋಟ**

ಹದಿಹರೆಯದ ಹಂತದಲ್ಲಿ ಭೌತಿಕ ದೇಹದ ಕಾಳಜಿ ಬೇರೆ ಯಾವುದೇ ಹಂತಕ್ಕಿಂತ ಹೆಚ್ಚಾಗಿ ಕಂಡುಬರುತ್ತದೆ, ಏಕೆಂದರೆ ಈ ಹಂತದಲ್ಲಿ ಹೊಸ ಸಂವೇದನೆಗಳು, ಲಕ್ಷಣಗಳು ಮತ್ತು ದೇಹದ ವಿವಿಧ ಭಾಗಗಳ ಬೆಳವಣಿಗೆಗಳು ಉದಯಿಸುತ್ತವೆ. ಹದಿಹರೆಯ ಆರಂಭವಾಗುವುದು ಲೈಂಗಿಕ ಪರಿಪಕ್ವನದಿಂದ. ಇದು ಸಾಮಾನ್ಯವಾದ ಪರಿಪಕ್ವನ ಪ್ರಕ್ರಿಯೆಯಾಗಿದ್ದರೂ ಸಹ ಕೆಲವರು ಬೇಗ ಪರಿಪಕ್ವನಗೊಂಡರೆ ಕೆಲವರಲ್ಲಿ ತುಂಬಾ ತಡವಾಗುತ್ತದೆ. ಇದು ವ್ಯಕ್ತಿಯಲ್ಲಿ ಹಲವಾರು ತೊಂದರೆಗಳಿಗೆ ಕಾರಣವಾಗುತ್ತದೆ. ಕಾರ್ಲ್ ರಾಜರ್ಸ್ (1977) ರವರ ಪ್ರಕಾರ ದೇಹದಲ್ಲಾಗುವ ಪ್ರಮುಖ ತಕ್ಷಣದ ಬದಲಾವಣೆಗಳಿಂದ ಹದಿಹರೆಯದವರು ಸುಭದ್ರತೆಯ ಭಾವನೆ, ಆತ್ಮಗೌರವ ಮತ್ತು ಸಾಮರ್ಥ್ಯವನ್ನು ತೊಡಗಿಸಿಕೊಳ್ಳುತ್ತಾರೆ. ಹದಿಹರೆಯದವರ ದೇಹ ಅವರ ಆತ್ಮಬಿಂಬವನ್ನು ಪ್ರತಿನಿಧಿಸುವುದಿಲ್ಲ. ಆದ್ದರಿಂದ ಹದಿಹರೆಯದವರು ತಮ್ಮ ಆದರ್ಶ ಕಲ್ಪನೆಯಂತೆ ಕಾಣಲು ತಮ್ಮ ಸಮಯ, ಶಕ್ತಿ ಮತ್ತು ಹಣವನ್ನು ವ್ಯಯ ಮಾಡುತ್ತಾರೆ. ಕೆಲವು ಹದಿಹರೆಯದವರು ಅವರ ಬೆಳವಣಿಗೆ ಅವರ ಸ್ನೇಹಿತರಲ್ಲಿರುವ ವೇಗದಂತೆ ನಡೆಯದಿದ್ದಾಗ ಆತಂಕಕ್ಕೆ ಒಳಗಾಗುತ್ತಾರೆ.

ಒತ್ತಡದ ಬದಲಾವಣೆಯ ಪ್ರಾಕಲ್ಪನೆ ಸೂಚಿಸುವಂತೆ ಲೈಂಗಿಕ ಪಕ್ವತೆಯ ಕಾಲದ ಬದಲಾವಣೆಗಳು ತಕ್ಷಣ ಕಂಡುಬರುತ್ತದೆ, ಅದರೆ ಶಾಶ್ವತವಾಗಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ವ್ಯಕ್ತಿ ಹೊಂದಾಣಿಕೆ ಮಾಡಿಕೊಳ್ಳುವುದು ಕಠಿಣವಾಗುತ್ತದೆ. ಹುಡುಗಿಯರಲ್ಲಿ ಚಿಕ್ಕ ವಯಸ್ಸಿಗೆ ಕಂಡುಬರುವ ಲೈಂಗಿಕ ಪರಿಪಕ್ವತೆ ಅವರಲ್ಲಿ ಒತ್ತಡವನ್ನು ಉಂಟುಮಾಡುತ್ತದೆ. ಹದಿಹರೆಯದ ಹುಡುಗಿಯರು ತಮ್ಮ ದೇಹದ ಬೆಳವಣಿಗೆಯ ಬಗ್ಗೆ ಹುಡುಗರಿಗಿಂತ ಹೆಚ್ಚು ಕಾಳಜಿ ತೋರುತ್ತಾರೆ. ಹುಡುಗಿಯರು ತಮ್ಮ ಬಾಹ್ಯರೂಪ ಮತ್ತು ತಮ್ಮ ಆಂತರಿಕ ಚಿತ್ರಣದ ಬಗ್ಗೆ ಹೆಚ್ಚು ಗಮನ ಹರಿಸುತ್ತಾರೆ. ಇಲ್ಲಿ ಮಾಧ್ಯಮದ ಪಾತ್ರವನ್ನು ಅಲ್ಲಗಳೆಯವಂತಿಲ್ಲ. ಏಕೆಂದರೆ ಹದಿಹರೆಯದವರಿಗೆ ಮಾಧ್ಯಮದಲ್ಲಿ ತಾವು ಅನುಕರಿಸುವಂತಹ ಹಾಗೂ ಮೆಚ್ಚುವಂತಹ ಮಾದರಿಗಳು ದೊರೆಯುತ್ತವೆ. ಹದಿಹರೆಯದ ಹುಡುಗಿಯರು ತೆಳ್ಳಗೆ ಹಾಗೂ ಸುಂದರ ಆಕಾರ ಪಡೆಯಲು ಬಯಸಿದರೆ, ಹುಡುಗರು ಎತ್ತರ ಹಾಗೂ ಬಲಿಷ್ಠವಾಗಿ ಕಾಣಲು ಬಯಸುತ್ತಾರೆ.

**ಕುಟುಂಬದಲ್ಲಿರುವ ಸವಾಲುಗಳು**

ಕುಟುಂಬದ ವಾತಾವರಣ ಮತ್ತು ಸಂಬಂಧಿತ ಕಾರಕಗಳು ಹದಿಹರೆಯದವರಲ್ಲಿ ಸಮಸ್ಯೆಗೆ (ಒತ್ತಡಕ್ಕೆ) ಕಾರಣವಾಗುತ್ತವೆ. ಇದು ಪ್ರಾಥಮಿಕವಾಗಿ ಕುಟುಂಬದ ಕಾರ್ಯ ನಿರ್ವಹಣಾ ಶೈಲಿಯನ್ನು ಅವಲಂಬಿಸಿರುತ್ತದೆ. ಕೆಲವು ಕುಟುಂಬಗಳು ತುಂಬಾ ಬಿಗಿನಿಲುವು ಹೊಂದಿದ್ದರೆ ಮತ್ತು ಕೆಲವು ನಿರ್ಬಂಧರಹಿತವಾಗಿರುತ್ತವೆ.

ಕೆಲವು ಕುಟುಂಬಗಳು ಜನರಿಂದ ತುಂಬಿದ್ದರೆ, ಇನ್ನೂ ಕೆಲವು ಕುಟುಂಬಗಳಲ್ಲಿ ಜನರು ತುಂಬಾ ವಿರಳವಾಗಿರುತ್ತಾರೆ. ಮನೆಯಲ್ಲಿ ಅಳವಡಿಸಿಕೊಂಡಿರುವ ಕಾರ್ಯವಿಧಾನವನ್ನು ಅವಲಂಬಿಸಿ, ವಿವಿಧ ಕುಟುಂಬಗಳಲ್ಲಿ ಭಿನ್ನ ಸ್ಥಿತಿಗತಿಗಳು, ನಿಯಮಗಳು ಮತ್ತು ವರ್ತನೆ ಹಾಗೂ ಸ್ವಾಯತ್ತತೆ ಬಗ್ಗೆ ಭಿನ್ನ ನಿರೀಕ್ಷೆಗಳಿರುತ್ತವೆ. ಅವುಗಳ ಜೊತೆಹೊಂದಾಣಿಕೆ ಮಾಡಿಕೊಳ್ಳುವುದು ಹದಿಹರೆಯದವರಿಗೆ ಸವಾಲಿನ ವಿಷಯವಾಗಿರುತ್ತದೆ.

**ಪೋಷಣೆಯ ವಿಧ**

ಹದಿಹರೆಯದವರ ವಿಕಾಸಕ್ಕೆ ಸಂಬಂಧಿಸಿದ ಪೋಷಣೆಯ ರೀತಿ ಹದಿಹರೆಯದವರಲ್ಲಿ ಬದಲಾವಣೆಯನ್ನು ಪ್ರತಿಬಂಧಿಸುತ್ತದೆ. ಪೋಷಕರು ಈವರೆಗೆ, ಬಾಲ್ಯದಲ್ಲಿ ಬಳಸುತ್ತಿದ್ದ ಪೋಷಣೆಯ ವಿಧಾನವನ್ನು ಮುಂದುವರೆಸಲು ಬಯಸುತ್ತಾರೆ. ಆದರೆ ಹದಿಹರೆಯದವರು ಪ್ರೌಢಾವಸ್ಥೆಯ ಕಡೆಗೆ ಸಾಗಲು ಅಗತ್ಯವಾದ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಪೋಷಕರ ಸಂವಹನ ಶೈಲಿಗಳು ಸಹ ಪ್ರಮುಖವಾಗುತ್ತವೆ. ಕ್ರೊ ಮತ್ತು ಕ್ರೋ (1965) ಇವರ ಪ್ರಕಾರ ಪೋಷಕರು ಮತ್ತು ಅವರ ಹದಿಹರೆಯದ ಮಗ ಅಥವಾ ಮಗಳ ನಡುವಿನ ಭಿನ್ನಾಭಿಪ್ರಾಯಗಳು ಆಂತರಿಕ ಘರ್ಷಣೆಗೆ ಕಾರಣವಾಗುತ್ತವೆ.

ಪೋಷಕರ ಮೇಲೆ ಅವಲಂಬಿತರಾಗಿರುವುದನ್ನು ಹದಿಹರೆಯದ ಮಕ್ಕಳು ಇಷ್ಟಪಡುವುದಿಲ್ಲ. ಅವರು ತಮ್ಮ ಸಮವಯಸ್ಕರ ಸ್ನೇಹ, ಸಲಹೆ, ಬೆಂಬಲ ಮತ್ತು ಆತ್ಮೀಯತೆಯನ್ನು ಬಯಸುತ್ತಾರೆ, ಹದಿಹರೆಯ ಹಂತದಲ್ಲಿ ಸ್ನೇಹಿತರೊಂದಿಗಿನ ಸಂವಹನದ, ಬೆಂಬಲ ಮತ್ತು ಆತ್ಮೀಯತೆ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ.

ಹದಿಹರೆಯದವರ ಪ್ರತಿಭೆಗಳನ್ನು ಪೋಷಿಸಿದಾಗ ಮತ್ತು ಶೈಕ್ಷಣಿಕ ಹಾಗೂ ಔದ್ಯೋಗಿಕ ಅವಕಾಶಗಳನ್ನು ಒದಗಿಸಿದಾಗ, ಇಡೀ ಕುಟುಂಬವೇ ಅವರ ಸಾಧನೆಯ ಬಗ್ಗೆ ಸಂತೋಷಪಡುತ್ತದೆ. ಆದರೆ, ಹದಿಹರೆಯದವರು ಕುಟುಂಬದ ನಿರೀಕ್ಷೆಗಳಿಗೆ ವಿರುದ್ಧವಾಗಿ ನಡೆದರೆ, ಅದನ್ನು ಸ್ವಾರ್ಥನಡೆ ಎಂದು ಪರಿಗಣಿಸಲಾಗುತ್ತದೆ. ಇಂತಹ ಕುಟುಂಬದ ಘರ್ಷಣಾತ್ಮಕ ಮತ್ತು ವಿರುದ್ಧಾತ್ಮಕ ಲಕ್ಷಣಗಳು ಹದಿಹರೆಯದವರ ಒತ್ತಡ ಹೆಚ್ಚಾಗಲು ಕಾರಣವಾಗುತ್ತದೆ. ಕುಟುಂಬದ ಸಾಂಸ್ಕೃತಿಕ ಹಿನ್ನೆಲೆ ಆ ಭಾಗದ ಸಾಂಸ್ಕೃತಿಕ ಪರಿಸರದ ಪ್ರಭಾವಗಳಿಗಿಂತ ಭಿನ್ನವಾಗಿದ್ದರೆ ಇದು ಹದಿಹರೆಯದ ಮಕ್ಕಳಲ್ಲಿ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳ ಘರ್ಷಣೆಗೆ ಕಾರಣವಾಗುತ್ತದೆ. ಇದರೊಂದಿಗೆ ಘರ್ಷಣಾತ್ಮಕ ನಂಬಿಕೆಗಳು, ಮನೋಭಾವಗಳು ಮತ್ತು ವರ್ತನೆಗಳಿಗೆ ಒಡ್ಡುತ್ತವೆ.

**ಕುಟುಂಬದ ಹೊರಗೆ: ಸಮವಯಸ್ಕರು, ಶಾಲೆ ಮತ್ತು ಇತರರು**

ಹದಿಹರೆಯದವರ ಜೀವನದಲ್ಲಿ ಶೈಕ್ಷಣಿಕ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತವೆ. ಪ್ರೌಢಶಾಲಾ ಹಂತದ ಬಾಲಕ–ಬಾಲಕಿಯರ ಜೀವನದಲ್ಲಿ ಶಾಲೆಯಲ್ಲಿನ ಸೋಲು, ಓದುವ ಹವ್ಯಾಸಗಳು, ವಿದ್ಯಾರ್ಥಿ–ಶಿಕ್ಷಕರ ಸಂಬಂಧ ಮುಂತಾದ ಸಮಸ್ಯೆಗಳು ಕಂಡುಬರುತ್ತವೆ. ಜೆಲ್ಡಾರ್ಡ್ ಮತ್ತು ಜೆಲ್ಡಾರ್ಡ್(1992)ರ ಪ್ರಕಾರ ಪೋಷಕರೊಡನೆ ಘರ್ಷಣೆಗಳಿದ್ದಾಗ ಹದಿಹರೆಯದವರ ಒತ್ತಡಗಳು ಹೆಚ್ಚಾಗುತ್ತವೆ. ಶೈಕ್ಷಣಿಕ ವಾತಾವರಣದಲ್ಲಿ ಹದಿಹರೆಯದವರಿಗೆ ಹೆಚ್ಚಿನ ಅಧಿಕಾರ ಇಲ್ಲದಿರುವುದರಿಂದ ಅವರು ಹೆಚ್ಚಿನ ಒತ್ತಡ ಅನುಭವಿಸುತ್ತಾರೆ. ಕೆಲವು ಒತ್ತಡಗಳಿಂದ ಹದಿಹರೆಯದವರು ಶಾಲೆಗೆ ಹೋಗಲು ನಿರಾಕರಿಸುತ್ತಾರೆ ಅಥವಾ ಗೈರು ಹಾಜರಾಗುತ್ತಾರೆ. ಕುಟುಂಬದಲ್ಲಿರುವ ಕಠಿಣ ಸಂಬಂಧಗಳು ಕೆಲವೊಮ್ಮೆ ಅವರು ಶಾಲೆಗೆ ಹೋಗಲು ನಿರಾಕರಿಸಲು ಕಾರಣವಾಗುತ್ತದೆ.

ಶಾಲೆಯಲ್ಲಿನ ಸಾಧನೆಯನ್ನು ಅವರ ಭವಿಷ್ಯ ಜೀವನದ ಯಶಸ್ಸಿಗೆ ಜೋಡಿಸಲಾಗುತ್ತದೆ ಮತ್ತು ಹದಿಹರೆಯದವರು ಉತ್ತಮವಾಗಿ ಕಾರ್ಯನಿರ್ವಹಿಸುವ ಒತ್ತಡದಲ್ಲಿರುತ್ತಾರೆ. ಕೆಲವೊಮ್ಮೆ ಅವರ ಓದುವ ಸಮಯವನ್ನು ಹೆಚ್ಚಿಸಲು ವಿರಾಮವೇಳೆಯ ಚಟುವಟಿಕೆಗಳನ್ನು ಕಡಿತಗೊಳಿಸಲಾಗುತ್ತದೆ. ವರ್ಮಾ ಮತ್ತು

ಸರಸ್ವತಿ (2002) ಕಂಡುಕೊಂಡಿರುವಂತೆ ವ್ಯಾಸಂಗದ ಒತ್ತಡ ಮತ್ತು ಸ್ಪರ್ಧಾತ್ಮಕ ಮನೋಭಾವಗಳು ಭಾರತೀಯ ವಿದ್ಯಾರ್ಥಿಗಳ ಸಾಧನೆಯನ್ನು ಅವಲಂಬಿಸಿವೆ.

ವ್ಯಾಸಂಗಿಕ ಅಪೂರ್ಣಸಾಧನೆ ಮಾನಸಿಕ ಆರೋಗ್ಯದೊಂದಿಗೆ ವಿಲೋಮ ಸಂಬಂಧ ಹೊಂದಿದೆ. ಮಧ್ಯಮ ಸಾಮಾಜಿಕ ವರ್ಗದ ಕುಟುಂಬಗಳಲ್ಲಿ ತರುಣ–ತರುಣಿಯರ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಲಾಗುತ್ತದೆ ಮತ್ತು ಜೀವನದ ಯಶಸ್ಸಿಗೆ ಇದೇ ಸರಿಯಾದ ಮಾರ್ಗ ಎಂದು ನಂಬಲಾಗುತ್ತದೆ. ಆದರೆ ಕೆಳವರ್ಗದ ಕುಟುಂಬಗಳಲ್ಲಿ ಕುಟುಂಬದ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ.

ಸ್ನೇಹಿತರನ್ನು ಗಳಿಸುವುದು ಮತ್ತು ಜೀವನ ಪರ್ಯಂತ ಅದನ್ನು ನಿರ್ವಹಿಸುವುದು ಒಂದು ಸ್ವಾಭಾವಿಕ ವಿದ್ಯಮಾನವಾಗಿದೆ. ಸಮವಯಸ್ಕರ ಗುಂಪು ಹೆಚ್ಚಿನ ಪ್ರಾಮುಖ್ಯತೆ ಹೊಂದಿದೆ. ಹದಿಹರೆಯದವರು ಸಮವಯಸ್ಕರಿಂದ ಸ್ವೀಕೃತಿ ಹೊಂದಲು ಮತ್ತು ಅವರೊಡನೆ ಹೆಚ್ಚಿನ ಕಾಲ ಕಳೆಯಲು ಬಯಸುತ್ತಾರೆ. ಈ ಹಂತದಲ್ಲಿ ಸಮವಯಸ್ಕರಿಂದ ಸ್ವೀಕೃತರಾಗದಿರುವವರು ಒಂಟಿಗಳಾಗುತ್ತಾರೆ, ಕೆಳಮಟ್ಟದ ಆತ್ಮಾಭಿಮಾನ ಮತ್ತು ಒತ್ತಡ ಅನುಭವಿಸುತ್ತಾರೆ. ಸಮವಯಸ್ಕರ ಗುಂಪು ಹದಿಹರೆಯದಲ್ಲಿ ಪ್ರಮುಖವಾಗಿದ್ದು, ಮೌಲ್ಯಗಳು, ಸಂಪ್ರದಾಯಗಳು ಮತ್ತು ಸಮವಯಸ್ಕರ ಸಂಸ್ಕೃತಿಯ ಒಲವುಗಳು ಹೆಚ್ಚಾಗಲು ಕಾರಣವಾಗುತ್ತವೆ. ಸಾಮಾಜಿಕ ಸ್ವೀಕೃತಿಗೆ ಈ ಹಂತದಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ. ಹದಿಹರೆಯದವರು ತಮಗೆ ಇಷ್ಟವಾದ ಗುಂಪನ್ನು ಹುಡುಕಿಕೊಂಡು, ಅವರ ಮೂಲಕ ಆತ್ಮವಿಶ್ವಾಸ ಸಾಧಿಸಿಕೊಳ್ಳುತ್ತಾರೆ.

**ಭಿನ್ನಲಿಂಗದವರೊಂದಿಗಿನ ಸಂಬಂಧ**

ಹದಿಹರೆಯದವರು ನಿರಂತರವಾಗಿ ತಮ್ಮ ಸಂಬಂಧಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಎದುರಿಸುತ್ತಾರೆ, ಅದು ಅವರಲ್ಲಿ ಒತ್ತಡವನ್ನುಂಟುಮಾಡುತ್ತದೆ. ಹದಿಹರೆಯದವರು ಪರಿಪಕ್ವರಾದಂತೆ ಪೋಷಕರೊಂದಿಗೆ, ಒಡಹುಟ್ಟಿದವರೊಡನೆ, ಸಮವಯಸ್ಕರೊಡನೆ ಮತ್ತು ಅಧಿಕಾರದಲ್ಲಿರುವವರೊಡನೆ ಅವರ ಸಂಬಂಧ ಬದಲಾಗುತ್ತದೆ. ಹದಿಹರೆಯದಲ್ಲಿ ಇತರರ ಬಗ್ಗೆ ಲೈಂಗಿಕ ಆಕರ್ಷಣೆಗೆ ಒಳಗಾಗುವುದನ್ನು ಕಾಣುತ್ತೇವೆ ಮತ್ತು ಸ್ವಾಭಾವಿಕವಾಗಿ ಹದಿಹರೆಯದವರು ಭಿನ್ನ ಲಿಂಗದ ಸಮವಯಸ್ಕರ ಕಡೆ ಆಕರ್ಷಿತರಾಗುತ್ತಾರೆ. ಆದರೂ ಈ ಸಂಬಂಧಗಳು ತಾತ್ಕಾಲಿಕವಾಗಿರುತ್ತವೆ, ಅಸ್ಥಿರವಾಗಿರುತ್ತವೆ ಮತ್ತು ದುರ್ಬಲವಾಗಿರುತ್ತವೆ. ಏಕೆಂದರೆ ಹದಿಹರೆಯದವರು ಶೋಧನೆ ಮತ್ತು ಪ್ರಯೋಗದ ಹಂತದಲ್ಲಿರುತ್ತಾರೆ.

ಭಾರತದಲ್ಲಿ ಭಿನ್ನಲಿಂಗದವರೊಂದಿಗಿನ ಅಂತರ್‌ಕ್ರಿಯೆಗಳನ್ನು ಸಾಮಾನ್ಯವಾಗಿ ವಿರೋಧಿಸಲಾಗುತ್ತದೆ, ಹೆಚ್ಚಾಗಿ ಹುಡುಗಿ ಲೈಂಗಿಕ ಪಕ್ವತೆಗೆ ಹತ್ತಿರದಲ್ಲಿದ್ದಾಗ ಇದಕ್ಕೆ ಹೆಚ್ಚು ವಿರೋಧವಿರುತ್ತದೆ. ಇದು ತಂದೆ–ಮಗಳು, ಅಣ್ಣ–ತಂಗಿ ಮತ್ತು ಭಿನ್ನಲಿಂಗದ ಸಹೋದರ ಸಂಬಂಧಿಗಳ ಅಂತರ್‌ಕ್ರಿಯೆಗೂ ಅನ್ವಯಿಸುತ್ತದೆ.

ಹದಿಹರೆಯದವರು ಅವರ ಆತ್ಮೀಯತೆಗೆ ಸಂಬಂಧಿಸಿದ, ಹುಡುಗ–ಹುಡುಗಿ ಸಂಬಂಧಕ್ಕೆ ಸಂಬಂಧಿಸಿದ ಪ್ರಶ್ನೆಗಳು ಎದುರಾದಾಗ ಹೆಚ್ಚಿನ ಮಟ್ಟದ ಒತ್ತಡ ಎದುರಿಸುತ್ತಾರೆ ಮತ್ತು ಭಿನ್ನಲಿಂಗದವರೊಡನೆ ತೃಪ್ತಿಕರ ಸಂಬಂಧ ಸಾಧಿಸುವುದು ಹೇಗೆ ಎಂಬ ಒತ್ತಡಕ್ಕೆ ಒಳಗಾಗುತ್ತಾರೆ.

**ಅನನ್ಯತೆಯ ಸಮಸ್ಯೆ ಮತ್ತು ಭವಿಷ್ಯದ ಕಡೆಗೆ ನೋಡುವುದು**

ಹದಿಹರೆಯದವರ ಪ್ರಮುಖ ಮಾನಸಿಕ ಸವಾಲುಗಳಲ್ಲಿ ಅನನ್ಯತೆ ರೂಪಿಸಿಕೊಳ್ಳುವುದು ಒಂದು ಪ್ರಮುಖ ಲಕ್ಷಣವಾಗಿದೆ. ಹದಿಹರೆಯವು ಬಾಲ್ಯಾವಸ್ಥೆಯನ್ನು ದಾಟಿ ಹೊಸ ವ್ಯಕ್ತಿಗಳಾಗಿ ರೂಪಗೊಳ್ಳುವ ಹಂತ, ಯುವಕ–ಯುವತಿಯರು ನಿರಂತರ ಹೋರಾಟದ ಮೂಲಕ ಜೀವನದ ಅರ್ಥ ಮತ್ತು ಗುರಿಯನ್ನು ಕಂಡುಕೊಳ್ಳುವ ಕಾಲ. ಹುಡುಗಿಯರ ಅನನ್ಯತೆ ನಿಗದಿತ ಪಾತ್ರ ನಿರ್ವಹಣೆಗೆ ಸೀಮಿತವಾಗಿರುತ್ತದೆ. ಒಳ್ಳೆಯ ಮಗಳು, ಸೊಸೆ, ಹೆಂಡತಿ, ಸ್ವಾರ್ಥರಹಿತವಾಗಿರುವುದು ಮತ್ತು ಮನೆಯ ಎಲ್ಲರೊಂದಿಗೆ ಉತ್ತಮ ಸಂಬಂಧ ಹೊಂದಿರುವುದು ಇತ್ಯಾದಿ. ಇದು ಕೆಲವು ಹುಡುಗಿಯರಲ್ಲಿ ಒತ್ತಡ ಹೆಚ್ಚಾಗಲು ಮತ್ತು ಅವರ ಆತ್ಮಾಭಿಮಾನ

ಕಡಿಮೆಯಾಗಲು ಕಾರಣವಾಗುತ್ತದೆ. ಇದೇ ರೀತಿಯಾಗಿ, ಹದಿಹರೆಯದ ಹುಡುಗರು ಯಾವ ರೀತಿಯ ಪ್ರೌಢವ್ಯಕ್ತಿಗಳಾಗಬೇಕೆಂದು ಯೋಚಿಸಿ ಅದರಂತೆ ಬಾಳಲು ಪ್ರಯತ್ನಿಸಿದಾಗ ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ಇನ್ನೊಂದು ಪ್ರಮುಖ ಸವಾಲೆಂದರೆ ಹದಿಹರೆಯದವರು ಸಮಾಜದಲ್ಲಿ ತಮ್ಮ ಸ್ಥಾನವನ್ನು ಗುರುತಿಸಿಕೊಳ್ಳಲು ಮತ್ತು ಆ ಸ್ಥಾನಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ರಾಜರ್ಸ್ (1977)ರವರ ಪ್ರಕಾರ ಸಮಾಜ, ಪೋಷಕರು ಮತ್ತು ಸಮವಯಸ್ಕರ ನಿರೀಕ್ಷಣೆಗಳು ಮತ್ತು ಹೊಸದಾಗಿ ರೂಢಿಸಿಕೊಂಡ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಸವಾಲುಗಳು ಹದಿಹರೆಯದವರಲ್ಲಿ ಒತ್ತಡ ಹೇರುವ ಮೂಲಕ ಸಾಮಾಜಿಕ ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳುವಂತೆ ಸವಾಲನ್ನೊಡ್ಡುತ್ತವೆ.

ಭವಿಷ್ಯದ ಜೀವನಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಈ ಹಂತದ ಪ್ರಮುಖ ಕಾರ್ಯ. ಶಾಲಾಹಂತದ ಕೊನೆಯ ಹೊತ್ತಿಗೆ ಹದಿಹರೆಯದವರು ಜೀವನದಲ್ಲಿ ಯಾವ ವೃತ್ತಿ ಕೈಗೊಳ್ಳಬೇಕು ಎಂದು ಚಿಂತಿಸಲು ಪ್ರಾರಂಭಿಸುತ್ತಾರೆ. ನಗರ ಪ್ರದೇಶದಲ್ಲಿರುವ ಹದಿಹರೆಯದ ಮಕ್ಕಳು ಭವಿಷ್ಯದ ಶಿಕ್ಷಣ ಮತ್ತು ವೃತ್ತಿ ಯಾವುದಾಗಿರಬೇಕು ಎಂಬುದರ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಹದಿಹರೆಯದ ಮಕ್ಕಳು ವೃತ್ತಿಯ ಆಯ್ಕೆ ಮಾಡುವಾಗ ಹಲವಾರು ಆಕರ್ಷಕ ವೃತ್ತಿಗಳ ಅನುಕೂಲ ಮತ್ತು ಅನಾನುಕೂಲಗಳನ್ನು ತುಲನೆ ಮಾಡುವ ಮೂಲಕ ಗೊಂದಲಕ್ಕೊಳಗಾಗುತ್ತಾರೆ.

### ಹದಿಹರೆಯದವರು ಸಮಸ್ಯೆಗಳನ್ನು ಹೇಗೆ ನಿಭಾಯಿಸುತ್ತಾರೆ?(ಒತ್ತಡಗಳ ನಿರ್ವಹಣೆ)

ಹದಿಹರೆಯದವರು ತಮ್ಮ ಸಮಸ್ಯೆಗಳಿಗೆ ವಯಸ್ಕರಂತೆಯೇ ಪ್ರತಿಕ್ರಿಯಿಸುತ್ತಾರೆ. ಸಾಮಾನ್ಯವಾಗಿ ಕಂಡುಬರುವ ಪ್ರತಿಕ್ರಿಯೆಗಳೆಂದರೆ – ಉದ್ರೇಕ, ಭಯ, ಆತಂಕ, ದುಃಖಭರಿತವಾಗಿರುವುದು ಇತ್ಯಾದಿ. ಕೆಲವು ಹದಿಹರೆಯದವರು ಇತರರಿಂದ ಹಿಂದೆ ಸರಿಯುತ್ತಾರೆ, ಕೆಲವರು ಇತರರ ಮೇಲೆ ಆಕ್ರಮಣ ಮಾಡುತ್ತಾರೆ ಮತ್ತು ಕೆಲವರು ಇತರರ ರಕ್ಷಣೆಯಲ್ಲಿ ಆರಾಮವಾಗಿರಲು ಬಯಸುತ್ತಾರೆ. ಪ್ರಮುಖವಾಗಿ ಈ ಹಂತದ ಒತ್ತಡವನ್ನು ನಿರ್ವಹಿಸಲು ಎರಡು ಮಾರ್ಗಗಳಿವೆ. ಒಂದು ಮಾರ್ಗ, ಸಮಸ್ಯೆ ಪರಿಹಾರ ಮಾರ್ಗ. ಈ ಮಾರ್ಗದಲ್ಲಿ ಹದಿಹರೆಯದವರು ಸಮಸ್ಯೆ ಎದುರಿಸಿ ಸನ್ನಿವೇಶ ಬದಲಾಯಿಸಿಕೊಂಡು ಸಮಸ್ಯೆಯಿಂದ ಹೊರಬರಲು ಪ್ರಯತ್ನಿಸುತ್ತಾರೆ ಅಥವಾ ಸಮಸ್ಯೆ ಪರಿಹರಿಸಿಕೊಳ್ಳುತ್ತಾರೆ. ಮತ್ತೊಂದು ವಿಧದ ಒತ್ತಡ ನಿರ್ವಹಣೆಯ ಮಾರ್ಗದಲ್ಲಿ ಸಮಸ್ಯೆಯಿಂದ ಉಂಟಾಗುವ ಭಾವನೆಗಳು, ಆಲೋಚನೆಗಳು ಮತ್ತು ಸಂವೇಗಗಳನ್ನು ನಿಭಾಯಿಸುವುದಾಗಿದೆ. ಹದಿಹರೆಯದವರು ಸಮಸ್ಯೆಯ ಸ್ವರೂಪಕ್ಕನುಗುಣವಾಗಿ ಈ ಎರಡು ಮಾರ್ಗಗಳನ್ನು ಬಳಸಿಕೊಳ್ಳುತ್ತಾರೆ. ಸಂವೇಗಗಳ ನಿರ್ವಹಣೆ ಸಮಸ್ಯೆ ಪರಿಹಾರದಲ್ಲಿ ನೆರವಾಗುತ್ತದೆ.

ಸಮಸ್ಯೆ ನಿರ್ವಹಣಾ ಪ್ರಕ್ರಿಯೆಯಲ್ಲಿ ವ್ಯಕ್ತಿಗೆ ದೊರೆಯುವ ಸಾಮಾಜಿಕ ಬೆಂಬಲ ಹೆಚ್ಚಿನ ಪ್ರಭಾವ ಬೀರುತ್ತದೆ. ಹೆಚ್ಚಿನ ಮಟ್ಟದ ಸಾಮಾಜಿಕ ಬೆಂಬಲ ಒತ್ತಡ ನಿಭಾಯಿಸುವ ಪ್ರಕ್ರಿಯೆಯಲ್ಲಿ ನೆರವಾಗುತ್ತದೆ. ಪೋಷಕರು ನೀಡುವ ಮಾಹಿತಿ ಮತ್ತು ಸಹಾಯ ಅವರಿಗೆ ಒತ್ತಡ ನಿರ್ವಹಣೆಗೆ ಬೆಂಬಲ ನೀಡುತ್ತದೆ.ಮನೆಯಲ್ಲಿ ಹದಿಹರೆಯದವರಿಗೆ ಪೋಷಕರಿಂದ ಮಾಹಿತಿ ಮತ್ತು ಬೆಂಬಲ ದೊರೆಯದಿದ್ದಲ್ಲಿ, ಅಂತಹ ಮಕ್ಕಳು ಒತ್ತಡ ನಿರ್ವಹಿಸಿಕೊಳ್ಳಲು ಮದ್ಯಪಾನ, ಮಾದಕ ವಸ್ತುಗಳಿಗೆ ಬಲಿಯಾಗುತ್ತಾರೆ ಮತ್ತು ಇದು ಹೆಚ್ಚಿನ ಆತ್ಮನಿಂದನೆಗೆ ಕಾರಣವಾಗುತ್ತದೆ. ಒತ್ತಡಗಳ ನಿರ್ವಹಣೆಯಲ್ಲಿ ಸಮವಯಸ್ಕರು ಒದಗಿಸುವ ಸಾಮಾಜಿಕ ಬೆಂಬಲ ಪ್ರಮುಖ ಪಾತ್ರ ವಹಿಸುತ್ತದೆ.

### ಹದಿಹರೆಯದವರಿಗೆ ಆಪ್ತಸಲಹೆಯ ಪ್ರಾಮುಖ್ಯತೆ

ಹದಿಹರೆಯದವರಲ್ಲಿ ಒತ್ತಡ ಉಂಟುಮಾಡುವ ಒಂದು ಘಟನೆ ನಡೆದ ತಕ್ಷಣ ಅದರ ಭಾವನಾತ್ಮಕ ಮತ್ತು ಮಾನಸಿಕ ಅಂಶಗಳನ್ನು ಪರಿಗಣಿಸಿ ಒತ್ತಡಗಳನ್ನು ನಿರ್ವಹಿಸುವುದು ಒಂದು ಉತ್ತಮ ಮಾರ್ಗ. ಹದಿಹರೆಯದವರು ಸಾಮಾನ್ಯವಾಗಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪೋಷಕರು, ಸಮವಯಸ್ಕರು, ಶಿಕ್ಷಕರು ಹಾಗೂ ಹಿರಿಯರ ಸಲಹೆ ಪಡೆಯುತ್ತಾರೆ.ಇಂತಹ ಸಂದರ್ಭಗಳಲ್ಲಿ ಸಲಹೆಗಾರರು ನೀಡುವ ಸಹಾಯ ಮತ್ತು ಮಾರ್ಗದರ್ಶನ ಸಮಸ್ಯೆಯ ಪರಿಹಾರದಲ್ಲಿ ನೆರವಾಗುತ್ತದೆ.

ಶೈಕ್ಷಣಿಕ ಸಲಹೆಗಾರರು, ಶಿಕ್ಷಕರು ಹಾಗೂ ಇತರ ಹಿರಿಯರು ನೀಡುವ ಸಲಹೆಯ ರೀತಿಯಲ್ಲಿಯೇ ಸ್ನೇಹಿತರು ಮತ್ತು ಸಂಬಂಧಿಗಳು ಸಹ ನೀಡುತ್ತಾರೆ. ಆಪ್ತಸಲಹೆ ಕಾರ್ಯಕ್ರಮದಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿ, ಪರಿಹಾರ ಕಂಡುಕೊಳ್ಳುವಂತೆ ಮಾಡುತ್ತಾರೆ. ಆಪ್ತಸಲಹೆ ಕಾರ್ಯಕ್ರಮ ವ್ಯಕ್ತಿ ತನ್ನ ಬಲಾಬಲಗಳನ್ನು, ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಒಳಹೊಕ್ಕು ನೋಡಲು ನೆರವಾಗುತ್ತದೆ.

ಹದಿಹರೆಯದವರು ಮತ್ತು ಯುವಕ–ಯುವತಿಯರು ಜೀವನದ ಬಗ್ಗೆ ಗೊಂದಲಗಳು, ಸಂಬಂಧಗಳು, ಬದಲಾಗುತ್ತಿರುವ ಪಾತ್ರಗಳು ಮತ್ತು ಭವಿಷ್ಯದ ಬಗ್ಗೆ ಅರ್ಥಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಆಪ್ತಸಲಹೆ ಕಾರ್ಯಕ್ರಮ ಅತ್ಯಂತ ಅಗತ್ಯವಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

ಈ ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '√' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು **'X'** ಚಿಹ್ನೆಯ ಮೂಲಕ ಸೂಚಿಸಿ:

1. ಹದಿಹರೆಯದ ಹುಡುಗಿಯರು ದೈಹಿಕ ವಿಕಾಸದ ಬಗ್ಗೆ ಹುಡುಗರಿಗಿಂತ ಹೆಚ್ಚು ಕಾಳಜಿ ವಹಿಸುತ್ತಾರೆ.
2. ಪೋಷಣಾ ಶೈಲಿ ಹದಿಹರೆಯದವರ ಒತ್ತಡಕ್ಕೆ ಸಂಬಂಧಿಸಿದ ಪ್ರಮುಖ ಕಾರಕವಲ್ಲ.
3. ಹದಿಹರೆಯದವರು ಶಾಲಾ–ಕಾಲೇಜುಗಳಲ್ಲಿ ಉತ್ತಮ ಸಾಧನೆ ಮಾಡುವ ನಿರಂತರ ಒತ್ತಡದಲ್ಲಿರುತ್ತಾರೆ.
4. ಭಾರತದಲ್ಲಿ, ಭಿನ್ನಲಿಂಗದ ಅಂತರ್ ಕ್ರಿಯೆಗಳನ್ನು ಸಾಮಾನ್ಯವಾಗಿ ಪ್ರೋತ್ಸಾಹಿಸಲಾಗುತ್ತದೆ.
5. ಭವಿಷ್ಯದ ಜೀವನಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಹದಿಹರೆಯದವರ ಬಂದು ಪ್ರಮುಖ ಕಾರ್ಯವಾಗಿದೆ.
6. ಹದಿಹರೆಯದ ವಯೋಮಾನದಲ್ಲಿ ಆಪ್ತಸಲಹೆ ಅತ್ಯಂತ ಅಗತ್ಯವಾಗಿದೆ.

## 3.5.3.2. ಭಾವನಾತ್ಮಕ ತೊಂದರೆಗಳು ಮತ್ತು ಅಪಾಯಕಾರಿ ವರ್ತನೆಗಳನ್ನು ಅರ್ಥಮಾಡಿಕೊಳ್ಳುವಿಕೆ.

ಹದಿಹರೆಯದವರ ಭಾವನಾತ್ಮಕ ತೊಂದರೆಗಳು ಮತ್ತು ಅಪಾಯಕಾರಿ ವರ್ತನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಕೆಳಗಿನ ಅಂಶಗಳು ಪ್ರಮುಖವಾಗುತ್ತವೆ.

- ಹದಿಹರೆಯದವರು ತಾವು ನಿರ್ವಹಿಸಬೇಕಾಗಿರುವ ಪಾತ್ರಗಳ ಬಗ್ಗೆ ಗೊಂದಲದಲ್ಲಿರುತ್ತಾರೆ ಮತ್ತು ವಯಸ್ಕರಂತೆ ಜವಾಬ್ದಾರಿಗಳು ಹಾಗೂ ಮಕ್ಕಳಂತೆ ಆಕಾಂಕ್ಷೆಗಳ ನಡುವೆ ಸಿಲುಕಿರುತ್ತಾರೆ.
- ಹದಿಹರೆಯದವರಲ್ಲಿ ಬಾವೋದ್ವೇಗವನ್ನು ಕಾಣುತ್ತೇವೆ. ಏಕೆಂದರೆ ಈ ಹಂತದಲ್ಲಿ ಆಂತರಿಕವಾಗಿ ಬಿಡುಗಡೆಯಾಗುವ ಹಾರ್ಮೋನುಗಳು ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಪ್ರಭಾವ ಬೀರುತ್ತವೆ. ಅವರ ಚಟುವಟಿಕೆಗಳು ಅವರನ್ನು ಸಂತೋಷಭರಿತರನ್ನಾಗಿ, ಉತ್ಸುಕರನ್ನಾಗಿ, ಕೋಪೋದ್ರಿಕ್ತರನ್ನಾಗಿ ಅಥವಾ ಹುಚ್ಚರಂತೆ ವರ್ತಿಸುವಂತೆ ಮಾಡುತ್ತವೆ.
- ಹದಿಹರೆಯದ ಹುಡುಗಿಯರು ಬೇಗನೆ ಅಳುವಂತಹ ದುರ್ಬಲತೆ ಬೆಳೆಸಿಕೊಂಡಿರುತ್ತಾರೆ.
- ಸಾಮಾನ್ಯವಾಗಿ ಹದಿಹರೆಯದ ಬಾಲಕರು ಮತ್ತು ಬಾಲಕಿಯರಲ್ಲಿ ಡೋಲಾಯಮಾನವಾದ ಮನಸ್ಥಿತಿ ಕಂಡುಬರುತ್ತದೆ.
- ದೇಹದ ಬದಲಾವಣೆಗಳು ಆತ್ಮಪ್ರಜ್ಞೆಯ ಬೆಳವಣಿಗೆಗೆ ಕಾರಣವಾಗುತ್ತವೆ.
- ಚಿಕ್ಕ ವಯಸ್ಸಿನಲ್ಲಿ ಲೈಂಗಿಕ ಪರಿಪಕ್ವತೆ ಗಳಿಸುವ ಮಕ್ಕಳು ಕೆಲವೊಮ್ಮೆ ವಿಚಿತ್ರವಾಗಿ ವರ್ತಿಸುತ್ತಾರೆ.

- ಈ ಹಂತದ ಮಕ್ಕಳಲ್ಲಿ ಕೀಳರಿಮೆ ಅಥವಾ ಮೇಲರಿಮೆಯ ಭಾವನೆಗಳು ಕಂಡುಬರುತ್ತವೆ.
- ಹದಿಹರೆಯದ ವಯೋಮಾನದಲ್ಲಿ ಲೈಂಗಿಕ ಭಾವನೆಗಳು ಉದಯಿಸುತ್ತವೆ. ಲೈಂಗಿಕತೆಯ ಅಲೋಚನೆಗಳು ಮತ್ತು ಭಾವನೆಗಳು ಅವರಲ್ಲಿ ಅಪರಾಧ ಭಾವನೆ ಮೂಡಲು ಕಾರಣವಾಗುತ್ತವೆ.
- ತಡೆಯಲಾಗದ ಭಾವನೆಗಳು ಹದಿಹರೆಯದ ಮಕ್ಕಳಲ್ಲಿ ಹಠಾತ್ ವರ್ತನೆಗೆ ಕಾರಣವಾಗುತ್ತವೆ. ಈ ವರ್ತನೆಗಳು ಮಗುವಿಗೆ ಮತ್ತು ಇತರರಿಗೆ ಹಾನಿಕಾರಕವಾಗಿರುತ್ತವೆ. ಇಂತಹ ವರ್ತನೆಗಳು ಕೇವಲ ಹದಿಹರೆಯ ವಯೋಮಾನದಲ್ಲಿ ಮಾತ್ರ ಕಂಡುಬರುತ್ತವೆ.
- ಹದಿಹರೆಯ ಹಂತದಲ್ಲಿ ಮಕ್ಕಳು ವಿಕಾಸ ಹೊಂದಿ ಸ್ವತಂತ್ರ ಜೀವನ ಸಾಗಿಸಲು ಬಯಸುತ್ತಾರೆ. ಇದರಿಂದಾಗಿ  ಹದಿಹರೆಯದವರು ಪೋಷಕರ ನಿಯಮಗಳನ್ನು ಪ್ರಶ್ನಿಸುವುದನ್ನು ಮತ್ತು ತಮಗೆ ಸರಿ ಎನಿಸಿದ್ದಕ್ಕೆ ಬದ್ಧರಾಗಿ (ಹಠಮಾರಿತನ) ನಡೆದುಕೊಳ್ಳುವುದನ್ನು ಕಾಣಬಹುದು.
- ಹದಿಹರೆಯದ ಹುಡುಗರಲ್ಲಿ ಉದ್ರಿಕ್ತ ಹಾರ್ಮೋನುಗಳು ಅವರನ್ನು ದೈಹಿಕ ಹೊಡೆದಾಟಗಳಿಗೆ ಒಡ್ಡುತ್ತವೆ ಮತ್ತು ಅವರು ಜೋರಾದ ಸಂಗೀತ ಕೇಳಲು ಬಯಸುತ್ತಾರೆ.
- ಹದಿಹರೆಯದ ಹಂತದಲ್ಲಿ ಅವರು ಕಂಡುಕೊಂಡಿರುವ ಹೊಸ ಸ್ವಾತಂತ್ರ್ಯ ಅವರನ್ನು ಹೊಸ ಹೊಸ ವಿಷಯಗಳಲ್ಲಿ ತೊಡಗಿಸಿಕೊಳ್ಳುವಂತೆ ಮತ್ತು ಅಪಾಯಗಳಿಗೆ ಒಳಗಾಗುವಂತಹ ಅಜಾಗರೂಕ ವರ್ತನೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ.
- ಸಮವಯಸ್ಕರ ಒತ್ತಡದಿಂದ ತಾವು ಸುಲಭವಾಗಿ ಬಿಡಲು ಸಾಧ್ಯವಾಗದಂತಹ ಹವ್ಯಾಸಗಳನ್ನು ರೂಢಿಸಿಕೊಳ್ಳುತ್ತಾರೆ.
- ಹದಿಹರೆಯದವರ ಬಟ್ಟೆ ಧರಿಸುವಿಕೆ, ತಲೆಗೂದಲು ಬಾಚುವ ಶೈಲಿ ಮತ್ತು ಫ್ಯಾಷನ್‌ಗಳು ಬದಲಾಗುತ್ತವೆ.
- ಹದಿಹರೆಯದ ಮಕ್ಕಳು ಸಮಸ್ಯಾತ್ಮಕ ಮಕ್ಕಳೊಡನೆ ಬೆರೆಯುವ ಮೂಲಕ ಅಪಾಯಕಾರಿ ಜೀವನ ಶೈಲಿಯನ್ನು ರೂಢಿಸಿಕೊಳ್ಳುತ್ತಾರೆ.

ಪೋಷಕರು ಮತ್ತು ಶಿಕ್ಷಕರೊಡನೆ ಉಂಟಾಗುವ ಘರ್ಷಣೆಗಳನ್ನು ತಪ್ಪಿಸಿಕೊಳ್ಳಲು ಸುಳ್ಳು ಹೇಳುವುದನ್ನು ರೂಢಿಸಿಕೊಳ್ಳುತ್ತಾರೆ.

ಹದಿಹರೆಯದವರ ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ  ಇರುವ ಪ್ರಮುಖ ಅಡ್ಡಿಯೆಂದರೆ ಅವರ ಅಪಾಯಕಾರಿ ವರ್ತನೆ. ಅಪಾಯಕಾರಿ ವರ್ತನೆಗಳ ಋಣಾತ್ಮಕ ಪರಿಣಾಮಗಳನ್ನು ನಾವು ತಿಳಿದಿದ್ದೇವೆ. ಈ ವರ್ತನೆಗಳು ವೈಯಕ್ತಿಕ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನೊಡ್ಡುತ್ತವೆ ಮತ್ತು ಅಪಘಾತಗಳು, ಹಿಂಸೆ ಮತ್ತು ಅಪರಾಧಗಳಿಂದ ಸಾವಿಗೆ ಈಡಾಗಬಹುದು. ಅಪಾಯಕಾರಿ ವರ್ತನೆಗಳಿಗೆ ಹಲವಾರು ಅಂಶಗಳು ಸಂಬಂಧಿಸಿವೆ. ಋಣಾತ್ಮಕ ಜೀವನದ ಘಟನೆಗಳು ವ್ಯಕ್ತಿಯನ್ನು ಅಪಾಯಕಾರಿ ವರ್ತನೆಯಲ್ಲಿ ತೊಡಗುವಂತೆ ಪ್ರಚೋದಿಸುತ್ತವೆ. ಭಾವನಾತ್ಮಕ ಹಾಗೂ ಸಾಮಾಜಿಕ ಸಾಮರ್ಥ್ಯಗಳು ಹದಿಹರೆಯದವರಲ್ಲಿ ಸ್ವಾಸ್ಥತೆಯನ್ನು ಹೆಚ್ಚಿಸಲು ಪ್ರಮುಖ ಅಂಶಗಳಾಗಿವೆ. ಈ ಸಾಮರ್ಥ್ಯಗಳು ಹದಿಹರೆಯದವರಲ್ಲಿ ವಿವಿಧ ಸನ್ನಿವೇಶಗಳನ್ನು ಹಾಗೂ ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸುತ್ತವೆ. ಜೀವನದ ಋಣಾತ್ಮಕ ಘಟನೆಗಳು ಮತ್ತು ವೈಯಕ್ತಿಕ ಹಾಗೂ ಸಾಮಾಜಿಕ ಸಾಮರ್ಥ್ಯಗಳಾದ ಸಹಕಾರ ಮತ್ತು ಸಂವಹನ, ಅನುಭೂತಿ, ಸ್ವಯಂ ಅರಿವು ಮತ್ತು ಸ್ವಸಾಮರ್ಥ್ಯಗಳು ಅಪಾಯಕಾರಿ ವರ್ತನೆಯೊಂದಿಗೆ ಸಂಬಂಧಿಸಿವೆ. ಹದಿಹರೆಯದವರಲ್ಲಿ ಜೀವನದ ಋಣಾತ್ಮಕ ಘಟನೆಗಳು ಹೆಚ್ಚಾದಲ್ಲಿ ಅಥವಾ ವೈಯಕ್ತಿಕ ಹಾಗೂ ಸಾಮಾಜಿಕ ಸಾಮರ್ಥ್ಯಗಳು ಕಡಿಮೆಯಾದಲ್ಲಿ ಅಪಾಯಕಾರಿ ವರ್ತನೆಗಳು ಕಂಡುಬರುತ್ತವೆ. ಹದಿಹರೆಯದವರ ಸಮಸ್ಯೆಗಳನ್ನು ಪರಿಹರಿಸಲು ಅವರಲ್ಲಿ ಸಾಮಾಜಿಕ ಹಾಗೂ ಭಾವನಾತ್ಮಕ ಸಾಮರ್ಥ್ಯಗಳನ್ನು ಬೆಳೆಸಬೇಕಾಗುತ್ತದೆ.

ಹೆಚ್ಚಿನ ಸಂಖ್ಯೆಯ ಹದಿಹರೆಯದವರು ಭಾವನಾತ್ಮಕ ಮತ್ತು ವರ್ತನಾ ಸಮಸ್ಯೆಗಳನ್ನು ನಿಭಾಯಿಸಲು ಅಗತ್ಯವಾದ ಬೆಂಬಲವನ್ನು ಬಯಸುತ್ತಾರೆ. ಸಮಸ್ಯೆಯಿರುವ ಬಹಳಷ್ಟು ಮಕ್ಕಳು ಸಾಮಾನ್ಯ ಮಕ್ಕಳಂತೆ ಕಂಡುಬರುತ್ತಾರೆ. ಕುಟುಂಬದ ವಾತಾವರಣ ಮತ್ತು ಹದಿಹರೆಯದವರ ಸಮಸ್ಯೆಗಳ ಅರಿವು ಹಾಗೂ ವಿವಿಧ ರೀತಿಯ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅವರ ಸಮಸ್ಯೆಗಳನ್ನು ತಡೆಗಟ್ಟಬಹುದಾಗಿದೆ. ಶಾಲಾಧಾರಿತ ಮಾನಸಿಕ ಆರೋಗ್ಯ ಸೇವೆಗಳು ಹದಿಹರೆಯದವರ ಸಮಸ್ಯೆಗಳನ್ನು ಆರಂಭದಲ್ಲಿಯೇ ಪರಿಹರಿಸಿಕೊಳ್ಳಲು ಸಹಾಯ ನೀಡಬಲ್ಲವು. ಆದ್ದರಿಂದ ಪ್ರತಿ ಶಾಲೆಗೆ ಒಬ್ಬ ಸಲಹೆಗಾರನ ಅಗತ್ಯತೆಯಿದೆ ಎಂಬುದನ್ನು ಇದು ಸೂಚಿಸುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಹೆಚ್ಚಿಸಲು ಮತ್ತು ಅವರಿಗೆ ಸಹಾಯ ನೀಡುವ ಕ್ರಮಗಳು ಸಮಸ್ಯೆ ನಿರ್ಧರಿಸುವ ಪ್ರಮುಖ ನಿರ್ಧಾರಕಗಳಾಗಲಿವೆ. ಈ ನಿಟ್ಟಿನಲ್ಲಿ ಸಮುದಾಯ ಆಧಾರಿತ ಕ್ರಮಗಳು ಮತ್ತು ಶಾಲೆ ಕೈಗೊಳ್ಳಬಹುದಾದ ನವೀನ ಕಾರ್ಯಕ್ರಮಗಳಾದ ವಿದ್ಯಾರ್ಥಿಗಳ ನಾಟಕ ಸಂಘ, ಬೀದಿನಾಟಕ ಮುಂತಾದವುಗಳನ್ನು ಬಳಸಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳ ವ್ಯಸನವನ್ನು ಕಡಿಮೆ ಮಾಡಲು ಕುಟುಂಬ ಮತ್ತು ಶಾಲಾ ಮಕ್ಕಳನ್ನು ಸುಶಿಕ್ಷತರನ್ನಾಗಿಸಬೇಕಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

'ಎ' ಪಟ್ಟಿಯಲ್ಲಿರುವ ಹೇಳಿಕೆಗಳಿಗೆ 'ಬಿ' ಪಟ್ಟಿಯಲ್ಲಿರುವ ಹದಿಹರೆಯದವರ ಸೂಕ್ತ ವರ್ತನೆಯನ್ನು ಜೋಡಿಸಿ ಬರೆಯಿರಿ.

| | **'ಎ' ಪಟ್ಟಿ** | **'ಬಿ' ಪಟ್ಟಿ** |
|---|---|---|
| 1. | ಹಾರ್ಮೋನಿನ ಬದಲಾವಣೆಗಳು | ಎ) ಪೋಷಕರ ನಿಯಮಗಳನ್ನು ಪ್ರಶ್ನಿಸುವಿಕೆ. |
| 2. | ಸ್ವಾತಂತ್ರ್ಯದ ಭಾವನೆ | ಬಿ) ಸಮವಯಸ್ಕರಿಂದ ಮನ್ನಣೆ ಹಾಗೂ ಸ್ವೀಕಾರ ಪಡೆಯುವುದು. |
| 3. | ಹದಿಹರೆಯದವರ ಬಟ್ಟೆ ಧರಿಸುವ ಶೈಲಿ, ತಲೆಗೂದಲು ಶೈಲಿ ಮತ್ತು ಫ್ಯಾಶನ್‌ನ ರೀತಿ. | ಸಿ) ಘರ್ಷಣೆಗಳನ್ನು ತಡೆಹಿಡಿಯಲು |
| 4. | ಸುಳ್ಳು ಹೇಳುವಿಕೆ | ಡಿ) ಕೀಳರಿಮೆಯ ಭಾವನೆ |
| | | ಇ) ಬಾವೋತ್ಕರ್ಷದ ಭಾವನೆ |

## 3.5.3.3. ಹದಿಹರೆಯದಲ್ಲಿನ ಅನನ್ಯತೆಯ ಬಿಕ್ಕಟ್ಟು

ಹದಿಹರೆಯದವರಿಗೆ ಅನನ್ಯತೆಯನ್ನು ಕಂಡುಕೊಳ್ಳುವ ಕಾಲ ಸವಾಲಿನದ್ದಾಗಿದೆ. ಹದಿಹರೆಯದವರು ಸಾಗುವ ಈ ಹಂತವನ್ನು ಅನ್ವೇಷಣೆಯ ಕಾಲ ಅಥವಾ ತಮ್ಮನ್ನು ತಾವು ಕಂಡುಕೊಳ್ಳುವ ಕಾಲ ಎನ್ನುವರು. ಈ ಹಂತದಲ್ಲಿ, ಹೆಚ್ಚಿನ ಹದಿಹರೆಯದವರು ಬದಲಾವಣೆ ಬಯಸುತ್ತಾರೆ ಮತ್ತು ಜೀವನದ ಮುಂದಿನ ಹಂತಗಳಿಗೆ ಅಗತ್ಯವಾದ ಗುರಿ ಅಥವಾ ಯೋಜನೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಕೆಲವು ಹದಿಹರೆಯದವರಿಗೆ ಈ ಹಂತ ಒಂದು ಹೋರಾಟವಿದ್ದಂತೆ. ಏಕೆಂದರೆ ಅವರು ತಮ್ಮ ದೇಹದಲ್ಲಾಗುವ ಬದಲಾವಣೆಗಳನ್ನು ಅರಿತುಕೊಳ್ಳಲು ವಿಫಲರಾಗುತ್ತಾರೆ ಅಥವಾ ಮುಂದೆ ಸಾಗಲು ಅಗತ್ಯವಾದ ಅನನ್ಯತೆಯನ್ನು ಸಾಧಿಸುವಲ್ಲಿ ತೊಂದರೆ ಎದುರಿಸುತ್ತಾರೆ. ಇದನ್ನೇ 'ಅನನ್ಯತೆಯ ಬಿಕ್ಕಟ್ಟು' ಎಂದು ಕರೆಯಲಾಗುತ್ತದೆ.

**ವ್ಯಾಖ್ಯೆ:** ಅನನ್ಯತೆಯ ಬಿಕ್ಕಟ್ಟು ಎಂಬುದು ಅನಿಶ್ಚತೆಯ ಮತ್ತು ಗೊಂದಲದ ಕಾಲದಲ್ಲಿದ್ದು, ನಿರೀಕ್ಷಿತ ಗುರಿಗಳು ಅಥವಾ ಸಮಾಜದಲ್ಲಿನ ಪಾತ್ರಗಳಲ್ಲಾಗುವ ಬದಲಾವಣೆಗಳಿಂದ ವ್ಯಕ್ತಿಯ ಅನನ್ಯತೆಯ ಭಾವನೆ ಅಭದ್ರವಾಗಿರುತ್ತದೆ.

**ಅನನ್ಯತೆಯ ಬಿಕ್ಕಟ್ಟಿಗೆ ಕಾರಣಗಳು:**

ಅನನ್ಯತೆಯ ಬಿಕ್ಕಟ್ಟಿಗೆ ಅಥವಾ ಸಂಘರ್ಷಕ್ಕೆ ಹಲವಾರು ಕಾರಣಗಳಿವೆ. ಮಕ್ಕಳ ಅಸಮರ್ಪಕ ಬೆಳೆಸುವಿಕೆ, ಪ್ರೋತ್ಸಾಹದ ಕೊರತೆ ಮತ್ತು ಅತೃಪ್ತಿಕರ ಹಿಂದಿನ ಅನುಭವಗಳು ಇತ್ಯಾದಿ. ಇದರೊಂದಿಗೆ ಒತ್ತಡ, ತೊಂದರೆಗಳು, ಸಮಾಜದ ಬೇಡಿಕೆಗಳು, ಉತ್ತಮ ವಿಚಾರಗಳು ಮತ್ತು ಮೌಲ್ಯಗಳ ಕೊರತೆ, ಪ್ರಾಯೋಗಿಕ ಪಾತ್ರಗಳು ಮತ್ತು ನಾಯಕನಾಗಿರುವುದು ಸಹ ಅನನ್ಯತೆಯ ಸಂಘರ್ಷಕ್ಕೆ ಕಾರಣವಾಗುತ್ತವೆ.

ಹದಿಹರೆಯದಲ್ಲಿ ತಮ್ಮತನವನ್ನು ಸಾಧಿಸಿಕೊಳ್ಳುವ ವಿಫಲತೆಯು ಅನನ್ಯತೆಯ ಬಿಕ್ಕಟ್ಟಿಗೆ ದಾರಿಮಾಡಿಕೊಡುತ್ತದೆ. ಇದು ವ್ಯಕ್ತಿ ತನ್ನನ್ನು ತಾನು ನಂಬದಿರುವ ಹಂತವಾಗಿದೆ. ಅನನ್ಯತೆಯ ಸಂಘರ್ಷ ಎದುರಿಸುತ್ತಿರುವ ವ್ಯಕ್ತಿ ಸ್ವಯಂ ಪರಿಕಲ್ಪನೆಯನ್ನು ಹೊಂದಿರುವುದಿಲ್ಲ. ವಿಕಾಸದ ಹಂತದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಎದುರಿಸುವ ಪ್ರಮುಖ ಮಾನಸಿಕ ಘರ್ಷಣೆಯೇ ಅನನ್ಯತೆಯ ಬಿಕ್ಕಟ್ಟು. ಇದು ಮನೋಸಾಮಾಜಿಕ ವಿಕಾಸದ ಒಗ್ಗಟ್ಟು ಅಥವಾ ಪಾತ್ರ ನಿರ್ವಹಣೆಯ ಗೊಂದಲದ ಅವಧಿಯಲ್ಲಿ ಕಂಡುಬರುತ್ತದೆ. ಹದಿಹರೆಯದ ಹಂತದಲ್ಲಿ, ಪ್ರತಿಯೊಬ್ಬ ವ್ಯಕ್ತಿಯಲ್ಲಿ ದೈಹಿಕ ಬೆಳವಣಿಗೆ, ಲೈಂಗಿಕ ಪರಿಪಕ್ವತೆ ಮತ್ತು ವಿಚಾರಗಳ ಅಂತರೀಕರಣದಂತಹ ಬದಲಾವಣೆಗಳು ಕಂಡುಬರುತ್ತವೆ. ಇತರರು ತಮ್ಮನ್ನು ಹೇಗೆ ಪರಿಗಣಿಸುತ್ತಾರೆ ಮತ್ತು ತಮ್ಮ ಬಗ್ಗೆ ಹೇಗೆ ಆಲೋಚಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಹದಿಹರೆಯದವರು ಬಯಸುತ್ತಾರೆ.

ಪ್ರೌಢಾವಾಸ್ಥೆಯಲ್ಲಿ ವ್ಯಕ್ತಿ ಹೇಗೆ ಜೀವನ ನಡೆಸುತ್ತಾನೆ ಎನ್ನುವುದು ಬಾಲ್ಯದಲ್ಲಿ ಅವನನ್ನು ಹೇಗೆ ಬೆಳೆಸಲಾಗಿದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಬಾಲ್ಯದಲ್ಲಿ ಇತರರಿಗೆ ಪ್ರೀತಿ–ವಿಶ್ವಾಸ ತೋರದೆ ಇರುವ ವ್ಯಕ್ತಿಗಳು ವಯಸ್ಕರಾದ ನಂತರವೂ ಸರಿಯಾದ ಪ್ರೀತಿ–ವಿಶ್ವಾಸ ತೋರುವುದಿಲ್ಲ. ಮಕ್ಕಳ ಅಗತ್ಯತೆಗಳಿಗೆ ಪೂರಕವಾದ ವಾತಾವರಣವನ್ನು ಹಿರಿಯರು ಒದಗಿಸಬೇಕು ಮತ್ತು ಅವರಿಗೆ ಪ್ರೀತಿ–ವಿಶ್ವಾಸ ತೋರಿಸಬೇಕು. ಮಕ್ಕಳು ಬೆಳೆಯುತ್ತಾ ಸಾಗಿದಂತೆ ಹಿರಿಯರಿಂದ ಪ್ರೋತ್ಸಾಹದ ಮಾತುಗಳನ್ನು ಕೇಳಲು ಬಯಸುತ್ತಾರೆ ಮತ್ತು ಇದು ಕೊರತೆಯಾದಾಗ ಅನನ್ಯತೆಯ ಸಂಘರ್ಷ ಎದುರಿಸುತ್ತಾರೆ, ಮಗುವಿಗೆ ಅಘಾತಕ್ಕೊಳಗಾದಂತಹ ಹಿಂದಿನ ಅನುಭವಗಳು ಅವರ ಆತ್ಮವಿಶ್ವಾಸವನ್ನು ಕಡಿಮೆ ಮಾಡುತ್ತವೆ. ಹದಿಹರೆಯದವರ ಅನನ್ಯತೆಯ ಬಿಕ್ಕಟ್ಟುಗಳನ್ನು ಅರ್ಥಮಾಡಿಕೊಂಡು ಅವರಿಗೆ ಸಹಾಯ ನೀಡಬಹುದಾಗಿದೆ.

**ದತ್ತು ಮಕ್ಕಳ ಅಥವಾ ಸ್ಥಳಾಂತರಗೊಂಡ ಮಕ್ಕಳ ಅನನ್ಯತೆಯ ಬಿಕ್ಕಟ್ಟು:**

ಸ್ಥಳಾಂತರಗೊಂಡ ಅಥವಾ ಅಘಾತವನ್ನು ಅನುಭವಿಸಿದ ಹದಿಹರೆಯದವರ ಅನನ್ಯತೆಯ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳಬೇಕು. ದತ್ತುಪಡೆದ ಮಕ್ಕಳು ತಮಗೆ ಪರಿಚಯವಿಲ್ಲದ ಹೊಸ ಕುಟುಂಬವನ್ನು ಪ್ರವೇಶಿಸಿದಾಗ ಅಲ್ಲಿ ನೋವು ಮತ್ತು ದುಃಖವನ್ನು ಅನುಭವಿಸುತ್ತಾರೆ. ದತ್ತು ಪಡೆದ ಮಕ್ಕಳು ಹದಿಹರೆಯದಲ್ಲಿ ತಮ್ಮ ಅನನ್ಯತೆಯ ಬಗ್ಗೆ ಹಲವಾರು ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾರೆ. ಹದಿಹರೆಯ ಹಂತದ ಅನನ್ಯತೆಯ ಬೆಳವಣಿಗೆ ಕಾರ್ಯ ದತ್ತು ಮಕ್ಕಳಿಗೆ ತುಂಬಾ ಕಠಿಣವಾದುದು.

**ಹದಿಹರೆಯದವರ ಅನನ್ಯತೆಯ ಹುಡುಕುವಿಕೆ:**

ಒಂದು ಕುಟುಂಬವನ್ನು ತುಂಬಾ ಹತ್ತಿರದಿಂದ ನೋಡಿದಾಗ, ಹದಿಹರೆಯದವರು ತಮ್ಮ ಒಡಹುಟ್ಟಿದವರೊಡನೆ ಇದ್ದಾಗ ತಮ್ಮ ನಿರ್ದಿಷ್ಟ ಅನನ್ಯತೆಯನ್ನು ಕಂಡುಕೊಳ್ಳಲು ಹೋರಾಡಬೇಕಾಗುತ್ತದೆ. ಸ್ಟೀಫನ್.ಎ. ಜಾನ್ಸ್‌ನ್‌ರವರ ಪ್ರಕಾರ ಕುಟುಂಬದ ಮೊದಲನೆ ಮಗು ಬೌದ್ಧಿಕ ಚಟುವಟಿಕೆಗಳಲ್ಲಿ ತೊಡಗಲು ನಿರ್ಧರಿಸಿದರೆ, ಎರಡನೇ ಮಗು ಹಾಸ್ಯಗಾರನಾಗಲು ಪ್ರಯತ್ನಿಸಬಹುದು, ಇವರಿಬ್ಬರನ್ನು ನೋಡಿದ ಮೂರನೇ

ಮಗು ಕ್ರೀಡಾ ಪಟುವಾಗಲು ಬಯಸುತ್ತಾನೆ. ಪ್ರತಿಯೊಬ್ಬ ಮಗು ವೈಯಕ್ತಿಕವಾಗಿ ತನ್ನತನವನ್ನು ಕಂಡುಕೊಳ್ಳಲು ಬಯಸುತ್ತಾನೆ. ಯಾವಾಗ ಮಗುವಿಗೆ ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲವೋ ಆಗ ಅದು ಅನನ್ಯತೆಯ ಬಿಕ್ಕಟ್ಟಿಗೆ ಒಳಗಾಗುತ್ತದೆ.

**ಈ ಸನ್ನಿವೇಶದಲ್ಲಿ ಮಾಡಬೇಕಾದುದೇನು?**

**• ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ವಿವರಿಸಿ:**

ಹದಿಹರೆಯದ ಮಕ್ಕಳಿಗೆ ತಾವು ಯಾರು ಮತ್ತು ತಮ್ಮ ಸಂಸ್ಕೃತಿ ಯಾವುದು ಎಂಬುದನ್ನು ಅರ್ಥಮಾಡಿಕೊಳ್ಳಲು ಒಂದು ವೇದಿಕೆಯನ್ನು ಒದಗಿಸಿರಿ. ಹೆಚ್ಚಿನ ಹದಿಹರೆಯದವರು ಕುಟುಂಬದ ಸಂಪ್ರದಾಯಗಳು ಮತ್ತು ಧಾರ್ಮಿಕ ಆಚರಣೆಗಳನ್ನು ಅವುಗಳನ್ನು ಏಕೆ ಅಚರಿಸುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳದೆ ಅನುಸರಿಸುತ್ತಾರೆ. ಮನಶಾಸ್ತ್ರಜ್ಞ, ಎಂ.ಎ.ಎಂ.ಖಾನ್‌ರವರು"ಇಂದಿನ ವಿದ್ಯಾರ್ಥಿಗಳು ಅನನ್ಯತೆಯ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಆದರೆ ಭಾರತಕ್ಕೆ ಸ್ವಾತಂತ್ರ ಬಂದ ತಕ್ಷಣ ಅನನ್ಯತೆಯ ಬಿಕ್ಕಟ್ಟು ಇರಲಿಲ್ಲ ಏಕೆಂದರೆ ಪ್ರತಿಯೊಬ್ಬರೂ ನಾವು ಸ್ವತಂತ್ರರಾಗಿದ್ದೇವೆ ಎಂಬ ಅನನ್ಯತೆಯ ಭಾವನೆ ಹೊಂದಿದ್ದರು" ಎಂದು ಅಭಿಪ್ರಾಯ ಪಡುತ್ತಾರೆ.

**• ಸೋಲಿಗೆ ಹದಿಹರೆಯದವರ ಪ್ರತಿಕ್ರಿಯೆಯನ್ನು ಗುರುತಿಸಿ:**

ಹದಿಹರೆಯವರು ಸೋಲನ್ನು ಕಂಡಾಗ, ಅವರನ್ನು ಧನಾತ್ಮಕವಾಗಿ ಚಿಂತಿಸಲು ಪ್ರೋತ್ಸಾಹಿಸಬೇಕು ಮತ್ತು ಭದ್ರತೆಯ ಭಾವನೆ ಒದಗಿಸಬೇಕು. ಸೋಲುಂಟಾದಾಗ ಹದಿಹರೆಯದವರು ಕುಟುಂಬದ ಬಗ್ಗೆ, ರಾಜಕೀಯ ನಾಯಕರು ಅಥವಾ ಧಾರ್ಮಿಕ ಸಂಸ್ಥೆಗಳ ಬಗ್ಗೆ ಕೋಪವನ್ನು ವ್ಯಕ್ತಪಡಿಸುತ್ತಾರೆ. ಅನನ್ಯತೆಯ ಬಿಕ್ಕಟ್ಟಿನಲ್ಲಿರುವ ಹದಿಹರೆಯದವರು ಮದ್ಯಪಾನ ಮತ್ತು ಮಾದಕ ವ್ಯಸನಗಳಿಗೆ ಬಲಿಯಾಗುತ್ತಾರೆ ಮತ್ತು ಸಮಾಜದಿಂದ ದೂರ ಉಳಿಯುತ್ತಾರೆ.

**• ಹದಿಹರೆಯದವರೊಂದಿಗೆ ಮಾತನಾಡಿ:**

ಹದಿಹರೆಯದ ಮಕ್ಕಳೊಂದಿಗೆ ಉತ್ತಮ ಸಂವಹನವಿರಲಿ ಮತ್ತು ಅಗತ್ಯವಿದ್ದಾಗ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಿ. ಹದಿಹರೆಯದ ಮಕ್ಕಳು ಅನನ್ಯತೆಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ ತಮಗೆ ಯಾರು ಹೆಚ್ಚು ಪ್ರೀತಿ ತೋರುತ್ತಾರೆ ಮತ್ತು ಆರೈಕೆ ಮಾಡುತ್ತಾರೆಯೋ ಅವರಿಂದ ಪ್ರಭಾವಿತರಾಗುತ್ತಾರೆ ಮತ್ತು ಅವರು ಹೇಳಿದ್ದನ್ನು ಕೇಳುತ್ತಾರೆ. ಹದಿಹರೆಯದ ಮಕ್ಕಳಿಗೆ ನೀಡುವ ಸಹಾಯ ಭವಿಷ್ಯದಲ್ಲಿ ಅವರೊಡನೆ ಉತ್ತಮ ಬಾಂಧವ್ಯ ಹೊಂದಲು ಮತ್ತು ಕುಟುಂಬದ ಘಟಕವನ್ನು ಬಲಗೊಳಿಸಲು ಸಾಧ್ಯವಾಗುತ್ತದೆ.

**• ಬಂಡಾಯದ ಹಂತವನ್ನು ಅರ್ಥಮಾಡಿಕೊಳ್ಳಿ:**

ಹದಿಹರೆಯದವರ ಅನನ್ಯತೆಯ ಹೋರಾಟದ ಸಮಯದಲ್ಲಿ ಬಂಡಾಯ ವರ್ತನೆಯನ್ನು ಕಾಣಬಹುದು. ಬಂಡಾಯವು ಅವರ ಬಾಹ್ಯ ಹತಾಶೆಯ ರೂಪದಲ್ಲಿ ಮತ್ತು ಇತರರ ಗಮನ ಸೆಳೆಯುವ ವರ್ತನೆಯ ರೂಪದಲ್ಲಿ ಕಂಡುಬರುತ್ತದೆ. ಇದರಿಂದ ಹದಿಹರೆಯದವರು ಮನೆ, ಶಾಲೆ ಹಾಗೂ ಸಮಾಜವನ್ನು ತೊರೆದಂತೆ ವರ್ತಿಸುವುದು ತಾತ್ಕಾಲಿಕವಾಗಿರುತ್ತದೆ. ಇವರ ಇಂತಹ ವರ್ತನೆ ಅನುಪಯುಕ್ತ ಹಾಗೂ ಬೇಗನೆ ಮರೆಯಾಗುವ ವರ್ತನೆಯಾಗಿರುತ್ತದೆ.

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿ–3**

ಈ ಕೆಳಗಿನ ಹೇಳಿಕೆಗಳಲ್ಲಿ ಅನನ್ಯತೆಯ ಬಿಕ್ಕಟ್ಟಿಗೆ ಕಾರಣವಾಗುವ ಅಂಶಗಳನ್ನು ಗುರುತಿಸಿ. ಕಾರಣವಾಗಿದ್ದರೆ ಅದನ್ನು (✓) ಗುರುತಿನಿಂದ ಮತ್ತು ಕಾರಣವಾಗಿಲ್ಲದಿದ್ದರೆ ಅದನ್ನು (x) ಗುರುತಿನಿಂದ ಗುರುತಿಸಿರಿ.

| | **ಹೇಳಿಕೆಗಳು** | ✓ | x |
|---|---|---|---|
| 1. | ಅಸಮರ್ಪಕ ಬೆಳೆಸುವಿಕೆ | | |
| 2. | ಹದಿಹರೆಯದವರ ಒತ್ತಡ | | |
| 3. | ಉತ್ತಮ ಓದುವ ಹವ್ಯಾಸ | | |
| 4. | ತೊಂದರೆಗಳು ಮತ್ತು ಸಮಾಜದ ಬೇಡಿಕೆಗಳು | | |
| 5. | ಸಾಮಾಜಿಕ ಪರಿಪಕ್ವತೆ | | |
| 6. | ಉತ್ತಮ ವಿಚಾರಗಳು ಹಾಗೂ ಮೌಲ್ಯಗಳ ಕೊರತೆ | | |
| 7. | ಭಾವನಾತ್ಮಕ ಪರಿಪಕ್ವತೆ | | |
| 8. | ಪ್ರಾಯೋಗಿಕ ಪಾತ್ರಗಳು ಮತ್ತು ನಾಯಕನಾಗಿರುವುದು | | |

## 3.5.3.4. ಹದಿಹರೆಯ ಹಂತದಲ್ಲಿ ಪೋಷಕ–ಮಗುವಿನ ಸಂಘರ್ಷ

ಮಕ್ಕಳು ಹದಿಹರೆಯದ ಹಂತಕ್ಕೆ ಸಾಗಿದಂತೆ ಪೋಷಕರ–ಮಕ್ಕಳ ಸಂಘರ್ಷಗಳು ಹೆಚ್ಚಾಗುತ್ತವೆ. ಇದು ನಡೆಯಲೇಬೇಕಾದ ಬದಲಾವಣೆ ಅಲ್ಲದಿದ್ದರೂ ಇದು ಸಾಮಾನ್ಯವಾಗಿ ಕಂಡುಬರುತ್ತದೆ. ಇದು ಪೋಷಕರು ಹಾಗೂ ಮಕ್ಕಳು ಇಬ್ಬರನ್ನೂ ಬಹುವಾಗಿ ಕಾಡುವ ವಿಷಯವಾಗಿದೆ. ಕುಟುಂಬದ ಸೌಹಾರ್ದ ವಾತಾವರಣದ ದಿನಗಳಿಗೇನಾಯಿತು ಎಂಬ ಬಗ್ಗೆ ಇಬ್ಬರು ಚಿಂತೆಗೀಡಾಗುತ್ತಾರೆ. ಹದಿಹರೆಯದವರು ಅವರ ಪೋಷಕರನ್ನು ತುಂಬಾ ಒರಟಾಗಿದ್ದಾರೆ, ನಿಯಂತ್ರಣ ಸಾಧಿಸುತ್ತಿದ್ದಾರೆ ಹಾಗೂ ಅತಾರ್ಕಿಕವಾಗಿದ್ದಾರೆ ಎಂದು ಭಾವಿಸುತ್ತಾರೆ. ಆದರೆ ಪೋಷಕರು ತಮ್ಮ ಸಹಕಾರಯುತ ಹಾಗೂ ಜವಾಬ್ದಾರಿಯುತ ಮಕ್ಕಳು ಈಗ ಹಗೆತನ ಹಾಗೂ ವಿನಾಶಕಾರಿ ವರ್ತನೆ ತೋರುತ್ತಿದ್ದಾರೆಂದು ಭಾವಿಸುತ್ತಾರೆ. ಈ ರೀತಿಯ ದೃಷ್ಟಿಕೋನಗಳು ಪೋಷಕರು ಹಾಗೂ ಮಕ್ಕಳು ಒಬ್ಬರನ್ನೊಬ್ಬರು ಅಪಾರ್ಥ ಮಾಡಿಕೊಳ್ಳಲು ಕಾರಣವಾಗುತ್ತವೆ. ಹೆಚ್ಚಿನ ಪೋಷಕರು ಹಾಗೂ ಹದಿಹರೆಯದವರು ವರದಿ ಮಾಡಿರುವಂತೆ ಈ ಹಂತದಲ್ಲಿ ಅವರಿಬ್ಬರ ನಡುವಿನ ಸ್ನೇಹ ಸಂಬಂಧ ಕಡಿಮೆಯಾಗುತ್ತದೆ.

ಹೆಚ್ಚಿನ ಕುಟುಂಬಗಳಲ್ಲಿ ಘರ್ಷಣೆ ಕಂಡುಬರುವುದು ಬಟ್ಟೆಗಳು, ಸಂಗೀತ ಮತ್ತು ವಿರಾಮ ವೇಳೆಯ ಬಳಕೆ ಇವುಗಳ ಬಗ್ಗೆ. ಆದರೆ ಧಾರ್ಮಿಕ ಹಾಗೂ ಪ್ರಮುಖ ಮೌಲ್ಯಗಳ ವಿಚಾರವಾಗಿ ಅಲ್ಲ. ಕುಟುಂಬದ ಘರ್ಷಣೆ ಕೆಲವೊಮ್ಮೆ ಮಾತ್ರ ಪ್ರಮುಖ ಸಮಸ್ಯೆಗಳಾದ ಹದಿಹರೆಯದವರ ಮಾದಕ ವಸ್ತುಗಳ ಸೇವನೆ ಮತ್ತು ಬಾಲಾಪರಾಧಗಳ ಬಗ್ಗೆ ಕಂಡುಬರುತ್ತದೆ. ಶೇ.20 ಭಾಗ ಪೋಷಕರು ಮತ್ತು ಹದಿಹರೆಯದವರು ತೀವ್ರತರವಾದ, ಬಹಳಕಾಲ ಇರುವಂತಹ ಅನಾರೋಗ್ಯಕರ ಘರ್ಷಣೆಯಲ್ಲಿ ತೊಡಗಿರುತ್ತಾರೆ. ತುಂಬಾ ತೀವ್ರತರವಾದ ಘರ್ಷಣೆಗಳೆಂದರೆ–ಬಾಲಾಪರಾಧಗಳು, ಮನೆ ಬಿಟ್ಟು ಓಡಿಹೋಗುವುದು, ಶಾಲೆಯನ್ನು ತಪ್ಪಿಸುವುದು, ಯೋಜನೆಯಿಲ್ಲದೆ ಗರ್ಭಧರಿಸುವಿಕೆ, ಧಾರ್ಮಿಕ ಸಂಘಟನೆಗಳ ಸದಸ್ಯತ್ವ ಮತ್ತು ಮಾದಕ ವಸ್ತುಗಳ ದುರ್ಬಳಕೆಗಳು ಇತ್ಯಾದಿ. ಸಾಮಾನ್ಯವಾಗಿ ಘರ್ಷಣೆಗಳು ಪೂರ್ವ ತಾರುಣ್ಯದಲ್ಲಿ ಹೆಚ್ಚಾಗುತ್ತವೆ, ಮಧ್ಯ ತಾರುಣ್ಯ (14–16 ವರ್ಷಗಳಲ್ಲಿ)ದಲ್ಲಿ ತುಂಬಾ ಹೆಚ್ಚಾಗಿ, ಕ್ರಮೇಣ ತಾರುಣ್ಯದ ಕೊನೆ ಭಾಗದಲ್ಲಿ (17–19ವರ್ಷ) ಕಡಿಮೆಯಾಗುತ್ತವೆ.

ಹದಿಹರೆಯದಲ್ಲಿ ಕಂಡುಬರುವ ಹೆಚ್ಚಿನ ಬದಲಾವಣೆಗಳು ಪೋಷಕರು, ಹದಿಹರೆಯದವರ ನಡುವಿನ ಘರ್ಷಣೆಗೆ ಕಾರಣವಾಗುತ್ತವೆ. ಹದಿಹರೆಯದವರು ತಾರ್ಕಿಕ ಚಿಂತನೆಯನ್ನು ಬೆಳೆಸಿಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಮೊದಲು ಒಪ್ಪಿಕೊಂಡ ಹಲವಾರು ವಿಷಯಗಳ ಬಗ್ಗೆ ಪ್ರಶ್ನಿಸುತ್ತಾರೆ. ಹಾಗೂ ಅದರ ಇನ್ನೊಂದು ಮುಖದ ಬಗ್ಗೆ ವಾದಿಸುತ್ತಾರೆ. ಅವರಲ್ಲಿ ಬೆಳೆಯುತ್ತಿರುವ ವಿಮರ್ಶನಾತ್ಮಕ ಚಿಂತನಾ ಕೌಶಲಗಳ ಪರಿಣಾಮವಾಗಿ ಪೋಷಕರ ಬಯಕೆಗಳನ್ನು ಅಥವಾ ವಿಚಾರಗಳನ್ನು ಬಾಲ್ಯದಲ್ಲಿ ಒಪ್ಪಿಕೊಂಡಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅವರ ಬೌದ್ಧಿಕ ವಿಕಾಸ ಮತ್ತು ಆದರ್ಶಗಳ ಪರಿಣಾಮವಾಗಿ ಪೋಷಕರ ಅಭಿಪ್ರಾಯಗಳು ಮತ್ತು ಕ್ರಿಯೆಗಳಲ್ಲಿ ತಾರ್ಕಿಕ ತಪ್ಪುಗಳನ್ನು ಕಂಡುಹಿಡಿಯುತ್ತಾರೆ.

ಹದಿಹರೆಯದವರು ಈ ಹಂತದಲ್ಲಿ ಪೋಷಕರನ್ನು ಪ್ರಶ್ನಿಸಲಾರದ ಅಧಿಕಾರವುಳ್ಳವರೆಂದು ಸ್ವೀಕರಿಸುವುದಿಲ್ಲ. ಬೇರೆ ಅಭಿಪ್ರಾಯಗಳನ್ನು ಕಂಡುಕೊಳ್ಳುತ್ತಾರೆ ಮತ್ತು ಅದನ್ನು ಪ್ರತಿಪಾದಿಸುತ್ತಾರೆ. ಹದಿಹರೆಯದವರಲ್ಲಿ ಅಹಂ ಕೇಂದ್ರಿತ ಪ್ರವೃತ್ತಿ ಬೆಳೆಯುವುದರೊಂದಿಗೆ, ಪೋಷಕರ ಸಾಮಾನ್ಯ ಅಭಿಪ್ರಾಯಗಳಿಗೂ ಸಹ ಅವರು ಅತಿಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತಾರೆ.

ಲೈಂಗಿಕ ಪರಿಪಕತ್ವತೆ ಮತ್ತು ಹದಿಹರೆಯದಲ್ಲಾಗುವ ತಕ್ಷಣದ ಬದಲಾವಣೆಗಳಿಂದ ಪೋಷಕರಿಗೆ ತಮ್ಮ ಹದಿಹರೆಯದ ಮಕ್ಕಳ ಭವಿಷ್ಯದ ವರ್ತನೆಗಳನ್ನು ಊಹಿಸುವುದು ಕಷ್ಟವಾಗುತ್ತದೆ. ಉದಾ: ಹದಿಹರೆಯದ ಮಕ್ಕಳು ಸುಲಭವಾಗಿ ಪೋಷಕರ ಮಾತುಗಳನ್ನು ಕೇಳುತ್ತಿದ್ದವರು ಕ್ರಮೇಣ ಅವರ ಮಾತನ್ನು ಕೇಳುವುದಿಲ್ಲ ಹಾಗೂ ಸಹಕರಿಸುವುದಿಲ್ಲ. ಉತ್ತರ ಬಾಲ್ಯಾವಸ್ಥೆಗಿಂತ ಭಿನ್ನವಾದ ರೀತಿಯಲ್ಲಿ ವರ್ತಿಸಲು ಪ್ರಾರಂಭಿಸುತ್ತಾರೆ. ಪ್ರತಿಭಟಿಸುವ ಹಾಗೂ ವಿರೋಧ ವ್ಯಕ್ತಪಡಿಸುವ ಮನೋಭಾವ ಬೆಳೆಸಿಕೊಳ್ಳುತ್ತಾರೆ. ಪೋಷಕರು ತಮ್ಮ ಮೇಲೆ ಒತ್ತಡ ಹೇರುತ್ತಾರೆ ಎಂದು ಭಾವಿಸುತ್ತಾರೆ ಮತ್ತು ತಮಗಿರುವ ಸ್ವಾತಂತ್ರ ಕಡಿಮೆಯಾಗಿದೆ ಎಂದು ಭಾವಿಸುತ್ತಾರೆ.

ಕುಟುಂಬದ ಹೊರಗಡೆ ಹದಿಹರೆಯದವರ ವಾತಾವರಣದಲ್ಲಾಗುವ ಬದಲಾವಣೆಗಳು ಅವರಲ್ಲಿ ಒತ್ತಡವನ್ನು ತರುತ್ತವೆ. ಪ್ರಾಥಮಿಕ ಶಾಲೆಯಿಂದ ಮಾಧ್ಯಮಿಕ ಶಾಲೆಗೆ, ಮಾಧ್ಯಮಿಕ ಶಾಲೆಯಿಂದ ಪ್ರೌಢಶಾಲೆಗೆ ಸಾಗುವುದು ಅವರಲ್ಲಿ ಒತ್ತಡವನ್ನುಂಟು ಮಾಡುತ್ತದೆ. ಯುವಕ–ಯುವತಿಯರು ಒಂದು ಸನ್ನಿವೇಶದಿಂದ ಇನ್ನೊಂದು ವಾತಾವರಣಕ್ಕೆ ಹೋದಾಗ ತಾವಿನ್ನೂ ಚಿಕ್ಕವರು, ಅನನುಭವಿಗಳು, ಕಡಿಮೆ ಸ್ಥಾನಮಾನ ಮತ್ತು ಅತಿಕಡಿಮೆ ಸೌಲಭ್ಯ ಹೊಂದಿರುವವರು ಎಂದು ಭಾವಿಸುತ್ತಾರೆ. ಅವರು ಹೊಸ ಶೈಕ್ಷಣಿಕ ನಿರೀಕ್ಷೆಗಳು ಹಾಗೂ ಸಾಮಾಜಿಕ ಸ್ಥಿತಿಗತಿಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ. ಸಮವಯಸ್ಕರ ಪ್ರಾಮುಖ್ಯತೆ ಹಾಗೂ ಪ್ರಣಯ ಸಂಬಂಧಗಳು ಅವರಲ್ಲಿ ಹೊಸರೀತಿಯ ಒತ್ತಡಗಳಿಗೆ ಕಾರಣವಾಗುತ್ತವೆ.

ಪೋಷಕರು–ಹದಿಹರೆಯದವರ ನಡುವಿನ ಸಂಬಂಧಗಳು ಅವರ ಪೋಷಣಾ ಶೈಲಿಯಿಂದ ಪ್ರಭಾವಿತವಾಗುತ್ತವೆ. ಹಲವಾರು ಅಧ್ಯಯನಗಳು ಸೂಚಿಸಿರುವಂತೆ ಅಧಿಕಾರಯುಕ್ತ ಪೋಷಕರ ಮಕ್ಕಳು ಸಲುಗೆಯ, ಕಡೆಗಣಿಸಲ್ಪಟ್ಟ ಹಾಗೂ ತಾತ್ಸಾರದ ದೋರಣೆಯ ಪೋಷಕರ ಮಕ್ಕಳಿಗಿಂತ ಹೆಚ್ಚಿನಮಟ್ಟದ ಸಾಮಾಜಿಕ ಸಾಮರ್ಥ್ಯ ಮತ್ತು ಪರಿಪಕ್ವತೆಯನ್ನು ಪ್ರದರ್ಶಿಸುತ್ತಾರೆ. ಅಧಿಕಾರಯುಕ್ತ ಪೋಷಣೆಯಲ್ಲಿ ಬೆಳೆದ ಮಕ್ಕಳು ಧನಾತ್ಮಕ ಸಂವೇಗಾತ್ಮಕ ಹೊಂದಾಣಿಕೆ, ಉನ್ನತ ಶಾಲಾ ಸಾಧನೆ, ಮತ್ತು ಬಾಲ್ಯ ಹಾಗೂ ತಾರುಣ್ಯಾವಸ್ಥೆಯಲ್ಲಿ ಸಂಪೂರ್ಣ ಪರಿಪಕ್ವತೆ ಪ್ರದರ್ಶಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಇಂತಹ ಪೋಷಣೆಯಲ್ಲಿ ಬೆಳೆಯದೆ ಇರುವ ಮಕ್ಕಳು ಹದಿಹರೆಯದ ಹಂತವನ್ನು ಪ್ರವೇಶಿಸಿದಾಗ ಹಲವಾರು ಹೊಸ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯನ್ನು ತಲುಪುವ ಮಧ್ಯದ ಸಂಕ್ರಮಣ ಕಾಲದಲ್ಲಿ ಹದಿಹರೆಯದವರಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣುತ್ತೇವೆ. ಅದೇ ರೀತಿ ಪೋಷಕರು ಸಹ ಅವರ ಜೀವನದ ಸವಾಲುಗಳು ಮತ್ತು ತಮ್ಮ ಮಕ್ಕಳ ಪ್ರತಿಕ್ರಿಯೆಗಳಿಗೆ ಅನುಗುಣವಾಗಿ ಬದಲಾಗುತ್ತಾರೆ. ಒಂದು ಅಧ್ಯಯನದಲ್ಲಿ ಹದಿಹರೆಯದ ಮಕ್ಕಳ ಶೇ.40 ಭಾಗ ಪೋಷಕರು ವರದಿಮಾಡಿರುವಂತೆ ಮಕ್ಕಳು ಬಾಲ್ಯದಿಂದ ಹದಿಹರೆಯಕ್ಕೆ ಸಾಗುವ

ಹಂತದಲ್ಲಿ ಈ ಕೆಳಗಿನ ತೊಂದರೆಗಳನ್ನು ಎದುರಿಸುತ್ತಾರೆ. ಅವುಗಳೆಂದರೆ ಕಡಿಮೆಯಾದ ಆತ್ಮಾಭಿಮಾನ, ಕಡಿಮೆಯಾದ ಜೀವನದ ತೃಪ್ತಿ, ಖಿನ್ನತೆಯ ಹೆಚ್ಚಳ, ಆತಂಕದ ಹೆಚ್ಚಳ ಮತ್ತು ಮಧ್ಯವಯಸ್ಸಿನ ಬಗ್ಗೆ ಋಣಾತ್ಮಕ ಆಲೋಚನೆಗಳು ಕಂಡುಬರುತ್ತವೆ.

ಹದಿಹರೆಯದ ಮಕ್ಕಳ ಪೋಷಕರು ಮಧ್ಯ ವಯಸ್ಸಿನಲ್ಲಿರುತ್ತಾರೆ, ಅವರ ಮುಂದಿನ ಜೀವನ ಪ್ರಸ್ತುತಕ್ಕಿಂತ ಉತ್ತಮವಾಗಿರಲಾರದು. ಅವರ ಮಕ್ಕಳಲ್ಲಿ ಆದರ್ಶಗಳು ಹೆಚ್ಚಾಗುತ್ತಿದ್ದರೆ, ಅವರು ನಿರಾಶಾವಾದವನ್ನು ಅನುಭವಿಸುತ್ತಾರೆ. ಅದೇ ರೀತಿ ಮಧ್ಯವಯಸ್ಸಿನಲ್ಲಿ ಅವರ ದೈಹಿಕ ದೃಢತೆ ಮತ್ತು ಆಕರ್ಷಣೀಯ ವ್ಯಕ್ತಿತ್ವ ಕ್ರಮೇಣ ಕಡಿಮೆಯಾಗುತ್ತದೆ. ಹದಿಹರೆಯದ ಮಕ್ಕಳನ್ನು ಬೆಳೆಸಲು ಕಾರ್ಯನಿರ್ವಹಿಸಿದ ಜೋಡಿ ಹದಿಹರೆಯದವರ ಹೊಸ ಬೇಡಿಕೆಗಳಿಂದ ಒತ್ತಡಕ್ಕೆ ಒಳಗಾಗುತ್ತಾರೆ ಎಂಬ ಅಭಿಪ್ರಾಯವಿದೆ.

ಹದಿಹರೆಯ ಹಂತದಲ್ಲಿ ಪೋಷಕ–ಮಕ್ಕಳ ಸಂಬಂಧವನ್ನು ಸುಧಾರಿಸಲು ಸಂಶೋಧಕರು ಈ ಕೆಳಕಂಡ ಸಲಹೆಗಳನ್ನು ನೀಡಿದ್ದಾರೆ, ಮೊದಲನೆಯದಾಗಿ, ಮಕ್ಕಳ ವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಪೋಷಕರು ಹದಿಹರೆಯದವರ ವಿಕಾಸದ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಮಾಹಿತಿ ಪಡೆಯುತ್ತಾರೆ. ಎರಡನೆಯದಾಗಿ, ಅವರ ಬದಲಾಗುವ ಅಗತ್ಯತೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಹದಿಹರೆಯದ ವಯೋಮಾನದಲ್ಲಿ ಪಾಲಿಸಬೇಕಾದ ಪರಿಣಾಮಕಾರಿ ಪೋಷಣಾ ವಿಧಾನದ ಬಗ್ಗೆ ಮಾಹಿತಿ ಪಡೆಯುತ್ತಾರೆ. ಉದಾಹರಣೆಗೆ ಸಂಶೋಧನೆಯಲ್ಲಿ ನಿರ್ಧರಿಸಿದಂತೆ ಅಧಿಕಾರಯುಕ್ತ ಪೋಷಣಾ ಶೈಲಿ, ಬಾಲ್ಯ ಹಾಗೂ ತಾರುಣ್ಯವಸ್ಥೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ ಎಂದು ತಿಳಿದುಬಂದಿದೆ, ಇದರ ಜೊತೆಗೆ ಹದಿಹರೆಯದ ಮಕ್ಕಳಿಗೆ ಅಗತ್ಯವಾದ ಮಾನಸಿಕ ಸ್ವಾತಂತ್ರ್ಯ ದೊರೆಯುತ್ತದೆ. ಈ ಹಂತದಲ್ಲಿ ಪೋಷಕರು ತರುಣ–ತರುಣಿಯರಿಗೆ ತಮ್ಮ ಅಭಿಪ್ರಾಯ ಹಾಗೂ ನಂಬಿಕೆಗಳನ್ನು ಬೆಳಸಿಕೊಳ್ಳಲು ಅವಕಾಶ ನೀಡುತ್ತಾರೆ. ಇದಕ್ಕೆ ವಿರುದ್ಧವಾಗಿ ಪೋಷಕರು ತಮ್ಮ ಮಕ್ಕಳ ಮೇಲೆ ಮಾನಸಿಕ ನಿಯಂತ್ರಣ ಸಾಧಿಸಲು ಬಯಸಿದರೆ ಅವರು ಅತಿಯಾದ ರಕ್ಷಣಾತ್ಮಕ ವ್ಯಕ್ತಿತ್ವ ರೂಢಿಸಿಕೊಳ್ಳುತ್ತಾರೆ. ಮೂರನೆಯದಾಗಿ, ಹದಿಹರೆಯದ ಮಕ್ಕಳು ಹೇಗೆ ಬದಲಾಗುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ಪೋಷಕರು ತಮ್ಮ ಕುಟುಂಬ ಹೇಗೆ ಬದಲಾಗುತ್ತಿದೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಸಾರ್ವಜನಿಕ ಆರೋಗ್ಯ ಶಿಬಿರಗಳ ಮೂಲಕ ಹದಿಹರೆಯದ ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದರ ಬಗ್ಗೆ ಪೋಷಕರಿಗೆ ಶಿಕ್ಷಣ ನೀಡಬೇಕಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4.**

ಈ ಕೆಳಗೆ ಕೊಟ್ಟಿರುವ ಉತ್ತರಗಳಲ್ಲಿ ಹದಿಹರೆಯದ ಹಂತದಲ್ಲಿ ಪೋಷಕ–ಮಕ್ಕಳ ಸಂಘರ್ಷದ ಋಣಾತ್ಮಕ ಪರಿಣಾಮಗಳನ್ನು ಗುರುತಿಸಿರಿ. ಋಣಾತ್ಮಕ ಪರಿಣಾಮವನ್ನು (✓) ಗುರುತಿನಿಂದ ಮತ್ತು ಋಣಾತ್ಮಕ ಪರಿಣಾಮವಲ್ಲದಿದ್ದರೆ ಅದನ್ನು (X) ಗುರುತಿನಿಂದ ಗುರುತಿಸಿರಿ.

| | **ಪೋಷಕ–ಮಕ್ಕಳ ನಡುವಿನ ಸಂಘರ್ಷದ ಪರಿಣಾಮಗಳು** | ✓ | x |
|---|---|---|---|
| 1. | ಬಾಲಾಪರಾಧ | | |
| 2. | ಮನೆ ಬಿಟ್ಟು ಹೋಗುವುದು | | |
| 3. | ಉನ್ನತಮಟ್ಟದ ಆತ್ಮಾಭಿಮಾನ | | |
| 4. | ಶಾಲೆಯಿಂದ ಹೊರಗುಳಿಯುವಿಕೆ | | |
| 5. | ಸಾಮಾಜಿಕ ಸಾಮರ್ಥ್ಯ ಮತ್ತು ಪರಿಪಕ್ವತೆ | | |
| 6. | ಮಾದಕ ವಸ್ತುಗಳ ದುರುಪಯೋಗ | | |
| 7. | ಹೆಚ್ಚಾದ ಖಿನ್ನತೆ | | |
| 8. | ಹೆಚ್ಚಾದ ಜೀವನದ ತೃಪ್ತಿ | | |

## 3.5.3.5. ಮಾದಕ ವ್ಯಸನ ಮತ್ತು ದುರ್ಬಳಕೆ

ಮಾದಕ ವ್ಯಸನವು ತೀವ್ರತರವಾದ, ಮರುಕಳಿಸುವ ಮೆದುಳಿನ ಕಾಯಿಲೆಯಾಗಿದ್ದು, ಹಾನಿಕಾರಕ ಪರಿಣಾಮ ಹೊಂದಿದ್ದರೂ ಸಹ ಮಾದಕ ವಸ್ತುಗಳ ಸೇವನೆ ಮತ್ತು ಬಳಕೆ ಕಂಡುಬರುತ್ತದೆ. ಇದನ್ನು ಮೆದುಳಿನ ಕಾಯಿಲೆ ಎಂದು ಕರೆಯುತ್ತಾರೆ. ಏಕೆಂದರೆ ಮಾದಕ ವಸ್ತುಗಳು ಮೆದುಳಿನ ರಚನೆ ಹಾಗೂ ಕಾರ್ಯವನ್ನು ಬದಲಾಯಿಸುತ್ತವೆ. ಇಂತಹ ಮೆದುಳಿನ ಬದಲಾವಣೆಗಳು ಬಹಳ ಕಾಲದವರೆಗೆ ಇದ್ದು ಹಾನಿಕಾರಕ ಪರಿಣಾಮ ಬೀರುತ್ತವೆ ಮತ್ತು ಇವರಲ್ಲಿ ಸ್ವಯಂ ವಿನಾಶಕಾರಿ ವರ್ತನೆಗೆ ಕಾರಣವಾಗುತ್ತದೆ.

ಹದಿಹರೆಯದವರು ದುರ್ಬಲ ಮನಸ್ಸಿವರಾಗಿದ್ದು, ಬಹಳ ಬೇಗ ತಪ್ಪುದಾರಿಯ ಕಡೆಸಾಗುತ್ತಾರೆ. ವಿಶ್ವದಾದ್ಯಂತ ಇರುವ ಹದಿಹರೆಯದವರ ಪೋಷಕರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಒಂದು ದೊಡ್ಡ ಸಮಸ್ಯೆ ಮಾದಕ ವಸ್ತುಗಳ ದುರ್ಬಳಕೆ ಮತ್ತು ಹದಿಹರೆಯದವರು ಅದಕ್ಕೆ ಬಲಿಯಾಗುತ್ತಿರುವುದು. ಮಾದಕ ವ್ಯಸನಗಳನ್ನು ಕುರಿತಂತೆ ಕೆಳಕಂಡ ಅಂಶಗಳು ಗಮನಾರ್ಹ.

- ಅಪಾಯವನ್ನು ಎದುರಿಸುವ ಮನೋಭಾವ ಹದಿಹರೆಯದವರನ್ನು ಚಿಕ್ಕ ವಯಸ್ಸಿನಲ್ಲಿಯೇ ಧೂಮಪಾನ, ಮದ್ಯಪಾನಗಳ ಕಡೆಗೆ ಆಕರ್ಷಿಸುತ್ತದೆ.
- ಮೋಜಿಗಾಗಿ ಪ್ರಾರಂಭವಾದ ಧೂಮಪಾನ, ಮದ್ಯಪಾನಗಳು ನಿಯಂತ್ರಿಸದಿದ್ದರೆ ಹವ್ಯಾಸವಾಗಿ ಬಿಡುತ್ತವೆ.
- ಮನೆಯಲ್ಲಿ ಹಿರಿಯರು ಧೂಮಪಾನ, ಮದ್ಯಪಾನ ಮಾಡುತ್ತಿದ್ದರೆ ಅವರು ಹದಿಹರೆಯದವರಿಗೆ ಮಾದರಿಗಳಾಗುತ್ತಾರೆ.
- ಕೆಳಮಟ್ಟದ ಆತ್ಮಗೌರವ ಹದಿಹರೆಯದವರನ್ನು ಧೂಮಪಾನ, ಮದ್ಯಪಾನ ಅಥವಾ ಮಾದಕವ್ಯಸನಕ್ಕೆ ದೂಡುತ್ತದೆ.
- ಸಿಗರೇಟ್‌ಗಳು, ಆಲ್ಕೋಹಾಲ್, ಮಾದಕ ವಸ್ತುಗಳಾದ ಡ್ರಗ್ಸ್ ಮತ್ತು ಸ್ಟಿರಾಯ್ಡ್‌ಗಳು ಹದಿಹರೆಯದವರಿಗೆ ಸುಲಭವಾಗಿ ದೊರೆಯುವಂತಿದ್ದರೆ ಅವುಗಳನ್ನು ಸೇವಿಸಲು ಪ್ರಯತ್ನಿಸುತ್ತಾರೆ.

ದೈಹಿಕ ಹಾಗೂ ಲೈಂಗಿಕ ದುರ್ಬಳಕೆಯ ಪ್ರಕರಣದ ಹದಿಹರೆಯದವರು ಹೆಚ್ಚಾಗಿ ಮಾದಕ ವ್ಯಸನಕ್ಕೆ ಒಳಗಾಗುವುದನ್ನೂ ಕಾಣುತ್ತೇವೆ. ಇದರಲ್ಲಿ ಹೆಚ್ಚಿನ ಇತರೆ ಅಪಾಯಕಾರಿ ಕಾರಕಗಳಾದ ಜೀನ್‌ಗಳ ದುರ್ಬಲತೆ, ಮದ್ಯಪಾನ ಅಥವಾ ಮಾದಕ ವಸ್ತುಗಳ ದೊರೆಯುವಿಕೆ, ಪೋಷಕರ ಮೇಲ್ವಿಚಾರಣೆಯ ಕೊರತೆ ಮತ್ತು ಮಾದಕ ವ್ಯಸನಿ ಸಮವಯಸ್ಕರ ಸಹಚರ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ.

ಹದಿಹರೆಯದವರನ್ನು ಮಾದಕ ವ್ಯಸನದ ಸಮಸ್ಯೆಗೆ ದೂಡುವ ಪ್ರಮುಖ ಅಂಶಗಳೆಂದರೆ:

- ಸಾಕಷ್ಟಿಲ್ಲದ ಪೋಷಕರ ಮೇಲ್ವಿಚಾರಣೆ ಮತ್ತು ಮೇಲುಸ್ತುವಾರಿ
- ಪೋಷಕರು ಮತ್ತು ಮಕ್ಕಳ ನಡುವೆ ಸಂವಹನ ಮತ್ತು ಅಂತರ್‌ಕ್ರಿಯೆಯ ಕೊರತೆ
- ಮಾದಕ ವಸ್ತುಗಳ ಸೇವನೆ ಬಗ್ಗೆ ಸರಿಯಾದ ನಿಯಮಗಳು ಹಾಗೂ ನಿರೀಕ್ಷಣೆಗಳು ಇಲ್ಲದಿರುವುದು.
- ಅಸಮಂಜಸ ಹಾಗೂ ಅತಿಯಾದ ತೀವ್ರತರವಾದ ಶಿಸ್ತು
- ಕುಟುಂಬದ ಘರ್ಷಣೆಗಳು
- ಹದಿಹರೆಯದವರ ಮದ್ಯಪಾನ ಹಾಗೂ ಮಾದಕ ವಸ್ತುಗಳ ಬಗ್ಗೆ ಪೋಷಕರ ಪೂರಕ ಮನೋಭಾವ ಹಾಗೂ ಪೋಷಕರು ಮದ್ಯಪಾನ ಹಾಗೂ ಮಾದಕ ವಸ್ತುಗಳನ್ನು ಬಳಸುವುದು.

**ಸಮಸ್ಯೆ ಪರಿಹರಿಸಲು ಕ್ರಮಗಳು:**

ಮಾದಕ ವಸ್ತುಗಳಿಗೆ ಬಲಿಯಾದ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಈ ಕೆಳಕಂಡ ಕ್ರಮಗಳನ್ನು ಸೂಚಿಸಲಾಗಿದೆ.

- ಮಕ್ಕಳ ವರ್ತನೆಯ ಬಗ್ಗೆ ಗಮನಕೊಟ್ಟು ವೀಕ್ಷಿಸಿರಿ. ಅವರ ತಪ್ಪು ವರ್ತನೆಗಳು, ಹಸಿವು, ನಿದ್ರೆ ಹಾಗೂ ಮನಸ್ಥಿತಿಗಳಲ್ಲಾಗುವ ಬದಲಾವಣೆಗಳನ್ನು ಗಮನಿಸಬೇಕು.
- ಅವರ ಬಗ್ಗೆ ಗೂಢಚಾರಿಕೆ ಮಾಡಬೇಡಿ ಅಥವಾ ತಪ್ಪು ವರ್ತನೆಗಳಿಗೆ ಬಯ್ಯಬೇಡಿ. ಪ್ರಾಮಾಣಿಕವಾಗಿ ಮಾತನಾಡುವಂತೆ ಪ್ರೋತ್ಸಾಹಿಸಬೇಕು. ನಿಮ್ಮ ಕಾಳಜಿಯನ್ನು ಅವರಿಗೆ ವಿವರಿಸಿ ಮತ್ತು ಅವರೊಡನೆ ಸಮಸ್ಯೆಯನ್ನು ಮುಕ್ತವಾಗಿ ಚರ್ಚಿಸಬೇಕು.
- ಹದಿಹರೆಯದ ಮಗು ತಂದೆ–ತಾಯಿಗಳೊಡನೆ ಮಾತನಾಡಲು ಇಷ್ಟಪಡದಿದ್ದರೆ, ವೈದ್ಯರು ಗೌಪ್ಯವಾಗಿ ಪ್ರಶ್ನಿಸಿ ಅವರು ಮಾದಕ ವ್ಯಸನಿಗಳಾಗಿದ್ದಾರೆಯೆ ಎಂಬುದನ್ನು ತಿಳಿದುಕೊಳ್ಳಬೇಕು. ಮಕ್ಕಳನ್ನು ಮಾದಕ ವ್ಯಸನಗಳ ಪರೀಕ್ಷೆಗೆ ಒಡ್ಡಬಾರದು, ಅದು ಮಗುವಿನಲ್ಲಿ ಗಾಬರಿ ಹುಟ್ಟಿಸುತ್ತದೆ.
- ಅವಶ್ಯಕತೆಯಿದ್ದಲ್ಲಿ ಹದಿಹರೆಯದ ಮಗುವಿಗೆ ಸೂಕ್ತ ಚಿಕಿತ್ಸೆ ಕೊಡಿಸಬೇಕು. ಒಂದು ವೇಳೆ ಪೋಷಕರಿಗೆ ತಮ್ಮ ಹದಿಹರೆಯದ ಮಕ್ಕಳು ಮದ್ಯಪಾನ ಅಥವಾ ಮಾದಕ ವಸ್ತುಗಳಿಗೆ ಬಲಿಯಾಗಿದ್ದಾರೆ ಎಂದು ಎನಿಸಿದ್ದರೆ, ಕೆಳಗಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು.
- ಹದಿಹರೆಯದ ಮಕ್ಕಳು ಭೌತಿಕವಾಗಿ ಮಾದಕ ವಸ್ತುಗಳನ್ನು ಮತ್ತು ಬರಿಸುವಂತಹ ಇತರೆ ಸಾಮಗ್ರಿಗಳನ್ನು ಹೊಂದಿದ್ದಾರೆಯೇ ಎಂಬುದನ್ನು ಗಮನಿಸಬೇಕು.
- ವರ್ತನಾ ಸಮಸ್ಯೆಗಳು ಮತ್ತು ಶಾಲೆಯಲ್ಲಿ ಕಡಿಮೆಮಟ್ಟದ ಶ್ರೇಣಿಗಳು.
- ಭಾವನಾತ್ಮಕವಾಗಿ ದೂರ ಇರುವುದು, ಒಂಟಿಯಾಗಿರುವುದು, ಖಿನ್ನತೆ ಅಥವಾ ಆಯಾಸವಾದವರಂತೆ ವರ್ತಿಸುವುದು.
- ಸ್ನೇಹಿತರನ್ನು ಬದಲಾಯಿಸುವುದು ಅಥವಾ ಸಮವಯಸ್ಕರ ಅತಿಯಾದ ಪ್ರಭಾವಕ್ಕೆ ಒಳಗಾಗಿರುವುದು.
- ಸುಳ್ಳುಹೇಳುವುದು ಅಥವಾ ಶಾಲೆಯ ನಂತರ ಅಥವಾ ವಾರದ ರಜಾ ದಿನಗಳಲ್ಲಿ ತಿರುಗಾಡಲು ಹೋಗುವುದು.
- ವೈಯಕ್ತಿಕ ನೋಟದ ಬಗ್ಗೆ ಆಸಕ್ತಿ ಕಡಿಮೆಯಾಗುವುದು.
- ದೈಹಿಕ ವ್ಯತ್ಯಾಸಗಳಾದ ಕೆಂಪಾದ ಕಣ್ಣುಗಳು, ಸುರಿಯುತ್ತಿರುವ ಮೂಗು, ಆಗಾಗ್ಗೆ ಗಂಟಲು ಬೇನೆ, ತಕ್ಷಣ ತೂಕ ಕಡಿಮೆಯಾಗುವುದು ಇತ್ಯಾದಿ.
- ಮನಸ್ಥಿತಿ, ಆಹಾರಭ್ಯಾಸ ಅಥವಾ ನಿದ್ರಾ ವಿಧಾನಗಳಲ್ಲಿ ಬದಲಾವಣೆ
- ತಲೆಸುತ್ತುವಿಕೆ ಮತ್ತು ನೆನಪಿನ ಸಮಸ್ಯೆಗಳು.

**ಮಾದಕ ವ್ಯಸನ ಚಿಕಿತ್ಸೆ:**

- ಮಾದಕ ವ್ಯಸನದ ಸಮಸ್ಯೆಗಳನ್ನು ಪರಿಹರಿಸಲು ಕುಟುಂಬದ ಚಿಕಿತ್ಸಾ ವಿಧಾನಗಳು ಹೆಚ್ಚು ಪರಿಣಾಮ ಬೀರುತ್ತವೆ.
- ಅರ್ಹ ಕುಟುಂಬ ಚಿಕಿತ್ಸಕ (Family Therapist) ಹದಿಹರೆಯದವರನ್ನು ಮೌಲ್ಯಮಾಪನ ಮಾಡುವ ಮೂಲಕ ಅವರ ಮಾದಕ ವ್ಯಸನದ ಸಮಸ್ಯೆಯನ್ನು ತಿಳಿದುಕೊಂಡು ಸೂಕ್ತ ಚಿಕಿತ್ಸೆ ನೀಡುವರು.
- ಹೊರ ರೋಗಿ ಚಿಕಿತ್ಸೆ ಅಥವಾ ವಸತಿ ಸಹಿತ ಚಿಕಿತ್ಸಾಲಯದಲ್ಲಿ ಚಿಕಿತ್ಸೆ ನೀಡಬಹುದು.

- ಚಿಕಿತ್ಸೆಯನ್ನು ಹದಿಹರೆಯದವರ ಜೀವನದ ಹಲವಾರು ಕ್ಷೇತ್ರಗಳಿಗೆ ಅನ್ವಯಿಸಲಾಗುವುದು ಮತ್ತು ಪೋಷಕರೊಂದಿಗಿನ ಅವರ ಸಂಬಂಧವನ್ನು ಸುಧಾರಿಸಲಾಗುವುದು, ಪೋಷಕರು ಸಹ ತಮ್ಮ ಹದಿಹರೆಯದ ಮಕ್ಕಳ ಚಿಕಿತ್ಸೆಯಲ್ಲಿ ಪಾಲ್ಗೊಳ್ಳಬೇಕು. ಹದಿಹರೆಯದವರ ಮಾದಕ ವ್ಯಸನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪೋಷಕರ ಸಂಬಂಧ ಮಹತ್ತರವಾದ ಪಾತ್ರ ವಹಿಸುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–5**

ಈ ಕೆಳಗಿನ ಹೇಳಿಕೆಗಳನ್ನು ಸ್ಪಷ್ಟವಾಗಿ ಓದಿರಿ ಮತ್ತು ಮಾದಕ ವ್ಯಸನವುಳ್ಳವರ ವರ್ತನಾ ಚಿಹ್ನೆಗಳನ್ನು ಕಂಡುಹಿಡಿಯಿರಿ. ಈ ಕೆಳಗಿನ ಹೇಳಿಕೆಗಳನ್ನು ನೀವು ಮಾದಕವ್ಯಸನವುಳ್ಳವರ ಲಕ್ಷಣಕ್ಕೆ ಸಂಬಂಧಿಸಿದಂತೆ ಒಪ್ಪುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಸೂಕ್ತ ಕಾಲಂನಲ್ಲಿ '✓' ಚಿಹ್ನೆಯಿಂದ ಸೂಚಿಸಿರಿ.

| ಹೇಳಿಕೆಗಳು | ಒಪ್ಪುತ್ತೇನೆ | ಒಪ್ಪುವುದಿಲ್ಲ |
|---|---|---|
| 1. ಭಾವನಾತ್ಮಕ ದೂರವಾಗುವಿಕೆ, ಒಂಟಿತನ ಮತ್ತು ಖಿನ್ನತೆ | | |
| 2. ವೈಯಕ್ತಿಕ ನೋಟದ ಬಗ್ಗೆ ಆಸಕ್ತಿ ಹೆಚ್ಚಾಗುವಿಕೆ | | |
| 3. ಮನಸ್ಥಿತಿ, ಅಹಾರಭ್ಯಾಸ ಮತ್ತು ನಿದ್ರಾವಿಧಾನಗಳಲ್ಲಿ ಬದಲಾವಣೆ | | |
| 4. ತಲೆಸುತ್ತುವಿಕೆ ಮತ್ತು ನೆನಪಿನ ಸಮಸ್ಯೆಗಳು | | |
| 5. ಸಾಮಾಜೀಕರಣ ಮತ್ತು ಪರಿಪಕ್ವತೆ | | |
| 6. ಶಾಲೆಯಲ್ಲಿ ಉತ್ತಮ ಶ್ರೇಣಿಗಳು | | |
| 7. ಸಮವಯಸ್ಕರ ಹೆಚ್ಚಾದ ಪ್ರಭಾವ | | |
| 8. ಹಗೆತನ ಮತ್ತು ಮುಂಗೋಪ | | |

## 3.5.4. ಸಾರಾಂಶಿಸೋಣ :

- ಹದಿಹರೆಯದಲ್ಲಿ ಹೊಂದಾಣಿಕೆಯ ಸಮಸ್ಯೆಗಳಿಗೆ ಕಾರಣಗಳು – ಬದಲಾಗುವ ದೇಹ ಮತ್ತು ನೋಟ, ಕುಟುಂಬದಲ್ಲಿರುವ ಸವಾಲುಗಳು, ಕುಟುಂಬದ ಹೊರಗೆ – ಸಮವಯಸ್ಕರು, ಶಾಲೆ ಮತ್ತು ಇತರರ ಪ್ರಭಾವ, ಭಿನ್ನಲಿಂಗದವರೊಂದಿಗಿನ ಸಂಬಂಧ, ಅನನ್ಯತೆಯ ಸಮಸ್ಯೆ ಮತ್ತು ಭವಿಷ್ಯದ ಕಡೆಗೆ ನೋಡುವುದು ಇತ್ಯಾದಿ.
- ಹದಿಹರೆಯದವರಲ್ಲಿ ಬಾವೋದ್ವೇಗಗಳಿಗೆ ಕಾರಣ ಈ ಹಂತದಲ್ಲಿ ಬಿಡುಗಡೆಯಾಗುವ ಹಾರ್ಮೋನುಗಳು ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಪ್ರಭಾವ ಬೀರುತ್ತವೆ, ಅವರ ಚಟುವಟಿಕೆಗಳು ಅವರನ್ನು ಸಂತೋಷಭರಿತರನ್ನಾಗಿ, ಉದ್ರಿಕ್ತರನ್ನಾಗಿ, ಕೋಪೋದ್ರಿಕ್ತರನ್ನಾಗಿ ಅಥವಾ ಹುಚ್ಚರಂತೆ ವರ್ತಿಸುವಂತೆ ಮಾಡುತ್ತವೆ.
- ಹದಿಹರೆಯದವರ ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಇರುವ ಪ್ರಮುಖ ಅಡ್ಡಿಯೆಂದರೆ ಅವರ ಅಪಾಯಕಾರಿ ವರ್ತನೆಗಳು, ಈ ವರ್ತನೆಗಳು ವೈಯಕ್ತಿಕ, ಸಾಮಾಜಿಕ ಹಾಗೂ ಆರ್ಥಿಕಸಮಸ್ಯೆಗಳನ್ನೊಡ್ಡುತ್ತವೆ ಮತ್ತು ಅಪಘಾತಗಳು, ಹಿಂಸೆ ಮತ್ತು ಅಪರಾಧಗಳಿಂದ ಸಾವಿಗೆ ಈಡಾಗಬಹುದು.
- ಅನನ್ಯತೆಯ ಬಿಕ್ಕಟ್ಟು ಎಂಬುದು ಅನಿಶ್ಚಯತೆ ಮತ್ತು ಗೊಂದಲದ ಕಾಲದಲ್ಲಿದ್ದು, ನಿರೀಕ್ಷಿತ ಗುರಿಗಳು ಅಥವಾ ಸಮಾಜದ ಪಾತ್ರಗಳಲ್ಲಾಗುವ ಬದಲಾವಣೆಗಳಿಂದ ವ್ಯಕ್ತಿಯ ಅನನ್ಯತೆಯ ಭಾವನೆ ಅಭದ್ರವಾಗಿರುತ್ತದೆ.

- ಅನನ್ಯತೆಯ ಬಿಕ್ಕಟ್ಟಿಗೆ ಪ್ರಮುಖ ಕಾರಣಗಳೆಂದರೆ – ಅಸಮರ್ಪಕವಾಗಿ ಮಕ್ಕಳನ್ನು ಬೆಳೆಸುವುದು, ಪ್ರೋತ್ಸಾಹದ ಕೊರತೆ ಮತ್ತು ಅತೃಪ್ತಿಕರ ಹಿಂದಿನ ಅನುಭವಗಳು, ಒತ್ತಡ ಸಾಮಾಜಿಕ ಬೇಡಿಕೆಗಳು ಮತ್ತು ತೊಂದರೆಗಳು, ಉತ್ತಮ ವಿಚಾರಗಳು ಮತ್ತು ಮೌಲ್ಯಗಳ ಕೊರತೆ, ಪ್ರಾಯೋಗಿಕ ಪಾತ್ರ ಮತ್ತು ನಾಯಕನಾಗಿರುವುದು.
- ಮಕ್ಕಳು ಹದಿಹರೆಯ ಹಂತಕ್ಕೆ ಸಾಗಿದಂತೆ ಪೋಷಕ – ಮಕ್ಕಳ ಸಂಘರ್ಷಗಳು ಹೆಚ್ಚಾಗುತ್ತವೆ. ಇದ ನಡೆಯಲೇಬೇಕಾದ ಬದಲಾವಣೆ ಅಲ್ಲದಿದ್ದರೂ, ಇದು ಸಾಮಾನ್ಯವಾಗಿ ಕಂಡುಬರುತ್ತದೆ ಮತ್ತು ಪೋಷಕರು ಹಾಗೂ ಮಕ್ಕಳು ಇಬ್ಬರಿಗೂ ಬಹುವಾಗಿ ಕಾಡುವ ವಿಷಯವಾಗಿದೆ. ಹದಿಹರೆಯದವರು ಅವರ ಪೋಷಕರನ್ನು ತುಂಬಾ ಒರಟಾಗಿದ್ದಾರೆ, ನಿಯಂತ್ರಣ ಸಾಧಿಸುತ್ತಾರೆ ಮತ್ತು ಅತಾರ್ಕಿಕವಾಗಿದ್ದಾರೆ ಎಂದು ಭಾವಿಸುತ್ತಾರೆ. ಪೋಷಕರು ಸಹ ಸಹಕಾರ ಧೋರಣೆಯ ಹಾಗೂ ಜವಾಬ್ದಾರಿಯುತ ಮಕ್ಕಳು ಈಗ ಹಗೆತನ ಮತ್ತು ವಿನಾಶಕಾರಿ ವರ್ತನೆ ತೋರುತ್ತಿದ್ದಾರೆಂದು ಭಾವಿಸುತ್ತಾರೆ.
- ಹದಿಹರೆಯದವರು ದುರ್ಬಲ ಮನಸ್ಸಿನವರಾಗಿದ್ದು, ಬಹಳಬೇಗ ತಪ್ಪುದಾರಿಯ ಕಡೆ ಸಾಗುತ್ತಾರೆ. ವಿಶ್ವದಾದ್ಯಂತ ಇರುವ ಹದಿಹರೆಯದ ಪೋಷಕರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಬಹುದೊಡ್ಡ ಸಮಸ್ಯೆ ಮಾದಕ ವಸ್ತುಗಳ ದುರ್ಬಳಕೆ. ಮಾದಕ ವಸ್ತುಗಳ ವ್ಯಸನಕ್ಕೆ ಪ್ರಮುಖ ಕಾರಣಗಳೆಂದರೆ ಸಮವಯಸ್ಕರ ಒತ್ತಡ, ಅಪಾಯ ಎದುರಿಸುವ ಧೋರಣೆ, ಕೆಳಮಟ್ಟದ ಆತ್ಮಾಭಿಮಾನ, ತಪ್ಪು ಮಾದರಿಗಳು ಮತ್ತು ಸಾಕಷ್ಟಿಲ್ಲದ ಪೋಷಕರ ಮೇಲ್ವಿಚಾರಣೆ ಮತ್ತು ಮೇಲುಸ್ತುವಾರಿ ಇತ್ಯಾದಿ.

## 3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, 3, 4 ಮತ್ತು 5

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1–ಸರಿ, 3–ತಪ್ಪು, 3–ಸರಿ, 4–ತಪ್ಪು, 5–ಸರಿ, 6–ಸರಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1–(e), 2 –(a), 3–(b), 4–(c),

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1–√, 2–√, 3–x, 4–√, 5–x, 6–√, 7–x, 8–√,

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 4**

1–√, 2–√, 3–x, 4–√, 5–x, 6–√, 7–√, 8–x,

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 5**

1–ಒಪ್ಪುತ್ತೇನೆ, 2– ಒಪ್ಪುವುದಿಲ್ಲ, 3–ಒಪ್ಪುತ್ತೇನೆ, 4–ಒಪ್ಪುತ್ತೇನೆ,

5–ಒಪ್ಪುವುದಿಲ್ಲ, 6–ಒಪ್ಪುವುದಿಲ್ಲ, 7–ಒಪ್ಪುತ್ತೇನೆ, 8–ಒಪ್ಪುತ್ತೇನೆ.

## 3.5.6. ಘಟಕಾಂತ್ಯ ಅಭ್ಯಾಸಗಳು

1. ಹದಿಹರೆಯದವರಲ್ಲಿ ಹೊಂದಾಣಿಕೆಯ ಸಮಸ್ಯೆಗಳಿಗೆ ಪ್ರಮುಖಕಾರಣಗಳನ್ನು ವಿವರಿಸಿ.
2. ಹದಿಹರೆಯದವರಲ್ಲಿನ ಭಾವನಾತ್ಮಕ ತೊಂದರೆಗಳನ್ನು ಚರ್ಚಿಸಿರಿ.
3. ಅನನ್ಯತೆಯ ಬಿಕ್ಕಟ್ಟನ್ನು ವ್ಯಾಖ್ಯಾನಿಸಿ ಮತ್ತು ಹದಿಹರೆಯದ ಅನನ್ಯತೆಯ ಬಿಕ್ಕಟ್ಟಿಗೆ ಕಾರಣಗಳನ್ನು ವಿವರಿಸಿ.
4. ಹದಿಹರೆಯದಲ್ಲಿ ಪೋಷಕ – ಮಗುವಿನ ಸಂಘರ್ಷದ ಕಾರಣಗಳನ್ನು ವಿಶ್ಲೇಷಿಸಿ.
5. ಹದಿಹರೆಯದ ಹಂತದಲ್ಲಿ ಪೋಷಕ–ಮಗುವಿನ ಸಂಬಂಧ ಸುಧಾರಿಸಲು ಕ್ರಮಗಳನ್ನು ಸೂಚಿಸಿ.
6. ಮಾದಕ ವ್ಯಸನವನ್ನು ವ್ಯಾಖ್ಯಾನಿಸಿ ಮತ್ತು ಮಾದಕ ವ್ಯಸನಿಗಳ ವರ್ತನಾ ಚಿಹ್ನೆಗಳನ್ನು ತಿಳಿಸಿರಿ.
7. ಹದಿಹರೆಯ ಹಂತದಲ್ಲಿ ಮಾದಕ ವ್ಯಸನಕ್ಕೆ ಪ್ರಮುಖ ಕಾರಣಗಳನ್ನು ವಿವರಿಸಿ.
8. ಹದಿಹರೆಯದವರಲ್ಲಿ ಮಾದಕ ವ್ಯಸನದ ಸಮಸ್ಯೆ ಪರಿಹರಿಸಲು ಕ್ರಮಗಳನ್ನು ಸೂಚಿಸಿರಿ.

## 3.5.7. ಪರಾಮರ್ಶನ ಸೂಚಿ


1. Jagjiwan Kaur, Arpita Malhotra (2008), Adolescent adjustment problems and school counseling services as perceived by adolescents, educators and parents, Master's Thesis, 2008. http://m.grin.com/document
2. Natelle Boyd. Problems with adjustment in Adolescence https://study.com>academy>problems
3. Emotional disturbance – https://arksped.k12.ar.us>rules-regs-08
4. Gerald Marsden and Neil Kalter, Children's Understanding of Their emotionally disturbed peers – https://doi.org/10.1080/00332747.1976.11023892 journal psychiatry, volume 39, 1976 – Issue – 3.
5. Drenee Brown, What is identity crisis during adolescence. https://en.m.wikipedia.org.
6. Steinberg L.(2001), we know some things: parent adolescent relationship in retrospect and prospect, journal of Research on Adolescence, 11(1), 1-19.
7. Parent – Child relations in adolescence http://www.act for youth.net/resources/if/rf-patent.0302.pdf.
8. Bharath Chakravarthy, Shyam Shah, and Shahram Loffipour, Adolescent drug abuse – Awareness of Prevention, The Indian Journal of Medical Research.
9. Ramba Pathak, Ravic Sharma, UC Parvan et al. Behavioural and emotional problems in school going adolescents, Australian Medical Journal, AMJ, 2011, 4,1,15-21.
10. Adolescent Substance Abuse (2018) www.aamft.org/consult.


*********************

# ಬ್ಲಾಕ್ 3 : ಹದಿಹರೆಯದವರ ವಿಚಾರಗಳು ಮತ್ತು ಕಾಳಜಿಗಳು

# ಘಟಕ 6 : ಹದಿಹರೆಯದಲ್ಲಿ ಆರೋಗ್ಯದ ಅರಿವು – ವೈಯಕ್ತಿಕ ನೈರ್ಮಲ್ಯ, ಪೋಷಣೆ, ಕಾಯಿಲೆಗಳ ತಡೆಗಟ್ಟುವಿಕೆ ಮತ್ತು ರೋಗ ನಿಯಂತ್ರಣ

## ಘಟಕದ ರಚನೆ


3.6.1. ಕಲಿಕಾ ಉದ್ದೇಶಗಳು

3.6.2. ಪೀಠಿಕೆ

3.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.6.3.1. ಹದಿಹರೆಯದವರ ವೈಯಕ್ತಿಕ ನೈರ್ಮಲ್ಯ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.6.3.2. ಹದಿಹರೆಯದವರಲ್ಲಿ ಪೌಷ್ಟಿಕಾಂಶದ ಅರಿವು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.6.3.3. ಹದಿಹರೆಯದವರಲ್ಲಿ ಕಾಯಿಲೆಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ

ಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

3.6.4. ಸಾರಾಂಶಿಸೋಣ

3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

3.6.6. ಘಟಕಾಂತ್ಯ ಅಭ್ಯಾಸಗಳು

3.6.7. ಪರಾಮರ್ಶನ ಸೂಚಿ


## 3.6.1. ಕಲಿಕಾ ಉದ್ದೇಶಗಳು:

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಹದಿಹರೆಯದವರು ಆರೋಗ್ಯಕರವಾಗಿರಲು ಸಹಾಯಕವಾಗುವ ಅಭ್ಯಾಸವನ್ನು ಪಟ್ಟಿ ಮಾಡುವರು;
- ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳಲು ಕ್ರಮಗಳನ್ನು ಸೂಚಿಸುವರು;
- ಹದಿಹರೆಯ ಹಂತದಲ್ಲಿ ಪೋಷಣೆಯ ಪ್ರಾಮುಖ್ಯತೆಯನ್ನು ವಿವರಿಸುವರು;
- ಹದಿಹರೆಯ ಹಂತದಲ್ಲಿ ಅಗತ್ಯವಾದ ಆಹಾರದ ಪ್ರಮುಖ ಘಟಕಾಂಶಗಳನ್ನು ಪಟ್ಟಿ ಮಾಡುವರು;
- ಹದಿಹರೆಯದವರಲ್ಲಿ ಪೋಷಣೆಯ ಮೇಲೆ ಪ್ರಭಾವ ಬೀರುವ ಕಾರಕಗಳನ್ನು ವಿವರಿಸುವರು;
- ಸಮತೋಲನ ಆಹಾರದ ವ್ಯಾಖ್ಯೆ ನೀಡುವರು;
- ಹದಿಹರೆಯ ಹಂತದ ಆರೋಗ್ಯದ ಸಮಸ್ಯೆಗಳನ್ನು ವಿವರಿಸುವರು; ಮತ್ತು
- ಭಾರತದಲ್ಲಿನ ಹದಿಹರೆಯದ ಆರೋಗ್ಯ ಕಾರ್ಯಕ್ರಮಗಳನ್ನು ಚರ್ಚಿಸುವರು.

## 3.6.2. ಪೀಠಿಕೆ:

ಹದಿಹರೆಯದವರು ಹಲವಾರು ಆರೋಗ್ಯದ ಸಮಸ್ಯೆಗಳಿಗೆ ಒಳಗಾಗುತ್ತಾರೆ. ಭಾರತದಲ್ಲಿ ನಡೆದ ಅಧ್ಯಯನಗಳ ಪ್ರಕಾರ ಹದಿಹರೆಯದವರಲ್ಲಿ ಆರೋಗ್ಯದ ಅರಿವು ತುಂಬಾ ಕಡಿಮೆ. ಹದಿಹರೆಯದಲ್ಲಿ ಆರೋಗ್ಯ ಸಂಬಂಧಿ ಸಮಸ್ಯೆಗಳು ಪ್ರಾರಂಭವಾಗುತ್ತವೆ ಮತ್ತು ಇವುಗಳು ಮುಂದಿನ ವರ್ಷಗಳಿಗೂ ಮುಂದುವರೆಯುತ್ತವೆ. ಇವುಗಳಲ್ಲಿ ಆತ್ಮಹತ್ಯಾ ಪ್ರಯತ್ನಗಳು, ಗಾಯಗಳು ಮತ್ತು ಅಸುರಕ್ಷಿತ ಲೈಂಗಿಕ ವರ್ತನೆಯಿಂದ ಕಂಡುಬರುವ ಅಪಾಯಗಳು, ತೂಕ ಕಡಿಮೆಯಾಗುವುದು ಮತ್ತು ಇತರೆ ಪೌಷ್ಟಿಕಾಂಶದ ಕೊರತೆಗಳನ್ನು ಗಮನಿಸಬಹುದು. ಹದಿಹರೆಯದಲ್ಲಿ ಪ್ರಾರಂಭವಾಗುವ ಇತರೆ ವರ್ತನೆಗಳು ವಯಸ್ಕ ಹಂತದಲ್ಲಿನ ಸಾಂಕ್ರಾಮಿಕವಲ್ಲದ ಕಾಯಿಲೆಗಳಿಗೆ ಕಾರಣವಾಗುತ್ತವೆ. ಉದಾಹರಣೆಗೆ, ತಂಬಾಕು ಸೇವನೆ, ಮದ್ಯಪಾನ, ಅತಿಯಾದ ತೂಕ ಅಥವಾ ಬೊಜ್ಜು ಇತ್ಯಾದಿ. ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಹದಿಹರೆಯದವರು ಇಂತಹ ಅನಾರೋಗ್ಯಕರ ವರ್ತನೆಗಳನ್ನು ರೂಢಿಸಿಕೊಳ್ಳಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಈ ವರ್ತನೆಯನ್ನು ಆನಂದಿಸುವುದು, ಅಭ್ಯಾಸ ರೂಢಿಸಿಕೊಳ್ಳುವುದು, ಬೆಳಸಿಕೊಂಡ ಅಭ್ಯಾಸಬಿಡಲು ಸಾಧ್ಯವಾಗದಿರುವುದು ಮತ್ತು ಸಮವಯಸ್ಕರ ಒತ್ತಡ ಕಾರಣವಾಗುತ್ತವೆ. ಇವುಗಳ ಕುರಿತು ಹೆಚ್ಚಿನ ಅಂಶಗಳನ್ನು ಈ ಘಟಕದಲ್ಲಿ ಕಲಿಯೋಣ.

## 3.6.3.ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.6.3.1. ವೈಯಕ್ತಿಕ ನೈರ್ಮಲ್ಯ

ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಮತ್ತು ಬಾಹ್ಯ ದೇಹವನ್ನು ಅಂದಗೊಳಿಸುವ ಪ್ರಕ್ರಿಯೆಯನ್ನು ವೈಯಕ್ತಿಕ ನೈರ್ಮಲ್ಯ ಎಂದು ವ್ಯಾಖ್ಯಾನಿಸಲಾಗಿದೆ. ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳುವುದು ಸ್ನಾನ, ಕೈತೊಳೆಯುವುದು, ಹಲ್ಲುಜ್ಜುವುದು ಮತ್ತು ಬಟ್ಟೆಗಳನ್ನು ಶುಚಿಯಾಗಿಟ್ಟುಕೊಳ್ಳುವುದು ಮುಂತಾದವುಗಳನ್ನು ಒಳಗೊಂಡಿದೆ. ಇದರೊಂದಿಗೆ ಇತರರೊಡನೆ ಇರುವಾಗ ಸುರಕ್ಷಿತ ಹಾಗೂ ನೈರ್ಮಲ್ಯದ ಎಚ್ಚರಿಕೆಗಳನ್ನು ಕೈಗೊಳ್ಳುವುದೂ ಮುಖ್ಯವಾಗುತ್ತದೆ.

ವ್ಯಕ್ತಿ ತನ್ನ ದೇಹದ ಆರೋಗ್ಯ ಮತ್ತು ಸ್ವಾಸ್ಥತೆಯನ್ನು ಸ್ವಚ್ಛತೆಯ ಮೂಲಕ ರಕ್ಷಿಸಿಕೊಳ್ಳುವ ಅಭ್ಯಾಸಗಳನ್ನೇ ವೈಯಕ್ತಿಕ ನೈರ್ಮಲ್ಯ ಎನ್ನಬಹುದು. ಹದಿಹರೆಯದವರ ವರ್ತನೆಯು ಅವರ ಆರೋಗ್ಯ ಮತ್ತು ವಿಕಾಸದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಆರೋಗ್ಯಕರ ಆಹಾರಭ್ಯಾಸ ಮತ್ತು ಸಾಕಷ್ಟು ಪ್ರಮಾಣದ ದೈಹಿಕ ಚಟುವಟಿಕೆಗಳು ಆರೋಗ್ಯದ ಸಮಸ್ಯೆಗಳನ್ನು ತಡೆಗಟ್ಟುತ್ತವೆ.

ವೈಯಕ್ತಿಕ ನೈರ್ಮಲ್ಯವೆಂದರೆ ಕೇವಲ ಸ್ವಚ್ಛವಾಗಿರುವುದಷ್ಟೇ ಅಲ್ಲ. ಆರೋಗ್ಯವಾಗಿರಲು ಮತ್ತು ಆರೋಗ್ಯಕರವಾಗಿ ಮುಂದುವರೆಯಲು ಹಲವಾರು ಅಭ್ಯಾಸಗಳನ್ನು ಕೈಗೊಳ್ಳುವುದನ್ನೂ ಇದು ಒಳಗೊಳ್ಳುತ್ತದೆ. ಹದಿಹರೆಯದವರ ಹೆಚ್ಚಿನ ಆರೋಗ್ಯದ ಸಮಸ್ಯೆಗಳು ಅವರ ಚಟುವಟಿಕೆಗಳು ಮತ್ತು ಅಭ್ಯಾಸಗಳಿಗೆ ಸಂಬಂಧಿಸಿವೆ. ಹದಿಹರೆಯದವರು ಆಟಗಳು, ಹೊರಗಿನ ಪ್ರಪಂಚದ ಅನ್ವೇಷಣೆ, ಮನೆ ಮತ್ತು ಶಾಲೆಗಳಲ್ಲಿ ವಿಜ್ಞಾನ ಸಂಬಂಧಿ ಪ್ರಯೋಗಗಳನ್ನು ಕೈಗೊಳ್ಳುವಿಕೆಯಲ್ಲಿ ಸಕ್ರಿಯರಾಗಿರುತ್ತಾರೆ. ಈ ಚಟುವಟಿಕೆಗಳಲ್ಲಿ ಅವರು ದೂಳು, ಸೂಕ್ಷ್ಮ ಜೀವಿಗಳು ಮತ್ತು ರಾಸಾಯನಿಕ ವಸ್ತುಗಳ ಸಂಪರ್ಕ ಪಡೆಯುವ ಸನ್ನಿವೇಶಗಳಿರುತ್ತವೆ. ಹಾಗಾಗಿ ಅವುಗಳು ಹೇಗೆ ಅನಾರೋಗ್ಯಕ್ಕೆ ಕಾರಣವಾಗುತ್ತವೆ ಎಂಬುದನ್ನು ಅವರು ಅರಿತುಕೊಳ್ಳಬೇಕು. ಕೊಳೆಯಾದ ಕೈಗಳನ್ನು ಆಗಾಗ್ಗೆ ಸ್ವಚ್ಛಗೊಳಿಸಿಕೊಳ್ಳುವುದರಿಂದ ಟೈಫಾಯಿಡ್, ಕಾಲರಾ, ಹೊಟ್ಟೆಯಲ್ಲಿ ಹುಳುಗಳ ಬಾಧೆ ಮುಂತಾದವುಗಳಿಂದ ತಪ್ಪಿಸಿಕೊಳ್ಳಬಹುದು, ಜಾಗತಿಕವಾಗಿ ಪ್ರತಿ 30 ಸೆಕೆಂಡಿಗೆ ಒಂದು ಮಗು ಆಮಶಂಕೆಯ ಸೋಂಕಿನಿಂದ ಸಾವೀಗೀಡಾಗುತ್ತಿದೆ. ಸರಳ ಸಾಬೂನಿನಿಂದ ಕೈ ತೊಳೆದುಕೊಳ್ಳುವ ಮೂಲಕ ಇದನ್ನು ಶೇ.47 ರಷ್ಟು ಕಡಿಮೆ ಮಾಡಬಹುದಾಗಿದೆ.

ಹದಿಹರೆಯದವರಲ್ಲಿ ನಿದ್ರಾ ಚಕ್ರ, ಪೋಷಣೆ ಹಾಗೂ ಸ್ವಚ್ಛತೆಗಳಿಗೆ ಸಂಬಂಧಿಸಿದಂತೆ ಉತ್ತಮ ಹವ್ಯಾಸಗಳನ್ನು ಬೆಳೆಸುವುದರಿಂದ ಅವರ ಶೈಕ್ಷಣಿಕ ಸಾಧನೆಯನ್ನು ಸುಧಾರಿಸಬಹುದಾಗಿದೆ. ಹದಿಹರೆಯದವರು ಬೆಳೆಯುತ್ತಿರುವ

ತಮ್ಮ ದೇಹದ ಬದಲಾವಣೆಗಳನ್ನು ತಿಳಿದಿರಬೇಕು. ದಿನನಿತ್ಯ ಸ್ನಾನ ಮಾಡುವುದು, ಸೂಕ್ತ ಸಾಬೂನಿನ ಬಳಕೆ, ಹಲ್ಲು ಮತ್ತು ಬಾಯಿಯ ನೈರ್ಮಲ್ಯ ಕಾಪಾಡಿಕೊಳ್ಳುವಿಕೆ, ಕಣ್ಣು ಮತ್ತು ಕಿವಿಗಳ ಬಗ್ಗೆ ಎಚ್ಚರವಹಿಸುವುದು ಮತ್ತು ಬಾಹ್ಯ ದೇಹವನ್ನು ಅಂದವಾಗಿಟ್ಟುಕೊಳ್ಳುವಿಕೆ ಇವು ಹದಿಹರೆಯದವರು ಕೈಗೊಳ್ಳಬೇಕಾದ ಕೆಲವು ಪ್ರಮುಖ ಚಟುವಟಿಕೆಗಳು. ಹದಿಹರೆಯದ ಹುಡುಗರು ಮತ್ತು ಹುಡುಗಿಯರು ವೈಯಕ್ತಿಕ ನೈರ್ಮಲ್ಯದ ಬಗ್ಗೆ ತಪ್ಪುಕಲ್ಪನೆ ಹೊಂದಿರುತ್ತಾರೆ. ಇವುಗಳು ಅವರ ಅನಾರೋಗ್ಯಕ್ಕೆ ಹಲವಾರು ರೀತಿಯಲ್ಲಿ ಕಾರಣವಾಗುತ್ತವೆ. ಹದಿಹರೆಯದವರ ಬಗ್ಗೆ ಸಾಕ್ಷ್ಯಾಧಾರಗಳು ಸೂಚಿಸುವಂತೆ, ಅವರು ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಂಡರೆ, ಚರ್ಮ ಸೋಂಕು ಹಾಗೂ ಇತರೆ ಸಾಂಕ್ರಾಮಿಕ ರೋಗಗಳಿಗೆ ಒಳಗಾಗುವ ಸಾಧ್ಯತೆ ಕಡಿಮೆಯಾಗುತ್ತದೆ.

ಬಾಲ್ಯಾವಸ್ಥೆ ಮತ್ತು ಹದಿಹರೆಯದಲ್ಲಿ ರೂಢಿಸಿಕೊಂಡ ಹವ್ಯಾಸಗಳು ಬಹಳಕಾಲದ ಪರಿಣಾಮ ಹೊಂದಿದ್ದು ವಯಸ್ಕರ ಹಂತದಲ್ಲಿಯೂ ಪ್ರಭಾವ ಬೀರುತ್ತವೆ. ದುರ್ಬಲ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ಸನ್ನಿವೇಶಗಳಲ್ಲಿರುವ ಹದಿಹರೆಯದವರು ವಿಶೇಷವಾಗಿ ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳಲು ಅಗತ್ಯವಾದ ಮಾಹಿತಿ ಮತ್ತು ಕೌಶಲಗಳಿಸಿಕೊಳ್ಳಬೇಕಾಗುತ್ತದೆ. ಇದು ಅವರ ಪ್ರಸ್ತುತ ಆರೋಗ್ಯವನ್ನು ಕಾಪಾಡುವುದಲ್ಲದೆ ಭವಿಷ್ಯದ ಅವರ ಆರೋಗ್ಯವನ್ನು ಸುಭದ್ರಗೊಳಿಸಿ ಅವರ ಸಾವಿನ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಉತ್ತಮ ವೈಯಕ್ತಿಕ ನೈರ್ಮಲ್ಯದ ನಿಯಮಗಳು ಮತ್ತು ಉತ್ತಮ ಜೀವನದ ಹವ್ಯಾಸಗಳನ್ನು ರೂಢಿಸಿಕೊಂಡರೆ ಹದಿಹರೆಯದವರು ಅವರಿಗೆ ಮಾತ್ರ ಸಹಾಯ ಮಾಡಿಕೊಳ್ಳುವುದಲ್ಲದೆ ಇತರರಿಗೂ ಸಹ ನೆರವಾಗುತ್ತಾರೆ. ವಿದ್ಯಾರ್ಥಿಗಳು ತಾವು ಸ್ವಚ್ಛವಾಗಿರುವುದರಿಂದ ಇತರರಿಗೆ ರೋಗಾಣುಗಳನ್ನು ಹರಡುವುದಿಲ್ಲ. ಸರಳ ಕ್ರಮಗಳನ್ನು ಕೈಗೊಳ್ಳುವ ಮೂಲಕ ಕಾಯಿಲೆಗಳ ಹರಡುವಿಕೆಯನ್ನು ತಡೆಯಬಹುದಾಗಿದೆ. ವಿದ್ಯಾರ್ಥಿಗಳು ಸಾಕಷ್ಟು ನಿದ್ರೆ ಮಾಡುವುದು, ಸರಿಯಾದ ಉಪಹಾರ ಸೇವಿಸುವುದು, ಹಲ್ಲುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಸ್ನಾನ ಮತ್ತು ಉತ್ತಮ ಆರೋಗ್ಯಕರ ಆಹಾರ ಸೇವಿಸುವುದು ಇವುಗಳ ಮೂಲಕ ರೋಗಾಣುಗಳ ಹರಡುವಿಕೆಯನ್ನು ತಡೆಯಬಹುದಾಗಿದೆ. ವೈಯಕ್ತಿಕ ನೈರ್ಮಲ್ಯದ ಉತ್ತಮ ಅಭ್ಯಾಸಗಳನ್ನು ಪಾಲಿಸುವ ಮೂಲಕ ವಿದ್ಯಾರ್ಥಿಗಳು ಉತ್ತಮ ಆರೋಗ್ಯ ಹೊಂದಬಹುದು, ಹದಿಹರೆಯದಲ್ಲಿ ರೂಢಿಸಿಕೊಂಡ ಉತ್ತಮ ಅಭ್ಯಾಸಗಳು ಆರೋಗ್ಯಕರ ವಯಸ್ಕರ ಜೀವನಕ್ಕೆ ತಳಹದಿಯಾಗುತ್ತವೆ. ಶಾಲಾ ತರಗತಿಗಳಲ್ಲಿ ಉತ್ತಮ ನೈರ್ಮಲ್ಯದ ಅಭ್ಯಾಸಗಳನ್ನು ಬೆಳೆಸುವ ಮೂಲಕ ಹದಿಹರೆಯದವರ ಆರೋಗ್ಯವನ್ನು ಉತ್ತೇಜಿಸಬಹುದಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಕೆಳಗಿನ ಹೇಳಿಕೆಗಳಲ್ಲಿ 'ಸರಿ' ಅಥವಾ 'ತಪ್ಪು' ಹೇಳಿಕೆಗಳನ್ನು ಗುರುತಿಸಿ ಪ್ರತಿ ಹೇಳಿಕೆಯ ಮುಂದೆ ಸೂಕ್ತ ಕಾಲಂನಲ್ಲಿ (✓) ಗುರುತಿನೊಂದಿಗೆ ಗುರುತಿಸಿ.

| ಕ್ರ.ಸಂ. | ವೈಯಕ್ತಿಕ ನೈರ್ಮಲ್ಯದ ಹೇಳಿಕೆಗಳು | ಸತ್ಯ | ಮಿಥ್ಯ |
|---|---|---|---|
| 1. | ಕೈಯಲ್ಲಿರುವ ಸೂಕ್ಷ್ಮಾಣುಗಳನ್ನು ನಾಶಮಾಡುವುದರಿಂದ ರೋಗನಿರೋಧಕ ಶಕ್ತಿ ಸ್ಥಿರವಾಗಿರುತ್ತದೆ. | | |
| 2. | ದುರ್ವಾಸನೆ ಕೇವಲ ಕೆಳಮಟ್ಟದ ಬಾಯಿ ನೈರ್ಮಲ್ಯದಿಂದ ಉಂಟಾಗುವುದಿಲ್ಲ. | | |
| 3. | ಉತ್ತಮ ಸೂಕ್ಷ್ಮಾಣುಗಳನ್ನು ಹೊಂದುವುದರಿಂದ ಕೆಟ್ಟ ಸೂಕ್ಷ್ಮಣುಗಳಿಂದ ರಕ್ಷಿಸಿಕೊಳ್ಳಬಹುದು. | | |
| 4. | ಸೂಕ್ಷ್ಮಾಣುಗಳನ್ನು ಕೊಲ್ಲಲು ಕೈ ನಿರ್ಮಲೀಕಾರಕಗಳು ಉತ್ತಮ | | |
| 5. | ಸಾಬೂನು ರೋಗಾಣುಗಳನ್ನು ಕೊಲ್ಲುತ್ತದೆ. | | |
| 6. | ಕೂದಲನ್ನು ದಿನನಿತ್ಯ ತೊಳೆದುಕೊಳ್ಳಬೇಕು. | | |
| 7. | ಸಾರ್ವಜನಿಕ ಶೌಚಾಲಯಗಳ ಬಳಕೆ ಲೈಂಗಿಕ ಸಾಂಸರ್ಗಿಕ ಖಾಯಿಲೆಗಳಿಗೆ ಕಾರಣವಾಗುತ್ತದೆ. | | |
| 8. | ಹಲ್ಲುಗಳನ್ನು ಶುಚಿಯಾಗಿಟ್ಟುಕೊಳ್ಳಲು ಅವುಗಳನ್ನು ನಿಯಮಿತವಾಗಿ ಉಜ್ಜಬೇಕು. | | |

## 3.6.2. ಹದಿಹರೆಯದವರಲ್ಲಿ ಪೋಷಣೆಯ ಅರಿವು:

ಪೋಷಣೆ ಎಂಬುದು ಒಂದು ವಿಜ್ಞಾನವಾಗಿದ್ದು ಪೌಷ್ಟಿಕಾಂಶ ಮತ್ತು ಬೆಳವಣಿಗೆ, ಸಂತಾನೋತ್ಪತ್ತಿ ಮತ್ತು ಆರೋಗ್ಯದ ನಡುವಿನ ಸಂಬಂಧವನ್ನು ಸೂಚಿಸುವುದಲ್ಲದೆ, ಆಹಾರ ಸೇವಿಸುವ ಪ್ರಮಾಣ, ಅದನ್ನು ಹೀರಿಕೊಳ್ಳುವಿಕೆ ಮತ್ತು ದೇಹದಲ್ಲಿ ಅದರ ಬಳಕೆಗಳನ್ನು ಒಳಗೊಳ್ಳುತ್ತದೆ. 'ಗುಂಡಿ ಒತ್ತುವ ನಾಗರೀಕತೆ' ಎಂದು ಹೇಳಲಾಗುವ ಇಂದಿನ ಪ್ರಪಂಚದಲ್ಲಿ ಹದಿಹರೆಯದವರು ತಕ್ಷಣದಲ್ಲಿ ತಯಾರಾಗುವ ಆಹಾರವನನು ಬಯಸುತ್ತಾರೆ. ಪ್ರತಿಯೊಬ್ಬರ ಆರೋಗ್ಯ ಸ್ಥಿತಿ, ಅವರ ಪೌಷ್ಟಿಕಾಂಶದ ಅರಿವು ಮತ್ತು ಅದರ ಮಹತ್ವದ ಮೇಲೆ ಅವಲಂಬಿಸಿರುತ್ತದೆ. ಹದಿಹರೆಯದವರು ಸರಿಯಾದ ಪ್ರಮಾಣದ ಪೌಷ್ಟಿಕ ಆಹಾರ ಸೇವಿಸಬೇಕು. ಏಕೆಂದರೆ ಇದರ ಅಭ್ಯಾಸ ಮತ್ತು ಪರಿಣಾಮ ವಯಸ್ಕ ಹಂತಕ್ಕೂ ಮುಂದುವರೆಯುತ್ತದೆ.

ಹದಿಹರೆಯ ಎನ್ನುವುದು ಬಾಲ್ಯಾವಸ್ಥೆ ಮತ್ತು ಪ್ರೌಢಾವಸ್ಥೆಯ ನಡುವಿನ ಜೀವನದ ಸಂಕ್ರಮಣ ಕಾಲ ಎಂದು ಹೇಳುತ್ತಲೇ ಬಂದಿದ್ದೇವೆ. ಈ ಹಂತದಲ್ಲಿ ಬೆಳವಣಿಗೆಯ ಬುಗ್ಗೆಯಿಂದ ಎತ್ತರ ಮತ್ತು ತೂಕಗಳಲ್ಲಿ ಹೆಚ್ಚಳ, ಶಾರೀರಿಕ ವಿಕಾಸ, ಲೈಂಗಿಕ ಪರಿಪಕ್ವತೆ ಮತ್ತು ಬೌದ್ಧಿಕ ವಿಕಾಸಗಳು ಕಂಡುಬರುತ್ತವೆ. ಹದಿಹರೆಯ ಎನ್ನುವುದು ಜೀವನದ ನಿರ್ದಿಷ್ಟ ಹಂತವಾಗಿದ್ದು ಈ ಹಂತದಲ್ಲಿ ತೀವ್ರಗತಿಯಿಂದ ದೈಹಿಕ, ಬೌದ್ಧಿಕ ಹಾಗೂ ಮನೋಸಾಮಾಜಿಕ ವಿಕಾಸಗಳು ನಡೆಯುತ್ತವೆ. ಪೌಷ್ಟಿಕಾಂಶಗಳು ಆಹಾರದ ಘಟಕಗಳಾಗಿದ್ದು ವ್ಯಕ್ತಿಯ ಬದುಕು ಮತ್ತು ಬೆಳವಣಿಗೆಗೆ ಅವು ಅಗತ್ಯವಾಗುತ್ತವೆ. ದೊಡ್ಡ ಪ್ರಮಾಣದ ಪೌಷ್ಟಿಕಾಂಶಗಳು ವ್ಯಕ್ತಿಯ ಚಯಾಪಚಯ ಕ್ರಿಯೆಗೆ ಅಗತ್ಯವಾದ ಹೆಚ್ಚಿನ ಪ್ರಮಾಣದ ಶಕ್ತಿಯನ್ನು ಒದಗಿಸಿದರೆ, ಸೂಕ್ಷ್ಮ ಪೌಷ್ಟಿಕಾಂಶಗಳು ಚಯಾಪಚಯ ಕ್ರಿಯೆ ನಡೆಸಲು ಅಗತ್ಯವಾದ ಪೂರಕಾಂಶಗಳನ್ನು ಒದಗಿಸುತ್ತವೆ.

**ಹದಿಹರೆಯದವರ ಪೌಷ್ಟಿಕ ಆಹಾರದ ಅಗತ್ಯತೆಗಳು:**

ಹದಿಹರೆಯ ಎಂಬುದು ದೈಹಿಕ ಬೆಳವಣಿಗೆ ಮತ್ತು ಲೈಂಗಿಕ ಪರಿಪಕ್ವತೆ ಕಂಡುಬರುವ ಮಹತ್ವ ಪೂರ್ಣವಾದ ಹಂತ. ಹದಿಹರೆಯದವರ ದೈಹಿಕ ಬೆಳವಣಿಗೆಯ ಪ್ರಮುಖ ನಿರ್ಧಾರಕ ಅಂಶ ಪೌಷ್ಟಿಕಾಂಶವಾಗಿರುವುದರಿಂದ ಅದರ ಬಗ್ಗೆ ಗಮನಹರಿಸುವ ಅಗತ್ಯವಿದೆ. ಹದಿಹರೆಯದವರ ಬೆಳವಣಿಗೆ ಕುಂಠಿತಗೊಳ್ಳದಂತೆ ಅವರ ಪೋಷಕರು ಮತ್ತು ಆರೋಗ್ಯ ಕಾರ್ಯಕರ್ತರು ಅವರ ಆರೋಗ್ಯದ ಕುರಿತು ಪ್ರಮುಖ ಕಾಳಜಿ ವಹಿಸಬೇಕಾಗಿದೆ. ಹದಿಹರೆಯದಲ್ಲಿ ಅಸಮರ್ಪಕ ಪೌಷ್ಟಿಕ ಆಹಾರದ ಸೇವನೆ ಸಂತಾನೋತ್ಪತ್ತಿಯ ವರ್ಷಗಳು ಮತ್ತು ನಂತರದ ವರ್ಷಗಳಲ್ಲಿ ತೀವ್ರತರವಾದ ಪರಿಣಾಮ ಬೀರುತ್ತದೆ.

ಹದಿಹರೆಯ ಹಂತದಲ್ಲಿ ಅಪೌಷ್ಟಿಕ ಆಹಾರ ಸೇವನೆಯಿಂದ ಅವರ ಕಾರ್ಯಕ್ಷಮತೆ ಮತ್ತು ನಂತರದ ವರ್ಷಗಳಲ್ಲಿ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ. ಪೋಷಣೆ ಸಮರ್ಪಕ ಮಟ್ಟದಲ್ಲಿಲ್ಲದ ಹುಡುಗಿ ಗರ್ಭಧಾರಣೆಯ ಸಂದರ್ಭದಲ್ಲಿ ತೊಂದರೆಗಳನ್ನು ಎದುರಿಸುತ್ತಾಳೆ ಮತ್ತು ಆಕೆ ಕಡಿಮೆ ತೂಕದ ಮಗುವಿಗೆ ಜನ್ಮ ನೀಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದರ ಜೊತೆಗೆ ಅವರು ಶಾಶ್ವತವಾಗಿ ಅಪೌಷ್ಟಿಕತೆ ಹಾಗೂ ಅನಾರೋಗ್ಯದ ಸಮಸ್ಯೆ ಎದುರಿಸುತ್ತಾರೆ.

**ಆಹಾರದ ಪ್ರಮುಖ ಘಟಕಾಂಶಗಳು:**

ದೇಹದಲ್ಲಿ ವಿವಿಧ ಕಾರ್ಯಗಳನ್ನು ನಿರ್ವಹಿಸುವಂತಹ ಆಹಾರದ ಪ್ರಮುಖ ಘಟಕಾಂಶಗಳೆಂದರೆ – ಪ್ರೋಟಿನ್, ಕೊಬ್ಬು, ಕಾರ್ಬೋಹೈಡ್ರೇಟ್‌ಗಳು, ಲವಣಗಳು ಮತ್ತು ವಿಟಮಿನ್‌ಗಳು.

**ಆಹಾರದ ಘಟಕಾಂಶಗಳ ವಿವಿಧ ಕಾರ್ಯಗಳು:**

- ಪ್ರೋಟಿನ್‌ಗಳು ಪೋಷಣೆಗೆ ಬಹಳ ಮುಖ್ಯವಾದವುಗಳು. ಇವುಗಳು ದೇಹದ ಬೆಳವಣಿಗೆ, ದೇಹದ ಅಂಗಾಂಶಗಳ ಕಾಯ್ದುಕೊಳ್ಳುವಿಕೆಗೆ ಮತ್ತು ದೋಷಗಳನ್ನು ಸರಿಪಡಿಸುವಿಕೆಗೆ ನೆರವಾಗುತ್ತವೆ.

- ಕೊಬ್ಬಿನ ಪದಾರ್ಥಗಳು ಹೆಚ್ಚು ಶಕ್ತಿ ನೀಡುವ ಆಹಾರ ಪದಾರ್ಥಗಳು ಶಕ್ತಿಯ ಮೂಲಗಳಾಗಿವೆ. ಇವು ಆಹಾರವನ್ನು ರುಚಿಕರವನ್ನಾಗಿಸುತ್ತವೆ ಮತ್ತು ಕೊಬ್ಬಿನಲ್ಲಿ ಕರಗುವ ವಿಟಮಿನ್‌ಗಳನ್ನು ಒದಗಿಸುತ್ತವೆ.
- ಕಾರ್ಬೋಹೈಡ್ರೇಟ್‌ಗಳು (ಶರ್ಕರ ಪಿಷ್ಟಗಳು) ಆಹಾರದ ಪ್ರಮುಖ ಘಟಕಾಂಶವಾಗಿದ್ದು, ದೇಹಕ್ಕೆ ಶಕ್ತಿಯನ್ನು ಒದಗಿಸುವ ಮೂಲಗಳಾಗಿವೆ.
- ವಿಟಮಿನ್‌ಗಳು ಮತ್ತು ಮಿನರಲ್‌ಗಳು ಅಲ್ಪ ಪ್ರಮಾಣದಲ್ಲಿ ಬೇಕಾಗಿರುತ್ತವೆ. ಇವು ದೇಹಕ್ಕೆ ಶಕ್ತಿಯನ್ನು ನೀಡದಿದ್ದರೂ ಸಹ, ದೇಹ ಬಳಸಿಕೊಳ್ಳಲು ಅಗತ್ಯವಾದ ಇತರೆ ಪೋಷಕಾಂಶಗಳಿಗೆ ನೆರವಾಗುತ್ತವೆ. ಇವು ದೇಹದ ಬೆಳವಣಿಗೆ, ದುರಸ್ತಿ ಮತ್ತು ದೇಹದ ಪ್ರಮುಖ ಕಾರ್ಯಗಳನ್ನು ನಿಯಂತ್ರಿಸುವಲ್ಲಿ ಸಹಾಯವಾಗುತ್ತವೆ.
- ಹದಿಹರೆಯದ ತೀವ್ರಗತಿಯ ಬೆಳವಣಿಗೆಯಿಂದಾಗಿ ಕಬ್ಬಿಣ ಮತ್ತು ಕ್ಯಾಲ್ಸಿಯಂಗಳ ಅಗತ್ಯತೆ ಹೆಚ್ಚಾಗಿದೆ.
- ಹದಿಹರೆಯದಲ್ಲಿ ದೇಹದ ಗಾತ್ರ ಮತ್ತು ಮೂಳೆಗಳ ಬೆಳವಣಿಗೆಗೆ ಕ್ಯಾಲ್ಸಿಯಂನ ಅಗತ್ಯತೆ ಪ್ರೌಢಾವಸ್ಥೆಗಿಂತ ಹೆಚ್ಚಾಗಿ ಕಂಡುಬರುತ್ತದೆ.
- ಹದಿಹರೆಯ ಹಂತದಲ್ಲಿ ದೇಹದ ಬೆಳವಣಿಗೆ ಮತ್ತು ಲೈಂಗಿಕ ಪರಿಪಕ್ವತೆಯ ಹಿನ್ನೆಲೆಯಲ್ಲಿ ಸತುವಿನ ಅಂಶ ಅತ್ಯಂತ ಅಗತ್ಯವಾಗಿದೆ. ಕಾಳುಗಳು, ಎಣ್ಣೆ ಬೀಜಗಳು, ಮಾಂಸ, ಬೆಣ್ಣೆ ಮತ್ತು ಹಾಲು ಸತುವನ್ನು ಒದಗಿಸುವ ಮೂಲಗಳಾಗಿವೆ.

**ಸಮತೋಲನ ಆಹಾರ:**

ಸಮತೋಲನ ಆಹಾರವೆಂದರೆ ದೇಹದ ಬೆಳವಣಿಗೆ ಹಾಗೂ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳಲು ಅಗತ್ಯವಾದ ಎಲ್ಲಾ ಪೌಷ್ಟಿಕಾಂಶಗಳನ್ನು (ಕಾಬೋಹೈಡ್ರೇಟ್‌ಗಳು, ಪ್ರೋಟಿನ್‌ಗಳು, ಕೊಬ್ಬು, ವಿಟಮಿನ್‌ಗಳು ಮತ್ತು ಲವಣಗಳು) ಅಗತ್ಯವಾದ ಪ್ರಮಾಣ ಮತ್ತು ಅನುಪಾತಗಳಲ್ಲಿ ಹೊಂದಿರುವುದು. ಪ್ರಮುಖವಾಗಿ ನಾಲ್ಕು ಮೂಲ ಆಹಾರ ಗುಂಪುಗಳ ಮೂಲಕ ಸಮತೋಲನವನ್ನು ಸಾದಿಸಬಹುದು. ಇದಕ್ಕಾಗಿ ಬೇಳೆ ಪದಾರ್ಥಗಳು, ಚಪಾತಿ, ಅನ್ನ, ಹಸಿರು ತರಕಾರಿಗಳು, ಸುಲಭವಾಗಿ ದೊರೆಯುವ ಹಣ್ಣುಗಳು ಮತ್ತು ಹಾಲುಗಳನ್ನು ಸರಿಯಾದ ಪ್ರಮಾಣದಲ್ಲಿ ಪ್ರತಿದಿನ ಸೇವಿಸಬೇಕು.

**ಹದಿಹರೆಯದವರ ಪೋಷಣೆಯ ಮೇಲೆ ಋಣಾತ್ಮಕ ಪ್ರಭಾವ ಬೀರುವ ಅಂಶಗಳು:**

- ಕುಟುಂಬ ಮತ್ತು ಸಮುದಾಯಗಳಲ್ಲಿ ಹದಿಹರೆಯದವರ ಪೋಷಣೆಯ ಪ್ರಾಮುಖ್ಯತೆಯ ಜ್ಞಾನದ ಕೊರತೆ.
- ಸಾಮಾಜಿಕ, ಆರ್ಥಿಕ ಸನ್ನಿವೇಶಗಳಿಂದ ಆಹಾರದ ಕೊರತೆ.
- ಕುಟುಂಬದಲ್ಲಿ ಮಕ್ಕಳಿಗೆ ಆಹಾರದ ಅಸಮರ್ಪಕ ಹಂಚಿಕೆ, ಹೆಣ್ಣು ಮಕ್ಕಳಿಗೆ ಪೌಷ್ಟಿಕ ಆಹಾರ ನೀಡದೆ ಇರುವುದು.
- ಸಮತೋಲನ ಆಹಾರ ಸೇವಿಸದಿರುವುದು ಮತ್ತು ಕಬ್ಬಿಣದ ಅಂಶ ಇಲ್ಲದಿರುವ ತರಕಾರಿ ಸೇವನೆ.
- ಆಹಾರದಲ್ಲಿ ಜೈವಿಕವಾದ ಕಬ್ಬಿಣಾಂಶ ದೊರೆಯದಿರುವುದು.
- ಕೊಕ್ಕೆ ಹುಳುಗಳು ಆವರಿಸಿರುವಿಕೆ.
- ಮಲೇರಿಯಾದಂತಹ ಕಾಯಿಲೆಗಳು.
- ಅಡುಗೆ ತಯಾರಿಸುವ ಉತ್ತಮ ಅಭ್ಯಾಸಗಳ ಕೊರತೆ (ತರಕಾರಿಗಳನ್ನು ಹೆಚ್ಚಾಗಿ ಬೇಯಿಸುವುದು, ಮತ್ತು ಅದರಿಂದ ನೀರು ಬಸಿಯುವುದು, ಗೋದಿಯಿಂದ ಹೊಟ್ಟನ್ನು ಸಂಪೂರ್ಣ ಬೇರ್ಪಡಿಸುವಿಕೆವುದು,

ಸಂಪೂರ್ಣ ಪಾಲಿಶ್ ಮಾಡಿದ ಅಕ್ಕಿಯಿಂದ ಅನ್ನ ತಯಾರಿಸುವುದು, ಅನ್ನ ಬಸಿಯುವ ಮೂಲಕ ಗಂಜಿ ಬೇರ್ಪಡಿಸುವುದು ಇತ್ಯಾದಿ).

- ಸಮವಯಸ್ಕರು, ಸಮೂಹ ಮಾಧ್ಯಮ ಮತ್ತು ಪ್ರಚಲಿತ ದೇಹ ಬಿಂಬದ ಪ್ರಭಾವ
- ಅಪೌಷ್ಟಿಕತೆ ಮತ್ತು ಸೋಂಕುಗಳು ಚಕ್ರದ ರೀತಿ ಮುಂದುವರೆಯುವುದರಿಂದ, ಇವುಗಳು ಹುಟ್ಟಿಗಿಂತ ಮೊದಲೇ ಪ್ರಾರಂಭವಾಗಿರುತ್ತದೆ ಮತ್ತು ಹೆಣ್ಣು ಮಕ್ಕಳ ಮೇಲೆ ತೀವ್ರ ಪರಿಣಾಮ ಬೀರುತ್ತವೆ.

ಹದಿಹರೆಯದವರ ಆಹಾರ ಸೇವನೆಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ಗಮನದಲ್ಲಿಡಬೇಕು.

- ಆಹಾರದ ಆಯ್ಕೆ ಪ್ರಮುಖವಾಗಿ ಆಹಾರದ ಲಭ್ಯತೆ, ಅನುಕೂಲತೆ ಮತ್ತು ಸಮಯವನ್ನು ಆಧರಿಸುತ್ತದೆಯೇ ಹೊರತು ಆಹಾರದ ಮೌಲ್ಯವನ್ನಲ್ಲ.
- ವೈಯಕ್ತಿಕ ಆತ್ಮಪರಿಕಲ್ಪನೆ ಮತ್ತು ದೇಹದ ಚಿತ್ರಣಗಳು ಅವರ ಆಹಾರ ಸೇವಿಸುವ ವರ್ತನೆಗೆ ಮಾರ್ಗದರ್ಶಿಯಾಗುತ್ತವೆ.
- ಊಟ ಹಾಗೂ ಉಪಹಾರಗಳನ್ನು ತಪ್ಪಿಸುವುದು ಈ ಹಂತದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.
- ಫಾಸ್ಟ್ ಫುಡ್ ಮಳಿಗೆಗಳನ್ನು ಪೋಷಿಸುವವರೇ ಹದಿಹರೆಯದವರು. ಇವುಗಳು ಇವರ ನಿಯಮಿತ ಊಟದ ಹಸಿವನ್ನು ಹಾಳುಮಾಡುತ್ತವೆ ಮತ್ತು ಈ ಆಹಾರ ಪದಾರ್ಥಗಳು ಹೆಚ್ಚಿನ ಕ್ಯಾಲೋರಿ ಹೊಂದಿರುತ್ತವೆ ಆದರೆ ಪೌಷ್ಟಿಕಾಂಶಗಳ ಕೊರತೆಯಿರುತ್ತದೆ.
- ಆಹಾರ ತೀವ್ರತರವಾದ ಮತ್ತು ಸಂಪೂರ್ಣ ಬೆಳವಣಿಗೆ ಸಾಧಿಸಲು ನೆರವಾಗುತ್ತವೆ.
- ಪೌಷ್ಟಿಕ ಆಹಾರ ನಿಗದಿತ ಸಮಯದಲ್ಲಿ ಲೈಂಗಿಕ ಪರಿಪಕ್ವತೆಯಾಗಲು ನೆರವಾಗುತ್ತದೆ.
- ಪೌಷ್ಟಿಕ ಆಹಾರ ಸೇವನೆಯಿಂದ ಮೂಳೆಗಳಲ್ಲಿ ಹೆಚ್ಚು ಕ್ಯಾಲ್ಸಿಯಂ ಸಂಗ್ರಹಗೊಳ್ಳುತ್ತದೆ ಮತ್ತು ಮೂಳೆಗಳ ದೃಢತೆ ಸಾಧಿಸಲು ನೆರವಾಗುತ್ತದೆ.
- ಪೌಷ್ಟಿಕ ಆಹಾರ ಉತ್ತಮ ಆಹಾರಾಭ್ಯಾಸ ಬೆಳೆಯಲು ಮತ್ತು ಜೀವನ ಪರ್ಯಂತ ಆರೋಗ್ಯಕರ ಆಹಾರ ಸೇವನೆಗೆ ದಾರಿಮಾಡಿಕೊಡುತ್ತದೆ. (ಇದು ಅವರಲ್ಲಿ ಬೊಜ್ಜು, ದುರ್ಬಲ ಮೂಳೆಗಳ ಕಾಯಿಲೆ ಮತ್ತು ಜೀವನದ ನಂತರದ ಹಂತಗಳಲ್ಲಿ ಸಕ್ಕರೆ ಕಾಯಿಲೆಯಂತವುಗಳನ್ನು ತಡೆಗಟ್ಟಲು ನೆರವಾಗುತ್ತದೆ).

ಸಾಕಷ್ಟು ಪ್ರಮಾಣದ ಪೌಷ್ಟಿಕ ಆಹಾರ ದೊರೆಯದೇ ಇರುವ ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳ ಬೆಳವಣಿಗೆ ಉತ್ತಮವಾಗಿರುವುದಿಲ್ಲ ಮತ್ತು ಅವರ ಬೆಳವಣಿಗೆ ಕುಂಟಿತಗೊಳ್ಳುತ್ತದೆ. ಕಬ್ಬಿಣದ ಅಂಶದ ಆಹಾರದ ಕಡಿಮೆ ಸೇವನೆ ಮತ್ತು ದುಂಡು ಹುಳುಗಳ ಹಾವಳಿ ಮತ್ತು ಆಗಾಗ್ಗೆ ಸೊಂಕುಗಳು ಕಂಡುಬರುವುದರಿಂದ. ಹದಿಹರೆಯದ ಹುಡುಗಿಯರು ಹೆಚ್ಚಾಗಿ ರಕ್ತಹೀನತೆ (ಅನೀಮಿಯಾ)ಯಿಂದ ಬಳಲುತ್ತಾರೆ. ತೀವ್ರ ಪ್ರಮಾಣದ ಅಪೌಷ್ಟಿಕತೆ ಮತ್ತು ಮತ್ತೆ ಮತ್ತೆ ಕಾಡುವ ಕಾಯಿಲೆಗಳಿಂದ, ತಾರುಣ್ಯದ ಆರಂಭದಲ್ಲಿ ಬೆಳವಣಿಗೆ ನಿಧಾನವಾಗುತ್ತದೆ ಮತ್ತು ಕೆಳವರ್ಗಗಳಿಂದ ಬರುವ ಮಕ್ಕಳಲ್ಲಿ ಲೈಂಗಿಕ ಪಕ್ವತೆ ತುಂಬಾ ತಡವಾಗಿ ಕಂಡುಬರುತ್ತದೆ. ಆದ್ದರಿಂದ ಹದಿಹರೆಯದಲ್ಲಿ ಶಾರೀರಿಕ ಬೆಳವಣಿಗೆಗೆ ಯಾವುದೇ ತೊಂದರೆಯುಂಟಾದಲ್ಲಿ, ದೇಹಕ್ಕೆ ಹೆಚ್ಚಿನ ಪ್ರಮಾಣದ ಪೌಷ್ಟಿಕ ಆಹಾರದ ಅಗತ್ಯತೆಯಿರುತ್ತದೆ.ಬೆಳವಣಿಗೆ ನಿಧಾನವಾಗಿರುವ ಹುಡುಗಿಯರು ಬೇಗನೇ ಗರ್ಭಧರಿಸಿದಲ್ಲಿ ಅವರು ಹಲವಾರು ತೊಂದರೆ ಎದುರಿಸಬೇಕಾಗುತ್ತದೆ. ಹದಿಹರೆಯದ ತಾಯಿಯರು ಕಡಿಮೆ ತೂಕದ ಮಕ್ಕಳನ್ನು ಹೆರುತ್ತಾರೆ. ಹದಿಹರೆಯದ ತಾಯಿಯರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಾಲು ಉತ್ಪಾದನೆಯಾಗದಿರುವುದರಿಂದ ಮಗುವಿನ ಬೆಳವಣಿಗೆ ನಿಧಾನವಾಗುತ್ತದೆ. ನಿರೀಕ್ಷಿತ ಮಟ್ಟದಲ್ಲಿ ತೂಕ ಹೆಚ್ಚಾಗುವುದಿಲ. ಇವರು ಅಪೌಷ್ಟಿಕತೆಯಿಂದ ಬಳಲುತ್ತಾರೆ. ಇಂತಹ ಮಕ್ಕಳು ಹುಡುಗಿಯರಾಗಿದ್ದರೆ, ಇಂತಹವರ

ಬೆಳವಣಿಗೆ ವಯಸ್ಕ ಹಂತದವರೆಗೂ ತುಂಬಾ ನಿಧಾನವಾಗಿ, ಕುಂಠಿತಗೊಳ್ಳುತ್ತದೆ. ಇದನ್ನು ಬದಲಾಯಿಸಬೇಕೆಂದರೆ ಶೈಶವಾವಸ್ಥೆ, ಬಾಲ್ಯಾವಸ್ಥೆ, ಹದಿಹರೆಯ ಮತ್ತು ವಯಸ್ಕ ಹಂತದಲ್ಲಿ ಪೌಷ್ಟಿಕ ಆಹಾರ ನೀಡುವ ಮೂಲಕ ಅವರಿಗೆ ಅಧಾರವಾಗಬೇಕು.

**ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿ–2**

ಈ ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

1. ಹದಿಹರೆಯದವರಲ್ಲಿ ಬೆಳವಣಿಗೆ ಕುಂಠಿತಗೊಳ್ಳುವುದು ಕಾಳಜಿ ವಹಿಸಬೇಕಾದ ಪ್ರಮುಖ ಆರೋಗ್ಯದ ಅಂಶವಾಗಿರುವುದಿಲ್ಲ.
2. ಹದಿಹರೆಯದಲ್ಲಿ ಪೌಷ್ಟಿಕ ಆಹಾರದ ಕೊರತೆ ನಂತರದ ವರ್ಷಗಳಲ್ಲಿ ಅವರ ಕಾರ್ಯಕ್ಷಮತೆ ಹಾಗೂ ಉತ್ಪಾದನಾ ಸಾಮರ್ಥ್ಯವನ್ನು ಕಡಿಮೆಮಾಡುತ್ತವೆ.
3. ಪ್ರೋಟಿನ್‌ಗಳು ದೇಹದ ಬೆಳವಣಿಗೆಗೆ ಅಗತ್ಯವಾಗಿದ್ದು, ದೇಹದ ಅಂಗಾಂಶಗಳ ಕಾಪಾಡಿಕೊಳ್ಳುವಿಕೆ ಹಾಗೂ ದೋಷಮುಕ್ತತೆಗೆ ನೆರವಾಗುತ್ತವೆ.
4. ಕಾರ್ಬೋಹೈಡ್ರೇಟ್‌ಗಳು ಶಕ್ತಿಯ ಮೂಲ ಆಧಾರಗಳಾಗಿವೆ.
5. ಹದಿಹರೆಯ ಹಂತದಲ್ಲಿ ಕ್ಯಾಲ್ಸಿಯಂನ ಅಗತ್ಯತೆ ಬಾಲ್ಯಾವಸ್ಥೆ ಮತ್ತು ವಯಸ್ಕ ಹಂತಕ್ಕಿಂತ ಕಡಿಮೆಯಾಗಿರುತ್ತದೆ.
6. ಸಮತೋಲನ ಆಹಾರ ಹದಿಹರೆಯದವರ ಲೈಂಗಿಕ ಪರಿಪಕ್ವತೆಯಲ್ಲಿ ಯಾವುದೇ ಪಾತ್ರ ನಿರ್ವಹಿಸುವುದಿಲ್ಲ.
7. ಹದಿಹರೆಯದ ಹುಡುಗಿಯರು ಕಬ್ಬಿಣದ ಅಂಶಗಳನ್ನು ಹೊಂದಿರುವ ಆಹಾರವನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸುವುದರಿಂದ ಅನೀಮಿಯಾದಿಂದ ಬಳಲುತ್ತಾರೆ.

## 3.6.3.3. ಹದಿಹರೆಯದಲ್ಲಿ ಕಾಯಿಲೆ ತಡೆಗಟ್ಟುವಿಕೆ ಮತ್ತು ನಿಯಂತ್ರಣ:

ವಿಶ್ವ ಆರೋಗ್ಯ ಸಂಸ್ಥೆ ಹದಿಹರೆಯದವರನ್ನು 10 ವರ್ಷದಿಂದ 19 ವರ್ಷಗಳ ಮಧ್ಯೆ ಇರುವವರು ಎಂದು ವ್ಯಾಖ್ಯಾನಿಸುತ್ತದೆ. ಹದಿಹರೆಯವೆಂಬುದು ಮಾನವನ ವಿಕಾಸದ ತೀವ್ರಗತಿಯ ಬೆಳವಣಿಗೆಯ ಒಂದು ಔಪಚಾರಿಕ ಹಂತ. ಈ ಹಂತದಲ್ಲಿ ನಿರ್ದಿಷ್ಟ ದೈಹಿಕ, ಬೌದ್ಧಿಕ, ಸಾಮಾಜಿಕ, ಸಂವೇಗಾತ್ಮಕ ಮತ್ತು ಲೈಂಗಿಕ ವಿಕಾಸ ಕಂಡುಬರುತ್ತದೆ. ರಾಷ್ಟ್ರದ ಅಭಿವೃದ್ಧಿ ನೀತಿಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ರೂಪಿಸುವಲ್ಲಿ ಇವರ ಬಗ್ಗೆ ವಿಶೇಷ ಗಮನ ಹರಿಸಬೇಕಾಗುತ್ತದೆ.

ಹದಿಹರೆಯದ ಹಂತ ಜೀವನದ ಅತ್ಯಾಕರ್ಷಕವಾದ ಮತ್ತು ಸಂಕೀರ್ಣವಾದ ಹಂತ. ಈ ಸಮಯದಲ್ಲಿ ತರುಣ–ತರುಣಿಯರು ಹೊಸ ಜವಾಬ್ದಾರಿಗಳನ್ನು ಹೊರುತ್ತಾರೆ ಮತ್ತು ಸ್ವತಂತ್ರವಾಗಿ ಪ್ರಯೋಗಿಸಿ ನೋಡುತ್ತಾರೆ. ತಮ್ಮ ವೈಯಕ್ತಿಕ ಬಿಂಬವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಬಾಲ್ಯಾವಸ್ಥೆಯಲ್ಲಿ ಕಲಿತ ಮೌಲ್ಯಗಳನ್ನು ಅನ್ವಯಿಸಲು ಪ್ರಾರಂಭಿಸುತ್ತಾರೆ. ಜವಾಬ್ದಾರಿಯುತ ಮತ್ತು ಎಚ್ಚರಿಕೆಯುಳ್ಳ ನಾಗರಿಕರಾಗಲು ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ. ಪೋಷಕರು ಇವರನ್ನು ಪ್ರೋತ್ಸಾಹಿಸಿದರೆ ಹಾಗೂ ಬೆಂಬಲಿಸಿದರೆ ಅವರು ಕುಟುಂಬ ಹಾಗೂ ಸಮುದಾಯಕ್ಕೆ ಕೊಡುಗೆ ನೀಡಬಹುದಾದ ಸಂಪನ್ಮೂಲ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ.

ಭಾರತ ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಹದಿಹರೆಯದವರ ಜನಸಂಖ್ಯೆಯನ್ನು ಹೊಂದಿದೆ. ಭಾರತದಲ್ಲಿ ಹದಿಹರೆಯದವರ ಪ್ರಮಾಣ ಉತ್ತರಪ್ರದೇಶದಲ್ಲಿ ಶೇ.24.5, ಕೇರಳದಲ್ಲಿ ಶೇ.16.3 ಮತ್ತು ಮಹಾರಾಷ್ಟ್ರದಲ್ಲಿ ಶೇ.19 ಮತ್ತು ಇಡೀ ಭಾರತದಲ್ಲಿ ಶೇ.21 ಇದೆ.

**ಹದಿಹರೆಯದವರ ಆರೋಗ್ಯದ ಸಮಸ್ಯೆಗಳು:**

ಹದಿಹರೆಯದ ಆರೋಗ್ಯದ ಸ್ಥಿತಿಗತಿ ವಯಸ್ಕ ಹಂತದ ಆರೋಗ್ಯದ ಸ್ಥಿತಿಯನ್ನು ನಿರ್ಧರಿಸುತ್ತದೆ. ವಯಸ್ಕ ಹಂತದ ತೀವ್ರತರವಾದ ಕಾಯಿಲೆಗಳ ಮೂಲ ಹದಿಹರೆಯದ ಕಾಯಿಲೆಗಳು. ಹದಿಹರೆಯದವರು ಹೆಚ್ಚಾಗಿ ಎದುರಿಸುವ ಆರೋಗ್ಯದ ಸಮಸ್ಯೆಗಳೆಂದರೆ ಮಾನಸಿಕ ಆರೋಗ್ಯದ ಸಮಸ್ಯೆಗಳು, ಬೇಗನೆ ಗರ್ಭಧರಿಸುವುದು ಮತ್ತು ಮಕ್ಕಳನ್ನು ಹೆರುವುದು, ಹೆಚ್.ಐ.ವಿ. ಅಥವಾ ಲೈಂಗಿಕವಾಗಿ ಹರಡುವ ಸೋಂಕಿನ ರೋಗಗಳು ಮತ್ತು ಇತರೆ ಸೋಂಕಿನ ಕಾಯಿಲೆಗಳು, ಹಿಂಸೆ, ಅಕಸ್ಮಾತ್ ಆಗಿ ಆಗುವ ಗಾಯಗಳು, ಅಪೌಷ್ಟಿಕತೆ ಮತ್ತು ಮಾದಕ ವಸ್ತುಗಳ ದುರ್ಬಳಕೆ ಇತ್ಯಾದಿ.

ಆರೈಕೆಯ ಆರೋಗ್ಯ: ಹದಿಹರೆಯದವರ ದೈಹಿಕ ಚಟುವಟಿಕೆಗಳು ಹಾಗೂ ತೀವ್ರತರವಾದ ಬೆಳವಣಿಗೆಗೆ ಪ್ರೋಟಿನ್‌ಗಳು, ವಿಟಮಿನ್‌ಗಳು, ಕ್ಯಾಲ್ಸಿಯಂ, ಐಯೋಡಿನ್, ರಂಜಕ ಮತ್ತು ಕಬ್ಬಿಣದ ಅಂಶಗಳನ್ನೊಳಗೊಂಡ ಪೌಷ್ಟಿಕ ಆಹಾರ ಅಗತ್ಯವಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–3ರ ಪ್ರಕಾರ 15–19 ವಯೋಮಾನದವರಲ್ಲಿ ಶೇ. 47 ಭಾಗ ಹುಡುಗಿಯರು ಮತ್ತು ಶೇ. 58 ಭಾಗ ಹುಡುಗರು ತೆಳ್ಳಗಿರುತ್ತಾರೆ. ಶೇ. 56 ಹುಡುಗಿಯರು ಮತ್ತು ಶೇ. 30 ಹುಡುಗರು ರಕ್ತಹೀನತೆ (ಅನೀಮಿಯಾ)ಯಿಂದ ಬಳಲುತ್ತಾರೆ. ಶೇ.24 ಹುಡುಗಿಯರು ಮತ್ತು ಶೇ. 31.7 ಹುಡುಗರು ಹೆಚ್ಚಿನ ತೂಕ ಹೊಂದಿರುತ್ತಾರೆ. ಒಂದು ಸಾವಿರಕ್ಕೆ ಇಬ್ಬರು ತರುಣಿಯರು (2/1000) ಮತ್ತು ಸಾವಿರಕ್ಕೆ ಒಬ್ಬ ತರುಣ (1/1000) ಡಯಾಬಿಟಿಸ್‌ನಿಂದ ಬಳಲುತ್ತಾರೆ. ಕೆಲವರು ದೇಹದ ಅತೃಪ್ತಿ ಮತ್ತು ಖಿನ್ನತೆಯಿಂದ ಸ್ವಸ್ಥವಲ್ಲದ ಆಹಾರವನ್ನು ರೂಢಿಸಿಕೊಂಡಿರುತ್ತಾರೆ.

ಹದಿಹರೆಯದವರಲ್ಲಿ ಸಮೂಹ ಮಾಧ್ಯಮದ ಬಳಕೆ ಹೆಚ್ಚಾಗಿ ಕಂಡುಬರುತ್ತದೆ (ಹುಡುಗರಲ್ಲಿ ಶೇ. 88.2 ಮತ್ತು ಹುಡುಗಿಯರಲ್ಲಿ ಶೆ. 71.5). ಸಮೂಹ ಮಾಧ್ಯಮಗಳು ಹವ್ಯಾಸಗಳನ್ನು ಆಯ್ದುಕೊಳ್ಳುವಲ್ಲಿ ಮತ್ತು ಜೀವನ ಶೈಲಿ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಚೆನ್ನೈನಲ್ಲಿ 11 ರಿಂದ 17 ವಯಸ್ಸಿನವರನ್ನು ಅಧ್ಯಯನದಲ್ಲಿ ವರದಿಯಾಗಿರುವಂತೆ ಶೇ. 90 ಭಾಗ ಹದಿಹರೆಯದವರು ಟಿ.ವಿ. ನೋಡುವಾಗ ಆಹಾರ ಕುರಿತ ಅಥವಾ ಉಪಹಾರ ಸೇವಿಸುತ್ತಾರೆ, ಶೇ.82 ಭಾಗ ಜಾಹೀರಾತುಗಳನ್ನು ಆಧರಿಸಿ ಆಹಾರ ಪದಾರ್ಥಗಳನ್ನು ಕೊಳ್ಳುತ್ತಾರೆ.ಶೇ. 59ಜನ ಟಿ.ವಿ. ನೋಡುವುದಕ್ಕಾಗಿ ಹೊರಗಿನ ಚಟುವಟಿಕೆಗಳನ್ನು ತಪ್ಪಿಸಿಕೊಳ್ಳುತ್ತಾರೆ.

ಮಾನಸಿಕ ಆರೋಗ್ಯ: ಹದಿಹರೆಯದವರಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಗಳು ಕಡೆಗಣಿಸಲ್ಪಟ್ಟ ಸಮಸ್ಯೆಗಳಾಗಿವೆ. ಮಾನಸಿಕ ಅಸ್ವಸ್ಥತೆಯಿಂದ ಪ್ರಸ್ತುತ ವರ್ಷಗಳಲ್ಲಿ ಹದಿಹರೆಯದವರಲ್ಲಿ ಅನಾರೋಗ್ಯ ಮತ್ತು ಮರಣ ಪ್ರಕರಣಗಳು ಹೆಚ್ಚಾಗಿದೆ, ಗೋವಾ ರಾಜ್ಯದಲ್ಲಿ 16 ರಿಂದ 24 ವರ್ಷದ ವಯೋಮಾನದವರನ್ನು ಕುರಿತ ಅಧ್ಯಯನದ ಪ್ರಕಾರ ಶೇ. 3.9 ಪ್ರಮಾಣದ ಯವಕ–ಯುವತಿಯರು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ಇದು ಹುಡುಗಿಯರಲ್ಲಿ ಹುಡುಗರಿಗಿಂತ ನಾಲ್ಕು ಪಟ್ಟು ಹೆಚ್ಚು ಕಂಡುಬರುತ್ತದೆ. ಹದಿಹರೆಯದವರ ಆತ್ಮಹತ್ಯಾವರ್ತನೆಯು, ಶಾಲೆಯಲ್ಲಿ ಗೈರು ಹಾಜರಾಗುವಿಕೆ, ಸ್ವತಂತ್ರ ತೀರ್ಮಾನ ಕೈಗೊಳ್ಳುವಿಕೆ, ಮದುವೆಗೆ ಮುಂಚಿನ ಲೈಂಗಿಕ ಸಂಪರ್ಕ, ಲೈಂಗಿಕ ದುರ್ಬಳಕೆ, ಪೋಷಕರಿಂದ ದೈಹಿಕ ದುರುಪಯೋಗ ಮತ್ತು ಮಾನಸಿಕ ತೊಂದರೆಗಳೊಂದಿಗೆ ಸಂಬಂಧಿಸಿದೆ. ಭಾರತದ ಹದಿಹರೆಯದವರಲ್ಲಿ ಬೇರೆ ಯಾವುದೇ ವಯೋಮಾನದವರಿಗೆ ಹೋಲಿಸಿದರೆ ಹೆಚ್ಚಿನಮಟ್ಟದ ಆತ್ಮಹತ್ಯಾ ಪ್ರವೃತ್ತಿ ಕಂಡುಬರುತ್ತದೆ. 15 ರಿಂದ 29 ವರ್ಷದ ವಯೋಮಾನದ ಗಂಡುಮಕ್ಕಳಲ್ಲಿ ಶೇ.40 ಮತ್ತು ಹೆಣ್ಣುಮಕ್ಕಳಲ್ಲಿ ಶೇ.56 ಆತ್ಮಹತ್ಯಾ ಸಾವುಗಳು ಸಂಭವಿಸುತ್ತವೆ.

ಸಮುದಾಯದಲ್ಲಿ ಮಾನಸಿಕ ತೊಂದರೆಗಳಿಗೆ ಒಳಗಾದ ಮಕ್ಕಳು ಮತ್ತು ಹದಿಹರೆಯದವರ ಪ್ರಮಾಣ ಶೇ.6.46 ಶಾಲೆಗಳಲ್ಲಿ ಇದರ ಪ್ರಮಾಣ ಶೇ.23.33. ಆದರೆ ಮಕ್ಕಳಲ್ಲಿರುವ ಮಾನಸಿಕ ತೊಂದರೆಗಳು ಹೆಚ್ಚಾಗಿ ವರದಿಯಾಗುವುದಿಲ್ಲ. ಮೇಲ್ಕಂಡ ಅಧ್ಯಯನಗಳ ಪ್ರಕಾರ ಸಾಕಷ್ಟು ಪ್ರಮಾಣದ ಹದಿಹರೆಯದವರು ಮಾನಸಿಕ ಆರೋಗ್ಯದ ಸಮಸ್ಯೆಗಳಿಗೆ ಒಳಗಾಗಿರುತ್ತಾರೆ.

**ಅಪಘಾತಗಳು ಮತ್ತು ಹಿಂಸೆ:**

ಭಾರತದಲ್ಲಿ 2001 ರಿಂದ 2003ರ ಮಧ್ಯೆ ಮರಣ ಹೊಂದಿದವರಲ್ಲಿ ಶೆ. 20 ಭಾಗ 15–29 ವಯೋಮಾನದವರು. ದೆಹಲಿಯಲ್ಲಿ ನಡೆದ ಒಂದು ಅಧ್ಯಯನದ ಪ್ರಕಾರ ಶೇ.77.5 ಭಾಗ ಹದಿಹರೆಯದವರು ರಸ್ತೆ ಸಂಚಾರ ನಿಯಮಗಳನ್ನು ಪಾಲಿಸದೇ ಇರುವುದರಿಂದ ಅಪಘಾತಗಳು ಮತ್ತು ಸಾವಿಗೆ ಈಡಾಗಿದ್ದಾರೆ. ಹದಿಹರೆಯದ ಹುಡುಗಿಯರು ಮತ್ತು ಹುಡುಗರು ಪ್ರಮುಖವಾಗಿ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಲೈಂಗಿಕ ದುರ್ಬಳಕೆ ಸಹ ಒಂದು. ಸಾಮಾಜಿಕ ಭಯದಿಂದ ಹೆಚ್ಚಿನ ಮಕ್ಕಳು ಈ ಸಮಸ್ಯೆಯನ್ನು ಮೌನವಾಗಿ ಅನುಭವಿಸುತ್ತಾರೆ. ಇದು ಪರೋಕ್ಷವಾಗಿ ಅವರ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ ಮತ್ತು ಶೈಕ್ಷಣಿಕ ಸಾಧನೆಯ ಮೇಲೆ ಪ್ರಭಾವ ಬೀರುತ್ತವೆ.

**ಸಂತಾನೋತ್ಪತ್ತಿ ಹಾಗೂ ಲೈಂಗಿಕ ಆರೋಗ್ಯ:**

ಹದಿಹರೆಯದವರು ಹಲವಾರು ರೀತಿಯ ಲೈಂಗಿಕ ಮತ್ತು ಸಂತಾನೋತ್ಪತ್ತಿ ಸಂಬಂಧಿ ಆರೋಗ್ಯದ ಸಮಸ್ಯೆಗಳನ್ನು ಹೊಂದಿರುತ್ತಾರೆ. 15 ರಿಂದ 19 ವರ್ಷ ವಯೋಮಾನದ ಹುಡುಗಿಯರಲ್ಲಿ ಗರ್ಭನಿರೋಧಕಗಳ ಬಳಕೆಯ ಅರಿವು ಶೇ.94 ರಷ್ಟಿದ್ದರೂ ಸಹ, ಶೇ.23 ಮದುವೆಯಾದ ಹೆಣ್ಣು ಮಕ್ಕಳು ಮತ್ತು ಶೇ.18 ಭಾಗ ಲೈಂಗಿಕ ಸಕ್ರಿಯರಾದ ಮದುವೆಯಾಗದ ಹೆಣ್ಣುಮಕ್ಕಳು ಗರ್ಭನಿರೋಧಕಗಳನ್ನು ಕೇವಲ ಒಂದು ಬಾರಿ ಮಾತ್ರ ಬಳಸಿರುತ್ತಾರೆ. ಎಲ್ಲಾ ಮೂರು ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆಗಳಲ್ಲಿ ಸಮಪ್ರಮಾಣದ (59.1%, 59.8% ಮತ್ತು 58.2%) ಗರ್ಭಧರಿಸಿದ ಮತ್ತು ತಾಯಿಯಾದ ಹದಿಹರೆಯದ ಹೆಣ್ಣು ಮಕ್ಕಳು ಕಂಡುಬಂದಿರುತ್ತಾರೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಗರ್ಭಧರಿಸಿದವರ ಪ್ರಮಾಣ ಕ್ರಮೇಣವಾಗಿ ಹೆಚ್ಚಾಗಿದೆ. (11.7%, 12.4% ಮತ್ತು 14%) ಇದಕ್ಕೆ ಪ್ರಮುಖ ಕಾರಣವೆಂದರೆ ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡುವುದು ಮತ್ತು ಗರ್ಭನಿರೋಧಕಗಳನ್ನು ಬಳಸದಿರುವುದು.

ಹದಿಹರೆಯದವರ ಫಲವತ್ತತೆಯ ಪ್ರಮಾಣ ಶೇ.17ರಷ್ಟು ಭಾರತದ ಫಲವತ್ತತೆಯ ಪ್ರಮಾಣಕ್ಕೆ ಸೇರುತ್ತದೆ ಮತ್ತು 20ರ ವಯೋಮಾನದ ಹೆಣ್ಣುಮಕ್ಕಳಲ್ಲಿ ಕಂಡುಬರುವ ಶೇ. 14 ರಷ್ಟು ಜನನಗಳು ಸರಿಯಾದ ಯೋಜನೆಯಿಲ್ಲದೆ ಆದಂತವುಗಳು. ಚಿಕ್ಕವಯಸ್ಸಿನಲ್ಲಿ ಮತ್ತು ಯೋಜನೆಯಿಲ್ಲದೆ ಕಂಡುಬರುವ ಹದಿಹರೆಯದ ಗರ್ಭಧಾರಣೆಗಳು ಪ್ರಸವಾಪಸ್ಮಾರ, ಕಡಿಮೆ ತೂಕದ ಮಗುವಿನ ಜನನ, ನವಜಾತ ಶಿಶುವಿನ ಮರಣ ಮತ್ತು ಜನ್ಮಜಾತ ವಿರೂಪತೆಗಳಿಗೆ ಕಾರಣವಾಗುತ್ತವೆ. 15 ರಿಂದ 19 ವಯೋಮಾನದ ಹದಿಹರೆಯದ ಹುಡುಗಿಯರು ವರದಿ ಮಾಡಿರುವಂತೆ ಶೇ.34 ಭಾಗ ಹದಿಹರೆಯದವರು ದೈಹಿಕ, ಭಾವನಾತ್ಮಕ ಅಥವಾ ಲೈಂಗಿಕ ಹಿಂಸೆಗೆ ತಮ್ಮ ಸಂಗಾತಿಯಿಂದ ಒಳಗಾಗಿರುವುದಾಗಿ ತಿಳಿಸಿರುತ್ತಾರೆ. ಮದುವೆಯ ವಯಸ್ಸು ಹೆಚ್ಚಾದಂತೆ ಇವುಗಳು ಕಡಿಮೆಯಾಗುತ್ತವೆ. ಆದ್ದರಿಂದ ಚಿಕ್ಕವಯಸ್ಸಿನಲ್ಲಿ ಮದುವೆ ಮಾಡುವುದು ಹೆಣ್ಣು ಮಕ್ಕಳನ್ನು ಇಂತಹ ಹಲವಾರು ಹಿಂಸೆಗಳಿಗೆ ಒಡ್ಡಿದಂತಾಗುತ್ತದೆ.

ಭಾರತದಲ್ಲಿ ಶೇ 19 ಹುಡುಗಿಯರು ಮತ್ತು ಶೇ.35 ಹುಡುಗರು ಹೆಚ್.ಐ.ವಿ. ಅಥವಾ ಏಡ್ಸ್ ಬಗ್ಗೆ ಸಂಪೂರ್ಣ ಜ್ಞಾನ ಹೊಂದಿರುತ್ತಾರೆ. 15 ರಿಂದ 24 ವರ್ಷ ವಯೋಮಾನದ ಗಂಡು ಹಾಗೂ ಹೆಣ್ಣು ಮಕ್ಕಳು ವರದಿ ಮಾಡಿರುವಂತೆ ಶೇ 15 ಭಾಗ ಮಾತ್ರ ಕೌಟುಂಬಿಕ ಜೀವನ ಶಿಕ್ಷಣ ಅಥವಾ ಲೈಂಗಿಕ ಶಿಕ್ಷಣ ಪಡೆದಿರುತ್ತಾರೆ. ಇದರ ಬಗ್ಗೆ ಇರುವ ಸಾಕಷ್ಟು ಜ್ಞಾನದ ಕೊರತೆಯಿಂದ ಅಸುರಕ್ಷಿತ ಲೈಂಗಿಕತೆ, ಅನೈತಿಕ ಲೈಂಗಿಕ ಅಭ್ಯಾಸ ಮತ್ತು ಲೈಂಗಿಕ ಸೊಂಕು ರೋಗಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. 15 ರಿಂದ 19 ವರ್ಷದ ವಯೋಮಾನದವರಲ್ಲಿ ಲೈಂಗಿಕ ಸಂಪರ್ಕಕ್ಕೆ ಒಳಗಾದವರಲ್ಲಿ ಶೇ.10.5 ರಷ್ಟು ಹುಡುಗಿಯರು ಮತ್ತು ಶೇ 10.8ರಷ್ಟು ಹುಡುಗರು ಲೈಂಗಿಕ ಸೋಂಕಿನ ಕಾಯಿಲೆಗಳಿಗೆ ತುತ್ತಾಗುತ್ತಾರೆ ಮತ್ತು ಶೇ. 0.07 ರಷ್ಟು ಹುಡುಗಿಯರು ಮತ್ತು ಶೆ. 0.01 ರಷ್ಟು ಹುಡುಗರು ಹೆಚ್.ಐ.ವಿ. ಪಾಸಿಟಿವ್ ಆಗಿರುತ್ತಾರೆ.

ಲೈಂಗಿಕ ಸೋಂಕಿನ ಕಾಯಿಲೆಗಳ ಪ್ರಸರಣದ ಬಗ್ಗೆ ಹದಿಹರೆಯದವರ ಅರಿವು ಕಡಿಮೆ. ಈ ಕಾಯಿಲೆಗಳಿದ್ದರೂ ಸಾಮಾಜಿಕ ಭಯದಿಂದ ಮುಚ್ಚಿಟ್ಟುಕೊಳ್ಳುತ್ತಾರೆ. ಇದಕ್ಕೆ ಸೂಕ್ತ ಚಿಕಿತ್ಸೆ ದೊರೆಯದಿದ್ದಾಗ ಬಂಜೆತನ, ಶ್ರೋಣಿಯ ಉರಿಯೂತದ ಕಾಯಿಲೆ ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳು ಕಂಡುಬರುತ್ತವೆ.

ಮಾದಕ ವಸ್ತುಗಳ ಬಳಕೆ: ಹದಿಹರೆಯ ಹಂತದಲ್ಲಿ ಮಾದಕ ವಸ್ತುಗಳ ಪರಿಣಾಮದ ಬಗ್ಗೆ ಮಾಹಿತಿ ಕೊರತೆಯಿಂದ ಇದೊಂದು ಪ್ರಮುಖ ಸಮಸ್ಯೆಯಾಗಿ ಕಾಡುತ್ತದೆ. ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ–3ರ ದತ್ತಾಂಶದ ಪ್ರಕಾರ 15 ರಿಂದ 19 ವರ್ಷ ವಯೋಮಾನದವರಲ್ಲಿ ಶೆ. 11 ರಷ್ಟು ಹದಿಹರೆಯದ ಹುಡುಗರು ಮತ್ತು ಶೇ. 1 ರಷ್ಟು ಹದಿಹರೆಯದ ಹುಡುಗಿಯರು ಮದ್ಯಪಾನ ಸೇವಿಸುತ್ತಾರೆ. ಇದರಲ್ಲಿ ಶೇ.3 ಭಾಗ ಪ್ರತಿದಿನ ಸೇವಿಸುತ್ತಾರೆ. ಶೇ.29 ರಷ್ಟು ಹುಡುಗರು ಮತ್ತು ಶೇ.4 ರಷ್ಟು ಹುಡುಗಿಯರು ತಂಬಾಕು ಸೇವನೆ ಮಾಡುತ್ತಾರೆ. ಧೂಮಪಾನ ಮತ್ತು ತಂಬಾಕು ಸೇವನೆ ಸರಾಸರಿ 12.3 ವರ್ಷಗಳಲ್ಲಿ ಪ್ರಾರಂಭವಾಗುತ್ತದೆ ಮತ್ತು ಮದ್ಯಪಾನ ಸೇವನೆ ಸರಾಸರಿ 13.6 ವರ್ಷಗಳ ವಯೋಮಾನದಲ್ಲಿ ಪ್ರಾರಂಭವಾಗುತ್ತದೆ. 15 ವರ್ಷ ವಯೋಮಾನಕ್ಕಿಂತ ಕಡಿಮೆಯಿರುವ ಹದಿಹರೆಯದವರಲ್ಲಿ ಶೇ.11 ಭಾಗ ಗಾಂಜಾ ಅಥವಾ ಭಂಗಿ ಸೇವನೆ ಪ್ರಾರಂಭಿಸುತ್ತಾರೆ. ಇದರಿಂದ ಸ್ಕೀಜೋಫ್ರೇನಿಯಾದಂತ ಮನೋವ್ಯಾಧಿಗೆ ತುತ್ತಾಗುತ್ತಾರೆ.

**ಭಾರತದಲ್ಲಿರುವ ಹದಿಹರೆಯದವರ ಆರೋಗ್ಯ ಕಾರ್ಯಕ್ರಮಗಳು:**

ಭಾರತದಲ್ಲಿ ಹದಿಹರೆಯದವರ ಆರೋಗ್ಯದ ಸಮಸ್ಯೆಗಳನ್ನು ಪರಿಹರಿಸುವ ಹಿನ್ನೆಲೆಯಲ್ಲಿ ವಿವಿಧ ಸಚಿವಾಲಯಗಳ ಅಡಿಯಲ್ಲಿ ಹಲವಾರು ಆರೋಗ್ಯ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಕಿಶೋರಿ ಶಕ್ತಿ ಯೋಜನಾ, ಬಾಲಿಕಾ ಸಮೃದ್ಧಿ ಯೋಜನಾ, ಹದಿಹರೆಯದ ಹುಡುಗಿಯರ ಸಬಲೀಕರಣಕ್ಕಾಗಿ ರಾಜೀವ್ ಗಾಂಧಿ ಯೋಜನೆ –'SABLA', ರಾಷ್ಟ್ರೀಯ ಕಿಶೋರ್ ಸ್ವಾಸ್ಥ ಕಾರ್ಯಕ್ರಮ ಮತ್ತು ಹದಿಹರೆಯದವರ ಸಂತಾನಾಭಿವೃದ್ಧಿ ಲೈಂಗಿಕ ಆರೋಗ್ಯ ಕಾರ್ಯಕ್ರಮ (ARSH) ಇವುಗಳು ಕಂಡುಬರುತ್ತವೆ.

**ಕಿಶೋರಿ ಶಕ್ತಿ ಯೋಜನಾ:** ಇದು ಸಮನ್ವಯ ಮಕ್ಕಳ ಅಭಿವೃದ್ಧಿ ಯೋಜನೆ (ICDS)ಯಡಿ ನವೆಂಬರ್ 1991ರಲ್ಲಿ ವಿಶೇಷವಾಗಿ ಹದಿಹರೆಯದ ಹೆಣ್ಣುಮಕ್ಕಳಿಗಾಗಿ ಪ್ರಾರಂಭವಾದ ಮಧ್ಯವರ್ತನಾ ಕಾರ್ಯಕ್ರಮ. ಇದು ಪೌಷ್ಟಿಕತೆಯ ಸಮಸ್ಯೆ ಹಾಗೂ ಲಿಂಗತಾರತಮ್ಯದಂತಹ ಸಮಸ್ಯೆಗಳನ್ನು ಪರಿಹರಿಸಿ ಹೆಣ್ಣುಮಕ್ಕಳ ಸ್ವಯಂವಿಕಾಸದ ಉದ್ದೇಶಕ್ಕಾಗಿ ಆರಂಭಗೊಂಡ ಕಾರ್ಯಕ್ರಮವಾಗಿದೆ. 11 ರಿಂದ 18 ವಯಸ್ಸಿನ ಅವಿವಾಹಿತ ಹೆಣ್ಣುಮಕ್ಕಳಾಗಿದ್ದು ಅವರ ಕುಟುಂಬದ ಆದಾಯ 6400 ರೂಪಾಯಿಗಳಿಗಿಂತ ಕಡಿಮೆ ಇರುವವರು ಈ ಯೋಜನೆಯ ಫಲಾನುಭವಿಗಳು. ಇವರಿಗೆ ಒದಗಿಸುವ ಸೇವೆಗಳೆಂದರೆ–ಅನೌಪಚಾರಿಕ ಹಾಗೂ ಸಾಕ್ಷರತಾ ಕಾರ್ಯಕ್ರಮಗಳ ಮೂಲಕ ಶೈಕ್ಷಣಿಕ ಚಟುವಟಿಕೆಗಳು, ರೋಗ ನಿರೋಧಕ ಚುಚ್ಚುಮದ್ದು ನೀಡುವುದು, ಪ್ರತಿ 6 ತಿಂಗಳಿಗೊಮ್ಮೆ ಸಾಮಾನ್ಯ ಆರೋಗ್ಯ ತಪಾಸಣೆ, ಸಣ್ಣ ಕಾಯಿಲೆಗಳಿಗೆ ಚಿಕಿತ್ಸೆಗಳು, ಹೊಟ್ಟೆಯಲ್ಲಿರುವ ಹುಳುಗಳ ನಾಶಕ್ಕೆ ಔಷಧಿ, ಅನಿಮೀಯಾ, ಗಳಗಂಡೆ, ವಿಟಮಿನ್ ಕೊರತೆ ಮುಂತಾದವುಗಳ ರೋಗನಿರೋಧಕ ಕ್ರಮಗಳು, ಹೆಚ್ಚಿನ ತೊಂದರೆಯಿದ್ದಲ್ಲಿ ಅವರನ್ನು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ಅಥವಾ ಜಿಲ್ಲಾ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಕಳಿಸುವುದು ಮತ್ತು ಸಂತಾನೋತ್ಪತ್ತಿ ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ಒಂದೆಡೆ ಸೇರಿಸಿ ಚಿಕಿತ್ಸೆ ನೀಡುವುದು.

**ಬಾಲಿಕಾ ಸಮೃದ್ಧಿ ಯೋಜನಾ:** ಭಾರತ ಸರ್ಕಾರ 1997ರಲ್ಲಿ ಪ್ರಾರಂಭಿಸಿದ ಕಾರ್ಯಕ್ರಮ ಬಾಲಿಕ ಸಮೃದ್ಧಿ ಯೋಜನಾ. ಇದರ ಉದ್ದೇಶಗಳು ಕುಟುಂಬ ಹಾಗೂ ಸಮುದಾಯದಲ್ಲಿ ಹೆಣ್ಣುಮಕ್ಕಳ ಜನನ ಹಾಗೂ ಆ ಮಗುವಿನ ತಾಯಿಯ ಬಗ್ಗೆ ಇರುವ ಋಣಾತ್ಮಕ ಮನೋಭಾವವನ್ನು ಬದಲಾಯಿಸುವುದು, ಶಾಲೆಯಲ್ಲಿ ಹೆಣ್ಣುಮಕ್ಕಳ ದಾಖಲಾತಿ ಮತ್ತು ಉಳಿಯುವಿಕೆಯನ್ನು ಸುಧಾರಿಸುವುದು, ಹೆಣ್ಣುಮಕ್ಕಳ ಮದುವೆ ವಯಸ್ಸನ್ನು ಹೆಚ್ಚಿಸುವುದು, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳನ್ನು ಆದಾಯಗಳಿಸುವ ಚಟುವಟಿಕೆಗಳಲ್ಲಿ ತೊಡಗಿಸುವುದು. ಈ ಯೋಜನೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ

ಆಗಸ್ಟ್ 15, 1997ರ ನಂತರ ಜನಿಸಿದ ಹೆಣ್ಣುಮಕ್ಕಳನ್ನು ಗುರಿಯಾಗಿಸಿ ಕೊಳ್ಳಲಾಗಿದೆ. ಈ ಯೋಜನೆಯ ಲಾಭವನ್ನು ಒಂದು ಕುಟುಂಬದ ಎರಡು ಮಕ್ಕಳಿಗೆ ಮಾತ್ರ ಅನ್ವಯಿಸಲಾಗುವುದು.

**ಹದಿಹರೆಯದ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ರಾಜೀವ್‌ಗಾಂಧಿ ಯೋಜನೆ (SABLA)**

ಈ ಯೋಜನೆಯನ್ನು ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು ಪ್ರಮುಖವಾಗಿ ಶಾಲೆ ಬಿಟ್ಟ ಹದಿಹರೆಯದ ಹೆಣ್ಣುಮಕ್ಕಳ ಮೇಲೆ ಕೇಂದ್ರೀಕರಿಸಲಾಗಿದೆ. ಹದಿಹರೆಯದ ಹೆಣ್ಣುಮಕ್ಕಳ ಸ್ವಯಂ ಅಭಿವೃದ್ಧಿ ಮತ್ತು ಸಬಲೀಕರಣ, ಅವರ ಪೋಷಣೆ ಮತ್ತು ಆರೋಗ್ಯದ ಸ್ಥಿತಿಗತಿ ಸುಧಾರಿಸುವುದು, ಆರೋಗ್ಯದ ಅರಿವನ್ನು ಹೆಚ್ಚಿಸುವುದು, ಪೋಷಣೆ, ಸಂತೋನೋತ್ಪತ್ತಿ/ಲೈಂಗಿಕ ಆರೋಗ್ಯ, ಕುಟುಂಬ/ಮಗುವಿನ ಆರೋಗ್ಯ, ಗೃಹಾಧಾರಿತ ಕೌಶಲಗಳನ್ನು ಹೆಚ್ಚಿಸುವುದು, ಜೀವನ ಕೌಶಲಗಳು ಮತ್ತು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮದೊಂದಿಗೆ ಹೊಂದಾಣಿಕೆ ಮಾಡಿಕೊಂಡು ವೃತ್ತಿ ಕೌಶಲಗಳನ್ನು ಬೆಳೆಸುವುದು, ಶಾಲೆ ಬಿಟ್ಟ ಹದಿಹರೆಯದ ಹೆಣ್ಣು ಮಕ್ಕಳನ್ನು ಔಪಚಾರಿಕ/ ಅನೌಪಚಾರಿಕ ಶಿಕ್ಷಣದ ಮೂಲಕ ಮುಖ್ಯವಾಹಿನಿಗೆ ತರುವುದು ಮತ್ತು ಸಾರ್ವಜನಿಕ ಸೇವೆಗಳ ಬಗ್ಗೆ ಅಗತ್ಯ ಮಾಹಿತಿ ಒದಗಿಸುವುದು(ಪ್ರಾಥಮಿಕ ಆರೋಗ್ಯ ಕೇಂದ್ರಗಳು/ಸಮುದಾಯ ಆರೋಗ್ಯ ಕೇಂದ್ರ/ ಅಂಚೆ ಕಛೇರಿ / ಬ್ಯಾಂಕ್‌ಗಳು/ಆರಕ್ಷಕ ಠಾಣೆಗಳು ಇತ್ಯಾದಿ)ಇದರ ಪ್ರಮುಖ ಉದ್ದೇಶಗಳು. ಹದಿಹರೆಯದ ಹೆಣ್ಣು ಮಕ್ಕಳಿಗೆ ಒದಗಿಸುತ್ತಿರುವ ಸೇವೆಗಳೆಂದರೆ –600 ಕ್ಯಾಲೋರಿಗಳ ಪೌಷ್ಟಿಕ ಆಹಾರ, 18 ರಿಂದ 20 ಗ್ರಾಂ ಪ್ರೋಟೀನ್ ಮತ್ತು ಸೂಕ್ಷ್ಮ ಪೌಷ್ಟಿಕಾಂಶಗಳನ್ನು ವರ್ಷದಲ್ಲಿ 300 ದಿನಗಳು ಒದಗಿಸುವುದು, ಕಬ್ಬಿಣ ಮತ್ತು ಫಾಲಿಕ್ ಆಮ್ಲಗಳ ಪೂರೈಕೆ, ಆರೋಗ್ಯ ತಪಾಸಣೆ ಮತ್ತು ತಜ್ಞರಲ್ಲಿಗೆ ಕಳಿಸುವ ಸೇವೆಗಳು. ಕಿಶೋರಿ ದಿವಸ್, ಪೋಷಣೆ ಮತ್ತು ಆರೋಗ್ಯ ಶಿಕ್ಷಣ, ಕುಟುಂಬ ಕಲ್ಯಾಣದ ಬಗ್ಗೆ ಮಾರ್ಗದರ್ಶನ/ಸಮಾಲೋಚನೆ, ಹದಿಹರೆಯದವರ ವಂಶಾಭಿವೃದ್ಧಿ ಲೈಂಗಿಕ ಆರೋಗ್ಯ ಕಾರ್ಯಕ್ರಮ (ARSH), ಮಗುವಿನ ಆರೈಕೆ ಮಾಡುವ ಬಗ್ಗೆ ಮತ್ತು ಮನೆ ನಿರ್ವಹಣೆ ಬಗ್ಗೆ ತರಬೇತಿ, ಜೀವನ ಕೌಶಲಗಳ ಶಿಕ್ಷಣ, ಸಾರ್ವಜನಿಕ ಸೇವೆಗಳು ದೊರೆಯುವಂತೆ ಮಾಡುವುದು ಮತ್ತು 16 ವರ್ಷ ಮೇಲ್ಪಟ್ಟ ತರುಣಿಯರಿಗೆ ವೃತ್ತಿ ತರಬೇತಿ ಒದಗಿಸುವುದು.

**ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಿಂದ 7 ಜನವರಿ 2014ರಂದು ರಾಷ್ಟ್ರೀಯ ಕಿಶೋರ ಸ್ವಾಸ್ತ್ಯ ಕಾರ್ಯಕ್ರಮವನ್ನು 10 ರಿಂದ 19ವರ್ಷದ ಹದಿಹರೆಯದವರಿಗಾಗಿ ಆರಂಭಿಸಲಾಗಿದೆ. ಹದಿಹರೆಯದವರ ಆರೋಗ್ಯ ಮತ್ತು ವಿಕಾಸದ ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಸಮುದಾಯ ಆಧಾರಿತ ಮಧ್ಯವರ್ತನಾ ಕಾರ್ಯಕ್ರಮಗಳು, ಸೌಲಭ್ಯ ಆಧಾರಿತ ಮಧ್ಯವರ್ತನಾ ಚಟುವಟಿಕೆಗಳು, ಅಂತರ್–ವ್ಯಕ್ತಿ ಸಂವಹನವನ್ನು ಕೇಂದ್ರೀಕರಿಸಿದ ಸಾಮಾಜಿಕ ಮತ್ತು ವರ್ತನಾ ಬದಲಾವಣೆಯ ಸಂವಹನ ಇವು ಈ ಯೋಜನೆಯಲ್ಲಿ ಬಳಸುವ ಪ್ರಮುಖ ತಂತ್ರಗಳಾಗಿವೆ.

**ಹದಿಹರೆಯದವರ ಸಂತಾನಾಭಿವೃದ್ಧಿ ಲೈಂಗಿಕ ಆರೋಗ್ಯ ಕಾರ್ಯಕ್ರಮ:**

ಇದು ಹದಿಹರೆಯದ ಅವಿವಾಹಿತ / ವಿವಾಹಿತ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೆ ಸಂತಾನಾಭಿವೃದ್ಧಿ ಮತ್ತು ಲೈಂಗಿಕ ಆರೋಗ್ಯದಡಿ ಒದಗಿಸುವ ಉತ್ತೇಜನಾ ಸೇವೆಗಳು, ಮುನ್ನೆಚ್ಚರಿಕಾ ಸೇವೆಗಳು, ಚಿಕಿತ್ಸಕ ಸೇವೆಗಳು, ತಜ್ಞರಲ್ಲಿಗೆ ಕಳುಹಿಸುವ ಸೇವೆಗಳು ಮತ್ತು ನೀಡುವಿಕೆಯ ಸೇವೆಗಳನ್ನು ಒದಗಿಸುವ ಕಾರ್ಯಕ್ರಮವಾಗಿದೆ. ಈ ಆರೋಗ್ಯ ಸೇವೆಗಳ ಕಟ್ಟುಗಳನ್ನು ಹದಿಹರೆಯ ಸ್ನೇಹಿ ಆರೋಗ್ಯ ಸೇವಾಕೇಂದ್ರಗಳ ಮೂಲಕ ಒದಗಿಸಲಾಗುವುದು, ಈ ಸೇವೆಗಳೆಂದರೆ ಬೆಳವಣಿಗೆ ಮತ್ತು ವಿಕಾಸದ ಮೇಲುಸ್ತುವಾರಿ, ವರ್ತನಾ ಸಮಸ್ಯೆಗಳ ಮೇಲ್ವಿಚಾರಣೆ, ವಿಕಾಸದ ಬದಲಾವಣೆಗಳ ಬಗ್ಗೆ ಮಾಹಿತಿ ಮತ್ತು ಸಮಾಲೋಚನೆ, ವೈಯಕ್ತಿಕ ಜಾಗೃತಿ ಮತ್ತು ಸಹಾಯ ಬಯಸುವ ಮಾರ್ಗಗಳು, ಗರ್ಭನಿರೋದಕಗಳ ಬಗ್ಗೆ ಮಾಹಿತಿ, ಲೈಂಗಿಕ

ಸೋಂಕಿನ ಕಾಯಿಲೆಗಳಿಗೆ ಚಿಕಿತ್ಸೆ, ಗರ್ಭಧಾರಣೆಯ ಬಗ್ಗೆ ಜಾಗೃತಿ ವಹಿಸುವುದು ಮತ್ತು ಗರ್ಭಪಾತದ ನಂತರ ಆರೋಗ್ಯ ನಿರ್ವಹಣೆ, ಸ್ವಯಂ ಪ್ರೇರಿತ ಸಲಹೆ ಮತ್ತು ಎಚ್.ಐ.ವಿ. ಪರೀಕ್ಷೆ, ಲೈಂಗಿಕ ಹಿಂಸೆಯ ವಿರುದ್ಧ ನಿರ್ವಹಣೆ ಮತ್ತು ಮಾನಸಿಕ ಆರೋಗ್ಯ ಸೇವೆಗಳು ಇದರೊಂದಿಗೆ ಮಾದಕ ವಸ್ತುಗಳ ದುರ್ಬಳಕೆಯ ನಿರ್ವಹಣೆ.

ಹದಿಹರೆಯದವರ ಸಂಪೂರ್ಣ ಆರೋಗ್ಯ ಸಾಧಿಸಲು ಹದಿಹರೆಯದವರ ಆರೋಗ್ಯದ ಸಮಸ್ಯೆಗಳು, ಮಾನಸಿಕ ಆರೋಗ್ಯ, ಆರೋಗ್ಯಕರ ಜೀವನ ಶೈಲಿಯ ಪರವಾಗಿ ವರ್ತನೆಯ ಬದಲಾವಣೆ ಮತ್ತು ಜೀವನ ಕೌಶಲಗಳಿಸಿಕೊಳ್ಳಲು ಧನಾತ್ಮಕ ಸಾಮಾಜಿಕ ವಾತಾವರಣ ಮುಂತಾದವುಗಳನ್ನೊಳಗೊಂಡ ಬಹು ಆಯಾಮದ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಹದಿಹರೆಯ ಸ್ನೇಹಿ ಚಿಕಿತ್ಸಾಲಯಗಳನ್ನು ಭಾರತದಾದ್ಯಂತ ತೆರೆಯುವ ಮೂಲಕ ಎಲ್ಲಾ ಹದಿಹರೆಯದವರನ್ನು ತಲುಪಬೇಕು, ಹದಿಹರೆಯದವರ ಪ್ರಸ್ತುತ ಕಾಯಿಲೆಗಳನ್ನು ತಡೆಗಟ್ಟಲು ನಿಯಮಿತವಾಗಿ ಅವರ ಕಡೆ ಗಮನಿವಿಡಬೇಕು. ಯಶಸ್ವಿ ವಯಸ್ಕರನ್ನಾಗಿ ರೂಪುಗೊಳ್ಳಲು ಅಗತ್ಯವಾದ ಸೌಲಭ್ಯವನ್ನು ಒದಗಿಸುವ ಮೂಲಕ ಅವರ ಸಬಲೀಕರಣಕ್ಕೆ ನೆರವಾಗಬೇಕು. ಉತ್ತಮ ಅವಕಾಶಗಳನ್ನು ಅವರಿಗೆ ಒದಗಿಸುವ ಮೂಲಕ ಹದಿಹರೆಯದ ಮಕ್ಕಳು ಸಂತೋಷಕರ, ಆರೋಗ್ಯಕರ, ಸುರಕ್ಷಿತ ಮತ್ತು ಉತ್ಪಾದನಾತ್ಮಕ ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕಾಗಿದೆ.

ಭಾರತದಲ್ಲಿ ಹದಿಹರೆಯದವರ ಆರೋಗ್ಯದ ಸಮಸ್ಯೆಗಳಿಗೆ ಸಂಬಂಧಿಸಿದ ದತ್ತಾಂಶ ಇತರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ದೊರೆಯುವುದಿಲ್ಲ. ಹದಿಹರೆಯದವರ ಆರೋಗ್ಯದ ಸಮಸ್ಯೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ವಿವರವಾದ ಅಧ್ಯಯನದ ವರದಿಗಳು ಅಗತ್ಯವಾಗಿ ಬೇಕಾಗಿದೆ. ಇದು ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಹದಿಹರೆಯದವರ ಸಮಸ್ಯೆಗಳ ಅರಿವು ಬೆಳೆಸಿಕೊಳ್ಳಲು ಮತ್ತು ಹದಿಹರೆಯದವರ ಆರೋಗ್ಯ ಸೇವೆಗಳನ್ನು ಬಲಗೊಳಿಸಲು ನೆರವಾಗುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

'ಎ' ಪಟ್ಟಿಯಲ್ಲಿರುವ ಅಂಶಗಳಿಗೆ 'ಬಿ' ಪಟ್ಟಿಯಲ್ಲಿ ಹೊಂದಿಕೆಯಾಗುವ ಪರಿಣಾಮಗಳನ್ನು ಗುರುತಿಸಿ ಬರೆಯಿರಿ:

| | 'ಎ' | 'ಬಿ' |
|---|---|---|
| 1. | ಹದಿಹರೆಯದಲ್ಲಿ ದೂರದರ್ಶನ ವೀಕ್ಷಿಸುವಿಕೆ | ಎ. ಅಪಘಾತಗಳು ಮತ್ತು ಸಾವುಗಳು |
| 2. | ಮಾನಸಿಕ ಅಸ್ವಸ್ಥತೆ | ಬಿ. ಮಾನಸಿಕ ಆರೋಗ್ಯ ಸಮಸ್ಯೆಗಳು |
| 3. | ಸಂಚಾರಿ ನಿಯಮಗಳನ್ನು ಕಡೆಗಣಿಸುವಿಕೆ | ಸಿ. ಆತ್ಮಹತ್ಯಾ ವರ್ತನೆ |
| 4. | ಮಾದಕ ವಸ್ತುಗಳ ಬಳಕೆ | ಡಿ. ಲೈಂಗಿಕವಾಗಿ ಪ್ರಸರಣವಾಗುವ ಸೋಂಕುಗಳು |
| | | ಇ. ಅತಿಯಾದ ತೂಕ |

## 3.6.4. ಸಾರಾಂಶಿಸೋಣ:

- ಮರಣ ಮತ್ತು ಅನಾರೋಗ್ಯಕ್ಕೆ ಪ್ರಮುಖ ಕಾರಣಗಳಾದ ಕೆಲವು ಆರೋಗ್ಯ ಸಂಬಂಧಿ ವರ್ತನೆಗಳೆಂದರೆ ಆತ್ಮಾಹತ್ಯಾ ಪ್ರಯತ್ನಗಳು, ಗಾಯಗಳು ಮತ್ತು ಅಸುರಕ್ಷಿತ ಲೈಂಗಿಕ ವರ್ತನೆಯಿಂದ ಕಂಡುಬರುವ ಅಪಾಯಗಳು, ಕಡಿಮೆ ತೂಕ ಮತ್ತು ಇತರೆ ಪೌಷ್ಟಿಕಾಂಶದ ಕೊರತೆಗಳು.
- ವೈಯಕ್ತಿಕ ನೈರ್ಮಲ್ಯ ಕಾಪಾಡುವುದು ಮತ್ತು ಆರೋಗ್ಯಕರವಾಗಿ ಮುಂದುವರಿಕೆ  ಅಗತ್ಯವಾದ ಹಲವಾರು ಅಭ್ಯಾಸಗಳನ್ನು ಒಳಗೊಳ್ಳುತ್ತದೆ. ಹದಿಹರೆಯದವರು ಬೆಳೆಯುತ್ತಿರುವ ತಮ್ಮ ದೇಹದ

ಬದಲಾವಣೆಗಳನ್ನು ತಿಳಿದಿರಬೇಕು. ದಿನನಿತ್ಯ ಸ್ನಾನ ಮಾಡುವುದು, ಸೂಕ್ತ ಸಾಬೂನಿನ ಬಳಕೆ, ಹಲ್ಲು ಮತ್ತು ಬಾಯಿಯ ನೈರ್ಮಲ್ಯ ಕಾಪಾಡಿಕೊಳ್ಳುವಿಕೆ, ಕಣ್ಣು ಮತ್ತು ಕಿವಿಗಳ ಬಗ್ಗೆ ಎಚ್ಚರ ವಹಿಸುವುದು ಮತ್ತು ಬಾಹ್ಯದೇಹವನ್ನು ಅಂದವಾಗಿಟ್ಟುಕೊಳ್ಳುವಿಕೆ ಇವು ಹದಿಹರೆಯದವರು ಕೈಗೊಳ್ಳಬೇಕಾದ ಕೆಲವು ಪ್ರಮುಖ ಚಟುವಟಿಕೆಗಳು.

- ಪೋಷಣೆ ಎಂಬುದು ಒಂದು ವಿಜ್ಞಾನವಾಗಿದ್ದು ಪೌಷ್ಟಿಕಾಂಶ ಮತ್ತು ಬೆಳವಣಿಗೆ, ಸಂತಾನಾಭಿವೃದ್ಧಿ, ಆರೋಗ್ಯ ಇವುಗಳ ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಇದರ ಜೊತೆಗೆ ಆಹಾರ ಸೇವಿಸುವ ಪ್ರಮಾಣ ಅದರ ಹೀರುವಿಕೆ ಮತ್ತು ದೇಹದಲ್ಲಿ ಅದರ ಬಳಕೆಗಳನ್ನು ಒಳಗೊಳ್ಳುತ್ತದೆ.
- ಹದಿಹರೆಯದವರ ಆಹಾರದ ಪ್ರಮುಖ ಘಟಕಾಂಶಗಳು–ಪ್ರೋಟಿನ್‌ಗಳು, ಕೊಬ್ಬು, ಕಾರ್ಬೋಹೈಡ್ರೇಟ್‌ಗಳು ವಿಟಮಿನ್‌ಗಳು ಮತ್ತು ಲವಣಗಳು.
- ಸಂತುಲಿತ ಆಹಾರವೆಂದರೆ ದೇಹದ ಆರೋಗ್ಯ ಮತ್ತು ಸ್ವಾಸ್ಥತೆಯನ್ನು ಕಾಯ್ದುಕೊಳ್ಳಲು ಅಗತ್ಯವಾದ ಎಲ್ಲಾ ಪೌಷ್ಟಿಕಾಂಶಗಳನ್ನು ಅಗತ್ಯವಾದ ಪ್ರಮಾಣ ಮತ್ತು ಅನುಪಾತಗಳಲ್ಲಿ ಹೊಂದಿರುವುದು.
- ಹದಿಹರೆಯದವರ ಆರೋಗ್ಯ ಸಮಸ್ಯೆಗಳು: ಹದಿಹರೆಯದ ಆರೋಗ್ಯದ ಸ್ಥಿತಗತಿ ವಯಸ್ಕ ಹಂತದ ಆರೋಗ್ಯದ ಸ್ಥಿತಿಗತಿಯನ್ನು ನಿರ್ಧರಿಸುತ್ತದೆ. ವಯಸ್ಕಹಂತದ ತೀವ್ರತರವಾದ ಕಾಯಿಲೆಗಳ ಮೂಲ ಹದಿಹರೆಯದ ಕಾಯಿಲೆಗಳು. ಹದಿಹರೆಯದವರು ಹೆಚ್ಚಾಗಿ ಎದುರಿಸುವ ಸಮಸ್ಯೆಗಳೆಂದರೆ ಮಾನಸಿಕ ಆರೋಗ್ಯದ ಸಮಸ್ಯೆಗಳು, ಬೇಗನೆ ಗರ್ಭಧರಿಸುವುದು ಮತ್ತು ಮಗುವಿನ ಜನನ, ಹೆಚ್.ಐ.ವಿ/ ಲೈಂಗಿಕವಾಗಿ ಹರಡುವ ಸೋಂಕಿನ ರೋಗಗಳು, ಹಿಂಸೆ, ಅಕಸ್ಮಾತ್ತಾಗಿ ಸಂಭವಿಸುವ ಗಾಯಗಳು, ಅಪೌಷ್ಟಿಕತೆ ಮತ್ತು ಮಾದಕ ವಸ್ತುಗಳ ಬಳಕೆ.
- ಭಾರತದಲ್ಲಿ ಹದಿಹರೆಯದವರ ಆರೋಗ್ಯ ಕಾರ್ಯಕ್ರಮಗಳು: ಭಾರತದಲ್ಲಿ ಹದಿಹರೆಯದವರ ಆರೋಗ್ಯದ ಸಮಸ್ಯೆಗಳನ್ನು ಪರಿಹರಿಸುವ ಹಿನ್ನೆಲೆಯಲ್ಲಿ ವಿವಿಧ ಸಚಿವಾಲಯಗಳ ಅಡಿಯಲ್ಲಿ ಹಲವಾರು ಆರೋಗ್ಯ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಅವುಗಳೆಂದರೆ – ಕಿಶೋರಿ ಶಕ್ತಿ ಯೋಜನಾ, ಬಾಲಿಕ ಸಮೃದ್ಧಿ ಯೋಜನಾ, ಹದಿಹರೆಯದ ಹುಡುಗಿಯರ ಸಬಲೀಕರಣಕ್ಕಾಗಿ ರಾಜೀವ್ ಗಾಂಧಿ ಯೋಜನೆ, ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮ ಮತ್ತು ಹದಿಹರೆಯದವರ ಸಂತಾನಾಭಿವೃದ್ಧಿ ಲೈಂಗಿಕ ಆರೋಗ್ಯ ಕಾರ್ಯಕ್ರಮ.
- ಹದಿಹರೆಯದವರ ಸಂಪೂರ್ಣ ಆರೋಗ್ಯ ಸಾಧಿಸಲು ಹದಿಹರೆಯದವರ ಆರೋಗ್ಯದ ಸಮಸ್ಯೆಗಳು, ಮಾನಸಿಕ ಆರೋಗ್ಯ, ಆರೋಗ್ಯಕರ ಜೀವನ ಶೈಲಿಯ ಕಡೆ ವರ್ತನೆಯ ಬದಲಾವಣೆ ಮತ್ತು ಜೀವನ ಕೌಶಲಗಳಿಸಿಕೊಳ್ಳಲು ಧನಾತ್ಮಕ ಸಮಾಜಿಕ ವಾತಾವರಣ ಮುಂತಾದುವುಗಳನ್ನೊಳಗೊಂಡ ಬಹು ಆಯಾಮದ ಕ್ರಮವನ್ನು ಕೈಗೊಳ್ಳಬೇಕಾಗಿದೆ.

## 3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1–ಮಿಥ್ಯ, 2–ಸತ್ಯ, 3–ಮಿಥ್ಯ, 4–ಸತ್ಯ, 5–ಮಿಥ್ಯ, 6–ಮಿಥ್ಯ, 7–ಮಿಥ್ಯ, 8–ಸತ್ಯ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1–ತಪ್ಪು, 2–ಸರಿ, 3–ಸರಿ, 4–ಸರಿ, 5–ತಪ್ಪು, 6–ತಪ್ಪು, 7–ಸರಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1–ಇ, 2–ಸಿ 3–ಎ, 4–ಬಿ

## 3.6.6. ಘಟಕಾಂತ್ಯ ಅಭ್ಯಾಸಗಳು

1. ವೈಯಕ್ತಿಕ ನೈರ್ಮಲ್ಯ ಎಂದರೇನು? ಹದಿಹರೆಯದವರು ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳಲು ಪಾಲಿಸಬೇಕಾದ ಅಭ್ಯಾಸಗಳನ್ನು ಚರ್ಚಿಸಿರಿ.
2. ಹದಿಹರೆಯದವರಲ್ಲಿ ಪೋಷಣೆಯ ಅರಿವಿನ ಅಗತ್ಯತೆಯನ್ನು ಚರ್ಚಿಸಿರಿ.
3. ಹದಿಹರೆಯದಲ್ಲಿ ಅಗತ್ಯವಾದ ಆಹಾರದ ಪ್ರಮುಖ ಘಟಕಾಂಶಗಳು ಮತ್ತು ಅವುಗಳ ಕಾರ್ಯಗಳನ್ನುವಿವರಿಸಿ.
4. ಹದಿಹರೆಯದವರಿಗೆ ಅಗತ್ಯವಾದ ಸಮತೋಲನ ಆಹಾರವನ್ನು ಸೂಚಿಸಿರಿ.
5. ಹದಿಹರೆಯದವರು ಪ್ರಮುಖವಾಗಿ ಎದುರಿಸುವ ಆರೋಗ್ಯ ಸಮಸ್ಯೆಗಳನ್ನು ಚರ್ಚಿಸಿರಿ.
6. ಭಾರತದಲ್ಲಿನ ಹದಿಹರೆಯದವರಿಗಾಗಿ ಇರುವ ಪ್ರಮುಖ ಆರೋಗ್ಯ ಕಾರ್ಯಕ್ರಮಗಳನ್ನು ವಿವರಿಸಿ.

## 3.6.7. ಪರಾಮರ್ಶನ ಸೂಚಿ


1. Amina Mehrin Bano, vishnupriya V and Gayathri R., Nutritional Awareness among adolescents, Research Journal of Pharmacy and Technology, Volume No. 9, Issue No 7, 2016; 898-902.

1. Rastriya Kishor Swasthya Karyakram – Resource Book by Ministry of Health and Family welfare.

2. http://vikaspedia.in.,Nutritional needs of Adolescents.

3. Jule Boehlke, (2017) Personal Hygiene in Teenagers, www.livestrong.com

4. Maliye C, Garg B.S. Adolescent Health and Adolescent Health Programmes in India. J. Mahatma Gandhi Inst. Med Sc., 2017;22:78-82.


*********************

# ಬ್ಲಾಕ್ 4 : ಲಿಂಗತ್ವ ಮತ್ತು ಹದಿಹರೆಯ

## ಘಟಕ 1 : ಹದಿಹರೆಯದವರ ಲಿಂಗತ್ವ ಪರಿಕಲ್ಪನೆಯ ಮೇಲೆ ಜೈವಿಕ ಪ್ರಭಾವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು

### ಘಟಕದ ರಚನೆ


4.1.1. ಕಲಿಕಾ ಉದ್ದೇಶಗಳು

4.1.2. ಪೀಠಿಕೆ

4.1.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.1.3.1 ಲಿಂಗ ಮತ್ತು ಲಿಂಗತ್ವದ ಪರಿಕಲ್ಪನೆಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

4.1.3.2. ಹದಿಹರೆಯದವರ ಲಿಂಗತ್ವ ಪರಿಕಲ್ಪನೆಯ ಮೇಲೆ ಜೈವಿಕ ಪ್ರಭಾವಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

4.1.3.3. ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

4.1.4. ಸಾರಾಂಶಿಸೋಣ

4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

4.1.6. ಘಟಕಾಂತ್ಯ ಅಭ್ಯಾಸಗಳು

4.1.7. ಪರಾಮರ್ಶನ ಸೂಚಿ


### 4.1.2. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗ ಮತ್ತು ಲಿಂಗತ್ವದ ಪರಿಕಲ್ಪನೆಗಳನ್ನು ವಿವರಿಸುವರು;
- ಹದಿಹರೆಯದವರಲ್ಲಾಗುವ ಜೈವಿಕ ಮತ್ತು ದೈಹಿಕ ರೂಪ ಬದಲಾವಣೆಗಳನ್ನು ಪಟ್ಟಿ ಮಾಡುವರು;
- ಲೈಂಗಿಕ ಪಕ್ವತೆಯ ಬದಲಾವಣೆಗಳನ್ನು ಲಿಂಗದ ಜೈವಿಕ ಪ್ರಭಾವವೆಂದು ಗುರುತಿಸುವರು;
- ಶೀಘ್ರ ಮತ್ತು ವಿಳಂಬ ಪಕ್ವತೆಯ ನಿಹಿತಾರ್ಥಗಳನ್ನು ವಿವರಿಸುವರು;
- ಹದಿಹರೆಯದವರಲ್ಲಾಗುವ ಹಾರ್ಮೋನುಗಳ ಬದಲಾವಣೆಗಳನ್ನು ಮತ್ತು ಮೆದುಳಿನ ಪಾತ್ರವನ್ನು ವಿವರಿಸುವರು; ಮತ್ತು
- ಹದಿಹರೆಯದಲ್ಲಿ ಲಿಂಗತ್ವದ ಜೈವಿಕ ಪ್ರಭಾವಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ಚರ್ಚಿಸುವರು.

## 4.1.2. ಪೀಠಿಕೆ

ನೀವು ಹಿಂದಿನ ಘಟಕದಲ್ಲಿ, ಹದಿಹರೆಯದವರು ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಂದರ್ಭೋಚಿತ ಚೌಕಟ್ಟಿನಲ್ಲಿ ಹೇಗೆ ಬೆಳೆಯುತ್ತಾರೆ ಎಂಬುದನ್ನು ತಿಳಿದಿರುವಿರಿ. ಅಲ್ಲದೆ ಅವರು ವ್ಯಕ್ತಿತ್ವ ಮತ್ತು ಆರೋಗ್ಯ ವಿಕಾಸದಲ್ಲಿ ಎದುರಿಸುವ ಸಮಸ್ಯೆಗಳನ್ನು ಮತ್ತು ಕಾಳಜಿಗಳನ್ನು ಚರ್ಚಿಸಿರುವಿರಿ. ಈಗ ನಾವು ಲಿಂಗತ್ವದ ದೃಷ್ಟಿಕೋನದಿಂದ ಹದಿಹರೆಯವನ್ನು ಅರಿತುಕೊಳ್ಳೋಣ. ಇದಕ್ಕಾಗಿ ನಾವು ಮಕ್ಕಳ ಲಿಂಗ ಹಾಗೂ ಲಿಂಗತ್ವದ ವಿಕಾಸದ ಮೇಲೆ ಯಾವ ಅಂಶಗಳು ಪ್ರಭಾವಿಸುತ್ತವೆ ಎಂಬುದನ್ನು ತಿಳಿಯೋಣ. ಈ ಬಗ್ಗೆ ನಿಮ್ಮಲ್ಲಿ ಹೀಗೆ ಕೆಲವು ಪ್ರಶ್ನೆಗಳು ಮೂಡಬಹುದು. ಉದಾಹರಣೆಗೆ, ಮಕ್ಕಳು ಲಿಂಗತ್ವದ ವಿಚಾರಗಳನ್ನು ಹೇಗೆ ಕಲಿಯುತ್ತಾರೆ? ಯಾವ ಅಂಶಗಳು ಲಿಂಗಾತ್ಮಕವಾಗಿ ಚಿಂತನೆಯನ್ನು ಪ್ರಭಾವಿಸುತ್ತವೆ? ಲಿಂಗ ಪಡಿಯಚ್ಚುಗಳನ್ನು ಹೇಗೆ ಕಲಿಯುತ್ತಾರೆ? ಮಕ್ಕಳು ಮತ್ತು ಹದಿಹರೆಯದವರು ಹೇಗೆ ಭಿನ್ನ ಪಾತ್ರಗಳನ್ನು ಕಲಿತು ಅನುಸರಿಸುತ್ತಾರೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೋದರೆ ನಮ್ಮಲ್ಲಿ ಲಿಂಗತ್ವದ ವಿಕಾಸವಾಗುವಿಕೆಯ ಬಗೆ ಅನಾವರಣವಾಗುವುದು.

ನೀವು ಒಂದು ವಿಷಯವನ್ನು ಇಲ್ಲಿ ಗಮನಿಸಬೇಕು. ನಿಮ್ಮ ಕಾರ್ಯಕ್ರಮದ 6ನೇ ಕೋರ್ಸಿನಲ್ಲಿ 'ಲಿಂಗ ಮತ್ತು ಲಿಂಗತ್ವ' ವಿಚಾರವಾಗಿ ನೀವು ವಿವರವಾಗಿ ಕಲಿಯುತ್ತೀರಿ. ಇಲ್ಲಿ ಆ ವಿಚಾರಗಳನ್ನು ಸಾಂದರ್ಭಿಕವಾಗಿ ಮಾತ್ರ ಗಮನಿಸಲಾಗಿದೆ.

ಹೆಣ್ಣು ಮತ್ತು ಗಂಡನ್ನು ಕುರಿತಾದ ಸಾಮಾನ್ಯ ಅನಿಸಿಕೆಗಳು ಮತ್ತು ನಂಬಿಕೆಗಳನ್ನೇ ಲಿಂಗ ಪಡಿಯಚ್ಚುಗೊಳಿಸುವಿಕೆ ಎಂದು ಹೇಳಬಹುದು. ವಿವಿಧ ಲಿಂಗಗಳ ಲಿಂಗ ಪಡಿಯಚ್ಚುಗಳಲ್ಲಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಚರ್ಚಿಸಿ, ಲಿಂಗ ಪಡಿಯಚ್ಚುಗಳಿಂದ ಮುಕ್ತರಾದ ಮಕ್ಕಳನ್ನು ರೂಪಿಸುವ ಮಾರ್ಗಗಳನ್ನು ಗುರುತಿಸೋಣ.

ಹದಿಹರೆಯವು ಬಾಲ್ಯಾವಸ್ಥೆ ಮತ್ತು ವಯಸ್ಕ ಹಂತಗಳ ನಡುವಿನ ಸಂಕ್ರಮಣ ಕಾಲವೆಂದು ತಿಳಿದಿದ್ದೀರಿ. ಹದಿಹರೆಯದವರು ಕ್ಷಿಪ್ರ ಮತ್ತು ಸಂಕೀರ್ಣವಾದ ಜೈವಿಕ, ಶರೀರಾತ್ಮಕ ಮತ್ತು ಮನೋವೈಜ್ಞಾನಿಕ ಬದಲಾವಣೆಗಳನ್ನು ಹೊಂದುವರು. ಅದರ ಪರಿಣಾಮವಾಗಿ ಬಾಲಕರೂ ಬಾಲಕಿಯರೂ ಅನೇಕ ಅಪರಿಚಿತ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಹಂತವು ಸಾಧಕರಾಗಲು ಸಹಾಯವಾಗುವುದರ ಜೊತೆಗೆ ಅಡ್ಡಿ ಆತಂಕಗಳನ್ನೂ ಎದುರಾಗಿಸುವ ಶಕ್ತಿಯನ್ನೂ ಮೈಗೂಡಿಸುತ್ತದೆ.

ಮೊದಲಿಗೆ ಹದಿಹರೆಯವನ್ನು 'ಲಿಂಗತ್ವ'(gender)ದ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳೋಣ. ಹದಿಹರೆಯದವರು ಈ ಹಂತದಲ್ಲಿ ತಮ್ಮನ್ನು 'ಸ್ತ್ರೀ' ಅಥವಾ 'ಪುರುಷ'ರಾಗಿ ಗುರುತಿಸಿಕೊಳ್ಳುತ್ತಾರೆ. ಈ ಹಂತದಲ್ಲಿ ಮಕ್ಕಳು ಮೊದಲಿಗಿಂತ ಹೆಚ್ಚಾಗಿ ಲಿಂಗತ್ವಪ್ರಜ್ಞೆ ಬೆಳೆಸಿಕೊಂಡು ಹೆಣ್ಣು ಮತ್ತು ಗಂಡು ಎಂಬ ಭಾವದಲ್ಲಿ ಇರುತ್ತಾರೆ. ಜೀವವಿಜ್ಞಾನಿಗಳ ಪ್ರಕಾರ 'gonadal' ಅಥವಾ ಲಿಂಗಾತ್ಮಕವಾಗಿ ಭಿನ್ನವಾದ ಹಾರ್ಮೋನ್‌ಗಳ ಕಾರಣದಿಂದ ಲಿಂಗ ವ್ಯತ್ಯಾಸಗಳು ಕಂಡುಬರುತ್ತದೆ ಎಂದು ತಿಳಿಯಲಾಗಿದೆ. ಪಕ್ವತೆಯ ಹಂತದಲ್ಲಿ ಬಾಹ್ಯ ಹಾಗೂ ಆಂತರಿಕವಾಗಿ ಅವರಲ್ಲಿ ಭಿನ್ನತೆಗಳು ಗೋಚರಿಸುತ್ತವೆ. ಪರಿಣಾಮವಾಗಿ ಹುಡುಗಿಯರು ಮತ್ತು ಹುಡುಗರು ತಮ್ಮ ಲಿಂಗ ರೂಪದತ್ತ ಸ್ವಯಂ ಪ್ರಜ್ಞೆಯುಳ್ಳವರಾಗುತ್ತಾರೆ.

## 4.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.1.3.1. ಲಿಂಗ ಮತ್ತು ಲಿಂಗತ್ವದ ಪರಿಕಲ್ಪನೆಗಳು

ನಾವು ಲಿಂಗತ್ವಮಯವಾದ ಪ್ರಪಂಚದಲ್ಲಿ ಇದ್ದೇವೆ, ಏಕೆಂದರೆ ನಮ್ಮ ಸುತ್ತಣ ಪ್ರಪಂಚದ ಅನೇಕ ಅಂಶಗಳು ಲಿಂಗಾತ್ಮಕವಾಗಿವೆ. ದೃಷ್ಟಾಂತವಾಗಿ ನಮ್ಮ ಕುಟುಂಬವನ್ನೇ ನೋಡೋಣ.

**ಅಭ್ಯಾಸ -1**

ಈ ಕೆಳಗಿನ ಕೆಲಸಕಾರ್ಯಗಳಲ್ಲಿ ತಂದೆ-ತಾಯಿಗಳು ಸಾಮಾನ್ಯವಾಗಿ ಯಾರ ಸಹಾಯವನ್ನು ಕೇಳುತ್ತಾರೆ? ಆವರಣದಲ್ಲಿ ಮಗ ಎನ್ನಲು (S) ಮತ್ತು ಮಗಳು ಎನ್ನಲು (D) ಎಂದು ಗುರುತಿಸಿ.

| | **ಕೆಲಸಗಳು** | S / D |
|---|---|---|
| 1 | ಮನೆ ಸ್ವಚ್ಛಗೊಳಿಸುವುದು | |
| 2 | ಗೃಹೋಪಕರಣಗಳ ರಿಪೇರಿ | |
| 3 | ಅಡುಗೆ ಸಿದ್ಧತೆ | |
| 4 | ವಿದ್ಯುತ್ ಮತ್ತು ನೀರಿನ ಬಿಲ್ಲು ಸಂದಾಯ | |
| 5 | ಕಿರಿಯ ಸೋದರ/ ಸೋದರಿಯನ್ನು ನೋಡಿಕೊಳ್ಳುವುದು | |

ಈ ಮೇಲಿನ ಕೆಲಸಗಳು ಯಾರಿಗೆ ಸಂಬಂಧಿಸಿದುದು ಎಂದು ಕೇಳಿದ ಕೂಡಲೆ ಮಕ್ಕಳು ಅದು ಹುಡುಗಿಯರದೇ ಅಥವಾ ಹುಡುಗರದೇ ಎಂದು ತತ್‌ಕ್ಷಣ ಉತ್ತರಿಸಲು ಸಮರ್ಥರಾಗಿರುತ್ತಾರೆ. ಅಂದರೆ ಶಾಲೆಗೆ ಸೇರುವ ಸಮಯಕ್ಕಾಗಲೇ ಮಕ್ಕಳಿಗೆ ಲಿಂಗತ್ವದ ಪಾತ್ರಗಳ ಪರಿಚಯವಾಗಿಬಿಟ್ಟಿರುತ್ತದೆ. ಶಾಲೆಗಳಲ್ಲೂ ಬಾಲಕಿಯರು ಮತ್ತು ಬಾಲಕರು ಪ್ರಾರ್ಥನಾ ಸಭೆ ಮತ್ತು ಇತರ ಔಪಚಾರಿಕ ಚಟುವಟಿಕೆಗಳಿಗೆ ಪ್ರತ್ಯೇಕ ಸಾಲು ಮಾಡುವುದು, ಪಠ್ಯ ಮತ್ತು ಪಠ್ಯೇತರ ಕಾರ್ಯಗಳಿಗೆ ಪ್ರತ್ಯೇಕ ಗುಂಪುಗಳನ್ನು ಮಾಡಿಕೊಳ್ಳುವುದು, ತರಗತಿ ಕೋಣೆಯಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆ ಹೊಂದಿರುವುದು ಇತ್ಯಾದಿ ಲಿಂಗಾಧಾರಿತವಾದ ವ್ಯವಸ್ಥೆಯನ್ನು ಕಾಣುತ್ತೇವೆ. ವಿದ್ಯಾರ್ಥಿಗಳನ್ನು ಗಂಡು ಮತ್ತು ಹೆಣ್ಣು ಎಂದು ಲಿಂಗಾಧಾರಿತವಾಗಿ ನೋಡುವುದು ಸಾಮಾನ್ಯವಾಗಿದೆ. ಈ ಅಂಶಗಳು 'ಲಿಂಗ'(sex) ಮತ್ತು 'ಲಿಂಗತ್ವ'(gender)ದ ಪರಿಕಲ್ಪನೆಗಳ ಅರ್ಥಸ್ಪಷ್ಟತೆಯನ್ನು ನೀಡುವ ಅಗತ್ಯವನ್ನು ಉಂಟುಮಾಡಿದೆ. ಆಸ್ಪತ್ರೆಗಳಲ್ಲಿ, ಕ್ಲಿನಿಕ್‌ಗಳಲ್ಲಿ 'ಲಿಂಗ ಪತ್ತೆಹಚ್ಚುವುದು ಅಪರಾಧ' ಎಂಬ ಫಲಕವನ್ನು ನೀವು ನೋಡಿರಬಹುದು. ಮಗು ಅಥವಾ ವ್ಯಕ್ತಿ ಗಂಡೇ ಅಥವಾ ಹೆಣ್ಣೆ ಎಂಬುದನ್ನು ಹೇಳುವುದು 'ಲಿಂಗ'. ಈ ಪದವನ್ನು ಇಂಗ್ಲಿಷ್‌ನ 'sex' ಎಂಬ ಪದಕ್ಕೆ ಸಂವಾದಿಯಾಗಿ ಬಳಸಿಕೊಳ್ಳಲಾಗಿದೆ. ಇದು ಗಂಡು ಅಥವಾ ಹೆಣ್ಣು ಎಂದು ನಿರ್ವಚಿಸುವ ಜೈವಿಕ ಮತ್ತು ಶಾರೀರಿಕ ಅಂಶಗಳಾದ ವರ್ಣತಂತುಗಳ ಅಂಗರಚನೆ, ಸಂತಾನೋತ್ಪತ್ತಿ ವ್ಯವಸ್ಥೆಗಳು ಇತ್ಯಾದಿಗಳನ್ನು ಸೂಚಿಸುತ್ತದೆ. ಹಾಗಾದರೆ 'ಲಿಂಗತ್ವ' ಎಂಬುದರ ಅರ್ಥವೇನು?

**ಲಿಂಗತ್ವದ ಭಿನ್ನತೆಗಳು:**

ಲಿಂಗತ್ವವು ವ್ಯಕ್ತಿಯು ಗಂಡು ಮತ್ತು ಹೆಣ್ಣು ಇಬ್ಬರ ಗುಣಲಕ್ಷಣಗಳನ್ನು ಸೂಚಿಸುತ್ತದೆ. ಇದು ಇಂಗ್ಲಿಷ್‌ನ 'gender' ಎಂಬುದಕ್ಕೆ ಸಂವಾದಿಯಾದ ಪದ. ಲಿಂಗತ್ವವು ಗಂಡು ಹೆಣ್ಣುಗಳ ಸಮಾಜೋ-ಸಾಂಸ್ಕೃತಿಕವಾದ ಭಿನ್ನ ಅಂಶಗಳಿಗೆ ಸಂಬಂಧಿಸಿವೆ. ಒಬ್ಬ ಗಂಡಸು ಅಥವಾ ಒಬ್ಬ ಹೆಂಗಸಿಗೆ ಸಮಾಜ ಅಥವಾ ಸಂಸ್ಕೃತಿ 'ಸೂಕ್ತ' ಎಂದು ವಿಧಿಸಿರುವ ವರ್ತನೆಗಳಿಗೆ, ಧೋರಣೆಗಳಿಗೆ, ಭಾವನೆಗಳಿಗೆ ಮತ್ತು ಇತರ ಗುಣಗಳಿಗೆ ಸಂಬಂಧಿಸಿದುದು ಇದು. ಇವುಗಳನ್ನು ವ್ಯಕ್ತಿಯ ಜೈವಿಕ ಲಿಂಗಕ್ಕೆ(sex) ಮೀರಿ ವ್ಯಕ್ತಿ ತೋರಿದ ಗುಣಲಕ್ಷಣಗಳಿಂದ ತಿಳಿಯಬಹುದು. ಲಿಂಗದ ಅಂಶಕ್ಕಿಂತ ಹೆಚ್ಚಾಗಿ ಹದಿಹರೆಯದವರ ಜೀವನದ ಕೆಲವು ಅಂಶಗಳು ಅವರ ಅನನ್ಯತೆ(identity )ಯನ್ನು ಸಾಮಾಜಿಕ ಸಂಬಂಧಗಳನ್ನು ಕೇಂದ್ರವಾಗಿರಿಸಿಕೊಂಡಿರುತ್ತವೆ. ಲಿಂಗ ಎಂಬುದಕ್ಕೆ ಸಂಬಂಧಿಸಿದಂತೆ ಎರಡು ಅಂಶಗಳನ್ನು ಇಲ್ಲಿ ವಿಶೇಷವಾಗಿ ಚರ್ಚಿಸಬೇಕಾದುದು ಅಗತ್ಯ. ಅವು ಲಿಂಗತ್ವ ಪಾತ್ರ(gender role) ಮತ್ತು ಲಿಂಗತ್ವದ ಅಚ್ಚುಗೊಳಿಸುವಿಕೆ(gender typing).

**1) ಲಿಂಗತ್ವ ಪಾತ್ರ (gender role):** ಗಂಡಸರು ಮತ್ತು ಹೆಂಗಸರು ಹೇಗೆ ಚಿಂತಿಸಬೇಕು, ಕಾರ್ಯ ನಿರ್ವಹಿಸಬೇಕು ಮತ್ತು ಭಾವಿಸಬೇಕು ಎಂಬ ಬಗ್ಗೆ ಸೂಚಿಸಲಾದ ನಿರೀಕ್ಷೆಗಳೇ ಲಿಂಗಪಾತ್ರವಾಗುತ್ತದೆ. ಉದಾಹರಣೆಗೆ ಗಂಡಸರು ಹೆಂಗಸರಿಗಿಂತ ಬಲಾಢ್ಯರಾಗಿರಬೇಕು, ಧೈರ್ಯವಂತರಾಗರಿಬೇಕು, ಹೆಂಗಸರು ಇತರರ ಭಾವನೆಗಳಿಗೆ ಗಂಡಸರಿಗಿಂತ ಹೆಚ್ಚು ಸಂವೇದನಾಶೀಲರಾಗಿರಬೇಕು, ಇತ್ಯಾದಿ.

**2) ಲಿಂಗತ್ವದ ಅಚ್ಚುಗೊಳಿಸುವಿಕೆ (gender typing):** ಒಂದು ನಿರ್ದಿಷ್ಟ ಸಂಸ್ಕೃತಿಯಲ್ಲಿ ವ್ಯಕ್ತಿಗಳು ಅವರ ಲಿಂಗಕ್ಕೆ ಸೂಕ್ತವಾದುದೆಂದು ಪರಿಗಣಿತವಾದ ಚಿಂತನೆಗಳನ್ನು, ಮತ್ತು ವರ್ತನೆಗಳನ್ನು ಹೊಂದುವ, ಮೈಗೂಡಿಸಿಕೊಳ್ಳುವ ಪ್ರಕ್ರಿಯೆಗೆ 'ಲಿಂಗತ್ವದ ಅಚ್ಚುಗೊಳಿಸುವಿಕೆ' ಎನ್ನುವರು. ಉದಾಹರಣೆಗೆ ಹೆಂಗಸರು ಪಾಲನೆ ಪೋಷಣೆ, ಮನೆಯ ಅಚ್ಚುಕಟ್ಟುತನದ ನಿರ್ವಹಣೆ, ಅತಿಥಿ ಸತ್ಕಾರ ಇವುಗಳನ್ನು ಗಮನಿಸಿಕೊಳ್ಳುವುದು, ಗಂಡಸರು ಸಂಪಾದನೆ, ಹೊರಗಿನ ಜವಾಬ್ದಾರಿಗಳನ್ನು ನಿರ್ವಹಿಸುವುದು ಇತ್ಯಾದಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗಿನ ಹೇಳಿಕೆಗಳನ್ನು 'ಲಿಂಗ' ಮತ್ತು 'ಲಿಂಗತ್ವ' ಪರಿಕಲ್ಪನೆಗಳ ಅಡಿಯಲ್ಲಿ ವರ್ಗೀಕರಿಸಿ ಕೊಟ್ಟ ಆವರಣದಲ್ಲಿ S / G ಅಕ್ಷರದಿಂದ ಸೂಚಿಸಿ:

| | ಹೇಳಿಕೆಗಳು | S/ G |
|---|---|---|
| 1 | ನನ್ನ ಮಗಳಿಗೆ ಹೆಣ್ಣುಮಗು ಹುಟ್ಟಿದೆ | |
| 2 | ಭಾಗೀರಥಿ ತನ್ನ ಜೀವವನ್ನು ಕೊಟ್ಟು ಹೆಣ್ಣಿಗೆ ಅನ್ವರ್ಥವಾದ ಬದುಕನ್ನೇ ಬದುಕಿದಳು | |
| 3 | ಈಗಿನ ಹೆಣ್ಣುಮಕ್ಕಳು ಗುಡಿಸಿ ಒರೆಸುವುದುಂಟೇ? | |
| 4 | ನಮ್ಮ ವಂಶದಲ್ಲಿ ಬರೀ ಗಂಡುಮಕ್ಕಳೇ. ಒಂದಾದರೂ ಹೆಣ್ಣುಮಗುವಿಲ್ಲ ಎಂಬುದೇ ಕೊರತೆ. | |
| 5 | ನನ್ನ ಮಗನೂ ಈಗ ಅಡಿಗೆ ಮಾಡುತ್ತಾನೆ. ಅದರಲ್ಲೇನಿದೆ? | |
| 6 | ಭಾರತದ ಹೆಣ್ಣುಮಕ್ಕಳು ಸಂಸ್ಕೃತಿಯ ಘನತೆಯ ಪ್ರತೀಕ | |
| 7 | ಕೊಟ್ಟ ಮಗಳು ಕುಲಕ್ಕೆ ಹೊರಗು | |
| 8 | ನನ್ನ ಮಗ ಇವನೇ! ವಂಶೋದ್ಧಾರಕ! | |
| 9 | ಇಂದು ಗಂಡು ಮತ್ತು ಹೆಣ್ಣು ಮಕ್ಕಳ ಅನುಪಾತ ಅಪಾಯಕಾರಿಯಾಗಿ ಬದಲಾಗಿದೆ. | |
| 10 | ಹೆಣ್ಣುಮಕ್ಕಳು ಇಂದು ಮನೆಯ ಹೊಸ್ತಿಲನ್ನು ದಾಟಿ ಹೊರಬರುತ್ತಿದ್ದಾರೆ. | |

ಲಿಂಗ ಪಕ್ವತೆಯ ಕಾಲವು (Puberty) ಭೌತಿಕವಾದ ಸ್ಥಿತ್ಯಂತರವನ್ನು ಉಂಟುಮಾಡಿ ವಯಸ್ಕ ಹಂತಕ್ಕೆ ಒಯ್ಯುವುದು. ಈ ಲಿಂಗಪಕ್ವತೆಯು ಒಂದು ಜೈವಿಕ ಕಾರಕ ಅಂಶವಾಗಿ ಹದಿಹರೆಯದವರ ಲಿಂಗಾತ್ಮಕ ವರ್ತನೆಯ ಮೇಲೆ ಪ್ರಭಾವಿಸುವುದು. ಇದು ಹರೆಯದ ಆರಂಭದಲ್ಲೇ ಹಾರ್ಮೋನುಗಳ ಮತ್ತು ದೈಹಿಕ ರೂಪದ ಬದಲಾವಣೆಗಳನ್ನು ಒಳಗೊಂಡು ತ್ವರಿತವಾಗಿ ಭೌತಿಕ ಪಕ್ವತೆಯಾಗಿ ಕಾಣಿಸಿಕೊಳ್ಳುವುದು. ಹದಿಹರೆಯದವರ ಲಿಂಗಾತ್ಮಕ ವರ್ತನೆಯಲ್ಲಿ ಹೊಸ ಹಾರ್ಮೋನುಗಳು ಲೈಂಗಿಕತೆಯನ್ನು ಉಂಟುಮಾಡುವುದು. ಭೌತಿಕ ಮತ್ತು ಶಾರೀರಿಕ ಬದಲಾವಣೆಗಳು, ಹಾರ್ಮೋನ್‌ಗಳ ಬದಲಾವಣೆಗಳು, ಪರಿಪಕ್ವತೆ ಮತ್ತು ಮೆದುಳಿನ ರಚನೆಯನ್ನು ಅಧ್ಯಯನ ಮಾಡುವ ಮೂಲಕ ಜೈವಿಕ ಅಂಶಗಳನ್ನು ಕುರಿತು ವಿವರವಾಗಿ ತಿಳಿಯೋಣ.

1) **ಭೌತಿಕ ಮತ್ತು ಶಾರೀರಿಕ ಬದಲಾವಣೆಗಳು**

**ಅಭ್ಯಾಸ – II**

ಶಿಕ್ಷಕರು 'ಶಾಲಾ ವಾರ್ಷಿಕೋತ್ಸವ' ಸಮಾರಂಭ ಸಿದ್ಧತೆಯ ಈ ಕೆಳಗಿನ ಕಾರ್ಯಗಳನ್ನು ಸಾಮಾನ್ಯವಾಗಿ ಯಾರಿಗೆ ನಿರ್ವಹಿಸುತ್ತಾರೆ? ಕೊಟ್ಟಿರುವ ಆವರಣದಲ್ಲಿ ಹುಡುಗಿಯರಿಗಾದರೆ **'G'** ಎಂದೂ ಹುಡಗರಿಗಾದರೆ **'B'** ಎಂದೂ ಬರೆಯಿರಿ :

| | **ಕಾರ್ಯಗಳು** | 'G'/'B' |
|---|---|---|
| 1 | ಸಭಾಂಗಣವನ್ನು ಸ್ವಚ್ಛಗೊಳಿಸುವುದು | |
| 2 | ತೋರಣಗಳನ್ನು ಕಟ್ಟುವುದು | |
| 3 | ಪೀಠೋಪಕರಣಗಳನ್ನು ಎತ್ತಿ ಜೋಡಿಸಿಡುವುದು | |
| 4 | ಅತಿಥಿಗಳಿಗೆ ಪುಷ್ಪಗುಚ್ಛ ನೀಡುವುದು | |
| 5 | ಧ್ವನಿವರ್ಧಕಗಳು ಅಥವಾ ವಿದ್ಯುದ್ದೀಪಗಳನ್ನು ಜೋಡಿಸುವುದು | |

ಈ ರೀತಿಯ ಕೆಲಸ ಕಾರ್ಯಗಳನ್ನು ಶಿಕ್ಷಕರು ಲಿಂಗವ್ಯತ್ಯಾಸದ ಆಧಾರದ ಮೇಲೆ ವಹಿಸುವರು ಎಂದು ನೀವು ಭಾವಿಸಿರಬೇಕು. ಬಹುಶ: ಮೇಲಿನ ಅಭ್ಯಾಸಕ್ಕೆ ನೀವು (1) (2) ಮತ್ತು(4) ಹುಡುಗಿಯರಿಗೂ (3) ಮತ್ತು(5) ಹುಡುಗರಿಗೂ ವಹಿಸುತ್ತಾರೆ ಎಂದು ಗುರುತಿಸುತ್ತೀರಿ. ಹಗುರವಾದ ಅಲಂಕರಣಾತ್ಮಕ ಕಾರ್ಯಗಳೆಂದು ಹುಡುಗಿಯರಿಗೂ, ಬಲ ಅಥವಾ ಶ್ರಮ ಬೇಕಾಗುವ ಕಾರ್ಯಗಳನ್ನು ಹುಡುಗರಿಗೂ ವಹಿಸುತ್ತಾರೆ ಎಂಬ ಸಮರ್ಥನೆಯನ್ನು ನೀವು ನೀಡಬಹುದು. ಹೀಗೆಯೇ ಲಿಂಗಾಧಾರಿತ ಗುಣಲಕ್ಷಣಗಳನ್ನು ಈ ಕೆಳಗಿನಂತೆ ತಜ್ಞರು ಸಾಮಾನ್ಯೀಕರಿಸಿದ್ದಾರೆ.

| **ಆಧಾರ ಆಂಶಗಳು** | **ಲಿಂಗ ವಿಧ** | |
|---|---|---|
| | ಗಂಡು ಮಕ್ಕಳು | ಹೆಣ್ಣು ಮಕ್ಕಳು |
| ಭೌತಿಕ ಗುಣಲಕ್ಷಣಗಳು | ಎತ್ತರ, ದೃಢ ಮತ್ತು ದಷ್ಟಪುಷ್ಟ ಶರೀರ | ಮೃದು, ಸೂಕ್ಷ್ಮ, ಮತ್ತು ಆಕರ್ಷಕ |
| ಚಟುವಟಿಕೆಗಳು ಮತ್ತು ವರ್ತನೆ | ವಸ್ತುಗಳ ನಿರ್ವಹಣೆಯಲ್ಲಿ ಚುರುಕು ಮತ್ತು ನಾಯಕತ್ವ ಗುಣ | ಮಕ್ಕಳ ಆರೈಕೆ ಮತ್ತು ಅಲಂಕರಣಕಾರ್ಯ |
| ವೃತ್ತಿಗಳು | ವಾಹನ ಚಾಲನೆ ಮತ್ತು ಜೀವ ವಿಮಾ ಏಜೆಂಟ್ ಮತ್ತು ರಸಾಯನಶಾಸ್ತ್ರಜ್ಞ | ಶಾಲಾ ಶಿಕ್ಷಕಿ ಸೆಕ್ರೆಟರಿ ಮತ್ತು ದಾದಿ |
| *ಈ ಪಾತ್ರಗಳು ಇಂದು ಸಂಕ್ರಮಣ ಸ್ಥಿತಿಯಲ್ಲಿವೆ ಎಂಬುದು ನಮ್ಮ ಗಮನದಲ್ಲಿರಬೇಕು | | |

ನಿಮಗೆ ಈಗಾಗಲೇ ತಿಳಿದಿರುವಂತೆ ಹದಿಹರೆಯವು ಭೌತಿಕ ಮತ್ತು ಲೈಂಗಿಕ ಅಂಶಗಳಲ್ಲಿ ವಿಕಾಸದ ಬುಗ್ಗೆಯ ಕಾಲ. ಈ ಅಂಶಗಳಲ್ಲಿ ಬಾಲಕ, ಬಾಲಕಿಯರಲ್ಲಿ ವ್ಯತ್ಯಾಸವಿರುತ್ತದೆ. ಪಕ್ವತೆಯ ಬದಲಾವಣೆಗಳು ಜೈವಿಕ ಪ್ರಭಾವಗಳೆಂಬುದು ಸ್ಪಷ್ಟವಾಗಿ ತಿಳಿದಿರುವ ಅಂಶ. ಇದರಿಂದಲೇ ಹದಿಹರೆಯದವರು ಲಿಂಗತ್ವದ ವರ್ತನೆಯನ್ನು ಮತ್ತು ಮನೋಧೋರಣೆಗಳನ್ನು ತೋರುತ್ತಾರೆ.

ಲೈಂಗಿಕ ಪಕ್ವತೆಯು ಶೀಘ್ರವಾಗಿ ಆಗುವ ಭೌತಿಕ ಪರಿಪಕ್ವತೆಯ ಕಾಲವೂ ಹೌದೆಂದು ನೀವು ತಿಳಿದಿರುವಿರಿ. ಅನುವಂಶಿಯತೆ, ಹಾರ್ಮೋನುಗಳು, ದೇಹದ ತೂಕ, ದೇಹದ ಶೇಕಡವಾರು ಕೊಬ್ಬು ಮತ್ತು ಲೆಪ್ಟಿನ್ ಇವುಗಳು ಲೈಂಗಿಕ ಪಕ್ವತೆಯ ನಿರ್ಧಾರಕ ಅಂಶಗಳಾಗಿರುತ್ತವೆ. ಈ ಅಂಶಗಳನ್ನು ಗಮನಿಸೋಣ

**ಹಾರ್ಮೋನಿನ ಬದಲಾವಣೆಗಳು**

ದೈಹಿಕ ಕಾಯಿಲೆಯ ತಪಾಸಣೆಗಾಗಿ ವೈದ್ಯರ ಬಳಿ ಹೋದಾಗ "ಹಾರ್ಮೋನ್‌ಗಳ ಕೊರತೆ" ಅಥವಾ ಹಾರ್ಮೋನ್ ಗಳ "ಅಸಮತೋಲನ" ಇತ್ಯಾದಿ ಕೇಳಿರಬಹುದಲ್ಲವೆ? ಹಾಗಿದ್ದರೆ ದೈಹಿಕ ವಿಕಾಸವು ಪಿಟ್ಯುಟರಿ ಗ್ರಂಥಿಗಳಿಂದ ಬಿಡುಗಡೆಯಾಗುವ ಹಾರ್ಮೋನುಗಳಿಂದ ನಿಯಂತ್ರಿಸಲ್ಪಡುತ್ತದೆ ಎಂಬುದನ್ನು ತಿಳಿದಿರುವಿರಿ. ಹಾಗೆಯೇ ಲೈಂಗಿಕ ಪಕ್ವತೆಯು ಲೈಂಗಿಕ ಹಾರ್ಮೋನುಗಳಿಂದ ನಿಯಂತ್ರಿಸಲ್ಪಡುತ್ತದೆ.

ಲೈಂಗಿಕ ಪಕ್ವತೆಯ ಕಾಲದಲ್ಲಿ ಹುಡುಗರಲ್ಲಿ ಮತ್ತು ಹುಡುಗಿಯರಲ್ಲಿ ವಿವಿಧ ಪ್ರಮಾಣಗಳಲ್ಲಿದ್ದು ಮಹತ್ತರ ಪಾತ್ರವಹಿಸುವ ಎರಡು ಹಾರ್ಮೋನು ಗುಂಪುಗಳೆಂದರೆ ಎಂಡ್ರೋಜನ್ ಮತ್ತು ಈಸ್ಟ್ರೋಜನ್. ಲೈಂಗಿಕ ಪಕ್ವತೆಯ ಕಾಲದಲ್ಲಿ ಹೈಪೋತಲಮಸ್ (hypothalamus), ಪಿಟ್ಯುಟರಿ ಗ್ರಂಥಿ ಮತ್ತು ಗೊನೆಡಗಳ ನಡುವೆ ಅಂತರ್ ಕ್ರಿಯೆಯನ್ನು ಉಂಟುಮಾಡುವುದೇ ಎಂಡೋಕ್ರೈನ್ ವ್ಯವಸ್ಥೆಯ ಪಾತ್ರ.

ಒಂದು ಅಂದಾಜಿನಂತೆ ಹುಡುಗಿಯರಲ್ಲಿ ಲೈಂಗಿಕಪಕ್ವತೆಯು ಸಾಮಾನ್ಯವಾಗಿ 9ನೆಯ ವಯಸ್ಸಿನಲ್ಲಿ ಮತ್ತು ಹುಡುಗರಲ್ಲಿ 11ನೆಯ ವಯಸ್ಸಿನಲ್ಲಿ ಉಂಟಾಗುವುದು. ಲೈಂಗಿಕ ಪಕ್ವತೆಯ ಗರಿಷ್ಟ ಹಂತ ಹುಡುಗಿಯರಿಗೆ 11.5 ವರ್ಷವಾದರೆ ಹುಡುಗರಿಗೆ 13.5 ವರ್ಷದಲ್ಲಿ ಆಗಬಹುದು. ಲೈಂಗಿಕ ಪಕ್ವತೆಯ ಕಾಲದಲ್ಲಿ ಹುಡುಗಿಯರು ವರ್ಷಕ್ಕೆ ಸರಾಸರಿ 3.5 ಅಂಗುಲ ಬೆಳೆದರೆ ಹುಡುಗರು ಸರಾಸರಿ 4 ಅಂಗುಲ ಬೆಳೆಯಬಹುದು.

ಲೈಂಗಿಕ ಪರಿಪಕ್ವನವು ಹದಿಹರೆಯಕ್ಕೆ ಕಾಲಿಟ್ಟ ಹುಡುಗ–ಹುಡುಗಿಯರಲ್ಲಿ ಲೈಂಗಿಕ ವರ್ತನೆಯನ್ನೂ ಧೋರಣೆಗಳನ್ನೂ ತೀವ್ರಗೊಳಿಸುವುದು. ಹುಡುಗರು ಹುಡುಗಿಯರೊಡನೆ ಮತ್ತು ಹುಡುಗಿಯರು ಹುಡುಗರೊಡನೆ ಅಂತರ್‌ಕ್ರಿಯಿಸುವಾಗ ಇದು ಕಾಣಬರುವುದು.

**ಪರಿಪಕ್ವತೆ/ Maturation**

ನವಜಾತ ಶಿಶು ನಡೆಯಲಾರದು, ಆರು ತಿಂಗಳ ಮಗು ಮಾತನಾಡದು, ಕಾಲಕಳೆದಂತೆ ಮಾನವ ಜೀವಿಗಳು ಎತ್ತರದ ಕಾಯವನ್ನು ಪಡೆಯುವರು. ಇವುಗಳಿಗೆ ಕಾರಣವಾದರೂ ಏನು? ಇದಕ್ಕೆ ಕಾರಣವೇ ಪರಿಪಕ್ವತೆ. ಪರಿಪಕ್ವತೆಯಾಗುವ ಮೊದಲೇ ಇಂತಹ ಕೆಲವು ಅಂಶಗಳು ಸಾಧ್ಯವಾಗುವುದು ಅಸಾಧ್ಯ.

ನೀವು ಈಗಾಗಲೇ ಪರಿಪಕ್ವತೆಯು ಒಂದು ಸ್ವಾಭಾವಿಕವಾದ ಮತ್ತು ಗುಣಾಣುಗಳಿಂದ ನಿರ್ಧರಿತವಾಗಿ ವಿಕಾಸ ಪ್ರಕ್ರಿಯೆ ಎಂದು ತಿಳಿದಿರುವಿರಿ. ಇದನ್ನು ವ್ಯಕ್ತಿಯ ಆನುವಂಶಿಕ ಗುಣಲಕ್ಷಣಗಳು ಪಕ್ವವಾಗುವ ಮತ್ತು ತೆರೆದುಕೊಳ್ಳುವ ಕ್ರಿಯೆಯಲ್ಲಿ ಗಮನಿಸಬಹುದು. ಪರಿಪಕ್ವನದ ಸೂಕ್ತ ಸಮಯದಲ್ಲಿ ಮಕ್ಕಳಿಗೆ ತಕ್ಕ ರೀತಿಯ ತರಬೇತಿ ಒದಗಿಸಿ ಅಪೇಕ್ಷಿತ ವಿಕಾಸ ಮತ್ತು ಬೆಳವಣಿಗೆಯನ್ನು ಪಡೆಯುವಂತೆ ಮಾಡಬಹುದು. ಪರಿಪಕ್ವನದ ಕಾಲದ ಶೀಘ್ರ ಮತ್ತು ಸಂಕೀರ್ಣವಾದ ದೈಹಿಕ ಮತ್ತು ಮನೋವೈಜ್ಞಾನಿಕ ಬದಲಾವಣೆಗಳು ಹದಿಹರೆಯದವರು ಕೆಲವು ಸಮಸ್ಯೆಗಳಿಗೆ ತುತ್ತಾಗುವಂತೆ ಮಾಡುತ್ತದೆ.

ಇಲ್ಲಿ ನಾವು ಪರಿಪಕ್ವನವು ಲಿಂಗಾತ್ಮಕ ಭಿನ್ನತೆಗಳನ್ನು ಉಂಟುಮಾಡುವ ಒಂದು ಅಂಶವೆಂಬುದರ ಬಗ್ಗೆ ಗಮನಿಸಿಕೊಳ್ಳಬೇಕು. ದೇಹದ ಗಾತ್ರದಲ್ಲಾದ ಹೆಚ್ಚಳ ಮತ್ತು ಸ್ನಾಯು ಶಕ್ತಿಯು ಹದಿಹರೆಯದಲ್ಲಿ ಎರಡೂ ಲಿಂಗದವರ ಚಲನಾತ್ಮಕ ಶಕ್ತಿಯನ್ನು ವೃದ್ಧಿಸುತ್ತದೆ. ಪರಿಪಕ್ವನದ ಕಾಲವು, ಅಂದರೆ ವಿಳಂಬ ಪರಿಪಕ್ವನ ಅಥವಾ ಶೀಘ್ರ ಪರಿಪಕ್ವನವು ಲಿಂಗ ವ್ಯತ್ಯಾಸದ ಆಧಾರದ ಮೇಲೆ ಭಿನ್ನ ರೀತಿಯ ಪ್ರಭಾವ ಬೀರುತ್ತವೆ.

ಸಾಮಾನ್ಯವಾಗಿ ಪರಿಪಕ್ವನದ ಅವಧಿಯಾದ್ಯಂತ ಹುಡುಗಿಯರು ತಮ್ಮ ದೇಹದ ಬಗ್ಗೆ ಹುಡುಗರಿಗಿಂತ

ಹೆಚ್ಚು ಅಸಂತೃಪ್ತರು ಮತ್ತು ಋಣಾತ್ಮಕ ಬಿಂಬ ಹೊಂದಿದವರೂ ಆಗಿರುತ್ತಾರೆ. ಹುಡುಗರು ದೇಹದಲ್ಲಿ ಸ್ನಾಯು ದಟ್ಟತೆಯ ಹೆಚ್ಚಳದ ಬಗ್ಗೆ ಹೆಚ್ಚು ತೃಪ್ತಿ ವ್ಯಕ್ತಪಡಿಸುತ್ತಾರೆ. ಹುಡುಗರು ಮತ್ತು ಹುಡುಗಿಯರು ಟ್ಯಾಟುಗಳನ್ನು ಹಾಕಿಸಿಕೊಳ್ಳುವ ಮತ್ತು ವಿವಿಧ ಕಡೆ ಚುಚ್ಚಿಸಿಕೊಳ್ಳುವ ಶೋಕಿ ಹೆಚ್ಚುತ್ತಿರುವುದನ್ನು ನೀವು ಕಂಡಿರಬೇಕು. ಇದು ಬಂಡಾಯ ಪ್ರವೃತ್ತಿ ತೋರುವ ಮತ್ತು ಅಪಾಯಗಳನ್ನು ತಾವಾಗಿ ತೆಗೆದುಕೊಳ್ಳುವ ಭಾವಸೂಚಕ, ಇದು ಸ್ವಭಾವ ಸೂಚಕ, ಇದು ಅವರ ಸ್ವಅಭಿವ್ಯಕ್ತಿ ಮತ್ತು ವಿಶಿಷ್ಟತೆಯ ಅಭಿವ್ಯಕ್ತಿ ಇತ್ಯಾದಿ ಈ ಕುರಿತು ಹಲಬಗೆಯ ಅಭಿಪ್ರಾಯಗಳಿವೆ.

ಶೀಘ್ರ ಪರಿಪಕ್ವನವು ಹುಡುಗರಿಗೆ ಶೀಘ್ರ ತಾರುಣ್ಯದಲ್ಲಿ ಅನುಕೂಲಕರವೇ ಎನಿಸಿದರೂ ವಯಸ್ಕ ಹಂತದಲ್ಲಿ ವಿಳಂಬ ಪರಿಪಕ್ವನವು ಹುಡುಗರಿಗೆ ಹೆಚ್ಚಿನ ಧನಾತ್ಮಕ ಅನನ್ಯತೆಯನ್ನು ತಂದುಕೊಡುವುದು.

ಶೀಘ್ರ ಪರಿಪಕ್ವನ ಹೊಂದುವ ಹುಡುಗಿಯರು ಅನೇಕ ವಿಕಾಸಾತ್ಮಕ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಲೈಂಗಿಕ ದೌರ್ಜನ್ಯ ಮತ್ತು ಚೇಡಿಸುವಿಕೆ ಇವುಗಳಿಗೆ ಸಿಲುಕಿ ಅವರು ಖಿನ್ನತೆ ಮತ್ತು ಪೇಚಿಗೆ ಒಳಗಾಗುವ ಸಾಧ್ಯತೆಗಳಿವೆ. ಶೀಘ್ರ ಪರಿಪಕ್ವನಕ್ಕೊಳಗಾಗುವ ಹುಡುಗಿಯರಲ್ಲಿ ಉತ್ಸಾಹ ಕಡಿಮೆಯಾಗುವ, ಖಿನ್ನರಾಗುವ ಮನಸ್ಥಿತಿ ಇರಬಹುದು. ಆದರೆ ಹುಡುಗರಲ್ಲಿ ಮನಸ್ಥಿತಿಯ ವೈಪರೀತ್ಯ ಹುಡುಗಿಯರಿಗಿಂತ ಕಡಿಮೆ.

ವಿಳಂಬವಾಗಿ ಪರಿಪಕ್ವನ ಹೊಂದುವ ಹುಡುಗಿಯರು ತಮ್ಮ ರೂಪದ ಬಗ್ಗೆ ಋಣಾತ್ಮಕ ಭಾವ ಹೊಂದುತ್ತಾ ಭಾವನಾತ್ಮಕ ಒತ್ತಾಸೆಯ ಅಗತ್ಯ ತೋರುವರು. ಅಲ್ಲದೆ ಧನಾತ್ಮಕ ಸ್ವಗೌರವನ್ನು ರೂಢಿಸಿಕೊಳ್ಳಲು ಬೆಂಬಲ ಬಯಸುವರು. ವಿಳಂಬಿತವಾಗಿ ಪರಿಪಕ್ವನ ಹೊಂದುವ ಹುಡುಗರು ಸಾಮಾಜಿಕ ಸನ್ನಿವೇಶಗಳಲ್ಲಿ ಮತ್ತು ಕ್ರೀಡೆಗಳಲ್ಲಿ ಅವಕಾಶ ವಂಚಿತರಾಗಬಹುದು. ವಿಳಂಬಿತವಾಗಿ ಪರಿಪಕ್ವನ ಹೊಂದುವ ಹಲವು ಹುಡುಗರು ತಾವು ಅಪೂರ್ಣರು ಮತ್ತು ತಿರಸ್ಕೃತರು ಎಂದು ಭಾವಿಸಿ ಗೌರವದ ಕೊರತೆಯನ್ನು ಅನುಭವಿಸಬಹುದು. ಇನ್ನೂ ಕೆಲವು ವಿಳಂಬಿತವಾಗಿ ಪರಿಪಕ್ವನ ಹೊಂದುವ ಹುಡುಗರು ಮತ್ತು ಎತ್ತರ ಬೆಳೆಯದವರು ಆ ಕೊರತೆ ನೀಗಲು ಆಕ್ರಮಣ ವರ್ತನೆಗೆ ತೊಡಗಬಹುದು.

ಹುಡುಗಿಯರ ಮನಸ್ಥಿತಿಯಲ್ಲಿ ಬದಲಾವಣೆಗಳು ಕಾಣಬರುವುದುಂಟು. ಅವರಲ್ಲಿ ತಲೆನೋವು, ಮೈ ನೋವು, ಆಲಸ್ಯ, ವಾಕರಿಕೆಯ ಲಕ್ಷಣಗಳನ್ನು ತೋರುವುದುಂಟು. ಹುಡುಗಿಯರಿಗೆ ಹೋಲಿಸಿದಾಗ ಹುಡುಗರು ಇದೇ ಲಕ್ಷಣಗಳನ್ನು ಹೊಂದಿದ್ದರೂ ಕಡಿಮೆ-ತೀವ್ರತೆಯ ಮಟ್ಟದಲ್ಲಿ ಹೊಂದಿರುತ್ತಾರೆ.

ರಾಬರ್ಟ್ ಉದ್ರಿ (Robert Udry 1990 ) ಎಂಬುವವರು ಪರಿಪಕ್ವನದ ಲೈಂಗಿಕ ಬದಲಾವಣೆಗಳು ಮತ್ತು ಲಿಂಗ ವರ್ತನೆಯ ಕುರಿತು ಅಧ್ಯಯನ ನಡೆಸಿ, ಹುಡುಗರಲ್ಲಿ ಎಂಡ್ರೋಜನ್ ಮಟ್ಟದ ಏರಿಕೆಯು ಲೈಂಗಿಕ ಚಟುವಟಿಕೆಯನ್ನು ಹೆಚ್ಚಿಸುವುದು, ತಾರುಣ್ಯದಲ್ಲಿರುವ ಹುಡುಗಿಯರಲ್ಲಿ ಆಂಡ್ರೋಜನ್ ಮಟ್ಟ ಮತ್ತು ಲೈಂಗಿಕ ಚಟುವಟಿಕೆಗಳ ನಡುವೆ ಸಂಬಂಧವಿದ್ದರೂ ಅದಕ್ಕಿಂತ ಬಲವಾಗಿ ಅಂದರೆ ಹಾರ್ಮೋನ್‌ಗಳ ಮಟ್ಟದ ಪ್ರಭಾವಕ್ಕಿಂತ ಗೆಳತಿಯರಿಂದ ಪ್ರಭಾವಗೊಳ್ಳುವುದು ಹೆಚ್ಚು ಎಂದು ಗುರುತಿಸಿದ್ದಾರೆ.

ಫ್ರಾಯ್ಡನ ಪ್ರಕಾರ, ಲೈಂಗಿಕ ಮತ್ತು ಲಿಂಗತ್ವ ವರ್ತನೆಯು ಮೂಲತ: ಕಲಿತ ವರ್ತನೆಯಲ್ಲ, ಬದಲು ಪ್ರವೃತ್ತಿ ಪೂರ್ವಕವಾಗಿಯೇ ಉಂಟಾಗುವುದು. ಫ್ರಾಯ್ಡ್‌ನ ಅಭಿಪ್ರಾಯವನ್ನು ಎರಿಕ್ಸನ್ ವಿಸ್ತರಿಸಿ ಹುಡುಗರಲ್ಲಿ ಮತ್ತು ಹುಡುಗಿಯರಲ್ಲಿ ಮನೋವೈಜ್ಞಾನಿಕ ವ್ಯತ್ಯಾಸಗಳು ಅವರ ಅಂಗರಚನಾ ಭಿನ್ನತೆಗಳಿಂದ ಉಂಟಾಗುವುದು ಎನ್ನುತ್ತಾನೆ. ಅವನ ಪ್ರಕಾರ ಹುಡುಗರು ಅವರ ಲಿಂಗರಚನೆಯ ಕಾರಣದಿಂದ ಹೆಚ್ಚು ಆಕ್ರಮಣಕಾರಿಗಳು ಮತ್ತು ಗೊಂದಲಗೊಂಡವರಾದರೆ, ಹುಡುಗಿಯರು ಹೆಚ್ಚು ಅಂತರ್ಮುಖಿಗಳಾಗುತ್ತಾರೆ. (ವಿಮರ್ಶಕರ ಪ್ರಕಾರ ಫ್ರಾಯ್ಡ್ ಮತ್ತು ಎರಿಕ್ಸನ್ ತಿಳಿಸುವುದಕ್ಕಿಂತ ಹೊರತಾಗಿ ಹುಡುಗರು ಮತ್ತು ಹುಡುಗಿಯರು ತಮ್ಮ ಲಿಂಗತ್ವ ವರ್ತನೆಗಳನ್ನು ಮುಕ್ತವಾಗಿ ಆಯ್ಕೆಮಾಡಿಕೊಳ್ಳುವರು)

ಎರಿಕ್ಸನ್ ಹೇಳುವಂತೆ ಇಂದಿನ ಪ್ರಪಂಚದ ಹೆಣ್ಣುಮಕ್ಕಳು ತಮ್ಮ ಜೈವಿಕ ಗುಣಗಳಿಗೂ ಅತೀತವಾಗಿರಬಲ್ಲರು ಮತ್ತು ಸಮಾಜವು ತೋರುವ ಅತಿಯಾದ ಪುರುಷಪ್ರಧಾನದ ತಿದ್ದುಪಡಿ ಮಾಡುವ ಪ್ರಯತ್ನವನ್ನು ಮಾಡಬಲ್ಲರು ಎಂಬ ಮಾತು ನಮಗೆ ಗಮನಾರ್ಹ.

ವಿಕಾಸವಾದದ ದೃಷ್ಟಿಕೋನದ ಪ್ರಕಾರ ಗಂಡಸರು ಸಾಮಾನ್ಯವಾಗಿ ಅಧಿಕಾರಶಾಹಿಗಳಾಗಿದ್ದರೆ (ಹಿಂಸಾತ್ಮಕ ಸ್ಪರ್ಧಾತ್ಮಕ ಗಂಡಾಂತರದ ಕೆಲಸ ಗೈಯುವ ಗುಣಗಳನ್ನು ಹೊಂದುವುದು ಅವರ ಉಳಿಗಾಲಕ್ಕೆ ಅನಿವಾರ್ಯ) ಇದಕ್ಕೆ ವ್ಯತಿರಿಕ್ತವಾಗಿ ಹೆಂಗಸರು ಮಕ್ಕಳ ಪೋಷಣೆಗೆ ಮತ್ತು ಕುಟುಂಬ ನಿರ್ವಹಣೆಗೆ ಸಂಬಂಧಿಸಿದ ಕಾರ್ಯಗಳಿಗೆ ಗಮನ ನೀಡುವ ಅನಿವಾರ್ಯತೆ ಹೊಂದಿದ್ದರು. ಆದ್ದರಿಂದ, ಹೆಂಗಸರು ಜವಾಬ್ದಾರಿತನ, ಸಹಕಾರ ಮತ್ತು ಆತ್ಮೀಯತೆಯ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಬೇಕಿತ್ತು. (ಈ ವರ್ತನೆಯಲ್ಲಿನ ಲಿಂಗ ವ್ಯತ್ಯಾಸಗಳು ಬಹುತೇಕ ಚಿಂಪಾಂಜಿಯು ಸೇರಿ ಸಸ್ತನಿ ಪ್ರಾಣಿ ವರ್ಗಗಳಲ್ಲಿ ಕಂಡುಬರುತ್ತವೆ) ಸಂಸ್ಕೃತಿಯ ಪ್ರಭಾವ ಮತ್ತು ವ್ಯಕ್ತಿ ವಿಭಿನ್ನತೆಗಳ ಪ್ರಭಾವವನ್ನು ಈ ವಿಕಾಸವಾದವು ಪರಿಗಣಿಸುವುದಿಲ್ಲ ಎಂದು ವಿಮರ್ಶಕರು ವಾದಿಸಿದ್ದಾರೆ.

ತಾರುಣ್ಯದಲ್ಲಿ ಪರಿಪಕ್ವನ ಬದಲಾವಣೆಗಳು ಹುಡುಗರಲ್ಲಿ ಸ್ನಾಯು ಪ್ರಾಧಾನ್ಯವನ್ನು ಮತ್ತು ಹುಡುಗಿಯರಲ್ಲಿ ಹೆಣ್ತನದ ಪ್ರಾಧಾನ್ಯವನ್ನು ಹೆಚ್ಚಿಸುತ್ತವೆ.

**ಮೆದುಳಿನ ರಚನೆ**

ಸಂಜ್ಞಾನಾತ್ಮಕ ಕಾರ್ಯ ನಿರ್ವಹಣೆ ಮತ್ತು ಮೆದುಳಿನ ರಚನೆಯಲ್ಲಿ ಲಿಂಗ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಈ ವ್ಯತ್ಯಾಸಗಳನ್ನು ಅನೇಕ ಜೀನ್ಸ್ ಹಾರ್ಮೋನುಗಳು ಮತ್ತು ಪರಿಸರದ ಅಂಶಗಳಿಗೆ ಆರೋಪಿಸಲಾಗಿದೆ. ಆದ್ದರಿಂದ ಎರಡೂ ಲಿಂಗದವರಲ್ಲಿ ಯಾವುದೇ ಲಿಂಗದ ಮೇಲೆ ಪೂರ್ಣ ಶ್ರೇಷ್ಠತೆಯನ್ನು ಬಿಂಬಿಸಿಲ್ಲ. ಮೆದುಳಿನಲ್ಲಿನ ಲಿಂಗ ವ್ಯತ್ಯಾಸವೂ ಬಹುಶಃ ಕಲಿಕೆಯ ಪ್ರಕ್ರಿಯೆಗಳಲ್ಲಿ, ಭಾಷಾವಿಕಾಸ ಇತ್ಯಾದಿಯಲ್ಲಿ ಪ್ರಭಾವಿಸಬಹುದು.

ನರವಿಜ್ಞಾನ ಸಾಹಿತ್ಯವು ತೋರಿಸಿಕೊಟ್ಟಿರುವಂತೆ , ಮಾನವನ ಮೆದುಳು ಲಿಂಗ-ವಿಧಕ್ಕೆ ಅನುಗಣವಾಗಿದ್ದು ನರ ಸಂರಚನೆಯಲ್ಲಿ ಸ್ಪಷ್ಟ ಅಂಗರಚನಾ ವ್ಯತ್ಯಾಸಗಳನ್ನು ಹೊಂದಿದ್ದು, ಶಾರೀರಿಕ ವ್ಯತ್ಯಾಸಗಳು ಅವರ ಕಾರ್ಯಗಳಲ್ಲೂ ಕಾಣಬರುತ್ತವೆ.

ಹೆಂಗಸರ ಮಿದುಳಿನ ಎರಡು ಗೋಳಾರ್ಧಗಳು ಗಂಡಸರ ಮೆದುಳಿಗಿಂತ ಹೆಚ್ಚಾಗಿ ಪರಸ್ಪರ ಸಂವಹನ ಮಾಡುತ್ತವೆ 2014 ರಲ್ಲಿ ನಡೆದ ಅಧ್ಯಯನದ ಪ್ರಕಾರ ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದ ಸಂಶೋಧಕರು ಬಹುದೊಡ್ಡ ಪ್ರಮಾಣದ ಸ್ಯಾಂಪಲ್‌ಗಳನ್ನು-428 ಗಂಡಸರ ಮತ್ತು 521 ಹೆಂಗಸರ ಮೆದುಳಿನ ಬಿಂಬಗಳು-ಬಳಸಿಕೊಂಡು ಹೆಂಗಸರ ಮೆದುಳಿನ ಎರಡು ಗೋಳಾರ್ಧಗಳ ನಡುವೆ ಅತಿ ಬಲಯುತವಾಗಿ ಸಮನ್ವಯಗೊಂಡ ಚಟುವಟಿಕೆ ನಡೆದಿರುವುದು ಕಂಡು ಬಂದಿದೆಯಾದರೆ, ಗಂಡಸರ ಮೆದುಳಿನಲ್ಲಿ ಒಂದೇ ಗೋಳದಲ್ಲೇ ಹೆಚ್ಚು ಸಮನ್ವಯ ಚಟುವಟಿಕೆ/ ಕಾರ್ಯ ನಡೆಯುತ್ತದೆ ಎಂದು ಗುರುತಿಸಿದ್ದಾರೆ.

ಹದಿಹರೆಯದವರ ಮೆದುಳಿನ ವಿಕಾಸ ದೀರ್ಘವಾದ ಲಂಬನೋಟ ಅಧ್ಯಯನದಲ್ಲಿ, ಹೆಂಗಸರ ಮತ್ತು ಗಂಡಸರ ಮೆದುಳಿನ ಟ್ರಜೆಕ್ಟೋರಿಸ್‌ಗಳ (trajectories) ವಿಕಾಸವು ಗಣನೀಯವಾಗಿ ಭಿನ್ನವಾಗಿದ್ದವು. ಹೆಂಗಸರ ಒಟ್ಟು ಸರೆಬ್ರಲ್ (cerebral) ಪರಿಮಾಣವು 10.5 ವರ್ಷದಲ್ಲಿಯೇ ಗರಿಷ್ಠತೆಯನ್ನು ತಲುಪಿದ್ದರೆ, ಗಂಡಸಿನ ಒಟ್ಟು ಸರೆಬ್ರಲ್ ಪರಿಮಾಣವು 14.5 ವರ್ಷಕ್ಕೆ ಗರಿಷ್ಠತೆಯನ್ನು ತಲುಪಿತ್ತು. ಗಂಡಸರಲ್ಲಿ ಹದಿಹರೆಯ ಸಮಯದಲ್ಲಿ ಬಿಳಿ ದ್ರವ್ಯದ ಹೆಚ್ಚಳದ ಪ್ರಮಾಣವು ಜಾಸ್ತಿಯಾಗಿರುತ್ತದೆ. ಹೆಂಗಸರಲ್ಲಿ ಕಾರ್ಪಸ್‌ಕಲೋಸಮ್ (corpus callosum- white matter) ಉದ್ದವಾಗಿರುವುದು ಅಥವಾ ನೀಳವಾಗಿ ಇರುವುದು ಕಂಡುಬಂದಿದೆ.

ಹೆಂಗಸರ ಮತ್ತು ಗಂಡಸರ ಮೆದುಳಿನಲ್ಲಿ ಯಾವುದೇ ಒಟ್ಟು ಅಂಗ ರಚನಾತ್ಮಕ ವ್ಯತ್ಯಾಸಗಳಿಲ್ಲ. ಇಬ್ಬರಲ್ಲೂ ಏಕರೀತಿ ಇದ್ದು ಹೆಂಗಸರ ಮೆದುಳಿನ ಅನೇಕ ಕೋಶ (cell)ಗಳಲ್ಲಿ X ಕ್ರೋಮೋಸೋಮ್‌ಗಳಿದ್ದರೆ ಗಂಡಸರ ಮೆದುಳಿನ ಕೋಶಗಳಲ್ಲಿ Y ಕ್ರೋಮೋಸೋಮ್ (X ಕ್ರೋಮೋಸೋಮ್ ಜೊತೆಗೆ) ಇರುವುವು. ಮೆದುಳಿನ ಎರಡು ಭಾಗಗಳು ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತವೆ ಎಂಬುದು ಬಹುತೇಕ ತಿಳಿದಿರುವ

ವಿಷಯ. ಎಡ ಅರ್ಧಪಾರ್ಶ್ವವು ಭಾಷಾಕಾರ್ಯಗಳನ್ನು ಸಾಂಕೇತಿಕ ಮತ್ತು ವಿಶ್ಲೇಷಣಾತ್ಮಕ ಚಿಂತನ ಪ್ರಕ್ರಿಯೆಗಳನ್ನು ನಿರ್ವಹಿಸುತ್ತದೆ. ಬಲ ಅರ್ಧಪಾರ್ಶ್ವವು ಬಹುವಾಗಿ ಸ್ಥಳಾವಕಾಶ ಸಂಬಂಧಿ (spacial) ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ಕುರಿತ ಭಿನ್ನವಾದ ಆಲೋಚನೆಗಳು ಮೂಡುತ್ತಿವೆ. ಎಡಗೈ ಅಥವಾ ಬಲಗೈಯನ್ನು ಕೆಲಸ ಮಾಡಲು ಬಹುಮಟ್ಟಿಗೆ ಬಳಸುವುದನ್ನೇ ಸಂಶೋಧನೆಯ ವಸ್ತುವಾಗಿ ತೆಗೆದುಕೊಳ್ಳಲಾಗಿದೆ. ಸಂಜ್ಞಾನ ಕಾರ್ಯಗಳನ್ನು ಕೈಗೊಳ್ಳುವುದರಲ್ಲಿ ಇರುವ ಲಿಂಗ ವ್ಯತ್ಯಾಸದ ಬಗ್ಗೆ ವಿವರಿಸಲು ಆ ಸಂಶೋಧನೆಯ ಫಲಿತಾಂಶವು ಸಹಾಯಕವಾಗಿದೆ. ಏಕೆಂದರೆ ಎಡಗಯ್ಯಲ್ಲಿ ಕೆಲಸ ಮಾಡುವವರು(ಎಡಚರು) ಬಲಗೈಯಲ್ಲಿ ಕೆಲಸ ಮಾಡುವವರಿಗಿಂತ ಕೆಲವು ಸಂಜ್ಞಾನ ಸಾಮರ್ಥ್ಯಗಳಲ್ಲಿ ಭಿನ್ನರಾಗಿರುತ್ತಾರೆ. ಉದಾಹರಣೆಗೆ ಎಡಗೈ ಕೆಲಸ ಮಾಡುವವರು ಕೆಲವು ಭಾಷಿಕ ಕಾರ್ಯಗಳಲ್ಲಿ ಕಡಿಮೆ ಸಾಮರ್ಥ್ಯ ಹೊಂದಿದ್ದು ಗಣಿತದಲ್ಲಿ ಚುರುಕಾಗಿರುತ್ತಾರೆ. ವಾಸ್ತವ ವಿಷಯವೆಂದರೆ ಎಡಚರರಲ್ಲಿ ಹೆಂಗಸರಿಗಿಂತ ಗಂಡಸರು ಜಾಸ್ತಿ. ಆದ್ದರಿಂದ ಎಡ ಅಥವಾ ಬಲಗೈ ಪ್ರಾಧಾನ್ಯವು ಸಂಜ್ಞಾನ ಕಾರ್ಯಗಳಲ್ಲಿ ಲಿಂಗ ವ್ಯತ್ಯಾಸ ಉಂಟು ಮಾಡುವುದು ಎನ್ನಬಹುದು. ಇದರ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ. ಏಕೆಂದರೆ ನಮ್ಮ ದಿನನಿತ್ಯದ ವೀಕ್ಷಣೆಯಲ್ಲಿ ಹೀಗೇನೂ ಕಾಣಬರುವುದಿಲ್ಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

'ಎ' ಮತ್ತು 'ಬಿ' ಪಟ್ಟಿಯ ಅಂಶಗಳನ್ನು ಹೊಂದಿಸಿರಿ

| | **'ಎ' ಪಟ್ಟಿ** | **'ಬಿ' ಪಟ್ಟಿ** | |
|---|---|---|---|
| 1 | ಎಂಡ್ರೋಜನ್ ಮತ್ತು ಈಸ್ಟ್ರೋಜನ್ | ಅಪೇಕ್ಷಿತ ವಿಕಾಸ ಮತ್ತು ಬೆಳವಣಿಗೆ | ಅ |
| 2 | ಹುಡುಗಿಯರಲ್ಲಿ ಲೈಂಗಿಕಪಕ್ವತೆಯು | ಲೈಂಗಿಕ ಚಟುವಟಿಕೆಯನ್ನು ಹೆಚ್ಚಳ | ಆ |
| 3 | ಸೂಕ್ತ ಸಮಯದಲ್ಲಿ ಮಕ್ಕಳಿಗೆ ತಕ್ಕ ರೀತಿಯ ತರಬೇತು | ಎರಡು ಹಾರ್ಮೋನು ಗುಂಪುಗಳು | ಇ |
| 4 | ವಿಳಂಬವಾಗಿ ಪರಿಪಕ್ವನ ಹೊಂದುವ ಹುಡುಗಿಯರು | ರೂಪದ ಬಗ್ಗೆ ಋಣಾತ್ಮಕ ಭಾವ ಹೊಂದುವುದು | ಈ |
| 5 | ಹುಡುಗರಲ್ಲಿ ಎಂಡ್ರೋಜನ್ ಮಟ್ಟದ ಏರಿಕೆ | ಹುಡುಗರಿಗಿಂತ ಶೀಘ್ರವಾಗಿ ಆಗುತ್ತದೆ | ಉ |

## 4.1.3.3. ಶೈಕ್ಷಣಿಕ ನಿಹಿತಾರ್ಥಗಳು

ಹದಿಹರೆಯ ಮತ್ತು ಲಿಂಗತ್ವಕ್ಕೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಅನೇಕ ಶೈಕ್ಷಣಿಕ ನಿಹಿತಾರ್ಥಗಳನ್ನು ಗುರುತಿಸಬಹುದು. ಅವು ಕೆಳಕಂಡಂತಿವೆ:

- ಹುಡುಗರು ಮತ್ತು ಹುಡುಗಿಯರು 'ಲಿಂಗ' ಎಂಬುದನ್ನು 'ಮನಸ್ಸು' ಮತ್ತು 'ವರ್ತನೆ'ಯ ಹಿನ್ನೆಲೆಯಲ್ಲಿ ತಿಳಿಯಬೇಕೆ ಹೊರತು ಭೌತಿಕ ರೂಪ ಅಥವಾ ಹೆಣ್ಣು–ಗಂಡೆಂಬ ಅರ್ಥದಲ್ಲಿ ಅಲ್ಲ.
- ಶಿಕ್ಷಕರು ಮತ್ತು ಪೋಷಕರು ಸೂಕ್ತ ಅವಕಾಶ ಕಂಡು ಬಂದಾಗಲೆಲ್ಲಾ ಹುಡುಗರು ಮತ್ತು ಹುಡುಗಿಯರು ತಮ್ಮ ಭೌತಿಕ ರೂಪವನ್ನು ಒಪ್ಪಿಕೊಂಡು ಅದನ್ನು ಉತ್ತಮವಾಗಿ ಬೆಳೆಸಿಕೊಳ್ಳುವಂತೆ, ಅವರ ಗುಣಗಳನ್ನು ಸಾಮರ್ಥ್ಯಗಳನ್ನು ಪುಷ್ಟಿಕೊಳ್ಳುವ ಕಡೆ ಗಮನಹರಿಸುವಂತೆ ಪ್ರೋತ್ಸಾಹಿಸಬೇಕು.
- ಹುಡುಗಿಯರು ಮಾಸಿಕ ಸ್ರಾವವನ್ನು ಒಂದು ಸಹಜ ಪ್ರಕ್ರಿಯೆಯಾಗಿ ಪರಿಗಣಿಸಲು ಸಹಾಯ ಮಾಡಬೇಕು ಮತ್ತು ಅದು ತಾಯ್ತನಕ್ಕೆ ಸಿದ್ಧತೆ ಎಂಬ ಅರಿವನ್ನು ಅವರಲ್ಲಿ ಉಂಟುಮಾಡಬೇಕು. ವೀರ್ಯ ಸ್ಖಲನವಾಗುವುದು ಸ್ವಾಭಾವಿಕವೆಂದು ಹುಡುಗರು ತಿಳಿಯುವಂತೆ ಮಾಡಬೇಕು.

- ಹುಡುಗರು ಭೌತಿಕ ಆಕ್ರಮಣಕ್ಕೆ ತೊಡಗದೆ ಇರುವಂತೆ ನೋಡಿಕೊಳ್ಳಬೇಕು. ಹುಡುಗರು ಕಠಿಣಶ್ರಮ ಮತ್ತು ಧೈರ್ಯ(ಸ್ಥೈರ್ಯ) ಗುಣಗಳನ್ನು ಅಳವಡಿಸುವಂತೆ ಮಾಡಬೇಕು. ಹುಡುಗಿಯರು ಆತ್ಮ ಸ್ಥೈರ್ಯವನ್ನು ಕಾಪಾಡಿಕೊಂಡು ನಿಷ್ಕ್ರಿಯತೆಯನ್ನು ನಿವಾರಿಸಿಕೊಳ್ಳುವಂತೆ ಹುರಿದುಂಬಿಸಬೇಕು.
- ಅತಿಯಾದ ರೂಪಪ್ರಜ್ಞೆಯನ್ನು ಕಡಿಮೆ ಮಾಡಲು ತಾರುಣ್ಯದಲ್ಲಿರುವ ಹುಡುಗ–ಹುಡುಗಿಯರ ಗಮನವನ್ನು ತಕ್ಷಣದ ಕಾಳಜಿಗಳಾದ ವ್ಯಾಸಂಗ ಮತ್ತು ವೃತ್ತಿಪರತೆಯ ಬಗ್ಗೆ ಹರಿಸುವಂತೆ ಮಾಡಬೇಕು
- ಅನಪೇಕ್ಷಿತ ಪ್ರಚೋದನೆಗಳನ್ನು ಉದಾತ್ತೀಕರಿಸದಿರಲು ಹದಿಹರೆಯದವರಿಗೆ ತಂತ್ರಜ್ಞಾನ, ವಿಜ್ಞಾನ, ಸಾಹಿತ್ಯ, ಸಂಸ್ಕೃತಿ ಮತ್ತು ಕಲಾ ಚಟುವಟಿಕೆಗಳಿಗೆ ಅವಕಾಶಗಳನ್ನು ಕಲ್ಪಿಸಬೇಕು.
- ಹುಡುಗರ ದೈಹಿಕ ಸದೃಢತೆಯನ್ನು ಹೆಚ್ಚಿಸಲು ಮತ್ತು ಸುಧಾರಿಸಲು ಕ್ರೀಡೆಗಳಲ್ಲಿ ಮತ್ತು ಅಥ್ಲೆಟಿಕ್ಸ್‌ಗಳಲ್ಲಿ ತರಬೇತಿ ನೀಡಲು ವಿಶೇಷ ದೈಹಿಕ ಶಿಕ್ಷಣ ಕಾರ್ಯಕ್ರಮಗಳನ್ನು ಶಾಲಾ–ಕಾಲೇಜುಗಳಲ್ಲಿ ಒದಗಿಸಬೇಕು. ನಿಯತವಾದ ಯೋಗ ಮತ್ತು ಧ್ಯಾನ ಶಿಕ್ಷಣವೂ ಹುಡುಗರ ಮತ್ತು ಹುಡುಗಿಯರ ದೈಹಿಕ ಸದೃಢತೆಯನ್ನೂ ಮನೋಶಕ್ತಿಯನ್ನು ಉತ್ತಮಗೊಳಿಸುವುದು.
- ಸೌಂದರ್ಯ ಮತ್ತು ಮೈಮಾಟವನ್ನು ಕಾಪಾಡಿಕೊಳ್ಳುವ ಸಲುವಾಗಿ ನಗರ ಭಾಗದ ಹುಡುಗರು ಮತ್ತು ಹುಡುಗಿಯರು ಆಹಾರ ಸೇವನೆಯಲ್ಲಿ ಅಸಮರ್ಪಕತೆಯನ್ನು(ಅಶಿಸ್ತನ್ನು) ಬೆಳೆಸಿಕೊಳ್ಳುವುದರ ಬಗ್ಗೆ ತಿದ್ದಿ ಸರಿಯಾಗಿ ಅರಿವು ಮೂಡಿಸಬೇಕು.
- ಹೆಣ್ಣು ಗಂಡು ಎಂಬ ಭೇದವಿಲ್ಲದೆ ಹದಿಹರೆಯದಲ್ಲಿ (ಬಾಲ್ಯದಲ್ಲೂ)ಬೊಜ್ಜು ಅಥವಾ ಸ್ಥೂಲಕಾಯಕ್ಕೆ ತುತ್ತಾಗುವುದನ್ನು ಸುಧಾರಿಸಲು ಪೋಷಣೆಯ ಬಗ್ಗೆ ಸರಿಯಾದ ಅರಿವನ್ನು ಪೋಷಕರ ಮೇಲ್ವಿಚಾರಣೆಯಲ್ಲಿ ಮಕ್ಕಳಿಗೆ ಒದಗಿಸಬೇಕು.
- ಕಾನೂನುಬದ್ಧ ವಯಸ್ಸಿಗೆ ಮುನ್ನವೇ ಅನೇಕ ಹೆಣ್ಣು ಮಕ್ಕಳು ವಿವಾಹ ಬಂಧನಕ್ಕೆ ಗುರಿಯಾಗುವಂತೆ ಒತ್ತಾಯಿಸುವುದನ್ನು ಮತ್ತು ತಾಯ್ತನಕ್ಕೆ ಒಳಗಾಗುವುದನ್ನು ನಮ್ಮ ದೇಶದಲ್ಲಿ ಕಾಣುತ್ತೇವೆ. ಇದರಿಂದ ಶಿಕ್ಷಣವು ಪೂರ್ಣವಾಗದು. ಅಂತಹ ಮಕ್ಕಳಿಗೂ ಅವರ ಪೋಷಕರಿಗೂ ಸೂಕ್ತ ಸಲಹೆಯನ್ನು ನೀಡಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಹದಿಹರೆಯ ಮತ್ತು ಲಿಂಗತ್ವಕ್ಕೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ನಿಹಿತಾರ್ಥಗಳನ್ನು ಸೂಚಿಸುವ ಕೆಲವು ಹೇಳಿಕೆಗಳನ್ನು ಈ ಕೆಳಗೆ ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪಾದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

1. ಲಿಂಗ' ಎಂಬುದನ್ನು 'ಮನಸ್ಸು' ಮತ್ತು 'ವರ್ತನೆ'ಯ ಹಿನ್ನೆಲೆಯಲ್ಲಿ ತಿಳಿಯಲು ಹೇಳಬೇಕು.
2. ಭೌತಿಕ ರೂಪವನ್ನು ಒಪ್ಪಿಕೊಂಡು ಅದನ್ನು ಉತ್ತಮವಾಗಿ ಬೆಳೆಸಿಕೊಳ್ಳುವಂತೆ, ಅವರ ಗುಣಗಳನ್ನು ಸಾಮರ್ಥ್ಯಗಳನ್ನು ಪುಷ್ಟಿಕೊಳ್ಳುವ ಕಡೆ ಗಮನಹರಿಸುವಂತೆ ಪ್ರೋತ್ಸಾಹಿಸಬೇಕು.
3. ಹುಡುಗಿಯರು ಮಾಸಿಕ ಸ್ರಾವವನ್ನು ಗಂಭೀರವಾಗಿ ಪರಿಗಣಿಸಲು ಸಹಾಯ ಮಾಡಬೇಕು
4. ಅತಿಯಾದ ರೂಪ ಪ್ರಜ್ಞೆಯನ್ನು ಉನ್ನತೀಕರಿಸಲು ತಾರುಣ್ಯದಲ್ಲಿರುವ ಹುಡುಗ–ಹುಡುಗಿಯರ ಗಮನವನ್ನು ತಕ್ಷಣದ ಕಾಳಜಿಗಳಾದ ವ್ಯಾಸಂಗ ಮತ್ತು ವೃತ್ತಿಪರತೆಯ ಬಗ್ಗೆ ಹರಿಸುವಂತೆ ಮಾಡಬೇಕು
5. ಅಪೇಕ್ಷಿತ ಪ್ರಚೋದನೆಗಳನ್ನು ಉದಾತ್ತೀಕರಿಸದಿರಲು ಹದಿಹರೆಯದವರಿಗೆ ತಂತ್ರಜ್ಞಾನ, ವಿಜ್ಞಾನ, ಸಾಹಿತ್ಯ, ಸಂಸ್ಕೃತಿ ಮತ್ತು ಕಲಾ ಚಟುವಟಿಕೆಗಳಿಗೆ ಅವಕಾಶಗಳನ್ನು ಕಲ್ಪಿಸಬೇಕು.

## 4.1.4. ಸಾರಾಂಶಿಸೋಣ

- ಲಿಂಗವೆಂಬುದು ಸಾಂಸ್ಕೃತಿಕ ವ್ಯತ್ಯಾಸಗಳಾದ ಹುಡುಗಿಯರು ಮತ್ತು ಹುಡುಗರು ವಹಿಸುವ ಪಾತ್ರಗಳು, ವರ್ತನೆ ಮತ್ತು ಚಟುವಟಿಕೆಗಳಿಗೆ ಅನ್ವಯಿಸುತ್ತದೆ.

- ಜೈವಿಕ ಅಂಶಗಳು ಎಂದರೆ ಶರೀರ, ಪರಿಪಕ್ವನದ ಬದಲಾವಣೆಗಳು, ಹಾರ್ಮೋನುಗಳು ಮತ್ತು ಮೆದುಳಿನ ಕಾರ್ಯಗಳನ್ನು ಒಳಗೊಳ್ಳುತ್ತವೆ.
- ಪರಿಪಕ್ವನವು ಹುಡುಗಿಯರ ಮತ್ತು ಹುಡುಗರ ವರ್ತನೆಗಳಲ್ಲಿ ವ್ಯತ್ಯಾಸಗಳನ್ನು ತರುತ್ತವೆ. ಮತ್ತು ವಿಳಂಬವಾದ ಪರಿಪಕ್ವನವು ಲಿಂಗ ವ್ಯತ್ಯಾಸಗಳನ್ನು ಉಂಟುಮಾಡುತ್ತವೆ.
- ವಿಕಾಸವಾದದ ದೃಷ್ಟಿಯಲ್ಲಿ ಸಾಧನಾತ್ಮಕ ಲಕ್ಷಣಗಳು ಪುಲ್ಲಿಂಗಾತ್ಮಕವೂ ವ್ಯಕ್ತರೂಪದ ಲಕ್ಷಣಗಳು ಸ್ತ್ರೀಲಿಂಗಾತ್ಮಕವೂ ಆಗಿರುತ್ತವೆ.
- ಹುಡುಗರು ದೈಹಿಕವಾಗಿ ಕಡಿಮೆ ಆಕ್ರಮಣಕಾರಿಗಳು ಆಗುವಂತೆ ಮಾಡಲು ಮತ್ತು ದೃಢಾತ್ಮಕವಾಗಿರಲು ಸೂಕ್ತ ಧನಾತ್ಮಕ ಉಪಾಯಗಳನ್ನು ಯೋಜಿಸಬೇಕು. ಹುಡುಗಿಯರು ಋಣಾತ್ಮಕತೆಯನ್ನು ನಿವಾರಿಸಿಕೊಂಡು ಸ್ವಯಂ ಸಮರ್ಥನೀಯರಾಗಲು ಪ್ರೋತ್ಸಾಹಿಸಬೇಕು.

## 4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1–S, 2– G , 3– G , 4– S, 5– G , 6– G , 7– G , 8– G , 9– S, 10– G

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1–ಇ, 2–ಉ 3–ಅ. 4–ಈ 5–ಆ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1-'✓', 2-'✓', 3-'X', 4-'X',5-'X'

## 4.1.6. ಘಟಕಾಂತ್ಯ ಅಭಾಸಗಳು

1. ತಾರುಣ್ಯ ಕಾಲದಲ್ಲಿ ಲಿಂಗಾತ್ಮಕವಾದ ಜೈವಿಕ ಪ್ರಭಾವಗಳನ್ನು ವಿವರಿಸಿ
2. ಲಿಂಗ ಮತ್ತು ಲಿಂಗ ಪಾತ್ರಗಳನ್ನು ಉದಾಹರಣೆ ಸಹಿತ ವಿಶ್ಲೇಷಿಸಿ.
3. ಲಿಂಗದ ಮೇಲೆ ಜೈವಿಕ ಪ್ರಭಾವಗಳನ್ನು ವಿವರಿಸಿ.
4. ಹದಿಹರೆಯ ಮತ್ತು ಲಿಂಗತ್ವಕ್ಕೆ ಸಂಬಂಧಿಸಿದ ಶೈಕ್ಷಣಿಕ ನಿಹಿತಾರ್ಥಗಳನ್ನು ಚರ್ಚಿಸಿ

## 4.1.7. ಪರಾಮರ್ಶನ ಸೂಚಿ

1 ಡಾ॥ವಾಮದೇವಪ್ಪ... ಶೈಕ್ಷಣಿಕ ಮನೋವಿಜ್ಞಾನ , ಶ್ರೇಯ ಪಬ್ಲಿಕೇಷನ್ಸ್ , ದಾವಣಗೆರೆ

2. Laura E.Berk : Child Psychology (8th Edition) Eastern Economy Edition PHI Learning Pvt. Ltd., New Delhi
3. John W. Santrock : Adolescence Twelth Edition TATA MC GRAW – HILL Edition, New Delhi.
4. Asha Singh : Foundations of Human Development , Orient Blackswan Pvt. Ltd., New Delhi
5. [1] From <https://swhr.org/sex-differences-in-the-brain/>
6. [2] From <https://stanmed.stanford.edu/2017spring/how-mens-and-womens-brains-are-different.html>
7. [3]From <https://en.wikipedia.org/wiki/Neuroscience_of_sex_differences#Hemisphere_differences>

********************

# ಬ್ಲಾಕ್ 4 : ಲಿಂಗತ್ವ ಮತ್ತು ಹದಿಹರೆಯ

## ಘಟಕ 2 : ಹದಿಹರೆಯದವರ ಲಿಂಗತ್ವ ಪರಿಕಲ್ಪನೆಯ ಮೇಲೆ ಸಾಮಾಜಿಕ ಪ್ರಭಾವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು

**ಘಟಕದ ರಚನೆ**


4.2.1. ಕಲಿಕಾ ಉದ್ದೇಶಗಳು

4.2.2. ಪೀಠಿಕೆ

4.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.2.3.1. ಕುಟುಂಬದ ಸನ್ನಿವೇಶದಲ್ಲಿ ಲಿಂಗತ್ವದ ಪರಿಕಲ್ಪನೆಯ ಮೇಲಿನ ಸಾಮಾಜಿಕ ಪ್ರಭಾವಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

4.2.3.2. ಶಾಲಾ ಸನ್ನಿವೇಶಗಳಲ್ಲಿ ಲಿಂಗತ್ವದ ಪರಿಕಲ್ಪನೆಯ ಮೇಲಿನ ಸಾಮಾಜಿಕ ಪ್ರಭಾವಗಳು(ಶಿಕ್ಷಕರು ಮತ್ತು ಸಮವಯಸ್ಕರ ಸಮೂಹ)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

4.2.3.3. ಮಾಧ್ಯಮದ ಸನ್ನಿವೇಶದಲ್ಲಿ ಲಿಂಗತ್ವದ ಪರಿಕಲ್ಪನೆಯ ಮೇಲಿನ ಸಾಮಾಜಿಕ ಪ್ರಭಾವಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

4.2.4. ಸಾರಾಂಶಿಸೋಣ

4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

4.2.6. ಘಟಕಾಂತ್ಯ ಅಭ್ಯಾಸಗಳು

4.2.7. ಪರಾಮರ್ಶನ ಸೂಚಿ


## 1.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ತಾರುಣ್ಯದಲ್ಲಿ ಉಂಟಾಗುವ ಲಿಂಗತ್ವದ ಸಾಮಾಜಿಕ ಪ್ರಭಾವಗಳನ್ನು( ಜೈವಿಕ ಪ್ರಭಾವಗಳಿಗೆ ಹೋಲಿಸಿ) ವಿವರಿಸುವರು;
- ಲಿಂಗತ್ವದ ಸಾಮಾಜಿಕ ಪ್ರಭಾವದ ಸನ್ನಿವೇಶಗಳಾದ ಕುಟುಂಬ, ಶಾಲೆ ಮತ್ತು ಸಮುದಾಯಗಳನ್ನು ಗುರುತಿಸುವರು;
- ಹದಿಹರೆಯದವರ ಮೇಲೆ ಲಿಂಗತ್ವವಿಧದ ಜ್ಞಾನ ಬೆಳೆಸುವಲ್ಲಿ ಮಾಧ್ಯಮಗಳ ಪಾತ್ರವನ್ನು ವಿವರಿಸುವರು; ಮತ್ತು
- ಲಿಂಗತ್ವದ ಸಾಮಾಜಿಕ ಪ್ರಭಾವಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ಚರ್ಚಿಸುವರು.

## 4.2.2. ಪೀಠಿಕೆ

ನೀವು ಹದಿಹರೆಯದವರ ಮೇಲೆ ಲಿಂಗತ್ವದ ಜೈವಿಕ ಪ್ರಭಾವಗಳನ್ನು ಅರ್ಥ ಮಾಡಿಕೊಂಡಿರಿ. ಮುಂದೆ ನಾವು ಲಿಂಗತ್ವದ ಸಾಮಾಜಿಕ ಅಥವಾ ಪರಿಸರದ ಪ್ರಭಾವಗಳನ್ನು ಅರ್ಥಮಾಡಿಕೊಳ್ಳೋಣ. ಹದಿಹರೆಯಕ್ಕೆ ಕಾಲಿಡುತ್ತಿದ್ದಂತೆಯೇ ಹುಡುಗ-ಹುಡುಗಿಯರಲ್ಲಿನ ಸಾಮಾಜಿಕ ವರ್ತನೆಯು ಸ್ವರೂಪದಲ್ಲಿ ಬದಲಾವಣೆಗಳುಂಟಾಗುತ್ತವೆ. ಇದಕ್ಕೆ ಕಾರಣ ಹದಿಹರೆಯದವರು ಈ ಹಂತದಲ್ಲಿ ಹೆಚ್ಚು ಸನ್ನಿವೇಶಗಳಿಗೆ ಹಿಂದಿಗಿಂತ ಹೆಚ್ಚು ವ್ಯಾಪಕವಾಗಿ ತಮ್ಮನ್ನು ತೆರೆದುಕೊಳ್ಳುತ್ತಾರೆ. ಸಮಾಜ, ಸಮುದಾಯ, ಕುಟುಂಬ, ಶಾಲೆ ಇವು ಇವರ ಲಿಂಗತ್ವದ ಅರಿವನ್ನು ಹೆಚ್ಚಿಸುವಲ್ಲಿ ಸಹಾಯಮಾಡುತ್ತವೆ. ಇದು ಒಂದು ರೀತಿಯ ಸಾಮಾಜೀಕರಣವೂ ಹೌದು. ಈ ಪ್ರತಿಯೊಂದು ನಿಯೋಗವೂ ಹದಿಹರೆಯದವರ ಲಿಂಗತ್ವ ಮತ್ತು ಅದರ ಅರಿವಿನ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಈ ಘಟಕದಲ್ಲಿ ಗಮನಿಸೋಣ.

## 4.2.3.1. ಕುಟುಂಬದ ಸನ್ನಿವೇಶದಲ್ಲಿ ಲಿಂಗತ್ವದ ಪರಿಕಲ್ಪನೆಯ ಮೇಲಿನ ಸಾಮಾಜಿಕ ಪ್ರಭಾವಗಳು

ಅನೇಕ ಸನ್ನಿವೇಶಗಳಲ್ಲಿ ಗಂಡಸರು ಮತ್ತು ಹೆಂಗಸರು (ಹುಡುಗ /ಹುಡುಗಿ) ಏಕೆ ಭಿನ್ನವಾಗಿ ವರ್ತಿಸುತ್ತಾರೆ ಎಂದು ನಿಮಗೆ ಬಹಳ ಸಲ ಅನ್ನಿಸಿರಬಹುದು. ಅನೇಕ ಸಮಾಜವಿಜ್ಞಾನಿಗಳು ಲಿಂಗ ವ್ಯತ್ಯಾಸಗಳಿಗೆ ಜೈವಿಕ ಪ್ರಭಾವಗಳೇ ಕಾರಣವೆಂದು ಒಪ್ಪುವುದಿಲ್ಲ; ಬದಲು ಸಾಮಾಜಿಕ ಅನುಭವಗಳ ಭಿನ್ನತೆಯೇ ಕಾರಣವೆಂದು ವಾದಿಸುತ್ತಾರೆ. ಅವರ ಪ್ರಕಾರ ಅಧಿಕಾರ, ಸಮರ್ಥಿಸಿಕೊಳ್ಳುವುದರಲ್ಲಿ ಮತ್ತು ಆರೈಕೆ ಪಡೆಯುವುದರಲ್ಲಿ ಲಿಂಗ ವ್ಯತ್ಯಾಸವಿರುವುದಕ್ಕೆ ಸಾಮಾಜಿಕ ಕ್ರಮಾನುಗತ ಸ್ಥಿತಿ ಮತ್ತು ಕಾರ್ಮಿಕ ವಿಭಜನೆಗಳು ಪ್ರಮುಖ ಕಾರಣಗಳು. ಕೈಗಾರಿಕೋತ್ತರ ಸಮಾಜದಲ್ಲಿ ಗಂಡಸರು ಬಹುಶಃ ಅಧಿಕಾರಯುತ ಉದ್ದಿಮೆಗಳಲ್ಲಿ ತೊಡಗಿರಬಹುದು. ಹೆಂಗಸರು ಮನೆಗಳಲ್ಲಿ ಕ್ಷೇಮಪಾಲನೆ ಮತ್ತು ಕೆಲವೇ ಉದ್ಯಮಗಳಲ್ಲಿ ತೊಡಗಿರುತಿದ್ದರೆಂದು ಕಾಣುತ್ತದೆ. ಈ ರೀತಿಯ ಕಾಯಕ ವಿಭಜನೆಯು ಬಹುಶ: ಗಂಡಸರು ಮತ್ತು ಹೆಂಗಸರ ಉದ್ಯೋಗಗಳಲ್ಲಿ ವರ್ಗೀಕರಣವು ಒಂದು 'ಒಪ್ಪಂದ'ದಂತೆ ಅಸ್ತಿತ್ವಕ್ಕೆ ಬಂದಿರಬಹುದು. ಕ್ರಮೇಣ ಇದೇ ಲಿಂಗತ್ವ ಪಾತ್ರ ನಂಬಿಕೆಯಾಗಿ ಬೆಳೆದಿರಬಹುದು. ಏಕೆಂದರೆ ಜನರು ಗಂಡಸರ ಮತ್ತು ಹೆಂಗಸರ ಇಂತಹ ವರ್ತನೆಗಳನ್ನು ಸತತವಾಗಿ ವೀಕ್ಷಿಸುತ್ತಿರುವುದರಿಂದ ಸಾಮರ್ಥ್ಯಗಳು ಲಿಂಗಾಧಾರಿತವಾಗಿ ಬರುವಂತಹವು ಎಂದು ಅಭಿಪ್ರಾಯಕ್ಕೆ ಬಂದಿರಬಹುದು. ಈ ನಂಬಿಕೆಗಳಿಂದ ಜನರು ತಮ್ಮ ಪಾತ್ರಗಳನ್ನು ಸಾಂಸ್ಕೃತಿಕ ಮತ್ತು ಪರಿಸರದ ಪರಿಸ್ಥಿತಿಗಳಿಗೆ ಅನುಗುಣವಾಗಿ ರಚಿಸಿಕೊಂಡಿರುವರು. ಪಾತ್ರ ನಿರ್ವಹಣೆಗಾಗಿಯೇ ಕುಟುಂಬಗಳು ಸಮಾಜದ ಜನರನ್ನು ಸಾಮಾಜೀಕರಿಸಲು ಸಹಾಯವಾಗುವ ಲಕ್ಷಣಗಳನ್ನು ಮತ್ತು ಕೌಶಲಗಳನ್ನು ಗಂಡಸರು ಮತ್ತು ಹೆಂಗಸರಲ್ಲಿ ಸಕ್ರಿಯಗೊಳಿಸಿದೆ.

ಮಕ್ಕಳು ಹಿರಿಯರನ್ನು ಕೇವಲ ಗಮನಿಸುವುದಷ್ಟೇ ಅಲ್ಲ, ಅವರಿಂದ ಲಿಂಗತ್ವ ಪಾತ್ರಗಳನ್ನು ಅಂತರ್ಗತಗೊಳಿಸಿಕೊಳ್ಳುತ್ತಾರೆ. ಹಿರಿಯರು ತಮ್ಮ ಮಾತು, ಕ್ರಿಯೆ, ಉದಾಹರಣೆ ಮತ್ತು ನಿರೀಕ್ಷೆಗಳಿಂದ ಅವರ ಮಕ್ಕಳು ಮತ್ತು ಹದಿಹರೆಯದವರು ಲಿಂಗಾತ್ಮಕವಾಗಿ ವಿಕಾಸ ಹೊಂದಲು ಪ್ರಭಾವ ಬೀರುತ್ತಾರೆ.

ಕುಟುಂಬ ಸಂದರ್ಭಕ್ಕೆ ಸಂಬಂಧಿಸಿದಂತೆ ಪರಿಣತರ ಅಭಿಪ್ರಾಯಗಳು ಈ ಕೆಳಗಿನ ಪ್ರವೃತ್ತಿಯನ್ನು ಸೂಚಿಸುತ್ತದೆ:

- ಹುಟ್ಟುತ್ತಿದ್ದಂತೆ ಹೆಣ್ಣು ಮಕ್ಕಳನ್ನು ಮತ್ತು ಗಂಡುಮಕ್ಕಳನ್ನು ಜನರು ಭಿನ್ನ ರೀತಿಯಲ್ಲಿ ನೋಡುತ್ತಾರೆ ಮತ್ತು ಭಿನ್ನ ಸ್ವರೂಪದ ಭಾಷೆಯನ್ನು ಬಳಸಿ ವರ್ಣಿಸುತ್ತಾರೆ.
- ಹೆತ್ತವರು ಗಂಡು ಹಸುಗೂಸನ್ನು ಚುರುಕು, ಗಟ್ಟಿಗ, ಚೆನ್ನಾಗಿ ರೂಪುಗೊಂಡವ ಎಂದು ಬಣ್ಣಿಸುವರು. ಹೆಣ್ಣು ಮಗುವನ್ನು ಪುಟ್ಟದ್ದು, ಸೂಕ್ಷ್ಮ ಸುಂದರ, ಬಲಹೀನ ಎಂದು ಮುಂತಾದ ರೀತಿಯಲ್ಲಿ ವರ್ಣಿಸುವುದನ್ನು ಕಾಣುತ್ತೇವೆ.

- ತಂದೆ ತಾಯಂದಿರು  ಗೊಂಬೆಯೊಡನಾಡುವ ಹೆಣ್ಣುಮಕ್ಕಳನ್ನು ಹೊಗಳುವರು. ಅವರೇನಾದರೂ ಮರ ಹತ್ತಿದರೆ, ಕಾಂಪೌಂಡು ಹತ್ತಿದರೆ ಪ್ರೋತ್ಸಾಹಿಸದೆ ಹಿಂದೆ ಸರಿಯುವಂತೆ ಮಾಡುತ್ತಾರೆ.

- ಪೋಷಕರು ತಾವು ಬದುಕುವ ಸಾಮಾಜಿಕ ಪರಿಸರದಲ್ಲಿ ತಮ್ಮ ನಿರೀಕ್ಷೆಗಳಂತೆ ಹೆಣ್ಣು ಅಥವಾ ಗಂಡು ಮಕ್ಕಳು (ಲಿಂಗತ್ವದ ಆಧಾರ) ಬೆಳೆಯಬೇಕೆಂದು ಬಯಸುತ್ತಾರೆ.

- ಹದಿಹರೆಯದವರನ್ನು ಕುರಿತ ಹಿರಿಯರ ನಿರೀಕ್ಷೆಗಳು, ದೃಷ್ಟಿಕೋನಗಳು ಮತ್ತು ಪೋಷಿಸುವ ಮೌಲ್ಯಗಳು ಲಿಂಗಾತ್ಮಕವಾಗಿವೆ. ಗಂಡು ಮಕ್ಕಳಿಗಾದರೆ ಸಾಧನೆಯನ್ನು ವರ್ಣಿಸುವ,  ಸ್ಪರ್ಧೆಯನ್ನು ಎದುರಿಸುವ ಮತ್ತು ಭಾವನೆಗಳನ್ನು ನಿಯಂತ್ರಿಸುವ ನಿರೀಕ್ಷೆಗಳು, ಹೆಣ್ಣು ಮಕ್ಕಳಿಗಾದರೆ ಮಮತೆ,  ಹೆಂಗರುಳಿನ ವರ್ತನೆ ಮತ್ತು ಹತ್ತಿರದಿಂದ ಮೇಲ್ವಿಚಾರಣೆ ಮಾಡುತ್ತಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಿರೀಕ್ಷಿಸಲಾಗುತ್ತದೆ.

- ಪೋಷಕರು ನೋಡಿಕೊಳ್ಳುವ ರೀತಿ : ಮಗಳಿಗಿಂತ ಮಗನಿಗೆ ಹೆಚ್ಚು ಸ್ವಾತಂತ್ರ್ಯ ನೀಡುವುದುಂಟು. ಸಾಮಾನ್ಯವಾಗಿ ಮಗ ಮನೆಯಿಂದ ದೂರ ಎಲ್ಲಿಯಾದರೂ ಅಡ್ಡಾಡಬಹುದು.  ಮಗಳ ಸ್ವಾತಂತ್ರ್ಯಕ್ಕಾದರೆ ಹೆಚ್ಚು ನಿರ್ಬಂಧನೆ ಮತ್ತು ಅವಳ ವರ್ತನೆಯ ಮೇಲೆ ನಿಗಾವಹಿಸಲಾಗುವುದು. ಅವರು  ಆಯ್ಕೆಮಾಡುವ ಗೆಳೆಯರ ಬಗ್ಗೆಯೂ ಗಮನವಿಡಲಾಗುವುದು.

- ಸಾಧನೆಯ ನಿರೀಕ್ಷೆಗಳು : ಗಣಿತ ಮತ್ತು ವಿಜ್ಞಾನಗಳ ಅಧ್ಯಯನವು ಹೆಣ್ಣುಮಕ್ಕಳ ಭವಿಷ್ಯಕ್ಕಿಂತ ಗಂಡು ಮಕ್ಕಳ ಭವಿಷ್ಯಕ್ಕೆ ಹೆಚ್ಚು ಅಗತ್ಯ, ಹಾಗಾಗಿ ಅವರು ಆ ನಿಟ್ಟಿನಲ್ಲಿ  ಹೆಚ್ಚು ಸಾಧನೆ ಮಾಡಬೇಕು. (ನೀವು ಈ ಬಗ್ಗೆ ಹೆಚ್ಚಿನ ವಿವರವನ್ನು ಮುಂದಿನ ಘಟಕದಲ್ಲಿ ಅಧ್ಯಯನ ಮಾಡುವಿರಿ) ಎಂಬ ನಿರೀಕ್ಷೆ ಇರುವುದುಂಟು.

- ಬೋಧನೆಯ( ಕಲಿಕೆಯ) ಸಂದರ್ಭಗಳಲ್ಲಿ ಗಂಡುಮಕ್ಕಳು ಹೆಚ್ಚು ಸ್ವತಂತ್ರವಾಗಿ ಪ್ರಯತ್ನಿಸಬೇಕೆಂಬುದು ಪೋಷಕರ ಒತ್ತಾಯವಾಗಿರುತ್ತದೆ ಮತ್ತು ಅವರನ್ನು ಬೇಕೆಂದೇ ನಿರ್ಲಕ್ಷಿಸುವುದು ಉಂಟು.  ಆದರೆ ತಕ್ಷಣವೇ ಹೆಣ್ಣುಮಕ್ಕಳಿಗೆ ಸಹಾಯ ಒದಗಿಸಲು ಮುಂದಾಗುವರು. ಕೆಲವು ಪೋಷಕರು ತಮ್ಮ ಮಕ್ಕಳ ಸಾಮರ್ಥ್ಯಗಳ ಬಗ್ಗೆ ಲಿಂಗಾಧಾರಿತ ವ್ಯತ್ಯಾಸದ ಅಭಿಪ್ರಾಯ ಮತ್ತು ನಿರೀಕ್ಷೆಗಳನ್ನು ಹೊಂದಿರುತ್ತಾರೆ. ಕೆಲವು ಅಧ್ಯಯನಗಳ ಪ್ರಕಾರ ತಾಯಂದಿರು ಗಣಿತದಲ್ಲಿ ತಮ್ಮ ಗಂಡು ಮಕ್ಕಳು (ತಮ್ಮ ಹೆಣ್ಣು ಮಕ್ಕಳಿಗಿಂತ) ಹೆಚ್ಚು ಸಮರ್ಥರಾಗಿರುತ್ತಾರೆ ಎಂದು ತಿಳಿಯುತ್ತಾರೆ.

- ತಾಯಿ ತಂದೆಯರ ಅಂತರ್‌ಕ್ರಿಯೆ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ನಡುವೆ ಭಿನ್ನವಾಗಿರುತ್ತದೆ. ತಾಯಂದಿರ ಸಾಮಾಜೀಕರಣಗೊಳಿಸುವ ಗಮನ ಅವರ ಹೆಣ್ಣುಮಕ್ಕಳು ಗಂಡು ಮಕ್ಕಳಿಗಿಂತ ಹೆಚ್ಚು ವಿಧೇಯರುರೂ ಜವಾಬ್ದಾರಿಯುತರೂ ಆಗುವಂತೆ ಮಾಡುವುದಾಗಿರುತ್ತದೆ. ತಂದೆಯರ ಸಾಮಾಜೀಕರಣಗೊಳಿಸುವ ತಂತ್ರಗಳು ತಮ್ಮ ಗಂಡು ಮಕ್ಕಳನ್ನು ಬೆಳೆಸುವುದಕ್ಕೆ ಜಾಗೃತವಾಗುತ್ತವೆ. ಆದ್ದರಿಂದ ಹೆಚ್ಚು ಚಟುವಟಿಕೆಗಳು ಅವರ ಬೌದ್ಧಿಕ ವಿಕಾಸವನ್ನು ಚುರುಕುಗೊಳಿಸುವುದು ಆಗಿರುತ್ತವೆ.

- ಮನೆಯ ಕೆಲಸ ಕಾರ್ಯಗಳನ್ನು ಲಿಂಗತ್ವ  ವ್ಯತ್ಯಾಸದ ಆಧಾರದ ಮೇಲೆ ಹಂಚುವ ಪೋಷಕರ ಹೆಣ್ಣು ಮಕ್ಕಳು ಶಾಲಾ ವ್ಯಾಸಂಗದಲ್ಲಿ ಉತ್ತಮವಾಗಿ ಮಾಡಲಾರರು. ಅದೇ ಗಂಡು ಮತ್ತು ಹೆಣ್ಣು ಮಕ್ಕಳನ್ನು ಸಮಾನವಾಗಿ ಭಾವಿಸಿ ಕೆಲಸ ಹಂಚುವ ಕುಟುಂಬಗಳ ಹೆಣ್ಣುಮಕ್ಕಳು ವ್ಯಾಸಂಗದಲ್ಲಿಯೂ ಉತ್ತಮ ಫಲಿತಾಂಶ ತೋರುವರು.

- ಉದ್ಯೋಗಸ್ಥ ತಾಯಿಯರು ಹೆಣ್ಣುಮಕ್ಕಳ ವಿದ್ಯಾಭ್ಯಾಸ ಮತ್ತು ವೃತ್ತಿಗಳ ಆಯ್ಕೆಯಲ್ಲಿ ಉತ್ತಮ ಪ್ರಭಾವ ಬೀರಬಲ್ಲರು.

- ವಿಚ್ಛೇದಿತ ಪೋಷಕರ ಮಕ್ಕಳು ಅಂದರೆ ತಂದೆ ಇಲ್ಲದ ಕುಟುಂಬದ ಹುಡುಗರು ಮತ್ತು ತಾಯಿ

ಇಲ್ಲದ ಕುಟುಂಬದ ಹುಡುಗಿಯರು ಹೆಚ್ಚು ಲಿಂಗಾತ್ಮಕವಾಗಿರುವುದಿಲ್ಲ. ಕೆಲವೊಮ್ಮೆ ಹುಡುಗ ಅಥವಾ ಹುಡುಗಿಯರು ತಮ್ಮತನವನ್ನು ಗುರುತಿಸಿಕೊಳ್ಳುವುದರಲ್ಲಿ ಗೊಂದಲಕ್ಕೆ ಒಳಗಾಗಬಹುದು.

- ಇತ್ತೀಚೆಗೆ ಅಪ್ಪಂದಿರು ತಮ್ಮ ಹದಿಹರೆಯದ ಮಕ್ಕಳೊಡನೆ ಒಡನಾಟದಲ್ಲಿ ಇರಲು ಸಮಯ ಹೊಂದಿಸಿಕೊಳ್ಳುವುದು ಕಂಡುಬರುತ್ತಿದೆ. ತಂದೆ–ತಾಯಿಯರ ಸಹಕಾರ, ಪರಸ್ಪರ ಗೌರವ, ಪೋಷಕತ್ವದಲ್ಲಿ ಸಹಭಾಗಿತ್ವ ಹೆಚ್ಚುತ್ತಿದೆ. ಇದರಿಂದ ಗಂಡು ಮತ್ತು ಹೆಣ್ಣು ಮಕ್ಕಳ ಬಗ್ಗೆ ಧನಾತ್ಮಕ ಭಾವ ಬೆಳೆಯುತ್ತಿದೆ.
- ತಂದೆಯಾದವರು ತಮ್ಮ ಹರೆಯದ ಮಗನಲ್ಲಿ ತಮ್ಮ ಗುಣಗಳು, ಮನೋಭಾವಗಳು ಮತ್ತು ಪುರುಷ ಲಕ್ಷಣಗಳು ಕಂಡುಬಂದರೆ ಅದನ್ನು ಹೆಚ್ಚುಗಾರಿಕೆ ಅಥವಾ ಹೆಮ್ಮೆಯಿಂದ ನೋಡುವುದುಂಟು. ಹಾಗೆಯೇ ತಾಯಿಯಾದವಳು ತನ್ನ ಗುಣಗಳು, ಧೋರಣೆಗಳು ಮತ್ತು ಹೆಣ್ಣುತನವನ್ನು ಮಗಳಲ್ಲಿ ಕಾಣಬಯಸುವಳು.
- ಭಾರತದಲ್ಲಿ ಮತ್ತು ಜಪಾನ್ ದೇಶಗಳಲ್ಲಿ ತಕ್ಕಮಟ್ಟಿಗೆ ಶ್ರೀಮಂತರು ಎನಿಸಿಕೊಳ್ಳುವ ಕುಟುಂಬಗಳಲ್ಲಿ ತಂದೆಯರು ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ಹೊರುತ್ತಿರುವುದನ್ನು ಕಾಣುತ್ತೇವೆ. ಹುಡುಗಿಯರಿಗೆ ಉದ್ಯೋಗ ಅವಕಾಶಗಳ ಪ್ರಮಾಣ ಹೆಚ್ಚುತ್ತಿರುವುದರಿಂದ, ಹರೆಯದ ಹುಡುಗಿಯರ ಸಾಮಾಜಿಕ ಸಂಬಂಧಗಳ ನಿರ್ವಹಣೆಯು ಸುಲಭವಾಗುತ್ತಿದೆ.
- ಭಾರತದ ಸನ್ನಿವೇಶದಲ್ಲಿ ಸಂಪ್ರದಾಯಬದ್ಧ ಅರೆ ಆಧುನಿಕ ಕುಟುಂಬಗಳಲ್ಲಿ ಇವೆಲ್ಲ ಸಾಮಾನ್ಯವಾಗಿ ಕಂಡುಬರುವುದು ನಿಜವಾದರೂ ಈಚೆಗೆ ಒಂದು ರೀತಿಯಲ್ಲಿ ಸ್ವಾಗತಾರ್ಹ ಸ್ಥಿತ್ಯಂತರ ಕಂಡುಬರುತ್ತಿದೆ. ಶಿಕ್ಷಣ, ವೃತ್ತಿ, ಓಡಾಟ ಮುಂತಾದವುಗಳಿಗೆ ಸಂಬಂಧಿಸಿದಂತೆ ಹೆಣ್ಣುಮಕ್ಕಳನ್ನೂ ಗಂಡುಮಕ್ಕಳಿಗೆ ಸಮಾನವಾಗಿ ನೋಡಲಾಗುತ್ತಿದೆ. ಆದಾಗ್ಯೂ ಹೆಣ್ಣು ಮಕ್ಕಳ/ ಮಹಿಳಾ ಸಬಲೀಕರಣಕ್ಕೆ ಇನ್ನೂ ಹೆಚ್ಚು ಗಮನಕೊಡಬೇಕಾಗಿದೆ.

ಈ ಎಲ್ಲಾ ವಿವರಣೆಗಳಿಂದ ಪೋಷಕರು ಅವರ ಮಕ್ಕಳು ಲಿಂಗತ್ವ ಪರಿವೆ ಅಥವಾ ಪ್ರಜ್ಞೆಯನ್ನು ಬೆಳೆಸಿಕೊಳ್ಳುವಲ್ಲಿ ಭಾಗಿಯಾಗುತ್ತಾರೆ ಎಂಬುದನ್ನು ತೀರ್ಮಾನಿಸಬಹುದು. ಅಂದರೆ ಹದಿಹರೆಯದವರ ಲಿಂಗತ್ವ ಬೆಳವಣಿಗೆಯ ಮೇಲೆ ಪೋಷಕರ ಪ್ರಭಾವವಿದೆ ಎಂದರ್ಥ.

**ಒಡಹುಟ್ಟಿದವರು:**

ಮಕ್ಕಳು ಸಾಮಾನ್ಯವಾಗಿ ತಮ್ಮ ಒಡಹುಟ್ಟಿದವರ ಕ್ರಿಯೆಗಳನ್ನು ಸ್ವಭಾವಗಳನ್ನು ಮತ್ತು ಮಾತುಗಳನ್ನು ಅನುಕರಿಸುತ್ತಾರೆ. ಒಡಹುಟ್ಟಿದ ಅಣ್ಣ/ ತಮ್ಮ ಅಥವಾ ಅಕ್ಕ/ತಂಗಿ ಪರಸ್ಪರ ಅವರು ಏನು ಮಾತನಾಡಬೇಕು ಮತ್ತು ಏನು ಮಾಡಬೇಕೆಂಬುದನ್ನು ಹೇಳುತ್ತಾರೆ.

'ಅಯ್ಯೋ, ನೀನು ಈ ಜಾಕೆಟ್ ಹಾಕಿಕೊಂಡರೆ ಹುಡುಗಿ ಹಾಗೆ ಕಾಣಿಸ್ತೀಯ ಎಂದು ಅಕ್ಕ ತಮ್ಮನಿಗೆ ಹೇಳಿದರೆ ಅವನು ಮುಂದೆಂದೂ ಅದನ್ನು ಧರಿಸುವುದೇ ಇಲ್ಲ'

ಲಿಂಗ ಸಾಮಾಜೀಕರಣದಲ್ಲಿ ಒಡಹುಟ್ಟಿದವರು ಮುಖ್ಯ ಪಾತ್ರವಹಿಸುವರು. ಅಧ್ಯಯನಗಳು ಹೊರಹಾಕಿರುವ ಮಾಹಿತಿಯ ಪ್ರಕಾರ ಅಣ್ಣ ಇರುವ ತಮ್ಮಂದಿರು ತಮ್ಮ ಅಣ್ಣನನ್ನು ಅನುಕರಿಸಿ ಹೆಚ್ಚು ಗಂಡು ಗುಣಗಳನ್ನು ತೋರುತ್ತಾರೆ. ಇದಕ್ಕೆ ವಿರುದ್ಧವಾಗಿ ಎರಡು ವರ್ಷಗಳ ಅಂತರದಲ್ಲಿರುವ ಅಣ್ಣ ಅಷ್ಟಾಗಿ ತನ್ನ ತಮ್ಮನಂತೆ ಇರುವುದಿಲ್ಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ನೀವು ನಿಮ್ಮ ವಿದ್ಯಾರ್ಥಿಗಳು ಲಿಂಗತ್ವ–ಪಕ್ಷಪಾತ ಮನೋಭಾವದಿಂದ ಹೊರಬರುವಂತೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದೀರಿ. ಹಾಗಾದರೆ ಈ ಕೆಳಗಿನ ಹೇಳಿಕೆಗಳಿಗೆ ಹೇಗೆ ಪ್ರತಿಕ್ರಿಯಿಸುತ್ತೀರಿ? ಈ ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿ ಎನಿಸಿದುದನ್ನು '✓' ಚಿಹ್ನೆಯ ಮೂಲಕ ಮತ್ತು ತಪ್ಪು ಎನಿಸಿದುದನ್ನು 'X' ಚಿಹ್ನೆಯ ಮೂಲಕ ಸೂಚಿಸಿ:

| | | |
|---|---|---|
| 1 | ಗಣಿತ ಮತ್ತು ವಿಜ್ಞಾನ ಅಧ್ಯಯನವು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳಿಬ್ಬರಿಗೂ ಮುಖ್ಯ | |
| 2 | ಗೃಹಕೃತ್ಯಗಳಲ್ಲಿ ಬಾಲಕರು ಮತ್ತು ಬಾಲಕಿಯರಿಬ್ಬರಗೂ ತರಬೇತಿ ನೀಡಬೇಕು | |
| 3 | ಕಛೇರಿ ಕೆಲಸ ಮತ್ತು ಅಡುಗೆ ಕೆಲಸಗಳಲ್ಲಿ ಗಂಡು ಮಕ್ಕಳು ತಂದೆಗೂ ಹೆಣ್ಣು ಮಕ್ಕಳು ತಾಯಿಗೂ ಅನುಕ್ರಮವಾಗಿ ಸಹಾಯ ನೀಡಬೇಕು | |
| 4 | ತೋಟಗಾರಿಕೆ ಗಂಡುಮಕ್ಕಳಿಗೆ ಮೀಸಲು | |
| 5 | ಅತಿಥಿ ಸತ್ಕಾರ ಹುಡುಗಿಯರು ಮಾಡುವಂತಹುದು | |
| 6 | ಹಣಕಾಸಿನ ಜವಾಬ್ದಾರಿಯನ್ನು ಹುಡುಗಿಯರೇ ವಹಿಸಬೇಕು | |
| 7 | ಹುಡುಗಿಯರು ತಂತ್ರಜ್ಞಾನದಲ್ಲಿ ಉತ್ತಮ ಸಾಧನೆ ಮಾಡಬಲ್ಲರು | |
| 8 | ಮನೆಯಲ್ಲಿರುವವರ ಆರೈಕೆ ಹುಡುಗಿಯರ ಕೆಲಸ | |
| 9 | ಹುಡುಗಿಯರು ಹೊರಗೆ ಹೆಚ್ಚು ಸಾಧನೆ ಮಾಡಬೇಕು; ಆದರೆ ಮನೆಕೆಲಸಗಳ ಜವಾಬ್ದಾರಿಯನ್ನು ಅವಳೇ ವಹಿಸಬೇಕು | |
| 10 | ಆಸ್ತಿಯಲ್ಲಿ ಹುಡುಗ ಹುಡುಗಿಯರಿಬ್ಬರಿಗೂ ಪಾಲು ಸಿಗಬೇಕು | |
| 11 | ಹುಡುಗಿಯರು ಹುಟ್ಟಿದರೆ ಬೇಸರವೇ. | |
| 12 | ಹುಡುಗರು ಕುಟುಂಬದ ವಂಶೋದ್ಧಾರಕರು. | |

## 4.2.3.2. ಶಾಲಾ ಸನ್ನಿವೇಶ (ಶಿಕ್ಷಕರು ಮತ್ತು ಸಮವಯಸ್ಕರ ಸಮೂಹ)ದಲ್ಲಿ ಲಿಂಗತ್ವದ ಪರಿಕಲ್ಪನೆಯ ಮೇಲಿನ ಸಾಮಾಜಿಕ ಪ್ರಭಾವಗಳು

ಶಾಲೆಯ ಈ ಕೆಳಗಿನ ಯಾವ ಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಲಿಂಗತ್ವ ಪರಿಗಣಿಸಲ್ಪಡುವುದಿಲ್ಲ ಎಂದು ನಿಮಗೆ ಅನಿಸುತ್ತದೆ?

**ಅಭ್ಯಾಸ I**

| | |
|---|---|
| 1 | ಪ್ರಾರ್ಥನಾ ಸಭೆ |
| 2 | ತರಗತಿ ಕೋಣೆಯ ಔಪಚಾರಿಕ ಚಟುವಟಿಕೆಗಳು |
| 3 | ಸಹಪಠ್ಯ ಕಾರ್ಯಕ್ರಮ ವ್ಯವಸ್ಥೆ ಮಾಡುವಾಗ |
| 4 | ತರಗತಿಯಲ್ಲಿ ಗಲಾಟೆಯಿದ್ದಾಗ |
| 5 | ಮೇಲಿನ ಎಲ್ಲಾ ಸನ್ನಿವೇಶಗಳು |

ಉತ್ತರಗಳು ...............................................

**ಅಭ್ಯಾಸ II**

ಶಿಕ್ಷಕರು ಹುಡುಗಿಯರು ಮತ್ತು ಹುಡುಗರ ವಿರುದ್ಧ ಪಕ್ಷಪಾತ/ ಪೂರ್ವಾಗ್ರಹ ಹೊಂದಿರಬಹುದು. ಹಾಗಾದರೆ ಕೆಳಗಿನವುಗಳು ಯಾರಿಗೆ ಅನ್ವಯವಾಗುತ್ತದೆ

ಅ. ತುಂಬ ಹೊಂದಾಣಿಕೆ ಮಾಡಿಕೊಳ್ಳುವುದು

ಬ. ನಿಯಮಗಳನ್ನು ಅನುಸರಿಸುವುದು

ಕ. ಅಚ್ಚುಕಟ್ಟು ಮತ್ತು ವ್ಯವಸ್ಥಿತವಾಗಿರುವುದು

ಡ. ಕಡಿಮೆ ವಿಮರ್ಶಿಸಲ್ಪಡುವುದು.

ಇ. ಕಡಿಮೆ ಕಲಿಕೆಯ ಸಮಸ್ಯೆಗಳಿರುವುದು

ಉತ್ತರಗಳು ...........................................

**ಅಭ್ಯಾಸ – III**

ಕೆಳಗಿನವುಗಳಲ್ಲಿ ಶಾಲೆಗಳು ಹುಡುಗರೊಂದಿಗೆ ಅಥವಾ ಹುಡುಗಿಯರೊಂದಿಗೆ ಗುರುತಿಸಲಾಗುವ ಅಂಶಗಳನ್ನು ಸೂಚಿಸಿ:

1) ಹೆಚ್ಚು ಗಮನ ಕೊಡಬೇಕಾದ ಅವಶ್ಯಕತೆ ಇರುವುದು

2) ಪ್ರಶ್ನೆಯಲ್ಲಿ ತೊಂದರೆ ಇದ್ದಾಗ ಕಡಿಮೆ ಸೂಚನೆಗಳು ಕಡಿಮೆ ಸಹಾಯ ಬೇಕಿರುವುದು.

3) ಶಿಕ್ಷಕರಿಂದ ಹೆಚ್ಚು ಬೈಗುಳ ಸಿಗುವುದು

4) ತಮ್ಮ ಸರದಿಗಾಗಿ ಶಾಂತಿ ಸಮಾಧಾನಗಳಿಂದ ಕಾಯುವುದು.

5) ಶಿಸ್ತಿನ ಕ್ರಮಕ್ಕಾಗಿ ಶಾಲಾ ಅಧಿಕಾರಿಗಳ ಬಳಿಗೆ ಹೋಗಬೇಕಾಗುವುದು.

6) ಅಧ್ಯಾಪಕರಿಂದ ಹೆಚ್ಚು ಶಿಕ್ಷೆ ಪಡೆಯುವುದು.

ಈ ಮೇಲಿನ ವರ್ತನೆಗಳನ್ನು ಸಾಮಾನ್ಯವಾಗಿ ಶಾಲೆಗಳಲ್ಲಿ ನಿರ್ದಿಷ್ಟವಾಗಿ ಹುಡುಗರಿಗೆ ಇಲ್ಲವೇ ಹುಡುಗಿಯರಿಗೆ ಸಂಬಂಧಿಸಿದಂತೆ ಗುರುತಿಸಲಾಗುತ್ತದೆ. ಇದೇ ರೀತಿಯ ಅಭಿಪ್ರಾಯಗಳನ್ನೇ ಮನೆಯಲ್ಲೂ ಪೋಷಿಸಿರುವುದರಿಂದ ಹುಡುಗ–ಹುಡುಗಿಯರ ವರ್ತನೆಗಳು ಶಾಲಾ ಸನ್ನಿವೇಶದಲ್ಲಿ ಹೀಗೇ ಇರುತ್ತವೆ. ಇವುಗಳು ಅದಲು ಬದಲಾದರೆ ಆಗುವ ಹಗರಣ, ಲಿಂಗತ್ವದ ಕಲ್ಪನೆ ಅದೆಷ್ಟು ಬೇರೂರಿಬಿಟ್ಟಿದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಶಾಲಾ ಸನ್ನಿವೇಶದಲ್ಲಿ ಮಕ್ಕಳು ಅನಿವಾರ್ಯವಾಗಿಯೇ ತಮ್ಮ ಲಿಂಗತ್ವ ಪ್ರಜ್ಞೆಯ ಬಗ್ಗೆ ಜಾಗರೂಕರಾಗಿರುತ್ತಾರೆ. 'ಅಬ್ಬಾ! ಅವಳು ಹುಡುಗರ ಥರ ಜಗಳಕ್ಕೆ ಬರ್ತಾಳೆ', 'ಏನೋ! ಹುಡುಗಿಯರ ಹಾಗೆ ಅಳುಮೂಂಜಿ', 'ಹುಡುಗಿಯರ ಹಾಗೆ ಇವ ಕುಡುಮಿ, ಯಾವಾಗ್ಲೂ ಓದೋದೇ ಕೆಲಸ' 'ಏನು! ಹುಡುಗರಂತೆ ರೌಡಿ ಹಾಗೆ ಆಡ್ತೀಯ, ಸ್ವಲ್ಪ ಹುಡುಗಿಯರ ಹಾಗೆ ಇರೋದು ಕಲಿತುಕೊ' 'ಹುಡುಗರ ಥರ ಬೀದಿ ಬಸವಿ'– ಈ ಎಲ್ಲ ಹೇಳಿಕೆಗಳು ಸಮವಯಸ್ಕರು ಲಿಂಗತ್ವವನ್ನು ತಿಳಿದೋ ತಿಳಿಯದೆಯೋ ಪೋಷಿಸುವುದನ್ನು, ಹದಿಹರೆಯದವರು ತಾವು ಅದಕ್ಕೆ ಒಳಗಾಗುವುದರ ಜೊತೆಗೆ ಇತರರನ್ನೂ ಒಳಗುಮಾಡುವ ಸನ್ನಿವೇಶಗಳನ್ನು ಕಾಣಬಹುದು.

ಹುಡುಗರು ಜ್ಞಾನಾಕಾಂಕ್ಷಿಗಳಾಗಿ ಮುಂದುವರಿಯುವುದನ್ನು ಮತ್ತು ಹುಡುಗಿಯರು ವಿಧೇಯರಾಗಿ ಇರುವುದನ್ನು ಶಿಕ್ಷಕರು ಹೊಗಳುವ ಬಗೆಗೆ ವಾಸ್ತವಾಂಶಗಳು ದೊರಕಿವೆ. ಬಹಳಷ್ಟು ಹುಡುಗರಲ್ಲಿ ತುಂಟಾಟ ಅಥವಾ ಪುಂಡಾಟವನ್ನು ಕಂಡು ಹುಡುಗರ ವರ್ತನೆಯನ್ನು ತುಸು ಕಠೋರವಾಗಿ ಟೀಕಿಸುವುದನ್ನು,

ಹುಡುಗಿಯರ ಕುರಿತಂತೆ, ಅಷ್ಟು ಕಠೋರವಾಗದೆ ಮೃದುವಾಗಿ ಟೀಕಿಸುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಶಿಕ್ಷಕರು ಹುಡುಗರನ್ನು ಬಯ್ಯುವುದಾದರೆ ಅದು ಅವರ ದುರ್ವರ್ತನೆಗಾಗಿರುತ್ತದೆ. ಹುಡುಗಿಯರನ್ನು ಅವರು ಅಧ್ಯಯನದಲ್ಲಿ ಹಿಂದುಳಿದಾಗ, ಲಿಂಗತ್ವ ಆಧಾರಿತ ವರ್ತನೆಗಳು ಅದಲು ಬದಲಾದಾಗ ಬೈಯುವುದು ಸಾಮಾನ್ಯವಾಗಿದೆ. ನಿರ್ದಿಷ್ಟವಾಗಿ ಹೇಳಬಹುದಾದರೆ ಶಾಲಾ ಸನ್ನಿವೇಶಗಳು ಹುಡುಗಿಯರಿಗಿಂತ ಹುಡುಗರಲ್ಲಿ ಲಿಂಗಾತ್ಮಕ ವರ್ತನೆಯನ್ನು ಬೆಳೆಸುವುದೆನ್ನಬಹುದು.

ಶಾಲಾ ಸನ್ನಿವೇಶಗಳು ಲಿಂಗತ್ವವನ್ನು ಪೋಷಿಸುವ ಕೆಲವು ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಶಾಲೆಗಳಲ್ಲಿ ಹುಡುಗರನ್ನು ಅವರ ವ್ಯಾಸಂಗದ ಯಶಸ್ಸಿಗೆ ಹೊಗಳುವುದು ಮತ್ತು ಅಪವರ್ತನೆಗೆ ತೆಗಳುವುದು ಕಂಡುಬಂದರೆ ಹುಡುಗಿಯರನ್ನು ಅವರ ಹೊಂದಾಣಿಕೆಗೆ ಮತ್ತು ಅಚ್ಚುಕಟ್ಟುತನಕ್ಕೆ ಹೊಗಳುವುದು ಕಂಡುಬರುತ್ತದೆ.
- ಅವರ ಲಿಂಗಕ್ಕೆ ಅಸಮಂಜಸವಾದುದೆಂದು ಪರಿಗಣಿಸಿ ಮಕ್ಕಳು ಕೆಲವು ಆಟಗಳಲ್ಲಿ ತೊಡಗುವುದನ್ನು ಶಿಕ್ಷಕರು ಟೀಕಿಸುವುದುಂಟು. ಉದಾಹರಣೆಗೆ ಕಬಡ್ಡಿ, ಫುಟ್‌ಬಾಲ್ ಇವು ಹುಡುಗಿಯರಿಗಲ್ಲ.
- ಸಹ– ಶಿಕ್ಷಣವಿರುವ ಶಾಲೆಗಳಲ್ಲಿ ಶಿಕ್ಷಕರು ಹರೆಯದ ಗಂಡು ಹುಡುಗರನ್ನು ಹೆಚ್ಚು ಗಮನಿಸುವುದುಂಟು.
- ಸಾಮಾನ್ಯವಾಗಿ ಶಾಲೆಯಲ್ಲಿ ಮಕ್ಕಳು ತಮ್ಮ ಲಿಂಗದ ಸಮವಯಸ್ಕರ ಗುಂಪನ್ನೇ ರಚಿಸಿಕೊಳ್ಳುತ್ತಾರೆ. ಹುಡುಗಿಯರು ಒಟ್ಟಿಗೆ ಒಂದೆಡೆ ಗುಂಪು ಮಾಡುವುದನ್ನು ಕಾಣುತ್ತೇವೆ. ಅನೇಕ ವೇಳೆ ಹುಡುಗರು ಚದುರಿ ಹೆಚ್ಚು ಜಾಗವನ್ನು ಆಕ್ರಮಿಸಿಕೊಳ್ಳುವುದುಂಟು. ಸರ್ವೇಸಾಮಾನ್ಯವಾಗಿ ಹುಡುಗರ ಮತ್ತು ಹುಡುಗಿಯರ ಪ್ರತ್ಯೇಕ ಗುಂಪುಗಳಿರುತ್ತವೆ. ಕೇವಲ ಹುಡುಗರ ಮತ್ತು ಹುಡುಗಿಯರ ನಡುವೆ ಜಗಳ ಅಥವಾ ತಗಾದೆ ಉಂಟಾದಾಗ ಮಾತ್ರ ಎರಡು ಗುಂಪುಗಳು ಎದುರಾಗುವುದು ಸಾಮಾನ್ಯ ಸಂಗತಿ ಎಂಬುದನ್ನು ಸಂಶೋಧನೆಗಳು ಗುರುತಿಸಿವೆ. ಹುಡುಗಿಯರು ತಮ್ಮ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆಕ್ರಮಣಕಾರಿಗಳಾಗಿ ವರ್ತಿಸುವ ಮತ್ತು ಗುಂಪಿನಿಂದ ದೂಡುವ ಗಂಡು ಹುಡುಗರಿಂದ ದೂರದಲ್ಲಿ ಆಯ್ಕೆ ಮಾಡಿಕೊಳ್ಳಲು ಗಮನಿಸಿಕೊಳ್ಳುವರು ಎಂದೂ ಸಂಶೋಧನೆಗಳು ಹೇಳುತ್ತವೆ. ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾದ ಆವಶ್ಯಕತೆ ಇದೆ.
- ಲಿಂಗಾಧಾರಿತವಾಗಿ ಬೇರ್ಪಟ್ಟ ಸಮವಯಸ್ಕರ ಸಮೂಹಗಳಲ್ಲಿ ಮಕ್ಕಳು ಭಿನ್ನ ರೀತಿಯ ಸಾಮಾಜಿಕ ಪ್ರಭಾವಗಳನ್ನು ಬೆಳೆಸಿಕೊಳ್ಳುವರು. ದೊಡ್ಡ ಸಮೂಹದ ಆಟಗಳಲ್ಲಿ ಗಂಡು ಹುಡುಗರು ಬಹುತೇಕ ಬೆದರಿಕೆ, ಒತ್ತಾಯ ಮತ್ತು ಬಲಪ್ರಯೋಗಗಳನ್ನು ಬಳಸುವುದುಂಟು.
- ಹುಡುಗಿಯರು ಸಂಭಾವಿತ ಉಪಾಯಗಳಾದ ವಿನಯಪೂರ್ವಕ ಕೋರಿಕೆ, ಪ್ರೇರಣೆ ಹಾಗೂ ಒಪ್ಪಿಗೆಗಳ ಮೂಲಕ ಹುಡುಗಿಯರೊಡನೆ ಯಶಸ್ವಿಯಾಗಿ ಹೊಂದಿಕೊಳ್ಳಬಹುದು, ಆದರೆ ಹುಡುಗರೊಂದಿಗೆ ಸಾಧ್ಯವಿಲ್ಲ.
- ಇತ್ತೀಚಿನ ಸಂಶೋಧನೆಗಳು ಸೂಚಿಸುವಂತೆ ತರುಣರು ಸ್ನೇಹಿತರ ಸಂಗದಲ್ಲಿದ್ದಾಗ ಸಾಹಸ ಅಥವಾ ಅಪಾಯದ ಕಾರ್ಯಗಳಲ್ಲಿ ತೊಡಗುವುದು ಉಂಟು. ಬಹುಶ: ನೀವು ಕೇಳಿರಬಹುದಾದ ನೋಡಿರಬಹುದಾದ ಉದಾಹರಣೆಗಳೆಂದರೆ ಸಮವಯಸ್ಕರ ತಂಡದೊಡನೆ ಟ್ರಾಫಿಕ್ ದೀಪಗಳ ನಿಯಮವನ್ನು ಮೀರುವುದು ಮತ್ತು ಅತೀ ವೇಗದಿಂದ ವಾಹನ ಚಾಲನೆ ಮಾಡುವುದು ಇತ್ಯಾದಿ
- ಪಾಶ್ಚಾತ್ಯ ಸಂಸ್ಕೃತಿಯು ಹದಿಹರೆಯದ ಸಮವಯಸ್ಕರ ಗುಂಪುಗಳ ಮೇಲೆ ಮತ್ತು ಗೆಳೆತನದ ಮೇಲೆ ಪ್ರಭಾವ ಬೀರುವುದನ್ನು ಈಚೆಗೆ ಕಾಣುತ್ತಿದ್ದೇವೆ.
- ಮಾಧ್ಯಮಿಕ ಶಾಲಾ ಹಂತದ ಅಂತ್ಯದ ವೇಳೆಗೆ ಹುಡುಗಿಯರಿಗಿಂತ ಹುಡುಗರು ದೊಡ್ಡ ಸಮೂಹಗಳಲ್ಲಿ ಭಾಗವಹಿಸುವುದು ಮತ್ತು ವ್ಯವಸ್ಥಿತ ಕ್ರೀಡೆಗಳಲ್ಲಿ ಭಾಗವಹಿಸುವುದು ಕಾಣುತ್ತೇವೆ.

- ಹದಿಹರೆಯಕ್ಕೆ ಕಾಲಿಟ್ಟಾಗ ಹೆತ್ತವರಿಗಿಂತಲೂ ಸಮವಯಸ್ಕರ ಗುಂಪು ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ.
- ತಾರುಣ್ಯದ ಆರಂಭಹಂತದಲ್ಲೇ ಹುಡುಗಿಯರಿಗಿಂತ ಹುಡುಗರು ಸ್ಪರ್ಧೆಗಳಲ್ಲಿ, ಸಂಘರ್ಷಗಳಲ್ಲಿ, ಸಾಹಸ ಕೈಗೊಳ್ಳುವುದರಲ್ಲಿ ಮತ್ತು ಅಹಂ ಪ್ರದರ್ಶನದಲ್ಲಿ ತೊಡಗಿಸಿಕೊಳ್ಳುವುದುಂಟು. (ಇದಕ್ಕೆ ವ್ಯತಿರಕ್ತವಾಗಿ ಹುಡುಗಿಯರ ನಡುವೆ ನಿಕಟವಾದ ಸ್ನೇಹವನ್ನು ಕಾಣುತ್ತೇವೆ) ಆದರೆ ಹುಡುಗರು ತಮ್ಮ ಗೆಳೆಯರ ಮೇಲೆ ಹಿಡಿತ ಹೊಂದುವರು. ಉದ್ರೇಕ ಮತ್ತು ಉದ್ವೇಗದ ಗುಣಗಳು ಹುಡುಗರನ್ನು ಬಂಧಿಸುತ್ತವೆ.
- ಹುಡುಗರ ಸ್ನೇಹ ಸಂಬಂಧವೂ ಹುಡುಗಿಯರ ಸ್ನೇಹ ಸಂಬಂಧಕ್ಕಿಂತ ಕಡಿಮೆ ನಿಕಟ ಭಾವ ಹೊಂದಿರುತ್ತದೆ. ಏಕೆಂದರೆ ಅವರು ಭೌತಿಕವಾಗಿ ಹೆಚ್ಚು ಹತ್ತಿರವಾಗದಿರುವುದು, ಆಂತರ್ಯವನ್ನು ಹೆಚ್ಚು ಬಿಚ್ಚಿ ಹೇಳದಿರುವುದು, ಮಾತನಾಡುವಾಗ ಹೆಚ್ಚು ನೇರ ದೃಷ್ಟಿಯಿಂದ ಹೇಳದಿರುವುದು. ಹುಡುಗರ ಆಸಕ್ತಿಗಳು ಮತ್ತು ಕಾರ್ಯಚಟುವಟಿಕೆಗಳು ಒಂದೇ ಆಗಿದ್ದರೆ ಮತ್ತು ಸ್ನೇಹಸಂಬಂಧ ಹೆಚ್ಚು ಗಟ್ಟಿಯಾಗಿರುತ್ತವೆ ಎಂದು ಅಧ್ಯಯನಗಳು ತಿಳಿಸುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೆಳಗೆ ಕೆಲವು ಸನ್ನಿವೇಶಗಳನ್ನು ಕೊಡಲಾಗಿದೆ. ನೀವು ತರಗತಿಯಲ್ಲಿ ಒಬ್ಬ ನಿಷ್ಪಕ್ಷಪಾತ ಶಿಕ್ಷಕರೇ ಆಗಿದ್ದಲ್ಲಿ, ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ? ನೀವು ಗಂಡು ಹುಡುಗರಿಗೆ ಮತ್ತು ಹೆಣ್ಣುಮಕ್ಕಳಿಗೆ ಬೇರೆ ರೀತಿ ಪ್ರತಿಕ್ರಿಯೆ ತೋರಿಸುವುದಾದರೆ **'D'** ಎಂದು ಸೂಚಿಸಿರಿ, ಮತ್ತು ಇಬ್ಬರಿಗೂ ಒಂದೇ ರೀತಿ ಪ್ರತಿಕ್ರಿಯೆ ತೋರಿಸಿದರೆ **'S'** ಎಂದು ಸೂಚಿಸಿರಿ

| | | |
|---|---|---|
| 1 | ಪ್ರಯೋಗ ಮಾಡುವಾಗ ಉಪಕರಣಗಳನ್ನು ಒಡೆದು ಹಾಕಿದಾಗ | |
| 2 | ಸುಳ್ಳು ಹೇಳಿದಾಗ | |
| 3 | ಬೆಳಿಗ್ಗೆ ಶಾಲೆಗೆ ಬಂದು ನಿಮಗೆ ತಿಳಿಸದೆ ಮಧ್ಯಾಹ್ನ ಚಕ್ಕರ್ ಹೊಡೆದಾಗ | |
| 4 | ಮಾರ್ಕ್ ಕಾರ್ಡ್‌ಗೆ ಸಹಿ ಹಾಕಿಸದಿದ್ದಾಗ | |
| 5 | ಹೇಳಿದರೂ ಪೋಷಕರನ್ನು ಕರೆತರದಿದ್ದಾಗ | |
| 6 | ಕ್ಲಾಸಿಗೆ ಚಕ್ಕರ್ ಹಾಕಿ ಮನೆಯಲ್ಲಿ ಹೇಳದೆ ಸಿನಿಮಾಕ್ಕೆ ಹೋದದ್ದು ನಿಮಗೆ ಗೊತ್ತಾದಾಗ | |
| 7 | ವಸ್ತುಗಳನ್ನು ಕದ್ದಾಗ | |
| 8 | ಉತ್ತಮ ಅಂಕಗಳನ್ನು ಪಡೆದಾಗ | |
| 9 | ದಿನವೂ ತಪ್ಪದೇ ನಮಸ್ಕರಿಸಿದಾಗ | |
| 10 | ದಿನವೂ ಮನೆಗೆಲಸ ಮಾಡದೆ ಬಂದಾಗ | |
| 11 | ತರಗತಿಯಲ್ಲಿ ತರಳೆ ಮಾಡುವಾಗ | |
| 12 | ಸುಮ್ಮಸುಮ್ಮನೆ 'ಕಿಸಕ್' ಎಂದು ನಕ್ಕಾಗ | |

## 4.2.3.3. ಮಾಧ್ಯಮದ ಸನ್ನಿವೇಶದಲ್ಲಿ ಲಿಂಗತ್ವದ ಸಾಮಾಜಿಕ ಪ್ರಭಾವಗಳು

**ದೂರದರ್ಶನ:**

ಹದಿಹರೆಯದವರನ್ನು ಕುರಿತ ಅಧ್ಯಯನಗಳ ಪ್ರಕಾರ ಮಕ್ಕಳು ಲಿಂಗತ್ವ ಪಡಿಯಚ್ಚುಗಳನ್ನು ತಮ್ಮ ಜೀವನದಲ್ಲಿ ಬಹಳ ಬೇಗನೆ ಅಳವಡಿಸಿಕೊಂಡುಬಿಡುತ್ತಾರೆ. ಹುಡುಗರು ಆಕ್ರಮಣಶೀಲರು, ಚುರುಕಾಗಿರುವವರು, ಹೆಣ್ಣುಮಕ್ಕಳು ರೂಪ ಲಾವಣ್ಯ ಮತ್ತು ಗೃಹಕೃತ್ಯಕ್ಕೆ ಸೀಮಿತರಾಗಿರುವವರು ಎಂಬುದು ಮಕ್ಕಳ ಅಭಿಪ್ರಾಯವಾಗಿದೆ.

ಮಾಧ್ಯಮಗಳಲ್ಲಿ ಲಿಂಗ ಪ್ರತಿನಿಧಿಸುವಿಕೆಯು ಬಹುತೇಕವಾಗಿ ಪಡಿಯಚ್ಚುಗಳಾಗಿಯೇ ಇವೆ. ಈ ಲಿಂಗ ಪಡಿಯಚ್ಚುಗಳು ಸಂಗೀತ ಕಾರ್ಯಕ್ರಮ, ವಾಣಿಜ್ಯ ಪ್ರಕಟಣೆ, ಡ್ರಾಮಾ ಜೂನಿಯರ್ಸ್, ಈ ರೀತಿಯ ಅನೇಕ ಕಾರ್ಯಕ್ರಮಗಳಲ್ಲಿ ಕಂಡುಬರುತ್ತವೆ. ಇತ್ತೀಚೆಗೆ ದೂರದರ್ಶನ ಕಾರ್ಯಕ್ರಮಗಳಲ್ಲಿ ಲಿಂಗಪಾತ್ರಗಳಲ್ಲಿ ಅತಿ ಸ್ವಲ್ಪಮಟ್ಟಿಗೆ ಬದಲಾವಣೆಗಳು ಮತ್ತು ಸುಧಾರಣೆ ಕಂಡುಬರುತ್ತಿವೆ.

ದೂರದರ್ಶನದಲ್ಲಿ ವೀಕ್ಷಿಸಿದ ಪಾತ್ರಗಳಿಂದ ಪ್ರಭಾವಿತರಾಗಿ ಹುಡುಗ ಹುಡುಗಿಯರು ಸಾಹಸಗಳನ್ನು, ಪವಾಡಗಳನ್ನು ಎಸಗುವ ಪ್ರಯತ್ನ ಕೈಗೊಂಡಿದ್ದನ್ನು ನೀವು ಕೇಳಿರಬಹುದು.

ಲಿಂಗ ಸಮಾನತೆಯ ಕಥೆ ಪುಸ್ತಕ ಮತ್ತು ಪಠ್ಯಪುಸ್ತಕಗಳು ಹೆಚ್ಚುತ್ತಿದ್ದರೂ ಹದಿಹರೆಯದವರು ಗಂಡು ಪ್ರಧಾನ ಪಾತ್ರ ವಹಿಸುವ ಮತ್ತು ಅತ್ಯಾಕರ್ಷಕ ಕಥಾ ವಸ್ತುವಿರುವ, ಗಂಡುಪಾತ್ರಗಳೇ ಪ್ರಮುಖ ಪಾತ್ರ ವಹಿಸುವ ಹಳೆಯ ಪುಸ್ತಕಗಳನ್ನು ಓದುತ್ತಾರೆ. ಈ ಪಾತ್ರಗಳು ಸೃಜನಶೀಲವೂ ಮತ್ತು ಸಮರ್ಥನೆ ತೋರಬಲ್ಲವೂ ಆಗಿರುತ್ತವೆ. ಆದರೆ ಹೆಣ್ಣು ಪಾತ್ರಗಳು ನಿಷ್ಕ್ರಿಯ, ಅವಲಂಬಿತ ಮತ್ತು ವಿಧೇಯವಾಗಿರುತ್ತವೆ.

ಒಂದು ಅಧ್ಯಯನದ ಪ್ರಕಾರ ಮಾರಾಟಗೊಂಡ ಮತ್ತು ಪ್ರಶಸ್ತಿ ಗಳಿಸಿದ ಇನ್ನೂರಕ್ಕೂ ಹೆಚ್ಚು ಪುಸ್ತಕಗಳಲ್ಲಿ ಹೆಣ್ಣು ಪಾತ್ರಗಳು ಒಳಾಂಗಣ ಚಟುವಟಿಕೆಗಳಲ್ಲಿ ತೊಡಗಿರುವುದನ್ನೇ ಹೆಚ್ಚಾಗಿ ಚಿತ್ರಿಸಿದ್ದವು. ಮಾಧ್ಯಮಗಳು ಹರೆಯದವರ ಮೈಮಾಟದ ಬಗ್ಗೆಯೂ ಪ್ರಭಾವ ಬೀರುತ್ತವೆ. ಕೆಲವು ಅಧ್ಯಯನಗಳು ಈ ವಿಚಾರ ಕುರಿತಂತೆ ಲಿಂಗ ವ್ಯತ್ಯಾಸಗಳಿರುವುದನ್ನು ಹೊರಹಾಕಿದೆ. ಒಂದು ಅಧ್ಯಯನದ ಪ್ರಕಾರ ಅತಿಯಾಗಿ ದೂರದರ್ಶನದ ಮನೋರಂಜನ ವಾಹಿನಿಯನ್ನು ವೀಕ್ಷಿಸುವಾಗ ಹರೆಯದವರು ತಮ್ಮ ಮೈಮಾಟದ ಬಗ್ಗೆ ಹೆಚ್ಚು ನಿಷೇಧಾತ್ಮಕ ಭಾವ ತೋರುವರು. ಒಟ್ಟಿನಲ್ಲಿ ಮಾಧ್ಯಮಗಳು ಗಂಡಸರನ್ನು ಸ್ವತಂತ್ರರನ್ನಾಗಿಯೂ ಉದ್ದಿಮೆಗಳನ್ನು ಅನ್ವೇಷಿಸುವವರನ್ನಾಗಿಯೂ ಉದ್ಯೋಗಪತಿಗಳನ್ನಾಗಿಯೂ ಮನೋರಂಜನಾ ಚಟುವಟಿಕೆಗಳನ್ನು ರೂಪಿಸುವವರನ್ನಾಗಿಯೂ ಚಿತ್ರಿಸುತ್ತವೆ. ಸ್ತ್ರೀಯರನ್ನು ಸ್ವತಂತ್ರರಲ್ಲದಂತೆ, ಮಹತ್ವಾಕಾಂಕ್ಷೆ ಇಲ್ಲದಂತೆ, ಅತ್ಯಂತ ಭಾವನಾ ಜೀವಿಗಳಾಗಿರುವಂತೆ ಚಿತ್ರಿಸುತ್ತವೆ. ಈಚಿನ ನಮ್ಮ ಧಾರಾವಾಹಿಗಳು ಹೆಂಗಸರೆಂದರೆ ಅಲಂಕಾರಪ್ರಿಯರು, ಘಟವಾಣಿಗಳು, ಹೊಟ್ಟೆಕಿಚ್ಚಿನಲ್ಲೇ ಹುಟ್ಟಿ ಬಂದವರು ಎಂಬಂತೆ ತೆರೆದಿಡುತ್ತವೆ. ಇಂತಹ ಚಿತ್ರಣಗಳು ಅಸಾಧು ಮಾತ್ರವಲ್ಲ; ಅಪಾಯಕಾರಿಯೂ ಹೌದು.

ಹದಿಹರೆಯದವರ ಮೇಲೆ ಮಾಧ್ಯಮದ ಪ್ರಭಾವವನ್ನು ನೀವು ಈಗಾಗಲೇ ಕಲಿತಿರುವಿರಿ. ಅದರಲ್ಲಿ ಮುಖ್ಯವಾಗಿ ಲಿಂಗತ್ವವನ್ನು ರೂಪಿಸುವುದರ ಕುರಿತಂತೆ ಮಾಧ್ಯಮದ ಪ್ರಭಾವವನ್ನು ಕುರಿತ ನಿಮ್ಮ ಅನುಭವಗಳನ್ನು ಕಲೆಹಾಕಿ ನಿಮ್ಮ ಸಹೋದ್ಯೋಗಿಗಳೊಂದಿಗೆ ವಿಚಾರಮಾಡಿ, ಲಿಂಗತ್ವವನ್ನು ಮೀರಿದ ಆಲೋಚನೆಯುಳ್ಳ ಹದಿಹರೆಯದವರನ್ನು ರೂಪಿಸಲು ನೀವು ಹೇಗೆ ಪ್ರಯತ್ನಿಸಬಹುದು ಎಂಬುದರ ಕುರಿತು ತೀರ್ಮಾನಗಳನ್ನು ಕೈಗೊಳ್ಳಿ.

**ಶೈಕ್ಷಣಿಕ ನಿಹಿತಾರ್ಥಗಳು**

ಕುಟುಂಬ, ಶಾಲೆ ಮತ್ತು ಮಾಧ್ಯಮಗಳು ಹದಿಹರೆಯದವರ ಲಿಂಗತ್ವದ ಬೆಳವಣಿಗೆಯನ್ನು ಪೋಷಿಸುವ ಅಂಶಗಳಾಗಿ ಅನೇಕ ಶೈಕ್ಷಣಿಕ ನಿಹಿತಾರ್ಥಗಳಿಗೆ ಎಡೆಮಾಡಿಕೊಟ್ಟಿವೆ. ಅವುಗಳನ್ನು ಹೀಗೆ ಗುರುತಿಸಬಹುದು. ಶಿಕ್ಷಣವು ಮನೆಯಲ್ಲೇ ಪ್ರಾರಂಭವಾಗುವುದರಿಂದ, ಹೆತ್ತವರಿಗೆ ಸಂಬಂಧಿಸಿದ ನಿಹಿತಾರ್ಥಗಳನ್ನೂ ಗುರುತಿಸಲಾಗಿದೆ.

- ಮಕ್ಕಳು ಮತ್ತು ತರುಣರು ಲಿಂಗಾನುಸಾರಿ ವರ್ತನೆಯನ್ನು ಹಿರಿಯರ (ಲಿಂಗಾನುಸಾರಿಯಾದ) ವರ್ತನೆ ಪೋಷಕರ, ಶಿಕ್ಷಕರ ಮತ್ತು ಮಾಧ್ಯಮಗಳ ಪ್ರಭಾವದಿಂದ ಮತ್ತು ಅನುಕರಣೆಯಿಂದ ಕಲಿಯುವರು. ಹಾಗಾಗಿ ಅವರ ಸುತ್ತಮುತ್ತಲಿನವರು ಲಿಂಗತ್ವವನ್ನು ಮೀರಿದ ಸಂವೇದನಾಶೀಲತೆಯುಳ್ಳ ಮಾದರಿ ಬದುಕನ್ನು ಆದರ್ಶರೂಪದಲ್ಲಿ ಮಕ್ಕಳ ಮುಂದಿಡಬೇಕು.
- ಲಿಂಗತ್ವದ ಅರಿವನ್ನು ಮಕ್ಕಳಿಗೆ ಬೋಧಿಸಬೇಕಾಗಿಲ್ಲ; ಅವರು ತಮ್ಮದೇ ಗ್ರಹಿಕೆಯಿಂದಲೂ ಅದನ್ನು ಬೆಳೆಸಿಕೊಳ್ಳಬಹುದು. ಈ ಬಗ್ಗೆ ಅಧ್ಯಾಪಕರು, ಹೆತ್ತವರು ಜಾಗರೂಕರಾಗಿರಬೇಕು. ಅಂತಹ ಮಾತುಗಳು, ವರ್ತನೆಗಳು ಕಂಡುಬಂದರೆ ತಕ್ಷಣವೇ ತಿದ್ದಬೇಕು.
- ಕುಟುಂಬ ಹಾಗೂ ಶಾಲೆಗಳಲ್ಲಿ ಮಕ್ಕಳಿಗೆ ಮಾರ್ಗದರ್ಶನ ಮಾಡುವವರು ಮೊದಲಿಗೆ ಲಿಂಗತ್ವ ಮುಕ್ತವಾದ ಮನೋಭಾವಗಳನ್ನು ಬೆಳೆಸಿಕೊಂಡು, ಬದುಕಿನಲ್ಲಿ ಅನ್ವಯಿಸಿಕೊಳ್ಳಬೇಕು.
- ಪಠ್ಯಪುಸ್ತಕಗಳು ಬೋಧನಾ ಸಾಮಗ್ರಿಗಳು ಲಿಂಗತ್ವವನ್ನು ಪೋಷಿಸುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಸಾಮರ್ಥ್ಯಗಳಲ್ಲಿ ವ್ಯತ್ಯಾಸಗಳಿರುವುದಕ್ಕೆ ವೈಜ್ಞಾನಿಕವಾದ ಮಾಹಿತಿ ನೀಡಬೇಕು.
- ಸಂಭಾಷಣೆ ಮಾಡುವಾಗ, ಯಾವ ನಡೆವಳಿಕೆಗೂ 'ಲಿಂಗ'ವನ್ನು ಕಾರಣವಾಗಿ ಕೊಡಬಾರದು. 'ಅವಳು ಹುಡುಗಿ, ಅದಕ್ಕೇ ಹಾಗೆ ಮಾಡಬೇಕು/ಮಾಡಬಾರದು' 'ಆಕೆ ಹೆಂಗಸು, ಅದಕ್ಕೇ ಹಾಗೆ ಮಾಡಬೇಕು/ಮಾಡಬಾರದು' ಎಂಬಿತ್ಯಾದಿ ಮಾತುಗಳನ್ನು ಹದಿಹರೆಯದವರ ಮುಂದೆ ಹೇಳಬಾರದು.
- ಹೆಣ್ಣುಮಕ್ಕಳು ಹುಡುಗರೊಡನೆ ಬೆರೆತು ಕಲಿಯುವುದು, ಮಾತನಾಡುವುದು ಇತ್ಯಾದಿಗಳನ್ನು ಅತ್ಯಂತ ಸಹಜವಾಗಿ, ಮಾರ್ಗದರ್ಶನದೊಂದಿಗೇ ಪೋಷಿಸಬೇಕು. ಆಗ ಹದಿಹರೆಯದವರಲ್ಲಿ 'ಕೆಟ್ಟ ಕುತೂಹಲ' ಇರುವುದಿಲ್ಲ.
- ಹಿರಿಯರು ಮತ್ತು ಪೋಷಕರು ಅವರ ಮಕ್ಕಳು ಇನ್ನೊಂದು ಲಿಂಗದ ಬಗ್ಗೆ ವಾಸ್ತವವಾಗಿ ಏನು ಯೋಚಿಸುತ್ತಾರೆ ಎಂಬ ಬಗ್ಗೆ ಪತ್ತೆ ಮಾಡಬೇಕು. ಇದು ಪೋಷಕರು ಎಚ್ಚರವಹಿಸಲು ಸಹಾಯಕ.
- ಪೋಷಕರು ಮನೆಯಲ್ಲಿ ಮಕ್ಕಳ ಜವಾಬ್ದಾರಿಗಳನ್ನು ಕರ್ತವ್ಯಗಳನ್ನು ಲಿಂಗದ ಆಧಾರದ ಮೇಲೆ ವಿಭಜಿಸಬಾರದು.
- ಮಕ್ಕಳ ನಿಜವಾದ ಆಸಕ್ತಿಗಳನ್ನು ಮತ್ತು ಪ್ರತಿಭೆಗಳನ್ನು(ಮಕ್ಕಳ ಲಿಂಗದ ದೃಷ್ಟಿಯಿಂದ ಸರಿ ಅಥವಾ ತಪ್ಪು ಎಂದು ಯೋಚಿಸದೆ) ಪ್ರೋತ್ಸಾಹಿಸಬೇಕು.
- ತಂದೆಯಂದಿರು ತಮ್ಮ ಹೆಣ್ಣುಮಕ್ಕಳಿಗೆ ಇನ್ನೂ ಹೆಚ್ಚಿನ ಒಡನಾಟ ನೀಡುವಲ್ಲಿ ತಮ್ಮ ಪಾತ್ರ ಮುಖ್ಯವೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು (ಇದರಿಂದ ಅವರ ಆಸಕ್ತಿ ಮತ್ತು ಆಕಾಂಕ್ಷೆಗಳ ಬೆಳವಣಿಗೆಗೆ ಸಹಾಯವಾಗುವುದು)
- ಹುಡುಗಿಯರು ತಮ್ಮ ಸ್ನೇಹ–ಸಂಬಂಧ ಬೆಸೆಯುವ ಕೌಶಲ್ಯಗಳಿಗೆ ಮತ್ತು ಕ್ಷೇಮಪಾಲನಾ ಸಾಮರ್ಥ್ಯಗಳ ಬಗ್ಗೆ ಹೆಮ್ಮೆ ಪಡಲು ಪ್ರೋತ್ಸಾಹಿಸಬೇಕು. ಅಷ್ಟೇ ಅಲ್ಲದೆ ಆ ಸಾಮರ್ಥ್ಯಗಳಿಗೆ ಶಿಕ್ಷಕರು ಪೋಷಕರು ಸೂಕ್ತವಾಗಿ ಪುರಸ್ಕರಿಸಬೇಕು.
- ಶಿಕ್ಷಕರು ಲಿಂಗ ಪಕ್ಷಪಾತದ ಬಗ್ಗೆ ತಮ್ಮ ಸ್ವಂತ ಮನೋಧೋರಣೆಗಳನ್ನು ಪರೀಕ್ಷಿಸಿಕೊಳ್ಳತೊಡಗುವ ಅಗತ್ಯವಿದೆ. ಶಿಕ್ಷಕರು ಬೋಧಿಸುವಾಗ ಹುಡುಗರು ಮತ್ತು ಹುಡುಗಿಯರೊಡನೆ ತಾವು ಅಂತರ್‌ಕ್ರಿಯೆ ನಡೆಸುವ ರೀತಿಯ ಬಗ್ಗೆಯೂ ಅರಿವಿರಬೇಕು.

- ಶಿಕ್ಷಕರು ಹುಡುಗಿಯರು ಮತ್ತು ಹುಡುಗರು ತಮ್ಮ ತಮ್ಮ ಸ್ವ–ಬಿಂಬ ಬಲಗೊಳ್ಳಲು ಅನುಕೂಲಕರವಾದ ರೀತಿಯ ತರಗತಿ ಚಟುವಟಿಕೆಯನ್ನು ರಚಿಸಿಕೊಂಡು ಬಳಸಿಕೊಳ್ಳಬೇಕು.

- ಭಾರತದ ಗ್ರಾಮಭಾಗದ ಶಾಲೆಗಳು ಬಹುತೇಕ ಹೆಣ್ಣುಮಕ್ಕಳ, ಗಂಡುಮಕ್ಕಳ ಪ್ರತ್ಯೇಕ ಶಾಲೆಗಳಾಗಿರುತ್ತವೆ. ಆದ್ದರಿಂದ ಅವರು ಬೆರೆತು ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಮಾಜಿಕ ಅವಕಾಶಗಳು ದೊರೆಯುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಅಂತರ್‌ಶಾಲಾ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸಬೇಕು.

- ಶಿಕ್ಷಕರು ತರುಣ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸೂಕ್ತ ಮಾರ್ಗದರ್ಶನ ನೀಡಿ ಉನ್ನತ ವಿದ್ಯಾಭ್ಯಾಸ, ಉದ್ಯೋಗಕ್ಕೆ ಉತ್ತಮ ಸಲಹೆ ನೀಡಬೇಕು. ಹೆಣ್ಣು ಮತ್ತು ಗಂಡು ಎಂಬ ಲಿಂಗಭೇದ ಮಾಡದೇ ಆಸಕ್ತಿ ಮತ್ತು ಅಭಿಕ್ಷಮತೆಗಳ ಆಧಾರದ ಮೇಲೆ ನಡೆಯಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಈ ಕೆಳಗೆ ಕೆಲವು ಸನ್ನಿವೇಶಗಳನ್ನು ನೀಡಿದೆ. ಪ್ರತಿಯೊಂದಕ್ಕೂ ನಾಲ್ಕು ಉತ್ತರಗಳಿವೆ. ಅವುಗಳಲ್ಲಿ ಲಿಂಗತ್ವ ರಹಿತ ಮನೋಭಾವವನ್ನು ಸೂಚಿಸುವ ಉತ್ತರವನ್ನು ಗುರುತಿಸಿ.

1. ರಮೇಶ ನಿಮಗೆ ರುಚಿರುಚಿಯಾಗಿ ಉಪ್ಪಿಟ್ಟು ಮಾಡಿಕೊಟ್ಟಾಗ ___________

   ಅ. ವ್ಹಾ ರಮೇಶ, ಆಗಬಹುದು ಹುಡುಗನಾದರೂ ಅಡಿಗೆ ಮಾಡುತ್ತೀಯ.

   ಆ. ಇದೇನು ಮಾರಾಯ? ಹುಡುಗಿಯರ ಹಾಗೆ ಅಡುಗೆ ಮನೆ ಸೇರಿದೀಯ.

   ಇ. ರಮೇಶ, ಉಪ್ಪಿಟ್ಟು ತುಂಬಾ ಚೆನ್ನಾಗಿದೆ.

2.ಮಗಳೇ, ಯಾಕೋ ಗ್ಯಾಸ್ ಹಂಡೆ ಬರಲಿಲ್ಲ, ನೀನೇ ಹೋಗಿ ತಂದುಬಿಡು ಎಂದು ಅಮ್ಮ ಹೇಳಿದಾಗ___________

   ಅ. ಅಮ್ಮ, ಅಣ್ಣನಿಗೆ ಹೇಳು, ಹುಡುಗರ ಥರ ನಾನು ಹೋಗಿ ಗ್ಯಾಸ್ ಹಂಡೆ ತರಲು ಆಗುತ್ತದೆಯೇ?

   ಆ. ಅಮ್ಮ, ಸ್ವಲ್ಪ ಓದುವುದಿದೆ, ಮುಗಿದ ತಕ್ಷಣ ಹೋಗಿ ತರುತ್ತೇನೆ

   ಇ. ನೀನೇನಂದುಕೊಂಡಿದ್ದೀಯ? ನಾನು ಹುಡುಗಿ, ನೆನಪಿದೆ ತಾನೆ?

3. ಅಪ್ಪಾ, ನಾನು ಮ್ಯಾಚ್ ಆಡಲು ಡೆಲ್ಲಿಗೆ ಹೋಗಬೇಕು ಎಂದು ಶೀಲಾ ಕೇಳಿದಾಗ___________

   ಅ. ಮಗಳೇ, ನೀನು ಮಗನಾಗಿದ್ದರೆ ಯೋಚನೆ ಇಲ್ಲದೆ ಕಳಿಸಿಬಿಡುತ್ತಿದ್ದೆ.

   ಆ. ನೀನು ಹುಡುಗಿ, ಒಬ್ಬಳೇ ಹೇಗೆ ಅಲ್ಲಿಯವರೆಗೆ ಹೋಗುತ್ತೀಯ?

   ಇ. ಹೋಗಿ ಬಾ, ಜಾಗ್ರತೆಯಿಂದಿರು.

4. ಅಪ್ಪಾ, ನಾನು ಸಂಗೀತದಲ್ಲಿ ನನ್ನ ವಿದ್ಯಾಭ್ಯಾಸ ಮುಂದುವರಿಸುತ್ತೇನೆ ಎಂದು ಮಗ ಹೇಳಿದಾಗ___________

   ಅ. ಇದೇನನ್ಯಾಯ, ಅಕ್ಕ ಬಿ ಇ ಓದುವಾಗ ನಿನಗೆ ಸಂಗೀತಾಭ್ಯಾಸವೇ?

   ಆ. ನಿನ್ನನ್ನು ಸಂಗೀತಕ್ಕೆ ಸೇರಸಿದರೆ ಜನ ಏನು ಹೇಳುವುದಿಲ್ಲ?

   ಇ. ಆಯ್ತು ಮಗ, ನಿನಗೆ ಆಸಕ್ತಿ ಇರುವುದನ್ನು ಮಾಡು.

## 4.2.4. ಸಾರಾಂಶಿಸೋಣ

- ತರುಣ ಮತ್ತು ತರುಣಿಯರ ಲಿಂಗಾತ್ಮಕ ಬೆಳವಣಿಗೆಯು ಅವರು ಗಮನಿಸಿದ ಹಿರಿಯರ, ಪೋಷಕರ ಮತ್ತು ಶಿಕ್ಷಕರ ವರ್ತನೆಯ ಪ್ರಭಾವವನ್ನು ಅವಲಂಬಿಸುತ್ತದೆ. ಹಾಗೆಯೇ ಅವರು ಅವರನ್ನು ಅನುಕರಿಸುತ್ತಾರೆ.

- ಪೋಷಕರು ಹೆಣ್ಣು ಮಗಳನ್ನು ಮತ್ತು ಗಂಡು ಮಗನನ್ನು ಭಿನ್ನ ರೀತಿಯಲ್ಲಿ ಸಾಮಾಜೀಕರಿಸುತ್ತಾರೆ. ಕೆಲವೊಮ್ಮೆ ತಾಯಂದಿರು ಮತ್ತು ತಂದೆಯರು ಭಿನ್ನ ರೀತಿಯಲ್ಲಿ ಮಕ್ಕಳನ್ನು ಸಾಮಾಜೀಕರಿಸುತ್ತಾರೆ.
- ಪೋಷಕರು ಗಂಡು ಮಕ್ಕಳಿಂದ ಹೆಚ್ಚು ಸಾಧನೆಯ ಹಕ್ಕೊತ್ತಾಯ ಮಾಡುವುದುಂಟು. ಹೆಣ್ಣು ಮತ್ತು ಗಂಡು ಮಕ್ಕಳ ಶೈಕ್ಷಣಿಕ ಸಾಮರ್ಥ್ಯಗಳ ಬಗ್ಗೆ ರೂಢಿಬದ್ಧವಾದ ನಂಬಿಕೆಗಳನ್ನು ಹೊಂದಿರುತ್ತಾರೆ.
- ಶಿಕ್ಷಕರು ಶಾಲೆಗಳಲ್ಲಿ ಲಿಂಗಾತ್ಮಕ ವರ್ತನೆಯನ್ನು ಪುನರ್‌ಬಲನ ಗೊಳಿಸುತ್ತಿರುತ್ತಾರೆ.
- ಹುಡುಗಿಯರಿಗಿಂತ ಹುಡುಗರು ಹೆಚ್ಚು ಅನುಚಿತವಾಗಿ ವರ್ತಿಸುತ್ತಾರೆ ಎಂದು ಅಂದುಕೊಳ್ಳುವುದುಂಟು. ಅದು ಸರಿಯಲ್ಲ.
- ಸಮವಯಸ್ಕ ಹುಡುಗರಾಗಲಿ ಹುಡುಗಿಯರಾಗಲಿ ತಮ್ಮ ಲಿಂಗದವರೊಂದಿಗೆ ಒಡನಾಟ ಹೊಂದುವುದು ಮಕ್ಕಳ ಲಿಂಗಾತ್ಮಕ ವರ್ತನೆಯನ್ನು ಪುನರ್ಬಲನಗೊಳಿಸುತ್ತದೆ.
- ಹುಡುಗರನ್ನು ಬಲಾತ್ಕಾರ, ಬೆದರಿಕೆ ಮತ್ತು ಭೌತಿಕ ದಂಡನೆಗಳ ಮೂಲಕ ಪ್ರಭಾವಿಸಲಾಗುತ್ತದೆ. ಆದರೆ ಹುಡುಗಿಯರನ್ನು ಮೃದುವಾದ ಕೋರಿಕೆ ಮತ್ತು ಒಲಿಸುವಿಕೆಯಿಂದ ಪ್ರಭಾವಿಸಲಾಗುವುದು.
- ಸಾಮಾಜಿಕ ಮಾಧ್ಯಮಗಳಾದ ದೂರದರ್ಶನ, ಕಥೆ ಪುಸ್ತಕ, ಮುಂತಾದವುಗಳು ಮತ್ತು ತಾಂತ್ರಿಕ ಸಾಧನಗಳಾದ ಮೊಬೈಲ್, ಕಂಪ್ಯೂಟರ್ ಮತ್ತು ಅಂತರ್ಜಾಲಗಳು ತರುಣ ತರುಣಿಯರಲ್ಲಿ ಲಿಂಗ ವರ್ತನೆಯನ್ನು ಮತ್ತು ಲಿಂಗ ಪಡಿಯಚ್ಚುಗಳನ್ನು ಬೆಳೆಸುತ್ತದೆ.

## 1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1. '✓', 2. '✓', 3. 'X', 4. 'X', 5. 'X', 6. 'X', 7. '✓', 8. 'X', 9. 'X', 10. '✓', 11. 'X', 12. 'X'

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ನಿಮ್ಮ ಪ್ರತಿಕ್ರಿಯೆಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ಅಗತ್ಯವಿದ್ದರೆ ನಿಮ್ಮ ಮನೋಭಾವವನ್ನು ತಿದ್ದಿಕೊಳ್ಳಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1– ಇ, 2–ಆ, 3– ಇ, 4– ಇ,

## 4.2.6. ಘಟಕಾಂತ್ಯ ಅಭ್ಯಾಸಗಳು

1. ಹದಿಹರೆಯದವರ ಲಿಂಗತ್ವದ ಗ್ರಹಿಕೆಯ ಮೇಲೆ ಆಗುವ ಸಾಮಾಜಿಕ ಪ್ರಭಾವಗಳನ್ನು ಚರ್ಚಿಸಿ.
3. ಹರೆಯದವರ ಲಿಂಗತ್ವದ ವರ್ತನೆಯ ಮೇಲೆ ಪೋಷಕರು ಮತ್ತು ಶಿಕ್ಷಕರು ಹೇಗೆ ಪ್ರಭಾವಿಸುತ್ತಾರೆ ಎಂಬುದನ್ನು ವಿಶ್ಲೇಷಿಸಿ.
4. 'ಲಿಂಗ ಸಮಾನತೆ' ಸಾಧಿಸುವಲ್ಲಿ ಶಿಕ್ಷಕರು ಮತ್ತು ಪೋಷಕರು ಹೇಗೆ ಪ್ರಭಾವ ಬೀರಬಹುದು ಎಂಬುದನ್ನು ವಿವರಿಸಿ.
5. ಶೀಘ್ರ ಹರೆಯಕ್ಕೆ ಕಾಲಿಡುವವರು ಲಿಂಗಾತ್ಮಕ ಪಾತ್ರಗಳಿಗೆ ಸಂಬಂಧಿಸಿದಂತೆ ದೂರದರ್ಶನದ ಸಂದೇಶಗಳಿಂದ ಹೇಗ ಪ್ರಭಾವಿತರಾಗುತ್ತಾರೆ ಎಂಬುದನ್ನು ಚರ್ಚಿಸಿ.

## 4.2.7. ಪರಾಮರ್ಶನ ಸೂಚಿ

1. Laura E.Berk : Child Psychology (8th Edition)
Eastern Economy Edition PHI Learning Pvt. Ltd., New Delhi

2. John W. Santrock : Adolescence Twelth Edition TATA MC GRAW HILL Edition, New Delhi.

3. Shyam Sundar Shrimali : Child Development Pearson Education Pvt. Ltd. Patparganj.

4. ಡಾ॥ವಾಮದೇವಪ್ಪ... ಶೈಕ್ಷಣಿಕ ಮನೋವಿಜ್ಞಾನ, ಶ್ರೇಯ ಪಬ್ಲಿಕೇಷನ್ಸ್, ದಾವಣಗೆರೆ

5. Asha Singh : - Foundations of Human Development - A life Span Approach – Orient Blackswan Pvt. Ltd., New Delhi

6. Nambissan Geetha B (2005) Integrating gender concerns . URL : http//dx.doi.org..

*********************

# ಬ್ಲಾಕ್ 4 : ಲಿಂಗತ್ವ ಮತ್ತು ಹದಿಹರೆಯ

## ಘಟಕ 3 : ಲಿಂಗತ್ವ ಮತ್ತು ತಾರುಣ್ಯದ ಸಂಜ್ಞಾನಾತ್ಮಕ ಪ್ರಭಾವಗಳು ಮತ್ತು ಶೈಕ್ಷಣಿಕ ನಿಹಿತಾರ್ಥಗಳು

**ಘಟಕದ ರಚನೆ**


4.3.1. ಕಲಿಕಾ ಉದ್ದೇಶಗಳು

4.3.2. ಪೀಠಿಕೆ

4.3.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.3.3.1 ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯಗಳು ಮತ್ತು ವರ್ತನೆಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

4.3.3.2. ಸಂಜ್ಞಾನಾತ್ಮಕ ಕಾರ್ಯನಿರ್ವಹಣೆಯಲ್ಲಿ ಲಿಂಗ ವ್ಯತ್ಯಾಸಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2

4.3.4. ಸಾರಾಂಶಿಸೋಣ

4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

4.3.6. ಘಟಕಾಂತ್ಯ ಅಭ್ಯಾಸಗಳು

4.1.7. ಪರಾಮರ್ಶನ ಸೂಚಿ


## 4.3.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಹದಿಹರೆಯದ ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ವಿವರಿಸುವರು;
- ಹದಿಹರೆಯದ ಸಂಜ್ಞಾನಾತ್ಮಕ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಲಿಂಗ ಭಿನ್ನತೆಗಳಿರುತ್ತವೆಯೇ ಎಂದು ವಿಶ್ಲೇಷಿಸುವರು;
- ಹದಿಹರೆಯದ ಸಂಜ್ಞಾನಾತ್ಮಕ ಸಾಮರ್ಥ್ಯಗಳಲ್ಲಿ ಲಿಂಗಭಿನ್ನತೆಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಸಾಹಿತ್ಯವನ್ನು ವಿಶ್ಲೇಷಿಸುವರು;
- ಹದಿಹರೆಯದ ಸಂಜ್ಞಾನಾತ್ಮಕ ಸಾಮರ್ಥ್ಯಗಳಲ್ಲಿ ಲಿಂಗಭಿನ್ನತೆಗಳಿಗೆ ಸಂಬಂಧಿಸಿದ ಸಂಶೋಧನಾ ಫಲಿತಾಂಶಗಳನ್ನು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ವಿಚಾರಮಾಡುವರು; ಮತ್ತು
- ಹದಿಹರೆಯದಲ್ಲಿ ಲಿಂಗದ ಸಂಜ್ಞಾನಾತ್ಮಕ ಪ್ರಭಾವಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ಚರ್ಚಿಸುವರು.

## 4.3.2. ಪೀಠಿಕೆ

ನೀವು ಹದಿಹರೆಯದವರ ಮೇಲೆ ಜೈವಿಕ ಮತ್ತು ಸಾಮಾಜಿಕ ಪ್ರಭಾವಗಳನ್ನು ಅರಿತಿರುವಿರಿ. ಈ ಘಟಕದಲ್ಲಿ ನಾವು ಲಿಂಗದ ಸಂಜ್ಞಾನಾತ್ಮಕ ಅಥವಾ ಜ್ಞಾನಾತ್ಮಕ ಪ್ರಭಾವಗಳನ್ನು ಅರಿತುಕೊಳ್ಳೋಣ. ಇದು ಇನ್ನೂ ಆಸಕ್ತಿ ಪೂರ್ವಕ ಮತ್ತು ಚಿಂತನ ಪ್ರಚೋದಕವಾದುದು. ಹದಿಹರೆಯದವರ ಮೇಲಿನ ಸಂಜ್ಞಾನಾತ್ಮಕ ಅಥವಾ ಜ್ಞಾನಾತ್ಮಕ ಪ್ರಭಾವಗಳನ್ನು ಅರಿತುಕೊಳ್ಳಬೇಕಾದರೆ ನಾವು ಮೊದಲಿಗೆ ಈ ಹಂತದಲ್ಲಿ ಹದಿಹರೆಯದವರ ಸಂಜ್ಞಾನಾತ್ಮಕ ಅಥವಾ ಜ್ಞಾನಾತ್ಮಕ ವರ್ತನೆಗಳನ್ನು ಮತ್ತು ಸಾಮರ್ಥ್ಯಗಳನ್ನು ಮೊದಲಿಗೆ ಅರಿತುಕೊಂಡು ನಂತರದಲ್ಲಿ ಇವು ಅವರ ಲಿಂಗತ್ವ ಸಂಬಂಧಿ ಅಂಶಗಳ ಮೇಲೆ ಹೇಗೆ ಪ್ರಭಾವಬೀರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳೋಣ

## 4.3.3.ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.3.3.1. ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯಗಳು ಮತ್ತು ವರ್ತನೆಗಳು

ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯವನ್ನು ಕುರಿತು ನೀವು ಈಗಾಗಲೇ ಅಭ್ಯಾಸಮಾಡಿದ್ದೀರಿ. ವಿಶೇಷವಾಗಿ ಹದಿಹರೆಯವರಿಗೆ ಸಂಬಂಧಿಸಿದಂತೆ ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ಸ್ವಲ್ಪ ಹೆಚ್ಚಿನ ವಿವರದೊಂದಿಗೆ ವಿಶ್ಲೇಷಿಸಿ, ಇವು ಹದಿಹರೆಯದವರ ಲಿಂಗತ್ವದ ಅರಿವು ಮತ್ತು ಸಂಬಂಧಿ ವರ್ತನೆಗಳ ಮೇಲೆ ಏನು ಪರಿಣಾಮಬೀರುತ್ತವೆ ಎಂಬುದನ್ನೂ ಲಿಂಗತ್ವದ ವರ್ತನೆಗಳಿಂದ ಸಂಜ್ಞಾನಾತ್ಮಕ ಸಾಮರ್ಥ್ಯಗಳಲ್ಲಿ ಬದಲಾವಣೆಯಾಗುತ್ತದೆಯೇ ಎಂಬುದನ್ನೂ ಈ ಘಟಕದಲ್ಲಿ ನಾವು ವಿಚಾರಮಾಡಲಿದ್ದೇವೆ.

ನಮ್ಮ ಅನುಕೂಲಕ್ಕಾಗಿ ಹದಿಹರೆಯದವರ ಸಾಮರ್ಥ್ಯ ಮತ್ತು ವರ್ತನೆಗಳನ್ನು ಮೂರು ಹಂತಗಳಲ್ಲಿ– ಪೂರ್ವ ಹದಿಹರೆಯದವರು, ಮಧ್ಯ ಹದಿಹರೆಯದವರು ಮತ್ತು ಅಂತಿಮ ಹದಿಹರೆಯದವರು–ಗಮನಿಸೋಣ.

ಪೂರ್ವ ಹದಿಹರೆಯದವರು ಔಪಚಾರಿಕ ತಾರ್ಕಿಕ ಕ್ರಿಯಾ ಹಂತದಲ್ಲಿರುವವರಾಗಿರುತ್ತಾರೆ. ಹಾಗಾಗಿ ಅವರು ಸ್ವಂತವಾಗಿ ನಿರ್ಧಾರ ಕೈಗೊಳ್ಳಲು, ಹೆಚ್ಚು ಸಂಕೀರ್ಣವಾದ ಆಲೋಚನೆಗಳನ್ನು ಮಾಡಲು ಶಕ್ತರಾಗಿರುತ್ತಾರೆ. ಅವರು ಸಾಮಾಜಿಕ ಮಾನಕಗಳನ್ನು ಅಧಿಕಾರವನ್ನು ಪ್ರಶ್ನಿಸುತ್ತಾರೆ. ಅವರ ಬದುಕಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಕುರಿತ, ತಮ್ಮ ಆಲೋಚನೆಗಳನ್ನು ರೂಪಿಸಿಕೊಳ್ಳಲು ಶಾಬ್ದಿಕವಾಗಿ ಅಭಿವ್ಯಕ್ತಿಸಲು ಪ್ರಾರಂಭಿಸಿರುತ್ತಾರೆ. ಉದಾಹರಣೆಗೆ ಆಡಲು ಯಾವ ಆಟಗಳು ಒಳ್ಳೆಯದು, ಯಾರ ಗೆಳೆತನ ಮಾಡಬೇಕು, ಪೋಷಕರ ಯಾವ ನಿಯಮಗಳು ಬದಲಾಗಬೇಕು ಇತ್ಯಾದಿ

**ಅಭ್ಯಾಸ: 1**

ಈ ಉದಾಹರಣೆಗಳಲ್ಲಿ ಪೂರ್ವ ಹದಿಹರೆಯದವರ ವರ್ತನೆಗಳನ್ನು ಗುರುತಿಸಿ

1. ಅಮ್ಮ, ನನಗೆ ಮನೆಗೆಲಸ ಮಾಡಬೇಕಾಗಿದೆ, ನಾನು ನಿನ್ನೊಡನೆ ಬರಲಾರೆ.
2. ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕು ಎಂದು ನನಗೆ ಗೊತ್ತಿದೆ.
3. ನಾನು ನನ್ನ ತರಗತಿಯವರೊಡನೆಯೇ ಆಟಕ್ಕೆ ಹೋಗಬೇಕು.
4. ಯಾವಾಗಲೂ ಅವರು ಹೇಳಿದಂತೆಯೇ ನಾನು ಕೇಳಬೇಕು ಎಂದೇಕೆ ಅಪ್ಪ ಹೇಳಬೇಕು?

ಉತ್ತರ:1, 3, ಮತ್ತು 4 ಎಂಬುದನ್ನು ಅವುಗಳು ಮಾತ್ರವೇ ಏಕೆ ಸರಿ ಎಂಬುದನ್ನು ಆಲೋಚಿಸಿ.

ಮಧ್ಯ ಹರೆಯದವರಿಗೆ ಸಂಕೀರ್ಣ ಆಲೋಚನಾ ಪ್ರಕ್ರಿಯೆಗಳ ಬಳಕೆಯಲ್ಲಿ ಈಗಾಗಲೇ ಸ್ವಲ್ಪಮಟ್ಟದ ಅನುಭವವಿರುತ್ತದೆ. ಈಗ ಅವರ ಆಲೋಚನೆಗಳು ಹೆಚ್ಚು ತಾತ್ವಿಕವಾದ ಮತ್ತು ಭವಿಷ್ಯಾತ್ಮಕವಾದ ಕಾಳಜಿಗಳನ್ನು ಒಳಗೊಳ್ಳುತ್ತವೆ. ಇವರು ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಾರೆ. ಹೆಚ್ಚು ವ್ಯಾಪಕವಾಗಿ ವಿಶ್ಲೇಷಿಸುತ್ತಾರೆ,

ಅವರದೇ ನೀತಿಸಂಹಿತೆಯನ್ನು ರೂಪಿಸಿಕೊಳ್ಳುತ್ತಿರುತ್ತಾರೆ. ಉದಾಹರಣೆಗೆ, 'ನಾನು ಏನು ಮಾಡಿದರೆ ಸರಿ, ಹೇಗೆ ನಡೆದುಕೊಂಡರೆ ಸರಿ, ಯಾವ ಮಾತನಾಡಿದರೆ ಸರಿಯಾಗುತ್ತದೆ ಇತ್ಯಾದಿ. ವಿವಿಧ ಸಾಧ್ಯತೆಗಳನ್ನು ವಿಮರ್ಶಿಸಿ ತಮ್ಮದೇ ಅನನ್ಯತೆಯನ್ನು ಬೆಳೆಸಿಕೊಳ್ಳಲು ತೊಡಗುತ್ತಾರೆ. ಸಾಧ್ಯವಿರುವ ಭವಿಷ್ಯದ ಗುರಿಗಳನ್ನು ಕುರಿತು ಆಲೋಚಿಸುತ್ತಾರೆ. ದೀರ್ಘಕಾಲಿಕ ಆಲೋಚನೆಗಳನ್ನು ಮಾಡುತ್ತಾರೆ. ತಮ್ಮದೇ ಯೋಜನೆಗಳನ್ನು ಯೋಜಿಸುತ್ತಾರೆ,(ವಾರದ ಕೊನೆಯ ದಿನ ಫುಟ್ ಬಾಲ್ ಮ್ಯಾಚ್ ಆಡಬೇಕು), ಅವರ ವ್ಯವಸ್ಥಿತ ಅಲೋಚನೆ ಇತರರೊಡನೆ ಅವರ ಸಂಪರ್ಕದ ಮೇಲೆ ಪ್ರಭಾವಬೀರುತ್ತದೆ.

**ಅಭ್ಯಾಸ: 1** ಈ ಉದಾಹರಣೆಗಳಲ್ಲಿ ಮಧ್ಯ ಹದಿಹರೆಯದವರ ವರ್ತನೆಗಳನ್ನು ಗುರುತಿಸಿ

1. ಅಧ್ಯಾಪಕರು ಅದೇಕೆ ಅನಗತ್ಯವಾಗಿ ನನಗೆ ಅವಮಾನ ಮಾಡಿದರು? ನಾನು ಅವರು ಮಾಡಿದುದು ಸರಿಯಲ್ಲ ಎಂದು ಹೇಳಬೇಕೇ?
2. ನಮ್ಮ ನೆರೆಕೆರೆಯವರು ಏಕೆ ಗಲಾಟೆ ಮಾಡುತ್ತಾರೆ?
3. ಅದೇಕೆ ನಾನೇ ಯಾವಾಗಲೂ ಅಂಗಡಿಗೆ ಹೋಗಬೇಕು?
4. ಇನ್ನು ಮುಂದೆ ನಾನು ಅಂದಿನ ಪಾಠಗಳನ್ನು ಅಂದೇ ಕಲಿಯಬೇಕು.

ಉತ್ತರ : 1, 3, ಮತ್ತು 4 ಎಂಬುದನ್ನು ಅವುಗಳೇ ಏಕೆ ಸರಿ ಎಂಬುದನ್ನು ಆಲೋಚಿಸಿ

ಅಂತಿಮ ಹದಿಹರೆಯದ ಹಂತದಲ್ಲಿ ಅವರು ಸಂಕೀರ್ಣ ಆಲೋಚನಾ ಪ್ರಕ್ರಿಯೆಗಳು ಸ್ವ-ಕೇಂದ್ರಿತ ವಿಷಯಗಳ ಕಡೆಗೆ ಗಮನಹರಿಸದೆ ಹೆಚ್ಚು ಜಾಗತಿಕವಾದ, ಸಾರ್ವತ್ರಿಕವಾದ ಪರಿಕಲ್ಪನೆಗಳನ್ನು ಕುರಿತು– ನ್ಯಾಯ, ಇತಿಹಾಸ, ರಾಜಕೀಯ, ದೇಶಪ್ರೇಮ ಇತ್ಯಾದಿ– ಆಲೋಚಿಸುತ್ತಾರೆ. ಈ ಹಂತದಲ್ಲಿ ಕೆಲವು ವಿಷಯಗಳು ಮತ್ತು ಕಾಳಜಿಗಳ ಕುರಿತು ಆದರ್ಶಮಯವಾದ ಆಲೋಚನೆಗಳನ್ನು ಮಾಡುತ್ತಾರೆ. ಅವರಿಗೆ ವಿರೋಧವಾದ ವಿಚಾರಗಳಿಗೆ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ. ವೃತ್ತಿ ಸಂಬಂಧವಾದ ನಿರ್ಧಾರಗಳನ್ನು ಮಾಡುತ್ತಾರೆ. ಬೆಳೆಯುತ್ತಿರುವ ಸಮಾಜದಲ್ಲಿ ವಯಸ್ಕರ ಪಾತ್ರದ ಕುರಿತು ಆಲೋಚಿಸಲು ತೊಡಗುತ್ತಾರೆ.

**ಅಭ್ಯಾಸ: 1** ಈ ಉದಾಹರಣೆಗಳಲ್ಲಿ ಅಂತಿಮ ಹದಿಹರೆಯದವರ ವರ್ತನೆಗಳನ್ನು ಗುರುತಿಸಿ

1. ಗಾಂಧೀಜಿಯವರು ಅಷ್ಟು ಜನರನ್ನು ಒಟ್ಟುಮಾಡಿದುದಾದರೂ ಹೇಗೆ?
2. ನಿಜವಾದ ರಾಷ್ಟ್ರಪ್ರೇಮ ಯಾವುದು?
3. ನಾನು ಎಂತಹ ಉಡುಪು ಧರಿಸಬೇಕು?
4. ನಮ್ಮ ಇಂದಿನ ಪರಿಸ್ಥಿತಿಗೆ ನಮ್ಮ ಇತಿಹಾಸವೇ ಕಾರಣವಾಗಿರಬಹುದೇ?

ಉತ್ತರ:1, 3, ಮತ್ತು 4 ಎಂಬುದನ್ನು ಅವುಗಳೇ ಏಕೆ ಸರಿ ಎಂಬುದನ್ನು ಆಲೋಚಿಸಿ

ಈ ಸಂಜ್ಞಾನಾತ್ಮಕ ಸಾಮರ್ಥ್ಯಗಳು ಮತ್ತು ವರ್ತನೆಗಳು ಹದಿಹರೆಯದವರ ಲಿಂಗ ಮತ್ತು ಲಿಂಗಸಂಬಂಧಿ ಅರಿವು ಮತ್ತು ವರ್ತನೆಗಳ ಮೇಲೆ – ಲಿಂಗತ್ವ ಅಚ್ಚುಗೊಳಿಸುವಿಕೆ, ಲಿಂಗ ರೂಢಕಲ್ಪನೆ(ಪಡಿಯಚ್ಚುಗಳು), ಲಿಂಗ ಅನನ್ಯತೆ, ಇತ್ಯಾದಿ– ಪ್ರಭಾವಬೀರುತ್ತವೆ ಎಂಬುದು ಸ್ಪಷ್ಟವಾದ ವಿಷಯ.

ಹದಿಹರೆಯದವರ ವರ್ತನೆಗಳನ್ನು ಕೆಳಗೆ ಕೊಡಲಾಗಿದೆ. ಇವುಗಳಲ್ಲಿ ಅವರ ಲಿಂಗ ಅನನ್ಯತೆ ಮತ್ತು ಲಿಂಗತ್ವದ ವಿಚಾರಗಳನ್ನು ಕುರಿತಂತೆ ಹೆಚ್ಚು ಪ್ರಭಾವ ಬೀರಬಹುದಾದ ವರ್ತನೆಗಳನ್ನು ಗುರುತಿಸಿ.

1. ಸ್ವಂತವಾಗಿ ನಿರ್ಧಾರ ಕೈಗೊಳ್ಳುತ್ತಾರೆ
2. ಹೆಚ್ಚು ಸಂಕೀರ್ಣವಾದ ಆಲೋಚನೆಗಳನ್ನು ಮಾಡುತ್ತಾರೆ

3. ಸಾಮಾಜಿಕ ಮಾನಕಗಳನ್ನು ಅಧಿಕಾರವನ್ನು ಪ್ರಶ್ನಿಸುತ್ತಾರೆ.

4. ಅವರ ಬದುಕಿನ ವಿಷಯಗಳನ್ನು ಕುರಿತ ಆಲೋಚನೆಗಳನ್ನು ರೂಪಿಸಿಕೊಳ್ಳುತ್ತಾರೆ

5. ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಾರೆ.

6. ಹೆಚ್ಚು ವ್ಯಾಪಕವಾಗಿ ವಿಶ್ಲೇಷಿಸುತ್ತಾರೆ

7. ಅವರದೇ ನೀತಿಸಂಹಿತೆಯನ್ನು ರೂಪಿಸಿಕೊಳ್ಳುತ್ತಿರುತ್ತಾರೆ

8. ಸಾರ್ವತ್ರಿಕವಾದ ಪರಿಕಲ್ಪನೆಗಳನ್ನು ಕುರಿತು ಆಲೋಚಿಸುತ್ತಾರೆ.

9. ಆದರ್ಶಮಯವಾದ ಆಲೋಚನೆಗಳನ್ನು ಮಾಡುತ್ತಾರೆ.

10. ಅವರಿಗೆ ವಿರೋಧವಾದ ವಿಚಾರಗಳಿಗೆ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ.

11. ವೃತ್ತಿ ಸಂಬಂಧವಾದ ನಿರ್ಧಾರಗಳನ್ನು ಮಾಡುತ್ತಾರೆ.

12. ಬೆಳೆಯುತ್ತಿರುವ ಸಮಾಜದಲ್ಲಿ ವಯಸ್ಕರ ಪಾತ್ರದ ಕುರಿತು ಆಲೋಚಿಸಲು ತೊಡಗುತ್ತಾರೆ.

ಮೇಲೆ ಗುರುತಿಸಿರುವ ಪ್ರತೀ ವರ್ತನೆಯೂ/ ಸಾಮರ್ಥ್ಯವೂ ಹದಿಹರೆಯದವರ ಲಿಂಗ ಮತ್ತು ಲಿಂಗತ್ವ ಸಂಬಂಧಿ ವಿಚಾರಗಳನ್ನು ಪ್ರಭಾವಿಸುತ್ತದೆ. ಲಿಂಗ ಮತ್ತು ಲಿಂಗತ್ವ ಸಂಬಂಧಿ ವಿಚಾರಗಳನ್ನೂ ಇದೇ ಬ್ಲಾಕ್‌ನ ಇತರ ಘಟಕಗಳಲ್ಲಿ ಚರ್ಚಿಸಲಾಗಿದೆ. ಆ ಹಿನ್ನೆಲೆಯಲ್ಲಿ ಪ್ರತೀ ವರ್ತನೆಯೂ/ ಸಾಮರ್ಥ್ಯವೂ ಹದಿಹರೆಯದವರ ಲಿಂಗ ಮತ್ತು ಲಿಂಗತ್ವ ಸಂಬಂಧಿ ವಿಚಾರಗಳನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ನೀವು ವಿಶ್ಲೇಷಿಸಬೇಕು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದಭರ್ತಿಮಾಡಿ.

1. ಲಿಂಗ ಪಡಿಯಚ್ಚುಗಳನ್ನು ದಾಟಿ ಲಿಂಗ ಸಮಾನತೆಯನ್ನು ಪೋಷಿಸಲು ಪ್ರೋತ್ಸಾಹಿಸಬೇಕಾದ ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯ__________

ಅ. ಸ್ವಂತವಾಗಿ ನಿರ್ಧಾರ ಕೈಗೊಳ್ಳುವಿಕೆ,

ಬ. ಸಾಮಾಜಿಕ ಮಾನಕಗಳನ್ನು ಪ್ರಶ್ನಿಸುವಿಕೆ.

ಕ. ಯೋಜನೆಗಳನ್ನು ರೂಪಿಸುವುದು

2. ನಮ್ಮ ರಾಜಕೀಯ ಪರಿಸ್ಥಿತಿ ಉತ್ತಮವಾಗುವುದು ಹೇಗೆ ಎಂಬಂತಹ ಆಲೋಚನೆ ಮಾಡುವ ಹದಿಹರೆಯದ ಹಂತ__________

ಅ. ಪೂರ್ವ ಹದಿಹರೆಯ

ಬ. ಮಧ್ಯ ಹದಿಹರೆಯ

ಕ. ಅಂತಿಮ ಹದಿಹರೆಯ

3. ಅಂತಿಮ ಹದಿಹರೆಯದವರ ಸಂಜ್ಞಾನಾತ್ಮಕ ವರ್ತನೆ__________

ಅ. ಸ್ವ–ಕೇಂದ್ರಿತ ವಿಷಯಗಳ ಕಡೆಗೆ ಗಮನಹರಿಸದೆ ಸಾರ್ವತ್ರಿಕವಾದ ಪರಿಕಲ್ಪನೆಗಳನ್ನು ಕುರಿತು ಆಲೋಚಿಸುತ್ತಾರೆ.

ಬ. ಸಂಕೀರ್ಣವಾದ ಆಲೋಚನೆ ಮಾಡಲು ಪ್ರಾರಂಭಿಸುತ್ತಾರೆ.

ಕ. ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಾರೆ.

## 4.3.3.2. ಸಂಜ್ಞಾನ ಕಾರ್ಯನಿರ್ವಹಣೆಯಲ್ಲಿ ಲಿಂಗ ವ್ಯತ್ಯಾಸಗಳು

ಮಕ್ಕಳು ಶಾಲೆಗೆ ಸೇರುತ್ತಿದ್ದಂತೆಯೇ ಸಾಧನೆಯ ಕೆಲವು ವಿಷಯಗಳಲ್ಲಿ 'ಇದು ಹುಡುಗಿಯರಿಗಾಗಿ' ಮತ್ತು 'ಇದು ಹುಡುಗರಿಗಾಗಿ' ಎಂಬ ಭಾವನೆ ಮೂಡಿಬಂದಿರುತ್ತದೆ. ನಿಮ್ಮ ಅನುಭವಗಳನ್ನೇ ನೆನಪಿಸಿಕೊಳ್ಳಿ. ನೀವೂ ಹೆಣ್ಣುಮಕ್ಕಳಾಗಿ/ಗಂಡುಮಕ್ಕಳಾಗಿ ಈ ಆಟಗಳನ್ನೇ ಆಡಬೇಕು, ಈ ವಿಷಯಗಳನ್ನೇ ಅಭ್ಯಾಸ ಮಾಡಬೇಕು ಎಂದುಕೊಂಡಿರಲಿಲ್ಲವೇ? ಒಮ್ಮೆ ನಮ್ಮ ಅನುಭವದ ಹೊತ್ತಿಗೆಯನ್ನು ತೆರೆಯೋಣ. ಈ ರೀತಿಯ ಲಿಂಗನಿರ್ದಿಷ್ಟ ಪರಿಕಲ್ಪನೆ ಮಕ್ಕಳಿಗೆ ಬಹು ಬೇಗ ಮೂಡಿಬಂದರೂ ಅದು ಬದಲಾಗುತ್ತಾ ಹೋಗುತ್ತದೆ. ಸಾಧನೆಗೆ ಸಂಬಂಧಿಸಿದಂತೆ ಬೇರೆ ಬೇರೆ ಹಂತಗಳಲ್ಲಿ ನಿಮ್ಮಲ್ಲಿ ಇದ್ದ ಈ ಲಿಂಗ ನಿರ್ದಿಷ್ಟ ಪಾತ್ರಗಳಿಗೆ ಅನುಗುಣವಾಗಿ ಕೆಳಗೆ ತೋರಿಸಿರುವಂತೆ ಮಾಹಿತಿ ಭರ್ತಿ ಮಾಡಿ. ಉದಾಹರಣೆಯನ್ನು ಗಮನಿಸಿ.

| | **ಪ್ರಾಥಮಿಕ ಹಂತ** | | **ಹೈಸ್ಕೂಲು ಹಂತ** | |
|---|---|---|---|---|
| | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| ಉದಾಹರಣೆ ಅಧ್ಯಯನದ ವಿಷಯಗಳು: | ಪಠ್ಯವಿಷಯಗಳು+ ಚಿತ್ರ ಬಿಡಿಸುವುದು | ಪಠ್ಯವಿಷಯಗಳು+ ಹಾಡು, ನೃತ್ಯ | ಪಠ್ಯವಿಷಯಗಳು+ ತಂತ್ರಜ್ಞಾನ+ ಚಿತ್ರ ಬಿಡಿಸುವುದು | ಪಠ್ಯವಿಷಯಗಳು– ತಂತ್ರಜ್ಞಾನ + ಚಿತ್ರ ಬಿಡಿಸುವುದು+ ಹಾಡು, ನೃತ್ಯ |
| ಕ್ರೀಡೆಗಳು | | | | |
| ಆಟಗಳು | | | | |
| ಭವಿಷ್ಯ ವೃತ್ತಿಗಳು | | | | |

ಈ ಆಲೋಚನೆಗಳು ಎಲ್ಲರಲ್ಲೂ ಒಂದೇ ರೀತಿಯಾಗಿರುವುದಿಲ್ಲ(ನಿಮ್ಮ ಗೆಳೆಯರಿಗೆ ಹೀಗೆ ಭರ್ತಿಮಾಡಲು ಕೊಟ್ಟು ಗಮನಿಸಿ). ಒಬ್ಬ ವ್ಯಕ್ತಿಯಲ್ಲೇ ಭಿನ್ನ ಹಂತಗಳಲ್ಲಿ ಒಂದೇ ಆಗಿರುವುದಿಲ್ಲ. ನೀವು ತುಂಬಿರುವ ಮಾಹಿತಿಯನ್ನೇ ಗಮನಿಸಿ. ಭಿನ್ನಲಿಂಗಗಳ ಸಾಧನಾ ಸಾಮರ್ಥ್ಯವನ್ನು ಕುರಿತಂತೆ ವ್ಯಕ್ತಿಗಳ, ಸಮಾಜದ ಅಭಿಪ್ರಾಯಗಳು/ ಭಾವನೆಗಳು ಭಿನ್ನವಾಗಿರುತ್ತವೆ, ಈ ಅಂಶಗಳು ಒಂದೇ ವ್ಯಕ್ತಿಯಲ್ಲೂ ಕಾಲದಿಂದ ಕಾಲಕ್ಕೆ ಬದಲಾಗುತ್ತವೆ ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು. ಹದಿಹರೆಯದವರ ಲಿಂಗತ್ವದ ಮೇಲೆ ಸಂಜ್ಞಾನಾತ್ಮಕ ಪ್ರಭಾವಗಳನ್ನು ನಾವು ಚರ್ಚಿಸುತ್ತಿದ್ದೇವೆ. ಶಾಲಾ ಸಾಧನೆಯ ಹಿನ್ನೆಲೆಯಲ್ಲಿ ಅಂದರೆ ವಿವಿಧ ವಿಷಯಗಳಲ್ಲಿ ಬಾಲಕರು ಮತ್ತು ಬಾಲಕಿಯರ ಸಾಧನೆ (ಸಂಜ್ಞಾನಾತ್ಮಕ ಬೆಳವಣಿಗೆಯ ಪರಿಣಾಮ)ಯ ಹಿನ್ನೆಲೆಯಲ್ಲಿ ಸಂಜ್ಞಾನಾತ್ಮಕ ವಿಕಾಸವನ್ನು ಮುಂದೆ ವಿವರಿಸಲಾಗಿದೆ.

ಹದಿಹರೆಯದವರ ಸಾಧನೆಗೆ ಸಂಬಂಧಿಸಿದಂತೆ ಲಿಂಗಭೇದಗಳನ್ನು ಕುರಿತು ಅಧ್ಯಯನಮಾಡಿದ ಕೆಲವು ಸಂಶೋಧನೆಗಳ ಫಲಿತಾಂಶಗಳು ಮತ್ತು ತಜ್ಞರ ಅಭಿಪ್ರಾಯಗಳು ಕೆಳಕಂಡಂತಿದೆ:

- ಓದುವುದು, ಕಲೆ, ಸಂಗೀತ ಮತ್ತು ಸಾಮಾಜಿಕ ಕೌಶಲಗಳು ಹೆಣ್ಣುಮಕ್ಕಳಿಗೆ ಮಕ್ಕಳದು; ಗಣಿತ, ಮೆಕ್ಯಾನಿಕಲ್ ಕೌಶಲಗಳು ಮತ್ತು ಕ್ರೀಡಾ ಸಾಮರ್ಥ್ಯಗಳು ಗಂಡು ಮಕ್ಕಳದು.
- ಹೆಣ್ಣುಮಕ್ಕಳಿಗೆ ಓದುವಿಕೆ ಮೆಚ್ಚುಗೆಯ ವಿಷಯವಾದರೆ, ಗಂಡುಮಕ್ಕಳಿಗೆ ಗಣಿತ ಮೆಚ್ಚುಗೆಯ ವಿಷಯ.
- ಹುಡುಗರ ಲಿಂಗ ಮತ್ತು ಸ್ಥಳಾವಕಾಶ(spatial ) ಸಾಮರ್ಥ್ಯ ಇವುಗಳ ನಡುವೆ ಸಹ ಸಂಬಂಧವಿದೆ. ಗಂಡುಹುಡುಗರ ಸ್ಥಳಾವಕಾಶ ಸಾಮರ್ಥ್ಯ ಹುಡುಗಿಯರಿಗಿಂತ ಉತ್ತಮವಾಗಿರುತ್ತದೆ.
- ಹೆಂಗಸರು ಗಣಿತದಲ್ಲಿ ಅಧಿಕ ಶ್ರೇಷ್ಠತೆ ಗಳಿಸುವುದು ಸೂಕ್ತವಲ್ಲ ಎಂದು ಹುಡುಗಿಯರು ನಂಬಿರುತ್ತಾರೆ.

ಆದ್ದರಿಂದಲೇ ಬಹುಶ: ಗಣಿತದಲ್ಲಿ ಪ್ರತಿಭೆ ಇರುವ ಹುಡುಗಿಯರೂ ಪ್ರತಿಭಾನ್ವೇಷಣೆ ಪರೀಕ್ಷೆಗಳಲ್ಲಿ ಭಾಗವಹಿಸುವುದನ್ನು ತಪ್ಪಿಸುತ್ತಾರೆ ಅಥವಾ ಗಣಿತದಲ್ಲಿ ಉನ್ನತ ಅಭ್ಯಾಸದ ಶಿಕ್ಷಣವನ್ನು ತೆಗೆದುಕೊಳ್ಳುವುದಿಲ್ಲ.

- ಗಂಡಸರು ಮತ್ತು ಹೆಂಗಸರು ಸಮಾನವಾದ ಸಾಧನೆಯ ಅಭಿಪ್ರೇರಣೆ ಹೊಂದಿರುತ್ತಾರೆ, ಆದರೆ ಗಂಡಸರು ಪ್ರಭುತ್ವ ಅಭಿಪ್ರೇರಣೆ (mastery motivation) ಯನ್ನು ಹೆಚ್ಚಾಗಿ ಹೊಂದಿರುತ್ತಾರೆ. ವಿಶೇಷವಾಗಿ ಹುಡುಗರು ತಮಗೆ ತಾವೇ ಹೆಚ್ಚು ಸಮರ್ಥರೆಂದು ಭಾವಿಸಿಕೊಂಡಿರುತ್ತಾರೆ ಮತ್ತು ಯಶಸ್ಸಿನ ನಿರೀಕ್ಷೆಯನ್ನೂ ಹೊಂದಿರುತ್ತಾರೆ.
- ಗಂಡಸರು ತಮ್ಮ ಕಾರ್ಯ ಕೈಗೊಳ್ಳುವಿಕೆಯನ್ನು ಹೆಚ್ಚಾಗಿ ತಮ್ಮ ಸಾಮರ್ಥ್ಯದಿಂದಾಗಿ ಎಂದು ಸಮರ್ಥಿಸಿಕೊಂಡರೆ ಹುಡುಗಿಯರು ಫಲಿತವನ್ನು ಪರಿಗಣಿಸದೇ ಫಲಿತವು ಧನಾತ್ಮಕವಾಗಲಿ ಅಥವಾ ಋಣಾತ್ಮಕವಾಗಲಿ ಅದೃಷ್ಟದಿಂದ ಆಗುವುದೆಂದು ಸಮರ್ಥಿಸುತ್ತಾರೆ.
- ಸಾಮ್ಯತೆ ಇಲ್ಲದ ಶೈಕ್ಷಣಿಕ ಅನುಭವಗಳ ಕಾರಣದಿಂದಾಗಿಯೂ ಸಂಜ್ಞಾನಾತ್ಮಕ ಕಾರ್ಯನಿರ್ವಹಣೆಯಲ್ಲಿ ಲಿಂಗ ವ್ಯತ್ಯಾಸಗಳು ಉಂಟಾಗಬಹುದು. ಸಂಶೋಧಕರು ಗುರುತಿಸಿರುವ ಕೆಲವು ವ್ಯತ್ಯಾಸಗಳು ಹೀಗಿವೆ.
- ಹದಿಹರೆಯದ ಹುಡುಗ ಹುಡುಗಿಯರು ಆಯ್ದುಕೊಳ್ಳುವ ಕೋರ್ಸುಗಳಲ್ಲು ವ್ಯತ್ಯಾಸವಿದೆ(ಇಂದು ಶೈಕ್ಷಣಿಕ ಅನುಭವಗಳಲ್ಲಿ ಸಾಮ್ಯತೆ ಇರುವ ಕಾರಣದಿಂದಾಗಿ ವ್ಯತ್ಯಾಸವೂ ಕಡಿಮೆಯಾಗುತ್ತಿದೆ)
- ಹುಡುಗರ ಮತ್ತು ಹುಡುಗಿಯರ ವಿರಾಮಕಾಲದ ಚಟುವಟಿಕೆಗಳು ಭಿನ್ನವಾಗಿವೆ.
- ಶಾಲೆಯ ಒಳಗೆ ಮತ್ತು ಹೊರಗಿನ ಭಿನ್ನ ಅನುಭವಗಳು ಶೈಕ್ಷಣಿಕ ಸಾಧನೆಯನ್ನು ಪ್ರಭಾವಿಸುತ್ತವೆ.
- ಲಿಂಗವ್ಯತ್ಯಾಸದಿಂದಾಗಿ ಉದ್ಯೋಗ ಯೋಜನೆಗಳು ಭಿನ್ನವಾಗುತ್ತವೆ. ಇದಕ್ಕೆ ಮೂಲಭೂತವಾಗಿ ವ್ಯಕ್ತಿಯ ಲಿಂಗಕ್ಕಿಂತ ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಲಿಂಗತ್ವದ ಅಂಶಗಳು ಕಾರಣವಾಗುತ್ತವೆ.
- ಹುಡುಗಿಯರಲ್ಲಿ ಹೆಚ್ಚು ಶಾಬ್ದಿಕ ಸಾಮರ್ಥ್ಯ, ಹುಡುಗರಲ್ಲಿ ಹೆಚ್ಚಿನ ಸ್ಥಳಸಂಬಂಧಿ(Spatial) ಸಾಮರ್ಥ್ಯ ಮತ್ತು ಅಂಕಗಣಿತ ಸಾಮರ್ಥ್ಯವಿರುವುದು ಕಂಡುಬಂದಿದೆ.

ಈ ಅಂಶಗಳು ಹಿಂದಿನ ಸಂಶೋಧನೆಗಳ ಫಲವಾದರೂ ಇಂದಿನ ಸನ್ನಿವೇಶದಲ್ಲಿ ಸಂಶೋಧನಾ ಅಧ್ಯಯನಗಳನ್ನು ಕೈಗೊಂಡು ಮೌಲ್ಯೀಕರಿಸಬೇಕು. ಇದಲ್ಲದೆ ವಿವಿಧ ಸಂಜ್ಞಾನಾತ್ಮಕ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ – ತಾರ್ಕಿಕ ಚಿಂತನೆ, ವಿಶ್ಲೇಷಣಾತ್ಮಕ ಚಿಂತನೆ, ಸಂಶ್ಲೇಷಾನಾತ್ಮಕ ಚಿಂತನೆ, ಸೃಜನಶೀಲತೆ – ಲಿಂಗಾಧಾರಿತ ವ್ಯತ್ಯಾಸವಿದೆಯೇ, ಇದ್ದರೆ ಕಾರಣಗಳೇನು ಎಂಬುದನ್ನು ಕಂಡುಕೊಳ್ಳಬೇಕಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೆಳಗಿನ ಸಂಶೋಧನಾ ಫಲಿತಾಂಶಗಳನ್ನು ನಿಮ್ಮ ಅನುಭವದ ಒರೆಗೆ ಹಚ್ಚಿ ಅವು ಇಂದು ಎಷ್ಟು ಮೌಲಿಕವಾದವು ಎಂದು ನಿರ್ಧರಿಸಿ. ವ್ಯತ್ಯಾಸಗಳಿದ್ದರೆ ಕಾರಣಗಳನ್ನೂ ಅವುಗಳಿಗೆ ಪರಿಹಾರವನ್ನೂ ಆಲೋಚಿಸಿ

- ಗಣಿತ ಸಾಮರ್ಥ್ಯ ಹುಡುಗಿಯರಿಗಿಂತ ಹುಡುಗರಲ್ಲಿ ಹೆಚ್ಚು.
- ಭಾಷಾ ಸಾಮರ್ಥ್ಯ ಹುಡುಗರಿಗಿಂತ ಹುಡುಗಿಯರಲ್ಲಿ ಹಚ್ಚು.
- ಸ್ಥಳಾವಕಾಶ ಅಭಿಕ್ಷಮತೆ ಹುಡುಗರಲ್ಲಿ ಹುಡುಗಿಯರಿಗಿಂತ ಹೆಚ್ಚು.

## 1.3.4. ಸಾರಾಂಶಿಸೋಣ

- ಹದಿಹರೆಯದವರಲ್ಲಿ ವಿಭಿನ್ನ ರೀತಿಯ ಸಂಜ್ಞಾನಾತ್ಮಕ ಸಾಮರ್ಥ್ಯಗಳಿರುತ್ತವೆ. ಅವರ ವರ್ತನೆಗಳು ಅದಕ್ಕನುಗುಣವಾಗಿರುತ್ತವೆ. ಅವುಗಳಲ್ಲಿ ಮುಖ್ಯವಾದುದು ಸ್ವಂತವಾಗಿ ನಿರ್ಧಾರ ಕೈಗೊಳ್ಳುವಿಕೆ,

ಸಂಕೀರ್ಣವಾದ ಆಲೋಚನೆ ಮಾಡುವಿಕೆ, ಸಾಮಾಜಿಕ ಮಾನಕಗಳನ್ನು ಅಧಿಕಾರವನ್ನು ಪ್ರಶ್ನಿಸುವಿಕೆ, ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳುವಿಕೆ, ವ್ಯಾಪಕವಾಗಿ ವಿಶ್ಲೇಷಿಸುವಿಕೆ, ಅವರದೇ ನೀತಿಸಂಹಿತೆಯನ್ನು ರೂಪಿಸಿಕೊಳ್ಳುವುದು, ಸಾರ್ವತ್ರಿಕವಾದ ಪರಿಕಲ್ಪನೆಗಳನ್ನು ಕುರಿತು ಆಲೋಚಿಸುವುದು, ಆದರ್ಶಮಯವಾದ ಆಲೋಚನೆಗಳನ್ನು ಮಾಡುವುದು, ವೃತ್ತಿಸಂಬಂಧವಾದ ನಿರ್ಧಾರಗಳನ್ನು ಮಾಡುವುದು, ಸಮಾಜದಲ್ಲಿ ವಯಸ್ಕರ ಪಾತ್ರದ ಕುರಿತು ಆಲೋಚಿಸುವುದು ಇತ್ಯಾದಿ.

- ಈ ಪ್ರತಿಯೊಂದು ವರ್ತನೆಯೂ ಅವರ ಲಿಂಗ ಅನನ್ಯತೆ, ಲಿಂಗಪಾತ್ರ ಗ್ರಹಿಕೆ ಮತ್ತು ಲಿಂಗತ್ವ ಅಚ್ಚುಗೊಳಿಸುವಿಕೆಯ ನಿರ್ಧಾರಗಳನ್ನು ಪ್ರಭಾವಿಸುತ್ತವೆ.
- ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ವಿವಿಧ ಸಾಧನಾ ವಿಷಯಗಳಲ್ಲಿ ಹುಡುಗ ಹುಡುಗಿಯರ ನಡುವೆ ವ್ಯತ್ಯಾಸವನ್ನು ದಾಖಲಿಸಿವೆ
- ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳ ಫಲಿತಾಂಶವನ್ನು ಮೌಲ್ಯೀಕರಿಸುವ ಅಗತ್ಯವಿದ್ದು, ಈ ಕುರಿತು ತುರ್ತಾಗಿ ಸಂಶೋಧನೆಗಳು ನಡೆಯಬೇಕಾಗಿವೆ.

## 4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1–ಬ, 2–ಕ, 3–ಅ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಈ ಕುರಿತ ನಿಮ್ಮ ವಿಶ್ಲೇಷಣೆ ಮತ್ತು ಆಲೋಚನೆಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು ಈ ಕುರಿತ ಒಂದು ಟಿಪ್ಪಣಿ ತಯಾರಿಸಿ.

## 4.3.6. ಘಟಕಾಂತ್ಯ ಅಭ್ಯಾಸಗಳು

1. ಹದಿಹರೆಯದವರ ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ಮತ್ತು ಲಿಂಗ ಮತ್ತು ಲಿಂಗತ್ವದ ಅನ್ವಯಕ್ಕೆ ಸಂಬಂಧಿಸಿದಂತೆ ಅವುಗಳ ಪ್ರಭಾವವನ್ನೂ ವಿವರಿಸಿ.
2. ಸಂಜ್ಞಾನಾತ್ಮಕ ಕಾರ್ಯನಿರ್ವಹಣೆಯಲ್ಲಿ ಲಿಂಗ ವ್ಯತ್ಯಾಸಗಳನ್ನು ಕುರಿತಂತೆ ಅಧ್ಯಯನಗಳ ಫಲಿತಾಂಶಗಳನ್ನು ಪಟ್ಟಿಮಾಡಿ, ನಿಮ್ಮ ಅನುಭವಗಳ ಹಿನ್ನೆಲೆಯಲ್ಲಿ ಅವುಗಳನ್ನು ಚರ್ಚಿಸಿ

## 4.3.7. ಪರಾಮರ್ಶನ ಸೂಚಿ


1. Laura E.Berk : Child Psychology (8th Edition)
   Eastern Economy Edition PHI Learning Pvt. Ltd., New Delhi
2. John W. Santrock : Adolescence Twelth Edition TATA MC GRAW HILL Edition, New Delhi.
3. Dr. S Geetha – Cognitive reasoning and science education, Dharani Publishers , Manjunathnagar, Bangalore 10
4. ಡಾ॥ವಾಮದೇವಪ್ಪ... ಶೈಕ್ಷಣಿಕ ಮನೋವಿಜ್ಞಾನ, ಶ್ರೇಯ ಪಬ್ಲಿಕೇಷನ್ಸ್, ದಾವಣಗೆರೆ
5. ಉಮೇಶ್ ಎಚ್ ಎಸ್, ಶೈಕ್ಷಣಿಕ ಮನೋವಿಜ್ಞಾನ ಶಿವಪ್ರಕಾಶ ಪಬ್ಲಿಕೇಷನ್ಸ್, ಗದಗ, 2002


********************

# ಬ್ಲಾಕ್ 4 : ಲಿಂಗತ್ವ ಮತ್ತು ಹದಿಹರೆಯ

## ಘಟಕ 4 : ಲಿಂಗ ಪಡಿಯಚ್ಚುಗಳು

**ಘಟಕದ ರಚನೆ**


4.4.1. ಕಲಿಕಾ ಉದ್ದೇಶಗಳು

4.4.2. ಪೀಠಿಕೆ

4.4.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.4.3.1 ಲಿಂಗತ್ವ ಅಚ್ಚುಗೊಳಿಸುವಿಕೆ (Gender Typing)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

4.4.3.2. ಲಿಂಗ ಪಡಿಯಚ್ಚುಗೊಳಿಸುವಿಕೆ (Gender Stereotyping)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

4.4.3.3. ಲಿಂಗ ಅನನ್ಯತೆ (Gender Identity)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

4.4.4. ಸಾರಾಂಶಿಸೋಣ

4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

4.4.6. ಘಟಕಾಂತ್ಯ ಅಭ್ಯಾಸಗಳು

4.4.7. ಪರಾಮರ್ಶನ ಸೂಚಿ


## 4.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗ ಅಚ್ಚುಗೊಳಿಸುವಿಕೆ ಪರಿಕಲ್ಪನೆಯನ್ನು ವಿವರಿಸುವರು;
- 'ಲಿಂಗ ಪಡಿಯಚ್ಚುಗಳು' ಹೇಗೆ ಲಿಂಗಾನುಸಾರಿ ಪಾತ್ರ ನಿರ್ವಹಣೆಗೆ ಎಳೆದೊಯ್ಯುತ್ತದೆಂದು ಸಂಬಂಧಿಸುವರು;
- 'ಲಿಂಗ ಅಚ್ಚುಗೊಳಿಸುವಿಕೆ'ಯ ಲಕ್ಷಣಗಳನ್ನು ಗುರುತಿಸುವರು;
- ಹೆಂಗಸರು ಮತ್ತು ಗಂಡಸರ ಲಿಂಗಾನುಸಾರಿ ಪಾತ್ರ ನಿರ್ವಹಿಸುವಿಕೆಯನ್ನು ವಿವರಿಸುವರು; ಮತ್ತು
- 'ಲಿಂಗ ಅನನ್ಯತೆ'ಯ ಪರಿಕಲ್ಪನೆಯನ್ನು ವಿವರಿಸುವರು.

## 4.4.2. ಪೀಠಿಕೆ

ಈ ಘಟಕದಲ್ಲಿ ನೀವು ಲಿಂಗ ವ್ಯತ್ಯಾಸೀಕರಣ ಉಂಟು ಮಾಡುವ 'ಲಿಂಗ ಅಚ್ಚುಗೊಳಿಸುವಿಕೆ' ಮತ್ತು 'ಲಿಂಗಾನುಸಾರಿ ಪಾತ್ರನಿರ್ವಹಣೆ' ಈ ವಿಷಯಗಳನ್ನು ಅಧ್ಯಯನ ಮಾಡುವಿರಿ. ಈ ಗ್ರಹಿಕೆಗಳ ಆಧಾರದ ಮೇಲೆ 'ಲಿಂಗ ಪಡಿಯಚ್ಚುಗಳು' ಎಂಬ ಪರಿಕಲ್ಪನೆ ನಿಮಗೆ ಸ್ಪಷ್ಟವಾಗುವುದು. ಬಾಲ್ಯದಲ್ಲಿ ಲಿಂಗ ಪಡಿಯಚ್ಚುಗಳ ಬಗೆಗೆ ಇರುವ ಬಿಗಿಯಾದ ಭಾವ ಕ್ರಮೇಣ ಹೇಗೆ ಸಡಿಲವಾಗುತ್ತಾ ಬದಲಾಗುತ್ತಾ ಹೋಗುತ್ತದೆಂಬುದನ್ನೂ ಲಿಂಗಸ್ಥಿರತೆಯ ಅರಿವು ಹೇಗೆ ಉಂಟಾಗುತ್ತದೆ ಎಂಬುದನ್ನೂ ಈ ಘಟಕದಲ್ಲಿ ನಾವು ಚರ್ಚೆ ಮಾಡಲಿದ್ದೇವೆ.

## 4.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.4.3.1. ಲಿಂಗತ್ವ ಅಚ್ಚುಗೊಳಿಸುವಿಕೆ/ ಲಿಂಗತ್ವದ ಅನ್ವಯ (Gender Typing)

**ಅಭ್ಯಾಸ I**

ಈ ಕೆಳಗಿನ ಹೇಳಿಕೆಗಳಲ್ಲಿ ಚಿಂತಕರು ಮತ್ತು ಕವಿಗಳು ಸಾಮಾನ್ಯ ಅರ್ಥದಲ್ಲಿ ಏನು ಹೇಳಲು ಬಯಸಿದ್ದಾರೆ?

(ಅ) "ಹೆಂಗಸು ಹೆಚ್ಚು ಸಹಾನುಭೂತಿಯುಳ್ಳವಳು ; ಗಂಡಸು ಹೆಚ್ಚು ಎದೆಗಾರಿಕೆಯುಳ್ಳವನು. (ಅರಿಸ್ಟಾಟಲ್)

(ಬ) "ಒಬ್ಬ ಗಂಡಸು ಅವನಿಗೆ ಗೊತ್ತಿರುವುದು ಏನೋ ಅದನ್ನು ಹೇಳುತ್ತಾನೆ... ಒಬ್ಬ ಹೆಂಗಸು ಯಾವುದು ಪ್ರಸನ್ನಗೊಳಿಸುತ್ತದೋ ಅದನ್ನು ಹೇಳುತ್ತಾಳೆ" . (ಜೆ. ರೂಸೋ.)

(ಕ) "ತಲೆಯಿಂದ ಗಂಡಸು ಮತ್ತು ಹೃದಯದಿಂದ ಹೆಂಗಸು; ಆಜ್ಞಾಪಿಸಲು ಗಂಡಸು ಮತ್ತು ವಿಧೇಯಳಾಗಿರಲು ಹೆಂಗಸು; ಇಲ್ಲದಿದ್ದರೆ ಗೊಂದಲ" (ಎ.ಎಲ್.ಟೆನಿಸನ್)

ಈ ಹೇಳಿಕೆಗಳು ಹೆಂಗಸರು ಮತ್ತು ಗಂಡಸರ ಸ್ವಭಾವಗಳಲ್ಲಿರುವ ವ್ಯತ್ಯಾಸಗಳು.

ಮೇಲಿನ ವಾಕ್ಯಗಳಲ್ಲಿ ಗಂಡಸರ ಮತ್ತು ಹೆಂಗಸರ ಸ್ವಭಾವವನ್ನು ವರ್ಣಿಸುವ ಪದಗಳನ್ನು ಗಮನಿಸಿ.

**ಅಭ್ಯಾಸ II**

ಮೇಲಿನ ವಾಕ್ಯಗಳಲ್ಲಿ ಗುಣಗಳನ್ನು ವರ್ಣಿಸಿರುವ ಪದಗಳನ್ನು ಗುರುತಿಸಿದರಲ್ಲವೆ ? ಈಗ ಕೆಳಗೆ ಪಟ್ಟಿ ಮಾಡಿರುವ ವರ್ತನೆಗಳನ್ನು ಸಮಾಜ ಗ್ರಹಿಸುವ ರೀತಿಯಲ್ಲಿ ಹೆಂಗಸರದು ಮತ್ತು ಗಂಡಸರದು ಎಂದು ವರ್ಗೀಕರಿಸಿ(ನಿಮ್ಮ ಅಭಿಪ್ರಾಯ ಹಾಗಿರಬೇಕೆಂದೇನೂ ಇಲ್ಲ)

ಕುಟುಂಬದ ಸದಸ್ಯರ ಪೋಷಣೆ, ಗೃಹ ನಿರ್ವಹಣೆ, ಸಂಪಾದನೆ, ಅತಿಥಿ ಸತ್ಕಾರ, ಕುಟುಂಬದ ಒಟ್ಟು ಜವಾಬ್ದಾರಿ, ಮಕ್ಕಳ ಶಿಕ್ಷಣ ನಿರ್ವಹಣೆ, ಮನೆಗೆ ಸಂಬಂಧಿಸಿದ ಆರ್ಥಿಕ ವ್ಯವಹಾರಗಳು.

ಹೀಗೆ ನಮ್ಮ ಸಾಮಾಜಿಕ ಪರಿಸರದಲ್ಲಿ ಇಂತಹ ಲಿಂಗಸೂಚಕ ಗುಣಲಕ್ಷಣಗಳಿಗೆ ಎಷ್ಟೋ ಉದಾಹರಣೆಗಳನ್ನು ಕಾಣಬಲ್ಲಿರಿ. ಮಕ್ಕಳು ಬೆಳೆಯುತ್ತಾ ಹೋದಂತೆ, ಅವರ ಲಿಂಗತ್ವದ ಬಗೆಗಿನ ವಿಚಾರಗಳು ಅವರಿಗೆ ಅನಾವರಣಗೊಳ್ಳುತ್ತಾ ಹೋಗುತ್ತದೆ. ಅವರು ಯಾರು? ಅವರು ಹೇಗೆ ವರ್ತಿಸಬೇಕು, ಅವರ ಲಿಂಗಕ್ಕೆ ತಕ್ಕುದಾದ ವರ್ತನೆಗಳು ಯಾವುವು ಇತ್ಯಾದಿ ಅಂಶಗಳನ್ನು ಸಹಜವಾಗಿ ಗ್ರಹಿಸುತ್ತಾರೆ. ಈ ರೀತಿಯಲ್ಲಿ ಗಂಡಸರ ಮತ್ತು ಹೆಂಗಸರ ಪಾತ್ರಗಳನ್ನು ಗ್ರಹಿಸಿ, ಈ ಪಾತ್ರಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದನ್ನೇ ಲಿಂಗತ್ವದ ಅಚ್ಚುಗೊಳಿಸುವಿಕೆ ಅಥವಾ 'Gender Typing' ಎಂದು ಹೇಳಬಹುದು. ಎಲ್ಲ ಮಕ್ಕಳೂ ಒಂದೇ ರೀತಿಯಲ್ಲಿ ಲಿಂಗತ್ವದ ಅನ್ವಯವನ್ನು ಮಾಡಿಕೊಳ್ಳುವುದಿಲ್ಲ. ಅವರು ಲಿಂಗತ್ವದ ವರ್ತನೆಗಳನ್ನು ವಿವಿಧ ಮಟ್ಟಗಳಲ್ಲಿ ಪ್ರದರ್ಶಿಸುತ್ತಾರೆ. ಆದರೆ ಗಂಡು ಮತ್ತು ಹೆಣ್ಣಿನ ಪಾತ್ರವರ್ತನೆಗಳನ್ನು ನಿಶ್ಚಯವಾಗಿಯೂ ಅನುಸರಿಸುತ್ತಾರೆ. ಮಗುವಿನ ಸಾಮಾಜಿಕ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಈ ಪ್ರಕ್ರಿಯೆ ಅತ್ಯಂತ ಅವಶ್ಯಕ.

ಏಕೆಂದರೆ ಇದು ಅಪೇಕ್ಷಿತ ಸಾಮಾಜಿಕ ವರ್ತನೆಗಳನ್ನು ಮತ್ತು ಸಾಮಾಜಿಕ ತೀರ್ಮಾನಗಳನ್ನು ಪ್ರಭಾವಿಸುತ್ತದೆ. ಇದರ ಜೊತೆಗೆ 'ಲಿಂಗತ್ವ ಸ್ಕೀಮಾ' ಎಂಬ ಪರಿಕಲ್ಪನೆಯನ್ನು ತಿಳಿಯಬೇಕು. 'ಸ್ಕೀಮಾ' ಎಂದರೇನು ಎಂಬುದು ನಿಮಗೆ ತಿಳಿದಿದೆ. ಇದು ವ್ಯಕ್ತಿಯ ಗ್ರಹಿಕೆಗಳಿಗೆ ಸಹಾಯಮಾಡುವ ಸಂಜ್ಞಾನಾತ್ಮಕವಾಗಿ ಸಂಘಟನೆಗೊಂಡ ಸಂಬಂಧಗಳ ಜಾಲ. ಇದು ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಸ್ಥಿರವಾದ ವರ್ತನೆಗಳಿಗೆ ಮಾರ್ಗದರ್ಶಕವಾಗಿರುತ್ತದೆ. ಹುಡುಗಿಯರು ಅಶಕ್ತರು; ಹುಡುಗರು ಶಕ್ತಿವಂತರು, ಇತ್ಯಾದಿ ಹೇಳಿಕೆಗಳು ವಿವಿಧ ಲಿಂಗಗಳಿಗೆ ಸ್ವೀಕೃತವಾದ ವರ್ತನೆಗಳನ್ನು ವರ್ಗೀಕರಿಸುತ್ತವೆ. ಇಂತಹವುಗಳ ಆಧಾರದ ಮೇಲೆ ಮಕ್ಕಳು ಲಿಂಗತ್ವ ಸ್ಕೀಮಾಗಳನ್ನು ಕಟ್ಟಿಕೊಳ್ಳುತ್ತಾರೆ. ಮೊದಲಿಗೆ ಇದು ಲಿಂಗ ನಿರ್ದಿಷ್ಟ ಪಾತ್ರಗಳ ಗ್ರಹಿಕೆಯಿಂದ ಸಾಧ್ಯವಾಗುತ್ತದೆ. ನಂತರ ಮಕ್ಕಳು ಸಮಾಜದಲ್ಲಿ ತಮ್ಮ ಕಾರ್ಯಗಳೇನು ಎಂಬುದನ್ನು ಪರಿಕಲ್ಪಿಸಿಕೊಂಡು, ವರ್ತನೆಗಳಲ್ಲಿ ಅನ್ವಯಿಸಿಕೊಳ್ಳಲು ಆರಂಭಿಸುತ್ತಾರೆ.

ಆದ್ದರಿಂದ ವ್ಯಕ್ತಿಗಳು ನಿರ್ದಿಷ್ಟ ಸಮಾಜ ಅಥವಾ ಸಂಸ್ಕೃತಿಯಲ್ಲಿ ತಮ್ಮ ಲಿಂಗಕ್ಕೆ ಸಮಂಜಸವಾದ ಚಿಂತನೆಗಳನ್ನು ಭಾವನೆಗಳನ್ನು ಮತ್ತು ಚಟುವಟಿಕೆಗಳನ್ನು ಕಲಿತು ರೂಢಿಸಿಕೊಳ್ಳುವುದನ್ನೇ 'ಲಿಂಗ-ಅಚ್ಚುಗೊಳಿಸುವಿಕೆ' ಎನ್ನಬಹುದು. ಆ ಎಲ್ಲ ಲಿಂಗ-ಅಚ್ಚುಗಳನ್ನು ದೈನಂದಿನ ಜೀವನದಲ್ಲಿ ಅನ್ವಯಿಸಿಕೊಳ್ಳುವುದೇ 'ಲಿಂಗ-ಪಾತ್ರಗಳು' (Gender Roles). ಅಥವಾ ವ್ಯಕ್ತಿ ಸಾಂಸ್ಕೃತಿಕ ಸಂದರ್ಭದಲ್ಲಿ ತನ್ನ ಲಿಂಗಕ್ಕೆ ಅನುಗುಣವಾಗಿ ಕಲಿತ ಪಾತ್ರ ಅಥವಾ ವರ್ತನೆಗಳೇ ಲಿಂಗಪಾತ್ರಗಳು.

ಗಂಡಿಗೆ ಸಂಬಂಧಿಸಿದುದೆನ್ನಲಾಗುವ ಗುಣಲಕ್ಷಣಗಳು ಬಹುತೇಕ ಧನಾತ್ಮಕವಾಗಿ ಅಂತರ್ ಸಂಬಂಧಿತವಾಗಿವೆಯೆಂದು ಭಾವಿಸಲಾಗಿದೆ. ಹಾಗೆಯೇ ಹೆಣ್ಣಿಗೆ ಸಂಬಂಧಿಸಿದುದೆನ್ನಲಾಗುವ ಗುಣಲಕ್ಷಣಗಳು ಧನಾತ್ಮಕವಾಗಿ ಅಂತರ್ ಸಂಬಂಧಿತವೆಂದು ತಿಳಿಯಲಾಗಿದೆ. ಆದರೆ ಎಲ್ಲಾ ಗಂಡು ವಿಧದ ಗುಣಲಕ್ಷಣಗಳು ಎಲ್ಲಾ ಹೆಣ್ಣು ವಿಧದ ಗುಣ ಲಕ್ಷಣದೊಂದಿಗೆ ಋಣಾತ್ಮಕವಾಗಿ ಹೋಲಿಸಬಹುದು. ಆದರೆ ಈ ಎಲ್ಲವನ್ನೂ ಮೀರಿ ಲಿಂಗಸಮನ್ವಯತೆಯನ್ನು ಸಾಧಿಸುವುದೇ ನಮ್ಮ ಗುರಿ ಎಂಬುದನ್ನು ನಾವು ತಿಳಿದಿರಬೇಕು; ವಿದ್ಯಾರ್ಥಿಗಳಿಗೆ ತಿಳಿಸಬೇಕು.

ಈಚಿನ ದಿನಗಳಲ್ಲಿ ಲಿಂಗ-ಅಚ್ಚು/ವಿಧದಲ್ಲಿ ಬದಲಾವಣೆ ಕಾಣುತ್ತಿದೆ. ಗಂಡು ವಿಧದ ಮತ್ತು ಹೆಣ್ಣು ವಿಧದ ಗುಣ ಲಕ್ಷಣಗಳು ಮಿಳಿತಗೊಂಡು ವೈವಿಧ್ಯಮಯ ಗುಣಗಳುಳ್ಳ ವ್ಯಕ್ತಿಗಳಾಗಿರುವುದು ಕಂಡುಬರುತ್ತದೆ. ಆದ್ದರಿಂದ ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳೊಂದಿಗೆ 'ಉಭಯಲಿಂಗಿಗಳು' ಎಂಬ ಮತ್ತೊಂದು ವರ್ಗವನ್ನು ಗುರುತಿಸಲಾಗಿದೆ. ಈ ಲಿಂಗದವರು ಎರಡೂ ಲಿಂಗಗಳ ಗುಣಲಕ್ಷಣಗಳ ಪಟ್ಟಿಯಲ್ಲಿ ಹೆಚ್ಚು ಗುಣಾಂಕಗಳನ್ನು (Scores) ಪಡೆಯುತ್ತಾರೆ, ಅವರು ಸಂಪ್ರದಾಯಬದ್ಧ ಹೆಣ್ಣುಗುಣಗಳನ್ನು ಸಂಪ್ರದಾಯಬದ್ಧ ಗಂಡು ಗುಣಗಳನ್ನು ಹೊಂದಿರುತ್ತಾರೆ. ಮನಃಶ್ಶಾಸ್ತ್ರಜ್ಞರ ಪ್ರಕಾರ ಉಭಯಲಿಂಗಿಗಳು ಸಾಧನೆಯ (Instrumental) ಮತ್ತು ಅಭಿವ್ಯಕ್ತಿಯ (Expressive) ಗುಣಲಕ್ಷಣಗಳನ್ನು ಸಂತುಲಿತ ಪ್ರಮಾಣದಲ್ಲಿ ಹೊಂದಿರುತ್ತಾರೆ.

ಸಾಮಾಜಿಕ ಮನೋವೈಜ್ಞಾನಿಕ ಸನ್ನಿವೇಶಗಳ ಪ್ರಕಾರ, ಲಿಂಗತ್ವ ಅನ್ವಯ ಅಂತಿಮ ಬಾಲ್ಯ ಹಂತದಲ್ಲಿ ಪ್ರಾರಂಭವಾಗುತ್ತದೆ. ಪೂರ್ವ ಬಾಲ್ಯದಲ್ಲಿ ಕೇಶ ಶೈಲಿ, ಧರಿಸುವ ಉಡುಪುಗಳು, ಮತ್ತು ಆಡುವ ಆಟಿಕೆಗಳು ಲಿಂಗತ್ವ ಭಿನ್ನತೆಯ ಅರಿವಿಗೆ ಸಹಾಯಮಾಡುತ್ತದೆ. ಅಂತಿಮ ಬಾಲ್ಯದಲ್ಲಿ ಇತರರ ನಡೆ,ನುಡಿ, ಚಿಂತನೆ, ವರ್ತನೆಗಳ ಅನುಕರಣೆ ಮತ್ತು ವೀಕ್ಷಣೆಯ ಮೂಲಕ ಇವು ಅರಿವಿಗೆ ಬರುತ್ತವೆ.

ಲಿಂಗತ್ವ ಅನ್ವಯದ ಕುರಿತಂತೆ ಅನೇಕ ಸಿದ್ಧಾಂತಗಳೂ ಬೆಳಕಿಗೆ ಬಂದಿವೆ. ಫ್ರಾಯ್ಡ್‌ನ ವಿಶ್ಲೇಷಣಾತ್ಮಕ ಸಿದ್ಧಾಂತದ ಪ್ರಕಾರ ಗಂಡು-ಹೆಣ್ಣು ಎಂಬ ಜೈವಿಕ ವ್ಯತ್ಯಾಸಗಳ ಕಾರಣದಿಂದಾಗಿ ಇದೊಂದು ಸ್ವಾಭಾವಿಕ ಪ್ರಕ್ರಿಯೆ. ಮಗುವು ತನ್ನದೇ ಲಿಂಗದ ಪೋಷಕರೊಂದಿಗೆ ತನ್ನನ್ನು ಗುರುತಿಸಿಕೊಳ್ಳುತ್ತದೆ. ಲಿಂಗ ಪಾತ್ರಗಳನ್ನು ಸಾಮಾಜೀಕರಣ ಪ್ರಕ್ರಿಯೆಯಾಗಿ ಕಲಿಯಲಾಗುತ್ತದೆ.

ಸಾಮಾಜಿಕ ಕಲಿಕಾ ಸಿದ್ಧಾಂತವು ವ್ಯಕ್ತಿಯ ಲಿಂಗತ್ವದ ಬೆಳವಣಿಗೆ ವೀಕ್ಷಣಾ ಕಲಿಕೆ ಮತ್ತು ಅನುಕರಣೆಯ ಪ್ರಕ್ರಿಯೆ ಎಂದು ಪ್ರತಿಪಾದಿಸುತ್ತದೆ. ಇತರರ ಮಾದರಿಗಳು, ಹೊಗಳಿಕೆ ಮತ್ತು ಶಿಕ್ಷೆ ಮುಂತಾದವುಗಳು

ಸಮರ್ಪಕ ವರ್ತನೆಗಳನ್ನು ಕಂಡುಕೊಳ್ಳಲು ಸಹಾಯಕವಾಗುತ್ತವೆ. ಲಿಂಗ ಪಡಿಯಚ್ಚುಗಳು, ಸಾಂಸ್ಕೃತಿಕ ಮಾನಕಗಳು ಸಾಮಾಜೀಕರಣದ ನಿಯೋಗಿಗಳಿಗೆ ಲಿಂಗ ಪಾತ್ರ ಮತ್ತು ಲಿಂಗತ್ವದ ಅನ್ವಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ ಈ ಉಪಕ್ರಮ ವ್ಯಕ್ತಿಯ ಸಂಜ್ಞಾನಾತ್ಮಕ ಸಾಮರ್ಥ್ಯಗಳು, ಅನುವಂಶೀಯ ಗುಣಗಳು ಮತ್ತು ವಿಕಾಸಾತ್ಮಕ ಹಂತಗಳು ಇವುಗಳ ಪ್ರಾಮುಖ್ಯತೆಯನ್ನು ಕಡೆಗಣಿಸಿ ವ್ಯಕ್ತಿಯನ್ನು ಪರಿಸರಕ್ಕೆ ಪ್ರತಿಕ್ರಿಯಿಸುವ ನಿಷ್ಕ್ರಿಯ ಜೀವಿಯಾಗಿ ನೋಡುತ್ತದೆ.

ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತದ ಪ್ರಕಾರ ತಾನು 'ಗಂಡು' ಅಥವಾ 'ಹೆಣ್ಣು' ಎಂಬ ಪ್ರಜ್ಞೆ ಮೊದಲು ಬೆಳೆಸಿ ನಂತರ ಲಿಂಗತ್ವದ ಅನ್ವಯ ಪ್ರಕ್ರಿಯೆಗಳ ಕಲಿಕೆ ಉಂಟಾಗುತ್ತವೆ. ಲಿಂಗ ಅಸ್ಮಿತೆಗೆ ಸುತ್ತಮುತ್ತಲಿನ ಜನರಿಂದ ಅನುಕೂಲವಾಗುತ್ತದೆಯೇ ವಿನಾ ಅದು ಸಂಪೂರ್ಣವಾದ ಅನುಕರಣೆಯಲ್ಲ. ಸುಮಾರು 4ರಿಂದ 6 ವರ್ಷಗಳಲ್ಲಿ ಮಗುವಿಗೆ ತಾನು ಯಾವ ಲಿಂಗದವನು/ಲಿಂಗದವಳು ಎಂಬ ಅರಿವು ಸ್ಥಿರವಾಗಿ, ನಂತರ ಲಿಂಗಪಾತ್ರಗಳ ಅನ್ವಯದ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಈ ಸಿದ್ಧಾಂತವು ಸಾಂಸ್ಕೃತಿಕ ಅಂಶಗಳನ್ನು ಕಡೆಗಣಿಸುತ್ತದೆ ಎಂಬ ಟೀಕೆ ಇದೆ.

ಲಿಂಗತ್ವದ ಅನ್ವಯ ಹಲವಾರು ಅಂಶಗಳನ್ನು ಆಧರಿಸಿದೆ. ಇದು ಉದ್ದೇಶಪೂರ್ವಕವಾದ ಮತ್ತು ಉದ್ದೇಶ ಪೂರ್ವಕವಲ್ಲದ ಎರಡೂ ಹಂತಗಳಲ್ಲಿ ನಡೆಯುತ್ತದೆ. ಉದ್ದೇಶ ಪೂರ್ವಕವಲ್ಲದ ಹಂತದಲ್ಲಿ ಜೈವಿಕ ಅಂಶಗಳು ಪಾತ್ರವಹಿಸುತ್ತವೆ ಮತ್ತು ಉದ್ದೇಶಪೂರ್ವಕ ಹಂತದಲ್ಲಿ ಮನೋ ಸಾಮಾಜಿಕ ನಿರ್ಧಾರಕಗಳು ಸಕ್ರಿಯವಾಗುತ್ತವೆ.

ಲಿಂಗತ್ವದ ಅನ್ವಯವನ್ನು ನಿರ್ಧರಿಸುವ ಅಂಶಗಳಲ್ಲಿ ಜೈವಿಕ ನಿರ್ಧಾರಕಗಳು ಮೊದಲನೆಯದು. ಮಾನವರಲ್ಲಿ 23 ಜೊತೆಯ ಕ್ರೋಮೋಸೋಮುಗಳಿದ್ದು ಇವುಗಳನ್ನು ಲಿಂಗ ಕ್ರೋಮೋಸೋಮುಗಳೆಂದೇ ಕರೆಯಲಾಗುತ್ತದೆ. ಇವು ಜೈವಿಕ ಮಾಹಿತಿಯನ್ನು ಕೊಂಡೊಯ್ಯುತ್ತವೆ. ಹೆಂಗಸರಲ್ಲಿ 'XX' ಕ್ರೋಮೋಸೋಮುಗಳೂ ಗಂಡಸರಲ್ಲಿ 'XY' ಕ್ರೋಮೋಸೋಮುಗಳೂ ಇರುತ್ತವೆ. ಹೆಂಗಸರು ಮಾತ್ರ ಮಗು ಹಡೆಯಬಲ್ಲರು ಎಂಬಿತ್ಯಾದಿ ಅಂಶಗಳು ಲಿಂಗಪಡಿಯಚ್ಚುಗಳಿಗೆ ಕಾರಣವಾಗುತ್ತವೆ. ಲಿಂಗತ್ವ ಅನ್ವಯಕ್ಕೆ ಮನೋಸಾಮಾಜಿಕ ನಿರ್ಧಾರಕಗಳೂ ಇವೆ. ಅದೇ ಸಾಮಾಜೀಕರಣ. ಸಮಾಜದ ವಿವಿಧ ನಿಯೋಗಗಳಿಂದ ಲಿಂಗಪಾತ್ರಗಳನ್ನು ಕಲಿಯುವ ಪ್ರಕ್ರಿಯೆಯೇ ಸಾಮಾಜೀಕರಣ. ಪೋಷಕರು, ಸಾಂಸ್ಕೃತಿಕ ಪಡಿಯಚ್ಚುಗಳು ಲಿಂಗಪಾತ್ರಗಳನ್ನು ಗುರುತಿಸಲು ಸಹಾಯ ಮಾಡುತ್ತವೆ. ಈ ಲಿಂಗಪಾತ್ರಗಳು ವ್ಯಕ್ತಿ ಬದುಕಿರುವ ಸಮುದಾಯ/ ಸಮಾಜಗಳಿಂದ ನಿರ್ಧರಿತವಾಗುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗಿನ 'ಎ' ಮತ್ತು 'ಬಿ' ಪಟ್ಟಿಯ ಅಂಶಗಳನ್ನು ಹೊಂದಿಸಿರಿ

| | 'ಎ' ಪಟ್ಟಿ | 'ಬಿ' ಪಟ್ಟಿ | |
|---|---|---|---|
| 1 | ಫ್ರಾಯ್ಡ್‌ನ ವಿಶ್ಲೇಷಣಾತ್ಮಕ ಸಿದ್ಧಾಂತ | ವೀಕ್ಷಣಾ ಕಲಿಕೆ ಮತ್ತು ಅನುಕರಣೆಯ ಪ್ರಕ್ರಿಯೆ | ಅ |
| 2 | ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತ | ಜೈವಿಕ ವ್ಯತ್ಯಾಸಗಳ ಕಾರಣದಿಂದಾಗಿ ಇದೊಂದು ಸ್ವಾಭಾವಿಕ ಪ್ರಕ್ರಿಯೆ | ಆ |
| 3 | ಸಾಮಾಜಿಕ ಕಲಿಕಾ ಸಿದ್ಧಾಂತ | 'ಗಂಡು' ಅಥವಾ 'ಹೆಣ್ಣು' ಎಂಬ ಪ್ರಜ್ಞೆ ಮೊದಲು ಬೆಳೆಸು ನಂತರ ಲಿಂಗತ್ವದ ಅನ್ವಯ ಪ್ರಕ್ರಿಯೆಗಳ ಕಲಿಕೆ ಉಂಟಾಗುತ್ತವೆ | ಇ |
| | | ಮಾದರಿಗಳು, ಹೊಗಳಿಕೆ ಮತ್ತು ಶಿಕ್ಷೆ ಮುಂತಾದವುಗಳು ಸಮರ್ಪಕ ವರ್ತನೆಗಳನ್ನು ಕಂಡುಕೊಳ್ಳಲು ಸಹಾಯಕವಾಗುತ್ತವೆ. | ಈ |
| | | ಸಾಂಸ್ಕೃತಿಕ ಅಂಶಗಳನ್ನು ಕಡೆಗಣಿಸುತ್ತದೆ | ಉ |

## 4.4.3.2. ಲಿಂಗಪಡಿಯಚ್ಚುಗಳು ಮತ್ತು ಲಿಂಗ ಪಾತ್ರ ಅನುಸರಣೆ

ಸಮಾಜದ ರೂಢಿಗೆ ಅನುಗುಣವಾಗಿ, 'ಇದು ಹೆಂಗಸರಿಗೆ ಸೂಕ್ತ, ಇದು ಗಂಡಸರಿಗೆ ಸೂಕ್ತ' ಎಂದು ವ್ಯಾಪಕವಾಗಿ ರೂಢಿಯಲ್ಲಿರುವ ವರ್ತನೆಗಳು, ಗುಣಲಕ್ಷಣಗಳೇ 'ಲಿಂಗ ಪಡಿಯಚ್ಚುಗಳು. ಹೀಗೆ ಸಮಾಜದ/ ಸಮುದಾಯದ ಅಪೇಕ್ಷೆಯ ಮೇರೆಗೆ ಹುಡುಗ/ ಹುಡುಗಿ ನಿರ್ದಿಷ್ಟ ರೀತಿಗಳಲ್ಲೇ ವರ್ತಿಸಬೇಕು. ಹೀಗೆ ನಿರ್ದಿಷ್ಟ ಲಿಂಗಗಳ ಜೊತೆಗೆ ಸಂಬಂಧಿಸಿರುವ ವರ್ತನೆಗಳು 'ಲಿಂಗ ಪಡಿಯಚ್ಚುಗಳು' ಎನಿಸಿಕೊಳ್ಳುತ್ತವೆ.

ಗಂಡಸರು ಮತ್ತು ಹೆಂಗಸರ ಸಮರ್ಪಕ ವರ್ತನೆಗಳಾವುವು ಎಂಬುದನ್ನು ಮಕ್ಕಳು ಬಾಲ್ಯದಲ್ಲಿಯೇ ಸ್ಪಷ್ಟವಾಗಿ ಗ್ರಹಿಸಿಕೊಂಡಿರುತ್ತಾರೆ. ಆ ವಿಚಾರಗಳನ್ನೇ ಲಿಂಗಪಾತ್ರ ರೂಢಿಗತ ನಿಯಮಗಳಾಗಿ ಪರಿಗಣಿಸಬಹುದು. ಇವು ಲಿಂಗಾನುಸಾರಿಯಾಗಿ ಜನರ ಚಿಂತನೆ, ಭಾವನೆ ಮತ್ತು ಕಾರ್ಯಗಳನ್ನು ಪ್ರಭಾವಿಸುತ್ತವೆ.

ಲಿಂಗ ಪಡಿಯಚ್ಚುಗಳು ಕೆಲವೊಮ್ಮೆ ವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತವೆ. 'ಅಮ್ಮಾವ್ರ ಗಂಡ', 'ಗಂಡುಬೀರಿ' ಇಂತಹ ಮಾತುಗಳು ವ್ಯಕ್ತಿಯ ಕುರಿತು ಬೆಟ್ಟದಷ್ಟು ಹೇಳಿಬಿಡುತ್ತವೆ. ಇವುಗಳು ಅಪಾಯಕಾರಿ ಎಂಬುದು ನಮ್ಮ ಗಮನದಲ್ಲಿರಬೇಕು. ಏಕೆಂದರೆ ಒಮ್ಮೆ ಆ ರೀತಿ ಹಣೆಪಟ್ಟಿ ಅಂಟಿದರೆ ಅದನ್ನು ಅಳಿಸಿ ಹಾಕಲು ಕಷ್ಟವಾಗುತ್ತದೆ. ಆ ವ್ಯಕ್ತಿ ಹಾಗಿಲ್ಲದಿದ್ದರೂ ವ್ಯಕ್ತಿಯ ಬಗ್ಗೆ ಹೊಂದಿರುವ ಪೂರ್ವಾಭಿಪ್ರಾಯ ಬದಲಾಗುವುದಿಲ್ಲ.

ಪಡಿಯಚ್ಚುಗಳು ಸಾಂಸ್ಕೃತಿಕ ಬದಲಾವಣೆಗಳ ಕಾರಣದಿಂದ ಸುಧಾರಿತವಾಗಬಹುದು. ಉದಾಹರಣೆಗೆ ಇತಿಹಾಸದ ಒಂದು ಕಾಲದಲ್ಲಿ 'ಪುರುಷತ್ವ' ಎಂದರೆ ಕಟ್ಟುಮಸ್ತಾದ ಅಂಗಸೌಷ್ಠವವನ್ನು ನೆನಪಿಗೆ ತರುತ್ತಿತ್ತು. ಕಾಲಕಳೆದಂತೆ ಅದು ತೆಳು ಮತ್ತು ನೀಳಕಾಯಕ್ಕೆ ಅನ್ವಯಿಸುವುದನ್ನು ಕಾಣುತ್ತೇವೆ.

ಮೂವತ್ತು ದೇಶಗಳಲ್ಲಿ ಕಾಲೇಜು ವಿದ್ಯಾರ್ಥಿಗಳ ದತ್ತಾಂಶದ ಆಧಾರದ ಮೇಲೆ ಕೈಗೊಂಡ ಅಧ್ಯಯನದಲ್ಲಿ ವ್ಯಾಪಕವಾಗಿ ನಂಬಿರುವ ಲಿಂಗ ಪಡಿಯಚ್ಚುಗಳ ಬಗ್ಗೆ ದೊರೆತ ಮಾಹಿತಿ ಈ ಕೆಳಗಿನಂತಿದೆ.

| ಗಂಡಸರು | ಹೆಂಗಸರು |
|---|---|
| ಪ್ರಾಬಲ್ಯವಿರುವವರು | ಭಾವನಾ ಸಹಿಷ್ಣುಗಳು |
| ಸ್ವತಂತ್ರರು | ಪಾಲನೆ ಮಾಡುವವರು |
| ಆಕ್ರಮಣಕಾರಿಗಳು | ಸ್ವೀಕಾರಶೀಲರು |
| ಸಾಧನಾ ಪ್ರಿಯರು | ಕಡಿಮೆ ಗೌರವಾನ್ವಿತರು |
| | ಯಾತನೆಯಲ್ಲಿದ್ದಾಗ ಹೆಚ್ಚು ಸಹಾಯ ನೀಡುವವರು |

ಇನ್ನೊಂದು ಅಧ್ಯಯನದ ಪ್ರಕಾರ ಲಿಂಗಪಡಿಯಚ್ಚು ಭಾವನೆಗಳಲ್ಲಿನ ಬದಲಾವಣೆಗಳು ಈ ಕೆಳಗಿನಂತಿವೆ.

(ಅ) ಹೆಂಗಸರು ಭಯ, ಅಪರಾಧಿಭಾವ, ಅಚ್ಚರಿ, ಅನುಕಂಪ, ಪ್ರೀತಿ, ಅವಮಾನ, ದುಃಖ ಭಾವನೆಗಳನ್ನು ತಮ್ಮ ಜೊತೆಯಿರುವ ಗಂಡಸರಿಗಿಂತ ಹೆಚ್ಚು ವ್ಯಕ್ತಮಾಡುತ್ತಾರೆ.

(ಬ) ಗಂಡಸರು ಕೋಪ ಮತ್ತು ಹೆಮ್ಮೆಯ ಭಾವನೆಗಳನ್ನು ತಮ್ಮ ಜೊತೆಯಿರುವ ಹೆಂಗಸರಿಗಿಂತ ಹೆಚ್ಚು ಅಭಿವ್ಯಕ್ತಿಸುತ್ತಾರೆ.

ಅನೇಕ ದೇಶಗಳಲ್ಲಿನ ಸಂಶೋಧನೆಗಳಿಂದ ತಿಳಿದುಬಂದಂತೆ ವ್ಯಕ್ತಿತ್ವ ಗುಣಲಕ್ಷಣಗಳು ಒರಟು, ತರ್ಕಬದ್ಧ, ಕ್ರೌರ್ಯಗುಣ ಪುಲ್ಲಿಂಗ ವಿಶೇಷಣಗಳಂತೆ ಮತ್ತು ಸೌಮ್ಯ, ಅಕ್ಕರೆ, ಅವಲಂಬನ ಗುಣಲಕ್ಷಣಗಳು ಸ್ತ್ರೀಲಿಂಗ ವಿಶೇಷಣಗಳಂತೆ ಮಧ್ಯಮ ಬಾಲ್ಯದ ಕೊನೆಯ ಹಂತದಲ್ಲೇ ಮೂಡಿರುತ್ತವೆ.

**ಸಾಧನೆಯ ಕ್ಷೇತ್ರಗಳು :**

ಮಕ್ಕಳು ವಾಚನ, ಕಾಗುಣಿತ, ಕಲೆ ಮತ್ತು ಸಂಗೀತ ಹೆಚ್ಚಾಗಿ ಹೆಣ್ಣು ಹುಡುಗಿಯರಿಗೆ ಸಂಬಂಧಿಸಿದುದು ಎಂದು ತಿಳಿಯುತ್ತಾರೆ. ಗಣಿತ, ಕ್ರೀಡೆಗಳು ಮತ್ತು ತಾಂತ್ರಿಕ ಕೌಶಲಗಳು ಹೆಚ್ಚಾಗಿ ಹುಡುಗರಿಗೆ ಸಂಬಂಧಿಸಿದುದು ಎಂದು ತಿಳಿಯುತ್ತಾರೆ. ಈ ಪಡಿಯಚ್ಚುಗಳು ಬಹುಮಟ್ಟಿಗೆ ಹುಡುಗರ ಆದ್ಯತೆಗಳ ಮತ್ತು ಸಾಮರ್ಥ್ಯದ ಅರಿವಿನ ಮೇಲೆ ಪ್ರಭಾವಿಸುವವು. ಶಾಲೆಯಲ್ಲಿ ಹುಡುಗರಿಗಿಂತ ಉತ್ತಮಗ್ರೇಡ್‌ಗಳನ್ನು ಗಳಿಸಿದಾಗಲೂ ಹುಡುಗಿಯರು ತಮ್ಮ ಸಾಮರ್ಥ್ಯಗಳಲ್ಲಿ ಬಲವಾದ ನಂಬಿಕೆಗಳನ್ನು ವ್ಯಕ್ತ ಮಾಡದಿರುವುದನ್ನು, ಹುಡುಗರಿಗೆ ಹೋಲಿಸಿದಾಗ ಹುಡುಗಿಯರು ತಮ್ಮ ಪ್ರತಿಭೆಗಳಿಗೆ ಬೆಲೆ ಕಟ್ಟುವುದಿಲ್ಲ ಎಂಬ ಅಂಶವನ್ನು ಸಂಶೋಧನೆಗಳು ಮುಂದಿಟ್ಟಿವೆ. ಲಿಂಗ ಪಡಿಯಚ್ಚುಗಳು ಸಾಧನೆಯನ್ನು ಪ್ರಭಾವಿಸಬಹುದು. ಹುಡುಗರು ಹುಡುಗಿಯರಿಗಿಂತ ಗಣಿತದಲ್ಲಿ ಚುರುಕಾಗಿರುತ್ತಾರೆ ಎಂಬುದರ ಬಲವಾದ ನಂಬಿಕೆ ಇರುವವರು ಗಣಿತದಲ್ಲಿ ಕಡಿಮೆ ಅಂಕ ಪಡೆದಾಗ, ತಾನು ಹೆಣ್ಣಾಗಿರುವ ಕಾರಣಕ್ಕಾಗಿಯೇ ಎಂಬ ತಪ್ಪು ನಿರ್ಧಾರಗಳನ್ನು ಮಾಡಬಹುದು. ಕಲಾ ವಿಷಯಗಳಲ್ಲಿ ಸ್ವಲ್ಪ ಅಡಚಣೆಯಾದರೂ ತಾವು ಗಂಡುಮಕ್ಕಳು, ಅದರಿಂದಾಗಿ ಈ ಅಡಚಣೆ ಎಂದು ಅವರು ಭಾವಿಸಬಹುದು.

ಸಂಯುಕ್ತ ಸಂಸ್ಥಾನದಲ್ಲಿ (2008–2009) ನಡೆದ ಅಧ್ಯಯನಗಳು ಅನುಕೂಲಸ್ಥ ಸಮೂಹಗಳಿಂದ ಬರುವ ಹುಡುಗ ಹುಡುಗಿಯರು ಗಣಿತದಲ್ಲಿ ಸಮಾನ ಸಾಮರ್ಥ್ಯವುಳ್ಳವರೆಂದು ತಿಳಿಸುತ್ತವೆ. ಅದೇ ಹುಡುಗಿಯರನ್ನು ವಯಸ್ಕರ ಗಣಿತ ಸಾಮರ್ಥ್ಯದ ಬಗ್ಗೆ ಕೇಳಿದಾಗ ಅವರು ಪಡಿಯಚ್ಚು ಬಿಂಬಿಸುವಂತೆ ಗಂಡಸರು ಹೆಂಗಸರಿಗಿಂತ ಉತ್ತಮ ಎಂದು ಉತ್ತರಿಸಿದ್ದಾರೆ.

ಪಡಿಯಚ್ಚುಗಳು ಜನಪ್ರಿಯವಾದವು ಎಂಬ ಮಾತ್ರಕ್ಕೆ ಅದೇ ಸಮರ್ಪಕವೆಂದೂ ಸತ್ಯವೆಂದೂ ತಿಳಿಯಬಾರದು. ಇವುಗಳಿಂದಾಗುವ ಅನುಕೂಲಗಳಿಗಿಂತ ಅನನುಕೂಲಗಳೇ ಹೆಚ್ಚು ಎಂಬುದರ ಅರಿವು ನಮಗಿರಬೇಕು. ಹುಡುಗಿಯರು ಮತ್ತು ಹುಡುಗರಿಗೆ ಆರೋಪಿಸಲಾಗಿರುವ ಲಕ್ಷಣಗಳು ಮತ್ತು ವರ್ತನೆಗಳು ಬದಲಾಗಬಹುದು. ಹುಡುಗಿಯರಲ್ಲಿ ಅಕ್ಕರೆಯ ಜೊತೆಗೆ ತರ್ಕಬದ್ಧತೆಯೂ ಸ್ಪಷ್ಟವಾಗಿ ಕಾಣಿಸಿಕೊಳ್ಳಬಹುದು. ಇದನ್ನೇ ಲಿಂಗ ಪಡಿಯಚ್ಚಿನ ನಮ್ಯತೆ ('Gender Stereotype Flexibility') ಎಂದು ಕರೆಯುತ್ತಾರೆ. ಲಿಂಗ ಹೆಸರಿಸುವಿಕೆಗೆ (gender labelling) ವ್ಯಕ್ತಿಯ ಲಿಂಗ ಮಾತ್ರವಲ್ಲ; ವ್ಯಕ್ತಿಯ ವಿಶಿಷ್ಟ ಗುಣಲಕ್ಷಣಗಳು ಕಾರಣವಾಗಬಲ್ಲವೆಂಬ ಅಂಶವೇ ಈ ನಮ್ಯತೆಗೆ ಕಾರಣ. ಇದರಿಂದ ಲಿಂಗ ಅಚ್ಚುಗೊಳಿಸುವಿಕೆ ಜೈವಿಕವಾಗಿ ಪ್ರಭಾವಿತವಾದುದು ಎಂಬುದಕ್ಕಿಂತ ಸಾಮಾಜಿಕವಾಗಿ ಪ್ರಭಾವಿತವಾದುದೆಂದು ಅರ್ಥಮಾಡಿಕೊಳ್ಳಬಹುದು.

ಬಾಲ್ಯದ ಅಂತ್ಯದ ವೇಳೆಗೆ ಮಗುವನ್ನು ಅನ್ಯಲಿಂಗದವರು ಸಾಕಿದಾಗ ಆ ಮಗು ಅನೇಕ ರೀತಿಗಳಲ್ಲಿ ಲಿಂಗಪಡಿಯಚ್ಚಾಗದೆ ಬೆಳೆಯುವುದು. ಅಂದರೆ ಗಂಡು ಹುಡುಗರು ತಾಯಿಯ ಪಾತ್ರದಿಂದ ಪ್ರಭಾವಿತರಾಗಿದ್ದರೆ ಅವರು ಭಾವಾತ್ಮಕ ಅಥವಾ ಸೌಮ್ಯಗುಣ ಲಕ್ಷಣಗಳನ್ನು ಬೆಳೆಸಿಕೊಳ್ಳುತ್ತಾರೆ. ಹೀಗೆ ಹುಡುಗರು ಮತ್ತು ಹುಡುಗಿಯರು ಅಡ್ಡ–ಲಿಂಗ ವಿಧ (Cross Gender Type) ದವರಾಗಿದ್ದು ಲಿಂಗಪಡಿಯಚ್ಚು ರಹಿತರಾಗಿಯೂ ಬೆಳೆಯುತ್ತಾರೆ.

ಹದಿಹರೆಯದವರ ಲಿಂಗತ್ವ ಗ್ರಹಿಕೆಯ ಕುರಿತ ಸಮಕಾಲೀನ ಅಧ್ಯಯನಗಳು ಕಡಿಮೆ, ಅದರಲ್ಲೂ ಭಾರತದಲ್ಲಿ ಈ ಕುರಿತ ಅಧ್ಯಯನಗಳ ಕೊರತೆ ಬಹಳವಾಗಿದ್ದು ಅದನ್ನು ನಾವು ತುಂಬಬೇಕಾಗಿದೆ

**ಹದಿಹರಯದವರ ಲಿಂಗತ್ವದ ಅರಿವಿಗೆ ಸಂಬಂಧಿಸಿದ ಕೆಳಗಿನ ಅಂಶಗಳನ್ನು ಗಮನಿಸಬಹುದು:**

1. ಲೈಂಗಿಕ ಪಕ್ವತೆಯ ಕಾಲವು (Puberty) ಶಾರೀರಿಕವಾಗಿ ಲೈಂಗಿಕ ವ್ಯತ್ಯಾಸಗಳನ್ನು ವರ್ಧಿಸುತ್ತದೆ. ಆದ್ದರಿಂದ ಹದಿಹರಯಕ್ಕೆ ಕಾಲಿಟ್ಟ ಹುಡುಗ–ಹುಡುಗಿಯರು ತಮ್ಮ ಬಗ್ಗೆ ಲಿಂಗ ಸಂಬಂಧಿಯಾಗಿಯೇ ಹೆಚ್ಚು ಆಲೋಚನೆ ಮಾಡುತ್ತಿರುತ್ತಾರೆ.

2. ಲೈಂಗಿಕ ಪಕ್ವತೆಯ ಬದಲಾವಣೆಗಳು ಇತರರಿಂದ ಲಿಂಗತ್ವ ಅನ್ವಯದ ಒತ್ತಡವನ್ನು ತರುತ್ತದೆ. ಅದರಲ್ಲೂ ಸಂಪ್ರದಾಯಬದ್ಧ ಲಿಂಗಪಾತಗಳನ್ನು ನಂಬುವವರು, ಹರೆಯದವರು 'ಲಿಂಗ ಸೂಕ್ತವಾದ' ವರ್ತನೆ ಮತ್ತು ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಾರೆ.

3. ಇತರರು ತಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎಂಬುದರ ಕುರಿತಂತೆ ಹದಿಹರೆಯದವರು ಹೆಚ್ಚು ಗಮನವಿಡುತ್ತಾರೆ. ಇದು ಹದಿಹರೆಯದವರನ್ನು ಲಿಂಗ–ಪಾತ್ರ ನಿರೀಕ್ಷೆಗಳಿಗೆ ಪ್ರತಿಕ್ರಿಯಿಸುವಂತೆ ಮಾಡುತ್ತದೆ.

4. ಹದಿಹರೆಯದವರಿಗೆ ಪಕ್ವವಾದ ವೈಯಕ್ತಿಕ ಅನನ್ಯತೆಯನ್ನು ಪಡೆಯುವತ್ತ ಗಮನವಿರುವುದರಿಂದ ಅವರು ಇತರರ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಸ್ವ ಪರಿಕಲ್ಪನೆಗೆ ಹೆಚ್ಚು ಮಹತ್ವ ನೀಡುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಲಿಂಗಾತ್ಮಕ ನಿಯಮಗಳು ಹೆಚ್ಚು ಉದಾರೀಕರಣಗೊಂಡಿವೆ, ಮತ್ತು ಸಮಾಜದಲ್ಲಿ ಸ್ತ್ರೀಯರ ಪಾತ್ರಗಳು ಸಮಾನತೆಯ ತತ್ವಗಳನ್ನು ಆಧರಿಸತೊಡಗಿವೆ. ಹಿಂದಿನ ದಶಕಗಳಿಗಿಂತ ಈಚೆಗೆ ಮಹಿಳೆಯರು ಹೆಚ್ಚು ಉನ್ನತ ಶಿಕ್ಷಣ ಪಡೆದವರಾಗಿದ್ದಾರೆ. ಈಗ ವೈವಿಧ್ಯದ ವೃತ್ತಿಗಳಲ್ಲಿ ಮಹಿಳೆಯರಿಗೂ ಹೆಚ್ಚು ಅವಕಾಶಗಳಿವೆ. ಹಿಂದೆ ಅವು ಪುರುಷರ ವೃತ್ತಿಕ್ಷೇತ್ರಗಳೆಂದು ಭಾವಿಸಲಾಗಿತ್ತು. ಹೀಗೆ ಲಿಂಗಪಾತ್ರ ನಿಯಮಗಳು ಅಧಿಕಾರಶಾಹಿಯಾಗುವುದು ಕಡಿಮೆಯಾಗುತ್ತಿವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಲಿಂಗಭೇದವನ್ನು ಮೀರಿದ ವಿದ್ಯಾರ್ಥಿಗಳನ್ನು ತಯಾರುಮಾಡಲು ನೀವು ಎಷ್ಟು ಸಿದ್ಧರಾಗಿರುವಿರಿ ಎಂಬುದನ್ನು ಕಂಡುಕೊಳ್ಳಲು ಕೆಳಗಿನ ಹೇಳಿಕೆಗಳಿಗೆ 'ಸರಿ' ಅಥವಾ 'ತಪ್ಪು' ಎಂಬ ಸೂಚಕಗಳಿಂದ ನಿಮ್ಮ ಅಭಿಪ್ರಾಯಗಳನ್ನು ಗುರುತಿಸಿ. ಈ ಮಾಪನದ ಉತ್ತರಗಳಿಗೆ ನಿಮ್ಮ ಪ್ರತಿಕ್ರಿಯೆಗಳನ್ನು ಹೋಲಿಸಿ ನಿಮ್ಮ ಸಿದ್ಧತೆಯನ್ನು ಗುರುತಿಸಿಕೊಳ್ಳಿ. ಸರಿಯಾದ ಪ್ರತಿ ಅಂಶಕ್ಕೆ '1' ಅಂಕ. ಅಗತ್ಯವಿದ್ದರೆ ನಿಮ್ಮ ತಿಳಿವಳಿಕೆಯನ್ನು ಬದಲಿಸಿಕೊಳ್ಳಿ.

| | **ಹೇಳಿಕೆಗಳು** | **ಸರಿ/ತಪ್ಪು** |
|---|---|---|
| 1 | ಪಡಿಯಚ್ಚುಗಳು ಜನಪ್ರಿಯವಾದವುಗಳಾದ್ದರಿಂದ ಅವು ಸಮರ್ಪಕವೇ | |
| 2 | ಪಡಿಯಚ್ಚು ವರ್ತನೆಗಳ ಸಮರ್ಪಕತೆಯನ್ನು ಪರೀಕ್ಷಿಸಬೇಕು | |
| 3 | ಪಡಿಯಚ್ಚು ವರ್ತನೆಗಳ ಅಗತ್ಯವನ್ನು ಮಕ್ಕಳು ಪ್ರಶ್ನಿಸಿದರೆ ಪ್ರೋತ್ಸಾಹಿಸಬೇಕು | |
| 4 | ಪಡಿಯಚ್ಚು ವರ್ತನೆಗಳು ಕಾಲಕಾಲಕ್ಕೆ ಬದಲಾಗುತ್ತವೆ. | |
| 5 | ವಿದ್ಯಾರ್ಥಿಗಳು ಪಡಿಯಚ್ಚು ವರ್ತನೆಗಳನ್ನು ಮೀರಿದಾಗ ಶಿಕ್ಷಿಸಬೇಕು. | |
| 6 | ಸಾಮಾಜೀಕರಣದ ಹಿನ್ನೆಲೆಯಲ್ಲಿ ಪಡಿಯಚ್ಚುಗಳು ಸ್ವಾಗತಾರ್ಹ | |
| 7 | ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಲಿಂಗ ಪಡಿಯಚ್ಚುಗಳನ್ನು ಪ್ರಶ್ನಿಸಬೇಕು | |
| 8 | ಶಾಲೆಗಳು ಲಿಂಗ ಪಡಿಯಚ್ಚುಗಳನ್ನು ಸಡಿಲಿಸಲು ಪ್ರಯತ್ನಿಸಬೇಕು | |
| 9 | ಲಿಂಗ ವ್ಯತ್ಯಾಸಗಳಿರುವುದರಿಂದ ವರ್ತನೆಯಲ್ಲೂ ವ್ಯತ್ಯಾಸವಿರಬೇಕಾದುದು ಸಹಜವೇ. | |
| 10 | ಇತರರಿಂದ ಸ್ವೀಕೃತವಾಗುವ ನಿಟ್ಟಿನಲ್ಲಿ ಲಿಂಗ ಪಡಿಯಚ್ಚುಗಳನ್ನು ಅನುಸರಿಸಬೇಕು | |
| 11 | ಲಿಂಗ ಪಡಿಯಚ್ಚುಗಳನ್ನು ಅತಿ ಶೀಘ್ರವಾಗಿ ಹೋಗಲಾಡಿಸಬಹುದು | |
| 12 | ಲಿಂಗ ಪಡಿಯಚ್ಚುಗಳಿದ್ದಾಗ್ಯೂ ಸಮಾನತೆಯ ಸಮಾಜವನ್ನು ಕಟ್ಟಬಹುದು | |
| 13 | ಲಿಂಗ ಪಡಿಯಚ್ಚುಗಳು ಅತ್ಯಂತ ಧನಾತ್ಮಕವಾದ ನೆಲೆಯಲ್ಲಿ ಬೆಳೆದುಬಂದಿವೆ. | |
| 14 | ಲಿಂಗ ಪಡಿಯಚ್ಚುಗಳನ್ನು ಪೋಷಿಸುವ ಬಹುಮಾಧ್ಯಮವನ್ನು ಪ್ರೋತ್ಸಾಹಿಸಬೇಕು | |
| 15 | ಲಿಂಗ ಪಡಿಯಚ್ಚುಗಳ ಅರಿವು ಲಿಂಗ ಅನನ್ಯತೆಯನ್ನು ಗುರುತಿಸಿಕೊಳ್ಳಲು ಸಹಾಯಕವಾಗುತ್ತದೆ. | |

## 4.4.3.3. ಲಿಂಗ ಅನನ್ಯತೆ (Gender Identity)

ವ್ಯಕ್ತಿಗೆ ತಾನು ಪುರುಷ ಅಥವಾ ಸ್ತ್ರೀ (ಅಥವಾ ಎರಡೂ ಅಥವಾ ಎರಡೂ ಅಲ್ಲದುದು) ಎಂಬ ಲಿಂಗದ ಅರಿವನ್ನು ಕುರಿತಂತೆ ಇರುವ ವೈಯಕ್ತಿಕ ಅರಿವು ಲಿಂಗ ಅನನ್ಯತೆ. ಹುಟ್ಟುವಾಗ ಕೊಟ್ಟ ಲಿಂಗಕ್ಕೆ ಇದು ಸಮನಾಗಿರಬಹುದು ಇಲ್ಲದಿರಬಹುದು. ಎಲ್ಲ ಸಮಾಜಗಳೂ ವ್ಯಕ್ತಿಗೆ ಸಮಾಜದ ಇತರ ಸದಸ್ಯರಿಗೆ ಸಂಬಂಧಿಸಿದ ಸಾಮಾಜಿಕ ಅನನ್ಯತೆಯನ್ನು ರೂಪಿಸಿಕೊಳ್ಳುವಲ್ಲಿ ಆಧಾರವಾಗುವ ಲಿಂಗವರ್ಗಗಳನ್ನು ಹೊಂದಿರುತ್ತವೆ. ಬಹಳಷ್ಟು ಸಮಾಜಗಳಲ್ಲಿ ಸ್ತ್ರೀಯರಿಗೆ ಮತ್ತು ಪುರುಷರಿಗೆ ಭಿನ್ನವಾದ ಲಿಂಗ ಲಕ್ಷಣಗಳಿರುತ್ತವೆ. ಇವುಗಳಿಗೆ ಸಮಾಜದ ಬಹುಪಾಲು ಮಂದಿ ಬದ್ಧರಾಗಿರುತ್ತಾರೆ. ಈ ಬದ್ಧತೆಯ ಮಟ್ಟದಲ್ಲಿ ವ್ಯತ್ಯಾಸಗಳಿರಬಹುದು.

ಲಿಂಗ ಅನನ್ಯತೆಯ ಪರಿಕಲ್ಪನೆಯು ಲಿಂಗಪಾತ್ರದ ಪರಿಕಲ್ಪನೆಗೆ ನಿಕಟವಾಗಿ ಸಂಬಂಧಿಸಿದೆ. ಲಿಂಗ ಅನನ್ಯತೆಯನ್ನು ಬಿಂಬಿಸುವ, ವ್ಯಕ್ತಿತ್ವದ ಬಾಹ್ಯ ಅಭಿವ್ಯಕ್ತಿಯೇ ಲಿಂಗಪಾತ್ರ. ಈ ಲಿಂಗ ಅನನ್ಯತೆಯು ಜನ್ಮಜಾತವಾದ ಮತ್ತು ಪರಿಸರದ ಅಂಶಗಳ ಒಟ್ಟು ಪರಿಣಾಮದಿಂದಾಗಿ ವ್ಯಕ್ತಿಯು ತಾನಾಗಿ ಗುರುತಿಸಿಕೊಂಡಿರುವಂತಹುದು. ಇದು ಸಮಾಜದಲ್ಲಿ ವರ್ತನೆ ಅಥವಾ ನೋಡುವಿಕೆಗೆ ನೇರವಾಗಿ ಸಿಗುವ ಅಂಶಗಳಿಂದ ಪ್ರಕಟಗೊಳ್ಳುವಂತಹುದು. ಉದಾಹರಣೆಗೆ, ಒಬ್ಬ ವ್ಯಕ್ತಿ ತನ್ನನ್ನು 'ಪುರುಷ' ಎಂದು ಪರಿಗಣಿಸಿ, ಅವನನ್ನು ಹಾಗೆಯೇ ಸಂಬೋಧಿಸಬೇಕೆಂದು ಇಚ್ಛಿಸಿದರೆ ಅವನ ಲಿಂಗ ಅನನ್ಯತೆ 'ಪುರುಷ' ಎಂಬುದಾಗಿರುತ್ತದೆ. ಆದರೂ ಅವನ ವರ್ತನೆ, ಉಡುಪು ಮತ್ತು ನಡೆವಳಿಕೆಗಳಲ್ಲಿ ಪುರುಷ ನಿರ್ದಿಷ್ಟ ಗುಣಲಕ್ಷಣಗಳನ್ನು ತೋರಿಸಿದರೆ ಮಾತ್ರ ಅವನನ್ನು 'ಪುರುಷ' ಎಂದು ಸ್ವೀಕರಿಸಲಾಗುತ್ತದೆ. ಹೀಗಾಗಿ, ಲಿಂಗ ಪಾತ್ರ ಎಂಬುದು ಲಿಂಗ ಅನನ್ಯತೆಯ ಬಾಹ್ಯ ಅಭಿವ್ಯಕ್ತಿ. ಆದರೆ ಯಾವಾಗಲೂ ಹಾಗೆಯೇ ಆಗಿರಬೇಕೆಂದೇನೂ ಇಲ್ಲ. ಹಲವಾರು ವ್ಯಕ್ತಿಗಳಲ್ಲಿ ಲಿಂಗ ಅನನ್ಯತೆ ಮತ್ತು ಲಿಂಗ ಪಾತ್ರಗಳು ಸಮಾನವಾಗಿರುತ್ತವೆ. ಬೆಳೆಯುತ್ತಿರುವ ಮಗುವಿನಲ್ಲಿ ಈ ಅಂಶಗಳ ಸಮಾನತೆ ಇದೆಯೇ ಎಂದು ಕಂಡುಹಿಡಿಯುವುದು ಮುಖ್ಯವಾಗುತ್ತದೆ. ಇದಲ್ಲದೆ ವ್ಯಕ್ತಿಯ ಲಿಂಗಪಾತ್ರದ ಅಭಿವ್ಯಕ್ತಿಯ ಸುತ್ತ ಇರುವ ಸಾಂಸ್ಕೃತಿಕ ವ್ಯತ್ಯಾಸಗಳನ್ನು ಗಮನಿಸಿಕೊಳ್ಳುವುದೂ ಮುಖ್ಯವಾಗುತ್ತದೆ. ಏಕೆಂದರೆ ಈ ವ್ಯತ್ಯಾಸಗಳು ಲಿಂಗ ಭಿನ್ನವಾದ ವರ್ತನೆಗಳಿಗೆ ಎಡೆಕೊಡಬಹುದಾಗಿದೆ. ಕೆಲವು ಸಮಾಜಗಳಲ್ಲಿ ಅಂತಹ ಸೂಕ್ಷ್ಮ ವ್ಯತ್ಯಾಸಗಳು ಲಿಂಗ ಅನನ್ಯತೆಯ ವ್ಯಾಖ್ಯೆಯಲ್ಲಿ ಪಾತ್ರವಹಿಸುತ್ತವೆ.

ಲಿಂಗ ಅನನ್ಯತೆ ಎಂಬುದನ್ನು ಎಲ್ಲ ವ್ಯಕ್ತಿಗಳಲ್ಲೂ ಗುರುತಿಸಲಾಗುತ್ತದೆ ಮತ್ತು ವ್ಯಕ್ತಿಯ ಮಾನಸಿಕ ವಿಕಾಸದಲ್ಲಿ ಇದು ಬಹಳ ಪ್ರಮುಖವಾದದು.

ಲಿಂಗ ಅನನ್ಯತೆಗೆ ಸಂಬಂಧಿಸಿದಂತೆ ಕೆಳಗಿನ ಪದಗಳನ್ನು ಗಮನಿಸಿಕೊಳ್ಳಬೇಕು.

**ಲಿಂಗ ಅನನುಸರಣೆ: (Gender variant)**: ಸಮಾಜ ವಿಧಿಸುವಂತೆ ಲಿಂಗಪಾತ್ರವನ್ನು ಅನುಸರಿಸದಿರುವವ.

**ಲಿಂಗ ಅಭಿವ್ಯಕ್ತಿ (Gender expression)** : ವ್ಯಕ್ತಿ ಅಲಂಕರಿಸಿಕೊಳ್ಳುವುದಕ್ಕೆ /ಉಡುಪು ಧರಿಸುವುದಕ್ಕೆ ಆ ಮೂಲಕ ಕಾಣಿಸಿಕೊಳ್ಳುವ ರೀತಿಗೆ ಸಂಬಂಧಿಸಿದುದು. ಜನನ ಲಿಂಗವೇ ಬೇರೆಯಾಗಿದ್ದು ಕಾಣಿಸಿಕೊಳ್ಳಬೇಕೆನಿಸುವ ಲಿಂಗವೇ ಬೇರೆಯಾಗಿದ್ದು ಅದು ವ್ಯಕ್ತಿಗೆ ಸಮಾಧಾನಕರ ಅನುಭವವನ್ನೇ ಕೊಡಬಹುದು.

**ವಿಲಕ್ಷಣ ಲಿಂಗಿ (Genderqueer)** : ಗಂಡೂ ಅಲ್ಲದ ಹೆಣ್ಣೂ ಅಲ್ಲದ ಅಥವಾ ಮಿಶ್ರಲಿಂಗ ಅನನ್ಯತೆಯುಳ್ಳವರು

**ತ್ರಿ ಲಿಂಗಿಗಳು(Transgender)** : ತಮ್ಮದಲ್ಲದ ಲಿಂಗದವರೊಡನೆ ಗುರುತಿಸಿಕೊಳ್ಳುವವರು ಅಥವಾ ಸಂಪೂರ್ಣವಾಗಿ ಗಂಡು ಅಥವಾ ಹೆಣ್ಣು ಎಂಬ ಅನುಭವವಿಲ್ಲದವರು. ವೈಯಕ್ತಿಕ ಅನನ್ಯತೆ ಮತ್ತು ಲಿಂಗತ್ವಗಳು ಜನನ ಲಿಂಗದೊಂದಿಗೆ ಹೊಂದಿಕೆಯಾಗದಿರುವುದು.

**ಪರಲೈಂಗಿಕತೆ (Trans sexual):** ಶಾಶ್ವತವಾಗಿ ಭಿನ್ನಲಿಂಗಿಗಳಂತೆ ಗುರುತಿಸಿಕೊಳ್ಳುವುದು ಮತ್ತು ಆ ಲಿಂಗದ ಬಾಹ್ಯ ಲಕ್ಷಣಗಳನ್ನು ಪ್ರದರ್ಶಿಸುವುದು. ದೇಹದ ಅಂಗಗಳನ್ನು ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಾ ವಿಧಾನಗಳ ಮೂಲಕ ಭಿನ್ನ ಲಿಂಗಕ್ಕೆ ಪರಿವರ್ತಿಸಿಕೊಂಡವರಿಗೂ ಇದು ಅನ್ವಯಿಸುತ್ತದೆ.

**ಲಿಂಗ ದೃಢೀಕರಣ(Gender affirmation ):** ಭಿನ್ನ ಲಿಂಗಿಗಳಾಗಿ ಬದಲಾಗುವ ನಿರ್ಧಾರ ಮಾಡುವುದು, ಮತ್ತು ಸಾರ್ವಜನಿಕವಾಗಿ ಬದಲಾವಣೆಗಳನ್ನು ಪ್ರದರ್ಶಿಸುವದು. ಉದಾಹರಣೆಗೆ ಹೆಸರು ಬದಲಾಯಿಸುವುದು ಇತ್ಯಾದಿ.

ಇತ್ತೀಚಿನ ವರ್ಷಗಳಲ್ಲಿ ಲಿಂಗಾತ್ಮಕ ನಿಯಮಗಳು ಹೆಚ್ಚು ಉದಾರೀಕರಣಗೊಂಡಿವೆ, ಮತ್ತು ಸಮಾಜದಲ್ಲಿ ಸ್ತ್ರೀಯರ ಪಾತ್ರಗಳು ಸಮಾನತೆಯ ತತ್ವಗಳ ಆಧಾರದ ಮೇಲೆ ನೆಲೆಗೊಳ್ಳತೊಡಗಿವೆ. ಹಿಂದಿನ ದಶಕಗಳಿಗಿಂತ ಮಹಿಳೆಯರು ಹೆಚ್ಚು ಉನ್ನತಶಿಕ್ಷಣ ಪಡೆದವರಾಗಿದ್ದಾರೆ ಅವರಿಗೆ ಹೆಚ್ಚು ಉದ್ಯೋಗಾವಕಾಶಗಳಿವೆ. ಹಿಂದೆ ಪುರುಷರ ವೃತ್ತಿಕ್ಷೇತ್ರಗಳೆಂದು ಭಾವಿಸಲಾಗಿದ್ದ ವೃತ್ತಿಗಳಲ್ಲಿ ಮಹಿಳೆಯರು ಯಶಸ್ವಿಯಾಗುತ್ತಿದ್ದಾರೆ. ಹೀಗೆ ಲಿಂಗ ಪಾತ್ರ ನಿಯಮಗಳು ಅಧಿಕಾರಶಾಹಿಯಾಗುವುದು ಕಡಿಮೆಯಾಗುತ್ತಿವೆ.

ನೀವು ಹಿಂದಿನ ಬ್ಲಾಕ್‌ನಲ್ಲಿ ತಿಳಿದಿರುವಂತೆ ತಾರುಣ್ಯದಲ್ಲಿ ಇರುವವರು ಉತ್ತಮವಾಗಿ ವ್ಯವಸ್ಥಿತವಾದ ಸ್ವಯಂ ವರ್ಣನೆಯನ್ನು ಮಾಡಬಲ್ಲರು ಮತ್ತು ಅವರಲ್ಲಿ ಸ್ವಯಂ ಗೌರವವೂ ಹೆಚ್ಚು. ಇದು ಅವರಲ್ಲಿ 'ಅನನ್ಯತೆ'ಯನ್ನು ರೂಪಿಸಿಕೊಳ್ಳಲು ಸಂಜ್ಞಾನಾತ್ಮಕ ಅಡಿಗಲ್ಲಾಗುತ್ತದೆ, ಎನ್ನುತ್ತಾನೆ ಎರಿಕ್ ಎರಿಕ್‌ಸನ್. ಹದಿಹರೆಯದವರು ವ್ಯಕ್ತಿತ್ವ ಗುಣಲಕ್ಷಣಗಳ ಮಾಪನಿಯನ್ನು ತಮ್ಮ ಮೇಲೆ ಪ್ರಯೋಗಿಸಿಕೊಂಡು ತಮ್ಮಲ್ಲಿನ 'ಲಿಂಗ ಅನನ್ಯತೆ'ಯನ್ನು ತಿಳಿದುಕೊಳ್ಳಬಹುದೆಂದು ನೀವು ತಿಳಿದಿರುವಿರಿ. ಹದಿಹರೆಯದವರಿಗೆ ಸಾಂಪ್ರದಾಯಿಕವಾಗಿ ಪುರುಷ ಲಕ್ಷಣಗಳಾದ ಮಹತ್ವಾಕಾಂಕ್ಷೆ, ಸ್ಪರ್ಧಾತ್ಮಕತೆ ಮತ್ತ ಸ್ವಸಂಪೂರ್ಣತೆ ಇತ್ಯಾದಿಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು, ಸಾಂಪ್ರದಾಯಿಕವಾಗಿ ಸ್ತ್ರೀ ಲಕ್ಷಣಗಳಾದ ವಾತ್ಸಲ್ಯ ಪ್ರಸನ್ನತೆ, ಮತ್ತು ಮೃದುಭಾಷಿತ್ವ ಇವುಗಳಲ್ಲಿ ಕಡಿಮೆ ಅಂಕಗಳು ಸಿಕ್ಕರೆ ಪುರುಷ ಅನನ್ಯತೆಯನ್ನೂ ಅದಕ್ಕೆ ವಿರುದ್ಧವಾಗಿ ಅಂಕಪಡೆದರೆ ಸ್ತ್ರೀ ಅನನ್ಯತೆಯನ್ನೂ ಗುರುತಿಸಿಕೊಳ್ಳುತ್ತಾರೆ. ಪುರುಷ ಮತ್ತು ಸ್ತ್ರೀತ್ವ ವ್ಯಕ್ತಿತ್ವ ಗುಣಲಕ್ಷಣಗಳ ಎರಡೂ ಪಟ್ಟಿಗಳಲ್ಲಿ ಹೆಚ್ಚು ಅಂಕ ಪಡೆದರೆ ಅಂತವರನ್ನು 'ಉಭಯಲಿಂಗಿ'ಗಳು (Androgyny) ಎನ್ನುತ್ತಾರೆ. ಇದು ಮಾನಸಿಕ ಸಮಾಯೋಜನೆಯ ಉತ್ತಮ ಸೂಚಕವಾಗಿದೆ. ಮನಶಾಸ್ತ್ರಜ್ಞರ ಪ್ರಕಾರ, ಪುರುಷ ಗುಣಗಳು ಮತ್ತು ಉಭಯಲಿಂಗಿ ಸ್ವರೂಪದ ಹರೆಯದ ಹುಡುಗ ಮತ್ತು ಹರೆಯದ ಹುಡುಗಿಯರು ಸ್ತ್ರೀಗುಣಗಳನ್ನು ಹೊಂದಿದವರಿಗಿಂತ ಹೆಚ್ಚಿನ ಪ್ರಮಾಣದ ಸ್ವಗೌರವವನ್ನು ಹೊಂದಿರುತ್ತಾರೆ. ಇವರು ಪುರುಷ ಸ್ವಾತಂತ್ರ್ಯ ಮತ್ತು ಸ್ತ್ರೀತ್ವದ ಕೋಮಲತೆಯನ್ನು ಸಂದರ್ಭಕ್ಕೆ ತಕ್ಕಂತೆ ತೋರಬಲ್ಲರು.

ಲಿಂಗ ಪಡಿಯಚ್ಚುಗಳನ್ನು ಬಳಸಲು ಕಾರಣಗಳೇನು? ಅಧ್ಯಯನಗಳು ಕೆಳಕಂಡ ಅಂಶಗಳನ್ನು ಗುರುತಿಸಿವೆ.

- ಹೆಚ್ಚು ಸಮರ್ಪಕವಾದ ವರ್ತನೆಗಳು ಯಾವುದು ಎಂದು ನಿರ್ಧರಿಸಲಾಗದುದರಿಂದ
- ಸಮಾಜದಲ್ಲಿ ಸ್ಥಾನ ಪಡೆದು ವೈಯಕ್ತಿಕ ಉದ್ದೇಶ ಸಾಧಿಸಿಕೊಳ್ಳುವ ಕಾರಣ
- ಅವುಗಳ ಅನುಸರಣೆಯಿಂದ ತಮ್ಮನ್ನು ತಾವೇ ಧನಾತ್ಮಕವಾಗಿ ಗುರುತಿಸಿಕೊಳ್ಳಲು ಸಾಧ್ಯವಿರುವುದರಿಂದ
- ಅದನ್ನು ಅನುಸರಿಸದಿದ್ದರೆ ಆಗುವ ನೇತ್ಯಾತ್ಮಕ ಪರಿಣಾಮಗಳು ತಿಳಿದಿರುವುದರಿಂದ
- ತಿರಸ್ಕಾರಗಳನ್ನು ನಿವಾರಿಸಿ ಒಪ್ಪಿಗೆ ಅಥವಾ ಮಾನ್ಯತೆಯನ್ನುಗಳಿಸಲು ಸಾಧ್ಯವಾಗುವುದರಿಂದ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಈ ಕೆಳಗಿನವುಗಳನ್ನು ಲಿಂಗ ಪಡಿಯಚ್ಚಾದ ಮತ್ತು ಲಿಂಗ ಪಡಿಯಚ್ಚುಗಳಲ್ಲದ ಹೇಳಿಕೆಗಳಾಗಿ ಬೇರ್ಪಡಿಸಿ

1) ಹೆಂಗಸರು ಸಾಮಾನ್ಯವಾಗಿ ಗಂಡಸರಷ್ಟು ಸ್ಮಾರ್ಟ್ ಅಲ್ಲ

2) ಹದಿಹರೆಯದ ಹುಡುಗರು ಮತ್ತು ಹುಡುಗಿಯರಿಗೆ ಸಾಧನೆಗೈಯಲು ಸಮಾನ ಅವಕಾಶಗಳು ಇವೆ.

3) ತರುಣ ಹುಡುಗಿಯರು ತಾರ್ಕಿಕವಾಗಿ ಚಿಂತನೆ ಮಾಡಲು ಸಮರ್ಥರಲ್ಲ

4) ತಂದೆ ತಾಯಿಗಳಿಬ್ಬರೂ ಉದ್ಯೋಗಿಗಳಾಗಿದ್ದಾಗ ಮತ್ತು ಅವರ ಮಗ/ಮಗಳು ಶಾಲೆಯಲ್ಲಿ ಅನಾರೋಗ್ಯಕ್ಕೆ ಒಳಗಾದರೆ ತಂದೆ ಅಥವಾ ತಾಯಿಯನ್ನು ಕರೆಸಬೇಕು

5) ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಉನ್ನತ ವ್ಯಾಸಂಗ ಕೈಗೊಳ್ಳಲು ಹುಡುಗರನ್ನು ಮತ್ತು ಹುಡುಗಿಯರನ್ನು ಪ್ರೋತ್ಸಾಹಿಸಬೇಕು.

## 4.4.4. ಸಾರಾಂಶಿಸೋಣ

- ಒಂದು ಲಿಂಗವಿಧಕ್ಕೆ ನಿರ್ದಿಷ್ಟವಾಗಿರುವ ಚಿಂತನೆಗಳನ್ನು, ಭಾವನೆಗಳನ್ನು ಮತ್ತು ಚಟುವಟಿಕೆಗಳನ್ನು ಅನ್ವಯಿಸಿಕೊಳ್ಳುವ ಪ್ರಕ್ರಿಯೆಗೆ ಲಿಂಗಅಚ್ಚುಗೊಳಿಸುವಿಕೆ ಎನ್ನುವರು.
- ಲಿಂಗ ಅಚ್ಚುಗಳು ವ್ಯಕ್ತಿತ್ವ ಗುಣಲಕ್ಷಣಗಳು, ಭೌತಿಕ ಗುಣಲಕ್ಷಣಗಳು ಮತ್ತು ಚಟುವಟಿಕೆಗಳ ರೂಪದಲ್ಲಿರುತ್ತವೆ.
- ಸಮಾಜದಲ್ಲಿ ನಿರ್ದಿಷ್ಟ ಲಿಂಗಪಾತ್ರಗಳನ್ನು ನಿರ್ವಹಿಸಲು ಲಿಂಗಅಚ್ಚುಗಳು ವ್ಯಕ್ತಿಯನ್ನು ಪ್ರಭಾವಿಸುತ್ತವೆ.
- ಗಂಡಸರಿಗೆ ಮತ್ತು ಹೆಂಗಸರಿಗಾಗಿಯೇ ಎಂದು ನಿರ್ಧರಿಸಲಾದ ಗುಣಲಕ್ಷಣಗಳ ಬಗ್ಗೆ ವ್ಯಾಪಕವಾಗಿ ರೂಢಿಯಲ್ಲಿರುವ ನಂಬಿಕೆಗಳೇ ಲಿಂಗಪಡಿಯಚ್ಚುಗಳು
- ಶಾಲಾ ಪೂರ್ವ ಹಂತದಲ್ಲಿಯೇ ಲಿಂಗ ಪಡಿಯಚ್ಚುಗಳನ್ನು ಮಕ್ಕಳು ಕಲಿತಿರುತ್ತಾರೆ.
- ಮಧ್ಯಬಾಲ್ಯಾವಸ್ಥೆಯ ಹಂತದ ವೇಳೆಗೆ ಮಕ್ಕಳು ಮಾನವ ವರ್ತನೆಯ ಎಲ್ಲ ಅಂಶಗಳಿಗೆ (ಆಟಗಳು, ವೃತ್ತಿಗಳು, ಅಧ್ಯಯನ ವಿಷಯಗಳು ಇತ್ಯಾದಿ) ಸಂಬಂಧಿಸಿದ ಪಡಿಯಚ್ಚುಗಳನ್ನು ತಿಳಿದಿರುತ್ತಾರೆ.
- ಹುಡುಗಿಯರಿಗಿಂತ ಹುಡುಗರಿಗೆ ಹೆಚ್ಚು ಕಠೋರವಾದ ಪಡಿಯಚ್ಚುಗಳಿರುತ್ತವೆ.
- ತಾರುಣ್ಯದ ಆರಂಭದಲ್ಲಿಯೇ ಲಿಂಗಪಡಿಯಚ್ಚುಗಳು ತೀವ್ರವಾಗಿ ಮೂಡುತ್ತಿದ್ದರೂ ನಂತರ ಅವರು ಪಕ್ವವಾದ ಸ್ವಯಂ ಅನನ್ಯತೆಯನ್ನು ಸಂರಚಿಸಿಕೊಳ್ಳುತ್ತಾರೆ ಮತ್ತು ಲಿಂಗ ಪಡಿಯಚ್ಚುಗಳಲ್ಲಿ ನಮ್ಯತೆಯನ್ನು ಅಳವಡಿಸಿಕೊಳ್ಳುತ್ತಾರೆ.
- ಲಿಂಗ ಅನನ್ಯತೆಯು ತನ್ನನ್ನು ಗಂಡಸು ಅಥವಾ ಹೆಂಗಸು ಎಂಬ ಗುಣಲಕ್ಷಣಗಳಲ್ಲಿ ಗುರುತಿಸಿಕೊಳ್ಳುವುದಾಗಿದೆ.

## 4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1–ಆ 2–ಇ, ಉ, 3–ಅ, ಈ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ತಪ್ಪು, 2. ಸರಿ, 3. ಸರಿ, 4. ಸರಿ, 5. ತಪ್ಪು, 6. ತಪ್ಪು, 7. ಸರಿ, 8. ಸರಿ, 9. ತಪ್ಪು, 10. ತಪ್ಪು, 11. ತಪ್ಪು, 12. ತಪ್ಪು, 13. ತಪ್ಪು, 14. ತಪ್ಪು, 15 ತಪ್ಪು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1, 3 – ಅಲ್ಲ

2,4,5– ಹೌದು

## 4.4.6. ಘಟಕಾಂತ್ಯ ಪ್ರಶ್ನೆಗಳು

1. ಲಿಂಗ ಅಚ್ಚುಗೊಳಿಸುವಿಕೆ ಪರಿಕಲ್ಪನೆಯನ್ನು ಉದಾಹರಣೆಗಳೊಂದಿಗೆ ವಿವರಿಸಿ
2. ಲಿಂಗ ಪಡಿಯಚ್ಚುಗಳು ಏಕೆ ಮತ್ತು ಹೇಗೆ ಹುಡುಗಿಯರು ಮತ್ತು ಹುಡುಗರು ಲಿಂಗಾತ್ಮಕ ಪಾತ್ರಗಳನ್ನು ಅಳವಡಿಸಿಕೊಳ್ಳುವಂತೆ ಮಾಡುತ್ತವೆ ಎಂಬುದನ್ನು ವಿವರಿಸಿ
3. ಲಿಂಗ ಪಡಿಯಚ್ಚುಗಳೆಂದರೇನೆಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ. ಹದಿಹರೆಯದ ಹುಡುಗರು ಮತ್ತು ಹುಡುಗಿಯರು ಲಿಂಗ ಪಡಿಯಚ್ಚುಗಳ ನಮ್ಯತೆ ಹೊಂದಲು ಹೇಗೆ ಸಹಾಯ ಮಾಡುರೆಂಬುದನ್ನು ವಿವರಿಸಿ?
4. 'ಲಿಂಗ ಅನನ್ಯತೆ' ಎಂದರೇನು ಇವುಗಳ ನಿಹಿತಾರ್ಥಗಳನ್ನು ಗುರುತಿಸಿ
5. ಹುಡುಗಿಯರು ಮತ್ತು ಹುಡುಗರು ಲಿಂಗ ಪಡಿಯಚ್ಚುಗಳ ಲಕ್ಷಣಗಳಲ್ಲಿ ಹೇಗೆ ಭಿನ್ನರಾಗಿರುತ್ತಾರೆ ವಿಶ್ಲೇಷಿಸಿ

## 4.4.7. ಪರಾಮರ್ಶನ ಗ್ರಂಥಗಳು


1. Laurae Berk : Child Development 8th Edition Eastern Economy Edition PH – New Delhi (2011)
2. John W Santrock : Adolescence 12th Edn.

   TATA – MCGRAW – HILL Edn. New Delhi
3. Gender Equity for Educations, Parents and Community, Education Development Centre, Inc WEEFA Equity, Resource Centre


*********************

# ಬ್ಲಾಕ್ 4 : ಲಿಂಗ ಮತ್ತು ಹದಿಹರೆಯ

## ಘಟಕ 5 : ಭಿನ್ನ ಲಿಂಗದವರ ಲಿಂಗ ಪಡಿಯಚ್ಚುಗಳಲ್ಲಿರುವ ಸಾಮ್ಯತೆಗಳು ಮತ್ತು ಭಿನ್ನತೆಗಳು

### ಘಟಕದ ರಚನೆ


4.5.1. ಕಲಿಕಾ ಉದ್ದೇಶಗಳು

4.5.2. ಪೀಠಿಕೆ

4.5.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.5.3.1. ಲಿಂಗ ಪಡಿಯಚ್ಚುಗಳಲ್ಲಿ ಶಾರೀರಿಕ ಸಾಮ್ಯತೆಗಳು ಮತ್ತು ಭಿನ್ನತೆಗಳು, ಸಾಮಾಜಿಕ ಸಾಮ್ಯತೆಗಳು ಮತ್ತು ಭಿನ್ನತೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

4.5.3.2. ಲಿಂಗ ಪಡಿಯಚ್ಚುಗಳಲ್ಲಿ ಸಂಜ್ಞಾನಾತ್ಮಕ ಸಾಮ್ಯತೆಗಳು ಮತ್ತು ಭಿನ್ನತೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

4.5.4. ಸಾರಾಂಶಿಸೋಣ

4.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

4.5.6. ಘಟಕಾಂತ್ಯ ಅಭ್ಯಾಸಗಳು

4.5.7. ಪರಾಮರ್ಶನ ಸೂಚಿ


### 4.5.2. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಹುಡುಗರ ಮತ್ತು ಹುಡುಗಿಯರ ಲಿಂಗಪಡಿಯಚ್ಚುಗಳನ್ನು ವಿವರಿಸುವರು;
- ಭಿನ್ನ ಲಿಂಗದಲ್ಲಿರುವ ಭೌತಿಕ ವ್ಯತ್ಯಾಸಗಳನ್ನು ಪಟ್ಟಿ ಮಾಡುವರು;
- ಸಂವಹನ ವಿಧಗಳೂ ಸೇರಿದಂತೆ ಸಾಮಾಜಿಕ ವ್ಯತ್ಯಾಸಗಳನ್ನು ಗುರುತಿಸುವರು;
- ಶಾಬ್ದಿಕ, ಗಣಿತ ಮತ್ತು ಸ್ಥಳಾವಕಾಶ ಸಂಬಂಧಿ ಸಾಮರ್ಥ್ಯಗಳಲ್ಲಿ ಸಂಜ್ಞಾನಾತ್ಮಕ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ವಿವರಿಸುವರು;
- ಹುಡುಗರ ಮತ್ತು ಹುಡುಗಿಯರ ವಿದ್ಯಾಭ್ಯಾಸ ವಿಚಾರಗಳಲ್ಲಿ ಹೇಗೆ ಸಂಜ್ಞಾನಾತ್ಮಕ ವ್ಯತ್ಯಾಸಗಳು ಬಿಂಬಿಸಿವೆ ಎಂದು ವಿವರಿಸುವರು; ಮತ್ತು
- ಹದಿಹರೆಯದ ಹುಡುಗರ ಮತ್ತು ಹುಡುಗಿಯರ ವ್ಯಕ್ತಿತ್ವ ಗುಣಲಕ್ಷಣಗಳಲ್ಲಿ ಇರುವ ಲಿಂಗ ಪಡಿಯಚ್ಚುಗಳನ್ನು ಚರ್ಚಿಸುವರು.

## 4.5.3. ಪೀಠಿಕೆ

ಲಿಂಗಗಳು ಹೇಗೆ ಭಿನ್ನವಾದವು ಅಥವಾ ಲಿಂಗತ್ವ ಪಾತ್ರ ನಿರ್ವಹಣೆಯಲ್ಲಿ ಅವು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಕುರಿತಂತೆ ಜನರ ನಂಬಿಕೆಗಳೇ ಲಿಂಗ ಪಡಿಯಚ್ಚು ಎಂಬುದನ್ನು ನೀವು ಅರ್ಥಮಾಡಿಕೊಂಡಿದ್ದೀರಿ. ಅಲ್ಲದೆ ಹದಿಹರೆಯದವರು ಹೇಗೆ ಲಿಂಗ ಪಡಿಯಚ್ಚುಗೊಳುಸುವಿಕೆಯಲ್ಲಿ ನಮ್ಯತೆಯನ್ನು ಪ್ರಕಟಪಡಿಸುತ್ತಾರೆ ಎಂಬುದೂ ನಿಮಗೆ ತಿಳಿದಿದೆ. ಈ ಘಟಕದಲ್ಲಿ ಈ ಪಡಿಯಚ್ಚುಗಳು ಗಂಡು ಮತ್ತು ಹೆಣ್ಣಿಗೆ ಹೇಗೆ ಭಿನ್ನವಾಗುತ್ತವೆ ಎಂಬುದನ್ನು ಗಮನಿಸೋಣ.

ಗಂಡಸರ ಹೆಚ್ಚಿನ ಭೌತಿಕ ಸಾಮರ್ಥ್ಯ ಮತ್ತು ಹೆಣ್ಣು ಮಕ್ಕಳ ಜನ್ಮ ನೀಡುವ ಸಾಮರ್ಥ್ಯಗಳಿಗೆ ಹೊರತಾಗಿ ಇಬ್ಬರೂ ಲಿಂಗ ಪಡಿಯಚ್ಚುಗಳಲ್ಲಿ ಸಾಮಾಜಿಕ ಮತ್ತು ಸಂಜ್ಞಾನಾತ್ಮಕ ಸಾಮ್ಯತೆಗಳನ್ನು ಮತ್ತು ಭಿನ್ನತೆಗಳನ್ನು ಹೊಂದಿರುತ್ತಾರೆ. ಆಕ್ರಮಣಶೀಲತೆ ಮತ್ತು ಖಿನ್ನತೆ ಹಾಗೂ ಸಮವಯಸ್ಕರೊಡನೆ ಹೊಂದಿರುವ ಸಂಬಂಧಗಳಿಗೆ ಸಂಬಂಧಿಸಿದ ಸಾಮಾಜಿಕ ಅಂಶಗಳಲ್ಲೂ ಹುಡುಗ ಹುಡುಗಿಯರಲ್ಲಿ ಸಾಮ್ಯತೆಗಳನ್ನು ಮತ್ತು ಭಿನ್ನತೆಗಳನ್ನು ಕಾಣಬಹುದು. ಭಿನ್ನ ಲಿಂಗದವರ ನಡುವೆ ಸಂಜ್ಞಾನಾತ್ಮಕ ಸಾಮ್ಯತೆ ಮತ್ತು ಭಿನ್ನತೆಗಳನ್ನು, ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಸಾಧನೆಗಳ ರೂಪದಲ್ಲಿ ಈ ಘಟಕದಲ್ಲಿ ಚರ್ಚಿಸಾಗಿದೆ. ಅದರಂತೆಯೇ ಶಾಬ್ದಿಕ, ಗಣಿತ ಮತ್ತು ಸ್ಥಳಾವಕಾಶ ಸಂಬಂಧಿ ಸಾಮರ್ಥ್ಯಗಳನ್ನು ಇಲ್ಲಿ ಗಮನಿಸಲಾಗುವುದು. ಘಟಕದ ಕೊನೆಯಲ್ಲಿ ಲಿಂಗ ಪಡಿಯಚ್ಚುಗಳನ್ನು ಹೋಗಲಾಡಿಸುವ ವಿಧಾನಗಳನ್ನು ಆಲೋಚಿಸಲು ಅನುವು ಮಾಡಿಕೊಡಲಾಗುವುದು.

ಅನೇಕ ದಶಕಗಳಿಂದಲೂ ಗಂಡಸರ ಮತ್ತು ಹೆಂಗಸರ ವ್ಯಕ್ತಿತ್ವ ಮತ್ತು ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ಮತ್ತು ಭಿನ್ನತೆಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಸಂಶೋಧಕರು ಮಾನವ ವ್ಯಕ್ತಿತ್ವದ ಎಲ್ಲ ಆಯಾಮಗಳನ್ನು ಗಣನೆಗೆ ತೆಗೆದುಕೊಂಡು ಗಂಡಸರ ಮತ್ತು ಹೆಂಗಸರ ನಡುವಿನ ಸ್ಥಿರವಾದ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಇದರಲ್ಲಿ ಭಿನ್ನ ಲಿಂಗದವರಲ್ಲಿ ಶಾರೀರಿಕ, ಸಾಮಾಜಕ ಮತ್ತು ಜ್ಞಾನಾತ್ಮಕ ವ್ಯತ್ಯಾಸಗಳು ಮತ್ತು ಹೋಲಿಕೆಗಳಾವುವು ಎಂದು ಗಮನಿಸೋಣ.

## 4.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.5.3.1. ಶಾರೀರಿಕ ಮತ್ತು ಸಾಮಾಜಿಕ ಸಾಮ್ಯತೆಗಳು ಮತ್ತು ಭಿನ್ನತೆಗಳು

**ಶಾರೀರಿಕ ಸಾಮ್ಯತೆಗಳು ಮತ್ತು ಭಿನ್ನತೆಗಳು:**

ಈ ಕೆಳಗೆ ತಿಳಿಸಿರುವಂತೆ ಹೆಂಗಸರ ಮತ್ತು ಗಂಡಸರ ನಡುವಿನ ಶಾರೀರಿಕ ವ್ಯತ್ಯಾಸಗಳು ಆರೋಗ್ಯ ವಿಚಾರಗಳನ್ನು ಪ್ರಭಾವಿಸುತ್ತವೆ ಎಂದು ಗುರುತಿಸಲಾಗಿದೆ.

- ಶಾರೀರಿಕ ಅಸ್ವಸ್ಥತೆಯು ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚು ಸಂಭವನೀಯವಾಗಿರುತ್ತದೆ.
- ಹೆಂಗಸರಿಗೆ ಸೋಂಕು ತಡೆದುಕೊಳ್ಳುವ ನಿರೋಧಕ ಶಕ್ತಿ ಹೆಚ್ಚು.
- ರಕ್ತ ಬೇಗನೆ ಹೆಪ್ಪುಗಟ್ಟುವಿಕೆ ಮತ್ತು ಹೆಚ್ಚು ರಕ್ತದೊತ್ತಡಗಳನ್ನು ಉಂಟುಮಾಡುವ ಒತ್ತಡದ ಹಾರ್ಮೋನ್‌ಗಳು ಗಂಡಸರಲ್ಲಿ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ.

ಮಾನವ ಮೆದುಳು ಬಹುತೇಕ ಲಿಂಗಗಳ ನಡುವೆ ಸಾಮ್ಯತೆ ಹೊಂದಿದೆ ಎಂದು ಹೇಳುವುದಾದರೂ ಸಂಶೋಧಕರು ಕೆಲವು ವ್ಯತ್ಯಾಸಗಳನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ:

- ಲೈಂಗಿಕ ವರ್ತನೆಯಲ್ಲಿ ತೊಡಗುವ ಮಸ್ತಿಷ್ಕ ನಿಮ್ನಾಂಗದ(hypothalamus) ಒಂದು ಭಾಗವು ಹೆಂಗಸರಲ್ಲಿರುವುದಕ್ಕಿಂತ ಗಂಡಸರಲ್ಲಿ ದೊಡ್ಡದಾಗಿರುತ್ತದೆ.
- ಮೆದುಳಿನ ಎರಡು ಗೋಲಾರ್ಧಗಳು ಸಂವಹನಗೊಳ್ಳುವ 'ಕಾರ್ಪಸ್ ಕಲೋಸಮ್'(corpus callosum) ನ ಭಾಗಗಳು ಹುಡುಗಿಯರಿಗಿಂತ ಹುಡುಗರಲ್ಲಿ ದೊಡ್ಡದಾಗಿರುತ್ತದೆ.

- ದೃಶ್ಯ–ಸ್ಥಳಾವಕಾಶದ ಕೌಶಲಗಳಲ್ಲಿ ಕಾರ್ಯ ನಿರ್ವಹಿಸುವ ಪರೈಟಲ್ ಲೋಬ್ (Parietal Lobe) ಹುಡುಗರಲ್ಲಿ ಹುಡುಗಿಯರಿಗಿಂತ ದೊಡ್ಡದಾಗಿರುತ್ತದೆ.
- ಭಾವನೆಗಳ ಅಭಿವ್ಯಕ್ತಿಯಲ್ಲಿ ಭಾಗಿಯಾಗುವ ಮೆದುಳಿನ ಕ್ಷೇತ್ರವು ಹುಡುಗಿಯರಲ್ಲಿ ಹುಡುಗರಿಗಿಂತ ಹೆಚ್ಚು ಪರಿವರ್ತನಶೀಲ ಚಟುಚಟಿಕೆಗಳನ್ನು ತೋರಿಸುತ್ತದೆ.

**ಸಾಮಾಜಿಕ ಸಾಮ್ಯತೆಗಳು ಮತ್ತು ಭಿನ್ನತೆಗಳು**

ಹದಿಹರೆಯದವರ ಸಾಮಾಜಿಕ ಮತ್ತು ಭಾವನಾತ್ಮಕ ವರ್ತನೆಗಳಲ್ಲಿನ ಲಿಂಗತ್ವ ಭಿನ್ನತೆಗಳಿಗೆ ಸಂಬಂಧಿಸಿದಂತೆ ಮನಶಾಸ್ತ್ರಜ್ಞರು ಕೆಳಗಿನಂತೆ ಸಾಮಾನ್ಯೀಕರಿಸುತ್ತಾರೆ.

- ಹುಡುಗರು ಹೆಚ್ಚಾಗಿ ಆಕ್ರಮಣ ಮತ್ತು ಕ್ರಿಯಾಶೀಲರು.
- ಸಂಬಂಧಗಳನ್ನು ಬೆಸೆಯುವುದರಲ್ಲಿ ಹೆಣ್ಣು ಹುಡುಗಿಯರು ಪ್ರಬಲವಾದ ಆಸಕ್ತಿ ತೋರುವರು.
- ವರ್ತನೆಗಳನ್ನು ಮತ್ತು ಭಾವನೆಗಳನ್ನು ನಿಯಂತ್ರಿಸಿಕೊಳ್ಳುವುದರಲ್ಲಿ ಹುಡುಗಿಯರು ಹೆಚ್ಚಿನ ಸಾಮರ್ಥ್ಯ ಪ್ರಕಟಪಡಿಸುತ್ತಾರೆ.
- ಇತರರಿಗೆ ಉಪಯುಕ್ತವಾಗಬಹುದೆನಿಸುವ ಸಮಾಜಪರ ಕಾರ್ಯಗಳಲ್ಲಿ ಹುಡುಗಿಯರು ಹೆಚ್ಚು ತೊಡಗಿಸಿಕೊಳ್ಳುತ್ತಾರೆ. ಈ ಅಂಶಗಳ ಕುರಿತು ಹೆಚ್ಚಿನ ವಿವರಗಳನ್ನು ಗಮನಿಸೋಣ.

### 1. ಆಕ್ರಮಣಶೀಲತೆ (Aggression)

ಎಲ್ಲಾ ಸಂಸ್ಕೃತಿಗಳಲ್ಲಿ ಗಮನಿಸಿರುವಂತೆ ಹುಡುಗರು ಹುಡುಗಿಯರಿಗಿಂತ ಹೆಚ್ಚು ಆಕ್ರಮಣಶೀಲರು. ಈ ಅಂಶ ಬಾಲ್ಯದಲ್ಲಿಯೇ ವ್ಯಕ್ತವಾಗುತ್ತದೆ. ಪ್ರಚೋದಿಸಿದಾಗ ಅಥವಾ ಕೆರಳಿಸಿದಾಗ ಮಾತ್ರ ಹುಡುಗರಿಗಿಂತ ಹುಡುಗಿಯರು ಹೆಚ್ಚು ಶಾಬ್ದಿಕ ಆಕ್ರಮಣ ತೋರುವರು. (ಚೀರುವುದು / ಹಾರಾಡುವುದು ಇತ್ಯಾದಿ). ಇತ್ತೀಚೆಗೆ ಸಂಬಂಧಾತ್ಮಕ ಆಕ್ರಮಣ ಎಂಬ ಹೊಸ ರೀತಿಯಲ್ಲಿ ವರ್ತಿಸುವುದು ಕಂಡುಬಂದಿದೆ. ಅಂದರೆ, ಒಬ್ಬ ವ್ಯಕ್ತಿಯ ಬಗ್ಗೆ ಗಾಳಿ ಮಾತು ಹಬ್ಬಿಸಿ ಆ ವ್ಯಕ್ತಿಯನ್ನು ಇತರರು ಇಷ್ಟ ಪಡದಂತೆ ಅಥವಾ ಕೆಟ್ಟದಾಗಿ ನೋಡುವಂತೆ ಮಾಡುವುದು. ಈ ಪ್ರವೃತ್ತಿ ಹುಡುಗಿಯರಲ್ಲಿ ಹೆಚ್ಚು ಎಂದು ಕೆಲವು ಅಧ್ಯಯನಗಳು ಗಮನಿಸಿದರೆ, ಮತ್ತೆ ಕೆಲವು ಅಧ್ಯಯನಗಳ ಪ್ರಕಾರ ಈ ವಿಷಯದಲ್ಲಿ ಹುಡುಗರ ಮತ್ತು ಹುಡುಗಿಯರ ನಡುವೆ ಯಾವುದೇ ವ್ಯತ್ಯಾಸವಿಲ್ಲ.

### 2. ಸಂವಹನದಲ್ಲಿರುವ ಸಂಬಂಧಗಳು

ಟ್ಯಾನನ್ ಎಂಬ ಲಿಂಗತ್ವತಜ್ಞನ ಪ್ರಕಾರ ಹುಡುಗಿಯರು ಹುಡುಗರಿಗಿಂತ ಸಂಬಂಧ ಬೆಸೆಯುವ ಪ್ರಕೃತಿಯಲ್ಲಿ ಹೆಚ್ಚು ಚುರುಕಾಗಿರುತ್ತಾರೆ. ಸಮೀಪವರ್ತಿಗಳಲ್ಲಿ ಅಥವಾ ಆತ್ಮೀಯರಲ್ಲಿ ತಮ್ಮ ಆಂತರ್ಯದ ವಿವರವನ್ನು ಬಚ್ಚಿಡದೆ ಸ್ವವಿಚಾರಗಳನ್ನು ಬಹಿರಂಗಗೊಳಿಸುತ್ತಾರೆ, ಸಂಭಾಷಣೆಯನ್ನು ಹುಡುಗರಿಗಿಂತ ಹೆಚ್ಚು ಸಕ್ರಿಯವಾಗಿ ಆಲಿಸುತ್ತಾರೆ, ಹುಡುಗರಿಗಿಂತ ಹೆಚ್ಚು ಸೌಹಾರ್ದಯುತವಾದ ಮಾತುಗಾರಿಕೆಯಲ್ಲಿ ತೊಡಗುತ್ತಾರೆ. ಹರೆಯದ ಹುಡುಗರು ಸ್ವ–ಸಮರ್ಥನೆಯ ಮಾತುಗಾರಿಕೆಯನ್ನು ಬಳಸುವುದನ್ನು ಕಾಣುತ್ತೇವೆ. ಸಂವಹನ ಕ್ರಿಯೆಯಲ್ಲಿ ಲಿಂಗ ವ್ಯತ್ಯಾಸಗಳು ಬಹುತೇಕ ಸಂದರ್ಭಗಳಲ್ಲಿ ಅವರು ಸಂವಹನ ಮಾಡುವ ಸಮೂಹದ ಗಾತ್ರ, ಗುಂಪಿನ ಸ್ವರೂಪ(ಸಮವಯಸ್ಕರೇ, ವಯಸ್ಕರೇ ಇತ್ಯಾದಿ), ಕೆಳಗಿನ ಅಂಶಗಳನ್ನು ಅವಲಂಬಿಸುವುದು ಕಂಡುಬಂದಿದೆ.

### 3. ಸಮಾಜಪರ ವರ್ತನೆ (Pro- Social Behaviour)

ಹದಿಹರೆಯದ ಹುಡುಗಿಯರು ಸಾಮಾಜಿಕ ವರ್ತನೆಯ ಕುರಿತು ತಮಗೆ ತಿಳಿದಿದೆ ಎಂದೂ ಅದನ್ನು ಅನ್ವಯಿಸುತ್ತಲೂ ಇದ್ದೇವೆ ಎಂದೂ ಭಾವಿಸುತ್ತಾರೆ. ಮತ್ತೊಬ್ಬರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವರ ಸ್ಥಾನದಲ್ಲಿ ನಿಂತು ಅವರನ್ನು ತಿಳಿಯಲು ಪರಾನುಭೂತಿ ಇವರಿಗೆ ಇರುತ್ತದೆ.

## 4. ಸಂವೇಗ ಮತ್ತು ಅದರ ನಿಯಂತ್ರಣ

ಪೂರ್ವ ಹದಿಹರೆಯದಲ್ಲಿ ಹುಡುಗಿಯರು ತಾವು ದುಃಖ, ಅವಮಾನ ಮತ್ತು ಅಪರಾಧಿ ಪ್ರಜ್ಞೆಯ ಭಾವನೆಗಳನ್ನು ಅನುಭವಿಸುತ್ತೇವೆ ಎಂದು ಹೇಳುತ್ತಾರೆ. ಈ ರೀತಿಯ ಸಂವೇಗಗಳು ಅವರಲ್ಲಿ ತೀವ್ರವಾಗಿರುತ್ತವೆ. ಈ ಭಾವಗಳನ್ನು ತಮ್ಮ ಅನುಭವದಲ್ಲಿದೆ ಎಂದು ಹುಡುಗರು ಒಪ್ಪುವುದಿಲ್ಲ. ಸಾಮಾನ್ಯವಾಗಿ ಹುಡುಗರಿಗೆ ಹುಡುಗಿಯರಿಗಿಂತ ಸಂವೇಗಗಳ ಮೇಲೆ ನಿಯಂತ್ರಣ ಕಡಿಮೆ. ಈ ಕಾರಣದಿಂದಾಗಿ ಅವರು ಹೆಚ್ಚಿನ ಆಕ್ರಮಣಕಾರಿ ವರ್ತನೆಯನ್ನೂ ಆಶಾಭಂಗಗಳಿಗೆ ಅತಿಯಾದ ಪ್ರತಿಕ್ರಿಯೆಯನ್ನೂ ತೋರಬಹುದು. ಅಸಹಕಾರ ಭಾವವೂ ಇವರಲ್ಲಿ ಕಂಡುಬರುತ್ತದೆ.

## 5. ಖಿನ್ನತೆ

ನಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಹೊಂದಾಣಿಕೆಗೆ ಭಾವನೆಗಳು ಅನಿವಾರ್ಯ ಎಂಬುದು ನಿಮಗೆ ತಿಳಿದಿದೆ. ಭಾವನೆಗಳು ಧನಾತ್ಮಕ ಮತ್ತು ಋಣಾತ್ಮಕ ಸ್ವರೂಪದಲ್ಲಿರಬಹುದು. ಋಣಾತ್ಮಕ ಸ್ಥಿತಿಗೆ ಕಾರಣವಾದ ಅಂಶಗಳಲ್ಲಿ ಖಿನ್ನತೆಯೂ ಒಂದು. ಖಿನ್ನತೆ ಅಂದರೆ ನಮ್ಮ ಚಟುವಟಿಕೆಗಳ ಬಗ್ಗೆ ಅಥವಾ ಜೀವನದ ನಿರಾಶೆಗಳ ಪರಿಣಾಮವಾಗಿ ನಾವು ಅನುಭವಿಸುವ ದುಃಖಪೂರಿತವಾದ ಹತಾಶೆಯ ಸ್ಥಿತಿ. ತಾರುಣ್ಯದಲ್ಲಿರುವ ಹುಡುಗ–ಹುಡುಗಿಯರಲ್ಲಿ ಸರ್ವೇಸಾಮಾನ್ಯವಾಗಿ ಈ ಖಿನ್ನತೆ ಕಂಡುಬರುತ್ತದೆ. ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಖಿನ್ನತೆಗೆ ಒಳಗಾಗುವ ಪ್ರಮಾಣ ಹುಡುಗರು ಮತ್ತು ಹುಡುಗಿಯರಲ್ಲಿ ಸಮಾನವಾಗಿರುತ್ತವೆ, ಅಪರೂಪಕ್ಕೆ ಹುಡುಗರಲ್ಲಿ ಹೆಚ್ಚು ಕಂಡುಬರುವುದೂ ಉಂಟು. ಇದರ ಕುರಿತು ಅಧ್ಯಯನಗಳು ನಡೆಯಬೇಕಾಗಿದೆ.

ಅಧ್ಯಯನಗಳ ಪ್ರಕಾರ ಖಿನ್ನತೆಯಲ್ಲಿ ಲಿಂಗವ್ಯತ್ಯಾಸವು ಸುಮಾರು ಹದಿಮೂರನೇ ವರ್ಷದಲ್ಲಿ ಕಾಣಿಸಿಕೊಂಡು ಹದಿನೆಂಟನೆ ವಯಸ್ಸಿನವರೆಗೂ ಹೆಚ್ಚುತ್ತಾ ಹೋಗುತ್ತದೆ. ಇದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು–ಕ್ರಮಬದ್ಧವಲ್ಲದ ಆಹಾರ ಸೇವನೆ ತಮಗೆ ತಾವೇ ಘಾಸಿ ಮಾಡಿಕೊಳ್ಳುವುದು, ಸ್ವನಿಂದೆ, ಋಣಾತ್ಮಕವಾಗಿ ಇತರರೊಂದಿಗೆ ಹೋಲಿಸಿಕೊಳ್ಳುವುದು, ಒತ್ತಡದ ಬಗ್ಗೆ ಅತಿ ನಿಗಾವಹಿಸುವಿಕೆ ಮತ್ತು ಭವಿಷ್ಯ ಪರಿಣಾಮಗಳ ಬಗ್ಗೆ ಅತಿಯಾದ ಗೀಳು ಹಚ್ಚಿಕೊಳ್ಳುವುದು– ಹುಡುಗಿಯರಲ್ಲಿ ಹೆಚ್ಚು ಕಾಣಬಹುದು.

## 6. ಸಾಮಾಜಿಕ ಸಂಬಂಧಗಳು

ಅಂತಿಮವಾಗಿ ಹದಿಹರೆಯದವರಿಗೆ ತಮ್ಮ ಸಮವಯಸ್ಕರೊಡನೆ ಸಾಮಾಜಿಕ ಸಂಬಂಧಗಳಲ್ಲಿರುವ ಲಿಂಗ ವ್ಯತ್ಯಾಸಗಳನ್ನು ನೋಡೋಣ. ಬೆನೆನ್‌ಸನ್ ಮತ್ತು ಇತರರ ಪ್ರಕಾರ ಸಾಮಾಜಿಕ ಸಂಬಂಧಗಳು ಹದಿಹರೆಯದವರಲ್ಲಿ ಕೆಳಕಂಡಂತೆ ಇರುತ್ತದೆ.

| **ಸಮವಯಸ್ಕರೊಡನೆ ಹುಡುಗಿಯರ ಸಾಮಾಜಿಕ ಸಂಬಂಧಗಳು** | **ಸಮವಯಸ್ಕರೊಡನೆ ಹುಡುಗರ ಸಾಮಾಜಿಕ ಸಂಬಂಧಗಳು** |
|---|---|
| • ಹೆಚ್ಚಿನ ಅನ್ಯೋನ್ಯತೆ | • ಹೆಚ್ಚಿನ ಸ್ನೇಹಪರತೆ, ಸ್ಪರ್ಧಾಭಾವ |
| • ಬಿಚ್ಚು ಮನಸ್ಸು | • ಅಪಾಯಕಾರಿ ಕಾರ್ಯಕೈಗೊಳ್ಳುವಿಕೆ |
| • ಉಳಿಸಿಕೊಳ್ಳುವಿಕೆ, ಆರೈಕೆ ಮತ್ತು ಸಂಬಂಧಗಳನ್ನು ಸರಿಪಡಿಸಿಕೊಳ್ಳುವುದು. | • ಅತ್ಯುತ್ಸಾಹ<br>• ನೇರವಾಗಿ ನಿಯಂತ್ರಿಸುವ ಪ್ರಯತ್ನಗಳು |
| • ನಕಾರಾತ್ಮಕ ಭಾವಾನುಭವಗಳ ಮತ್ತು ಹೊಟ್ಟೆಕಿಚ್ಚುಗಳ ಕಾರಣ ಮತ್ತು ಪರಿಣಾಮಗಳ ಬಗ್ಗೆ ಚಿಂತಿಸುವುದು. | • ಕೋಮಲ ಭಾವಗಳನ್ನು ಮತ್ತು ಅನ್ಯೋನ್ಯತೆಯನ್ನು ಪ್ರತಿಬಂಧಿಸುವುದು. |

ಹರೆಯದ ಸಮವಯಸ್ಕ ಹುಡುಗಿಯರು ಮತ್ತು ಹುಡುಗರಲ್ಲಿ 'ಜನಪ್ರಿಯ' ರಾಗಿರುವವರು ಸಾಮಾಜಿಕ ಕೌಶಲಗಳನ್ನು ಹೊಂದಿರುತ್ತಾರೆ. ಇವರು ಸೊಗಸಾದ ಉಡುಪುಗಳನ್ನು ಧರಿಸುತ್ತಾರೆ, ಕ್ರೀಡೆಗಳಲ್ಲೂ ಮುಂದಾಗಿರುತ್ತಾರೆ, ಇವರಿಗೆ ಹಾಸ್ಯಪ್ರಜ್ಞೆ ಇರುತ್ತದೆ. ಜನಪ್ರಿಯರಾಗಿರುವ ಹರೆಯದ ಹುಡುಗಿಯರು ಆಕರ್ಷಕವಾಗಿಯೂ ಇರುತ್ತಾರೆ. ಅವರು ಅತ್ಯಂತ ನಿಕಟವಾದ ಚಿಕ್ಕ ಗುಂಪುಗಳಲ್ಲಿರುತ್ತಾರೆ ಮತ್ತು ಸುಲಭವಾಗಿ ಬೇರೆಯವರನ್ನು ಸೇರಿಸಿಕೊಳ್ಳುವುದಿಲ್ಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಹದಿಹರೆಯದವರ ಲಿಂಗತ್ವ ಲಕ್ಷಣಗಳನ್ನು ಹೇಳುವ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಬಾಲಕರು, ಬಾಲಕಿಯರಿಗೆ ಸಂಬಂಧಿಸಿದುದನ್ನು ಆಯಾ ಕಾಲಂನಲ್ಲಿ ಸಂಖ್ಯೆಗಳನ್ನು ಗುರುತಿಸುವುದರ ಮೂಲಕ ತಿಳಿಸಿ.

1. ಬೇಗನೆ ಶಾರೀರಿಕ ಅಸ್ವಸ್ಥತೆ
2. ಆಕ್ರಮಣಕಾರಿಗಳು
3. ಸಮಾಜಪರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿಕೆ
4. ಶಾಬ್ದಿಕ ಆಕ್ರಮಣ
5. ಆತ್ಮೀಯರಲ್ಲಿ ಸ್ವವಿಚಾರ ಬಹಿರಂಗ
6. ದುಃಖ, ಅವಮಾನ ಮತ್ತು ಅಪರಾಧಿ ಪ್ರಜ್ಞೆ
7. ಅತ್ಯುತ್ಸಾಹ
8. ಆಶಾಭಂಗಗಳಿಗೆ ಅತಿಯಾದ ಪ್ರತಿಕ್ರಿಯೆ
9. ಸ್ವ–ಸಮರ್ಥನೆಯ ಮಾತುಗಾರಿಕೆ
10. ಸಾಮಾಜಿಕ ವರ್ತನೆಯ ಕುರಿತು ತಮಗೆ ತಿಳಿದಿದೆ ಎಂಬ ಭಾವ
11. ಸಂವೇಗಗಳ ಮೇಲೆ ಕಡಿಮೆ ನಿಯಂತ್ರಣ

| ಬಾಲಕರು | ಬಾಲಕಿಯರು |
|---|---|
| | |

## 4.5.3.2. ಲಿಂಗ ಪಡಿಯಚ್ಚುಗೊಳಿಸುವಿಕೆಯಲ್ಲಿ ಜ್ಞಾನಾತ್ಮಕ ಸಾಮ್ಯತೆಗಳು ಮತ್ತು ಭಿನ್ನತೆಗಳು

ಹಿಂದಿನ ಕೆಲವು ಸಂಶೋಧನೆಗಳು  ಹುಡುಗರು ಗಣಿತ ಕೌಶಲಗಳನ್ನು ಹೊಂದಿರುತ್ತಾರೆ, ಹುಡುಗಿಯರು ಉತ್ತಮ ಭಾಷಾ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ ಇತ್ಯಾದಿ ವಿವಿಧ ಸಾಮರ್ಥ್ಯವನ್ನು ಭಿನ್ನ ಲಿಂಗದವರೊಂದಿಗೆ ಜೋಡಿಸುವ ಫಲಿತಾಂಶಗಳನ್ನು ತೋರಿಸಿಕೊಟ್ಟಿವೆಯಾದರೂ ಇಂದಿನ ಪರಿಸ್ಥಿತಿ ಹಾಗಿಲ್ಲ. ಹುಡುಗಿಯರೂ ವಿಜ್ಞಾನ, ತಂತ್ರಜ್ಞಾನ, ಸಂಖ್ಯಾಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಆಸಕ್ತಿ ಹೊಂದಿರುವುದು ಮಾತ್ರವಲ್ಲ; ಆಯಾ ವಿಷಯಗಳಲ್ಲಿ ಪರಿಣತರು ಎಂಬುದನ್ನೂ ಸಾಬೀತು ಮಾಡಿದ್ದಾರೆ. ಈ ಕಾರಣದಿಂದಲೇ ಲಿಂಗತ್ವದ ಲಕ್ಷಣಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಲಿಂಗ ಸಹಜವಾಗಿ ಬದಲಾಗದು; ಆದರೆ ಲಿಂಗತ್ವ ಬದಲಾಗುತ್ತದೆ. ಅತ್ಯಂತ ಸಂಪ್ರದಾಯಸ್ಥ ಕುಟುಂಬದವರ ಹೆಣ್ಣುಮಕ್ಕಳೇ ಇಂದು ವಿಜ್ಞಾನಿಗಳಾಗಿ, ತಂತ್ರಜ್ಞಾನಿಗಳಾಗಿ ಯಶಸ್ವಿಯಾಗಿರುವುದು ನಮ್ಮ ಕಣ್ಣೆದುರಿಗೇ ಇದೆ. ಆದರೆ ಲಿಂಗತ್ವ ವ್ಯತ್ಯಾಸಗಳು ಕಾಲಾಂತರದಲ್ಲಿ ಬದಲಾಗಬಹುದೆಂಬುದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು. ಸಾಮಾನ್ಯ ಬುದ್ಧಿಶಕ್ತಿಯಲ್ಲಿ ಹೆಣ್ಣು ಹುಡುಗಿಯರು ಮತ್ತು ಗಂಡು ಹುಡುಗರು ವ್ಯತ್ಯಾಸ ಹೊಂದುವುದಿಲ್ಲ ಎಂಬುದನ್ನು ಈಗ ನಾವು ಕಂಡುಕೊಂಡಿದ್ದೇವೆ. ಆದರೆ ನಿರ್ದಿಷ್ಟ ಸಂಜ್ಞಾನ ಸಾಮರ್ಥ್ಯಗಳಲ್ಲಿ ಭಿನ್ನತೆಯನ್ನು ಕಾಣಬಹುದು ಎಂಬುದು ಅಧ್ಯಯನಗಳ ಫಲಿತಾಂಶ. ಉದಾಹರಣೆಗೆ, ಗಂಡು ಹುಡುಗರು ಗಣಿತ

ಕೌಶಲಗಳೊಂದಿಗೆ ಉತ್ತಮ ದೃಶ್ಯ ಮತ್ತು ಸ್ಥಳಾವಕಾಶ ಸಾಮರ್ಥ್ಯಗಳನ್ನು (Visual and Spatial Abilities) ಹೊಂದಿರುತ್ತಾರೆ ಎಂದು ಹೇಳುವುದಾದರೂ ಇವುಗಳ ಮೂಲವನ್ನು ಲಿಂಗತ್ವದ ಒಳಗೆ ಕಾಣುವುದಕ್ಕಿಂತ ಸಂಸ್ಕೃತಿಯ ಆಧಾರದ ಮೇಲೆ ಮತ್ತು ಹದಿಹರೆಯದವರು ಜನನದಿಂದ ಇಂದಿನವರೆಗೆ ತೆರೆದುಕೊಳ್ಳುವ ಅನುಭವಗಳ ಜೊತೆಯಲ್ಲಿ ಗುರುತಿಸಬಹುದೇನೋ.

ಪರಾ ವಿಶ್ಲೇಷಣೆ(meta-analysis)ಯ ಆಧಾರದ ಮೇಲೆ ಮನಶ್ಶಾಸ್ತ್ರಜ್ಞರು ಹುಡುಗ ಮತ್ತು ಹುಡುಗಿಯರ ಮಾನಸಿಕ ಅಥವಾ ಸಂಜ್ಞಾನಾತ್ಮಕ ಸಾಮರ್ಥ್ಯಗಳಲ್ಲಿರುವ ವ್ಯತ್ಯಾಸಗಳನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ.

| ಲಕ್ಷಣಗಳು | ಲಿಂಗ ವ್ಯತ್ಯಾಸಗಳು | |
|---|---|---|
| | ಬಾಲಕರು | ಬಾಲಕಿಯರು |
| ಶಾಬ್ದಿಕ ಸಾಮರ್ಥ್ಯಗಳು | | ಶೀಘ್ರ ಭಾಷಾ ವಿಕಾಸ. ಇಡೀ ಶಾಲಾವಧಿಯಲ್ಲಿ ಬರಹ ಮತ್ತು ಹೆಚ್ಚಿನ ಸಾಧನೆ |
| ಸ್ಥಳಾವಕಾಸ ಸಂಬಂಧಿ ಸಾಮರ್ಥ್ಯಗಳು | ಶಾಲಾ ಅವಧಿ ಪೂರ್ಣ ಮತ್ತು ನಂತರವೂ ಕೆಲವು ನಿರ್ದಿಷ್ಟ ಸ್ಥಳಾವಕಾಶ ಸಾಮರ್ಥ್ಯಗಳಲ್ಲಿ ಹುಡುಗಿಯರನ್ನು ಮೀರಿಸಿದ ಸಾಮರ್ಥ್ಯ | |
| ಶೈಕ್ಷಣಿಕ / ಶಾಲಾ ಸಾಧನೆ | ಹೈಸ್ಕೂಲಿನಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಹುಡುಗಿಯರಿಗಿಂತ ಉತ್ತಮ ಸಾಧನೆ | ಪ್ರಾಥಮಿಕ ಶಾಲಾ ಹಂತಗಳಲ್ಲಿ ಎಲ್ಲ ಅಧ್ಯಯನ ವಿಷಯಗಳಲ್ಲಿ ಹುಡುಗರಿಗಿಂತ ಹೆಚ್ಚಿನ ಸಾಧನೆ |
| ಸಾಧನೆಯ ಅಭಿಪ್ರೇರಣೆ | ಗಣಿತ, ಕ್ರೀಡೆ ಮತ್ತು ತಾಂತ್ರಿಕ ಕೌಶಲಗಳಲ್ಲಿ ತಾವು ಹೆಚ್ಚು ಸಮರ್ಥರೆಂದು ತಿಳಿದ ಹಿನ್ನೆಲೆಯಲ್ಲಿ ಮೇಲ್ಮಟ್ಟದ ನಿರೀಕ್ಷೆಗಳು | ಓದು, ಬರಹ, ಸಾಹಿತ್ಯ ಮತ್ತು ಶಾಲಾ ವಿಷಯಗಳಲ್ಲಿ ಹೆಚ್ಚಿನ ನಿರೀಕ್ಷೆಗಳು. |

ಮೇಲೆ ತಿಳಿಸಿರುವ ವಿಚಾರಗಳ ಬಗ್ಗೆ ಇನ್ನು ಹೆಚ್ಚು ವಿವರಗಳನ್ನು ತಿಳಿಯೋಣ

**1. ಶಾಬ್ದಿಕ ಸಾಮರ್ಥ್ಯಗಳು**

ಹುಡುಗಿಯರು ಮಧ್ಯಬಾಲ್ಯ ಮತ್ತು ಹದಿಹರೆಯದ ಹಂತಗಳಲ್ಲಿ ಶಾಬ್ದಿಕ ಸಾಮರ್ಥ್ಯ ಅಳೆಯುವ ಪರೀಕ್ಷೆಗಳಲ್ಲಿ ಸಾಧಾರಣ ಮಟ್ಟದಲ್ಲಿ ಹುಡುಗರಿಗಿಂತ ಹೆಚ್ಚು ಅಂಕಗಳಿಸುವರು. ಶಾಲಾವಧಿ ಪೂರ್ಣ ಹುಡುಗಿಯರು ವಾಚನ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸುವರು. ಹುಡುಗಿಯರಿಗೆ ಪರಿಹಾರ ಬೋಧನೆಯ ಆವಶ್ಯಕತೆ ಕಡಿಮೆ. ಹದಿಹರೆಯದಲ್ಲಿ ಓದು ಮತ್ತು ಬರಹ ಸಾಧನೆಗಳಲ್ಲಿ ಲಿಂಗ-ಅಂತರ (Gender gap) ಹೆಚ್ಚು. ಗಂಡು ಹುಡುಗರು ಬರಹ ಕಾರ್ಯದಲ್ಲಿ ಅತೃಪ್ತಿಕರ ಸಾಧನೆ ತೋರುವರು. ಇದಕ್ಕೆ ಎರಡು ಅಂಶಗಳನ್ನು ಗುರುತಿಸಲಾಗಿದೆ.

(ಎ) ಸಾಮಾನ್ಯವಾಗಿ ಭಾಷಾಸಾಮರ್ಥ್ಯವು ಸ್ಥಳೀಕೃತವಾಗಿರುವ ಸೆರಬ್ರಲ್ ಕಾರ್ಟೆಕ್ಸ್‌ನ ಎಡ ಅರ್ಧಭಾಗದ ಶೀಘ್ರ ವಿಕಾಸವಾಗುವಿಕೆ.

(ಬಿ) ಪೂರ್ವ ಅನುಭವಗಳ ನಿರೂಪಣೆಯು ತಾಯಿ-ಮಗಳ ನಡುವೆ ನಡೆಯುವಾಗ ವಿವರವಾಗಿ, ವ್ಯಾಪಕವಾಗಿ ಮತ್ತು ಹೆಚ್ಚು ವ್ಯವಸ್ಥಿತವಾಗಿ ಇರುತ್ತದೆ. ಆದರೆ ಅದೇ ತಾಯಿ ಮತ್ತು ಮಗನ ನಡುವೆ

ನಡೆದಾಗ ವಿವರವಾಗಿ ಮತ್ತು ವ್ಯವಸ್ಥಿತವಾಗಿ ಇರುವುದಿಲ್ಲ.

ಬಹುಮಂದಿ ಮಕ್ಕಳು ಭಾಷೆಯನ್ನು ಸ್ತ್ರೀಲಿಂಗಕ್ಕೆ ಅಥವಾ ಹೆಂಗಸರಿಗೆ ಸೇರಿದ ವಿಷಯಕ್ಷೇತ್ರ ಎಂದು ಭಾವಿಸುತ್ತಾರೆ.

**2. ಗಣಿತ ಸಾಮರ್ಥ್ಯಗಳು**

ಹುಡುಗಿಯರು ಅಂಕಗಣಿತದ ಲೆಕ್ಕಗಳಲ್ಲಿ ಚುರುಕಾಗಿರುತ್ತಾರೆ, ಬಹುಶಃ ಉತ್ತಮ ಭಾಷಾಕೌಶಲಗಳನ್ನು ಮತ್ತು ಸಮಸ್ಯೆ ಬಿಡಿಸಲು ಕ್ರಮಬದ್ಧವಾದ ವಿಧಾನಗಳನ್ನು ಬಳಸುವುದರಿಂದ ಅವರು ಲೆಕ್ಕಗಳನ್ನು ಸುಲಭವಾಗಿ ಮಾಡಬಹುದು.

ಗಣಿತದ ಮೂಲ ಸಮಸ್ಯೆಗಳನ್ನು ಬಿಡಿಸುವಾಗ ಹುಡುಗಿಯರು ಹೆಚ್ಚಾಗಿ ಮೂರ್ತರೂಪದಲ್ಲಿ ಲೆಕ್ಕಾಚಾರ ಮಾಡುವ ಕ್ರಮವನ್ನೇ ಅನುಸರಿಸುತ್ತಾರೆ.

ಹುಡುಗರು ಬಹುತೇಕ ಸಮಯ ಮಾನಸಿಕವಾಗಿಯೇ ಸಂಖ್ಯೆಗಳನ್ನು ಪ್ರತಿನಿಧಿಸುತ್ತಾರೆ ಮತ್ತು ನೆನಪಿನಿಂದಲೇ ತ್ವರಿತವಾಗಿ ಉತ್ತರಗಳು ಕಂಡುಕೊಳ್ಳುತ್ತಾರೆ. ಹದಿಹರೆಯದ ಹಂತದಲ್ಲಿ ಹುಡುಗರು ಗಣಿತದಲ್ಲಿ ಹುಡುಗಿಯರಿಗಿಂತ ಹೆಚ್ಚಿನ ಸಾಧನೆಯನ್ನು ತೋರುತ್ತಾರೆ. ಈ ಹಂತದಲ್ಲಿನ ಗಣಿತ ಸಮಸ್ಯೆಗಳು ಹೆಚ್ಚು ಅಮೂರ್ತ ಮತ್ತು ಸ್ಥಳಾವಕಾಶಕ್ಕೆ ಸಂಬಂಧಿಸಿರುತ್ತವೆ ಎಂಬುದನ್ನು ಗಮನದಲ್ಲಿಡಬೇಕು.

ಲಿಂಗ ವ್ಯತ್ಯಾಸಗಳು, ಹೆಚ್ಚು ಸಂಕೀರ್ಣವಾದ ವಿವೇಚನೆ ಅಥವಾ ತರ್ಕಬದ್ದವಾದ ಮತ್ತು ಜ್ಯಾಮಿತಿಯ ಪರೀಕ್ಷೆಗಳ ಫಲಿತಾಂಶಗಳಲ್ಲಿ ಸ್ಪಷ್ಟವಾಗಿ ಗೋಚರಿಸುವುದು.

ಸಮಸ್ಯೆಗಳು ಹೆಚ್ಚು ಕ್ಲಿಷ್ಟವಾಗುತ್ತಾ ಹೋಗುವುದರಿಂದ ಹುಡುಗರಿಗೆ ವಿಜ್ಞಾನ ವಿಷಯದ ಸಾಧನೆಯಲ್ಲೂ ಹೆಚ್ಚು ಅನುಕೂಲವಾಗುವುದು. ಕಾಲಕಳೆದಂತೆ, ಹುಡುಗರು ಮತ್ತು ಹುಡುಗಿಯರಿಗೆ ಶೈಕ್ಷಣಿಕ ವಿಷಯಗಳಲ್ಲಿ ಉತ್ತಮ ಮತ್ತು ಸಮಾನ ಅವಕಾಶಗಳು ಸಿಗುತ್ತಿರುವುದರಿಂದ ಈ ವಿಷಯಗಳಲ್ಲಿ ಲಿಂಗ ವ್ಯತ್ಯಾಸ ಕಡಿಮೆಯಾಗುತ್ತಿದೆ.

ಕೆಲವು ಸಂಶೋಧಕರ ಪ್ರಕಾರ, ಅನುವಂಶೀಯ ಕೊಡುಗೆಗಳಾದ (1) ಸಂಖ್ಯೆಗಳ ಶೀಘ್ರ ನೆನಪಿನ ಶಕ್ತಿ, ಹುಡುಗರಿಗೆ ಅನುವಂಶೀಯ ಕೊಡುಗೆಯಾಗಿ ಬಂದಿದ್ದು ಹೆಚ್ಚು ಸಂಕೀರ್ಣವಾದ ಮಾನಸಿಕ ಕಾರ್ಯಗಳನ್ನು ಮಾಡಲು ಸಹಾಯ ಮಾಡುತ್ತದೆ. (2) ಉತ್ತಮ ಸ್ಥಳಾವಕಾಶ ತರ್ಕಶಕ್ತಿಯೂ ಹುಡುಗರ ಗಣಿತ ಸಮಸ್ಯಾ ಪರಿಹಾರಗೊಳಿಸುವಿಕೆಯನ್ನು ಹೆಚ್ಚಿಸುತ್ತದೆ.

ಕೆಲವು ತಜ್ಞರ ಪ್ರಕಾರ ನಮ್ಮ ದೇಶದಲ್ಲಿ ಹುಡುಗಿಯರು ಕ್ರೀಡೆಗಳಿಗೆ, ಸ್ಥಳಾವಕಾಶ ಮತ್ತು ಅಮೂರ್ತ ತರ್ಕ ಸಾಮರ್ಥ್ಯಗಳಿಗೆ ಹೆಚ್ಚು ತೆರೆದುಕೊಳ್ಳಲಾಗಿಲ್ಲ. ಇದು ಕೂಡ ಹುಡುಗಿಯರು ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳದಿರಲು ಕಾರಣವಾಗಿರಬಹುದು.

ಗಣಿತವು ಗಂಡಸರ ಅಧ್ಯಯನ ವಿಷಯ; ಹೆಂಗಸರ ಅಧ್ಯಯನ ಕ್ಷೇತ್ರವಲ್ಲ ಇತ್ಯಾದಿ ರೂಢಕಲ್ಪನೆಗಳು ಲಿಂಗಗಳ ನಡುವೆ ವ್ಯತ್ಯಾಸವನ್ನುಂಟುಮಾಡುತ್ತವೆ. ಇದರ ಪರಿಣಾಮವಾಗಿ ಹೆಚ್ಚಿನ ಸಾಮರ್ಥ್ಯವಿರುವ ಹುಡುಗಿಯರು ಗಣಿತ ತರ್ಕ ಕೌಶಲಗಳನ್ನು ಪರಿಣಾಮಕಾರಿಯಾಗಿ ಬೆಳೆಸಿಕೊಳ್ಳುವ ಅವಕಾಶಗಳಿಂದ ವಂಚಿತರಾಗುತ್ತಾರೆ.

ಲಿಂಗ ಪಡಿಯಚ್ಚು ನಂಬಿಕೆಗಳನ್ನು ಹೊಂದಿಲ್ಲದ ಪೋಷಕರ ಹದಿಹರೆಯದ ಹೆಣ್ಣುಮಕ್ಕಳು ವಿಜ್ಞಾನ ಮತ್ತು ಗಣಿತ ಕ್ಷೇತ್ರದ ಉತ್ತಮ ಸಾಧನೆ ತೋರಬಹುದು.

**ಸ್ಥಳಾವಕಾಶ ಸಾಮರ್ಥ್ಯಗಳಲ್ಲಿ ( Spacial abilities) ಲಿಂಗ ವ್ಯತ್ಯಾಸಗಳು**

ನಮ್ಮ ಅನುಭವಗಳಲ್ಲಿರುವಂತೆ ಹುಡುಗರ ಸ್ಥಳಾವಕಾಶದ ಗ್ರಹಿಕೆ ಹುಡುಗಿಯರಿಗಿಂತ ಚೆನ್ನಾಗಿರುತ್ತದೆ. ಈ ಸಾಮರ್ಥ್ಯ ಸುತ್ತಲಿನ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳುವ ಶಕ್ತಿಯನ್ನು ಒಳಗೊಳ್ಳುತ್ತದೆ. ಇದು ಸಂಕೀರ್ಣವಾದ

ದೃಶ್ಯರೂಪಗಳನ್ನು ವಿಶ್ಲೇಷಿಸುವ ಕಾರ್ಯವನ್ನೂ ಒಳಗೊಂಡಿದೆ. ಹಾಗಾಗಿ ಇದರಲ್ಲಿ ಲಿಂಗ ವ್ಯತ್ಯಾಸ ತಿಳಿಯುವುದು ಕಷ್ಟ. ಹುಡುಗರಲ್ಲಿ ಆಂಡ್ರೋಜನ್ ಹಾರ್ಮೋನ್‌ಗಳು ಮೆದುಳಿನ ಬಲ ಅರ್ಧಪಾರ್ಶ್ವದ ಕಾರ್ಯಪಟುತ್ವವನ್ನು ಹೆಚ್ಚಿಸುವುದರಿಂದ ಅವರಿಗೆ ಸ್ಥಳಾವಕಾಶ ಸಾಮರ್ಥ್ಯದಲ್ಲಿ ಹೆಚ್ಚಿನ ಅನುಕೂಲಗಳಿರುತ್ತದೆ ಎಂದು ಹೇಳಲಾಗುತ್ತದೆ. ಸಂಶೋಧನೆಯೂ ಹುಡುಗರಿಗೆ ಅವರಲ್ಲಿರುವ ಉತ್ಕೃಷ್ಟ ಸ್ಥಳಾವಕಾಶ ಕೌಶಲಗಳ ಸೌಲಭ್ಯ ಗಣಿತದ ಸಂಕೀರ್ಣ ಸಮಸ್ಯೆಗಳನ್ನು ಬಿಡಿಸಲು ಸಹಾಯ ಮಾಡುತ್ತದೆಂದು ತಿಳಿಸುತ್ತದೆ. ಲಿಂಗ ವ್ಯತ್ಯಾಸಗಳಿಗೂ ಮಿಗಿಲಾಗಿ ತರಬೇತಿಯೊಂದಿಗೆ ಸ್ಥಳಾವಕಾಶ ಸಂಬಂಧಿ ಕೌಶಲಗಳಲ್ಲಿ ಪರಿಣತಿ ಬೆಳೆಸಬಹುದು.

ಪೋಷಕರು ಮತ್ತು ಶಿಕ್ಷಕರು ಚಟುವಟಿಕೆಗಳಲ್ಲಾಗಲಿ, ಸಾಧನೆಯ ಕ್ಷೇತ್ರಗಳಲ್ಲಾಗಲಿ, ಲಿಂಗ ಪಡಿಯಚ್ಚುಗೊಳಿಸುವಿಕೆಗೆ ಸಂಬಂಧಿಸಿದ ಮಾತುಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಲಿಂಗತ್ವವನ್ನು ಮೀರಿದ ಸಮಾಜದ ಸೃಷ್ಟಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ನೀವು ಈಗಾಗಲೇ ಶಿಕ್ಷಕರಾಗಿ ಶಾಲೆಗಳಲ್ಲಿ ವ್ಯಾಪಕವಾದ ಅನುಭವಗಳನ್ನು ಪಡೆದಿರುವಿರಿ. ಕೆಳಗೆ ಕೊಟ್ಟಿರುವ ಲಿಂಗಪಡಿಯಚ್ಚುಗಳಿಗೆ ಸಂಬಂಧಿಸಿದ ಹೇಳಿಕೆಗಳನ್ನು ನಿಮ್ಮ ಅನುಭವದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

- ಹುಡುಗಿಯರು ಹುಡುಗರಿಗಿಂತ ಹೆಚ್ಚು ಸಂವೇದನಾಶೀಲತೆಯುಳ್ಳವರು.
- ಹುಡುಗರಲ್ಲಿ ಹುಡುಗಿಯರಿಗಿಂತ ಧೀಶಕ್ತಿ ಹೆಚ್ಚು.
- ಹುಡುಗರು ಮತ್ತು ಹುಡುಗಿಯರ ಶೈಕ್ಷಣಿಕ ಸಾಧನೆಯಲ್ಲಿ ಭಿನ್ನತೆ ಇದೆ.

ಲಿಂಗಪಡಿಯಚ್ಚುಗಳನ್ನು ಕುರಿತಂತೆ ನನ್ನ ಅನುಭವಗಳು ಮತ್ತು ಅನಿಸಿಕೆಗಳು' ಎಂಬ ಉತ್ತಮ ಪ್ರಬಂಧ ತಯಾರಿಸಿ

## 4.5.3.4. ಸಾರಾಂಶಿಸೋಣ

- ಶಾರೀರಿಕವಾದ ಅಂಶಗಳಿಗೆ ಸಂಬಂಧಿಸಿದಂತೆ ಹದಿಹರೆಯದಲ್ಲಿ ಲಿಂಗತ್ವದ ಹೋಲಿಕೆಗಳು ಮತ್ತು ವ್ಯತ್ಯಾಸಗಳು ಕಾಣಬರುತ್ತದೆ. ಉದಾಹರಣೆಗೆ ದೇಹದ ಕೊಬ್ಬು, ಹಾರ್ಮೋನ್‌ಗಳ ಕಾರ್ಯ, ಮೆದುಳಿನ ರಚನೆ ಮುಂತಾದ ಅಂಶಗಳು ಒಂದೇ ಆಗಿದ್ದು ಕಾರ್ಯ ನಿರ್ವಹಣೆ ಸ್ವಲ್ಪ ಭಿನ್ನವಾಗಿರುತ್ತದೆ.
- ಸಾಮಾಜಿಕ ಸಾಮ್ಯತೆಗಳು ಮತ್ತು ಭಿನ್ನತೆಗಳಿಗೆ ಸಂಬಂಧಿಸಿದಂತೆ ಹುಡುಗರು ಹೆಚ್ಚು ಆಕ್ರಮಣಶೀಲ ರಾಗಿದ್ದರೆ ಹುಡುಗಿಯರು ಭಿನ್ನ ವರ್ತನೆಗಳನ್ನು ಪ್ರಕಟಪಡಿಸುತ್ತಾರೆ.
- ಸಂಬಂಧಗಳಲ್ಲಿನ ಸಂವಹನವನ್ನು ಪರಿಗಣಿಸಿದಾಗ ಹುಡುಗರು ವರದಿರೂಪದ ಮಾತನ್ನು ಹೆಣ್ಣು ಹುಡುಗಿಯರು ಬಾಂಧವ್ಯದ ಮಾತನ್ನು ಸಂವಹನದಲ್ಲಿ ಬಳಸುತ್ತಾರೆ.
- ಹುಡುಗಿಯರು ಸಂವೇಗಗಳ ನಿಯಂತ್ರಣವನ್ನೂ ಸಮಾಜಪರ ವರ್ತನೆಯನ್ನೂ ತೋರುತ್ತಾರೆ, ಹೆಚ್ಚಿನ ಮಟ್ಟದ ಖಿನ್ನತೆಗೆ ಗುರಿಯಾಗುತ್ತಾರೆ.
- ಹುಡುಗಿಯರು ಭಾಷಾ ಸಾಮರ್ಥ್ಯಗಳನ್ನು ಹುಡುಗರು ಹೆಚ್ಚು ಗಣಿತ ಸಾಮರ್ಥ್ಯಗಳನ್ನು ಮತ್ತು ಸ್ಥಳಾವಕಾಶ ಸಂಬಂಧಿ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ.

## 4.5.5 .ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

| ಬಾಲಕರು | ಬಾಲಕಿಯರು |
|---|---|
| 1, 2, 7, 9, 11 | 3, 4, 5, 6, 8, 10 |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**

ನೀವು ತಯಾರಿಸಿರುವ ಪ್ರಬಂಧವನ್ನು ಅಧ್ಯಾಪಕರ ಗುಂಪಿನಲ್ಲಿ ಮಂಡಿಸಿ, ಅವರ ಅನುಭವಗಳನ್ನು ಅನಿಸಿಕೆಗಳನ್ನು ಸೇರಿಸಿ ನಿಮ್ಮ ಪ್ರಬಂಧವನ್ನು ಶ್ರೀಮಂತಗೊಳಿಸಿ.

## 4.5.6. ಘಟಕಾಂತ್ಯ ಅಭ್ಯಾಸಗಳು

1. ಸಮಾಜ ಮತ್ತು ಸಂಸ್ಕೃತಿಯ ಫಲವಾಗಿ ಲಿಂಗ ಪಡಿಯಚ್ಚುಗಳುಂಟಾಗುತ್ತವೆ ಎಂಬುದನ್ನು ವಿವರಿಸಿ
2. ಹದಿಹರೆಯದ ಹುಡುಗರಲ್ಲಿ ಮತ್ತು ಹುಡುಗಿಯರಲ್ಲಿ ಲಿಂಗ ಪಡಿಯಚ್ಚುಗೊಳ್ಳುವಿಕೆಯನ್ನು ಕಡಿಮೆ ಮಾಡಲು ಕ್ರಮಗಳನ್ನು ವಿವರಿಸಿ.

## 4.5.7. ಪರಾಮರ್ಶನ ಸೂಚಿ


1) LAURA E.BERK : Child Development, Eight Edition Eastern Economy Edition PH1 Learning Private Ltd., New Delhi- 110001 (2011)

2) John W Santrock : Adolescence, Twelfth Edition TATA Mc. GRAW – HILL Edition, New Delhi

3) Geetha B. Nambisson “Integrating Gender Concerns” ,”Changing India “ Vol – 12

4) David you G Perry and Rachel Panletti – ‘Gender and Adolescent Development’ Journal of Research and Adolescence.


*********************

# ಬ್ಲಾಕ್ 4 : ಲಿಂಗ ಮತ್ತು ಹದಿಹರೆಯ

# ಘಟಕ 6 : ಲಿಂಗ ಸಮಾನತೆಯನ್ನು ಉಂಟುಮಾಡುವಲ್ಲಿ ಸಮಾಜ ಮತ್ತು ಶಿಕ್ಷಣ ಸಂಸ್ಥೆಗಳ ಪಾತ್ರ

## ಘಟಕದ ರಚನೆ


4.6.1. ಕಲಿಕಾ ಉದ್ದೇಶಗಳು

4.6.2. ಪೀಠಿಕೆ

4.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.6.3.1. ಲಿಂಗ ಸಮಾನತೆಯ ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

4.6.3.2. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜದ ಪಾತ್ರ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2

4.6.3.3. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –3

4.6.4. ಸಾರಾಂಶಿಸೋಣ

4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

4.6.6. ಘಟಕಾಂತ್ಯ ಅಭ್ಯಾಸಗಳು

4.6.7. ಪರಾಮರ್ಶನ ಸೂಚಿ


## 4.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಲಿಂಗ ಸಮಾನತೆಯ ಪರಿಕಲ್ಪನೆಯನ್ನು ವಿವರಿಸುವರು;
- ಲಿಂಗ ಅಸಮಾನತೆಯನ್ನು ಗುರುತಿಸಿ ಅದನ್ನು ಹೋಗಲಾಡಿಸಲು ಕ್ರಮಗಳನ್ನು ಗುರುತಿಸುವರು;
- ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜದ ಪಾತ್ರವನ್ನು ವಿವರಿಸುವರು;
- ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಶೈಕ್ಷಣಿಕ ಸಂಸ್ಥೆಗಳ ಪಾತ್ರವನ್ನು ವಿವರಿಸುವರು; ಮತ್ತು
- ಸಮಾನತೆಯ ಆಧಾರದ ಮೇಲಿನ ತರಗತಿ ಸನ್ನಿವೇಶವನ್ನು ಸೃಷ್ಟಿಸಲು ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯ ಮಾಡುವರು.

## 4.4.6. ಪೀಠಿಕೆ

ಹಿಂದಿನ ಘಟಕಗಳಲ್ಲಿ ಹದಿಹರೆಯದವರ ಲಿಂಗತ್ವ ವಿಕಾಸದ ಮೇಲೆ ಜೈವಿಕ, ಸಾಮಾಜಿಕ ಮತ್ತು ಆರ್ಥಿಕ ಪ್ರಭಾವಗಳನ್ನು ತಿಳಿದಿರುವಿರಿ. ಲಿಂಗ ಸಮಾನತೆಯ ಅಗತ್ಯವನ್ನು ನಾವೇಕೆ ಅರ್ಥಮಾಡಿಕೊಳ್ಳಬೇಕು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ಅಂಶಗಳು ನಿಮಗೆ ಈಗಾಗಲೇ ಕೆಲವು ಸೂಚನೆಗಳನ್ನು ನೀಡಿವೆ. ಕಳೆದ ಕೆಲವು ದಶಕಗಳಲ್ಲಿ ಜಾಗತಿಕ ಬೆಳವಣಿಗೆಗೆ ಲಿಂಗ ಸಮಾನತೆಯನ್ನು ಅತ್ಯಂತ ಪ್ರಮುಖವಾದ ಅಂಶ ಎಂದು ಪರಿಗಣಿಸಲಾಗಿದೆ. ಇದನ್ನು ಗುರುತಿಸಿ, ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣವನ್ನು ಸಹಸ್ರಮಾನದ ಎಂಟು ಗುರಿಗಳಲ್ಲಿ ಒಂದಾಗಿ ಗುರುತಿಸಿಕೊಳ್ಳಲಾಗಿದೆ. ಇದಕ್ಕೆ ಭಾರತವೂ ಸಹಿ ಹಾಕಿದೆ. ಯುನೆಸ್ಕೊ ಸಂಸ್ಥೆಯ "2030" ಶಿಕ್ಷಣ ಕಾರ್ಯಸೂಚಿಯು, "ಬಾಲಕರು ಮತ್ತು ಬಾಲಕಿಯರು, ಮಹಿಳೆ ಮತ್ತು ಪುರುಷರಿಬ್ಬರೂ ಸಂಪೂರ್ಣ ಶಿಕ್ಷಣಕ್ಕೆ ಅವಕಾಶ ಪಡೆಯುವುದು ಮಾತ್ರವಲ್ಲ; ಶಿಕ್ಷಣದಲ್ಲಿ ಮತ್ತು ಶಿಕ್ಷಣದ ಮೂಲಕ ಸಂಪೂರ್ಣವಾಗಿ ಸಬಲಗೊಳ್ಳುವುದನ್ನು ಖಚಿತಪಡಿಸುವ ಉಪಕ್ರಮದ ಅವಶ್ಯಕತೆ ಇದೆ" ಎಂಬುದನ್ನು ಗುರುತಿಸುತ್ತದೆ. ಲಿಂಗ ಸಮಾನತೆಯು ಪ್ರಗತಿಶೀಲ ರಾಷ್ಟ್ರಗಳಿಗೆ ಅತ್ಯಂತ ಪ್ರಮುಖವಾದ ಆರ್ಥಿಕ ಬೆಳವಣಿಗೆಯನ್ನು ಪ್ರಚೋದಿಸುತ್ತದೆ ಎಂದು ತೋರಿಸಿಕೊಟ್ಟಿದೆ. ಇದನ್ನು ಸಾಧಿಸುವುದು ಸಮಾಜದ ಅನೇಕ ಸಂಸ್ಥೆಗಳ ಸಮಷ್ಟಿ ಪ್ರಯತ್ನಗಳನ್ನು ಬಯಸುತ್ತದೆ. ಈ ಹಿನ್ನೆಲೆಯಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜ ಮತ್ತು ಶಿಕ್ಷಣ ಸಂಸ್ಥೆಗಳ ಪಾತ್ರವೇನು, ಅವುಗಳು ಈ ಗುರಿಯನ್ನು ಸಾಧಿಸಲು ಹೇಗೆ ಪ್ರಯತ್ನಿಸಬೇಕು ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ.

## 4.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.6.3.1. ಲಿಂಗ ಸಮಾನತೆಯ ಪರಿಕಲ್ಪನೆ

ಲಿಂಗ ಮತ್ತು ಲಿಂಗತ್ವ ಎಂಬ ಎರಡು ಪರಿಕಲ್ಪನೆಗಳನ್ನು ನೀವು ಈಗಾಗಲೇ ತಿಳಿದಿರುವಿರಿ. ಲಿಂಗ ಎಂಬುದು ಜೈವಿಕವಾದ ಹಿನ್ನೆಲೆಯುಳ್ಳದ್ದು ಮತ್ತು ಲಿಂಗತ್ವ ಎಂಬುದು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳದ್ದು ಎಂಬ ಅಂಶವೂ ನಿಮಗೆ ಸ್ಪಷ್ಟವಾಗಿದೆ. ಲಿಂಗಗಳಿಗೆ ಸಂಬಂಧಿಸಿದಂತೆ, ಅಂದರೆ ಬಾಲಕ–ಬಾಲಕಿಯರು ಅಥವಾ ಸ್ತ್ರೀ–ಪುರುಷರ ನಡುವೆ ಸಂಪೂರ್ಣವಾದ ಸಮಾನತೆಯೇ 'ಲಿಂಗ ಸಮಾನತೆ' ಎಂದು ಪರಿಭಾಷಿಸಬಹುದು.

ಲಿಂಗ ಪರಿಗಣನೆ ಇಲ್ಲದೆ ಎಲ್ಲರಿಗೂ ಆರ್ಥಿಕ ಭಾಗವಹಿಕೆ ಮತ್ತು ನಿರ್ಧಾರಗಳನ್ನು ಕೈಗೊಳ್ಳುವಿಕೆಯೂ ಸೇರಿದಂತೆ, ಸಂಪನ್ಮೂಲಗಳು ಮತ್ತು ಅವಕಾಶಗಳಿಗೆ ಸುಲಭ ಮತ್ತು ಸಮಾನ ಸದವಕಾಶಗಳು ಒದಗಿಬರುವ ಸ್ಥಿತಿ ಲಿಂಗಸಮಾನತೆ ಎಂದು ಹೇಳಬಹುದು. ಜೊತೆಗೆ ಇದು, ಲಿಂಗವನ್ನು ಗಣಿಸದೆ, ವಿವಿಧ ವರ್ತನೆಗಳನ್ನು, ಆಶಯಗಳನ್ನು ಮತ್ತು ಅಗತ್ಯಗಳನ್ನು ಗೌರವಿಸುವ ಸನ್ನಿವೇಶವೂ ಹೌದು. ಲಿಂಗಸಮಾನತೆಯನ್ನು ಕುರಿತ ಕೆಲವು ವಿವರಣೆಗಳನ್ನು ಗಮನಿಸೋಣ.

"ಇದು ಸ್ತ್ರೀ–ಪುರುಷರ, ಬಾಲಕ–ಬಾಲಕಿಯರ ಸಮಾನ ಹಕ್ಕುಗಳು, ಜವಾಬ್ದಾರಿಗಳು ಮತ್ತು ಅವಕಾಶಗಳಿಗೆ ಸಂಬಂಧಿಸಿದುದಾಗಿದೆ. ಸಮಾನತೆ ಎಂಬುದು ಸ್ತ್ರೀ ಪುರುಷರಿಬ್ಬರಿಬ್ಬರೂ ಒಂದೇ ರೀತಿ ಆಗುವುದು ಎಂಬುದಲ್ಲ, ಸ್ತ್ರೀ ಪುರುಷರ ಹಕ್ಕುಗಳು, ಜವಾಬ್ದಾರಿಗಳು ಮತ್ತು ಅವಕಾಶಗಳು ಅವರು ಸ್ತ್ರೀಯಾಗಿ ಅಥವಾ ಪುರುಷರಾಗಿ ಹುಟ್ಟಿದ್ದಾರೆಯೇ ಎಂಬುದನ್ನು ಅವಲಂಬಿಸಿರುವುದಲ್ಲ ಎಂಬುದಷ್ಟೆ. ಸ್ತ್ರೀ ಪುರುಷರ ಆಸಕ್ತಿಗಳು, ಅಗತ್ಯಗಳು ಮತ್ತು ಆದ್ಯತೆಗಳನ್ನು ಈ ಎರಡು ಗುಂಪುಗಳ ವೈವಿಧ್ಯತೆಯನ್ನು ಗಮನಿಸಿ, ಅದರ ಆಧಾರದ ಮೇಲೆ ಪರಿಗಣಿಸಲಾಗುವುದು ಎಂಬುದು ಇದರ ನಿಹಿತಾರ್ಥ. ಇದು ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವಿಚಾರವಲ್ಲ; ಅದು ಸ್ತ್ರೀ ಪುರುಷರಿಬ್ಬರ ಕಾಳಜಿಗಳನ್ನೂ ಭಾಗವಹಿಕೆಯನ್ನೂ ಒಳಗೊಂಡಿರುವಂತಹುದು. ಸ್ತ್ರೀ ಪುರುಷರಿಬ್ಬರ ನಡುವಿನ ಸಮಾನತೆಯನ್ನು ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಚಾರವಾಗಿ, ವ್ಯಕ್ತಿ

ಆಧಾರಿತ ಸುಸ್ಥಿರ ಬೆಳವಣಿಗೆಗೆ ಅಗತ್ಯವಾದ ಪೂರ್ವಸನ್ನಿವೇಶ ಹಾಗೂ ಸೂಚಕವಾಗಿ ಗಮನಿಸಬೇಕು". (European Institute for Gender Equality)

ಸ್ತ್ರೀ ಪುರುಷರಿಬ್ಬರ ನಡುವಿನ ಸಮಾನತೆಯೇ ಲಿಂಗ ಸಮಾನತೆ, ಪ್ರತಿಯೊಬ್ಬರೂ–ಅವರು ಸ್ತ್ರೀಯರಾಗಲೀ ಪುರುಷರಾಗಲೀ–ಸಮಾಜದ ಪಡಿಯಚ್ಚುಗಳು, ಕಠಿಣವಾದ ಲಿಂಗ ಪಾತ್ರಗಳು ಮತ್ತು ಪೂರ್ವಾಗ್ರಹಗಳ ಮಿತಿಯಿಲ್ಲದೆ, ವೈಯಕ್ತಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಮತ್ತು ತಮ್ಮದೇ ಆಯ್ಕೆಗಳನ್ನು ಮಾಡಲು ಸ್ವತಂತ್ರರು ಎಂಬ ಪರಿಕಲ್ಪನೆಯನ್ನು ಇದು ಒಳಗೊಳ್ಳುತ್ತದೆ. ಸ್ತ್ರೀಪುರುಷರಿಬ್ಬರ ವಿವಿಧ ವರ್ತನೆಗಳು, ಆಶಯಗಳು ಮತ್ತು ಅಗತ್ಯಗಳನ್ನು ಸಮಾನವಾಗಿ ಪರಿಗಣಿಸುವುದು, ಗೌರವಿಸುವುದು ಮತ್ತು ಅವುಗಳಿಗೆ ಒಲವು ತೋರಿಸುವುದೇ ಲಿಂಗ ಸಮಾನತೆ. ಸಮಾನತೆ ಎಂಬುದು ಸ್ತ್ರೀ ಪುರುಷರಿಬ್ಬರಿಬ್ಬರೂ ಒಂದೇ ರೀತಿ ಆಗುವುದು ಎಂಬುದಲ್ಲ, ಸ್ತ್ರೀ ಪುರುಷರ ಹಕ್ಕುಗಳು, ಜವಾಬ್ದಾರಿಗಳು ಮತ್ತು ಅವಕಾಶಗಳು ಅವರು ಸ್ತ್ರೀಯಾಗಿ ಅಥವಾ ಪುರುಷರಾಗಿ ಹುಟ್ಟಿದ್ದಾರೆಯೇ ಎಂಬುದನ್ನು ಅವಲಂಬಿಸಿರುವುದಲ್ಲ ಎಂಬುದಷ್ಟೆ. ಸ್ತ್ರೀ ಪುರುಷರಿಬ್ಬರ ಅಗತ್ಯಗಳಿಗನುಗುಣವಾಗಿ ನ್ಯಾಯೋಚಿತವಾದ ಪರಿಗಣನೆಯೇ ಲಿಂಗ ಸಮತೆ. ಇದು ಸಮಾನವಾದ ಅಥವಾ ಸಮಾನವಲ್ಲದ ಅವಕಾಶಗಳಾಗಿರಬಹುದು, ಆದರೆ ಅವರ ಹಕ್ಕುಗಳು, ಪ್ರಯೋಜನಗಳು, ಕರ್ತವ್ಯಗಳು ಮತ್ತು ಅವಕಾಶಗಳ ದೃಷ್ಟಿಯಿಂದ ಸಮವೆಂದು ಪರಿಗಣಿತವಾಗಿರುತ್ತವೆ. –UNICEF

ಸಹಸ್ರಮಾನದ ಬೆಳವಣಿಗೆಯನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಕಾರ್ಯಪಡೆಯು(UN Millenium Taskforce on Millenium Development) ಹೆಚ್ಚು ತಾಂತ್ರಿಕವಾದ ಪರಿಭಾಷೆಯನ್ನು ಮುಂದಿಟ್ಟಿದೆ. ಇದು ಈ ಪರಿಕಲ್ಪನೆಯ ಕಾರ್ಯಾತ್ಮಕವಾದ ಚೌಕಟ್ಟಿನಲ್ಲಿ ಪ್ರಮುಖವಾಗಿ ಮೂರು ಆಯಾಮಗಳನ್ನು ಗುರುತಿಸಿದೆ. ಒಂದು, ಸಾಮರ್ಥ್ಯಗಳು. ಇದು ಶಿಕ್ಷಣ, ಆರೋಗ್ಯ ಮತ್ತು ಪೋಷಣೆಯ ಮಾನದಂಡಗಳಲ್ಲಿ ಮಾಪನ ಮಾಡಿದಂತೆ ಮೂಲಭೂತ ಮಾನವ ಸಾಮರ್ಥ್ಯಗಳಿಗೆ ಸಂಬಂಧಿಸಿದುದು, ಎರಡನೆಯದು, ಸಂಪನ್ಮೂಲಗಳು ಮತ್ತು ಅವಕಾಶಗಳಿಗಿರುವ ಸಾಧ್ಯತೆಗಳು(ಭೂಮಿ, ಆಸ್ತಿ ಇವುಗಳ ಕುರಿತ ಸಮಾನ ಹಕ್ಕುಗಳು ಮುಂತಾಗಿ ರಾಜಕೀಯ ಹಾಗೂ ಆರ್ಥಿಕ ವಲಯಗಳಿಗೆ ಸಂಬಂಧಿಸಿದುದು) ಮತ್ತು ಕೊನೆಯದಾಗಿ ಮಹಿಳೆಯರ ಮತ್ತು ಬಾಲಕಿಯರ ಸುರಕ್ಷತೆ ಮತ್ತು ಹಿಂಸೆಗೆ ಅವರು ಒಳಗಾಗುವ ವಿಚಾರ.

ಮೇಲಿನ ವಿವರಣೆಗಳಲ್ಲಿ ಲಿಂಗ ಸಮಾನತೆಯನ್ನು ವಿವರಿಸುವಾಗಲೇ 'ಲಿಂಗ ಸಮತೆ'ಯ ವಿಚಾರವನ್ನೂ ಸೂಚಿಸಿರುವುದನ್ನು ಗಮನಿಸಿ. ಇದಕ್ಕೆ ಕಾರಣ ಈ ಎರಡೂ ಪರಿಕಲ್ಪನೆಗಳು ಸರಿಯಾಗಿ ಅರ್ಥವಾಗಬೇಕಾದರೆ ಎರಡನ್ನೂ ಜೊತೆಜೊತೆಯಲ್ಲೇ ಪರಿಗಣಿಸಬೇಕು. ಹಾಗಾಗಿ ಲಿಂಗ ಸಮತೆಯ ಅರ್ಥವನ್ನು ಗಮನಿಸೋಣ.

ವಿಶ್ವ ಆರೋಗ್ಯ ಸಂಸ್ಥೆಯು ಲಿಂಗ ಸಮತೆಯನ್ನು "ಸ್ತ್ರೀ ಪುರುಷರಿಬ್ಬರಿಗೂ ಪ್ರಯೋಜನಗಳು ಮತ್ತು ಜವಾಬ್ದಾರಿಗಳ ಔಚಿತ್ಯಪೂರ್ಣವಾದ ಮತ್ತು ನ್ಯಾಯಸಮ್ಮತವಾದ ವಿತರಣೆ" ಎಂದು ಪರಿಭಾಷಿಸುತ್ತದೆ. ಇದು ಸಾಮಾಜಿಕ ನ್ಯಾಯ ಎಂಬುದಕ್ಕೆ ಸಂವಾದಿಯಾದ ಪದ. ಲಿಂಗ ಸಮಾನತೆ ಎಂಬ ಪದವನ್ನು ಸಮಗ್ರವಾಗಿ ಹಕ್ಕುಗಳು ಮತ್ತು ಅವಕಾಶಗಳನ್ನು ಜೊತೆಜೊತೆಗೇ ಮಾನವ ಚಟುವಟಿಕೆಯ ಎಲ್ಲ ರಂಗಗಳಲ್ಲಿ ಅಸಮಾನತೆ ಇಲ್ಲದಿರುವುದನ್ನೂ ಸೂಚಿಸಲು ಬಳಸುವುದಾದರೂ ಲಿಂಗಸಮತೆ ಎಂಬ ಪದಕ್ಕೆ ಹೆಚ್ಚು ಸಂಕೀರ್ಣವಾದ ಅರ್ಥದ ಅನ್ವಯವಿದೆ. ಇದು ಬಹಳಮಟ್ಟಿಗೆ ಆರ್ಥಿಕವಾದ ಅಥವಾ ಭೌತಿಕವಾದ ಅರ್ಥದಲ್ಲಿ ಬಳಕೆಯಾಗುವಂತಹುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ 'ಲಿಂಗ ಸಮಾನತೆ'ಯನ್ನು ಸಾಧಿಸುವ ಸಾಧನ ಅಥವಾ ಮಾರ್ಗ 'ಲಿಂಗ ಸಮತೆ' ಎಂದು ಹೇಳಬಹುದು.

ಮೇಲಿನ ಪರಿಭಾಷೆಗಳ ವಿಶ್ಲೇಷಣೆಯು ಕೆಳಗಿನ ಅಂಶಗಳನ್ನು ಸೂಚಿಸುತ್ತದೆ:

- ಲಿಂಗ ಸಮಾನತೆ ಎಂಬುದು ಮಾನವ ಹಕ್ಕು; ಮಹಿಳೆಯ ಹಕ್ಕಲ್ಲ;
- ಲಿಂಗ ಸಮಾನತೆಯನ್ನು ಸಾಧಿಸುವುದು ಸಮಾಜದ ಎಲ್ಲರ ಜವಾಬ್ದಾರಿ;

- ಲಿಂಗ ಸಮಾನತೆಯ ಸಮಸ್ಯೆಯನ್ನು ಪುರುಷರೂ ಎದುರಿಸುವುದರಿಂದ ಇದು ಪ್ರತ್ಯೇಕವಾಗಿ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವಿಚಾರವಲ್ಲ;
- ಸ್ತ್ರೀಪುರುಷರಿಬ್ಬರ ಅಗತ್ಯ ಮತ್ತು ಆಶಯಗಳನ್ನು ಅನುಕೂಲಕರವಾಗಿ ಪರಿಗಣಿಸಬೇಕು;
- ಇದು ಸ್ತ್ರೀಪುರುಷರಿಬ್ಬರನ್ನೂ ಸಬಲಗೊಳಿಸುವಲ್ಲಿನ ಸಮಾನತೆಯನ್ನು ಪೋಷಿಸುತ್ತದೆ; ಮತ್ತು
- ಲಿಂಗ ಸಮಾನತೆ ಅಂತಿಮ ಗುರಿ; ಲಿಂಗ ಸಮತೆ ಗುರಿಯನ್ನು ಸಾಧಿಸುವ ಮಾರ್ಗ ಅಥವಾ ಸಾಧನ.

ಲಿಂಗ ಸಮಾನತೆಯ ಅರ್ಥವನ್ನು ತಿಳಿದ ನಂತರ ಅದನ್ನು ಸಾಧಿಸುವುದರಿಂದಾಗುವ ಪ್ರಯೋಜನಗಳನ್ನು ತಿಳಿಯೋಣ:

ಎಲ್ಲರೂ ಆರೋಗ್ಯಕರವಾದ ಆನಂದಕರವಾದ ಮತ್ತು ತೃಪ್ತಿಕರವಾದ ಸುಗಮ ಜೀವನವನ್ನು ನಡೆಸಲು ಸಮಾನತೆ ಎಂಬುದು ಅಗತ್ಯ ಅಡಿಪಾಯ. ತಾರತಮ್ಯವನ್ನು ಹಾಗೂ ಅಪಾಯಕಾರಿಯಾದ ಸಾಮಾಜಿಕ ಪಡಿಯಚ್ಚುಗಳನ್ನು ಮೀರುವುದರಿಂದ ಲಿಂಗಾಧಾರಿತ ಹಿಂಸೆಯನ್ನು ಹೋಗಲಾಡಿಸಿ, ಹೆಚ್ಚಿನ ಗುಣಮಟ್ಟದ ಬದುಕು ಸಾಗಿಸಬಹುದು.

ಮಹಿಳೆಯರನ್ನು ಕುರಿತ ತಾರತಮ್ಯವನ್ನು ಹೋಗಲಾಡಿಸಿ, ಅವರಿಗೂ ಶಿಕ್ಷಣ ಹಾಗೂ ಉದ್ಯೋಗಗಳಿಗೆ ಸಮಾನಾವಕಾಶಗಳನ್ನು ಒದಗಿಸುವುದರಿಂದ ಸುಸ್ಥಿರ ಅಭಿವೃದ್ಧಿ ಸಾಧ್ಯ. ಕಾರಣ ಇದು ಆರ್ಥಿಕ ಅಭಿವೃದ್ಧಿಯನ್ನು ಪೋಷಿಸುತ್ತದೆ.

ಬಾಲಕಿಯರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯವನ್ನು ಹೋಗಲಾಡಿಸುವುದರ ಮೂಲಕ ಲಿಂಗ ಸಮಾನತೆಯು ಸುರಕ್ಷವೂ ಸುಭದ್ರವೂ ಆದ ಸಮುದಾಯ ಮತ್ತು ಸಮಾಜವನ್ನು ರೂಪಿಸಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ ಸರಿಯಾದವುಗಳನ್ನು 'ಸರಿ' ಎಂತಲೂ ತಪ್ಪಾಗಿರುವುದನ್ನು 'ತಪ್ಪು' ಎಂತಲೂ ಗುರುತಿಸಿ

1. ಲಿಂಗ ಸಮಾನತೆ ಎಂಬುದು ಮಾನವ ಹಕ್ಕು.
2. ಲಿಂಗ ಸಮಾನತೆ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವಿಚಾರ.
3. ಶಾಂತಿಯುತವಾದ ಸಾಮಾಜಿಕ ಜೀವನಕ್ಕೆ ಲಿಂಗ ಸಮಾನತೆ ಒಂದು ಅಡ್ಡಿ.
4. ಲಿಂಗ ಸಮಾನತೆಯು ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ.
5. UNESCO ಲಿಂಗ ಸಮಾನತೆಯನ್ನು ಪೋಷಿಸುತ್ತದೆ.

## 4.6.3.2. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜದ ಪಾತ್ರ

ಈಗಾಗಲೇ ಹೇಳಿದಂತೆ ಲಿಂಗ ಸಮಾನತೆ ಎಂಬುದು ಸ್ತ್ರೀಪುರುಷರಿಬ್ಬರಿಗೂ ಸಂಬಂಧಿಸಿದುದು. ಇದನ್ನು ಸಾಧಿಸಲು ಸಮಾಜದ ಎಲ್ಲ ಸದಸ್ಯರೂ ಸಂಸ್ಥೆಗಳೂ ಕಾರ್ಯಪ್ರವೃತ್ತವಾಗಬೇಕು. ಅಂದರೆ ಒಟ್ಟು ಸಮಾಜವೇ ಈ ದಿಸೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕು. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜ ಹೇಗೆ ಪ್ರಯತ್ನಿಸಬಹುದು ಎಂಬುದನ್ನು ತಜ್ಞರು ಸೂಚಿಸಿದ್ದಾರೆ. ಈ ಅಂಶಗಳನ್ನು ಗಮನಿಸೋಣ:

**ಮಾದರಿಗಳನ್ನು ಮುಂದಿಡಬೇಕು:** ಮನೆಯೆ ಮೊದಲ ಪಾಠಶಾಲೆಯಲ್ಲವೇ? ಎಲ್ಲರೂ ಇಲ್ಲಿ ಕಲಿತದ್ದನ್ನು ಕೊನೆಯವರೆಗೂ ಕೊಂಡೊಯ್ಯುತ್ತಾರೆ. ಹಾಗಾಗಿ ಮಾರ್ಪಾಡುಗಳು ಮೊದಲಾಗಬೇಕಾದುದು ಮನೆಯಲ್ಲಿಯೇ.

ತಂದೆ ಮನೆಯಲ್ಲಿ ಎಲ್ಲರಿಗೂ ಮಾದರಿ. ತಂದೆಯು ಸಮಾಜ ಹೇರುವ ಪಡಿಯಚ್ಚುಗಳನ್ನು ದಾಟಿ ಲಿಂಗ ಸಮಾನತೆಯ ವರ್ತನೆಗಳನ್ನು ಅಳವಡಿಸಿಕೊಂಡರೆ ಮನೆಯ ಮಕ್ಕಳೆಲ್ಲರೂ ಸಹಜವಾಗಿಯೇ ಸಮಾನತೆಯನ್ನು ಮೈಗೂಡಿಸಿಕೊಳ್ಳುತ್ತಾರೆ. ಮನೆಯ ಕೆಲಸಗಳನ್ನು ಲಿಂಗಭೇದವಿಲ್ಲದೆ ಮಾಡಿದರೆ ಅದು ಮುಂದಿನವರಿಗೆ ಉತ್ತಮ ಉದಾಹರಣೆಗಳಾಗುತ್ತವೆ. ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು, ಮನೆ ಸ್ವಚ್ಛಮಾಡುವುದು, ಅಂಗಡಿಗೆ ಹೋಗಿ ಸಾಮಾನು ತರುವುದು, ಮಕ್ಕಳ ಶಾಲೆಗೆ ಹೋಗಿ ಅವರ ಸಾಧನೆಯ ಬಗ್ಗೆ ವಿಚಾರಿಸುವುದು, ಕರೆಂಟ್ ಬಿಲ್ ಕಟ್ಟುವುದು, ಗ್ಯಾಸ್ ತರಿಸಲು ಫೋನ್ ಮಾಡುವುದು – ಈ ಎಲ್ಲ ಕೆಲಸಗಳನ್ನೂ ಲಿಂಗದ ಆಧಾರದ ಮೇಲಲ್ಲದೆ, ಗಂಡ ಹೆಂಡಿರ ವಿರಾಮ, ಸದ್ಯದ ಶಕ್ತಿ, ಅಗತ್ಯ ಇತ್ಯಾದಿಗಳಿಗನುಗುಣವಾಗಿ ಮಾಡಿದರೆ ಮಕ್ಕಳೂ ಅದನ್ನೇ ತಮ್ಮ ವರ್ತನೆಗಳಾಗಿ ರೂಢಿಸಿಕೊಳ್ಳುತ್ತಾರೆ. ಎಲ್ಲರನ್ನೂ ಗೌರವದಿಂದ, ಪ್ರೀತಿಯಿಂದ ಸಮಭಾವದಿಂದ ನೋಡುವುದು, ಅಗತ್ಯಗಳಿಗನುಗುಣವಾಗಿ ಒತ್ತಾಸೆ ಮಾಡುವುದು, ವಿಶೇಷವಾಗಿ ಪುರುಷ ಪ್ರಧಾನವಾದ ಸಾಮಾಜಿಕ ನಡೆವಳಿಕೆಗಳನ್ನು ಮನೆಯಲ್ಲಿ ಚರ್ಚಿಸಿ ಅವುಗಳು ಹೇಗೆ ಅಸಾಧುವಾದವುಗಳು ಎಂಬುದನ್ನು ಕುಟುಂಬದ ಸದಸ್ಯರೆಲ್ಲರೂ ಮನದಟ್ಟು ಮಾಡಿಕೊಳ್ಳುವುದು, ಸಮುದಾಯದ ಪ್ರಭಾವದಿಂದ ಬೆಳೆದುಬಂದ ಲಿಂಗಭೇದ ಆಧಾರಿತ ವರ್ತನೆಗಳನ್ನು ತಿದ್ದಿ ಸರಿಪಡಿಸುವುದು ಇವೆಲ್ಲವೂ ಲಿಂಗ ಸಮಾನತೆಯ ಬೆಳವಣಿಗೆಗೆ ಕುಟುಂಬದ ಕೊಡುಗೆಗಳೇ.

**ಪ್ರಮುಖ ಮೌಲ್ಯಗಳನ್ನು ಗೌರವಿಸಬೇಕು:** ಲಿಂಗ, ಜಾತಿ, ಸಾಮಾಜಿಕ ಆರ್ಥಿಕ ಸ್ಥಿತಿ, ಧರ್ಮ, ಶೈಕ್ಷಣಿಕ ಸ್ಥಾನಮಾನ ಇವುಗಳಾವುದನ್ನೂ ಲೆಕ್ಕಿಸದೆ, ಒಬ್ಬರನ್ನೊಬ್ಬರು ಗೌರವಿಸುವುದನ್ನು ಪ್ರೋತ್ಸಾಹಿಸಬೇಕು. ಇದು ಸಮಾಜದ ಸರ್ವ ಸದಸ್ಯರೂ ನಡೆದುಕೊಳ್ಳಬೇಕಾದ ರೀತಿ. ಇದು ಎಳವೆಯಲ್ಲೇ ಮಗುವಿನ ಮನಸ್ಸಿನಲ್ಲಿ ಬೇರೂರಿದರೆ ಸಮಾನತೆ ತಾನೇ ತಾನಾಗಿ ಒಡಮೂಡುತ್ತದೆ. ಲಿಂಗ ಸಮಾನತೆಯುಳ್ಳ ಸಮಾಜ ರೂಪುಗೊಳ್ಳುತ್ತದೆ.

**ವಯೋಮಾನಕ್ಕನುಗುಣವಾಗಿ ಲಿಂಗ ವಿಚಾರಗಳನ್ನು ಕುರಿತು ಮಾತನಾಡಬೇಕು:** ಮಕ್ಕಳು ಕೆಲವೊಮ್ಮೆ ಗೊತ್ತಿದ್ದು, ಕೆಲವೊಮ್ಮೆ ಗೊತ್ತಿಲ್ಲದೆಯೇ ಲಿಂಗಭೇದವುಳ್ಳ ಚಟುವಟಿಕೆಯನ್ನು ಕಲಿತುಬಿಡುತ್ತಾರೆ. ನಿಮಗೆ ಒಂದು ಸನ್ನಿವೇಶವನ್ನು ವಿವರಿಸುತ್ತೇನೆ. ನಮ್ಮ ಮನೆಯಲ್ಲಿ ಎಲ್ಲರೂ ಒಟ್ಟಿಗೇ ಊಟಮಾಡುವ ಪದ್ಧತಿ ಇತ್ತು. ಪ್ರತಿಯೊಬ್ಬರೂ ಅವರಿಗೆಂದೇ ಪ್ರತ್ಯೇಕವಾಗಿ ಗುರುತು ಮಾಡಿದ ತಟ್ಟೆಯನ್ನು ಬಳಸಬೇಕಾಗಿತ್ತು. ಒಮ್ಮೆ ನನ್ನ ಮಗನ ತಟ್ಟೆ ಯಾವುದೋ ಕಾರಣಕ್ಕೆ ಕೈಗೆ ಸಿಗಲಿಲ್ಲ. ಅವನಿಗೆ ಒಳ್ಳೆಯ ಮಾತು ಹೇಳಿ ಅವನಿಗೆ ಬೇರೆ ತಟ್ಟೆ ಕೊಟ್ಟೆವು. ಆಗಿನ್ನೂ ಅವನಿಗೆ ಐದು ವರ್ಷ. ಬೇರೆ ತಟ್ಟೆ ಕೊಟ್ಟ ಕೂಡಲೆ ಅವನು, "ಇದು ಹೆಂಗಸರ ತಟ್ಟೆ; ನನಗೆ ಬೇಡ" ಎಂದುಬಿಟ್ಟ. ಇವನನ್ನು ಯಾವುದೇ ಭೇದಭಾವಗಳ ಮನಸ್ಸಿಲ್ಲದೇ ಬೆಳೆಸಬೇಕೆಂದಿದ್ದ ನಮ್ಮಿಬ್ಬರಿಗೂ ಅತಿ ಆಶ್ಚರ್ಯವಾಯಿತು. "ಹಾಗೆಂದರೇನು" ಎಂದು ಕೇಳಿದೆವು. ಅವನು ತಟ್ಟೆಯ ಅಂಚು ತೋರಿಸಿ "ಇದು ಹೆಂಗಸರು ಊಟಮಾಡುವ ತಟ್ಟೆ, ನನಗೆ ಅಪ್ಪನ ತಟ್ಟೆಯ ಹಾಗೆ ಇರುವುದು ಬೇಕು" ಎಂದ. ಅವನಪ್ಪನ ತಟ್ಟೆಗೆ ಅಂಚು ಇರಲಿಲ್ಲ. "ಅಜ್ಜಿಯ ಮನೆಯಲ್ಲೂ ಹಾಗೆ; ಬೇಕಾದರೆ ನೋಡು" ಎಂದ. ನನ್ನ ತಾಯಿಯ ಮನೆಗೆ ಹೋದಾಗ ಗಮನಿಸಿದೆ. ನನ್ನ ಅಕ್ಕತಂಗಿಯರೆಲ್ಲರಿಗೂ ಅಂಚಿರುವ ತಟ್ಟೆ ಇತ್ತು, ನನ್ನ ತಮ್ಮನಿಗೆ ಅಂಚಿಲ್ಲದ ತಟ್ಟೆ ಇತ್ತು. ಇವನು ಇಲ್ಲಿಂದ ಕಲಿತಿದ್ದಾನೆ ಎಂದು ಆಗ ತಿಳಿಯಿತು. ಅಂದು ಅವರಪ್ಪ ಅಂಚಿರುವ ತಟ್ಟೆಯಲ್ಲಿ ನಾನು ಅಂಚಿಲ್ಲದ ತಟ್ಟೆಯಲ್ಲಿ ಊಟಮಾಡಿದೆವು. ಆ ರೀತಿ ಅಂದುಕೊಳ್ಳಲು ಕಾರಣವಿಲ್ಲ ಎಂಬುದನ್ನು ನಿಧಾನವಾಗಿ ತಿಳಿಸಿ ಹೇಳಿದೆವು. ಹೀಗೆ ಮಕ್ಕಳು ಯಾವ ಮೂಲದಿಂದ, ಯಾವ ತರ್ಕದಿಂದ ಇಂತಹ ವರ್ತನೆಗಳನ್ನು ಕಲಿಯುತ್ತಾರೆ ಎಂದು ಹೇಳಲಾಗುವುದಿಲ್ಲ. ಹೆತ್ತವರು ಈ ಕುರಿತು ಜಾಗರೂಕರಾಗಿರಬೇಕು.

**ಲಿಂಗ ಸಮಾನತೆಯ ಪ್ರಚಾರ ಚಳುವಳಿಗಳಲ್ಲಿ ಪುರುಷರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳಬೇಕು:** ಲಿಂಗ ಸಮಾನತೆಯ ಚಳುಚಳಿಗಳು ಹಾಗೂ ಪೌರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪುರುಷರೂ ಭಾಗವಹಿಸಬೇಕು. ಇದು ಸಮಾಜದಲ್ಲಿ ಅಸಮಾನತೆಯನ್ನು ಉಂಟುಮಾಡುವ ಎಲ್ಲ ವಿಷಯಗಳಲ್ಲೂ ಇಬ್ಬರ ಪಾತ್ರಗಳೂ ಎಷ್ಟು ಪ್ರಮುಖವಾಗುತ್ತದೆ ಎಂಬುದನ್ನು ಅರ್ಥಮಾಡಿಸುತ್ತದೆ. ಲಿಂಗ ಸಮಾನತೆಯ ವಿಚಾರಗಳನ್ನು

ಪ್ರಸ್ತಾಪಿಸುವಾಗ ಅವರು ಅದನ್ನು 'ಮಾನವ ಹಕ್ಕುಗಳ' ಹಿನ್ನೆಲೆಯಲ್ಲಿ ಪ್ರತಿಪಾದಿಸಿದರೆ, ಸಮಾಜದ ವಿವಿಧ ಕಾರ್ಯಗಳಲ್ಲಿ–ಸಾಮಾಜಿಕ ವಿಷಯ ವಿಶ್ಲೇಷಣೆ, ನಿರ್ಧಾರ ತೆಗೆದುಕೊಳ್ಳುವಿಕೆ, ಮೌಲ್ಯ ಪ್ರಸಾರ–ಸ್ತ್ರೀಯರ ಪಾತ್ರವೂ ಇದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ. ಸಾಮಾಜಿಕ ನ್ಯಾಯದ ನಿಜವಾದ ಸ್ವರೂಪದ ಅರಿವಾಗುತ್ತದೆ.

**ಗೃಹಕೃತ್ಯಗಳಲ್ಲಿ ಪುರುಷರ ತೊಡಗಿಸಿಕೊಳ್ಳುವಿಕೆ ಹೆಚ್ಚಾಗಬೇಕು:** ಇಂದು ಗಂಡಹೆಂಡಿರಿಬ್ಬರೂ ಉದ್ಯೋಗಕ್ಕೆ ಹೋಗುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿ. ಹಿಂದೆಯೇ ಹೇಳಿದಂತೆ ತಂದೆತಾಯಿಯರಿಬ್ಬರೂ ಲಿಂಗಭೇದವಿಲ್ಲದೆ ಪರಸ್ಪರ ಮನೆಗೆಲಸವನ್ನು ತೂಗಿಸಿಕೊಂಡು ಹೋಗುವುದು ಮುಂದಿನ ಪೀಳಿಗೆಗೆ ಉತ್ತಮ ಮಾದರಿ.

**ಪೋಷಣೆಯಲ್ಲಿ ಪುರುಷರ ಪಾಲೂ ಇರಬೇಕು:** ಮನೆಯವರ ಪೋಷಣೆ ಎಂದರೆ ಅದು ಮಹಿಳೆಯರಿಗೇ ಮೀಸಲು ಎಂಬ ಸಾಮಾಜಿಕ ಪಡಿಯಚ್ಚನ್ನು ಬದಿಗಿರಿಸಿ ಎಲ್ಲರೂ ಎಲ್ಲರ ಪೋಷಣೆಯಲ್ಲಿ ತಮ್ಮ ಮಿತಿಗೆ ಅನುಗುಣವಾಗಿ ಭಾಗವಹಿಸುವುದರಿಂದ ಲಿಂಗ ಪಡಿಯಚ್ಚುಗಳು ಕ್ರಮೇಣ ಶಿಥಿಲವಾಗಿ ಮಾಯವಾಗುತ್ತವೆ.

**ಸಂಸ್ಥೆಗಳು ನಾಯಕತ್ವ ವಹಿಸಬೇಕು:** ಲಿಂಗ ಸಮಾನತೆಯನ್ನು ತರುವಲ್ಲಿ ವಿವಿಧ ಉದ್ಯೋಗ ಸಂಸ್ಥೆಗಳದ್ದು ಸಿಂಹಪಾಲು. ಸಂಸ್ಥೆಯ ಕೆಲಸಗಳ ಹಂಚಿಕೆ, ನಾಯಕತ್ವ, ವೇತನ, ಭಾಷೆಯ ಬಳಕೆ, ಗೌರವ, ಈ ಎಲ್ಲವನ್ನೂ ಲಿಂಗಭೇದವಿಲ್ಲದೆ ನಡೆಸಿಕೊಂಡುಹೋಗುವುದರಿಂದ ಲಿಂಗ ಸಮಾನತೆಯನ್ನು ಉಳಿಸಿ ಬೆಳೆಸುವಲ್ಲಿ ಕೊಡುಗೆ ನೀಡಿದಂತಾಗುತ್ತದೆ.

**ಬಾಲ್ಯವಿವಾಹವನ್ನು ಕಡ್ಡಾಯವಾಗಿ ತಡೆಯಬೇಕು:** ಬಾಲ್ಯವಿವಾಹ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಹು ದೊಡ್ಡ ಅಡ್ಡಿ. ಸರ್ಕಾರ, ಕುಟುಂಬಗಳು, ಶಾಲೆಗಳು, ಧಾರ್ಮಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಮಾಧ್ಯಮ, ಇವೆಲ್ಲವೂ ಬಾಲ್ಯವಿವಾಹವನ್ನು ತೊಡೆದುಹಾಕುವಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಕಾರ್ಯಗತವಾಗಬೇಕು. ಇದು ಹೆಣ್ಣುಮಕ್ಕಳಲ್ಲಿ ಶಿಕ್ಷಣವನ್ನು ಹೆಚ್ಚಿಸಿ ಅವರು ಒಳಗಾಗುತ್ತಿರುವ ಅನೇಕ ರೀತಿಯ ಕಿರುಕುಳವನ್ನು ಹೋಗಲಾಡಿಸುವಲ್ಲಿ ಸಹಾಯವಾಗುತ್ತದೆ.

**ಪೂರ್ವಾಗ್ರಹದಿಂದ ಹೊರಬರಬೇಕು :** ಉದ್ಯೋಗ, ಪರಿಹಾರ ಇವುಗಳನ್ನು ನೀಡುವಾಗ ಲಿಂಗ, ಧರ್ಮ, ಜಾತಿ, ವಿವಾಹದ ಸ್ಥಿತಿ, ಇತರ ಯಾವುದೇ ಮಾನದಂಡಗಳಿಲ್ಲದೆ, ವ್ಯಕ್ತಿಯ ಅರ್ಹತೆಗನುಗುಣವಾಗಿಯೇ, ಜೊತೆಗೆ 'ಸಮತೆ'ಯ ಆಧಾರದ ಮೇಲೆ ಈ ವಿಷಯಗಳನ್ನು ಕುರಿತ ನಿರ್ಧಾರಗಳನ್ನು ಕೈಗೊಳ್ಳಬೇಕು. ಕೂಲಿ, ವೇತನ, ಕೆಲಸ, ಸವಲತ್ತುಗಳು ಇವುಗಳನ್ನು ಪರಿಗಣಿಸುವಾಗ ಮಹಿಳೆ ಎಂಬ ಕಾರಣದಿಂದಾಗಿ ಪರಿಗಣನೆ ಬೇರೆಯಾಗಬಾರದು. ಈ ಕುರಿತ ನ್ಯಾಯಸಮ್ಮತವಾದ ನಿಯಮಗಳನ್ನು ಸಂಸ್ಥೆಗಳು ರೂಪಿಸಿ ಪಾಲಿಸುವಂತೆ ಸಮಾಜ ಗಮನಿಸಿಕೊಳ್ಳಬೇಕು.

**ಮಾಧ್ಯಮಗಳು ಮಧ್ಯಸ್ಥಿಕೆ ವಹಿಸಬೇಕು:** ಲಿಂಗ ಅಸಮಾನತೆಯನ್ನು ಮುಂದಿಡುವಲ್ಲಿ ಇತ್ತೀಚೆಗೆ ಮಾಧ್ಯಮಗಳದ್ದೇ ಮೇಲುಗೈ. ಮಹಿಳೆಯರನ್ನು ಕುರಿತು ಮಾಧ್ಯಮಗಳು ಪ್ರಸಾರ ಮಾಡುವ ಸುದ್ದಿಗಳ ಪ್ರಮಾಣ, ಸುದ್ದಿಗಳ ನಮೂನೆ, ಇವುಗಳನ್ನು ಗಮನಿಸಿದರೆ ಸಾಕು, ಈ ವಿಷಯದಲ್ಲಿ ಮಾಧ್ಯಮಗಳು ಎಷ್ಟು ಹಿಂದಿವೆ ಎಂಬ ವಿಚಾರ ಗಮನಕ್ಕೆ ಬರುತ್ತದೆ. ಸಮಾಜದ ಪಡಿಯಚ್ಚುಗಳನ್ನು ಗಟ್ಟಿಗೊಳಿಸುವಂತಹ ಧಾರಾವಾಹಿಗಳು, ಸಿನೆಮಾಗಳು ದಿನೇ ದಿನೇ ಪ್ರಸಾರವಾಗುತ್ತಲೇ ಇರುತ್ತವೆ. ಇವು ಸಮಾಜದ ಸದಸ್ಯರು ಮುಂದೆ ಬರುವುದಿರಲಿ, ಪ್ರಗತಿಗೆ ವಿರುದ್ಧ ದಿಕ್ಕಿನಲ್ಲಿ ಆಲೋಚಿಸುವಂತೆ ಮಾಡುತ್ತವೆ. ಮಾಧ್ಯಮಗಳು ಎಲ್ಲರನ್ನೂ ಹೆಚ್ಚು ಗುಣಮಟ್ಟದ ಮೌಲಿಕವಾದ ಆಲೋಚನೆಗಳಿಗೆ ಹಚ್ಚಬೇಕು; ಪ್ರಗತಿಗಾಮಿಗಳಾಗಿ ಆಲೋಚಿಸಲು, ಸಕ್ರಿಯರಾಗಲು ಪ್ರೋತ್ಸಾಹಿಸುವ ಸುದ್ದಿಗಳನ್ನು, ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕು. ಲಿಂಗ ಸಮಾನತೆಯನ್ನು ಮಾನವ ಹಕ್ಕು ಎಂಬಂತೆ ಬಿಂಬಿಸಬೇಕು. ಲಿಂಗ ಸಮಾನತೆಯನ್ನು ತರಲು ನಿಜವಾಗಿ ಮಾಧ್ಯಮಗಳಿಗೆ ಅತಿ ಹೆಚ್ಚಿನ ಅವಕಾಶಗಳಿವೆ.

**ಹೆಂಗಳೆಯರ ಮತ್ತು ಅವರ ಹೆತ್ತವರ ಆಶಯಗಳ ಮಟ್ಟವನ್ನು ಎತ್ತರಕ್ಕೆ ಏರಿಸಬೇಕು:** ಹೆಂಗಳೆಯರು ಏನು ಮಾಡಬೇಕು, ಏನಾಗಬೇಕು ಎಂಬ ಸಮಾಜದ ಹಾಗೂ ಹೆತ್ತವರ ಕಲ್ಪನೆಗಳು ಬದಲಾಗಬೇಕು. ಸ್ವಯಂ ಉದ್ಯೋಗ ಪ್ರಾರಂಭಿಸುವುದಾದರೂ ಅದು 'ಹಪ್ಪಳ, ಹುಡಿಗಳಿಗೆ' ಸೀಮಿತವಾಗದೆ, ವಿವಿಧ ಕ್ಷೇತ್ರಗಳ ಉನ್ನತ ಮಟ್ಟದ ಸವಾಲುಗಳನ್ನೆದುರಿಸುವಂತಹುದಾಗಬೇಕು. ಉದ್ಯೋಗ ಸೃಷ್ಟಿಯಲ್ಲಿ ಹೆಂಗಳೆಯರಿಗೂ ಅವಕಾಶ ಕೊಡಬೇಕು. ಇದು ಮಹಿಳೆಯರ ಸ್ಥಾನವನ್ನು ಮೇಲೇರಿಸಿ ಸಮಾನತೆಯ ಸಾಧನೆಗೆ ಸಹಕಾರಿಯಾಗುತ್ತದೆ.

**ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀ ಪುರುಷರಿಬ್ಬರಿಗೂ ಅವಕಾಶ ಮತ್ತು ಪ್ರೋತ್ಸಾಹನೀಡಬೇಕು:** ನಮ್ಮ ದೇಶ ಸ್ವತಂತ್ರವಾಗಿ ಇಷ್ಟು ವರ್ಷಗಳಾಗಿದ್ದರೂ ಇಂದಿಗೂ ಸ್ತ್ರೀಯರಿಗೆ ಕೆಲವು ಕ್ಷೇತ್ರಗಳು ಮಾತ್ರ ಸೀಮಿತವಾಗಿವೆ. ರಾಜಕೀಯ, ವಿಜ್ಞಾನ, ತಂತ್ರಜ್ಞಾನ, ಇತ್ಯಾದಿ ಕ್ಷೇತ್ರಗಳು ಇಂದಿಗೂ ಪುರುಷ ಪ್ರಧಾನವಾಗಿಯೇ ಇವೆ. ಈ ಕ್ಷೇತ್ರಗಳಲ್ಲಿ ಮಹಿಳೆಯರು ಪ್ರವೇಶಿಸುತ್ತಿದ್ದಾರೆ ಎಂದು ಹೇಳುತ್ತಲೇ ಬಂದಿದ್ದೇವಾದರೂ ಅಪೇಕ್ಷಣೀಯ ಪ್ರಮಾಣದಲ್ಲಿಲ್ಲ. ಇದಕ್ಕೆ ಸಮಾಜದ ಪುರುಷರ ಸಹಕಾರ ಅತ್ಯಗತ್ಯ. ಶಿಕ್ಷಣ, ತರಬೇತಿ ದೊರೆತರೆ ಹೆಣ್ಣುಮಕ್ಕಳೂ ಸಾಧಿಸಬಹುದು ಎಂಬುದನ್ನು ಪ್ರಮಾಣೀಕರಿಸುವಷ್ಟು ಉದಾಹರಣೆಗಳು ನಮ್ಮಲ್ಲಿ ಈಗಾಗಲೇ ಇವೆ. ಇದಕ್ಕೆ ಸಮಾಜದ ಸಂಪೂರ್ಣ ಸಹಕಾರ, ಪೂರಕ ಮನೋಭಾವ ಅಗತ್ಯ.

**ಪರಿಹಾರ ಯೋಜನೆಗಳನ್ನು ಹಮ್ಮಿಕೊಳ್ಳಬೇಕು:** ಅವಕಾಶ, ಭಾಗವಹಿಕೆ, ಪ್ರಯೋಜನ ಇವುಗಳಿಂದ ವಂಚಿತರಾಗಿ ತಮ್ಮ ಹಕ್ಕುಗಳನ್ನು ಅನುಭವಿಸಲಾಗದ ಸ್ತ್ರೀಪುರುಷ ವರ್ಗಕ್ಕೆ ಸೇರಿದವರಿಬ್ಬರೂ ನಮ್ಮ ಕಣ್ಣೆದುರಿಗೇ ಇದ್ದಾರೆ. ಸಮಾನತೆಯಿಂದ ಮಹಿಳೆಯರು ವಂಚಿತರಾಗಿರುವಂತೆಯೇ ಪುರುಷರೂ ವಂಚಿತರಾಗಿರುವ ಸ್ಥಿತಿ ನಮ್ಮೆದುರು ಇದೆ. ಹಾಗಾಗಿ ಇಂತಹ ಸಂದರ್ಭಗಳಲ್ಲಿ ವಂಚಿತರಾದವರ ಸಾಮರ್ಥ್ಯದ ಫಲವೂ ಸಮುದಾಯಕ್ಕೆ ದೊರಕುವಂತೆ, ಅವರ ಸಾಮರ್ಥ್ಯಗಳನ್ನು ಹೆಚ್ಚಿಸುವ, ಅವರಿಗೆ ಗುಣಮಟ್ಟದ ಜೀವನವನ್ನೊದಗಿಸುವ ಪರಿಹಾರ ಯೋಜನೆಗಳನ್ನು ಸರ್ಕಾರ ಹಾಗೂ ಇತರ ಸಂಸ್ಥೆಗಳು ಹಮ್ಮಿಕೊಳ್ಳಬೇಕು. ಸಮಾನತೆಯ ಸಾಧನೆಯ ಹಾದಿಯಲ್ಲಿ ಇದೂ ಒಂದು ಪ್ರಮುಖ ಹೆಜ್ಜೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಲಿಂಗ ಸಮಾನತೆಯನ್ನು ಸಾಧಿಸುವ ಹಾದಿಯಲ್ಲಿ ನಿಮ್ಮ ಶಾಲೆಯ ಯಾವ ಅಭ್ಯಾಸಗಳು ಪೂರಕವಾಗಿವೆ ಮತ್ತು ಯಾವ ಅಭ್ಯಾಸಗಳು ಪೂರಕವಾಗಿಲ್ಲ ಎಂಬುದನ್ನು ಗುರುತಿಸಿಕೊಳ್ಳಿ. ಪೂರಕವಾಗಿಲ್ಲದಿರುವುದನ್ನು ಸರಿಪಡಿಸಲು ಒಂದು ಕಾರ್ಯಯೋಜನೆಯನ್ನು ತಯಾರಿಸಿ.

## 4.6.3.3. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ

ಲಿಂಗ ಸಮಾನತೆಯನ್ನು ಸಾಧಿಸುವಸುವಲ್ಲಿ ಸಮಾಜವು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ನಾವು ಗಮನಿಸಿದ್ದೇವೆ. ಸಮಾಜವು ಅನೇಕ ರೀತಿಯ ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನೊಳಗೊಂಡ ಸಮಗ್ರ ಸಂಸ್ಥೆ. ಇದರಲ್ಲಿ ಶೈಕ್ಷಣಿಕ ಸಂಸ್ಥೆಗಳು ಒಟ್ಟು ಸಮಾಜದ ಗುರಿಗಳನ್ನು ಸಾಧಿಸುವಲ್ಲಿ ಗಮನಾರ್ಹ ಪಾತ್ರವನ್ನು ವಹಿಸುತ್ತವೆ. ಎಲ್ಲ ರೀತಿಯ ಅಸಮಾನತೆಗಳನ್ನು ಹೋಗಲಾಡಿಸಿ ಪೌರರಿಗೆ ಉತ್ತಮ ಬದುಕನ್ನು ಕಟ್ಟಿಕೊಡುವುದೇ ಸಮಾಜದ ಗುರಿ. ಹಾಗಾಗಿ ಈ ಗುರಿಯನ್ನು ಸಾಧಿಸುವಲ್ಲಿ ಸಮಾಜದ ಅಂಗ ಸಂಸ್ಥೆಯಾದ ಶಿಕ್ಷಣ ಸಂಸ್ಥೆಗಳದ್ದೂ ಹೆಚ್ಚಿನ ಪಾಲು ಇದೆ. ಹಾಗಾಗಿ, ಸಮಾನತೆಯನ್ನು ಸಾಧಿಸುವಲ್ಲಿ ಶಿಕ್ಷಣ ಸಂಸ್ಥೆಗಳ, ಹಾಗೂ ಅದರ ಉಪಘಟಕಗಳಾದ ಶಾಲೆ, ಅಧ್ಯಾಪಕರು, ಪಠ್ಯಕ್ರಮ ಇತ್ಯಾದಿ ವಿಷಯಗಳ ಪಾತ್ರವನ್ನು ಗಮನಿಸೋಣ.

ಶೈಕ್ಷಣಿಕ ಸಂಸ್ಥೆಗಳ ಪಾತ್ರ: ಸಂಸ್ಥೆಗಳು ಲಿಂಗಸಮಾನತೆಯ ಗುರಿಗಳನ್ನು ಸಾಧಿಸಲು ಹೇಗೆ ಕಾರ್ಯತತ್ಪರವಾಗಬಹುದು ಎಂಬುದನ್ನು ತಜ್ಞರು ಕೆಳಕಂಡಂತೆ ಗುರುತಿಸಿದ್ದಾರೆ:

- ಲಿಂಗತ್ವ ನಿರ್ದಿಷ್ಟ ದತ್ತಾಂಶ ವ್ಯವಸ್ಥೆಯನ್ನು ರೂಪಿಸುವುದು;

- ಲಿಂಗತ್ವ ವಿಚಾರಗಳ ಕುರಿತಾದ ಸಂಶೋಧನೆಯನ್ನು ಉತ್ತಮಪಡಿಸುವುದು ಮತ್ತು ಬೆಂಬಲಿಸುವುದು; ಮತ್ತು
- ಲಿಂಗ ವಿಶ್ಲೇಷಣೆಯ ಫಲಿತಾಂಶಗಳನ್ನು ಪ್ರಸಾರಮಾಡುವುದು.
- ಲಿಂಗತ್ವ ಸಂಬಂಧಿ ವಿಶ್ಲೇಷಣೆಯ ಫಲಿತಾಂಶಗಳನ್ನು ವಿಶ್ಲೇಷಿಸುವುದು;
- ಮಹಿಳೆಯರನ್ನು ಸಬಲೀಕರಿಸುವುದು ಮತ್ತು ಅವರ ಸಂಪೂರ್ಣ ದುಡಿಮೆಯ ಶಕ್ತಿಯನ್ನು ಆರ್ಥಿಕ ಬೆಳವಣಿಗೆಗೆ ಬಳಸಿಕೊಳ್ಳುವುದು;
- ಮಹಿಳೆಯರ ಆಸಕ್ತಿಯನ್ನು ಕಾಪಾಡಲು, ಮತ್ತು ಗುಣಮಟ್ಟದ ಆಡಳಿತವನ್ನು ಕೊಡಲು, ಉತ್ಪಾದಕತೆ ಮತ್ತು ಸಾಮಾಜಿಕ ವಿಕಾಸವನ್ನು ಹೆಚ್ಚಿಸಲು ಮಹಿಳೆಯರ ಆರೋಗ್ಯವನ್ನು ನಿರ್ವಹಿಸುವುದು ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡುವುದು; ಮಹಿಳೆಯರನ್ನು ಸಬಲೀಕರಿಸುವುದು ಮತ್ತು ಸರ್ಕಾರಿ ರಚನೆಯ ವಿವಿಧ ಹಂತವ್ಯಾಪಿಯಾಗಿ ವಿವಿಧ ನಿರ್ಧಾರ ತೆಗೆದುಕೊಳ್ಳವಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಕಾಪಾಡುವುದು
- ದೇಶದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ, ಆ ಮೂಲಕ ಪ್ರಗತಿಗೆ ಕಾರಣವಾಗುವಂತೆ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವುದು; ಸುಸ್ಥಿರ ಅಭಿವೃದ್ಧಿಯನ್ನುಂಟುಮಾಡಲು ದೇಶದ ಆರ್ಥಿಕತೆಗೆ ಮೂಲ ಕಾರಣವಾದ ಪರಿಸರವನ್ನು ಸಂರಕ್ಷಿಸುವುದು, ಪರಿಸರವನ್ನು ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಸಮಾನ ಪಾತ್ರವಹಿಸುವಂತೆ ಮಹಿಳೆಯರನ್ನು ಸಬಲೀಕರಿಸುವುದು.

ಮೇಲೆ ಸೂಚಿಸಿರುವ ಮಾರ್ಗಗಳ ಮೂಲಕ ಶಿಕ್ಷಣ ಸಂಸ್ಥೆಗಳು ಲಿಂಗಸಮಾನತೆಯನ್ನು ಸಾಧಿಸಲು ಪ್ರಯತ್ನಿಸಬಹುದು. ಮುಂದೆ ಶಿಕ್ಷಣ ಸಂಸ್ಥೆಗಳ ಭಾಗವಾದ ಶಾಲೆಗಳು ಲಿಂಗಸಮಾನತೆಯನ್ನುಂಟುಮಾಡಲು ಹೇಗೆ ಪ್ರಯತ್ನಿಸಬಹುದು ಎಂಬುದನ್ನು ನೋಡೋಣ.

**ಶಾಲೆಗಳು:** ಲಿಂಗಸಮಾನತೆಯ ವಿಚಾರವನ್ನು ಅರ್ಥಮಾಡಿಸುವಲ್ಲಿ ಶಾಲೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಶಾಲೆಯು ಸಮಾಜದ ಅಂಗಸಂಸ್ಥೆಯಾದುದರಿಂದ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಲಿಂಗ ಅಸಮಾನತೆಗಳು ಶಾಲೆಯನ್ನೂ ಪ್ರವೇಶಿಸುತ್ತವೆ. ಶಾಲಾ ನಿರ್ವಹಣೆ, ಭೌತಿಕ ಸೌಲಭ್ಯಗಳ ವಿನ್ಯಾಸ, ಬೋಧನೆ ಮತ್ತು ಕಲಿಕಾ ಸಾಮಗ್ರಿಗಳು, ವಿವಿಧ ಬೋಧನಾ ಪ್ರಕ್ರಿಯೆಗಳು ಲಿಂಗ ಸಂವೇದನೆಯನ್ನು ಅರ್ಥಮಾಡಿಕೊಳ್ಳುವಿಕೆಯಲ್ಲಿ ಕಾಣಿಕೆ ನೀಡುತ್ತವೆ. ಶಾಲೆಗಳಲ್ಲಿ ಲಿಂಗಪಡಿಯಚ್ಚುಗಳು ಅನುಸರಣೆಯಲ್ಲಿರಬಹುದು. ಲಿಂಗ ವಿಶಿಷ್ಟವಾದ ಅಗತ್ಯಗಳನ್ನು ಅಧ್ಯಾಪಕರು ಗಮನಕ್ಕೆ ತೆಗೆದುಕೊಳ್ಳದಿರಬಹುದು. ಲೈಂಗಿಕ ದೌರ್ಜನ್ಯ ಮುಂತಾದ ವಿಚಾರಗಳನ್ನು ಶಾಲಾ ನಿರ್ವಹಣಾ ವ್ಯವಸ್ಥೆಗಳು ಸರಿಯಾಗಿ ಗಮನಿಸಿಕೊಳ್ಳುತ್ತಿರಬಹುದು. ಶಾಲೆಗಳಲ್ಲಿ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲದಿರಬಹುದು. ಈ ಕಾರಣಗಳಿಂದಾಗಿ ಪರಿಣಾಮಕಾರಿ ಬೋಧನೆ ಮತ್ತು ಕಲಿಕೆಗೆ ಶಾಲೆಯು ಲಿಂಗ ಪ್ರತಿಕ್ರಿಯಾತ್ಮಕ ಪರಿಸರವನ್ನು ರೂಪಿಸುತ್ತಿಲ್ಲದಿರಬಹುದು. ಅಂತಹ ಶಾಲೆಗಳ ಉತ್ತಮಿಕೆಗೆ ವಿವಿಧ ಮಧ್ಯವರ್ತನಗಳನ್ನು ಬಯಸುವ ಸಮಗ್ರ ಉಪಕ್ರಮದ ಅವಶ್ಯಕತೆ ಇದೆ.

ಬಾಲಕ ಬಾಲಕಿಯರಿಬ್ಬರಿಗೂ ಪ್ರವೇಶಾನುಮತಿ ಕೊಟ್ಟರೆ ಸಾಲದು, ಅದಕ್ಕಿಂತ ಹೆಚ್ಚಿನದಾದುದನ್ನು ಸಾಧಿಸಬೇಕು. ಲಿಂಗ ಸಮಾನತೆಯ ಸಮಗ್ರ ಅರಿವನ್ನುಂಟುಮಾಡಬೇಕು. ಶಾಲೆಗಳಲ್ಲಿ ಲಿಂಗ ಸಮಾನತೆಯನ್ನು ಉಂಟುಮಾಡುವ ಸನ್ನಿವೇಶದಲ್ಲಿ ಹಲವು ಪ್ರಶ್ನೆಗಳು ಪ್ರಮುಖವಾಗುತ್ತವೆ ಎಂದು ತಜ್ಞರು ಗುರುತಿಸಿದ್ದಾರೆ. ಪುರುಷರು ಮತ್ತು ಸ್ತ್ರೀಯರನ್ನು ಕುರಿತಂತೆ ಮಕ್ಕಳು ಶಾಲೆಗೆ ಯಾವ ಗ್ರಹಿಕೆಗಳನ್ನು ಹೊತ್ತು ಬರುತ್ತಾರೆ? ಅದಕ್ಕನುಗುಣವಾಗಿ ತರಗತಿ ಹಾಗೂ ಆಟದ ಮೈದಾನಗಳಲ್ಲಿ ಅವರ ವರ್ತನೆಗಳು ಹೇಗಿರುತ್ತವೆ? ಪುರುಷರು ಹಾಗೂ ಸ್ತ್ರೀಯರಿಗೆ ಸಂಬಂಧಿಸಿದಂತೆ ಶಾಲೆಯು ಮಕ್ಕಳಿಗೆ ಕೊಡುವ ಪ್ರಧಾನ ಪ್ರತಿಮೆಗಳಾವುವು? ಲಿಂಗ ಸಮಾನತೆ ಶಾಲೆಯ ಪ್ರಮುಖ ಕಾಳಜಿಗಳಲ್ಲಿ ಒಂದಾಗಿದೆಯೇ? ಲಿಂಗ ಸಮಾನತೆಯನ್ನು ಬೆಳೆಸುವಲ್ಲಿ

ಶಾಲೆಯು ಅಳವಡಿಸಿಕೊಳ್ಳಬಹುದಾದ ಪ್ರಯತ್ನಗಳು, ಮಾರ್ಗೋಪಾಯಗಳು ಮತ್ತು ಯೋಜನೆಗಳಾವುವು? ಶಾಲೆಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಈ ಪ್ರಶ್ನೆಗಳಿಗೆ ಕಂಡುಕೊಳ್ಳುವ ಉತ್ತರಗಳು ಮಾರ್ಗದರ್ಶಕಗಳಾಗುತ್ತವೆ. ಶಾಲೆಗಳು ಹೆಣ್ಣು ಸ್ನೇಹಿಯಾಗಿರಬೇಕು. ಅಂದರೆ ಬಾಲಕರನ್ನು ಕಡೆಗಣಿಸಬೇಕೆಂದಲ್ಲ, ಶಾಲೆಗೆ ಬರಲು ಅವಕಾಶವಿಲ್ಲದ ಹೆಣ್ಣುಮಕ್ಕಳನ್ನು ಕರೆತರುವಲ್ಲಿ, ಅವರನ್ನು ಶಾಲೆಗೆ ಉಳಿಸಿಕೊಳ್ಳುವಲ್ಲಿ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಲಿಂಗ ಸಮಾನತೆ ಎಂದರೆ, ಸಂಸ್ಕೃತಿಯ ಅಧಿಕಾರ, ಶ್ರೇಣೀಕರಣ ಮತ್ತು ಸಾಮಾಜಿಕ ನಿಯಂತ್ರಣವನ್ನು ಸವಾಲಿಗೊಡ್ಡುವುದು ಎಂದರ್ಥ. ಇದು ಪಠ್ಯಕ್ರಮದಲ್ಲಿ ಬದಲಾವಣೆಗಳನ್ನು, ಬಾಲಕಿಯರನ್ನು ಮತ್ತು ಸ್ತ್ರೀಯರನ್ನು ಹೊರಗಿಡುವ ಶ್ರೇಣಿಗಳ ಅಧಿಕಾರ ಜಾಲಗಳನ್ನು ಮೀರುವುದನ್ನೂ ಬಯಸುತ್ತದೆ. ಮಕ್ಕಳನ್ನು ಪೀಡಿಸುವಿಕೆ, ಜಾತೀಯತೆ, ಮತ್ತು ಲೈಂಗಿಕತೆಗೆ ಸಂಬಂಧಿಸಿದ ಸನ್ನಿವೇಶಗಳನ್ನು ಅಧ್ಯಾಪಕರು ಮತ್ತು ಮುಖ್ಯೋಧ್ಯಾಯರು ಹೆಚ್ಚು ಆಳವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಮಕ್ಕಳು ತಮ್ಮ ವರ್ತನೆಗಳನ್ನು ಮತ್ತು ಕೆಲಸಗಳನ್ನು ತಾವೇ ವಿಮರ್ಶಿಸಿಕೊಳ್ಳುವಂತೆ ಅವರನ್ನು ತಯಾರುಮಾಡಬೇಕಾಗುತ್ತದೆ. ಸಂಕೀರ್ಣವಾದ ಸಮಾಜ ವಿರೋಧಿಯಾದ ಪರಿಕಲ್ಪನೆಗಳನ್ನು ಪೂರ್ವಾಗ್ರಹಗಳನ್ನು ಸವಾಲಾಗಿಸಿ ಪ್ರಶ್ನಿಸುವಂತೆ ಪ್ರೋತ್ಸಾಹಿಸಬೇಕಾಗುತ್ತದೆ. ಬೋಧನೆ ಮತ್ತು ಪಠ್ಯಕ್ರಮಗಳೆರಡನ್ನೂ ಲಿಂಗ ಸಮಾನತೆಯ ದೃಷ್ಟಿಯಿಂದ ಪರಿಗಣಿಸಬೇಕಾಗುತ್ತದೆ.

ಪೋಷಕರು, ಸಮುದಾಯದ ನಾಯಕರು, ಸದಸ್ಯರು, ಅಧ್ಯಾಪಕರು, ಬಾಲಕ ಬಾಲಕಿಯರಲ್ಲಿ ಲಿಂಗ ಸಮಾನತೆಗೆ ಸಂವೇದನೆಯನ್ನು ಬೆಳೆಸುವ ಸಾಮಾನ್ಯ ಶಾಲಾ ಅಭ್ಯಾಸಗಳನ್ನೂ ವಿಶೇಷ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಬೇಕು. ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸುವ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಯೋಜಿಸಬೇಕು.

ಬಾಲಕಿಯರು ಮತ್ತು ಬಾಲಕರ ನಿರ್ದಿಷ್ಟ ಅಗತ್ಯಗಳಿಗೆ ಸ್ಪಂದಿಸುವ ಕೌಶಲಗಳನ್ನು ಕುರಿತು ಅಧ್ಯಾಪಕರಿಗೆ ತರಬೇತಿ ನೀಡಬೇಕು. ಶಿಕ್ಷಣಕ್ಕೆ ಪೂರಕವಾಗುವ ಆತ್ಮವಿಶ್ವಾಸ, ದೃಢತೆ, ಅಭಿವ್ಯಕ್ತಿ, ನಿರ್ಧಾರ ಕೈಗೊಳ್ಳುವಿಕೆ ಇತ್ಯಾದಿ ಕೌಶಲಗಳ ಮೂಲಕ ಬಾಲಕಿಯರನ್ನು ಸಬಲೀಕರಣಗೊಳಿಸಬೇಕು. ಲಿಂಗ ಸಮಾನತೆಗೆ ವಿರುದ್ಧವಾದ ಮನೋಭಾವಗಳನ್ನು ಹೋಗಲಾಡಿಸುವುದರ ಮೂಲಕ ಬಾಲಕರನ್ನು ಸಬಲೀಕರಿಸಬೇಕು. ಲಿಂಗ ಸಮಾನತೆಯನ್ನು ಧನಾತ್ಮಕವಾಗಿ ಒಪ್ಪಿಕೊಳ್ಳಲು ಅಗತ್ಯವಾದ ಮನೋಭಾವ ಮತ್ತು ಆತ್ಮವಿಶ್ವಾಸಗಳನ್ನು ಅವರಲ್ಲಿ ಬೆಳೆಸಬೇಕು. ಲೈಂಗಿಕ ಪಕ್ವತೆಗೆ ಸಂಬಂಧಿಸಿದ ವಿಚಾರಗಳನ್ನು ಸಮರ್ಪಕವಾಗಿ ನಿರ್ವಹಿಸಲು ಶಾಲಾ ಸಮುದಾಯಕ್ಕೆ ತರಬೇತಿ ಕೊಡಬೇಕು. ಅಧ್ಯಾಪಕರಿಗೆ ಸಮಾಲೋಚನಾ ಕೌಶಲಗಳಲ್ಲಿ ತರಬೇತಿ ಕೊಡಬೇಕು. ಬಾಲಕಿಯರ ಮತ್ತು ಬಾಲಕರ ಮನೋವೈಜ್ಞಾನಿಕ ವಿಕಾಸಕ್ಕೆ ಅನುಕೂಲಿಸುವಂತೆ ಶಾಲೆಗಳಲ್ಲಿ ಸಮಾಲೋಚನಾ ಕೇಂದ್ರಗಳನ್ನು ತೆಗೆಯಬೇಕು. ಸಮಾನತೆಯನ್ನು ಪ್ರೋತ್ಸಾಹಿಸುವ ಮಕ್ಕಳಿಗೆ ಪಾರಿತೋಷಕಗಳನ್ನು ನೀಡಬೇಕು. ಸಮಾನತೆಯನ್ನು ಸಾರುವ ಕಿರುನಾಟಕಗಳನ್ನು ಅಭಿನಯಿಸಬೇಕು. ಪತ್ರಿಕೆಗಳಲ್ಲಿ ಸಮಾನತೆಯನ್ನು ಬಿಂಬಿಸುವ, ಪ್ರೋತ್ಸಾಹಿಸುವ ಕಾಲಂಗಳನ್ನು ಬರೆಯಲು ಮಕ್ಕಳಿಗೆ ತರಬೇತಿ ನೀಡಬೇಕು. ಸಮಾನತೆಯನ್ನು ಎತ್ತಿಹಿಡಿಯಲು ಓಟಗಳನ್ನು ಸಂಘಟಿಸಬಹುದು, ಭಿತ್ತಿ ಪತ್ರಗಳನ್ನು ಅಂಟಿಸಬಹುದು. ಸಮಾನತೆಗೆ ಧಕ್ಕೆ ಬರುವ ವರ್ತನೆಗಳು ನಡೆಯುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಶಾಲೆಗಳಲ್ಲಿ ಎಲ್ಲರ ವರ್ತನೆಗಳ ಮೇಲೆ ಗಮನವಿಡಬೇಕು.

**ತರಗತಿಗಳು:** ಅಧ್ಯಾಪಕರು ಮಕ್ಕಳ ಜೊತೆ ಬಹಳ ಹೆಚ್ಚಿನ ಕಾಲವನ್ನು ತರಗತಿಗಳಲ್ಲೇ ಕಳೆಯುತ್ತಾರೆ. ಲಿಂಗಸಮಾನತೆಯನ್ನು ಮತ್ತು ಗೌರವಯುತ ಸಂಬಂಧಗಳನ್ನು ಪೋಷಿಸಲು ಇಲ್ಲಿ ಆದರ್ಶಮಯವಾದ ಅವಕಾಶಗಳಿವೆ. ತರಗತಿಯಲ್ಲಿ ಸರಳ ಮತ್ತು ಪರಿಣಾಮಕಾರಿ ಅಭ್ಯಾಸಗಳಿಂದ ಇವುಗಳನ್ನು ಸಾಧಿಸಬಹುದು. ನಾವು ಗಂಡಸರಾಗಲಿ ಹೆಂಗಸರಾಗಲಿ, ಅದು ಮುಖ್ಯವಲ್ಲ. ಎಲ್ಲರಿಗೂ ಆಸೆಗಳಿವೆ, ಆಶಯಗಳಿವೆ, ಕನಸುಗಳಿವೆ. ಅವೆಲ್ಲವನ್ನೂ ನಾವೆಲ್ಲರೂ ಗೌರವಿಸಬೇಕು ಎಂಬ ಸಂದೇಶ ರವಾನೆಯಾಗಬೇಕು. ಯಾವುದೇ ಲಿಂಗವೂ ಮತ್ತೊಂದಕ್ಕಿಂತ ಬಲಶಾಲಿಯಾಗಲೀ ಉತ್ತಮವಾಗಲೀ ಅಲ್ಲ. ಎಲ್ಲರಿಗೂ ತಮ್ಮ ಸಾಮರ್ಥ್ಯಗಳನ್ನು ಗರಿಷ್ಠಮಟ್ಟದಲ್ಲಿ

ಅರಳಿಸಿಕೊಳ್ಳುವ ಹಕ್ಕು ಇದೆ. ಲಿಂಗ ತಟಸ್ಥವಾದ ತರಗತಿಗಳನ್ನು ರೂಪಿಸುವುದರ ಮೂಲಕ ಲಿಂಗ ಅಸಮಾನತೆಗಳನ್ನು ಸೃಷ್ಟಿಸುವ, ಲಿಂಗಾಧಾರಿತ ಹಿಂಸೆಗಳನ್ನು ಹೆಚ್ಚಿಸುವ, ಸಾಮಾಜಿಕ ಮಾನಕಗಳನ್ನು ಮುರಿಯಲು ಸಾಧ್ಯವಿದೆ. ತರಗತಿಯಲ್ಲಿ ಲಿಂಗಸಮಾನತೆಯನ್ನು ಪೋಷಿಸಲು ತಜ್ಞರು ಕೆಳಗಿನ ಮಾರ್ಗೋಪಾಯಗಳನ್ನು ಸೂಚಿಸಿದ್ದಾರೆ:

**ಲಿಂಗ ತಟಸ್ಥವಾದ ಭಾಷೆಯ ಬಳಕೆ:** ಮಕ್ಕಳನ್ನು ಗುರುತಿಸಿ ಹೇಳುವಾಗ 'ಹುಡುಗನೊಂದಿಗೆ ಕುಳಿತುಕೊ' ಎಂದು ಹೇಳುವುದರ ಬದಲು ಸಹಪಾಠಿಗಳೊಂದಿಗೆ ಕುಳಿತುಕೊ' ಎಂದು ಹೇಳುವುದು ಒಳ್ಳೆಯದು. ಹುಡುಗರೆಲ್ಲರೂ ಈ ಬದಿಯಲ್ಲಿ, ಹುಡುಗಿಯರೆಲ್ಲರೂ ಈ ಬದಿಯಲ್ಲಿ ಸಾಲಾಗಿ ನಿಲ್ಲಿ' ಎಂದು ಹೇಳುವ ಬದಲಿಗೆ 'ತರಗತಿಯವರೆಲ್ಲರೂ ಸಾಲಾಗಿ ನಿಲ್ಲಿ' ಎಂದು ಹೇಳುವುದು ಒಳ್ಳೆಯದು. 'ಹುಡುಗಿಯರಲ್ಲಿ ಈ ಕೆಲಸವನ್ನು ಯಾರು ಮಾಡುತ್ತೀರಿ' ಎಂಬುದರ ಬದಲು 'ತರಗತಿಯಲ್ಲಿ ಈ ಕೆಲಸವನ್ನು ಯಾರು ಮಾಡುತ್ತೀರಿ' ಎಂದು ಕೇಳಬಹುದು.

**ಪಡಿಯಚ್ಚುಗಳು ಬಳಕೆಯಾಗದಂತೆ ಎಚ್ಚರ:** ಹುಡುಗರಲ್ಲವೇ, ಅದಕ್ಕೇ ನಿಮ್ಮದು ಗಲಾಟೆ ಜಾಸ್ತಿ ಎಂತಲೋ ಹುಡುಗಿಯಾಗಿಯೂ ನೀನು ಇಷ್ಟು ಜೋರಾಗಿ ಮಾತಾಡುವುದೇ ಎಂತಲೋ ಅಧ್ಯಾಪಕರು ಹೇಳುತ್ತಿರುವುದುಂಟು. ಇದು ಸಮಾಜದ ಪಡಿಯಚ್ಚುಗಳನ್ನು ಬೆಳೆಸುವ ವಿಧಾನ. ಇದು ಮಕ್ಕಳ ಮನಸ್ಸಿನಲ್ಲಿ ನಿಂತುಬಿಡುತ್ತದೆ. ಈ ಕುರಿತು ಎಚ್ಚರ ವಹಿಸಬೇಕು.

**ಮಕ್ಕಳ ಜೊತೆಗಿನ ಅಂತರ್ ಕ್ರಿಯೆಯ ಮೇಲೆ ಗಮನ:** ಹೆಣ್ಣುಮಕ್ಕಳನ್ನು ಹೆಚ್ಚು ನಿಯಂತ್ರಣದಲ್ಲಿಡುವುದು, ಹುಡುಗರನ್ನು ಸರಾಗವಾಗಿರಲು ಬಿಡುವುದು ಇಂತಹುದನ್ನು ಮಾಡಿದರೆ, ಮಕ್ಕಳು 'ಸಮಾಜದಲ್ಲಿ ಹೀಗೆಯೇ ನಡೆದುಕೊಳ್ಳಬೇಕು' ಎಂದುಕೊಳ್ಳುತ್ತಾರೆ. ಹಾಗಾಗಿ ಇಂತಹ ವರ್ತನೆಗಳಾಗದಂತೆ ಗಮನವಿಡಬೇಕು.

**ಒಟ್ಟುಗೂಡಿಸಿ:** ಈ ಆಟಿಕೆಗಳು ಹುಡುಗರಿಗೆ, ಇದು ಹುಡುಗಿಯರಿಗೆ, ಎಂಬುದಾಗಿ ವರ್ಗೀಕರಿಸಬಾರದು. ಎಲ್ಲವನ್ನೂ ಒಟ್ಟಾಗಿ ಹಾಕಿ. ಯಾರಿಗೆ ಯಾವುದು ಬೇಕೋ ಅದರ ಜೊತೆ ಆಡಲಿ. ಇದು ಇತರ ಚಟುವಟಿಕೆಗಳಿಗೂ ಅನ್ವಯಿಸುತ್ತದೆ.

**ಅಧ್ಯಾಪಕರು ಹೇಳುವ ಕತೆಗಳು ಲಿಂಗ ಪಡಿಯಚ್ಚುಗಳನ್ನು ಪ್ರೋತ್ಸಾಹಿಸದಂತಿರಬೇಕು :** ಅಂತಹ ಸಂದರ್ಭಗಳಲ್ಲಿ ರಾಜಕುಮಾರನ ಸ್ಥಳದಲ್ಲಿ ರಾಜಕುಮಾರಿಯನ್ನು ಬದಲಿಸಬಹುದು.

**ಲಿಂಗ ತಟಸ್ಥ ಕಾರ್ಯಹಂಚಿಕೆ:** ತರಗತಿಯಲ್ಲಿ ಕೆಲಸಗಳನ್ನು ಹಂಚುವಾಗ ಸಾಂಪ್ರದಾಯಿಕವಾಗಿ ಹಂಚಬಾರದು. ಉದಾಹರಣೆಗೆ, ಡೆಸ್ಕುಗಳನ್ನು ಸರಿಸುವುದು ಹುಡುಗರು, ಗುಡಿಸುವುದು ಹುಡುಗಿಯರು, ಇತ್ಯಾದಿ. ಎಲ್ಲರೂ ಎಲ್ಲ ಕೆಲಸಗಳನ್ನೂ ಮಾಡುವಂತೆ ನೋಡಿಕೊಳ್ಳಬೇಕು.

**ಪೂರ್ವಾಗ್ರಹಗಳಿಂದ ಮುಕ್ತವಾದ ವಾತಾವರಣ ಸೃಷ್ಟಿ:** "ಟೀಚರ್, ನಾನು ಅವರೊಡನೆ ಆಡುವುದಿಲ್ಲ; ಅವರು ಹುಡುಗರ ಆಟ ಆಡುತ್ತಿದ್ದಾರೆ" ಎಂದು ಹೇಳಿದರೆ ಅದನ್ನೇ 'ಬೋಧಿಸಬಹುದಾದ ಕ್ಷಣ' ಎಂದುಕೊಂಡು ತಟ್ಟನೆ ಬಳಸಿಕೊಳ್ಳಬೇಕು. 'ಏನು ಹೇಳಿದೆ, ಮಗು, ಹುಡುಗರ ಆಟ, ಎಂದೆಯಲ್ಲ, ಹಾಗಂದರೇನು' ಎಂದು ಕೇಳಿ ಚರ್ಚಿಸುತ್ತಲೇ ಆ ರೀತಿ ವಿಭಿನ್ನ ಲಿಂಗಗಳಿಗೆ ವಿಭಿನ್ನ ಆಟಗಳು ಎಂದೇನೂ ಇಲ್ಲ ಎಂಬುದನ್ನು ಮಗುವಿಗೆ ಅರ್ಥಮಾಡಿಸಬೇಕು.

**ಆಸನ ವ್ಯವಸ್ಥೆ ಸಮಾನತೆಯನ್ನು ಹುಟ್ಟಿಸುವಂತಿರಬೇಕು :** ತರಗತಿಯಲ್ಲಿ ಹುಡುಗ ಹುಡುಗಿಯರು ಅಕ್ಕ-ಪಕ್ಕದಲ್ಲಿ ಕುಳಿತುಕೊಂಡರೆ ಪ್ರಮಾದವೇನೂ ಆಗುವುದಿಲ್ಲ. ಅವರು ಒಟ್ಟಿಗೆ ಬೆಳೆಯಲು ಕಲಿಯುತ್ತಾರೆ. ಅಧ್ಯಾಪಕರು ಇಂತಹ ಸನ್ನಿವೇಶಗಳಿಂದ ಮಕ್ಕಳು ಲಿಂಗಸಮಾನತೆಯನ್ನು ಸಹಜವಾಗಿಯೇ ಕಲಿಯುತ್ತಾರೆ.

**ಉದ್ಯೋಗ ಚಿತ್ರಗಳು:** ಮಹಿಳಾ ಪೋಲೀಸ್ ಅಧಿಕಾರಿಗಳನ್ನು ವಿಜ್ಞಾನಿಗಳನ್ನು ತರಗತಿಗೆ ಕರೆಸಿ ಮಾತನಾಡಿಸಬೇಕು. ಯುದ್ಧದಲ್ಲಿ ಭಾಗವಹಿಸಿದ ಮಹಿಳೆಯರು ಮಕ್ಕಳೊಡನೆ ಮಾತನಾಡುವಂತೆ ಮಾಡಬೇಕು. ಹೆಣ್ಣುಮಕ್ಕಳ ಕ್ಷೇತ್ರ ಹಪ್ಪಳ, ಹಿಟ್ಟುಮಾಡುವುದಕ್ಕಿಂತ ಆಚೆಗೂ ಚಾಚಿಕೊಂಡಿದೆ ಎಂಬುದನ್ನು ಮನದಟ್ಟು ಮಾಡಬೇಕು.

**ಲಿಂಗ ಸಮಾನ ನೀತಿಸಂಹಿತೆ:** ತರಗತಿಯ ಎಲ್ಲ ನಿಯಮಗಳೂ ಎಲ್ಲರಿಗೂ ಸಮನಾಗಿ ಅನ್ವಯಿಸುವಂತೆ ನೋಡಿಕೊಳ್ಳಬೇಕು. ಯಾರಿಗೇ ಅನವಶ್ಯಕವಾಗಿ ಯಾವ ವಿನಾಯಿತಿಯೂ ಇಲ್ಲದಂತೆ ನೋಡಿಕೊಳ್ಳಬೇಕು.

ತರಗತಿಯಲ್ಲಿ ಲಿಂಗಸಮಾನತೆಯನ್ನು ಕಾಪಾಡಲು ಎನ್ ಸಿ ಇ ಆರ್ ಟಿ ಕೈಗೊಂಡ ಸಂಶೋಧನೆಯ ಆಧಾರದ ಮೇಲೆ ಕೆಳಕಂಡ ಸೂಚನೆಗಳನ್ನು ಕೊಟ್ಟಿದೆ:

- ಅಧ್ಯಾಪಕರು ತಾವು ಮಕ್ಕಳ ಕಲಿಕೆಗೆ ಅನುಕೂಲಿಗಳಷ್ಟೆ, ಬೋಧಕರಾಗಲಿ, ತಜ್ಞರಾಗಲೀ ಅಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು.
- ಕಲಿಕಾ ಅನುಕೂಲಸ್ಥರಾಗಿ ಅಧ್ಯಾಪಕರು ತರಗತಿಯ ಭೌತಿಕ ಹಾಗೂ ಸಾಮಾಜಿಕ ವಾತಾವರಣ ಬಾಲಕರು ಮತ್ತು ಬಾಲಕಿಯರ ನಡುವೆ ಆರೋಗ್ಯಕರ ಸಂಬಂಧವನ್ನು ಬೆಳೆಸುವಂತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಕುಳಿತುಕೊಳ್ಳಲು ವ್ಯವಸ್ಥೆ ಮತ್ತು ಇತರ ಚಟುವಟಿಕೆಗಳನ್ನು ಮಿಶ್ರ ಗುಂಪುಗಳಲ್ಲೇ ನಡೆಸಬೇಕು. ಸಹ ಶಿಕ್ಷಣವಿಲ್ಲದಿರುವ ಶಾಲೆಗಳಲ್ಲಿ ಮಕ್ಕಳು ಜಾತಿ, ಧರ್ಮ, ಇವುಗಳನ್ನು ಮೀರಿದ ವರ್ತನೆಗಳನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಬಾಲಕ ಬಾಲಕಿಯರಿಬ್ಬರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಹೆಚ್ಚಿನ ಭಾಗವಹಿಕೆಗಾಗಿ, ಪಾತ್ರಾಭಿನಯ, ಸಮಸ್ಯಾ ಪರಿಹಾರ, ರಸಪ್ರಶ್ನೆ ಇತ್ಯಾದಿ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು.
- ತರಗತಿ ಕಾರ್ಯ ಹಂಚಿಕೆ ಲಿಂಗಸಮಾನತೆಯನ್ನು ಬಿಂಬಿಸಬೇಕು. ತರಗತಿಯ ಸ್ವಚ್ಛತೆ ಕಾಪಾಡುವುದು, ಅಲಂಕರಣ, ದಿನ ನಿತ್ಯದ ಚಟುವಟಿಕೆಗಳಲ್ಲಿ ಎಲ್ಲರೂ ಸಮನಾಗಿ ಭಾಗವಹಿಸುವಂತೆ ನೋಡಿಕೊಳ್ಳಬೇಕು.
- ಉತ್ತಮ ಸಂವಹನ ಕೌಶಲಗಳನ್ನು ಬೆಳೆಸಲು ಓದುವಿಕೆ, ಪದ್ಯ ಬಾಯಿಪಾಠ ಇತ್ಯಾದಿ ಚಟುಚಟಿಕೆಗಳನ್ನು ಬಾಲಕ–ಬಾಲಕಿಯರಿಬ್ಬರಿಗೂ ಕೊಡಬೇಕು.
- ನಿಧಾನಗತಿ ಕಲಿಕೆಯುಳ್ಳವರಿಗೆ ಸಮರ್ಪಕ ಪರಿಹಾರ ಕಾರ್ಯಕ್ರಮಗಳನ್ನು ಯೋಜಿಸಬೇಕು.
- ಪಾಠ ಬೋಧನೆಯ ಸಂದರ್ಭದಲ್ಲಿ ಪ್ರಮುಖವಾಗಿ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರ ಉದಾಹರಣೆಗಳನ್ನು ಕೊಡಬೇಕು.
- ದೃಕ್ ಶ್ರವಣ ಉಪಕರಣಗಳು ಲಿಂಗ ಪಡಿಯಚ್ಚುಗಳನ್ನು ಬಿಂಬಿಸದಿರುವಂತೆ ಎಚ್ಚರ ವಹಿಸಬೇಕು.
- ಬೋಧನೆಯಲ್ಲಿ ಬಳಸುವ ಉದಾಹರಣೆಗಳು ಲಿಂಗ ಸಮಾನತೆಯನ್ನು ಸಾಧಿಸಲು ಪೂರಕವಾಗುವಂತೆ ಉದ್ದೇಶಪೂರ್ವಕವಾಗಿ ಗಮನಿಸಿಕೊಳ್ಳಬೇಕು. ಉದಾಹರಣೆಗೆ ಗಣಿತದ ಸಮಸ್ಯೆಗಳಲ್ಲಿ, ವಿಶೇಷವಾಗಿ ಅನುಪಾತ ಇತ್ಯಾದಿ ವಿಷಯಗಳನ್ನು ಬೋಧಿಸುವಾಗ ಮಹಿಳೆಯರಿಗೆ ಕಡಿಮೆ ವೇತನ, ಪುರುಷರಿಗೆ ಹೆಚ್ಚು ವೇತನ ಇರುವ ಉದಾಹರಣೆಗಳನ್ನು ಕೊಡಬಾರದು.
- ತರಗತಿಯ ಅನ್ಯೋನ್ಯ ಕ್ರಿಯೆಯಲ್ಲೂ ಎಲ್ಲರೂ ಎಲ್ಲರನ್ನೂ ಗೌರವಿಸುವ, ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳಬೇಕು. ಹುಡುಗರದು ಒಂದು ಗುಂಪು, ಹುಡುಗಿಯರದು ಬೇರೆಯ ಗುಂಪು ಇತ್ಯಾದಿ ವರ್ತನೆಗಳನ್ನು ಪ್ರೋತ್ಸಾಹಿಸಬಾರದು.

**ಅಧ್ಯಾಪಕರು:** ಪ್ರತಿ ತರಗತಿಯಲ್ಲೂ ಅಧ್ಯಾಪಕರು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಬಹಳಮಟ್ಟಿಗೆ ಮಕ್ಕಳ ಸೋಲು ಗೆಲುವುಗಳನ್ನು ನಿರ್ಧರಿಸುವವರು ಅವರೇ. ಪಠ್ಯಕ್ರಮವನ್ನು ಕುರಿತ ಅವರ ವ್ಯಾಖ್ಯಾನ, ಕಲಿಯುವವರೊಂದಿಗಿನ ಅಂತರ ಕ್ರಿಯೆ, ಅವರು ಕೊಡುವ ಮನೆಕೆಲಸಗಳು, ನಿಯೋಜಿತ ಕಾರ್ಯಗಳು, ಶಾಲಾಜೀವನದಲ್ಲಿ ಮಕ್ಕಳ ಮೇಲೆ ವಿಶೇಷ ಪ್ರಭಾವ ಬೀರುತ್ತವೆ. ಲಿಂಗ ಸಮಾನತೆಯನ್ನು ಸಾಧಿಸಲು ಅಧ್ಯಾಪಕರು ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು.

ಲಿಂಗತ್ವದ ಆಯಾಮವನ್ನು ಒಳಪಡಿಸಿಕೊಳ್ಳುವಂತೆ ನಮ್ಯತೆಯುಳ್ಳ ಪಠ್ಯವಸ್ತುವನ್ನು ರೂಪಿಸಿಕೊಳ್ಳಬೇಕು. ಪ್ರಶಿಕ್ಷಕರು ಲಿಂಗತ್ವ ಅರಿವು ಮತ್ತು ಸಂವೇದನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ಲಿಂಗ ಸಮಾನತೆಯ ಸಂವೇದನೆಯನ್ನು ಬೆಳೆಸಿಕೊಳ್ಳುವುದು ಮಾತ್ರವಲ್ಲ; ಶಾಲಾ ಸನ್ನಿವೇಶಗಳಲ್ಲಿ ಅದನ್ನು ಸಾಧಿಸುವುದು ಹೇಗೆ ಎಂಬ ತರಬೇತಿ ಪಡೆಯಬೇಕು. ಲಿಂಗತ್ವವನ್ನು ಮೀರಿ ತರಗತಿ ವಿನ್ಯಾಸಗಳನ್ನು, ಸಂಘಟನೆಗಳನ್ನು ಮತ್ತು ಅಂತರ್ ಕ್ರಿಯೆಗಳನ್ನೂ ಅಳವಡಿಸಿಕೊಳ್ಳಬೇಕು. ಎಲ್ಲ ಶೈಕ್ಷಣಿಕ ವಲಯಗಳಲ್ಲೂ ಸಾಮರ್ಥ್ಯವರ್ಧನ ಕೇಂದ್ರಗಳನ್ನು ಸ್ಥಾಪಿಸಬೇಕು.

**ಗೆಳೆಯರ ಗುಂಪು:** ಅಧ್ಯಾಪಕರಂತೆಯೇ ಸಮವಯಸ್ಕರ ಅಥವಾ ಗೆಳೆಯರು ಗುಂಪು ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಕೊಡುಗೆ ನೀಡುತ್ತದೆ. ಶಾಲೆಗೆ ಪ್ರವೇಶ ಪಡೆಯುವ ಮಕ್ಕಳು ತಾವು ಪ್ರವೇಶಿಸುವಾಗಲೇ ಸಾಂಪ್ರದಾಯಿಕ ಲಿಂಗ ವರ್ತನೆಗಳನ್ನು ಮೈಗೂಡಿಸಿಕೊಂಡೇ ಬರುತ್ತಾರೆ. ಅದು ಅವರಿಗೆ ಈಗಾಗಲೇ ಕುಟುಂಬ ಅಥವಾ ನೆರೆಹೊರೆಯಿಂದ ಬಂದಿರುತ್ತದೆ. ಈ ನಿಯೋಗಗಳು ಈಗಾಗಲೇ ಲಿಂಗ ಪಡಿಯಚ್ಚುಗಳ ಅಚ್ಚೊತ್ತಿರುತ್ತವೆ. ಇದಕ್ಕೆ ಕೆಲವೊಮ್ಮೆ ಶಾಲೆಗಳೂ ಕಾಣಿಕೆ ನೀಡುತ್ತವೆ. ಮಕ್ಕಳು ಸಾಮಾನ್ಯವಾಗಿ ತಮ್ಮದೇ ಲಿಂಗದ ಜೊತೆಗಾರರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇದೂ ಲಿಂಗ ಪಡಿಯಚ್ಚುಗಳನ್ನು ಪ್ರೋತ್ಸಾಹಿಸುತ್ತದೆ. ಈ ಸಂದರ್ಭಗಳಲ್ಲಿ ಅಧ್ಯಾಪಕರ, ಶಾಲೆಯ ಮಧ್ಯವರ್ತನಗಳು ಅಗತ್ಯವಾಗುತ್ತವೆ. ಅವರು ಸಮಾಜದ ಲಿಂಗಪಡಿಯಚ್ಚುಗಳಿಗೆ ಮೊರೆ ಹೋಗದಂತೆ ಲಿಂಗ ಸಮಾನತೆಯನ್ನು ಬಿಂಬಿಸುವ ಸಮಾಜವನ್ನು ಸೃಷ್ಟಿಸುವಂತೆ ಮಾಡುವ ಜವಾಬ್ದಾರಿ ಹಿರಿಯ ಪೀಳಿಗೆಯವರದಾಗಿರುತ್ತದೆ.

**ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು:** ಮಕ್ಕಳು ಏನು ಕಲಿಕಯಬೇಕು ಎಂಬುದನ್ನು ನಿರ್ಧರಿಸುವ ಮಾರ್ಗದರ್ಶಕಗಳೇ ಪಠ್ಯಕ್ರಮಗಳು. ಅವುಗಳನ್ನು ರವಾನಿಸುವ ಸಾಧನಗಳೇ ಪಠ್ಯಪುಸ್ತಕಗಳು. ಮಕ್ಕಳ ಮನೋಭಾವ ಮತ್ತು ವರ್ತನೆಗಳ ಮೇಲೆ ಇವು ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವ ಬೀರುತ್ತವೆ. ಇವು ನೇರವಾಗಿ ಸರ್ಕಾರ ನಿರ್ಧರಿಸಿರುವ ಔಪಚಾರಿಕ ಪಠ್ಯಕ್ರಮಗಳಾಗಿರಬಹುದು, ಇಲ್ಲವೇ ಅಡಗಿಕೊಂಡು ಶಾಲೆ, ಅಧ್ಯಾಪಕರು, ಶಾಲಾ ಪರಿಸರಗಳಿಂದ ಮೂಡಿಬರುವ ಆಸಕ್ತಿ, ಮನೋಭಾವಗಳ ರೂಪದಲ್ಲಿ ಪ್ರಕಟಗೊಳ್ಳುವ ಪಠ್ಯಕ್ರಮದ ಅನೌಪಚಾರಿಕ ಅಂಶಗಳಾಗಿರಬಹುದು. ಈ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳು ಮಕ್ಕಳಲ್ಲಿ ಯಾವುದೇ ರೀತಿಯ ಲಿಂಗಭೇದವನ್ನು ಮೂಡಿಸದಂತೆ ಎಚ್ಚರ ವಹಿಸಬೇಕು. ಇದಕ್ಕಾಗಿ ಸತತ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ಇತರರ ಕಣ್ಣಿಗೆ ಕಾಣದ ಅಧ್ಯಾಪಕರ ಮನದ ಮೂಲೆಯಲ್ಲಿರುವ ಮನೋಭಾವಗಳೂ ಲಿಂಗ ಸಮಾನತೆಯನ್ನು ಕುರಿತ ಧನಾತ್ಮಕವಾದ ಅಥವಾ ಋಣಾತ್ಮಕವಾದ ಪರಿಣಾಮವನ್ನುಂಟುಮಾಡಬಹುದು. ಲಿಂಗ ಸಮಾನತೆಯನ್ನು ಸಾಧಿಸುವ ದಿಸೆಯಲ್ಲಿ ಪಠ್ಯಕ್ರಮ ಮತ್ತು ಅದರ ಅನ್ವಯ ಹೇಗಿರಬೇಕು ಎಂಬುದನ್ನು ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

- ಪಠ್ಯಕ್ರಮದ ವಿಷಯಗಳು ಲಿಂಗ ಸಮಾನತೆಯನ್ನು ಮೂಡಿಸುವಂತಿರಬೇಕು. ಸಮಾಜದ ಕೆಳವರ್ಗದಿಂದ ಬಂದ ಹೆಣ್ಣುಮಕ್ಕಳಲ್ಲೂ ಉತ್ತಮಮಟ್ಟದ ಶೈಕ್ಷಣಿಕ ಕೌಶಲಗಳನ್ನು ಮೂಡಿಸಬೇಕು.
- ಅಧ್ಯಾಪಕರು ಕಲಿಸುವ ರೀತಿಗೆ ಮಕ್ಕಳು ಒಗ್ಗಿಕೊಳ್ಳಬೇಕು ಎಂದು ಭಾವಿಸುವುದಕ್ಕಿಂತ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಅಧ್ಯಾಪಕ ಬೋಧಿಸಬೇಕು ಎಂಬುದನ್ನು ಪ್ರಮುಖವಾಗಿ ಅರ್ಥಮಾಡಿಕೊಳ್ಳಬೇಕು.

- ಬಹಳಷ್ಟು ಸಂದರ್ಭಗಳಲ್ಲಿ ಮಕ್ಕಳ ಮನೆಯ ಭಾಷೆ ಮತ್ತು ಶಾಲೆಯ ಭಾಷೆಗಳು ಬೇರೆ ಬೇರೆಯಾಗಿರುತ್ತವೆ. ಅಂತಹ ಸಂದರ್ಭಗಳಲ್ಲಿ ಅಗತ್ಯವಾದ ಮಾರ್ಗೋಪಾಯಗಳನ್ನು ಅನುಸರಿಸಬೇಕು.
- ವಾರ್ಷಿಕ ಪರೀಕ್ಷೆಗಳ ಬದಲಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಉಪಕ್ರಮಗಳನ್ನು ಬಳಸಬೇಕು. ಮಾಪನದ ಆಧಾರದ ಮೇಲೆ ಮಕ್ಕಳಿಗೆ ಹಿಮ್ಮಾಹಿತಿ ನೀಡಬೇಕು. ಅವರು ಉತ್ತಮ ಸಾಧನೆ ಮಾಡಲು ಏನು ಮಾಡಬೇಕು ಎಂಬುದನ್ನು ಅವರಿಗೆ ಅವರಿಗೆ ಅರ್ಥವಾಗುವಂತೆ ಹೇಳಬೇಕು.

ಪಠ್ಯಕ್ರಮವನ್ನು ರೂಪಿಸುವಲ್ಲಿ ಯುನೆಸ್ಕೊ ಸೂಚಿಸಿರುವ ಕೆಳಗಿನ ತಪಾಸಣಾಪಟ್ಟಿಯ ಕೆಳಗಿನ ಅಂಶಗಳನ್ನು ಗಮನದಲ್ಲಿಡುವುದು ಲಿಂಗ ಸಮಾನತೆಯನ್ನು ಸಾಧಿಸಲು ನೆರವಾಗುತ್ತದೆ.

- ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬಳಸುವ ಸಾಮಗ್ರಿಗಳು ಲಿಂಗ ಪಡಿಯಚ್ಚುಗಳಿಂದ ಮುಕ್ತವಾಗಿವೆಯೇ?
- ಸಾಮಗ್ರಿಗಳು ಸ್ತ್ರೀಪುರುಷರಿಬ್ಬರನ್ನೂ ಸಮ ಪ್ರಮಾಣದಲ್ಲಿ ತೋರಿಸುತ್ತವೆಯೇ?
- ಸಾಮಗ್ರಿಗಳು ಸ್ತ್ರೀಪುರುಷರಿಬ್ಬರನ್ನೂ ಸಮ ಪ್ರಮಾಣದ ಗೌರವ ಮತ್ತು ಸಾಮರ್ಥ್ಯಗಳೊಂದಿಗೆ ಗುರುತಿಸುತ್ತವೆಯೇ?(ಭವಿಷ್ಯ, ಉದ್ಯೋಗ ಇವುಗಳನ್ನು ಚರ್ಚಿಸುವಾಗ)
- ಪಠ್ಯಕ್ರಮವು ಸ್ತ್ರೀಪುರುಷರಿಬ್ಬರ ಅಗತ್ಯಗಳು ಮತ್ತು ಬದುಕಿನ ಅನುಭವಗಳನ್ನು ಬಿಂಬಿಸುತ್ತವೆಯೇ?
- ಪಠ್ಯಕ್ರಮವು ವಂಶ, ವರ್ಗ, ಅಸಾಮರ್ಥ್ಯ, ಧರ್ಮ, ಲಿಂಗದ ಆದ್ಯತೆ ಇವುಗಳನ್ನು ಮೀರಿ ಸ್ತ್ರೀಪುರುಷರಿಬ್ಬರ ಶಾಂತಿ ಮತ್ತು ಸಮಾನತೆಯನ್ನು ಬೆಳೆಸುವಂತಿದೆಯೇ?

ಪಠ್ಯಸಾಮಗ್ರಿಗಳು ಜ್ಞಾನದ ಪ್ರಮುಖ ಮೂಲಗಳಾದುದರಿಂದ ಮತ್ತು ಸಮಾಜದ ಎಲ್ಲ ಭಾಗಗಳ ಬಾಲಕ ಬಾಲಕಿಯರು  ಅದನ್ನು ಬಳಸುವುದರಿಂದ, ಅವು ಸಮತೆ ಮತ್ತು ಸಮಾನತೆಯ ವಿಚಾರಗಳನ್ನು ಒಳಗೊಳ್ಳಬೇಕು ಎಂಬುದು ಪ್ರಮುಖವಾಗುತ್ತದೆ. ಆದ್ದರಿಂದ ಲಿಂಗ ಸಂಬಂಧಗಳು ಮತ್ತು ಸಮಾಜಕ್ಕೆ ಸ್ತ್ರೀಪುರುಷರಿಬ್ಬರ ಕೊಡುಗೆಯನ್ನು ಎಲ್ಲ ಶಿಸ್ತುಗಳ ವಿಷಯಗಳ ಆಯ್ಕೆಯಲ್ಲಿ ಬಿಂಬಿಸುವುದು ಮುಖ್ಯವಾಗುತ್ತದೆ. ಪಠ್ಯಪುಸ್ತಕಗಳ ಸಾಮಗ್ರಿಗಳು ನಿಜಜೀವನದ ನೈಜತೆಯೊಂದಿಗೆ ಮಕ್ಕಳನ್ನು ಬೆಸೆಯುವುದರ ಮೂಲಕ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕಾಳಜಿಗಳೊಂದಿಗೆ ಅವರ ಮನಸ್ಸನ್ನು ನೇಯುತ್ತವೆ. ಪಠ್ಯಗಳಲ್ಲಿ ಗೋಚರವಾಗುವಂತೆ ಮತ್ತು ಅಗೋಚರವಾಗಿರುವ ಜ್ಞಾನವು ಸಮಾಜ ವಿಜ್ಞಾನ, ವಿಜ್ಞಾನ, ಗಣಿತ, ಭಾಷೆಯ ವಿಷಯಗಳಿಗೆ ಸಂಬಂಧಿಸಿರುತ್ತದೆ. ಇದರ ವಿಷಯಗಳನ್ನು  ಆಯಾ ವಿಷಯ ತಜ್ಞರಿಂದ ಗುರುತಿಸಲಾಗಿದ್ದು, ಮಕ್ಕಳ ವಯಸ್ಸು ಮತ್ತು ಗ್ರಹಿಕೆಯ ಸಾಮರ್ಥ್ಯಕ್ಕನುಗುಣವಾಗಿ ವಿವರಿಸಲಾಗಿರುತ್ತದೆ. ಇವು ಜ್ಞಾನದ ಆಕರಗಳೂ ಆದುದರಿಂದ ಇದರಲ್ಲಿ ಲಿಂಗ ಸಮಾನತೆ ಮತ್ತು ಲಿಂಗ ಸಮತೆಯ ವಿಷಯಗಳೂ ಸೇರಿರಬೇಕಾಗುತ್ತದೆ. ಜಗತ್ತಿನಾದ್ಯಂತ ಹಾಗೂ ಭಾರತೀಯ ಸನ್ನಿವೇಶದಲ್ಲಿ ಪಠ್ಯಪುಸ್ತಕ ಸಾಮಗ್ರಿಗಳನ್ನು ಲಿಂಗತ್ವವನ್ನೂ ಒಳಗೊಂಡಂತೆ ಅನೇಕ ದೃಷ್ಟಿಗಳಿಂದ ವಿಶ್ಲೇಷಿಸಲಾಗಿದೆ. ಲಿಂಗಸಮಾನತೆಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳ ಸಾಮಗ್ರಿಗಳು ಹೇಗಿರಬೇಕು ಎಂಬುದನ್ನು ಕುರಿತಂತೆ ಎನ್ ಸಿ ಇ ಆರ್ ಟಿ ಒದಗಿಸಿರುವ ಮಾನದಂಡಗಳನ್ನು ಗಮನಿಸಬಹುದು:

- ಪಠ್ಯಸಾಮಗ್ರಿಗಳು ಸ್ತ್ರೀ ಪುರುಷರಿಬ್ಬರ ಕೊಡುಗೆಗಳನ್ನೂ ಸಾಧನೆಗಳನ್ನೂ ಸಮರ್ಪಕವಾಗಿ ಬಿಂಬಿಸುತ್ತವೆಯೇ?
- ಪಠ್ಯಪುಸ್ತಕಗಳು ಎಲ್ಲ ಗುಂಪುಗಳ ವೈವಿಧ್ಯಮಯವಾದ ಅನನ್ಯತೆಗಳನ್ನು ಅಂತರ್ಗತ ರೂಪದಲ್ಲಿ ಬಿಂಬಿಸುತ್ತವೆಯೇ?
- ಪಠ್ಯಪುಸ್ತಕಗಳು ಜಾತಿ, ಲಿಂಗ, ವರ್ಗ, ಪ್ರದೇಶ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಸಮಾಜದ ಎಲ್ಲ ಗುಂಪುಗಳನ್ನೂ ಒಂದಾಗಿ ಬೆಸೆಯುತ್ತವೆಯೇ?

- ಪುರುಷರು ಮತ್ತು ಸ್ತ್ರೀಗಳ ಎಲ್ಲ ಮೌಲ್ಯಗಳನ್ನೂ ಬೆಳೆಸುತ್ತವೆಯೇ ಅಥವಾ ಅಲ್ಲಗಳೆಯುತ್ತವೆಯೇ?
- ಮಕ್ಕಳ ಮನೋಭಾವವನ್ನು ಅಪೇಕ್ಷಣೀಯವಾಗಿ ಬದಲಿಸಲು ಸಮರ್ಥವಾಗಿದೆಯೇ?
- ಮಹಿಳೆಯರ ಸ್ಥಾನಮಾನವನ್ನು ಕೆಳಗಿಳಿಸುವ ಪಡಿಯಚ್ಚುಗಳು, ಭ್ರಮೆಗಳು, ಅಪಕಲ್ಪನೆಗಳನ್ನು ಮತ್ತು

ಸಾಂಪ್ರದಾಯಿಕ ಅನುಸರಣೆಗಳನ್ನು ಪ್ರಶ್ನಿಸಲು ಅಗತ್ಯವಾದ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವಲ್ಲಿ ಸಂವೇದನಾಶೀಲವಾಗಿವೆಯೇ?

ಈವರೆಗೆ ಚರ್ಚಿಸಿದ ಎಲ್ಲ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದರೆ, ಸಮಾಜದಲ್ಲಿ ಲಿಂಗಸಮಾನತೆಯನ್ನು ಬಹಳಮಟ್ಟಿಗೆ ಸಾಧಿಸಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

'ಎ' ಪಟ್ಟಿಯಲ್ಲಿ ಲಿಂಗಸಮಾನತೆಯನ್ನು ಸಾಧಿಸಲು ಅಗತ್ಯವಾದ ಅಂಶಗಳನ್ನೂ 'ಬಿ' ಪಟ್ಟಿಯಲ್ಲಿ ಅವುಗಳಿಗೆ ಸಂಬಂಧಿಸದ ನಿಯೋಗ/ನಿಯೋಗಿ ಅಥವಾ ಅಂಶಗಳನ್ನೂ ಸೂಚಿಸಿದೆ. ಅವುಗಳನ್ನು ಹೊಂದಿಸಿ.

| | | | |
|---|---|---|---|
| 1 | ಸೂಚಿಗಳನ್ನು ರೂಪಿಸುವುದು | ಶಾಲೆ | ಅ |
| 2 | ಲಿಂಗ ಸಮಾನತೆ ಪ್ರಮುಖ ಕಾಳಜಿಯಾಗಿರಬೇಕು | ಶೈಕ್ಷಣಿಕ ಸಂಸ್ಥೆಗಳು | ಆ |
| 3 | ಲಿಂಗ ತಟಸ್ಥವಾದ ಭಾಷೆಯ ಬಳಕೆ | ಅಧ್ಯಾಪಕರು | ಇ |
| 4 | ಲಿಂಗ ಸಮಾನತೆಯ ಸಂವೇದನೆಯನ್ನು ಬೆಳೆಸಿಕೊಳ್ಳಬೇಕು | ತರಗತಿಗಳು | ಈ |
| 5 | ಲಿಂಗ ಪಡಿಯಚ್ಚುಗಳಿಂದ ಮುಕ್ತವಾಗಿರಬೇಕು | ಪಠ್ಯಪುಸ್ತಕ | ಉ |
| 6 | ಸ್ತ್ರೀಪುರುಷರಿಬ್ಬರ ಕೊಡುಗೆ ಮತ್ತು ಸಾಮರ್ಥ್ಯಗಳನ್ನು ಬಿಂಬಿಸಬೇಕು | ಪಠ್ಯಕ್ರಮ | ಊ |

## 4.6.4. ಸಾರಾಂಶಿಸೋಣ

- ಲಿಂಗಗಳಿಗೆ ಸಂಬಂಧಿಸಿದಂತೆ, ಅಂದರೆ ಬಾಲಕ–ಬಾಲಕಿಯರು ಅಥವಾ ಸ್ತ್ರೀ–ಪುರುಷರ ನಡುವೆ ಸಂಪೂರ್ಣವಾದ ಸಮಾನತೆಯೇ 'ಲಿಂಗ ಸಮಾನತೆ'
- ಲಿಂಗ ಪರಿಗಣನೆ ಇಲ್ಲದೆ ಎಲ್ಲರಿಗೂ ಆರ್ಥಿಕ ಭಾಗವಹಿಕೆ ಮತ್ತು ನಿರ್ಧಾರಗಳನ್ನು ಕೈಗೊಳ್ಳುವಿಕೆಯೂ ಸೇರಿದಂತೆ, ಸಂಪನ್ಮೂಲಗಳು ಮತ್ತು ಅವಕಾಶಗಳಿಗೆ ಸುಲಭ ಮತ್ತು ಸಮಾನ ಸದವಕಾಶಗಳು ಒದಗಿಬರುವ ಸ್ಥಿತಿ ಇದು ಎಂದು ಹೇಳಬಹುದು.
- ಸ್ತ್ರೀ ಪುರುಷರಿಬ್ಬರ ನಡುವಿನ ಸಮಾನತೆಯೇ ಲಿಂಗ ಸಮಾನತೆ, ಪ್ರತಿಯೊಬ್ಬರೂ–ಅವರು ಸ್ತ್ರೀಯರಾಗಲೀ ಪುರುಷರಾಗಲೀ– ಸಮಾಜದ ಪಡಿಯಚ್ಚುಗಳು, ಕಠಿಣವಾದ ಲಿಂಗ ಪಾತ್ರಗಳು ಮತ್ತು ಪೂರ್ವಾಗ್ರಹಗಳ ಮಿತಿಯಿಲ್ಲದೆ, ವೈಯಕ್ತಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಮತ್ತು ತಮ್ಮದೇ ಆಯ್ಕೆಗಳನ್ನು ಮಾಡಲು ಸ್ವತಂತ್ರರು ಎಂಬ ಪರಿಕಲ್ಪನೆಯನ್ನು ಇದು ಒಳಗೊಳ್ಳುತ್ತದೆ.
- ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜಗಳು ಸಕ್ರಿಯವಾಗಿ ಭಾಗವಹಿಸಿ, ಕೆಳಕಂಡ ವಿಷಯಗಳನ್ನು ಗಮನಿಸಿಕೊಳ್ಳಬೇಕು: ಮಾದರಿಗಳನ್ನು ಮುಂದಿಡಬೇಕು, ಪ್ರಮುಖ ಮೌಲ್ಯಗಳನ್ನು ಗೌರವಿಸಬೇಕು, ವಯೋಮಾಣನಕ್ಕನುಗುಣವಾಗಿ ಲಿಂಗ ವಿಚಾರಗಳನ್ನು ಕುರಿತು ಮಾತನಾಡಬೇಕು, ಲಿಂಗ ಸಮಾನತೆಯ ಪ್ರಚಾರ ಚಳುವಳಿಗಳಲ್ಲಿ ಪುರುಷರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳಬೇಕು, ಗೃಹಕೃತ್ಯಗಳಲ್ಲಿ ಪುರುಷರ ತೊಡಗಿಸಿಕೊಳ್ಳುವಿಕೆ ಹೆಚ್ಚಾಗಬೇಕು, ಪೋಷಣೆಯಲ್ಲಿ ಪುರುಷರ ಪಾಲೂ ಇರಬೇಕು,

ಸಂಸ್ಥೆಗಳು ನಾಯಕತ್ವ ವಹಿಸಬೇಕು, ಬಾಲ್ಯವಿವಾಹವನ್ನು ಕಡ್ಡಾಯವಾಗಿ ತಡೆಯಬೇಕು, ಪೂರ್ವಾಗ್ರಹದಿಂದ ಹೊರಬರಬೇಕು, ಮಾಧ್ಯಮಗಳು ಮಧ್ಯಸ್ಥಿಕೆ ವಹಿಸಬೇಕು, ಹೆಂಗಳೆಯರ ಮತ್ತು ಅವರ ಹೆತ್ತವರ ಆಶಯಗಳ ಮಟ್ಟವನ್ನು ಎತ್ತರಕ್ಕೆ ಏರಿಸಬೇಕು, ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀ ಪುರುಷರಿಬ್ಬರಿಗೂ ಅವಕಾಶ ಮತ್ತು ಪ್ರೋತ್ಸಾಹ ನೀಡಬೇಕು, ಪರಿಹಾರ ಯೋಜನೆಗಳನ್ನು ಹಮ್ಮಿಕೊಳ್ಳಬೇಕು.

- ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಬೇಕು. ಈ ನಿಟ್ಟಿನಲ್ಲಿ ಕೆಲವುಅಂಶಗಳು ಪ್ರಮುಖವಾಗುತ್ತವೆ.ಲಿಂಗ ನಿರ್ದಿಷ್ಟ ದತ್ತಾಂಶ ವ್ಯವಸ್ಥೆಯನ್ನು ರೂಪಿಸುವುದು;ಸಮರ್ಪಕ ಲಿಂಗ ಸೂಚಿಗಳನ್ನು ರೂಪಿಸುವುದು; ಲಿಂಗ ವಿಚಾರಗಳ ಕುರಿತಾದ ಸಂಶೋಧನೆಯನ್ನು ಉತ್ತಮಪಡಿಸುವ ಮತ್ತು ಬೆಂಬಲಿಸುವುದು; ಮತ್ತುಲಿಂಗ ವಿಶ್ಲೇಷಣೆಯ ಫಲಿತಾಂಶಗಳನ್ನು ಪ್ರಸಾರಮಾಡುವುದು; ಲಿಂಗ ಸಂಬಂಧಿ ವಿಶ್ಲೇಷಣೆಯ ಫಲಿತಾಂಶಗಳನ್ನು ಲಿಂಗ ನಿಯಮಗಳನ್ನು ಮತ್ತು ಚಾಲ್ತಿಯಲ್ಲಿರುವ ಅಭ್ಯಾಸಗಳನ್ನು ಸೂಚಿಸಲು ಬಳಸಿಕೊಳ್ಳುವುದು;ಮಹಿಳೆಯರನ್ನು ಸಬಲೀಕರಿಸುವುದು ಮತ್ತು ಅವರ ಸಂಪೂರ್ಣ ದುಡಿಮೆಯ ಶಕ್ತಿಯನ್ನು ಆರ್ಥಿಕ ಬೆಳವಣಿಗೆಗೆ ಬಳಸಿಕೊಳ್ಳುವುದು;ಮಹಿಳೆಯರ ಆಸಕ್ತಿಯನ್ನು ಕಾಪಾಡಲು, ಮತ್ತು ಗುಣಮಟ್ಟದ ಆಡಳಿತವನ್ನು ಕೊಡಲು, ಉತ್ಪಾದಕತೆ ಮತ್ತು ಸಾಮಾಜಿಕ ವಿಕಾಸವನ್ನು ಹೆಚ್ಚಿಸಲು ಮಹಿಳೆಯರ ಆರೋಗ್ಯವನ್ನು ನಿರ್ವಹಿಸುವುದು ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡುವುದು; ಮಹಿಳೆಯರನ್ನು ಸಬಲೀಕರಿಸುವುದು ಮತ್ತು ಸರ್ಕಾರಿ ರಚನೆಯ ವಿವಿಧ ಹಂತವ್ಯಾಪಿಯಾಗಿ ವಿವಿಧ ನಿರ್ಧಾರ ತೆಗೆದುಕೊಳ್ಳವಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಕಾಪಾಡುವುದು.

## 4.6.5. ಘಟಕಾಂತ್ಯ ಅಭ್ಯಾಸಗಳು

1. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸಮಾಜದ ಪಾತ್ರವನ್ನು ವಿವರಿಸಿ.
2. ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

## 4.6.6. ನಿಮ್ಮ ಪ್ರಗತಿಯನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1,4,5–ಸರಿ, 2,3–ತಪ್ಪು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ನೀವು ತಯಾರಿಸಿದ ಕಾರ್ಯಯೋಜನೆಯನ್ನು ಅಧ್ಯಾಪಕರ ಸಭೆಯ ಸಂದರ್ಭದಲ್ಲಿ ಹಂಚಿಕೊಳ್ಳಿ, ಅದನ್ನು ಇತರ ಅಧ್ಯಾಪಕರ ಸೂಚನೆಗಳೊಂದಿಗೆ ಉತ್ತಮೀಕರಿಸಿ, ಶಾಲೆಯಲ್ಲಿ ಅನ್ವಯಿಸಿ, ಲಿಂಗಸಮಾನತೆಯ ಮೌಲ್ಯಗಳನ್ನು ಬೆಳೆಸುವ ಸನ್ನಿವೇಶಗಳನ್ನು ರೂಪಿಸಿರಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಆ, 2–ಅ ,3–ಈ ,4–ಇ ,5–ಊ ,6–ಉ

## 4.6.7. ಪರಾಮರ್ಶನ ಸೂಚಿ:

1. Amott, M. (2004). “Gender equality and opportunities in the classroom: Thinking bout citizenship, pedagogy and the rights of children”, Beyond Access Seminar https://www.iiste.org/Journals/index.php/JEP/article/viewFile/16707/17071
2. https://www.linkedin.com/pulse/role-education-sector-removing-gender-inequality-manikandan-annadurai
3. www.powershow.com/view/13d9bc-NDM1Z/Gender_Equality_in. www.youthkiawaaz.com/2017/02/10-things-you-can...
4. ijhssi.org/papers/v6(6)/Version-4/G0606043840.pdf
5. www.linkedin.com/pulse/role-education-sector...
6. africanwomeninscienceandengineering.wordpress.com/...
7. iosrjournals.org/iosr-jhss/papers/Vol19-issue3/Version-1/...
8. africapolicyreview.com/promoting-gender-equality-in-and...
9. www.theguardian.com/global-development..
10. http://www.ncert.nic.in/departments/nie/dws/modules/RMSA_Module.pdf
11. http://www.ncert.nic.in/departments/nie/dws/pdf/overallreportDGS_24_8_17.pdf

    https://en.unesco.org/themes/education-and-gender-equality

*********************